ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಲಕ್ಷಾಲಂಕಾರಕ್ಕೆ ಅನುಗುಣವಾಗಿ
ಮಹಾಭಾರತತಾತ್ಪರ್ಯನಿರ್ಣಯದೊಂದಿಗೆ
ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ

ಆದಿಪರ್ವ

ಭಾಗ-4

ಪ್ರಕಾಶಕರು

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ

ಪಲಿಮಾರು ಮಠ, ಉಡುಪಿ

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಆದಿಪರ್ವ, ಸಭಾಪರ್ವ

ಭಾಗ-೪

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಷಷ್ಟಿಪೂರ್ತಿಯ ಸಮಾರಂಭದಲ್ಲಿ ಮನ್ಮಥ ಸಂ/ ಕಾರ್ತಿಕ ಬಹುಳ ತೃತೀಯಾ (28.11.2015) ದಂದು ತಿರುಮಲಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀನಿವಾಸನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ಮಹಾಭಾರತ ಆದಿಪರ್ವ, ಸಭಾಪರ್ವ ಭಾಗ-೪

© ತತ್ವಸಂಶೋಧನಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-46-0

ಪುಟಗಳು	-	XVI + 684 = 700
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ	-	ಎಂ. ಶರತ್ ಚಂದ್ರ
ಅಕ್ಷರ ಜೋಡಣೆ	-	ಬೆಮ್ಮತ್ತಿ ಶ್ರೀನಿವಾಸ ಮತ್ತು ಶ್ರೀಮತಿ ಎಸ್. ನಾಗಲತಾ
ಮುದ್ರಕರು	-	ಪವನ ಪ್ರಿಂಟರ್ಸ್ ಬೆಂಗಳೂರು. **Ph: 9686489131**
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ಸಭಾಪರ್ವವನ್ನು ಕುರಿತು...

ಸಭಾಪರ್ವದಲ್ಲಿ ೭೨ ಅಧ್ಯಾಯಗಳಿವೆಯೆಂದು ಪರ್ವಸಂಗ್ರಹಪರ್ವದಲ್ಲಿ ಹೇಳಲಾಗಿದೆ. ಆದರೆ ಎಷ್ಟೋ ಮುದ್ರಿತ ಪುಸ್ತಗಳಲ್ಲಿ ೭೨ ಅಧ್ಯಾಯಗಳನ್ನೇ ಕೊಡಲಾಗಿದೆ. ನಾವು ಮಾಡಿದ ತಾಳೆಗರಿಗಳ ಪರಿಶೀಲನೆಯಲ್ಲಿ ನಮಗೆ ಎಲ್ಲಾ ತಾಳೆಗರಿಗಳಲ್ಲಿಯೂ ೧೦೦ ಅಧ್ಯಾಯಗಳು ದೊರೆತಿವೆ. ಲಕ್ಷಾಲಂಕಾರದ ಮುದ್ರಿತ ಪುಸ್ತಕದಲ್ಲಿ ೧೧೫ ಅಧ್ಯಾಯಗಳೆಂದು ಮುದ್ರಿತವಾಗಿದೆ. ಆದರೆ ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯಲ್ಲಿರುವ ಶ್ಲೋಕಗಳನ್ನು ೭೨ ಅಧ್ಯಾಯಗಳಲ್ಲಿಯೂ ೧೦೦ ಅಧ್ಯಾಯಗಳಲ್ಲಿಯೂ ಮತ್ತು ೧೧೫ ಅಧ್ಯಾಯಗಳಲ್ಲಿಯೂ ಅಳವಡಿಸಲಾಗಿದೆ. ಆದ್ದರಿಂದ ಲಕ್ಷಾಲಂಕಾರದಲ್ಲಿ ೧೧೫ ಅಧ್ಯಾಯಗಳಲ್ಲಿ ಹಿಡಿದ ಪ್ರತೀಕಗಳೆಲ್ಲವೂ ತಾಳೆಗರಿಗಳಲ್ಲಿ ೧೦೦ ಅಧ್ಯಾಯಗಳಲ್ಲಿಯೇ ದೊರೆಯುತ್ತವೆ. ಅಧ್ಯಾಯ ಸಂಖ್ಯೆಯ ಈ ವಿಸಂವಾದವು ಪ್ರಾಯಶಃ ಹದಿನೆಂಟು ಪರ್ವಗಳಲ್ಲಿಯೂ ಉಂಟಾಗುತ್ತದೆ ಎನಿಸುತ್ತದೆ. ಆದ್ದರಿಂದಲೇ ಮೂಲಗ್ರಂಥದಲ್ಲಿಯೇ ಅನೇಕ ಜನರು ಹಸ್ತಕ್ಷೇಪ ಮಾಡಿರುವ ಸಂಗತಿಯು ಖಚಿತವಾಗುತ್ತದೆ.

ಸಭಾಪರ್ವದಲ್ಲಿ ಉಂಟಾಗುವ ವಿಪ್ರತಿಪತ್ತಿಯು ಧರ್ಮರಾಜನು ಜೂಜಿನಲ್ಲಿ ಪಾಂಡವರನ್ನು ಮತ್ತು ದ್ರೌಪದಿಯನ್ನು ಪಣಕ್ಕೆ ಒಡ್ಡಿದ ಕ್ರಮವನ್ನು ಕುರಿತಾದದ್ದು. ಅದರಲ್ಲಿಯೂ ಧರ್ಮರಾಜ ಮತ್ತು ದ್ರೌಪದಿಯರಲ್ಲಿ ಯಾರನ್ನು ಮೊದಲು, ಯಾರನ್ನು ಅನಂತರ ಪಣಕ್ಕೆ ಒಡ್ಡಿದ ಎನ್ನುವ ವಿಷಯದಲ್ಲಿಯೇ ಸಮಸ್ಯೆ ಇದೆ. ಆಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದ ೨೧ನೇ ಅಧ್ಯಾಯದಲ್ಲಿ ಶ್ಲೋಕ ೩೨೫ ರಲ್ಲಿ

ತಸ್ಮಿನ್ ಜಿತೇಥ ಸಹದೇವಮಥಾರ್ಜುನಂ ಚ
ಭೀಮಂ ಚ ಸೋಮಕಸುತಾಂ ಸ್ವಮಪಿ ಕ್ರಮೇಣ ।
ರಾಜಾ ನಿಧಾಯ ವಿಜಿತೋಽಥ ಸುಯೋಧನಃ ಸ್ವಂ
ದೂತಂ ದಿದೇಶ ಪೃಷತಾತ್ಮಜಪುತ್ರಿಕಾಯಾಃ ॥

'ನಕುಲನು ಜಿತನಾಗುತ್ತಿರಲು ರಾಜನಾದ ಯುಧಿಷ್ಠಿರನು ಅನಂತರ ಸಹದೇವನನ್ನು ಅನಂತರ ಅರ್ಜುನನನ್ನೂ ಮತ್ತು ಭೀಮನನ್ನೂ ಮತ್ತು ದ್ರೌಪದಿಯನ್ನೂ ಮತ್ತು ತನ್ನನ್ನೂ ಪಣಕ್ಕಿಟ್ಟು ಸೋತಮೇಲೆ ದುರ್ಯೋಧನನು ದ್ರೌಪದಿಯನ್ನು ಕರೆತರಲು ತನ್ನ ದೂತನಿಗೆ ಆದೇಶವನ್ನು ನೀಡಿದನು' ಎಂದು ತಿಳಿಸಿದ್ದಾರೆ. ಆದರೆ ದ್ರೌಪದಿ ಮತ್ತು ತನ್ನನ್ನು ಪಣಕ್ಕಿಟ್ಟ ಕ್ರಮವು ಮಾತ್ರ ಮಹಾಭಾರತದ ಎಲ್ಲಾ ಮುದ್ರಿತ ಪ್ರತಿಗಳಲ್ಲಿ ಮತ್ತು ಎಲ್ಲಾ ತಾಳೆಗರಿ

ಪ್ರತಿಗಳಲ್ಲಿ ಇದಕ್ಕಿಂತ ಭಿನ್ನವಾಗಿ ಎಂದರೆ ಮೊದಲು ತನ್ನನ್ನು ಮತ್ತು ಅನಂತರ ದ್ರೌಪದಿಯನ್ನು ಪಣಕ್ಕಿಟ್ಟನೆಂದು ಕಂಡುಬರುತ್ತದೆ.

ಮಹಾಭಾರತದ ಮೂಲಪಾಠಗಳಲ್ಲಿ ಈ ಪ್ರಕರಣದ ನಿರೂಪಣೆ ಈ ರೀತಿಯಲ್ಲಿ ಇರುತ್ತದೆ. ನಕುಲ ಸಹದೇವ ಅರ್ಜುನ ಭೀಮಸೇನನನ್ನು ಪಣಕ್ಕೆ ಇಟ್ಟು ಕಳೆದುಕೊಂಡ ನಂತರ ಧರ್ಮರಾಜನು ತನ್ನನ್ನು ಪಣಕ್ಕಿಟ್ಟು ಕಳೆದುಕೊಳ್ಳುತ್ತಾನೆ. ಆಗ ಶಕುನಿಯು–

ಏತತ್ ಪಾಪಿಷ್ಠಮಕರೋರ್ಯದಾತ್ಮಾನಂ ಪರಾಜಯಃ ।
ಶಿಷ್ಟೇ ಸತಿ ಧನೇ ರಾಜನ್ ಪಾಪ ಆತ್ಮಪರಾಜಯಃ ॥

'ನೀನು ನಿನ್ನನ್ನೇ ಪಣಕ್ಕಿಟ್ಟು ಕಳೆದುಕೊಂಡುದು ತುಂಬಾ ಪಾಪಿಷ್ಠವಾದ ಕಾರ್ಯ. ಪಣಕ್ಕಿಡಬಹುದಾದ ಧನವು ನಿನ್ನ ಬಳಿ ಇರುವಾಗ ನಿನ್ನನ್ನು ಕಳೆದುಕೊಂಡುದು ಪಾಪಕಾರ್ಯ' ಎಂದು ಹೇಳುತ್ತಾನೆ. ಅವನ ಅಭಿಪ್ರಾಯ ದ್ರೌಪದಿಯನ್ನು ಪಣಕ್ಕಿಡಬೇಕಾಗಿದ್ದಿತು. ಹಾಗೆ ಮಾಡದೆ ನಿನ್ನನ್ನೇ ಒಡ್ಡಿದುದು ತಪ್ಪು ಎಂದು. ಇದರಿಂದ ಮೊದಲು ಧರ್ಮರಾಜನು ತನ್ನನ್ನೇ ಪಣಕ್ಕಿಟ್ಟನೆಂದು ತಿಳಿಯುತ್ತದೆ. ದ್ರೌಪದಿಯನ್ನಿಟ್ಟು ಕಳೆದುಕೊಂಡಮೇಲೆ ದುರ್ಯೋಧನನು ದಾಸಿಯಾದ ದ್ರೌಪದಿಯನ್ನು ಸಭೆಗೆ ಕರೆದು ತರುವಂತೆ ಪ್ರಾತಿಕಾಮಿಗೆ ಹೇಳುತ್ತಾನೆ. ಆಗ ವಿದುರನು–

ನ ಹಿ ದಾಸೀತ್ವಮಾಪನ್ನಾ ಕೃಷ್ಣಾ ಭವತಿ ಧರ್ಮತಃ ।
ಅನೀಶೇನ ಹಿ ರಾಜ್ಞೈಷಾ ಪಣೇನ್ಯಸ್ತೇತಿ ಮೇ ಮತಿಃ ॥

'ಧರ್ಮದ ದೃಷ್ಟಿಯಿಂದ ದ್ರೌಪದಿಯು ದಾಸಿಯಾಗುವುದಿಲ್ಲ. ಏಕೆಂದರೆ ಅನೀಶನಾದ ರಾಜನು ಅವಳನ್ನು ಪಣಕ್ಕೆ ಒಡ್ಡಿದನು' ಎಂದು ಹೇಳುತ್ತಾನೆ. ಅನೀಶ ಎಂದರೆ ಅವನು ತನ್ನನ್ನು ಮೊದಲು ಕಳೆದುಕೊಂಡಿರುವುದರಿಂದ ದ್ರೌಪದಿಯ ಮೇಲೆ ಪ್ರಭುತ್ವವಿಲ್ಲದವನು ಎಂದು ಅಭಿಪ್ರಾಯ. ಆದ್ದರಿಂದ ವಿದುರನ ಮಾತಿನಿಂದಲೂ ಧರ್ಮರಾಜನು ತನ್ನನ್ನೇ ದ್ರೌಪದಿಗಿಂತ ಮೊದಲು ಪಣವಾಗಿಟ್ಟನೆಂದು ಸ್ಪಷ್ಟವಾಗುತ್ತದೆ.

ಪ್ರಾತಿಕಾಮಿಯು ದ್ರೌಪದಿಯನ್ನು ಕರೆಯಲು ದ್ರೌಪದಿಯ ಅಂತಃಪುರಕ್ಕೆ ಬಂದಾಗ ದ್ರೌಪದಿಯು

ಕಿನ್ನುಪೂರ್ವಂ ಪರಾಜೈಷೀದಾತ್ಮನಮಥವಾಪಿ ಮಾಮ್ ।
ಏತತ್ ಜ್ಞಾತ್ವಾ ತ್ವಮಾಗಚ್ಛ ತತೋ ಮಾಂ ನಯ ಸೂತಜ ॥

'ಮೊದಲು ಧರ್ಮರಾಜನು ತನ್ನನ್ನು ಸೋತನೇ ಅಥವಾ ನನ್ನನ್ನು ಸೋತನೇ ಎಂದು

ತಿಳಿದುಕೊಂಡು ಬಾ. ಅನಂತರ ನನ್ನನ್ನು ಕರೆದುಕೊಂಡು ಹೋಗಬಹುದು' ಎಂದು ಹೇಳುತ್ತಾಳೆ. ಅದಕ್ಕೆ ಪ್ರಾತಿಕಾಮಿಯು–

ಯದಾ ನಾಸೀತ್ ಕೈತವಮಸ್ಯ ಕಿಂಚಿತ್
ತದಾऽದೇವೀತ್ ಪಾಂಡವೋ೭ಜಾತಶತ್ರುಃ ।
ನ್ಯಸ್ತಾಃ ಪೂರ್ವಂ ಭ್ರಾತರಸ್ತೇನ ರಾಜ್ಞಾ
ಸ್ವಯಂ ಚಾತ್ಮಾನಂ ತ್ವಾಮಥೋ ರಾಜಪುತ್ರಿ ॥ (೮೭-೬)

'ಅವನ ಬಳಿ ಬೇರೆ ಯಾವುದೂ ಪಣಕ್ಕೆ ಇಡಬಹುದಾದ ವಸ್ತುವಿಲ್ಲದಿರುವಾಗ ಅವನು ಪುನಃ ದ್ಯೂತವನ್ನಾಡಿ ಮೊದಲು ತಮ್ಮಂದಿರನ್ನೂ ಅನಂತರ ತನ್ನನ್ನೂ ಅನಂತರ ನಿನ್ನನ್ನೂ ಆ ರಾಜನು ಪಣಕ್ಕೆ ಇಟ್ಟನು' ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ದ್ರೌಪದಿಯು ಸಭೆಗೆ ಎಳೆತಂದಮೇಲೆ ಯಾರನ್ನು ಮೊದಲು ಒಡ್ಡಿ ರಾಜನು ಕಳೆದುಕೊಂಡ ಎಂಬ ಪ್ರಶ್ನೆಯನ್ನು ಕೇಳುವುದಿಲ್ಲ. ಅದಕ್ಕೆ ಬದಲಾಗಿ–

ಇಮಂ ಪ್ರಶ್ನಮಿಮೇ ಬ್ರೂತ ಸರ್ವ ಏವ ಸಭಾಸದಃ ।
ಜಿತಾಂ ವಾಪ್ಯಜಿತಾಂ ವಾ ಮಾಂ ಮನ್ಯಧ್ವೇ ಸರ್ವಭೂಮಿಪಾಃ ॥
(೮೭-೩೯)

'ಸಭಾಸದರಾದ ಸರ್ವರಾಜರುಗಳೇ ಈ ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿ. ನಿಮ್ಮ ಅಭಿಪ್ರಾಯದಲ್ಲಿ ನಾನು ನಿರ್ಜಿತಳಾಗಿದ್ದೇನೆಯೇ ಅಥವಾ ಇಲ್ಲವೇ' ಎಂದು ಪ್ರಶ್ನೆಯನ್ನು ಕೇಳುತ್ತಾಳೆ ಅದಕ್ಕೆ ಭೀಷ್ಮರು–

ನ ಧರ್ಮಸೌಕ್ಷ್ಮ್ಯಾದ್ ಸುಭಗೇ ವಿವೇಕ್ತುಂ
ಶಕ್ನೋಮಿ ತೇ ಪ್ರಶ್ನಮಿಮಂ ಯಥಾವತ್ ।
ಅಸ್ವೋಪ್ಯಶಕ್ತಃ ಪಣಿತುಂ ಪರಸ್ವಂ
ಸ್ತ್ರಿಯಾಶ್ಚ ಭರ್ತುರ್ವಶತಾಂ ಸಮೀಕ್ಷ್ಯ ॥ (೮೪-೪೫)

ತ್ಯಜೇದ್ಧಿ ಸರ್ವಾಂ ಪೃಥಿವೀಂ ಸಮೃದ್ಧಾಂ
ಯುಧಿಷ್ಠಿರಃ ಸತ್ಯಮಥೋ ನ ಜಹ್ಯಾತ್ ।
ಉಕ್ತಂ ಜಿತೋಸ್ಮೀತಿ ಚ ಪಾಂಡವೇನ
ತಸ್ಮಾನ್ನ ಶಕ್ನೋಮಿ ವಿವೇಕ್ತುಮೇತತ್ ॥ (೮೭-೪೬)

'ಸೌಭಾಗ್ಯವತಿಯಾದ ದ್ರೌಪದಿಯೇ, ಧರ್ಮವು ಬಹಳ ಸೂಕ್ಷ್ಮವಾಗಿರುವುದರಿಂದ ಈ ನಿನ್ನ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಹೇಳಲು ನನಗೆ ಸಾಧ್ಯವಾಗುವುದಿಲ್ಲ.

ನಿರ್ಧನನಾದವನು ಇನ್ನೊಬ್ಬರಿಗೆ ಸೇರಿದ ವಸ್ತುವನ್ನೂ ಪಣಕ್ಕೆ ಇಡಲು ಸಾಧ್ಯವಿಲ್ಲ ಮತ್ತು ಪತ್ನಿಯು ಯಾವಾಗಲೂ ಪತಿಗೆ ಅಧೀನಳಾದವಳು. ಆದ್ದರಿಂದ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳಲಾರೆ. ಯುಧಿಷ್ಠಿರನು ಸಮೃದ್ಧವಾದ ಸಮಗ್ರವಾದ ಭೂಮಿಯನ್ನೇ ತ್ಯಜಿಸಿಯಾನು. ಆದರೆ ಸತ್ಯವನ್ನು ಎಂದೂ ತ್ಯಜಿಸುವುದಿಲ್ಲ. ಆ ಪಾಂಡವನು ನಾನು ಪರಾಜಿತನಾಗಿದ್ದೇನೆ ಎಂದು ಹೇಳಿದ್ದಾನೆ. ಆದ್ದರಿಂದ ಈ ಪ್ರಶ್ನೆಗೆ ಉತ್ತರವನ್ನು ಹೇಳಲಾರೆ' ಎಂದು ಹೇಳುತ್ತಾರೆ. ಅವನು ದ್ರೌಪದಿಯನ್ನು ಪಣಕ್ಕೆ ಇಡುವಾಗ ಅಸ್ವ= ನಿರ್ಧನನಾಗಿದ್ದನು ಎಂದು ಹೇಳುವುದರಿಂದ ಮೊದಲೇ ತನ್ನನ್ನು ಕಳೆದುಕೊಂಡಿದ್ದಾನೆಂಬುದು ಸ್ಪಷ್ಟವಾಗುತ್ತದೆ. ಎರಡನೆಯ ಶ್ಲೋಕದಲ್ಲಿ ಅವನು ತನ್ನನ್ನು ಪರಾಜಿತನೆಂದು ತಾನೇ ಒಪ್ಪಿಕೊಂಡಿದ್ದಾನೆ. ಆದ್ದರಿಂದ ನಿನ್ನನ್ನು ಇಡುವುದಕ್ಕೆ ಮೊದಲೇ ಅವನು ಪರಾಜಿತ. ಆದ್ದರಿಂದ ದ್ರೌಪದಿಯು ಅವನಿಗೆ ಪರಸ್ವ. ಆದ್ದರಿಂದ ಅವನು ದ್ರೌಪದಿಯನ್ನು ಪಣಕ್ಕೆ ಇಡುವಂತಿಲ್ಲ. ಆದರೂ ಪತ್ನಿಯ ಮೇಲೆ ಪತಿಗೆ ಅಧಿಕಾರವು ಯಾವಾಗಲೂ ಇರುವುದರಿಂದ ಪಣಕ್ಕೆ ಇಡಬಹುದೋ ಏನೋ? ಇದನ್ನು ನಾನು ನಿರ್ಧರಿಸಲಾರೆ ಎಂದು ಅವರ ಅಭಿಪ್ರಾಯ. ಆದ್ದರಿಂದ ಭೀಷ್ಮರ ಮಾತಿನಿಂದಲೂ ಧರ್ಮರಾಜನು ಮೊದಲು ತನ್ನನ್ನೇ ಪಣಕ್ಕಿಟ್ಟು ಸೋತನೆಂದು ಸ್ಪಷ್ಟವಾಗುತ್ತದೆ.

ಲಕ್ಷಾಲಂಕಾರ ಮೊದಲ (೮೭-೪೫) ಶ್ಲೋಕದ ಪ್ರತೀಕವನ್ನು ಹಿಡಿದು ವ್ಯಾಖ್ಯಾನ ಮಾಡುತ್ತಾ 'ಅಸ್ವಃ ದ್ರವ್ಯರಹಿತೋ ದರಿದ್ರಃ ಗತಸಕಲದ್ರವ್ಯೋ ವಾ' ಎಂದು 'ಅಸ್ವ ಎಂದರೆ ದ್ರವ್ಯರಹಿತನಾದ ದರಿದ್ರ ಅಥವಾ ತನ್ನ ಎಲ್ಲ ದ್ರವ್ಯವನ್ನೂ ಕಳೆದುಕೊಂಡವನು ಎಂದು ಅರ್ಥ' ಎಂದು ಹೇಳಿದ್ದಾರೆ. ದ್ರೌಪದಿಯನ್ನು ಪಣಕ್ಕೆ ಇಡುವ ವೇಳೆಗೇ ಅವನು ಅಸ್ವನೆಂದರೆ ಅದಕ್ಕೆ ಮೊದಲೇ ತನ್ನನ್ನಿಟ್ಟು ಕಳೆದುಕೊಂಡಿರಬೇಕಷ್ಟೆ! ಆದ್ದರಿಂದ ವಾದಿರಾಜರ ಅಭಿಪ್ರಾಯದಲ್ಲಿಯೂ ಮೊದಲು ಧರ್ಮರಾಜ ಅನಂತರ ದ್ರೌಪದಿ ಎಂದು ಸಿದ್ಧವಾಗುತ್ತದೆ. ವಾದಿರಾಜರು ಎಂದಿಗೂ ಆಚಾರ್ಯರು ಹೇಳಿರುವುದಕ್ಕೆ ವಿರುದ್ಧವಾಗಿ ಹೇಳಲು ಸಾಧ್ಯವಿಲ್ಲದಿರುವುದರಿಂದ ಆಚಾರ್ಯರ ವಾಕ್ಯದಿಂದ ಆಪಾತತಃ ತೋರುವ ವಿರೋಧವನ್ನು ಪರಿಹಾರ ಮಾಡಬೇಕಾಗುತ್ತದೆ.

ದುರ್ಯೋಧನನ ತಮ್ಮನಾದ ವಿಕರ್ಣನು–

ಸಾಧಾರಣೇ ಚ ಸರ್ವೇಷಾಂ ಪಾಂಡವಾನಾಮನಿಂದಿತಾ ।
ಜಿತೇನ ಪೂರ್ವಂ ಚಾನೇನ ಪಾಂಡವೇನ ಪಣೇಕೃತಾ ॥ (೮೮-೨೩)

ಇಯಂ ಚ ಕೀರ್ತಿತಾ ಕೃಷ್ಣಾ ಸೌಬಲೇನ ಪಣಾರ್ಥಿನಾ ।
ಏತತ್ ಸರ್ವಂ ವಿಚಾರ್ಯಾಹಂ ಮನ್ಯೇ ನ ವಿಜಿತಾಮಿಮಾಂ ॥ (೮೮-೨೪)

'ಅನಿಂದಿತೆಯಾದ ದ್ರೌಪದಿಯು ಎಲ್ಲಾ ಪಾಂಡವರಿಗೂ ಸೇರಿದವಳು. ಧರ್ಮರಾಜನ ಮೊದಲು ತನ್ನನ್ನು ಸೋತು ಅನಂತರ ದ್ರೌಪದಿಯನ್ನು ಪಣಕಿಟ್ಟನು. ಪಣಾರ್ಥಿಯಾದ ಶಕುನಿಯು ದ್ರೌಪದಿಯ ಹೆಸರನ್ನು ಸೂಚಿಸಿದವನು. ಇವೆಲ್ಲವನ್ನೂ ವಿಚಾರಮಾಡಿ ನಾನು ದ್ರೌಪದಿಯು ನಿರ್ಜಿತಳಲ್ಲವೆಂದು ತಿಳಿಯುತ್ತೇನೆ' ಎಂದು ಹೇಳುತ್ತಾನೆ. ಆದ್ದರಿಂದ ವಿಕರ್ಣನ ಮಾತಿನಿಂದಲೂ ಮೊದಲು ತನ್ನನ್ನೇ ಧರ್ಮರಾಜನು ಪಣಕಿಟ್ಟನೆಂದು ತಿಳಿದುಬರುತ್ತದೆ.

ಪುನಃ ವಿದುರನು ದ್ರೌಪದಿಯನ್ನು ಕುರಿತು–

ಯುಧಿಷ್ಠಿರಸ್ತು ಪ್ರಶ್ನೇಷ್ಮಿನ್ ಪ್ರಮಾಣಮಿತಿ ಮೇ ಮತಿಃ ।
ಅಜಿತಾಂ ವಾ ಜಿತಾಂ ವಾ ತ್ವಾಂ ಸ್ವಯಂ ವ್ಯಾಹರ್ತುಮರ್ಹತಿ ॥

(೮೯-೨೦)

'ಈ ಪ್ರಶ್ನೆಗೆ ಉತ್ತರವನ್ನು ಹೇಳಲು ಧರ್ಮರಾಜನೇ ಸಮರ್ಥನಾದವನು. ನೀನು ಜಿತಳೋ ಅಥವಾ ಅಜಿತಳೋ ಎಂದು ಅವನೇ ಹೇಳಲಿ' ಎಂದು ಹೇಳುತ್ತಾನೆ.

ಈ ಎಲ್ಲಾ ಅಂಶಗಳನ್ನೂ ಗಮನಿಸಿದರೆ ಧರ್ಮರಾಜ ಮೊದಲು ತನ್ನನ್ನಿಟ್ಟು ಅನಂತರ ದ್ರೌಪದಿಯನ್ನಿಟ್ಟನೆಂದು ತಿಳಿದುಬರುತ್ತದೆ. ಆದರೆ ಆಚಾರ್ಯರು 'ಭೀಮಂ ಚ ಸೋಮಕಸುತಾಂ ಸ್ವಮಪಿ ಕ್ರಮೇಣ' ಎಂದು ಹೇಳಿದ್ದಾರೆ. ಈ ವಾಕ್ಯಕ್ಕೆ ಯಥಾಶ್ರುತವಾಗಿ ಭೀಮ, ಅನಂತರ ದ್ರೌಪದಿ ಅನಂತರ ತಾನು ಎಂದು ಅರ್ಥಮಾಡಿದರೆ ವಿರೋಧವು ಇದ್ದೇ ಇದೆ. ಆದಕ್ಕಾಗಿ 'ಕ್ರಮೇಣ' ಎಂಬ ಶಬ್ದಕ್ಕೆ ಬೇರೆ ಅರ್ಥವನ್ನು ಮಾಡಬಹುದೇನೋ ಎನಿಸುತ್ತದೆ.

ಮೊದಲು ನಕುಲನನ್ನು ಪಣಕ್ಕಿಡುವಾಗ ಧರ್ಮರಾಜನು ಹೀಗೆ ಹೇಳುತ್ತಾನೆ–

ಶ್ಯಾಮೋ ಯುವಾ ಲೋಹಿತಾಕ್ಷಃ ಸಿಂಹಸ್ಕಂಧೋ ಮಹಾಭುಜಃ ।
ನಕುಲೋ ಗ್ಲಹ ಏವೈಕ ಏತದ್ ವೈ ಮದ್ಧನಂ ಧನಂ ॥ (೮೪-೧೨)

'ಶ್ಯಾಮವರ್ಣನೂ, ಯುವಕನೂ, ಲೋಹಿತಾಕ್ಷನೂ, ಸಿಂಹಸ್ಕಂಧನೂ, ಮಹಾಭುಜನೂ ನಕುಲನೊಬ್ಬನೇ ಪಣವಾಗಿರುವವನು. ಇದು ನಾನು ಪಣಕ್ಕಿಡುವ ಧನ' ಎಂದು ಹೇಳುತ್ತಾನೆ. ಇದುವರೆಗೆ ಪಣಕ್ಕಿಟ್ಟ ವಸ್ತುಗಳೆಲ್ಲಾ ಗುಂಪು ಗುಂಪಾಗಿ ಇಡಲ್ಪಟ್ಟವು. ಅನೇಕ ಸುವರ್ಣಭಾಂಡಗಳು, ಅನೇಕ ಅಶ್ವಗಳು, ಅನೇಕ ಗಜಗಳು ಹೀಗೆ. ದಾಸರು, ದಾಸಿಯರು ಕೊನೆಗೆ ದ್ರೌಪದಿಯ ಮಕ್ಕಳನ್ನು ಇಡುವಾಗಲೂ ಗುಂಪಾಗಿಯೇ ಇಟ್ಟಿದ್ದಾನೆ. ನಕುಲನಿಂದ ಪ್ರಾರಂಭಿಸಿ ಒಬ್ಬೊಬ್ಬರನ್ನು ಮಾತ್ರ ಇಡುತ್ತಾನೆ. ಆದ್ದರಿಂದ

'ಕ್ರಮೇಣ' ಶಬ್ದಕ್ಕೆ ಒಬ್ಬರ ಅನಂತರ ಇನ್ನೊಬ್ಬರು ಎಂದು ಸಹಜವಾಗಿ ತೋರುವ ಅರ್ಥವನ್ನು ಮಾಡದೆ ಒಬ್ಬೊಬ್ಬರನ್ನಾಗಿ ಇಟ್ಟನು ಎಂದು ಅರ್ಥವನ್ನು ಮಾಡಿದರೆ ವಿರೋಧವು ಪರಿಹಾರವಾಗುತ್ತದೆ. ಇಲ್ಲದಿದ್ದರೆ ವಿರೋಧವು ಇದ್ದೇ ಇದೆ. ಮತ್ತು ಇಷ್ಟು ವಾಕ್ಯಗಳನ್ನೂ ಪ್ರಕ್ಷಿಪ್ತವೆಂದಾಗಲೀ ಅಥವಾ ಪೌರ್ವಾಪರ್ಯದಲ್ಲಿ ವ್ಯತ್ಯಾಸವಿದೆ ಎಂದಾಗಲೀ ಹೇಳುವುದು ಕಷ್ಟ. ಏಕೆಂದರೆ ವಾದಿರಾಜರ ವಾಕ್ಯದಿಂದಲೇ ಈ ಪೌರ್ವಾಪರ್ಯವಿಲ್ಲವೆಂದು ತಿಳಿದುಬರುತ್ತದೆ. ಆದ್ದರಿಂದ ಈ ವಿಷಯದ ನಿರ್ಣಯವನ್ನು ವಿದ್ವಾಂಸರಿಗೆ ಬಿಟ್ಟಿದ್ದೇನೆ.

ತಾಳೆಗರಿಗಳಿಂದ ಗ್ರಂಥವನ್ನು ಶೋಧಿಸಿ ಸಂಪಾದಿಸುವಾಗ ಅನೇಕ ತಪ್ಪುಗಳು ಬಂದಿರಬಹುದು. ವಿದ್ವಾಂಸರು ಅದನ್ನು ತಿದ್ದಿಕೊಂಡು ಓದುವದಲ್ಲದೆ ನಮ್ಮ ಗಮನಕ್ಕೂ ತಂದರೆ ಮುಂದಿನ ಪ್ರತಿಗಳಲ್ಲಿ ಅವುಗಳನ್ನು ಸರಿಪಡಿಸಬಹುದು ಎಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಈ ಪ್ರಯತ್ನದ ಹಿಂದೆ ಅವಷ್ಟಂಭ ಶಕ್ತಿಯಾಗಿ ನಿಂತ ಎಲ್ಲಾ ಶ್ರೀಪಾದರಿಗೂ ಮತ್ತು ಎಲ್ಲಾ ವಿದ್ವಾಂಸರಿಗೂ ನನ್ನ ಸಾಷ್ಟಾಂಗ ಪ್ರಣಾಮಗಳು. ಈ ಪ್ರಕಾಶನದಲ್ಲಿ ಅವಿತರವಾಗಿ ದುಡಿಯುತ್ತಿರುವ ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯ ಮತ್ತು ವಿದ್ವಾನ್ ಬೆ.ನಾ. ವಿಜಯೀಂದ್ರಾಚಾರ್ಯ ಸಹೋದರರಿಗೆ ನನ್ನ ಶುಭ ಹಾರೈಕೆಗಳು.

– ಶ್ರೀಪಾದ ಚರಣ ಸೇವಕ
ಪಿ.ಎಸ್. ಶೇಷಗಿರಿ ಆಚಾರ್ಯ

—0—

ವಿಷಯಾನುಕ್ರಮಣಿಕೆ

ಮಹಾಭಾರತ

ಆದಿಪರ್ವ ಮತ್ತು ಸಭಾಪರ್ವ - ಭಾಗ-೪

ಪುಟ ಸಂ.

1. ಚಾರರಿಂದ ಪಾಂಡವರು ದ್ರೌಪದಿಯನ್ನು ಗೆದ್ದರೆಂದು ಸರ್ವತ್ರ ಪ್ರಚಾರ. ಕೆಲವು ರಾಜರ ಹರ್ಷ, ದುರ್ಯೋಧನಾದಿಗಳ ಅಸೂಯೆ, ಶಕುನಿಯ ದುರ್ನೀತಿ ಮತ್ತು ಭೂರಿಶ್ರವನ ಹಿತವಚನ **1**

2. ಅಭಿಯಾನ ಮಾಡಲು ಕರ್ಣನ ಆಗ್ರಹ, ಅಭಿಯಾನ. ದುರ್ಯೋಧನಾದಿಗಳ ಪರಾಜಯ, ಪ್ರತಿನಿವೃತ್ತಿ, ಕೃಷ್ಣನಿಂದ ಚತುರಂಗಬಲ ಪ್ರೇಷಣ **12**

3. ಸ್ವಯಂವರದಿಂದ ಹಿಂದಿರುಗಿದ ದುರ್ಯೋಧನಾದಿಗಳ ವಿಷಾದ, ವಿದುರನಿಂದ ಧೃತರಾಷ್ಟ್ರನಿಗೆ ವೃತ್ತಾಂತ ಕಥನ, ದುರ್ಯೋಧನಾದಿಗಳಿಂದ ದುರ್ಮಂತ್ರಣ **29**

4. ಕರ್ಣನ ಸಲಹೆ, ವಿಕ್ರಮವನ್ನು ಮಾಡಲು ಉಪದೇಶ, ಧೃತರಾಷ್ಟ್ರನ ಸಂದಿಗ್ಧ ಮನಃಸ್ಥಿತಿ **39**

5. ಮಂತ್ರಿಗಳ ಎದುರಿನಲ್ಲಿ ದುರ್ಯೋಧನನಿಗೆ ಭೀಷ್ಮರ ಹಿತವಚನ, ಪಾಂಡವರಿಗೆ ಅರ್ಧರಾಜ್ಯವನ್ನು ಕೊಡಲು ನಿರ್ಬಂಧ **44**

6. ದ್ರೋಣರ ಹಿತವಚನ ಮತ್ತು ಕರ್ಣನ ವಿರೋಧ **49**

7. ವಿದುರನ ಹಿತವಚನ **57**

8. ಪಾಂಡವರನ್ನು ತರಲು ಪಾಂಚಾಲದೇಶಕ್ಕೆ ವಿದುರನ ಪ್ರಯಾಣ. ಅಲ್ಲಿ ಅವನ ಮಧುರವಚನಗಳು **64**

9. ಹಸ್ತಿನಪುರಕ್ಕೆ ಪಾಂಡವರ ಆಗಮನ, ಪೌರರ ಹರ್ಷ **71**

10. ಧೃತರಾಷ್ಟ್ರನಿಂದ ಧರ್ಮರಾಜನಿಗೆ ಅಭಿಷೇಕ, ಖಾಂಡವಪ್ರಸ್ಥಕ್ಕೆ ಹೋಗಲು ಆದೇಶ, ವೇದವ್ಯಾಸರ ಮತ್ತು ಯಾದವಕೃಷ್ಣನ ಜೊತೆಯಲ್ಲಿ ಖಾಂಡವಪ್ರಸ್ಥ ಪ್ರವೇಶ. ವಿಶ್ವಕರ್ಮನಿಂದ ನಗರ ನಿರ್ಮಾಣ ಮತ್ತು ಕೃಷ್ಣನ ಪ್ರಯಾಣ **86**

11. ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರ, ನಾರದರ ಆಗಮನ, ಅವರ ಜ್ಞಾನದ ಆಗಾಧತೆ, ಸುಂದೋಪಸುಂದರ ಉಲ್ಲೇಖ 109

12. ಹಿರಣ್ಯಕಶಿಪುವಿನವ ವಂಶದಲ್ಲಿ ಸುಂದೋಪಸುಂದರ ಜನನ, ಬ್ರಹ್ಮದೇವರ ಕುರಿತು ತಪಸ್ಸು ಮತ್ತು ವರಪ್ರಾಪ್ತಿ 121

13. ಸುಂದೋಪಸುಂದರಿಂದ ಸ್ವರ್ಗಾದಿಜಯ, ಋಷಿಗಳ ವಧೆ, ಭೂಮಿಯ ಉಗ್ರರೂಪತೆ 127

14. ದೇವತೆಗಳಿಂದ ಬ್ರಹ್ಮದೇವರ ಬಳಿಯಲ್ಲಿ ದೂರು. ಬ್ರಹ್ಮದೇವರಿಂದ ವಿಶ್ವಕರ್ಮನಿಗೆ ತಿಲೋತ್ತಮೆಯನ್ನು ನಿರ್ಮಿಸಲು ಆದೇಶ. ತಿಲೋತ್ತಮೆಯ ಸೌಂದರ್ಯ 133

15. ಸುಂದೋಪಸುಂದರ ಬಳಿಗೆ ತಿಲೋತ್ತಮೆಯ ಗಮನ. ಅವಳ ಸಲುವಾಗಿ ಅವರ ವಿರೋಧ. ಗದಾಯುದ್ಧದಿಂದ ಮರಣ. ನಾರದರ ಹಿತೋಪದೇಶ. ಪಾಂಡವರ ಸಮಯಬಂಧ 140

16. ಆಯುಧಾಗಾರದಲ್ಲಿದ್ದ ಧರ್ಮರಾಜ ದ್ರೌಪದಿ, ಬ್ರಾಹ್ಮಣನ ಗೋರಕ್ಷಣೆಗಾಗಿ ಅರ್ಜುನ ಅಲ್ಲಿಗೆ ಬಂದುದು, ಧರ್ಮರಾಜರನ್ನು ನೋಡಿ, ಅರ್ಜುನನ ವನವಾಸ ನಿಶ್ಚಯ 148

17. ಅರ್ಜುನನ ತೀರ್ಥಯಾತ್ರೆ, ಉಲೂಪಿಯಿಂದ ಅರ್ಜುನನ ಹರಣ, ನಾಗಲೋಕ ಪ್ರಾಪ್ತಿ, ಇರಾವಂತನ ಉತ್ಪತ್ತಿ 157

18. ಬ್ರಾಹ್ಮಣರಿಗೆ ಎಲ್ಲಾ ವೃತ್ತಾಂತವನ್ನು ತಿಳಿಸಿ ಅರ್ಜುನನ ಪ್ರಯಾಣ, ಮಣಲೂರಿನಲ್ಲಿ ಚಿತ್ರಾಂಗದೆಯ ವಿವಾಹ 167

19. ದಕ್ಷಿಣ ಸಮುದ್ರತೀರದಲ್ಲಿ ನಾರೀತೀರ್ಥದಲ್ಲಿ ಅರ್ಜುನನಿಂದ ಅಪ್ಸರೆಯರ ಮೋಚನ. ಮಣಲೂರಿಗೆ ಹಿಂದಿರುಗಿ, ಚಿತ್ರವಾಹನನಿಗೆ ಬಭ್ರುವಾಹನನನ್ನು ಸಮರ್ಪಿಸಿ ಪುನಃ ತೀರ್ಥಯಾತ್ರಾಗಮನ 173

20. ಅರ್ಜುನನ ಪ್ರಭಾಸಪ್ರಾಪ್ತಿ. ಸುಭದ್ರೆಯ ಚಿಂತೆಯಿಂದ ಯತಿವೇಷಧಾರಣ. ಕೃಷ್ಣನ ಆಗಮನ, ಸಮ್ಮತಿ ಮತ್ತು ಭೋಜನಾದಿ ವ್ಯವಸ್ಥೆ. ದ್ವಾರಕಾಪಟ್ಟಣಕ್ಕೆ ಪ್ರತಿನಿವೃತ್ತಿ 186

21. ರೈವತಕಪರ್ವತದಲ್ಲಿ ವೃಷ್ಣ್ಯಂಧಕರ ಮಹೋತ್ಸವ, ಅಲ್ಲಿಗೆ
ಕೃಷ್ಣಸುಭದ್ರೆಯ ಆಗಮನ. ಕೃಷ್ಣನಲ್ಲಿ ಅರ್ಜುನನ ಪ್ರಾರ್ಥನೆ.
ಕೃಷ್ಣನಿಂದ ಉಪಾಯ ಸೂಚನೆ ಮತ್ತು ಧರ್ಮರಾಜನ ಅನುಮತಿ **196**

22. ಉತ್ಸವವನ್ನು ಮುಗಿಸಿ ಎಲ್ಲರ ನಿರ್ಗಮನ, ಅರ್ಜುನನ ಚಿಂತೆ,
ಬಲರಾಮಾದಿಗಳಿಂದ ಪುನಃ ಬಂದು ಚಾತುರ್ಮಾಸ್ಯವನ್ನು
ಕನ್ಯಾಗಾರದಲ್ಲಿ ಕಳೆಯಬೇಕೆಂಬ ಪ್ರಾರ್ಥನೆ, ಕೃಷ್ಣನ ವಿರೋಧ
ಸೂಚನೆ ಮತ್ತು ಅನುಮತಿ **203**

23. ಕನ್ಯಾಗಾರದ ಸಮೀಪದಲ್ಲಿ ಅರ್ಜುನನ ವಾಸ, ಸುಭದ್ರೆಯ
ಉಪಚಾರ, ಅರ್ಜುನ ಸುಭದ್ರೆಯರ ಸಂವಾದ, ಅರ್ಜುನನ
ಜೊತೆಯಲ್ಲಿ ಸಮಾಲೋಚಿಸಿ ಕೃಷ್ಣನಿಂದ ಎಲ್ಲರನ್ನೂ
ದ್ವೀಪಾಂತರಕ್ಕೆ ಪ್ರೇಷಣ **213**

24. ಇಂದ್ರ ಮೊದಲಾದ ದೇವತೆಗಳಿಂದ ಕೃಷ್ಣನ ಸನ್ನಿಧಿಯಲ್ಲಿ
ಸುಭದ್ರೆಯ ವಿವಾಹ, ಕೃಷ್ಣನ ಸೂಚನೆಯಂತೆ ರಥದಲ್ಲಿ
ಅರ್ಜುನ ಮತ್ತು ಸುಭದ್ರೆಯರ ನಿರ್ಗಮನ, ಕೆಲವರ
ಹರ್ಷ ಮತ್ತು ಕೆಲವರ ರೋಷ **231**

25. ದ್ವಾರಕೆಯಿಂದ ಸುಭದ್ರೆಯ ಜೊತೆಯಲ್ಲಿ ಅರ್ಜುನನ ನಿರ್ಗಮನ,
ಮಧ್ಯಮಾರ್ಗದಲ್ಲಿ ವಿಪೃಥುವಿನ ಪ್ರತಿರೋಧ ಮತ್ತು ಸಮ್ಮತಿ,
ವೃಷ್ಣ್ಯಂಧಕರ ಸಭೆ, ಬಲರಾಮನ ಕೋಪ, ಕೃಷ್ಣನ ಮೌನ **250**

26. ಕೃಷ್ಣನ ಹಿತೋಪದೇಶದಿಂದ ಬಲರಾಮಾದಿಗಳ ಸಮಾಧಾನ,
ಅರ್ಜುನನನ್ನು ಹಿಂಬಾಲಿಸಿದ ಯಾದವರ ಪ್ರತಿನಿವೃತ್ತಿ,
ನೀಳದೇಶವನ್ನು ಅತಿಕ್ರಮಿಸಿ ಅರ್ಜುನನ ಕುರುದೇಶ ಪ್ರಾಪ್ತಿ **267**

27. ಅರ್ಜುನನ ಸ್ವಭವನ ಪ್ರಾಪ್ತಿ, ಗೋಪಾಲಿಕೆ ವೇಷದಿಂದ ಸುಭದ್ರೆಯ
ಪ್ರವೇಶ, ಕುಂತಿಯ ಮತ್ತು ದ್ರೌಪದಿಯ ಆಶೀರ್ವಾದ, ಎಲ್ಲರ ಹರ್ಷ **275**

28. ಯಾದವರಿಂದ ಇಂದ್ರಪ್ರಸ್ಥಕ್ಕೆ ಉಡುಗೊರೆಗಳ ಆಹರಣ,
ಇಂದ್ರಪ್ರಸ್ಥದಲ್ಲಿ ಏಳು ದಿನಗಳ ಕಾಲ ಅರ್ಜುನ-ಸುಭದ್ರೆಯರ
ವಿವಾಹ, ಯಾದವರ ನಿರ್ಗಮನ, ಇಂದ್ರಪ್ರಸ್ಥದಲ್ಲಿ ಕೃಷ್ಣನ ವಾಸ **283**

29. ಅಭಿಮನ್ಯುವಿನ ಜನನ, ಕೃಷ್ಣನಿಂದ ಅವನ ಲಾಲನ, ಅರ್ಜುನನಿಂದ ಶಸ್ತ್ರಾಸ್ತ್ರ ಪ್ರಾಪ್ತಿ, ಪಂಚದ್ರೌಪದೇಯರ ಜನನ 297

30. ನಗರವಿಹಾರವನ್ನು ಮುಗಿಸಿ ಯಮುನಾ ತೀರದಲ್ಲಿ ವಿಹರಿಸಲು ಕೃಷ್ಣಾರ್ಜುನರ ನಿರ್ಧಾರ, ಖಾಂಡವವನ ಪ್ರಾಪ್ತಿ ಮತ್ತು ವರ್ಣನೆ 304

31. ಯಮುನಾತೀರದಲ್ಲಿ ವಿಪ್ರವೇಷದಿಂದ ಬಂದು ಅಗ್ನಿಯಿಂದ ತನ್ನ ದುಃಸ್ಥಿತಿಯನ್ನು ತಿಳಿಸಿ ಖಾಂಡವದಹನಕ್ಕಾಗಿ ಕೃಷ್ಣಾರ್ಜುನರ ಸಹಾಯದ ಪ್ರಾರ್ಥನೆ. ತಮ್ಮ ತಮ್ಮ ಅಸ್ತ್ರವನ್ನು ಪಡೆದ ಕೃಷ್ಣಾರ್ಜುನರಿಂದ ಆಶ್ವಾಸನೆ, ಖಾಂಡವದಾಹದ ಉಪಕ್ರಮ 312

32. ಕೃಷ್ಣಾರ್ಜುನರ ರಕ್ಷಣೆಯಲ್ಲಿ ಅಗ್ನಿಯಿಂದ ಖಾಂಡವ ದಹನ, ಸರ್ವಪ್ರಾಣಿಗಳ ವಿನಾಶ. ದೇವತಾಗಣದ ಜೊತೆಯಲ್ಲಿ ಬಂದು ಇಂದ್ರನ ಯುದ್ಧ ಮತ್ತು ಅರ್ಜುನನ ಪ್ರತೀಕಾರ 346

33. ಕೃಷ್ಣಾರ್ಜುನರ ರಕ್ಷಣೆಯಲ್ಲಿ ಅಗ್ನಿಯಿಂದ ಖಾಂಡವವನ ದಾಹ. ಕೃಷ್ಣಾರ್ಜುನರಿಂದ ಯುದ್ಧಕ್ಕೆ ಬಂದ ದೇವತೆಗಳ ಪರಾಜಯ. ಅಶರೀರವಾಣಿಯಿಂದ ಇಂದ್ರನ ನಿವೃತ್ತಿ. ಅಗ್ನಿಯ ಹರ್ಷ. ಮಯನಿಗೆ ಅಭಯದಾನ 364

34. ಶಾರ್ಙಕಪಕ್ಷಿಗಳ ಅದಾಹಕ್ಕೆ ಕಾರಣಪ್ರಶ್ನೆ, ಮಂದಪಾಲಚರಿತೆ, ಮಕ್ಕಳಿಲ್ಲದ ಅವನಿಂದ ಶಾರ್ಙಕ- ಪಕ್ಷಿರೂಪವನ್ನು ಧರಿಸಿ ಮಕ್ಕಳ ಉತ್ಪಾದನೆ 374

35. ಸಮೀಪಿಸುತ್ತಿರುವ ಅಗ್ನಿಯನ್ನು ನೋಡಿ ಜರಿತೆಯ ವಿಹ್ವಲತಾ, ಮಕ್ಕಳನ್ನು ಉಳಿಸಲು ಅವರ ಜೊತೆಯಲ್ಲಿ ಸಂವಾದ. ಮೂಷಿಕ ಬಿಲವನ್ನು ಪ್ರವೇಶಿಸಲು ಮಕ್ಕಳ ನಿರಾಕರಣೆ 382

36. ಇಲಿಯ ಬಿಲವನ್ನು ಪ್ರವೇಶಿಸಲು ತಾಯಿಯ ನಿರ್ಬಂಧ. ಮಕ್ಕಳಿಂದ ಅದರ ನಿರಾಕರಣೆ. ತಾಯಿಯು ಹೇಳಿದ ಶ್ಯೇನವೃತ್ತಾಂತದಲ್ಲಿ ಮಕ್ಕಳ ಅವಿಶ್ವಾಸ. ಜರಿತಾರಿಯಿಂದ ಅಗ್ನಿಯ ಸ್ತೋತ್ರ 387

37. ಸಮೀಪದಲ್ಲಿ ಬರುತ್ತಿರುವ ಅಗ್ನಿಯನ್ನು ನೋಡಿ ಜರಿತಾರಿಯಾದಿಗಳ ಸ್ತೋತ್ರ. ಪ್ರಸನ್ನನಾದ ಅಗ್ನಿಯಿಂದ ಅವರ ಮೋಚನೆ 392

38. ಮಂದಪಾಲನಿಗೆ ಲಪಿತೆಯ ಮತ್ತು ಜರಿತೆಯ ತಿರಸ್ಕಾರದ ವಚನಗಳು. ಪತ್ನೀಪುತ್ರರೊಡನೆ ಮಂದಪಾಲನ ದೇಶಾಂತರ ಗಮನ. ಸ್ವರ್ಗದಿಂದ ಇಂದ್ರನ ಆಗಮನ. ಸಂತೋಷಪ್ರಕಟನ ಮತ್ತು ವರದಾನ 398

ಸಭಾಪರ್ವ

39. ತನಗೆ ಮಾಡಿದ ಉಪಕಾರಕ್ಕಾಗಿ ಪ್ರತ್ಯುಪಕಾರವನ್ನು ಸ್ವೀಕರಿಸೆಂದು ಅರ್ಜುನನಿಗೆ ಮಯನ ಪ್ರಾರ್ಥನೆ. ಅರ್ಜುನನ ನಿರಾಕರಣೆ, ಸಭೆಯನ್ನು ನಿರ್ಮಾಣ ಮಾಡುವಂತೆ ಕೃಷ್ಣನಿಂದ ಆದೇಶ 413

40. ಕೃಷ್ಣನ ಪ್ರಯಾಣ ಧರ್ಮರಾಜ ಮೊದಲಾದವರ ಸಾರಥ್ಯಗಳು ಸ್ವಲ್ಪದೂರಹೋಗಿ ಧರ್ಮರಾಜಾದಿಗಳ ಹಿಂದುರುಗುವಿಕೆ. ಕೃಷ್ಣನ ದ್ವಾರಕಾಪ್ರಾಪ್ತಿ ಮತ್ತು ದ್ವಾರಕೆಯಲ್ಲಿ ಸುಖವಾಸ 421

41. ಸಭೆಯನ್ನು ನಿರ್ಮಾಣ ಮಾಡುವ ದ್ರವ್ಯಗಳನ್ನು ತರಲು ಬಿಂದು ಸರೋವರಕ್ಕೆ ಮಯನ ಪ್ರಯಾಣ, ಗದಾ ಮತ್ತು ಶಂಖಗಳ ಜೊತೆಯಲ್ಲಿ ನಿರ್ಮಾಣ ಸಾಮಗ್ರಿಗಳನ್ನು ತೆಗೆದುಕೊಂಡು ಹಿಂದಿರುಗುವಿಕೆ, ಭೀಮಾರ್ಜುನರಿಗೆ ಗದಾಶಂಖಗಳನ್ನು ಕೊಟ್ಟು ಸಭೆಯ ನಿರ್ಮಾಣ 429

42. ಯುಧಿಷ್ಠಿರ ಸಭಾಪ್ರವೇಶ 438

43. ಸಭೆಗೆ ನಾರದರ ಆಗಮನ, ಯುಧಿಷ್ಠಿರನ ಜೊತೆಯಲ್ಲಿ ಕುಶಲ ಪ್ರಶ್ನೆಯನ್ನು ಮಾಡುವ ನೆಪದಿಂದ ಅವನಿಗೆ ರಾಜನೀತಿಯ ಉಪದೇಶ 448

44. ಸಂತುಷ್ಟನಾದ ಯುಧಿಷ್ಠಿರನಿಂದ ನಾರದರನ್ನು ಕುರಿತು ಉಳಿದ ಸಭೆಗಳ ಬಗ್ಗೆ ಪ್ರಶ್ನೆ, ಉತ್ತರವನ್ನು ಹೇಳಲು ನಾರದರ ಪ್ರತಿಜ್ಞೆ 479

45. ಇಂದ್ರಸಭೆಯ ವರ್ಣನೆ 483

46. ಯಮಸಭೆಯ ವರ್ಣನೆ 489

47. ವರುಣಸಭೆಯವರ್ಣನೆ 497

48. ಕುಬೇರಸಭೆಯ ವರ್ಣನೆ 504

49. ಬ್ರಹ್ಮಸಭೆಯ ವರ್ಣನೆ 511

50. ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ನಾರದರಿಂದ ಇಂದ್ರಸಭೆಯ ಪ್ರಾಪ್ತಿಗೆ ರಾಜಸೂಯಯಾಗವು ಕಾರಣವೆಂದು ತಿಳಿಸಿ, ಪಾಂಡುವಿನ ಆದೇಶವನ್ನು ಧರ್ಮರಾಜನಿಗೆ ತಿಳಿಸುವುದು 526

51. ರಾಜಸೂಯಯಜ್ಞಾಚರಣೆಯಬಗ್ಗೆ ಮಂತ್ರಿಗಳ ಜೊತೆಯಲ್ಲಿ ಯುಧಿಷ್ಠಿರನ ಸಮಾಲೋಚನೆ. ಮತ್ತು ರಾಜಸೂಯ ಯಾಗವನ್ನು ಮಾಡಲು ಸಂಕಲ್ಪ 535

52. ಇಂದ್ರಪ್ರಸ್ಥಕ್ಕೆ ಶ್ರೀಕೃಷ್ಣನ ಆಗಮನ 543

53. ಯುಧಿಷ್ಠಿರನ ಸನ್ನಿಧಿಯಲ್ಲಿ ಕೃಷ್ಣನಿಂದ ಜರಾಸಂಧನ ಶೌರ್ಯದ ವರ್ಣನೆ 552

54. ಕೃಷ್ಣನಿಂದ ರಾಜಸೂಯಯಾಗಕ್ಕೆ ಸಂಭವಿಸಬಹುದಾದ ವಿಘ್ನಗಳ ನಿರೂಪಣೆ 567

55. ರಾಜಸೂಯ ವಿಷಯದಲ್ಲಿ ಕೃಷ್ಣ ಯುಧಿಷ್ಠಿರ ಭೀಮರ ಸಮಾಲೋಚನೆ 576

56. ಯುಧಿಷ್ಠಿರ ಅರ್ಜುನರ ಸಂವಾದ 581

57. ಕೃಷ್ಣನಿಂದ ಯುಧಿಷ್ಠಿರನನ್ನು ಕುರಿತು, ಜರಾಸಂಧನ ಜನ್ಮವೃತಾಂತ ವರ್ಣನೆ 585

58. ತನ್ನ ಸ್ವರೂಪವನ್ನು ತಿಳಿಸಿ ಜರೆಯ ಅಂತರ್ಧಾನ; ಜರಾಸಂಧನ ಅಭಿವೃದ್ಧಿ ಕಥನ 599

59. ಜರಾಸಂಧನ ವಧೆಯನ್ನು ಉದ್ದೇಶಿಸಿ, ಕೃಷ್ಣ- ಭೀಮಾರ್ಜುನರಿಂದ ಮಗಧದೇಶಕ್ಕೆ ಗಮನ 608

59. ಜರಾಸಂಧನ ಪುರದವರ್ಣನೆ, ಕೃಷ್ಣಮೊದಲಾದವರ ಪ್ರವೇಶಪ್ರಕಾರ. ಜರಾಸಂಧನ ಜೊತೆಯಲ್ಲಿ ಅವರ ವಿವಾದ, ಮತ್ತು ಭೀಮಸೇನನ ಯುದ್ಧೋದ್ಯಮ 619

60. ಕೃಷ್ಣಜರಾಸಂಧರ ವೈರಕ್ಕೆ ನಿಮಿತ್ತ ಕಥನ ಮತ್ತು ಭೀಮಜರಾಸಂಧರ ಯುದ್ಧವರ್ಣನೆ 646

61. ಜರಾಸಂಧವಧೆ 667

ಮಹಾಭಾರತ

ಆದಿಪರ್ವ ಭಾಗ-೪

೧೩. ವಿದುರಾಗಮನಪರ್ವ

ಇನ್ನೂರನೆಯ ಅಧ್ಯಾಯ

(ಚಾರರಿಂದ ಪಾಂಡವರು ದ್ರೌಪದಿಯನ್ನು ಗೆದ್ದರೆಂದು ಸರ್ವತ್ರ ಪ್ರಚಾರ. ಕೆಲವು ರಾಜರ ಹರ್ಷ, ದುರ್ಯೋಧನಾದಿಗಳ ಅಸೂಯೆ, ಶಕುನಿಯ ದುರ್ನೀತಿ ಮತ್ತು ಭೂರಿಶ್ರವನ ಹಿತವಚನ)

ವೈಶಂಪಾಯನಃ

ತತೋ ರಾಜ್ಞಾಂ ಚರೈರಾಪ್ತೈಶ್ಚಾರಃ ಸಮುಪನೀಯತೇ ।
ಪಾಂಡವೈರುಪಸಂಪನ್ನಾ ದ್ರೌಪದೀ ಬಹುಭಿಸ್ತ್ವಿತಿ ॥೧॥

ಅನಂತರ ರಾಜರುಗಳ ಆಪ್ತಚಾರರು ದ್ರೌಪದಿಯು ಪಂಚಪಾಂಡವರನ್ನು ಪತಿಯಾಗಿ ಪಡೆದಳು ಎಂಬ ವಾರ್ತೆಯನ್ನು ಎಲ್ಲ ಕಡೆಯಲ್ಲಿಯೂ ಹರಡಿದರು.

ಯೇನ ತದ್ಧನುರಾನಮ್ಯ ಲಕ್ಷ್ಯಂ ವಿದ್ಧಂ ಮಹಾತ್ಮನಾ ।
ಸೋಽರ್ಜುನೋ ಜಯತಾಂ ಶ್ರೇಷ್ಠಃ ವೃಷಃ - ಸರ್ವಧನುರ್ಭೃತಾಮ್ ॥೨॥

ಯಾವ ಮಹಾತ್ಮನು ಆ ಧನುಸ್ಸನ್ನು ಬಗ್ಗಿಸಿ ಲಕ್ಷ್ಯವೇಧವನ್ನು ಮಾಡಿದನೋ ಅವನು ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಮತ್ತು ಜಯಶೀಲರಲ್ಲಿ ಶ್ರೇಷ್ಠನಾದ ಅರ್ಜುನನು.

ಯಃ ಶಲ್ಯಂ ಮದ್ರರಾಜಾನಮುತ್ಕ್ಷಿಪನ್ ನಾಹನದ್ ಬಲೀ ।
ತ್ರಾಸಯಂಶ್ಚಾಪಿ ಸಂಕ್ರುದ್ಧೋ ವೃಕ್ಷೇಣ ಪುರುಷಾನ್ ರಣೇ ॥೩॥

ನ ಚಾಸ್ಯ ಸಂಭ್ರಮಃ ಕಶ್ಚಿದಾಸೀತ್ ತತ್ರ ಮಹಾತ್ಮನಃ ।
ಸ ಭೀಮೋ ಭೀಮಸನ್ನಾದಃ ಶತ್ರುಸೈನ್ಯಾಶ್ವಮರ್ದನಃ ॥೪॥

ಯಾವ ಬಲಿಷ್ಠನು ಮದ್ರರಾಜನಾದ ಶಲ್ಯನನ್ನು ಮೇಲಕ್ಕೆ ಎಸೆದು ಕೊಲ್ಲಲಿಲ್ಲವೋ, ಯುದ್ಧದಲ್ಲಿ ಎದುರಾದವರನ್ನು ರೋಷದಿಂದ ಮರವನ್ನು ಕಿತ್ತು ಹೆದರಿಸಿದನೋ, ಆ ಕೆಲಸವನ್ನು ಮಾಡುವಾಗ ಯಾವ ಆ ಮಹಾನುಭಾವನಿಗೆ ಸ್ವಲ್ಪವೂ ಸಂಭ್ರಮ (ಗಡಿಬಿಡಿ) ಆಗಲಿಲ್ಲವೋ ಅವನು ಶತ್ರುಸೈನ್ಯದ ಅಶ್ವಗಳನ್ನು ನಾಶಮಾಡುವ ಭಯಂಕರ ಗರ್ಜನೆಯುಳ್ಳ ಭೀಮಸೇನ.

ಯೋಽಸಾವತ್ಯಕ್ರಮೀದ್ ಯುದ್ಧ್ಯನ್
ಯುದ್ಧೇ ದುರ್ಯೋಧನಂ ತದಾ ।
ಸ ರಾಜಾ ಪಾಂಡವಶ್ರೇಷ್ಠಃ ಶ್ರೇಷ್ಠವಾಗ್ ಬುದ್ಧಿವರ್ಧನಃ ॥೫॥

ಯಾವನು ದುರ್ಯೋಧನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ದುರ್ಯೋಧನನನ್ನು ಮೀರಿಸಿದನೋ, ಅವನು ಶ್ರೇಷ್ಠವಚನವುಳ್ಳ, ಬುದ್ಧಿವರ್ಧನನಾದ, ಪಾಂಡವಶ್ರೇಷ್ಠನಾದ ಧರ್ಮರಾಜ.

ದುರ್ಯೋಧನಸ್ಯಾವರಜೌ ಯೌ ಯುಧ್ಯೇತಾಂ ಪ್ರತೀತವತ್ ।
ತೌ ಯಮೌ ವೃತ್ತಸಂಪನ್ನೌ ಸಂಪನ್ನಬಲವಿಕ್ರಮೌ ॥೬॥

ಯಾವ ಇಬ್ಬರು ದುರ್ಯೋಧನನ ತಮ್ಮಂದಿರ ಜೊತೆಯಲ್ಲಿ ಅನಾಯಾಸವಾಗಿ ಯುದ್ಧ ಮಾಡಿದರೋ ಅವರು ಬಲಸಂಪನ್ನರೂ, ವಿಕ್ರಮಸಂಪನ್ನರೂ, ಒಳ್ಳೆಯ ನಡತೆಯನ್ನುಳ್ಳವರೂ ಆದ ನಕುಲಸಹದೇವರು.

ಚಾರೈಃ ಪ್ರಣಿಹಿತೈರ್ಬುದ್ಧ್ವಾ ರಾಜಾನೋ ವಿಗತಜ್ವರಾಃ ।
ಬ್ರಹ್ಮರೂಪಧರಾನ್ ಬುದ್ಧ್ವಾ ತತ್ರ ತಾನೃಷಭೇಕ್ಷಣಾನ್ ।
ಪಾಂಡವಾನ್ ಮನುಜೇಂದ್ರಾಂಸ್ತೇ ಸಮಪದ್ಯಂತ ವಿಸ್ಮಿತಾಃ ॥೭॥

ರಾಜರುಗಳು ಹೀಗೆ ತಾವು ನಿಯಮಿಸಿದ ಚಾರರ ಮೂಲಕ ತಿಳಿದು, ತಮ್ಮ ಮನೋಜ್ವರವನ್ನು ತ್ಯಜಿಸಿ, ಬ್ರಾಹ್ಮಣರೂಪಧಾರಿಗಳಾದ ವೃಷಭೇಕ್ಷಣರಾದ ಆ ಮನುಜೇಂದ್ರರು ಪಾಂಡವರೆಂದು ತಿಳಿದು ವಿಸ್ಮಿತರಾದರು.

ಸಾ ಸಪುತ್ರಾ ತದಾ ಕುಂತೀ ದಗ್ಧಾ ಜತುಗೃಹೇ ಶ್ರುತಾ ।
ಸರ್ವಭೂಮಿಪತೀನಾಂ ಚ ರಾಷ್ಟ್ರಾಣಾಂ ಚ ಯಶಸ್ವಿನೀ ।
ಪುನರ್ಜಾತಾನಿತಿ ಸ್ಮೈತಾನ್ ಮನ್ಯಂತೇ ಸರ್ವಭೂಮಿಪಾಃ ॥೮॥

ಆ ಕುಂತಿಯು ತನ್ನ ಪುತ್ರರ ಜೊತೆಯಲ್ಲಿ ದಗ್ಧಳಾದಳೆಂದು ಕೇಳಿದ್ದ ಎಲ್ಲಾ ರಾಜರೂ, ಎಲ್ಲ ರಾಜರಿಂದಲೂ ಮತ್ತು ರಾಷ್ಟ್ರಗಳಿಂದಲೂ ಸತ್ಕರಿಸಲ್ಪಟ್ಟ ಕೀರ್ತಿಶಾಲಿನಿಯಾದ ಆ ಕುಂತಿಯು ಮಕ್ಕಳ ಜೊತೆಯಲ್ಲಿ ಪುನರ್ಜನ್ಮವನ್ನು ಪಡೆದಳು ಎಂದು ತಿಳಿದರು.

ವ್ಯನಿಂದಂಶ್ಚ ತಥಾ ಭೀಷ್ಮಂ ಧೃತರಾಷ್ಟ್ರಂ ಚ ಕೌರವಮ್ ।
ಕರ್ಮಣಾ ಸುನೃಶಂಸೇನ ಪುರೋಚನಕೃತೇನ ವೈ ॥೯॥

ಪುರೋಚನನು ಮಾಡಿದ ಕ್ರೂರಕರ್ಮದ ನಿಮಿತ್ತದಿಂದಾಗಿ ಅವರು ಭೀಷ್ಮನನ್ನೂ ಮತ್ತು ಧೃತರಾಷ್ಟ್ರನನ್ನೂ ನಿಂದಿಸಿದರು.

ಧಾರ್ಮಿಕಾನ್ ವೃತ್ತಸಂಪನ್ನಾನ್ ಮಾತುಃ ಪ್ರಿಯಹಿತೇ ರತಾನ್ ।
ಯದಾ ತಾನೀದೃಶಾನ್ ಪಾರ್ಥಾನ್ನೋತ್ಸಾದಯಿತುಮರ್ಹತಿ ॥

ಪಾಂಡವರು ಯಾವಾಗಲೂ ಧಾರ್ಮಿಕರೂ, ಶೀಲಸಂಪನ್ನರೂ, ತಾಯಿಯ ಹಿತದಲ್ಲಿಯೇ ಆಸಕ್ತರಾದವರೂ ಆದುದರಿಂದ ಧೃತರಾಷ್ಟ್ರನು ಇಂತಹ ಪಾಂಡವರನ್ನು ಎಂದೂ ನಾಶಮಾಡಬಾರದು. (ಎಂದು ಭಾವಿಸಿದರು)

ತತಃ ಸ್ವಯಂವರೇ ವೃತ್ತೇ ಧಾರ್ತರಾಷ್ಟ್ರಾಃ ಸ್ಮ ಭಾರತ ।
ಮಂತ್ರಯಂತ ತತಃ ಸರ್ವೇ ಕರ್ಣಸೌಬಲದೂಷಿತಾಃ ॥೧೧॥

ಭಾರತನೇ, ಸ್ವಯಂವರವು ನಡೆದ ಮೇಲೆ ಧೃತರಾಷ್ಟ್ರನ ಪುತ್ರರು ಕರ್ಣಶಕುನಿಗಳ ದುರಾಲೋಚನೆಯಿಂದ ದೂಷಿತರಾಗಿ ಎಲ್ಲರೂ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

ಶಕುನಿಃ

ಕಶ್ಚಿಚ್ಛತ್ರುಃ ಕರ್ಶನೀಯೋ ದರ್ಶನೀಯಸ್ತಥಾऽಪರಃ ।
ಉತ್ಪಾದನೀಯಾಃ ಕೌಂತೇಯಾಃ ಸರ್ವಕ್ಷತ್ರಸ್ಯ ಮೇ ಮತಾಃ ॥೧೨॥

ಕೆಲವು ಶತ್ರುಗಳನ್ನು ಹಿಂಸಿಸಬೇಕು. ಇನ್ನೂ ಕೆಲವು ಶತ್ರುಗಳನ್ನು ಸಂದರ್ಶಿಸಿ ಪೂಜಿಸಬೇಕು. ಪಾಂಡವರು ಮಾತ್ರ ಎಲ್ಲ ಕ್ಷತ್ರಿಯರಿಂದ ವಿನಾಶಮಾಡಲ್ಪಡಬೇಕು ಎಂದು ನನ್ನ ಅಭಿಪ್ರಾಯ.

ಏವಂ ಪರಾಜಿತಾಃ ಸರ್ವೇ ಯದಿ ಯೂಯಂ ಗಮಿಷ್ಯಥ ।
ಸ ಕೃತ್ವಾ ಸಂವಿದಂ ಕಾಂಚಿದತ್ರಾಯಾಸ್ಯತ್ಯಸಂಶಯಮ್ ॥೧೩॥

ಹೀಗೆ ನೀವೆಲ್ಲರೂ ಪರಾಜಿತರಾಗಿ ಹೋಗುತ್ತಿದ್ದರೆ, ಧರ್ಮರಾಜನು ಯಾರ ಜೊತೆಯಲ್ಲಾದರೂ ಸಂಭಾಷಣೆಯನ್ನು ಮಾಡಿಕೊಂಡು ಹಸ್ತಿನಪುರಕ್ಕೆ ಬರುವುದರಲ್ಲಿ ಸಂಶಯವಿಲ್ಲ.

ಅಯಂ ದೇಶಶ್ಚ ಕಾಲಶ್ಚ ಪಾಂಡವೋದ್ಧರಣಾಯ ನಃ ।
ನ ಚೇದೇವಂ ಕರಿಷ್ಯಧ್ವಂ ಲೋಕೇ ಹಾಸ್ಯಾ ಭವಿಷ್ಯಥ ॥೧೪॥

ಇದು ಪಾಂಡವರನ್ನು ವಿನಾಶಮಾಡುವುದಕ್ಕೆ ಯೋಗ್ಯವಾದ ಕಾಲ ಮತ್ತು ದೇಶ. ನೀವು ಹಾಗೆ ಮಾಡದಿದ್ದರೆ ಲೋಕದಲ್ಲಿ ಹಾಸ್ಯಾಸ್ಪದರಾಗುವಿರಿ.

ಯಮೇತೇ ಸಂಶ್ರಿತಾ ವಸ್ತುಂ ಕಾಮಯಂತೇ ಚ ಭೂಮಿಪಮ್ ।
ಸೋऽಲ್ಪವೀರ್ಯಬಲೋ ರಾಜಾ ದ್ರುಪದೋ ವೈ ಮತೋ ಮಮ ॥೧೫॥

ಈ ಪಾಂಡವರು ಯಾವ ರಾಜನನ್ನು ಆಶ್ರಯಿಸಿ ವಾಸಮಾಡಲು ಬಯಸುತ್ತಿದ್ದಾರೆಯೋ ಆ ದ್ರುಪದರಾಜನು ದುರ್ಬಲನಾದವನು ಮತ್ತು ಅಲ್ಪಪರಾಕ್ರಮವುಳ್ಳವನು ಎಂದು ನನ್ನ ಅಭಿಪ್ರಾಯ.

ಯಾವದೇತಾನ್ನ ಜಾನಂತಿ ಜೇವತೋ ವೃಷ್ಣಿಪುಂಗವಾಃ ।
ಚೈದ್ಯಶ್ಚ ಪುರುಷವ್ಯಾಘ್ರಃ ಶಿಶುಪಾಲಃ ಪ್ರತಾಪವಾನ್ ॥೧೬॥

ವೃಷ್ಣಿಪುಂಗವರು ಪಾಂಡವರು ಬದುಕಿದ್ದಾರೆಂದು ತಿಳಿಯುವುದಕ್ಕಿಂತ ಮೊದಲೇ, ಪ್ರತಾಪಶಾಲಿಯಾದ ಪುರುಷವ್ಯಾಘ್ರನಾದ ಶಿಶುಪಾಲನು ಹಾಗೆ ತಿಳಿಯುವುದಕ್ಕಿಂತ ಮೊದಲೇ (ಪಾಂಡವರನ್ನು ವಿನಾಶಮಾಡಬೇಕು)

ಏಕೀಭಾವಂ ಗತಾ ರಾಜ್ಞಾ ದ್ರುಪದೇನ ಮಹಾತ್ಮನಾ ।
ದುರಾಧರ್ಷತರಾ ರಾಜನ್ ಭವಿಷ್ಯಂತಿ ನ ಸಂಶಯಃ ॥೧೭॥

ರಾಜನೇ, ಇವರೆಲ್ಲರೂ ಮಹಾತ್ಮನಾದ ದ್ರುಪದನಿಂದ ಏಕೀಭಾವವನ್ನು ಹೊಂದಿದರೆ, ಅನಂತರ ಅವರನ್ನು ಸೋಲಿಸಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಸಂಶಯವಿಲ್ಲ.

ಯಾವದತ್ವರತಾಂ ಸರ್ವೇ ಪ್ರಾಪ್ನುವಂತಿ ನರಾಧಿಪಾಃ ।
ತಾವದೇವ ವ್ಯವಸ್ಯಾಮಃ ಪಾಂಡವಾನಾಂ ವಧಂ ಪ್ರತಿ ॥೧೮॥

ಈ ರಾಜರೆಲ್ಲರೂ ಆಲಸ್ಯದಿಂದ ಇರುವಾಗಲೇ ನಾವು ಪಾಂಡವರ ವಧೆಗಾಗಿ ಪ್ರಯತ್ನವನ್ನು ಮಾಡೋಣ.

ಮುಕ್ತಾ ಜತುಗೃಹಾದ್ ಭೀಮಾದಾಶೀವಿಷಮುಖಾದಿವ ।
ಪುನರ್ಯದೀಹ ಮುಚ್ಯಂತೇ ಮಹನ್ನೋ ಭಯಮಾವಿಶೇತ್ ॥೧೯॥

ಭಯಂಕರವಾದ ಸರ್ಪದ ಮುಖದಿಂದ ಹೊರ ಬಂದಂತೆ ಅವರು ಜತುಗೃಹದಿಂದ ಹೊರಗೆ ಬಂದಿದ್ದಾರೆ. ಈಗಲೂ ಅವರು ವಿಮೋಚನೆಗೊಂಡರೆ ನಮಗೆ ದೊಡ್ಡ ಭಯವುಂಟಾದೀತು.

ತೇಷಾಮಿಹೋಪಯಾತಾನಾಮೇಷಾಂ ಚ ಪುರವಾಸಿನಾಮ್ ।
ಅಂತರೇ ದುಷ್ಕರಂ ಸ್ಥಾತುಂ ಮೇಷಯೋರ್ಮಹತೋರಿವ ॥೨೦॥

ಪಾಂಡವರು ಇಲ್ಲಿಗೆ ಬಂದರೆ, ನಾವು ಅವರ ಮತ್ತು ಪುರವಾಸಿಗಳ ಮಧ್ಯೆ ನಿಂತರೆ, ಯುದ್ಧಮಾಡುವ ಎರಡು ದೊಡ್ಡ ಮೇಷಗಳ ನಡುವೆ ನಿಂತಂತೆ ನಿಲ್ಲುವುದು ದುಷ್ಕರವಾಗುತ್ತದೆ.

ಹಂತ ಧೃಷ್ಟಗ್ರಹೀತಾನಿ ಬಲಾನಿ ಬಲಿನಃ ಸ್ವಯಂ ।
ಯಾವನ್ನಃ ಕುರುಸೇನಾಯಾಂ ಪತಂತಿ ಪತಗಾ ಇವ ॥೨೧॥

ತಾವತ್. ಸರ್ವಾಭಿಹಾರೇಣ ಪುರಮೇತದ್ ವಿನಾಶ್ಯತಾಮ್ ।
ಏತದತ್ರ ಪರಂ ಮನ್ಯೇ ಪ್ರಾಪ್ತಕಾಲಂ ನರರ್ಷಭಾಃ ॥೨೨॥

ಹಂತ ಎಂದರೆ ಸಂತೋಷ. ಪಾಂಡವರನ್ನು ಪರಿಗ್ರಹಿಸಿದ ದ್ರುಪದನ ಸೈನ್ಯವು ಮತ್ತು ಸ್ವತಃ ಬಲಿಷ್ಠರಾದ ಪಾಂಡವರು ಪತಂಗಗಳಂತೆ ಕುರುಸೇನೆಯ ಮೇಲೆ ಬೀಳುವುದಕ್ಕಿಂತ ಮುಂಚೆಯೇ, ಎಲ್ಲ ವಸ್ತುಗಳನ್ನೂ ಹೊಡೆದು (ಒಡೆದು) ಪಾಂಚಾಲನ ಪಟ್ಟಣವನ್ನು ನಾಶಮಾಡೋಣ. ರಾಜನೇ, ಇದು ಈ ಕಾಲದಲ್ಲಿ ನಾವು ಮಾಡಬಹುದಾದ ಶ್ರೇಷ್ಠವಾದ ಕಾರ್ಯವೆಂದು ಭಾವಿಸುತ್ತೇನೆ.

ವೈಶಂಪಾಯನಃ

ಶಕುನೇರ್ವಚನಂ ಶ್ರುತ್ವಾ ಭಾಷಮಾಣಸ್ಯ ದುರ್ಮತೇಃ ।
ಭೂರಿಶ್ರವಾ ಇದಂ ವಾಕ್ಯಂ ನಿಜಗಾದ ಪರಂತಪಃ ॥೨೩॥

ಹೀಗೆ ಮಾತನಾಡುವ ದುರ್ಮತಿಯಾದ ಶಕುನಿಯ ಮಾತುಗಳನ್ನು ಕೇಳಿ ಪರಂತಪನಾದ ಭೂರಿಶ್ರವನು ಈ ಮಾತುಗಳನ್ನು ಆಡಿದನು.

ಪ್ರಕೃತೀಃ ಸಪ್ತ ವೈ ಜ್ಞಾತ್ವಾ ಆತ್ಮನಶ್ಚ ಪರಸ್ಯ ಚ ।
ತಥಾ ದೇಶಂ ಚ ಕಾಲಂ ಚ ಷಡ್‌ವಿಧಾಂಶ್ಚ ನಯೇದ್ ಗುಣಾನ್ ॥

ಸ್ಥಾನಂ ವೃದ್ಧಿಂ ಕ್ಷಯಂ ಚೈವ ಭೂಮಿಂ ಮಿತ್ರಾಣಿ ವಿಕ್ರಮಮ್ ।
ಸಮೀಕ್ಷ್ಯಾಥಾಭಿಯುಂಜೀತ ಪರಂ ವ್ಯಸನಪೀಡಿತಮ್ ॥೨೫॥

ತನ್ನ ಮತ್ತು ಶತ್ರುವಿನ ಸಪ್ತಪ್ರಕೃತಿಗಳನ್ನೂ, ದೇಶಕಾಲಗಳನ್ನೂ, ಸ್ಥಾನ, ವೃದ್ಧಿ, ಕ್ಷಯ, ಭೂಮಿ, ಮಿತ್ರರು ಮತ್ತು ವಿಕ್ರಮ ಎಂಬ ಆರು ವಿಧವಾದ ಗುಣಗಳನ್ನೂ ಪರಿಶೀಲಿಸಿ ವ್ಯಸನಪೀಡಿತನಾದ ಶತ್ರುವಿನ ಮೇಲೆ ಆಕ್ರಮಣವನ್ನು ಮಾಡಬೇಕು.

ಅರ್ಜುನನು ತನ್ನ ದೇಹದಿಂದಲೇ ಭೂಮಿಯಲ್ಲಿರುವ ಎಲ್ಲರ ನೇತ್ರಗಳನ್ನೂ ಮತ್ತು ಮನಸ್ಸುಗಳನ್ನೂ ಸಂತೋಷಪಡಿಸುತ್ತಾನೆ. ತನ್ನ ಮಧುರವಾದ ಮಾತುಗಳಿಂದ ಎಲ್ಲರ ಶ್ರೋತ್ರಗಳನ್ನೂ ಸಂತೋಷಪಡಿಸುತ್ತಾನೆ.

ನ ತು ಕೇವಲದೈವೇನ ಪ್ರಜಾ ಭಾವೇನ ಭೇಜಿರೇ ।
ಯದ್ ಬಭೂವ ಮನಃಕಾಂತಂ ಕರ್ಮಣಾ ಸ ಚಕಾರ ತತ್ ॥೨೭॥

ಕೇವಲ ದೈವೇಚ್ಛೆಯಿಂದ ಪ್ರಜೆಗಳು ಪಾಂಡವರನ್ನು ಪ್ರೀತಿಯಿಂದ ಸೇವಿಸುವುದಲ್ಲ. ಅವರು ಎಲ್ಲರ ಮನಸ್ಸಿಗೂ ಪ್ರಿಯವಾದುದು ಯಾವುದೋ ಅದನ್ನೇ ತಮ್ಮ ಕರ್ಮಗಳಿಂದ ಮಾಡಿದ್ದಾರೆ.

ತತೋಽಹಂ ಪಾಂಡವಾನ್ ಮನ್ಯೇ ಮಿತ್ರಕೋಶಸಮನ್ವಿತಾನ್ ।
ಬಲಸ್ಥಾನ್ ವಿಕ್ರಮಸ್ಥಾಂಶ್ಚ ಸ್ವಕೃತೈಃ ಪ್ರಕೃತಿಪ್ರಿಯಾನ್ ॥೨೮॥

ಆದ್ದರಿಂದ ಪಾಂಡವರು ಮಿತ್ರಕೋಶಸಂಪನ್ನರೆಂದೂ, ಬಲಿಷ್ಠರೆಂದೂ, ವಿಕ್ರಮಶಾಲಿಗಳೆಂದೂ, ತಮ್ಮ ಕಾರ್ಯಗಳಿಂದ ಪ್ರಜೆಗಳಿಗೆ ಪ್ರಿಯರೆಂದೂ ಭಾವಿಸುತ್ತೇನೆ.

ನ ಹ್ಯಯುಕ್ತಂ ನ ಚಾಸತ್ಯಂ ನಾನೃತಂ ನ ಚ ವಿಪ್ರಿಯಮ್ ।
ಭಾಷಿತಂ ಚಾರುಭಾಷಸ್ಯ ಜಜ್ಞೇ ಪಾರ್ಥಸ್ಯ ಭಾರತೀ ॥೨೯॥

ಚೆನ್ನಾಗಿ ಮಾತನಾಡುವ ಅರ್ಜುನನು ಎಂದೂ ಅಯುಕ್ತವಾದು- ದನ್ನಾಗಲೀ, ಸತ್ಯರಹಿತವಾದುದನ್ನಾಗಲೀ, ಕಪಟದಿಂದ ಕೂಡಿದುದನ್ನಾಗಲೀ, ಅಪ್ರಿಯವಾಗಲೀ ಆದ ಮಾತನ್ನು ಆಡಲಿಲ್ಲ.

ತಾನೇವಂ ಗುಣಸಂಪನ್ನಾನ್ ಸಂಪನ್ನಾನ್ ರಾಜಲಕ್ಷಣೈಃ ।
ನ ತಾನ್ ಪಶ್ಯಾಮಿ ಯೇ ಶಕ್ತಾಃ ಸಮುಚ್ಛೇತ್ತುಂ ಯಥಾ ಬಲಾತ್ ॥

ಹೀಗೆ ಗುಣಸಂಪನ್ನರೂ, ರಾಜಲಕ್ಷಣಗಳಿಂದ ಕೂಡಿದವರೂ ಆದ ಅವರನ್ನು ತಮ್ಮ ಬಲದಿಂದ ವಿನಾಶಮಾಡಲು ಸಮರ್ಥರಾದ ಯಾರನ್ನೂ ನಾನು ಕಾಣುತ್ತಿಲ್ಲ.

ಪ್ರಭಾವಶಕ್ತಿರ್ವಿಪುಲಾ ಮಂತ್ರಶಕ್ತಿಶ್ಚ ಪುಷ್ಕಲಾ ।
ತಥೈವೋತ್ಸಾಹಶಕ್ತಿಶ್ಚ ಪಾರ್ಥೇಷ್ವಭ್ಯಧಿಕಾ ಸದಾ ॥೩೧॥

ಪಾಂಡವರಲ್ಲಿ ರಾಜರಿಗೆ ಇರಬೇಕಾದ ಪ್ರಭುಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹಶಕ್ತಿಗಳು ಯಾವಾಗಲೂ ಅತ್ಯಧಿಕವಾಗಿವೆ.

ಮೌಲಮಿತ್ರಬಲಾನಾಂ ಚ ಕಾಲಜ್ಞೋ ವೈ ಯುಧಿಷ್ಠಿರಃ ।
ಸಾಮ್ನಾ ದಾನೇನ ಭೇದೇನ ದಂಡೇನೇತಿ ಯುಧಿಷ್ಠಿರಃ ॥೩೨॥

ಅಮಿತ್ರಂ ಯತತೇ ಜೇತುಂ ನ ರೋಷೇಣೇತಿ ಮೇ ಮತಿಃ ।
ಪರಿಕ್ರೀಯ ಧನೈಃ ಶತ್ರೂನ್ ಮಿತ್ರಾಣಿ ಚ ಬಲಾನಿ ಚ ॥೩೩॥

ಮೂಲಂ ಚ ಸುದೃಢಂ ಕೃತ್ವಾ ಹಂತ್ಯರೀನ್ ಪಾಂಡವಸ್ತದಾ ।
ಅಶಕ್ಯಾನ್ ಪಾಂಡವಾನ್ ಮನ್ಯೇ ದೇವೈರಪಿ ಸವಾಸವೈಃ ।
ಯೇಷಾಮರ್ಥೇ ಸದಾ ಯುಕ್ತೌ ಕೃಷ್ಣಸಂಕರ್ಷಣಾವುಭೌ ॥೩೪॥

ಕಾಲಜ್ಞನಾದ ಯುಧಿಷ್ಠಿರನು ತನ್ನ ಮತ್ತು ಮಿತ್ರರ ಬಲಗಳನ್ನು, ಸಾಮದಾನಭೇದದಂಡಗಳಿಂದ ಪರಿಗ್ರಹಿಸಿ ಶತ್ರುಗಳನ್ನು ಜಯಿಸಲು ಪ್ರವೃತ್ತನಾಗುತ್ತಾನೆ. ಕೇವಲ ರೋಷದಿಂದ ಪ್ರವೃತ್ತನಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಪಾಂಡವನಾದ ಧರ್ಮರಾಜನು ಶತ್ರುಗಳನ್ನೂ, ಮಿತ್ರರನ್ನೂ, ಸೈನ್ಯವನ್ನೂ, ಧನದಿಂದ ಕ್ರಯಮಾಡಿ ತನ್ನ ಮೂಲಬಲವನ್ನು ದೃಢಮಾಡಿ ಶತ್ರುಗಳನ್ನು ಕೊಲ್ಲುತ್ತಾನೆ. ಯಾರ ಹಿತದಲ್ಲಿ ಕೃಷ್ಣ ಮತ್ತು ಬಲರಾಮರು ಸದಾ ನಿರತರಾಗಿದ್ದಾರೋ ಅಂತಹ ಪಾಂಡವರನ್ನು ಇಂದ್ರನಿಂದ ಕೂಡಿದ ದೇವತೆಗಳೂ ಗೆಲ್ಲಲು ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ.

ಶ್ರೇಯಶ್ಚ ಯದಿ ಮನ್ಯಧ್ವಂ ಮನ್ಮತಂ ಯದಿ ವೋ ಮತಮ್ ।
ಸಂವಿದಂ ಪಾಂಡವೈಃ ಸಾರ್ಧಂ ಕೃತ್ವಾ ಯಾಮ ಯಥಾಗತಮ್ ॥೩೫॥

ನನ್ನ ಅಭಿಪ್ರಾಯವು ನಿಮಗೆ ಸಮ್ಮತವಾದರೆ, ನಿಮಗೆ ಶ್ರೇಯಸ್ಸಾಗಬೇಕೆಂಬ ಅಭಿಪ್ರಾಯವಿದ್ದರೆ, ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಂಡು ನಾವು ಬಂದ ದಾರಿಯನ್ನು ಹಿಡಿದು ಹೋಗೋಣ.

ಗೋಪುರಾಟ್ಟಾಲಕೈರುಚ್ಚೈರುಪಕಲ್ಪಶತೈರಪಿ ।
ಗುಪ್ತಂ ಪುರವರಶ್ರೇಷ್ಠಮೇತದದ್ಭಿಶ್ಚ ಸಂವೃತಮ್ ॥೩೬॥

ಈ ಪಾಂಚಾಲರಾಜನ ಪಟ್ಟಣವು, ಗೋಪುರ ಅಟ್ಟಾಲಕ ಮತ್ತು ನೂರಾರು ಉಪಕಲ್ಪಗಳಿಂದಲೂ ಯುಕ್ತವಾಗಿದೆ ಮತ್ತು ಸುತ್ತಲೂ ನೀರಿನ ಕಂದಕವಿದೆ. (ಉಪಕಲ್ಪಗಳು ಎಂದರೆ ಶತ್ರುಸೈನ್ಯವನ್ನು ನಿರೀಕ್ಷಿಸಲು ಮಾಡಿದ ಎತ್ತರವಾದ ದಿಬ್ಬಗಳು.)

ತೃಣಧಾನ್ಯೇಂಧನರಸೈಸ್ತಥಾ ಯಂತ್ರಾಯುಧೌಷಧೈಃ ।
ಗಲಕರ್ಷಕವಾಟೈಶ್ಚ ದ್ರವ್ಯಾಗಾರತುಷಾದಿಕೈಃ ।
ಭೀಮೋಚ್ಛ್ರಿತಮಹಾಚಕ್ರಂ ಬೃಹದಟ್ಟಾಲಸಂಯುತಮ್ ॥೩೭॥

ಈ ಪಟ್ಟಣದಲ್ಲಿ ತೃಣಧಾನ್ಯಇಂಧನರಸಗಳೂ ಪೂರ್ಣವಾಗಿ ತುಂಬಿವೆ. ಇದು ಯಂತ್ರ, ಆಯುಧ ಮತ್ತು ಔಷಧಿಗಳಿಂದ ಪೂರ್ಣವಾಗಿದೆ. ಶತ್ರುಗಳ ಸೈನಿಕರನ್ನು ವಧೆಮಾಡುವ ಯಂತ್ರಗಳೂ, ದ್ರವ್ಯಾಗಾರಗಳೂ, ತುಷಾದಿಗಳೂ ಇವೆ. ಭಯಂಕರವಾದ ಮತ್ತು ಎತ್ತರವಾದ ಮಹಾಚಕ್ರವು ಮತ್ತು ಎತ್ತರವಾದ ಅಟ್ಟಾಲಗಳೂ ಇವೆ.

ಐಷ್ಟಕೋ ದಾರುಕೋ ವಪ್ರೋ ಮಾನುಷಶ್ಚೇತಿ ಯಃ ಸ್ಮೃತಃ ।
ಪ್ರಾಕಾರಕರ್ತೃಭಿರ್ಧೀರೈರ್ನಗರ್ಭಸ್ತತ್ರ ಪೂಜಿತಃ ॥೩೮॥

ಇಟ್ಟಿಗೆಯಿಂದ ನಿರ್ಮಿಸಿದ, ಮರಗಳಿಂದ ನಿರ್ಮಿಸಿದ ಮತ್ತು ಮನುಷ್ಯರಿಂದ ನಿರ್ಮಿಸಿದ ವೃತ್ತಾಕಾರದ ಕೋಟೆಗೋಡೆಗಳಿಂದ ರಕ್ಷಿತವಾಗಿದೆ. ಅದರಲ್ಲಿಯೂ ಈ ಮೂರು ಪ್ರಾಕಾರಗಳಲ್ಲಿ ಧೀರರಾದ ಪುರುಷರಿಂದ ನಿರ್ಮಿತವಾದ ಮನುಷ್ಯಕೋಟೆಯು ಶ್ರೇಷ್ಠವೆಂದು ಹೇಳುತ್ತಾರೆ.

ತದೇತನ್ನರಗರ್ಭೇಣ ಪಾಂಡರೇಣ ವಿರಾಜತೇ ।
ಸಾಲೇನಾಮ್ರೇಣ ತಾರೇಣ ಸರ್ವತಃ ಸಂವೃತಂ ಪುರಮ್ ॥೩೯॥

ಈ ನರಗರ್ಭವಾದ ಶ್ವೇತವರ್ಣದ ಕೋಟೆಯಿಂದ ಈ ನಗರವು ಶೋಭಿಸುತ್ತದೆ. ಕೋಟೆಯ ಸುತ್ತಲೂ ಸಾಲವೃಕ್ಷಗಳೂ, ಆಮ್ರವೃಕ್ಷಗಳೂ, ತಾರವೃಕ್ಷಗಳೂ ಇದ್ದು ಅದರಿಂದ ಪಟ್ಟಣವು ರಕ್ಷಿತವಾಗಿದೆ.

ಅನುರಕ್ತಾಃ ಪ್ರಕೃತಯೋ ದ್ರುಪದಸ್ಯ ಮಹಾತ್ಮನಃ ।
ದಾನಮಾನಾರ್ಚಿತಾಃ ಸರ್ವಾ ಬಾಹ್ಯಾಶ್ಚಾಭ್ಯಂತರಾಶ್ಚ ಯಾಃ ॥೪೦॥

ಮಹಾತ್ಮನಾದ ದ್ರುಪದನ ಪ್ರಜೆಗಳೆಲ್ಲರೂ ಅವನಲ್ಲಿ ಅನುರಕ್ತ- ರಾದವರು. ಅವನು ನಗರದ ಒಳಗೆ ಮತ್ತು ಹೊರಗೆ ಇದ್ದ ಎಲ್ಲಾ ಪ್ರಜೆಗಳನ್ನೂ ದಾನಮಾನಗಳಿಂದ ಸತ್ಕರಿಸಿದ್ದಾನೆ.

ಪ್ರತಿರುದ್ಧಾಮಿಮಾಂ ಜ್ಞಾತ್ವಾ ರಾಜಭಿರ್ಭೀಮವಿಕ್ರಮೈಃ ।
ಉಪಯಾಸ್ಯಂತಿ ದಾಶಾರ್ಹಾಃ ಸಮುದಗ್ರೋಚ್ಛ್ರಿತಾಯುಧಾಃ ॥೪೧॥

ಪರಾಕ್ರಮಶಾಲಿಗಳಾದ ರಾಜರಾದ ನಾವು ಈ ಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದರೆ, ದಾಶಾರ್ಹರು ತಮ್ಮ ಉನ್ನತವಾದ ಆಯುಧಗಳನ್ನು ಹಿಡಿದು ದ್ರುಪದನ ಸಹಾಯಕ್ಕೆ ಬರುವರು.

ತಸ್ಮಾತ್ ಸಂಧಿಂ ವಯಂ ಕೃತ್ವಾ ಧಾರ್ತರಾಷ್ಟ್ರಸ್ಯ ಪಾಂಡವೈಃ ।
ಸ್ವರಾಷ್ಟ್ರಾಣ್ಯೇವ ಗಚ್ಛಾಮೋ ಯದ್ಯಾಪ್ತಂ ವಚನಂ ಮಮ ॥೪೨॥

ಆದ್ದರಿಂದ ನನ್ನ ಮಾತು ನಿಮಗೆ ಹಿತವಾದರೆ, ದುರ್ಯೋಧನನಿಗೂ ಮತ್ತು ಪಾಂಡವರಿಗೂ ಸಂಧಿಯನ್ನು ಮಾಡಿ ನಮ್ಮ ನಮ್ಮ ರಾಷ್ಟ್ರಗಳಿಗೆ ಹೋಗೋಣ. ಇದು ನನ್ನ ಅಭಿಪ್ರಾಯ. ನಿಮಗೆ ಇಷ್ಟವಿದ್ದರೆ ಹೀಗೆ ಮಾಡಿ.

ಏತನ್ಮಮ ಮತಂ ಸರ್ವೈಃ ಕ್ರಿಯತಾಂ ಯದಿ ರೋಚತೇ ।
ಏತದ್ಧಿ ಸುಕೃತಂ ಮನ್ಯೇ ಕ್ಷೇಮಂ ಚಾಪಿ ಮಹೀಕ್ಷಿತಾಮ್ ॥೪೩॥

ಹೀಗೆ ಮಾಡಿದರೆ ಮಾತ್ರ ಒಳ್ಳೆಯ ಕಾರ್ಯವನ್ನು ಮಾಡಿದಂತಾಗುತ್ತದೆ ಮತ್ತು ಎಲ್ಲಾ ರಾಜರುಗಳಿಗೂ ಕ್ಷೇಮವಾಗುತ್ತದೆ ಎಂದು ನನ್ನ ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ॥
ದ್ವಿಶತಶತತಮೋऽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ವೈಚಿತ್ರವೀರ್ಯತನಯಾಃ ಸಹ ಸೌಬಲೇನ
ಕರ್ಣೇನ ಸಿಂಧುಪತಿನಾ ರಥಹಸ್ತಿಯೋಧೈಃ ।
ಭೂರಿಶ್ರವಃ ಪ್ರಭೃತಿಭಿಶ್ಚ ಸಹೈವ ಹಂತುಂ
ಪಾಂಚಾಲರಾಜಮಗುರೇತ್ಯ ಪುರೀಂ ಪುನಸ್ತೇ ॥೧೬॥

ಕೌರವರು ಶಕುನಿ ಕರ್ಣ ಜಯಪ್ರಥ ಭೂರಿಶ್ರವ ಮುಂತಾದವರೊಂದಿಗೆ ರಥಗಜ ಪದಾತಿ ಸೈನ್ಯಸಮೇತರಾಗಿ ತಮ್ಮ ನಗರಕ್ಕೆ ಹೋಗಿ ಪುನಃ ದ್ರುಪದನನ್ನು ಕೊಲ್ಲುವ ಉದ್ದೇಶದಿಂದ ಅವನ ನಗರವನ್ನು ಮುತ್ತಿ ಆಕ್ರಮಿಸಿದರು.

ತೈರರ್ದಿತೇ ಸ್ವಪುರ ಆಶು ಸ ಸೋಮಕಾನಾಂ
ರಾಜಾ ಸುತೈಃ ಸಹ ಸಸೈನಿಕ ಉದ್ಗತೋಽಭೂತ್ ।
ತೇಷಾಂ ಚ ತಸ್ಯ ಚ ಬಭೂವ ಮಹಾನ್ ವಿಮರ್ದಃ
ಪುತ್ರೌ ಚ ತಸ್ಯ ನಿಹತೌ ವಿಧುತಾಶ್ಚ ಸೇನಾಃ ॥೧೭॥

ಕೌರವರು ತನ್ನ ನಗರವನ್ನು ಆಕ್ರಮಿಸಲು ಬಂಆಗ ದ್ರುಪದ ಬೇಗನೆ ತನ್ನ ಮಕ್ಕಳೊಂದಿಗೆ ಸೈನಿಕರ ಸಮೇತರಾಗಿ ನಗರದಿಂದ ಹೊರಗೆ ಬಂದ. ಅವರಿಗೂ ಅವನಿಗೂ ದೊಡ್ಡ ಯುದ್ಧ ನಡೆಯಿತು. ಅವನು ಇಬ್ಬರು ಮಕ್ಕಳು ಹತರಾದರು. ಸೇನೆಗಳೂ ನಾಶವಾದುವು.

ಚಿತ್ರೇ ಹತೇ ಸಮರ ಆಶು ಸಚಿತ್ರಕೇತೌ
ಧಾವತ್ಸು ಸೈನಿಕವರೇಷು ಚ ಪಾರ್ಷತಸ್ಯ ।
ಪಾರ್ಥಾ ರಥೈರಭಿಯಯುರ್ಧೃತಚಾಪಬಾಣಾ
ವೈಚಿತ್ರವೀರ್ಯತನಯಾನ್ ರವಿಸೂನುಯುಕ್ತಾನ್ ॥೧೮॥

ದ್ರುಪದನ ಮಕ್ಕಳು ಚಿತ್ರ ಮತ್ತು ಚಿತ್ರಕೇತುಗಳಿಬ್ಬರೂ ಯುದ್ಧದಲ್ಲಿ ಮಡಿದಾಗ ಅವನ ಉತ್ತಮ ಸೈನಿಕರೂ ಪಲಾಯನಗೈದಾಗ, ಪಾರ್ಥರು ರಥವೇರಿ ಬಿಲ್ಲು ಬಾಣಗಳನ್ನು ಧರಿಸಿ ಕೌರವರನ್ನೂ ಕರ್ಣನನ್ನೂ ಇದಿರಿಸಿದರು.

ತೈಸ್ತೇಷು ಪಂಚಸು ಸಮಂ ಪ್ರತಿಯೋಧಯತ್ಸು
ಭೂರಿಶ್ರವಾಃ ಸರವಿಜೋ ವಿರಥಂ ಚಕಾರ ।
ಶಕ್ರಾತ್ಮಜಂ ತದನು ಪರ್ವತಸನ್ನಿಕಾಶಂ
ದೋರ್ಭ್ಯಾಂ ತು ಮಾರುತಿರುರುಂ ತರುಮುದ್ಬಬರ್ಹ ॥೧೬೯॥

ಕೌರವರು ಪಂಚಪಾಂಡವರೊಡನೆ ಯುದ್ಧ ಮಾಡುತ್ತಿದ್ದಾಗ ಭೂರಿಶ್ರವ ಮತ್ತು ಕರ್ಣರು ಅರ್ಜುನನನ್ನು ವಿರಥನನ್ನಾಗಿ ಮಾಡಿದರು. ಒಡನೆ ಭೀಮ ಬೆಟ್ಟದಂಥ ಮರವನ್ನು ಕೈಗಳಿಂದ ಕಿತ್ತಿದ.

ಆಯಾಂತಮೀಕ್ಷ್ಯ ತರುಹಸ್ತ ಮಿಮಂ ಸಮೀರ-
ಸೂನುಂ ಸುಯೋಧನಮುಖಾ ನಿಖಿಲಾಃ ಸಕರ್ಣಾಃ ।
ಭೂರಿಶ್ರವಾಃ ಶಕುನಿಭೂರಿಜಯದ್ರಥಾಶ್ಚ
ಸರ್ವೇಽಪಿ ದುದ್ರುವುರಥೋ ವಿವಿಶುಃ ಪುರಂ ಸ್ವಂ ॥೧೭೦॥

ಭೀಮಸೇನ ಮರವನ್ನು ಹಿಡಿದುಕೊಂಡು ಬರುತ್ತಿದ್ದುದನ್ನು ನೋಡಿ ಎಲ್ಲ ದುರ್ಯೋಧನಾದಿಗಳೂ ಕರ್ಣ ಭೂರಿಶ್ರವ ಶಕುನಿ ಭೂರಿ ಜಯದ್ರಥರೂ ಎಲ್ಲರೂ ಪಲಾಯನ ಮಾಡಿದರು. ತಮ್ಮ ಪಟ್ಟಣಗಳನ್ನು ಹೊಕ್ಕರು.

★ ★ ★ ★

ಇನ್ನೂರ ಒಂದನೆಯ ಅಧ್ಯಾಯ

(ಅಭಿಯಾನ ಮಾಡಲು ಕರ್ಣನ ಆಗ್ರಹ, ಅಭಿಯಾನ. ದುರ್ಯೋಧನಾದಿಗಳ ಪರಾಜಯ, ಪ್ರತಿನಿವೃತ್ತಿ , ಕೃಷ್ಣನಿಂದ ಚತುರಂಗಬಲ ಪ್ರೇಷಣ.)

ವೈಶಂಪಾಯನಃ

ಸೌಮದತ್ತೇರ್ವಚಃ ಶ್ರುತ್ವಾ ಕರ್ಣೋ ವೈಕರ್ತನೋ ವೃಷಾ ।
ಉವಾಚ ವಚನಂ ಕಾಲೇ ಕಾಲಜ್ಞಃ ಸರ್ವಕರ್ಮಣಾಮ್ ॥೧॥

ಸೋಮದತ್ತನ ಮಗನಾದ ಭೂರಿಶ್ರವನ ಮಾತನ್ನು ಕೇಳಿ, ಎಲ್ಲ ಕರ್ಮಗಳ ಯೋಗ್ಯಕಾಲವನ್ನು ತಿಳಿದ ಶ್ರೇಷ್ಠನಾದ, ವೈಕರ್ತನನಾದ ಕರ್ಣನು ಆಗ ಮಾತನಾಡಿದನು.

ನೀತಿಪೂರ್ವಮಿದಂ ಸರ್ವಮುಕ್ತಂ ವಚನಮರ್ಥವತ್ ।
ವಚನಂ ನಾಭ್ಯಸೂಯಾಮಿ ಶ್ರೂಯತಾಂ ಮದ್ವಚಸ್ತಿತಿಃ ॥೨॥

ಭೂರಿಶ್ರವನು ನೀತಿಪೂರ್ವಕವಾಗಿ ಹೇಳಿದ ಎಲ್ಲ ಮಾತುಗಳೂ ಅರ್ಥಪೂರ್ಣವಾಗಿವೆ. ಆ ಮಾತುಗಳ ಮೇಲೆ ನನಗೆ ಅಸೂಯೆಯಿಲ್ಲ. ನನ್ನ ಮಾತಿನ ರೀತಿಯನ್ನು ಕೇಳಿ.

ದ್ವೈಧೀಭಾವೋ ನ ಗಂತವ್ಯಃ ಸರ್ವಕರ್ಮಸು ಮಾನವೈಃ ।
ದ್ವಿಧಾಭೂತೇನ ಮನಸಾ ಹ್ಯನ್ಯತ್ ಕರ್ಮ ನ ಸಿಧ್ಯತಿ ॥೩॥

ಮನುಷ್ಯರು ಯಾವ ಕಾರ್ಯದಲ್ಲಿಯೂ ಎರಡು ಮನಸ್ಸುಗಳಿಂದ ಪ್ರವೃತ್ತರಾಗಬಾರದು. ಒಂದೇ ಮನಸ್ಸಿಲ್ಲದೇ, ಎರಡು ಅಭಿಪ್ರಾಯದಿಂದ ಪ್ರವೃತ್ತವಾದರೆ, ಯಾವ ಕಾರ್ಯವೂ ಸಿದ್ಧಿಸುವುದಿಲ್ಲ.

ಸಂಪ್ರಯಾಣಾಸನಾಭ್ಯಾಂ ತು ಕರ್ಶನೇನ ತಥೈವ ಚ ।
ನೈತಚ್ಛಕ್ಯಂ ಪುರಂ ಹಂತುಮಾಕ್ರಂದಶ್ಚಾಪ್ಯಶೋಭನಃ ॥೪॥

ಕೇವಲ ದಂಡೆತ್ತಿಹೋಗಿ ಪಟ್ಟಣವನ್ನು ಮುತ್ತಿಗೆ ಹಾಕಿ ಪ್ರಜೆಗಳಿಗೆ ಹಿಂಸೆಯನ್ನು ಕೊಟ್ಟು ಆ ಪಟ್ಟಣವನ್ನು ಗೆಲ್ಲಲು ಸಾಧ್ಯವಿಲ್ಲ. ಪಟ್ಟಣದ ಹೊರಗಿನಿಂದ ಆಹಾರಾದಿಗಳ ಸರಬರಾಜನ್ನು ನಿಲ್ಲಿಸಿ ಪಟ್ಟಣದ ಪ್ರಜೆಗಳು ಗೋಳಾಡುವಂತೆ ಮಾಡುವುದು ಎಂದೂ ಸರಿಯಲ್ಲ.

ಅವಮರ್ದನಕಾಲೋಽತ್ರ ಮತಶ್ಚಿಂತಯತೋ ಮಮ ।
ಯಾವನ್ನೋ ವೃಷ್ಣಯಃ ಪಾಷ್ಣಿಂ ನ ಗೃಹ್ಣಂತಿ ರಣಪ್ರಿಯಾಃ ॥೫॥

ಭವಂತೋ ಹೃಷ್ಟರೂಪಾಸ್ತು ಸ್ವಬಾಹುಬಲಶಾಲಿನಃ ।
ಪ್ರಾಕಾರಮವಮೃದ್ನಂತು ಪರಿಘಾಶ್ಚ ಕಿರಂತ್ವಪಿ ॥೬॥

ನನ್ನ ಚಿಂತನೆಗೆ ಇದು ನಾವು ಅವರ ಮೇಲೆ ಎರಗಬೇಕಾದ ಕಾಲವೆಂದು ತೋರುತ್ತದೆ. ರಣಪ್ರಿಯರಾದ ವೃಷ್ಣಿಗಳು ಬಂದು ದ್ರುಪದನ ಬೆಂಬಲಕ್ಕೆ ನಿಲ್ಲುವುದರೊಳಗೆ ನಿಮ್ಮ ಬಾಹುಬಲದಿಂದ ಯುಕ್ತರಾದ ನೀವೆಲ್ಲರೂ ಸಂತೋಷದಿಂದ ಹೋಗಿ ದ್ರುಪದಪಟ್ಟಣದ ಪ್ರಾಕಾರಗಳನ್ನು ಕೆಡವಿ, ಪರಿಖೆಗಳನ್ನು ಒಡೆಯಿರಿ.

ಪ್ರಸ್ರಾವಯಂತು ಸಲಿಲಂ ಕ್ರಿಯತಾಂ ವಿಷಮಂ ಸಮಮ್ ।
ತೃಣಕಾಷ್ಠೇನ ಮಹತಾ ಖಾತಮಸ್ಯ ಪ್ರಪೂರ್ಯತಾಮ್ ॥೭॥

ಕಂದಕದ ನೀರನ್ನೆಲ್ಲಾ ಹೊರಗೆ ಬಿಡಿ. ವಿಷಮವಾದ ಮಾರ್ಗವನ್ನು ಸಮವನ್ನು ಮಾಡಿ ಹಳ್ಳಗಳನ್ನು ಬಹಳ ತೃಣಕಾಷ್ಠಗಳನ್ನು ತುಂಬಿ ಮುಚ್ಚಿ

ಘುಷ್ಯತಾಂ ರಾಜಸೈನ್ಯೇಷು ಪರೇಷಾಂ ಯೋ ಹನಿಷ್ಯತಿ ।
ನಾಗಮಶ್ವಂ ಪದಾತಿಂ ವಾ ದಾನಮಾನಂ ಸ ಲಪ್ಸ್ಯತೇ ॥೮॥

ನಾಗೇ ದಶಸಹಸ್ರಾಣಿ ಪಂಚ ಚಾಶ್ವಪದಾತಿಷು ।
ರಥೇ ವೈ ದ್ವಿಗುಣಂ ನಾಗಾದ್ ವಸು ದಾಸ್ಯಂತಿ ಪಾರ್ಥಿವಾಃ ॥೯॥

ನಮ್ಮ ಸೈನ್ಯಗಳಲ್ಲಿ ಯಾರು ಶತ್ರುಸೈನ್ಯದ ಗಜಗಳನ್ನು ಅಥವಾ ಪದಾತಿಗಳನ್ನು ವಧೆಮಾಡುತ್ತಾನೋ ಅವನು ರಾಜನಿಂದ ದಾನಮಾನಗಳನ್ನು ಪಡೆಯುತ್ತಾನೆ. ಗಜವನ್ನು ಕೊಂದರೆ ಹತ್ತುಸಾವಿರ ನಾಣ್ಯಗಳನ್ನೂ, ಅಶ್ವವನ್ನು ಕೊಂದರೆ ಅಥವಾ ಪದಾತಿಗಳನ್ನು ಕೊಂದರೆ ಐದುಸಾವಿರ ನಾಣ್ಯಗಳನ್ನೂ, ರಥಗಳನ್ನು ನಾಶಮಾಡಿದರೆ ಇಪ್ಪತ್ತುಸಾವಿರ ನಾಣ್ಯಗಳನ್ನೂ ರಾಜರು ಕೊಡುವರು ಎಂದು ಘೋಷಣೆಯನ್ನು ಮಾಡಿ.

ಯಶ್ಚ ಕಾಮಗುಣೇ ಸಕ್ತೋ ಬಾಲಶ್ಚ ಸ್ಥವಿರಶ್ಚ ಯಃ ।
ಅಯುದ್ಧಮನಸೋ ಯೇ ತು ತೇ ಚ ತಿಷ್ಠಂತು ಭೀರವಃ ॥೧೦॥

ಯಾರು ಕಾಮಾಸಕ್ತರೋ ಅಥವಾ ಬಾಲಕರೋ ಅಥವಾ ವೃದ್ಧರೋ ಅಥವಾ ಯುದ್ಧದಲ್ಲಿ ಮನಸ್ಸಿಲ್ಲದವರೋ ಅಥವಾ ಭೀರುಗಳೋ ಅವರು ಹಿಂದೆಯೇ ಉಳಿಯಲಿ.

ಪ್ರದರಶ್ಚ ನ ದಾತವ್ಯೋ ನ ಗಂತವ್ಯಮಚೋದಿತೈಃ ।
ಯಶೋ ರಕ್ಷತ ಭದ್ರಂ ವೋ ವಿಜೇಷ್ಯಾಮೋ ವಯಂ ಪುರಮ್ ॥೧೧॥

ನಮ್ಮ ಸೈನ್ಯದಲ್ಲಿ ಹೆದರಿಕೆಯನ್ನುಂಟು ಮಾಡಬಾರದು. ಪ್ರೇರಣೆಯಿಲ್ಲದೆ ಮುಂದೆ ಹೋಗಬಾರದು. ನಿಮ್ಮ ಕೀರ್ತಿಯನ್ನು ಕಾಪಾಡಿಕೊಳ್ಳಿ. ನಿಮಗೆ ಮಂಗಳವಾಗಲಿ. ನಾವು ದ್ರುಪದನ ಪಟ್ಟಣವನ್ನು ಗೆಲ್ಲುವೆವು.

ಅನುಲೋಮಾಶ್ಚ ನೋ ವಾತಾಃ ಸರ್ವತೋ ಮೃಗಪಕ್ಷಿಣಃ ।
ಅಗ್ನಯಶ್ಚ ವಿರಾಜಂತೇ ಶಸ್ತ್ರಾಣಿ ಕವಚಾನಿ ಚ ॥೧೨॥

ವಾಯುವು ನಮಗೆ ಅನುಕೂಲವಾಗಿ ಬೀಸುತ್ತಿದೆ. ಎಲ್ಲಕಡೆಯಲ್ಲಿಯೂ ಮೃಗಪಕ್ಷಿಗಳು ಅನುಕೂಲವಾಗಿ ಸಂಚರಿಸುತ್ತಿವೆ. ಅಗ್ನಿಗಳೂ, ಶಸ್ತ್ರಗಳೂ ಮತ್ತು ಕವಚಗಳೂ ಹೊಳೆಯುತ್ತಿವೆ.

ವೈಶಂಪಾಯನಃ

ತತಃ ಕರ್ಣವಚಃ ಶ್ರುತ್ವಾ ಧಾರ್ತರಾಷ್ಟ್ರಪ್ರಿಯೈಷಿಣಃ ।
ಭವಂತಿ ಹೃಷ್ಟಪುಷ್ಟಾಸ್ತು ರಾಜಾನೋ ಬಲವತ್ತರಾಃ ॥೧೩॥

ನಿರ್ಯಯುಃ ಪೃಥಿವೀಪಾಲಾಶ್ಚಾಲಯಂತಃ ಪರಾನ್ ರಣೇ ।
ನ ಹಿ ತೇಷಾಂ ಮನಃಸಕ್ತಿರಿಂದ್ರಿಯಾರ್ಥೇಷು ಸರ್ವಶಃ ॥೧೪॥

ಅನಂತರ ಕರ್ಣನ ಮಾತುಗಳನ್ನು ಕೇಳಿ ದುರ್ಯೋಧನನ ಹಿತೈಷಿಗಳಾದ ಬಲಿಷ್ಠರಾದ ರಾಜರು ಹೃಷ್ಟಪುಷ್ಟರಾಗಿ ಭೂಮಿಯನ್ನು ಅಲುಗಾಡಿಸುತ್ತಾ ಶತ್ರುಗಳ ಮೇಲೆ ಯುದ್ಧಮಾಡಲು ಹೊರಟರು.

ಯಥಾ ಪರಪುರಘ್ನಾನಾಂ ಪ್ರಸಭೇ ಯುದ್ಧ ಏವ ಚ ।
ವೈಕರ್ತನಪುರೋವಾತಃ ಸೈಂಧವೋರ್ಮಿಮಹಾಸ್ವನಃ ॥೧೫॥

ದುಃಶಾಸನಸರಿನ್ಮಧ್ಯೇ ದುರ್ಯೋಧನಮಹಾಗ್ರಹಃ ।
ಸ ರಾಜಸಾಗರೋ ಭೀಮೋ ಭೀಮಘೋಷಪ್ರದರ್ಶನಃ ।
ಅಭಿದುದ್ರಾವ ವೇಗೇನ ಪುರಂ ತದಪಸವ್ಯತಃ ॥೧೬॥

ಅವರಿಗೆ ಶತ್ರುಪಟ್ಟಣವನ್ನು ನಾಶಮಾಡಲು ಯುದ್ಧದಲ್ಲಿ ಆಸಕ್ತಿಯಿದ್ದಂತೆ ಇಂದ್ರಿಯವಿಷಯವಾದ ಭೋಗಸಾಮಗ್ರಿಗಳಲ್ಲಿ ಆಸಕ್ತಿಯಿರಲಿಲ್ಲ. ವೈಕರ್ತನನೆಂಬ ಮುಂದಿನ ಗಾಳಿಯನ್ನು ಹೊಂದಿದ ಸೈಂಧವನೆಂಬ ಊರ್ಮಿಯ ಮಹಾನಾದವುಳ್ಳ ಇನ್ನೊಬ್ಬರು ಜಯಿಸಲಾರದ ಸೇನಾನದಿಯ ಮಧ್ಯೆ ದುರ್ಯೋಧನನೆಂಬ ಮಹಾಮೊಸಳೆಯುಳ್ಳ ಭಯಂಕರವಾದ ಘೋಷವನ್ನು ತೋರಿಸುತ್ತಿದ್ದ ಆ

ಭಯಂಕರವಾದ ರಾಜಸಾಗರವು ವೇಗವಾಗಿ ದ್ರುಪದಪಟ್ಟಣದ ಎಡಭಾಗವನ್ನು ಉದ್ದೇಶಿಸಿ ಓಡಿತು.

ತದನೀಕಮನಾಧೃಷ್ಯಂ ಶಸ್ತ್ರಾಗ್ನಿವ್ಯಪದೀಪಿತಮ್ ।
ಸಮುತ್ಕುಪಿತಮಾಜ್ಞಾಯ ಚುಕ್ರುಶುರ್ದ್ರುಪದಾತ್ಮಜಾಃ ॥೧೭॥

ಸೋಲಿಸಲು ದುಸ್ಸಾಧ್ಯವಾದ ಶಸ್ತ್ರಾಗ್ನಿಯಿಂದ ಜ್ವಲಿತವಾದ ಆ ಸೈನ್ಯವು ಕುಪಿತವಾಗಿರುವುದನ್ನು ತಿಳಿದು ದ್ರುಪದನ ಪುತ್ರರು ಕೇಕೆ ಹಾಕಿದರು.

ತೇ ಮೇಘಸಮನಿರ್ಘೋಷೈರ್ಬಲೇನ ಸ್ಯಂದನೋತ್ತಮೈಃ ।
ನಿರ್ಯಯುರ್ನಗರದ್ವಾರಾತ್ ತ್ರಾಸಯಂತಃ ಪರಾನ್ ರಣೇ ॥೧೮॥

ಅವರು ಮೇಘಗಂಭೀರನಾದದಿಂದ ಕೂಡಿದ ಶ್ರೇಷ್ಠವಾದ ರಥಗಳಲ್ಲಿ ನಗರದ್ವಾರದಿಂದ ಹೊರಗೆ ಬಂದು ಯುದ್ಧದಲ್ಲಿ ಶತ್ರುಗಳನ್ನು ಹೆದರಿಸುತ್ತಾ ಶತ್ರುಗಳಿಗೆ ಅಭಿಮುಖವಾಗಿ ಹೊರಟರು.

ಧೃಷ್ಟದ್ಯುಮ್ನಃ ಶಿಖಂಡೀ ಚ ಸುಚಿತ್ರಃ ಪ್ರಿಯದರ್ಶನಃ ।
ಚಿತ್ರಕೇತುಃ ಸುಕೇತುಶ್ಚ ಧ್ವಜಸೇನಶ್ಚ ವೀರ್ಯವಾನ್ ।
ಪುತ್ರಾ ದ್ರುಪದರಾಜಸ್ಯ ಬಲವಂತೋ ಜಯೈಷಿಣಃ ॥೧೯॥

ಧೃಷ್ಟದ್ಯುಮ್ನ, ಶಿಖಂಡಿ, ಸುಚಿತ್ರ, ಪ್ರಿಯದರ್ಶನ, ಚಿತ್ರಕೇತು, ಸುಕೇತು, ಧ್ವಜಸೇನ ದ್ರುಪದರಾಜನ ಬಲಿಷ್ಠರೂ, ವಿಜಯಾಪೇಕ್ಷಿಗಳಾದ ಈ ಪುತ್ರರು ಹೊರಟರು.

ದ್ರುಪದಶ್ಚ ಮಹಾವೀರ್ಯಃ ಪಾಂಡರೋಷ್ಣೀಷಕೇತನಃ ।
ಪಾಂಡರವ್ಯಜನಚ್ಛತ್ರಃ ಪಾಂಡರಧ್ವಜವಾಹನಃ ॥೨೦॥

ಮಹಾವೀರ್ಯನಾದ ದ್ರುಪದನೂ ಸಹ ಬಿಳಿಯ ರುಮಾಲನ್ನು ಧರಿಸಿ ಬಿಳಿಯ ಧ್ವಜವುಳ್ಳ ರಥದಲ್ಲಿ, ಬಿಳಿಯ ಛತ್ರಚಾಮರಗಳನ್ನು ಹೊಂದಿದವನಾಗಿ ಯುದ್ಧಕ್ಕೆ ಹೊರಟನು.

ಸ ಪುತ್ರಗಣಮಧ್ಯಸ್ಥಃ ಶುಶುಭೇ ರಾಜಸತ್ತಮಃ ।
ಚಂದ್ರಮಾ ಜ್ಯೋತಿಷಾಂ ಮಧ್ಯೇ ಪೌರ್ಣಮಾಸ್ಯಾಮಿವೋದಿತಃ ॥೨೧॥

ತನ್ನ ಪುತ್ರರ ಸಮೂಹದಲ್ಲಿದ್ದ ಆ ರಾಜಶ್ರೇಷ್ಠನು ಉಳಿದ ಆಕಾಶಜ್ಯೋತಿಗಳ ಮಧ್ಯೆ ಇರುವ ಪೌರ್ಣಮಾಸಿಯ ಚಂದ್ರನಂತೆ ಶೋಭಿಸಿದನು.

ಅಥೋದ್ಧೂತಪತಾಕಾಗ್ರಮಜಿಹ್ಮಗತಿಮವ್ಯಯಮ್ ।
ದ್ರುಪದಾನೀಕಮಾಯಾಂತಂ ಕುರುಸೈನ್ಯಮಭಿದ್ರವತ್ ॥೨೨॥

ಅನಂತರ ಅನೇಕ ಪತಾಕೆಗಳನ್ನು ಹೊಂದಿದ್ದ, ನೇರವಾದ ಗತಿಯನ್ನು ಹೊಂದಿದ್ದ ಅಪಾರವಾದ ದ್ರುಪದಸೈನ್ಯವು ಬರುವುದನ್ನು ನೋಡಿ ಕುರುಸೈನ್ಯವು ಅದಕ್ಕೆ ಅಭಿಮುಖವಾಗಿ ಹೋಯಿತು.

ತಯೋರುಭಯತೋ ಜಜ್ಞೇ ಭೈರವಸ್ತುಮುಲಃ ಸ್ವನಃ ।
ಬಲಯೋಃ ಸಂಪ್ರಹರತೋಃ ಸ್ರವಂತ್ಯೋಃ ಸರಿತೋರಿವ ॥೨೩॥

ಆ ಎರಡೂ ಸೈನ್ಯಗಳಿಂದ ಬಲಿಷ್ಠರಾಗಿ ಪ್ರಹಾರಮಾಡುವ ಎರಡು ಪರ್ವತಗಳಿಂದ ಎರಡು ನದಿಗಳು ಹರಿದಂತೆ, ಭಯಂಕರವಾದ ಘೋಷವುಂಟಾಯಿತು.

ಪ್ರಕೀರ್ಣರಥನಾಗಾಶ್ವಾಸ್ತಾನ್ಯನೀಕಾನಿ ಸರ್ವಶಃ ।
ಜ್ಯೋತೀಂಷೀವ ಪ್ರಕೀರ್ಣಾನಿ ಸರ್ವತಃ ಪ್ರಚಕಾಶಿರೇ ॥೨೪॥

ಯುದ್ಧಭೂಮಿಯಲ್ಲಿ ಅಲ್ಲಲ್ಲಿ ಚೆಲ್ಲಾಡಿ ಬಿದ್ದಿದ್ದಿ ರಥಗಳೂ, ನಾಗಗಳೂ ಮತ್ತು ಅಶ್ವಗಳೂ, ಆಕಾಶದಲ್ಲಿ ಚದುರಿದ ಜ್ಯೋತಿಗಳಂತೆ ಶೋಭಿಸಿದವು.

ಉತ್ಕೃಷ್ಟಭೇರೀನಿನದೇ ಸಂಪ್ರವೃತ್ತೇ ಮಹಾಹವೇ ।
ಪ್ರಹರ್ಷಿತಾ ಮಹಾತ್ಮಾನಃ ಪಾಂಡವಾ ನಿರ್ಯಯುಸ್ತತಃ ॥೨೫॥

ರಥಾಂಶ್ಚ ಮೇಘನಿರ್ಘೋಷಾನ್ ಯುಕ್ತಾನ್ ಪರಮವಾಜಿಭಿಃ ।
ಆಸ್ಥಾಯ ಧ್ವಜಿನಃ ಶುಭ್ರಾನ್ ಧನ್ವಿನೋ ಭರತರ್ಷಭಾಃ ॥೨೬॥

ಉತ್ಕೃಷ್ಟಭೇರೀನಿನಾದದಿಂದ ಪ್ರವೃತ್ತವಾದ ಮಹಾಯುದ್ಧದಲ್ಲಿ ಮಹಾತ್ಮರಾದ ಪಾಂಡವರು ಪ್ರಹರ್ಷಿತರಾಗಿ ನಗರದಿಂದ ಹೊರಗೆ ಹೊರಟರು. ಧನುಸ್ಸನ್ನು ಹಿಡಿದ

ಆ ಭರತಶ್ರೇಷ್ಠರು ಮೇಘ- ಘೋಷಗಳನ್ನುಂಟು ಮಾಡುವ ಶ್ರೇಷ್ಠವಾದ ಅಶ್ವಗಳಿಂದ ಹೂಡಲ್ಪಟ್ಟ, ಧ್ವಜಗಳಿಂದ ಕೂಡಿದ ಶುಭ್ರವಾದ ರಥಗಳನ್ನು ಏರಿ ಯುದ್ಧಕ್ಕೆ ಹೊರಟರು.

ತತಃ ಪಾಂಡುಸುತಾನ್ ದೃಷ್ಟ್ವಾ ರಥಸ್ಥಾನಾತ್ತಕಾರ್ಮುಕಾನ್ ।
ನೃಪಾಣಾಮಭವತ್ ಕಂಪೋ ವೇಪಥುರ್ಹೃದಯೇಷು ಚ ॥೨೭॥

ಆಗ ರಥದಲ್ಲಿ ಕೈಯಲ್ಲಿ ಧನುಸ್ಸನ್ನು ಹಿಡಿದ ಪಾಂಡವರನ್ನು ನೋಡಿ ಶತ್ರುಪಕ್ಷದ ರಾಜರ ದೇಹದಲ್ಲಿ ಕಂಪವು, ಹೃದಯದಲ್ಲಿ ನಡುಕವೂ ಉಂಟಾಯಿತು.

ನಿರ್ಯಾತೇಷ್ವಥ ಪಾರ್ಥೇಷು ದ್ರೌಪದಂ ತದ್ಬಲಂ ರಣೇ ।
ಆವಿಶತ್ ಪರಮೋ ಹರ್ಷಃ ಪ್ರಮೋದಶ್ಚ ಬಲಂ ಪ್ರತಿ ॥೨೮॥

ಪಾಂಡವರು ಯುದ್ಧಕ್ಕಾಗಿ ಬರುತ್ತಿರಲು ದ್ರುಪದನ ಸೈನ್ಯಕ್ಕೆ ಪರಮಹರ್ಷವುಂಟಾಯಿತು. ಶತ್ರುಗಳ ಸೈನ್ಯದ ಮೇಲೆ ಎರಗಲು ಉತ್ಸಾಹವೂ ಉಂಟಾಯಿತು.

ಸುಮುಹೂರ್ತಂ ವ್ಯತಿಕರಃ ಸೈನ್ಯಾನಾಮಭವದ್ ಭೃಶಮ್ ।
ತತೋ ದ್ವಂದ್ವಮಯುಧ್ಯಂತ ಮೃತ್ಯುಂ ಕೃತ್ವಾ ನಿವರ್ತನಮ್ ॥೨೯॥

ಒಂದು ಮುಹೂರ್ತದ ಕಾಲ ಸೈನ್ಯಗಳಿಗೆ ಪರಸ್ಪರವಾಗಿ ಮಿಶ್ರಣವಾಯಿತು. ಅನಂತರ ಮೃತ್ಯುವಿಗೆ ಹೆದರದೆ, ಅವರು ದ್ವಂದ್ವಯುದ್ಧವನ್ನು ಆರಂಭಿಸಿದರು.

ಜಘ್ನತುಃ ಸಮರೇ ತಸ್ಮಿನ್ ಸುಚಿತ್ರಪ್ರಿಯದರ್ಶನೌ ।
ಜಯದ್ರಥಶ್ಚ ಕರ್ಣಶ್ಚ ಪಶ್ಯತಃ ಸವ್ಯಸಾಚಿನಃ ॥೩೦॥

ಯುದ್ಧದಲ್ಲಿ ಅರ್ಜುನನು ನೋಡುತ್ತಿರುವಂತೆಯೇ, ಜಯದ್ರಥ ಮತ್ತು ಕರ್ಣರು ದ್ರುಪದನ ಮಕ್ಕಳಾದ ಸುಚಿತ್ರ ಮತ್ತು ಪ್ರಿಯದರ್ಶನರನ್ನು ಕೊಂದರು.

ಅರ್ಜುನಃ ಪ್ರೇಕ್ಷ್ಯ ನಿಹತೌ ಸುಚಿತ್ರಪ್ರಿಯದರ್ಶನೌ ।
ಜಯದ್ರಥಸುತಂ ತತ್ರ ಜಘಾನ ಪಿತುರಂತಿಕೇ ॥೩೧॥

ಅರ್ಜುನನು ಸುಚಿತ್ರಪ್ರಿಯದರ್ಶನರು ನಿಹತರಾದುದನ್ನು ನೋಡಿ ಜಯದ್ರಥನ ಕಣ್ಣೆದುರಿಗೇ ಅವನ ಮಗನನ್ನು ಕೊಂದನು.

ವೃಷಸೇನಾದವರಜಂ ಸುಭಾನುಂ ವೈ ಧನಂಜಯಃ ।
ಕರ್ಣಪುತ್ರಂ ಮಹಾವೀರ್ಯಂ ರಥನೀಡಾದಪಾಹರತ್ ॥೩೨॥

ಧನಂಜಯನು ವೃಷಸೇನನ ತಮ್ಮನಾದ ಮಹಾಪರಾಕ್ರಮಿಯಾದ ಸುಭಾನುವೆಂಬ ಕರ್ಣಪುತ್ರನನ್ನು ರಥನೀಡದಿಂದ ಹಾರಿಸಿಕೊಂದನು.

ತೌ ಸುತೌ ನಿಹತೌ ದೃಷ್ಟ್ವಾ ರಾಜಸಿಂಹೌ ತರಸ್ವಿನೌ ।
ನಾಮೃಷ್ಯೇತಾಂ ಮಹಾವೀರ್ಯೌ ಪ್ರಹಾರಮಿವ ಸದ್ಗಜೌ ॥೩೩॥

ತಮ್ಮ ಮಕ್ಕಳು ನಿಹತರಾದುದನ್ನು ನೋಡಿ ರಾಜಸಿಂಹರೂ ಮತ್ತು ವೇಗಶಾಲಿಗಳೂ, ಮಹಾವೀರ್ಯವುಳ್ಳವರೂ ಆದ ಕರ್ಣಜಯದ್ರಥರು ಶ್ರೇಷ್ಠವಾದ ಗಜವು ಪ್ರಹಾರವನ್ನು ಸಹಿಸದಿರುವಂತೆ ಅದನ್ನು ನೋಡಿ ಸಹಿಸಲಿಲ್ಲ.

ತೌ ಜಗೃತುರಸಂಭ್ರಾಂತೌ ಫಲ್ಗುನಸ್ಯ ರಥಂ ಪ್ರತಿ ।
ತೌ ತು ಬದ್ಧತಳತ್ರಾಣೌ ತ್ರಾಯಮಾಣೌ ಪರಸ್ಪರಮ್ ॥೩೪॥

ಅವರು ಹಸ್ತಗಳಿಗೆ ರಕ್ಷಣೆಯನ್ನು ಹಾಕಿಕೊಂಡು ಒಬ್ಬರನ್ನೊಬ್ಬರು ರಕ್ಷಿಸುತ್ತಾ ಯಾವ ಗಾಬರಿಯೂ ಇಲ್ಲದರೆ, ಅರ್ಜುನನ ರಥದ ಕಡೆಗೆ ಬಂದರು.

ಸನ್ನಿಪಾತಸ್ತಯೋರಾಸೀತ್ ಫಲ್ಗುನೇನ ಮಹಾಮೃಧೇ ।
ವೃತ್ರಶಂಬರಯೋಃ ಸಂಖೇ ವಜ್ರಿಣೇವ ಮಹಾರಣೇ ॥೩೫॥

ಮಹಾರಣದಲ್ಲಿ ಇಂದ್ರನಿಗೂ ಮತ್ತು ವೃತ್ರಶಂಬರರಿಗೂ ಘರ್ಷಣೆಯಾದಂತೆ ಅವರಿಬ್ಬರಿಗೂ ಅರ್ಜುನನ ಜೊತೆಯಲ್ಲಿ ಸನ್ನಿಪಾತ (ಘರ್ಷಣೆ) ಉಂಟಾಯಿತು.

ತಾನಶ್ವಾಂಜಘ್ನತುಸ್ತತ್ರ ಫಲ್ಗುನಸ್ಯ ನರರ್ಷಭೌ ।
ತತಃ ಕಿಲಕಿಲಾಶಬ್ದಃ ಕುರೂಣಾಮಭವತ್ ತದಾ ॥೩೬॥

ನರರ್ಷಭರಾದ ಅವರು ಅರ್ಜುನನ ರಥದ ನಾಲ್ಕೂ ಕುದುರೆಗಳನ್ನು ಕೊಂದರು. ಆಗ ಕುರುಗಳಿಗೆ ಸಂತೋಷಸೂಚಕವಾದ ಶಬ್ದಗಳುಂಟಾಯಿತು.

ತಾನ್ ಹಯಾನ್ ನಿಹತಾನ್ ದೃಷ್ಟ್ವಾ ಭೀಮಸೇನಃ ಪ್ರತಾಪವಾನ್।
ನಿಮೇಷಾಂತರಮಾತ್ರೇಣ ರಥಮಶ್ವೈರಯೋಜಯತ್ ॥೩೭॥

ಆ ಕುದುರೆಗಳು ಹತವಾದುದನ್ನು ನೋಡಿ ಪ್ರತಾಪಶಾಲಿಯಾದ ಭೀಮಸೇನನು ಕಣ್ಣುಮುಚ್ಚಿತೆಗೆಯುವದರೊಳಗೆ ರಥಕ್ಕೆ ಬೇರೆ ಕುದುರೆಗಳನ್ನು ಹೂಡಿದನು.

ಉಪಯಾತಂ ರಥಂ ದೃಷ್ಟ್ವಾ ದುರ್ಯೋಧನಪುರಃಸರೌ ।
ಸೌಬಲಃ ಸೌಮದತ್ತಿಶ್ಚ ಸಮೇಯಾತಾಂ ಪರಂತಪೌ ॥೩೮॥

ಪುನಃ ಮುಂದೆ ಬಂದ ರಥವನ್ನು ನೋಡಿ ದುರ್ಯೋಧನನ ಮುಂಭಾಗದಲ್ಲಿದ್ದ ಪರಂತಪರಾದ ಶಕುನಿ ಮತ್ತು ಭೂರಿಶ್ರವರು ಯುದ್ಧಕ್ಕಾಗಿ ಮುಂದೆ ಬಂದರು.

ತೈಃ ಪಂಚಭಿರದೀನಾತ್ಮಾ ಭೀಮಸೇನೋ ಮಹಾಬಲಃ ।
ಅಯುಧ್ಯತ ಬಲೈರ್ವೀರೈರಿಂದ್ರಿಯಾರ್ಥೈರಿವೇಶ್ವರಃ ॥೩೯॥

ಮಹಾಬಲನೂ, ಧೈರ್ಯಶಾಲಿಯೂ ಆದ ಭೀಮಸೇನನು ಆ ಐದೂ ಜನರ ಸೈನ್ಯದ ಜೊತೆಯಲ್ಲಿ (ಕರ್ಣ, ಜಯದ್ರಥ, ದುರ್ಯೋಧನ, ಶಕುನಿ, ಭೂರಿಶ್ರವ, ಈ ಐವರ ಸೈನ್ಯದ ಜೊತೆಯಲ್ಲಿ) ತಪಸ್ವಿಯಾದವನು ಪಂಚೇಂದ್ರಿಯಾರ್ಥಗಳ ಜೊತೆಯಲ್ಲಿ ಹೋರಾಡುವಂತೆ ಯುದ್ಧವನ್ನು ಮಾಡಿದನು.

ತೈರ್ನಿರುದ್ಧೋ ನ ಸಂತ್ರಾಸಂ ಜಗಾಮ ಸಮಿತಿಂಜಯಃ ।
ಪಂಚಭಿರ್ದ್ವಿರದೈರ್ಮತ್ತೈರ್ನಿರುದ್ಧ ಇವ ಕೇಸರೀ ॥೪೦॥

ಅವರಿಂದ ನಿರುದ್ಧನಾದ ಸಮಿತಿಂಜಯನಾದ ಭೀಮನು ಐದು ಆನೆಗಳಿಂದ ನಿರುದ್ಧವಾದ ಸಿಂಹದಂತೆ ಸ್ವಲ್ಪವೂ ಹೆದರಲಿಲ್ಲ.

ತಸ್ಯ ತೇ ಯುಗಪತ್ ಪಂಚ ಪಂಚಭಿರ್ನಿಶಿತೈಃ ಶರೈಃ ।
ಸಾರಥಿಂ ವಾಜಿನಶ್ಚೈವ ನಿನ್ಯುರ್ವೈವಸ್ವತಕ್ಷಯಮ್ ॥೪೧॥

ಆಗ ಆ ಐದು ಜನರೂ ಏಕಕಾಲದಲ್ಲಿ ಐದು ಬಾಣಗಳನ್ನು ಪ್ರಯೋಗಮಾಡಿ ಭೀಮನ ಸಾರಥಿಯನ್ನೂ, ನಾಲ್ಕು ಕುದುರೆಗಳನ್ನೂ ಯಮಲೋಕಕ್ಕೆ ಕಳುಹಿಸಿದರು.

ಹತಾಶ್ವಾತ್ ಸ್ಯಂದನಶ್ರೇಷ್ಠಾದವರುಹ್ಯ ಮಹಾರಥಃ ।
ಚಚಾರ ವಿವಿಧಾನ್ ಮಾರ್ಗಾನಸಿಮುದ್ಯಮ್ಯ ಪಾಂಡವಃ ॥೪೨॥

ಅಶ್ವಗಳನ್ನು ಕಳೆದುಕೊಂಡ ಮಹಾರಥನಾದ ಭೀಮನು ರಥದಿಂದ ಧುಮುಕಿ ಕತ್ತಿಯನ್ನು ಹಿಡಿದು ಅಸಿಯುದ್ಧದ ವಿವಿಧ ಮಾರ್ಗಗಳಲ್ಲಿ ಸಂಚರಿಸಿದನು.

ಅಶ್ವಸ್ಕಂಧೇಷು ಚಕ್ರೇಷು ಯುಗೇಷ್ವೀಷಾಸು ಚೈವ ಹ ।
ವ್ಯಚರತ್ ಪಾತಯನ್ ಶತ್ರೂನ್ ಸುಪರ್ಣ ಇವ ಭೋಗಿನಃ ॥೪೩॥

ಅವನು ಕುದುರೆಯ ಹೆಗಲಿನ ಬಳಿಯಲ್ಲಿಯೂ, ರಥದ ಚಕ್ರಗಳ ಬಳಿಯಲ್ಲಿಯೂ, ನೊಗಗಳ ಬಳಿಯಲ್ಲಿಯೂ, (ಈಶಾದಂಡದ ಮೂಕಿಯ) ಬಳಿಯಲ್ಲಿಯೂ ಸಂಚರಿಸುತ್ತಾ ಗರುಡನು ಸರ್ಪಗಳನ್ನು ಸಂಹರಿಸಿದಂತೆ ಶತ್ರುಗಳನ್ನು ಕತ್ತರಿಸಿದನು.

ವಿಧನುಷ್ಕಂ ವಿಕವಚಂ ವಿರಥಂ ಚ ಸಮೀಕ್ಷ್ಯ ತಮ್ ।
ಅಭಿಪೇತುರ್ನರವ್ಯಾಘ್ರಮರ್ಜುನಪ್ರವರಾ ರಥಾಃ ॥೪೪॥

ಧೃಷ್ಟದ್ಯುಮ್ನಃ ಶಿಖಂಡೀ ಚ ಯಮೌ ಚ ಯುಧಿ ದುರ್ಜಯೌ ।
ತಸ್ಮಿನ್ ದಶರಥೇ ಯುದ್ಧೇ ಪ್ರವೃದ್ಧೇ ಶರವೃಷ್ಟಿಭಿಃ ॥೪೫॥

ರಥಾ ಧ್ವಜಾಃ ಪತಾಕಾಶ್ಚ ಸರ್ವಮಂತರಧೀಯತ ।
ತತ್ ಪ್ರವೃತ್ತಂ ಚಿರಂ ಕಾಲಂ ಯುದ್ಧಂ ಸಮಮಿವಾಭವತ್ ॥೪೬॥

ಧನುಸ್ಸಿಲ್ಲದೆ, ಕವಚವಿಲ್ಲದೆ, ರಥವಿಲ್ಲದೆ, ಯುದ್ಧಮಾಡುತ್ತಿರುವ ಭೀಮಸೇನನನ್ನು ನೋಡಿ ಧೃಷ್ಟದ್ಯುಮ್ನ, ಶಿಖಂಡಿ, ಯುದ್ಧದಲ್ಲಿ ದುರ್ಜಯರಾದ ನಕುಲಸಹದೇವರು, ಅರ್ಜುನ ಇವರೆಲ್ಲರೂ ತಮ್ಮ ರಥಗಳಲ್ಲಿ ಭೀಮಸೇನನ ಬಳಿಗೆ ಬಂದರು. ಹತ್ತು ರಥಗಳಿಂದ ಕೂಡಿದ ಆ ಯುದ್ಧವು ಬೆಳೆದು ಉಂಟಾದ ಬಾಣವರ್ಷದಿಂದ ರಥಗಳೂ, ಧ್ವಜಗಳೂ, ಪತಾಕೆಗಳೂ ಎಲ್ಲವೂ ಮುಚ್ಚಿಹೋದವು. ಬಹುಕಾಲ ನಡೆದ ಆ ಯುದ್ಧವು ಸಮವಾಗಿ ನಡೆಯುವಂತೆ ತೋರುತ್ತಿತ್ತು. (ನಾಲ್ಕು ಪಾಂಡವರ ನಾಲ್ಕು ರಥಗಳು ಮತ್ತು ಧೃಷ್ಟದ್ಯುಮ್ನನ ರಥ ಹೀಗೆ ಒಂದು ಪಕ್ಷದಲ್ಲಿ ಐದು ರಥಗಳು. ಕರ್ಣ, ಜಯದ್ರಥ, ಭೂರಿಶ್ರವ, ಶಕುನಿ, ದುರ್ಯೋಧನ ಇವರ ಐದು ರಥಗಳು ಇನ್ನೊಂದು ಕಡೆ, ಹೀಗೆ ಒಟ್ಟು ಹತ್ತು ರಥಗಳು.)

ರಥೇನ ತಾನ್ ಮಹಾಬಾಹುರರ್ಜುನೋಽಭ್ಯಪತತ್ ಪುನಃ
ತಮಾಪತಂತಂ ದೃಷ್ಟ್ವೈವ ಮಹಾಬಾಹುರ್ಧನುರ್ಧರಃ ।
ಕರ್ಣೋಽಸ್ತ್ರವಿದುಷಾಂ ಶ್ರೇಷ್ಠೋ ವಾರಯಾಮಾಸ ಸಾಯಕೈಃ ॥೪೭॥

ತನ್ನ ಎದುರಿಗೆ ಬರುತ್ತಿದ್ದ ಅವರನ್ನು ನೋಡಿ ಮಹಾಬಾಹುವೂ, ಧನುರ್ಧರನೂ ಆದ ಅರ್ಜುನನು ಅವರ ಕಡೆಗೆ ಧಾವಿಸಿದನು. ಅಸ್ತ್ರಜ್ಞರಲ್ಲಿ ಶ್ರೇಷ್ಠನಾದ ಕರ್ಣನು ತನ್ನ ಬಾಣಗಳಿಂದ ಅರ್ಜುನನನ್ನು ತಡೆದನು.

ಸ ತೇನಾಭಿಹತಃ ಪಾರ್ಥೋ ವಾಸವಿರ್ವಜ್ರಸನ್ನಿಭಾನ್ ।
ತ್ರೀನ್ ಶರಾನ್ ಸಂದಧೇ ಕ್ರುದ್ಧೋ ವಧಾತ್ ಕರ್ಣಸ್ಯ ಪಾಂಡವಃ ॥

ಕರ್ಣನ ಬಾಣಗಳಿಂದ ತಾಡಿತನಾದ ಇಂದ್ರನ ಮಗನಾದ ಅರ್ಜುನನು ಕರ್ಣನ ವಧೆಯ ಉದ್ದೇಶದಿಂದ ವಜ್ರದಂತಿದ್ದ ಮೂರು ಬಾಣಗಳನ್ನು ತೆಗೆದು ಕ್ರುದ್ಧನಾಗಿ ಧನುಸ್ಸಿನಲ್ಲಿ ಹೂಡಿದನು.

ತೈಃ ಶರೈರಾಹತಃ ಕರ್ಣಃ ಧ್ವಜಯಷ್ಟಿಮುಪಾಶ್ರಿತಃ ।
ಅಪೋವಾಹ ರಥೇನಾಶು ಸೂತಃ ಪರಪುರಂಜಯಮ್ ॥೪೯॥

ಆ ಶರಗಳಿಂದ ತಾಡಿತನಾದ ಕರ್ಣನನ್ನು ಧ್ವಜಯಷ್ಟಿಯನ್ನು ಹಿಡಿದು ನಿಂತನು. ಆಗ ಅವನ ಸೂತನು ಪರಪುರಂಜಯನಾದ ಕರ್ಣನು ರಥದಲ್ಲಿ ಯುದ್ಧಭೂಮಿಯಿಂದ ಹೊರಗೆ ಕರೆದುಕೊಂಡು ಹೋದನು.

ತತಃ ಪರಾಜಿತೇ ಕರ್ಣೇ ಧಾರ್ತರಾಷ್ಟ್ರಂ ಮಹದ್ಭಯಮ್ ।
ವಿವೇಶ ಸಮುದಗ್ರಾಂಶ್ಚ ಪಾಂಡವಾನ್ ಪ್ರಸಮೀಕ್ಷ್ಯ ಚ ॥೫೦॥

ಕರ್ಣನು ಪರಾಜಿತನಾಗುತ್ತಿರಲು ಬಲದಿಂದ ಬೆಳೆಯುತ್ತಿರುವ ಪಾಂಡವರನ್ನು ನೋಡಿ ದುರ್ಯೋಧನನಿಗೆ ದೊಡ್ಡ ಭಯವು ಉಂಟಾಯಿತು.

ತತ್ಪ್ರಕಂಪಿತಮತ್ಯರ್ಥಂ ದೃಷ್ಟ್ವಾ ವೈ ಸೌಬಲೋ ಬಲಮ್ ।
ಗಿರಾ ಗಂಭೀರಯಾ ವೀರಃ ಸಮಾಶ್ವಸಯತಾಸಕೃತ್ ॥೫೧॥

ಪಾಂಡವರ ಪರಾಕ್ರಮದಿಂದ ನಡುಗಿದ ಸೈನ್ಯವನ್ನು ನೋಡಿ, ವೀರನಾದ ಶಕುನಿಯು ತನ್ನ ಸೈನ್ಯವನ್ನು ಕುರಿತು ಅನೇಕಬಾರಿ ಸಮಾಶ್ವಾಸನೆಯ ಮಾತುಗಳನ್ನು ಆಡಿದನು.

ಧಾರ್ತರಾಷ್ಟ್ರೈಸ್ತತಃ ಸರ್ವೈರ್ದುರ್ಯೋಧನಪುರಸ್ಸರೈಃ ।
ಛತ್ರಮಾಲ್ಯಾಂಬರಧರಂ ಪತಾಕಾಶತಶೋಭಿತಮ್ ।
ಧೃತಂ ತತ್ಪುನರೇವಾಸೀದ್ ಬಲಂ ಪಾರ್ಥಪ್ರಕಂಪಿತಮ್ ॥೫೨॥

ಆಗ ಮೊದಲು ಪಾರ್ಥನಿಂದ ಪ್ರಕಂಪಿತವಾದ ಕೌರವಬಲವು ದುರ್ಯೋಧನ ಪ್ರಮುಖರಾದ ಎಲ್ಲಾ ಧೃತರಾಷ್ಟ್ರನ ಮಕ್ಕಳಿಂದಲೂ ಕೂಡಿ, ಛತ್ರಮಾಲ್ಯಾಂಬರಗಳನ್ನು ಧರಿಸಿ, ನೂರಾರು ಪತಾಕೆಗಳಿಂದ ಶೋಭಿತವಾಗಿ ಪುನಃ ನಿಂತುಕೊಂಡಿತು.

ತತೋ ದುರ್ಯೋಧನಂ ದೃಷ್ಟ್ವಾ ಭೀಮೋ ಭೀಮಪರಾಕ್ರಮಃ ।
ಅಕ್ರುಧ್ಯತ್ ಸ ಮಹಾಬಾಹುರಗಾರಂ ಜಾತುಷಂ ಸ್ಮರನ್ ॥೫೩॥

ಆಗ ಭೀಮಪರಾಕ್ರಮನೂ, ಮಹಾಬಾಹುವೂ ಆದ ಭೀಮನು ದುರ್ಯೋಧನನನ್ನು ನೋಡಿ, ಅರಗಿನ ಮನೆಯನ್ನು ನೆನೆಸಿಕೊಂಡು ಕ್ರೋಧಾವಿಷ್ಟನಾದನು.

ತತಃ ಸಂಗ್ರಾಮಶಿರಸಿ ದದರ್ಶ ವಿಪುಲದ್ರುಮಮ್ ।
ಆಯಾಮಭೂತಂ ತಿಷ್ಠಂತಂ ಸ್ಕಂಧಪಂಚಾಶದುನ್ನತಮ್ ।
ಮಹಾಸ್ಕಂಧಂ ಮಹೋತ್ಸೇಧಂ ಶಕ್ರಧ್ವಜಮಿವೋಚ್ಛ್ರಿತಮ್ ॥೫೪॥

ಆಗ ಆ ಉನ್ನತವಾದ ಸಂಗ್ರಾಮದಲ್ಲಿ ಭೀಮಸೇನನು ವಿಸ್ತಾರವಾಗಿ ಹರಡಿ ಐವತ್ತುಕೊಂಬೆಗಳಿಂದ ಕೂಡಿದ್ದ ದೊಡ್ಡ ಸ್ಕಂಧವನ್ನೂ, ಎತ್ತರವನ್ನೂ ಹೊಂದಿ, ಶಕ್ರಧ್ವಜದಂತೆ ಇದ್ದ ಒಂದು ಮಹಾಸಾಲವೃಕ್ಷವನ್ನು ನೋಡಿದನು.

ಸಾಲಮುತ್ಪಾಟ್ಯ ಪಾಣಿಭ್ಯಾಮುದ್ಯಮ್ಯ ಚ ರಣೇ ಬಲೀ ।
ಅಭಿಪೇದೇ ಪರಾನ್ ಸಂಖೇ ವಜ್ರಪಾಣಿರಿವಾಸುರಾನ್ ॥೫೫॥

ಬಲಿಷ್ಠನಾದ ಭೀಮಸೇನನು ಯುದ್ಧದಲ್ಲಿ ತನ್ನ ಎರಡೂ ಕೈಗಳಿಂದಲೂ ಸಾಲವೃಕ್ಷವನ್ನು ಹಿಡಿದು ಕಿತ್ತು ವಜ್ರಪಾಣಿಯಾದ ಇಂದ್ರನು ಅಸುರರ ಮೇಲೆ ಎರಗಿದಂತೆ ಯುದ್ಧದಲ್ಲಿ ಶತ್ರುಗಳ ಮೇಲೆ ಎರಗಿದನು.

ಭೀಮಸೇನಭಯಾರ್ತಾನಿ ಫಲ್ಗುನಾಭಿಹತಾನಿ ಚ ।
ನ ಶೇಕುಸ್ತಾನ್ಯನೀಕಾನಿ ಧಾರ್ತರಾಷ್ಟ್ರಂ ನಿರೀಕ್ಷಿತುಮ್ ॥೫೬॥

ಫಲ್ಗುನನಿಂದ ಪ್ರಹಾರಕ್ಕೆ ಒಳಗಾಗಿ ಭೀಮಸೇನನ ಭಯದಿಂದ ಆರ್ತವಾದ ಆ ಸೈನ್ಯವು ದುರ್ಯೋಧನನನ್ನು ನೋಡಲು ಸಹ ಸಮರ್ಥವಾಗಲಿಲ್ಲ.

ತಾನಿ ಸಂಭ್ರಾಂತಯೋಧಾನಿ ಶ್ರಾಂತವಾಜಿಗಜಾನಿ ಚ ।
ದಿಶಃ ಪ್ರಾಕಾಲಯದ್ ಭೀಮೋ ದಿವೀವಾಭ್ರಾಣಿ ಮಾರುತಃ ॥೫೭॥

ತಾನ್ ನಿವೃತ್ತಾನ್ ನಿರಾನಂದಾನ್ ಹತವಾರಣವಾಜಿನಃ ।
ನಾನುಸಸ್ರುರ್ನ ಚಾಜಘ್ನುರ್ನೋಚುಃ ಕಿಂಚಿಚ್ಚ ದಾರುಣಮ್ ॥೫೮॥

ದಿಗ್ಭ್ರಮೆಗೆ ಒಳಗಾದ ಯೋಧರನ್ನೂ, ದಣಿದ ಅಶ್ವಗಜಗಳನ್ನು ಹೊಂದಿದ ಆ ಸೈನ್ಯವನ್ನು ಆಕಾಶದಲ್ಲಿ ವಾಯುವು ಮೋಡಗಳನ್ನು ಚದುರಿಸಿದಂತೆ ಭೀಮಸೇನನು ದಿಕ್ಕುದಿಕ್ಕುಗಳಿಗೆ ಓಡಿಸಿದನು. ಪಾಂಡವರು ಅಶ್ವಗಳನ್ನೂ ಮತ್ತು ಗಜಗಳನ್ನೂ ಕಳೆದುಕೊಂಡು ದುಃಖಪೂರ್ಣರಾಗಿ ಹಿಂದಿರುಗುತ್ತಿದ್ದ ಆ ಸೈನ್ಯವನ್ನು ಅನುಸರಿಸಲಿಲ್ಲ ಅಥವಾ ಸೈನ್ಯಕ್ಕೆ ಪುನಃ ಪ್ರಹಾರ ಮಾಡಲಿಲ್ಲ ಅಥವಾ ಸೈನಿಕರಿಗೆ ಉಗ್ರವಾಗಿ ಮಾತನಾಡಲೂ ಇಲ್ಲ.

ಸ್ವಮೇವ ಶಿಬಿರಂ ಜಗ್ಮುಃ ಕ್ಷತ್ರಿಯಾಃ ಶರವಿಕ್ಷತಾಃ ।
ಪರೇऽಪ್ಯಭಿಯಯುರ್ಹೃಷ್ಟಾಃ ಪುರಂ ಪೌರಸುಖಾವಹಾಃ ॥೫೯॥

ಬಾಣಗಳಿಂದ ಗಾಯಗೊಂಡ ಕ್ಷತ್ರಿಯರು ತಮ್ಮ ಶಿಬಿರಗಳಿಗೆ ಹಿಂದಿರುಗಿದರು. ಪಾಂಡವರೂ ಸಹ ಪೌರರಿಗೆ ಸುಖವನ್ನುಂಟುಮಾಡುತ್ತಾ ಸಂತೋಷದಿಂದ ದ್ರುಪದರಾಜನ ಪಟ್ಟಣವನ್ನು ಪ್ರವೇಶಿಸಿದರು.

ಮುಹೂರ್ತಮಭವದ್ ವೈರಂ ತೇಷಾಂ ವೈ ಪಾಂಡವೈಃ ಸಹ ।
ಯಾವತ್ ತದ್ಯುದ್ಧಮಭವನ್ಮಹದ್ ದೇವಾಸುರೋಪಮಮ್ ।
ತಾವದೇವಾಭವಚ್ಛಾಂತಂ ನಿವೃತ್ತಾ ವೈ ಮಹಾರಥಾಃ ॥೬೦॥

ಪಾಂಡವರಿಗೂ ಮತ್ತು ಕೌರವಸೈನ್ಯದ ಕ್ಷತ್ರಿಯರಿಗೂ ಒಂದು ಮುಹೂರ್ತದ ಕಾಲ ಯುದ್ಧದ ನಿಮಿತ್ತವಾಗಿ ವೈರವುಂಟಾಯಿತು. ಎಷ್ಟು ಶೀಘ್ರವಾಗಿ ದೇವಾಸುರ ಸಮರಸದೃಶವಾದ ಆ ಯುದ್ಧವು ನಡೆಯಿತೋ ಅಷ್ಟೇ ಶೀಘ್ರವಾಗಿ ಶಾಂತವೂ ಆಯಿತು. ಎಲ್ಲಾ ಮಹಾರಥರೂ ನಿವೃತ್ತರಾದರು.

ಸುವೃತ್ತಂ ಚಕ್ರಿರೇ ಸರ್ವೇ ಸುಪ್ರಾಪ್ತಾಮಬ್ರುವನ್ ವಧೂಮ್ ।
ಕೃತಾರ್ಥಂ ದ್ರುಪದಂ ಚೋಚುರ್ಧೃಷ್ಟದ್ಯುಮ್ನಂ ಚ ಪಾರ್ಷತಮ್ ॥

ಪಾಂಡವರು ಒಳ್ಳೆಯ ಕೆಲಸವನ್ನು ಮಾಡಿದರು, ವಧುವಾದ ದ್ರೌಪದಿಯು ಚೆನ್ನಾಗಿ ಬಂದಿದ್ದಾಳೆ, ದ್ರುಪದ ಮತ್ತು ಧೃಷ್ಟದ್ಯುಮ್ನರು ಕೃತಾರ್ಥರಾಗಿದ್ದಾರೆ ಎಂದು ಎಲ್ಲರೂ ಮಾತನಾಡಿದರು.

ಶಕುನಿಃ ಸಿಂಧುರಾಜಶ್ಚ ಕರ್ಣದುರ್ಯೋಧನಾವಪಿ ।
ತೇಷಾಂ ತದಭವದ್ ದುಃಖಂ ಹೃದಿ ವಾಚಾ ತು ನಾಬ್ರುವನ್ ॥೬೨॥

ಶಕುನಿ, ಜಯದ್ರಥ, ಕರ್ಣ ದುರ್ಯೋಧನರಿಗೆ ಹೃದಯದಲ್ಲಿ ದುಃಖವಾಯಿತು. ಆದರೆ, ಬಾಯಿಯಿಂದ ಅದನ್ನು ಹೇಳಲಿಲ್ಲ.

ತತಃ ಪ್ರಯಾತಾ ರಾಜಾನಃ ಸರ್ವ ಏವ ಯಥಾಗತಮ್ ।
ಧಾರ್ತರಾಷ್ಟ್ರಾ ಹಿ ತೇ ಸರ್ವೇ ಗತಾ ನಾಗಪುರಂ ತದಾ ॥೬೩॥

ಅನಂತರ ಬಂದ ರಾಜರೆಲ್ಲರೂ ಬಂದಂತೆಯೇ ಹಿಂದಿರುಗಿದರು. ದುರ್ಯೋಧನಾದಿಗಳೆಲ್ಲರೂ ಹಸ್ತಿನಪುರಕ್ಕೆ ಹೋದರು.

ಪ್ರಾಗೇವ ಪುರರೋಧಾತ್ ತು ಪಾಂಡವೈರಶ್ವಸಾದಿನಃ ।
ಪ್ರೇಷಿತಾ ಗಚ್ಛತಾರಿಷ್ಟಾನಸ್ಮಾನಾಖ್ಯಾತ ಶೌರಯೇ ॥೬೪॥

ಕೌರವಸೈನ್ಯವು ಮುತ್ತಿಗೆ ಹಾಕುವುದಕ್ಕಿಂತ ಮುಂಚೆಯೇ, ಪಾಂಡವರು ಕೃಷ್ಣನಿಗೆ ನಮ್ಮ ಕುಶಲವನ್ನು ತಿಳಿಸಿ ಎಂಬ ಸಂದೇಶವನ್ನು ಕೊಡಲು ಅಶ್ವಾರೋಹಿಗಳನ್ನು ಕಳುಹಿಸಿದ್ದರು.

ತೇ ತ್ವದೀರ್ಘೇಣ ಕಾಲೇನ ಗತ್ವಾ ದ್ವಾರವತೀಂ ಪುರೀಮ್ ।
ಊಚುಃ ಸಂಕರ್ಷಣೋಪೇಂದ್ರೌ ವಚನಂ ವಚನಕ್ಷಮೌ ॥೬೫॥

ಮಾತನಾಡುವುದರಲ್ಲಿ ಚತುರರಾದ ಅವರು ಅಲ್ಪಕಾಲದಲ್ಲಿಯೇ ದ್ವಾರಾವತಿಗೆ ಬಂದು ಕೃಷ್ಣಬಲರಾಮರಿಗೆ ಪಾಂಡವರ ಮಾತುಗಳನ್ನು ತಿಳಿಸಿದರು.

ಕುಶಲಂ ಪಾಂಡವಾಃ ಸರ್ವಾನಾಹುಃ ಸ್ಮಾಂಧಕವೃಷ್ಣಯಃ ।
ಆತ್ಮನೋಽತ್ಕೃಕ್ಷತಾನಾಹುರ್ವಿಮುಕ್ತಾನ್ ಜಾತುಷಾದ್ ಗೃಹಾತ್ ॥

ಅಂಧಕವೃಷ್ಣಿವರ್ಯರೇ, ನಿಮ್ಮೆಲ್ಲರಿಗೂ ಪಾಂಡವರು ತಮ್ಮ ಕುಶಲವನ್ನು ತಿಳಿಸುತ್ತಿದ್ದಾರೆ. ತಾವು ಜತುಗೃಹದಿಂದ ಮುಕ್ತರಾಗಿರುವುದಾಗಿಯೂ, ಪಾಂಚಾಲರಾಜನ ಪಟ್ಟಣದಲ್ಲಿ ಯಾವ ಉಪದ್ರವವೂ ಇಲ್ಲದೆ ಇರುವುದಾಗಿಯೂ ಹೇಳಿದ್ದಾರೆ.

ಸಮಾಜೇ ದ್ರೌಪದೀಂ ಸ್ಫೀತಾಂ ಲಬ್ಧಾಂ ರಾಜೀವಲೋಚನಾಮ್ ।
ಆತ್ಮನಃ ಸದೃಶೀಂ ಸರ್ವೇ ಶೀಲವೃತ್ತಸಮಾಧಿಭಿಃ ॥೬೭॥

ರಾಜಸಮಾಜದಲ್ಲಿ ಶೀಲವೃತ್ತಸಮಾಧಿಗಳಿಂದ ಎಲ್ಲರೂ ತಮಗೆ ಅನುಗುಣಳಾದ ರಾಜೀವಲೋಚನೆಯಾದ ದ್ರೌಪದಿಯನ್ನು ಪಡೆದಿದ್ದಾಗಿಯೂ ನಿಮಗೆ ತಿಳಿಸುತ್ತಾರೆ.

ತಚ್ಛ್ರುತ್ವಾ ವಚನಂ ಕೃಷ್ಣಸ್ತಾನುವಾಚೋತ್ತರಂ ವಚಃ ।
ಸರ್ವಮೇತದಹಂ ಜಾನೇ ವಧಾತ್ ತಸ್ಯ ತು ರಕ್ಷಸಃ ॥೬೮॥

ಆ ಮಾತುಗಳನ್ನು ಕೇಳಿ ಕೃಷ್ಣನು ಹಿಡಿಂಬನ ವಧೆಯಿಂದ ಹಿಡಿದು ನಡೆದ ಎಲ್ಲಾ ಘಟನೆಗಳನ್ನೂ ನಾನು ತಿಳಿದಿದ್ದೇನೆ ಎಂದು ಉತ್ತರವನ್ನು ಕೊಟ್ಟನು.

ತತ ಉದ್ಯೋಜಯಾಮಾಸ ಕೇಶವಶ್ಚತುರಂಗಿಣೀಮ್ ।
ಸೇನಾಮುಪಾದಿಶತ್ ತೂರ್ಣಂ ಪಾಂಚಾಲನಗರೀಂ ಪ್ರತಿ ॥೬೯॥

ಅನಂತರ, ಶ್ರೀಕೃಷ್ಣನು ಶೀಘ್ರವಾಗಿ ತನ್ನ ಚತುರಂಗಯುಕ್ತವಾದ ಸೈನ್ಯವನ್ನು ಪಾಂಚಾಲನಗರಿಗೆ ಹೋಗುವಂತೆ ಆದೇಶವನ್ನು ನೀಡಿ ಕಳುಹಿಸಿದನು.

ತತಃ ಸಂಕರ್ಷಣಶ್ಚೈವ ಕೇಶವಶ್ಚ ಮಹಾಬಲಃ ।
ಯಾದವೈಃ ಸಹ ಸರ್ವೈಶ್ಚ ಪಾಂಚಾಲಾನಭಿಜಗ್ಮತುಃ ॥೭೦॥

ಅನಂತರ, ಸಂಕರ್ಷಣನೂ, ಮಹಾಬಲನಾದ ಕೇಶವನೂ ಮತ್ತು ಎಲ್ಲಾ ಯಾದವರೂ ಪಾಂಚಾಲನಗರಕ್ಕೆ ಬಂದರು.

ಪಿತೃಷ್ವಸಾರಂ ಸಂಪೂಜ್ಯ ದ್ರುಪದಂ ಚ ಮಹಾಧನೈಃ ।
ದ್ರೌಪದೀಂ ಭೂಷಣೈಃ ಶುಭ್ರೈರ್ಭೂಷಯಿತ್ವಾ ಮಹಾಧನೈಃ ॥೭೧॥

ಕೃಷ್ಣನು ಸೋದರತ್ತೆಯನ್ನೂ ಮತ್ತು ದ್ರುಪದನನ್ನೂ ಸತ್ಕರಿಸಿ, ಬೆಲೆಬಾಳುವ ಶುಭ್ರವಾದ ಆಭರಣಗಳಿಂದ ದ್ರೌಪದಿಯನ್ನು ಅಲಂಕರಿಸಿ ಮಹಾಧನಗಳನ್ನೂ ನೀಡಿದನು.

ನ್ಯಾಯತಃ ಪೂಜಿತಾ ರಾಜ್ಞಾ ದ್ರುಪದೇನ ಮಹಾತ್ಮನಾ ।
ರೇಮಿರೇ ಪಾಂಡವೈಃ ಸಾರ್ಧಂ ಪಾಂಚಾಲನಗರೇ ತದಾ ॥೭೨॥

ಮಹಾತ್ಮನಾದ ದ್ರುಪದನು ಅವರನ್ನು ಶಾಸ್ತ್ರವಿಧಾನದಿಂದ ಪೂಜಿಸಿದನು. ಆಗ, ಪಾಂಚಾಲನಗರದಲ್ಲಿ ಪಾಂಡವರ ಜೊತೆಯಲ್ಲಿ ಕೃಷ್ಣಬಲರಾಮರೂ, ಯಾದವರೂ, ದ್ರುಪದಾದಿಗಳೂ ಎಲ್ಲರೂ ಸಂತೋಷದಿಂದಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಒಂದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೯

ಜ್ಞಾತ್ವಾ ಸಮಸ್ತಮಪಿ ತದ್ವಿದುರೋಽಗ್ರಜಂ ಸ್ವಂ
'ವರ್ಧಂತ ಏವ ತನಯಾ ಭವತೋ ನರೇಂದ್ರ ।
ಇತ್ಯಾಹ ಸೋಽಪಿ ಮುದಿತಃ ಸ್ವಸುತೇನ ಕೃಷ್ಣಾ
ಪ್ರಾಪ್ತೇತಿ ಭೂಷಣವರಾನ್ಯದಿಶಚ್ಚ ವಾಸಃ ॥೧೭೧॥

ದ್ರೌಪದೀಸ್ವಯಂವರ ವೃತ್ತಾಂತವನ್ನೆಲ್ಲ ತಿಳಿದ ವಿದುರ ಧೃತರಾಷ್ಟ್ರನ ಬಳಿ 'ರಾಜನೆ, ನಿನ್ನ ಮಕ್ಕಳು ಜಯಶಾಲಿಗಳಾಗಿ ಮರೆಯುತ್ತಿದ್ದಾರೆ' ಎಂದ. ಧೃತರಾಷ್ಟ್ರ ತನ್ನ ಮಗ ದುರ್ಯೋಧನನೆ ಸ್ವಯಂವರದಲ್ಲಿ ದ್ರೌಪದಿಯನ್ನು ಗೆದ್ದನೆಂದು ಬಗೆದು ಸಂತೋಷದಿಂದ ವಿದುರನಿಗೆ ಶ್ರೇಷ್ಠ ಆಭರಣಗಳನ್ನೂ ವಸ್ತ್ರಗಳನ್ನೂ ನೀಡಿದ.

ಪಾರ್ಥಾ ಇತಿ ಸ್ಮ ವಿದುರೋಽವದದಾಶು ಸೋಽಪಿ
ಸ್ಯಾತ್ಕಾರಗೂಹನಪರೋ ಯದಿ ತರ್ಹ್ಯತೀವ ।
ಭದ್ರಂ ಮೃತಾ ನ ಹಿ ಪೃಥಾಸಹಿತಾಃ ಸ್ಮ ಪಾರ್ಥಾ
ಸ್ತೇಷಾಂ ಪ್ರವೃತ್ತಿಮಪಿ ಮೇ ವದ ಸರ್ವಶಸ್ತ್ವಂ ॥೧೭೨॥

ಒಡನೆ 'ಪಾಂಡವರು!' ಎಂದ. ಈಗ ಧೃತರಾಷ್ಟ್ರ ತನ್ನ ಮನಸಿನೊಳಗಿನ ದುಷ್ಟಭಾವವನ್ನು ಮರೆಮಾಡುತ್ತ 'ಓಹೋ! ಹಾಗಾದರೆ ಇನ್ನೂ ಒಳ್ಳೆಯದಾಯಿತು. ಇದು ಮಹಾ ಶುಭವಾರ್ತೆಯಾಯಿತು. ಪಾಂಡವರೂ ಕುಂತಿಯೂ ಸತ್ತಿಲ್ಲವಲ್ಲ! ಅವರ ಎಲ್ಲ ವೃತ್ತಾಂತವನ್ನೂ ನನಗೆ ಹೇಳು' ಎಂದ.

ಇತ್ಯುಕ್ತ ಆಹ ವಿದುರಃ ಸ ಹಿಡಿಂಬವಧ್ಯಾ-
ಪೂರ್ವಾಂ ಪ್ರವೃತ್ತಿಮಖಿಲಾಮಪಿ ಲಕ್ಷವೇಧಂ ।
ಉದ್ವಾಹಮಪ್ಯಥ ನದೀಜಮುಖಾಶ್ಚ ಸರ್ವೇ
ತುಷ್ಟಾ ಬಭೂವುರಪಿ ವತ್ಸರಮೂಷುರೇವಂ ॥೧೭೩॥

ಧೃತರಾಷ್ಟ್ರ ಹೀಗೆ ಹೇಳಿದಾಗ ವಿದುರ ಹಿಡಿಂಬ ವಧೆಯಿಂದ ತೊಡಗಿ ಎಲ್ಲ ವೃತ್ತಾಂತವನ್ನೂ ಲಕ್ಷ್ಯವೇಧವನ್ನೂ ವಿವಾಹವನ್ನೂ ವರ್ಣಿಸಿದ. ಭೀಷ್ಮಾದಿಗಳೆಲ್ಲರೂ ಸಂತುಷ್ಟರಾದರು. ಆದರೆ ಪಾಂಡವರ ವೃತ್ತಾಂತವನ್ನು ತಿಳಿದೂ ಕೂಡ ಒಂದು ವರ್ಷ

ಭೀಷ್ಮಾದಿಗಳು ಸುಮ್ಮನಿದ್ದರು. ಪಾಂಡವರು ಆ ಒಂದು ವರ್ಷಕಾಲ ದ್ರುಪದನ ರಾಜ್ಯದಲ್ಲಿ ವಾಸವಾಗಿದ್ದರು.

★ ★ ★ ★

ಇನ್ನೂರ ಎರಡನೆಯ ಅಧ್ಯಾಯ

(ಸ್ವಯಂವರದಿಂದ ಹಿಂದಿರುಗಿದ ದುರ್ಯೋಧನಾದಿಗಳ ವಿಷಾದ, ವಿದುರನಿಂದ ಧೃತರಾಷ್ಟ್ರನಿಗೆ ವೃತ್ತಾಂತ ಕಥನ, ದುರ್ಯೋಧನಾದಿಗಳಿಂದ ದುರ್ಮಂತ್ರಣ.)

ವೈಶಂಪಾಯನಃ

ತತಃ ಸ್ವಯಂವರೇ ವೃತ್ತೇ ರಾಜಾನಃ ಸರ್ವ ಏವ ಹ ।
ಯಥಾಗತಂ ವಿಪ್ರಜಗ್ಮುರ್ವಿದಿತ್ವಾ ಪಾಂಡವಾನ್ ವೃತಾನ್ ॥೧॥

ಸ್ವಯಂವರವು ಜರುಗಿದ ಮೇಲೆ, ಬಂದ ರಾಜರೆಲ್ಲರೂ ದ್ರೌಪದಿಯಿಂದ ಪಾಂಡವರು ವೃತವಾದರು ಎಂದು ತಿಳಿದು ಹೊರಟುಹೋದರು.

ಅಥ ದುರ್ಯೋಧನೋ ರಾಜಾ ವಿಮನಾ ಭ್ರಾತೃಭಿಃ ಸಹ ।
ಅಶ್ವತ್ಥಾಮ್ನಾ ಮಾತುಲೇನ ಕರ್ಣೇನ ಚ ಕೃಪೇಣ ಚ ।
ವಿನಿವೃತ್ತೋ ವೃತಂ ದೃಷ್ಟ್ವಾ ದ್ರೌಪದ್ಯಾ ಶ್ವೇತವಾಹನಮ್ ॥೨॥

ಅನಂತರ ದ್ರೌಪದಿಯು ಅರ್ಜುನನನ್ನು ವರಿಸಿದುದನ್ನು ನೋಡಿ ವಿಷಣ್ಣನಾದ ದುರ್ಯೋಧನನು ತನ್ನ ತಮ್ಮಂದಿರ, ಅಶ್ವತ್ಥಾಮಾಚಾರ್ಯರ, ಶಕುನಿಯ, ಕರ್ಣನ ಮತ್ತು ಕೃಪಾಚಾರ್ಯರ ಜೊತೆಯಲ್ಲಿ ಹಿಂದಿರುಗಿದನು.

ಅಥ ದುಃಶಾಸನೋ ರಾಜಾ ಮಂದಂ ಮಂದಮಿವಾಬ್ರವೀತ್ ।
ಯದ್ಯಸೌ ಬ್ರಾಹ್ಮಣೋ ನ ಸ್ಯಾನ್ನ ಚ ವಿಂದೇತ ದ್ರೌಪದೀಮ್ ॥೩॥

ಆಗ ದುಶ್ಶಾಸನನು ಮೆಲ್ಲಮೆಲ್ಲಗೆ ಹೀಗೆ ಹೇಳಿದನು. ಅವನು ಬ್ರಾಹ್ಮಣವೇಷಧಾರಿಯಾಗಿರದಿದ್ದರೆ ಖಂಡಿತವಾಗಿಯೂ ದ್ರೌಪದಿಯನ್ನು ಪಡೆಯುತ್ತಿರಲಿಲ್ಲ.

ನ ಹಿ ತಂ ತತ್ತ್ವತೋ ರಾಜಾ ವೇದ ಕಶ್ಚಿದ್ ಧನಂಜಯಮ್ ।
ಧಿಗಸ್ತ್ವಪೌರುಷಂ ಪಂಚ ಯದ್ ಧರಂತೀಹ ಪಾಂಡವಾಃ ।
ದೈವಮೇವ ಪರಂ ಮನ್ಯೇ ಪೌರುಷಂ ತು ನಿರರ್ಥಕಮ್ ॥೪॥

ರಾಜನಿಗೆ ಅವನು ಅರ್ಜುನ ಎಂಬ ಯಥಾರ್ಥತೆಯು ತಿಳಿಯಲಿಲ್ಲ. ಪಾಂಡವರು ಇನ್ನೂ ಬದುಕಿದ್ದಾರೆ. ನಮ್ಮ ಪೌರುಷಕ್ಕೆ ಧಿಕ್ಕಾರವಿರಲಿ. ದೈವವೇ ಪ್ರಬಲವಾದುದು. ಪೌರುಷವು ವ್ಯರ್ಥ.

ಏವಂ ಸಂಭಾಷಮಾಣಾಸ್ತೇ ನಿಂದಂತಶ್ಚ ಪುರೋಚನಮ್ ।
ವಿವಿಶುರ್ಹಸ್ತಿನಪುರಂ ದೀನಾ ವಿಗತಚೇತಸಃ ॥೫॥

ಹೀಗೆ ಮಾತನಾಡುತ್ತಾ ಪುರೋಚನನನ್ನು ನಿಂದಿಸುತ್ತಾ, ಜ್ಞಾನಶೂನ್ಯರಾದ ಅವರು ದೈನ್ಯದಿಂದ ಹಸ್ತಿನಪುರವನ್ನು ಪ್ರವೇಶಿಸಿದರು.

ತ್ರಸ್ತಾ ವಿಗತಸಂಕಲ್ಪಾ ದೃಷ್ಟ್ವಾ ಪಾರ್ಥಾನ್ ಮಹೌಜಸಃ ।
ವಿಮುಕ್ತಾನ್ ಹವ್ಯವಾಹಾಚ್ಚ ಸಂಯುಕ್ತಾನ್ ದ್ರುಪದೇನ ಚ ॥೬॥

ಧೃಷ್ಟದ್ಯುಮ್ನಂ ಚ ಸಂಚಿಂತ್ಯ ತಥೈವ ಚ ಶಿಖಂಡಿನಮ್ ।
ದ್ರುಪದಸ್ಯಾತ್ಮಜಾಂಶ್ಚಾನ್ಯಾನ್ ಸರ್ವಯುದ್ಧವಿಶಾರದಾನ್ ॥೭॥

ತಮ್ಮ ಸಂಕಲ್ಪವು ಭಗ್ನವಾಗಿ, ಪರಾಕ್ರಮಶಾಲಿಗಳಾದ ಪಾಂಡವರನ್ನು ನೋಡಿ ಹೆದರಿ, ಜತುಗೃಹದಿಂದ ಮುಕ್ತರಾದುದನ್ನೂ, ದ್ರುಪದನ ಸಂಬಂಧವನ್ನು ಹೊಂದಿದುದನ್ನೂ, ಧೃಷ್ಟದ್ಯುಮ್ನನನ್ನೂ, ಶಿಖಂಡಿಯನ್ನೂ ಸರ್ವವಿದ್ಯಾವಿಶಾರದರಾದ ದ್ರುಪದನ ಬೇರೆ ಪುತ್ರರನ್ನೂ ಚಿಂತಿಸುತ್ತಾ (ಪುನಃ ಹೆದರಿ, ಹಸ್ತಿನಪುರವನ್ನು ಪ್ರವೇಶಿಸಿದರು).

ವಿದುರಸ್ತ್ವಥ ತಾನ್ ಶ್ರುತ್ವಾ ದ್ರೌಪದ್ಯಾ ಪಾಂಡವಾನ್ ವೃತಾನ್ ।
ಪ್ರೀಡಿತಾನ್ ಧಾರ್ತರಾಷ್ಟ್ರಾಂಶ್ಚ ಭಗ್ನದರ್ಪಾನುಪಾಗತಾನ್ ॥೮॥

ತತಃ ಪ್ರೀತಮನಾಃ ಕ್ಷತ್ತಾ ಧೃತರಾಷ್ಟ್ರಂ ವಿಶಾಂಪತೇ ।
ಉವಾಚ ಕುರವೋ ದಿಷ್ಟ್ಯಾ ವರ್ಧಂತ ಇತಿ ವಿಸ್ಮಿತಃ ॥೯॥

ವಿದುರನು ದ್ರೌಪದಿಯು ಪಾಂಡವರನ್ನು ವರಿಸಿದಳೆಂಬ ವಾರ್ತೆಯನ್ನು ಕೇಳಿ, ದುರ್ಯೋಧನಾದಿಗಳು ಭಗ್ನದರ್ಪರಾಗಿ, ನಾಚಿಕೆಯಿಂದ ಹಿಂದಿರುಗಿದುದನ್ನು ನೋಡಿ, ಸಂತೋಷಗೊಂಡು ಧೃತರಾಷ್ಟ್ರನನ್ನು ಕುರಿತು ರಾಜನೇ, ದೇವರದಯೆಯಿಂದ ಕುರುಗಳು ವರ್ಧಿಸುತ್ತಿದ್ದಾರೆ ಎಂದು ವಿಸ್ಮಯಪೂರ್ವಕವಾಗಿ ಹೇಳಿದನು.

ವೈಚಿತ್ರವೀರ್ಯಸ್ತು ತದಾ ನಿಶಮ್ಯ ವಿದುರಸ್ಯ ತತ್ ।
ಅಬ್ರವೀತ್ ಪರಮಪ್ರೀತೋ ದಿಷ್ಟ್ಯಾ ದಿಷ್ಟ್ಯೇತಿ ಕೌರವಃ ॥೧೦॥

ವಿಚಿತ್ರವೀರ್ಯನ ಪುತ್ರನಾದ ಧೃತರಾಷ್ಟ್ರನು ಆಗ ವಿದುರನ ಆ ಮಾತನ್ನು ಕೇಳಿ ಪರಮಸಂತೋಷವುಳ್ಳವನಾಗಿ ದೇವರ ದಯೆ ಎಂದು ಹೇಳಿದನು.

ಮನ್ಯತೇ ಸ ವೃತಂ ಪುತ್ರಂ ಜ್ಯೇಷ್ಠಂ ದ್ರುಪದಕನ್ಯಯಾ ।
ದುರ್ಯೋಧನಮವಿಜ್ಞಾನಾತ್ ಪ್ರಜ್ಞಾಚಕ್ಷುರ್ನರೇಶ್ವರಃ ॥೧೧॥

ಪ್ರಜ್ಞಾಚಕ್ಷುವಾದ ಆ ರಾಜನು ತನ್ನ ಅಜ್ಞಾನದಿಂದ ತನ್ನ ಜ್ಯೇಷ್ಠಪುತ್ರನಾದ ದುರ್ಯೋಧನನನ್ನು ದ್ರೌಪದಿಯು ವರಿಸಿದ್ದಾಳೆ ಎಂದು ತಿಳಿದನು.

ಅಥ ತ್ವಾಜ್ಞಾಪಯಾಮಾಸ ದ್ರೌಪದ್ಯಾ ಭೂಷಣಂ ಬಹು ।
ಆನೀಯತಾಂ ವೈ ಕೃಷ್ಣೇತಿ ಪುತ್ರಂ ದುರ್ಯೋಧನಂ ತದಾ ॥೧೨॥

ಅನಂತರ ದ್ರೌಪದಿಗೆ ಅನೇಕ ಭೂಷಣಗಳನ್ನು ಸಿದ್ಧಪಡಿಸುವುದಕ್ಕೆ ಆದೇಶವನ್ನು ನೀಡಿ ದುರ್ಯೋಧನನನ್ನು ಕುರಿತು ದ್ರೌಪದಿಯನ್ನು ಕರೆದುಕೊಂಡು ಬಾ ಎಂದು ಹೇಳಿದನು.

ಅಥಾಸ್ಯ ಪಶ್ಚಾದ್ ವಿದುರ ಆಚಖ್ಯೌ ಪಾಂಡವಾನ್ ವೃತಾನ್ ।
ಸರ್ವಾನ್ ಕುಶಲಿನೋ ರಾಜನ್ ಪೂಜಿತಾನ್ ದ್ರುಪದೇನ ಚ ॥೧೩॥

ರಾಜನೇ, ಅನಂತರದಲ್ಲಿ ವಿದುರನು ಪಾಂಡವರು ದ್ರೌಪದಿಯಿಂದ ವೃತರಾದರೆಂದೂ, ಎಲ್ಲರೂ ಕ್ಷೇಮದಿಂದಿದ್ದಾರೆಂದೂ, ದ್ರುಪದನಿಂದ ಸತ್ಕೃತರಾಗಿದ್ದಾರೆಂದೂ ತಿಳಿಸಿದನು.

ಏತಚ್ಛ್ರುತ್ವಾ ತು ವಚನಂ ವಿದುರಸ್ಯ ನರಾಧಿಪಃ ।
ಆಕಾರಾಚ್ಛಾದನಾರ್ಥಂ ತು ದಿಷ್ಟ್ಯಾ ದಿಷ್ಟ್ಯೇತಿ ಚಾಬ್ರವೀತ್ ॥೧೪॥

ವಿದುರನ ಈ ಮಾತನ್ನು ಕೇಳಿ ರಾಜನಾದ ಧೃತರಾಷ್ಟ್ರನು ತನ್ನ ಆಕಾರವನ್ನು ಮುಚ್ಚಿಕೊಳ್ಳಲು 'ದೇವರ ದಯೆ ದೇವರ ದಯೆ' ಎಂದು ಹೇಳಿದನು.

ಏವಂ ವಿದುರ ಭದ್ರಂ ತೇ ಯದಿ ಜೀವಂತಿ ಪಾಂಡವಾಃ ।
ಸಾಧ್ವಾಚಾರಾ ತಥಾ ಕುಂತೀ ಸಂಬಂಧೋ ದ್ರುಪದೇನ ಚ ।
ಬಭೂವ ಪರಮಶ್ಲಾಘ್ಯೋ ದಿಷ್ಟ್ಯಾ ದಿಷ್ಟ್ಯೇತಿ ಚಾಬ್ರವೀತ್ ॥೧೫॥

ವಿದುರನೇ, ಪಾಂಡವರು ಜೀವಿಸಿದ್ದರೆ ಒಳ್ಳೆಯದೇ ಆಯಿತು. ನಿನಗೆ ಮಂಗಳವಾಗಲಿ. ಕುಂತಿಯು ಒಳ್ಳೆಯ ಆಚಾರವುಳ್ಳವಳು. ದ್ರುಪದನ ಜೊತೆಯಲ್ಲಿ ಸಂಬಂಧವು ಪರಮಶ್ಲಾಘ್ಯವಾಗಿದೆ. ದೇವರ ದಯೆ ಎಂದು ಹೇಳಿದನು.

ಧೃತರಾಷ್ಟ್ರಃ

ಅನ್ವವಾಯೇ ವಸೋರ್ಜಾತಃ ಪ್ರಕೃಷ್ಟೇ ಮಾನ್ಯಕೇ ಕುಲೇ ।
ವ್ರತವಿದ್ಯಾತಪೋವೃದ್ಧಃ ಪಾರ್ಥಿವಾನಾಂ ಧುರಂಧರಃ ॥೧೬॥

ದ್ರುಪದನು ಶ್ರೇಷ್ಠವಾದ ವಸುವಿನ ವಂಶದಲ್ಲಿ ಮಾನ್ಯವಾದ ಸೋಮಕಕುಲದಲ್ಲಿ ಜನಿಸಿದ್ದಾನೆ.

ಪುತ್ರಾಶ್ಚಾಸ್ಯ ತಥಾ ಪೌತ್ರಾಃ ಸರ್ವೇ ಸುಚರಿತವ್ರತಾಃ ।
ತೇಷಾಂ ಸಂಬಂಧಿನಶ್ಚಾನ್ಯೇ ಬಹವಃ ಸುಮಹಾಬಲಾಃ ॥೧೭॥

ಅವನ ಮಕ್ಕಳೂ ಮತ್ತು ಮೊಮ್ಮಕ್ಕಳೂ, ಹಾಗೆಯೇ ಉಳಿದ ಬಾಂಧವರೂ, ಮಹಾಬಲದಿಂದಲೂ, ಒಳ್ಳೆಯ ವ್ರತಾಚಾರಗಳಿಂದಲೂ ಕೂಡಿದವರು.

ಯಥೈವ ಪಾಂಡೋಃ ಪುತ್ರಾಸ್ತೇ ತಥೈವಾಭ್ಯಧಿಕಾ ಮಮ ।
ಸೋಯಮಭ್ಯಧಿಕಾऽನ್ಯೇಭ್ಯೋ ವೃತಿರ್ವಿದುರ ಮೇ ಮತಾ ॥೧೮॥

ಪಾಂಡುಪುತ್ರರು ಹೇಗೆ ನನಗೆ ಪ್ರೀತ್ಯಾಸ್ಪದರೋ, ದ್ರುಪದನ ಪುತ್ರಪೌತ್ರರು ಅದಕ್ಕಿಂತ ಹೆಚ್ಚಿನ ಪ್ರೀತ್ಯಾಸ್ಪದರು. ವಿದುರನೇ, ಈ ವರಣವು ಅತ್ಯಂತ ಶ್ರೇಷ್ಠವಾಗಿದೆ.

ಯತ್ ತೇ ಕುಶಲಿನೋ ವೀರಾ ಮಿತ್ರವಂತಶ್ಚ ಮೇ ಸುತಾಃ ।
ಕೋ ಹಿ ದ್ರುಪದಮಾಸಾದ್ಯ ಮಿತ್ರಂ ಕ್ಷತ್ರಃ ಸಬಾಂಧವಮ್ ।
ನ ಬುಭೂಷೇತ್ ಕಥಂ ಚಾರ್ಥೀ ಗತಶ್ರೀರಿವ ಪಾರ್ಥಿವಃ ॥೧೯॥

ನನ್ನ ಮಕ್ಕಳಾದ ವೀರರಾದ ಪಾಂಡವರು ಕುಶಲಿಗಳೂ ಮತ್ತು ಮಿತ್ರವಂತರೂ ಆಗಿದ್ದಾರೆ. ವಿದುರನೇ, ಬಾಂಧವಸಹಿತನಾದ ದ್ರುಪದನನ್ನು ಮಿತ್ರನನ್ನಾಗಿ ಪಡೆದ ಯಾವನು ತಾನೆ ಮೊದಲು ತನ್ನ ಎಲ್ಲಾ ಧನವನ್ನು ಕಳೆದುಕೊಂಡು ಪುನಃ ಬಹುಧನಾಢ್ಯನಾದ ರಾಜನಂತೆ ಶೋಭಿಸುವುದಿಲ್ಲ.

ತಂ ತಥಾ ಭಾಷಮಾಣಂ ತು ವಿದುರಃ ಪ್ರತ್ಯಭಾಷತ ।
ನಿತ್ಯಾ ಭವತು ತೇ ಬುದ್ಧಿರೇಷಾ ರಾಜನ್ ಶತಂ ಸಮಾಃ ।
ಇತ್ಯುಕ್ತ್ವಾ ಪ್ರಯಯೌ ರಾಜನ್ ವಿದುರಃ ಸ್ವಂ ನಿವೇಶನಮ್ ॥೨೦॥

ಹಾಗೆ ಮಾತನಾಡುತ್ತಿದ್ದ ಧೃತರಾಷ್ಟ್ರನನ್ನು ಕುರಿತು ವಿದುರನು ಪ್ರತ್ಯುತ್ತರವನ್ನು ಕೊಡುತ್ತಾ ರಾಜನೇ, ನಿನಗೆ ಈ ಬುದ್ಧಿಯು ನೂರುವರ್ಷಗಳ ಕಾಲ ಶಾಶ್ವತವಾಗಿರಲಿ ಎಂದು ಹೇಳಿ ತನ್ನ ಮನೆಗೆ ಹೋದನು.

ತತೋ ದುರ್ಯೋಧನಶ್ಚೈವ ರಾಧೇಯಶ್ಚ ವಿಶಾಂಪತೇ ।
ಧೃತರಾಷ್ಟ್ರಸ್ಯ ತಚ್ಛ್ರುತ್ವಾ ವಚೋಽಬ್ರೂತಾಮಿದಂ ತತಃ ॥೨೧॥

ರಾಜನೇ, ಅನಂತರ ದುರ್ಯೋಧನನೂ ಮತ್ತು ಕರ್ಣನೂ ಧೃತರಾಷ್ಟ್ರನ ಆ ಮಾತುಗಳನ್ನು ಕೇಳಿ, ಹೀಗೆ ಮಾತನಾಡಿದರು.

ಸನ್ನಿಧೌ ವಿದುರಸ್ಯ ತ್ವಾಂ ವಕ್ತುಂ ನ ನೃಪ ಶಕ್ನುಮಃ ।
ವಿವಿಕ್ತಮಿತಿ ವಕ್ಷ್ಯಾವಃ ಕಿಂ ತವೇದಂ ಚಿಕೀರ್ಷಿತಮ್ ॥೨೨॥

ರಾಜನೇ, ವಿದುರನ ಸನ್ನಿಧಿಯಲ್ಲಿ ನಾವು ನಿನಗೆ ಹೀಗೆ ಮಾತನಾಡಲು ಸಾಧ್ಯವಿಲ್ಲ. ಏಕಾಂತದಲ್ಲಿದ್ದೇವೆಂದು ಈಗ ಮಾತನಾಡುತ್ತಿದ್ದೇವೆ. ನೀನು ಇದೇನು ಮಾಡಲು ಬಯಸಿರುವೆ?

ಸಪತ್ನವೃದ್ಧಿಂ ತಾಂ ತ್ವದ್ಯ ಮನ್ಯಸೇ ವೃದ್ಧಿಮಾತ್ಮನಃ ।
ಅಭಿಷ್ಟೌಷಿ ಚ ಯತ್ ಕ್ಷತ್ತುಃ ಸಮೀಪೇ ದ್ವಿಪದಾಂವರ ॥೨೩॥

ಮನುಷ್ಯಶ್ರೇಷ್ಠನೇ, ಈ ದಿನ ನೀನು ಶತ್ರುಗಳ ವೃದ್ಧಿಯನ್ನು ನಿನ್ನ ವೃದ್ಧಿ ಎಂದು ತಿಳಿದು ವಿದುರನ ಎದುರಿನಲ್ಲಿ ಹೊಗಳುತ್ತಿದ್ದೀಯೆ.

ಅನ್ಯಸ್ಮಿನ್ ನೃಪ ಕರ್ತವ್ಯೇ ತ್ವಮನ್ಯತ್ ಕುರುಷೇಽನಘ ।
ತೇಷಾಂ ಬಲವಿಘಾತೋ ಹಿ ಕರ್ತವ್ಯಸ್ತಾತ ನಿತ್ಯಶಃ ॥೨೪॥

ತೇ ವಯಂ ಪ್ರಾಪ್ತಕಾಲಸ್ಯ ಚಿಕಿತ್ಸಾಂ ಮಂತ್ರಯಾಮಹೇ ।
ಯಥಾ ನೋ ನ ಗ್ರಸೇಯುಸ್ತೇ ಸಪುತ್ರಗಣಬಾಂಧವಾನ್ ॥೨೫॥

ಅನಘನಾದ ರಾಜನೇ, ನಮ್ಮ ಕರ್ತವ್ಯವು ಬೇರೆಯೇ ಇರುವಾಗ ನೀನು ಬೇರೆಯದನ್ನೇ ಮಾಡುತ್ತಿರುವೆ. ತಂದೆಯೇ, ನಾವು ಯಾವಾಗಲೂ ಪಾಂಡವರ ಬಲವಿಘಾತವನ್ನೇ ಮಾಡಬೇಕಷ್ಟೆ. ಅಂತಹ ನಾವು ಈಗ ಮಾಡಬೇಕಾಗಿ ಬಂದಿರುವ ಕಾರ್ಯದ ಉಪಾಯವನ್ನು ಚಿಂತಿಸುತ್ತಿದ್ದೇವೆ. ನಮ್ಮ ಮಕ್ಕಳು ಮತ್ತು ಬಂಧುಗಳ ಜೊತೆಯಲ್ಲಿ ಅವರು ನಮ್ಮನ್ನು ನುಂಗದಿರುವಂತೆ ಮಾಡಬೇಕು.

ವೈಶಂಪಾಯನಃ

ದುರ್ಯೋಧನೇನೈವಮುಕ್ತಃ ಕರ್ಣೇನ ಚ ವಿಶಾಂಪತೇ ।
ಪುತ್ರಂ ಚ ಸೂತಪುತ್ರಂ ಚ ಧೃತರಾಷ್ಟ್ರೋಽಬ್ರವೀದಿದಮ್ ॥೨೬॥

ಜನಮೇಜಯರಾಜನೇ, ದುರ್ಯೋಧನನಿಂದಲೂ, ಕರ್ಣನಿಂದಲೂ ಹೀಗೆ ಹೇಳಲ್ಪಟ್ಟ ಧೃತರಾಷ್ಟ್ರನು ಅವರಿಬ್ಬರನ್ನು ಕುರಿತು ಈ ಮಾತನ್ನು ಆಡಿದನು.

ಅಹಮಪ್ಯೇವಮೇವೈತಚ್ಚಿಂತಯಾಮಿ ಯಥಾ ಯುವಾಮ್ ।
ವಿವೃತುಂ ನಾಹಮಿಚ್ಛಾಮಿ ತ್ವಾಕಾರಂ ವಿದುರಂ ಪ್ರತಿ ॥೨೭॥

ನಾನೂ ಸಹ ನೀವಿಬ್ಬರೂ ಯೋಚಿಸಿದಂತೆಯೇ ಯೋಚಿಸುತ್ತಿದ್ದೇನೆ. ಆದರೆ, ವಿದುರನ ಎದುರಿಗೆ ಈ ಅಭಿಪ್ರಾಯವನ್ನು ಬಿಚ್ಚಿ ಹೇಳಲು ಬಯಸುವುದಿಲ್ಲ.

ಅತಸ್ತೇಷಾಂ ಗುಣಾನೇವ ಕೀರ್ತಯಾಮಿ ವಿಶೇಷತಃ ।
ನ ಚ ಬುಧ್ಯೇತ ವಿದುರೋ ಮಮಾಭಿಪ್ರಾಯಮಿಂಗಿತೈಃ ॥೨೮॥

ಆದ್ದರಿಂದ ನನ್ನ ಮನಸ್ಸಿನ ಅಭಿಪ್ರಾಯವನ್ನು ಇಂಗಿತಗಳಿಂದ ವಿದುರನು ತಿಳಿಯದಿರಲಿ ಎಂಬ ಕಾರಣದಿಂದ ವಿಶೇಷವಾಗಿ ಪಾಂಡವರ ಗುಣಗಳನ್ನೇ ವರ್ಣಿಸುತ್ತೇನೆ.

ಯಚ್ಚ ವೈ ಮನ್ಯಸೇ ಪ್ರಾಪ್ತಂ ತದ್ ಬ್ರೂಹಿ ತ್ವಂ ಸುಯೋಧನ ।
ರಾಧೇಯ ಮನ್ಯಸೇ ತ್ವಂ ಚ ಯತ್ ಪ್ರಾಪ್ತಂ ತದ್ ಬ್ರವೀಹಿ ಮೇ ॥

ಸುಯೋಧನನೇ, ಈಗ ಏನು ಮಾಡಬೇಕೆಂದು ಬಯಸುತ್ತೀಯೋ ಅದನ್ನು ಹೇಳು. ರಾಧೇಯನೇ, ಈಗ ಏನು ಮಾಡುವುದನ್ನು ಯೋಗ್ಯವೆಂದು ತಿಳಿಯುತ್ತೀಯೋ ಅದನ್ನು ನನಗೆ ಹೇಳು.

ದುರ್ಯೋಧನಃ

ಪ್ರಚ್ಛನ್ನಂ ಕುಶಲೈರ್ವಿಪ್ರೈಃ ಸುತುಷ್ಟೈರಾಪ್ತಕಾರಿಭಿಃ ।
ಕುಂತೀಪುತ್ರಾನ್ ಭೇದಯಾಮೋ ಮಾದ್ರೀಪುತ್ರೌ ಚ ತಾವುಭೌ ॥೩೦॥

ಪ್ರಚ್ಛನ್ನರಾದ, ಆಪ್ತಕಾರಿಗಳಾದ, ಸುತುಷ್ಟರಾದ ವಿಪ್ರರಿಂದ ಕುಂತೀಪುತ್ರರಿಗೂ ಮತ್ತು ಆ ಇಬ್ಬರು ಮಾದ್ರೀಪುತ್ರರಿಗೂ ವಿರೋಧವನ್ನು ಉಂಟುಮಾಡೋಣ.

ಅಥವಾ ದ್ರುಪದೋ ರಾಜಾ ಮಹದ್ಭಿರ್ಧನಸಂಚಯೈಃ ।
ಪುತ್ರಾಶ್ಚಾಸ್ಯ ಪ್ರಲೋಭ್ಯಂತಾಮಮಾತ್ಯಾಶ್ಚೈವ ಸರ್ವಶಃ ।
ಪರಿತ್ಯಜೇಯೂ ರಾಜಾನಂ ಕುಂತೀಪುತ್ರಂ ಯುಧಿಷ್ಠಿರಮ್ ॥೩೧॥

ಅಥವಾ ದ್ರುಪದನನ್ನೂ, ಅವನ ಪುತ್ರರನ್ನೂ, ಅವನ ಅಮಾತ್ಯರನ್ನೂ, ದೊಡ್ಡಧನರಾಶಿಗಳಿಂದ ಪ್ರಲೋಭನೆಗೊಳಿಸಿ ಕುಂತೀಪುತ್ರನಾದ ಯುಧಿಷ್ಠಿರನನ್ನು ಪರಿತ್ಯಾಗ ಮಾಡುವಂತೆ ಮಾಡೋಣ.

ಅಥ ತತ್ರೈವ ವಾ ತೇಷಾಂ ನಿವಾಸಂ ರೋಚಯಂತು ತೇ ।
ಇಹೈಷಾಂ ದೋಷವದ್ ವಾಸಂ ಕರ್ಣಯಂತು ಪೃಥಕ್ಪೃಥಕ್ ।
ತೇ ಭಿದ್ಯಮಾನಾಸ್ತತ್ರೈವ ಮನಃ ಕುರ್ವಂತು ಪಾಂಡವಾಃ ॥೩೨॥

ಅಥವಾ ಪಾಂಡವರು ದ್ರುಪದಪಟ್ಟಣದಲ್ಲಿಯೇ ವಾಸವನ್ನು ಮಾಡಲಿ. ಇಲ್ಲಿಗೆ ಬಂದರೆ, ಅವರ ವಾಸವು ದುಷ್ಪವಾಗುತ್ತದೆ ಎಂಬ ವಾರ್ತೆಯನ್ನು ಅವರು ಬೇರೆ ಬೇರೆಯಾಗಿ ಕೇಳುವಂತೆ ಮಾಡೋಣ. ಅವರು ಹೀಗೆ ಭೇದವನ್ನು ಹೊಂದಿ ಅಲ್ಲಿಯೇ ವಾಸಮಾಡಲು ಮನಸ್ಸು ಮಾಡಲಿ.

ಅಥವಾऽಕುಶಲಾನ್ ಕೇಚಿದುಪಾಯೈರ್ಬಹುಭಿರ್ನರಾಃ ।
ಇತರೇತರತಃ ಪಾರ್ಥಾನ್ ಭೇದಯಂತ್ವನುರಾಗತಃ ॥೩೩॥

ಅಥವಾ ಅಕುಶಲರಾದ ಪಾಂಡವರನ್ನು, ಬುದ್ಧಿವಂತರಾದ ಅನೇಕ ಜನರು ಅವರ ಅನುರಾಗವನ್ನು ಸಂಪಾದನೆ ಮಾಡಿ ಅವರಲ್ಲಿ ಪರಸ್ಪರವಾಗಿ ಭೇದವನ್ನುಂಟು ಮಾಡಲಿ.

ವ್ಯುತ್ಥಾಪಯಂತು ತಾಂ ಕೃಷ್ಣಾಂ ಬಹುತ್ವಾತ್ ಸಂಕರಂ ಹಿ ತತ್ ।
ಅಥವಾ ಪಾಂಡವಾಂಸ್ತಸ್ಯಾ ಭೇದಯಂತು ತತಶ್ಚ ತಾಮ್ ॥೩೪॥

ಅಥವಾ ಆ ದ್ರೌಪದಿಯನ್ನು ಪಾಂಡವರಿಗೆ ವಿರುದ್ಧವಾಗಿ ಎತ್ತಿಕಟ್ಟಲಿ. ಅನೇಕ ಪತಿಗಳಿರುವುದು ಸಂಕರವೇ ಸರಿ. ಅಥವಾ ಪಾಂಡವರಿಗೆ ದ್ರೌಪದಿಯ ವಿರೋಧವುಂಟಾಗುವಂತೆ ಮಾಡಲಿ. ಮೊದಲು ಪಾಂಡವರನ್ನು ಭೇದಿಸಲಿ. ಅನಂತರ ದ್ರೌಪದಿಯನ್ನು ಭೇದಿಸಲಿ.

ಭೀಮಸೇನಸ್ಯ ವಾ ರಾಜನ್ನುಪಾಯಕುಶಲೈರ್ನರೈಃ ।
ಮೃತ್ಯುರ್ವಿಧೀಯತಾಂ ಛದ್ಮೈಃ ಸ ಹಿ ತೇಷಾಂ ಬಲಾಧಿಕಃ ॥೩೫॥

ರಾಜನೇ, ಉಪಾಯಕುಶಲರಾದ ಜನರು ಪ್ರಚ್ಛನ್ನರಾಗಿ ಭೀಮಸೇನನ ವಧೆಯನ್ನು ಮಾಡಲಿ. ಅವನೇ ಅವರಲ್ಲಿ ಬಲಾಢ್ಯನಾದವನು.

ತಸ್ಮಿಂಸ್ತು ನಿಹತೇ ರಾಜನ್ ಹತೋತ್ಸಾಹಾ ಹತೌಜಸಃ ।
ಯತಿಷ್ಯಂತೇ ನ ರಾಜ್ಯಾಯ ಸ ಹಿ ತೇಷಾಂ ವ್ಯಪಾಶ್ರಯಃ ॥೩೬॥

ರಾಜನೇ, ಭೀಮಸೇನನು ಕೊಲ್ಲಲ್ಪಟ್ಟರೆ, ಉಳಿದವರು ತಮ್ಮ ಉತ್ಸಾಹವನ್ನು ಮತ್ತು ಬಲವನ್ನು ಕಳೆದುಕೊಂಡು ರಾಜ್ಯಕ್ಕಾಗಿ ಪ್ರಯತ್ನಪಡುವುದಿಲ್ಲ. ಅವನೇ ಅವರಿಗೆ ಆಶ್ರಯನಾಗಿದ್ದಾನೆ.

ಅಜೇಯೋ ಹ್ಯರ್ಜುನಃ ಸಂಖೇ ಪೃಷ್ಠಗೋಪೇ ವೃಕೋದರೇ ।
ತಮೃತೇ ಫಲ್ಗುನೋ ಯುದ್ಧೇ ರಾಧೇಯಸ್ಯ ನ ಪಾದಭಾಕ್ ॥೩೭॥

ಯುದ್ಧದಲ್ಲಿ ಭೀಮಸೇನನು ಅರ್ಜುನನ ಹಿಂದೆ ನಿಂತು ರಕ್ಷಕನಾಗಿರುವವರೆಗೆ, ಅರ್ಜುನನು ಅಜೇಯನಾಗಿರುತ್ತಾನೆ. ಭೀಮಸೇನನು ಇಲ್ಲದಿದ್ದರೆ, ಅರ್ಜುನನಿಗೆ ಯುದ್ಧದಲ್ಲಿ ಕರ್ಣನ ಶಕ್ತಿಯ ನಾಲ್ಕನೇ ಒಂದು ಭಾಗವೂ ಇಲ್ಲ

ತೇ ಜಾನಂತೋ ಹಿ ದೌರ್ಬಲ್ಯಂ ಭೀಮಸೇನೇ ಹತೇ ಸತಿ ।
ಅಸ್ಮಾನ್ ಬಲವತೋ ಮತ್ವಾ ನ ಶಿಷ್ಯಂತ್ಯಬಲೀಯಸಃ ॥೩೮॥

ಭೀಮಸೇನನು ಹತನಾದರೆ, ಅವರು ತಮ್ಮ ದೌರ್ಬಲ್ಯವನ್ನು ತಿಳಿದು, ನಮ್ಮನ್ನು ಬಲಿಷ್ಠರು ಎಂದು ತಿಳಿದು, ಆ ಕಾರಣದಿಂದ ದುರ್ಬಲರಾದ ಅವರು ಉಳಿಯುವುದೇ ಇಲ್ಲ.

ಇಹಾಗತೇಷು ಪಾರ್ಥೇಷು ನಿದೇಶವಶವರ್ತಿಷು ।
ಪ್ರವರ್ತಿಷ್ಯಾಮಹೇ ರಾಜ್ಯಂ ಯಥಾಶ್ರದ್ಧಂ ಯಥಾಸುಖಮ್ ॥೩೯॥

ಅಥವಾ (ಭೀಮಸೇನನು ಮೃತನಾದ ಮೇಲೆ) ಪಾಂಡವರು ಇಲ್ಲಿಗೆ ಬಂದರೆ, ನನ್ನ ಆಜ್ಞಾಧಾರಕರಾಗಿ, ನಮ್ಮ ವಶವರ್ತಿಗಳಾಗಿರುವ ಕಾರಣದಿಂದ ನಾವು ನಮಗೆ ಬೇಕಾದಂತೆ ಸುಖವಾಗಿ ರಾಜ್ಯವನ್ನು ಆಳುವೆವು.

ದರ್ಪಂ ವಾವದತಾಂ ತೇಷಾಂ ಕೇಚಿದತ್ರ ಮನಸ್ವಿನಃ ।
ದ್ರುಪದಸ್ಯಾತ್ಮಜಾ ರಾಜನ್ ತೇ ಭಿದ್ಯಂತೇ ತತಃ ಪರೈಃ ॥೪೦॥

ಮೊದಲು ದರ್ಪದ ಮಾತುಗಳನ್ನು ಆಡುತ್ತಿದ್ದ ಧೈರ್ಯಶಾಲಿಗಳಾದ ಪಾಂಡವರು ಮತ್ತು ದ್ರೌಪದಿಯೂ ಸಹ ಇಲ್ಲಿಗೆ ಬಂದ ಮೇಲೆ ಶತ್ರುಗಳಿಂದ ಭೇದಿಸಲ್ಪಡುತ್ತಾರೆ.

ಅಥವಾ ದರ್ಶನೀಯಾಭಿಃ ಪ್ರಮದಾಭಿರ್ವಿಲೋಭ್ಯತಾಮ್ ।
ಏಕೈಕಃ ಪಾಂಡುಪುತ್ರಾಣಾಂ ತತಃ ಕೃಷ್ಣಾ ವಿರುದ್ಧ್ಯತಾಮ್ ॥೪೧॥

ಅಥವಾ ಸುಂದರಿಯರಾದ ಕನ್ಯೆಯರನ್ನು ಒಬ್ಬೊಬ್ಬ ಪಾಂಡವನಿಗೂ ಕಳುಹಿಸಿ ಅವರನ್ನು ಪ್ರಲೋಭಗೊಳಿಸಬೇಕು. ಆಗ ದ್ರೌಪದಿಯು ವಿರುದ್ಧಳಾಗುತ್ತಾಳೆ.

ಶ್ರೇಷ್ಠತಾಂ ವಾऽಪಿ ರಾಜೇಂದ್ರ ತೇಷಾಮಾಗಮನಾಯ ಹಿ ।
ತೇ ಲೋಪ್ತ್ರಹಾರೈಃ ಸಂಧಾಯ ವಧ್ಯಂತಾಮಾಪ್ತಕಾರಿಭಿಃ ॥೪೨॥

ರಾಜೇಂದ್ರನೇ, ಅವರು ಇಲ್ಲಿಗೆ ಬರುವಂತೆ ಹೇಳಿಕಳುಹಿಸಿ, ಅವರು ಇಲ್ಲಿಗೆ ಬಂದಮೇಲೆ ನಮಗೆ ಆಪ್ತರಾದ ದರೋಡೆಕೋರರ ಜೊತೆಯಲ್ಲಿ ಸಂಧಾನವನ್ನು ಮಾಡಿಕೊಂಡು ಅವರಿಂದ ಅವರನ್ನು ಕೊಲ್ಲಿಸಬೇಕು.

ಏತೇಷಾಮಪ್ಯುಪಾಯಾನಾಂ ನಿರ್ದೋಷೋ ಯೋ ಮತಸ್ತವ ।
ತಸ್ಯ ಪ್ರಯೋಗಮಾತಿಷ್ಠ ಪುರಾ ಕಾಲೋऽತಿವರ್ತತೇ ॥೪೩॥

ಈ ಉಪಾಯಗಳಲ್ಲಿ ಯಾವ ಉಪಾಯವು ಶ್ರೇಷ್ಠವೆಂದು ನಿನಗೆ ತೋರುವುದೋ ಅದನ್ನು ಕಾಲವು ಮಿಂಚಿಹೋಗುವುದಕ್ಕಿಂತ ಮುಂಚೆ ಅನುಷ್ಠಾನಮಾಡು.

ಯಾವದ್ದ್ರುಪದೇ ಕೃತವಿಶ್ವಾಸಾ ದ್ರುಪದೇ ಪಾರ್ಥಿವರ್ಷಭೇ ।
ತಾವದೇವ ಹಿ ಶಕ್ಯಾಸ್ತೇ ನ ಶಕ್ಯಾಸ್ತು ತತಃ ಪರಮ್ ॥೪೪॥

ಎಲ್ಲಿಯವರೆಗೆ ಪಾಂಡವರಿಗೆ ರಾಜಶ್ರೇಷ್ಠನಾದ ದ್ರುಪದನಲ್ಲಿ ವಿಶ್ವಾಸವು ಆಳವಾಗಿ ಬೆಳೆದಿರುವುದಿಲ್ಲವೋ ಅಷ್ಟರೊಳಗೆ ಅವರನ್ನು ನಿರ್ಮೂಲನಗೊಳಿಸಬೇಕು. ಅನಂತರ ಅದು ಸಾಧ್ಯವಿಲ್ಲ.

ಸೈಷಾ ಮಮ ಮತೀ ರಾಜನ್ ಪಾಂಡವಾನ್ ಪ್ರತಿ ದೃಶ್ಯತೇ ।
ಸಾಧ್ವೀ ವಾ ಯದಿ ವಾऽಸಾಧ್ವೀ ಕಿಂ ವಾ ರಾಧೇಯ ಮನ್ಯಸೇ ॥

ರಾಜನೇ, ಪಾಂಡವರ ವಿಷಯದಲ್ಲಿ ನನ್ನ ಬುದ್ಧಿಯು ಈ ರೀತಿ ಇದೆ. ಕರ್ಣನೇ, ಇದು ಒಳ್ಳೆಯದೋ ಅಥವಾ ಕೆಟ್ಟದ್ದೋ , ನಿನ್ನ ಅಭಿಪ್ರಾಯವೇನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಎರಡನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಮೂರನೆಯ ಅಧ್ಯಾಯ

(ಕರ್ಣನ ಸಲಹೆ, ವಿಕ್ರಮವನ್ನು ಮಾಡಲು ಉಪದೇಶ, ಧೃತರಾಷ್ಟ್ರನ ಸಂದಿಗ್ಧ ಮನಃಸ್ಥಿತಿ)

ಕರ್ಣಃ

ದುರ್ಯೋಧನ ತವ ಪ್ರಜ್ಞಾ ನ ಸಮ್ಯಗಿತಿ ಮೇ ಮತಿಃ ।
ನ ಹ್ಯುಪಾಯೇನ ಶಕ್ಯಾಸ್ತೇ ಪಾಂಡವಾಃ ಕುರುನಂದನ ॥೧॥

ದುರ್ಯೋಧನನೇ, ನಿನ್ನ ಬುದ್ಧಿಯು ಸರಿಯಾಗಿಲ್ಲವೆಂದು ನನ್ನ ಅಭಿಪ್ರಾಯ. ಕುರುನಂದನನೇ, ಪಾಂಡವರನ್ನು ಉಪಾಯದಿಂದ ಬಗ್ಗಿಸಲು ಸಾಧ್ಯವಿಲ್ಲ.

ಪೂರ್ವಮೇವ ತು ತೇ ಸರ್ವೈರುಪಾಯೈರ್ಯತಿತಾಸ್ತ್ವಯಾ ।
ನಿಗೃಹೀತುಂ ತ್ವಯಾ ವೀರಾಃ ಶಕಿತಾ ನ ತು ಭಾರತ ॥೨॥

ಭಾರತನೇ, ನೀನು ಮೊದಲೇ ಎಲ್ಲಾ ಉಪಾಯಗಳನ್ನು ಮಾಡಿ ಪ್ರಯತ್ನಪಟ್ಟಿದ್ದೀಯೆ. ಆದರೆ, ಅವರನ್ನು ನಿಗ್ರಹಿಸಲು ಸಾಧ್ಯವಾಗಲಿಲ್ಲ.

ಇಹೈವ ವರ್ತಮಾನಾಸ್ತೇ ಸಮೀಪೇ ತವ ಪಾರ್ಥಿವ ।
ಅಜಾತಪಕ್ಷಾಃ ಶಿಶವೋ ನ ಶಕ್ಯಾಸ್ತವ ಬಾಧಿತುಮ್ ॥೩॥

ಪಾರ್ಥಿವನೇ, ಆಗ ಅವರು ನಿನ್ನ ಸಮೀಪದಲ್ಲಿ ಇಲ್ಲಿಯೇ ಪಕ್ಷಗಳು ಮೂಡದ ಶಿಶುಗಳಾಗಿದ್ದರು. ಆದರೂ ನೀನು ಅವರನ್ನು ಬಾಧಿಸಲು ಸಾಧ್ಯವಾಗಲಿಲ್ಲ.

ಜಾತಪಕ್ಷಾ ವಿದೇಶಸ್ಥಾ ವಿವೃದ್ಧಾಃ ಸರ್ವ ಏವ ತೇ ।
ನೋಪಾಯಸಾಧ್ಯಾಃ ಕೌಂತೇಯಾ ಮಮೈಷಾ ಮತಿರಚ್ಯುತಾ ॥೪॥

ಈಗ ಅವರು ಜಾತಪಕ್ಷರಾಗಿ (ರೆಕ್ಕೆಗಳನ್ನು ಪಡೆದ ಹಕ್ಕಿಗಳಂತೆ) ವಿದೇಶದಲ್ಲಿ ಎಲ್ಲರೂ ಅಭಿವೃದ್ಧರಾಗಿದ್ದಾರೆ. ಕುಂತಿಯ ಪುತ್ರರಾದ ಪಾಂಡವರನ್ನು ಯಾವುದೇ ಉಪಾಯದಿಂದ ಗೆಲ್ಲಲು ಸಾಧ್ಯವಿಲ್ಲವೆಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ನ ಚ ತೇ ವ್ಯಸನೈಃ ಶಕ್ಯಾ ಯೋಕ್ತುಂ ದೃಷ್ಟಗುಣಾ ಹಿ ತೇ ।
ಶಕ್ತಾಃ ಖಲ್ವೀಪ್ಸವಶ್ಚೈವ ಪಿತೃಪೈತಾಮಹಂ ಪದಮ್ ॥೫॥

ಅವರ ಗುಣಗಳನ್ನು ಎಲ್ಲರೂ ನೋಡಿದ್ದಾರೆ. ಅವರಿಗೆ ಹೆಣ್ಣು ಮುಂತಾದ ಯಾವ ಚಟಗಳನ್ನೂ ಹಿಡಿಸಲು ಸಾಧ್ಯವಿಲ್ಲ. ಪಿತೃಪಿತಾಮಹರಿಂದ ರಾಜ್ಯವನ್ನು ಪಡೆಯಲು ಅವರು ಬಯಸುತ್ತಾರೆ ಮತ್ತು ಪಡೆಯಲು ಶಕ್ತರಾಗಿಯೂ ಇದ್ದಾರೆ.

ಪರಸ್ಪರೇಭ್ಯೋ ಭೇದಶ್ಚ ನಾಧಾತುಂ ತತ್ರ ಶಕ್ಯತೇ ।
ಏಕಸ್ಯಾಂ ಹಿ ತಥಾ ಪತ್ನ್ಯಾಂ ನ ಭಿದ್ಯಂತೇ ಕಥಂಚನ ॥೬॥

ಪಾಂಡವರಲ್ಲಿ ಪರಸ್ಪರವಾಗಿ ಭೇದವನ್ನುಂಟು ಮಾಡಲು ಸಾಧ್ಯವಿಲ್ಲ. ಹಾಗೆಯೇ, ಒಬ್ಬಳೇ ಪತ್ನಿಯ ವಿಷಯದಲ್ಲಿಯೂ ಕೂಡ ಅವರು ಪರಸ್ಪರ ವಿರೋಧವನ್ನು ಮಾಡಿಕೊಳ್ಳುವುದಿಲ್ಲ.

ನ ಚಾಪಿ ಕೃಷ್ಣಾ ಶಕ್ಯೇತ ತೇಭ್ಯೋ ಭೇದಯಿತುಂ ಪರೈಃ ।
ಪರಿನ್ಯೂನಾನ್ ವೃತವತೀ ಕಿಮುತಾದ್ಯ ಪ್ರಜಾವೃತಃ ॥೭॥

ಅಥವಾ ದ್ರೌಪದಿಯನ್ನೇ ಪಾಂಡವರಿಂದ ಭೇದಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ಏನೂ ಇಲ್ಲದ ದರಿದ್ರರನ್ನು ಅವಳು ವರಿಸಿದಳು. ಈ ದಿನ ಇಷ್ಟು ಪ್ರಜೆಗಳ ಅನುರಾಗವಿರುವಾಗ (ಅವಳ ನಿಷ್ಠೆಯ ಬಗ್ಗೆ ಹೇಳುವುದೇನಿದೆ).

ಈಪ್ಸಿತಶ್ಚ ಗುಣಃ ಸ್ತ್ರೀಣಾಮೇಕಸ್ಯಾ ಬಹುಭರ್ತೃತಾ ।
ತಂ ಚ ಪ್ರಾಪ್ತವತೀ ಕೃಷ್ಣಾ ಸಾ ನ ಭೇದಯಿತುಂ ಕ್ಷಮಾ ॥೮॥

ಸ್ತ್ರೀಯರಿಗೆ ಅನೇಕ ಪತಿಗಳಿದ್ದರೆ, ಅದು ಇಷ್ಟವಾದ ಗುಣವೇ ಆಗಿರುತ್ತದೆ. ಕೃಷ್ಣೆಯು ಅದನ್ನೂ ಪಡೆದಿದ್ದಾಳೆ. ಆದ್ದರಿಂದ ಅವಳನ್ನು ಭೇದಿಸಲು ಸಾಧ್ಯವಿಲ್ಲ.

ಆರ್ಯವೃತ್ತಶ್ಚ ಪಾಂಚಾಲ್ಯಃ ಸ ಚ ರಾಜಾ ದೃಢವ್ರತಃ ।
ನ ಸಂತ್ಯಕ್ಷ್ಯತಿ ಕೌಂತೇಯಾನ್ ರಾಜ್ಯದಾನೈರಪಿ ಧ್ರುವಮ್ ॥೯॥

ಪಾಂಚಾಲರಾಜನು ಶ್ರೇಷ್ಠಗುಣವನ್ನು ಹೊಂದಿದವನು ಮತ್ತು ದೃಢವ್ರತನಾಗಿರುವವನು. ಅವನಿಗೆ ರಾಜ್ಯವನ್ನೇ ದಾನಮಾಡಿದರೂ ಅವನು ಪಾಂಡವರನ್ನು ಖಂಡಿತವಾಗಿ ಬಿಡುವುದಿಲ್ಲ.

ತಥಾऽಸ್ಯ ಪುತ್ರೋ ಗುಣವಾನನುರಕ್ತಶ್ಚ ಪಾಂಡವಾನ್ ।
ತಸ್ಮಾನ್ನೋಪಾಯಸಾಧ್ಯಾಂಸ್ತಾನಹಂ ಮನ್ಯೇ ಕಥಂಚನ ॥೧೦॥

ಅವನ ಮಗನಾದ ಈ ಧೃಷ್ಟದ್ಯುಮ್ನನು ಗುಣವಂತನೂ, ಪಾಂಡವರಲ್ಲಿ ಪ್ರೀತಿಯುಳ್ಳವನೂ ಆಗಿದ್ದಾನೆ. ಆದ್ದರಿಂದ ಪಾಂಡವರನ್ನು ಯಾವ ಉಪಾಯದಿಂದಲೂ ಗೆಲ್ಲಲು ಸಾಧ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

ಇದಮದ್ಯ ಕ್ಷಮಂ ಕರ್ತುಮಸ್ಮಾಕಂ ಭರತರ್ಷಭ ।
ಯಾವನ್ನ ಕೃತಮೂಲಾಶ್ಚ ಪಾಂಡವೇಯಾ ವಿಶಾಂಪತೇ ।
ತಾವತ್ ಪ್ರಹರಣೀಯಾಸ್ತೇ ರೋಚತಾಂ ತತ್ರ ವಿಕ್ರಮಃ ॥೧೧॥

ಭರತರ್ಷಭನೇ, ಈ ದಿನ ಈ ಕಾರ್ಯವನ್ನು ಮಾಡಲು ಸಾಧ್ಯ. ರಾಜನೇ, ಪಾಂಡವೇಯರ ಮೂಲವು ದೃಢವಾಗುವುದಕ್ಕಿಂತ ಮುಂಚೆಯೇ ಯುದ್ಧದಲ್ಲಿ ಅವರನ್ನು ಸೋಲಿಸಬೇಕು. ಅದಕ್ಕೆ ವಿಕ್ರಮವೊಂದೇ ದಾರಿ. ಅದನ್ನು ನೀನು ಬಯಸು.

ಅಸ್ಮತ್ಪಕ್ಷೋ ಮಹಾನದ್ಯ ಯಾವತ್ ಪಾಂಚಾಲಕೋ ಲಘುಃ ।
ತಾವತ್ ಪ್ರಹರಣಂ ತೇಷಾಂ ಕ್ರಿಯತಾಮಿತಿ ರೋಚಯೇ ॥೧೨॥

ಎಷ್ಟರವರೆಗೆ ನಮ್ಮ ಪಕ್ಷವು ದೊಡ್ಡದಾಗಿ ದ್ರುಪದನ ಪಕ್ಷವು ಸಣ್ಣದಾಗಿರುತ್ತದೆಯೋ ಅಷ್ಟರಲ್ಲಿಯೇ ಪಾಂಡವರ ಮೇಲೆ ಪ್ರಹಾರ ಮಾಡಬೇಕೆಂದು ನಾನು ಇಷ್ಟಪಡುತ್ತೇನೆ.

ವಾಹನಾನಿ ಪ್ರಭೂತಾನಿ ಮಿತ್ರಾಣಿ ಬಹುಳಾನಿ ಚ ।
ಯಾವನ್ನ ತೇಷಾಂ ಗಾಂಧಾರೇ ತಾವದೇವಾಶು ವಿಕ್ರಮ ॥೧೩॥

ಗಾಂಧಾರೀಪುತ್ರನಾದ ದುರ್ಯೋಧನನೇ, ಅವರ ವಾಹನಗಳು ಅಭಿವೃದ್ಧಿಯನ್ನು ಹೊಂದುವುದಕ್ಕಿಂತ ಮುಂಚೆಯೇ, ಅವರ ಮಿತ್ರರು ಬಹುಸಂಖ್ಯೆಯಲ್ಲಿ ಬೆಳೆಯುವುದಕ್ಕಿಂತ ಮುಂಚೆಯೇ ಬೇಗ ವಿಕ್ರಮವನ್ನು ಮಾಡು.

ಯಾವಚ್ಚ ರಾಜಾ ಪಾಂಚಾಲ್ಯೋ ನೋದ್ಯಮೇ ಕುರುತೇ ಮನಃ ।
ಕುಂತೀಪುತ್ರೈರ್ಮಹಾವೀರ್ಯೈಸ್ತಾವದೇವಾಶು ವಿಕ್ರಮ ॥೧೪॥

ಎಲ್ಲಿಯವರೆಗೆ ಪಾಂಚಾಲರಾಜನು ಮಹಾವೀರ್ಯರಾದ ಕುಂತೀಪುತ್ರರ ಜೊತೆಯಲ್ಲಿ ನಮ್ಮ ಜೊತೆಯಲ್ಲಿ ಯುದ್ಧಮಾಡಲು ಆಲೋಚಿಸುವುದಿಲ್ಲವೋ ಅಷ್ಟರೊಳಗೆ ನೀನೇ ಯುದ್ಧದ ಪ್ರಯತ್ನವನ್ನು ಮಾಡು.

ಸದಾ ಚ ವೈರೀ ದ್ರುಪದಃ ಸತತಂ ನಿಕೃತಸ್ತ್ವಯಾ ।
ಯಾವನ್ನ ಬಾಧತೇ ಮಿತ್ರೈ ರೋಚತಾಂ ತತ್ರ ವಿಕ್ರಮಃ ॥೧೫॥

ದ್ರುಪದನು ಯಾವಾಗಲೂ ನಿನ್ನ ವೈರಿ. ನಿನ್ನಿಂದ ಸತತವಾಗಿ ವಂಚನೆಗೆ ಒಳಗಾಗಿದ್ದಾನೆ. ಅವನು ಮಿತ್ರರ ಜೊತೆಯಲ್ಲಿ ಬಂದು ನಿನ್ನನ್ನು ಬಾಧಿಸುವುದಕ್ಕಿಂತ ಮುಂಚೆಯೇ ನೀನೇ ಯುದ್ಧದ ಪ್ರಯತ್ನವನ್ನು ಮಾಡು.

ಯಾವನ್ನಾಯಾತಿ ವಾರ್ಷ್ಣೇಯಃ ಕರ್ಷನ್ ಯಾದವವಾಹಿನೀಮ್ ।
ರಾಜ್ಯಾರ್ಥೇ ಪಾಂಡವೇಯಾನಾಂ ತಾವಾದೇವಾಶು ವಿಕ್ರಮ ॥೧೬॥

ಎಲ್ಲಿಯವರೆಗೆ ಕೃಷ್ಣನು ಯಾದವಸೈನ್ಯವನ್ನು ಎಳೆದುಕೊಂಡು ಪಾಂಡವರಿಗೆ ರಾಜ್ಯವನ್ನು ಕೊಡಿಸಲು ಬರುವುದಿಲ್ಲವೋ ಅಷ್ಟರೊಳಗೆ ನೀನೇ ಯುದ್ಧದ ಪ್ರಯತ್ನವನ್ನು ಮಾಡು.

ವಸೂನಿ ವಿವಿಧಾನ್ ಭೋಗಾನ್ ರಾಜ್ಯಮೇವ ಚ ಕೇವಲಮ್ ।
ನಾಸಾಧ್ಯಮಸ್ತಿ ಕೃಷ್ಣಸ್ಯ ಪಾಂಡವಾರ್ಥೇ ಮಹೀಪತೇ ॥೧೭॥

ರಾಜನೇ, ಪಾಂಡವರಿಗೆ ಹಿತವನ್ನು ಮಾಡಲು ಕೃಷ್ಣನಿಗೆ ಧನವೇ ಆಗಲಿ, ವಿವಿಧಭೋಗಗಳೇ ಆಗಲಿ, ರಾಜ್ಯವೇ ಆಗಲಿ, ಯಾವುದೂ (ಯಾವುದನ್ನು ತೊರೆಯುವುದೂ) ಅಸಾಧ್ಯವಲ್ಲ.

ವಿಕ್ರಮೇಣ ಮಹೀ ಪ್ರಾಪ್ತಾ ಭರತೇನ ಮಹಾತ್ಮನಾ ।
ವಿಕ್ರಮೇಣೈವ ಲೋಕಾಂಸ್ತ್ರೀನ್ ಪ್ರಾಪ್ತವಾನ್ ಪಾಕಶಾಸನಃ ॥೧೮॥

ಹಿಂದೆ ಮಹಾನುಭಾವನಾದ ಭರತನು ವಿಕ್ರಮದಿಂದಲೇ ಭೂಮಿಯನ್ನು ಸಂಪಾದಿಸಿದನು. ಪಾಕಶಾಸನನಾದ ಇಂದ್ರನು ವಿಕ್ರಮದಿಂದಲೇ ಮೂರುಲೋಕಗಳನ್ನೂ ಸಂಪಾದಿಸಿದನು.

ವಿಕ್ರಮಂ ಚ ಪ್ರಶಂಸಂತಿ ಕ್ಷತ್ರಿಯಸ್ಯ ವಿಶಾಂಪತೇ ।
ಸ್ವಕೋ ಹಿ ಧರ್ಮಃ ಶೂರಾಣಾಂ ವಿಕ್ರಮಃ ಪಾರ್ಥಿವರ್ಷಭ ॥೧೯॥

ರಾಜನೇ, ಕ್ಷತ್ರಿಯರಿಗೆ ವಿಕ್ರಮವೇ ಶ್ರೇಷ್ಠವೆಂದು ಹೊಗಳುತ್ತಾರೆ. ಪಾರ್ಥಿವಶ್ರೇಷ್ಠನೇ, ಶೂರರಿಗೆ ನಿಜವಾದ ಧರ್ಮ ಎಂದರೆ ವಿಕ್ರಮವೇ.

ತೇ ಬಲೇನ ವಯಂ ರಾಜನ್ ಮಹತಾ ಚತುರಂಗಿಣಾ ।
ಪ್ರಮಥ್ಯ ದ್ರುಪದಂ ಶೀಘ್ರಮಾನಯಾಮೇಹ ಪಾಂಡವಾನ್ ॥೨೦॥

ರಾಜನೇ, ಅಂತಹ ನಾವು ನಮ್ಮ ಚತುರಂಗಬಲದಿಂದ ದ್ರುಪದನನ್ನು ಸೋಲಿಸಿ ಇಲ್ಲಿಗೆ ಶೀಘ್ರವಾಗಿ ಪಾಂಡವರನ್ನು ಕರೆದುಕೊಂಡು ಬರೋಣ.

ನ ಹಿ ಸಾಮ್ನಾ ನ ಭೇದೇನ ನಚ ದಾನೇನ ಪಾಂಡವಾಃ ।
ಶಕ್ಯಾಃ ಸಾಧಯಿತುಂ ತಸ್ಮಾದ್ ವಿಕ್ರಮೇಣೈವ ತಾನ್ ಜಹಿ ॥೨೧॥

ವಿಕ್ರಮೇಣೈವ ಜಿತ್ವೇಮಾಮಖಿಲಾಂ ಭುಂಕ್ಷ್ವ ಮೇದಿನೀಮ್ ।
ನಾನ್ಯಮತ್ರ ಪ್ರಪಶ್ಯಾಮಿ ಕಾರ್ಯೋಪಾಯಂ ಜನಾಧಿಪ ॥೨೨॥

ಪಾಂಡವರನ್ನು ಸಾಮದಿಂದಲಾಗಲಿ, ಭೇದದಿಂದಲಾಗಲಿ, ದಾನದಿಂದಲಾಗಲಿ ಗೆಲ್ಲಲು ಸಾಧ್ಯವಿಲ್ಲ. ಆದ್ದರಿಂದ ವಿಕ್ರಮದಿಂದಲೇ ಅವರನ್ನು ಗೆಲ್ಲು. ಈ ಭೂಮಿಯನ್ನು ವಿಕ್ರಮದಿಂದಲೇ ಗೆದ್ದು ಅನುಭವಿಸು. ರಾಜನೇ, ಈ ವಿಷಯದಲ್ಲಿ ಬೇರೆ ಯಾವ ಉಪಾಯವೂ ಕಾಣುತ್ತಿಲ್ಲ.

ವೈಶಂಪಾಯನಃ

ಶ್ರುತ್ವಾ ಸ ರಾಧೇಯವಚೋ ಧೃತರಾಷ್ಟ್ರಃ ಪ್ರತಾಪವಾನ್ ।
ಅಭಿಪೂಜ್ಯ ತತಃ ಪಶ್ಚಾದಿದಂ ವಚನಮಬ್ರವೀತ್ ॥೨೩॥

ಕರ್ಣನ ಮಾತುಗಳನ್ನು ಕೇಳಿ ಪ್ರತಾಪಶಾಲಿಯಾದ ಧೃತರಾಷ್ಟ್ರನು ಅವನನ್ನು ಸಮ್ಮಾನಿಸಿ ಅನಂತರ ಈ ಮಾತನ್ನಾಡಿದನು.

ಉಪಪನ್ನಂ ಮಹಾಪ್ರಾಜ್ಞೇ ಕೃತಾಸ್ತ್ರೇ ಸೂತನಂದನೇ ।
ತ್ವಯಿ ವಿಕ್ರಮಸಂಪನ್ನಮಿದಂ ವಚನಮೀದೃಶಮ್ ॥೨೪॥

ಮಹಾಪ್ರಾಜ್ಞನಾದ, ಅಸ್ತ್ರಜ್ಞನಾದ, ಸೂತನಂದನನಾದ ನಿನ್ನಲ್ಲಿ ವಿಕ್ರಮಯುಕ್ತವಾದ ಇಂತಹ ಮಾತುಗಳು ಉಚಿತವಾಗಿಯೇ ಇವೆ.

ಭೂಯ ಏವ ತು ಭೀಷ್ಮಶ್ಚ ದ್ರೋಣೋ ವಿದುರ ಏವ ಚ ।
ಯುವಾಂ ಚ ಕುರುತಾಂ ಬುದ್ಧಿಂ ಭವೇದ್ ಯಾವತ್ ಸುಖೋದಯಃ॥

ಆದರೆ, ಭೀಷ್ಮರ, ದ್ರೋಣರ ಮತ್ತು ವಿದುರನ ಜೊತೆಯಲ್ಲಿ ಆಲೋಚನೆಯನ್ನು ಮಾಡಿ, ನಮಗೆ ಯಾವುದರಿಂದ ಸುಖೋದಯವುಂಟಾಗುತ್ತದೆ ಎಂದು ನಿರ್ಧರಿಸಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರ್ಯಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಮೂರನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ನಾಲ್ಕನೆಯ ಅಧ್ಯಾಯ

(ಮಂತ್ರಿಗಳ ಎದುರಿನಲ್ಲಿ ದುರ್ಯೋಧನನಿಗೆ ಭೀಷ್ಮರ ಹಿತವಚನ, ಪಾಂಡವರಿಗೆ ಅರ್ಧರಾಜ್ಯವನ್ನು ಕೊಡಲು ನಿರ್ಬಂಧ)

ವೈಶಂಪಾಯನಃ

ತತ ಆನಾಯ್ಯ ತಾನ್ ಸರ್ವಾನ್ ಮಂತ್ರಿಣಃ ಸುಮಹಾಯಶಾಃ ।
ಧೃತರಾಷ್ಟ್ರೋ ಮಹಾರಾಜ ಮಂತ್ರಯಾಮಾಸ ವೈ ತದಾ ॥೧॥

ಜನಮೇಜಯ ಮಹಾರಾಜನೇ, ಅನಂತರ ಮಹಾಕೀರ್ತಿಶಾಲಿಯಾದ ಧೃತರಾಷ್ಟ್ರನು ಎಲ್ಲಾ ಮಂತ್ರಿಗಳನ್ನೂ ಕರೆಸಿ ಅವರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿದನು.

ಭೀಷ್ಮಃ

ನ ರೋಚತೇ ವಿಕ್ರಮಸ್ತು ಪಾಂಡುಪುತ್ರೈಃ ಕಥಂಚನ ।
ಯಥೈವ ಧೃತರಾಷ್ಟ್ರೇ ಮೇ ತಥಾ ಪಾಂಡುರಸಂಶಯಮ್ ॥೨॥

ಪಾಂಡುಪುತ್ರರ ಮೇಲೆ ವಿಕ್ರಮಿಸುವುದು ಯಾವರೀತಿಯಿಂದಲೂ ನನಗೆ ಇಷ್ಟವಿಲ್ಲ. ನನಗೆ ಧೃತರಾಷ್ಟ್ರನು ಹೇಗೋ, ಪಾಂಡವೂ ಹಾಗೆಯೇ. ಇದರಲ್ಲಿ ಸಂಶಯವಿಲ್ಲ.

ಗಾಂಧಾರ್ಯಾಶ್ಚ ಯಥಾ ಪುತ್ರಾಸ್ತಥಾ ಕುಂತೀಸುತಾ ಮತಾಃ ।
ಯಥಾ ಚ ಮಮ ತೇ ರಕ್ಷ್ಯಾ ಧೃತರಾಷ್ಟ್ರ ತಥಾ ತವ ॥೩॥

ಗಾಂಧಾರಿಯ ಮಕ್ಕಳು ಹೇಗೋ, ಕುಂತಿಯ ಮಕ್ಕಳೂ ಹಾಗೆಯೇ. ಧೃತರಾಷ್ಟ್ರನೇ, ನಾನು ಹೇಗೆ ಅವರನ್ನು ರಕ್ಷಣೆಮಾಡಬೇಕೋ, ಹಾಗೆಯೇ ನಿನ್ನ ಮಕ್ಕಳನ್ನೂ ರಕ್ಷಣೆಮಾಡಬೇಕು.

ಯಥಾ ಚ ಮಮ ರಾಜ್ಞಶ್ಚ ತಥಾ ದುರ್ಯೋಧನಸ್ಯ ತೇ ।
ತಥಾ ಕುರೂಣಾಂ ಸರ್ವೇಷಾಮನ್ಯೇಷಾಮಪಿ ಪಾರ್ಥಿವ ॥೪॥

ಇದು ನನಗೂ ಮತ್ತು ರಾಜನಾದ ಧೃತರಾಷ್ಟ್ರನಿಗೂ ಹೇಗೆ ಅನ್ವಯಿಸುತ್ತದೆಯೋ, ಹಾಗೆಯೇ, ದುರ್ಯೋಧನನಾದ ನಿನಗೂ ಮತ್ತು ಎಲ್ಲಾ ಕುರುಗಳಿಗೂ ಅನ್ವಯಿಸುತ್ತದೆ.

ಏವಂ ಗತೇ ವಿಗ್ರಹಂ ತೈರ್ನ ರೋಚೇ
ಸಂಧಾಯ ವೀರೈರ್ದೀಯತಾಮದ್ಯ ಭೂಮಿಃ ।
ತೇಷಮಪೀದಂ ಪ್ರಪಿತಾಮಹಾನಾಂ
ರಾಜ್ಯಂ ಪಿತುಶ್ಚೈವ ಕುರೂತ್ತಮಾನಾಮ್ ॥೫॥

ರಾಜನೇ, ಹೀಗಿರುವಾಗ ನಾನು ಯುದ್ಧವನ್ನು ಬಯಸುವುದಿಲ್ಲ. ಆ ವೀರರ ಜೊತೆಯಲ್ಲಿ ಸಂಧಾನ ಮಾಡಿ, ಅವರಿಗೆ ರಾಜ್ಯವನ್ನು ಕೊಡು. ಅವರಿಗೂ ಸಹ ಈ ರಾಜ್ಯವು ಕುರುಶ್ರೇಷ್ಠರಾದ ಪ್ರಪಿತಾಮಹರಿಂದಲೂ ಮತ್ತು ತಂದೆಯಾದ ಪಾಂಡುವಿನಿಂದಲೂ ಬಂದಿದೆಯಷ್ಟೆ.

ದುರ್ಯೋಧನ ಯಥಾ ರಾಜ್ಯಂ ತ್ವಮಿದಂ ತಾತ ಪಶ್ಯಸಿ
ಮಮ ಪೈತೃಕಮೇವೇತಿ ತಥಾ ತೇಷಾಮಪಿ ಪ್ರಭೋ ॥೬॥

ಪ್ರೀತಿಪಾತ್ರನಾದ ದುರ್ಯೋಧನನೇ, ನೀನು ಹೇಗೆ ಈ ರಾಜ್ಯವು ನಿನ್ನ ತಂದೆಯಿಂದ ಬಂದುದೆಂದು ಭಾವಿಸುತ್ತೀಯೋ ಹಾಗೆಯೇ ಅವರಿಗೂ ತಂದೆಯಿಂದ ಬಂದ ರಾಜ್ಯವಷ್ಟೆ?

ಯದಿ ರಾಜ್ಯಂ ನ ತೇ ಪ್ರಾಪ್ತಾಃ ಪೂರ್ವಮೇವ ತಪಸ್ವಿನಃ ।
ಕುತ ಏತತ್ ತವಾಪೀದಂ ಭಾರತಸ್ಯಾಪಿ ಕಸ್ಯಚಿತ್ ॥೭॥

ತಪಸ್ವಿಗಳಾದ ಅವರು ನಿನಗಿಂತ ಮೊದಲೇ ರಾಜ್ಯದಲ್ಲಿ ಅಧಿಕಾರವನ್ನು ಹೊಂದದಿದ್ದರೆ, ನಿನಗಾದರೂ ಹೇಗೆ ಅಧಿಕಾರ? ಅಥವಾ ಭರತವಂಶದಲ್ಲಿ ಹುಟ್ಟಿದ ಇನ್ನೊಬ್ಬನಿಗಾದರೂ ಹೇಗೆ ಅಧಿಕಾರ?

ಅಥ ಧರ್ಮೇಣ ರಾಜ್ಯಂ ತ್ವಂ ಪ್ರಾಪ್ತವಾನಸಿ ಭಾರತ ।
ತೇಽಪಿ ರಾಜ್ಯಮನುಪ್ರಾಪ್ತಾಃ ಪೂರ್ವಮೇವ ನ ಸಂಶಯಃ ॥೮॥

ಭಾರತನೇ, ಅಥವಾ ನೀನು ನಾನು ಧರ್ಮದಿಂದ ಪಡೆದಿದ್ದೇನೆ ಎಂದು ಭಾವಿಸುವುದಾದರೆ, ಅವರೂ ಸಹ ನಿನಗಿಂತ ಮೊದಲೇ ಧರ್ಮದಿಂದ ರಾಜ್ಯವನ್ನು ಪಡೆದಿದ್ದಾರೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಮಧುರೇಣೈವಮುಕ್ತ್ವಾ ತಾನ್ ರಾಜ್ಯಸ್ಯಾರ್ಧಂ ಪ್ರದೀಯತಾಮ್ ।
ಏತದ್ಧಿ ಪುರುಷವ್ಯಾಘ್ರ ಹಿತಂ ಸರ್ವಜನಸ್ಯ ನಃ ॥೯॥

ಹೀಗೆ ಅವರಿಗೆ ಮಧುರವಾಗಿ ಹೇಳಿ ಅರ್ಧರಾಜ್ಯವನ್ನು ಕೊಡು. ಪುರುಷವ್ಯಾಘ್ರನೇ, ಇದು ನಮಗೂ ಮತ್ತು ಎಲ್ಲರಿಗೂ ಹಿತವಾದುದು.

ಅತೋಽನ್ಯಥಾ ಚೇತ್ ಕ್ರಿಯತೇ ನ ಹಿತಂ ನೋ ಭವಿಷ್ಯತಿ ।
ತವಾಪ್ಯಕೀರ್ತಿಃ ಸಕಲಾ ಭವಿಷ್ಯತಿ ನ ಸಂಶಯಃ ॥೧೦॥

ಇದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆದುಕೊಂಡರೆ, ನಮಗೆ ಹಿತವಾಗುವುದಿಲ್ಲ. ನಿನಗೆ ಪುಷ್ಕಲವಾದ ಅಪಕೀರ್ತಿ ಉಂಟಾಗುವುದರಲ್ಲಿ ಸಂಶಯವಿಲ್ಲ.

ಕೀರ್ತಿರಕ್ಷಣಮಾತಿಷ್ಠೇತ್ ಕೀರ್ತಿರ್ಹಿ ವಿಮಲಂ ಫಲಮ್ ।
ನಷ್ಟಕೀರ್ತೇರ್ಮನುಷ್ಯಸ್ಯ ಜೀವಿತಂ ವಿಫಲಂ ಸ್ಮೃತಮ್ ॥೧೧॥

ಪ್ರತಿಯೊಬ್ಬನೂ ಕೀರ್ತಿಯನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಬೇಕು. ಕೀರ್ತಿಯೇ ನಿರ್ದುಷ್ಟವಾದ ಫಲ. ಕೀರ್ತಿನಾಶವನ್ನು ಹೊಂದಿದ ಮನುಷ್ಯನ ಜೀವನವನ್ನು ನಿಷ್ಫಲವೆಂದು ಹೇಳುತ್ತಾರೆ.

ಯಾವತ್ ಕೀರ್ತಿರ್ಮನುಷ್ಯಸ್ಯ ಲೋಕೇ ತಿಷ್ಠತಿ ಭಾರತ ।
ತಾವಜ್ಜೀವತಿ ಗಾಂಧಾರೇ ನಷ್ಟಕೀರ್ತಿರ್ಹಿ ನಶ್ಯತಿ ॥೧೨॥

ಗಾಂಧಾರಿಯ ಪುತ್ರನಾದ ಭಾರತನೇ, ಎಲ್ಲಿಯವರೆಗೆ ಕೀರ್ತಿಯಿರುತ್ತದೆಯೋ ಅಲ್ಲಿಯವರೆಗೆ ಮನುಷ್ಯನು ಲೋಕದಲ್ಲಿ ಬದುಕಿರುತ್ತಾನೆ. ಕೀರ್ತಿಯು ನಾಶ ಹೊಂದಿದ ದಿವಸ ಅವನು ನಾಶವನ್ನು ಹೊಂದುತ್ತಾನೆ.

ತದಿದಂ ಸಮುಪಾತಿಷ್ಠ ಧರ್ಮಂ ಕುರುಕುಲೋಚಿತಮ್ ।
ಅನುರೂಪಂ ಮಹಾಬಾಹೋ ಪೂರ್ವೇಷಾಮಾತ್ಮನಃ ಕುರು ॥೧೩॥

ಆದ್ದರಿಂದ, ಮಹಾಬಾಹುವೇ, ನೀನು ಕುರುಕುಲೋಚಿತವಾದ ನಿನಗೂ ಮತ್ತು ಪೂರ್ವಿಕರಿಗೂ ಅನುರೂಪವಾದ ಈ ಧರ್ಮವನ್ನು ಆಚರಿಸು.

ದಿಷ್ಟ್ಯಾ ಧರಂತಿ ತೇ ವೀರಾ ದಿಷ್ಟ್ಯಾ ಜೀವತಿ ಸಾ ಪೃಥಾ ।
ದಿಷ್ಟ್ಯಾಪುರೋಚನಃ ಪಾಪೋ ನ ಸಕಾಮೋಽತ್ಯಯಂ ಗತಃ ॥೧೪॥

ದೇವರದಯದಿಂದ ಪಾಂಡವರು ಬದುಕಿದ್ದಾರೆ. ದೇವರದಯದಿಂದ ಕುಂತಿಯು ಬದುಕಿದ್ದಾಳೆ. ದೇವರದಯದಿಂದಲೇ ಪಾಪಿಯಾದ ಪುರೋಚನನ ಆಸೆಯು ನೆರವೇರದೆ, ಅವನು ವಿನಾಶವನ್ನು ಹೊಂದಿದ್ದಾನೆ.

ತದಾಪ್ರಭೃತಿ ಗಾಂಧಾರೇ ನ ಶಕ್ನೋಮ್ಯಭಿವೀಕ್ಷಿತುಮ್ ।
ಅದಾಹಯೋ ಯದಾ ಪಾರ್ಥಾಂಸ್ತ್ವಮಗ್ನೌ ಜತುವೇಶ್ಮನಿ ॥೧೫॥

ಗಾಂಧಾರಿಯ ಪುತ್ರನೇ, ಯಾವಾಗ ನೀನು ಪಾಂಡವರನ್ನು ಅರಗಿನಮನೆಯಲ್ಲಿಟ್ಟು ಸುಡಿಸಿದೆಯೋ, ಆಗಿನಿಂದ ನಿನ್ನನ್ನು ನೋಡಲು ನನಗೆ ಸಾಧ್ಯವಾಗುತ್ತಿಲ್ಲ.

ಲೋಕೇ ಪ್ರಾಣಭೃತಾಂ ಕಿಂಚಿಚ್ಛ್ರುತ್ವಾ ಕುಂತೀಂ ತಥಾಗತಾಮ್ ।
ದುಃಖಂ ತು ಜಾಯತೇ ರಾಜನ್ ಭವಾನ್ ಸರ್ವಸ್ಯ ಕಾರಣಮ್ ॥

ರಾಜನೇ, ಲೋಕದಲ್ಲಿ ಕುಂತಿಯ ದುರವಸ್ಥೆಯ ಮಾತುಗಳನ್ನು ಜನರು ಆಡುವಾಗ ನನಗೂ ದುಃಖವಾಗುತ್ತದೆ. ರಾಜನೇ, ಎಲ್ಲದಕ್ಕೂ ನೀನೇ ಕಾರಣ.

ನ ಚಾಪಿ ದೋಷೇಣ ತಥಾ ಲೋಕೋ ವೇತ್ತಿ ಪುರೋಚನಮ್ ।
ಯಥಾ ತ್ವಾಂ ಪುರುಷವ್ಯಾಘ್ರ ಲೋಕೋ ದೋಷೇಣ ಗಚ್ಛತಿ ॥೧೭॥

ಪುರುಷವ್ಯಾಘ್ರನೇ, ಜನರು ಹೇಗೆ ನಿನ್ನನ್ನು ದೋಷಿಯೆಂದು ಪರಿಗಣಿಸುತ್ತಾರೋ, ಹಾಗೆ, ಪುರೋಚನನನ್ನು ದೋಷಿಯೆಂದು ಪರಿಗಣಿಸುವುದಿಲ್ಲ.

ತದಿದಂ ಜೀವಿತಂ ತೇಷಾಂ ತವ ಕಿಲ್ಬಿಷನಾಶನಮ್ ।
ಸಮ್ಮಂತವ್ಯಂ ಮಹಾರಾಜ ಪಾಂಡವಾನಾಂ ಚ ದರ್ಶನಮ್ ॥೧೮॥

ಅವರು ಬದುಕಿರುವುದು ನಿನ್ನ ಪಾಪವನ್ನು ತೊಳೆಯಲು ದೊಡ್ಡಸಾಧನವಾಗಿದೆ. ಮಹಾರಾಜನೇ, ಪಾಂಡವರ ದರ್ಶನವನ್ನೂ ನೀನು ಅನುಮೋದಿಸಬೇಕು.

ನ ಚಾಪಿ ತೇಷಾಂ ವೀರಾಣಾಂ ಜಯತಾಂ ಕುರುನಂದನ ।
ಪಿತ್ರ್ಯೋಂಽಶಃ ಶಕ್ಯ ಆದಾತುಮಪಿ ವಜ್ರಭೃತಾ ಸ್ವಯಮ್ ॥೧೯॥

ಕುರುನಂದನನೇ, ಜಯಶಾಲಿಗಳಾದ, ವೀರರಾದ ಆ ಪಾಂಡವರ ತಂದೆಯ ಆಸ್ತಿಯನ್ನು ವಜ್ರವನ್ನು ಧರಿಸಿದ ಇಂದ್ರನೂ ಕಿತ್ತುಕೊಳ್ಳಲು ಸಾಧ್ಯವಿಲ್ಲ.

ತೇ ಹಿ ಧರ್ಮೇ ಸ್ಥಿತಾಃ ಸರ್ವೇ ಸರ್ವೇ ಚೈವೈಕಚೇತಸಃ ।
ಅಧರ್ಮೇಣ ನಿರಸ್ತಾಶ್ಚ ತುಲ್ಯೇ ರಾಜ್ಯೇ ಚ ಧರ್ಮತಃ ॥೨೦॥

ಅವರೆಲ್ಲರೂ ಧರ್ಮದಲ್ಲಿರುವವರು. ಎಲ್ಲರಿಗೂ ಒಂದೇ ವಿಧವಾದ ಮನಸ್ಸಿದೆ. ಎಲ್ಲರೂ ಅಧರ್ಮವನ್ನು ತ್ಯಜಿಸಿದ್ದಾರೆ. ಸಮಾನವಾದ ರಾಜ್ಯದಲ್ಲಿ ಅವರಿಗೂ ಧರ್ಮದಿಂದಲೇ ಅಧಿಕಾರವಿದೆ.

ಯದಿ ಧರ್ಮಸ್ತ್ವಯಾ ಕಾರ್ಯೋ ಯದಿ ಕಾರ್ಯಂ ಪ್ರಿಯಂ ಚ ಮೇ।
ಕ್ಷೇಮಂ ಚ ಯದಿ ಕರ್ತವ್ಯಂ ರಾಜ್ಯಂ ತೇಷಾಂ ಪ್ರಯಚ್ಛತಾಮ್ ॥೨೧॥

ನೀನು ಧರ್ಮವನ್ನು ಮಾಡುವುದಾದರೆ, ನೀನು ನನಗೆ ಪ್ರಿಯವನ್ನು ಮಾಡುವುದಾದರೆ, ನೀನು ಕುರುಕುಲಕ್ಕೆ ಕ್ಷೇಮವನ್ನು ಮಾಡುವುದಾದರೆ, ಅವರಿಗೆ ರಾಜ್ಯವನ್ನು ಕೊಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಚತುರಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಐದನೆಯ ಅಧ್ಯಾಯ

(ದ್ರೋಣರ ಹಿತವಚನ ಮತ್ತು ಕರ್ಣನ ವಿರೋಧ)

ದ್ರೋಣಃ

ಮಂತ್ರಾಯ ಸಮುಪಾನೀತೈರ್ಧೃತರಾಷ್ಟ್ರಹಿತೈರ್ನೃಪ ।
ಧರ್ಮ್ಯಂ ಪಥ್ಯಂ ಯಶಸ್ಯಂ ಚ ವಾಚ್ಯಮಿತ್ಯನುಶುಶ್ರುಮಃ ॥೧॥

ರಾಜನೇ, ಮಂತ್ರಾಲೋಚನೆಗೆ ಬಂದ ಧೃತರಾಷ್ಟ್ರನ ಆಪ್ತರು ಧರ್ಮಸಂಪಾದಕವಾದುದನ್ನೂ, ಹಿತವಾದುದನ್ನೂ, ಕೀರ್ತಿಕರವಾದುದನ್ನೂ ಹೇಳಬೇಕೆಂದು ನಾನು ಕೇಳಿದ್ದೇನೆ.

ಮಮಾಪ್ಯೇಷ ಮತಿಸ್ತಾತ ಯಾ ಭೀಷ್ಮಸ್ಯ ಮಹಾತ್ಮನಃ ।
ಸಂವಿಭಜ್ಯಾಸ್ತು ಕೌಂತೇಯಾ ಏಷ ಧರ್ಮಃ ಸನಾತನಃ ॥೨॥

ಪ್ರೀತಿಪಾತ್ರನೇ, ಮಹಾತ್ಮರಾದ ಭೀಷ್ಮರ ಅಭಿಪ್ರಾಯವೇ ನನ್ನ ಅಭಿಪ್ರಾಯವೂ ಆಗಿದೆ. ಕೌಂತೇಯರಿಗೆ ರಾಜ್ಯವನ್ನು ಹಂಚಬೇಕು. ಇದು ಸನಾತನವಾದ ಧರ್ಮ.

ಪ್ರೇಷ್ಯತಾಂ ದ್ರುಪದಾಯಾಶು ನರಃ ಕಶ್ಚಿತ್ ಪ್ರಿಯಂವದಃ ।
ಬಹುಲಂ ರತ್ನಮಾದಾಯ ತೇಷಾಮರ್ಥಾಯ ಭಾರತ ॥೩॥

ಭಾರತನೇ, ಪ್ರಿಯವಾಗಿ ಮಾತನಾಡುವ ಒಬ್ಬನನ್ನು ಪಾಂಡವರಿಗೆ ಕೊಡಲು, ಬಹಳ ರತ್ನಗಳನ್ನು ತೆಗೆದುಕೊಂಡು ಹೋಗುವಂತೆ ಮಾಡಿ ದ್ರುಪದನ ಸಮೀಪಕ್ಕೆ ಜಾಗ್ರತೆಯ್ಂದಾಗಿ ಕಳುಹಿಸು.

ಮಿಥಃ ಕೃತ್ಯಂ ಚ ತಸ್ಮೈ ಸ ಆದಾಯ ಬಹು ಗಚ್ಛತು ।
ವೃದ್ಧಿಂ ಚ ಪರಮಾಂ ಬ್ರೂಯಾತ್ ತತ್ಸಂಯೋಗೋದ್ಭವಾಂ ತದಾ ॥೪॥

ಆ ಮನುಷ್ಯನು ಪಾಂಡವರಿಂದ ಕೌರವರಿಗೆ, ಕೌರವರಿಂದ ಪಾಂಡವರಿಗೆ ಆಗಬೇಕಾದ ಅನೇಕ ಕಾರ್ಯಗಳನ್ನು ತಿಳಿದುಕೊಂಡು ಹೋಗಲಿ. ಕೌರವರ ಜೊತೆಯಲ್ಲಿ ಪಾಂಡವರು ಸೇರಿದರೆ, ಇಬ್ಬರಿಗೂ ಅತಿಶಯವಾದ ವೃದ್ಧಿವುಂಟಾಗುವುದೆಂದು ಧರ್ಮರಾಜನಿಗೆ ಹೇಳಬೇಕು.

ಸುಪ್ರೀಯಮಾಣಂ ತ್ವಾಂ ಬ್ರೂಯಾದ್
ರಾಜನ್ ದುರ್ಯೋಧನಂ ತಥಾ ।
ಅಸಕೃದ್ ದ್ರುಪದೇ ಚೈವ ಧೃಷ್ಟದ್ಯುಮ್ನೇ ಚ ಭಾರತ ॥೫॥

ರಾಜನೇ, ಈ ಸಂಬಂಧದಿಂದ ಧೃತರಾಷ್ಟ್ರನಾದ ನಿನಗೂ ಮತ್ತು ದುರ್ಯೋಧನನಿಗೂ ಬಹಳ ಸಂತೋಷವಾಗಿದೆ ಎಂದು ಧರ್ಮರಾಜನಿಗೂ ಮತ್ತು ದ್ರುಪದ, ಧೃಷ್ಟದ್ಯುಮ್ನರಿಗೂ ಅನೇಕಬಾರಿ ಹೇಳಬೇಕು.

ಉಚಿತತ್ವಂ ಪ್ರಿಯತ್ವಂ ಚ ಯೋಗಸ್ಯಾಪಿ ಚ ವರ್ಣಯೇತ್ ।
ಪುನಃ ಪುನಶ್ಚ ಕೌಂತೇಯಾನ್ ಮಾದ್ರೀಪುತ್ರೌ ಚ ಸಾಂತ್ವಯೇತ್ ॥೬॥

ದ್ರುಪದನ ಯೋಗವು ನಮಗೆ ಉಚಿತವೂ ಆಗಿದೆ, ಪ್ರಿಯವೂ ಆಗಿದೆ ಎಂದು ವರ್ಣಿಸಬೇಕು. ಕುಂತಿಯ ಪುತ್ರರನ್ನೂ ಮತ್ತು ಮಾದ್ರಿಯ ಪುತ್ರರನ್ನೂ ಹಿಂದೆ ಮಾಡಿದ ಅಪಚಾರಗಳಿಗಾಗಿ ಪುನಃ ಪುನಃ ಸಮಾಧಾನಪಡಿಸಬೇಕು.

ಹಿರಣ್ಮಯಾನಿ ಶುಭ್ರಾಣಿ ಬಹೂನ್ಯಾಭರಣಾನಿ ಚ ।
ವಚನಾತ್ ತವ ರಾಜೇಂದ್ರ ದ್ರೌಪದ್ಯಾಃ ಸಂಪ್ರಯಚ್ಛತು ॥೭॥

ರಾಜೇಂದ್ರನೇ, ನಿನ್ನ ಆಜ್ಞೆಯಂತೆ ಹಿರಣ್ಮಯವಾದ ಶುಭ್ರವಾದ ಅನೇಕ ಆಭರಣಗಳನ್ನು ದ್ರೌಪದಿಗೆ ತೆಗೆದುಕೊಂಡುಹೋಗಿ ಕೊಡಬೇಕು.

ತಥಾ ದ್ರುಪದಪುತ್ರಾಣಾಂ ಸರ್ವೇಷಾಂ ಭರತರ್ಷಭ ।
ಪಾಂಡವಾನಾಂ ಚ ಸರ್ವೇಷಾಂ ಕುಂತ್ಯಾ ಯುಕ್ತಾನಿ ಯಾನಿ ಚ ॥೮॥

ಭರತರ್ಷಭನೇ, ಹಾಗೆಯೇ, ಎಲ್ಲಾ ದ್ರುಪದಪುತ್ರರಿಗೂ ಮತ್ತು ಎಲ್ಲಾ ಪಾಂಡವರಿಗೂ, ಹಾಗೆಯೇ ಕುಂತಿಗೂ ಯೋಗ್ಯವಾದ ಆಭರಣಗಳನ್ನು ಕೊಡಬೇಕು.

ದತ್ತ್ವಾ ತಾನಿ ಮಹಾರ್ಹಾಣಿ ಪಾಂಡವಾನ್ ಸಂಪ್ರಹರ್ಷಯ ।
ಏವಂ ಸಾಂತ್ವಸಮಾಯುಕ್ತಂ ದ್ರುಪದಂ ಪಾಂಡವೈಃ ಸಹ ।
ಉಕ್ತ್ವಾ ಸೋಽನಂತರಂ ಬ್ರೂಯಾತ್ ತೇಷಾಮಾಗಮನಂ ಪ್ರತಿ ॥೯॥

ಹೀಗೆ ಪಾಂಡವರಿಗೆ ಅನರ್ಘ್ಯವಾದ ಆಭರಣಗಳನ್ನು ಕೊಟ್ಟು ಅವರನ್ನು ಸಂತೋಷಪಡಿಸಬೇಕು. ಹೀಗೆ, ದ್ರುಪದನಿಗೂ ಮತ್ತು ಪಾಂಡವರಿಗೂ ಮೊದಲು ಸಮಾಧಾನದ ಮಾತುಗಳನ್ನಾಡಿ ಅನಂತರ ಪಾಂಡವರನ್ನು ಇಲ್ಲಿಗೆ ಕರೆದುಕೊಂಡು ಬರುವ ವಿಷಯವನ್ನು ಪ್ರಸ್ತಾಪಿಸಬೇಕು.

ಅನುಜ್ಞಾತೇಷು ವೀರೇಷು ಬಲಂ ಗಚ್ಛತು ಶೋಭನಮ್ ।
ದುಃಶಾಸನೋ ವಿಕರ್ಣಶ್ಚ ಪಾಂಡವಾನಾನಯತ್ವಿಹ ॥೧೦॥

ದ್ರುಪದನು ಅನುಮತಿಯನ್ನು ಕೊಟ್ಟಮೇಲೆ, ಇಲ್ಲಿಂದ ನಮ್ಮ ಸೈನ್ಯವು ಹೊರಡಬೇಕು. ದುಶ್ಶಾಸನ ಮತ್ತು ವಿಕರ್ಣರು ಪಾಂಡವರನ್ನು ಇಲ್ಲಿಗೆ ಕರೆತರಲಿ.

ತತಸ್ತೇ ಪಾರ್ಥಿವಶ್ರೇಷ್ಠಾಃ ಪೂಜ್ಯಮಾನಾಃ ಸದಾ ತ್ವಯಾ ।
ಪ್ರಕೃತೀನಾಮನುಮತೇ ಪದೇ ಸ್ಥಾಸ್ಯಂತಿ ಪೈತೃಕೇ ॥೧೧॥

ಅನಂತರ, ಆ ರಾಜಶ್ರೇಷ್ಠರು ನಿನ್ನಿಂದ ಯಾವಾಗಲೂ ಸತ್ಕೃತರಾಗಿ ಪ್ರಜೆಗಳ ಅಭಿಪ್ರಾಯದಂತೆ ಪಾಂಡುವಿನ ಸ್ಥಾನವನ್ನು ಪಡೆಯುವರು.

ಏವಂ ತವ ಮಹಾರಾಜ ತೇಷು ಪುತ್ರೇಷು ಚೈವ ಹಿ ।
ವೃತ್ತಮೌಪಯಿಕಂ ಮನ್ಯೇ ಭೀಷ್ಮೇಣ ಸಹ ಭಾರತ ॥೧೨॥

ಮಹಾರಾಜನೇ, ಹೀಗೆ, ಆ ಪಾಂಡುಪುತ್ರರ ವಿಷಯದಲ್ಲಿ ಇಂತಹ ನಡತೆಯು ಹಿತಕಾರಿಯಾದುದೆಂದು ಭಾವಿಸುತ್ತೇನೆ. ಭಾರತನೇ, ಭೀಷ್ಮರೂ ಹೀಗೆಯೇ ಭಾವಿಸುತ್ತಾರೆ.

ಕರ್ಣಃ

ಯೋಜಿತಾವರ್ಥಮಾನಾಭ್ಯಾಂ ಸರ್ವಕಾರ್ಯೇಷ್ವನಂತರೌ ।
ನ ಮಂತ್ರಯೇತಾಂ ತ್ವಚ್ಛ್ರೇಯಃ ಕಿಮದ್ಭುತತರಂ ತತಃ ॥೧೩॥

ಎಲ್ಲ ಕಾರ್ಯಗಳಲ್ಲಿಯೂ, ಅಂತರಂಗದಲ್ಲಿರುವ, ಅರ್ಥಮಾನಗಳಿಂದ ಸತ್ಕರಿಸಲ್ಪಟ್ಟ ಭೀಷ್ಮದ್ರೋಣರು ನಿನ್ನ ಶ್ರೇಯಸ್ಸನ್ನು ಚಿಂತಿಸುತ್ತಿಲ್ಲ. ಇದಕ್ಕಿಂತ ಆಶ್ಚರ್ಯಕರವಾದುದು ಏನಿದೆ?

ದುಷ್ಟೇನ ಮನಸಾ ಯೋ ವೈ ಪ್ರಚ್ಛನ್ನೇನಾಂತರಾತ್ಮನಾ ।
ಬ್ರೂಯಾನ್ನಿಶ್ಶ್ರೇಯಸಂ ನಾಮ ಕಥಂ ಕುರ್ಯಾತ್ ಸತಾಂ ಮತಮ್ ॥

ಯಾವನು ದುಷ್ಟಮನಸ್ಸನ್ನು ಹೊಂದಿ ತನ್ನ ಅಂತರಂಗದ ಅಭಿಪ್ರಾಯವನ್ನು ಮುಚ್ಚಿಟ್ಟು ಶ್ರೇಯಸ್ಸಲ್ಲದುದನ್ನೇ ಶ್ರೇಯಸ್ಕರವೆಂದು ಹೇಳುತ್ತಾನೆಯೋ, ಅವನು ಸಜ್ಜನರ ಅಭಿಪ್ರಾಯವನ್ನು ಹೇಗೆ ಕಾರ್ಯಗತಗೊಳಿಸುತ್ತಾನೆ?

ನ ಮಿತ್ರಾಣ್ಯರ್ಥಕೃಚ್ಛ್ರೇಷು ಶ್ರೇಯಸೇ ವೇತರಾಯ ವಾ ।
ವಿಧಿಪೂರ್ವಂ ಹಿ ಸರ್ವಸ್ಯ ದುಃಖಂ ವಾ ಯದಿ ವಾ ಸುಖಮ್ ॥೧೫॥

ಅರ್ಥಸಂಕಟವುಂಟಾದಾಗ ಶ್ರೇಯಸ್ಸಿಗಾಗಲೀ ಅಥವಾ ವಿನಾಶಕ್ಕಾಗಲೀ ಮಿತ್ರರು ಕಾರಣರಾಗುವುದಿಲ್ಲ. ಎಲ್ಲರಿಗೂ ದುಃಖವಾಗಲೀ, ಸುಖವಾಗಲೀ, ವಿಧಿಯು ಬರೆದಂತೆ ಆಗುತ್ತದೆ.

ಕೃತಪ್ರಜ್ಞೋಽಕೃತಪ್ರಜ್ಞೋ ಬಾಲೋ ವೃದ್ಧಶ್ಚ ಮಾನವಃ ।
ಸಸಹಾಯೋಽಸಹಾಯಶ್ಚ ಸರ್ವಃ ಸರ್ವತ್ರ ಏಂದತಿ ॥೧೬॥

ವಿದ್ವಾಂಸನಾಗಲಿ ಅಥವಾ ಅಜ್ಞನಾಗಲಿ, ಬಾಲನಾಗಲಿ ಅಥವಾ ವೃದ್ಧನಾಗಲಿ, ಸಹಾಯವನ್ನು ಹೊಂದಿರಲಿ ಅಥವಾ ಹೊಂದದಿರಲಿ, ಪ್ರತಿಯೊಬ್ಬ ಮನುಷ್ಯನು ಎಲ್ಲವನ್ನೂ (ಸುಖವನ್ನೂ ಮತ್ತು ದುಃಖವನ್ನೂ) ಎಲ್ಲ ಕಡೆಗಳಲ್ಲಿಯೂ ಪಡೆಯುತ್ತಾನೆ.

ಶ್ರೂಯತೇ ಹಿ ಪುರಾ ಕಶ್ಚಿದ್ ವಿನಂದ ಇತಿ ವಿಶ್ರುತಃ ।
ಆಸೀದ್ ರಾಜಗೃಹೇ ರಾಜಾ ಮಾಗಧಾನಾಂ ಮಹೀಪತಿಃ ॥೧೭॥

ಹಿಂದೆ ಮಗಧದೇಶದ ರಾಜಧಾನಿಯಾದ ರಾಜಗೃಹದಲ್ಲಿ ವಿನಂದನೆಂಬ ರಾಜನು ಇದ್ದನೆಂದು ಕೇಳಿದ್ದೇವೆ.

ಸ ಹೀನಃ ಕರಣೈಃ ಸರ್ವೈರುಚ್ಛ್ವಾಸಪರಮೋ ನೃಪಃ ।
ಅಮಾತ್ಯಸಂಸ್ಥಃ ಸರ್ವೇಷು ಕಾರ್ಯೇಷ್ವೇವಾಭವತ್ ತದಾ ॥೧೮॥

ಆ ರಾಜನು ಇಂದ್ರಿಯಹೀನನಾಗಿ, ಕೇವಲ ಉಸಿರಾಡುತ್ತಾ, ಆಗ ಎಲ್ಲಾ ಕಾರ್ಯಗಳಲ್ಲಿಯೂ ತನ್ನ ಅಮಾತ್ಯರನ್ನೇ ಅವಲಂಬಿಸಿದನು.

ತಸ್ಯಾಮಾತ್ಯಾ ಬಭೂವುಸ್ತೇ ಅನ್ಯೋನ್ಯಸಹಿತಾಸ್ತದಾ ।
ತಸ್ಯಾಮಾತ್ಯೋ ಮಹಾಕರ್ಣಿರ್ಬಭೂವೈಕೇಶ್ವರಃ ಪುರಾ ॥೧೯॥

ಅವನು ಅಮಾತ್ಯರು ಎಲ್ಲರೂ ಒಂದಾದರು. ಆಗ, ಅವನ ಅಮಾತ್ಯನಾದ ಮಹಾಕರ್ಣಿ ಎಂಬುವವನು ತಾನೇ ಪ್ರಭುವಾದನು.

ಸ ಲಬ್ಧಬಲಮಾತ್ಮಾನಾಂ ಮನ್ಯಮಾನೋऽವಮನ್ಯತೇ ।
ಸ ರಾಜ್ಞೋ ವಸುರತ್ನಾನಿ ಸ್ತ್ರಿಯೋ ಭೋಜ್ಯಾನಿ ಯಾನಿ ಚ ।
ಆದದೇ ಸರ್ವತೋ ಮೂಢ ಐಶ್ವರ್ಯಂ ಚ ಸ್ವಯಂ ತದಾ ॥೨೦॥

ಅವನು ತನಗೆ ಈಗ ಬಲವುಂಟಾಗಿದೆಯೆಂದು ತಿಳಿದು ರಾಜನಿಗೆ ಅವಮಾನವನ್ನು ಮಾಡಿ, ರಾಜನ ಧನರತ್ನಗಳನ್ನೂ, ಸ್ತ್ರೀಯರನ್ನೂ, ಉಳಿದ ಭೋಜ್ಯವಸ್ತುಗಳನ್ನೂ, ಎಲ್ಲ ಐಶ್ವರ್ಯಗಳನ್ನೂ, ಮೂಢನಾಗಿ ತಾನೇ ತೆಗೆದುಕೊಂಡನು.

ತದಾದಾಯ ಚ ಲುಬ್ಧಸ್ಯ ಲಾಭಾಲ್ಲೋಭಃ ಪ್ರವರ್ತತೇ ।
ತಥಾ ಹಿ ಸರ್ವಮಾದಾಯ ರಾಜ್ಯಮಸ್ಯ ಜಿಹೀರ್ಷತಿ ॥೨೧॥

ಅವನ್ನೆಲ್ಲಾ ತೆಗೆದುಕೊಂಡು ಲುಬ್ಧನಾದ ಅವನಿಗೆ ಲಾಭದಿಂದ ಲೋಭವು ಇನ್ನೂ ಹೆಚ್ಚಾಯಿತು. ಅವನು ರಾಜನ ಸರ್ವಸ್ವವನ್ನೂ ತೆಗೆದುಕೊಂಡ ಮೇಲೆ ರಾಜ್ಯವನ್ನು ಅಪಹರಿಸಲು ಇಚ್ಛಿಸಿದನು.

ಹೀನಸ್ಯ ಕರಣೈಃ ಸರ್ವೈರುಚ್ಛ್ವಾಸಪರಮಸ್ಯ ಚ ।
ಯತಮಾನೋ ನ ಶಕ್ನೋತಿ ರಾಜ್ಯಂ ಕರ್ತುಮಿತಿ ಶ್ರುತಿಃ ।
ಕಿಮನ್ಯವಿಹಿತಾ ನೂನಂ ತಸ್ಯ ಸಾ ಪುರುಷೇಂದ್ರತಾ ॥೨೨॥

ತನ್ನ ಎಲ್ಲಾ ಇಂದ್ರಿಯಗಳನ್ನು ಕಳೆದುಕೊಂಡು ಕೇವಲ ಶ್ವಾಸವೊಂದೇ ಉಳಿದಿದ್ದ ಆ ರಾಜನು ಎಷ್ಟು ಪ್ರಯತ್ನಪಟ್ಟರೂ ರಾಜ್ಯವನ್ನು ಆಳಲು ಸಾಧ್ಯವಾಗಲಿಲ್ಲ ಎಂದು ಕೇಳಿದ್ದೇವೆ.

ಮಹಾಕರ್ಣಗೆ ಆ ರಾಜ್ಯಭೋಗವು ವಿಧಿಯಿಂದಲ್ಲದೇ ಬೇರೆ ಯಾರಿಂದಲಾದರೂ ಕೊಡಲ್ಪಟ್ಟಿತೇನು?

ಯದಿ ತೇ ವಿಹಿತಂ ರಾಜ್ಯಂ ಭವಿಷ್ಯತಿ ನ ಸಂಶಯಃ ।
ಮಿಷತಃ ಸರ್ವಲೋಕಸ್ಯ ಸ್ಥಾಸ್ಯತೇ ತ್ವಯಿ ತದ್ ಧ್ರುವಮ್ ॥೨೩॥

ನಿನಗೆ ರಾಜ್ಯವು ದೊರೆಯಬೇಕೆಂದು ವಿಧಿಯ ಕುಪ್ಪಿಯಿದ್ದರೆ, ರಾಜ್ಯವು ನಿಸ್ಸಂಶಯವಾಗಿ ದೊರತೇ ತೀರುವುದು. ಎಲ್ಲ ಜನರು ನೋಡುತ್ತಿರುವಂತೆಯೇ, ಅದು ನಿನ್ನಲ್ಲಿಯೇ ಸ್ಥಿರವಾಗಿ ನಿಲ್ಲುವುದು.

ಅತೋಽನ್ಯಥಾ ಚೇತ್ ವಿಹಿತಂ ಯತಮಾನೋ ನ ಲಪ್ಸ್ಯಸೇ ।
ಏವಂ ವಿದ್ವನ್ನುಪಾದತ್ಸ್ವ ಮಂತ್ರಿಣಾಂ ಸಾಧ್ವಸಾಧುತಾಮ್ ।
ದುಷ್ಟಾನಾಂ ಚೈವ ಬೋದ್ಧವ್ಯಮದುಷ್ಟಾನಾಂ ಚ ಭಾಷಿತಮ್ ॥೨೪॥

ವಿಧಿಯ ಸಂಕಲ್ಪವು ಬೇರೆಯಾಗಿದ್ದರೆ, ಪ್ರಯತ್ನಪಟ್ಟರೂ ನಿನಗೆ ರಾಜ್ಯವು ಲಭಿಸುವುದಿಲ್ಲ. ಇದನ್ನು ತಿಳಿದು ಮಂತ್ರಿಗಳು ಹೇಳುವುದರಲ್ಲಿ ಯಾವುದು ಸಾಧು, ಯಾವುದು ಅಸಾಧು ಎಂದು ಯೋಚಿಸಿ ಸ್ವೀಕಾರಮಾಡು. ದುಷ್ಟವಾದ ಮಂತ್ರಾಲೋಚನೆಯನ್ನೂ ತೆಗೆದುಕೊಳ್ಳಬೇಕು. ಅದುಷ್ಟವಾದ ಮಂತ್ರಾಲೋಚನೆಯನ್ನೂತೆಗೆದುಕೊಳ್ಳಬೇಕು.

ದ್ರೋಣಃ

ವಿದ್ಮ ತೇ ಭಾವದೋಷೇಣ ಯದರ್ಥಮಿದಮುಚ್ಯತೇ ।
ದುಷ್ಟಃ ಪಾಂಡವಹೇತೋಸ್ತ್ವಂ ದೋಷಂ ಖ್ಯಾಪಯಸೇ ತ್ಮನಃ ॥೨೫॥

ಕರ್ಣನೇ, ನೀನು ಯಾವ ಮನೋದೋಷದಿಂದ ಹೀಗೆ ಮಾತನಾಡುತ್ತಿದ್ದೀಯೇ ಎಂದು ನಾವು ತಿಳಿದಿದ್ದೇವೆ. ಪಾಂಡವರ ಮೇಲೆ ದ್ವೇಷವುಳ್ಳ ನೀನು ನಿನ್ನ ದೋಷಗಳನ್ನು ಪಾಂಡವರ ಮೇಲೆ ಹೇರುತ್ತಿದ್ದೀಯೆ.

ಹಿತಂ ತು ಪರಮಂ ಕರ್ಣ ಬ್ರವೀಮಿ ಕುರುವರ್ಧನಮ್ ।
ಅಥ ತ್ವಂ ಮನ್ಯಸೇ ದುಷ್ಟಂ ಬ್ರೂಹಿ ಯತ್ ಪರಮಂ ಹಿತಮ್ ॥೨೬॥

ಕರ್ಣನೇ, ನಾನು ಹೇಳುತ್ತಿರುವುದು ಕುರುವಂಶಕ್ಕೆ ಪರಮಹಿತವಾದ ಧರ್ಮ. ಅದನ್ನು ನೀನು ದುಷ್ಟವೆಂದು ತಿಳಿಯುವುದಾದರೆ, ನಿನ್ನ ದೃಷ್ಟಿಯಲ್ಲಿ ಯಾವುದು ಪರಮಹಿತವೋ ಅದನ್ನು ಹೇಳು.

ಅತೋಽನ್ಯಥಾ ಚೇತ್ ಕ್ರಿಯತೇ ಯದ್ ಬ್ರವೀಮಿ ಪರಂ ಹಿತಮ್।
ಕುರವೋ ವೈ ವಿನಂಕ್ಷ್ಯಂತಿ ನಚಿರೇಣೈವ ಮೇ ಮತಿಃ ॥೨೭॥

ನಾನು ಹೇಳುವ ಹಿತವನ್ನು ಬಿಟ್ಟು ಬೇರೆ ಏನನ್ನಾದರೂ ಮಾಡಿದರೆ, ಕುರುಗಳು ಸ್ವಲ್ಪಕಾಲದಲ್ಲಿಯೇ ವಿನಾಶವನ್ನು ಹೊಂದುವರು ಎಂದು ನನ್ನ ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಐದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಶ್ರುತ್ವಾಥ ಕೃಷ್ಣಮುಪಯಾತಮುರು ಪ್ರದಾಯ
ರತ್ನಂ ಚ ಪಾಂಡುತನಯೇಷು ಗತಂ ಪುನಶ್ಚ।
ತಾತಪ್ಯಮಾನಹೃದಯಾಸ್ತು ಸುಯೋಧನಾದ್ಯಾ
ಮಂತ್ರಂ ಪ್ರಚಕ್ರುರಥ ಕರ್ಣಮುಖಾ ಯಯುಶ್ಚ ॥೧೭೪॥

ಶ್ರೀಕೃಷ್ಣನು ಪುನಃ ಬಂದು ಪಾಂಡವರಿಗೆ ಬಹಳ ರತ್ನಗಳನ್ನಿತ್ತು ಹೋದನೆಂದು ಕೇಳಿ ದುರ್ಯೋಧನಾದಿಗಳು ಮನಸಿನಲ್ಲಿ ಸಂತಾಪಪಟ್ಟು ಮಂತ್ರಾಲೋಚನೆ ಗೈದರು. ಕರ್ಣನನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಹೊರಟರು.

ಯುದ್ಧಾಯ ತೇಷು ಪುನರೇವ ರಥೈಃ ಪ್ರಯಾತೇ-
ಷ್ವಾಹಾಗ್ರಜಂ ಸ ವಿದುರೋಽಪಿ ನದೀಜಮುಖ್ಯಾನ್ ।
ಏತೇ ಹಿ ಪಾಪತಮಚೇತಸ ಏತ್ಯ ಪಾರ್ಥಾನ್
ಯುದ್ಧಾಯ ಮೃತ್ಯುಮುಪಯಾಂತಿ ನ ಸಂಶಯೋಽತ್ರ ॥೧೭೫॥

ಕೌರವರು ಪುನಃ ಯುದ್ಧಕ್ಕಾಗಿ ರಥವೇರಿ ಹೊರಟು ಹೋದಾಗ ವಿದುರ ಧೃತರಾಷ್ಟ್ರನಿಗೂ ಭೀಷ್ಮಾದಿಗಳಿಗೂ ಹೇಳಿದ. 'ದುರ್ಯೋಧನಾದಿಗಳು ಅತ್ಯಂತ ಪಾಪಮಯ ಬುದ್ಧಿಯವರು. ಪಾಂಡವರ ಬಳಿಗೆ ಯುದ್ಧಕ್ಕೆ ಹೊಗಿ ಸಾಯುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಭೀಮಾರ್ಜುನೌ ವಿಷಹಿತುಂ ನ ಹಿ ಕಶ್ಚನಾಸ್ತಿ
ಸಾಮರ್ಥ್ಯಯುಕ್ ಸುರವರೇಷ್ವಪಿ ವರ್ಧಿತಾಸ್ತೇ ।
ಜ್ಞಾತ್ವೈವ ವತ್ಸರತ ಏವ ಮಹಾನಧರ್ಮ-
ಸ್ತೇಷಾಮುಪೇಕ್ಷಣಕೃತಸ್ತದಲಂ ನಿಯುಂಕ್ಷ್ವ ॥೧೭೬॥

ಭೀಮಾರ್ಜುನರನ್ನು ಇದಿರಿಸಲು ಸಾಮರ್ಥ್ಯ ಉಳ್ಳವರು ದೇವೋತ್ತಮರಲ್ಲಿಯೂ ಯಾರೂ ಇಲ್ಲ. ಅವನು ಈಗ ಪೂರ್ಣಬಲಿಷ್ಠರಾಗಿ ಬೆಳೆದುಬಿಟ್ಟಿದ್ದಾರೆ. ಅವರ ವೃತ್ತಾಂತವನ್ನು ತಿಳಿದೂ ನೀನು ಒಂದು ವರ್ಷಕಾಲ ಉಪೇಕ್ಷೆ ಮಾಡಿರುವುದು ಮಹಾಪಾಪಕರವಾಗಿದೆ. ಸಾಕು ಇನ್ನು ಈ ಉಪೇಕ್ಷೆ. ಯಾರಾದರೊಬ್ಬ ರಾಯಭಾರಿಯನ್ನು ಅವರ ಕಡೆಗೆ ಕಳಿಸು.

ಆನೀತಯೇ ಚ ವಿನಿಯುಜ್ಯ ಸುಸಾಂತ್ವಪೂರ್ವ-
ಮಾನೀಯ ಯೋಜಯ ನೃಪೈಷು ತಥಾರ್ಧರಾಜ್ಯಂ ।
ಏವಂ ಕೃತಂ ತವ ಭವೇತ್ ಕುಲವೃದ್ಧಯೇ ಹಿ
ಧರ್ಮಾಯ ಚೋಭಯವಿನಾಶಕರೋಽನ್ಯಥಾ ಸ್ಯಾಃ ॥೧೭೭॥

ರಾಜನೆ, ಪಾಂಡವರನ್ನು ಕರೆತರಲು ಒಬ್ಬ ರಾಯಭಾರಿಯನ್ನು ನೇಮಿಸಿ ಒಳ್ಳೆಯ ಸಾಂತ್ವನ ಪೂರ್ವಕವಾಗಿ ಕರೆಸಿಕೊಂಡು ಪ್ರೀತಿಯಿಂದ ಅವರಿಗೆ ಅರ್ಧರಾಜ್ಯ ಕೊಟ್ಟುಬಿಡು. ಹೀಗೆ ಮಾಡಿದಾಗ ನಿನ್ನ ಕುಲ ಮೆರೆಯುತ್ತದೆ. ನಿನಗೆ ಪುಣ್ಯ ಬರುತ್ತದೆ. ಹೀಗೆ ಮಾಡದಿದ್ದರೆ ಅವೆರಡನ್ನೂ ಕೆಡಿಸಿಕೊಳ್ಳುತ್ತಿ.

★ ★ ★ ★

ಇನ್ನೂರ ಆರನೆಯ ಅಧ್ಯಾಯ

(ವಿದುರನ ಹಿತವಚನ)

ವಿದುರಃ

ರಾಜನ್ ನಿಃಸಂಶಯಂ ಶ್ರೇಯೋ ವಾಚ್ಯಸ್ತ್ವಮಸಿ ಬಾಂಧವೈಃ ।
ನ ತ್ವಂ ಶುಶ್ರೂಷಮಾಣೋ ಹಿ ವಾಕ್ಯಂ ಸಂಪ್ರತಿ ತಿಷ್ಠಸಿ ॥೧॥

ರಾಜನೇ, ನಿಸ್ಸಂಶಯವಾಗಿ ಬಾಂಧವರು ನಿನಗೆ ಶ್ರೇಯಸ್ಸಾಧನವಾದುದನ್ನೇ ಹೇಳಬೇಕು. ಆದರೆ, ಈಗ ನೀನು ಇನ್ನೊಬ್ಬರ ಮಾತನ್ನು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ.

ಪ್ರಿಯಂ ಹಿತಂ ಚ ಯದ್ವಾಕ್ಯಮುಕ್ತವಾನ್ ಕುರುಸತ್ತಮಃ ।
ಭೀಷ್ಮಃ ಶಾಂತನವೋ ರಾಜಾ ಮಹಾವೀರ್ಯಪರಾಕ್ರಮಃ ॥೨॥

ತಥಾ ದ್ರೋಣೇನ ಬಹುಧಾ ಭಾಷಿತಂ ಹಿತಮುತ್ತಮಮ್ ।
ತಚ್ಚ ರಾಧಾಸುತಃ ಕರ್ಣೋ ಮನ್ಯತೇ ನ ಹಿತಂ ವಚಃ ॥೩॥

ಶಂತನುವಿನ ಮಗನಾದ ಮಹಾವೀರ್ಯಪರಾಕ್ರಮವುಳ್ಳ, ಕುರುಶ್ರೇಷ್ಠನಾದ ಭೀಷ್ಮನು ಯಾವ ಹಿತವಾದ ಮತ್ತು ಪ್ರಿಯವಾದ ವಚನಗಳನ್ನು ನುಡಿದನೋ, ಹಾಗೆಯೇ, ದ್ರೋಣರೂ ಸಹ ಅನೇಕ ವಿಧದಲ್ಲಿ ಹಿತವಚನಗಳನ್ನು ಆಡಿದರೋ, ಅದನ್ನು ರಾಧಾಸುತನಾದ ಕರ್ಣನು ಹಿತವಲ್ಲದ ವಚನಗಳೆಂದು ತಿಳಿದಿದ್ದಾನೆ.

ಚಿಂತಯಂಶ್ಚ ನ ಪಶ್ಯಾಮಿ ರಾಜಂಸ್ತವ ಸುಹೃತ್ತಮಮ್ ।
ಆಭ್ಯಾಂ ಪುರುಷಸಿಂಹಾಭ್ಯಾಂ ಯೋ ವಾ ಸ್ಯಾತ್ ಪ್ರಜ್ಞಯಾऽಧಿಕಃ ॥೪॥

ರಾಜನೇ, ನಾನು ಎಷ್ಟು ಯೋಚನೆ ಮಾಡಿದರೂ, ಈ ಇಬ್ಬರು ಪುರುಷಸಿಂಹರಿಗಿಂತ ಪ್ರಜ್ಞೆಯಲ್ಲಿ ಅಧಿಕರಾದವರೂ ಮತ್ತು ನಿನಗೆ ಸುಹೃತ್ತಮರಾದವರೂ ಯಾರೂ ಕಾಣಿಸುತ್ತಿಲ್ಲ.

ಇಮೌ ಹಿ ವೃದ್ಧೌ ವಯಸಾ ರಾಜನೀತಿವಿಶಾರದೌ ।
ಸಮಾನೌ ತ್ವಯಿ ರಾಜೇಂದ್ರ ತೇಷು ಪಾಂಡುಸುತೇಷು ಚ ॥೫॥

ಇವರಿಬ್ಬರೂ ರಾಜನೀತಿವಿಶಾರದರೂ ಮತ್ತು ವಯೋವೃದ್ಧರೂ ಆಗಿದ್ದಾರೆ. ರಾಜೇಂದ್ರನೇ, ಇವರು ನಿನ್ನಲ್ಲಿಯೂ, ಪಾಂಡುಪುತ್ರರಲ್ಲಿಯೂ ಸಮಾನವಾಗಿದ್ದಾರೆ.

ಧರ್ಮೇ ಚಾನವಮೌ ರಾಜನ್ ಸತ್ಯತಾಯಾಂ ಚ ಭಾರತ ।
ರಾಮಾದ್ ದಾಶರಥೇಶ್ಚೈವ ಗಯಾಚ್ಚೈವ ನ ಸಂಶಯಃ ॥೬॥

ಭರತವಂಶದ ರಾಜನೇ, ಇವರಿಬ್ಬರೂ ಧರ್ಮದಲ್ಲಿಯೂ ಮತ್ತು ಸತ್ಯದಲ್ಲಿಯೂ ದಶರಥರಾಮನಿಗಿಂತಲೂ, ಗಯನಿಗಿಂತಲೂ ಕಡಿಮೆಯಿಲ್ಲ ಎನ್ನುವುದರಲ್ಲಿ ಸಂಶಯವಿಲ್ಲ.

ನ ಚೋಕ್ತವಂತಾವಶ್ರೇಯಃ ಪುರಸ್ತಾದಪಿ ಕಿಂಚನ ।
ನ ಚಾಪ್ಯಪಕೃತಂ ಕಿಂಚಿದನಯೋರ್ಲಕ್ಷ್ಯತೇ ತ್ವಯಿ ॥೭॥

ಇದಕ್ಕಿಂತ ಮೊದಲು ನಿನಗೆ ಎಂದೂ ಶ್ರೇಯಸ್ಸಾಗದಿರುವ ವಿಷಯವನ್ನು ಮಾತನಾಡಿಲ್ಲ ಅಥವಾ ನಿನಗೆ ಯಾವ ಅಪಕಾರವನ್ನೂ ಮಾಡಿಲ್ಲ.

ತಾವಿಮೌ ಪುರುಷವ್ಯಾಘ್ರಾವನಾಗಸಿ ನೃಪ ತ್ವಯಿ ।
ನ ಮಂತ್ರಯೇತಾಂ ತ್ವಚ್ಛ್ರೇಯಃ ಕಥಂ ಸತ್ಯಪರಾಕ್ರಮೌ ॥೮॥

ಅಂತಹ ಸತ್ಯಪರಾಕ್ರಮರಾದ ಪುರುಷವ್ಯಾಘ್ರರು ನಿರಪರಾಧಿಯಾದ ನಿನ್ನ ಬಳಿ ಶ್ರೇಯಸ್ಸಾಧನವಲ್ಲದುದನ್ನು ಹೇಗೆ ಹೇಳುತ್ತಾರೆ. (ನಿನ್ನ ಶ್ರೇಯಸ್ಸಾಧನವನ್ನು ಹೇಗೆ ಹೇಳದೇ ಇರುತ್ತಾರೆ)

ಪ್ರಜ್ಞಾವಂತೌ ನೃಪ ಶ್ರೇಷ್ಠಾವಸ್ಮಿಂಲ್ಲೋಕೇ ನರಾಧಿಪ ।
ತ್ವನ್ನಿಮಿತ್ತಮತೋ ನೇಮೌ ಕಿಂಚಿಜ್ಜಿಹ್ಮಂ ವದಿಷ್ಯತಃ ॥೯॥

ರಾಜನೇ, ಇವರಿಬ್ಬರೂ ಪ್ರಜ್ಞಾವಂತರು ಮತ್ತು ಈ ಲೋಕದಲ್ಲಿ ಶ್ರೇಷ್ಠರಾದವರು. ಆದ್ದರಿಂದ ನಿನ್ನ ನಿಮಿತ್ತದಿಂದಾಗಿ ಎಂದೂ ಕಪಟವನ್ನು ಮಾತನಾಡುವುದಿಲ್ಲ.

ಇತಿ ಮೇ ನೈಷ್ಠಿಕೀ ಬುದ್ಧಿರ್ವರ್ತತೇ ಕುರುನಂದನ ।
ನ ಚಾರ್ಥಹೇತೋರ್ಧರ್ಮಜ್ಞೌ ವಕ್ಷ್ಯತಃ ಪಕ್ಷಸಂಶ್ರಿತಮ್ ।
ಏತದ್ಧಿ ಪರಮಂ ಶ್ರೇಯೋ ಮೇನಾತೇ ತವ ಭಾರತ ॥೧೦॥

ಕುರುನಂದನನೇ, ಇದು ನನ್ನ ನಿಶ್ಚಿತವಾದ ಅಭಿಪ್ರಾಯ. ಧರ್ಮಜ್ಞರಾದ ಇವರು ಧನದ ಸಲುವಾಗಿ ಪಕ್ಷವನ್ನು ವಹಿಸಿ ಮಾತನಾಡುವುದಿಲ್ಲ. ಭಾರತನೇ, ಅವರು ನಿನಗೆ ಯಾವುದು ಶ್ರೇಯಸ್ಸೆಂದು ತಿಳಿದಿದ್ದಾರೋ ಅದನ್ನೇ ಹೇಳಿದ್ದಾರೆ.

ಅಥ ತೇ ಹೃದಯೇ ರಾಜನ್ ವಿಶೇಷಸ್ತೇಷು ವರ್ತತೇ ।
ಅಂತರಂ ಸ್ಥಂ ವಿವೃಣ್ವಾನಾಃ ಶ್ರೇಯಃ ಕುರ್ಯುರ್ನ ತೇ ಧ್ರುವಮ್ ॥

ರಾಜನೇ, ನಿನ್ನ ಮನಸ್ಸಿನಲ್ಲಿ ಕೌರವರಿಗೂ ಮತ್ತು ಪಾಂಡವರಿಗೂ ಅಂತರವಿದೆ. ಮೊದಲೇ ಇರುವ ಅಂತರವನ್ನು ಯಾರು ಇನ್ನೂ ವಿಶಾಲಗೊಳಿಸುತ್ತಾರೋ ಅವರೆಂದೂ ನಿನಗೆ ಶ್ರೇಯಸ್ಸನ್ನು ಮಾಡುವುದಿಲ್ಲ ಎಂಬುದು ನಿಶ್ಚಿತ.

ಏತದರ್ಥಂ ಮಹಾತ್ಮಾನಾವಿಮೌ ರಾಜನ್ ಮಹಾದ್ಯುತೀ ।
ನೋಚತುರ್ವಿವೃತಂ ಕಿಂಚಿನ್ನ ಹ್ಯೇಷ ತವ ನಿಶ್ಚಯಃ ॥೧೨॥

ರಾಜನೇ, ಈ ಕಾರಣದಿಂದ ಮಹಾಕಾಂತಿಯುಳ್ಳ ಈ ಇಬ್ಬರು ಮಹಾನುಭಾವರು ನಿನ್ನ ಎದುರಿಗೆ ನಿನ್ನ ಮಗನ ದೋಷವನ್ನು ಸ್ಪಷ್ಟವಾಗಿ ಹೇಳಲಿಲ್ಲ. ಆದರೆ, ನಿನ್ನ ಮನಸ್ಸಿನಲ್ಲಿ ಅವರು ಹೇಳಿದ ನಿಶ್ಚಯವಿಲ್ಲ.

ತಥಾಪ್ಯಶಕ್ಯತಾಂ ತೇಷಾಮಾಹತುಃ ಪುರುಷರ್ಷಭೌ ।
ತತ್ ತಥಾ ಪುರುಷವ್ಯಾಘ್ರ ತವ ತದ್ ಭದ್ರಮಸ್ತು ತೇ ॥೧೩॥

ಈ ಪುರುಷರ್ಷಭರು ಪಾಂಡವರನ್ನು ಗೆಲ್ಲುವುದು ಅಶಕ್ಯವೆಂದು ಏನು ಹೇಳಿದರೋ ಅದು ಹಾಗೆಯೇ ಸರಿ. ಪುರುಷವ್ಯಾಘ್ರನೇ, ನಿನಗೆ ಮಂಗಳವಾಗಲಿ.

ಕಥಂ ಹಿ ಪಾಂಡವಃ ಶ್ರೀಮಾನ್ ಸವ್ಯಸಾಚೀ ಧನಂಜಯಃ ।
ಶಕ್ಯೋ ಹಿ ಜೇತುಂ ಸಂಗ್ರಾಮೇ ರಾಜನ್ ಮಘವತಾऽಪಿ ಹಿ ॥೧೪॥

ರಾಜನೇ, ಕಾಂತಿಯುಕ್ತನೂ, ಸವ್ಯಸಾಚಿಯೂ ಆದ ಪಾಂಡುಪುತ್ರನಾದ ಅರ್ಜುನನನ್ನು ಯುದ್ಧದಲ್ಲಿ ಇಂದ್ರನಾದರೂ ಸಹ ಹೇಗೆ ಗೆಲ್ಲುತ್ತಾನೆ?

ಭೀಮಸೇನೋ ಮಹಾಬಾಹುರ್ನಾಗಾಯುತಬಲೋ ಮಹಾನ್ ।
ಕಥಂ ಹಿ ಯುಧಿ ಶಕ್ಯೇತ ವಿಜೇತುಮಮರೈರಪಿ ॥೧೫॥

ಹತ್ತುಸಾವಿರ ಆನೆಗಳ ಬಲವುಳ್ಳ ಮಹಾಬಾಹುವಾದ ಉನ್ನತನಾದ ಭೀಮಸೇನನನ್ನು ಯುದ್ಧದಲ್ಲಿ ದೇವತೆಗಳಾದರೂ ಗೆಲ್ಲಲು ಹೇಗೆ ಸಾಧ್ಯ ?

ತಥೈವ ಕೃತಿನೌ ಯುದ್ಧೇ ಯಮೌ ಯಮಸುತಾವಿವ ।
ಕಥಂ ವಿಷಹಿತುಂ ಶಕ್ಯೋ ರಣೇ ಜೀವಿತುಮಿಚ್ಛತಾ ॥೧೬॥

ಹಾಗೆಯೇ, ಯಮಸುತರಂತೆ ಯುದ್ಧದಲ್ಲಿ ಕುಶಲರಾದ ನಕುಲಸಹದೇವರನ್ನು ಬದುಕಲು ಬಯಸುವ ಯಾವನು ಯುದ್ಧದಲ್ಲಿ ಎದುರಿಸಲು ಸಾಧ್ಯ ?

ಯಸ್ಮಿನ್ ಧೃತಿರನುಕ್ರೋಶಃ ಕ್ಷಮಾ ಸತ್ಯಂ ಪರಾಕ್ರಮಃ ।
ನಿತ್ಯಾನಿ ಪಾಂಡವೇ ಜ್ಯೇಷ್ಠೇ ಸ ಜಯೀ ನ ಕಥಂ ರಣೇ ॥೧೭॥

ಯಾವ ಪಾಂಡುಪುತ್ರನಾದ ಯುಧಿಷ್ಠಿರನಲ್ಲಿ ಧೈರ್ಯವೂ, ದಯೆಯೂ, ಕ್ಷಮೆಯೂ, ಸತ್ಯವೂ ಮತ್ತು ಪರಾಕ್ರಮವೂ ಯಾವಾಗಲೂ ಇವೆಯೋ, ಅಂತಹ ಪಾಂಡವಜ್ಯೇಷ್ಠನಾದ ಧರ್ಮರಾಜನು ಯುದ್ಧದಲ್ಲಿ ಹೇಗೆ ಜಯಿಸದೇ ಇರುತ್ತಾನೆ.

ಯೇಷಾಂ ಪಕ್ಷಧರೋ ರಾಮೋ ಯೇಷಾಂ ಮಂತ್ರೀ ಚ ಕೇಶವಃ ।
ಕಿಂ ನು ತೈರಜಿತಂ ಸಂಖ್ಯೇ ಯೇಷಾಂ ಪಕ್ಷೇ ಚ ಸಾತ್ಯಕಿಃ ॥೧೮॥

ಯಾರ ಪಕ್ಷದಲ್ಲಿ ಬಲರಾಮನು ಮಂತ್ರಿಯಾಗಿ ಕೇಶವನು ಮತ್ತು ಸಾತ್ಯಕಿಯೂ ಇರುತ್ತಾರೋ, ಅಂತಹವನು ಯುದ್ಧದಲ್ಲಿ ಗೆಲ್ಲಲಾರದುದು ಏನಿದೆ?

ದ್ರುಪದಃ ಶ್ವಶುರೋ ಯೇಷಾಂ ಯೇಷಾಂ ಸ್ಯಾಲಾಶ್ಚ ಪಾರ್ಷತಾಃ ।
ಧೃಷ್ಟದ್ಯುಮ್ನಮುಖಾ ವೀರಾ ಭ್ರಾತರೋ ದ್ರುಪದಾತ್ಮಜಾಃ ।
ಚೈದ್ಯಶ್ಚ ಯೇಷಾಂ ಭ್ರಾತಾ ಚ ಶಿಶುಪಾಲೋ ಮಹಾರಥಃ ॥೧೯॥

ಸೋಽಶಕ್ಯತಾಂ ಚ ವಿಜ್ಞಾಯ ತೇಷಾಂ ಯುದ್ಧೇನ ಭಾರತ ।
ದಾಯಾದ್ಯತಾಂ ಚ ಧರ್ಮೇಣ ಸಮ್ಯಕ್ ತೇಷು ಸಮಾಚರ ॥೨೦॥

ಯಾರಿಗೆ ದ್ರುಪದನು ಮಾವನೋ, ಯಾರಿಗೆ ಧೃಷ್ಟದ್ಯುಮ್ನ ಮೊದಲಾದ ದ್ರುಪದನ ಮಕ್ಕಳೆಲ್ಲರೂ ಭಾವಂದಿರೋ, ಯಾರಿಗೆ ಮಹಾರಥನಾದ ಶಿಶುಪಾಲನು ಅಣ್ಣನಾಗಿದ್ದಾನೆಯೋ, ಅಂತಹವರನ್ನು ಯುದ್ಧದಲ್ಲಿ ಗೆಲ್ಲುವುದು ಅಸಾಧ್ಯವೆಂದು ತಿಳಿದು, ಅವರು ನಿನ್ನ ದಾಯಾದಿಗಳು ಎಂದೂ ತಿಳಿದುಕೊಂಡು ಅವರಲ್ಲಿ ಧರ್ಮದಿಂದ ನಡೆದುಕೋ.

ಇದಂ ನಿರ್ದಗ್ಧಮಯಶಃ ಪುರೋಚನಕೃತಂ ಮಹತ್ ।
ತೇಷಾಮನುಗ್ರಹೇಣಾದ್ಯ ರಾಜನ್ ಪ್ರಕ್ಷಾಲಯಾತ್ಮನಃ ॥೨೧॥

ರಾಜನೇ, ಪುರೋಚನನು ಮಾಡಿದ ಪಾಪಕೃತ್ಯದಿಂದ ಪಾಂಡವರು ಸುಟ್ಟುಹೋದರು ಎಂಬ ಮಾತಿನಿಂದ ಉಂಟಾದ ದೊಡ್ಡ ಅಪಕೀರ್ತಿಯನ್ನು ಈ ದಿನ ಪಾಂಡವರ ಮೇಲೆ ಅನುಗ್ರಹವನ್ನು ಮಾಡಿ ತೊಳೆದುಕೊ.

ತೇಷಾಮನುಗ್ರಹಶ್ಚಾಯಂ ಸರ್ವೇಷಾಂ ಚೈವ ನಃ ಕುಲೇ ।
ಜೀವಿತೇ ಪರಮಂ ಶ್ರೇಯಃ ಕ್ಷತ್ರಸ್ಯ ಚ ವಿವರ್ಧನಮ್ ॥೨೨॥

ಅವರಿಗೆ ಮಾಡುವ ಅನುಗ್ರಹವು ನಮ್ಮ ಕುಲದಲ್ಲಿರುವ ಎಲ್ಲರಿಗೂ ಶುಭದಾಯಕವಾಗುತ್ತದೆ. ಪಾಂಡವರು ಬದುಕಿದ್ದರೆ, ನಮಗೆ ಪರಮಶ್ರೇಯಸ್ಸೂ, ಕ್ಷತ್ರಿಯರಿಗೆ ಅಭಿವೃದ್ಧಿಯೂ ಉಂಟಾಗುತ್ತದೆ.

ದ್ರುಪದೋ ಹಿ ಮಹಾನ್ ರಾಜಾ ಕೃತವೈರಶ್ಚ ನಃ ಪುರಾ ।
ತಸ್ಯ ಸಂಗ್ರಹಣಂ ಶ್ರೇಯಃ ಸ್ವಪಕ್ಷಸ್ಯ ಚ ವರ್ಧನಮ್ ॥೨೩॥

ದ್ರುಪದನು ದೊಡ್ಡರಾಜ. ನಾವು ಹಿಂದೆ ಅವನಿಗೆ ವಿರೋಧವನ್ನು ಮಾಡಿದ್ದೇವೆ. ಅವನನ್ನು ನಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದು ಒಳ್ಳೆಯದು. ಅದರಿಂದ ನಮ್ಮ ಪಕ್ಷವೂ ಬೆಳೆಯುತ್ತದೆ.

ಬಲವಂತಶ್ಚ ದಾಶಾರ್ಹಾ ಬಹವಶ್ಚ ವಿಶಾಂಪತೇ ।
ಯತಃ ಕೃಷ್ಣಸ್ತತಸ್ತೇ ಸ್ಯುರ್ಯತಃ ಕೃಷ್ಣಸ್ತತೋ ಜಯಃ ॥೨೪॥

ರಾಜನೇ, ದಾಶಾರ್ಹರು ಬಲಿಷ್ಠರೂ ಮತ್ತು ಅನೇಕ ಸಂಖ್ಯೆಯಲ್ಲಿರುವವರು. ಕೃಷ್ಣನು ಎಲ್ಲಿರುತ್ತಾನೋ ಅಲ್ಲಿಯೇ ಅವರೂ ಇರುತ್ತಾರೆ. ಕೃಷ್ಣನು ಎಲ್ಲಿರುತ್ತಾನೋ ಅಲ್ಲಿಯೇ ಜಯವೂ ಲಭಿಸುತ್ತದೆ.

ಯಚ್ಚ ಸಾಂತ್ವೇನ ಶಕ್ಯೇತ ಕಾರ್ಯಂ ಸಾಧಯಿತುಂ ನೃಪ ।
ಕೋ ದೈವಶಪ್ತಸ್ತತ್ ಕರ್ತುಂ ವಿಗ್ರಹೇಣ ಸಮಾಚರೇತ್ ॥೨೫॥

ರಾಜನೇ, ಯಾವ ಕಾರ್ಯಗಳನ್ನು ಸಮಾಧಾನದ ಮಾತುಗಳನ್ನಾಡಿ ಸಾಧಿಸಲು ಸಾಧ್ಯವೋ, ಅದನ್ನು ಯಾವ ದೈವಶಪ್ತನು ವಿರೋಧದಿಂದ ಸಂಪಾದಿಸಲು ಬಯಸುತ್ತಾನೆ.

ಶ್ರುತ್ವಾ ಚ ಜೀವತಃ ಪಾರ್ಥಾನ್ ಪೌರಜಾನಪದಾ ಜನಾಃ ।
ಅಭವನ್ ಮುದಿತಾ ವೃದ್ಧಸ್ತೇಷಾಂ ರಾಜನ್ ಕುರು ಪ್ರಿಯಮ್ ॥೨೬॥

ಪಾಂಡವರು ಬದುಕಿದ್ದಾರೆಂದು ಕೇಳಿ ಪೌರಜಾನಪದರೆಲ್ಲರೂ ಸಂತೋಷವನ್ನು ಪಟ್ಟರು. ರಾಜನೇ, ವೃದ್ಧನಾದ ನೀನು ಅವರಿಗೆ ಪ್ರಿಯವನ್ನು ಮಾಡು.

ದುರ್ಯೋಧನಶ್ಚ ಕರ್ಣಶ್ಚ ಶಕುನಿಶ್ಚಾಪಿ ಸೌಬಲಃ ।
ಅಧರ್ಮಾಶ್ಚಾಪಿ ದುಷ್ಪ್ರಜ್ಞಾ ಬಾಲಾ ಮೈಷಾಂ ವಚಃ ಕೃಥಾಃ ॥೨೭॥

ದುರ್ಯೋಧನ, ಕರ್ಣ ಮತ್ತು ಶಕುನಿ ಇವರು ಅಧರ್ಮರತರಾದ ದುರ್ಬುದ್ಧಿಯುಳ್ಳ ಬಾಲಕರು. ಅವರ ಮಾತಿನಂತೆ ನಡೆಯಬೇಡ.

ಉಕ್ತಮೇತನ್ಮಯಾ ರಾಜನ್ ಪುರಾ ಗುಣವತಸ್ತವ ।
ದುರ್ಯೋಧನಾಪರಾಧೇನ ಪ್ರಜೇಯಂ ತವ ನಶ್ಯತಿ ॥೨೮॥

ರಾಜನೇ, ಗುಣವಂತನಾದ ನಿನಗೆ ನಾನು ಹಿಂದೆಯೇ ಈ ವಿಷಯವನ್ನು ಹೇಳಿದ್ದೇನೆ. ದುರ್ಯೋಧನನ ಅಪರಾಧದಿಂದ ನಿನ್ನ ಸಂತಾನವು ನಾಶವಾಗುತ್ತಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಷಡಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಆರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಇತ್ಯುಕ್ತವತ್ಯನು ತಥೇತ್ಯವದನ್ನದೀಜೋ
ದ್ರೋಣಃ ಕೃಪಶ್ಚ ವಿದುರಂ ಸ ನೃಪೋಽಪ್ಯುವಾಚ ।
ಯಾಹ್ಯಾನಯೇತಿ ಸ ಚ ವೇಗವತಾ ರಥೇನ
ತತ್ರಾಗಮತ್ ತದನು ತೈರಭಿಪೂಜಿತಶ್ಚ ॥೧೭೮॥

ವಿದುರ ಹೀಗೆ ಹೇಳಿದಾಗ ಭೀಷ್ಮದ್ರೋಣಕೃಪರು ಹಾಗೆ ಮಾಡುವುದೇ ಯುಕ್ತ ಎಂದರು. ಧೃತರಾಷ್ಟ್ರ ವಿದುರನಿಗೆ ಹೇಳಿದ. 'ನೀನೇ ಹೋಗು ಅವರನ್ನು ಕರೆದು ಬಾ'. ಒಡನೆ ವಿದುರ ವೇಗದ ರಥವೇರಿ ಪಾಂಚಾಲನಗರಕ್ಕೆ ಹೋದ. ಅಲ್ಲಿ ಪಾಂಡವರಿಂದ ಸತ್ಕೃತನಾದ.

ತತ್ಕಾಲ ಏವ ವಸುದೇವಸುತಶ್ಚ ಕೃಷ್ಣೋ
ವ್ಯಾಸಶ್ಚ ತಾನುಪಸಮೇತ್ಯ ದುರಂತಶಕ್ತೀ ।
ಆದಾಯ ಕುಂತಿಸಹಿತಾನ್ ವಿದುರೇಣ ಯುಕ್ತೌ
ನಾಗಾಹ್ವಯಂ ಪುರಮಿತಾಂ ಸಹ ಭಾರ್ಯಯೈವ ॥೧೭೯॥

ಅದೇ ಕಾಲದಲ್ಲಿ ಅನಂತಶಕ್ತಿಯುಳ್ಳ ಶ್ರೀಕೃಷ್ಣ ಮತ್ತು ವೇದವ್ಯಾಸರು ಪಾಂಡವರಲ್ಲಿಗೆ ಬಂದ ವಿದುರನೊಂದಿಗೆ ಸೇರಿದರು. ಪಾಂಡವರನ್ನು ಕುಂತಿ ಮತ್ತು ದ್ರೌಪದಿಯರೊಂದಿಗೆ ಹಸ್ತಿನಾವತಿಗೆ ಕರೆತಂದರು.

★ ★ ★ ★

ಇನ್ನೂರ ಏಳನೆಯ ಅಧ್ಯಾಯ

(ಪಾಂಡವರನ್ನು ತರಲು ಪಾಂಚಾಲದೇಶಕ್ಕೆ ವಿದುರನ ಪ್ರಯಾಣ. ಅಲ್ಲಿ ಅವನ ಮಧುರವಚನಗಳು)

ಧೃತರಾಷ್ಟ್ರಃ

ಭೀಷ್ಮಃ ಶಾಂತನವಶ್ಚೈವ ದ್ರೋಣಶ್ಚೈವ ಮಹಾಮತಿಃ ।
ಹಿತಂ ಪರಮಕಂ ವಾಕ್ಯಂ ತ್ವಂ ಚ ಸತ್ಯಂ ಬ್ರವೀಷಿ ಮಾಮ್ ॥೧॥

ಶಂತನುವಿನ ಪುತ್ರರಾದ ಭೀಷ್ಮರು, ಮಹಾಮತಿಗಳಾದ ದ್ರೋಣರು, ಮತ್ತು ನೀನು ಸತ್ಯವಾಗಿ ಪರಮಹಿತವನ್ನೇ ಹೇಳುತ್ತಿದ್ದೀರಿ.

ಯಥೈವ ಪಾಂಡೋಸ್ತೇ ವೀರಾಃ ಕುಂತೀಪುತ್ರಾ ಮಹಾಬಲಾಃ ।
ತಥೈವ ಧರ್ಮತಃ ಸರ್ವೇ ಮಮ ಪುತ್ರಾ ನ ಸಂಶಯಃ ॥೨॥

ಕುಂತೀಪುತ್ರರಾದ ಮಹಾಬಲರಾದ, ವೀರರಾದ ಪಾಂಡವರು ಹೇಗೋ, ನನಗೆ ಧರ್ಮದ ದೃಷ್ಟಿಯಿಂದ ನನ್ನ ಎಲ್ಲಾ ಪುತ್ರರೂ ಹಾಗೆಯೇ. ಇದರಲ್ಲಿ ಸಂಶಯವಿಲ್ಲ.

ಯಥೈವ ಮಮ ಪುತ್ರಾಣಾಮಿದಂ ರಾಜ್ಯಂ ವಿಧೀಯತೇ ।
ತಥೈವ ಪಾಂಡುಪುತ್ರಾಣಾಮಿದಂ ರಾಜ್ಯಮಸಂಶಯಮ್ ॥೩॥

ಹೇಗೆ ನನ್ನ ಪುತ್ರರಿಗೆ ಈ ರಾಜ್ಯವು ಪ್ರಾಪ್ತವಾಗುತ್ತದೋ ಹಾಗೆಯೇ, ಪಾಂಡುಪುತ್ರರಿಗೆ ನಿಸ್ಸಂಶಯವಾಗಿ ಈ ರಾಜ್ಯವು ಪ್ರಾಪ್ತವಾಗುತ್ತದೆ.

ಕ್ಷತ್ತರಾನಯ ಗಚ್ಛೈತಾನ್ ಸಹ ಮಾತ್ರಾ ಸುಸತ್ಕೃತಾನ್ ।
ತಯಾ ಚ ದೇವರೂಪಿಣ್ಯಾ ಕೃಷ್ಣಯಾ ಸಹ ಭಾರತ ॥೪॥

ವಿದುರನೇ, ನೀನು ಹೋಗಿ ತಾಯಿಯಾದ ಕುಂತಿಯನ್ನು ಮತ್ತು ಪಾಂಡವರನ್ನು ಸತ್ಕರಿಸಿ ದೇವರೂಪಿಣಿಯಾದ ಕೃಷ್ಣೆಯ ಜೊತೆಯಲ್ಲಿ ಅವರನ್ನು ಕರೆದುಕೊಂಡು ಬಾ.

ದಿಷ್ಟ್ಯಾ ಜೀವಂತಿ ತೇ ಪಾರ್ಥಾ ದಿಷ್ಟ್ಯಾ ಜೀವತಿ ಸಾ ಪೃಥಾ ।
ದಿಷ್ಟ್ಯಾ ದ್ರುಪದಕನ್ಯಾಂ ಚ ಲಬ್ಧವಂತೋ ಮಹಾರಥಾಃ ॥೫॥

ದೇವರ ದಯೆಯಿಂದ ಪಾಂಡವರು ಬದುಕಿದ್ದಾರೆ ಮತ್ತು ಕುಂತಿಯು ಬದುಕಿದ್ದಾಳೆ. ದೇವರ ದಯೆಯಿಂದ ಮಹಾರಥರಾದ ಪಾಂಡವರು ದ್ರುಪದಪುತ್ರಿಯನ್ನು ಪಡೆದಿದ್ದಾರೆ.

ದಿಷ್ಟ್ಯಾ ವರ್ಧಾಮಹೇ ಸರ್ವೇ ದಿಷ್ಟ್ಯಾ ಶಾಂತಃ ಪುರೋಚನಃ ।
ದಿಷ್ಟ್ಯಾ ಮಮ ಪರಂ ದುಃಖಮಪನೀತಂ ಮಹಾದ್ಯುತೇ ।
ತ್ವಮೇವ ಗತ್ವಾ ವಿದುರ ತಾನಿಹಾನಯ ಮಾಚಿರಮ್ ॥೬॥

ದೇವರ ದಯೆಯಿಂದ ನಾವೆಲ್ಲರೂ ಅಭಿವೃದ್ಧಿಯನ್ನು ಹೊಂದುತ್ತಿದ್ದೇವೆ. ದೇವರ ದಯೆಯಿಂದಲೇ ಪುರೋಚನನು ನಾಶವನ್ನು ಹೊಂದಿದ್ದಾನೆ. ಮಹಾದ್ಯುತಿಯಾದ ವಿದುರನೇ, ದೇವರ ದಯೆಯಿಂದ ನನ್ನ ಪರಮದುಃಖವು ಪರಿಹಾರವಾಯಿತು. ನೀನೇ ಹೋಗಿ ಅವರನ್ನು ಶೀಘ್ರವಾಗಿ ಇಲ್ಲಿಗೆ ಕರೆದುಕೊಂಡು ಬಾ.

ವೈಶಂಪಾಯನಃ

ಏವಮುಕ್ತಸ್ತತಃ ಕ್ಷತ್ತಾ ರಥಮಾರುಹ್ಯ ಶೀಘ್ರಗಮ್ ।
ಅಗಾತ್ ಕತಿಪಯಾಹೋಭಿಃ ಪಾಂಚಾಲಾನ್ ರಾಜಧರ್ಮವಿತ್ ॥೭॥

ಧೃತರಾಷ್ಟ್ರನು ಹೀಗೆ ಹೇಳುತ್ತಿರಲು ರಾಜಧರ್ಮವನ್ನು ತಿಳಿದ ವಿದುರನು ಶೀಘ್ರಗಾಮಿಯಾದ ರಥವನ್ನು ಏರಿ ಕೆಲವು ದಿವಸಗಳು ಪ್ರಯಾಣಮಾಡಿ ಪಾಂಚಾಲದೇಶವನ್ನು ಸೇರಿದನು.

ತತೋ ಜಗಾಮ ವಿದುರೋ ಧೃತರಾಷ್ಟ್ರಸ್ಯ ಶಾಸನಾತ್ ।
ಸಕಾಶಂ ಯಜ್ಞಸೇನಸ್ಯ ಪಾಂಡವಾನಾಂ ಚ ಭಾರತ ॥೮॥

ಭಾರತನೇ, ಅನಂತರ ಧೃತರಾಷ್ಟ್ರನ ಶಾಸನದಂತೆ ವಿದುರನು ಯಜ್ಞಸೇನ ಮತ್ತು ಪಾಂಡವರ ಬಳಿಗೆ ಹೋದನು.

ಆಗತಂ ವಿದುರಂ ಶ್ರುತ್ವಾ ದ್ರುಪದೋ ರಾಜಸತ್ತಮಃ ।
ಸ್ವಪುತ್ರೈಃ ಸಹ ಧರ್ಮಾತ್ಮಾ ಪೂಜಯಾಮಾಸ ಧರ್ಮತಃ ॥೯॥

ವಿದುರನು ಬಂದುದನ್ನು ಕೇಳಿದ ಧರ್ಮಾತ್ಮನಾದ ರಾಜಶ್ರೇಷ್ಠನಾದ ದ್ರುಪದನು, ತನ್ನ ಸುತರಿಂದೊಡಗೂಡಿ ಅವನನ್ನು ಧರ್ಮದಿಂದ ಪೂಜಿಸಿದನು.

ತತ್ರ ಗತ್ವಾ ಚ ಧರ್ಮಜ್ಞಃ ಸರ್ವಶಾಸ್ತ್ರವಿಶಾರದಃ ।
ದ್ರುಪದಂ ನ್ಯಾಯತೋ ರಾಜನ್ ಸಂಯುಕ್ತಮುಪತಸ್ಥಿವಾನ್ ॥೧೦॥

ರಾಜನೇ, ಸರ್ವಶಾಸ್ತ್ರವಿಶಾರದನೂ ಮತ್ತು ಧರ್ಮಜ್ಞನೂ ಆದ ವಿದುರನು, ನ್ಯಾಯದಿಂದ ದ್ರುಪದನನ್ನು ಸಂಧಿಸಿ, ಅವನ ಸಮೀಪದಲ್ಲಿ ಕುಳಿತನು.

ಸ ಚಾಪಿ ಪ್ರತಿಜಗ್ರಾಹ ಧರ್ಮೇಣ ವಿದುರಂ ತತಃ ।
ಚಕ್ರೇ ಪೂಜಾಂ ಯಥಾನ್ಯಾಯಂ ವಿದುರಸ್ಯ ಮಹಾತ್ಮನಃ ॥೧೧॥

ಆಗ ದ್ರುಪದನೂ ಸಹ ಮಹಾತ್ಮನಾದ ವಿದುರನನ್ನು ಧರ್ಮದಿಂದ ಸ್ವೀಕರಿಸಿ, ಅವನಿಗೆ ಶಾಸ್ತ್ರವಿಧಾನದಂತೆ ಪೂಜೆಯನ್ನು ಮಾಡಿದನು.

ಚಕ್ರತುಶ್ಚ ಯಥಾನ್ಯಾಯಂ ಕುಶಲಪ್ರಶ್ನಸಂವಿದಮ್ ।
ದದರ್ಶ ಪಾಂಡವಾಂಸ್ತತ್ರ ವಾಸುದೇವಂ ಚ ಭಾರತ ॥೧೨॥

ಭಾರತನೇ, ಅವರು ಅಲ್ಲಿ ಪರಸ್ಪರವಾಗಿ ಯಥೋಚಿತವಾಗಿ ಕುಶಲಪ್ರಶ್ನೆಯನ್ನು ಮಾಡಿದರು. ವಿದುರನು ಅಲ್ಲಿ ಪಾಂಡವರನ್ನೂ ಮತ್ತು ಕೃಷ್ಣನನ್ನೂ ನೋಡಿದನು.

ತತಃ ಸ್ನೇಹಾತ್ ಪರಿಷ್ವಜ್ಯ ಪಪ್ರಚ್ಛಾನಾಮಯಂ ತತಃ ।
ವಚನಾದ್ ಧೃತರಾಷ್ಟ್ರಸ್ಯ ಸ್ನೇಹಯುಕ್ತಂ ಪುನಃ ಪುನಃ ।
ತೈಶ್ಚಾಪ್ಯಮಿತಬುದ್ಧಿಃ ಸ ಪೂಜಿತೋಽಥ ಯಥಾಕ್ರಮಮ್ ॥೧೩॥

ಆಗ ಅವನು ಪಾಂಡವರನ್ನು ಪ್ರೀತಿಯಿಂದ ಆಲಿಂಗಿಸಿ, ಧೃತರಾಷ್ಟ್ರನ ಮಾತಿನಂತೆ, ಸ್ನೇಹದಿಂದ ಮತ್ತೆ ಮತ್ತೆ ಅವರ ಕ್ಷೇಮವನ್ನು ಕೇಳಿದನು. ಅಮಿತಬುದ್ಧಿಯಾದ ವಿದುರನು ಪಾಂಡವರಿಂದಲೂ ಯಥಾಕ್ರಮವಾಗಿ ಪೂಜಿಸಲ್ಪಟ್ಟನು.

ಪಾಂಡವಾ ವಿನಯೋಪೇತಾ ನತ್ವಾಽಽಲಿಂಗ್ಯ ವಿಶಾಂಪತೇ ।
ದೃಷ್ಟ್ವಾ ಮುಹುರ್ಮುಹೂ ರಾಜನ್ ಹರ್ಷಾದಶ್ರೂಣ್ಯವರ್ತಯನ್ ॥೧೪॥

ರಾಜನೇ, ವಿನಯಶೀಲರಾದ ಪಾಂಡವರು, ವಿದುರನಿಗೆ ನಮಸ್ಕರಿಸಿ ಅವನನ್ನು ಆಲಿಂಗಿಸಿ ಮತ್ತೆ ಮತ್ತೆ ಅವನನ್ನು ನೋಡಿ ಸಂತೋಷದಿಂದ ಕಣ್ಣೀರನ್ನು ಸುರಿಸಿದರು.

ದೃಷ್ಟ್ವಾ ಕುಶಲಿನಶ್ಚೈತಾನ್ ತತಸ್ತಾನ್ ಪಾಂಡುನಂದನಾನ್ ।
ಪ್ರದದೌ ಚಾಪಿ ರತ್ನಾನಿ ವಿವಿಧಾನಿ ವಸೂನಿ ಚ ॥೧೫॥

ಅನಂತರ ವಿದುರನು ಪಾಂಡವರು ಕ್ಷೇಮದಿಂದ ಇರುವುದನ್ನು ನೋಡಿ, ಅವರಿಗೆ ಅನೇಕ ವಿಧವಾದ ರತ್ನಗಳನ್ನೂ ಮತ್ತು ಧನವನ್ನೂ ಕೊಟ್ಟನು.

ಪಾಂಡವಾನಾಂ ಚ ಕುಂತ್ಯಾಶ್ಚ ದ್ರೌಪದ್ಯಾಶ್ಚ ವಿಶೇಷತಃ ।
ದ್ರುಪದಸ್ಯ ಚ ಪುತ್ರಾಣಾಂ ತಥಾ ದತ್ತಾನಿ ಕೌರವೈಃ ॥೧೬॥

ಪಾಂಡವರಿಗೂ, ಕುಂತಿಗೂ ಮತ್ತು ವಿಶೇಷವಾಗಿ ದ್ರೌಪದಿಗೂ ಮತ್ತು ದ್ರುಪದನ ಮಕ್ಕಳಿಗೂ ಕೌರವರು ಕೊಟ್ಟ ಅನೇಕ ರತ್ನಗಳನ್ನು ಕೊಟ್ಟನು.

ಸಂಕರ್ಷಣಂ ವಾಸುದೇವಂ ಪ್ರಣಮ್ಯ ವಿದುರಸ್ತತಃ ।
ಆಸನೇ ಕಾಂಚನೇ ಶುಭ್ರೇ ನಿಷಸಾದ ಮಹಾಮತಿಃ ॥೧೭॥

ಅನಂತರ ಮಹಾಮತಿಯಾದ ವಿದುರನು ಬಲರಾಮನಿಗೂ ಮತ್ತು ಕೃಷ್ಣನಿಗೂ ನಮಸ್ಕಾರವನ್ನು ಮಾಡಿ, ಸುವರ್ಣಮಯವಾದ ಪೀಠದಲ್ಲಿ ಕುಳಿತುಕೊಂಡನು.

ಕೃತ್ವಾ ಮಿಥಸ್ತು ಸಂಲ್ಲಾಪಂ ಮುದಾ ಪುನರಭಾಷತ ।
ಭೀಷ್ಮದ್ರೋಣಾಜಮೀಢೈಶ್ಚ ಯದುಕ್ತಂ ಪಾಂಡವಾನ್ ಪ್ರತಿ ।
ಅವದತ್ ತತ್ರ ತತ್ಸರ್ವಂ ಸರ್ವೇಷಾಮೇವ ಶೃಣ್ವತಾಮ್ ॥೧೮॥

ಪರಸ್ಪರವಾಗಿ ಸಂತೋಷದಿಂದ ಮಾತನಾಡಿ ವಿದುರನು ಸಂತೋಷದಿಂದ ಭೀಷ್ಮದ್ರೋಣಧೃತರಾಷ್ಟ್ರರು ಪಾಂಡವರಿಗೆ ತಿಳಿಸಬೇಕೆಂದು ಹೇಳಿದ ವಿಷಯಗಳನ್ನು ಮಾತನಾಡಿದನು. ಅವನು ಎಲ್ಲವನ್ನೂ ಎಲ್ಲರೂ ಕೇಳುವಂತೆಯೇ ಮಾತನಾಡಿದನು.

ಪ್ರೋವಾಚ ಚಾಮಿತಪ್ರಜ್ಞಃ ಪ್ರಶ್ರಿತಂ ವಿನಯಾನ್ವಿತಮ್ ।
ದ್ರುಪದಂ ಪಾಂಡುಪುತ್ರಾಣಾಂ ಸನ್ನಿಧೌ ಕೇಶವಸ್ಯ ಚ ॥೧೯॥

ಅಮಿತಪ್ರಜ್ಞನಾದ ವಿದುರನು ಪಾಂಡವರ ಮತ್ತು ಕೃಷ್ಣರ ಸನ್ನಿಧಿಯಲ್ಲಿ ವಿನಯದಿಂದ ನಿಂತ ದ್ರುಪದನನ್ನು ಕುರಿತು ಹೀಗೆ ಹೇಳಿದನು.

ರಾಜನ್ ಶೃಣು ಸಹಾಮಾತ್ಯಃ ಸಪುತ್ರಶ್ಚ ವಚೋ ಮಮ ।
ಧೃತರಾಷ್ಟ್ರಃ ಸಪುತ್ರಂ ತ್ವಾಂ ಸಹಾಮಾತ್ಯಂ ಸಬಾಂಧವಮ್ ॥೨೦॥

ಅಬ್ರವೀತ್ ಕುಶಲಂ ರಾಜನ್ ಪ್ರೀಯಮಾಣಃ ಪುನಃ ಪುನಃ ।
ಪ್ರೀತಿಮಾಂಸ್ತೇ ದೃಢಂ ಚಾಸೀತ್ ಸಂಬಂಧೇನ ನರಾಧಿಪ ॥೨೧॥

ರಾಜನೇ, ನೀನು ಮತ್ತು ನಿನ್ನ ಮಕ್ಕಳು ನನ್ನ ಮಾತುಗಳನ್ನು ಕೇಳಿ, ಧೃತರಾಷ್ಟ್ರನು ತನ್ನ ಮಕ್ಕಳು ಮತ್ತು ಮಂತ್ರಿಗಳು ಮತ್ತು ಬಾಂಧವರ ಜೊತೆಯಲ್ಲಿ ಸಂತೋಷದಿಂದ ತನ್ನ ಕುಶಲವನ್ನು ಹೇಳಿಕಳಿಸಿದ್ದಾನೆ. ರಾಜನೇ, ನಿನ್ನ ಸಂಬಂಧದಿಂದ ಬಹಳ ಸಂತೋಷವಾಯಿತೆಂದು ಪುನಃ ಪುನಃ ಹೇಳಿದ್ದಾನೆ.

ಅಥ ಭೀಷ್ಮಃ ಶಾಂತನವಃ ಕೌರವೈಃ ಸಹ ಸರ್ವಶಃ ।
ಕುಶಲಂ ತ್ವಾಂ ಮಹೇಶ್ವಾಸಃ ಸರ್ವತಃ ಪರಿಪೃಚ್ಛತಿ ॥೨೨॥

ಮತ್ತು ಶಂತನುವಿನ ಮಗನಾದ ವೀರನಾದ ಭೀಷ್ಮನು ಎಲ್ಲಾ ಕೌರವರ ಜೊತೆಯಲ್ಲಿ ನಿಮ್ಮೆಲ್ಲರ ಕುಶಲವನ್ನು ಕೇಳುತ್ತಿದ್ದಾನೆ.

ಭಾರದ್ವಾಜೋ ಮಹಾಪ್ರಾಜ್ಞೋ ದ್ರೋಣಃ ಪ್ರಿಯಸಖಿಸ್ತವ ।
ಸಮಾಶ್ಲೇಷಮುಪೇತ್ಯ ತ್ವಾಂ ಕುಶಲಂ ಪರಿಪೃಚ್ಛತಿ ॥೨೩॥

ಮಹಾಪ್ರಾಜ್ಞರಾದ ನಿನ್ನ ಪ್ರಿಯಸ್ನೇಹಿತರಾದ, ಭರದ್ವಾಜರ ಪುತ್ರರಾದ ದ್ರೋಣರು ನಿನ್ನನ್ನು ಆಲಿಂಗಿಸಿ ನಿನ್ನ ಕುಶಲವನ್ನು ಕೇಳುತ್ತಿದ್ದಾರೆ.

ಧೃತರಾಷ್ಟ್ರಸ್ತು ಪಾಂಚಾಲ್ಯ ತ್ವಯಾ ಸಂಬಂಧಮೇಯಿವಾನ್ ।
ಕೃತಾರ್ಥಂ ಮನ್ಯತೇ ತ್ಮಾನಂ ತಥಾ ಸರ್ವೇऽಪಿ ಕೌರವಾಃ ॥೨೪॥

ಪಾಂಚಾಲರಾಜನೇ, ಧೃತರಾಷ್ಟ್ರನು ನಿನ್ನ ಸಂಬಂಧವನ್ನು ಹೊಂದಿದವನಾಗಿ ತನ್ನನ್ನೂ ಮತ್ತು ಎಲ್ಲಾ ಕೌರವರನ್ನೂ ಕೃತಾರ್ಥರನ್ನಾಗಿ ಭಾವಿಸಿದ್ದಾನೆ.

ನ ತಥಾ ರಾಜ್ಯಸಂಪ್ರಾಪ್ತಿಸ್ತೇಷಾಂ ಪ್ರೀತಿಕರಾ ಮತಾ ।
ಯಥಾ ಸಂಬಂಧಕಂ ಪ್ರಾಪ್ಯ ಯಜ್ಞಸೇನ ತ್ವಯಾ ಸಹ ॥೨೫॥

ಯಜ್ಞಸೇನನೇ, ನಿನ್ನ ಸಂಬಂಧದಿಂದ ಕೌರವರಿಗೆ ಎಂತಹ ಸಂತೋಷವುಂಟಾಗಿದೆಯೋ, ಅಂತಹ ಸಂತೋಷವು ಅವರಿಗೆ ರಾಜ್ಯಪ್ರಾಪ್ತಿಯಿಂದಲೂ ಉಂಟಾಗಿಲ್ಲ.

ಏತದ್ ವಿದಿತ್ವಾ ತು ಭವಾನ್ ಪ್ರಸ್ಥಾಪಯತು ಪಾಂಡವಾನ್ ।
ದ್ರಷ್ಟುಂ ಹಿ ಪಾಂಡುದಾಯಾದಾನ್ ತ್ವರಂತೇ ಕುರವೋ ಭೃಶಮ್॥೨೬॥

ಇದನ್ನು ತಿಳಿದ ನೀನು ಪಾಂಡವರನ್ನು ಇಲ್ಲಿಂದ ಕಳುಹಿಸಿಕೊಡಬೇಕು. ಕುರುಗಳು ಪಾಂಡುಪುತ್ರರನ್ನು ನೋಡಲು ಬಹಳ ಕಾತುರರಾಗಿದ್ದಾರೆ.

ವಿಪ್ರೋಷಿತಾ ದೀರ್ಘಕಾಲಮೇತೇ ಚಾಪಿ ನರರ್ಷಭಾಃ ।
ಉತ್ಸುಕಾ ನಾಗರಾ ದ್ರಷ್ಟುಂ ಭವಿಷ್ಯಂತಿ ಪೃಥಾಂ ತಥಾ ॥೨೭॥

ಈ ನರರ್ಷಭರು ಹಸ್ತಿನಪುರವನ್ನು ಬಿಟ್ಟು ಬಹಳ ಸಮಯವಾಯಿತು. ನಗರವಾಸಿಗಳು ಇವರನ್ನು ಮತ್ತು ಕುಂತಿಯನ್ನು ನೋಡಲು ಉತ್ಸುಕರಾಗಿದ್ದಾರೆ.

ಕೃಷ್ಣಾಮಪಿ ಚ ಪಾಂಚಾಲೀಂ ಸರ್ವಾಸ್ತಾಃ ಕೌರವಸ್ತ್ರಿಯಃ ।
ದ್ರಷ್ಟುಕಾಮಾಃ ಪ್ರತೀಕ್ಷಂತೇ ಪುರಂ ಚ ವಿಷಯಂ ಚ ನಃ ॥೨೮॥

ಎಲ್ಲಾ ಕೌರವಸ್ತ್ರೀಯರು ಪಾಂಚಾಲರಾಜಕುಮಾರಿಯಾದ ಕೃಷ್ಣೆಯನ್ನು ನೋಡಲು ಬಯಸಿ ಅವಳ ನಿರೀಕ್ಷಣೆಯಲ್ಲಿದ್ದಾರೆ. ಪಾಂಡವರೂ ಸಹ ಹಸ್ತಿನಪುರವನ್ನೂ ಮತ್ತು ಕುರುಜಾಂಗಲವನ್ನೂ ನೋಡುವ ಆಸೆಯುಳ್ಳವರಾಗಿದ್ದಾರೆ.

ಸ ಭವಾನ್ ಪಾಂಡುಪುತ್ರಾಣಾಮಾಜ್ಞಾಪಯತು ಮಾಚಿರಮ್ ।
ಗಮನಂ ಸಹದಾರಾಣಾಮೇತದಾಗಮನಂ ಮಮ ॥೨೯॥

ಅಂತಹ ನೀನು ಪಾಂಡುಪುತ್ರರಿಗೆ ಪತ್ನಿಯ ಜೊತೆಯಲ್ಲಿ ಇಲ್ಲಿಂದ ಶೀಘ್ರವಾಗಿ ಹೊರಡುವಂತೆ ಆಜ್ಞಾಪಿಸು. ಇದು ಇಲ್ಲಿಗೆ ನನ್ನ ಆಗಮನದ ಉದ್ದೇಶ.

ನಿಸೃಷ್ಟೇಷು ತ್ವಯಾ ರಾಜನ್ ಪಾಂಡವೇಷು ಮಹಾತ್ಮಸು ।
ತತೋಽಹಂ ಪ್ರೇಷಯಿಷ್ಯಾಮಿ ಧೃತರಾಷ್ಟ್ರಸ್ಯ ಶೀಘ್ರಗಾನ್ ।
ಆಗಮಿಷ್ಯಂತಿ ಕೌಂತೇಯಾಃ ಕುಂತೀ ಚ ಸಹ ಕೃಷ್ಣಯಾ ॥೩೦॥

ರಾಜನೇ, ನೀನು ಮಹಾತ್ಮರಾದ ಪಾಂಡವರಿಗೆ ಆದೇಶವನ್ನು ನೀಡಿದರೆ, ನಾನು ಧೃತರಾಷ್ಟ್ರನ ಆಜ್ಞೆಯಂತೆ ಶೀಘ್ರಗಾಮಿಯಾದ ರಥಗಳನ್ನು ಕಳುಹಿಸುವೆನು. ಪಾಂಡುಪುತ್ರರೂ ಮತ್ತು ಕುಂತಿಯೂ ಕೃಷ್ಣೆಯ ಜೊತೆಯಲ್ಲಿ ಹಸ್ತಿನಪುರಕ್ಕೆ ಬರುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತಾಧಿಕದ್ವಿಶತತಮೋಽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಏಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತೇಷ್ವಾಗತೇಷು ಸುಮಹಾನಭವತ್ ಪ್ರಹರ್ಷಃ
ಪೌರಸ್ಯ ಜಾನಪದಿಕಸ್ಯ ಜನಸ್ಯ ಚೋಚ್ಚೈಃ ।
ಭೀಷ್ಮಾದಿಕಾಶ್ಚ ಮುದಿತಾಃ ಪ್ರತಿಪೂಜ್ಯ ಗೇಹ-
ಮಾವೇಶಯನ್ ಸಹ ನೃಪೇಣ ಮಹೋತ್ಸವೇನ ॥೧೮೦॥

ಪಾಂಡವರು ಬಂದುದನ್ನು ಕಂಡು ನಾಗರಿಕರಿಗೂ, ಹಳ್ಳಿಯ ಜನರಿಗೂ ಬಹಳ ಸಂತೋಷವಾಯಿತು. ಭೀಷ್ಮ ಮುಂತಾದವರಿಗೆ ಮಹಾ ಆನಂದ. ಅವರು ಧೃತರಾಷ್ಟ್ರ ಸಮೇತರಾಗಿ ಪಾಂಡವರನ್ನು ಉಪಚರಿಸಿ ಮಹಾ ಸಂಭ್ರಮದಿಂದ ಧೃತರಾಷ್ಟ್ರನ ಅರಮನೆಯೊಳಗೆ ಪ್ರವೇಶ ಮಾಡಿಸಿದರು.

ಕೃಷ್ಣಾಮಪೂಜಯದತೀವ ಚ ಸೌಬಲೀ ಸಾ
ದುರ್ಯೋಧನಸ್ಯ ದಯಿತಾ ಸಹಿತಾತ್ರ ತೇಽಪಿ ।
ಊಷುಸ್ತತಶ್ಚ ನಿಜಪುತ್ರಕದುರ್ವಿನೀತ್ಯಾ
ಕೃಷ್ಣಾನಿಮಿತ್ತಮುರುಭೀತಿತ ಆಹ ಭೀಮಾತ್ ॥೧೮೧॥

ಗಾಂಧಾರಿಯೂ ದುರ್ಯೋಧನನ ಮಡದಿಯಾದ ಭಾನುಮತಿಯೂ ದ್ರೌಪದಿಯನ್ನು ಬಹಳ ಉಪಚರಿಸಿದರು. ಅಂದಿನಿಂದ ಪಾಂಡವರು ಧೃತರಾಷ್ಟ್ರನ ಮನೆಯಲ್ಲಿಯೆ ವಾಸ ಮಾಡಿದರು. ಬಳಿಕ ಗಾಂಧಾರಿ ತನ್ನ ದುಷ್ಟಪುತ್ರನ ದುರ್ನಡತೆಯಿಂದ ದ್ರೌಪದಿಯ ನಿಮಿತ್ತವಾಗಿ ಅವನಿಗೆ ಭೀಮನಿಂದ ಅಪಾಯ ಬಂದೀತೆಂಬ ಮಹಾಭಯದಿಂದ ಕುಂತಿಗೆ ಹೇಳಿದಳು.

ಕುಂತಿ ಪ್ರಯಾಹಿ ಸಹಿತಾ ಸ್ನುಷಯಾ ಗೃಹಂ ಸ್ವಂ
ಭೀಮಾದ್ ಬಿಭೇಮಿ ನಿಜಪುತ್ರಕದುರ್ವಿನೀತ್ಯಾ ।
ಕೃಷ್ಣಾ ತ್ರಿಲೋಕವನಿತಾಧಿಕರೂಪಸಾರಾ
ಯಸ್ಮಾದಿತಿ ಸ್ಮ ಸಸುತಾ ಪ್ರಯಯೌ ಗೃಹಂ ಸಾ ॥೧೮೨॥

ಕುಂತಿ! ನೀನು ನಿನ್ನ ಸೊಸೆಯೊಂದಿಗೆ ನಿನ್ನ ಮನೆಗೇ ಹೋಗು. ನನ್ನ ಕೆಟ್ಟ ಮಗನ ದುನಡತೆಯಿಂದಾಗಿ ನಾನು ಭೀಮನಿಗೆ ಅಂಜುತ್ತೇನೆ. ಏಕೆಂದರೆ ದ್ರೌಪದಿ ಮೂಲೋರ್ಕದ ಎಲ್ಲ ಸ್ತ್ರೀಯರಿಗಿಂತ ಹೆಚ್ಚಿನ ರೂಪಸೌಂದರ್ಯದಿಂದ ಉತ್ತಮಳೆನಿಸಿದವಳು'. ಗಾಂಧಾರಿ ಹೀಗೆ ಹೇಳಿದಾಗ ಕುಂತಿ ಮಕ್ಕಳೊಂದಿಗೆ ತನ್ನ ಮನೆಗೇ ಹೋದಳು.

★ ★ ★ ★

ಇನ್ನೂರ ಎಂಟನೆಯ ಅಧ್ಯಾಯ

(ಹಸ್ತಿನಪುರಕ್ಕೆ ಪಾಂಡವರ ಆಗಮನ, ಪೌರರ ಹರ್ಷ.)

ದ್ರುಪದಃ

ಏವಮೇತನ್ಮಹಾಪ್ರಾಜ್ಞ ಯಥಾऽऽತ್ಥ ವಿದುರಾದ್ಯ ಮಾಮ್ ।
ಮಮಾಪಿ ಪರಮೋ ಹರ್ಷಃ ಸಂಬಂಧೇऽಸ್ಮಿನ್ ಕೃತೇ ವಿಭೋ ॥೧॥

ಮಹಾಪ್ರಾಜ್ಞನಾದ ವಿದುರನೇ, ನೀನು ಈ ದಿನ ನನಗೆ ಹೇಳಿದಂತೆಯೇ ಎಲ್ಲವೂ ಸರಿ. ವಿಭುವೇ, ನನಗೂ ಕೌರವರ ಈ ಸಂಬಂಧದಿಂದ ಪರಮಹರ್ಷವಾಗಿದೆ.

ಗಮನಂ ಚಾಪಿ ಯುಕ್ತಂ ಸ್ಯಾದ್ ಗೃಹಮೇಷಾಂ ಮಹಾತ್ಮನಾಮ್ ।
ನ ತು ತಾವನ್ಮಯಾ ಯುಕ್ತಮೇತದ್ ವಕ್ತುಂ ಸ್ವಯಾ ಗಿರಾ ॥೨॥

ಈ ಮಹಾನುಭಾವರು ತಮ್ಮ ಮನೆಗಳಿಗೆ ಹೋಗುವುದು ಉಚಿತವಾದದ್ದು. ಆದರೆ, ನಾನಾಗಿಯೇ ಆ ಮಾತನ್ನು ಹೇಳಬಾರದು.

ಯದಾ ತು ಮನ್ಯತೇ ವೀರಾಃ ಕುಂತೀಪುತ್ರೋ ಯುಧಿಷ್ಠಿರಃ ।
ಭೀಮಸೇನಾರ್ಜುನೌ ಚೈವ ಯಮೌ ಚ ಪುರುಷರ್ಷಭೌ ॥೩॥

ರಾಮಕೃಷ್ಣೌ ಚ ಧರ್ಮಜ್ಞೌ ತದಾ ಗಚ್ಛಂತು ಪಾಂಡವಾಃ ।
ಏತೌ ಹಿ ಪುರುಷವ್ಯಾಘ್ರಾವೇಷಾಂ ಪ್ರಿಯಹಿತೇ ರತೌ ॥೪॥

ಕುಂತೀಪುತ್ರನಾದ ಯುಧಿಷ್ಠಿರನು, ಭೀಮಾರ್ಜುನರು, ಪುರುಷಶ್ರೇಷ್ಠರಾದ ನಕುಲಸಹದೇವರು, ಧರ್ಮಜ್ಞರಾದ ರಾಮಕೃಷ್ಣರು, ಯಾವಾಗ ಬಯಸುತ್ತಾರೋ, ಆಗ ಪಾಂಡವರು ಹೊರಡಲಿ. ಪುರುಷವ್ಯಾಘ್ರರಾದ ರಾಮಕೃಷ್ಣರು ಯಾವಾಗಲೂ ಪಾಂಡವರ ಹಿತದಲ್ಲಿಯೇ, ಆಸಕ್ತರಾದವರು.

ಯುಧಿಷ್ಠಿರಃ

ಪರವಂತೋ ವಯಂ ರಾಜಂಸ್ತ್ವಯಿ ಸರ್ವೇ ಸಹಾನುಗಾಃ ।
ಯಥಾ ವಕ್ಷ್ಯಸಿ ನಃ ಪ್ರೀತ್ಯಾ ಚರಿಷ್ಯಾಮಸ್ತಥಾ ವಯಮ್ ॥೫॥

ರಾಜನೇ, ನಾನು ಮತ್ತು ನನ್ನ ಅನುಚರರೆಲ್ಲರೂ ನಿನಗೆ ಅಧೀನರಾಗಿದ್ದೇವೆ. ನೀನು ನಮಗೆ ಸಂತೋಷದಿಂದ ಯಾವತ್ತು ಹೇಳುತ್ತೀಯೋ ಆ ದಿನ ನಾವು ಹೊರಡುವೆವು.

ವೈಶಂಪಾಯನಃ

ತತೋಽಬ್ರವೀದ್ ವಾಸುದೇವೋ ಗಮನಂ ಮಮ ರೋಚತೇ ।
ಯಥಾಽಯಂ ಮನ್ಯತೇ ರಾಜಾ ದ್ರುಪದಃ ಸರ್ವಧರ್ಮವಿತ್ ॥೬॥

ಆಗ ವಾಸುದೇವನು ಸರ್ವಧರ್ಮವನ್ನು ತಿಳಿದ ದ್ರುಪದನು ಅಭಿಪ್ರಾಯಪಡುವಂತೆ ನನಗೂ ಪಾಂಡವರ ಗಮನವು ಇಷ್ಟವಾಗಿದೆ.

ದ್ರುಪದಃ

ಯಥೈತನ್ಮನ್ಯತೇ ವೀರೋ ದಾಶಾರ್ಹಃ ಪುರುಷೋತ್ತಮಃ ।
ಪ್ರಾಪ್ತಕಾಲಂ ಮಹಾಬಾಹುಃ ಸಾ ಬುದ್ಧಿರ್ನಿಶ್ಚಿತಾ ಮಮ ॥೭॥

ಪುರುಷೋತ್ತಮನೂ, ವೀರನೂ, ಮಹಾಬಾಹುವೂ, ದಾಶಾರ್ಹನೂ ಆದ ಕೃಷ್ಣನು ಹೇಗೆ ಯೋಚಿಸುತ್ತಾನೋ, ಅದರಂತೆ ನಡೆದು- ಕೊಳ್ಳಬೇಕೆಂಬುದು ನನ್ನ ನಿಶ್ಚಿತವಾದ ಬುದ್ಧಿ.

ಯಥೈವ ಹಿ ಮಹಾಭಾಗಾಃ ಕೌಂತೇಯಾ ಮಮ ಸಾಂಪ್ರತಮ್ ।
ತಥೈವ ವಾಸುದೇವಸ್ಯ ಪಾಂಡುಪುತ್ರಾ ನ ಸಂಶಯಃ ॥೮॥

ಮಹಾನುಭಾವರಾದ ಪಾಂಡವರು ಈಗ ನನಗೆ ಹೇಗೋ, ವಾಸುದೇವನಿಗೂ ಹಾಗೆಯೇ ಎಂಬುವುದರಲ್ಲಿ ಸಂಶಯವಿಲ್ಲ.

ನ ತದ್ ಧ್ಯಾಯತಿ ಕೌಂತೇಯಃ ಪಾಂಡುಪುತ್ರೋ ಮಹಾಮನಾಃ ।
ಯದೈಷಾಂ ಪುರುಷವ್ಯಾಘ್ರಃ ಶ್ರೇಯೋ ಧಾಸ್ಯತಿ ಕೇಶವಃ ॥೯॥

ಪುರುಷವ್ಯಾಘ್ರನಾದ ಕೇಶವನು ಯಾವಾಗಲೂ ಇವರಿಗೆ ಶ್ರೇಯಸ್ಸನ್ನೇ ಉಂಟುಮಾಡುವುದರಿಂದ ಪಾಂಡುಪುತ್ರನಾದ ಮಹಾ ಮನುಸ್ಸುಳ್ಳ ಯುಧಿಷ್ಠಿರನು ಅದರ ವಿಷಯದಲ್ಲಿ ತಾನು ಯೋಚನೆಯನ್ನೇ ಮಾಡುವುದಿಲ್ಲ.

ವೈಶಂಪಾಯನಃ

ಪೃಥಾಯಾಸ್ತು ತತೋ ವೇಶ್ಮ ಪ್ರವಿವೇಶ ಮಹಾದ್ಯುತಿಃ ।
ಪಾದೌ ಸ್ಪೃಷ್ಟ್ವಾ ಪೃಥಾಯಾಸ್ತು ಶಿರಸಾ ಚ ಮಹೀಂ ಗತಃ ।
ದೃಷ್ಟ್ವಾ ತು ದೇವರಂ ಕುಂತೀ ಶುಶೋಚ ಚ ಮುಹುರ್ಮುಹುಃ ॥

ಮಹಾದ್ಯುತಿಯಾದ ವಿದುರನು ಅನಂತರ ಕುಂತಿಯ ಮನೆಗೆ ಬಂದನು. ಅವಳ ಪಾದಗಳನ್ನು ಮುಟ್ಟಿ ಅವಳಿಗೆ ಶಿರಸಾ ನಮಸ್ಕಾರವನ್ನು ಮಾಡಿದನು. ತನ್ನ ಮೈದುನನನ್ನು ನೋಡಿದ ಕುಂತಿಯು ಪುನಃ ಪುನಃ ಶೋಕಪಟ್ಟಳು.

ಕುಂತೀ

ವೈಚಿತ್ರವೀರ್ಯ ತೇ ಪುತ್ರಾಃ ಕಥಾಂಚಿಜ್ಜೀವಿತಾಸ್ತ್ವಯಾ ।
ತ್ವತ್ಪ್ರಸಾದಾಜ್ಜತುಗೃಹೇ ತ್ರಾತಾಃ ಪ್ರತ್ಯಾಗತಾಸ್ತವ ॥೧೧॥

ವಿಚಿತ್ರವೀರ್ಯನ ಪುತ್ರನಾದ ವಿದುರನೇ, ನಿನ್ನ ಮಕ್ಕಳು ನಿನ್ನ ನಿಮಿತ್ತದಿಂದಲೇ ಹೇಗೋ ಜೀವಿಸಿದ್ದಾರೆ. ನಿನ್ನ ಅನುಗ್ರಹದಿಂದಲೇ, ಅರಗಿನಮನೆಯಿಂದ ಮುಕ್ತರಾಗಿ ಈ ದಿನ ನಿನ್ನ ಬಳಿಗೆ ಬಂದಿದ್ದಾರೆ.

ಕೂರ್ಮಶ್ಚಿಂತಯತೇ ಪುತ್ರಾನ್ ಯತ್ರ ವಾ ತತ್ರ ವಾ ಗತಾನ್ ।
ಚಿಂತಯಾ ವರ್ಧಯೇತ್ ಪುತ್ರಾನ್ ಯಥಾ ಕುಶಲಿನಸ್ತಥಾ ।
ತವ ಪುತ್ರಾಸ್ತು ಜೀವಂತಿ ತ್ವದ್ಬುದ್ಧ್ಯಾ ಭರತರ್ಷಭ ॥೧೨॥

ಕೂರ್ಮವು ತನ್ನ ಮರಿಗಳು ಎಲ್ಲೆಲ್ಲಿ ಹೋಗಿದ್ದರೂ ಅವುಗಳನ್ನು ಧ್ಯಾನದಿಂದಲೇ ಬೆಳೆಸುತ್ತದೆ. ಕುಶಲಿಗಳಾದ ನೀವೂ ಸಹ ಹಾಗೆಯೇ. ಭರತರ್ಷಭನೇ, ನಿನ್ನ ಮಕ್ಕಳು ನಿನ್ನ ಅನುರಾಗದಿಂದ ಮತ್ತು ಅಂಗೀಕಾರದಿಂದ ಜೀವಿಸಿದ್ದಾರೆ.

ಯಥಾ ಪರಭೃತಃ ಪುತ್ರಾನ್ ಅರಿಷ್ಟಾ ವರ್ಧಯೇತ್ ಸದಾ ।
ತಥೈವ ತವ ಪುತ್ರಾಸ್ತು ಮಯಾ ತಾತ ಸುರಕ್ಷಿತಾಃ ॥೧೩॥

ದುಃಖಾಸ್ತು ಬಹವಃ ಪ್ರಾಪ್ತಾಸ್ತಥಾ ಪ್ರಾಣಾಂತಿಕಾ ಮಯಾ ।
ಅತಃ ಪರಂ ನ ಜಾನಾಮಿ ಕರ್ತವ್ಯಂ ಜ್ಞಾತುಮರ್ಹಸಿ ॥೧೪॥

ಹೇಗೆ ಕೋಗಿಲೆಯ ಮರಗಳನ್ನು ಕಾಗೆಗಳು ಬೆಳೆಸುತ್ತವೆಯೋ ಹಾಗೆ ನಿನ್ನ ಮಕ್ಕಳನ್ನು ನಾನು ರಕ್ಷಿಸಿದ್ದೇನೆ. ನಾನು ಅನೇಕ ಪ್ರಾಣಾಂತಿಕವಾದ ವಿಪತ್ತುಗಳನ್ನು ಅನುಭವಿಸಿದೆ. ಇನ್ನು ಮುಂದೆ ಏನು ಮಾಡಬೇಕೆಂದು ತಿಳಿದಿಲ್ಲ. ಅದನ್ನು ನೀನೇ ಹೇಳಬೇಕು.

ವೈಶಂಪಾಯನಃ

ಇತ್ಯೇವಮುಕ್ತಾ ದುಃಖಾರ್ತಾ ಶುಶೋಚ ಪರಮಾತುರಾ ।
ಪ್ರಣಿಪತ್ಯಾಬ್ರವೀತ್ ಕ್ಷತ್ತಾ ಮಾ ಶೋಚ ಇತಿ ಭಾರತ ॥೧೫॥

ಭಾರತನೇ, ಹೀಗೆ ಹೇಳಿ ದುಃಖಾರ್ತಳಾಗಿ ಕುಂತಿಯು ಪರಮಾತುರಳಾಗಿ ಶೋಕಪಟ್ಟಳು. ವಿದುರನು ಅವಳಿಗೆ ನಮಸ್ಕರಿಸಿ ಶೋಕಪಡಬೇಡ ಎಂದು ಹೇಳಿದನು.

ವಿದುರಃ

ನ ವಿನಶ್ಯಂತಿ ಲೋಕೇಷು ತವ ಪುತ್ರಾ ಮಹಾಬಲಾಃ ।
ನಚಿರೇಣೈವ ಕಾಲೇನ ಸ್ವರಾಜ್ಯಸ್ಥಾ ಭವಂತಿ ತೇ ।
ಬಾಂಧವೈಃ ಸಹಿತಾಃ ಸರ್ವೈರ್ಮಾ ಶೋಕಂ ಕುರು ಮಾಧವಿ ॥೧೬॥

ಮಹಾಬಲರಾದ ನಿನ್ನ ಪುತ್ರರು ಲೋಕದಲ್ಲಿ ನಾಶವನ್ನು ಹೊಂದುವುದಿಲ್ಲ. ಅಲ್ಪಕಾಲದಲ್ಲಿಯೇ ಅವರು ತಮ್ಮ ಎಲ್ಲಾ ಬಾಂಧವರ ಜೊತೆಯಲ್ಲಿ ತಮ್ಮರಾಜ್ಯವನ್ನು ಪಡೆಯುತ್ತಾರೆ. ಮಾಧವಿ, ಶೋಕವನ್ನು ಮಾಡಬೇಡ.

ವೈಶಂಪಾಯನಃ

ತತಸ್ತೈಃ ಸಮನುಜ್ಞಾತಾ ದ್ರುಪದೇನ ಮಹಾತ್ಮನಾ ।
ಪಾಂಡವಾಶ್ಚೈವ ಕೃಷ್ಣಶ್ಚ ವಿದುರಶ್ಚ ಮಹಾಮತಿಃ ॥೧೭॥

ಆದಾಯ ದ್ರೌಪದೀಂ ಕೃಷ್ಣಾಂ ಕುಂತೀಂ ಚೈವ ಯಶಸ್ವಿನೀಮ್ ।
ಸವಿಹಾರಂ ಸುಖಂ ಜಗ್ಮುರ್ನಗರಂ ನಾಗಸಾಹ್ವಯಮ್ ॥೧೮॥

ಅನಂತರ ಮಹಾತ್ಮನಾದ ದ್ರುಪದನಿಂದ ಅನುಜ್ಞೆಯನ್ನು ಪಡೆದ ಪಾಂಡವರು, ಕೃಷ್ಣನೂ, ಮಹಾಮತಿಯಾದ ವಿದುರನೂ, ದ್ರುಪದನ ಮಗಳಾದ ಕೃಷ್ಣೆಯನ್ನೂ, ಯಶಸ್ವಿನಿಯಾದ ಕುಂತಿಯನ್ನೂ ಕರೆದುಕೊಂಡು ವಿಹಾರಪೂರ್ವಕವಾಗಿ ಸುಖದಿಂದ ಹಸ್ತಿನಪುರಕ್ಕೆ ಹೊರಟರು.

ಸುವರ್ಣಕಕ್ಷ್ಯಾಗ್ರೈವೇಯಾನ್ ಸುವರ್ಣಾಂಕುಶಭೂಷಿತಾನ್ ।
ಜಾಂಬೂನದಪರಿಷ್ಕಾರಾನ್ ಪ್ರಭಿನ್ನಕರಟಾಮುಖಾನ್ ॥೧೯॥

ಅಧಿಷ್ಠಿತಾನ್ ಮಹಾಮಾತ್ರೈಃ ಸರ್ವಶಸ್ತ್ರಸಮನ್ವಿತಾನ್ ।
ಸಹಸ್ರಂ ಪ್ರದದೌ ರಾಜಾ ನಾಗಾನಾಂ ವರವರ್ಣಿನಾಮ್ ॥೨೦॥

ದ್ರುಪದನು ಪಾಂಡವರು ಹೊರಡುವಾಗ ಸೊಂಟದಲ್ಲಿ ಮತ್ತು ಕತ್ತಿನಲ್ಲಿ ಚಿನ್ನದ ಸರಪಣಿಗಳನ್ನುಳ್ಳ, ಚಿನ್ನದ ಅಂಕುಶದ ಜೊತೆಯಲ್ಲಿ ಚಿನ್ನದ ಆಭರಣಗಳಿಂದ ಅಲಂಕೃತವಾದ, ಮಾವುತರಿಂದ ಅಧಿಷ್ಠಿತವಾದ ಸರ್ವಶಸ್ತ್ರಸಮನ್ವಿತವಾದ, ಶ್ರೇಷ್ಠವಾದ ವರ್ಣವುಳ್ಳ, ಸಹಸ್ರ ಮದಗಜಗಳನ್ನು ಕೊಟ್ಟನು.

ರಥಾನಾಂ ಚ ಸಹಸ್ರಂ ವೈ ಸುವರ್ಣಮಣಿಚಿತ್ರಿತಮ್ ।
ಚತುರ್ಯುಜಾಂ ಭಾನುಮಚ್ಚ ಪಂಚಾನಾಂ ಪ್ರದದೌ ತದಾ ॥೨೧॥

ಸುವರ್ಣಮಣಿಗಳಿಂದ ಅಲಂಕೃತವಾದ, ನಾಲ್ಕು ಕುದುರೆಗಳನ್ನು ಹೂಡುವ, ಪ್ರಕಾಶಮಾನವಾದ ಸಹಸ್ರರಥಗಳನ್ನು ಐದೂ ಜನರಿಗೂ ಪ್ರತ್ಯೇಕವಾಗಿಕೊಟ್ಟನು.

ಪುನಃ ಸುವರ್ಣವರ್ಹಾಣಾಂ ವರಚಾಮರಮಾಲಿನಾಮ್ ।
ಜಾತ್ಯಶ್ವಾನಾಂ ಚ ಪಂಚಾಶತ್ಸಹಸ್ರಂ ಪ್ರದದೌ ನೃಪಃ ॥೨೨॥

ಪುನಃ ಸುವರ್ಣಮಯವಾದ ಬರ್ಹಾಲಂಕಾರಗಳಿಂದ ಭೂಷಿತವಾದ, ಶ್ರೇಷ್ಠವಾದ ಚಾಮರ ಮತ್ತು ಮಾಲೆಗಳಿಂದ ಕೂಡಿದ ಐವತ್ತುಸಾವಿರ ಜಾತ್ಯಶ್ವಗಳನ್ನು ಕೊಟ್ಟನು.

ದಾಸೀನಾಮಯುತಂ ರಾಜಾ ಪ್ರದದೌ ವರಭೂಷಣಾಮ್ ।
ತತಃ ಸಹಸ್ರಂ ದಾಸಾನಾಂ ಪ್ರದದೌ ವರಧನ್ವಿನಾಮ್ ॥೨೩॥

ರಾಜನು ಭೂಷಣಗಳಿಂದ ಅಲಂಕೃತರಾದ ಹತ್ತುಸಹಸ್ರದಾಸಿಯರನ್ನು ಕೊಟ್ಟನು. ಹಾಗೆಯೇ, ಧನುರ್ಧಾರಿಗಳಾದ ಸಹಸ್ರದಾಸರನ್ನೂ ಕೊಟ್ಟನು.

ಹೈಮಾನಿ ಶಯ್ಯಾಸನಭಾಜನಾನಿ
ದ್ರವ್ಯಾಣಿ ಚಾನ್ಯಾನಿ ಚ ಗೋಧನಾನಿ ।
ಪೃಥಕ್ಪೃಥಕ್ ಚೈವ ದದೌ ಸ ಕೋಟಿಂ
ಪಾಂಚಾಲರಾಜಃ ಪರಮಪ್ರಹೃಷ್ಟಃ ॥೨೪॥

ಹಾಗೆಯೇ ಸುವರ್ಣಮಯವಾದ ಶಯ್ಯಾಸನಗಳನ್ನೂ, ಪಾತ್ರೆಗಳನ್ನೂ, ಬೇರೆ ದ್ರವ್ಯಗಳನ್ನೂ, ಪಾಂಚಾಲರಾಜನು ಪರಮಸಂತೋಷದಿಂದ ಪ್ರತಿಯೊಬ್ಬರಿಗೂ ಕೋಟಿಸಂಖ್ಯೆಯಲ್ಲಿಕೊಟ್ಟನು.

ಶಿಬಿಕಾನಾಂ ಶತಂ ಪೂರ್ಣಂ ವಾಹಾನ್ ಪಂಚಶತಂ ವರಾನ್ ।
ಏವಮೇತಾನಿ ಪಾಂಚಾಲೋ ಜನ್ಯರ್ಥೇ ಪ್ರದದೌ ಧನಮ್ ॥೨೫॥

ಹಾಗೆಯೇ, ಪಾಂಚಾಲನು ಪೂರ್ಣವಾದ ನೂರು ಶಿಬಿಕೆಗಳನ್ನೂ, ಐನೂರು ಶ್ರೇಷ್ಠವಾದ ವಾಹನಗಳನ್ನೂ, ಪರಿಜನರಿಂದ ಕೂಡಿದ ಧರ್ಮರಾಜನಿಗೆ ಧನವಾಗಿ ಕೊಟ್ಟನು.

ಹರಣಂ ಚಾಪಿ ಪಾಂಚಾಲ್ಯಾ ಜ್ಞಾತಿದೇಯಂ ತು ಸೌಮಕಿಃ ।
ಧೃಷ್ಟದ್ಯುಮ್ನೋ ಯಯೌ ತತ್ರ ಭಗಿನೀಂ ಗೃಹ್ಯ ಭಾರತ ॥೨೬॥

ಸೋಮಕರಾಜನ ಕುಲದಲ್ಲಿ ಬಂದ ದ್ರುಪದನು ಪತಿಯ ಮನೆಗೆ ಹೊರಡುವಾಗ ಮಗಳಿಗೆ ಕೊಡಬೇಕಾದ ಎಲ್ಲಾ ದ್ರವ್ಯಗಳನ್ನೂ ಕೊಟ್ಟನು. ಭಾರತನೇ, ಆಗ ಧೃಷ್ಟದ್ಯುಮ್ನನು ತಂಗಿಯನ್ನು ಕರೆದುಕೊಂಡು ಹೊರಟನು.

ನಾನದ್ಯಮಾನೇ ಬಹುಭಿಸ್ತೂರ್ಯಶಬ್ದೈಃ ಸಹಸ್ರಶಃ ।
ಶ್ರುತ್ವಾ ಚೋಪಸ್ಥಿತಾನ್ ವೀರಾನ್ ಧೃತರಾಷ್ಟ್ರೋಽಂಬಿಕಾಸುತಃ ॥೨೭॥

ಪ್ರತಿಗ್ರಹಾಯ ಪಾಂಡೂನಾಂ ಪ್ರೇಷಯಾಮಾಸ ಕೌರವಾನ್ ।
ವಿಕರ್ಣಂ ಚ ಮಹೇಷ್ವಾಸಂ ಚಿತ್ರಸೇನಂ ಚ ಭಾರತ ।
ದ್ರೋಣಂ ಚ ಪರಮೇಷ್ವಾಸಂ ಗೌತಮಂ ಕೃಪಮೇವ ಚ ॥೨೮॥

ಎಲ್ಲ ಕಡೆಗಳಲ್ಲಿಯೂ ಸಹಸ್ರಸಂಖ್ಯೆಯಲ್ಲಿ ಶಂಖತೂರ್ಯಾದಿ- ವಾದ್ಯಗಳು ಮೊಳಗುತ್ತಿರುವುದನ್ನು ಕೇಳಿ ಅಂಬಿಕಾಸುತನಾದ ಧೃತರಾಷ್ಟ್ರನು ವೀರರಾದ ಪಾಂಡವರು ಹತ್ತಿರವೇ ಬರುತ್ತಿದ್ದಾರೆ ಎಂದು ತಿಳಿದು ಪಾಂಡವರನ್ನು ಸ್ವೀಕರಿಸಲು ವಿಕರ್ಣನನ್ನೂ, ಚಿತ್ರಸೇನನನ್ನೂ, ದ್ರೋಣರನ್ನೂ, ಮಹಾಧನುಷ್ಕರಾದ ಮತ್ತು ಕೃಪಾಚಾರ್ಯರನ್ನೂ ಕಳುಹಿಸಿದನು.

ತೈಸ್ತೈಃ ಪರಿವೃತಾ ವೀರಾಃ ಶೋಭಮಾನಾ ಮಹಾರಥಾಃ ।
ನಗರಂ ಹಸ್ತಿನಪುರಂ ಶನ್ಯೈಃ ಪ್ರವಿವಿಶುಸ್ತದಾ ॥೨೯॥

ಮಹಾರಥರಾದ, ವೀರರಾದ ಪೌಂಡವರು, ಕೌರವಸೈನ್ಯದಿಂದಲೂ, ಪಾಂಚಾಲಸೈನ್ಯದಿಂದಲೂ ಪರಿವೃತರಾಗಿ ನಿಧಾನವಾಗಿ ಹಸ್ತಿನಪುರವನ್ನು ಪ್ರವೇಶಿಸಿದರು.

ಪಾಂಡವಾನಾಗತಾನ್ ಶ್ರುತ್ವಾ ನಾಗರಾಸ್ತು ಕುತೂಹಲಾತ್ ।
ಮಂಡಯಾಂಚಕ್ರಿರೇ ತತ್ರ ನಗರಂ ನಾಗಸಾಹ್ವಯಮ್ ।
ಮುಕ್ತಾಪುಷ್ಪಾವಕೀರ್ಣಂ ತು ಜಲಸಿಕ್ತಂ ಚ ಸರ್ವತಃ ॥೩೦॥

ಪಾಂಡವರು ಬರುತ್ತಿರುವುದನ್ನು ಕೇಳಿ, ನಗರವಾಸಿಗಳು ಸಂಭ್ರಮದಿಂದ ಹಸ್ತಿನಪುರವನ್ನು ಅಲಂಕರಿಸಿದರು. ಎಲ್ಲ ಕಡೆಗಳಲ್ಲಿಯೂ ನೀರಿನಿಂದ ತೊಳೆದು, ಮುತ್ತು ಪುಷ್ಪಗಳನ್ನು ಹರಡಿದ್ದರು.

ಧೂಪಿತಂ ದಿವ್ಯಧೂಪೇನ ಮಂಗಲೈಶ್ಚಾಭಿಸಂವೃತಮ್ ।
ಪತಾಕೋಚ್ಛ್ರಿತಮಾಲ್ಯಂ ಚ ಪುರಮಪ್ರತಿಮಂ ಬಭೌ ॥೩೧॥

ದಿವ್ಯಧೂಪಗಳಿಂದ ಮತ್ತು ಮಂಗಳಪದಾರ್ಥಗಳಿಂದ ಉನ್ನತವಾದ ಪತಾಕೆ ಮತ್ತು ಮಾಲೆಗಳಿಂದ ಕೂಡಿದ ಆ ಪಟ್ಟಣವು ಅಸದೃಶವಾಗಿ ಮೆರೆಯಿತು.

ಶಂಖಭೇರೀನಿನಾದೈಶ್ಚ ನಾನಾವಾದಿತ್ರನಿಸ್ವನೈಃ ।
ಕೌತೂಹಲೇನ ನಗರಂ ಪೂಜ್ಯಮಾನಮಿವಾಭವತ್ ॥೩೨॥

ಶಂಖಭೇರೀನಾದಗಳಿಂದಲೂ, ನಾನಾವಾದಿತ್ರಘೋಷಗಳಿಂದಲೂ, ಜನರ ವಿಸ್ಮಯದಿಂದಲೂ, ಕೂಡಿದ ಆ ನಗರವೇ ಪೂಜಿಸಲ್ಪಡುವಂತೆ ತೋರುತ್ತಿತ್ತು.

ಯತ್ರ ತೇ ಪುರುಷವ್ಯಾಘ್ರಾಃ ಶೋಕದುಃಖಾಪಕರ್ಷಕಾಃ ।
ನಿರ್ಗತಾಶ್ಚ ಪುರಾತ್ ಪೂರ್ವಂ ಧೃತರಾಷ್ಟ್ರಪ್ರಬಾಧಿತಾಃ ॥೩೩॥

ಪುನರ್ನಿವೃತ್ತಾ ದಿಷ್ಟ್ಯಾ ವೈ ಸಹ ಮಾತ್ರಾ ಪರಂತಪಾಃ ।
ಇತ್ಯೇವಮೀರಿತಾ ವಾಚೋ ಜನ್ಯೈಃ ಪ್ರಿಯಚಿಕೀರ್ಷುಭಿಃ ॥೩೪॥

ಶೋಕದುಃಖಗಳನ್ನು ಪರಿಹಾರಮಾಡುವ ಆ ಪುರುಷವ್ಯಾಘ್ರರು ಮೊದಲು ಧೃತರಾಷ್ಟ್ರನಿಂದ ಬಾಧಿಸಲ್ಪಟ್ಟು ಯಾವ ಪಟ್ಟಣದಿಂದ ಹೊರಗೆ ಹೋಗಿದ್ದರೋ, ದೇವರ

ದಯೆಯಿಂದ ಪರಂತಪರಾದ ಅವರು ತಾಯಿಯ ಜೊತೆಯಲ್ಲಿ ಅಲ್ಲಿಗೇ ಹಿಂದಿರುಗಿದ್ದಾರೆ ಎಂಬ ಪ್ರಿಯಕಾರಿಗಳಾದ ಜನರ ಮಾತುಗಳು ಕೇಳಿಬಂದವು.

ತತ ಉಚ್ಚಾವಚಾ ವಾಚಃ ಪ್ರಿಯಾಃ ಸರ್ವತ್ರ ಭಾರತ ।
ಉದೀರಿತಾ ಆಶೃಣ್ವಂತ ಪಾಂಡವಾ ಹೃದಯಂಗಮಾಃ ॥೩೫॥

ಭಾರತನೇ, ಪಾಂಡವರು ಎಲ್ಲಾ ಕಡೆಯಲ್ಲಿಯೂ ಇಂತಹ ಶ್ರೇಷ್ಠವಾದ ಮತ್ತು ಕನಿಷ್ಠವಾದ ಹೃದಯಂಗಮವಾದ ಪ್ರಿಯವಚನಗಳನ್ನು ಕೇಳಿದರು.

ಪೌರಾಃ

ಅಯಂ ಸ ಪುರುಷವ್ಯಾಘ್ರಃ ಪುನರಾಯಾತಿ ಧರ್ಮವಿತ್ ।
ಯೋ ನಃ ಸ್ವಾನಿವ ದಾಯಾದಾನ್ ಧರ್ಮೇಣ ಪರಿರಕ್ಷತಿ ॥೩೬॥

ಈ ಧರ್ಮಜ್ಞನಾದ ಪುರುಷವ್ಯಾಘ್ರನು ಪುನಃ ನಗರಕ್ಕೆ ಬರುತ್ತಿದ್ದಾನೆ. ಅವನು ನಮ್ಮನ್ನು ತನ್ನ ಮಕ್ಕಳಂತೆ ಧರ್ಮದಿಂದ ನೋಡಿಕೊಳ್ಳುತ್ತಾನೆ.

ಅದ್ಯ ಪಾಂಡುರ್ಮಹಾರಾಜೋ ವನಾದಿಹ ಮನಃಪ್ರಿಯಃ ।
ಆಗತಃ ಪ್ರಿಯಮಸ್ಮಾಕಂ ಚಿಕೀರ್ಷುರ್ನಾತ್ರ ಸಂಶಯಃ ॥೩೭॥

ಮನೋಹರನಾದ ಪಾಂಡುಮಹಾರಾಜನು ಈ ದಿನ ನಮಗೆ ಪ್ರಿಯವನ್ನುಂಟುಮಾಡಲು ಕಾಡಿನಿಂದ ಮರಳಿ ಬಂದಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ.

ಕಿಂ ನ್ವದ್ಯ ಸುಕೃತಂ ಪುಣ್ಯಂ ಸರ್ವೇಷಾಂ ನಃ ಪ್ರಿಯಂ ಪರಮ್ ।
ಯನ್ನಃ ಕುಂತೀಸುತಾ ವೀರಾ ಭರ್ತಾರಃ ಪುನರಾಗತಾಃ ॥೩೮॥

ಈ ದಿನ ನಾವೆಲ್ಲರೂ ಏನು ಪುಣ್ಯವನ್ನು ಮಾಡಿದ್ದೇವೋ, ಯಾವ ಶ್ರೇಷ್ಠವಾದ ಪ್ರಿಯವನ್ನು ಮಾಡಿದ್ದೇವೋ, ವೀರರೂ, ನಮ್ಮ ಪ್ರಭುಗಳೂ ಆದ ಕುಂತೀಪುತ್ರರು ಪುನಃ ನಮ್ಮ ಸಮೀಪಕ್ಕೆ ಬಂದಿದ್ದಾರೆ.

ಯದಿ ದತ್ತಂ ಯದಿ ಹುತಂ ಯದಿ ವಾऽಪ್ಯಸ್ತಿ ನಸ್ತಪಃ ।
ತೇನ ತಿಷ್ಠಂತು ನಗರೇ ಪಾಂಡವಾಃ ಶರದಾಂ ಶತಮ್ ॥೩೯॥

ನಾವೇನಾದರೂ ದಾನವನ್ನು ಮಾಡಿದ್ದರೆ, ಹೋಮವನ್ನು ಮಾಡಿದ್ದರೆ ಅಥವಾ ತಪಸ್ಸನ್ನು ಮಾಡಿದ್ದರೆ, ಆ ಪುಣ್ಯದಿಂದ ಪಾಂಡವರು ಈ ನಗರದಲ್ಲಿಯೇ ನೂರುವರ್ಷ ವಾಸಮಾಡಲಿ.

ವೈಶಂಪಾಯನಃ

ತತಸ್ತೇ ಧೃತರಾಷ್ಟ್ರಸ್ಯ ಭೀಷ್ಮಸ್ಯ ಚ ಮಹಾತ್ಮನಃ ।
ಅನ್ಯೇಷಾಂ ಚ ತದರ್ಹಾಣಾಂ ಚಕ್ರುಃ ಪಾದಾಭಿವಂದನಮ್ ॥೪೦॥

ಅನಂತರ ಆ ಪಾಂಡವರು ಧೃತರಾಷ್ಟ್ರನಿಗೂ, ಮಹಾತ್ಮನಾದ ಭೀಷ್ಮನಿಗೂ, ಉಳಿದ ನಮಸ್ಕಾರಾರ್ಹರಿಗೂ ಪಾದಾಭಿವಂದನವನ್ನು ಮಾಡಿದರು.

ಕೃತ್ವಾ ತು ಕುಶಲಪ್ರಶ್ನಂ ಸರ್ವಸ್ಯ ನಗರಸ್ಯ ತೇ ।
ಸಮಾವಿಶಂತ ವೇಶ್ಮಾನಿ ಧೃತರಾಷ್ಟ್ರಸ್ಯ ಶಾಸನಾತ್ ॥೪೧॥

ಅವರು ಎಲ್ಲಾ ನಗರದ ಕುಶಲಪ್ರಶ್ನೆಯನ್ನು ಮಾಡಿ ಧೃತರಾಷ್ಟ್ರನ ಅಪ್ಪಣೆಯಂತೆ ತಮ್ಮ ಮನೆಗಳಿಗೆ ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ವಿದುರಾಗಮನಪರ್ವಣಿ ನವಮೋऽಧ್ಯಾಯಃ ॥

॥ ವಿದುರಾಗಮನಪರ್ವಂ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಎಂಟನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ವಿದುರಾಗಮನಪರ್ವವು ಮುಗಿಯಿತು.

★★★★★

೧೪. ರಾಜ್ಯಲಾಭಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತೇಽಪಿ ಸ್ಮ ಕರ್ಣಸಹಿತಾ ಮೃತಕಪ್ರತೀಕಾ
ನಾಗಾಹ್ವಯಂ ಪುರುಮಥಾಯಯುರಪ್ಯಮೀಷಾಂ ।
ದೃಷ್ಟ್ವಾವಿರೋಧಮವದನ್ನೃಪತಿಶ್ಚ ಧರ್ಮ-
ಪುತ್ರಂ ಪುರಂದರಕೃತಸ್ಥಲಮಾಶು ಯಾಹಿ ॥೨೦೭॥

ಕೌರವರು ಕರ್ಣಸಮೇತರಾಗಿ ಸತ್ತವರಂತೆ ಹಸ್ತಿನಾವತಿಗೆ ಹಿಂತಿರುಗಿದರು. ಧೃತರಾಷ್ಟ್ರ ಕೌರವ ಪಾಂಡವರೊಳಗಿನ ವಿರೋಧವನ್ನು ಕಂಡು ಧರ್ಮರಾಜನಿಗೆ ಹೇಳಿದ. 'ನೀನು ಇಂದ್ರಪ್ರಸ್ಥಕ್ಕೆ ಬೇಗನೆ ಹೋಗು'.

ತತ್ರಾರ್ಧರಾಜ್ಯಮನುಭುಂಕ್ಷ್ವ ಸಹಾನುಜೈಸ್ತ್ವಂ
ಕೋಶಾರ್ಧಮೇವ ಚ ಗೃಹಾಣ ಪುರಾ ಹಿ ಶಕ್ರಃ ।
ತತ್ರಾಭಿಷಿಕ್ತ ಉತ ಕಂಜಭವಾದಿದೇವೈ-
ಸ್ತತ್ರಸ್ಥ ಏವ ಸ ಚಕಾರ ಚಿರಂ ಚ ರಾಜ್ಯಂ ॥೨೦೮॥

'ಯುಧಿಷ್ಠಿರ, ನೀನು ಆ ಇಂದ್ರಪ್ರಸ್ಥದಲ್ಲಿ ಸೋದರರೊಂದಿಗೆ ಅರ್ಧರಾಜ್ಯವನ್ನು ಭೋಗಿಸು. ಅರ್ಧಭಾಗ ಕೋಶವನ್ನು ಸ್ವೀಕರಿಸು. ಹಿಂದೆ ಇಂದ್ರ ಬ್ರಹ್ಮಾದಿ ದೇವತೆಗಳಿಂದ ಅಭಿಷಿಕ್ತನಾಗಿ ಅಲ್ಲಿ ಬಹುಕಾಲ ರಾಜ್ಯವಾಳಿದ.

ತ್ವಂ ವೀರ ಶಕ್ರಸಮ ಏವ ತತಸ್ತವೈವ
ಯೋಗ್ಯಂ ಪುರಂ ತದತ ಆಶ್ವಭಿಷೇಚಯಾಮಿ ।
ಇತ್ಯುಕ್ತ ಆಹ ಸ ಯುಧಿಷ್ಠಿರ ಓಮಿತಿ ಸ್ಮ
ಚಕ್ರೇಽಭಿಷೇಕಮಪಿ ತಸ್ಯ ಸ ಆಂಬಿಕೇಯಃ ॥೨೦೯॥

'ಯುಧಿಷ್ಠಿರ, ನೀನೂ ವೀರ, ಇಂದ್ರಸಮನೇ ಆಗಿರುತ್ತಿ. ನಿನಗೇ ಆ ಇಂದ್ರಪ್ರಸ್ಥ ಯೋಗ್ಯ. ಆದರಿಂದ ಬೇಗನೆ ನಿನಗೆ ಪಟ್ಟಾಭಿಷೇಕ ಮಾಡುವೆನು'. ಧೃತರಾಷ್ಟ್ರ ಹೀಗೆ ಹೇಳಿದಾಗ ಧರ್ಮರಾಜ ಆಗಲಿ ಎಂದ. ಧೃತರಾಷ್ಟ್ರ ಅವನಿಗೆ ಪಟ್ಟಾಭಿಷೇಕ ಮಾಡಿದ.

ತಸ್ಯಾಭಿಷೇಕಮಕರೋತ್‌ಪ್ರಥಮಂ ಹಿ ಕೃಷ್ಣೋ
ವಾಸಿಷ್ಠನಂದನ ಉರುರ್ಭವ ಚಕ್ರವರ್ತೀ ।
ಯಷ್ಟಾಶ್ವಮೇಧನಿಖಿಲಾತ್ಮಕ ರಾಜಸೂಯ-
ಪೂರ್ವೈರ್ಮಖೈಃ ಸತತಮೇವ ಚ ಧರ್ಮಶೀಲಃ ॥೨೧೦॥

ಧರ್ಮರಾಜನಿಗೆ ಮೊದಲು ವೇದವ್ಯಾಸರು ಅಭಿಷೇಕ ಮಾಡಿ ಆಶೀರ್ವದಿಸಿದರು. 'ದೊಡ್ಡ ಚಕ್ರವರ್ತಿಯಾಗು. ಅಶ್ವಮೇಧ ಸರ್ವಸ್ವರೂಪದ ರಾಜಸೂಯ ಮುಂತಾದ ಯಾಗಗಳನ್ನು ಮಾಡು. ಸದಾ ಧರ್ಮಿಷ್ಠನಾಗು' ಎಂದು.

ಇತ್ಯೇವ ಪಾರ್ಷತಸುತಾಸಹಿತೇಽಭಿಷಿಕ್ತೇ
ಕೃಷ್ಣೋಽಪಿ ವೃಷ್ಣಿವೃಷಭಃ ಸ ತಥಾಭ್ಯಷಿಂಚತ್ ।
ಏವಂ ಚ ಮಾರುತಿಶಿರಸ್ಯಭಿಷೇಕಮೇತೌ
ಸಂಚಕ್ರತುಃ ಸ್ಮ ಯುವರಾಜಪದೇ ಸಭಾರ್ಯಂ ॥೨೧೧॥

ದ್ರೌಪದೀ ಸಮೇತನಾದ ಧರ್ಮರಾಜನಿಗೆ ವ್ಯಾಸರು ಅಭಿಷೇಕ ಮಾಡಿದ ಬಳಿಕ ಶ್ರೀಕೃಷ್ಣ ಅಭಿಷೇಕ ಮಾಡಿದ. ಇದೇ ರೀತಿ ಯುವರಾಜ ಪದವಿಯಲ್ಲಿ ದ್ರೌಪದೀ ಸಮೇತನಾದ ಭೀಮಸೇನನ ತಲೆಯ ಮೇಲೆ ವ್ಯಾಸಕೃಷ್ಣರು ಅಭಿಷೇಕ ಮಾಡಿದರು.

ಭೀಮೇ ಚ ಪಾರ್ಷತಸುತಾಸಹಿತೇಽಭಿಷಿಕ್ತೇ
ತಾಭ್ಯಾಮನಂತಸುಖಶಕ್ತಿ ಚಿದಾತ್ಮಕಾಭ್ಯಾಂ ।
ಅನ್ಯೈಶ್ಚ ವಿಪ್ರವೃಷಭೈಃ ಸುಕೃತೇಽಭಿಷೇಕೇ
ಧರ್ಮಾತ್ಮಜಾನು ಮುಮುದುರ್ನಿಖಿಲಾಶ್ಚ ಸಂತಃ ॥೨೧೨॥

ಧರ್ಮರಾಜನ ಅನಂತರ ದ್ರೌಪದೀ ಸಮೇತನಾದ ಭೀಮನನ್ನು ಅನಂತಸುಖ ಶಕ್ತಿ ಜ್ಞಾನಸ್ವರೂಪರಾದ ವ್ಯಾಸಕೃಷ್ಣರು ಅಭಿಷೇಕ ಮಾಡಿದಾಗ, ಬಳಿಕ ಬೇರೆ ಏಪ್ರೋತ್ತಮರೂ ಚೆನ್ನಾಗಿ ಅಭಿಷೇಕ ಮಾಡಿದಾಗ ಎಲ್ಲ ಸಜ್ಜನರೂ ಆನಂದಪಟ್ಟರು.

ತಸ್ಮಿನ್ ಮಹೋತ್ಸವವರೇ ದಿನಸಪ್ತಕಾನು-
ವೃತ್ತೇ ವಸಿಷ್ಠವೃಷಭೇಣ ಚ ವೃಷ್ಣಿಪೇನ ।
ಕೃಷ್ಣೇನ ತೇ ಯಯುರಮಾ ಪೃಥಯಾ ತಯಾ ಚ
ಪಾಂಚಾಲರಾಜಸುತಯಾ ಸ್ಥಲಮಿಂದ್ರವಾಸಂ ॥೨೧೩॥

ಆ ಮಹಾಮಹೋತ್ಸವ ಏಳು ದಿನಗಳವರೆಗೆ ನಡೆದ ಬಳಿಕ ವ್ಯಾಸಕೃಷ್ಣರೊಂದಿಗೆ ಮತ್ತು ಕುಂತಿ ದ್ರೌಪದಿಯರೊಂದಿಗೆ ಪಾಂಡವರು ಇಂದ್ರಪ್ರಸ್ಥಕ್ಕೆ ಹೋದರು.

ಕೋಶಸ್ಯ ಚಾರ್ಧಸಹಿತಾಸ್ತು ಯದೈವ ಪಾರ್ಥಾ
ಗಚ್ಛಂತಿ ತಾನನುಯಯುರ್ನಿಖಿಲಾಶ್ಚ ಪೌರಾಃ ।
ಊಚುಶ್ಚ ಹಾ ಬತ ಸುಯೋಧನ ಏಷ ಪಾಪೋ
ದೂರೇ ಚಕಾರ ನನು ಪಾಂಡುಸುತಾನ್ ಗುಣಾಢ್ಯಾನ್ ॥೨೧೪॥

ಕೋಶದ ಅರ್ಧಭಾಗವನ್ನು ತೆಗೆದುಕೊಂಡು ಪಾಂಡವರು ಇಂದ್ರಪ್ರಸ್ಥಕ್ಕೆ ಹೊರಟರು. ಎಲ್ಲ ನಾಗರಿಕರೂ ಅವರನ್ನು ಹಿಂಬಾಲಿಸಿದರು. 'ಅಯ್ಯೋ ಈ ಪಾಪಿ ದುರ್ಯೋಧನ ಗುಣಾಢ್ಯರಾದ ಪಾಂಡವರನ್ನು ನಮ್ಮಿಂದ ದೂರಮಾಡಿದ' ಎಂದರು.

ಭೀಮಪ್ರತಾಪಮವಲಂಬ್ಯ ಕಲಿಂಗಬಂಧಾತ್
ಮುಕ್ತಃ ಸುತಾಮಪಿ ಹಿ ತಸ್ಯ ಪುರಂ ವಿನಾಯ ।
ದ್ವೇಷ್ಯೇವಮಪ್ಯತಿಬಲಾನ್ ಹಿ ಸದೈವ ಪಾರ್ಥಾನ್
ಯಾಮೋ ವಯಂ ಗುಣಿಭಿರದ್ಯ ಸಹೈವ ಪಾರ್ಥೈಃ ॥೨೧೫॥

'ಈ ದುರ್ಯೋಧನ ಭೀಮನ ಬಲವನ್ನು ಆಶ್ರಯಿಸಿ ಕಲಿಂಗರಾಜನ ಬಂಧನದಿಂದ ಪಾರಾಗಿ ಅವನ ಕನ್ಯೆಯನ್ನು ಪಟ್ಟಣಕ್ಕೆ ತಂದ. ಹೀಗಿದ್ದರೂ ಅತ್ಯಂತ ಬಲಿಷ್ಠರಾದ ಪಾಂಡವರನ್ನು ಸದಾ ದ್ವೇಷಿಸುತ್ತಾನೆ. ಆದರಿಂದ ನಾವು ಈಗ ಗುಣವಂತರಾದ ಪಾಂಡವರೊಂದಿಗೆ ಹೊರಟು ಹೋಗುವೆವು' ಎಂದರು.

ಆಜ್ಞಾಪಯತ್ಯಪಿ ಸ ಭೇರಿರವೇಣ ಪಾರ್ಥಾನ್
ನೈವಾನುಗಚ್ಛತ ಯದಿ ವ್ರಜಥಾನು ವೋಽದ್ಯ ।
ವಿತ್ತಂ ಹರಿಷ್ಯ ಇಹ ಸರ್ವಮಪೀತಿ ತಚ್ಚ
ಪಾಪಃ ಕರೋತು ನ ವಯಂ ವಿಜಹಾಮ ಪಾರ್ಥಾನ್ ॥೨೧೬॥

'ಪಾಂಡವರನ್ನು ಹಿಂಬಾಲಿಸಬೇಡಿರಿ. ಹಿಂಬಾಲಿಸಿ ಹೋದಿರಾದರೆ ನಿಮ್ಮ ಎಲ್ಲ ಸಂಪತ್ತನ್ನೂ ಈಗಲೆ ರಾಜ್ಯದ ಬೊಕ್ಕಸಕ್ಕೆ ಸೇರಿಸುವೆವು' ಎಂದು ಭೇರಿಶಬ್ದದೊಂದಿಗೆ ಆಜ್ಞೆ ಮಾಡುತ್ತಿದ್ದಾನೆ. ಪಾಪಿ, ಅದನ್ನೂ ಮಾಡಲಿ. ನಾವು ಪಾಂಡವರನ್ನು ಬಿಟ್ಟಿರಲಾರೆವು ಎಂದರು.

ಸದ್ಭಿರ್ಹಿ ಸಂಗತಿರಿಹೈವ ಸುಖಸ್ಯ ಹೇತು-
ರ್ಮೋಕ್ಷೈಕಹೇತುರಥ ತದ್ವಿಪರೀತಮನ್ಯತ್ ।
ತಸ್ಮಾದ್ ವ್ರಜೇಮ ಸಹ ಪಾಂಡುಸುತೈರ್ಹಿ ಶಕ್ರ-
ಪ್ರಸ್ಥಂ ತ್ವಿತಿ ಸ್ಮ ಧೃತಚೇತಸ ಆಹ ಧರ್ಮಃ ॥೨೧೭॥

'ಸಜ್ಜನರ ಸಹವಾಸ ಇಹದಲ್ಲಿ ಸುಖಕಾರಣ. ಮೋಕ್ಷಕ್ಕೂ ಮುಖ್ಯಕಾರಣ. ದುರ್ಜನರೊಡನಾಟ ಅದಕ್ಕೆ ವಿಪರೀತವಾಗಿ ಇಹಪರಗಳೆರಡರಲ್ಲಿಯೂ ದುಃಖಕ್ಕೆ ಕಾರಣ. ಅದರಿಂದ ನಾವು ಪಾಂಡವರೊಂದಿಗೇ ಇಂದ್ರಪ್ರಸ್ಥಕ್ಕೆ ಹೋಗೋಣ' ಎಂದು ಸಜ್ಜನರು ಮನಸ್ಸಿನಲ್ಲಿ ನಿರ್ಧಾರ ಮಾಡಿದ್ದನ್ನು ತಿಳಿದು ಧರ್ಮರಾಜ ನುಡಿದ.

ಪ್ರೀತಿರ್ಯದಿ ಸ್ಮ ಭವತಾಂ ಮಯಿ ಸಾನುಜೇಽಸ್ತಿ
ತಿಷ್ಠಧ್ವಮತ್ರ ಪಿತುರೇವ ಹಿ ಶಾಸನೇ ಮೇ ।
ಕೀರ್ತಿರ್ಹಿ ವೋಽನುಗಮನಾತ್ ಪಿತುರತ್ಯಯೇನ
ನಶ್ಯೇನ್ನ ಇತ್ಯನುಸರಧ್ವಮಿಹಾಂಬಿಕೇಯಂ ॥೨೧೮॥

'ನಿಮಗೆ ನನ್ನಲ್ಲಿ ನನ್ನ ತಮ್ಮಂದಿರಲ್ಲಿ ಪ್ರೀತಿ ಇರುವುದಾದರೆ ಇಲ್ಲಿಯೇ ಇರಿ. ಏಕೆಂದರೆ ನನಗೆ ಪಿತನಾದ ಧೃತರಾಷ್ಟ್ರನ ಶಾಸನದಂತೆ ನಡೆದುಕೊಂಡರೆ ಕೀರ್ತಿ. ನೀವು ನನ್ನನ್ನು ಹಿಂಬಾಲಿಸಿ ಬಂದರೆ ಪಿತೃಶಾಸನದ ಉಲ್ಲಂಘನೆಯಿಂದ ಕೀರ್ತಿ ನಶಿಸುವುದು. ಅದರಿಂದ ನೀವು ಪಿತನಿಗೆ ಅನುಕೂಲವಾಗಿ ಇಲ್ಲಿಯೇ ಇರಿ' ಎಂದ ಧರ್ಮರಾಜ.

ಇತ್ಯೇವ ತೈಃ ಪುರಜನಾ ನಿಖಿಲೈರ್ನಿಪಿದ್ದಾಃ
ಕೃಚ್ಛ್ರೇಣ ತಸ್ಥುರಪಿ ತಾನ್ ಮನಸಾನ್ವಗಚ್ಛನ್ ।
ಪ್ರಾಪ್ಯಾಥ ಶಕ್ರಪುರಮಸ್ಮರತಾಂ ಚ ಕೃಷ್ಣೌ
ದೇವೇಶವರ್ಧಕಿಮಥಾಗಮದತ್ರ ಸೋಽಪಿ ॥೨೧೯॥

ಹೀಗೆ ಪಾಂಡವರು ಎಲ್ಲರೂ ನಾಗರಿಕರನ್ನು ತಡೆದುದರಿಂದ ಅವರು ಕಷ್ಟದಿಂದ, ದೇಹದಿಂದ ಹಸ್ತಿನಾವತಿಯಲ್ಲಿದ್ದರೂ ಮನಸ್ಸಿನಿಂದ ಪಾಂಡವರನ್ನೆ ಹಿಂಬಾಲಿಸಿ ಹೋದರು. ವ್ಯಾಸಕೃಷ್ಣರು ಇಂದ್ರಪ್ರಸ್ಥಕ್ಕೆ ಬಂದು ವಿಶ್ವಕರ್ಮನನ್ನು ನೆನೆದರು. ಒಡನೆ ಅವನು ಅಲ್ಲಿಗೆ ಬಂದ.

ವಾಸಿಷ್ಠಪೇನ ಯದುಪೇನ ಚ ಪಾಂಡವಾನಾಂ
ರತ್ನೋತ್ಕರಂ ಕುರು ಪುರಂ ಪುರುಹೂತಪುರ್ಯಾಃ ।
ಸಾದೃಶ್ಯತಸ್ತ್ವಿತಿ ನಿಯುಕ್ತ ಉಭೌ ಪ್ರಣಮ್ಯ
ಸರ್ವೇಶ್ವರೌ ಸ ಕೃತವಾಂಶ್ಚ ಪುರಂ ತಥೈವ ॥೨೨೦॥

ಇಂದ್ರನ ನಗರಕ್ಕೆ ಸಮವಾಗಿ ರತ್ನಮಯವಾದ ಒಂದು ಪಟ್ಟಣವನ್ನು ಪಾಂಡವರಿಗೆ ನಿರ್ಮಿಸಿಕೊಡು ಎಂದು ವ್ಯಾಸಕೃಷ್ಣರು ಆಜ್ಞೆ ಮಾಡಿದಾಗ ವಿಶ್ವಕರ್ಮ ಸರ್ವೇಶರಾದ ಅವರಿಬ್ಬರನ್ನೂ ನಮಿಸಿ ಹಾಗೇ ಪಟ್ಟಣವನ್ನು ನಿರ್ಮಿಸಿಕೊಟ್ಟ.

ದೇಶಂ ಚ ನಾತಿಜನಸಂವೃತಮನ್ಯದೇಶ-
ಸಂಸ್ಥೈರ್ಜನೈರಭಿಪುಪೂರಿರ ಆಶು ಪಾರ್ಥಾಃ ।
ತೇಷಾಂ ಗುಣೈರ್ಹರಿಪದಾನತಿಹೇತುತಶ್ಚ
ರಾಷ್ಟ್ರಾಂತರಾ ಇಹ ಶುಭಾ ವಸತಿಂ ಸ್ಮ ಚಕ್ರುಃ ॥೨೨೧॥

ಜನರಿಂದ ಅತಿನಿಬಿಡವಾಗದಂತೆ ಇಂದ್ರಪ್ರಸ್ಥ ಪ್ರದೇಶವನ್ನು ಪಾಂಡವರು ಬೇಗನೆ ಬೇರೆ ದೇಶದಲ್ಲಿದ್ದ ಜನರಿಂದ ತುಂಬಿಸಿದರು. ಅವರ ಸದ್ಗುಣಗಳಿಂದಲೂ ಹರಿಪಾದ ನಮನದ ನಿಮಿತ್ತದಿಂದಲೂ ಬೇರೆ ರಾಜ್ಯದ ಜನರು ಬಂದು ಇಲ್ಲಿ ಮನೆ ಮಾಡಿದರು.

ಪ್ರಸ್ಥಾಪ್ಯ ದೂರಮನುಜಸ್ಯ ಸುತಾನ್ ಸ ರಾಜಾ
ಚಕ್ರೇಽಭಿಷೇಕಮಪಿ ತತ್ರ ಸುಯೋಧನಸ್ಯ ।

ದುಶ್ಶಾಸನಂ ಚ ಯುವರಾಜಮಸೌ ವಿಧಾಯ
ಮೇನೇ ಕೃತಾರ್ಥಮಿವ ಚ ಸ್ವಮಶಾಂತಕಾಮಃ ॥೨೨೨॥

ತಮ್ಮನ ಮಕ್ಕಳನ್ನು ದೂರಕಳಿಸಿ ರಾಜಾ ಧೃತರಾಷ್ಟ್ರ ಹಸ್ತಿನಾವತಿಯಲ್ಲಿ ದುರ್ಯೋಧನನಿಗೆ ಅಭಿಷೇಕವನ್ನು ನಡೆಸಿದ. ದುಶ್ಶಾಸನನನ್ನು ಯುವರಾಜನನ್ನಾಗಿ ಮಾಡಿ ತನ್ನನ್ನು ತಾನು ಸ್ವಲ್ಪಮಟ್ಟಿಗೆ ಧನ್ಯನೆಂದು ತಿಳಿದ. ಏಕೆಂದರೆ ಅವನ ಭೋಗಲಾಲಸೆ ಇನ್ನೂ ಶಾಂತವಾಗಿರಲಿಲ್ಲ.

ಪಾರ್ಥಾಶ್ಚ ತೇ ಮುಮುದುರತ್ರ ವಸಿಷ್ಠವೃಷ್ಣಿ-
ವರ್ಯೋದಿತಾನಖಿಲತತ್ತ್ವವಿನಿರ್ಣಯಾಂಸ್ತು ।
ಶೃಣ್ವಂತ ಏವ ಹಿ ಸದಾ ಪೃಥಿವೀಂ ಚ ಧರ್ಮಾದ್
ಭುಂಜಂತ ಆಶ್ರಿತರಮಾಪತಿಪಾದಯುಗ್ಮಾಃ ॥೨೨೩॥

ಪಾಂಡವರು ರಮಾಪತಿಯ ಪಾದದ್ವಂದ್ವವನ್ನು ಆಶ್ರಯಿಸಿದರು. ವ್ಯಾಸಕೃಷ್ಣರು ಉಪದೇಶಿಸಿದ ಸಕಲ ತತ್ವನಿರ್ಣಯಗಳನ್ನು ಸದಾ ಕೇಳುತ್ತಲೇ ಧರ್ಮದಿಂದ ಭೂಮಿಯನ್ನು ಭೋಗಿಸುತ್ತ ಆನಂದಿಸಿದರು.

★ ★ ★ ★

ಇನ್ನೂರ ಒಂಭತ್ತನೆಯ ಅಧ್ಯಾಯ

(ಧೃತರಾಷ್ಟ್ರನಿಂದ ಧರ್ಮರಾಜನಿಗೆ ಅಭಿಷೇಕ, ಖಾಂಡವಪ್ರಸ್ಥಕ್ಕೆ ಹೋಗಲು ಆದೇಶ, ವೇದವ್ಯಾಸರ ಮತ್ತು ಯಾದವಕೃಷ್ಣನ ಜೊತೆಯಲ್ಲಿ ಖಾಂಡವಪ್ರಸ್ಥ ಪ್ರವೇಶ. ವಿಶ್ವಕರ್ಮನಿಂದ ನಗರ ನಿರ್ಮಾಣ ಮತ್ತು ಕೃಷ್ಣನ ಪ್ರಯಾಣ.)

ವೈಶಂಪಾಯನಃ

ದುರ್ಯೋಧನಸ್ಯ ಮಹಿಷೀ ಕಾಶಿರಾಜಸುತಾ ತದಾ ।
ಧೃತರಾಷ್ಟ್ರಸ್ಯ ಪುತ್ರಾಣಾಂ ವಧೂಭಿಃ ಸಹಿತಾ ತದಾ ॥೧॥

ಪಾಂಚಾಲೀಂ ಪ್ರತಿಜಗ್ರಾಹ ದ್ರೌಪದೀಂ ಶ್ರೀಮಿವಾಪರಾಮ್ ।
ಪೂಜಯಾಮಾಸ ಪೂಜಾರ್ಹಾಂ ಶಚೀದೇವೀಮಿವಾಗತಾಮ್ ॥೨॥

ಆಗ ದುರ್ಯೋಧನನ ಮಹಿಷಿಯಾದ ಕಾಶೀರಾಜಕುಮಾರಿಯು ಧೃತರಾಷ್ಟ್ರನ ಇತರ ಸೊಸೆಯರ ಜೊತೆಯಲ್ಲಿ ಇನ್ನೊಬ್ಬ ಶ್ರೀದೇವಿಯಂತಿದ್ದ ಪಾಂಚಾಲಿಯಾದ ದ್ರೌಪದಿಯನ್ನು ಸ್ವೀಕರಿಸಿದಳು. ಮನೆಗೆ ಬಂದ ಶಚೀದೇವಿಯಂತೆ ಪೂಜಾರ್ಹಳಾದ ಅವಳನ್ನು ಪೂಜಿಸಿದಳು.

ವವಂದೇ ತತ್ರ ಗಾಂಧಾರೀಂ ಮಾಧವೀ ಕೃಷ್ಣಯಾ ಸಹ ।
ಆಶಿಷಶ್ಚ ಪ್ರಯುಕ್ತಾ ತು ದ್ರೌಪದೀಂ ಪರಿಷಸ್ವಜೇ ॥೩॥

ಕುಂತಿಯು ಕೃಷ್ಣೆಯ ಜೊತೆಯಲ್ಲಿ ಅದೇ ಗಾಂಧಾರಿಗೆ ನಮಸ್ಕಾರವನ್ನು ಮಾಡಿದಳು. ಗಾಂಧಾರಿಯು ಆಶೀರ್ವಾದವನ್ನು ಮಾಡಿ ಕೃಷ್ಣೆಯನ್ನು ಆಲಿಂಗಿಸಿದಳು.

ಪರಿಷ್ವಜ್ಯ ಚ ಗಾಂಧಾರೀ ಕೃಷ್ಣಾಂ ಕಮಲಲೋಚನಾಮ್ ।
ಪುತ್ರಾಣಾಂ ಮಮ ಪಾಂಚಾಲೀ ಮೃತ್ಯುರೇವೇತ್ಯಮನ್ಯತ ॥೪॥

ಗಾಂಧಾರಿಯು ಕಮಲನೇತ್ರೆಯಾದ ಕೃಷ್ಣೆಯನ್ನು ಆಲಿಂಗಿಸಿ ಇವಳು ನನ್ನ ಪುತ್ರರಿಗೆ ಮೃತ್ಯುವೇ ಸರಿ ಎಂದು ಭಾವಿಸಿದಳು.

ಸಾ ಚಿಂತ್ಯ ವಿದುರಂ ಪ್ರಾಹ ಯುಕ್ತಿತಃ ಸುಬಲಾತ್ಮಜಾ ।
ಕುಂತೀ ರಾಜಸುತಾ ಕ್ಷತ್ತಃ ಸವಧೂಃ ಸಪರಿಚ್ಛದಾ ।
ಪಾಂಡೋರ್ನಿವೇಶನಂ ಶೀಘ್ರಂ ನೀಯತಾಂ ಯದಿ ರೋಚತೇ ॥೫॥

ಸುಬಲರಾಜಕುಮಾರಿಯಾದ ಅವಳು ಆಲೋಚನೆಯನ್ನು ಮಾಡಿ ವಿದುರನನ್ನು ಕರೆದು, 'ವಿದುರ, ಅವರಿಗೆ ಇಷ್ಟವಾಗುವುದಾದರೆ, ಕುಂತಿಯನ್ನು ತನ್ನ ಸೊಸೆ ಮತ್ತು ಪರಿವಾರದೊಂದಿಗೆ ಪಾಂಡುವಿನ ಅರಮನೆಗೆ ಶೀಘ್ರವಾಗಿ ಕರೆದುಕೊಂಡು ಹೋಗು' ಎಂದು ಹೇಳಿದಳು.

ಕರಣೇನ ಮುಹೂರ್ತೇನ ನಕ್ಷತ್ರೇಣ ತಿಥೌ ಶುಭೇ ।
ಯಥಾ ಗೃಹಾಗತಾ ಕುಂತೀ ರಂಸ್ಯತೇ ಸ್ವಸುತೈಃ ಸುಖಮ್ ॥೬॥

ಶುಭವಾದ ತಿಥಿ, ಮುಹೂರ್ತ, ಕರಣ ಮತ್ತು ನಕ್ಷತ್ರಗಳನ್ನು ನೋಡಿ ಮನೆಗೆ ಬಂದ ಕುಂತಿಯು ತನ್ನ ಮಕ್ಕಳ ಜೊತೆಯಲ್ಲಿ ಸುಖವಾಗಿರುವಂತೆ ವ್ಯವಸ್ಥೆಯನ್ನು ಮಾಡು.

ವೈಶಂಪಾಯನಃ

ತಥೇತ್ಯೇವ ತದಾ ಕ್ಷತ್ತಾ ಕಾರಯಾಮಾಸ ತತ್ ತದಾ ।
ಪೂಜಯಾಮಾಸುರತ್ಯರ್ಥಂ ಬಾಂಧವಾಃ ಪಾಂಡವಾಂಸ್ತದಾ ॥೭॥

ವಿದುರನು ಹಾಗೆಯೇ ಆಗಲಿ ಎಂದು ಹೇಳಿ ಎಲ್ಲವನ್ನೂ ಮಾಡಿದನು. ಆಗ ಬಾಂಧವರೆಲ್ಲರೂ ಪಾಂಡವರಿಗೆ ಬಹಳ ಸತ್ಕಾರವನ್ನು ಮಾಡಿದರು.

ಶ್ರೇಣಿಮುಖ್ಯಾಶ್ಚ ನಾಗರಾಃ ಪೂಜಯಂತಿ ಸ್ಮ ಪಾಂಡವಾನ್ ।
ಭೀಷ್ಮೋ ದ್ರೋಣಸ್ತಥಾ ಕರ್ಣೋ ಬಾಹ್ಲೀಕಃ ಸಸುತಸ್ತದಾ ॥೮॥

ಶಾಸನಾದ್ ಧೃತರಾಷ್ಟ್ರಸ್ಯ ಅಕುರ್ವನ್ನತಿಥಿಕ್ರಿಯಾಮ್ ।
ಏವಂ ವಿಹರತಾಂ ತೇಷಾಂ ಪಾಂಡವಾನಾಂ ಮಹಾತ್ಮನಾಮ್ । ನೇತಾ
ಸರ್ವಸ್ಯ ಕಾರ್ಯಸ್ಯ ವಿದುರೋ ರಾಜಶಾಸನಾತ್ ॥೯॥

ಪ್ರಧಾನರು ಮೊದಲಾದ ನಗರವಾಸಿಗಳು, ಪಾಂಡವರನ್ನು ಪೂಜಿಸಿದರು. ಭೀಷ್ಮ, ದ್ರೋಣ, ಕರ್ಣ, ಬಾಹ್ಲೀಕ ಮತ್ತು ಅವನ ಪುತ್ರರು ಇವರೆಲ್ಲರೂ ಧೃತರಾಷ್ಟ್ರನ ಶಾಸನದಂತೆ ಪಾಂಡವರಿಗೆ ಅತಿಥಿಸತ್ಕಾರವನ್ನು ಮಾಡಿದರು. ಹೀಗೆ ವಿಹಾರವನ್ನು ಮಾಡುವ ಮಹಾನುಭಾವರಾದ ಪಾಂಡವರಿಗೆ ಎಲ್ಲ ಕಾರ್ಯಗಳಲ್ಲಿಯೂ ರಾಜಶಾಸನದಂತೆ ವಿದುರನು ಮಾರ್ಗದರ್ಶಕ- ನಾಗಿದ್ದನು.

ವಿಶ್ರಂತಾಸ್ತೇ ಮಹಾತ್ಮಾನಃ ಕಂಚಿತ್ ಕಾಲಂ ಸುಖೋಷಿತಾಃ । ಆಹೂತಾ
ಧೃತರಾಷ್ಟ್ರೇಣ ರಾಜ್ಞಾ ಶಾಂತನವೇನ ಚ ॥೧೦॥

ಆ ಮಹಾನುಭಾವರು ಸ್ವಲ್ಪಕಾಲ ಸುಖದಿಂದ ವಾಸಿಸಿ, ವಿಶ್ರಾಂತಿಯನ್ನು ಪಡೆದ ಮೇಲೆ ಧೃತರಾಷ್ಟ್ರನು ಮತ್ತು ಭೀಷ್ಮರು ಅವರನ್ನು ಆಹ್ವಾನಿಸಿದರು.

ಧೃತರಾಷ್ಟ್ರಃ

ಭ್ರಾತೃಭಿಃ ಸಹ ಕೌಂತೇಯ ನಿಬೋಧ ತ್ವಂ ವಚೋ ಮಮ ।
ಪಾಂಡುನಾ ವರ್ಧಿತಂ ರಾಜ್ಯಂ ಪಾಂಡುನಾ ಪಾಲಿತಂ ಜಗತ್ ॥೧೧॥

ಕೌಂತೇಯನಾದ ಧರ್ಮರಾಜನೇ, ನಿನ್ನ ತಮ್ಮಂದಿರ ಜೊತೆಯಲ್ಲಿ ನನ್ನ ಮಾತುಗಳನ್ನು ಕೇಳು. ಪಾಂಡುವು ಈ ರಾಜ್ಯವನ್ನು ಅಭಿವೃದ್ಧಿಪಡಿಸಿ ಜಗತ್ತನ್ನೇ ಪಾಲಿಸಿದನು.

ಶಾಸನಾನ್ಮಮ ಕೌಂತೇಯ ಭ್ರಾತಾ ಮಮ ಮಹಾಬಲಃ ।
ಕೃತವಾನ್ ದುಷ್ಕರಂ ಕರ್ಮ ನಿತ್ಯಮೇವ ವಿಶಾಂಪತೇ ॥೧೨॥

ರಾಜನಾದ ಕೌಂತೇಯನೇ, ನನ್ನ ಶಾಸನಕ್ಕನುಗುಣವಾಗಿ ಮಹಾಬಲನಾದ ನನ್ನ ತಮ್ಮನು ಯಾವಾಗಲೂ ದುಷ್ಕರವಾದ ಕರ್ಮಗಳನ್ನು ಮಾಡಿದನು.

ತಸ್ಮಾತ್ ತ್ವಮಪಿ ಕೌಂತೇಯ ಶಾಸನಂ ಕುರು ಮಾಚಿರಮ್ ।
ಮಮ ಪುತ್ರಾ ದುರಾತ್ಮಾನೋ ದರ್ಪಾಹಂಕಾರಸಂಯುತಾಃ ॥೧೩॥

ಶಾಸನಂ ನ ಕರಿಷ್ಯಂತಿ ಮಮ ನಿತ್ಯಂ ಯುಧಿಷ್ಠಿರ ।
ಸ್ವಕಾರ್ಯನಿರತೈರ್ನಿತ್ಯಮವಲಿಪ್ತೈರ್ದುರಾತ್ಮಭಿಃ ।
ಪುನರ್ವೈ ವಿಗ್ರಹೋ ಮಾ ಭೂತ್ ಖಾಂಡವಪ್ರಸ್ಥಮಾವಿಶ ॥೧೪॥

ಆದ್ದರಿಂದ ಕೌಂತೇಯನೇ, ನೀನೂ ಸಹ ನನ್ನ ಶಾಸನವನ್ನು ಶೀಘ್ರವಾಗಿ ಅನುಸರಿಸು. ನನ್ನ ಪುತ್ರರು ದುಷ್ಟಮನಸ್ಸುಳ್ಳವರು ಮತ್ತು ದರ್ಪಾಹಂಕಾರಗಳಿಂದ ಕೂಡಿದವರು. ಯುಧಿಷ್ಠಿರನೇ, ಅವರು ನನ್ನ ಶಾಸನದಂತೆ ಯಾವಾಗಲೂ ನಡೆಯುವುದಿಲ್ಲ. ನಿತ್ಯವೂ ದುರಹಂಕಾರಿಗಳಾದ, ಸ್ವಾರ್ಥಿಗಳಾದ, ದುರಾತ್ಮರಾದ ಅವರ ಜೊತೆಯಲ್ಲಿ ಪುನಃ ವಿರೋಧವು ಉಂಟಾಗುವುದು ಬೇಡ. ನೀನು ಖಾಂಡವಪ್ರಸ್ಥಕ್ಕೆ ಹೋಗು.

ನ ಚ ವೋ ವಸತಸ್ತತ್ರ ಕಂಚಿಚ್ಚಕ್ತಃ ಪ್ರಬಾಧಿತುಮ್ ।
ಸಂರಕ್ಷ್ಯಮಾಣಾನ್ ಪಾರ್ಥೇನ ತ್ರಿದಶಾನಿವ ವಜ್ರಿಣಾ ॥೧೫॥

ಇಂದ್ರನು ತ್ರಿದಶರನ್ನು ಕಾಡಿಸಿದಂತೆ ಅರ್ಜುನನಿಂದ ರಕ್ಷಿಸಲ್ಪಟ್ಟು ಅಲ್ಲಿ ವಾಸಿಸುವ ನಿಮ್ಮನ್ನು ಬಾಧಿಸಲು ಯಾವನೂ ಶಕ್ತನಾಗುವುದಿಲ್ಲ.

ಅರ್ಧರಾಜ್ಯಂ ತು ಸಂಪ್ರಾಪ್ಯ ಖಾಂಡವಪ್ರಸ್ಥಮಾವಿಶ ।
ಕೇಶವೋ ಯದಿ ಮನ್ಯೇತ ತತ್ ಕರ್ತವ್ಯಮಸಂಶಯಮ್ ॥೧೬॥

ಅರ್ಧರಾಜ್ಯವನ್ನು ಪಡೆದು ಖಾಂಡವಪ್ರಸ್ಥಕ್ಕೆ ಹೋಗು. ಕೇಶವನು ಸಮ್ಮತಿಸುವುದಾದರೆ, ಶೀಘ್ರವಾಗಿ ಅದನ್ನು ಮಾಡು.

ವೈಶಂಪಾಯನಃ

ಪ್ರತಿಗೃಹ್ಯ ತು ತೇ ವಾಕ್ಯಂ ನೃಪಂ ಸರ್ವೇ ಪ್ರಣಮ್ಯ ಚ ।
ವಾಸುದೇವೇನ ಸಮ್ಮಂತ್ರ್ಯ ಪಾಂಡವಾಃ ಸಮುಪಾವಿಶಾನ್ ॥೧೭॥

ಧೃತರಾಷ್ಟ್ರನ ವಾಕ್ಯವನ್ನು ಸ್ವೀಕರಿಸಿ ಅವನಿಗೆ ಎಲ್ಲರೂ ನಮಸ್ಕರಿಸಿ ಕೃಷ್ಣನ ಜೊತೆಯಲ್ಲಿ ಸಮಾಲೋಚನೆ ನಡೆಸಿ ಪಾಂಡವರು ಒಂದು ಕಡೆ ಕುಳಿತರು.

ಧೃತರಾಷ್ಟ್ರಃ

ಅಭಿಷೇಕಸ್ಯ ಸಂಭಾರಾನ್ ಕ್ಷತ್ತರಾನಯ ಮಾಚಿರಮ್ ।
ಅಭಿಷಿಕ್ತಂ ಕರಿಷ್ಯಾಮಿ ಅದ್ಯೈವ ಕುರುನಂದನಮ್ ॥೧೮॥

ವಿದುರನೇ, ಶೀಘ್ರವಾಗಿ ಅಭಿಷೇಕದ ಸಾಮಗ್ರಿಗಳನ್ನು ತೆಗೆದುಕೊಂಡು ಬಾ. ಈ ದಿನವೇ ಕುರುನಂದನನಾದ ಧರ್ಮರಾಜನಿಗೆ ಅಭಿಷೇಕವನ್ನು ಮಾಡುವೆನು.

ಬ್ರಾಹ್ಮಣಾ ಆಗಮಶ್ರೇಷ್ಠಾಃ ಶ್ರೇಣಿಮುಖ್ಯಾಶ್ಚ ಸರ್ವಶಃ ।
ಆಹೂಯಂತಾಂ ಪ್ರಕೃತಯೋ ಬಾಂಧವಾಶ್ಚ ವಿಶೇಷತಃ ॥೧೯॥

ಬ್ರಾಹ್ಮಣರನ್ನೂ, ಆಗಮಶ್ರೇಷ್ಠರನ್ನೂ, ಸೇನಾಪ್ರಧಾನರನ್ನೂ, ಎಲ್ಲಾ ಪ್ರಜೆಗಳನ್ನೂ, ವಿಶೇಷವಾಗಿ ಬಂಧುಗಳನ್ನೂ ಆಹ್ವಾನಿಸಿ.

ಪುಣ್ಯಾಹಂ ವಾಚ್ಯತಾಂ ತಾತ ಗೋಸಹಸ್ರಂ ಚ ದೀಯತಾಮ್ ।
ಗ್ರಾಮಮುಖ್ಯಶ್ಚ ವಿಪ್ರೇಭ್ಯೋ ದೀಯಂತಾಂ ಸಹದಕ್ಷಿಣಾಃ ॥೨೦॥

ಅಂಗದೇ ಮಕುಟಂ ಕ್ಷತ್ತರ್ಹಸ್ತಾಭರಣಮಾನಯ ।
ಮುಕ್ತಾವಲೀಶ್ಚ ಹಾರಂ ಚ ನಿಷ್ಕಾದೀನ್ ಕುಂಡಲಾನಿ ಚ ।
ಕಟಿಬಂಧನಸೂತ್ರಂ ಚ ತಥೋದರನಿಬಂಧನಮ್ ॥೨೧॥

ಪ್ರೀತಿಪಾತ್ರನೇ, ಪುಣ್ಯಾಹವಾಚನೆಯನ್ನು ಮಾಡಿಸು, ಸಹಸ್ರ ಗೋದಾನವನ್ನು ಮಾಡು, ಬ್ರಾಹ್ಮಣರಿಗೆ ದಕ್ಷಿಣೆ ಸಹಿತವಾಗಿ ಶ್ರೇಷ್ಠವಾದ ಗ್ರಾಮಗಳನ್ನು ದಾನಮಾಡು.

ವಿದುರನೇ, ಧರ್ಮರಾಜನಿಗೆ ಕಿರೀಟವನ್ನೂ, ಹಸ್ತಾಭರಣವನ್ನೂ, ಮುಕ್ತಾವಲಿಗಳನ್ನೂ, ಹಾರಗಳನ್ನೂ, ಕುಂಡಲಗಳನ್ನೂ, ಕಟಿಸೂತ್ರವನ್ನೂ ಮತ್ತು ಉದರಬಂಧನವನ್ನೂ ತೆಗೆದುಕೊಂಡು ಬಾ.

ಅಷ್ಟೋತ್ತರಸಹಸ್ರಂ ತು ಬ್ರಾಹ್ಮಣಾಧಿಷ್ಠಿತಾ ಗಜಾಃ ।
ಜಾಹ್ನವೀಸಲಿಲಂ ಶೀಘ್ರಮಾನೀಯಂತಾಂ ಪುರೋಹಿತೈಃ ॥೨೨॥

ಒಂದು ಸಾವಿರದ ಎಂಟು ಬ್ರಾಹ್ಮಣರು ಪುರೋಹಿತರ ಜೊತೆಯಲ್ಲಿ ಗಜಗಳ ಮೇಲೆ ಪ್ರಯಾಣಮಾಡಿ, ಶೀಘ್ರವಾಗಿ ಗಂಗಾಜಲವನ್ನು ತರಲಿ.

ಅಭಿಷೇಕೋದಕಕ್ಲಿನ್ನಂ ಸರ್ವಾಭರಣಭೂಷಿತಮ್ ।
ಔಪವಾಹ್ಯೋಪರಿಗತಂ ದಿವ್ಯಚಾಮರವೀಜಿತಮ್ ॥೨೩॥

ಸುವರ್ಣಮಣಿಚಿತ್ರೇಣ ಶ್ವೇತಚ್ಛತ್ರೇಣ ಶೋಭಿತಮ್ ।
ಜಯೇತಿ ದ್ವಿಜವಾಕ್ಯೇನ ಸ್ತೂಯಮಾನಂ ನೃಪೈಸ್ತಥಾ ॥೨೪॥

ದೃಷ್ಟ್ವಾ ಕುಂತೀಸುತಂ ಜ್ಯೇಷ್ಠಮಾಜಮೀಢಂ ಯುಧಿಷ್ಠಿರಮ್ ।
ಪ್ರೀತಾಃ ಪ್ರೀತೇನ ಮನಸಾ ಪ್ರಶಂಸಂತು ಪುರೇ ಜನಾಃ ॥೨೫॥

ಪಾಂಡೋಃ ಕೃತೋಪಕಾರಸ್ಯ ರಾಜ್ಯಂ ದತ್ತ್ವಾ ಮಮೈವ ಚ ।
ಪ್ರತಿಕ್ರಿಯಾಕೃತಮಿದಂ ಭವಿಷ್ಯತಿ ನ ಸಂಶಯಃ ॥೨೬॥

ಅಭಿಷೇಕಜಲದಿಂದ ಆರ್ದ್ರನಾಗಿ, ಸರ್ವಾಭರಣಭೂಷಿತನಾಗಿ, ರಾಜವಾಹನದಲ್ಲಿ ಕುಳಿತು, ದಿವ್ಯಚಾಮರದಿಂದ ಬೀಸಲ್ಪಟ್ಟು, ಸುವರ್ಣಮಣಿಗಳಿಂದ ಸುಂದರವಾಗಿ ಕಾಣುವ ಶ್ವೇತಚ್ಛತ್ರದಿಂದ ಶೋಭಿತನಾಗಿ, ಬ್ರಾಹ್ಮಣರಿಂದಲೂ ಮತ್ತು ರಾಜರುಗಳಿಂದಲೂ ಜಯಶಬ್ದದಿಂದ ಸ್ತೋತ್ರಮಾಡಲ್ಪಡುವ ಅಜಮೀಢವಂಶದಲ್ಲಿ ಬಂದವನೂ, ಕುಂತಿಯ ಜ್ಯೇಷ್ಠಪುತ್ರನೂ ಆದ ಯುಧಿಷ್ಠಿರನನ್ನು ನೋಡಿ, ಸಂತೋಷವನ್ನು ಹೊಂದಿ ಪುರಜನರು ಸಂತುಷ್ಟವಾದ ಮನಸ್ಸಿನಿಂದ ಅವನನ್ನು ಪ್ರಶಂಸೆ ಮಾಡಲಿ. ನನಗೇ ರಾಜ್ಯವನ್ನು ಕೊಟ್ಟು ಉಪಕಾರವನ್ನು ಮಾಡಿದ ಪಾಂಡುವಿಗೆ ಇದು ನಿಸ್ಸಂಶಯವಾಗಿ ಪ್ರತ್ಯುಪಕಾರವಾಗುವುದು.

ವೈಶಂಪಾಯನಃ

ಭೀಷ್ಮೋ ದ್ರೋಣಃ ಕೃಪಃ ಕ್ಷತ್ತಾ ಸಾಧು ಸಾಧ್ವಿತ್ಯಭಾಷತಾಮ್ ।

ಆಗ ಭೀಷ್ಮರು, ದ್ರೋಣರು, ಕೃಪರು ಮತ್ತು ವಿದುರನೂ ಸಾಧು ಸಾಧು ಎಂದು ಹೇಳಿದರು.

ಶ್ರೀವಾಸುದೇವಃ

ಯುಕ್ತಮೇತನ್ಮಹಾರಾಜ ಕೌರವಾಣಾಂ ಯಶಸ್ಕರಮ್ ।
ಶೀಘ್ರಮದ್ಯೈವ ರಾಜೇಂದ್ರ ಯಥೋಕ್ತಂ ಕರ್ತುಮರ್ಹಸಿ ॥೨೭॥

ಮಹಾರಾಜನೇ, ಇದು ಕೌರವರಿಗೆ ಉಚಿತವಾದುದು ಮತ್ತು ಕೀರ್ತಿಕರವಾದದ್ದು. ರಾಜೇಂದ್ರನೇ, ಈ ದಿನವೇ ನೀನು ಹೇಳಿದಂತೆ ಮಾಡುವುದು ಒಳ್ಳೆಯದು.

ಇತ್ಯೇವಮುಕ್ತ್ವಾ ವಾರ್ಷ್ಣೇಯಸ್ತ್ವರಯಾಮಾಸ ತಂ ತದಾ ।
ಯಥೋಕ್ತಂ ಧೃತರಾಷ್ಟ್ರಶ್ಚ ಕಾರಯಾಮಾಸ ಕೌರವಃ ॥೨೮॥

ವೃಷ್ಣಿಕುಲದಲ್ಲಿ ಜನಿಸಿದ ವಾಸುದೇವನು ಹೀಗೆ ಹೇಳಿ ಧೃತರಾಷ್ಟ್ರನಿಗೆ ತ್ವರೆಮಾಡಿಸಿದನು. ಕೌರವನಾದ ಧೃತರಾಷ್ಟ್ರನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ತಸ್ಮಿನ್ ಕ್ಷಣೇ ಮಹಾರಾಜ ಕೃಷ್ಣದ್ವೈಪಾಯನಸ್ತದಾ ।
ಆಗತ್ಯ ಕುರುಭಿಃ ಸರ್ವೈಃ ಪೂಜಿತಃ ಸಸುಹೃದ್ಗಣೈಃ ॥೨೯॥

ಮಹಾರಾಜನೇ, ಆ ಕ್ಷಣದಲ್ಲಿ ವೇದವ್ಯಾಸರು ಅಲ್ಲಿಗೆ ಬಂದು ಕುರುಗಳಿಂದಲೂ, ಎಲ್ಲಾ ಸುಹೃದ್ಗಣದಿಂದಲೂ ಪೂಜಿತರಾದರು.

ಮೂರ್ಧಾವಸಿಕ್ತೈಃ ಸಹಿತೋ ಬ್ರಾಹ್ಮಣೈರ್ವೇದಪಾರಗೈಃ ।
ಕಾರಯಾಮಾಸ ವಿಧಿವತ್ ಕೇಶವಾನುಮತೇ ತದಾ ॥೩೦॥

ಮೂರ್ಧಾವಸಿಕ್ತ ರಾಜರುಗಳಿಂದಲೂ, ವೇದಪಾರಂಗತರಾದ ಬ್ರಾಹ್ಮಣರಿಂದಲೂ ಸಹಿತರಾಗಿ ವೇದವ್ಯಾಸರು ಕೇಶವನ ಅಭಿಪ್ರಾಯದಂತೆ ಎಲ್ಲವನ್ನೂ ವಿಧಿಪೂರ್ವಕವಾಗಿ ಮಾಡಿಸಿದರು.

ಕೃಪೋ ದ್ರೋಣಶ್ಚ ಭೀಷ್ಮಶ್ಚ ಧೌಮ್ಯಶ್ಚ ವ್ಯಾಸಕೇಶವೌ ।
ಬಾಹ್ಲೀಕಃ ಸೋಮದತ್ತಶ್ಚ ಚಾತುರ್ವೇದ್ಯಾ ಪುರಸ್ಕೃತಾಃ ।
ಅಭಿಷೇಕಂ ತದಾ ಚಕ್ರುರ್ಭದ್ರಪೀಠೇ ಸುಸಂಯತಮ್ ॥೩೧॥

ಕೃಪಾಚಾರ್ಯರೂ, ದ್ರೋಣರೂ, ಭೀಷ್ಮರೂ, ಧೌಮ್ಯರೂ, ವ್ಯಾಸಕೇಶವರೂ, ಬಾಹ್ಲೀಕರಾಜರೂ, ಸೋಮದತ್ತ ಇವರುಗಳನ್ನು ಮುಂದೆಮಾಡಿಕೊಂಡು ನಿಯಮಶೀಲನಾದ ಧರ್ಮರಾಜನನ್ನು ಭದ್ರಪೀಠದಲ್ಲಿ ಕುಳ್ಳಿರಿಸಿ ನಾಲ್ಕೂ ವೇದಗಳ ಮಂತ್ರಗಳಿಂದ ಅಭಿಷೇಕವನ್ನು ಮಾಡಿದರು.

ಜಿತ್ವಾ ತು ಪೃಥಿವೀಂ ಕೃತ್ಸ್ನಾಂ ವಶೇ ಕೃತ್ವಾ ನರರ್ಷಭಾನ್ ।
ರಾಜಸೂಯಾದಿಭಿರ್ಯಜ್ಞೈಃ ಕ್ರತುಭಿರ್ಭೂರಿದಕ್ಷಿಣೈಃ ॥೩೨॥

ಸ್ನಾತ್ವಾ ಹ್ಯವಭೃಥಸ್ನಾನಂ ಮೋದತಾಂ ಬಾಂಧವೈಃ ಸಹ ।
ಏವಮುಕ್ತ್ವಾ ತು ತೇ ಸರ್ವೇ ಆಶೀರ್ಭಿರಭಿಪೂಜಯನ್ ॥೩೩॥

ಸಮಗ್ರವಾದ ಪೃಥಿವಿಯನ್ನು ಗೆದ್ದು ರಾಜರುಗಳನ್ನು ವಶದಲ್ಲಿಟ್ಟುಕೊಂಡು ರಾಜಸೂಯಾದಿ ಯಜ್ಞಗಳನ್ನು ಮಾಡಿ ಭೂರಿದಕ್ಷಿಣೆಗಳನ್ನು ಕೊಟ್ಟು ಅವಭೃತಸ್ನಾನವನ್ನು ಮಾಡಿ ಬಾಂಧವರ ಜೊತೆಯಲ್ಲಿ ಸುಖದಿಂದಿರು. ಹೀಗೆ ಹೇಳಿ, ಅವರೆಲ್ಲರೂ ಆಶೀರ್ವಾದಗಳಿಂದ ಧರ್ಮರಾಜನನ್ನು ಸತ್ಕರಿಸಿದರು.

ಮೂರ್ಧಾಭಿಷಿಕ್ತಃ ಕೌರವ್ಯಃ ಸರ್ವಾಭರಣಭೂಷಿತಃ ।
ಜಯೇತಿ ಸಂಸ್ತುತೋ ರಾಜಾ ಪ್ರದದೌ ಧನಮಕ್ಷಯಮ್ ॥೩೪॥

ಮೂರ್ಧಾಭಿಷಿಕ್ತನಾದ ಧರ್ಮರಾಜನು ಜಯಶಬ್ದದಿಂದ ಸ್ತೋತ್ರಮಾಡಲ್ಪಟ್ಟವನಾಗಿ, ಸರ್ವಾಭರಣಭೂಷಿತನಾಗಿ ಅಕ್ಷಯವಾದ ಧನವನ್ನು ದಾನ ಮಾಡಿದನು.

ಸರ್ವಮೂರ್ಧಾವಸಿಕ್ತೈಶ್ಚ ಪೂಜಿತಃ ಕುರುನಂದನಃ ।
ಔಪವಾಹ್ಯಮಥಾರುಹ್ಯ ದಿವ್ಯಚ್ಛತ್ರೋಪಶೋಭಿತಃ ।
ರರಾಜಾನುಗತೋ ರಾಜಾ ಮಹೇಂದ್ರ ಇವ ದೈವತೈಃ ॥೩೫॥

ಮೂರ್ಧಾಭಿಷಿಕ್ತನಾಗಿ, ಎಲ್ಲರಿಂದಲೂ ಸತ್ಕರಿಸಲ್ಪಟ್ಟ ಕುರುನಂದನನಾದ ಯುಧಿಷ್ಠಿರನು ರಾಜವಾಹನವನ್ನು ಏರಿ, ದಿವ್ಯಚತ್ರದಿಂದ ಶೋಭಿತನಾಗಿ, ರಾಜರುಗಳಿಂದ ಹಿಂಬಾಲಿಸಲ್ಪಟ್ಟು, ದೇವತೆಗಳಿಂದ ಹಿಂಬಾಲಿಸಲ್ಪಟ್ಟ ಮಹೇಂದ್ರನಂತೆ ಶೋಭಿಸಿದನು.

ತತಃ ಪ್ರದಕ್ಷಿಣೀಕೃತ್ಯ ನಗರಂ ನಾಗಸಾಹ್ವಯಮ್ ।
ಪ್ರವಿವೇಶ ತತೋ ರಾಜಾ ನಾಗರೈಃ ಪೂಜಿತೋ ಭೃಶಮ್ ॥೩೬॥

ಅನಂತರ ಹಸ್ತಿನಪುರ ನಗರಕ್ಕೆ ಪ್ರದಕ್ಷಿಣೆಯನ್ನು ಮಾಡಿ, ನಗರವಾಸಿಗಳಿಂದ ಪೂಜಿಸಲ್ಪಟ್ಟು, ನಗರದೊಳಗೆ ಪ್ರವೇಶಿಸಿದನು.

ಮೂರ್ಧಾವಸಿಕ್ತಂ ಕೌಂತೇಯಮಭ್ಯನಂದಂತ ಬಾಂಧವಾಃ ।
ಗಾಂಧಾರಿಪುತ್ರಾಃ ಶೋಚಂತ ಸರ್ವೇ ತೇ ಸಹ ಬಾಂಧವೈಃ ॥೩೭॥

ಬಾಂಧವರೆಲ್ಲರೂ ಮೂರ್ಧಾವಸಿಕ್ತನಾದ ಕೌಂತೇಯನಾದ ಯುಧಿಷ್ಠಿರನನ್ನು ಅಭಿನಂದಿಸಿದರು. ಗಾಂಧಾರಿಯ ಪುತ್ರರೆಲ್ಲರೂ ಬಾಂಧವರ ಜೊತೆಯಲ್ಲಿ ಶೋಕವನ್ನು ಹೊಂದಿದರು.

ಜ್ಞಾತ್ವಾ ಶೋಕಂ ತು ಪುತ್ರಾಣಾಂ ಧೃತರಾಷ್ಟ್ರೋಽಬ್ರವೀನ್ನೃಪಮ್ ।
ಸಮಕ್ಷಂ ವಾಸುದೇವಸ್ಯ ಕುರೂಣಾಂ ಚ ಸಮಕ್ಷತಃ ॥೩೮॥

ತನ್ನ ಮಕ್ಕಳ ಶೋಕವನ್ನು ತಿಳಿದು ಧೃತರಾಷ್ಟ್ರನು ವಾಸುದೇವನ ಎದುರಿನಲ್ಲಿ ಮತ್ತು ಎಲ್ಲಾ ಕುರುಗಳ ಎದುರಿನಲ್ಲಿ ಧರ್ಮರಾಜನನ್ನು ಕುರಿತು ಹೇಳಿದನು.

ಧೃತರಾಷ್ಟ್ರಃ

ಅಭಿಷೇಕಂ ತ್ವಯಾ ಪ್ರಾಪ್ತಂ ದುಷ್ಪ್ರಾಪಮಕೃತಾತ್ಮಭಿಃ ।
ಗಚ್ಛ ತ್ವಮದ್ಯೈವ ನೃಪ ಕೃತಕೃತ್ಯೋಽಸಿ ಪೌರವ ॥೩೯॥

ನೀನು ಈ ದಿನ ಪುಣ್ಯಹೀನರು ಪಡೆಯಲು ಸಾಧ್ಯವಿಲ್ಲದ ಅಭಿಷೇಕವನ್ನು ಪಡೆದಿದ್ದೀಯೆ. ಪೌರವನಾದ ರಾಜನೇ, ನೀನು ಕೃತಕೃತ್ಯನಾಗಿದ್ದೀಯೆ. ಈ ದಿನವೇ ಹೊರಡು.

ಆಯುಃ ಪುರೂರವಾ ರಾಜನ್ ನಹುಷಶ್ಚ ಯಯಾತಿನಾ ।
ತತ್ರೈವ ನಿವಸಂತಿ ಸ್ಮ ಖಾಂಡವಾಖ್ಯೇ ನೃಪೋತ್ತಮಾಃ ॥೪೦॥

ರಾಜನೇ, ನೃಪಶ್ರೇಷ್ಠರಾದ ಆಯು, ಪುರೂರವ, ನಹುಷ ಮತ್ತು ಯಯಾತಿ ಇವರು ಖಾಂಡವಪ್ರಸ್ಥದಲ್ಲಿಯೇ ವಾಸವನ್ನು ಮಾಡಿದ್ದರು.

ರಾಜಧಾನೀ ತು ಸರ್ವೇಷಾಂ ಪೌರವಾಣಾಂ ಮಹಾಭುಜ ।
ವಿನಾಶಿತಂ ಮುನಿಗಣೈರ್ಲೋಭಾದ್ ಬುಧಸುತಸ್ಯ ತು ॥೪೧॥

ಮಹಾಭುಜನೇ, ಅದು ಎಲ್ಲಾ ಪೌರವರಿಗೂ ರಾಜಧಾನಿಯಾಗಿದ್ದಿತು. ಬುಧಸುತನಾದ ಪುರೂರವನ ಸ್ತ್ರೀಲೋಭದಿಂದ ಮುನಿಗಳ ಸಮೂಹವು ಶಾಪವನ್ನು ಕೊಟ್ಟು ಆ ನಗರವನ್ನು ನಾಶಮಾಡಿತು.

ತಸ್ಮಾತ್ ತ್ವಂ ಖಾಂಡವಪ್ರಸ್ಥಂ ಪುರಂ ರಾಷ್ಟ್ರಂ ಚ ವರ್ಧಯ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ಕೃತಲಕ್ಷಣಾಃ ॥೪೨॥

ತ್ವದ್ಭಕ್ತ್ಯಾ ಜಂತವಶ್ಚಾನ್ಯೇ ಭಜಂತ್ಯೇವ ಪುರಂ ಶುಭಮ್ ।
ಪುರಂ ರಾಷ್ಟ್ರಂ ಸಮೃದ್ಧಂ ವೈ ಧನಧಾನ್ಯೈಃ ಸಮಾವೃತಮ್ ।
ತಸ್ಮಾದ್ ಗಚ್ಛಸ್ವ ಕೌಂತೇಯ ಭ್ರಾತೃಭಿಃ ಸಹಿತೋಽನಘ ॥೪೩॥

ಆದ್ದರಿಂದ ನೀನು ಖಾಂಡವಪ್ರಸ್ಥಕ್ಕೆ ಹೋಗಿ ಪುರವನ್ನೂ ಮತ್ತು ರಾಷ್ಟ್ರವನ್ನೂ ಅಭಿವೃದ್ಧಿಪಡಿಸು. ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಮತ್ತು ಪ್ರಾಣಿಗಳೂ ಸಹ ಶಂಖಚಕ್ರಚಿಹ್ನೆಗಳನ್ನು ಧರಿಸಿ ನಿನ್ನ ಮೇಲಿನ ಅನುರಾಗದಿಂದ ಆ ಶುಭವಾದ ಪಟ್ಟಣದಲ್ಲಿ ವಾಸಮಾಡುತ್ತಾರೆ. ಆ ಪುರವು ಮತ್ತು ರಾಷ್ಟ್ರವು ಧನಧಾನ್ಯಗಳಿಂದ ಪೂರ್ಣವಾಗಿದ್ದು ಸಮೃದ್ಧವಾಗಿದೆ. ಅನಘನಾದ ಕೌಂತೇಯನೇ, ಆದ್ದರಿಂದ ನೀನು ತಮ್ಮಂದಿರ ಜೊತೆಯಲ್ಲಿ ಅಲ್ಲಿಗೆ ಹೋಗು.

ವೈಶಂಪಾಯನಃ

ಪ್ರತಿಗೃಹ್ಯ ತು ತೇ ವಾಕ್ಯಂ ನೃಪಂ ಸರ್ವೇ ಪ್ರಣಮ್ಯ ಚ ।
ರಥೈರ್ನಾಗೈರ್ಹಯೈಶ್ಚಾಪಿ ಸಹಿತಾಸ್ತು ಪದಾತಿಭಿಃ ।
ಪ್ರತಸ್ಥಿರೇ ತತೋ ಘೋರಂ ವನಾಂತಂ ಮನುಜರ್ಷಭಾಃ ॥೪೪॥

ಆ ಮನುಜರ್ಷಭರು ಧೃತರಾಷ್ಟ್ರನ ಆ ವಾಕ್ಯವನ್ನು ಸ್ವೀಕರಿಸಿ, ಅವನಿಗೆ ಎಲ್ಲರೂ ನಮಸ್ಕಾರವನ್ನು ಮಾಡಿ, ರಥಗಳಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ, ಪದಾತಿಗಳಿಂದಲೂ ಸಹಿತರಾಗಿ ಘೋರವಾದ ಕಾಡಿನಂಚಿನಲ್ಲಿದ್ದ ಖಾಂಡವಪ್ರಸ್ಥಕ್ಕೆ ಹೊರಟರು.

ಪಾಂಡವೈಃ ಸಹಿತಾ ಗಂತುಂ ನಾರ್ಹತೇತಿ ಚ ನಾಗರಾನ್ ।
ಘೋಷಯಾಮಾಸ ನಗರೇ ಧಾರ್ತರಾಷ್ಟ್ರಃ ಸಸೌಬಲಃ ॥೪೫॥

ಪಾಂಡವರ ಜೊತೆಯಲ್ಲಿ ಖಾಂಡವಪ್ರಸ್ಥಕ್ಕೆ ಹೊರಟಿದ್ದ ನಗರವಾಸಿಗಳನ್ನು ದುರ್ಯೋಧನನೂ ಮತ್ತು ಶಕುನಿಯೂ ಸೇರಿ ಯಾರೂ ಪಾಂಡವರ ಹಿಂದೆ ಹೋಗಬಾರದು (ಹೋದರೆ, ಅವರ ಆಸ್ತಿಯೆಲ್ಲಾ ರಾಜವಶವಾಗುತ್ತದೆ) ಎಂದು ಡಂಗುರವನ್ನು ಸಾರಿಸಿ ನಿಲ್ಲಿಸಿದನು.

ತತಸ್ತೇ ಪಾಂಡವಾಸ್ತತ್ರ ಗತ್ವಾ ಕೃಷ್ಣಪುರೋಗಮಾಃ ।
ಮಂಡಯಾಂಚಕ್ರಿರೇ ತದ್ವೈ ಪುರಂ ಸ್ವರ್ಗವದಚ್ಯುತಾಃ ॥೪೬॥

ಅನಂತರ ಕೃಷ್ಣನನ್ನು ಮುಂದೆಮಾಡಿಕೊಂಡು ಅಲ್ಲಿಗೆ ಹೊರಟ ಉತ್ಸಾಹಾದಿಗಳಿಂದ ಚ್ಯುತರಾಗದ ಆ ಪಾಂಡವರು ಸ್ವರ್ಗದಂತೆ ಆ ಪಟ್ಟಣವನ್ನು ಅಲಂಕರಿಸಿದರು.

ವಾಸುದೇವೋ ಜಗನ್ನಾಥಶ್ಚಿಂತಯಾಮಾಸ ವಾಸವಮ್ ।
ಮಹೇಂದ್ರಶ್ಚಿಂತಿತೋ ರಾಜನ್ ವಿಶ್ವಕರ್ಮಾಣಮಾದಿಶತ್ ॥೪೭॥

ಜಗನ್ನಾಥನಾದ ವಾಸುದೇವನು ಇಂದ್ರನನ್ನು ಸ್ಮರಿಸಿದನು. ರಾಜನೇ, ಸ್ಮರಿಸಲ್ಪಟ್ಟ ಇಂದ್ರನು ವಿಶ್ವಕರ್ಮನಿಗೆ ಆದೇಶಿಸಿದನು.

ವಿಶ್ವಕರ್ಮನ್ ಮಹಾಪ್ರಾಜ್ಞ ಅದ್ಯಪ್ರಭೃತಿ ತತ್ ಪುರಮ್ ।
ಇಂದ್ರಪ್ರಸ್ಥಮಿತಿ ಖ್ಯಾತಂ ದಿವ್ಯಂ ರಮ್ಯಂ ಭವಿಷ್ಯತಿ ॥೪೮॥

ಮಹಾಪ್ರಾಜ್ಞನಾದ ವಿಶ್ವಕರ್ಮನೇ, ಇಂದಿನಿಂದ ಪ್ರಾರಂಭಿಸಿ, ಆ ನಗರವು ಇಂದ್ರಪ್ರಸ್ಥವೆಂದು ಪ್ರಖ್ಯಾತವಾಗಿ ದಿವ್ಯವೂ ಮತ್ತು ರಮ್ಯವೂ ಆಗುವುದು.

ವೈಶಂಪಾಯನಃ

ಮಹೇಂದ್ರಶಾಸನಾದ್ ಗತ್ವಾ ವಿಶ್ವಕರ್ಮಾ ತು ಕೇಶವಮ್ ।
ಪ್ರಣಮ್ಯ ಪ್ರಣಿಪಾತಾರ್ಹಂ ಕಿಂ ಕರೋಮೀತ್ಯಭಾಷತ ॥೪೯॥

ವಾಸುದೇವಸ್ತು ತಚ್ಛ್ರುತ್ವಾ ವಿಶ್ವಕರ್ಮಾಣಮೂಚಿವಾನ್ ।
ಕುರುಷ್ವ ಕುರುರಾಜಾಯ ಮಹೇಂದ್ರಪುರಸನ್ನಿಭಮ್ ।
ಇಂದ್ರೇಣ ಕೃತನಾಮಾನಮಿಂದ್ರಪ್ರಸ್ಥಂ ಮಹಾಪುರಮ್ ॥೫೦॥

ಇಂದ್ರಶಾಸನದಂತೆ ವಿಶ್ವಕರ್ಮನು ಅಲ್ಲಿಗೆ ಹೋಗಿ, ಕೇಶವನಿಗೆ ನಮಸ್ಕರಿಸಿ ಏನು ಮಾಡಲಿ ಎಂದು ಕೇಳಿದನು. ಆ ಮಾತನ್ನು ಕೇಳಿ ವಾಸುದೇವನು ವಿಶ್ವಕರ್ಮನಿಗೆ ಹೇಳಿದನು. ಇಂದ್ರನು ನಾಮಕರಣ ಮಾಡಿ ಇಂದ್ರಪ್ರಸ್ಥವೆಂದು ಕರೆದಿರುವ ಈ ಮಹಾಪಟ್ಟಣವನ್ನು ಕುರುರಾಜನಾದ ಯುಧಿಷ್ಠಿರನ ಸಲುವಾಗಿ ಇಂದ್ರಪುರವಾದ ಅಮರಾವತಿಯಂತೆ ನಿರ್ಮಿಸು.

ವೈಶಂಪಾಯನಃ

ತತಃ ಪುಣ್ಯೇ ಶಿವೇ ದೇಶೇ ಶಾಂತಿಂ ಕೃತ್ವಾ ಮಹಾರಥಾಃ ।
ಸ್ವಸ್ತಿ ವಾಚ್ಯ ಯಥಾನ್ಯಾಯಮಿಂದ್ರಪ್ರಸ್ಥಂ ಭವತ್ವಿತಿ ॥೫೧॥

ನಗರಂ ಮಾಪಯಾಮಾಸುರ್ವ್ಯಾಪಾಯನಪುರೋಗಮಾಃ ।
ತತಸ್ತು ವಿಶ್ವಕರ್ಮಾ ತು ಚಕಾರ ಪುರಮುತ್ತಮಮ್ ॥೫೨॥

ಅನಂತರ, ಮಹಾರಥರಾದ ಆ ಪಾಂಡವರು ಒಂದು ಪುಣ್ಯಮುಹೂರ್ತದಲ್ಲಿ ಮಂಗಳವಾದ ಒಂದು ಪ್ರದೇಶದಲ್ಲಿ ಶಾಂತಿಯನ್ನು ಮಾಡಿ, ಸ್ವಸ್ತಿವಾಚನವನ್ನು ಮಾಡಿಸಿ, ಶಾಸ್ತ್ರೋಕ್ತಪ್ರಕಾರದಿಂದ ಇಂದ್ರಪ್ರಸ್ಥನಗರವಾಗಲಿ ಎಂದು ಹೇಳಿದರು. ಆಗ ವೇದವ್ಯಾಸರು ಮೊದಲಾದವರು ಆ ನಗರವನ್ನು ಅಳೆದರು.

ಸಾಗರಪ್ರತಿರೂಪಾಭಿಃ ಪರಿಖಾಭಿರಲಂಕೃತಮ್ ।
ಪ್ರಾಕಾರೇಣ ಚ ಸಂಪನ್ನಂ ದಿವಮಾವೃತ್ಯ ವಿಷ್ಠಿತಮ್ ॥೫೩॥

ಪಾಂಡರಾಭ್ರಪ್ರಕಾಶೇನ ವೃತಂ ಶಶಿನಿಭೇನ ಚ ।
ಶುಶುಭೇ ತತ್ ಪುರಶ್ರೇಷ್ಠಂ ನಾಗೈರ್ಭೋಗವತೀ ಯಥಾ ॥೫೪॥

ಅನಂತರ ವಿಶ್ವಕರ್ಮನು ಸಾಗರದಂತಿದ್ದ ಪರಿಖೆಗಳಿಂದ ಅಲಂಕೃತವಾದ, ಅಂತರಿಕ್ಷದವರೆಗೂ ಹೋಗಿರುವಂತೆ ಕಾಣುವ ಕೋಟೆಯ ಗೋಡೆಗಳನ್ನು ಹೊಂದಿದ ಆ ಶ್ರೇಷ್ಠವಾದ ಪಟ್ಟಣವನ್ನು ನಿರ್ಮಿಸಿದನು. ಬಿಳಿಯ ಮೋಡಗಳ ಕಾಂತಿಯನ್ನು ಹೊಂದಿದ ಚಂದ್ರನ ಕಾಂತಿಯನ್ನು ಹೊಂದಿದ ಪ್ರಾಕಾರಗಳಿಂದ ಸುತ್ತುವರಿಯಲ್ಪಟ್ಟ ಆ ಪಟ್ಟಣವು ನಾಗಗಳಿಂದ ಸುತ್ತಲ್ಪಟ್ಟ ಭೋಗವತೀ ಪಟ್ಟಣದಂತೆ ಶೋಭಿಸಿತು.

ದ್ವಿಪಕ್ಷಗರುಡಪ್ರಖ್ಯೈ ರ್ದ್ವಾರೈಶ್ಚೋರಪ್ರದರ್ಶನೈಃ ।
ಗುಪ್ತಮಭ್ರಘನಪ್ರಖ್ಯೈ ರ್ಗೋಪುರೈರ್ಮಂದರೋಪಮೈಃ ॥೫೫॥

ವಿವಿಧೈರತಿವಿಸ್ತೀರ್ಣೈಃ ಶಸ್ತ್ರೋಪೇತೈಃ ಸುಸಂವೃತೈಃ ।
ಶಕ್ತಿಭಿಶ್ಚಾವೃತಂ ತದ್ಧಿ ದ್ವಿಜಿಹ್ವೈರಿವ ಪನ್ನಗೈಃ ॥೫೬॥

ತಲ್ಪೈಶ್ಚಾಭ್ಯಧಿಕೈರ್ಯುಕ್ತಂ ಶುಶುಭೇ ಯೋಧರಕ್ಷಿತಮ್ ।
ತೀಕ್ಷ್ಣಾಭಿಶ್ಚ ಶತಘ್ನೀಭಿರ್ಯಂತ್ರಜಾಲೈಶ್ಚ ಶೋಭಿತಮ್ ॥೫೭॥

ಅಲ್ಲಿಯ ಗೃಹಗಳು ಗರುಡನ ಪಕ್ಷದಂತಿರುವ ಎರಡು ಬಾಗಿಲುಗಳಿಂದ ಶೋಭಿತವಾಗಿದ್ದವು. ಬಿಳಿಯ ಮೋಡ ಮತ್ತು ಕರಿಯ ಮೋಡಗಳಿಗೆ (ಅಭ್ರ ಮತ್ತು ಘನ) ಹೋಲುವ ಕಾಂತಿಯನ್ನುಳ್ಳ, ಮಂದರಪರ್ವತದಂತೆ ಎತ್ತರವಾದ ಗೋಪುರಗಳಿಂದ ಕೂಡಿದ್ದಿತು. ಆ ಪಟ್ಟಣವು ಅತಿವಿಸ್ತೀರ್ಣವಾದ, ಸುಸಂವೃತವಾದ, ಶಸ್ತ್ರೋಪೇತವಾದ ಶಕ್ತಿ ಆಯುಧಗಳಿಂದ ಆವರಿಸಲ್ಪಟ್ಟು ಎರಡು ನಾಲಿಗೆಗಳುಳ್ಳ ಸರ್ಪಗಳಿಂದ ಆವರಿಸಲ್ಪಟ್ಟಂತೆ ಇದ್ದಿತು. ಅಲ್ಲಲ್ಲಿ ವಿಶ್ರಾಂತಿಸ್ಥಾನಗಳಿದ್ದು, ಯೋಧರಿಂದ ರಕ್ಷಿತವಾಗಿ ಆ ಪುರವು ಶೋಭಿಸಿತು.

ಆಯಸೈಶ್ಚ ಮಹಾಚಕ್ರೈಃ ಶುಶುಭೇ ತತ್ ಪುರೋತ್ತಮಮ್ ।
ಸುವಿಭಕ್ತಮಹಾರಥ್ಯಂ ದೇವತಾಬಾಧವರ್ಜಿತಮ್ ॥೫೮॥

ತೀಕ್ಷ್ಣವಾದ ಶತಘ್ನೀ ಆಯುಧಗಳಿಂದಲೂ, ಯಂತ್ರಜಾಲಗಳಿಂದಲೂ, ಕಬ್ಬಿಣದ ಮಹಾಚಕ್ರಗಳಿಂದಲೂ, ಆ ಪಟ್ಟಣವು ಶೋಭಿಸಿತು.

ವಿರೋಚಮಾನಂ ವಿವಿಧೈಃ ಪಾಂಡರೈರ್ಭವನೋತ್ತಮೈಃ ।
ಹರ್ಮ್ಯಪ್ರಾಸಾದಸಂಬಾಧಂ ನಾನಾऽऽಪಣವಿಭೂಷಿತಮ್ ॥೫೯॥

ಸುವಿಭಕ್ತವಾದ ರಾಜಮಾರ್ಗಗಳಿಂದ ಕೂಡಿದ್ದು, ದೇವತಾಬಾಧರೂಪವಾದ ಬಿರುಗಾಳಿ ಮೊದಲಾದವುಗಳಿಂದ ರಹಿತವಾಗಿದ್ದು, ಬಿಳಿಯ ಬಣ್ಣದ ಅನೇಕ ಭವನಗಳಿಂದಲೂ, ಹರ್ಮ್ಯಪ್ರಾಸಾದಿಗಳಿಂದಲೂ ನಿಬಿಡವಾಗಿದ್ದು, ಅನೇಕ ಆಪಣಸ್ಥಳಗಳಿಂದ ಯುಕ್ತವಾಗಿದ್ದು, ಆ ನಗರವು ಶೋಭಿಸಿತು.

ವಿಸ್ಪರ್ಧಯೇವ ಪ್ರಾಸಾದಾ ಹ್ಯನ್ಯೋನ್ಯಾಭ್ಯುಚ್ಛ್ರಿತಾಽಭವನ್ ।
ಮಂಡಪಾಶ್ಚ ಸಭಾಃ ಶಾಲಾಃ ಪ್ರಪಾಶ್ಚೈವ ಸಮಂತತಃ ॥೬೦॥

ಮಂಟಪಗಳೂ, ಸಭೆಗಳೂ, ಶಾಲೆಗಳೂ ಮತ್ತು ಅರವಟ್ಟಗೆಗಳೂ ಎಲ್ಲಾ ಕಡೆಯಲ್ಲಿಯೂ ಪರಸ್ಪರ ಸ್ಪರ್ಧಿಸುವಂತೆ ಒಂದಕ್ಕಿಂತ ಒಂದು ಎತ್ತರವಾಗಿದ್ದವು.

ತತ್ ತ್ರಿವಿಷ್ಟಪಸಂಕಾಶಮಿಂದ್ರಪ್ರಸ್ಥಂ ವ್ಯರೋಚತ ।
ಮೇಘವೃಂದಮಿವಾಕಾಶೇ ವಿದ್ಯುತ್ಪ್ರಾಮಿನೀವೃತಮ್ ॥೬೧॥

ಆಕಾಶದಲ್ಲಿ ಬೆಳಗುವ ಮಿಂಚಿನಿಂದ ಕೂಡಿದ ಮೇಘವೃಂದದಂತೆ ಸ್ವರ್ಗದಂತಿದ್ದ ಇಂದ್ರಪ್ರಸ್ಥನಗರವು ಶೋಭಿಸಿತು.

ಇಂದ್ರಪ್ರಸ್ಥಸ್ಯ ಮಧ್ಯೇ ತು ಕೌರವಸ್ಯ ನಿವೇಶನಮ್ ।
ಶುಶುಭೇ ಧನಸಂಪೂರ್ಣಂ ಧನಾಧ್ಯಕ್ಷಸ್ಯೋಪಮಮ್ ॥೬೨॥

ಇಂದ್ರಪ್ರಸ್ಥನಗರದ ಮಧ್ಯದಲ್ಲಿ ಕುರುರಾಜನಾದ ಧರ್ಮರಾಜನ ಅರಮನೆಯು ಧನಸಂಪೂರ್ಣವಾಗಿದ್ದು, ಕುಬೇರನ ಅರಮನೆಯಂತೆ ಶೋಭಿಸಿತು.

ಗೃಹೈರಾದರ್ಶವಿಮಲೈರ್ವಿವಿಧೈಶ್ಚ ಲತಾಗೃಹೈಃ ।
ಮನೋಹರೈಶ್ಚಿತ್ರಗೃಹೈಸ್ತಥಾ ಜಗತಿಪರ್ವತೈಃ ॥೬೩॥

ಕನ್ನಡಿಯಂತೆ ಹೊಳೆಯುವ ಗೃಹಗಳಿಂದಲೂ, ವಿವಿಧವಾದ ಲತಾಗೃಹಗಳಿಂದಲೂ, ಮನೋಹರವಾದ ಚಿತ್ರಗೃಹಗಳಿಂದಲೂ, ಮಣಿಮಯವಾದ ಹಾಸುಗಲ್ಲುಗಳಿಂದಲೂ, ಕ್ರೀಡಾಪರ್ವತಗಳಿಂದಲೂ ಆ ನಗರವು ಶೋಭಿಸಿತು.

ಪುಷ್ಕರಿಣ್ಯಶ್ಚ ವಿವಿಧಾಃ ಪದ್ಮೋತ್ಪಲಸಮಾವೃತಾಃ ।
ಹಂಸಕಾರಂಡವಾಕೀರ್ಣಾಶ್ಚಕ್ರವಾಕೋಪಶೋಭಿತಾಃ ।
ರಮ್ಯಾಶ್ಚ ವಿವಿಧಾಸ್ತತ್ರ ವಾಪ್ಯಶ್ಚೈವ ಸಮಾವೃತಾಃ ॥೬೪॥

ಅಲ್ಲಿ ಪದ್ಮ ಉತ್ಪಲಗಳಿಂದ ಕೂಡಿದ, ಹಂಸ, ಕಾರಂಡ ಮೊದಲಾದ ಜಲಪಕ್ಷಿಗಳಿಂದ ತುಂಬಿದ, ಚಕ್ರವಾಕ ಪಕ್ಷಿಗಳಿಂದ ಶೋಭಿತವಾದ ಅನೇಕ ಪುಷ್ಕರಿಣಿಗಳಿದ್ದವು. ಮನೋಹರವಾದ ಅನೇಕ ವಿಧವಾದ ಬಾವಿಗಳೂ ಅಲ್ಲಿದ್ದವು.

ವೇಶ್ಮಮಧ್ಯೇ ಶುಭಂ ದಿವ್ಯಮಿಂದ್ರವಾಸಗೃಹೋಪಮಮ್ ।
ರಾಜ್ಞೋ ವಾಸಗೃಹಂ ರಮ್ಯಂ ವಿಶ್ವಕರ್ಮಾऽತ್ಯಕಾರಯತ್ ।
ಸುವರ್ಣಮಣಿಸೋಪಾನಂ ಸರ್ವರತ್ನ ವಿಚಿತ್ರಿತಮ್ ॥೬೫॥

ಆ ಮನೆಗಳ ಮಧ್ಯದಲ್ಲಿ ಇಂದ್ರನ ಮನೆಯಂತೆ ದಿವ್ಯವೂ, ಮಂಗಳವೂ ಆದ, ಮನೋಹರವಾದ, ರಾಜನ ವಾಸಗೃಹವನ್ನು ವಿಶ್ವಕರ್ಮನು ನಿರ್ಮಿಸಿದನು. ಅಲ್ಲಿ ಸರ್ವರತ್ನಖಚಿತವಾದ, ಸುವರ್ಣಮಣಿ- ಸೋಪಾನಗಳಿದ್ದವು.

ವಿಹಾರಭೂಮ್ಯೋ ವಿವಿಧಾಃ ಕಾರಿತಾಃ ಸುಮನೋಹರಾಃ ।
ತಥಾ ಪ್ರಾಸಾದಮಾಲಾಶ್ಚ ಶೋಭಂತೇ ಸ್ಮ ಸಹಸ್ರಶಃ ॥೬೬॥

ಅಲ್ಲಿ ವಿಧವಿಧವಾದ, ಮನೋಹರವಾದ, ವಿಹಾರಭೂಮಿಗಳೂ, ಸಹಸ್ರಸಂಖ್ಯೆಯಲ್ಲಿ ಪ್ರಾಸಾದಮಾಲೆಗಳೂ ಇದ್ದು ನಗರವು ಶೋಭಿಸಿತು.

ನಿರಂತರಾ ರಾಜಮಾರ್ಗಾಃ ಸ್ತ್ರೀರತ್ನೈಃ ಶೋಭಿತಾಃ ಸ್ಥಿತಾಃ ।
ತತ್ರಾಗಚ್ಛನ್ ದ್ವಿಜಾ ರಾಜನ್ ಸರ್ವೇ ವೇದವಿದಾಂ ವರಾಃ ॥೬೭॥

ರಾಜಮಾರ್ಗದಲ್ಲಿ ನಿರಂತರವಾಗಿ ಸುಂದರಿಯರಾದ ಮತ್ತು ಅಲಂಕೃತರಾದ ಸ್ತ್ರೀಯರು ಓಡಾಡುತ್ತಿದ್ದರು. ವೇದವಿದ್ಯಾವಿಶಾರದರಾದ ಬ್ರಾಹ್ಮಣರು ಅಲ್ಲಿಗೆ ಬಂದರು.

ನಿವಾಸಂ ರೋಚಯಂತಿ ಸ್ಮ ಸರ್ವಭಾಷಾವಿದಸ್ತಥಾ ।
ವಣಿಜಶ್ಚಾಭ್ಯಯುಸ್ತತ್ರ ದೇಶೇಭ್ಯೋऽಪಿ ಧನಾರ್ಥಿನಃ ॥೬೮॥

ಸರ್ವಭಾಷಾವಿದರೂ ಸಹ ಅಲ್ಲಿ ವಾಸಿಸಲು ಬಯಸಿದರು. ಧನಾರ್ಥಿಗಳಾದ ವರ್ತಕರೂ ಸಹ ಬೇರೆಬೇರೆ ದೇಶಗಳಿಂದ ಅಲ್ಲಿಗೆ ಬಂದರು.

ಸರ್ವಶಿಲ್ಪವಿದಶ್ಚೈವ ವಾಸಾಯಾಭ್ಯಾಗಮಂಸ್ತದಾ ।
ಉದ್ಯಾನಾನಿ ಚ ರಮ್ಯಾಣಿ ನಗರಸ್ಯ ಸಮೀಪತಃ ॥೬೯॥

ಎಲ್ಲಾ ಕರಕೌಶಲಗಳಲ್ಲಿ ನಿಪುಣರಾದವರು ಅಲ್ಲಿಗೆ ಬಂದರು. ಆ ನಗರದ ಸುತ್ತಲೂ ಮನೋಹರವಾದ ಉದ್ಯಾನಗಳಿದ್ದವು.

ಸಹಕಾರಾಮ್ರಪನಸೈಃ ಕಪಿತ್ಥೈರಪ್ಯುದುಂಬರೈಃ ।
ನಾಳಿಕೇರೈಶ್ಚ ಲಿಕುಚೈಃ ಕ್ರಮುಕೈಶ್ಚ ಸಮಾವೃತಾಃ ॥೭೦॥

ಆ ಉದ್ಯಾನಗಳು ಸಹಕಾರ, ಆಮ್ರ, ಪನಸ, ಕಪಿತ್ಥ, ಉದುಂಬರ, ನಾರಿಕೇಳ, ಲಿಕುಚ, ಕ್ರಮುಕ ಮೊದಲಾದ ಮರಗಳಿಂದ ತುಂಬಿದ್ದವು.

ಅಶೋಕೈಸ್ತಿಲಕೈರ್ಲೋಧ್ರೈರ್ನೀಲಾಶೋಕೈಶ್ಚ ಚಂಪಕೈಃ ।
ಕರವೀರೈಃ ಕರ್ಣಿಕಾರೈರ್ನಾಗವೃಕ್ಷೈಃ ಸುಪುಷ್ಪಿತೈಃ ॥೭೧॥

ಪುನ್ನಾಗೈರ್ನಾಗವೃಕ್ಷೈಶ್ಚ ಮಧೂಕೈಶ್ಚ ಸುಪುಷ್ಪಿತೈಃ ।
ಸಾಲತಾಳಕದಂಬೈಶ್ಚ ವಕುಲೈಶ್ಚ ಸಕೇತಕೈಃ ॥೭೨॥

ಅಲ್ಲಿ ಅಶೋಕ, ತಿಲಕ, ಲೋಧ್ರ, ನೀಲಾಶೋಕ, ಚಂಪಕ, ಕರವೀರ, ಕರ್ಣಿಕಾರ, ನಾಗವೃಕ್ಷ, ಪುನ್ನಾಗ, ಮಧೂಕ, ಸಾಲ, ತಾಲ, ಕದಂಬ, ವಕುಲ, ಕೇತಕ ಮೊದಲಾದ ಪುಷ್ಪವನ್ನು ಕೊಡುವ ವೃಕ್ಷಗಳಿದ್ದವು.

ಪುನ್ನಾಗೈಃ ಕದಳೀಭಿಶ್ಚ ಪಾರಿಜಾತೈಃ ಸುಪುಷ್ಪಿತೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈಃ ಫಲಭಾರಾವನಾಮಿಭಿಃ ।
ನಿತ್ಯಪುಷ್ಪಫಲೋಪೇತೈಃ ಶೋಭಿತಾಸ್ತೇ ಗೃಹೋತ್ತಮಾಃ ॥೭೩॥

ಪುನ್ನಾಗ, ಪಾರಿಜಾತ, ಮೊದಲಾದ ಪುಷ್ಪವನ್ನು ಕೊಡುವ ವೃಕ್ಷಗಳೂ, ಕದಳೀ ಮೊದಲಾದ ಫಲಭಾರದಿಂದ ಬಗ್ಗಿದ ವಿವಿಧ ವೃಕ್ಷಗಳೂ ಆ ಗೃಹಗಳ ಸುತ್ತಲೂ ಇದ್ದು ಆ ಗೃಹಗಳು ಶೋಭಿಸಿದವು.

ತಟಾಕಾನಿ ಚ ರಮ್ಯಾಣಿ ವಿವಿಧಾನಿ ಸಮಂತತಃ ।
ನದೀ ಚ ನಂದಿನೀ ನಾಮ ಸಾ ಪುರೀಮುಪಗೂಹತೇ ॥೭೪॥

ಆ ನಗರದಲ್ಲಿ ಅಲ್ಲಲ್ಲಿ ಮನೋಹರವಾದ ಕೆರೆಗಳಿದ್ದವು. ನಂದಿನಿ ಎಂಬ ನದಿಯು ಆ ಪಟ್ಟಣದ ಸುತ್ತಲೂ ಹರಿಯುತಿತ್ತು.

ಅಲ್ಲಿ ಪದ್ಮ ಉತ್ಪಲಗಳಿಂದ ಕೂಡಿದ, ಹಂಸ, ಕಾರಂಡ ಮೊದಲಾದ ಜಲಪಕ್ಷಿಗಳಿಂದ ತುಂಬಿದ, ಚಕ್ರವಾಕ ಪಕ್ಷಿಗಳಿಂದ ಶೋಭಿತವಾದ ಅನೇಕ ಪುಷ್ಕರಿಣಿಗಳಿದ್ದವು. ಮನೋಹರವಾದ ಅನೇಕ ವಿಧವಾದ ಬಾವಿಗಳೂ ಅಲ್ಲಿದ್ದವು.

ವೇಶ್ಮಮಧ್ಯೇ ಶುಭಂ ದಿವ್ಯಮಿಂದ್ರವಾಸಗೃಹೋಪಮಮ್ ।
ರಾಜ್ಞೋ ವಾಸಗೃಹಂ ರಮ್ಯಂ ವಿಶ್ವಕರ್ಮಾऽತ್ಯಕಾರಯತ್ ।
ಸುವರ್ಣಮಣಿಸೋಪಾನಂ ಸರ್ವರತ್ನ ವಿಚಿತ್ರಿತಮ್ ॥೬೫॥

ಆ ಮನೆಗಳ ಮಧ್ಯದಲ್ಲಿ ಇಂದ್ರನ ಮನೆಯಂತೆ ದಿವ್ಯವೂ, ಮಂಗಳವೂ ಆದ, ಮನೋಹರವಾದ, ರಾಜನ ವಾಸಗೃಹವನ್ನು ವಿಶ್ವಕರ್ಮನು ನಿರ್ಮಿಸಿದನು. ಅಲ್ಲಿ ಸರ್ವರತ್ನಖಚಿತವಾದ, ಸುವರ್ಣಮಣಿ- ಸೋಪಾನಗಳಿದ್ದವು.

ವಿಹಾರಭೂಮ್ಯೋ ವಿವಿಧಾಃ ಕಾರಿತಾಃ ಸುಮನೋಹರಾಃ ।
ತಥಾ ಪ್ರಾಸಾದಮಾಲಾಶ್ಚ ಶೋಭಂತೇ ಸ್ಮ ಸಹಸ್ರಶಃ ॥೬೬॥

ಅಲ್ಲಿ ವಿಧವಿಧವಾದ, ಮನೋಹರವಾದ, ವಿಹಾರಭೂಮಿಗಳೂ, ಸಹಸ್ರಸಂಖ್ಯೆಯಲ್ಲಿ ಪ್ರಾಸಾದಮಾಲೆಗಳೂ ಇದ್ದು, ನಗರವು ಶೋಭಿಸಿತು.

ನಿರಂತರಾ ರಾಜಮಾರ್ಗಾಃ ಸ್ತ್ರೀರತ್ನೈಃ ಶೋಭಿತಾಃ ಸ್ಥಿತಾಃ ।
ತತ್ರಾಗಚ್ಛನ್ ದ್ವಿಜಾ ರಾಜನ್ ಸರ್ವೇ ವೇದವಿದಾಂ ವರಾಃ ॥೬೭॥

ರಾಜಮಾರ್ಗದಲ್ಲಿ ನಿರಂತರವಾಗಿ ಸುಂದರಿಯರಾದ ಮತ್ತು ಅಲಂಕೃತರಾದ ಸ್ತ್ರೀಯರು ಓಡಾಡುತ್ತಿದ್ದರು. ವೇದವಿದ್ಯಾವಿಶಾರದರಾದ ಬ್ರಾಹ್ಮಣರು ಅಲ್ಲಿಗೆ ಬಂದರು.

ನಿವಾಸಂ ರೋಚಯಂತಿ ಸ್ಮ ಸರ್ವಭಾಷಾವಿದಸ್ತಥಾ ।
ವಣಿಜಶ್ಚಾಭ್ಯಯುಸ್ತತ್ರ ದೇಶೇಭ್ಯೋऽಪಿ ಧನಾರ್ಥಿನಃ ॥೬೮॥

ಸರ್ವಭಾಷಾವಿದರೂ ಸಹ ಅಲ್ಲಿ ವಾಸಿಸಲು ಬಯಸಿದರು. ಧನಾರ್ಥಿಗಳಾದ ವರ್ತಕರೂ ಸಹ ಬೇರೆಬೇರೆ ದೇಶಗಳಿಂದ ಅಲ್ಲಿಗೆ ಬಂದರು.

ಸರ್ವಶಿಲ್ಪವಿದಶ್ಚೈವ ವಾಸಾಯಾಭ್ಯಾಗಮಂಸ್ತದಾ ।
ಉದ್ಯಾನಾನಿ ಚ ರಮ್ಯಾಣಿ ನಗರಸ್ಯ ಸಮೀಪತಃ ॥೬೯॥

ಎಲ್ಲಾ ಕರಕೌಶಲಗಳಲ್ಲಿ ನಿಪುಣರಾದವರು ಅಲ್ಲಿಗೆ ಬಂದರು. ಆ ನಗರದ ಸುತ್ತಲೂ ಮನೋಹರವಾದ ಉದ್ಯಾನಗಳಿದ್ದವು.

ಸಹಕಾರಾಮ್ರಪನಸೈಃ ಕಪಿತ್ಥೈರಪ್ಯುದುಂಬರೈಃ ।
ನಾಳಿಕೇರೈಶ್ಚ ಲಿಕುಚೈಃ ಕ್ರಮುಕೈಶ್ಚ ಸಮಾವೃತಾಃ ॥೭೦॥

ಆ ಉದ್ಯಾನಗಳು ಸಹಕಾರ, ಆಮ್ರ, ಪನಸ, ಕಪಿತ್ಥ, ಉದುಂಬರ, ನಾರಿಕೇಳ, ಲಿಕುಚ, ಕ್ರಮುಕ ಮೊದಲಾದ ಮರಗಳಿಂದ ತುಂಬಿದ್ದವು.

ಅಶೋಕೈಸ್ತಿಲಕೈರ್ಲೋಧ್ರೈರ್ನೀಲಾಶೋಕೈಶ್ಚ ಚಂಪಕೈಃ ।
ಕರವೀರೈಃ ಕರ್ಣಿಕಾರೈರ್ನಾಗವೃಕ್ಷೈಃ ಸುಪುಷ್ಪಿತೈಃ ॥೭೧॥

ಪುನ್ನಾಗೈರ್ನಾಗವೃಕ್ಷೈಶ್ಚ ಮಧೂಕೈಶ್ಚ ಸುಪುಷ್ಪಿತೈಃ ।
ಸಾಲತಾಳಕದಂಬೈಶ್ಚ ವಕುಲೈಶ್ಚ ಸಕೇತಕೈಃ ॥೭೨॥

ಅಲ್ಲಿ ಅಶೋಕ, ತಿಲಕ, ಲೋಧ್ರ, ನೀಲಾಶೋಕ, ಚಂಪಕ, ಕರವೀರ, ಕರ್ಣಿಕಾರ, ನಾಗವೃಕ್ಷ, ಪುನ್ನಾಗ, ಮಧೂಕ, ಸಾಲ, ತಾಲ, ಕದಂಬ, ವಕುಲ, ಕೇತಕ ಮೊದಲಾದ ಪುಷ್ಪವನ್ನು ಕೊಡುವ ವೃಕ್ಷಗಳಿದ್ದವು.

ಪುನ್ನಾಗೈಃ ಕದಳೀಭಿಶ್ಚ ಪಾರಿಜಾತೈಃ ಸುಪುಷ್ಪಿತೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈಃ ಫಲಭಾರಾವನಾಮಿಭಿಃ ।
ನಿತ್ಯಪುಷ್ಪಫಲೋಪೇತೈಃ ಶೋಭಿತಾಸ್ತೇ ಗೃಹೋತ್ತಮಾಃ ॥೭೩॥

ಪುನ್ನಾಗ, ಪಾರಿಜಾತ, ಮೊದಲಾದ ಪುಷ್ಪವನ್ನು ಕೊಡುವ ವೃಕ್ಷಗಳೂ, ಕದಳೀ ಮೊದಲಾದ ಫಲಭಾರದಿಂದ ಬಗ್ಗಿದ ವಿವಿಧ ವೃಕ್ಷಗಳೂ ಆ ಗೃಹಗಳ ಸುತ್ತಲೂ ಇದ್ದು ಆ ಗೃಹಗಳು ಶೋಭಿಸಿದವು.

ತಟಾಕಾನಿ ಚ ರಮ್ಯಾಣಿ ವಿವಿಧಾನಿ ಸಮಂತತಃ ।
ನದೀ ಚ ನಂದಿನೀ ನಾಮ ಸಾ ಪುರೀಮುಪಗೂಹತೇ ॥೭೪॥

ಆ ನಗರದಲ್ಲಿ ಅಲ್ಲಲ್ಲಿ ಮನೋಹರವಾದ ಕೆರೆಗಳಿದ್ದವು. ನಂದಿನಿ ಎಂಬ ನದಿಯು ಆ ಪಟ್ಟಣದ ಸುತ್ತಲೂ ಹರಿಯುತಿತ್ತು.

ಚಾತುರ್ವರ್ಣ್ಯಸಮಾಕೀರ್ಣಂ ಮಾನ್ಯೈಃ ಶಿಲ್ಪಿಭಿರಾವೃತಮ್ ।
ಉಪಭೋಗಸಮರ್ಥೈಶ್ಚ ಸರ್ವದ್ರವ್ಯೈಃ ಸಮಾವೃತಮ್ ।
ನಿತ್ಯಮಾರ್ಯಜನೋಪೇತಂ ನರನಾರೀಗಣೈರ್ಯುತಮ್ ॥೭೫॥

ಆ ಪಟ್ಟಣವು ಚಾತುರ್ವರ್ಣ್ಯಜನರಿಂದಲೂ, ಶಿಲ್ಪಿಗಳಿಂದಲೂ, ನಿಬಿಡವಾಗಿದ್ದು, ಎಲ್ಲ ಭೋಗಸಾಮಗ್ರಿಗಳಿಂದಲೂ ಕೂಡಿದ್ದಿತು. ಉತ್ತಮಗುಣವುಳ್ಳ ನರನಾರೀಗಣದಿಂದ ಕೂಡಿದ್ದಿತು.

ಮತ್ತವಾರಣಸಂಪೂರ್ಣಂ ಗೋಭಿರುಷ್ಟ್ರೈಃ ಖರೈರಜೈಃ ।
ಸರ್ವದಾऽಭಿಸೃತಂ ಸದ್ಭಿಃ ಕಾರಿತಂ ವಿಶ್ವಕರ್ಮಣಾ ॥೭೬॥

ತತ್ ತ್ರಿವಿಷ್ಟಪಸಂಕಾಶಮಿಂದ್ರಪ್ರಸ್ಥಂ ವ್ಯರೋಚತ ।

ಮದಗಜಗಳಿಂದಲೂ, ಗೋವುಗಳಿಂದಲೂ, ಒಂಟೆಗಳಿಂದಲೂ, ಕತ್ತೆಗಳಿಂದಲೂ, ಮೇಕೆಗಳಿಂದಲೂ, ಅಲ್ಲಿನ ಮಾರ್ಗಗಳು ನಿಬಿಡವಾಗಿರುತ್ತಿದ್ದವು. ದ್ವೈಪಾಯನ ಮೊದಲಾದವರು ಹೇಳಿ ವಿಶ್ವಕರ್ಮನಿಂದ ಮಾಡಿಸಿದ ಆ ಇಂದ್ರಪ್ರಸ್ಥಪಟ್ಟಣವು ಸ್ವರ್ಗದಂತೆ ಶೋಭಿಸಿತು.

ಪುರೀಂ ಸರ್ವಗುಣೋಪೇತಾಂ ನಿರ್ಮಿತಾಂ ವಿಶ್ವಕರ್ಮಣಾ ॥೭೭॥

ಪೌರವಾಣಾಮಧಿಪತಿಃ ಕುಂತೀಪುತ್ರೋ ಯುಧಿಷ್ಠಿರಃ ।
ಕೃತಮಂಗಲಸತ್ಕಾರೋ ಬ್ರಾಹ್ಮಣೈರ್ವೇದಪಾರಗೈಃ ॥೭೮॥

ದ್ವೈಪಾಯನಂ ಪುರಸ್ಕೃತ್ಯ ಧೌಮ್ಯಸ್ಯಾನುಮತೇ ಸ್ಥಿತಃ ।
ಭ್ರಾತೃಭಿಃ ಸಹಿತೋ ರಾಜನ್ ಕೇಶವೇನ ಸಹಾಭಿಭೂಃ ।
ವರ್ಧಮಾನಪುರದ್ವಾರಂ ಪ್ರವಿವೇಶ ಮಹಾದ್ಯುತಿಃ ॥೭೯॥

ವಿಶ್ವಕರ್ಮನಿಂದ ನಿರ್ಮಿತವಾದ, ಸರ್ವಗುಣೋಪೇತವಾದ ಆ ಪಟ್ಟಣವನ್ನು (ಪ್ರವೇಶ ಮಾಡುತ್ತಾ) ಪೌರವರ ಅಧಿಪತಿಯಾದ ಕುಂತೀಪುತ್ರನಾದ ಯುಧಿಷ್ಠಿರನು, ವೇದಪಾರಗರಾದ ಬ್ರಾಹ್ಮಣರಿಂದ ಮಂಗಳಾಶಂಸನವನ್ನು ಮಾಡಿಸಿಕೊಂಡು, ಧೌಮ್ಯರ ಅಭಿಪ್ರಾಯದಂತೆ ವೇದವ್ಯಾಸರನ್ನು ಮುಂದೆಮಾಡಿಕೊಂಡು ತನ್ನ ತಮ್ಮಂದಿರಿಂದಲೂ

ಮತ್ತು ಕೇಶವನಿಂದಲೂ ಸಹಿತನಾಗಿ, ಮಹಾಕಾಂತಿಯುಳ್ಳ ಅವನು ಪಟ್ಟಣದ ರಾಜದ್ವಾರವನ್ನು ಪ್ರವೇಶಿಸಿದನು.

ಶಂಖದುಂದುಭಿನಿರ್ಘೋಷಾಃ ಶ್ರೂಯಂತೇ ಬಹವೋ ಭೃಶಾಮ್ ।
ಜಯೇತಿ ಬ್ರಾಹ್ಮಣಾ ವಾಚಃ ಶ್ರೂಯಂತೇ ಸ್ಮ ಸಹಸ್ರಶಃ ॥೮೦॥

ಆಗ ಎಲ್ಲಾ ಕಡೆಗಳಲ್ಲಿಯೂ ತೀವ್ರವಾದ ಶಂಖ, ದುಂದುಭಿ ಘೋಷಗಳು ಕೇಳಿಬಂದವು. ಸಹಸ್ರಸಂಖ್ಯೆಯಲ್ಲಿ ಬ್ರಾಹ್ಮಣರು ಜಯಕಾರವನ್ನು ಮಾಡಿದರು.

ಸಂಸ್ತೂಯಮಾನೋ ಮುನಿಭಿಃ ಸೂತಮಾಗಧವಂದಿಭಿಃ ।
ಔಪವಾಹ್ಯಗತೋ ರಾಜಾ ರಾಜಮಾರ್ಗಮತೀತ್ಯ ಚ ।
ಕೃತಮಂಗಲಸತ್ಕಾರಂ ಪ್ರವಿವೇಶ ಗೃಹೋತ್ತಮಮ್ ॥೮೧॥

ಋಷಿಗಳಿಂದಲೂ, ಸೂತಮಾಗಧವಂದಿಗಳಿಂದಲೂ, ಸ್ತೋತ್ರಮಾಡಲ್ಪಡುತ್ತಿದ್ದ ರಾಜನು ರಾಜವಾಹನದ ಮೇಲೆ ಕುಳಿತು ರಾಜಮಾರ್ಗವನ್ನು ದಾಟಿ, ಎಲ್ಲಾ ಮಂಗಳಸಂಸ್ಕಾರಗಳನ್ನೂ ಮಾಡಿದ್ದ ತನ್ನ ಶ್ರೇಷ್ಠವಾದ ಮನೆಯನ್ನು ಪ್ರವೇಶಿಸಿದನು.

ಪ್ರವಿಶ್ಯ ಭವನಂ ರಾಜಾ ಸತ್ಕಾರೈರಭಿಪೂಜಿತಃ ।
ಪೂಜಯಾಮಾಸ ವಿಪ್ರೇಂದ್ರಾನ್ ಕೇಶವೇನ ಯಥಾಕ್ರಮಮ್ ॥೮೨॥

ರಾಜನು ಸತ್ಕಾರಗಳಿಂದ ಪೂಜಿತನಾಗಿ ಆ ಭವನವನ್ನು ಪ್ರವೇಶಿಸಿ, ಕೇಶವನ ಜೊತೆಯಲ್ಲಿ ಶಾಸ್ತ್ರೋಕ್ತಕ್ರಮದಿಂದ ಬ್ರಾಹ್ಮಣರನ್ನು ಪೂಜಿಸಿದನು.

ತತಸ್ತು ರಾಷ್ಟ್ರಂ ನಗರಂ ನರನಾರೀಗಣಾಯುತಮ್ ।
ಗೋಧನೈಶ್ಚ ಸಮಾಕೀರ್ಣಂ ಸಸ್ಯವೃದ್ಧಿಸ್ತದಾऽಭವತ್ ॥೮೩॥

ಅನಂತರ ಆ ರಾಷ್ಟ್ರವು ಮತ್ತು ನಗರವು, ನರನಾರೀಗಣದಿಂದಲೂ, ಗೋಧನಗಳಿಂದಲೂ ತುಂಬಿತು. ಅಲ್ಲಿ ಸಸ್ಯಸಮೃದ್ಧಿಯೂ ಉಂಟಾಯಿತು.

ಯೇಷಾಂ ಪುಣ್ಯಜನೋಪೇತಂ ರಾಷ್ಟ್ರಮಾವಸತಾಂ ಮಹತ್ ।
ಪಾಂಡವಾನಾಂ ಮಹಾರಾಜಾ ಶಶ್ವತ್ ಪ್ರೀತಿರವರ್ಧತ ॥೮೪॥

ಯಾವ ಪಾಂಡವರ ಆವಾಸದಿಂದ ಆ ಪುಣ್ಯಜನೋಪೇತವಾದ ನಗರವು ಮತ್ತು ರಾಷ್ಟ್ರವು ಅಭಿವೃದ್ಧಿಯನ್ನು ಹೊಂದಿತೋ, ಆ ಕಾರಣದಿಂದ ಪಾಂಡವರಿಗೆ ಆ ನಗರದಲ್ಲಿ ಪ್ರೀತಿಯು ಬೆಳೆಯಿತು.

ಸೌಬಲೇನ ಚ ಕರ್ಣೇನ ಧಾರ್ತರಾಷ್ಟ್ರೈಃ ಕೃಪೇಣ ಚ ।
ತಥಾ ಭೀಷ್ಮೇಣ ರಾಜ್ಞಾ ಚ ಧರ್ಮಪ್ರಣಯಿನಸ್ತದಾ ॥೮೫॥

ಪಾಂಡವಾಃ ಸಮಪದ್ಯಂತ ಖಾಂಡವಪ್ರಸ್ಥವಾಸಿನಃ ।
ಪಂಚಭಿಸ್ತೈರ್ಮಹೇಷ್ವಾಸೈರಿಂದ್ರಕಲ್ಪೈಃ ಸಮಾವೃತಮ್ ।
ಶುಶುಭೇ ತತ್ ಪುರಶ್ರೇಷ್ಠಂ ನಾಗೈರ್ಭೋಗವತೀ ಯಥಾ ॥೮೬॥

ಶಕುನಿ, ಕರ್ಣ ಮತ್ತು ದುರ್ಯೋಧನಾದಿಗಳ ದುರ್ವ್ಯಾಪಾರಗಳ ನಿಮಿತ್ತದಿಂದ ಖಾಂಡವಪ್ರಸ್ಥದಲ್ಲಿ ವಾಸವನ್ನು ಮಾಡಿದ ಪಾಂಡವರು ಭೀಷ್ಮ ಮತ್ತು ಕೃಪರ ಮಾರ್ಗದರ್ಶನದಲ್ಲಿ ಧರ್ಮಾಚರಣೆಯನ್ನು ಮಾಡುವವರಾದರು. ಐದು ಜನ ಇಂದ್ರಕಲ್ಪರಾದ ಮಹಾವೀರರಿಂದ ಕೂಡಿದ ಆ ಪಟ್ಟಣವು ನಾಗಗಳಿಂದ ಕೂಡಿದ ಭೋಗವತಿಯಂತೆ ಶ್ರೇಷ್ಠವಾಗಿ ಮೆರೆಯಿತು.

ತತಸ್ತು ವಿಶ್ವಕರ್ಮಾಣಂ ಪೂಜಯಿತ್ವಾ ವಿಸೃಜ್ಯ ಚ ।
ದ್ವೈಪಾಯನಂ ಚ ಸಂಪೂಜ್ಯ ವಿಸೃಜ್ಯ ಚ ನರಾಧಿಪ ॥೮೭॥

ಅನಂತರ, ವಿಶ್ವಕರ್ಮನನ್ನು ಪೂಜಿಸಿ ಬೀಳ್ಕೊಟ್ಟು, ವೇದವ್ಯಾಸರನ್ನೂ ಪೂಜಿಸಿ ಬೀಳ್ಕೊಟ್ಟ ರಾಜನು ಹೊರಡಲು ಉದ್ಯುಕ್ತನಾಗಿದ್ದ ಕೇಶವನನ್ನು ಕುರಿತು ಹೇಳಿದನು.

ವಾರ್ಷ್ಣೇಯಮಬ್ರವೀದ್ ರಾಜಾ ಗಂತುಕಾಮಂ ಕೃತಕ್ಷಣಮ್ ।
ತವ ಪ್ರಸಾದಾದ್ ವಾರ್ಷ್ಣೇಯ ರಾಜ್ಯಂ ಪ್ರಾಪ್ತಂ ಮಯಾಽನಘ ।
ಪ್ರಸಾದಾದೇವ ತೇ ವೀರ ಶೂನ್ಯಂ ರಾಷ್ಟ್ರಂ ಸುದುರ್ಗಮಮ್ ॥೮೮॥

ವಾರ್ಷ್ಣೇಯನೇ, ನಿನ್ನ ಅನುಗ್ರಹದಿಂದ ನನಗೆ ರಾಜ್ಯವು ಪ್ರಾಪ್ತವಾಯಿತು. ಅನಘನಾದ ವೀರನೇ, ನಿನ್ನ ಅನುಗ್ರಹದಿಂದಲೇ ಮೊದಲು ಶೂನ್ಯವಾಗಿದ್ದ ಈ ರಾಷ್ಟ್ರವು ಈಗ ಪ್ರಬಲವಾದ ಸೈನ್ಯದಿಂದ ಕೂಡಿ ಶತ್ರುಗಳಿಗೆ ದುರ್ಗಮವಾಗಿದೆ.

ತವೈವ ತು ಪ್ರಸಾದೇನ ರಾಜ್ಯಸ್ಥಾಶ್ಚ ಮಹಾಮತೇ ।
ಗತಿಸ್ತ್ವಮಂತಕಾಲೇ ಚ ಪಾಂಡವಾನಾಂ ತು ಮಾಧವ ॥೮೯॥

ಮಹಾಮತಿಯೇ, ನಿನ್ನ ಅನುಗ್ರಹದಿಂದಲೇ, ನಾವು ಈ ದಿನ ರಾಜ್ಯದಲ್ಲಿದ್ದೇವೆ. ಮಾಧವನೇ, ಪಾಂಡವರಾದ ನಮಗೆ ಅಂತ್ಯಕಾಲದಲ್ಲಿಯೂ ಸಹ ನೀನೇ ಗತಿ.

ಮಾತಾऽಸ್ಮಾಕಂ ಪಿತಾ ದೇವೋ ನ ಪಾಂಡುಂ ವಿದ್ಮ ವೈ ವಯಮ್ ।
ಜ್ಞಾತ್ವಾ ತು ಕೃತ್ಯಂ ಕರ್ತವ್ಯಂ ಕಾರಯಸ್ವ ಭವಾನ್ ಹಿ ನಃ ।
ಯದಿಷ್ಟಮನುಮಂತವ್ಯಂ ಪಾಂಡವಾನಾಂ ತ್ವಯಾऽನಘ ॥೯೦॥

ನೀನೇ ನಮಗೆ ತಾಯಿ ಮತ್ತು ತಂದೆ. ನಾವು ಪಾಂಡುವನ್ನು ತಿಳಿಯಲೇ ಇಲ್ಲ. ನೀನೇ ನಾವು ಏನು ಮಾಡಬೇಕೆಂದು ನಿರ್ಧರಿಸಿ ಅದನ್ನು ನಮ್ಮಿಂದ ಮಾಡಿಸು. ಅನಘನೇ, ನಿನಗೆ ಯಾವುದು ಇಷ್ಟವೋ ಅದನ್ನು ಮಾಡುವುದಕ್ಕೆ ಪಾಂಡವರಿಗೆ ಅನುಮತಿಯನ್ನು ಕೊಡು.

ಶ್ರೀವಾಸುದೇವಃ

ತತ್ಪ್ರಸಾದಾನ್ಮಹಾರಾಜ ರಾಜ್ಯಂ ಪ್ರಾಪ್ತಂ ಸ್ವಧರ್ಮತಃ ।
ಪಿತೃಪೈತಾಮಹಂ ರಾಜ್ಯಂ ಕಥಂ ನ ಸ್ಯಾತ್ ತವ ಪ್ರಭೋ ॥೯೧॥

ಮಹಾರಾಜನೇ, ನಿನ್ನ ಪ್ರಸನ್ನತೆ ಮೊದಲಾದ ಶಾಂತಗುಣಗಳಿಂದಲೇ, ನೀನು ನಿನ್ನ ಧರ್ಮದಿಂದಲೇ ರಾಜ್ಯವನ್ನು ಪಡೆದಿದ್ದೀಯೆ. ಪ್ರಭುವೇ, ಪಿತೃಪಿತಾಮಹರಿಗೆ ಸೇರಿದ ರಾಜ್ಯವು ನಿನಗೆ ಹೇಗೆ ಬರದಿರಲು ಸಾಧ್ಯ?

ಧಾರ್ತರಾಷ್ಟ್ರಾ ದುರಾಚಾರಾಃ ಕಿಂ ಕರಿಷ್ಯಂತಿ ಪಾಂಡವಾನ್ ।
ಯಥೇಷ್ಟಂ ಪಾಲಯ ಮಹೀಂ ಸದಾ ಧರ್ಮಧುರಂ ವಹ ॥೯೨॥

ದುರಾಚಾರಿಗಳಾದ ದುರ್ಯೋಧನಾದಿಗಳು ಪಾಂಡವರಿಗೆ ಏನು ಮಾಡಬಲ್ಲರು. ನಿನ್ನ ಮನಸ್ಸಿಗೆ ತೃಪ್ತಿಯಾಗುವಂತೆ ಭೂಮಿಯನ್ನು ಆಳು. ಯಾವಾಗಲೂ ಧರ್ಮದ ಭಾರವನ್ನು ಹೊತ್ತುಕೊಂಡು ಆಚರಿಸು.

ಧರ್ಮೋಪದೇಶಂ ಸಂಕ್ಷೇಪಾದ್ ಬ್ರಾಹ್ಮಣಾನ್ ಭರ ಪೌರವ ।
ಅದ್ಯೈವ ನಾರದಃ ಶ್ರೀಮಾನಾಗಮಿಷ್ಯತಿ ಸತ್ವರಃ ।
ಆದೃತ್ಯ ತಸ್ಯ ವಾಕ್ಯಾನಿ ಶಾಸನಂ ಕುರು ತಸ್ಯ ವೈ ॥೯೩॥

ಎಲೈ ಪೌರವನೇ, ಅಧರ್ಮವನ್ನು ದೂರಮಾಡಿ ಧರ್ಮೋಪದೇಶವನ್ನೂ ಮತ್ತು ಬ್ರಾಹ್ಮಣರನ್ನೂ ಪೋಷಿಸು. ಈ ದಿನವೇ ಪೂಜ್ಯರಾದ ನಾರದರು ಶೀಘ್ರವಾಗಿ ಬರುತ್ತಾರೆ. ಅವರ ವಾಕ್ಯಗಳನ್ನು ಆಧರಿಸಿ ಅವರ ಶಾಸನದಂತೆ ನಡೆದುಕೋ.

ವೈಶಂಪಾಯನಃ

ಏವಮುಕ್ತ್ವಾ ತತಃ ಕುಂತೀಮಭಿವಾದ್ಯ ಜನಾರ್ದನಃ ।
ಉವಾಚ ಶ್ಲಕ್ಷ್ಣಯಾ ವಾಚಾ ಗಮಿಷ್ಯಾಮಿ ನಮೋಽಸ್ತು ತೇ ॥೯೪॥

ಜನಾರ್ದನನು ಹೀಗೆ ಮಾತನಾಡಿ, ಅನಂತರ ಕುಂತಿಗೆ ನಮಸ್ಕರಿಸಿ ಮಧುರವಾದ ಮಾತುಗಳಿಂದ ನಾನು ಹೋಗಿಬರುತ್ತೇನೆ, ನಿನಗೆ ನಮಸ್ಕಾರ ಎಂದು ಹೇಳಿದನು.

ಕುಂತೀ

ಜಾತುಷಂ ಗೃಹಮಾಸಾದ್ಯ ಮಯಾ ಪ್ರಾಪ್ತಂ ಚ ಕೇಶವ ।
ಆರ್ಯೇಣಾಪಿ ತವಾಜ್ಞಾತಂ ಕುಂತಿಭೋಜೇನ ವಾಽನಘ ॥೯೫॥

ಕೇಶವನೇ, ಅರಗಿನಮನೆಯನ್ನು ಹೊಂದಿ ನಾನು ಅಣ್ಣನಾದ ವಸುದೇವನಿಗೂ ತಿಳಿಯದಂತೆ, ತಂದೆಯಾದ ಕುಂತಿಭೋಜನಿಗೂ ತಿಳಿಯದಂತೆ ಮತ್ತು ನಿನಗೂ ತಿಳಿಯದಂತೆ ಅನೇಕ ಕ್ಲೇಶಗಳನ್ನು ಅನುಭವಿಸಿದೆ.

ತ್ವಯಾ ನಾಥೇನ ಗೋವಿಂದ ಸುಖಂ ಪ್ರಾಪ್ತಂ ಮಹತ್ತರಮ್ ।
ತ್ವಂ ಹಿ ನಾಥಸ್ತ್ವನಾಥಾನಾಂ ದರಿದ್ರಾಣಾಂ ವಿಶೇಷತಃ ॥೯೬॥

ಗೋವಿಂದನೇ, ನೀನು ನಾಥನಾಗಿರುವ ಕಾರಣ ನಮಗೆ ಮಹತ್ತರವಾದ ಸುಖವು ಪ್ರಾಪ್ತವಾಯಿತು. ಅನಾಥರಿಗೆಲ್ಲಾ ನೀನೇ ನಾಥನಾದವನು. ಅದರಲ್ಲೂ ವಿಶೇಷವಾಗಿ ದರಿದ್ರರಿಗೆ ನಾಥನಾದವನು.

ಸರ್ವದುಃಖಾನಿ ಶಾಮ್ಯಂತಿ ತವ ಸಂದರ್ಶನಾನ್ಮಮ ।
ಸ್ಮರಸ್ವೈನಾನ್ ಮಹಾಪ್ರಾಜ್ಞ ತೇನ ಜೀವಂತಿ ಪಾಂಡವಾಃ ॥೯೭॥

ಮಹಾಪ್ರಾಜ್ಞನೇ, ನಿನ್ನ ದರ್ಶನದಿಂದ ನನಗೆ ಎಲ್ಲಾ ದುಃಖಗಳು ನಾಶಹೊಂದುತ್ತವೆ. ನೀನು ಈ ನನ್ನ ಮಕ್ಕಳನ್ನು ಸ್ಮರಿಸು. ಅದರಿಂದ ಪಾಂಡವರು ಜೀವಿಸುತ್ತಾರೆ.

ವೈಶಂಪಾಯನಃ

ಕರಿಷ್ಯಾಮೀತಿ ಚಾಮಂತ್ರ್ಯ ಅಭಿವಾದ್ಯ ಪಿತೃಷ್ವಸಾಮ್ ।
ಗಮನಾಯ ಮತಿಂ ಚಕ್ರೇ ವಾಸುದೇವಃ ಸಹಾನುಗಃ ॥೯೮॥

ನೀನು ಹೇಳಿದ ಹಾಗೆಯೇ ಮಾಡುತ್ತೇನೆ ಎಂದು ಹೇಳಿ ವಾಸುದೇವನು ಸೋದರತ್ತೆಯಾದ ಕುಂತಿಗೆ ನಮಸ್ಕರಿಸಿ ತನ್ನ ಅನುಚರರ ಜೊತೆಯಲ್ಲಿ ಹೊರಡಲು ನಿರ್ಧರಿಸಿದನು.

ಅನುಜ್ಞಾಪ್ಯ ತತೋ ವೀರಾಃ ಸಹ ರಾಮೇಣ ಕೇಶವಃ ।
ಯಯೌ ದ್ವಾರವತೀಂ ರಾಜನ್ ಪಾಂಡವಾನುಮತೇ ತದಾ ॥೯೯॥

ರಾಜನೇ, ಕುಂತಿಯ ಅನುಮತಿಯನ್ನು ಪಡೆದು, ವೀರನಾದ ಕೇಶವನು ಬಲರಾಮನ ಜೊತೆಯಲ್ಲಿ ದ್ವಾರಕಾಪಟ್ಟಣಕ್ಕೆ ಪ್ರಯಾಣ ಮಾಡಿದನು ಮತ್ತು ಪಾಂಡವರ ಅಭಿಪ್ರಾಯದಂತೆಯೇ ನಡೆದುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ನವಾಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ರಾಜ್ಯಲಾಭಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಒಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ತಂ ದ್ವ್ಯಷ್ಟಸಾಹಸ್ರಗೃಹೇಷು ದೃಷ್ಟ್ವಾ
ತಾವತ್ಸ್ವರೂಪೈರ್ವಿಹರಂತಮೇಕಂ ।
ಸುವಿಸ್ಮಿತಃ ಪ್ರಯಯೌ ತಂ ಪ್ರಣಮ್ಯ
ಶಕ್ರಪ್ರಸ್ಥಂ ಪೂಜಿತಶ್ಚಾತ್ರ ಪಾರ್ಥೈಃ ॥೧೫೦॥

ಶ್ರೀಕೃಷ್ಣ ಒಬ್ಬನೆ ಹದಿನಾರು ಸಾವಿರ ಮನೆಗಳಲ್ಲಿ ಅಷ್ಟು ರೂಪಗಳಿಂದ ವಿಹರಿಸುತ್ತಿದ್ದುದನ್ನು ಕಂಡು ಬಹಳ ವಿಸ್ಮಿತರಾದ ನಾರದರು ಅವನನ್ನು ನಮಿಸಿ ಇಂದ್ರಪ್ರಸ್ಥಕ್ಕೆ ಹೋದರು. ಅಲ್ಲಿ ಪಾಂಡವರು ಅವರನ್ನು ಸತ್ಕರಿಸಿದರು.

ಸ ಆಜ್ಞಯಾ ಬ್ರಹ್ಮಣ ಆಹ ಕೃಷ್ಣಾಂ
ಕ್ರಮಾತ್ಕರ್ತುಂ ಭೀಮ ಏವೈಕಸಂಸ್ಥಾಂ ।
ಅನ್ಯಾ ದೇವೀಃ ಸ್ಥಾಪಯಿತ್ವಾ ಶರೀರೇ
ತಸ್ಯಾ ಭಾರತ್ಯಾಃ ಪೂರ್ಣಭೋಗಾರ್ಥಮೇವ ॥೧೫೧॥

ದ್ರೌಪದೀ ಶರೀರದಲ್ಲಿ ಅನ್ಯದೇವಿಯರನ್ನು ಸುಪ್ತಿಗೊಳಿಸಿ ಭಾರತೀದೇವಿಗೇ ಪೂರ್ಣರತಿ ಸುಖವನ್ನು ದೊರಕಿಸುವ ಸಲುವಾಗಿ ದ್ರೌಪದಿಯನ್ನು ಕ್ರಮವಾಗಿ ಭೀಮನ ಬಳಿಯಲ್ಲಿಯೆ ಹೆಚ್ಚುಕಾಲ ಇರಿಸಬೇಕೆಂದು ನಾರದರು ಬ್ರಹ್ಮನ ಆಜ್ಞೆಯಿಂದ ಹೀಗೆ ಹೇಳಿದರು.

ಸುಂದೋಪಸುಂದೌ ಭ್ರಾತರೌ ಬ್ರಹ್ಮವಾಕ್ಯಾತ್
ಪರಸ್ಪರಾದನ್ಯತೋ ನೈವ ವಧ್ಯೌ ।
ತಿಲೋತ್ತಮಾರ್ಥೇ ನಿಹತೌ ಪರಸ್ಪರಂ
ತಯೋರ್ವಧಾರ್ಥೇ ಸೃಷ್ಟಯಾ ತೇನ ದೈತ್ಯೌ ॥೧೫೨॥

ಸುಂದ ಉಪಸುಂದ ಎಂಬ ಇಬ್ಬರು ಅಣ್ಣತಮ್ಮಂದಿರು ಬ್ರಹ್ಮನ ವರದಿಂದ ಪರಸ್ಪರರಿಂದ ಹೊರತು ಅನ್ಯರಿಂದ ಸಾವಿಲ್ಲದವರಾಗಿದ್ದರು. ಅವರ ವಧೆಗಾಗಿ ತಿಲೋತ್ತಮೆ ಸೃಷ್ಟಳಾದಳು. ಅವಳಿಂದ ಮೋಹಿತರಾಗಿ ಆ ದೈತ್ಯರು ಅವಳ ಸಲುವಾಗಿ ಪರಸ್ಪರ ಹೋರಾಡಿ ಹತರಾದರು.

ಅತಃ ಪೃಥಗ್ ವತ್ಸರತೋ ಭವತ್ಸು
ಕ್ರಮಾತ್ ಕೃಷ್ಣಾ ತಿಷ್ಠತಾಂ ಯೋಽನ್ಯಯುಕ್ತಾಂ ।
ಪಶ್ಯೇದ್ ವೋಽಸೌ ವತ್ಸರಂ ತೀರ್ಥಯಾತ್ರಾಂ
ಕುರ್ಯಾದಿತಿ ಸ್ಮಾಥ ಚಕ್ರುಸ್ತಥಾ ತೇ ॥೧೫೩॥

ಅದರಿಂದ ದ್ರೌಪದಿ ನಿಮ್ಮಲ್ಲಿ ಜ್ಯೇಷ್ಠತ್ವಕ್ರಮದಿಂದ ಒಬ್ಬೊಬ್ಬರಿಗೆ ಒಂದೊಂದು ವರ್ಷ ಮೀಸಲಾಗಿರಲಿ, ಅವಳು ಒಬ್ಬರೊಂದಿಗೆ ಕೂಡಿರುವಾಗ ಅವಳನ್ನು ಇನ್ನೊಬ್ಬರು ಯಾರು ನೋಡುವರೋ ಅವರು ಒಂದು ವರ್ಷ ತೀರ್ಥಯಾತ್ರೆ ಮಾಡಲಿ ಎಂದು ನಾರದರು ಹೇಳಿದರು. ಪಾಂಡವರು ಹಾಗೇ ನಿಯಮ ಮಾಡಿಕೊಂಡರು.

★ ★ ★ ★

ಇನ್ನೂರ ಹತ್ತನೆಯ ಅಧ್ಯಾಯ

(ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರ, ನಾರದರ ಆಗಮನ, ಅವರ ಜ್ಞಾನದ ಆಗಾಧತೆ, ಸುಂದೋಪಸುಂದರ ಉಲ್ಲೇಖ.)

ಜನಮೇಜಯಃ

ಏವಂ ಸಂಪ್ರಾಪ್ಯ ರಾಜ್ಯಂ ತದಿಂದ್ರಪ್ರಸ್ಥೇ ತಪೋಧನ ।
ಅತ ಊರ್ದ್ವಂ ಮಹಾಭಾಗ ಕಿಮಕುರ್ವತ ಪಾಂಡವಾಃ ॥೧॥

ತಪೋಧನರಾದ ವೈಶಂಪಾಯನರೇ, ಇಂದ್ರಪ್ರಸ್ಥದಲ್ಲಿ ಹೀಗೆ ರಾಜ್ಯವನ್ನು ಪಡೆದ ಪಾಂಡವರು ಅನಂತರ ಏನು ಮಾಡಿದರು?

ಪೂರ್ವ ಏವ ಮಹಾತ್ಮಾನಃ ಸರ್ವೇ ಮಮ ಪಿತಾಮಹಾಃ ।
ದ್ರೌಪದೀ ಧರ್ಮಪತ್ನೀ ಚ ಕಥಂ ತಾನನ್ವವರ್ತತ ॥೨॥

ಮಹಾನುಭಾವರೇ, ಎಲ್ಲರೂ ನನ್ನ ಪಿತಾಮಹರು ಮತ್ತು ನನ್ನ ಪೂರ್ವಿಕರಾದ ಮಹಾನುಭಾವರು. ಧರ್ಮಪತ್ನಿಯಾದ ದ್ರೌಪದಿಯು ಅವರಲ್ಲಿ ಹೇಗೆ ನಡೆದುಕೊಂಡಳು?

ಕಥಮಾಸಂಶ್ಚ ಕೃಷ್ಣಾಯಾಮೇಕಸ್ಯಾಂ ತೇ ನರರ್ಷಭಾಃ ।
ವರ್ತಮಾನಾ ಮಹೇಶ್ವಾಸಾ ನಾಭಿದ್ಯಂತ ಪರಸ್ಪರಮ್ ॥೩॥

ಆ ನರಶ್ರೇಷ್ಠರು ತಮ್ಮೆಲ್ಲರ ಒಬ್ಬ ಪತ್ನಿಯ ವಿಷಯದಲ್ಲಿ ಹೇಗೆ ನಡೆದುಕೊಂಡರು? ಅವರಿಗೆ ಪರಸ್ಪರವಾಗಿ ಏಕೆ ವಿರೋಧವುಂಟಾಗಲಿಲ್ಲ?

ಶ್ರೋತುಮಿಚ್ಛಾಮ್ಯಹಂ ತ್ವತ್ತೋ ವಿಸ್ತರೇಣ ತಪೋಧನ ।
ತೇಷಾಂ ಚೇಷ್ಟಿತಮನ್ಯೋನ್ಯಂ ಯುಕ್ತಾನಾಂ ಕೃಷ್ಣಯಾ ಸಹ ॥೪॥

ತಪೋಧನರೇ, ಪರಸ್ಪರವಾಗಿ ಅವರ ಚೇಷ್ಟೆಗಳನ್ನೂ ಮತ್ತು ಕೃಷ್ಣೆಯ ಜೊತೆಯಲ್ಲಿ ಅವರ ನಡತೆಯನ್ನೂ ವಿಸ್ತಾರವಾಗಿ ತಿಳಿಯಲು ಬಯಸುತ್ತೇನೆ.

ವೈಶಂಪಾಯನಃ

ಧೃತರಾಷ್ಟ್ರಾಭ್ಯನುಜ್ಞಾತಾ ಇಂದ್ರಪ್ರಸ್ಥಂ ಪ್ರವಿಶ್ಯ ತತ್ ।
ರೇಮಿರೇ ಪುರುಷವ್ಯಾಘ್ರಾಃ ಕೃಷ್ಣಯಾ ಸಹ ಪಾಂಡವಾಃ ॥೫॥

ಧೃತರಾಷ್ಟ್ರನ ಅನುಮತಿಯನ್ನು ಪಡೆದು ಪುರುಷವ್ಯಾಘ್ರರಾದ ಪಾಂಡವರು ಆ ಇಂದ್ರಪ್ರಸ್ಥಕ್ಕೆ ಬಂದು ಕೃಷ್ಣೆಯ ಜೊತೆಯಲ್ಲಿ ಸಂತೋಷದಿಂದಿದ್ದರು.

ಪ್ರಾಪ್ಯ ರಾಜ್ಯಂ ಮಹಾತೇಜಾಃ ಸತ್ಯಸಂಧೋ ಯುಧಿಷ್ಠಿರಃ ।
ಪಾಲಯಾಮಾಸ ಧರ್ಮೇಣ ಪೃಥಿವೀಂ ಭ್ರಾತೃಭಿಃ ಸಹ ॥೬॥

ಮಹಾತೇಜಸ್ವಿಯೂ, ಸತ್ಯಸಂಧನೂ ಆದ ಯುಧಿಷ್ಠಿರನು ರಾಜ್ಯವನ್ನು ಪಡೆದು, ತಮ್ಮಂದಿರ ಜೊತೆಯಲ್ಲಿ ಧರ್ಮದಿಂದ ಭೂಮಿಯನ್ನು ಆಳಿದನು.

ಜಿತಾರಯೋ ಮಹಾಪ್ರಾಜ್ಞಾಃ ಸತ್ಯಧರ್ಮಪರಾಯಣಾಃ ।
ಮುದಂ ಪರಮಿಕಾಂ ಪ್ರಾಪ್ತಾಸ್ತತ್ರೋಷುಃ ಪಾಂಡುನಂದನಾಃ ॥೭॥

ಸತ್ಯಧರ್ಮಪರಾಯಣರಾದ, ಮಹಾಪ್ರಾಜ್ಞರಾದ ಪಾಂಡವರು ಶತ್ರುಗಳನ್ನು ಜಯಿಸಿ, ಉತ್ಕೃಷ್ಟವಾದ ಸುಖವನ್ನು ಹೊಂದಿ ಅಲ್ಲಿ ವಾಸಿಸಿದರು.

ಕುರ್ವಾಣಾಃ ಪೌರಕಾರ್ಯಾಣಿ ಸರ್ವಾಣಿ ಭರತರ್ಷಭ ।
ಆಸಾಂಚಕ್ರುರ್ಮಹಾರ್ಹೇಷು ಪರಾರ್ಘ್ಯೇಷ್ವಾಸನೇಷು ಚ ॥೮॥

ಭರತರ್ಷಭನೇ, ಅವರು ಪೌರರಿಗೆ ಹಿತವಾದ ಎಲ್ಲಾ ಕಾರ್ಯಗಳನ್ನೂ ಮಾಡುತ್ತಾ, ಅನರ್ಘ್ಯವಾದ ದಿವ್ಯವಾದ ಆಸನಗಳಲ್ಲಿ ಕುಳಿತಿದ್ದರು.

ತೇಷು ತತ್ರೋಪವಿಷ್ಟೇಷು ಪಾಂಡವೇಷು ಮಹಾತ್ಮಸು ।
ಆಯಯೌ ಧರ್ಮರಾಜಂ ತಂ ದ್ರಷ್ಟುಕಾಮೋಽಥ ನಾರದಃ ॥೯॥

ಮಹಾತ್ಮರಾದ ಪಾಂಡವರು ಅಲ್ಲಿ ಹಾಗೆ ಕುಳಿತಿರಲು, ನಾರದರು ಧರ್ಮರಾಜನನ್ನು ನೋಡಲು ಬಯಸಿ ಅಲ್ಲಿಗೆ ಬಂದರು.

ಯಥಾ ನಕ್ಷತ್ರಜುಷ್ಟೇನ ಸುಪರ್ಣಚರಿತೇನ ಚ ।
ಚಂದ್ರಸೂರ್ಯಪ್ರಕಾಶೇನ ಸೇವಿತೇನ ಮಹರ್ಷಿಭಿಃ ॥೧೦॥

ನಕ್ಷತ್ರಗಳಿಂದ ಕೂಡಿದ, ಗರುಡ ಮೊದಲಾದ ಪಕ್ಷಿಗಳು ಹಾರಾಡುವ, ಸೂರ್ಯಚಂದ್ರರ ಪ್ರಕಾಶದಿಂದ ಕೂಡಿದ, ಮಹರ್ಷಿಗಳಿಂದ ಸೇವಿತವಾದ, ಆಕಾಶಮಾರ್ಗದಿಂದ ಬಂದರು.

ನಭಸ್ತಲೇನ ದಿವ್ಯೇನ ದುರ್ಲಭೇನಾತಪಸ್ವಿನಾಮ್ ।
ಭೂತಾರ್ಚಿತೋ ಭೂತಧರಾಂ ರಾಷ್ಟ್ರಮಂದಿರಭೂಷಿತಾಮ್ ॥೧೧॥

ಅವೇಕ್ಷಮಾಣೋ ದ್ಯುತಿಮಾನಾಜಗಾಮ ಯದೃಚ್ಛಯಾ ।
ಸರ್ವವೇದಾಂತಗೋ ವಿಪ್ರಃ ಸರ್ವವಿದ್ಯಾಸು ಪಾರಗಃ ॥೧೨॥

ತಪಸ್ವಿಗಳಲ್ಲದವರಿಗೆ ದುರ್ಲಭವಾದ, ದಿವ್ಯವಾದ ಆಕಾಶದಿಂದ ರಾಷ್ಟ್ರ ಮತ್ತು ಮಂದಿರಗಳಿಂದ ಯುಕ್ತವಾದ ಭೂಮಿಯನ್ನು ನೋಡುತ್ತಾ, ಎಲ್ಲರಿಂದಲೂ ಪೂಜಿಸಲ್ಪಡುವ ಕಾಂತಿಯುಕ್ತರಾದ ನಾರದರು ಇದ್ದಕ್ಕಿದ್ದಂತೆಯೇ ಅಲ್ಲಿಗೆ ಬಂದರು. ಅವರು ಸರ್ವವೇದಾಂತಗಳನ್ನೂ ತಿಳಿದ, ಸರ್ವವಿದ್ಯೆಗಳಲ್ಲೂ ಪಾರಂಗತರಾದ ಬ್ರಾಹ್ಮಣರು.

ಪರೇಣ ತಪಸಾ ಯುಕ್ತೋ ಬ್ರಾಹ್ಮೇಣ ತಪಸಾ ವೃತಃ ।
ನಯೇ ನೀತೌ ಚ ನಿರತೋ ವಿಶ್ರುತಶ್ಚ ಮಹಾಮುನಿಃ ॥೧೩॥

ಅವರು ಶ್ರೇಷ್ಠವಾದ ತಪಸ್ಸಿನಿಂದ ಕೂಡಿದವರೂ, ಯಾವಾಗಲೂ ಪರಬ್ರಹ್ಮನ ಚಿಂತನೆಯಲ್ಲಿರುವವರೂ, ನಯದಲ್ಲಿಯೂ, ನೀತಿಯಲ್ಲಿಯೂ ನಿರತರಾದ, ಪ್ರಖ್ಯಾತರಾದ ಮಹಾಮುನಿಗಳು.

ಪರಾತ್ ಪರತರಂ ಪ್ರಾಪ್ತೋ ಧರ್ಮಮೇವಾಭಿಜಗ್ಮಿವಾನ್ ।
ಅಯೋನಿಜಶ್ಚ ಗದಿತಃ ಶ್ರುತಿಭಿಶ್ಚ ಮಹಾಮುನಿಃ ॥೧೪॥

ಅವರು ಸರ್ವೋತ್ತಮನಾದ ನಾರಾಯಣನನ್ನು ಹೊಂದಿದವರೂ, ಧರ್ಮವನ್ನೇ ಆಶ್ರಯಿಸಿದವರೂ ಮತ್ತು ಬ್ರಹ್ಮದೇವರ ತೊಡೆಯಿಂದ ಹುಟ್ಟಿದ ಕಾರಣ ವೇದಗಳಲ್ಲಿ ಅಯೋನಿಜರೆಂದು ಹೇಳಲ್ಪಡುವ ಮಹಾಮುನಿಗಳು.

ಭಾವಿತಾತ್ಮಾ ಗತರಜಾಃ ಶಾಂತೋ ಮೃದುರ್ಯಜುರ್ದ್ವಿಜಃ ।
ಧರ್ಮೇಣಾಧಿಗತಃ ಸರ್ವೈರ್ದೇವದಾನವಮಾನುಷೈಃ ॥೧೫॥

ಅವರು ಪರಿಶುದ್ಧವಾದ ಮನಸ್ಸುಳ್ಳವರೂ, ವಿರಾಗಿಗಳೂ, ಶಾಂತರೂ, ಮೃದುಸ್ವಭಾವದವರೂ, ಆರ್ಜವವನ್ನು ಹೊಂದಿದವರೂ, ಎಲ್ಲಾ ದೇವದಾನವಮನುಷ್ಯರಿಂದಲೂ ಧರ್ಮಿಷ್ಠರೆಂದೇ ತಿಳಿಯಲ್ಪಡುವವರು.

ಕ್ಷೀಣಕರ್ಮಸು ಪಾಪೇಷು ಭಕ್ಷ್ಯೇಷು ವಿವಿಧೇಷು ಚ ।
ಸರ್ವಥಾ ಕೃತಮರ್ಯಾದೋ ವೇದೇಷು ವಿವಿಧೇಷು ಚ ॥೧೬॥

ಪಾಪಕರ್ಮಗಳನ್ನೂ, ಪಾಪಕರ್ಮದ ಫಲಗಳಾದ ದುಃಖಭೋಗಗಳನ್ನೂ ಪರಿತ್ಯಾಗ ಮಾಡಿದವರು. ವಿವಿಧ ವೇದಗಳಲ್ಲಿ ಅಧ್ಯಯನಾದಿ ವಿಷಯದಲ್ಲಿ ನಿಯಮಗಳನ್ನು ಮಾಡಿದವರು.

ಶತಶಃ ಸೋಮಪಾ ಯಜ್ಞೇ ಸದಾ ಪುಣ್ಯಕೃದಗ್ನಿಚಿತ್ ।
ಋಕ್ಸಾಮಯಜುಷಾಂ ವೇತ್ತಾ ನ್ಯಾಯವೃತ್ತಾಂತಕೋವಿದಃ ॥೧೭॥

ಅವರು ಯಜ್ಞಗಳಲ್ಲಿ ನೂರಾರು ಬಾರಿ ಸೋಮಪಾನವನ್ನು ಮಾಡಿದವರು. ಯಾವಾಗಲೂ ಪುಣ್ಯವನ್ನು ಮಾಡುವವರು ಮತ್ತು ಅಗ್ನಿಚಯನವನ್ನು ಮಾಡುವವರು. ಋಗ್ವೇದ, ಸಾಮವೇದ ಮತ್ತು ಯಜುರ್ವೇದಗಳನ್ನು ತಿಳಿದವರು. ಬ್ರಹ್ಮತರ್ಕದ ನ್ಯಾಯದ ವಿಷಯಗಳಲ್ಲಿ ಕೋವಿದರಾದವರು.

ಋಜುರಾರೋಹವಾಂಛಲ್ಲೋ ಭೂಯಿಷ್ಠಪಥಿಕೋऽನಘಃ ।
ಶ್ಲಕ್ಷ್ಣಯಾ ಶಿಖಯೋಪೇತಃ ಸಂಪನ್ನಃ ಪರಮತ್ವಿಷಾ ॥೧೮॥

ಋಜುಯೋಗಿಗಳಂತೆ ಯಾವಾಗಲೂ ಮೋಕ್ಷಮಾರ್ಗದಲ್ಲಿ ಮೇಲೆ ಹೋಗುವವರು. ದೋಷದೂರರು. ಅನೇಕ ಶಾಸ್ತ್ರಮಾರ್ಗಗಳಲ್ಲಿ ಸಂಚರಿಸುವವರು. ಮಧುರವಚನವುಳ್ಳವರು. ಮೃದುವಾದ ಶಿಖೆಯಿಂದಲೂ ಶ್ರೇಷ್ಠವಾದ ಕಾಂತಿಯಿಂದಲೂ ಕೂಡಿದವರು.

ಅವದಾತೇ ಚ ಸೂಕ್ಷ್ಮೇ ಚ ದಿವ್ಯೇ ಚ ರುಚಿರೇ ಶುಭೇ ।
ಮಹೇಂದ್ರದತ್ತೇ ಮಹತೀ ಬಿಭ್ರತ್ ಪರಮವಾಸಸೀ ॥೧೯॥

ಶುಭ್ರವಾದ, ಸೂಕ್ಷ್ಮವೂ, ದಿವ್ಯವೂ ಮತ್ತು ಮನೋಹರವೂ ಆದ ಮಹೇಂದ್ರನು ಕೊಟ್ಟ ಎರಡು ವಸ್ತ್ರಗಳನ್ನು ಉಟ್ಟಿದ್ದರು.

ಜಂಬೂನದಮಯೇ ದಿವ್ಯೇ ಗಂಡೂಪದಮುಖೇ ನವೇ ।
ಅಗ್ನ್ಯರ್ಕಸದೃಶೇ ದಿವ್ಯೇ ಧಾರಯನ್ ಕುಂಡಲೇ ಶುಭೇ ॥೨೦॥

ಎರಡೂ ಕಿವಿಗಳಲ್ಲಿಯೂ ಸೂರ್ಯನಂತೆ, ಅಗ್ನಿಯಂತೆ ಹೊಳೆಯುವ ಪವಿತ್ರವಾದ, ಹೊಸದಾದ, ದಿವ್ಯವಾದ ಎರಡು ಮಕರಕುಂಡಲಗಳನ್ನು ಧರಿಸಿದ್ದರು.

ಚಿತ್ರಂ ರಾಜತಮುಚ್ಛ್ರಿತ್ಯ ಚ್ಛತ್ರಂ ಪರಮವರ್ಚಸಮ್ ।
ಪ್ರಾಪ್ಯ ದ್ರುಷ್ಪ್ರಾಪಮನ್ಯೇನ ಬ್ರಹ್ಮವರ್ಚಸಮುತ್ತಮಮ್ ।
ಭವನೇ ಭೂಮಿಪಾಲಸ್ಯ ಬೃಹಸ್ಪತಿರಿವಾಪ್ತುತಃ ॥೨೧॥

ಒಳ್ಳೆಯ ಕಾಂತಿಯಿಂದ ಕೂಡಿದ ಶ್ವೇತಚ್ಛತ್ರವನ್ನು ಮೇಲೆತ್ತಿದಂತೆ ಇನ್ನೊಬ್ಬರು ಪಡೆಯಲು ಅಸಾಧ್ಯವಾದ ತಮ್ಮ ರಜತಕಾಂತಿಯನ್ನು ಹೆಚ್ಚಿಸಿ, ರಾಜನ ಮನೆಯಲ್ಲಿ ಬೃಹಸ್ಪತಿಗಳಂತೆ ಇಳಿದರು.

ಸಂಹಿತಾಯಾಂ ಚ ಸರ್ವೇಷಾಂ ಸ್ಥಿತಸ್ಯೋಪಸ್ಥಿತಸ್ಯ ಚ ।
ದ್ವಿಪದಸ್ಯ ಚ ಧರ್ಮಸ್ಯ ಕ್ರಮಧರ್ಮಸ್ಯ ಪಾರಗಃ ॥೨೨॥

ವೇದಗಳ ಎಲ್ಲಾ ಸಂಹಿತೆಗಳಲ್ಲಿಯೂ, ಸಂಹಿತೆಯಲ್ಲಿ ಜೊತೆಜೊತೆಯಲ್ಲಿರುವ ಎರಡು ಪದಗಳ ಉಚ್ಚಾರಣೆಯಲ್ಲಿಯೂ, ಜಟಾಂತಕ್ರಮಗಳ ಉಚ್ಚಾರಣೆಯ ರೀತಿಯಲ್ಲಿಯೂ ಅವರು ಪಾರಂಗತರಾಗಿದ್ದರು.

ಗಾಥಾಃ ಸಮನುಸಂಜಜ್ಞೇ ಸಾಮ್ನಾಂ ಪರಮವಲ್ಗುನಾ ।
ಆತ್ಮನಾ ಸರ್ವಮೋಕ್ಷಿಭ್ಯಃ ಕೃತಿಮಾನ್ ಕೃತ್ಯವಿತ್ ತದಾ ॥೨೩॥

ಪರಮ ಮನೋಹರವಾದ, ಸಾಮವೇದದ, ಎಲ್ಲಾ ಗಾನಗಳನ್ನೂ ಉತ್ಪತ್ತಿಯನ್ನು ಮಾಡಿ ಹಾಡುತ್ತಿದ್ದರು. ಎಲ್ಲಾ ಮೋಕ್ಷಾಪೇಕ್ಷಿಗಳಿಗೆ ತಾವೇ ಸಹಾಯವನ್ನು ಮಾಡಬೇಕೆಂಬ ಪ್ರಯತ್ನದಿಂದ ಕೂಡಿದವರಾಗಿದ್ದರು.

ಯಜುರ್ಧರ್ಮೇ ಬಹುವಿಧೇ ಮತೋ ಮತಿಮತಾಂ ವರಃ ।
ವಿದಿತಾಚಾರ್ಯಸಮಯಃ ಚ್ಛೇತ್ತಾ ನಿಗಮಸಂಶಯಾನ್ ॥೨೪॥

ಯಜುರ್ವೇದದ ಬಹುವಿಧವಾದ ಧರ್ಮಗಳಲ್ಲಿ ಮೇಧಾವಿಗಳಾದ ಅವರು ನಿಪುಣರಾಗಿದ್ದರು. ಶಾಸ್ತ್ರಪ್ರವರ್ತಕರಾದ ಆಚಾರ್ಯರ ನಿಯಮಗಳನ್ನು ತಿಳಿದು, ಕರ್ಮಮೀಮಾಂಸೆಯಲ್ಲಿಯೂ, ದೇವಮೀಮಾಂಸೆಯಲ್ಲಿಯೂ, ಬ್ರಹ್ಮಮೀಮಾಂಸೆಯಲ್ಲಿಯೂ ನಿಪುಣರಾಗಿ ತಾವು ಯಾವ ಸಂಶಯವನ್ನೂ ಹೊಂದದೆ, ಇನ್ನೊಬ್ಬರ ಸಂಶಯಗಳನ್ನೂ ಪರಿಹಾರ ಮಾಡುತ್ತಿದ್ದರು.

ಅರ್ಥನಿರ್ವಚನೇ ನಿತ್ಯಂ ಸಂಶಯಚ್ಛಿದಸಂಶಯಃ ।
ಪ್ರಕೃತ್ಯಾ ಧರ್ಮಕುಶಲೋ ನಾನಾಧರ್ಮವಿಶಾರದಃ ॥೨೫॥

ಅರ್ಥನಿರ್ವಚನವನ್ನು ಮಾಡುವುದರಲ್ಲಿ ನಿಪುಣರಾಗಿದ್ದರು. ತಾವು ಸಂಶಯವನ್ನು ಹೊಂದದೆ, ಇನ್ನೊಬ್ಬರ ಸಂಶಯಗಳನ್ನು ಪರಿಹರಿಸುತ್ತಿದ್ದರು. ಪ್ರಕೃತಿಯ ಮಹದಹಂಕಾರಾದಿ ನಾನಾವಿಕಾರಗಳನ್ನು ಚೆನ್ನಾಗಿ ತಿಳಿದಿದ್ದರು.

ಲೋಪೇನಾಗಮಧರ್ಮೇಣ ಸಂಯಮೇನ ಚ ವೃತ್ತಿಷು ।
ಏಕಶಬ್ದಾಂಶ್ಚ ನಾನಾರ್ಥಾನೇಕಾರ್ಥಾಂಶ್ಚ ಪೃಥಕ್ಕೃತಾನ್ ।
ಪೃಥಗರ್ಥಾಭಿಧಾನಾಂಶ್ಚ ಪ್ರಯೋಗಾಣಾಮವೇಕ್ಷಿತಾ ॥೨೬॥

ವ್ಯಾಕರಣಗಳಲ್ಲಿ ಬರುವ ಲೋಪಗಳನ್ನೂ, ಆದೇಶಗಳನ್ನೂ ಮತ್ತು ನಿಷೇಧಗಳನ್ನೂ ತಿಳಿದಿದ್ದರು. ನಾನಾರ್ಥವಿರುವ ಒಂದೊಂದು ಶಬ್ದಗಳನ್ನೂ, ಒಂದೇ ಅರ್ಥವಿರುವ ಅನೇಕ ಪರ್ಯಾಯ ಶಬ್ದಗಳನ್ನೂ, ಪರಸ್ಪರ ಭಿನ್ನವಾದ ಅರ್ಥವನ್ನು ಹೇಳುವ ಭಿನ್ನವಾದ ಶಬ್ದಗಳನ್ನೂ ತಿಳಿದು ಅಂತಹ ಪ್ರಯೋಗಗಳನ್ನು ಗಮನಿಸುತ್ತಿದ್ದರು.

ಪ್ರಮಾಣಭೂತೋ ಲೋಕೇಷು ಸರ್ವಾಧಿಕರಣೇಷು ಚ ।
ಸರ್ವವರ್ಣವಿಕಾರೇಷು ನಿತ್ಯಂ ಸಕಲಪೂಜಿತಃ ॥೨೭॥

ಪ್ರಮಾಣಗಳಾದ ಪ್ರತ್ಯಕ್ಷ, ಅನುಮಾನ, ಆಗಮಗಳ ಲಕ್ಷಣಾದಿಗಳನ್ನು ತಿಳಿದಿದ್ದರು. ಬ್ರಹ್ಮಮೀಮಾಂಸಾ ಶಾಸ್ತ್ರದ ಎಲ್ಲಾ ಅಧಿಕರಣಗಳ ವಿಷಯದಲ್ಲಿಯೂ, ಸರ್ವವರ್ಣವಿಕಾರಗಳ ವಿಷಯದಲ್ಲಿಯೂ (ಸ್ವರ, ಸ್ಪರ್ಶ, ಅಂತಃಸ್ಥ, ಊಷ್ಮ ಮೊದಲಾದ ವಿಭಾಗಗಳಲ್ಲಿಯೂ) ಯಾವಾಗಲೂ, ಎಲ್ಲರಿಂದಲೂ ಪೂಜಿತರಾಗಿದ್ದರು.

ಸ್ವರೇ ಸ್ವರೇ ಚ ವಿವಿಧೇ ವೃತ್ತೇಷು ತ್ರಿವಿಧೇಷು ಚ ।
ಸಮಸ್ಥಾನೇಷು ಸರ್ವೇಷು ಸಮಾಮ್ನಾತೇಷು ಧಾತುಷು ।
ಉದ್ದೇಶಾನಾಂ ಸಮಾಖ್ಯಾತಾ ಸರ್ವಮಾಖ್ಯಾತಮುದ್ದಿಶನ್ ॥೨೮॥

ವೇದದಲ್ಲಿ ಬರುವ ಉದಾತ್ತ ಅನುದಾತ್ತ ಸ್ವರಿತಾದಿ ಪ್ರತಿಯೊಂದು ಸ್ವರದ ವಿಷಯದಲ್ಲಿಯೂ, ಶಾರ್ದೂಲವಿಕ್ರೀಡಿತ ಮೊದಲಾದ ವೃತ್ತಗಳ ವಿಷಯಗಳಲ್ಲಿಯೂ, ವರ್ಣೋತ್ಪತ್ತಿಯ ಸಮಾನಸ್ಥಾನದ ವಿಷಯದಲ್ಲಿಯೂ, ಧಾತು ಮತ್ತು ಧಾತ್ವರ್ಥ ಪಾಠದ ವಿಷಯದಲ್ಲಿಯೂ, ತಾವು ಸ್ವಯಂ ಉಚ್ಚಾರಣೆಯನ್ನು ಮಾಡಿ, ಇನ್ನೊಬ್ಬರಿಗೆ ವ್ಯಾಖ್ಯಾನ ಮಾಡುವುದರಲ್ಲಿ ನಿಪುಣರಾಗಿದ್ದರು.

ಅಭಿಸಂಧಿಷು ಸರ್ವಜ್ಞಃ ಪದಾನ್ಯಂಗಾನ್ಯನುಸ್ಮರನ್ ।
ಕಾಲಧರ್ಮೇಣ ನಿರ್ದಿಷ್ಟಂ ಯಥಾರ್ಥಮವಿಚಾರಯನ್ ॥೨೯॥

ಯಣಾದಿಸಂಧಿಗಳ ವಿಷಯದಲ್ಲಿ ಸರ್ವಜ್ಞರಾಗಿದ್ದರು. ಪದಸಂಜ್ಞೆಯನ್ನೂ, ಅಂಗಸಂಜ್ಞೆಯನ್ನೂ ತಿಳಿದವರಾಗಿದ್ದರು. ವರ್ತಮಾನಕಾಲಾದಿಗಳನ್ನು ಹೇಳುವ ಲಕಾರಾದಿಗಳಲ್ಲಿ ಯಾವ ಸಂಶಯವೂ ಇಲ್ಲದೆ ಸರಿಯಾದ ಜ್ಞಾನವನ್ನು ಹೊಂದಿದ್ದರು.

ಚಿಕೀರ್ಷಿತಂ ಚ ಯೋ ವೇತ್ತಾ ಚರ್ಕರೀತೇನ ಸಂಯುತಮ್ ।
ವಿಭಾಷಿತಂ ಚ ಸಮಯಂ ಭಾಷಿತಂ ಹೃದಯಂಗಮಮ್ ॥೩೦॥

ಸನ್ನಂತ ಪ್ರಯೋಗಗಳಿಂದ ಕೂಡಿದ, ಯಙ್‌ಲುಗಂತ ಪ್ರಯೋಗಗಳಿಂದ ಕೂಡಿದ ವಾಕ್ಯಗಳನ್ನು ಹೇಳುವುದರಲ್ಲಿ ನಿಪುಣರಾಗಿದ್ದರು. ವ್ಯಾಕರಣಶಾಸ್ತ್ರದಲ್ಲಿ ಬರುವ ವಿಭಾಷೆಗಳು, ಭೂತಕಾಲ, ವರ್ತಮಾನಕಾಲಗಳು ಅವರಿಗೆ ಚೆನ್ನಾಗಿ ತಿಳಿದಿದ್ದವು.

ಆತ್ಮನೇ ಚ ಪರಸ್ಮೈ ಚ ಸ್ವರಸಂಸ್ಕಾರಯೋಗವಿತ್ ।
ವಿಷಾಂ ಸ್ವರಾಣಾಂ ವೇತ್ತಾ ಚ ಬೋದ್ಧಾ ಪ್ರವಚನಃ ಸ್ವರಾನ್ ॥೩೧॥

ಆತ್ಮನೇಪದ ಮತ್ತು ಪರಸ್ಮೈಪದಗಳನ್ನು ತಿಳಿದಿದ್ದರು. ಪ್ರತ್ಯಯಗಳಲ್ಲಿರುವ ಯಾವ ಸ್ವರದಿಂದ ಆತ್ಮನೇಪದವು ಯಾವ ಸ್ವರದಿಂದ ಪರಸ್ಮೈಪದವು ಬರುತ್ತದೆ ಎಂದು ತಿಳಿದಿದ್ದರು. ಸ್ವರಗಳಿಗೆ ಉಂಟಾಗುವ ಸಂಸ್ಕಾರಗಳನ್ನೂ, ಅಕಾರ ಮತ್ತು ಉಕಾರವು ಸೇರಿದರೆ ಓಕಾರವಾಗುತ್ತದೆ (ಇತ್ಯಾದಿಗಳನ್ನು) ತಿಳಿದಿದ್ದರು. ಉದಾತ್ತ, ಅನುದಾತ್ತ, ಸ್ವರಿತ ಮೊದಲಾದ ಸ್ವರಗಳನ್ನು ಚೆನ್ನಾಗಿ ತಿಳಿದು ಅವುಗಳನ್ನು ಉಚ್ಚರಿಸುತ್ತಿದ್ದರು.

ವಿಜ್ಞಾತಾ ಚೋಕ್ತವಾಕ್ಯಾನಾಮೇಕತಾಂ ಬಹುತಾಂ ತಥಾ ।
ಬೋದ್ಧಾ ಹಿ ವಿವಿಧಾನರ್ಥಾನ್ ವಿವಿಧಾಂಶ್ಚ ವ್ಯತಿಕ್ರಮಾನ್ ॥೩೨॥

ವಾಕ್ಯಗಳಲ್ಲಿರುವ ಏಕವಚನ, ದ್ವಿವಚನ ಮತ್ತು ಬಹುವಚನಗಳನ್ನೂ ತಿಳಿದಿದ್ದರು. ಶಕ್ಯವಾದ ಅರ್ಥ, ಗೌಣವಾದ ಅರ್ಥ ಮತ್ತು ಲಾಕ್ಷಣಿಕವಾದ ಅರ್ಥಗಳನ್ನೂ ತಿಳಿದಿದ್ದರು. ನಿರುಕ್ತದಲ್ಲಿ ಬರುವ ವರ್ಣವ್ಯತ್ಯಾಸಾದಿಗಳನ್ನೂ ತಿಳಿದಿದ್ದರು.

ಅಭೇದತಶ್ಚ ವಿಧಿನಾ ಬಹುಶಶ್ಚಾಪಿ ಭೇದತಃ ।
ವಂಚನಾನಾಂ ಚ ವಿವಿಧಾ ದೇಶಾನಾಂ ಚ ಸಮೀಕ್ಷಿತಾ ॥೩೩॥

ಒಂದೇ ಸ್ಥಾನಿಗೆ ಬರುವ ಅನೇಕ ಆದೇಶಗಳ ಅಭೇದವನ್ನೂ, ಕೆಲವು ವೇಳೆ ಒಂದೇ ಸ್ಥಾನಿಯಲ್ಲಿ ಇರುವ ಬಹುತ್ವವನ್ನೂ ತಿಳಿದಿದ್ದರು. ಗೂಢಾರ್ಥವುಳ್ಳ ವಿವಿಧವಾದ ಶ್ಲೋಕಗಳನ್ನೂ ತಿಳಿದಿದ್ದರು. ಆದೇಶಗಳನ್ನೂ ಗಮನಿಸುತ್ತಿದ್ದರು.

ನಾನಾರ್ಥಕುಶಲಸ್ತತ್ರ ತದ್ವಿತೇಷು ಚ ಕೃತ್ಸು ಚ ।
ಪರಿಭೂಷಯಿತಾ ವಾಚಾಂ ವರ್ಣತಃ ಸ್ವರತೋಽರ್ಥತಃ ॥೩೪॥

ತದ್ಧಿತ ಪ್ರತ್ಯಯಗಳು ಮತ್ತು ಕೃತ್ ಪ್ರತ್ಯಯಗಳು ಇವುಗಳ ಅನೇಕಾರ್ಥಗಳನ್ನು ತಿಳಿದಿದ್ದರು. ವಾಕ್ಯದಲ್ಲಿರುವ ವರ್ಣಗಳನ್ನೂ, ಸ್ವರ, ಅರ್ಥ ಮತ್ತು ಸ್ಥಾನಗಳಿಗೆ ಅನುಗುಣವಾಗಿ ಉಚ್ಚರಿಸಿ ವಾಕ್ಯವನ್ನು ಅಲಂಕರಿಸುತ್ತಿದ್ದರು.

ಪ್ರತ್ಯಯಾನಾಂ ಸಮಾಖ್ಯಾತಾ ನಿಯತಂ ಪ್ರತಿಧಾತುಕಮ್ ।
ಪಂಚ ಚಾಕ್ಷರಜಾತೀನಿ ಸ್ವರಸಂಜ್ಞಾನಿ ಯಾನಿ ಚ ॥೩೫॥

ಒಂದೇ ಧಾತುವಿನ ಮೇಲೆ ನಿಯತವಾಗಿ ಬರುವ ಅನೇಕ ಪ್ರತ್ಯಯಗಳನ್ನು ಹೇಳುತ್ತಿದ್ದರು. ಸ್ಪರ್ಶಾಕ್ಷರಗಳ ಐದು ಜಾತಿಗಳನ್ನೂ ಮತ್ತು ಸ್ವರಾಕ್ಷರಗಳನ್ನೂ ತಿಳಿದಿದ್ದರು.

ವೇತ್ತಾ ನಾನಾರ್ಥಕುಶಲೋ ಗುಣೈರೇವಂ ವಿಭೂಷಿತಃ ।
ನಾರದಸ್ತ್ವಥ ದೇವರ್ಷಿರಾಜಗಾಮ ಯದೃಚ್ಛಯಾ ॥೩೬॥

ನಾನಾರ್ಥಗಳಲ್ಲಿ ಪಾರಂಗತರಾದ ಗುಣಗಳಿಂದ ಹೀಗೆ ಭೂಷಿತರಾದ ದೇವರ್ಷಿಗಳಾದ ನಾರದರು ಇದ್ದಕ್ಕಿದ್ದಂತೆಯೇ ಅಲ್ಲಿಗೆ ಬಂದರು.

ತಮಾಗತಮೃಷಿಂ ದೃಷ್ಟ್ವಾ ಪ್ರತ್ಯುದ್ಗಮ್ಯಾಭಿವಾದ್ಯ ಚ ।
ಆಸನಂ ರುಚಿರಂ ತಸ್ಮೈ ಸ್ವಂ ದದೌ ಸ ಯುಧಿಷ್ಠಿರಃ ॥೩೭॥

ಪ್ರಾಪ್ತರಾದ ಆ ಋಷಿಗಳನ್ನು ನೋಡಿ ಯುಧಿಷ್ಠಿರನು ಎದ್ದು ಅವರನ್ನು ಸಮೀಪಿಸಿ ಅವರಿಗೆ ನಮಸ್ಕಾರವನ್ನು ಮಾಡಿ ತನ್ನ ಶ್ರೇಷ್ಠವಾದ ಆಸನವನ್ನು ಅವರಿಗೆ ನೀಡಿದನು.

ಕೃಷ್ಣಾಜಿನೋತ್ತರೇ ತಸ್ಮಿನ್ನುಪವಿಷ್ಟೋ ಮಹಾನೃಷಿಃ ।
ದೇವರ್ಷೇರುಪವಿಷ್ಟಸ್ಯ ಸ್ವಯಮರ್ಘ್ಯಂ ಯಥಾವಿಧಿ ।
ಪ್ರಾದಾದ್ ಯುಧಿಷ್ಠಿರೋ ರಾಜಾ ರಾಜ್ಯಂ ಚಾಸ್ಮೈನ್ಯವೇದಯತ್ ॥

ಕೃಷ್ಣಾಜಿನವನ್ನು ಹಾಕಿದ ಆ ಆಸನದ ಮೇಲೆ ಮಹರ್ಷಿಗಳು ಕುಳಿತುಕೊಂಡರು. ಅವರು ಕುಳಿತುಕೊಂಡ ಮೇಲೆ ರಾಜನಾದ ಯುಧಿಷ್ಠಿರನು ತಾನೇ ಅವರಿಗೆ ವಿಧಿ ಪ್ರಕಾರವಾಗಿ ಅರ್ಘ್ಯವನ್ನು ಕೊಟ್ಟು ತನ್ನ ರಾಜ್ಯವನ್ನು ಅವರಿಗೆ ನಿವೇದಿಸಿದನು.

ಪ್ರತಿಗೃಹ್ಯ ತು ತಾಂ ಪೂಜಾಮೃಷಿಃ ಪ್ರೀತಮನಾ ಭವತ್ ।
ಆಶೀರ್ಭಿರ್ವರ್ಧಯಿತ್ವಾ ತು ತಮುವಾಚಾಸ್ಯತಾಮಿತಿ ॥೩೯॥

ಆ ಋಷಿಗಳು ಸಂತೋಷದಿಂದ ಆ ಪೂಜೆಯನ್ನು ಸ್ವೀಕರಿಸಿ, ಆಶೀರ್ವಚನಗಳಿಂದ ಅವನನ್ನು ಅಭಿವೃದ್ಧಿಪಡಿಸಿ ಕುಳಿತುಕೋ ಎಂದು ಹೇಳಿದರು.

ನಿಷಸಾದಾಭ್ಯನುಜ್ಞಾತಸ್ತದಾ ರಾಜಾ ಯುಧಿಷ್ಠಿರಃ ।
ಪ್ರೇಷಯಾಮಾಸ ಕೃಷ್ಣಾಯೈ ಭಗವಂತಮುಪಸ್ಥಿತಮ್ ॥೪೦॥

ಯುಧಿಷ್ಠಿರನು ಅವರ ಅನುಮತಿಯನ್ನು ಪಡೆದು ಕುಳಿತುಕೊಂಡು, ಕೃಷ್ಣೆಗೆ ಪೂಜ್ಯರು ಬಂದಿದ್ದಾರೆ ಎಂಬ ವಾರ್ತೆಯನ್ನು ಕಳುಹಿಸಿದನು.

ಶ್ರುತ್ವೈತದ್ ದ್ರೌಪದೀ ಚೈವ ಶುಚಿರ್ಭೂತ್ವಾ ಸಮಾಹಿತಾ ।
ಜಗಾಮ ತತ್ರ ಯತ್ರಾಸ್ತೇ ನಾರದಃ ಸಹ ಪಾಂಡವೈಃ ॥೪೧॥

ಅದನ್ನು ಕೇಳಿದ ದ್ರೌಪದಿಯು, ಶುಚಿರ್ಭೂತಳಾಗಿ, ಸಮಾಧಾನದಿಂದ ನಾರದರು ಮತ್ತು ಪಾಂಡವರು ಕುಳಿತಿದ್ದ ಕಡೆಗೆ ಬಂದಳು.

ತಸ್ಯಾಭಿವಾದ್ಯ ಚರಣೌ ದೇವರ್ಷೇರ್ಧರ್ಮಚಾರಿಣೀ ।
ಕೃತಾಂಜಲಿಃ ಸುಸಂವೀತಾ ಸ್ಥಿತಾ ವೈ ದ್ರುಪದಾತ್ಮಜಾ ॥೪೨॥

ಧರ್ಮಚಾರಿಣಿಯಾದ ದ್ರುಪದನ ಮಗಳಾದ ಕೃಷ್ಣೆಯು ನಾರದರ ಪಾದಗಳಿಗೆ ನಮಸ್ಕರಿಸಿ, ಕೈಗಳನ್ನು ಮುಗಿದು, ಉತ್ತರೀಯವನ್ನು ಚೆನ್ನಾಗಿ ಹೊದ್ದುಕೊಂಡು ನಿಂತಳು.

ತಸ್ಯಾಶ್ಚಾಪಿ ಸ ಧರ್ಮಾತ್ಮಾ ಸತ್ಯವಾಗೃಷಿಸತ್ತಮಃ ।
ಆಶಿಷೋ ವಿವಿಧಾಃ ಪ್ರೋಕ್ತ್ವಾ ರಾಜಪುತ್ರ್ಯಾಸ್ತು ನಾರದಃ ।
ಗಮ್ಯತಾಮಿತಿ ಚೋವಾಚ ಭಗವಾಂಸ್ತಾಮನಿಂದಿತಾಮ್ ॥೪೩॥

ಋಷಿಶ್ರೇಷ್ಠರಾದ ಧರ್ಮಾತ್ಮರಾದ ನಾರದರು ಆ ರಾಜಪುತ್ರಿಗೂ ಅನೇಕ ಆಶೀರ್ವಚನಗಳನ್ನು ಹೇಳಿ, ಅನಿಂದಿತಳಾದ ಅವಳಿಗೆ ಇನ್ನು ನೀನು ಹೋಗಬಹುದು ಎಂದು ಹೇಳಿದರು.

ಗತಾಯಾಮಥ ಕೃಷ್ಣಾಯಾಂ ಯುಧಿಷ್ಠಿರಪುರೋಗಮಾನ್ ।
ವಿವಿಕ್ತೇ ಪಾಂಡವಾನ್ ಸರ್ವಾನುವಾಚ ಭಗವಾನೃಷಿಃ ॥೪೪॥

ದ್ರೌಪದಿಯು ಹೋದ ಮೇಲೆ ಪೂಜ್ಯರಾದ ನಾರದರು ಏಕಾಂತದಲ್ಲಿ ಯುಧಿಷ್ಠಿರ ಮೊದಲಾದ ಎಲ್ಲಾ ಪಾಂಡವರನ್ನೂ ಉದ್ದೇಶಿಸಿ ಮಾತನಾಡಿದರು.

ನಾರದಃ

ಪಾಂಚಾಲೀ ಭವತಾಮೇಕಾ ಧರ್ಮಪತ್ನೀ ಯಶಸ್ವಿನೀ ।
ಯಥಾ ವೋ ನಾತ್ರ ಭೇದಃ ಸ್ಯಾತ್ ತಥಾ ನೀತಿರ್ವಿಧೀಯತಾಮ್ ॥

ಕೀರ್ತಿವಂತಳಾದ ಪಾಂಚಾಲಿಯು ನಿವ್ಮೆಲ್ಲರಿಗೂ ಒಬ್ಬಳೇ ಧರ್ಮಪತ್ನಿಯಾಗಿದ್ದಾಳೆ. ಅವಳ ಸಲುವಾಗಿ ನಿವ್ಮಲ್ಲಿ ಪರಸ್ಪರ ವಿರೋಧವುಂಟಾಗದಂತೆ ಒಂದು ನೀತಿಯನ್ನು ರೂಪಿಸಿ.

ಸುಂದೋಪಸುಂದೌ ಹ್ಯಸುರೌ ಭ್ರಾತರೌ ಸಹಿತಾವುಭೌ ।
ದೇವೈರವಧ್ಯಾವನ್ಯೇಷಾಂ ತ್ರಿಷು ಲೋಕೇಷು ವಿಶ್ರುತೌ ॥೪೬॥

ಹಿಂದೆ ಮೂರು ಲೋಕಗಳಲ್ಲೂ ಪ್ರಖ್ಯಾತರಾದ ಸುಂದ ಮತ್ತು ಉಪಸುಂದ ಎಂಬ ಅಣ್ಣತಮ್ಮಂದಿರಾದ ಅಸುರರಿದ್ದರು. ಅವರು ಯಾವಾಗಲೂ ಜೊತೆಯಲ್ಲೇ ಇರುತ್ತಿದ್ದರು. ದೇವತೆಗಳಿಂದಲೂ ಮತ್ತು ಉಳಿದವರಿಂದಲೂ ಅವಧ್ಯರಾಗಿದ್ದರು.

ಏಕರಾಜ್ಯಾವೇಕಗೃಹಾವೇಕಶಯ್ಯಾಸನಾವುಭೌ ।
ತಿಲೋತ್ತಮಾಯಾಸ್ತೌ ಹೇತೋರನ್ಯೋನ್ಯಮಭಿಜಘ್ನತುಃ ॥೪೭॥

ಅವರು ಒಂದೇ ರಾಜ್ಯ, ಒಂದೇ ಮನೆ, ಒಂದೇ ಹಾಸಿಗೆ, ಒಂದೇ ಆಸನ, ಹೀಗೆ ಯಾವಾಗಲೂ ಜೊತೆಯಲ್ಲಿಯೇ ಇರುತ್ತಿದ್ದರು. ಅವರಿಬ್ಬರೂ ತಿಲೋತ್ತಮೆಯ ನಿಮಿತ್ತದಿಂದಾಗಿ ಪರಸ್ಪರವಾಗಿ ಕೊಂದುಕೊಂಡರು.

ರಕ್ಷ್ಯತಾಂ ಸೌಹೃದಂ ತಸ್ಮಾದನ್ಯೋನ್ಯಂ ಪ್ರತಿಭಾವಿಕಮ್ ।
ಯಥಾ ವೋ ನಾತ್ರ ಭೇದಃ ಸ್ಯಾತ್ ತತ್ ಕುರುಷ್ವ ಯುಧಿಷ್ಠಿರ ॥೪೮॥

ಆದ್ದರಿಂದ ನಿಮ್ಮಲ್ಲಿ ಸ್ವಾಭಾವಿಕವಾಗಿರುವ ಪರಸ್ಪರ ಸೌಹೃದವನ್ನು ರಕ್ಷಿಸಿಕೊಳ್ಳಿ. ಯುಧಿಷ್ಠಿರನೇ, ಈ ವಿಷಯದಲ್ಲಿ ನಿಮಗೆ ಪರಸ್ಪರ ಭೇದ ಉಂಟಾಗದಂತೆ ನಡೆದುಕೊ.

ಯುಧಿಷ್ಠಿರ

ಸುಂದೋಪಸುಂದಾವಸುರೌ ಕಸ್ಯ ಪುತ್ರೌ ಮಹಾಮುನೇ ।
ಉತ್ಪನ್ನಶ್ಚ ಕಥಂ ಭೇದಃ ಕಥಂ ಚಾನ್ಯೋನ್ಯಮಘ್ನತಾಮ್ ॥೪೯॥

ಮಹರ್ಷಿಗಳೇ, ಅಸುರರಾದ ಸುಂದೋಪಸುಂದರು ಯಾರ ಮಕ್ಕಳು? ಅವರಲ್ಲಿ ಹೇಗೆ ವಿರೋಧವುಂಟಾಯಿತು? ಅವರು ಹೇಗೆ ಒಬ್ಬರನ್ನೊಬ್ಬರು ಕೊಂದರು?

ಅಪ್ಸರಾ ದೇವಕನ್ಯಾ ವಾ ಕಸ್ಯ ವೈಷಾ ತಿಲೋತ್ತಮಾ ।
ಯಸ್ಯಾಃ ಕಾಮೇನ ಸಮ್ಮತ್ತೌ ಜಘ್ನತುಸ್ತೌ ಪರಸ್ಪರಮ್ ॥೫೦॥

ಯಾರ ಮೇಲಿನ ಕಾಮದಿಂದ ಅವರು ಮತ್ತರಾಗಿ ಪರಸ್ಪರವಾಗಿ ಕೊಂದರೋ, ಅಂತಹ ಈ ತಿಲೋತ್ತಮೆಯು ಅಪ್ಸರೆಯೋ ಅಥವಾ ದೇವಕನ್ಯೆಯೋ? ಇವಳು ಯಾರಿಗೆ ಸೇರಿದವಳು?

ಏತತ್ಸರ್ವಂ ಯಥಾವೃತ್ತಂ ವಿಸ್ತರೇಣ ತಪೋಧನ ।
ಶ್ರೋತುಮಿಚ್ಛಾಮಹೇ ವಿಪ್ರ ಪರಂ ಕೌತೂಹಲಂ ಹಿ ನಃ ॥೫೧॥

ತಪೋಧನರಾದ ವಿಪ್ರರೇ, ಇದೆಲ್ಲವನ್ನೂ ಹಿಂದೆ ನಡೆದಂತೆ ವಿಸ್ತಾರವಾಗಿ ಹೇಳಿ. ಅದನ್ನು ಕೇಳಲು ನಾವು ಇಚ್ಛಿಸುತ್ತೇವೆ. ಈ ವಿಷಯದಲ್ಲಿ ನಮಗೆ ಬಹಳ ಕುತೂಹಲವಿದೆ.

ನಾರದಃ

ಶೃಣು ಮೇ ವಿಸ್ತರೇಣೇಮಮಿತಿಹಾಸಂ ಪುರಾತನಮ್ ।
ಭ್ರಾತೃಭಿಃ ಸಹಿತಃ ಪಾರ್ಥ ಯಥಾವೃತ್ತಂ ಯುಧಿಷ್ಠಿರ ॥೫೨॥

ಯುಧಿಷ್ಠಿರನೇ, ಈ ಪುರಾತನವಾದ ಇತಿಹಾಸವನ್ನು ನಾನು ವಿಸ್ತಾರವಾಗಿ ಹೇಳುತ್ತೇನೆ. ಪಾರ್ಥನೇ, ತಮ್ಮಂದಿರಿಂದ ಕೂಡಿಕೊಂಡು ಇದು ಹೇಗೆ ನಡೆಯಿತು ಎಂದು ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ದಶಾಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ರಾಜ್ಯಲಾಭಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಹನ್ನೊಂದನೆಯ ಅಧ್ಯಾಯ

(ಹಿರಣ್ಯಕಶಿಪುವಿನವ ವಂಶದಲ್ಲಿ ಸುಂದೋಪಸುಂದರ ಜನನ, ಬ್ರಹ್ಮದೇವರ ಕುರಿತು ತಪಸ್ಸು ಮತ್ತು ವರಪ್ರಾಪ್ತಿ.)

ನಾರದಃ

ಮಹಾಸುರಸ್ಯಾನ್ವವಾಯೇ ಹಿರಣ್ಯಕಶಿಪೋಃ ಪುರಾ ।
ನಿಕುಂಭೋ ನಾಮ ದೈತ್ಯೇಂದ್ರಃ ತೇಜಸಾ ಬಲವಾನಭೂತ್ ॥೧॥

ಹಿಂದೆ ಮಹಾಸುರನಾದ ಹಿರಣ್ಯಕಶಿಪುವಿನ ವಂಶದಲ್ಲಿ ನಿಕುಂಭನೆಂಬ ದೈತ್ಯನು ಪರಾಕ್ರಮದಿಂದ ಬಲಿಷ್ಠನಾದನು.

ತಸ್ಯ ಪುತ್ರೌ ಮಹಾವೀರ್ಯೌ ಜಾತೌ ಭೀಮಪರಾಕ್ರಮೌ ।
ಸಹಾನ್ಯೋನ್ಯೇನ ಭುಂಜಾತೇ ವಿನಾऽನ್ಯೋನ್ಯಂ ನ ಗಚ್ಛತಾಮ್ ॥೨॥

ಅವರ ಇಬ್ಬರು ಮಕ್ಕಳು ಮಹಾವೀರ್ಯರೂ, ಭಯಂಕರ ಪ್ರರಾಕ್ರಮವುಳ್ಳವರೂ ಆದರು. ಅವರು ಜೊತೆಯಲ್ಲಿಯೇ ಊಟ ಮಾಡುತ್ತಿದ್ದರು. ಒಬ್ಬರನ್ನು ಬಿಟ್ಟು ಇನ್ನೊಬ್ಬರು ಎಲ್ಲಿಗೂ ಹೋಗುತ್ತಿರಲಿಲ್ಲ.

ಅನ್ಯೋನ್ಯಸ್ಯ ಪ್ರಿಯಕರಾವನ್ಯೋನ್ಯಸ್ಯ ಪ್ರಿಯಂವದೌ ।
ಏಕಶೀಲಸಮಾಚಾರೌ ದ್ವಿಧೈವೈಕೋऽಭವಚ್ಚ ಯೌ ॥೩॥

ಒಬ್ಬರಿಗೊಬ್ಬರು ಪ್ರಿಯವನ್ನು ಮಾಡುತ್ತಿದ್ದರು, ಪ್ರಿಯವಚನಗಳನ್ನು ಆಡುತ್ತಿದ್ದರು. ಒಂದೇ ಶೀಲ ಮತ್ತು ಆಚಾರವನ್ನುಳ್ಳ ಅವರು ಒಬ್ಬನೇ ಎರಡು ರೂಪವನ್ನು ಧರಿಸಿದಂತೆ ಇದ್ದರು.

ತೌ ವಿವೃದ್ಧೌ ಮಹಾವೀರ್ಯೌ ಕಾರ್ಯೇಷ್ವಪ್ಯೇಕನಿಷ್ಠಿತೌ ।
ತ್ರೈಲೋಕ್ಯವಿಜಯೇ ಯತ್ತೌ ಸಮಾಸ್ಥಾಯೈಕನಿಶ್ಚಯಮ್ ॥೪॥

ದೀಕ್ಷಾಂ ಕೃತ್ವಾ ಗತೌ ವಿಂಧ್ಯಂ ತತ್ರೋಗ್ರಂ ತೇಪತುಸ್ತಪಃ ।
ತೌ ತು ದೀರ್ಘೇಣ ಕಾಲೇನ ತಪೋಯುಕ್ತೌ ಬಭೂವತುಃ ॥೫॥

ಮಹಾವೀರ್ಯರಾದ ಅವರು ಬೆಳೆದು, ಮಾಡಬೇಕಾದ ಕಾರ್ಯದಲ್ಲಿಯೂ ಒಂದೇ ಬುದ್ಧಿಯನ್ನು ಹೊಂದಿರುತ್ತಿದ್ದರು. ಮೂರುಲೋಕಗಳನ್ನೂ ಜಯಿಸಬೇಕೆಂಬ ಒಂದೇ ಇಚ್ಛೆಯನ್ನು ಹೊಂದಿದವರಾಗಿ, ದೀಕ್ಷೆಯನ್ನು ವಹಿಸಿ, ವಿಂಧ್ಯಪರ್ವತಕ್ಕೆ ಹೋಗಿ ಅಲ್ಲಿ ಉಗ್ರವಾದ ತಪಸ್ಸನ್ನು ಆಚರಿಸಿದರು. ಅವರು ದೀರ್ಘಕಾಲದವರೆಗೆ ತಪೋನಿಷ್ಠರಾದರು.

ಕ್ಷುತ್ಪಿಪಾಸಾಪರಿಶ್ರಾಂತೌ ಜಟಾವಲ್ಕಲಧಾರಿಣೌ ।
ಮಲೋಪಚಿತಸರ್ವಾಂಗೌ ವಾಯುಭಕ್ಷೌ ಬಭೂವತುಃ ॥೬॥

ಹಸಿವುನೀರಡಿಕೆಗಳಿಂದ ಬಳಲಿ, ಜಟಾವಲ್ಕಲಧಾರಿಗಳಾಗಿ, ಕಶ್ಮಲದಿಂದ ಕೂಡಿದ ದೇಹವುಳ್ಳವರಾಗಿ, ಅವರು ವಾಯುಭಕ್ಷರಾದರು.

ಆತ್ಮಮಾಂಸಾನಿ ಜುಹ್ವಂತೌ ಪಾದಾಂಗುಷ್ಠಾಗ್ರವಿಷ್ಠಿತೌ ।
ಊರ್ಧ್ವಬಾಹೂ ಹ್ಯನಿಮಿಷೌ ದೀರ್ಘಕಾಲಂ ಧೃತವ್ರತೌ ॥೭॥

ತಮ್ಮ ಮಾಂಸವನ್ನು ಅಗ್ನಿಯಲ್ಲಿ ಹೋಮಮಾಡುತ್ತಾ, ಪಾದಾಂಗುಷ್ಠದ ಮೇಲೆ ಭೂಮಿಯಲ್ಲಿ ನಿಂತು, ಬಾಹುಗಳನ್ನು ಮೇಲಕ್ಕೆ ಎತ್ತಿ, ಕಣ್ಣಿನ ರೆಪ್ಪೆಗಳನ್ನು ಮುಚ್ಚದೇ, ದೀರ್ಘಕಾಲ ವ್ರತವನ್ನು ಧರಿಸಿ ತಪಸ್ಸನ್ನು ಮಾಡಿದರು.

ತಯೋಸ್ತಪಃಪ್ರಭಾವೇಣ ದೀರ್ಘಕಾಲಂ ಪ್ರತಾಪಿತಃ ।
ಧೂಮಂ ಪ್ರಮುಮುಚೇ ವಿಂಧ್ಯಸ್ತದದ್ಭುತಮಿವಾಭವತ್ ॥೮॥

ಅವರ ತಪಸ್ಸಿನ ಪ್ರಭಾವದಿಂದ ಬಹುಕಾಲ ತಾಪವನ್ನು ಅನುಭವಿಸಿದ ವಿಂಧ್ಯಪರ್ವತವು ಹೊಗೆಯನ್ನು ಸೂಸಲು ಆರಂಭಿಸಿತು. ಅದು ಅದ್ಭುತವಾಗಿದ್ದಿತು.

ತತೋ ದೇವಾ ಭವನ್ ಭೀತಾ ಉಗ್ರಂ ದೃಷ್ಟ್ವಾ ತಯೋಸ್ತಪಃ ।
ತತಸ್ತಪೋವಿಘಾತಾರ್ಥಂ ದೇವಾ ವಿಘ್ನಾನಿ ಚಕ್ರಿರೇ ॥೯॥

ಆಗ ದೇವತೆಗಳು ಅವರ ಉಗ್ರವಾದ ತಪಸ್ಸನ್ನು ನೋಡಿ, ಭೀತರಾಗಿ, ತಪಸ್ಸಿಗೆ ಭಂಗವನ್ನು ಮಾಡಲು ಅನೇಕ ವಿಘ್ನಗಳನ್ನು ಒಡ್ಡಿದರು.

ರತ್ನೈಃ ಪ್ರಲೋಭಯಾಮಾಸುಃ ಸ್ತ್ರೀಭಿಶ್ಚೈವ ಪುನಃ ಪುನಃ ।
ನ ಚ ತೌ ಚಕ್ರತುರ್ಭಂಗಂ ವ್ರತಸ್ಯ ತು ಮಹಾವ್ರತೌ ॥೧೦॥

ರತ್ನಗಳಿಂದಲೂ ಮತ್ತು ಸ್ತ್ರೀಯರಿಂದಲೂ ಅವರನ್ನು ಪುನಃಪುನಃ ಪ್ರಲೋಭಗೊಳಿಸಿದರು. ಆದರೆ, ಮಹಾವ್ರತವನ್ನು ಧರಿಸಿದ ಅವರಿಬ್ಬರೂ ತಮ್ಮ ವ್ರತದ ಭಂಗವನ್ನು ಮಾಡಲಿಲ್ಲ.

ಅಥ ಮಾಯಾಂ ಪುನರ್ದೇವಾಸ್ತಯೋಶ್ಚಕ್ರುರ್ಮಹಾತ್ಮನೋಃ ।
ಭಗಿನ್ಯೋ ಮಾತರೋ ಭಾರ್ಯಾಸ್ತಯೋಃ ಪರಿಜನಾಸ್ತಥಾ ॥೧೧॥

ಪರಿಪಾತ್ಯಮಾನಾ ವಿತ್ರಸ್ತಾಃ ಶೂಲಹಸ್ತೇನ ರಕ್ಷಸಾ ।
ಸ್ರಸ್ತಾಭರಣಕೇಶಾಂತಾ ಏಕಾಂತಭ್ರಷ್ಟವಾಸಸಃ ॥೧೨॥

ಅಭಿಭಾಷ್ಯ ತು ತಾಃ ಸರ್ವಾಸ್ತೌ ತ್ರಾಹೀತಿ ಪುನಃ ಪುನಃ ।
ಯದಾ ಕ್ಷೋಭಂ ನ ಗಚ್ಛೇತಾಮಾರ್ತಿಂ ವೈಕತರಸ್ತಯೋಃ ॥೧೩॥

ತತಃ ಸ್ತ್ರಿಯಸ್ತಾಃ ಸಂತ್ರಸ್ತಾಃ ಸರ್ವಮಂತರಧೀಯತ ।
ತತಃ ಪಿತಾಮಹಃ ಸಾಕ್ಷಾದಭಿಗಮ್ಯ ಮಹಾಸುರೌ ॥೧೪॥

ಅನಂತರ, ದೇವತೆಗಳು ಆ ಮಹಾತ್ಮರಿಗೆ ಮಾಯೆಯನ್ನು ಸೃಷ್ಟಿಸಿದರು. ಅವರ ಸೋದರಿಯರು, ತಾಯಿಯರೂ, ಪತ್ನಿಯರೂ, ಮತ್ತು ಪರಿಜನರೂ, ಕೈಯಲ್ಲಿ ಶೂಲವನ್ನು ಹಿಡಿದ ರಾಕ್ಷಸನಿಂದ ನೆಲಕ್ಕೆ ಉರುಳಿಸಿ, ಚದುರಿಸಲ್ಪಟ್ಟು, ತಮ್ಮ ವಸ್ತ್ರಾಭರಣಗಳನ್ನು ಮತ್ತು ಕೇಶಗಳನ್ನೂ ಅಸ್ತವ್ಯಸ್ತವಾಗಿ ಮಾಡಿಕೊಂಡರು. ಅವರೆಲ್ಲರೂ, ಅವರಿಬ್ಬರನ್ನೂ ಕುರಿತು, ನಮ್ಮನ್ನು ರಕ್ಷಿಸಿ, ನಮ್ಮನ್ನು ರಕ್ಷಿಸಿ ಎಂದು ಕೇಳಿದರು. ಇಷ್ಟು ಮಾಡಿದರೂ, ಅವರಿಬ್ಬರಲ್ಲಿ ಒಬ್ಬನೂ ದುಃಖದಿಂದ ವಿಚಲಿತನಾಗದಿದ್ದಾಗ, ಆ ಭೀತರಾದ ಸ್ತ್ರೀಯರೆಲ್ಲರೂ ಅದೃಶ್ಯರಾದರು.

ವರೇಣ ಚ್ಛಂದಯಾಮಾಸ ಸರ್ವಲೋಕಪಿತಾಮಹಃ ।

ಆಗ ಸರ್ವಲೋಕಪಿತಾಮಹರಾದ ಬ್ರಹ್ಮದೇವರು ತಾವಾಗಿಯೇ, ಆ ಅಸುರರ ಬಳಿಗೆ ಬಂದು, ವರವನ್ನು ಬೇಡಿ ಎಂದು ಹೇಳಿದರು.

ತತಃ ಸುಂದೋಪಸುಂದೌ ತೌ ಭ್ರಾತರೌ ದೃಢವಿಕ್ರಮೌ ॥೧೫॥

ದೃಷ್ಟ್ವಾ ಪಿತಾಮಹಂ ದೇವಮುಭೌ ತೌ ಪ್ರಾಂಜಲೀ ತದಾ ।
ಊಚತುಶ್ಚ ಪ್ರಭುಂ ದೇವಂ ತತಸ್ತೌ ಸಹಿತೌ ತದಾ ॥೧೬॥

ಆಗ, ಅಣ್ಣತಮ್ಮಂದಿರಾದ ಮತ್ತು ದೃಢವಿಕ್ರಮವುಳ್ಳ ಸುಂದೋಪಸುಂದರು ಬ್ರಹ್ಮದೇವರನ್ನು ನೋಡಿ, ಕೈಗಳನ್ನು ಮುಗಿದು, ಬ್ರಹ್ಮದೇವರನ್ನು ಕುರಿತು ಒಟ್ಟಿಗೆ ಮಾತನಾಡಿದರು.

ಆವಯೋಸ್ತಪಸಾऽನೇನ ಯದಿ ಪ್ರೀತಃ ಪಿತಾಮಹಃ ।
ಮಾಯಾವಿದಾವಸ್ತ್ರವಿದೌ ಬಲಿನೌ ಕಾಮರೂಪಿಣೌ ।
ಉಭಾವಪ್ಯಮರೌ ಸ್ಯಾವಃ ಪ್ರಸನ್ನೋ ಯದಿ ನೌ ಪ್ರಭುಃ ॥೧೭॥

ನಮ್ಮ ಈ ತಪಸ್ಸಿನಿಂದ ಬ್ರಹ್ಮದೇವರಾದ ನೀವು ಪ್ರೀತರಾಗಿದ್ದರೆ, ನಾವು ಮಾಯಾವಿಶಾರದರೂ, ಅಸ್ತ್ರವೇತ್ತರೂ, ಬಲಿಷ್ಠರೂ ಮತ್ತು ಕಾಮರೂಪಿಗಳೂ ಆಗಬೇಕು. ಪ್ರಭುಗಳಾದ ನೀವು ಪ್ರಸನ್ನರಾಗಿದ್ದರೆ, ನಾವಿಬ್ಬರೂ ಅಮರರಾಗಬೇಕು (ಮೃತ್ಯುರಹಿತರಾಗಬೇಕು).

ಪಿತಾಮಹಃ

ಋತೇऽಮರತ್ವಾದನ್ಯದ್ ವಃ ಸರ್ವಮುಕ್ತಂ ಭವಿಷ್ಯತಿ ।
ಅನ್ಯದ್ ವೃಣೀತಾಂ ಮೃತ್ಯೋಶ್ಚ ವಿಧಾನಮಮರೈಃ ಸಹ ।
ಕರಿಷ್ಯಾಮೀದಮಿತಿ ಯನ್ಮಹದಪ್ಯುತ್ಥಿತಂ ತಪಃ ॥೧೮॥

ಅಮರತ್ವವನ್ನು ಬಿಟ್ಟು ನೀವು ಕೇಳಿದುದೆಲ್ಲಾ ನಿಮಗೆ ದೊರೆಯುವುದು. ದೇವತೆಗಳ ಜೊತೆಯಲ್ಲಿ ಬೇರೆ ಒಂದು ಮೃತ್ಯುವಿಧಾನವನ್ನು ಕೇಳಿ. ನೀವು ಮಾಡಿದ ದೊಡ್ಡ ತಪಸ್ಸಿನ ನಿಮಿತ್ತದಿಂದಾಗಿ ನಾನು ಅದನ್ನು ಕೊಡುವೆನು.

ಸುಂದೋಪಸುಂದೌ

ಆವಯೋರ್ಹೇತುನಾ ಕೇನ ನಾಮರತ್ವಂ ವಿಧೀಯತೇ ॥೧೯॥

ನಮಗೆ ಅಮರತ್ವವನ್ನು ಕೊಡದಿರಲು ಏನು ಕಾರಣ?

ಪಿತಾಮಹಃ

ತ್ರೈಲೋಕ್ಯವಿಜಯಾರ್ಥಾಯ ಭವದ್ಭ್ಯಾಮಾಸ್ಥಿತಂ ತಪಃ ।
ಹೇತುನಾऽನೇನ ದೈತ್ಯೇಂದ್ರೌ ನ ವಾಂ ಕಾಮಂ ಕರೋಮ್ಯಹಮ್ ॥

ದೈತ್ಯೇಂದ್ರರೇ, ನೀವು ತ್ರಿಲೋಕವಿಜಯವನ್ನು ಉದ್ದೇಶಿಸಿ ತಪಸ್ಸನ್ನು ಮಾಡಿದ್ದೀರಿ. ಆ ಕಾರಣದಿಂದ ನಿಮಗೆ ಅಮರತ್ವವನ್ನು ಕೊಡುವುದಿಲ್ಲ.

ಸುಂದೋಪಸುಂದೌ

ತ್ರಿಷು ಲೋಕೇಷು ಯದ್ಭೂತಂ ಸರ್ವಂ ಸ್ಥಾವರಜಂಗಮಮ್ ।
ಸರ್ವಸ್ಮಾನ್ನೌ ಭಯಂ ನ ಸ್ಯಾದ್ ಋತೇऽನ್ಯೋನ್ಯಾತ್ ಪಿತಾಮಹ ॥

ಪಿತಾಮಹನೇ, ನಮಗೆ ನಮ್ಮಲ್ಲೇ ಪರಸ್ಪರವಾಗಿ ಅಲ್ಲದೆ, ಮೂರುಲೋಕಗಳಲ್ಲಿರುವ ಯಾವ ಸ್ಥಾವರಜಂಗಮಪದಾರ್ಥದಿಂದಲೂ ಭಯವೂ ಮತ್ತು ಮೃತ್ಯುವೂ ಉಂಟಾಗಬಾರದು.

ಪಿತಾಮಹಃ

ಯತ್ ಪ್ರಾರ್ಥಿತಂ ಯಥೋಕ್ತಂ ತತ್ ಕಾಮಮೇವ ದದಾಮಿ ವಾಮ್ ।
ಮೃತ್ಯೋರ್ವಿಧಾನಮೇತಚ್ಚ ಯಥಾವದ್ ವಾಂ ಭವಿಷ್ಯತಿ ॥೨೨॥

ನಾನು ಮೊದಲು ಹೇಳಿದಂತೆ, ನೀವು ಪ್ರಾರ್ಥಿಸಿದ ಕಾಮವನ್ನು ನಿಮ್ಮಿಬ್ಬರಿಗೆ ಕೊಡುತ್ತೇನೆ. ಇದೇ ನಿಜವಾಗಿ ನಿಮ್ಮಿಬ್ಬರ ಮೃತ್ಯೋಪಾಯವಾಗುವುದು.

ನಾರದಃ

ತತಃ ಪಿತಾಮಹೋ ದತ್ತ್ವಾ ವರಮೇತತ್ ತದಾ ತಯೋಃ ।
ನಿವರ್ತ್ಯ ತಪಸಸ್ತೌ ಚ ಬ್ರಹ್ಮಲೋಕಂ ಜಗಾಮ ಹ ॥೨೩॥

ಆಗ ಬ್ರಹ್ಮದೇವರು ಅವರಿಗೆ ಈ ವರವನ್ನು ಕೊಟ್ಟು, ಅವರನ್ನು ತಪಸ್ಸಿನಿಂದ ಹಿಂದಿರುಗಿಸಿ ಬ್ರಹ್ಮಲೋಕಕ್ಕೆ ಹೋದರು.

ಲಬ್ಧ್ವಾ ವರಂ ಯಥಾನ್ಯಾಯಂ ದೈತ್ಯೇಂದ್ರಾವಪಿ ತಾವುಭೌ ।
ಅವಧ್ಯೌ ಸರ್ವಲೋಕಸ್ಯ ಸ್ವಯಮೇವಾವನಿಂ ಗತೌ ॥೨೪॥

ನ್ಯಾಯದಿಂದ ವರವನ್ನು ಪಡೆದ ಆ ಇಬ್ಬರು ದೈತ್ಯರು ಲೋಕದಲ್ಲಿ ಯಾರಿಂದಲೂ ಅವಧ್ಯರಾಗಿ ತಾವೇ ಭೂಮಿಗೆ ಬಂದರು.

ತೌ ತು ಲಬ್ಧವರೌ ದೃಷ್ಟ್ವಾ ಕೃತಕಾಮೌ ಮಹಾಸುರೌ ।
ಸರ್ವಃ ಸುಹೃಜ್ಜನಸ್ತಾಭ್ಯಾಂ ಪ್ರಹರ್ಷಮುಪಜಗ್ಮಿವಾನ್ ॥೨೫॥

ವರವನ್ನು ಪಡೆದು ಕೃತಾರ್ಥರಾಗಿ ಹಿಂದಿರುಗಿದ ಆ ಮಹಾಸುರರನ್ನು ನೋಡಿ ಅವರ ಬಂಧುವರ್ಗವೆಲ್ಲವೂ ಸಂತೋಷದಿಂದ ಕೂಡಿತು.

ತತಸ್ತೌ ತು ಜಟಾ ಭಿತ್ತ್ವಾ ಮೌಲಿನೌ ಸಂಬಭೂವತುಃ ।
ಮಹಾರ್ಹಾಭರಣೋಪೇತೌ ವಿರಜಾಂಬರಧಾರಿಣೌ ।
ಅಕಾಲಕೌಮುದೀಂ ಚೈವಂ ಚಕ್ರತುಃ ಸರ್ವಕಾಮಿನೀಃ ॥೨೬॥

ಅನಂತರ ಅವರು ಜಟೆಗಳನ್ನು ಬಿಚ್ಚಿ ಶಿಖೆಗಳನ್ನು ಧರಿಸಿದರು. ಅನರ್ಘ್ಯವಾದ ಆಭರಣಗಳನ್ನು ಧರಿಸಿ, ನಿರ್ಮಲವಾದ ವಸ್ತ್ರಧಾರಿಗಳಾಗಿ ಅವರು ತಮ್ಮೆದುರಿಗಿದ್ದ ಎಲ್ಲಾ ಸ್ತ್ರೀಯರಿಗೂ ತಮ್ಮ ಮುಖದ ಕಾಂತಿಯಿಂದ ಬೆಳದಿಂಗಳನ್ನು ಉಂಟುಮಾಡಿದರು.

ದೈತ್ಯೇಂದ್ರೌ ಪರಮಪ್ರೀತೌ ತಯೋಶ್ಚೈವ ಸುಹೃಜ್ಜನೇ ।
ಭಕ್ಷ್ಯತಾಂ ಭುಜ್ಯತಾಂ ನಿತ್ಯಂ ರಮ್ಯತಾಂ ಗೀಯತಾಮಿತಿ ।
ಪೀಯತಾಂ ದೀಯತಾಂ ಚೇತಿ ವಾಚ ಆಸನ್ ಗೃಹೇ ಗೃಹೇ ॥೨೮॥

ದೈತ್ಯೇಂದ್ರರು ಪರಮಪ್ರೀತರಾದರು. ಅವರ ಸುಹೃಜ್ಜನಸಮೂಹದಲ್ಲಿ ಊಟವನ್ನು ಮಾಡಿ, ವಿಹಾರವನ್ನು ಮಾಡಿ, ಗಾನವನ್ನು ಮಾಡಿ, ಪಾನವನ್ನು ಮಾಡಿ, ದಾನವನ್ನು ಮಾಡಿ ಎಂಬ ಮಾತುಗಳು ಮನೆಮನೆಗಳಲ್ಲೂ ಕೇಳಿಬಂದವು.

ತತ್ರ ತತ್ರ ಮಹಾನಾದೈರುದ್ಘುಷ್ಟತಳನಾದಿತೈಃ ।
ಹೃಷ್ಟಂ ಪ್ರಮುದಿತಂ ಸರ್ವಂ ದೈತ್ಯಾನಾಮಭವತ್ ಪುರಮ್ ॥೨೯॥

ಆ ದೈತ್ಯೇಂದ್ರರ ಪಟ್ಟಣವು ಮಹಾನಾದಗಳಿಂದಲೂ ಮತ್ತು ಸಂತೋಷದ ಚಪ್ಪಾಳೆಯ ಶಬ್ದಗಳಿಂದಲೂ ಕೂಡಿ, ತುಂಬ ಸಂತೋಷದಿಂದ ಯುಕ್ತವಾಯಿತು.

ತೈಸ್ತೈರ್ವಿಹಾರೈರ್ಬಹುಭಿರ್ದೈತ್ಯೇಂದ್ರಾಣಾಂ ಮಹೌಜಸಾಮ್ ।
ಸಮಾಃ ಸಂಕ್ರೀಡತಾಂ ತೇಷಾಮಹರೇಕಮಿವಾಭವತ್ ॥೩೦॥

ಮಹಾಪರಾಕ್ರಮವುಳ್ಳ ಆ ದೈತ್ಯೇಂದ್ರರು ಅನೇಕ ವಿಹಾರಗಳನ್ನು ಮಾಡಿ ಆಟವಾಡುತ್ತಿರುವಾಗ ಅವರಿಗೆ ವರ್ಷಗಳು ಒಂದು ದಿನದಂತೆ ಕಳೆದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕಾದಶಾಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ರಾಜ್ಯಲಾಭಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಹನ್ನೆರಡನೆಯ ಅಧ್ಯಾಯ

(ಸುಂದೋಪಸುಂದರಿಂದ ಸ್ವರ್ಗಾದಿಜಯ, ಋಷಿಗಳ ವಧೆ, ಭೂಮಿಯ ಉಗ್ರರೂಪತೆ.)

ನಾರದಃ

ಉತ್ಸವೇ ವರ್ತಮಾನೇ ತು ತ್ರೈಲೋಕ್ಯಾಕಾಂಕ್ಷಿಣಾವುಭೌ ।
ಮಂತ್ರಯಿತ್ವಾ ತತಃ ಸೇನಾಂ ತಾವಾಜ್ಞಾಪಯತಾಂ ತದಾ ॥೧॥

ಹೀಗೆ ಉತ್ಸವವು ನಡೆಯುತ್ತಿರಲು ಅವರಿಬ್ಬರೂ ಮೂರುಲೋಕಗಳನ್ನೂ ಜಯಿಸುವ ಆಸೆಯಿಂದ ಮಂತ್ರಾಲೋಚನೆಯನ್ನು ಮಾಡಿ, ಸೈನ್ಯಕ್ಕೆ ಆಜ್ಞೆಯನ್ನು ನೀಡಿದರು.

ಸುಹೃದ್ಭಿರಭ್ಯನುಜ್ಞಾತೌ ದೈತ್ಯವೃದ್ಧೈಶ್ಚ ಮಂತ್ರಿಭಿಃ ।
ಕೃತ್ವಾ ಪ್ರಾಸ್ಥಾನಿಕೀಂ ಯಾತ್ರಾಮಸುರೌ ಯಯತುಸ್ತದಾ ॥೨॥

ಸುಹೃಜ್ಜನರಿಂದಲೂ, ದೈತ್ಯವೃದ್ಧರಿಂದಲೂ, ಮಂತ್ರಿಗಳಿಂದಲೂ ಅನುಮತಿಯನ್ನು ಪಡೆದು, ಯುದ್ಧಕ್ಕೆ ಹೊರಡುವ ಸಮಯದ ಮಂಗಳಕಾರ್ಯವನ್ನು ಮಾಡಿ ಅವರು ಹೊರಟರು.

ಗದಾಪಟ್ಟಸಧಾರಿಣ್ಯಾ ಶೂಲಮುದ್ಗರಹಸ್ತಯಾ ।
ಪ್ರಸ್ಥಿತೌ ಸಹಧರ್ಮಿಣ್ಯಾ ಮಹತ್ಯಾ ದೈತ್ಯಸೇನಯಾ ॥೩॥

ಗದಾಪಟ್ಟಸಗಳನ್ನು ಧರಿಸಿ, ಶೂಲಮುದ್ಗರಗಳನ್ನು ಕೈಯಲ್ಲಿ ಹಿಡಿದು ತಮ್ಮ ಸಹಧರ್ಮಿಣಿಯಾದ ದೊಡ್ಡ ದೈತ್ಯಸೇನೆಯ ಜೊತೆಯಲ್ಲಿ ಅವರು ಹೊರಟರು.

ಮಂಗಲ್ಯೈಃ ಸ್ತುತಿಭಿಶ್ಚಾಪಿ ವಿಜಯಂ ಪ್ರತಿಸಂಹಿತೌ ।
ಚಾರಣೈಃ ಸ್ತೂಯಮಾನೌ ತೌ ಜಗ್ಮತುಃ ಪರಯಾ ಮುದಾ ॥೪॥

ವಿಜಯವನ್ನು ಅನುಸಂಧಾನಮಾಡಿ, ಮಂಗಳಗಳಿಂದಲೂ, ಸ್ತೋತ್ರಗಳಿಂದಲೂ, ಯುಕ್ತರಾಗಿ ಚಾರಣರಿಂದ ಸ್ತೋತ್ರಮಾಡಲ್ಪಟ್ಟು ಅವರು ಸಂತೋಷದಿಂದ ಹೊರಟರು.

ತಾವಂತರಿಕ್ಷಮುತ್ಪತ್ಯ ದೈತ್ಯೌ ಕಾಮಗಮಾವುಭೌ ।
ದೇವಾನಾಮೇವ ಭವನಂ ಜಗ್ಮತುರ್ಯುದ್ಧದುರ್ಮದೌ ॥೫॥

ಕಾಮಗಾಮಿಗಳಾದ ಆ ದೈತ್ಯರು ಅಂತರಿಕ್ಷಕ್ಕೆ ನೆಗೆದು, ಯುದ್ಧದುರ್ಮದರಾಗಿ, ದೇವತೆಗಳ ಲೋಕಕ್ಕೇ ಹೋದರು.

ತಯೋರಾಗಮನಂ ಜ್ಞಾತ್ವಾ ವರದಾನಂ ಚ ತತ್ ಪ್ರಭೋಃ ।
ಹಿತ್ವಾ ತ್ರಿವಿಷ್ಟಪಂ ಜಗ್ಮುರ್ಬ್ರಹ್ಮಲೋಕಂ ತತಃ ಸುರಾಃ ॥೬॥

ಅವರ ಆಗಮನವನ್ನು ತಿಳಿದು, ಅವರಿಗೆ ಬ್ರಹ್ಮದೇವರು ಕೊಟ್ಟ ವರವನ್ನು ತಿಳಿದಿದ್ದ ದೇವತೆಗಳು ಸ್ವರ್ಗಲೋಕವನ್ನು ಬಿಟ್ಟು ಬ್ರಹ್ಮಲೋಕಕ್ಕೆ ಹೋದರು.

ತಾವಿಂದ್ರಲೋಕಂ ನಿರ್ಜಿತ್ಯ ಯಕ್ಷರಕ್ಷೋಗಣಾಂಸ್ತಥಾ ।
ಖೇಚರಾಣ್ಯಪಿ ಭೂತಾನಿ ಜಿಗ್ಯತುಸ್ತೀವ್ರವಿಕ್ರಮೌ ॥೭॥

ತೀವ್ರಪರಾಕ್ರಮವುಳ್ಳ ಆ ಇಬ್ಬರು ದೈತ್ಯರು ಇಂದ್ರಲೋಕವನ್ನು ಗೆದ್ದು, ಯಕ್ಷರನ್ನು ಮತ್ತು ರಾಕ್ಷಸರ ಗಣಗಳನ್ನು ಗೆದ್ದು, ಅಂತರಿಕ್ಷದಲ್ಲಿ ಸಂಚರಿಸುವ ಭೂತಗಳನ್ನೂ ಗೆದ್ದರು.

ಅಂತರ್ಭೂಮಿಚರಾನ್ ನಾಗಾನ್ ಜಿತ್ವಾ ತೌ ತು ಮಹಾಸುರೌ ।
ಸಮುದ್ರವಾಸಿನೀಃ ಸರ್ವಾ ಮ್ಲೇಚ್ಛಜಾತೀರ್ವಿಜಿಗ್ಯತುಃ ॥೮॥

ಆ ಮಹಾಸುರರು ಭೂಮಿಯ ಒಳಗೆ ಸಂಚರಿಸುವ ನಾಗಗಳನ್ನೂ ಜಯಿಸಿ, ಸಮುದ್ರದಲ್ಲಿ ವಾಸಿಸುವ ಎಲ್ಲಾ ಮ್ಲೇಚ್ಛಜಾತಿಗಳನ್ನೂ ಗೆದ್ದರು.

ತತಃ ಸರ್ವಾಂ ಮಹೀಂ ಜೇತುಮಾರಬ್ಧಾವುಗ್ರತೇಜಸೌ ।
ಸೈನಿಕಾಂಶ್ಚ ಸಮಾಹೂಯ ಸುತೀಕ್ಷ್ಣಾಂ ವಾಚಮೂಚತುಃ ॥೯॥

ಅನಂತರ, ಸಮಗ್ರವಾದ ಭೂಮಿಯನ್ನು ಗೆಲ್ಲಲು ಉದ್ಯುಕ್ತರಾದ ಉಗ್ರತೇಜಸ್ವಿಗಳಾದ ಅವರು ಸೈನಿಕರನ್ನು ಕರೆದು, ಕ್ರೂರವಾದ ಮಾತುಗಳನ್ನು ಆಡಿದರು.

ರಾಜರ್ಷಯೋ ಮಹಾಯಜ್ಞೈರ್ಹವ್ಯಕವ್ಯೈರ್ದ್ವಿಜಾತಯಃ ।
ತೇಜೋ ಬಲಂ ಚ ದೇವಾನಾಂ ವರ್ಧಯಂತೇ ಶ್ರಿಯಂ ತಥಾ ॥೧೦॥

ರಾಜರ್ಷಿಗಳು ಮಹಾಯಜ್ಞಗಳಿಂದಲೂ, ಬ್ರಾಹ್ಮಣರು ಹವ್ಯಕವ್ಯಗಳಿಂದಲೂ, ದೇವತೆಗಳ ತೇಜಸ್ಸನ್ನೂ, ಬಲವನ್ನೂ ಮತ್ತು ಸಂಪತ್ತನ್ನೂ ಹೆಚ್ಚಿಸುತ್ತಾರೆ.

ತೇಷಾಮೇವಂ ಪ್ರವೃದ್ಧಾನಾಂ ಸರ್ವೇಷಾಮಸುರದ್ವಿಷಾಮ್ ।
ಸಂಭೂಯ ಸರ್ವೈರಸ್ಮಾಭಿಃ ಕಾರ್ಯಃ ಸರ್ವಾತ್ಮನಾ ವಧಃ ॥೧೧॥

ಹೀಗೆ ಪ್ರವೃದ್ಧರಾದ ಅಸುರದ್ವೇಷಿಗಳಾದ ಅವರನ್ನೆಲ್ಲ, ನಾವೆಲ್ಲರೂ ಒಟ್ಟಿಗೆ ಸೇರಿ ವಧೆಮಾಡಬೇಕು.

ಏವಂ ಸರ್ವಾನ್ ಸಮಾದಿಶ್ಯ ಪೂರ್ವತೀರೇ ಮಹೋದಧೇಃ ।
ಕ್ರೂರಾಂ ಮತಿಂ ಸಮಾಸ್ಥಾಯ ಜಗ್ಮತುಃ ಸರ್ವತೋದಿಶಃ ॥೧೨॥

ಹೀಗೆ ಎಲ್ಲರಿಗೂ ಆದೇಶವನ್ನು ನೀಡಿ, ಕ್ರೂರವಾದ ನಿಶ್ಚಯವನ್ನು ಹೊಂದಿ, ಪೂರ್ವಸಮುದ್ರದ ತೀರಕ್ಕೂ ಮತ್ತು ಎಲ್ಲಾ ದಿಕ್ಕುಗಳಿಗೂ ಹೊರಟರು.

ಯಜ್ಞೈರ್ಯಜಂತೇ ಯೇ ಕೇಚಿದ್ ಯಾಜಯಂತಿ ಚ ಯೇ ದ್ವಿಜಾಃ ।
ತಾನ್ ಸರ್ವಾನಸುರೌ ದೃಷ್ಟ್ವಾ ಬಲಿನೌ ಜಘ್ನತುಸ್ತತಃ ॥೧೩॥

ಯಾವ ಬ್ರಾಹ್ಮಣರು ಯಜ್ಞಗಳನ್ನು ಮಾಡುತ್ತಿದ್ದರೋ ಅಥವಾ ಯಜ್ಞಗಳನ್ನು ಮಾಡಿಸುತ್ತಿದ್ದರೋ ಅವರನ್ನು ನೋಡಿ ಬಲಿಷ್ಠರಾದ ಈ ಇಬ್ಬರು ಅಸುರರು ಅವರನ್ನು ಕೊಂದರು.

ಆಶ್ರಮೇಷ್ವಗ್ನಿಹೋತ್ರಾಣಿ ಋಷೀಣಾಂ ಭಾವಿತಾತ್ಮನಾಮ್ ।
ಗೃಹೀತ್ವಾ ಪ್ರಕ್ಷಿಪಂತ್ಯಪ್ಸು ವಿಸ್ರಬ್ಧಾಃ ಸೈನಿಕಾಸ್ತದಾ ॥೧೪॥

ಅವರ ಸೈನಿಕರು ಧ್ಯಾನಯೋಗಪರವಾದ ಋಷಿಗಳ ಆಶ್ರಮದಲ್ಲಿದ್ದ ಅಗ್ನಿಹೋತ್ರಗಳನ್ನು ತೆಗೆದುಕೊಂಡು ಯಾವ ಶಂಕೆಯೂ ಇಲ್ಲದೆ, ನೀರಿನಲ್ಲಿ ಎಸೆದರು.

ತಪೋಧನೈಶ್ಚ ಯೇ ಶಪ್ತಾಃ ಕ್ರುದ್ಧೈರುಕ್ತಾ ಮಹಾತ್ಮಭಿಃ ।
ನಾಕ್ರಾಮಂತಿ ತಯೋಸ್ತೇನ ವರದಾನೇನ ಚ ಪ್ರಭೋಃ ॥೧೫॥

ಕ್ರುದ್ಧರೂ, ಮಹಾತ್ಮರೂ ಆದ ಆ ತಪೋಧನರು ಕೊಟ್ಟ ಶಾಪಗಳು ಬ್ರಹ್ಮದೇವರ ವರದ ಕಾರಣದಿಂದಾಗಿ ಅವರಿಗೆ ನಾಟಲಿಲ್ಲ.

ನಾಕ್ರಾಮಂತಿ ಯದಾ ಶಾಪಾ ಬಾಣಾ ಮುಕ್ತಾಃ ಶಿಲಾಸ್ವಿವ ।
ನಿಯಮಾಂಸ್ತು ಪರಿತ್ಯಜ್ಯ ವಿದ್ರವಂತಿ ದ್ವಿಜಾತಯಃ ॥೧೬॥

ತಾವು ಕೊಟ್ಟ ಶಾಪಗಳು ಕಲ್ಲಿನ ಮೇಲೆ ಪ್ರಯೋಗಿಸಿದ ಬಾಣಗಳಂತೆ ವಿಫಲವಾದಾಗ, ಬ್ರಾಹ್ಮಣರು ತಮ್ಮ ನಿಯಮಗಳನ್ನು ಬಿಟ್ಟು ಓಡಿಹೋದರು.

ಪೃಥಿವ್ಯಾಂ ಯೇ ತಪಃಸಿದ್ಧಾಃ ಶಾಂತಾ ದಮಪರಾಯಣಾಃ ।
ತಯೋರ್ಭಯಾದ್ ದುದ್ರುವಿರೇ ವೈನತೇಯಾದಿವೋರಗಾಃ ॥೧೭॥

ಭೂಮಿಯಲ್ಲಿದ್ದ ತಪಃಸಿದ್ಧರೂ, ಶಾಂತರೂ ಮತ್ತು ಇಂದ್ರಿಯನಿಗ್ರಹವುಳ್ಳವರೂ ಆದ ಋಷಿಗಳು ಗರುಡನ ಭಯದಿಂದ ಸರ್ಪಗಳು ಓಡುವಂತೆ ಅವರಿಬ್ಬರ ಭಯದಿಂದ ಓಡಿಹೋದರು.

ಮಥಿತೈರಾಶ್ರಮೈರ್ಭಗ್ನೈರ್ವಿಕೀರ್ಣೈಃ ಕಲಶೈಃ ಸ್ರುವೈಃ ।
ಶೂನ್ಯಮಾಸೀಜ್ಜಗತ್ಸರ್ವಂ ಕಾಲೇನೇವ ಹತಂ ಯಥಾ ॥೧೮॥

ಆಶ್ರಮಗಳೆಲ್ಲವೂ ನಿರ್ಮಥಿಸಲ್ಪಟ್ಟು ಕಲಶಗಳು ಮತ್ತು ಸ್ರುವಗಳು ಚೆಲ್ಲಾಪಿಲ್ಲಿಯಾಗಿ ಬಿದ್ದು, ಯಮನಿಂದ ಹತವಾದಂತೆ ಜಗತ್ತೆಲ್ಲವೂ ಶೂನ್ಯವಾಯಿತು.

ರಾಜರ್ಷಿಭಿರದೃಶ್ಯದ್ಭಿರ್ಋಷಿಭಿಶ್ಚ ತಪೋಧನೈಃ ।
ಉಭೌ ವಿನಿಶ್ಚಯಂ ಕೃತ್ವಾ ವಿಕುರ್ವಾಣೌ ವಧೈಷಿಣೌ ॥೧೯॥

ಪ್ರಭಿನ್ನಕರಟೌ ಮತ್ತೌ ಭೂತ್ವಾ ಕುಂಜರರೂಪಿಣೌ ।
ಸಂಲ್ಲೀನಾನಪಿ ದುರ್ಗೇಷು ನಿನ್ಯತುರ್ಯಮಸಾದನಮ್ ॥೨೦॥

ಅದೃಶ್ಯರಾದ ರಾಜರ್ಷಿಗಳನ್ನೂ ಮತ್ತು ತಪೋಧನರಾದ ಋಷಿಗಳನ್ನೂ ಕೊಲ್ಲಲು ಬಯಸಿದ ಅವರು ಇಂತಹ ಪ್ರತೀಕಾರವನ್ನು ಮಾಡಲು ನಿಶ್ಚಯಿಸಿ, ಎರಡು ಮದಿಸಿದ ಆನೆಗಳ ರೂಪವನ್ನು ಧರಿಸಿ, ದುರ್ಗಗಳಲ್ಲಿ ಅಡಗಿಕೊಂಡವರನ್ನೆಲ್ಲಾ ಯಮಲೋಕಕ್ಕೆ ಕಳುಹಿಸಿದರು.

ಸಿಂಹೌ ಭೂತ್ವಾ ಪುನರ್ವ್ಯಾಘ್ರೌ ಪುನಶ್ಚಾಂತರ್ಹಿತಾವುಭೌ ।
ತೈರುಪಾಯೈಸ್ತು ತಾನ್ ಕ್ರುದ್ಧಾನ್ ಋಷೀನ್ ದೃಷ್ಟ್ವಾ ನಿಜಘ್ನತುಃ ॥

ಅವರು ಪುನಃ ಸಿಂಹರೂಪವನ್ನು ಧರಿಸಿ, ವ್ಯಾಘ್ರರೂಪವನ್ನು ಧರಿಸಿ, ಪುನಃ ಅಂತರ್ಧಾನವನ್ನು ಹೊಂದಿ ಆಯಾ ಉಪಾಯಗಳಿಂದ ಕ್ರುದ್ಧರಾದ ಋಷಿಗಳನ್ನು ನೋಡಿ ಅವರನ್ನು ಕೊಂದರು.

ನಿವೃತ್ತನಿತ್ಯಸ್ವಾಧ್ಯಾಯಾ ಪ್ರನಷ್ಟನೃಪತಿದ್ವಿಜಾ ।
ಉತ್ಸನ್ನೋತ್ಸವಯಜ್ಞಾ ಚ ಬಭೂವ ವಸುಧಾ ತದಾ ॥೨೨॥

ಭೂಮಿಯಲ್ಲಿ ನಿತ್ಯಸ್ವಾಧ್ಯಾಯಗಳು ನಾಶವನ್ನು ಹೊಂದಿದವು. ಕ್ಷತ್ರಿಯರೂ ಮತ್ತು ಬ್ರಾಹ್ಮಣರೂ ನಾಶವನ್ನು ಹೊಂದಿದರು ಮತ್ತು ಉತ್ಸವಗಳೂ ಮತ್ತು ಯಜ್ಞಗಳೂ ನಾಶವನ್ನು ಹೊಂದಿದವು.

ಹಾಹಾಭೂತಾ ಭಯಾರ್ತಾ ಚ ನಿವೃತ್ತವಿಪಣಾಪಣಾ ।
ನಿವೃತ್ತದೇವಕಾರ್ಯಾ ಚ ಪುಣ್ಯೋದ್ವಾಹವಿವರ್ಜಿತಾ ॥೨೩॥

ನಿವೃತ್ತಕೃಷಿಗೋರಕ್ಷಾ ವಿಧ್ವಸ್ತನಗರಾಶ್ರಯಾ ।
ಅಸ್ಥಿಕಂಕಾಲಸಂಕೀರ್ಣಾ ಬಭೂವ ಹ್ಯುಗ್ರದರ್ಶನಾ ॥೨೪॥

ಭೂಮಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಹಾಹಾಕಾರವುಂಟಾಯಿತು. ಅಂಗಡಿಮುಂಗಟ್ಟುಗಳು ನಾಶವನ್ನು ಹೊಂದಿದವು. ದೇವಕಾರ್ಯಗಳೆಲ್ಲವೂ ನಿವೃತ್ತವಾದವು. ಪವಿತ್ರವಾದ ವಿವಾಹಗಳು ನಶಿಸಿಹೋದವು. ಕೃಷಿಗೋರಕ್ಷಗಳು ನಾಶವನ್ನು ಹೊಂದಿದವು. ನಗರಗಳನ್ನು ಆಶ್ರಯಿಸಿದ ಪ್ರದೇಶಗಳು ನಾಶವನ್ನು ಹೊಂದಿದವು. ಭೂಮಿಯು ಎಲ್ಲಾಕಡೆಗಳಿಂದಲೂ ತಲೆಬುರುಡೆಗಳಿಂದಲೂ, ದೇಹದ ಅಸ್ಥಿಗಳಿಂದಲೂ ತುಂಬಲ್ಪಟ್ಟುನೋಡಲು ಭಯಂಕರವಾಗಿ, ಭಯಾರ್ತವಾಯಿತು.

ನಿವೃತ್ತಪಿತೃಕಾರ್ಯಂ ಚ ನಿರ್ವಷಟ್ಕಾರಮಂಗಲಮ್ ।
ಜಗತ್ ಪ್ರತಿಭಯಾಕಾರಂ ದುಷ್ಪ್ರೇಕ್ಷ್ಯಮಭವತ್ ತದಾ ॥೨೫॥

ಪಿತೃಕಾರ್ಯಗಳು ನಿವೃತ್ತವಾದವು. ವಷಟ್ಕಾರಗಳು ಮತ್ತು ಮಂಗಳಗಳು ಮಾಯವಾದವು. ಆಗ, ಜಗತ್ತು ಭೀಕರವಾದ ಆಕಾರವನ್ನು ತಳೆದು ನೋಡಲು ಅಸಾಧ್ಯವಾಯಿತು.

ಚಂದ್ರಾದಿತ್ಯೌ ಗ್ರಹಾಸ್ತಾರಾ ನಕ್ಷತ್ರಾಣಿ ದಿವೌಕಸಃ ।
ಜಗ್ಮುರ್ವಿಷಾದಂ ತತ್ ಕರ್ಮ ದೃಷ್ಟ್ವಾ ಸುಂದೋಪಸುಂದಯೋಃ ॥

ಸುಂದೋಪಸುಂದರ ಆ ಉಗ್ರಕರ್ಮಗಳನ್ನು ನೋಡಿ ಚಂದ್ರಸೂರ್ಯರೂ, ಗ್ರಹಗಳೂ, ತಾರೆಗಳೂ, ನಕ್ಷತ್ರಗಳೂ, ದೇವತೆಗಳೂ, ಎಲ್ಲರೂ ವಿಷಾದವನ್ನು ಹೊಂದಿದರು.

ಏವಂ ಸರ್ವಾ ದಿಶೋ ದೈತ್ಯೌ ಜಿತ್ವಾ ಕ್ರೂರೇಣ ಕರ್ಮಣಾ ।
ನಿಃಸಪತ್ನೌ ಕುರುಕ್ಷೇತ್ರೇ ನಿವೇಶಮಭಿಚಕ್ರತುಃ ॥೨೭॥

ಹೀಗೆ ಆ ಇಬ್ಬರು ದೈತ್ಯರು ತಮ್ಮ ಕ್ರೂರಕರ್ಮದಿಂದ ಎಲ್ಲಾ ದಿಕ್ಕುಗಳನ್ನೂ ಗೆದ್ದು ಎಲ್ಲಾ ಶತ್ರುಗಳನ್ನೂ ನಿರ್ಮೂಲನಗೊಳಿಸಿ ಕುರುಕ್ಷೇತ್ರದಲ್ಲಿ ಮನೆಯನ್ನು ಮಾಡಿ ವಾಸವನ್ನು ಮಾಡಲು ಪ್ರಾರಂಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಾದಶಾಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ರಾಜ್ಯಲಾಭಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು.

ಇನ್ನೂರ ಹದಿಮೂರನೆಯ ಅಧ್ಯಾಯ

(ದೇವತೆಗಳಿಂದ ಬ್ರಹ್ಮದೇವರ ಬಳಿಯಲ್ಲಿ ದೂರು. ಬ್ರಹ್ಮದೇವರಿಂದ ವಿಶ್ವಕರ್ಮನಿಗೆ ತಿಲೋತ್ತಮೆಯನ್ನು ನಿರ್ಮಿಸಲು ಆದೇಶ. ತಿಲೋತ್ತಮೆಯ ಸೌಂದರ್ಯ.)

ನಾರದಃ

ತತೋ ದೇವರ್ಷಯಃ ಸರ್ವೇ ತೇ ಚೈವ ಪರಮರ್ಷಯಃ ।
ಜಗ್ಮುಸ್ತದಾ ಪರಾಮಾರ್ತಿಂ ದೃಷ್ಟ್ವಾ ತತ್ಕದನಂ ಮಹತ್ ॥೧॥

ಆಗ ದೇವರ್ಷಿಗಳೂ ಮತ್ತು ಉಳಿದ ಪರಮರ್ಷಿಗಳೂ, ಸುಂದೋಪಸುಂದರ ದುಷ್ಟಕಾರ್ಯಗಳನ್ನು ನೋಡಿ ಬಹಳ ದುಃಖಗೊಂಡರು.

ತೇऽಭಿಜಗ್ಮುರ್ಜಿತಕ್ರೋಧಾ ಜಿತಾತ್ಮಾನೋ ಜಿತೇಂದ್ರಿಯಾಃ ।
ಪಿತಾಮಹಸ್ಯ ಭವನಂ ಜಗತಃ ಕೃಪಯಾ ತದಾ ॥೨॥

ಜಗತ್ತಿನ ಮೇಲಿನ ಕೃಪೆಯಿಂದ ಜಿತಕ್ರೋಧರೂ, ಜಿತೇಂದ್ರಿಯರೂ, ಜಿತಮನಸ್ಕರೂ ಆದ ಅವರು, ಬ್ರಹ್ಮದೇವರ ಬಳಿಗೆ ಹೋದರು.

ತತೋ ದದೃಶುರಾಸೀನಂ ಸಹ ದೇವೈಃ ಪಿತಾಮಹಮ್ ।
ಸಿದ್ಧೈರ್ಬ್ರಹ್ಮರ್ಷಿಭಿಶ್ಚೈವ ಸಮಂತಾತ್ ಪರಿವಾರಿತಮ್ ॥೩॥

ಅನಂತರ ಸಿದ್ಧರಿಂದಲೂ, ಬ್ರಹ್ಮರ್ಷಿಗಳಿಂದಲೂ, ಸುತ್ತುವರಿಯಲ್ಪಟ್ಟ ದೇವತೆಗಳ ಜೊತೆಯಲ್ಲಿ ಕುಳಿತಿರುವ ಬ್ರಹ್ಮದೇವರನ್ನು ನೋಡಿದರು.

ತತ್ರ ಜಿಷ್ಣುರ್ಮಹಾದೇವಸ್ತತ್ರಾಗ್ನಿರ್ವಾಯುನಾ ಸಹ ।
ಚಂದ್ರಾದಿತ್ಯೌ ಚ ಧರ್ಮಶ್ಚ ಪರಮೇಷ್ಠೀ ತಥಾ ಬುಧಃ ॥೪॥

ವೈಖಾನಸಾ ವಾಲಖಿಲ್ಯಾಃ ಸೋಮಪಾಶ್ಚ ಮರೀಚಿಪಾಃ ।
ಅಜಶ್ಚೈವಾಜಮೀಢಾಶ್ಚ ತೇಜೋಮೀಢಾಸ್ತಪಸ್ವಿನಃ ॥೫॥

ಋಷಯಃ ಸರ್ವ ಏವೈತೇ ಪಿತಾಮಹಮುಪಾಸತೇ ।
ತತೋऽಭಿಗಮ್ಯ ಸಹಿತಾಃ ಸರ್ವ ಏವ ಮಹರ್ಷಯಃ ॥೬॥

ಅಲ್ಲಿ ಇಂದ್ರ, ರುದ್ರ, ಅಗ್ನಿ, ವಾಯು, ಚಂದ್ರ, ಸೂರ್ಯ, ಮುಖ್ಯವಾಯು, ಬುಧ, ವೈಖಾನಸರು, ವಾಲಖಿಲ್ಯರು, ಸೋಮಪರು, ಮರೀಚಿಪರು, ಅಜ, ಆಜಮೀಢರು, ತೇಜೋಮೀಢರು, ತಪಸ್ವಿಗಳಾದ ಋಷಿಗಳು ಎಲ್ಲರೂ ಬ್ರಹ್ಮದೇವರನ್ನು ಉಪಾಸನೆ ಮಾಡುತ್ತಿದ್ದರು.

ಸುಂದೋಪಸುಂದಯೋಃ ಕರ್ಮ ಸರ್ವಮೇವ ಶಶಂಸಿರೇ ।
ಯಥಾಕೃತಂ ಯಥಾಚೇಷ್ಟಂ ಕೃತಂ ಯೇನ ಕ್ರಮೇಣ ಚ ।
ನ್ಯವೇದಯಂಸ್ತತಃ ಸರ್ವಮಖಿಲೇನ ಪಿತಾಮಹಮ್ ॥೭॥

ಅನಂತರ ಎಲ್ಲ ಋಷಿಗಳೂ ಜೊತೆಯಲ್ಲಿ ಹೋಗಿ ಸುಂದೋಪಸುಂದರ ಎಲ್ಲಾ ದುಷ್ಕರ್ಮಗಳನ್ನೂ ವಿವರಿಸಿದರು. ಅವರು ಮಾಡಿದ ಕರ್ಮಗಳು, ಅವುಗಳನ್ನು ಮಾಡಿದ ರೀತಿ, ಅವುಗಳನ್ನು ಮಾಡಿದ ಕ್ರಮ, ಎಲ್ಲವನ್ನೂ ಸಮಗ್ರವಾಗಿ ಪಿತಾಮಹರಾದ ಬ್ರಹ್ಮದೇವರಿಗೆ ನಿವೇದಿಸಿದರು.

ತತೋ ದೇವಾಶ್ಚ ತೇ ಸರ್ವೇ ತೇ ಚೈವ ಪರಮರ್ಷಯಃ ।
ತಮೇವಾರ್ಥಂ ಪುರಸ್ಕೃತ್ಯ ಪಿತಾಮಹಮಚೋದಯನ್ ॥೯॥

ಅನಂತರ, ಆ ಎಲ್ಲಾ ದೇವತೆಗಳೂ ಮತ್ತು ಎಲ್ಲಾ ಋಷಿಗಳೂ ಅದೇ ವಿಷಯವನ್ನು ಮುಂದಿಟ್ಟುಕೊಂಡು ಬ್ರಹ್ಮದೇವರಿಗೆ ಒತ್ತಾಯವನ್ನು ಮಾಡಿದರು.

ತತಃ ಪಿತಾಮಹಃ ಶ್ರುತ್ವಾ ಸರ್ವೇಷಾಂ ತದ್ ವಚಸ್ತದಾ ।
ಮುಹೂರ್ತಮಿವ ಸಂಚಿಂತ್ಯ ಕರ್ತವ್ಯಸ್ಯ ವಿನಿಶ್ಚಯಮ್ ।
ತಯೋರ್ವಧಂ ಸಮುದ್ದಿಶ್ಯ ವಿಶ್ವಕರ್ಮಾಣಮಾಹ್ವಯತ್ ॥೧೦॥

ಆಗ ಬ್ರಹ್ಮದೇವರು ಅವರೆಲ್ಲರ ಮಾತುಗಳನ್ನು ಕೇಳಿ ಒಂದು ಮುಹೂರ್ತದಕಾಲ ಕಾರ್ಯವನ್ನು ಮಾಡುವ ರೀತಿಯನ್ನು ಯೋಚನೆಮಾಡುವವರಂತೆ ಇದ್ದು ಅವರಿಬ್ಬರ ವಧೆಯನ್ನು ಉದ್ದೇಶಿಸಿ ವಿಶ್ವಕರ್ಮನನ್ನು ಕರೆದರು.

ದೃಷ್ಟ್ವಾ ಚ ವಿಶ್ವಕರ್ಮಾಣಂ ವ್ಯಾದಿದೇಶ ಪಿತಾಮಹಃ ।
ಸೃಜ್ಯತಾಂ ಪ್ರಾರ್ಥನೀಯೇನ ರೂಪೇಣ ಸ್ತ್ರೀತ್ಯಥಾಬ್ರವೀತ್ ॥೧೧॥

ವಿಶ್ವಕರ್ಮನನ್ನು ನೋಡಿ ಪಿತಾಮಹರಾದ ಬ್ರಹ್ಮದೇವರು ಅಪೇಕ್ಷಿತವಾದ ರೂಪವುಳ್ಳ ಒಂದು ಸ್ತ್ರೀಯನ್ನು ನಿರ್ಮಾಣಮಾಡು ಎಂದು ಹೇಳಿದರು.

ಪಿತಾಮಹಂ ನಮಸ್ಕೃತ್ಯ ತದ್ವಾಕ್ಯಮಭಿನಂದ್ಯ ವೈ ।
ನಿರ್ಮಮೇ ಸ ಚ ತಾಂ ದಿವ್ಯಾಂ ಚಿಂತಯಿತ್ವಾ ಪ್ರಯತ್ನತಃ ॥೧೨॥

ವಿಶ್ವಕರ್ಮನು ಅವರ ಮಾತನ್ನು ಅಭಿನಂದಿಸಿ, ಬ್ರಹ್ಮದೇವರಿಗೆ ನಮಸ್ಕಾರವನ್ನು ಮಾಡಿ, ಪ್ರಯತ್ನಪೂರ್ವಕವಾಗಿ ಚಿಂತನೆಯನ್ನು ಮಾಡಿ, ಒಬ್ಬ ದಿವ್ಯವಾದ ಸ್ತ್ರೀಯನ್ನು ನಿರ್ಮಿಸಿದನು.

ತ್ರಿಷು ಲೋಕೇಷು ಯತ್ ಕಿಂಚಿದ್ಭೂತಂ ಸ್ಥಾವರಜಂಗಮಮ್ ।
ಸಮಾನಯದ್ ದರ್ಶನೀಯಂ ತತ್ತದ್ ಯತ್ನಾತ್ ತತಸ್ತತಃ ॥೧೩॥

ಮೂರುಲೋಕಗಳಲ್ಲಿ ಸ್ಥಾವರಜಂಗಮವಸ್ತುಗಳಲ್ಲಿ, ಮನೋಹರವಾದ ಅಂಶವು ಏನೇನಿದ್ದಿತೋ, ಅವೆಲ್ಲವನ್ನೂ ಪ್ರಯತ್ನಪೂರ್ವಕವಾಗಿ ಅಲ್ಲಲ್ಲಿಂದ ತೆಗೆದು ಒಂದು ಕಡೆ ಸೇರಿಸಿದನು.

ಕೋಟಿಶಶ್ಚೈವ ರತ್ನಾನಿ ತಸ್ಯಾ ಗಾತ್ರೇ ನ್ಯವೇಶಯತ್ ।
ತಾಂ ರತ್ನಸಂಘಾತಮಯೀಮಸೃಜದ್ ದೇವರೂಪಿಣೀಮ್ ॥೧೪॥

ಜೊತೆಗೆ, ಕೋಟಿಗಟ್ಟಲೆ ಸಣ್ಣಸಣ್ಣ ರತ್ನಗಳನ್ನು, ಅವಳ ದೇಹದಲ್ಲಿ ಸೇರಿಸಿದನು. ಹೀಗೆ ಮಾಡಿ, ರತ್ನದ ಸಮುದಾಯದಂತಿದ್ದ, ದೇವಸುಂದರಿಯಾದ ಆ ಸ್ತ್ರೀಯನ್ನು ಸೃಷ್ಟಿಸಿದನು.

ಸಾ ಪ್ರಯತ್ನೇನ ಮಹತಾ ನಿರ್ಮಿತಾ ವಿಶ್ವಕರ್ಮಣಾ ।
ತ್ರಿಷು ಲೋಕೇಷು ನಾರೀಣಾಂ ರೂಪೇಣಾಪ್ರತಿಮಾ ಭುವಿ ॥೧೫॥

ವಿಶ್ವಕರ್ಮನಿಂದ ಮಹಾಪ್ರಯತ್ನದಿಂದ ನಿರ್ಮಿಸಲ್ಪಟ್ಟ ಅವಳು, ಮೂರುಲೋಕದ ನಾರಿಯರಲ್ಲಿ ಅಸದೃಶಳಾಗಿದ್ದಳು.

ನ ತಸ್ಯಾಃ ಸೂಕ್ಷ್ಮಮಪ್ಯಸ್ತಿ ಯದ್ ಗಾತ್ರೇ ರೂಪಸಂಪದಾ ।
ರಹಿತಂ ಸರ್ವಗಾತ್ರೇಷು ಯತ್ರ ದೃಷ್ಟಿರ್ನ ಸಜ್ಜತೇ ॥೧೬॥

ಅವಳ ದೇಹದಲ್ಲಿ ಸೌಂದರ್ಯವಿಲ್ಲದ ಒಂದು ಸಣ್ಣಭಾಗವೂ ಇರಲಿಲ್ಲ. ಹಾಗೆಯೇ, ನೋಡುವವರ ದೃಷ್ಟಿಯನ್ನು ಸೆರೆಹಿಡಿಯದ ಒಂದು ಅಂಶವೂ ಇರಲಿಲ್ಲ.

ಸಾ ವಿಗ್ರಹವತೀವ ಶ್ರೀಃ ಕಾಂತರೂಪಾ ವಪುಷ್ಮತೀ ।
ಪಿತಾಮಹಮುಪಾತಿಷ್ಠತ್ ಕಿಂ ಕರೋಮೀತಿ ಚಾಬ್ರವೀತ್ ॥೧೭॥

ದೇಹವನ್ನು ಧರಿಸಿದ ಶ್ರೀದೇವಿಯಂತೆ ಮನೋಹರಳೂ, ಶ್ರೇಷ್ಠವಾದ ದೇಹವುಳ್ಳವಳೂ ಆದ ಅವಳು ಬ್ರಹ್ಮದೇವರ ಸಮೀಪಕ್ಕೆ ಬಂದು ನಾನು ಏನು ಮಾಡಲಿ ಎಂದು ಕೇಳಿದಳು.

ಪ್ರೀತೋ ಭೂತ್ವಾ ಸ ದೃಷ್ಟ್ವೈವ ಪ್ರೀತ್ಯಾ ಚಾಸ್ಯೈ ವರಂ ದದೌ ।
ಕಾಂತಿತ್ವಂ ಸರ್ವಭೂತಾನಾಂ ಸಶ್ರಿಯಾऽನುಪಮಂ ವಪುಃ ॥೧೮॥

ಅವಳನ್ನು ನೋಡುವುದರಿಂದಲೇ ಸಂತುಷ್ಟರಾದ ಬ್ರಹ್ಮದೇವರು, ಸಂತೋಷದಿಂದ ಅವಳಿಗೆ ಎಲ್ಲ ಪ್ರಾಣಿಗಳಿಗಿಂತಲೂ ಹೆಚ್ಚಿನ ಕಾಂತಿಯನ್ನೂ, ಅನುಪಮವಾದ ಶರೀರಕಾಂತಿಯನ್ನೂ ವರವಾಗಿಕೊಟ್ಟರು.

ಸಾ ತೇನ ವರದಾನೇನ ಕರ್ತುಶ್ಚ ಕ್ರಿಯಯಾ ತದಾ ।
ಜಹಾರ ಸರ್ವಭೂತಾನಾಂ ಚಕ್ಷೂಂಷಿ ಚ ಮನಾಂಸಿ ಚ ॥೧೯॥

ಬ್ರಹ್ಮದೇವರ ವರದಾನದಿಂದಲೂ, ನಿರ್ಮಾಣಮಾಡಿದ ವಿಶ್ವಕರ್ಮನ ಕೌಶಲದಿಂದಲೂ, ಅವಳು ತನ್ನನ್ನು ನೋಡುವವರ ಕಣ್ಣು ಮತ್ತು ಮನಸ್ಸುಗಳನ್ನು ಸೆಳೆದಳು.

ತಿಲಂ ತಿಲಂ ಸಮಾದಾಯ ರತ್ನಾನಾಂ ಯದ್ ವಿನಿರ್ಮಿತಾ ।
ತಿಲೋತ್ತಮೇತ್ಯತಸ್ತಸ್ಯಾ ನಾಮ ಚಕ್ರೇ ಪಿತಾಮಹಃ ॥೨೦॥

ಪ್ರತಿಯೊಂದು ಸುಂದರ ವಸ್ತುವಿನಿಂದ ಮತ್ತು ರತ್ನಗಳಿಂದ ಎಳ್ಳಿನಷ್ಟು ಸಣ್ಣಸಣ್ಣ ಭಾಗಗಳನ್ನು ತೆಗೆದು ನಿರ್ಮಿಸಿದ್ದ ಕಾರಣ ಬ್ರಹ್ಮದೇವರು ಅವಳಿಗೆ ತಿಲೋತ್ತಮೆ ಎಂದು ನಾಮಕರಣ ಮಾಡಿದರು.

ಪಿತಾಮಹಃ

ಗಚ್ಛ ಸುಂದೋಪಸುಂದಾಭ್ಯಾಮಸುರಾಭ್ಯಾಂ ತಿಲೋತ್ತಮೇ ।
ಪ್ರಾರ್ಥನೀಯೇನ ರೂಪೇಣ ಕುರು ಭದ್ರೇ ಪ್ರಲೋಭನಮ್ ॥೨೧॥

ಭದ್ರೇ, ನೀನು ಅಸುರರಾದ ಸುಂದೋಪಸುಂದರು, ಪ್ರಾರ್ಥಿಸ್ವರೂಪದಿಂದ ಅವರ ಬಳಿಗೆ ಹೋಗಿ ಅವರನ್ನು ಪ್ರಲೋಭಿಸು.

ತ್ವತ್ಕೃತೇ ದರ್ಶನಾದೇವ ರೂಪಸಂಪತ್ಕೃತೇ ಚ ವೈ ।
ವಿರೋಧಃ ಸ್ಯಾದ್ ಯಥಾ ತಾಭ್ಯಾಮನ್ಯೋನ್ಯಂ ತು ತಥಾ ಕುರು ॥

ನಿನ್ನನ್ನು ನೋಡಿದ ಮಾತ್ರದಿಂದಲೇ ನಿನ್ನ ಸಲುವಾಗಿ ಮತ್ತು ನಿನ್ನ ರೂಪದ ಸಲುವಾಗಿ, ಅವರಿಬ್ಬರಿಗೂ ಪರಸ್ಪರವಾಗಿ ವಿರೋಧ- ವುಂಟಾಗುವಂತೆ ಮಾಡು.

ನಾರದಃ

ಸಾ ತಥೇತಿ ಪ್ರತಿಜ್ಞಾಯ ನಮಸ್ಕೃತ್ವಾ ಪಿತಾಮಹಮ್ ।
ಚಕಾರ ಮಂಡಲಂ ಸಾ ವೈ ವಿಬುಧಾನಾಂ ಪ್ರದಕ್ಷಿಣಮ್ ॥೨೩॥

ಅವಳು ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ, ಬ್ರಹ್ಮದೇವರಿಗೆ ನಮಸ್ಕರಿಸಿ, ದೇವತೆಗಳ ಸಮೂಹಕ್ಕೆ ಪ್ರದಕ್ಷಿಣೆಯನ್ನು ಮಾಡಿದಳು.

ಪ್ರಾಙ್ಮುಖೋ ಭಗವಾನಾಸ್ತೇ ದಕ್ಷಿಣೇನ ಮಹೇಶ್ವರಃ ।
ದೇವಾಶ್ಚೈವೋತ್ತರೇಣಾಸನ್ ಸರ್ವತಸ್ತ್ವೃಷಯೋಽಭವನ್ ॥೨೪॥

ಪೂರ್ವದಲ್ಲಿ ಬ್ರಹ್ಮದೇವರು ಇದ್ದರು. ದಕ್ಷಿಣದಲ್ಲಿ ರುದ್ರದೇವರೂ, ಉತ್ತರದಲ್ಲಿ ಉಳಿದ ದೇವತೆಗಳೂ ಮತ್ತು ಎಲ್ಲಾ ಕಡೆಗಳಲ್ಲಿ ಋಷಿಗಳೂ ಇದ್ದರು.

ಕುರ್ವಂತ್ಯಾಂ ತು ತದಾ ತಸ್ಯಾಂ ಮಂಡಲಂ ತು ಪ್ರದಕ್ಷಿಣಮ್ ।
ಬ್ರಹ್ಮಾ ವಿಷ್ಣುಶ್ಚ ಭಗವಾನ್ ತೃಣೀಕೃತ್ಯಾವತಿಷ್ಠತೇ ॥೨೫॥

ಅವಳು ಆ ಋಷಿಗಳ ಮತ್ತು ದೇವತೆಗಳ ಸಮೂಹವನ್ನು ಪ್ರದಕ್ಷಿಣೆ ಮಾಡುವಾಗ ವಿಷ್ಣುವೂ ಮತ್ತು ಪೂಜ್ಯನಾದ ಬ್ರಹ್ಮನೂ ಅವಳನ್ನೂ ತೃಣೀಕರಿಸಿ ಕುಳಿತಿದ್ದರು.

ಇಂದ್ರಃ ಸ್ಥಾಣುಶ್ಚ ಭಗವಾನ್ ಧೈರ್ಯಂ ಕೃತ್ವಾ ಪ್ರತಿಷ್ಠಿತೌ ।
ದ್ರಪ್ಟುಕಾಮಸ್ಯ ಚಾತ್ಯರ್ಥಂ ಗತಾಯಾಂ ಪಾರ್ಶ್ವತಸ್ತತಃ ॥೨೪॥

ಅನ್ಯದಂಚಿತಪದಾಕ್ಷಂ ಪಶ್ಚಿಮಂ ನಿಃಸೃತಂ ಮುಖಮ್ ।
ಗತಾಯಾಶ್ಚೋತ್ತರಂ ಪಾರ್ಶ್ವಂ ಚೋತ್ತರಂ ವಿವೃತಂ ಮುಖಮ್ ।
ಪೃಷ್ಠತಃ ಪರಿವರ್ತಂತ್ಯಾ ದಕ್ಷಿಣಂ ನಿಃಸೃತಂ ಮುಖಮ್ ॥೨೫॥

ಇಂದ್ರ ಮತ್ತು ರುದ್ರರು ಮನಸ್ಸಿಗೆ ಧೈರ್ಯವನ್ನು ತಂದುಕೊಂಡು ಕುಳಿತಿದ್ದರು. ಬಲಗಡೆ ಹೋದ ಅವಳನ್ನು ನೋಡಲು ಬಯಸಿದ ರುದ್ರದೇವರಿಗೆ ಅರ್ಧಮುಚ್ಚಿದ ಕಣ್ಣುಳ್ಳ ಇನ್ನೊಂದು ಶಿರಸ್ಸು ಬಲಭಾಗದಲ್ಲಿ ಉಂಟಾಯಿತು. ಉತ್ತರದಿಕ್ಕಿಗೆ ಹೋದ ಅವಳನ್ನು ನೋಡಲು ಇನ್ನೊಂದು ಮುಖವು ಉಂಟಾಯಿತು. ಹಿಂಭಾಗದಲ್ಲಿ ಹೋದ ಅವಳನ್ನು ನೋಡಲು ಹಿಂಭಾಗದಲ್ಲಿ ಇನ್ನೊಂದು ಮುಖವು ಉಂಟಾಯಿತು.

ಮಹೇಂದ್ರಸ್ಯಾಪಿ ನೇತ್ರಾಣಾಂ ಪಾರ್ಶ್ವತಃ ಪೃಷ್ಠತೋಽಗ್ರತಃ ।
ರಕ್ತಾನಾಂ ಚ ವಿಶಾಲಾನಾಂ ಸಹಸ್ರಂ ಸರ್ವತೋಽಭವತ್ ॥೨೬॥

ಮಹೇಂದ್ರನಿಗೂ ಸಹ ಮುಂಭಾಗದಲ್ಲಿ, ಪಕ್ಕೆಗಳಲ್ಲಿ, ಹಿಂಭಾಗದಲ್ಲಿ, ಎಲ್ಲಾ ಕಡೆಗಳಲ್ಲಿಯೂ ವಿಶಾಲವಾದ, ರಕ್ತವಾದ ಸಹಸ್ರನೇತ್ರಗಳು ಉಂಟಾದವು.

ಏವಂ ಚತುರ್ಮುಖಃ ಸ್ಥಾಣುರ್ಮಹಾದೇವೋಽಭವತ್ ಪುರಾ ।
ತಥಾ ಸಹಸ್ರನೇತ್ರಶ್ಚ ಬಭೂವ ಬಲಸೂದನಃ ॥೨೭॥

ಹೀಗೆ ಮಹಾದೇವನಾದ ರುದ್ರನು ಹಿಂದೆ ನಾಲ್ಕುಮುಖಗಳನ್ನು ಹೊಂದಿದನು. ಬಲಶತ್ರುವಾದ ಇಂದ್ರನೂ ಸಹ ಸಹಸ್ರನೇತ್ರಗಳನ್ನು ಹೊಂದಿದನು.

ತಥಾ ದೇವನಿಕಾಯಾನಾಮೃಷೀಣಾಂ ಚಾಪಿ ಸರ್ವಶಃ ।
ಮುಖಾನ್ಯಭಿಪ್ರವರ್ತಂತೇ ಯೇನ ಯಾತಿ ತಿಲೋತ್ತಮಾ ॥೨೮॥

ತಸ್ಯಾ ಗಾತ್ರೇ ನಿಪತಿತಾ ದೃಷ್ಟಿಸ್ತೇಷಾಂ ಮಹಾತ್ಮನಾಮ್।
ಸರ್ವೇಷಾಮೇವ ಭೂಯಿಷ್ಠಮೃತೇ ದೇವಂ ಪಿತಾಮಹಮ್ ॥೨೯॥

ಹಾಗೆಯೇ, ಆ ದೇವತೆಗಳ ಸಮೂಹಕ್ಕೂ ಮತ್ತು ಎಲ್ಲಾ ಋಷಿಗಳಿಗೂ, ಆ ತಿಲೋತ್ತಮೆಯು ಹೋದ ಹೋದ ಕಡೆಗೆ, ಮುಖಗಳು ತಿರುಗಿದವು. ಅವಳ ದೇಹದಲ್ಲಿ ನಿಮಿತ್ತವಾದ ಆ ಮಹಾನುಭಾವರ ದೃಷ್ಟಿಯು ಬ್ರಹ್ಮದೇವರನ್ನು ಬಿಟ್ಟು ಉಳಿದೆಲ್ಲರಿಗೂ ಅವಳಲ್ಲಿಯೇ, ಸಂಲಗ್ನವಾಯಿತು.

ಗಚ್ಛಂತ್ಯಾ ಚ ತಯಾ ದೇವಾಃ ಸರ್ವೇ ಚ ಪರಮರ್ಷಯಃ ।
ಕೃತಮಿತ್ಯೇವ ತತ್ ಕಾರ್ಯಂ ಮೇನಿರೇ ರೂಪಸಂಪದಾ ॥೩೧॥

ಅವಳು ಹೋಗುತ್ತಿದ್ದಂತೆ, ಅವಳ ರೂಪಸಂಪತ್ತನ್ನು ನೋಡಿದ ಎಲ್ಲಾ ದೇವತೆಗಳೂ ಮತ್ತು ಋಷಿಗಳೂ, ಕಾರ್ಯವು ಆಯಿತು ಎಂದೇ ತಿಳಿದರು.

ತಿಲೋತ್ತಮಾಯಾಂ ತು ತದಾ ಗತಾಯಾಂ ಲೋಕಭಾವನಃ ।
ಕೃತಂ ಕಾರ್ಯಮಿತಿ ಶ್ರೀಮಾನ್ ವ್ಯಾಜಹಾರ ಪಿತಾಮಹಃ ।
ಸರ್ವಾನ್ ವಿಸರ್ಜಯಾಮಾಸ ದೇವಾನೃಷಿಗಣಾಂಶ್ಚ ತಾನ್ ॥೩೨॥

ತಿಲೋತ್ತಮೆಯು ಅಲ್ಲಿಂದ ಹೋಗುತ್ತಿರಲು ಸೃಷ್ಟಿಕರ್ತರಾದ, ಕಾಂತಿಯುಕ್ತರಾದ ಬ್ರಹ್ಮದೇವರು, ಕಾರ್ಯವಾಯಿತು ಎಂದು ಹೇಳಿ, ಆ ಎಲ್ಲಾ ದೇವತೆಗಳನ್ನೂ ಮತ್ತು ಋಷಿಗಳನ್ನೂ ಕಳುಹಿಸಿಕೊಟ್ಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಯೋದಶಾಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ರಾಜ್ಯಲಾಭಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಹದಿನಾಲ್ಕನೆಯ ಅಧ್ಯಾಯ

(ಸುಂದೋಪಸುಂದರ ಬಳಿಗೆ ತಿಲೋತ್ತಮೆಯ ಗಮನ. ಅವಳ ಸಲುವಾಗಿ ಅವರ ವಿರೋಧ. ಗದಾಯುದ್ಧದಿಂದ ಮರಣ. ನಾರದರ ಹಿತೋಪದೇಶ. ಪಾಂಡವರ ಸಮಯಬಂಧ.)

ನಾರದಃ

ಜಿತ್ವಾ ತು ಪೃಥಿವೀಂ ದೈತ್ಯೌ ನಿಃಸಪತ್ನೌ ಗತವ್ಯಥೌ ।
ತ್ರೈಲೋಕ್ಯಂ ತು ವಶೇ ಕೃತ್ವಾ ಕೃತಕೃತ್ಯೌ ಬಭೂವತುಃ ॥೧॥

ಆ ಇಬ್ಬರು ದೈತ್ಯರು ಭೂಮಿಯನ್ನು ಗೆದ್ದು, ಮೂರುಲೋಕಗಳನ್ನು ವಶದಲ್ಲಿ ತೆಗೆದುಕೊಂಡು, ಯಾವ ಶತ್ರುಗಳೂ ಇಲ್ಲದೇ, ಎಲ್ಲಾ ದುಃಖಗಳಿಂದಲೂ ಮುಕ್ತರಾಗಿ ಕೃತಕೃತ್ಯರಾದರು.

ದೇವಗಂಧರ್ವಯಕ್ಷಾಣಾಂ ನಾಗಪಾರ್ಥಿವರಕ್ಷಸಾಮ್ ।
ಆದಾಯ ಸರ್ವರತ್ನಾನಿ ಪರಾಂ ತುಷ್ಟಿಮುಪಾಗತೌ ॥೨॥

ಅವರು ದೇವಗಂಧರ್ವಯಕ್ಷರ, ನಾಗಪಾರ್ಥಿವರಾಕ್ಷಸರ ಎಲ್ಲಾ ರತ್ನಗಳನ್ನು ತೆಗೆದುಕೊಂಡು ಬಹಳ ಸಂತುಷ್ಟರಾದರು.

ಯದಾ ನ ಪ್ರತಿಷೇದ್ಧಾರಸ್ತಯೋಃ ಸಂತೀಹ ಕೇಚನ ।
ನಿರುದ್ವಿಗ್ನೌ ತತೋ ಭೂತ್ವಾ ವಿಜಹ್ರಾತೇ ಯಥಾಽಮರೌ ॥೩॥

ಅವರು ಮಾಡುವ ಕಾರ್ಯಗಳನ್ನು ನಿಷೇಧಿಸುವವರು ಯಾರೂ ಇಲ್ಲದಿದ್ದಾಗ, ಅವರು ಉದ್ವೇಗರಹಿತರಾಗಿ ದೇವತೆಗಳಂತೆ ವಿಹರಿಸಿದರು.

ಸ್ತ್ರೀಭಿರ್ಮಾಲ್ಯೈಶ್ಚ ಗಂಧೈಶ್ಚ ಭಕ್ಷ್ಯಭೋಜ್ಯೈಶ್ಚ ಪುಷ್ಕಲೈಃ ।
ಪಾನೈಶ್ಚ ವಿವಿಧೈರನ್ನೈಃ ಪರಾಂ ಪ್ರೀತಿಮವಾಪತುಃ ॥೪॥

ಸ್ತ್ರೀಯರಿಂದಲೂ, ಮಾಲೆಗಳಿಂದಲೂ, ಸುಗಂಧದ್ರವ್ಯಗಳಿಂದಲೂ, ಪುಷ್ಕಳವಾದ ಭಕ್ಷ್ಯಭೋಜ್ಯಗಳಿಂದಲೂ ವಿವಿಧಪಾನಗಳಿಂದಲೂ ಅವರು ಬಹಳ ಸುಖವನ್ನು ಹೊಂದಿದರು.

ಅಂತಃಪುರೇ ವನೋದ್ಯಾನೇ ಪರ್ವತೋಪವನೇಷು ಚ ।
ಯಥೇಪ್ಸಿತೇಷು ದೇಶೇಷು ವಿಜಹ್ರಾತೇऽಮರಾವಿವ ॥೫॥

ಅವರು ಅಂತಃಪುರದಲ್ಲಿಯೂ, ಉದ್ಯಾನವನದಲ್ಲಿಯೂ, ಪರ್ವತದ ಸಮೀಪದ ವನಗಳಲ್ಲಿಯೂ, ಮತ್ತು ತಮಗೆ ಇಷ್ಟವಾದ ಬೇರೆಬೇರೆ ಪ್ರದೇಶಗಳಲ್ಲಿಯೂ ದೇವತೆಗಳಂತೆ ವಿಹರಿಸಿದರು.

ತತಃ ಕದಾಚಿದ್ ವಿಂಧ್ಯಸ್ಯ ಪೃಷ್ಠೋತ್ತಮಶಿಲಾತಳೇ ।
ಪುಷ್ಪಿತಾಗ್ರೇಷು ಸಾಲೇಷು ವಿಹಾರಮಭಿಜಗ್ಮತುಃ ॥೬॥

ಅವರು ಒಮ್ಮೆ ವಿಂಧ್ಯಪರ್ವತದ ತಪ್ಪಲಿನಲ್ಲಿ, ಒಂದು ಶಿಲಾತಳದಲ್ಲಿ ಕುಳಿತು ಅರಳಿದ ಸಾಲವೃಕ್ಷಗಳ ವನದಲ್ಲಿ ವಿಹಾರವನ್ನು ಮಾಡಿದರು.

ದಿವ್ಯೇಷು ಸರ್ವಕಾಮೇಷು ಸಮಾನೀತೇಷು ತತ್ರ ತೌ ।
ವರಾಸನೇಷು ಸಂಹೃಷ್ಟೌ ಸಹ ಸ್ತ್ರೀಭಿರ್ನಿಷೀದತುಃ ॥೭॥

ಅವರಿಗೆ ಪರಿಚಾರಕರು ದಿವ್ಯವಾದ ಇಷ್ಟಪದಾರ್ಥಗಳನ್ನು ತಂದುಕೊಡುತ್ತಿರಲು ಅವರು ಸಂತೋಷದಿಂದ ಶ್ರೇಷ್ಠವಾದ ಆಸನಗಳಲ್ಲಿ ಸ್ತ್ರೀಯರ ಜೊತೆಯಲ್ಲಿ ಕುಳಿತುಕೊಂಡರು.

ತತೋ ವಾದಿತ್ರನೃತ್ತಾಭ್ಯಾಮುಪಾತಿಷ್ಠಂಸ್ತತಃ ಸ್ತ್ರಿಯಃ ।
ಗೀತೈಶ್ಚ ಸ್ತುತಿಸಂಯುಕ್ತೈಃ ಪ್ರೀತ್ಯರ್ಥಮುಪಜಗ್ಮಿರೇ ॥೮॥

ಆಗ ಸ್ತ್ರೀಯರು ವಾದಿತ್ರನೃತ್ಯಗಳಿಂದಲೂ, ಸ್ತುತಿಸಂಯುಕ್ತವಾದ ಗೀತಗಳಿಂದಲೂ ಅವರ ಸಂತೋಷಕ್ಕಾಗಿ ಆರಾಧಿಸಿದರು.

ತತಸ್ತಿಲೋತ್ತಮಾ ತಸ್ಮಿನ್ ವನೇ ಪುಷ್ಪಾಣಿ ಚಿನ್ವತೀ ।
ವೇಷಮಾದೀಪ್ತಮಾಧಾಯ ರಕ್ತೇನೈಕೇನ ವಾಸಸಾ ॥೯॥

ನದೀತೀರೇಷು ಜಾತಾನ್ ಸಾ ಕರ್ಣಿಕಾರಾನ್ ಪ್ರಚಿನ್ವತೀ ।
ಶನೈರ್ಜಗಾಮ ತಂ ದೇಶಂ ಯತ್ರಾಸ್ತಾಂ ತೌ ಮಹಾಸುರೌ ॥೧೦॥

ಆಗ ತಿಲೋತ್ತಮೆಯು ಆ ವನದಲ್ಲಿ ಒಂದು ಕೆಂಪುವಸ್ತ್ರವನ್ನು ಉಟ್ಟು, ಬೆಳಗುವ ವೇಷವನ್ನು ಧರಿಸಿ, ನದೀತೀರದಲ್ಲಿ ಬೆಳೆದಿದ್ದ ಕರ್ಣಿಕಾರ ವೃಕ್ಷಗಳ ಹೂಗಳನ್ನು ಆರಿಸುತ್ತಾ, ಆ ಇಬ್ಬರು ಅಸುರರು ಕುಳಿತಿದ್ದ ಪ್ರದೇಶಕ್ಕೆ ಮೆಲ್ಲನೆ ಬಂದಳು.

ತೌ ತು ಪೀತ್ವಾ ಪರಂ ಪಾನಂ ಮದರಕ್ತಾಂತಲೋಚನೌ ।
ದೃಷ್ಟ್ವೈವ ತಾಂ ವರಾರೋಹಾಂ ವ್ಯಥಿತೌ ಸಂಬಭೂವತುಃ ॥೧೧॥

ಅವರಿಬ್ಬರೂ ಶ್ರೇಷ್ಠವಾದ ಪಾನವನ್ನು ಕುಡಿದು, ಮದದಿಂದ ಕೆಂಪಾದ ಕಣ್ಣುಳ್ಳವರಾಗಿ ಆ ಸುಂದರಿಯನ್ನು ನೋಡಿದ ತಕ್ಷಣವೇ, ವ್ಯಥೆಗೆ ಈಡಾದರು.

ತಾವಾಪ್ಲುತ್ಯಾಸನಂ ಹಿತ್ವಾ ಜಗ್ಮತುರ್ಯತ್ರ ಸಾ ಸ್ಥಿತಾ ।
ಉಭೌ ಚ ಕಾಮಸಂಪ್ರಾಪ್ತಾವುಭೌ ಪ್ರಾರ್ಥಯತಾಂ ಚ ತಾಮ್ ॥೧೨॥

ಅವರು ತಮ್ಮ ಆಸನಗಳಿಂದ ಹಾರಿ ಅವಳು ಇದ್ದ ಕಡೆಗೆ ಹೋಗಿ, ಇಬ್ಬರೂ ಅವಳನ್ನು ಕಾಮಿಸಿ ಪ್ರಾರ್ಥಿಸಿದರು.

ದಕ್ಷಿಣೇ ಚ ಕರೇ ಕ್ರೂರಃ ಸುಂದೋ ಜಗ್ರಾಹ ಪಾಣಿನಾ ।
ಉಪಸುಂದೋಽಪಿ ಜಗ್ರಾಹ ವಾಮೇ ಪಾಣೌ ತಿಲೋತ್ತಮಾಮ್ ॥

ತಿಲೋತ್ತಮೆಯನ್ನು ಕ್ರೂರನಾದ ಸುಂದನು ಅವಳ ದಕ್ಷಿಣಹಸ್ತದಲ್ಲಿ ಹಿಡಿದುಕೊಂಡನು. ಉಪಸುಂದನೂ ಸಹ ತಿಲೋತ್ತಮೆಯನ್ನು ವಾಮಹಸ್ತದಲ್ಲಿ ಹಿಡಿದುಕೊಂಡನು.

ವರಪ್ರದಾನಮತ್ತೌ ತಾವೌರಸೇನ ಬಲೇನ ಚ ।
ಧನರತ್ನಮದಾಭ್ಯಾಂ ಚ ಸುರಪಾನಮದೇನ ಚ ॥೧೪॥

ಅವರಿಬ್ಬರೂ ವರಪ್ರದಾನದಿಂದಲೂ, ಔರಸಬಲದಿಂದಲೂ, ಧನರತ್ನಗಳಿಂದಲೂ, ಸುರಾಪಾನದಿಂದಲೂ ಮದವನ್ನು ಹೊಂದಿದವರಾಗಿದ್ದರು.

ಸರ್ವೈರೇತೈರ್ಮದೈರ್ಮತ್ತಾವನ್ಯೋನ್ಯಭ್ರುಕುಟೀಕೃತೌ ।
ತೌ ಕಟಾಕ್ಷೇಣ ದೈತ್ಯೇಂದ್ರಾವಾಕರ್ಷತಿ ಮುಹುರ್ಮುಹುಃ ॥೧೫॥

ಈ ಎಲ್ಲಾ ಮದಗಳನ್ನು ಹೊಂದಿ, ಪರಸ್ಪರವಾಗಿ ಕ್ರೋಧದಿಂದ ಹುಬ್ಬನ್ನು ಗಂಟಿಕ್ಕಿದ ಅವರಿಬ್ಬರನ್ನೂ ತಿಲೋತ್ತಮೆಯು ತನ್ನ ಕಟಾಕ್ಷದಿಂದ ಮತ್ತೆಮತ್ತೆ ಸೆಳೆದಳು.

ದಕ್ಷಿಣೇನ ಕಟಾಕ್ಷೇಣ ಸುಂದಂ ಜಗ್ರಾಹ ಕಾಮಿನೀ ।
ವಾಮೇನೈವ ಕಟಾಕ್ಷೇಣ ಉಪಸುಂದಂ ಜಿಘೃಕ್ಷತೀ ॥೧೬॥

ಕಾಮಿನಿಯಾದ ಅವಳು ತನ್ನ ದಕ್ಷಿಣಕಟಾಕ್ಷದಿಂದ ಸುಂದನನ್ನು ಪರಿಗ್ರಹಿಸಿದಳು. ವಾಮಕಟಾಕ್ಷದಿಂದ ಉಪಸುಂದನನ್ನು ಪರಿಗ್ರಹಿಸಲು ಇಚ್ಛಿಸಿದಳು.

ಗಂಧಾಭರಣರೂಪೈಸ್ತೌ ವ್ಯಾಮೋಹಂ ಜಗ್ಮತುಸ್ತದಾ ।
ಮದಕಾಮಸಮಾವಿಷ್ಟಾವನ್ಯೋನ್ಯಮಿತಿ ಹೋಚತುಃ ॥೧೭॥

ಅವಳ ರೂಪದಿಂದಲೂ, ಅವಳ ಗಂಧ ಮತ್ತು ಆಭರಣಗಳಿಂದಲೂ ಅವರಿಬ್ಬರೂ ವ್ಯಾಮೋಹಕ್ಕೆ ಒಳಗಾದರು. ಮದದಿಂದಲೂ ಮತ್ತು ಕಾಮದಿಂದಲೂ ಪೂರ್ಣರಾದ ಅವರು ಪರಸ್ಪರವಾಗಿ ಹೀಗೆ ಮಾತನಾಡಿದರು.

ಮಮ ಭಾರ್ಯಾ ತವ ಗುರುರಿತಿ ಸುಂದೋಽಭ್ಯಭಾಷತ ।
ಮಮ ಭಾರ್ಯಾ ತವ ವಧೂರುಪಸುಂದೋಽಭ್ಯಭಾಷತ ॥೧೮॥

ಇವಳು ನನ್ನ ಪತ್ನಿ, ನಿನ್ನ ಅತ್ತಿಗೆ ಎಂದು ಸುಂದನು ಹೇಳಿದನು. ಇವಳು ನನ್ನ ಪತ್ನಿ, ನಿನ್ನ ಸೊಸೆ ಎಂದು ಉಪಸುಂದನು ಹೇಳಿದನು.

ನೈಷಾ ತವ ಮಮೈಷೇತಿ ತತ್ರ ತೌ ಮನ್ಯುರಾವಿಶತ್ ।
ತಸ್ಯಾ ಹೇತೋರ್ಗದೇ ಭೀಮೇ ತಾವುಭಾವಪ್ಯಗೃಹ್ಣತಾಮ್ ॥೧೯॥

ಇವಳು ನಿನ್ನವಳಲ್ಲ, ನನ್ನವಳೇ ಎಂದು ಹೇಳುತ್ತಿದ್ದ ಅವರಿಗೆ ಕ್ರೋಧವು ಉಂಟಾಯಿತು. ಅವಳ ಸಲುವಾಗಿ ಅವರಿಬ್ಬರೂ ಭಯಂಕರವಾದ ಗದೆಗಳನ್ನು ಎತ್ತಿಕೊಂಡರು.

ತೌ ಪ್ರಗೃಹ್ಯ ಗದೇ ಭೀಮೇ ತಸ್ಯಾಃ ಕಾಮೇನ ಮೋಹಿತೌ ।
ಅಹಂಪೂರ್ವಮಹಂಪೂರ್ವಮಿತ್ಯನ್ಯೋನ್ಯಂ ನಿಜಘ್ನತುಃ ॥೨೦॥

ಅವರಿಬ್ಬರೂ ಕಾಮಮೋಹಿತರಾಗಿ ಭಯಂಕರವಾದ ಗದೆಗಳನ್ನು ಎತ್ತಿಕೊಂಡು ನಾನು ಮೊದಲು, ನಾನು ಮೊದಲು ಎಂದು ಹೇಳುತ್ತಾ, ಪರಸ್ಪರವಾಗಿ ಹೊಡೆದಾಡಿ ಸತ್ತರು.

ತೌ ಗದಾನಿಹತೌ ಭೀಮೌ ಪೇತತುರ್ಧರಣೀತಳೇ ।
ರುಧಿರೇಣೈವ ಲಿಪ್ತಾಂಗೌ ದ್ವಾವಿವಾರ್ಕೌ ನಭಶ್ಚ್ಯುತೌ ॥೨೧॥

ಭಯಂಕರರಾದ ಅವರಿಬ್ಬರೂ ಗದಾಪ್ರಹಾರಕ್ಕೆ ಸಿಲುಕಿ, ರಕ್ತದಿಂದ ತೊಯ್ದದೇಹವುಳ್ಳವರಾಗಿ, ಆಕಾಶದಿಂದ ಬಿದ್ದ ಎರಡು ಸೂರ್ಯರಂತೆ ಭೂಮಿಯ ಮೇಲೆ ಬಿದ್ದರು.

ತತಸ್ತಾ ವಿದ್ರುತಾ ನಾರ್ಯಸ್ತೇ ಚ ದೈತ್ಯಗಣಾಸ್ತದಾ ।
ಪಾತಾಲಮಗಮನ್ ಸರ್ವೇ ವಿಷಾದಭಯಶಂಕಿತಾಃ ॥೨೨॥

ಆಗ ಅಲ್ಲಿದ್ದ ನಾರಿಯರು ಮತ್ತು ದೈತ್ಯರ ಸಮೂಹಗಳು ಅಲ್ಲಿಂದ ಓಡಿಹೋದವು. ವಿಷಾದ ಮತ್ತು ಭಯಗಳಿಂದ ಕೂಡಿದವರಾಗಿ ಅವರು ಪಾತಾಳಲೋಕಕ್ಕೆ ಹೋದರು.

ತತಃ ಪಿತಾಮಹಸ್ತತ್ರ ಸಹದೇವೈರ್ಮಹರ್ಷಿಭಿಃ ।
ಆಜಗಾಮ ವಿಶುದ್ಧಾತ್ಮಾ ಪೂಜಯಿಷ್ಯಂಸ್ತಿಲೋತ್ತಮಾಮ್ ॥೨೩॥

ಆಗ ವಿಶುದ್ಧಾತ್ಮರಾದ ಬ್ರಹ್ಮದೇವರು, ದೇವತೆಗಳು ಮತ್ತು ಋಷಿಗಳಿಂದ ಕೂಡಿಕೊಂಡು ತಿಲೋತ್ತಮೆಯನ್ನು ಸತ್ಕರಿಸಲು ಆ ಪ್ರದೇಶಕ್ಕೆ ಬಂದರು.

ವರೇಣ ಚ್ಛಂದಿತಾ ಸಾ ಚ ಭಗವತ್ಪ್ರೀತಿಮೇವ ಸಾ ।
ವರಯಾಮಾಸಾಥ ತತ್ಪ್ರೀತಾಂ ಪ್ರೀತಃ ಪ್ರಾಹ ಪಿತಾಮಹಃ ॥೨೪॥

ಬೇಕಾದ ವರವನ್ನು ಕೇಳು ಎಂದು ಬ್ರಹ್ಮದೇವರಿಂದ ಹೇಳಲ್ಪಟ್ಟ ಅವಳು, ಬ್ರಹ್ಮದೇವರ ಪ್ರೀತಿಯನ್ನೇ ವರವಾಗಿ ಬೇಡಿದಳು. ಆಗ ಬ್ರಹ್ಮದೇವರು ಸಂತೋಷದಿಂದ ಅವಳಿಗೆ ಹೀಗೆ ಹೇಳಿದರು.

ಆದಿತ್ಯಚರಿತಾಂಲ್ಲೋಕಾನ್ ವಿಚರಿಷ್ಯಸಿ ತೇಜಸಾ ।
ತೇಜಸೈವ ಸುಜುಷ್ಟಾಂ ತ್ವಾಂ ನ ಹರಿಷ್ಯತಿ ಕಶ್ಚನ ॥೨೫॥

ನೀನು ನಿನ್ನ ತೇಜಸ್ಸಿನಿಂದ ಸೂರ್ಯನು ಸಂಚರಿಸುವ ಲೋಕಗಳಲ್ಲಿ ಸಂಚರಿಸುವಿ. ಇಷ್ಟು ತೇಜಸ್ಸಿನಿಂದ ಕೂಡಿದ ನಿನ್ನನ್ನು ಯಾರೂ ಬಲಾತ್ಕಾರದಿಂದ ತೆಗೆದುಕೊಂಡು ಹೋಗುವುದಿಲ್ಲ.

ನಾರದಃ

ಏವಂ ತಸ್ಯೈ ವರಂ ದತ್ವಾ ಸರ್ವಲೋಕಪಿತಾಮಹಃ ।
ಇಂದ್ರೇ ತ್ರೈಲೋಕ್ಯಮಾಧಾಯ ಬ್ರಹ್ಮಲೋಕಂ ಗತಃ ಪ್ರಭುಃ ॥೨೬॥

ಸರ್ವಲೋಕಪಿತಾಮಹರಾದ ಬ್ರಹ್ಮದೇವರು ಹೀಗೆ ಅವಳಿಗೆ ವರವನ್ನು ಕೊಟ್ಟು, ಇಂದ್ರನಿಗೆ ತ್ರೈಲೋಕ್ಯಾಧಿಪತ್ಯವನ್ನು ಅನುಗ್ರಹಿಸಿ ಬ್ರಹ್ಮಲೋಕಕ್ಕೆ ಹೋದರು.

ಏವಂ ತೌ ಸಹಿತೌ ಭೂತ್ವಾ ಸರ್ವಾರ್ಥೇಷ್ವೇಕನಿಶ್ಚಯೌ ।
ತಿಲೋತ್ತಮಾರ್ಥೇ ಸಂಕ್ರುದ್ಧಾವನ್ಯೋನ್ಯಮಭಿಜಘ್ನತುಃ ॥೨೭॥

ಹೀಗೆ ಅವರಿಬ್ಬರೂ ಎಲ್ಲಾ ವಿಷಯಗಳಲ್ಲೂ ಸಮಾನವಾದ ನಿಶ್ಚಯವನ್ನು ಹೊಂದಿ ಜೊತೆಯಲ್ಲಿಯೇ ಇದ್ದರೂ, ತಿಲೋತ್ತಮೆಯ ಸಲುವಾಗಿ ಕ್ರುದ್ಧರಾಗಿ ಪರಸ್ಪರವಾಗಿ ಹೊಡದಾಡಿಕೊಂಡು ಮೃತರಾದರು.

ತಸ್ಮಾದ್ ಬ್ರವೀಮಿ ವಃ ಸ್ನೇಹಾತ್ ಸರ್ವಾನ್ ಭಾರತಸತ್ತಮಾನ್ ।
ಯಥಾ ವೋ ನಾತ್ರ ಭೇದಃ ಸ್ಯಾತ್ ಸರ್ವೇಷಾಂ ದ್ರೌಪದೀಕೃತೇ ॥೨೮॥

ತಥಾ ಕುರುತ ಭದ್ರಂ ವೋ ಮಮ ಚೇತ್ ಪ್ರಿಯಮಿಚ್ಛಥ ।
ಯಥಾ ಸುಂದೋಪಸುಂದಾಭ್ಯಾಂ ತಥಾ ನ ಸ್ಯಾದ್ ಯುಧಿಷ್ಠಿರ ॥೨೯॥

ಆದ್ದರಿಂದ ಭಾರತಶ್ರೇಷ್ಠರಾದ ನಿಮಗೆಲ್ಲರಿಗೂ ನಾನು ಪ್ರೀತಿಯಿಂದ ಹೇಳುತ್ತಿದ್ದೇನೆ. ದ್ರೌಪದಿಯ ವಿಷಯದಲ್ಲಿ ನಿಮ್ಮಲ್ಲಿ ವಿರೋಧ- ವುಂಟಾಗದಂತೆ ಪರಸ್ಪರವಾಗಿ ನಡೆದುಕೊಳ್ಳಿ. ನಿಮಗೆ ಮಂಗಳವಾಗಲಿ. ನನಗೆ ಪ್ರಿಯವಾದುದನ್ನು ಬಯಸುವುದಾದರೆ, ಹೀಗೆ ಮಾಡಬೇಕು. ಯುಧಿಷ್ಠಿರನೇ, ಸುಂದೋಪಸುಂದರಿಗೆ ಆದಂತೆ, ನಿಮಗೆ ಆಗಬಾರದು.

ಅವರಿಬ್ಬರೂ ಕಾಮಮೋಹಿತರಾಗಿ ಭಯಂಕರವಾದ ಗದೆಗಳನ್ನು ಎತ್ತಿಕೊಂಡು ನಾನು ಮೊದಲು, ನಾನು ಮೊದಲು ಎಂದು ಹೇಳುತ್ತಾ, ಪರಸ್ಪರವಾಗಿ ಹೊಡೆದಾಡಿ ಸತ್ತರು.

ತೌ ಗದಾನಿಹತೌ ಭೀಮೌ ಪೇತತುರ್ಧರಣೀತಳೇ ।
ರುಧಿರೇಣೈವ ಲಿಪ್ತಾಂಗೌ ದ್ವಾವಿವಾರ್ಕೌ ನಭಶ್ಚ್ಯುತೌ ॥೨೧॥

ಭಯಂಕರರಾದ ಅವರಿಬ್ಬರೂ ಗದಾಪ್ರಹಾರಕ್ಕೆ ಸಿಲುಕಿ, ರಕ್ತದಿಂದ ತೊಯ್ದದೇಹವುಳ್ಳವರಾಗಿ, ಆಕಾಶದಿಂದ ಬಿದ್ದ ಎರಡು ಸೂರ್ಯರಂತೆ ಭೂಮಿಯ ಮೇಲೆ ಬಿದ್ದರು.

ತತಸ್ತಾ ವಿದ್ರುತಾ ನಾರ್ಯಸ್ತೇ ಚ ದೈತ್ಯಗಣಾಸ್ತದಾ ।
ಪಾತಾಲಮಗಮನ್ ಸರ್ವೇ ವಿಷಾದಭಯಶಂಕಿತಾಃ ॥೨೨॥

ಆಗ ಅಲ್ಲಿದ್ದ ನಾರಿಯರು ಮತ್ತು ದೈತ್ಯರ ಸಮೂಹಗಳು ಅಲ್ಲಿಂದ ಓಡಿಹೋದವು. ವಿಷಾದ ಮತ್ತು ಭಯಗಳಿಂದ ಕೂಡಿದವರಾಗಿ ಅವರು ಪಾತಾಳಲೋಕಕ್ಕೆ ಹೋದರು.

ತತಃ ಪಿತಾಮಹಸ್ತತ್ರ ಸಹದೇವೈರ್ಮಹರ್ಷಿಭಿಃ ।
ಆಜಗಾಮ ವಿಶುದ್ಧಾತ್ಮಾ ಪೂಜಯಿಷ್ಯಂಸ್ತಿಲೋತ್ತಮಾಮ್ ॥೨೩॥

ಆಗ ವಿಶುದ್ಧಾತ್ಮರಾದ ಬ್ರಹ್ಮದೇವರು, ದೇವತೆಗಳು ಮತ್ತು ಋಷಿಗಳಿಂದ ಕೂಡಿಕೊಂಡು ತಿಲೋತ್ತಮೆಯನ್ನು ಸತ್ಕರಿಸಲು ಆ ಪ್ರದೇಶಕ್ಕೆ ಬಂದರು.

ವರೇಣ ಚ್ಛಂದಿತಾ ಸಾ ಚ ಭಗವತ್ಪ್ರೀತಿಮೇವ ಸಾ ।
ವರಯಾಮಾಸಾಥ ತತ್ಪ್ರೀತಾಂ ಪ್ರೀತಃ ಪ್ರಾಹ ಪಿತಾಮಹಃ ॥೨೪॥

ಬೇಕಾದ ವರವನ್ನು ಕೇಳು ಎಂದು ಬ್ರಹ್ಮದೇವರಿಂದ ಹೇಳಲ್ಪಟ್ಟ ಅವಳು, ಬ್ರಹ್ಮದೇವರ ಪ್ರೀತಿಯನ್ನೇ ವರವಾಗಿ ಬೇಡಿದಳು. ಆಗ ಬ್ರಹ್ಮದೇವರು ಸಂತೋಷದಿಂದ ಅವಳಿಗೆ ಹೀಗೆ ಹೇಳಿದರು.

ಆದಿತ್ಯಚರಿತಾಂಲ್ಲೋಕಾನ್ ವಿಚರಿಷ್ಯಸಿ ತೇಜಸಾ ।
ತೇಜಸೈವ ಸುಜುಷ್ಟಾಂ ತ್ವಾಂ ನ ಹರಿಷ್ಯತಿ ಕಶ್ಚನ ॥೨೫॥

ನೀನು ನಿನ್ನ ತೇಜಸ್ಸಿನಿಂದ ಸೂರ್ಯನು ಸಂಚರಿಸುವ ಲೋಕಗಳಲ್ಲಿ ಸಂಚರಿಸುವಿ. ಇಷ್ಟು ತೇಜಸ್ಸಿನಿಂದ ಕೂಡಿದ ನಿನ್ನನ್ನು ಯಾರೂ ಬಲಾತ್ಕಾರದಿಂದ ತೆಗೆದುಕೊಂಡು ಹೋಗುವುದಿಲ್ಲ.

ನಾರದಃ

ಏವಂ ತಸ್ಯೈ ವರಂ ದತ್ವಾ ಸರ್ವಲೋಕಪಿತಾಮಹಃ ।
ಇಂದ್ರೇ ತ್ರೈಲೋಕ್ಯಮಾಧಾಯ ಬ್ರಹ್ಮಲೋಕಂ ಗತಃ ಪ್ರಭುಃ ॥೨೬॥

ಸರ್ವಲೋಕಪಿತಾಮಹರಾದ ಬ್ರಹ್ಮದೇವರು ಹೀಗೆ ಅವಳಿಗೆ ವರವನ್ನು ಕೊಟ್ಟು, ಇಂದ್ರನಿಗೆ ತ್ರೈಲೋಕ್ಯಾಧಿಪತ್ಯವನ್ನು ಅನುಗ್ರಹಿಸಿ ಬ್ರಹ್ಮಲೋಕಕ್ಕೆ ಹೋದರು.

ಏವಂ ತೌ ಸಹಿತೌ ಭೂತ್ವಾ ಸರ್ವಾರ್ಥೇಷ್ವೇಕನಿಶ್ಚಯೌ ।
ತಿಲೋತ್ತಮಾರ್ಥೇ ಸಂಕ್ರುದ್ಧಾವನ್ಯೋನ್ಯಮಭಿಜಘ್ನತುಃ ॥೨೭॥

ಹೀಗೆ ಅವರಿಬ್ಬರೂ ಎಲ್ಲಾ ವಿಷಯಗಳಲ್ಲೂ ಸಮಾನವಾದ ನಿಶ್ಚಯವನ್ನು ಹೊಂದಿ ಜೊತೆಯಲ್ಲಿಯೇ ಇದ್ದರೂ, ತಿಲೋತ್ತಮೆಯ ಸಲುವಾಗಿ ಕ್ರುದ್ಧರಾಗಿ ಪರಸ್ಪರವಾಗಿ ಹೊಡದಾಡಿಕೊಂಡು ಮೃತರಾದರು.

ತಸ್ಮಾದ್ ಬ್ರವೀಮಿ ವಃ ಸ್ನೇಹಾತ್ ಸರ್ವಾನ್ ಭಾರತಸತ್ತಮಾನ್ ।
ಯಥಾ ವೋ ನಾತ್ರ ಭೇದಃ ಸ್ಯಾತ್ ಸರ್ವೇಷಾಂ ದ್ರೌಪದೀಕೃತೇ ॥೨೮॥

ತಥಾ ಕುರುತ ಭದ್ರಂ ವೋ ಮಮ ಚೇತ್ ಪ್ರಿಯಮಿಚ್ಛಥ ।
ಯಥಾ ಸುಂದೋಪಸುಂದಾಭ್ಯಾಂ ತಥಾ ನ ಸ್ಯಾದ್ ಯುಧಿಷ್ಠಿರ ॥೨೯॥

ಆದ್ದರಿಂದ ಭಾರತಶ್ರೇಷ್ಠರಾದ ನಿಮಗೆಲ್ಲರಿಗೂ ನಾನು ಪ್ರೀತಿಯಿಂದ ಹೇಳುತ್ತಿದ್ದೇನೆ. ದ್ರೌಪದಿಯ ವಿಷಯದಲ್ಲಿ ನಿಮ್ಮಲ್ಲಿ ವಿರೋಧ- ವುಂಟಾಗದಂತೆ ಪರಸ್ಪರವಾಗಿ ನಡೆದುಕೊಳ್ಳಿ. ನಿಮಗೆ ಮಂಗಳವಾಗಲಿ. ನನಗೆ ಪ್ರಿಯವಾದುದನ್ನು ಬಯಸುವುದಾದರೆ, ಹೀಗೆ ಮಾಡಬೇಕು. ಯುಧಿಷ್ಠಿರನೇ, ಸುಂದೋಪಸುಂದರಿಗೆ ಆದಂತೆ, ನಿಮಗೆ ಆಗಬಾರದು.

ವೈಶಂಪಾಯನಃ

ಏವಮುಕ್ತಾ ಮಹಾತ್ಮಾನೋ ನಾರದೇನ ಮಹರ್ಷಿಣಾ ।
ಸಮಯಂ ಚಕ್ರಿರೇ ರಾಜಂಸ್ತೇऽನ್ಯೋನ್ಯೇನ ಸಮಾಗತಾಃ ।
ಸಮಕ್ಷಂ ತಸ್ಯ ದೇವರ್ಷೇರ್ನಾರದಸ್ಯಾಮಿತೌಜಸಃ ॥೩೧॥

ರಾಜನೇ, ಮಹರ್ಷಿಗಳಾದ ನಾರದರು ಹೀಗೆ ಹೇಳಿದಾಗ, ಮಹಾನುಭಾವರಾದ ಅವರು ಪರಸ್ಪರವಾಗಿ ಸಮಾಲೋಚನೆಯನ್ನು ಮಾಡಿ, ಅಮಿತ ತೇಜಸ್ಸುಳ್ಳ ದೇವರ್ಷಿಗಳಾದ ನಾರದರ ಎದುರಿಗೆ ನಿಯಮವನ್ನು ಮಾಡಿಕೊಂಡರು.

ಏಕೈಕಸ್ಯ ಗೃಹೇ ಕೃಷ್ಣಾ ವಸೇದ್ ವರ್ಷಮಕಲ್ಮಷಾ ।
ದ್ರೌಪದ್ಯಾ ಚ ಸಮಾಸೀನಮನ್ಯೋನ್ಯಂ ಯೋ ವಿದರ್ಶಯೇತ್ ।
ಸ ನೋ ದ್ವಾದಶ ವೈ ಮಾಸಾನ್ ವ್ರತಚಾರೀ ವನೇ ವಸೇತ್ ॥೩೨॥

ಒಬ್ಬೊಬ್ಬರ ಮನೆಯಲ್ಲಿ ನಿಷ್ಕಲ್ಮಷಳಾದ ಕೃಷ್ಣೆಯ ಒಂದೊಂದು ವರ್ಷ ವಾಸಮಾಡಬೇಕು. ದ್ರೌಪದಿಯ ಜೊತೆಯಲ್ಲಿ ಏಕಾಂತದಲ್ಲಿ ಕುಳಿತಿರುವವನನ್ನು ಯಾರಾದರೂ ನೋಡಿದರೆ, ಅವನು ಹನ್ನೆರಡು ತಿಂಗಳುಗಳ ಕಾಲ ವ್ರತವನ್ನು ಧಾರಣೆಮಾಡಿ ಕಾಡಿನಲ್ಲಿ ವಾಸಿಸಬೇಕು. (ಬ್ರಹ್ಮಚಾರೀ ವನೇ ವಸೇತ್ ಎಂಬ ಪಾಠವೂ ಇದೆ).

ಕೃತೇ ಚ ಸಮಯೇ ತಸ್ಮಿನ್ ಪಾಂಡವೈರ್ಧರ್ಮಚಾರಿಭಿಃ ।
ತತಃ ಸ ಭಗವಾಂಸ್ತತ್ರ ಪಾಂಡವೈರರ್ಚಿತಃ ಪ್ರಭುಃ ॥೩೩॥

ನಿರ್ಯಯೌ ಸುಶುಭೇ ಕಾಲೇ ಇಂದ್ರಪ್ರಸ್ಥಾನ್ಮಹಾತಪಾಃ ।
ನಾರದೋऽಪ್ಯಗಮತ್ ಪ್ರೀತ ಇಷ್ಟಂ ದೇಶಂ ಮಹಾನೃಷಿಃ ॥೩೪॥

ಧರ್ಮಚಾರಿಗಳಾದ ಪಾಂಡವರು ಹೀಗೆ ನಿಯಮವನ್ನು ಮಾಡಿಕೊಳ್ಳುತ್ತಿರಲು ಪೂಜ್ಯರಾದ, ಮಹಾತಪಸ್ವಿಗಳಾದ ನಾರದರು ಪಾಂಡವರಿಂದ ಅರ್ಚಿತರಾಗಿ, ಇಂದ್ರಪ್ರಸ್ಥದಿಂದ ಶುಭಮುಹೂರ್ತದಲ್ಲಿ ಹೊರಟುಹೋದರು. ಮಹರ್ಷಿಗಳಾದ ನಾರದರು ಸಂತೋಷದಿಂದ ತಮಗೆ ಇಷ್ಟವಾದ ದೇಶಕ್ಕೆ ಹೊರಟರು.

ಏವಂ ತೈಃ ಸಮಯಃ ಪೂರ್ವಂ ಕೃತೋ ನಾರದಚೋದಿತೈಃ ।
ಯೇನ ಭೇದಂ ನ ಜಗ್ಮುಸ್ತೇ ತದಾऽನ್ಯೋನ್ಯೇನ ಭಾರತ ॥೩೫॥

ಹೀಗೆ ಅವರು ನಾರದರಿಂದ ಪ್ರೇರಿಸಲ್ಪಟ್ಟು ನಿಯಮವನ್ನು ಮಾಡಿದರು. ಭಾರತನೇ, ಆ ಕಾರಣದಿಂದ ಅವರಿಗೆ ಪರಸ್ಪರವಾಗಿ ವಿರೋಧ- ವುಂಟಾಗಲಿಲ್ಲ.

ಏತದ್ ವಿಸ್ತರಶಃ ಸರ್ವಮಾಖ್ಯಾತಂ ತೇ ನರೇಶ್ವರ ।
ಕಾಲೇ ಚ ತಸ್ಮಿನ್ ಸಂಪನ್ನಂ ಯಥಾವದ್ಜನಮೇಜಯ ॥೩೬॥

ಜನಮೇಜಯರಾಜನೇ, ಆ ಕಾಲದಲ್ಲಿ ನಡೆದ ಈ ಘಟನೆಗಳೆಲ್ಲವನ್ನೂ ನಿನಗೆ ವಿಸ್ತಾರವಾಗಿ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಚತುರ್ದಶಾಧಿಕದ್ವಿಶತತಮೋऽಧ್ಯಾಯಃ ॥
॥ ಇತಿ ರಾಜ್ಯಲಾಭಪರ್ವಣಿ ಷಷ್ಠೋऽಧ್ಯಾಯಃ ॥

॥ ರಾಜ್ಯಲಾಭಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ರಾಜ್ಯಲಾಭಪರ್ವವು ಮುಗಿಯಿತು.

★ ★ ★ ★

೧೫. ಅರ್ಜುನವನವಾಸಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ತತಃ ಕದಾಚಿದ್ ಧರ್ಮರಾಜೇನ ಯುಕ್ತಾಂ
ಶಸ್ತ್ರಾಗಾರೇ ವಿಪ್ರಗೋರಕ್ಷಣಾರ್ಥಂ ।
ಶಸ್ತ್ರಾದಿತ್ಸುಃ ಫಲ್ಗುನೋಽದ್ರಾಕ್ಸ ಶಸ್ತ್ರೈ
ರ್ದಸ್ಯೂನ್ ಹತ್ವಾ ತೀರ್ಥಯಾತ್ರೋನ್ಮುಖೋಽಭೂತ್ ॥೧೫॥

ಬಳಿಕ ಒಮ್ಮೆ ಅರ್ಜುನ ಒಬ್ಬ ಬ್ರಾಹ್ಮಣನ ಗೋರಕ್ಷಣೆಗಾಗಿ ಶಸ್ತ್ರವನ್ನು ತೆಗೆಯಲು ಬಂದವನು ಅಲ್ಲಿ ದ್ರೌಪದಿ ಧರ್ಮರಾಜನ ಜೊತೆಗಿದ್ದುದನ್ನು ಕಂಡ. ಶಸ್ತ್ರದಿಂದ ಕಳ್ಳರನ್ನು ಕೊಂದ ಬಳಿಕ, ತೀರ್ಥಯಾತ್ರೆಗೆ ಹೊರಟ.

ಇನ್ನೂರ ಹದಿನೈದನೆಯ ಅಧ್ಯಾಯ

(ಆಯುಧಾಗಾರದಲ್ಲಿದ್ದ ಧರ್ಮರಾಜ ದ್ರೌಪದಿ, ಬ್ರಾಹ್ಮಣನ ಗೋರಕ್ಷಣೆಗಾಗಿ ಅರ್ಜುನ ಅಲ್ಲಿಗೆ ಬಂದುದು, ಧರ್ಮರಾಜರನ್ನು ನೋಡಿ, ಅರ್ಜುನನ ವನವಾಸ ನಿಶ್ಚಯ.)

ವೈಶಂಪಾಯನಃ

ಏವಂ ತೇ ಸಮಯಂ ಕೃತ್ವಾ ನ್ಯವಸಂಸ್ತತ್ರ ಪಾಂಡವಾಃ ।
ವಶೇ ಶಸ್ತ್ರಪ್ರತಾಪೇನ ಕುರ್ವಂತೋಽನ್ಯಾನ್ ಮಹೀಕ್ಷಿತಃ ॥೧॥

ಆ ಪಾಂಡವರು ಹೀಗೆ ನಿಯಮವನ್ನು ಮಾಡಿಕೊಂಡು ತಮ್ಮ ಶಸ್ತ್ರಪ್ರತಾಪದಿಂದ ಉಳಿದ ರಾಜರನ್ನೆಲ್ಲಾ ವಶದಲ್ಲಿಟ್ಟುಕೊಳ್ಳುತ್ತಾ ಅಲ್ಲಿ ವಾಸಮಾಡಿದರು.

ತೇಷಾಂ ಮನುಜಸಿಂಹಾನಾಂ ಪಂಚಾನಾಮಮಿತೌಜಸಾಮ್ ।
ಬಭೂವ ಕೃಷ್ಣಾ ಪಂಚಾನಾಂ ದಯಿತಾ ವಶವರ್ತಿನೀ ॥೨॥

ಅಮಿತಪರಾಕ್ರಮಿಗಳಾದ ಆ ಐದೂ ಮನುಜಸಿಂಹರಿಗೆ ಕೃಷ್ಣೆಯು ವಶವರ್ತಿನಿಯಾಗಿ ಅತ್ಯಂತ ಪ್ರಿಯಳಾದಳು.

ತೇ ತಯಾ ತೈಶ್ಚ ಸಾ ವೀರೈಃ ಪತಿಭಿಃ ಸಹ ಪಂಚಭಿಃ ।
ಬಭೂವ ಪರಮಪ್ರೀತಾ ನಾಗೈರಿವ ಸರಸ್ವತೀ ॥೩॥

ಅವಳಿಂದ ಅವರು ಮತ್ತು ಆ ಐವರು ಪತಿಗಳಿಂದ ಅವಳೂ ಸಹ ಗಜಗಳಿಂದ ಸರೋವರವು ಸೇರಿದಂತೆ ಸೇರಿ, ಬಹಳ ಸಂತೋಷಗೊಂಡರು.

ವರ್ತಮಾನೇಷು ಧರ್ಮೇಣ ಪಾಂಡವೇಷು ಮಹಾತ್ಮಸು ।
ನಾಮರ್ಷನ್ ಕುರವಃ ಸರ್ವೇ ಹೀನದೋಷಾನ್ ಸುಖಾನ್ವಿತಾನ್ ॥೪॥

ನಿರ್ದುಷ್ಟರಾಗಿ, ಸುಖಾನ್ವಿತರಾಗಿ, ಮಹಾತ್ಮರಾದ ಪಾಂಡವರು ಧರ್ಮವನ್ನು ಆಚರಿಸುತ್ತಿರಲು ಎಲ್ಲಾ ಕುರುಗಳೂ ಸಹಿಸಲಿಲ್ಲ.

ಅಥ ದೀರ್ಘೇಣ ಕಾಲೇನ ಬ್ರಾಹ್ಮಣಸ್ಯ ವಿಶಾಂಪತೇ ।
ಕಸ್ಯಚಿತ್ ತಸ್ಕರಾಃ ಕೇಚಿಜ್ಜಹ್ರುರ್ಗಾ ನೃಪಸತ್ತಮ ॥೫॥

ರಾಜನೇ, ಎಷ್ಟೋ ಸಮಯವಾದ ಮೇಲೆ ಒಂದು ದಿನ ಕಳ್ಳರು ಒಬ್ಬ ಬ್ರಾಹ್ಮಣನ ಗೋವುಗಳನ್ನು ಕದ್ದರು.

ಹ್ರಿಯಮಾಣೇ ಧನೇ ತಸ್ಮಿನ್ ಬ್ರಾಹ್ಮಣಃ ಕ್ರೋಧಮೂರ್ಚ್ಛಿತಃ ।
ಆಗಮ್ಯ ಖಾಂಡವಪ್ರಸ್ಥಮುದಕ್ರೋಶತ್ ಪಾಂಡವಾನ್ ॥೬॥

ತನ್ನ ಧನವು ಅಪಹರಿಸಲ್ಪಡುತ್ತಿರಲು ಕ್ರೋಧಗೊಂಡ ಆ ಬ್ರಾಹ್ಮಣನು ಖಾಂಡವಪ್ರಸ್ಥಕ್ಕೆ ಬಂದು ಪಾಂಡವರ ಸಮೀಪದಲ್ಲಿ ಕೂಗಾಡಿದನು.

ಹ್ರಿಯತೇ ಗೋಧನಂ ಕ್ಷುದ್ರೈರ್ನಶಂಸೈರಕೃತಾತ್ಮಭಿಃ ।
ಪ್ರಗೃಹ್ಯ ವೋಽಸ್ಮದ್ವಿಷಯಾದಭಿಧಾವಂತಿ ಪಾಂಡವಾಃ ॥೭॥

ದುಷ್ಟರೂ, ಕ್ರೂರರೂ ಮತ್ತು ಅಲ್ಪರೂ ಆದ ಇವರು ನನ್ನ ಗೋಧನವನ್ನು ತೆಗೆದುಕೊಂಡು, ಈ ನಮ್ಮ ರಾಜ್ಯದಿಂದ ಹೊರಗೆ ಓಡುತ್ತಿದ್ದಾರೆ.

ಬ್ರಾಹ್ಮಣಸ್ಯಪ್ರಮತ್ತಸ್ಯ ಹವಿರ್ಧ್ವಾಂಕ್ಷೈರ್ವಿಲುಪ್ಯತೇ ।
ಶಾರ್ದೂಲಸ್ಯ ಗೃಹಾಂ ಶೂನ್ಯಾಂ ನೀಚಃ ಕ್ರೋಷ್ಟಾಭಿಮನ್ಯತೇ ॥೮॥

ಎಚ್ಚರಿಕೆಯಿಂದಿರುವ ಬ್ರಾಹ್ಮಣನ ಹವಿಸ್ಸನ್ನು ಕಾಗೆಗಳು ಬೆಲ್ಲಾಡುತ್ತಿವೆ. ಶೂನ್ಯವಾದ ವ್ಯಾಘ್ರದ ಗುಹೆಯಲ್ಲಿ ನೀಚವಾದ ನರಿಯು ತನ್ನದೆಂದು ಯೋಚಿಸುತ್ತಿದೆ.

ಬ್ರಾಹ್ಮಣಸ್ವೇ ಹೃತೇ ಚೋರೈರ್ಧರ್ಮಾರ್ಥೌ ಚ ವಿಲೋಪಿತೌ ।
ರೋರೂಯಮಾಣೇ ಚ ಮಯಿ ಕ್ರಿಯತಾಮಸ್ತ್ರಧಾರಣಮ್ ॥೯॥

ಚೋರರು ಬ್ರಾಹ್ಮಣಸ್ವತ್ತನ್ನು ಅಪಹರಿಸಿದರೆ ಧರ್ಮಾರ್ಥಗಳು ವಿನಾಶವನ್ನು ಹೊಂದುತ್ತವೆ. ನಾನು ಮತ್ತೆ ಮತ್ತೆ ಅಳುತ್ತಿರುವ ಈ ಸಮಯದಲ್ಲಿ ನೀವು ಶಸ್ತ್ರವನ್ನು ಧರಿಸಿ.

ವೈಶಂಪಾಯನಃ

ರೋರೂಯಮಾಣಸ್ಯಾಭ್ಯಾಶೇ ಭೃಶಂ ವಿಪ್ರಸ್ಯ ಪಾಂಡವಃ ।
ತಾನಿ ವಾಕ್ಯಾನಿ ಶುಶ್ರಾವ ಕುಂತೀಪುತ್ರೋ ಧನಂಜಯಃ ॥೧೦॥

ಮತ್ತೆ ಮತ್ತೆ ಅಳುತ್ತಿದ್ದ ಆ ಬ್ರಾಹ್ಮಣನ ಸಮೀಪದಲ್ಲಿದ್ದ ಕುಂತೀಪುತ್ರನಾದ ಧನಂಜಯನು ಆ ಮಾತುಗಳನ್ನು ಕೇಳಿದನು.

ಶ್ರುತ್ವಾರ್ಜುನೋ ಮಹಾಬಾಹುರ್ಭಾ ಭೈರಿತ್ಯಾಹ ತಂ ದ್ವಿಜಮ್ ।
ಆಯುಧಾನಿ ಚ ಯತ್ರಾಸನ್ ಪಾಂಡವಾನಾಂ ಮಹಾತ್ಮನಾಮ್ ॥೧೧॥

ಕೃಷ್ಣಯಾ ಸಹ ತತ್ರಾಸೀದ್ ಧರ್ಮಪುತ್ರೋ ಯುಧಿಷ್ಠಿರಃ ।
ಸ ಪ್ರವೇಶಾಯ ಚಾಶಕ್ತೋ ಗಂತುಮಿಚ್ಛಂಶ್ಚ ಪಾಂಡವಃ ॥೧೨॥

ಮಹಾಬಾಹುವಾದ ಅರ್ಜುನನು ಆ ಮಾತುಗಳನ್ನು ಕೇಳಿ ಬ್ರಾಹ್ಮಣನಿಗೆ ಹೆದರಬೇಡ ಎಂದು ಹೇಳಿದನು. ಮಹಾನುಭಾವರಾದ ಪಾಂಡವರ ಆಯುಧಗಳು

ಇದ್ದಸ್ಥಳದಲ್ಲಿ ಧರ್ಮರಾಜನು ಕೃಷ್ಣೆಯ ಜೊತೆಯಲ್ಲಿ ಏಕಾಂತದಲ್ಲಿದ್ದನು. ಅರ್ಜುನನು ಒಳಗೆ ಹೋಗಬೇಕೆಂದು ಇಚ್ಛಿಸಿದರೂ, ಪ್ರವೇಶಿಸಲು ಶಕ್ತನಾಗಲಿಲ್ಲ.

ತಸ್ಯ ಚಾರ್ತಸ್ಯ ತೈರ್ವಾಕ್ಯೈಶ್ಚೋದ್ಯಮಾನಃ ಪುನಃ ಪುನಃ ।
ಆಕ್ರಂದೇನ ಚ ಕೌಂತೇಯಶ್ಚಿಂತಯಾಮಾಸ ದುಃಖಿತಃ ॥೧೩॥

ಆ ಬ್ರಾಹ್ಮಣನ ಆರ್ತನಾದದಿಂದಲೂ, ಆ ವಾಕ್ಯಗಳಿಂದಲೂ, ಪ್ರೇರಿತನಾದ ಅರ್ಜುನನು ದುಃಖದಿಂದ ಕೂಡಿ ಚಿಂತಿಸಿದನು.

ಹ್ರಿಯಮಾಣೇ ಧನೇ ತಸ್ಮಿನ್ ಬ್ರಾಹ್ಮಣಸ್ಯ ತಪಸ್ವಿನಃ ।
ಉಪಪ್ರೇಕ್ಷಣಜೋಽಧರ್ಮಃ ಸುಮಹಾನ್ ಸ್ಯಾನ್ಮಹೀಪತೇಃ ॥೧೪॥

ತಪಸ್ವಿಯಾದ ಬ್ರಾಹ್ಮಣನ ಧನವನ್ನು ಅಪಹರಿಸುತ್ತಿರುವಾಗ ಉದಾಸೀನವನ್ನು ಮಾಡಿದರೆ, ರಾಜನಿಗೆ ದೊಡ್ಡ ಅಧರ್ಮವುಂಟಾಗುತ್ತದೆ.

ಆಸ್ರಪ್ರಮಾರ್ಜನಂ ತಸ್ಯ ಕರ್ತವ್ಯಮಿತಿ ನಿಶ್ಚಯಃ ।
ಯದ್ಯಸ್ಯ ಕುರವೋ ದ್ವಾರಿ ನ ಕರೋಮ್ಯದ್ಯ ಕರ್ಷಣಮ್ ॥೧೫॥

ನಾಸ್ತಿಕ್ಯಂ ಚಾಪಿ ಸರ್ವೇಷಾಮಸ್ಮಾಕಂ ಸ್ಯಾದಧರ್ಮಜಮ್ ।
ಪ್ರತಿತಿಷ್ಠೇತ ಲೋಕೇಽಸ್ಮಿನ್ನಧರ್ಮಶ್ಚೈವ ನೋ ಮಹಾನ್ ॥೧೬॥

ಬ್ರಾಹ್ಮಣನ ಕಣ್ಣೀರನ್ನು ಒರೆಸಬೇಕೆಂಬುದು ನಿಶ್ಚಯ. ನಮ್ಮ ಮನೆಯ ಬಾಗಿಲಿನಲ್ಲಿ ಕೇಳಿ ಬರುವ ಬ್ರಾಹ್ಮಣನ ಈ ಆರ್ತನಾದವನ್ನು ನಿವಾರಣೆ ಮಾಡದಿದ್ದರೆ, ನಮ್ಮೆಲ್ಲರಿಗೂ ಅಧರ್ಮದಿಂದ ಉಂಟಾದ ನಾಸ್ತಿಕ್ಯವು ಉಂಟಾಗುತ್ತದೆ. ಅಧರ್ಮದಿಂದ ಉಂಟಾದ ದೊಡ್ಡ ಅಪಕೀರ್ತಿಯು ಈ ಲೋಕದಲ್ಲಿ ಶಾಶ್ವತವಾಗಿ ಪ್ರತಿಷ್ಠಿತವಾಗುತ್ತದೆ.

ಅನಾಪೃಚ್ಛ್ಯೈವ ರಾಜಾನಂ ಗತೇ ಮಯಿ ನ ಸಂಶಯಃ ।
ಅಜಾತಶತ್ರೋರ್ನೃಪತೇರ್ಮಮ ಚೈವಾಪ್ರಿಯಂ ಭವೇತ್ ॥೧೭॥

ನಾನು ರಾಜನ ಅನುಮತಿಯನ್ನು ಪಡೆಯದೇ ಒಳಗೆ ಹೋಗಲು ಅದು ಧರ್ಮರಾಜನಿಗೂ ಮತ್ತು ನನಗೂ ಅಪ್ರಿಯವಾಗುತ್ತದೆ.

ಅನುಪ್ರವೇಶೇ ರಾಜ್ಞೋ ವಾ ವನವಾಸೋ ಭವೇನ್ಮಮ ।
ಅಧರ್ಮೋ ವೈ ಮಹಾನಸ್ತು ವನೇ ವಾ ಮರಣಂ ಮಮ ॥೧೮॥

ನಾನು ಒಳಗೆ ಪ್ರವೇಶಮಾಡಿದರೆ, ನನಗೆ ವನವಾಸವುಂಟಾಗುತ್ತದೆ. ದೊಡ್ಡ ಅಧರ್ಮವಾದರೂ ಆಗಲಿ, ನನಗೆ ಕಾಡಿನಲ್ಲಿ ಮರಣವೇ ಬೇಕಾದರೂ ಆಗಲಿ.

ಶರೀರಸ್ಯಾಪಿ ನಾಶಾತ್ ತು ಧರ್ಮ ಏವ ವಿಶಿಷ್ಯತೇ ।
ಏವಂ ವಿನಿಶ್ಚಿತ್ಯ ತತಃ ಕುಂತೀಪುತ್ರೋ ಧನಂಜಯಃ ॥೧೯॥

ಅನುಪ್ರವಿಶ್ಯ ರಾಜಾನಮಭಿವಾದ್ಯ ವಿನಿಃಸೃತಃ ।
ಧನುರಾದಾಯ ಸಂಹೃಷ್ಟೋ ಬ್ರಾಹ್ಮಣಂ ಪ್ರತ್ಯಭಾಷತ ॥೨೦॥

ಶರೀರದ ನಾಶಕ್ಕಿಂತಲೂ ಧರ್ಮವೇ ಶ್ರೇಷ್ಠವಾದುದು. ಕುಂತೀಪುತ್ರನಾದ ಧನಂಜಯನು ಹೀಗೆ ಆಲೋಚಿಸಿ, ಆಯುಧಾಗಾರದ ಒಳಗೆ ಹೋಗಿ ರಾಜನಿಗೆ ನಮಸ್ಕಾರವನ್ನು ಮಾಡಿ, ಧನುಸ್ಸನ್ನು ತೆಗೆದುಕೊಂಡು ಹೊರಗೆ ಬಂದು ಬ್ರಾಹ್ಮಣನನ್ನು ಕುರಿತು ಸಂತೋಷದಿಂದ ಹೀಗೆ ಹೇಳಿದನು.

ಬ್ರಾಹ್ಮಣಾಗಮ್ಯತಾಂ ಶೀಘ್ರಂ ಯಾವತ್ ಪರಧನೈಷಿಣಃ ।
ನ ದೂರಾದ್ ಭವತಃ ಕ್ಷುದ್ರಾಸ್ತಾವದ್ ಗಚ್ಛಾವಹೇ ಸಹ ।
ಯಾವದಾವರ್ತಯಾಮ್ಯದ್ಯ ಚೋರಹಸ್ತಾದ್ ಧನಂ ತವ ॥೨೧॥

ಬ್ರಾಹ್ಮಣನೇ, ಬೇಗ ನನ್ನ ಜೊತೆಯಲ್ಲಿ ಬಾ. ಇನ್ನೊಬ್ಬರ ಧನವನ್ನು ಬಯಸುವ ಕ್ಷುದ್ರರು ನಿನ್ನ ಮನೆಯಿಂದ ದೂರಹೋಗುವುದರೊಳಗೆ ನಾವು ಜೊತೆಯಲ್ಲಿ ಹೋಗೋಣ. ನಾನು ಈ ದಿನ ನಿನ್ನ ಗೋಧನವನ್ನು ಕಳ್ಳರ ಕೈಯಿಂದ ಕಸಿದು, ನಿನಗೆ ಒಪ್ಪಿಸುತ್ತೇನೆ.

ಸೋಽನುಸೃತ್ಯ ಮಹಾಬಾಹುರ್ಧನ್ವೀ ವರ್ಮೀ ರಥೀ ಧ್ವಜೀ ।
ಶರೈರ್ವಿಧ್ವಸ್ಯ ತಾಂಶ್ಚೋರಾನಪಜಿತ್ಯ ಚ ತದ್ಧನಮ್ ॥೨೨॥

ಬ್ರಾಹ್ಮಣಸ್ಯ ಉಪಾಕೃತ್ಯ ಯಶಃ ಪೀತ್ವಾ ಚ ಪಾಂಡವಃ ।
ಆಜಗಾಮ ಪುರಂ ವೀರಃ ಸವ್ಯಸಾಚೀ ಪರಂತಪಃ ॥೨೩॥

ಮಹಾಬಾಹುವಾದ ಪಾಂಡವನು ಧನುಸ್ಸನ್ನು ಹಿಡಿದು ಕವಚವನ್ನು ಧರಿಸಿ, ಧ್ವಜವುಳ್ಳ ರಥವನ್ನೇರಿ, ಕಳ್ಳರನ್ನು ಹಿಂಬಾಲಿಸಿ, ಬಾಣಗಳಿಂದ ಕಳ್ಳರನ್ನು ಧ್ವಂಸಗೊಳಿಸಿ ಬ್ರಾಹ್ಮಣನ ಧನವನ್ನು ತೆಗೆದುಕೊಂಡು ಅಪಾರವಾದ ಕೀರ್ತಿಯನ್ನು ಗಳಿಸಿ, ಬ್ರಾಹ್ಮಣನಿಗೆ ಗೋಧನವನ್ನು ಕೊಟ್ಟು, ಪರಂತಪನೂ, ಸವ್ಯಸಾಚಿಯೂ ಆದ ಆ ವೀರನು, ಇಂದ್ರಪ್ರಸ್ಥಪಟ್ಟಣಕ್ಕೆ ಹಿಂದಿರುಗಿದನು.

ಸೋಽಭಿವಾದ್ಯ ಗುರೂನ್ ಸರ್ವಾಂಸ್ತೈಶ್ಚಾಪಿ ಪ್ರತಿನಂದಿತಃ ।
ಧರ್ಮರಾಜಮುವಾಚೇದಂ ವ್ರತಮಾದಿಶ್ಯತಾಂ ಮಮ ॥೨೪॥

ಅವನು ಹಿರಿಯರಿಗೆಲ್ಲಾ ನಮಸ್ಕರಿಸಿ, ಅವರಿಂದ ಅಭಿನಂದಿತನಾಗಿ, ಧರ್ಮರಾಜನನ್ನು ಕುರಿತು, ನನಗೆ ವ್ರತವನ್ನು ಆದೇಶ ಮಾಡು ಎಂದು ಹೇಳಿದನು.

ಸಮಯಃ ಸಮತಿಕ್ರಾಂತೋ ಭವತ್ಸಂದರ್ಶನಾನ್ಮಮ ।
ವನವಾಸಂ ಗಮಿಷ್ಯಾಮಿ ಸಮಯೋ ಹ್ಯೇಷ ನಃ ಕೃತಃ ॥೨೫॥

ನಾನು ನಿಮ್ಮನ್ನು ನೋಡಿದ್ದರಿಂದ, ನಾವು ಮಾಡಿಕೊಂಡ ನಿಯಮವನ್ನು ಮುರಿದಿದ್ದೇನೆ. ನಾನು ವನವಾಸಕ್ಕೆ ಹೋಗುವೆನು. ಏಕೆಂದರೆ, ನಾವು ಹೀಗೆಯೇ ನಿಯಮವನ್ನು ಮಾಡಿದ್ದೇವಷ್ಟೇ.

ಇತ್ಯುಕ್ತೋ ಧರ್ಮರಾಜಸ್ತು ಸಹಸಾ ವಾಕ್ಯಮಬ್ರವೀತ್ ।
ಕಥಮಿತ್ಯಬ್ರವೀದ್ ವಾಚಾ ಶೋಕಾರ್ತಃ ಸಜ್ಜಮಾನಯಾ ॥೨೬॥

ಅರ್ಜುನನು ಹೀಗೆ ಹೇಳಿದಾಗ ಧರ್ಮರಾಜನು ತಕ್ಷಣದಲ್ಲಿ ಶೋಕಾರ್ತನಾಗಿ ಉಡುಗಿಹೋಗುತ್ತಿರುವ ಸ್ವರದಿಂದ ಹೇಗೆ ನಿಯಮಭಂಗವಾಯಿತು?

ಯುಧಿಷ್ಠಿರೋ ಗುಡಾಕೇಶಂ ಭ್ರಾತಾ ಭ್ರಾತರಮಬ್ರವೀತ್ ।
ಪ್ರಮಾಣಮಸ್ತಿ ಯದಿ ತೇ ಮತ್ತಃ ಶೃಣು ವಚೋ ಮಮ ॥೨೭॥

ಅಣ್ಣನಾದ ಯುಧಿಷ್ಠಿರನು ತಮ್ಮನಾದ ಅರ್ಜುನನನ್ನು ಕುರಿತು ಹೇಳಿದನು. ನಿನಗೆ ನನ್ನ ಮಾತಿನಲ್ಲಿ ಗೌರವವಿದ್ದರೆ, ನಾನು ಹೇಳುವುದನ್ನು ಕೇಳು.

ಅನುಪ್ರವೇಶಂ ಯದ್ ವೀರ ಕೃತವಾಂಸ್ತ್ವಂ ಮಮಾಪ್ರಿಯಮ್ ।
ಸರ್ವಂ ತದನುಜಾನಾಮಿ ವ್ಯಲೀಕಂ ನ ಚ ಮೇ ಹೃದಿ ॥೨೮॥

ವೀರನೇ, ನೀನು ಮಾಡಿದ ಅನುಪ್ರವೇಶವು ನನಗೆ ಅಪ್ರಿಯವಾಗಿಲ್ಲ. ನಾನು ಅದನ್ನು ಸಮ್ಮತಿಸಿದ್ದೇನೆ. ನನ್ನ ಮನಸ್ಸಿನಲ್ಲಿ ಕಪಟವಿಲ್ಲ.

ಗುರೋರನುಪ್ರವೇಶೇನ ನೋಪಘಾತೋ ಯವೀಯಸಃ ।
ಯವೀಯಸೋಽನುಪ್ರವೇಶೋ ಜ್ಯೇಷ್ಠಸ್ಯ ವಿಧಿಲೋಪಕೃತ್ ॥೨೯॥

ಚಿಕ್ಕವರ ರಮಣಗೃಹವನ್ನು ದೊಡ್ಡವರು ಪ್ರವೇಶಿಸಿದರೆ ಚಿಕ್ಕವರಿಗೆ ಯಾವ ಧರ್ಮಲೋಪವೂ ಆಗುವುದಿಲ್ಲ. ದೊಡ್ಡವರ ರಮಣ ಗೃಹವನ್ನು ಚಿಕ್ಕವರು ಪ್ರವೇಶಿಸಿದರೆ ಮಾತ್ರ ಚಿಕ್ಕವರಿಗೆ ಧರ್ಮಲೋಪವಾಗುತ್ತದೆ.

ನಿವರ್ತಸ್ವ ಮಹಾಬಾಹೋ ಕುರುಷ್ವ ವಚನಂ ಮಮ ।
ನ ಹಿ ತೇ ಧರ್ಮಲೋಪೋಽಸ್ತಿ ನ ಚ ಮೇ ಧರ್ಷಣಾ ಕೃತಾ ॥೩೦॥

ಮಹಾಬಾಹುವೇ, ಹಿಂದಿರುಗು. ನನ್ನ ಮಾತಿನಂತೆ ನಡೆದುಕೋ. ನೀನು ನನಗೆ ಅವಮಾನವನ್ನು ಮಾಡಿಲ್ಲ. ಆದ್ದರಿಂದ ನಿನಗೆ ಯಾವ ಧರ್ಮಲೋಪವೂ ಇಲ್ಲ.

ಅರ್ಜುನಃ

ನ ವ್ಯಾಜೇನ ಚರೇದ್ ಧರ್ಮಮಿತಿ ಮೇ ಭವತಃ ಶ್ರುತಮ್ ।
ನ ತಸ್ಮಾದ್ ವಿಚಲಿಷ್ಯಾಮಿ ಸತ್ಯೇನಾಯುಧಮಾಲಭೇ ॥೩೧॥

ಒಂದು ನೆಪವನ್ನು ಹುಡುಕಿ ಧರ್ಮವನ್ನು ಆಚರಿಸಬಾರದು ಎಂದು ನಿನ್ನಿಂದಲೇ ಕೇಳಿದ್ದೇನೆ. ಆದ್ದರಿಂದ ನನ್ನ ನಿರ್ಧಾರವನ್ನು ಬದಲಿಸುವುದಿಲ್ಲ. ಆಯುಧವನ್ನು ಮುಟ್ಟಿ ಪ್ರತಿಜ್ಞೆಯನ್ನು ಮಾಡಿ ಹೇಳುತ್ತಿದ್ದೇನೆ.

ಆಜ್ಞಾ ತು ಮಮ ದಾತವ್ಯಾ ಭವತಾ ಕೀರ್ತಿವರ್ಧನ ।
ಭವದಾಜ್ಞಾಮೃತೇ ಕಿಂಚಿನ್ನ ಕಾರ್ಯಮಿತಿ ನಿಶ್ಚಿತಮ್ ॥೩೨॥

ಕೀರ್ತಿವರ್ಧನನೇ, ನನಗೆ ಅನುಮತಿಯನ್ನು ಕೊಡಬೇಕು. ನಿನ್ನ ಅನುಮತಿಯಿಲ್ಲದೆ, ನಾನು ಏನನ್ನೂ ಮಾಡತಕ್ಕುದಲ್ಲ ಎಂಬುದು ನಿಶ್ಚಿತವಾದುದು.

ವೈಶಂಪಾಯನಃ

ಸೋಽಭ್ಯನುಜ್ಞಾಪ್ಯ ರಾಜಾನಂ ಬ್ರಹ್ಮಚರ್ಯಾದಿದೀಕ್ಷಿತಃ ।
ವನೇ ದ್ವಾದಶ ಮಾಸಾನ್ ಹಿ ವಾಸಾಯೋಪಜಗಾಮ ಹ ॥೩೩॥

ಅರ್ಜುನನು ರಾಜನ ಅನುಮತಿಯನ್ನು ಪಡೆದು ಬ್ರಹ್ಮಚರ್ಯಾದಿ ವ್ರತಗಳಿಂದ ದೀಕ್ಷಿತನಾಗಿ ಕಾಡಿನಲ್ಲಿ ಹನ್ನೆರಡು ತಿಂಗಳುಗಳನ್ನು ಕಳೆಯುವುದಕ್ಕಾಗಿ ಇಂದ್ರಪ್ರಸ್ಥದಿಂದ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚದಶಶಾಧಿಕದ್ವಿಶತತಮೋಽಧ್ಯಾಯಃ ॥

॥ ಇತಿ ಅರ್ಜುನವನವಾಸಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಯುಧಿಷ್ಠಿರಾದ್ಯೈಃ ಸೌಹೃದಾದ್ವಾರಿತೋಽಪಿ
ಯಯೌ ಸತ್ಯಾರ್ಥಂ ಸ ಕದಾಚಿದ್ದ್ಯುನಾದ್ಯಾಂ ।
ಕುರ್ವನ್ ಸ್ನಾನಂ ಮಾಯಯಾ ನಾಗವಧ್ವಾ
ಹೃತೋ ಲೋಕಂ ಭುಜಗಾನಾಂ ಕ್ಷಣೇನ ॥೧೫೫॥

ಯುಧಿಷ್ಠಿರ ಮುಂತಾದವರು ಪ್ರೀತಿಯಿಂದ ಅರ್ಜುನನನ್ನು ತಡೆದರು. ಆದರೂ ಅವನು ಪ್ರತಿಜ್ಞಾಪಾಲನೆಗಾಗಿ ತೀರ್ಥಯಾತ್ರೆ ಕೈಗೊಂಡ. ಒಮ್ಮೆ ಗಂಗೆಯಲ್ಲಿ ಸ್ನಾನ ಮಾಡುತ್ತಿದ್ದಾಗ ನಾಗಕನ್ಯೆ ಮಾಯೆಯಿಂದ ಕ್ಷಣದಲ್ಲಿ ಅವನನ್ನು ನಾಗಲೋಕಕ್ಕೆ ಒಯ್ದಳು.

ತಸ್ಯಾಃ ಪಿತಾ ಗರುಡೇನಾತ್ತಪತ್ಯುಃ
ಪುತ್ರಾಕಾಂಕ್ಷೀ ಚೋದಯಾಮಾಸ ಪಾರ್ಥಂ ।
ಸಂವತ್ಸರ ಬ್ರಹ್ಮಚರ್ಯೇ ತು ಪಾರ್ಥೈಃ
ಕೃಷ್ಣಾಹೇತೋಃ ಸಮಯೇ ಸಾಧು ಬದ್ಧಂ ॥೧೫೬॥

ನಾಗಕನ್ಯೆಯ ಪತಿಯನ್ನು ಗರುಡ ತಿಂದಿದ್ದ. ಅದರಿಂದ ಅವಳ ತಂದೆ ಅವಳಲ್ಲಿ ಒಬ್ಬ ಮಗನನ್ನು ಬಯಸಿ ಅರ್ಜುನನನ್ನು ಬೇಡಿದ. ಆದರೆ ದ್ರೌಪದಿಯ ನಿಮಿತ್ತವಾಗಿ ಪಾಂಡವರು ಅರ್ಜುನನನ್ನು ವಾರ್ಷಿಕ ಬ್ರಹ್ಮಚರ್ಯ ನಿಯಮವಲ್ಲಿ ಚೆನ್ನಾಗಿ ಬದ್ಧನನ್ನಾಗಿ ಮಾಡಿದ್ದರು.

ಪುನಃಪುನರ್ಯಾಚ್ಯಮಾನಃ ಸ ಪಾರ್ಥಃ
ಪುತ್ರಾರ್ಥಮಸ್ಯಾ ಭುಜಗೇನ ತಸ್ಯಾಂ ।
ಉತ್ಪಾದಯಾಮಸ ಸುತಂ ಕುಜಾಂಶಂ
ನಾಮ್ನೇರಾವಂತಂ ವರುಣಾವೇಶಯುಕ್ತಂ ॥೧೫೭॥

ಕನ್ಯೆಯಲ್ಲಿ ಪುತ್ರೋತ್ಪಾದನೆಗಾಗಿ ನಾಗ ಪುನಃ ಪುನಃ ಅರ್ಜುನನನ್ನು ಪ್ರಾರ್ಥಿಸಿದ್ದರಿಂದ ಅವನು ಅವಳಲ್ಲಿ ವರುಣಾವೇಶಯುಕ್ತ ಕುಂಜಾಂಶನಾದ ಇರಾವಾನ್ ಎಂಬ ಹೆಸರಿನ ಮಗನನ್ನು ಹುಟ್ಟಿಸಿದ.

ಗುಣಾಃ ಪಿತುರ್ಮಾತೃಜಾತಿಃ ಸುತಾನಾಂ
ಯಸ್ಮಾತ್‌ಸತಾಂ ಪ್ರಾಯಶಸ್ತೇನ ನಾಗಃ ।
ಬಲೀ ಚ ಪಾರ್ಥಪ್ರಥಮೋದ್ಭವತ್ವಾ-
ನ್ಮಾಯವಿದಸ್ತ್ರೀ ಚ ಸುಧಾರ್ಮಿಕಶ್ಚ ॥೧೫೮॥

ಮಕ್ಕಳಿಗೆ ಸಾಮಾನ್ಯವಾಗಿ ತಂದೆಯ ಗುಣಗಳೂ ತಾಯಿಯ ಜಾತಿಯೂ ಬರುತ್ತದೆ. ಅದರಿಂದ ಇರುವಾನ್ ನಾಗನಾಗಿಯೆ ಹುಟ್ಟಿದ. ಅರ್ಜುನನಿಂದ ಮೊದಲ ಬಾರಿಗೆ ಹುಟ್ಟಿದ ಮಗನಾದ್ದರಿಂದ ಬಲಿಷ್ಠನಾಗಿದ್ದ. ಮಾಯಾವಿಯೂ ಅಸ್ತ್ರೋವಿದನೂ ಒಳ್ಳೆಯ ಧಾರ್ಮಿಕನೂ ಆಗಿದ್ದ.

★ ★ ★ ★

ಇನ್ನೂರ ಹದಿನಾರನೆಯ ಅಧ್ಯಾಯ

(ಅರ್ಜುನನ ತೀರ್ಥಯಾತ್ರೆ, ಉಲೂಪಿಯಿಂದ ಅರ್ಜುನನ ಹರಣ, ನಾಗಲೋಕ ಪ್ರಾಪ್ತಿ, ಇರಾವಂತನ ಉತ್ಪತ್ತಿ.)

ವೈಶಂಪಾಯನಃ

ತಂ ಪ್ರಯಾಂತಂ ಮಹಾತ್ಮಾನಂ ಕೌರವಾಣಾಂ ಯಶಸ್ಕರಮ್ ।
ಅನುಜಗ್ಮುರ್ಮಹಾತ್ಮಾನೋ ಬ್ರಾಹ್ಮಣಾ ವೇದಪಾರಗಾಃ ॥೧॥

ಕೌರವರ ಕೀರ್ತಿವರ್ಧನನಾದ, ಮಹಾನುಭಾವನಾದ ಅರ್ಜುನನು ಹೊರಡುತ್ತಿರುವಂತೆ, ಮಹಾತ್ಮರೂ ವೇದಪಾರಂಗತರೂ ಆದ ಬ್ರಾಹ್ಮಣರು ಅವನನ್ನು ಹಿಂಬಾಲಿಸಿದರು.

ವೇದವೇದಾಂಗವಿದ್ವಾಂಸಸ್ತಥೈವಾಧ್ಯಾತ್ಮಚಿಂತಕಾಃ ।
ವೌಕ್ಷಾಶ್ಚ ಭಗವದ್ಭಕ್ತಾ ದೂತಾಃ ಪೌರಾಣಿಕಾಶ್ಚ ಯೇ ॥೨॥

ವೇದವೇದಾಂಗ ವಿದ್ವಾಂಸರೂ, ಆಧ್ಯಾತ್ಮಚಿಂತಕರೂ, ಸ್ನಾನಶೀಲರೂ, ಪೌರಾಣಿಕರೂ, ಭಗವದ್ಭಕ್ತರೂ (ಎಲ್ಲರೂ ಹಿಂಬಾಲಿಸಿದರು).

(ವೌಕ್ಷಾಃ= ವಾಗತಿಗಂಧನಯೋಃ ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ. ನಿರಂತರಗಮನಶೀಲಗಳಾದ ನದಿಗಳಲ್ಲಿ ಸ್ನಾನವು ಯಾರಿಗೋ ಅವರು ಔಕ್ಷರು. ಶುದ್ಧವಾದ ಅಂತಃಕರಣವುಳ್ಳವರು ಎಂದರ್ಥ.

ಕಥಕಾಶ್ಚಾಪರೇ ರಾಜನ್ ರಮಣಾಶ್ಚ ವನೌಕಸಃ ।
ದಿವ್ಯಾಖ್ಯಾನಾನಿ ಯೇ ಚಾಪಿ ಪಠಂತಿ ಮಧುರಂ ದ್ವಿಜಾಃ ॥೩॥

ರಾಜನೇ, ಕಥೆಗಳನ್ನು ಹೇಳುವವರೂ, ವಿನೋದವನ್ನು ಮಾಡುವವರೂ, ವನವಾಸಿಗಳೂ, ದಿವ್ಯಾಖ್ಯಾನಗಳನ್ನು ಮಧುರವಾಗಿ ಹೇಳುವ ಬ್ರಾಹ್ಮಣರೂ (ಜೊತೆಯಲ್ಲಿ ಹೊರಟರು).

ಏತೈಶ್ಚಾನ್ಯೈಶ್ಚ ಬಹುಭಿಃ ಸಹಾಯೈಃ ಪಾಂಡುನಂದನಃ ।
ವೃತಃ ಶಿಷ್ಟಜನೈಃ ಪ್ರಾಯಾದ್ ಮರುದ್ಭಿರಿವ ವಾಸವಃ ॥೪॥

ಪಾಂಡುನಂದನನಾದ ಅರ್ಜುನನು ಇವರಿಂದಲೂ ಮತ್ತು ಇನ್ನೂ ಅನೇಕ ಸಹಾಯಭೂತರಾದ ಶಿಷ್ಟಜನರಿಂದಲೂ ಪರಿವೃತನಾಗಿ ಇಂದ್ರನು ಮರುದ್ಗಣದ ಜೊತೆಯಲ್ಲಿ ಹೊರಟಂತೆ ಪ್ರಯಾಣ ಮಾಡಿದನು.

ರಮಣೀಯಾನಿ ಚಿತ್ರಾಣಿ ವನಾನಿ ಚ ಸರಾಂಸಿ ಚ ।
ಸರಿತಃ ಸಾಗರಾಂಶ್ಚೈವ ದೇಶಾನಪಿ ಚ ಭಾರತ ॥೫॥

ಪುಣ್ಯಾನ್ಯಪಿ ಚ ತೀರ್ಥಾನಿ ದದರ್ಶ ಭರತರ್ಷಭಃ ।
ಸ ಗಂಗಾದ್ವಾರಮಾಸಾದ್ಯ ನಿವೇಶಮಕರೋತ್ ಪ್ರಭುಃ ॥೬॥

ಎಲೈ ಭಾರತನೇ, ಭರತರ್ಷಭನಾದ ಅವನು ರಮಣೀಯವಾದ ಮತ್ತು ವಿಚಿತ್ರವಾದ ಕಾಡುಗಳನ್ನೂ, ಸರೋವರಗಳನ್ನೂ, ನದಿಗಳನ್ನೂ, ಸಾಗರಗಳನ್ನೂ, ದೇಶಗಳನ್ನೂ, ಪವಿತ್ರತೀರ್ಥಗಳನ್ನೂ ನೋಡುತ್ತಾ ಗಂಗಾದ್ವಾರಕ್ಕೆ ಬಂದು ಅಲ್ಲಿ ಸಮರ್ಥನಾದ ಅವನು ವಾಸವನ್ನು ಮಾಡಿದನು.

ತಸ್ಯ ತತ್ಕಾದ್ಭುತಂ ಕರ್ಮ ಶೃಣು ತ್ವಂ ಜನಮೇಜಯ ।
ಕೃತವಾನ್ ಯದ್ ವಿಶುದ್ಧಾತ್ಮಾ ಪಾಂಡೂನಾಂ ಪ್ರವರೋ ರಥೀ ॥೭॥

ಜನಮೇಜಯನೇ, ಪಾಂಡವರಲ್ಲಿ ಶ್ರೇಷ್ಠನಾದ ವಿಶುದ್ಧಾತ್ಮನೂ ರಥಿಯೂ ಆದ ಅರ್ಜುನನು ಅಲ್ಲಿ ಮಾಡಿದ ಅದ್ಭುತಕರ್ಮವನ್ನು ಹೇಳುತ್ತೇನೆ, ಕೇಳು.

ನಿವಿಷ್ಟೇ ತತ್ರ ಕೌಂತೇಯೇ ಬ್ರಾಹ್ಮಣೈಃ ಸಹ ಭಾರತ ।
ಅಗ್ನಿಹೋತ್ರಾಣಿ ವಿಪ್ರಾಸ್ತೇ ಪ್ರಾದುಶ್ಚಕ್ರುರನೇಕಶಃ ॥೮॥

ಭಾರತನೇ, ಅರ್ಜುನನು ಅಲ್ಲಿ ಬ್ರಾಹ್ಮಣರ ಜೊತೆಯಲ್ಲಿ ಬೀಡು ಬಿಡುತ್ತಿರಲು, ಬ್ರಾಹ್ಮಣರು ಅನೇಕ ಸಂಖ್ಯೆಯಲ್ಲಿ ಅಗ್ನಿಹೋತ್ರಗಳನ್ನು ಮಾಡಿದರು.

ತೇಷು ಪ್ರಬೋಧ್ಯಮಾನೇಷು ಜ್ವಲಿತೇ ಚ ಹುತಾಶನೇ ।
ಕೃತಪುಷ್ಪೋಪಹಾರೇಷು ತೀರಾಂತರಗತೇಷು ಚ ॥೯॥

ಕೃತಾಭಿಷೇಕೈರ್ವಿದ್ವದ್ಭಿರ್ನಿಯತೈಃ ಸತ್ಪಥೇ ಸ್ಥಿತೈಃ ।
ಶುಶುಭೇಽತೀವ ತದ್ ರಾಜನ್ ಗಂಗಾದ್ವಾರಂ ಮಹಾತ್ಮಭಿಃ ॥೧೦॥

ಅವರು ಅರಣಿನಿರ್ಮಥನವನ್ನು ಮಾಡಿ, ಹುತಾಶನನನ್ನು ಜ್ವಲಿಸುವಂತೆ ಮಾಡಿ, ಆ ಗಂಗಾತೀರದಲ್ಲಿ ಪುಷ್ಪಗಳಿಂದ ಪೂಜಿಸಿದರು. ರಾಜನೇ, ಆ ಗಂಗಾದ್ವಾರವು ಸನ್ಮಾರ್ಗದಲ್ಲಿರುವ ನಿಯಮಶೀಲರಾದ, ಸ್ನಾನವನ್ನು ಮಾಡಿದ ಮಹಾನುಭಾವರಾದ, ಅನೇಕ ವಿದ್ವಾಂಸರಿಂದ ಬಹಳವಾಗಿ ಶೋಭಿಸಿತು.

ಅಥ ಪರ್ಯಾಕುಲೇ ತಸ್ಮಿನ್ ನಿವೇಶೇ ಪಾಂಡವರ್ಷಭಃ ।
ಅಭಿಷೇಕಾಯ ಕೌಂತೇಯೋ ಗಂಗಾಮವತತಾರ ಹ ॥೧೧॥

ಪಾಂಡವಶ್ರೇಷ್ಠನಾದ ಅರ್ಜುನನು, ಜನನಿಬಿಡವಾದ ಆ ಪ್ರದೇಶದಲ್ಲಿ ಸ್ನಾನವನ್ನು ಮಾಡಲು ಗಂಗೆಯಲ್ಲಿ ಇಳಿದನು.

ತತ್ರಾಭಿಷೇಕಂ ಕೃತ್ವಾ ಸ ತರ್ಪಯಿತ್ವಾ ಪಿತಾಮಹಾನ್ ।
ಉತ್ತಿತೀರ್ಷುರ್ಜಲಾದ್ ರಾಜನ್ನಗ್ನಿಕಾರ್ಯಚಿಕೀರ್ಷಯಾ ॥೧೨॥

ಅಪಕೃಷ್ಟೋ ಮಹಾಬಾಹುರ್ನಾಗರಾಜಸ್ಯ ಕನ್ಯಯಾ ।
ಅಂತರ್ಜಲೇ ಮಹಾಬಾಹುರುಲೂಪ್ಯಾ ಕಾಮಯಾನಯಾ ॥೧೩॥

ಅರ್ಜುನನು ಅಲ್ಲಿ ಸ್ನಾನವನ್ನು ಮಾಡಿ ಪಿತೃಗಳಿಗೆ ತರ್ಪಣವನ್ನು ಕೊಟ್ಟು, ಅಗ್ನಿಕಾರ್ಯವನ್ನು ಮಾಡುವ ಉದ್ದೇಶದಿಂದ ದಡಕ್ಕೆ ಪ್ರಯತ್ನಿಸುತ್ತಿರಲು, ನಾಗರಾಜಕನ್ನಿಕೆಯಾದ ಉಲೂಪಿಯು ಅವನನ್ನು ಕಾಮಿಸಿ, ಮಹಾಬಾಹುವಾದ ಅವನನ್ನು ನೀರಿನೊಳಗೆ ಎಳೆದಳು.

ದದರ್ಶ ಪಾಂಡವಸ್ತತ್ರ ಪಾವಕಂ ಸುಸಮಾಹಿತಃ ।
ಕೌರವ್ಯಸ್ಯಾಥ ನಾಗಸ್ಯ ಭವನೇ ಪರಮಾರ್ಚಿತೇ ॥೧೪॥

ಸಮಾಧಾನದಿಂದ ಕೂಡಿದ ಅರ್ಜುನನು ಅಲ್ಲಿಂದ ನಾಗರಾಜನಾದ ಧೃತರಾಷ್ಟ್ರನ ವೈಭವಯುಕ್ತವಾದ ಮನೆಗೆ ಹೋಗಿ ಅಲ್ಲಿ ಜ್ವಲಿಸುತ್ತಿದ್ದ ಅಗ್ನಿಯನ್ನು ನೋಡಿದನು.

ತತ್ಸಾಗ್ನಿಕಾರ್ಯಂ ಕೃತವಾನ್ ಕುಂತೀಪುತ್ರೋ ಧನಂಜಯಃ ।
ಅಶಂಕಮಾನೇನ ಹುತಸ್ತೇನಾತುಷ್ಯದ್ ಹುತಾಶನಃ ॥೧೫॥

ಕುಂತೀಪುತ್ರನಾದ ಧನಂಜಯನು ಅಲ್ಲಿ ಯಾವ ಶಂಕೆಯೂ ಇಲ್ಲದೆ ಅಗ್ನಿಕಾರ್ಯವನ್ನು ಮಾಡಿದನು. ಅದರಿಂದ ಅಗ್ನಿಯು ಪ್ರೀತನಾದನು.

ಅಗ್ನಿಕಾರ್ಯಂ ಸ ಕೃತ್ವಾ ತು ನಾಗರಾಜಸುತಾಂ ತದಾ ।
ಪ್ರಹಸನ್ನಿವ ಕೌಂತೇಯ ಇದಂ ವಚನಮಬ್ರವೀತ್ ॥೧೬॥

ಅಗ್ನಿಕಾರ್ಯವನ್ನು ಮುಗಿಸಿದ ಅರ್ಜುನನು ನಗುತ್ತಾ ಆ ನಾಗರಾಜಕನ್ನಿಕೆಯನ್ನು ಕುರಿತು ಈ ಮಾತನ್ನಾಡಿದನು.

ಕಿಮಿದಂ ಸಾಹಸಂ ಭೀರು ಕೃತವತ್ಯಸಿ ಭಾಮಿನಿ ।
ಕಸ್ಯಾಯಂ ಸುಭಗೇ ದೇಶಃ ಕಾ ಚ ತ್ವಂ ಕಸ್ಯ ಚಾತ್ಮಜಾ ॥೧೭॥

ಭೀರುವೇ ಮತ್ತು ಭಾಮಿನಿಯೇ, ಎಂತಹ ಸಾಹಸಕಾರ್ಯವನ್ನು ಮಾಡಿದೆ. ಸುಂದರಿಯೇ, ಈ ದೇಶವು ಯಾರದ್ದು? ನೀನು ಯಾರು? ಮತ್ತು ಯಾರ ಮಗಳು?

ಉಲೂಪೀ

ಐರಾವತಕುಲೇ ಜಾತಃ ಕೌರವ್ಯೋ ನಾಮ ಪನ್ನಗಃ ।
ತಸ್ಯಾಹಂ ದುಹಿತಾ ಪಾರ್ಥ ಉಲೂಪೀ ನಾಮ ಪನ್ನಗೀ ॥೧೮॥

ಐರಾವತಸರ್ಪದ ಕುಲದಲ್ಲಿ ಧೃತರಾಷ್ಟ್ರನೆಂಬ ಸರ್ಪವು ಜನಿಸಿದನು. ಅರ್ಜುನನೇ, ನಾನು ಅವನ ಮಗಳು. ನನ್ನ ಹೆಸರು ಉಲೂಪಿ. ನಾನು ಸರ್ಪಕನ್ನಿಕೆ.

ಸಾಽಹಂ ತ್ವಾಮಭಿಷೇಕಾರ್ಥಮವತೀರ್ಣಂ ಸರಿದ್ವರಾಮ್ ।
ದೃಷ್ಟ್ವವತ್ಯೇವ ಕೌಂತೇಯ ಕಂದರ್ಪೇಣಾಸ್ಮಿ ಮೂರ್ಚ್ಛಿತಾ ॥೧೯॥

ಕೌಂತೇಯನೇ, ಅಂತಹ ನಾನು ನೀನು ಸ್ನಾನಕ್ಕಾಗಿ ಗಂಗಾನದಿಯಲ್ಲಿ ಇಳಿದುದನ್ನು ನೋಡಿ, ನಿನ್ನ ದರ್ಶನಮಾತ್ರದಿಂದಲೇ ಕಾಮಕ್ಕೆ ಒಳಗಾಗಿ ಮೋಹಿತಳಾಗಿದ್ದೇನೆ.

ತಾಂ ಮಾಮನಂಗಮಥಿತಾಂ ತ್ವತ್ಕೃತೇ ಕುರುನಂದನ ।
ಅನನ್ಯಾಂ ನಂದಯಸ್ವಾದ್ಯ ಪ್ರದಾನೇನಾತ್ಮನೋ ರಹಃ ॥೨೦॥

ಕುರುನಂದನನೇ, ನಿನ್ನ ಸಲುವಾಗಿ ಮನ್ಮಥನ ಪೀಡೆಗೆ ಒಳಗಾದ, ನಿನ್ನಲ್ಲಿಯೇ ಮನಸ್ಸನ್ನು ಇಟ್ಟಿರುವ ನನ್ನನ್ನು ಏಕಾಂತದಲ್ಲಿ ನಿನ್ನ ಶರೀರವನ್ನು ದಾನಮಾಡಿ ಸಂತೋಷಪಡಿಸು.

ಅರ್ಜುನಃ

ಬ್ರಹ್ಮಚರ್ಯಮಿದಂ ಭದ್ರೇ ಮಮ ದ್ವಾದಶಮಾಸಿಕಮ್ ।
ಧರ್ಮರಾಜೇನ ಚಾದಿಷ್ಟೋ ನಾಹಮಸ್ಮಿ ಸ್ವಯಂ ವಶಃ ॥೨೧॥

ಭದ್ರೇ , ನಾನು ಹನ್ನೆರಡು ತಿಂಗಳುಕಾಲದ ಬ್ರಹ್ಮಚರ್ಯವ್ರತದಲ್ಲಿದ್ದೇನೆ. ಅದು ಧರ್ಮರಾಜನ ಆದೇಶ. ನಾನು ಸ್ವತಂತ್ರನಲ್ಲ.

ತವ ಚಾಪಿ ಪ್ರಿಯಂ ಕರ್ತುಮಿಚ್ಛಾಮಿ ಜಲಚಾರಿಣಿ ।
ಅನೃತಂ ನೋಕ್ತಪೂರ್ವಂ ಚ ಮಯಾ ಕಿಂಚನ ಕರ್ಹಿ ಚಿತ್ ॥೨೨॥

ಜಲಚರರೇ, ನಿನಗೂ ನಾನು ಪ್ರಿಯವನ್ನು ಮಾಡಲು ಬಯಸುತ್ತೇನೆ. ನಾನು ಹಿಂದೆ ಯಾವ ಕಾರಣದಿಂದಲೂ ಸುಳ್ಳು ಮಾತನಾಡಿಲ್ಲ. (ಅಸಂತೋಷಕರವಾದ ಮಾತನ್ನು ಆಡಿಲ್ಲ)

ಕಥಂಚಿನ್ನಾನೃತಂ ತಸ್ಯ ತವ ಚೈವ ಪ್ರಿಯಂ ಭವೇತ್ ।
ನ ಹಿ ಪೀಡ್ಯೇತ ಮೇ ಧರ್ಮಸ್ತಥಾ ಕುರು ಭುಜಂಗಮೇ ॥೨೩॥

ಭುಜಂಗಮೆಯೇ, ಧರ್ಮರಾಜನ ಮಾತು ಸುಳ್ಳಾಗದಂತೆ, ನಿನಗೂ ಪ್ರಿಯವಾಗುವಂತೆ, ನನ್ನ ಧರ್ಮವೂ ನಾಶವಾಗದಂತೆ ಏನು ಮಾಡಬಹುದೋ ಅದನ್ನು ಮಾಡು.

ಉಲೂಪೀ

ಜಾನಾಮ್ಯಹಂ ಕೌರವೇಯ ಯಥಾ ಚರಸಿ ಮೇದಿನೀಮ್ ।
ಯಥಾ ಹಿ ತೇ ಬ್ರಹ್ಮಚರ್ಯಮಿತಿ ವಃ ಸಮಯಃ ಕೃತಃ ॥೨೪॥

ಕೌರವೇಯನೇ, ನಾನು ನೀನು ಹೇಗೆ ಭೂಮಿಯನ್ನು ಸಂಚರಿಸುತ್ತಿದ್ದೀಯೇ, ನಿನಗೆ ಹೇಗೆ ಬ್ರಹ್ಮಚರ್ಯವು ಬಂದಿತು, ಹೇಗೆ ನೀವು ನಿಯಮವನ್ನು ಮಾಡಿಕೊಂಡಿರಿ ಎಲ್ಲವನ್ನೂ ತಿಳಿದಿದ್ದೇನೆ.

।।ತಥಾಹಿ ತೇ ಬ್ರಹ್ಮಚರ್ಯಮಿದಮಾದಿಷ್ಟವಾನ್ ಗುರುಃ ।
ಪರಸ್ಪರಂ ವರ್ತಮಾನಾನ್ ದ್ರುಪದಸ್ಯ ಸುತಾಂ ಪ್ರತಿ ।।೨೫।।

ಯೋ ನೋಽನುಪ್ರವಿಶೇನ್ಮೋಹಾತ್ ಸ ನೋ ದ್ವಾದಶಮಾಸಿಕಮ್।
ವನೇ ಚರೇದ್ ಬ್ರಹ್ಮಚರ್ಯಮಿತಿ ವಃ ಸಮಯಃ ಕೃತಃ ।।೨೬।।

ದ್ರೌಪದಿಯ ಜೊತೆಯಲ್ಲಿ ಐವರಲ್ಲಿ ಯಾರಾದರೂ ಏಕಾಂತದಲ್ಲಿದ್ದಾಗ, ಇನ್ನೊಬ್ಬನು ಮೋಹದಿಂದ ಪ್ರವೇಶಮಾಡಿದರೆ, ಅವನು ಹನ್ನೆರಡು ತಿಂಗಲುಗಳ ಕಾಲ ಬ್ರಹ್ಮಚರ್ಯವನ್ನು ಧರಿಸಿ ವನವಾಸವನ್ನು ಮಾಡಬೇಕೆಂಬ ನಿಮ್ಮ ನಿಯಮವನ್ನು ಹಿರಿಯನಾದ ಧರ್ಮರಾಜನು ಹೇಳಿದನಷ್ಟೇ.

ತದಿದಂ ದ್ರೌಪದೀಹೇತೋರನ್ಯೋನ್ಯಸ್ಯ ಪ್ರವಾಸನಮ್ ।
ಕೃತವಾಂಸ್ತತ್ರ ಧರ್ಮಾರ್ಥಮತ್ರ ಧರ್ಮೋ ನ ಲುಪ್ಯತೇ ।।೨೭।।

ದ್ರೌಪದಿಯ ಸಲುವಾಗಿ ಈ ಪರಸ್ಪರ ಬ್ರಹ್ಮಚರ್ಯ ಮತ್ತು ವನವಾಸದ ನಿಯಮವು ಧರ್ಮದ ಉದ್ದೇಶದಿಂದ ಮನುಷ್ಯಲೋಕದಲ್ಲಿ ಮಾಡಲ್ಪಟ್ಟಿತು. ಆ ನಿಯಮವು ಈ ನಾಗಲೋಕದಲ್ಲಿ ಅನ್ವಯಿಸುವುದಿಲ್ಲ. (ನನ್ನ ಸ್ವೀಕಾರದಿಂದ ನಿನಗೆ ಧರ್ಮಹಾನಿಯಾಗುವುದಿಲ್ಲ)

ಪರಿತ್ರಾಣಂ ಚ ಕರ್ತವ್ಯಮಾರ್ತಾನಾಂ ಪೃಥುಲೋಚನ ।
ಕೃತ್ವಾ ಮಮ ಪರಿತ್ರಾಣಂ ತವ ಧರ್ಮೋ ನ ಲುಪ್ಯತೇ ।।೨೮।।

ವಿಸ್ತಾರನೇತ್ರವುಳ್ಳವನೇ, ಆರ್ತಪರಿತ್ರಾಣವನ್ನು ಮಾಡಬೇಕಷ್ಟೆ? ಆರ್ತಳಾದ ನನ್ನ ಪರಿತ್ರಾಣವನ್ನು ಮಾಡಿದರೆ ನಿನಗೆ ಧರ್ಮಲೋಪವಾಗುವುದಿಲ್ಲ.

ತ್ವಯಾ ಕಾಮಪ್ರಚಾರಾಯ ಪ್ರೇರಿತಂ ನ ಹಿ ಯನ್ಮನಃ ।
ತಸ್ಮಾತ್ ತವ ಪ್ರತ್ಯವಾಯೋ ಯುಜ್ಯತೇ ನ ಹಿ ಕುತ್ರಚಿತ್ ।।೨೯।।

ನೀನು ಸ್ವತಃ ಕಾಮಕ್ಕೆ ವಶನಾಗಿ ಮುಂದುವರಿಯುತ್ತಿಲ್ಲವಾದ ಕಾರಣ, ನಿನಗೆ ಯಾವ ಪ್ರತ್ಯವಾಯವೂ ಉಂಟಾಗುವುದಿಲ್ಲ.

ಯದಿ ವಾऽಪ್ಯಸ್ಯ ಧರ್ಮಸ್ಯ ಸೂಕ್ಷ್ಮೋऽಪಿ ಸ್ಯಾದ್ ವ್ಯತಿಕ್ರಮಃ ।
ಸ ಚ ತೇ ಧರ್ಮ ಏವ ಸ್ಯಾದ್ ದತ್ತ್ವಾ ಪ್ರಾಣಾನ್ ಮಮಾರ್ಜುನ ॥

ಅರ್ಜುನನೇ, ಒಂದು ಪಕ್ಷ ನಿನ್ನ ಧರ್ಮಕ್ಕೆ ಸೂಕ್ಷ್ಮಾತಿಸೂಕ್ಷ್ಮವಾದ ವ್ಯತ್ಯಾಸವಾದರೂ ನನಗೆ ಪ್ರಾಣದಾನವನ್ನು ಮಾಡುವ ಕಾರಣದಿಂದ ನಿನಗೆ ಅದು ಧರ್ಮವೇ ಆಗುತ್ತದೆ.

ಭಕ್ತಾಂ ಭಜಸ್ವ ಮಾಂ ಪಾರ್ಥ ಸತಾಮೇತನ್ಮತಂ ಪ್ರಭೋ ।
ನ ಕರಿಷ್ಯಸಿ ಚೇದೇವಂ ಮೃತಾಂ ಮಾಮುಪಧಾರಯ ॥೩೧॥

ಪಾರ್ಥನೇ, ಅನುರಕ್ತಳಾದ ನನ್ನನ್ನು ಸ್ವೀಕರಿಸು. ಪ್ರಭುವೇ, ಇದು ಸಜ್ಜನರಿಗೆ ಸಮ್ಮತವಾದದ್ದು. ನೀನು ಹಾಗೆ ಮಾಡದಿದ್ದರೆ, ನಾನು ಮೃತಳಾದೆ ಎಂದು ತಿಳಿ.

ಪ್ರಾಣದಾನಾನ್ಮಹಾಬಾಹೋ ವರಂ ಧರ್ಮಮನುತ್ತಮಮ್ ।
ಶರಣಂ ಚ ಪ್ರಪನ್ನಾऽಸ್ಮಿ ತ್ವಾಮದ್ಯ ಪುರುಷೋತ್ತಮ ॥೩೨॥

ಮಹಾಬಾಹುವೇ, ಪ್ರಾಣದಾನವನ್ನು ಮಾಡಿ ಶ್ರೇಷ್ಠವಾದ ಧರ್ಮವನ್ನು ಗಳಿಸು. ಪುರುಷೋತ್ತಮನೇ, ಈ ದಿನ ನಾನು ನಿನಗೆ ಶರಣಾಗತಳಾಗಿದ್ದೇನೆ.

ದೀನಾನಾಥಾಂಶ್ಚ ಕೌಂತೇಯ ಪರಿರಕ್ಷಸಿ ನಿತ್ಯಶಃ ।
ಸಾऽಹಂ ಶರಣಮಭ್ಯೇಮಿ ರೋರವೀಮಿ ಚ ದುಃಖಿತಾ ॥೩೩॥

ಕೌಂತೇಯನೇ, ನೀನು ಯಾವಾಗಲೂ ದೀನರನ್ನೂ ಮತ್ತು ಅನಾಥರನ್ನೂ ರಕ್ಷಿಸುತ್ತೀಯೆ. ನಾನು ನಿನಗೆ ಶರಣಾಗತಳಾಗಿ ದುಃಖದಿಂದ ಮತ್ತೆ ಮತ್ತೆ ಅಳುತ್ತಿದ್ದೇನೆ.

ಯಾಚೇ ತ್ವಾಮಭಿಕಾಮಾऽಹಂ ತಸ್ಮಾತ್ ಕುರು ಮಮ ಪ್ರಿಯಮ್ ।
ಸ್ವಪ್ನೇಪ್ಯೇವಾತ್ಮಪ್ರದಾನೇನ ಸಕಾಮಾಂ ಕರ್ತುಮರ್ಹಸಿ ॥೩೪॥

ನಾನು ನಿನ್ನನ್ನು ಬೇಡುತ್ತಿದ್ದೇನೆ. ನಿನ್ನಲ್ಲಿ ಬಹಳವಾದ ಕಾಮವನ್ನು ಹೊಂದಿದ್ದೇನೆ. ಆದ್ದರಿಂದ ನನಗೆ ಪ್ರಿಯವನ್ನು ಮಾಡು. ಶರೀರದಾನವನ್ನು ಮಾಡಿ ನನ್ನನ್ನು ಸ್ಪರ್ಶಿಸಿ, ನನ್ನ ಆಸೆಯನ್ನು ನೆರವೇರಿಸಬೇಕು.

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯಃ ಪನ್ನಗೇಶ್ವರಕನ್ಯಯಾ ।
ಕೃತವಾಂಸ್ತತ್ ತಥಾ ಸರ್ವಂ ಧರ್ಮಮುದ್ದಿಶ್ಯ ಕಾರಣಮ್ ॥೩೫॥

ನಾಗರಾಜಕನ್ಯೆಯು ಹೀಗೆ ಹೇಳುತ್ತಿರಲು ಕುಂತೀಪುತ್ರನಾದ ಅರ್ಜುನನು, ಧರ್ಮದ ದೃಷ್ಟಿಯಿಂದಲೇ ಅವಳು ಹೇಳಿದಂತೆ ಮಾಡಿದನು.

ಸ ನಾಗಭವನೇ ರಾತ್ರಿಮುಷಿತ್ವಾ ತಾಂ ಪ್ರತಾಪವಾನ್ ।
ಪುತ್ರಮುತ್ಪಾದಯಾಮಾಸ ಸ ತಸ್ಯಾಂ ಸುಮನೋಹರಮ್ ।
ಇರಾವಂತಂ ಮಹಾಬಾಹುಂ ಮಹಾಬಲಪರಾಕ್ರಮಮ್ ॥೩೬॥

ಪ್ರತಾಪಶಾಲಿಯಾದ ಅವನು, ಆ ರಾತ್ರಿಯ ನಾಗರಾಜಭವನದಲ್ಲಿ ವಾಸಮಾಡಿ ಅವಳಲ್ಲಿ ಮಹಾಬಾಹುವೂ, ಮಹಾಬಲಪರಾಕ್ರಮವನ್ನು ಹೊಂದಿದಂತಹ, ಸುಂದರನಾದ ಇರಾವಂತನೆಂಬ ಮಗನನ್ನು ಉತ್ಪಾದಿಸಿದನು.

ವಿಮಲೇऽಭ್ಯುದಿತೇ ಸೂರ್ಯೇ ಕೌರವ್ಯಸ್ಯ ನಿವೇಶನಾತ್ ।
ನಿಶ್ಚಕ್ರಾಮ ತದಾ ಪಾರ್ಥಃ ಶುಭಂ ಭವನಮುತ್ತಮಮ್ ॥೩೭॥

ನಿರ್ಮಲವಾದ ಸೂರ್ಯೋದಯವಾಗುತ್ತಿರಲು, ಅರ್ಜುನನು ಧೃತರಾಷ್ಟ್ರನ ನಿವೇಶನದಿಂದ ಹೊರಟು ತನ್ನ ಶ್ರೇಷ್ಠವೂ ಮತ್ತು ಪವಿತ್ರವೂ ಆದ ಮನೆಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಷೋಡಶಾಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಅರ್ಜುನವನವಾಸಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ತತೋ ಯಯಾವರ್ಜುನಸ್ತೀರ್ಥಯಾತ್ರಾ-
ಕ್ರಮೇಣ ಪಾಂಡ್ಯಾಂಸ್ತನಯೋಽಸ್ಯ ಮಾತ್ರಾ ।
ಸಹ ತ್ಯಕ್ತೋ ಭುಜಗೈರ್ದೇವಲೋಕೇ
ಸಂಪೂಜಿತೋ ನ್ಯವಸದ್ ದೈವತೈಶ್ಚ ॥೧೫೯॥

ಅಲ್ಲಿಂದ ಅರ್ಜುನ ತೀರ್ಥಯಾತ್ರಾ ಕ್ರಮದಿಂದ ಪಾಂಡ್ಯದೇಶಕ್ಕೆ ಹೊರಟು ಹೋದ. ನಾಗರು ಅರ್ಜುನನ ಮಗನನ್ನು ತಾಯಿಸಮೇತ ಬಹಿಷ್ಕರಿಸಿಬಿಟ್ಟರು. ಅವನು ದೇವಲೋಕದಲ್ಲಿ ಸತ್ಕೃತನಾಗಿ ಅಲ್ಲಿ ದೇವತೆಗಳೊಂದಿಗೇ ವಾಸ ಮಾಡಿದ.

ಸತ್ಯಾತ್ಯಯಾನ್ನೈವ ದೋಷೋಽರ್ಜುನಸ್ಯ
ತೇಜೀಯಸಶ್ಚಿಂತನೀಯಃ ಕಥಂಚಿತ್ ।
ಶ್ರೇಷ್ಠಾಪರಾಧಾನ್ನನ್ಯದೋಷಸ್ಯ ಲೇಪ-
ಸ್ತೇಜೀಯಸಾಂ ನಿರ್ಣಯೋಽಯಂ ಹಿ ಶಾಸ್ತ್ರೇ ॥೧೬೦॥

ಪ್ರತಿಜ್ಞಾಭಂಗ ಮಾಡಿದ ಪ್ರಯುಕ್ತ ಮಹಾಜ್ಞಾನಿಯಾದ ಅರ್ಜುನನಿಗೆ ಪಾಪ ಬಂದಿತೆಂದು ಯಾವ ರೀತಿಯಿಂದಲೂ ತಿಳಿಯಬಾರದು. ಏಕೆಂದರೆ ಮಹಾಜ್ಞಾನಿಗಳಿಗೆ ಸ್ವೋತ್ತಮಾಪರಾಧಕ್ಕಿಂತ ಬೇರೆ ಪಾಪ ಲೇಪವಾಗುವುದಿಲ್ಲ. ಇದು ಶಾಸ್ತ್ರಗಳಲ್ಲಿರುವ ನಿರ್ಣಯ.

ಅತಿಸ್ನೇಹಾಚ್ಚಾಗ್ರಜಾಭ್ಯಾಂ ತದಸ್ಯ
ಕ್ಷಾಂತಂ ಸುತಾ ಪಾಂಡ್ಯರಾಜೇನ ದತ್ತಾ ।
ಸಂವತ್ಸರಾಂತೇ ಫಲ್ಗುನಸ್ಯಾಭಿರೂಪಾ
ಚಿತ್ರಾಂಗದಾ ವೀರಸೇನೇನ ತೋಷಾತ್ ॥೧೬೧॥

ಅಣ್ಣಂದಿರು ಅತಿಸ್ನೇಹದಿಂದಾಗಿ ಅರ್ಜುನನ ಈ ಅಪರಾಧವನ್ನು ಕ್ಷಮಿಸಿದರು. ಒಂದು ವರ್ಷ ಕಳೆದ ಬಳಿಕ ಪಾಂಡ್ಯರಾಜ ವೀರಸೇನ ಅರ್ಜುನನಿಗೆ ಅನುರೂಪಳಾದ ತನ್ನ ಮಗಳಾದ ಚಿತ್ರಾಂಗದೆಯನ್ನು ಸಂತೋಷದಿಂದ ಮದುವೆ ಮಾಡಿಕೊಟ್ಟ.

ಸ ವೀರಸೇನಸ್ತ್ವಷ್ಟುರಂಶೋ ಯಮಸ್ಯಾ-
ಪ್ಯಾವೇಶಯುಕ್ ಸಾ ಚ ಕನ್ಯಾ ಶಚೀ ಹಿ ।
ತಾರಾದೇಹೇ ಸೂರ್ಯಜಸ್ಯಾಂಗಸಂಗಾತ್
ಸ್ವರ್ಗಂ ನಾಗದಂತರಿಕ್ಷಾದಿಹಾಸೀತ್ ॥೧೬೨॥

ಆ ವೀರಸೇನ ತ್ವಷ್ಟ್ರ ಎಂಬ ಸೂರ್ಯನ ಅಂಶ. ಯಮನ ಆವೇಶದಿಂದಲೂ ಯುಕ್ತ. ಕನ್ಯೆ ಚಿತ್ರಾಂಗದೆಯೂ ಶಚೀದೇವಿ. ತಾರೆಯ ಜನ್ಮದಲ್ಲಿ ಅವಳು ಸುಗ್ರೀವನ ಅಂಗಸಂಗ ಮಾಡಿದ್ದರಿಂದ ಸ್ವರ್ಗಕ್ಕೆ ಹೋಗಲಿಲ್ಲ. ಅಂತರಿಕ್ಷದಿಂದಲೆ ಹಿಂದೆ ಬಂದು ಇಲ್ಲಿ ಹುಟ್ಟಿದ್ದಳು.

ತೇನೈವ ಹೇತೋರ್ನಾತಿಸಾಮೀಪ್ಯಮಾಸೀತ್
ತಸ್ಯಾಃ ಪಾರ್ಥೇ ಪುತ್ರಿಕಾಪುತ್ರಧರ್ಮಾ ।
ತಸ್ಯಾಂ ಜಾತೋ ಬಭ್ರುವಾಹೋಽರ್ಜುನೇನ
ಪೂರ್ವಂ ಜಯಂತಃ ಕಾಮದೇವಾಂಶಯುಕ್ತಃ ॥೧೬೩॥

ಅದೆ ದೋಷದಿಂದಾಗಿ ಚಿತ್ರಾಂಗದೆಗೆ ಅರ್ಜುನನ ಒಡನಾಟವೂ ಬಹಳ ದಿನ ಸಿಗಲಿಲ್ಲ. ಅರ್ಜುನನಿಂದ ಅವಳಲ್ಲಿ ಪುತ್ರಿಕಾ ಪುತ್ರ ಧರ್ಮದಿಂದ ಬಭ್ರುವಾಹನ ಜನಿಸಿದ. ಅವನು ಹಿಂದೆ ಜಯಂತ. ಮನ್ಮಥನ ಅಂಶದಿಂದ ಯುಕ್ತನಾಗಿ ಹುಟ್ಟಿದ.

★ ★ ★ ★

ಇನ್ನೂರ ಹದಿನೇಳನೆಯ ಅಧ್ಯಾಯ

(ಬ್ರಾಹ್ಮಣರಿಗೆ ಎಲ್ಲಾ ವೃತ್ತಾಂತವನ್ನು ತಿಳಿಸಿ ಅರ್ಜುನನ ಪ್ರಯಾಣ, ಮಣಲೂರಿನಲ್ಲಿ ಚಿತ್ರಾಂಗದೆಯ ವಿವಾಹ.)

ವೈಶಂಪಾಯನಃ

ಕಥಯಿತ್ವಾ ತು ತತ್ ಸರ್ವಂ ಬ್ರಾಹ್ಮಣೇಭ್ಯಃ ಸ ಭಾರತ ।
ಪ್ರಯಯೌ ಹಿಮವತ್ಪಾರ್ಶ್ವೇ ತತೋ ವಜ್ರಧರಾತ್ಮಜಃ ॥೧॥

ಭಾರತನೇ, ಇಂದ್ರನ ಪುತ್ರನಾದ ಅರ್ಜುನನು ಬ್ರಾಹ್ಮಣರಿಗೆ ಆ ಎಲ್ಲಾ ವಿಷಯಗಳನ್ನೂ ತಿಳಿಸಿ ಅಲ್ಲಿಂದ ಹಿಮಾಲಯದ ಕಡೆಗೆ ಹೊರಟನು.

ಅಗಸ್ತ್ಯವಟಮಾಸಾದ್ಯ ವಸಿಷ್ಠಸ್ಯ ಚ ಪರ್ವತಮ್ ।
ಭೃಗುತೀರ್ಥೇ ಚ ಕೌರವ್ಯಃ ಕೃತವಾಂಶ್ಚೌಚಮಾತ್ಮನಃ ॥೨॥

ಅವನು ಅಗಸ್ತ್ಯವಟವನ್ನು ತಲುಪಿ. ವಸಿಷ್ಠಪರ್ವತವನ್ನು ನೋಡಿ, ಭೃಗುತೀರ್ಥದಲ್ಲಿ ಯಜ್ಞವನ್ನು ಮಾಡಿದನು.

ಪ್ರದದೌ ಗೋಸಹಸ್ರಾಣಿ ಯಜ್ಞಾನುದ್ದಿಶ್ಯ ದಕ್ಷಿಣಾಃ ।
ನಿವೇಶಾಂಶ್ಚ ದ್ವಿಜಾತಿಭ್ಯಃ ಸೋಽದದಾತ್ ಕುರುಸತ್ತಮಃ ॥೩॥

ಮಾಡಿದ ಯಜ್ಞಗಳ ಉದ್ದೇಶದಿಂದ ಆ ಕುರುಶ್ರೇಷ್ಠನು ಬ್ರಾಹ್ಮಣರಿಗೆ ಸಹಸ್ರಗೋವುಗಳನ್ನೂ ಮತ್ತು ಗೃಹಗಳನ್ನೂ ದಾನಮಾಡಿದನು.

ಹಿರಣ್ಯಬಿಂದೋಸ್ತೀರ್ಥಾನಿ ಸ್ನಾತ್ವಾ ಪುರುಷಸತ್ತಮಃ ।
ದೃಷ್ಟವಾನ್ ಪರ್ವತಶ್ರೇಷ್ಠಾನ್ ಪುಣ್ಯಾನ್ಯಾಯತನಾನಿ ಚ ॥೪॥

ಪುರುಷಶ್ರೇಷ್ಠನಾದ ಅವನು ಹಿರಣ್ಯಬಿಂದು ತೀರ್ಥದಲ್ಲಿ ಸ್ನಾನವನ್ನು ಮಾಡಿ ಶ್ರೇಷ್ಠವಾದ ಪರ್ವತಗಳನ್ನೂ ಮತ್ತು ಪವಿತ್ರವಾದ ಆಶ್ರಮಗಳನ್ನೂ ನೋಡಿದನು.

ಅವತೀರ್ಯ ನರಶ್ರೇಷ್ಠೋ ಬ್ರಾಹ್ಮಣೈಃ ಸಹ ಭಾರತ ।
ಪ್ರಾಚೀಂ ದಿಶಂ ಪ್ರತಿಪ್ಯಾಸುರ್ಜಗಾಮ ಭರತರ್ಷಭಃ ॥೫॥

ಭಾರತನೇ, ಭರತರ್ಷಭನಾದ ನರಶ್ರೇಷ್ಠನಾದ ಅವನು ಹಿಮಾಲಯದಿಂದ ಇಳಿದು ಬ್ರಾಹ್ಮಣರ ಜೊತೆಯಲ್ಲಿ ಪೂರ್ವದಿಕ್ಕಿಗೆ ಹೊರಟನು.

ಆನುಪೂರ್ವ್ಯೇಣ ತೀರ್ಥಾನಿ ದೃಷ್ಟವಾನ್ ಕುರುಸತ್ತಮಃ ।
ನದೀಂ ಚೋತ್ಪಲಿನೀಂ ರಮ್ಯಾಮರಣ್ಯಂ ನೈಮಿಶಂ ಪ್ರತಿ ॥೬॥

ಕುರುಶ್ರೇಷ್ಠನಾದ ಅವನು ಒಂದಾದ ಮೇಲೆ ಒಂದರಂತೆ ಅನೇಕ ತೀರ್ಥಗಳನ್ನೂ, ಮನೋಹರವಾದ ನೈಮಿಷಾರಣ್ಯದ ಬಳಿಯಲ್ಲಿದ್ದ ಉತ್ಪಲಿನಿ ನದಿಯನ್ನು ನೋಡಿದನು.

ನಂದಾಮಪರನಂದಾಂ ಚ ಕೌಶಿಕೀಂ ಚ ಯಶಸ್ವಿನೀಮ್ ।
ಮಹಾನದೀಂ ಗಯಾಂ ಚೈವ ಗಂಗಾಮಪಿ ಚ ಭಾರತ ॥೭॥

ಭಾರತನೇ, ಅವನು ನಂದ, ಅಪರನಂದ, ಕೀರ್ತಿಶಾಲಿನಿಯಾದ ಕೌಶಿಕಿ, ಮಹಾನದಿ, ಗಯಾ, ಗಂಗಾ, ಈ ನದಿಗಳನ್ನೂ ನೋಡಿದನು.

ಏವಂ ಪುಣ್ಯಾನಿ ಸರ್ವಾಣಿ ಪಶ್ಯಮಾನಸ್ತಥಾऽऽಶ್ರಮಾನ್ ।
ಆತ್ಮನಃ ಪಾವನಂ ಕುರ್ವನ್ ಬ್ರಾಹ್ಮಣೇಭ್ಯೋ ಧನಂ ದದೌ ॥೮॥

ಹೀಗೆ, ಎಲ್ಲಾ ಪುಣ್ಯತೀರ್ಥಗಳನ್ನೂ ಮತ್ತು ಆಶ್ರಮಗಳನ್ನೂ ನೋಡುತ್ತಾ, ತನ್ನನ್ನು ಪವಿತ್ರೀಕರಿಸಿಕೊಳ್ಳುವವನಾಗಿ, ಬ್ರಾಹ್ಮಣರಿಗೆ ಧನವನ್ನು ದಾನಮಾಡಿದನು.

ಅಂಗವಂಗಕಳಿಂಗೇಷು ಯಾನಿ ಪುಣ್ಯಾನಿ ಕಾನಿ ಚಿತ್ ।
ಜಗಾಮ ತಾನಿ ಸರ್ವಾಣಿ ತೀರ್ಥಾನ್ಯಾಯತನಾನಿ ಚ ॥೯॥

ಅಂಗವಂಗಕಳಿಂಗದೇಶಗಳಲ್ಲಿ ಇರುವ ಎಲ್ಲಾ ಪುಣ್ಯತೀರ್ಥಗಳಿಗೂ ಮತ್ತು ಪುಣ್ಯಕ್ಷೇತ್ರಗಳಿಗೂ ಹೋದನು.

ದೃಷ್ಟ್ವಾ ಚ ವಿಧಿವತ್ ತಾನಿ ಧನಂ ಚಾಪಿ ದದೌ ಪುನಃ ।
ಕಳಿಂಗರಾಷ್ಟ್ರದ್ವಾರೇ ತು ಬ್ರಾಹ್ಮಣಾಃ ಪಾಂಡವಾನುಗಾಃ ।
ಅಭ್ಯನುಜ್ಞಾಯ ಕೌಂತೇಯಮುಪಾವರ್ತಂತ ಭಾರತ ॥೧೦॥

ಅವುಗಳನ್ನೆಲ್ಲಾ ನೋಡಿ, ವಿಧಿಪೂರ್ವಕವಾಗಿ ಪುನಃ ಧನವನ್ನು ದಾನಮಾಡಿದನು. ಭಾರತನೇ, ಕಳಿಂಗದೇಶದ ದ್ವಾರದಲ್ಲಿ ಅವನನ್ನು ಅನುಸರಿಸಿಕೊಂಡು ಬಂದ ಬ್ರಾಹ್ಮಣರು ಅವನ ಅನುಮತಿಯನ್ನು ಪಡೆದು ಹಿಂದಿರುಗಿದರು.

ಸ ತು ತೈರಭ್ಯನುಜ್ಞಾತಃ ಕುಂತೀಪುತ್ರೋ ಧನಂಜಯಃ ।
ಸಹಾಯೈರಲ್ಪಕೈಃ ಶೂರೈಃ ಪ್ರಯಯೌ ಲವಣಾರ್ಣವಮ್ ॥೧೨॥

ಕುಂತೀಪುತ್ರನಾದ ಧನಂಜಯನು ಅವರ ಅನುಮತಿಯನ್ನು ಪಡೆದು ಅಲ್ಪಸಂಖ್ಯೆಯ ಶೂರರ ಜೊತೆಯಲ್ಲಿ ಲವಣಸಮುದ್ರದ ಕಡೆಗೆ ಹೊರಟನು.

ಸ ಕಳಿಂಗಾನತಿಕ್ರಮ್ಯ ದೇಶಾನಾಯತನಾನಿ ಚ ।
ಧರ್ಮಾಣಿ ರಮಣೀಯಾನಿ ಪ್ರೇಕ್ಷಮಾಣೋ ಯಯೌ ಪ್ರಭುಃ ॥೧೩॥

ಸಮರ್ಥನಾದ ಅವನು ಕಳಿಂಗದೇಶವನ್ನು ದಾಟಿ, ಧಾರ್ಮಿಕವೂ ಮತ್ತು ಮನೋಹರವೂ ಆದ ದೇಶಗಳನ್ನೂ ಮತ್ತು ಕ್ಷೇತ್ರಗಳನ್ನೂ ನೋಡುತ್ತಾ ನಡೆದನು.

ಶೂರ್ಪಾಕಾರಮಥಾಪ್ಲುತ್ಯ ಸಾಗರಾನೂಪಮಾಶ್ರಿತಃ ।
ಮಹೇಂದ್ರಪರ್ವತಂ ದೃಷ್ಟ್ವಾ ತಾಪಸೈರುಪಶೋಭಿತಮ್ ॥೧೪॥

ಅವನು ಸಾಗರದ ತೀರವನ್ನು ತಲುಪಿ, ಶೂರ್ಪಾಕಾರದಲ್ಲಿ ಸ್ನಾನವನ್ನು ಮಾಡಿ ಋಷಿಗಳಿಂದ ಸೇವಿತವಾದ ಮಹೇಂದ್ರಪರ್ವತವನ್ನು ನೋಡಿದನು.

ಗೋದಾವರ್ಯಾಂ ತತಃ ಸ್ನಾತ್ವಾ ತಾಮತೀತ್ಯ ಮಹಾಬಲಃ ।
ಕಾವೇರೀಂ ತಾಮಥಾಸಾದ್ಯ ಸಂಗಮೇ ಸಾಗರಸ್ಯ ಹ ।
ಸ್ನಾತ್ವಾ ಸಂಪೂಜ್ಯ ದೇವಾಂಶ್ಚ ಋಷೀಂಶ್ಚ ಪಿತೃಭಿಃ ಸಹ ॥೧೫॥

ಮಹಾಬಲನಾದ ಅವನು ಅನಂತರ ಗೋದಾವರಿಯಲ್ಲಿ ಸ್ನಾನಮಾಡಿ ಅದನ್ನು ದಾಟಿ, ಕಾವೇರಿಸಾಗರಸಂಗಮವನ್ನು ತಲುಪಿ, ಅಲ್ಲಿ ಸ್ನಾನವನ್ನು ಮಾಡಿ, ಪಿತೃಗಳನ್ನೂ, ಋಷಿಗಳನ್ನೂ ಮತ್ತು ದೇವತೆಗಳನ್ನೂ ಪೂಜಿಸಿದನು.

ಸಮುದ್ರತೀರೇಣ ಶನೈರ್ಮಣಲೂರಂ ಜಗಾಮ ಹ ।
ತತ್ರ ಸರ್ವಾಣಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ॥೧೬॥

ಸಮುದ್ರತೀರದಲ್ಲೇ ಹೋಗುತ್ತಾ ಅಲ್ಲಿದ್ದ ಎಲ್ಲಾ ತೀರ್ಥಗಳನ್ನು ಮತ್ತು ಪವಿತ್ರವಾದ ಕ್ಷೇತ್ರಗಳನ್ನೂ ನೋಡುತ್ತಾ ಮಣಲೂರನ್ನು ತಲುಪಿದನು.

ಅತ್ರ ತ್ರಯೋದಶೇ ಮಾಸೇ ಮಣಲೂರೇಶ್ವರಂ ಪ್ರಭುಮ್ ।
ಅನುಗಮ್ಯ ಮಹಾಬಾಹುಮಭ್ಯಗಚ್ಛನ್ಮಹೀಪತಿಮ್ ॥೧೭॥

ಇಂದ್ರಪ್ರಸ್ಥದಿಂದ ಹೊರಟ ಹದಿಮೂರನೆಯ ತಿಂಗಳಿನಲ್ಲಿ ಹೀಗೆ ಸತತವಾಗಿ ಪ್ರಯಾಣ ಮಾಡುತ್ತಾ ಮಹಾಬಾಹುವಾದ, ಸಮರ್ಥನಾದ, ಮಣಲೂರರಾಜನನ್ನು ಸಮೀಪಿಸಿದನು.

ಮಣಲೂರೇಶ್ವರಂ ರಾಜನ್ ಧರ್ಮಜ್ಞಂ ಚಿತ್ರವಾಹನಮ್ ।
ಸರ್ವಶಾಸ್ತ್ರೇಷು ನೇತಾರಂ ಸರ್ವಾಸ್ತ್ರಜ್ಞಮಕಲ್ಮಷಮ್ ।
ಧರ್ಮೇ ಸತ್ಯೇ ದಮೇ ಶೌಚೇ ಶೌರ್ಯೇ ಚೈವ ವಿಶೇಷತಃ ॥೧೯॥

ರಾಜನೇ, ಮಣಲೂರ ಅಧಿಪತಿಯಾದ ಚಿತ್ರವಾಹನ ಎಂಬ ರಾಜನು ಧರ್ಮಜ್ಞನಾಗಿದ್ದನು. ಸರ್ವಶಾಸ್ತ್ರಗಳಲ್ಲಿ ನಿಪುಣನೂ, ಸರ್ವಾಸ್ತ್ರವನ್ನು ತಿಳಿದವನೂ, ಕಲ್ಮಶರಹಿತನಾದವನೂ, ವಿಶೇಷವಾಗಿ ಧರ್ಮದಲ್ಲಿಯೂ, ಸತ್ಯದಲ್ಲಿಯೂ, ದಮದಲ್ಲಿಯೂ, ಶೌಚದಲ್ಲಿಯೂ ರತನಾದವನು ಆಗಿದ್ದನು.

ದ್ವಿಜರಾಜಋಷೀಣಾಂ ಚ ಧಾರ್ಮಿಕಾಣಾಂ ಮಹಾಸ್ಥಲೇ ।
ಕೀರ್ತನೇ ಚೋಪಮಾಭೂತಂ ಕ್ಷತ್ರಧರ್ಮವಿದುತ್ತಮಮ್ ।
ತಸ್ಯ ಚಿತ್ರಾಂಗದಾ ನಾಮ ದುಹಿತಾ ಚಾರುದರ್ಶನಾ ॥೨೦॥

ಧಾರ್ಮಿಕರಾದ ಬ್ರಾಹ್ಮಣರೂ ಮತ್ತು ರಾಜರ್ಷಿಗಳೂ ದೊಡ್ಡಸ್ಥಳದಲ್ಲಿ ಸೇರಿ ಮಾತನಾಡುವಾಗ ಕ್ಷತ್ರಿಯಧರ್ಮವನ್ನು ತಿಳಿದು ಶ್ರೇಷ್ಠನಾಗಿದ್ದ ಅವನು ದೃಷ್ಟಾಂತವಾಗಿರುತ್ತಿದ್ದನು.

ತಾಂ ದದರ್ಶ ಪುರೇ ತಸ್ಮಿನ್ ವಿಚರಂತೀಂ ಯದೃಚ್ಛಯಾ ।
ದೃಷ್ಟ್ವಾ ಚ ತಾಂ ವರಾರೋಹಾಂ ಚಕಮೇ ಚೈತ್ರವಾಹನೀಮ್ ॥೨೧॥

ಅವನಿಗೆ ಮನೋಹರಳಾದ ಚಿತ್ರಾಂಗದೆ ಎಂಬ ಮಗಳಿದ್ದಳು. ಆ ಪಟ್ಟಣದಲ್ಲಿ ಸಂಚರಿಸುತ್ತಿದ್ದ ಚಿತ್ರವಾಹನನ ಮಗಳಾದ ಸುಂದರಿಯಾದ ಚಿತ್ರಾಂಗದೆಯನ್ನು ಅಕಸ್ಮಾತ್ತಾಗಿ ನೋಡಿ ಅವಳಲ್ಲಿ ಕಾಮವನ್ನು ಹೊಂದಿದನು.

ಅಭಿಗಮ್ಯ ಚ ರಾಜಾನಂ ಜ್ಞಾಪಯತ್ ಸ್ವಂ ಪ್ರಯೋಜನಮ್ ।
ತಮುವಾಚಾಥ ರಾಜಾ ಸ ಸಾಂತ್ವಪೂರ್ವಮಿದಂ ವಚಃ ॥೨೨॥

ಅವನು ರಾಜನನ್ನು ಸಮೀಪಿಸಿ ತನ್ನ ಉದ್ದೇಶವನ್ನು ತಿಳಿಸಿದನು. ರಾಜನು, ಸಮಾಧಾನಪೂರ್ವಕವಾಗಿ ಈ ಮಾತನ್ನಾಡಿದನು.

ರಾಜಾ ಪ್ರಭಾಕರೋ ನಾಮ ಕುಲೇಽಸ್ಮಿನ್ ಸಂಬಭೂವ ಹ ।
ಅಪುತ್ರಃ ಪ್ರಸವೇನಾರ್ಥೀ ತಪಸ್ತೇಪೇ ಸ ಚೋತ್ತಮಮ್ ॥೨೩॥

ಈ ಕುಲದಲ್ಲಿ ಹಿಂದೆ ಪ್ರಭಾಕರನೆಂಬ ರಾಜನಿದ್ದನು. ಮಕ್ಕಳಿಲ್ಲದ ಅವನು ಸಂತಾನವನ್ನು ಪಡೆಯುವ ಉದ್ದೇಶದಿಂದ ಶ್ರೇಷ್ಠವಾದ ತಪಸ್ಸನ್ನು ಮಾಡಿದನು.

ಉಗ್ರೇಣ ತಪಸಾ ತೇನ ಪ್ರಣಿಪತ್ಯ ಪ್ರಣಮ್ಯ ಚ ।
ಈಶ್ವರಸ್ತೋಷಿತಸ್ತಾತ ದೇವದೇವ ಉಮಾಪತಿಃ ॥೨೪॥

ಅವನು ಉಗ್ರವಾದ ತಪಸ್ಸನ್ನು ಮಾಡಿದುದರಿಂದ ಸಂತುಷ್ಟರಾದ ದೇವದೇವನಾದ ಉಮಾಪತಿಯಾದ ಈಶ್ವರನಿಗೆ ನಮಸ್ಕಾರವನ್ನು ಮಾಡಿದನು.

ಸ ತಸ್ಮೈ ಭಗವಾನ್ ಪ್ರಾದಾದೇಕಪ್ರಸವಜಂ ಕುಲೇ ।
ಏಕೈಕಃ ಪ್ರಸವಸ್ತಸ್ಮಾದ್ ಭವತ್ಯಸ್ಮಿನ್ ಕುಲೇ ಸದಾ ॥೨೫॥

ಅವನಿಗೆ ಪೂಜ್ಯನಾದ ಉಮಾಪತಿಯು ನಿಮ್ಮ ಕುಲದಲ್ಲಿ ಒಂದೊಂದೇ ಸಂತಾನವು ಉಂಟಾಗುತ್ತದೆ ಎಂದು ವರವನ್ನು ಕೊಟ್ಟನು. ಆದ್ದರಿಂದ ಈ ನಮ್ಮ ಕುಲದಲ್ಲಿ ಯಾವಾಗಲೂ ಒಂದೇ ಸಂತಾನವುಂಟಾಗುತ್ತದೆ.

ತೇಷಾಂ ಕುಮಾರಾಃ ಪೂರ್ವೇಷಾಂ ಸರ್ವೇಷಾಂ ಮಮ ಜಜ್ಞಿರೇ ।
ಕನ್ಯಾ ತು ಮಮ ಜಾತೇಯಂ ಕುಲಸ್ಯೋತ್ಪಾದನೀ ಧ್ರುವಮ್ ॥೨೬॥

ನನ್ನ ಎಲ್ಲಾ ಪೂರ್ವಜರಿಗೂ ಒಬ್ಬ ಪುತ್ರನು ಜನಿಸಿದನು. ನನಗೆ ಮಾತ್ರ ನಿಶ್ಚಯವಾಗಿ ನಮ್ಮ ಕುಲವನ್ನು ಬೆಳೆಸುವ ಈ ಕನ್ಯೆ ಜನಿಸಿದಳು.

ಪುತ್ರೋ ಮಮೈವೇತಿ ಮೇ ಭಾವನಾ ಪುರುಷೋತ್ತಮ ।
ಪುತ್ರಿಕಾ ಹೇತಿ ವಿಧಿನಾ ಸಮ್ಮತಾ ಭರತರ್ಷಭ ॥೨೭॥

ಪುರುಷೋತ್ತಮನಾದ ಅರ್ಜುನನೇ, ಇವಳನ್ನು ನನ್ನ ಮಗನೆಂದೇ ಭಾವಿಸಿದ್ದೇನೆ. ಭರತರ್ಷಭನೇ, ಮಗಳೇ ಮಗ ಎಂಬ ವೇದವಾಕ್ಯವು ಇದಕ್ಕೆ ಸಮ್ಮತಿಯನ್ನು ಕೊಡುತ್ತದೆ. (ಹೇತು ವಿಧಿನಾ. ಪಾ)

ತಸ್ಮಾದೇಕಃ ಸುತೋ ಯೋಽಸ್ಯಾಂ ಜಾಯತೇ ಭಾರತ ತ್ವಯಾ ।
ಏತಚ್ಛುಲ್ಕಂ ಭವತ್ವಸ್ಯಾಂ ಕುಲಕೃಜ್ಜಾಯತಾಮಿತಿ ।
ಏತೇನ ಸಮಯೇನೇಮಾಂ ಪ್ರತಿಗೃಹ್ಣೀಷ್ವ ಭಾರತ ॥೨೮॥

ಆದ್ದರಿಂದ ಭಾರತನೇ, ನಿನ್ನಿಂದ ಇವಳಲ್ಲಿ ಹುಟ್ಟುವ ಮಗನನ್ನು ಶುಲ್ಕವಾಗಿ ಕೇಳುತ್ತಿದ್ದೇನೆ. ಇವಳಲ್ಲಿ ಕುಲವರ್ಧಕನಾದ ಪುತ್ರನು ಜನಿಸಲಿ. ಭಾರತನೇ, ಈ ನಿಯಮವನ್ನು ಒಪ್ಪಿ ನೀನು ಇವಳನ್ನು ಸ್ವೀಕರಿಸು.

ವೈಶಂಪಾಯನಃ

ಸ ತಥೇತಿ ಪ್ರತಿಜ್ಞಾಯ ತಾಂ ಕನ್ಯಾಂ ಪ್ರತಿಗೃಹ್ಯ ಚ ।
ಮಾಸೇ ತ್ರಯೋದಶೇ ಪಾರ್ಥಃ ಕೃತ್ವಾ ವೈವಾಹಿಕೀಂ ಕ್ರಿಯಾಮ್ ।
ಉವಾಸ ನಗರೇ ತಸ್ಮಿನ್ ಮಾಸಾಂಸ್ತ್ರೀನ್ ಸ ತಯಾ ಸಹ ॥೨೯॥

ಅರ್ಜುನನು ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ ಆ ಕನ್ಯೆಯನ್ನು ಸ್ವೀಕರಿಸಿ, ಹದಿಮೂರನೆಯ ತಿಂಗಳಿನಲ್ಲಿ ವಿವಾಹವಿಧಿಗಳನ್ನು ನೆರವೇರಿಸಿ, ಆ ನಗರದಲ್ಲಿ ಅವಳ ಜೊತೆಯಲ್ಲಿ ಮೂರು ತಿಂಗಳು ವಾಸಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಸಪ್ತದಶಾಧಿಕದ್ವಿಶತತಮೋಽಧ್ಯಾಯಃ ॥

॥ ಇತಿ ಅರ್ಜುನವನವಾಸಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಪುತ್ರಂ ವೀರಂ ಜನಯಿತ್ವಾರ್ಜುನೋऽತೋ
ಗಚ್ಛನ್ ಪ್ರಭಾಸಂ ಶಾಪತೋ ಗ್ರಾಹದೇಹಾಃ ।
ಅಮೂಮುಚಚ್ಚಾಪ್ಸರಸಃ ಪಂಚ
ತಾಭಿರ್ಗೃಹೀತಃ ಪ್ರವಿಕೃಷ್ಯ ತೀರಂ ॥೧೬೪॥

ವೀರನಾದ ಬಭ್ರುವಾಹನನನ್ನು ಹುಟ್ಟಿಸಿ ಅರ್ಜುನ ಅಲ್ಲಿಂದ ಪ್ರಭಾಸಕ್ಕೆ ಹೋಗುತ್ತ ದಾರಿಯಲ್ಲಿ ಶಾಪದಿಂದ ಮೊಸಳೆಯ ಜನ್ಮ ಹೊಂದಿದ್ದ ಅವರು ಅಪ್ಸರೆಯರನ್ನು, ಅವರು ಈತನನ್ನು ಹಿಡಿದಾಗ, ತೀರಕ್ಕೆ ಎಳೆದು ತಂದು ಶಾಪದಿಂದ ವಿಮುಕ್ತಗೊಳಿಸಿದ.

ಏವಂ ಹಿ ತಾಸಾಂ ಶಾಪಮೋಕ್ಷಃ ಪ್ರದತ್ತೋ
ಯದಾಖಿಲಾ ವೋ ಯುಗಪತ್ ಸಂಪ್ರಕರ್ಷೇತ್ ।
ಏಕಸ್ತದಾ ನಿಜರೂಪಾಪ್ತಿರೇವೇ-
ತ್ಯಲಂ ತುಷ್ಟೇನ ಬ್ರಾಹ್ಮಣೇನಾನತಾನಾಂ ॥೧೬೫॥

ಒಬ್ಬ ಬ್ರಾಹ್ಮಣನಿಂದ ಶಪ್ತರಾದ ಈ ಅಪ್ಸರೆಯರು ಅವನಿಗೆ ಶರನಾದಾಗ, ಸಂತುಷ್ಟನಾದ ಆ ಬ್ರಾಹ್ಮಣ 'ಬಲಿಷ್ಠನಾದ ಒಬ್ಬನೇ ವ್ಯಕ್ತಿ ಯಾವಾಗ ನಿಮ್ಮೆಲ್ಲರನ್ನೂ ಜೊತೆಗೇ ತೀರಕ್ಕೆ ಎಳೆದು ತರುವನೋ ಆಗಲೆ ಅವನಿಂದ ನಿಮಗೆ ನಿಮ್ಮ ನಿಜ ರೂಪ ಲಭಿಸುತ್ತದೆ' ಎಂದು ಅವರಿಗೆ ಶಾಪಮೋಕ್ಷ ನೀಡಿದ.

ಇನ್ನೂರ ಹದಿನೆಂಟನೆಯ ಅಧ್ಯಾಯ

(ದಕ್ಷಿಣ ಸಮುದ್ರತೀರದಲ್ಲಿ ನಾರೀತೀರ್ಥದಲ್ಲಿ ಅರ್ಜುನನಿಂದ ಅಪ್ಸರೆಯರ ಮೋಚನ. ಮಣಲೂರಿಗೆ ಹಿಂದಿರುಗಿ, ಚಿತ್ರವಾಹನನಿಗೆ ಬಭ್ರುವಾಹನನನ್ನು ಸಮರ್ಪಿಸಿ ಪುನಃ ತೀರ್ಥಯಾತ್ರಾಗಮನ.)

ವೈಶಂಪಾಯನಃ

ತತಃ ಸಮುದ್ರೇ ತೀರ್ಥಾನಿ ದಕ್ಷಿಣೇ ಭರತರ್ಷಭ ।
ಅಭ್ಯಗಚ್ಛತ್ ಸುಪುಣ್ಯಾನಿ ರಹಿತಾನಿ ತಪಸ್ವಿಭಿಃ ॥೧॥

ಭರತರ್ಷಭನೇ, ಅನಂತರ ಅರ್ಜುನನು ದಕ್ಷಿಣಸಮುದ್ರದ ಸಮೀಪದಲ್ಲಿದ್ದ, ತಪಸ್ವಿಗಳಿಂದ ರಹಿತವಾದ ಪವಿತ್ರವಾದ ತೀರ್ಥಗಳಿಗೆ ಬಂದನು.

ವರ್ಜಯಂತಿ ಸ್ಮ ತೀರ್ಥಾನಿ ಪಂಚ ತತ್ರ ತು ತಾಪಸಾಃ ।
ಅವತೀರ್ಣಾನಿ ತಾನ್ಯಾಸನ್ ಪುರಸ್ತಾತ್ ತು ತಪಸ್ವಿಭಿಃ ॥೨॥

ಹಿಂದೆ ತಪಸ್ವಿಗಳು ಸೇವಿಸುತ್ತಿದ್ದ ಆ ತೀರ್ಥಗಳನ್ನು ಈಗ ಎಲ್ಲ ಮುನಿಗಳೂ ವರ್ಜಿಸುತ್ತಿದ್ದರು.

ಅಗಸ್ತ್ಯತೀರ್ಥಂ ಸೌಭದ್ರಂ ಪೌಲೋಮಂ ಚ ಸುಪಾವನಮ್ ।
ಕರಂ ಧರ್ಮಪ್ಲವಂ ಚೈವ ಹಯಮೇಧಫಲಂ ಚ ಯತ್ ॥೩॥

ಭಾರದ್ವಾಜಸ್ಯ ತೀರ್ಥಂ ಚ ಪಾಪಪ್ರಶಮನಂ ಮಹತ್ ।
ಏವಿಕ್ತಾನ್ಯುಪಲಕ್ಷ್ಯಾಥ ತಾನಿ ತೀರ್ಥಾನಿ ಪಾಂಡವಃ ॥೪॥

ಅರ್ಜುನನು ಅಗಸ್ತ್ಯತೀರ್ಥ, ಸೌಭದ್ರತೀರ್ಥ, ಸುಪಾವನವಾದ ಪೌಲೋಮತೀರ್ಥ, ಅಶ್ವಮೇಧಫಲವನ್ನು ಕೊಟ್ಟು ಧರ್ಮದ ಹಡಗಿನಂತಿರುವ ಕರತೀರ್ಥ, ಮತ್ತು ಪಾಪನಾಶಕವಾದ ದೊಡ್ಡ ಭಾರದ್ವಾಜತೀರ್ಥ, ಈ ತೀರ್ಥಗಳು ನಿರ್ಜನವಾಗಿರುವುದನ್ನು ನೋಡಿದನು.

ದೃಷ್ಟ್ವಾ ಚ ವರ್ಜ್ಯಮಾನಾನಿ ಮುನಿಭಿರ್ಭಾವಿತಾತ್ಮಭಿಃ ।
ತಪಸ್ವಿನಸ್ತತೋಽಪೃಚ್ಛತ್ ಪ್ರಾಂಜಲಿಃ ಕುರುನಂದನಃ ।
ತೀರ್ಥಾನ್ಯೇತಾನಿ ವರ್ಜ್ಯಂತೇ ಕಿಮರ್ಥಂ ಬ್ರಹ್ಮವಾದಿಭಿಃ ॥೫॥

ಶುದ್ಧವಾದ ಮನಸ್ಸುಳ್ಳ ಮುನಿಗಳಿಂದ ವರ್ಜಿಸಲ್ಪಟ್ಟ ಆ ತೀರ್ಥಗಳನ್ನು ನೋಡಿ ಅರ್ಜುನನು ತಪಸ್ವಿಗಳಿಗೆ ಕೈಗಳನ್ನು ಮುಗಿದು ಏಕೆ ಈ ತೀರ್ಥಗಳು ಬ್ರಾಹ್ಮಣರಿಂದ ಮತ್ತು ಋಷಿಗಳಿಂದ ವರ್ಜಿಸಲ್ಪಡುತ್ತವೆ ಎಂದು ಕೇಳಿದನು.

ತಾಪಸಾಃ

ಗ್ರಾಹಾಃ ಪಂಚ ವಸಂತ್ಯೇಷು ಹರಂತಿ ಚ ತಪೋಧನಾನ್ ।
ಅತ ಏತಾನಿ ವರ್ಜ್ಯಂತೇ ತೀರ್ಥಾನಿ ಕುರುಸತ್ತಮ ॥೬॥

ಇವುಗಳಲ್ಲಿ ಐದು ಮೊಸಳೆಗಳಿವೆ. ಅವು ತಪೋಧನರನ್ನು ಎಳೆದುಕೊಂಡು ಹೋಗುತ್ತವೆ. ಕುರುಶ್ರೇಷ್ಠನೇ, ಆ ಕಾರಣದಿಂದ ಋಷಿಗಳು ಈ ತೀರ್ಥಗಳನ್ನು ವರ್ಜಿಸುತ್ತಾರೆ.

ಶ್ರುತ್ವಾ ತು ವಚನಂ ತೇಷಾಂ ವಾರ್ಯಮಾಣಸ್ತಪೋಧನೈಃ ।
ಜಗಾಮ ತಾನಿ ತೀರ್ಥಾನಿ ದ್ರಷ್ಟುಂ ಪುರುಷಸತ್ತಮಃ ॥೭॥

ಪುರುಷಶ್ರೇಷ್ಠನಾದ ಅರ್ಜುನನು ಆ ಮಾತುಗಳನ್ನು ಕೇಳಿ, ತಪಸ್ವಿಗಳು ನಿಷೇಧಮಾಡುತ್ತಿದ್ದರೂ, ಆ ತೀರ್ಥಗಳನ್ನು ನೋಡಲು ಮುಂದೆ ಹೊರಟನು.

ತತಃ ಸೌಭದ್ರಮಾಸಾದ್ಯ ಮಹರ್ಷೇಸ್ತೀರ್ಥಮುತ್ತಮಮ್ ।
ವಿಗಾಹ್ಯ ತರಸಾ ಶೂರಃ ಸ್ನಾನಂ ಚಕ್ರೇ ಪರಂತಪಃ ॥೮॥

ಅನಂತರ ಸೌಭದ್ರನೆಂಬ ಮಹರ್ಷಿಗಳ ಶ್ರೇಷ್ಠವಾದ ತೀರ್ಥವನ್ನು ಸಮೀಪಿಸಿ ಅದರಲ್ಲಿ ಶೀಘ್ರವಾಗಿ ಇಳಿದು, ಶೂರನೂ ಪರಂತಪನೂ ಆದ ಅವನು ಸ್ನಾನವನ್ನು ಮಾಡಿದನು.

ಅಥ ತಂ ಪುರುಷವ್ಯಾಘ್ರಮಂತರ್ಜಲಚರೋ ಮಹಾನ್ ।
ನಿಜಗ್ರಾಹ ಜಲೇ ಗ್ರಾಹಃ ಶಾಪಮೋಕ್ಷಾಯ ಭಾರತ ॥೯॥

ಭಾರತನೇ, ಆಗ ಆ ನೀರಿನ ಒಳಗೆ ಸಂಚರಿಸುತ್ತಿದ್ದ ಒಂದು ದೊಡ್ಡ ಮೊಸಳೆಯು ತನ್ನ ಶಾಪಮೋಕ್ಷಕ್ಕಾಗಿಯೇ ಆ ಪುರುಷವ್ಯಾಘ್ರನನ್ನು ಹಿಡಿಯಿತು.

ಸ ತಮಾದಾಯ ಕೌಂತೇಯೋ ವಿಸ್ಫುರಂತಂ ಜಲೇಚರಮ್ ।
ಉದತಿಷ್ಠನ್ಮಹಾಬಾಹುರ್ಬಲೇನ ಬಲಿನಾಂ ವರಃ ॥೧೦॥

ಬಲಿಷ್ಠರಲ್ಲಿ ಶ್ರೇಷ್ಠನಾದ ಅರ್ಜುನನು ಒದರಾಡುತ್ತಿದ್ದ ಆ ಮೊಸಳೆಯನ್ನು ತನ್ನ ಶಕ್ತಿಯಿಂದ ಹಿಡಿದು ದಡದ ಮೇಲೆ ಎಳೆದುಕೊಂಡು ಬಂದನು.

ಉತ್ಕ್ಷಿಪ್ತ ಏವ ತು ಗ್ರಾಹಃ ಸೋಽರ್ಜುನೇನ ತಪಸ್ವಿನಾ ।
ಬಭೂವ ನಾರೀ ಕಲ್ಯಾಣೀ ಸರ್ವಾಭರಣಭೂಷಿತಾ ॥೧೧॥

ತಪಸ್ವಿಯಾದ ಅರ್ಜುನನು ಆ ಮೊಸಳೆಯನ್ನು ದಡದ ಮೇಲೆ ಹಾಕಿದ ತಕ್ಷಣ, ಅದು ಸರ್ವಾಭರಣಭೂಷಿತಳಾದ ಮನೋಹರಳಾದ ಒಂದು ನಾರಿಯಾಯಿತು.

ದೀಪ್ಯಮಾನಾ ಶ್ರಿಯಾ ರಾಜನ್ ದಿವ್ಯರೂಪಾ ಮನೋರಮಾ ।
ತದದ್ಭುತತಮಂ ದೃಷ್ಟ್ವಾ ಕುಂತೀಪುತ್ರೋ ಧನಂಜಯಃ ।
ತಾಂ ಸ್ತ್ರಿಯಂ ಪರಮಪ್ರೀತ ಇದಂ ವಚನಮಬ್ರವೀತ್ ॥೧೨॥

ರಾಜನೇ, ದಿವ್ಯರೂಪವನ್ನು ಧರಿಸಿ, ಮನೋಹರಳಾಗಿ, ಕಾಂತಿಯಿಂದ ಬಳಲುತ್ತಿದ್ದ ಆ ಅದ್ಭುತದೃಶ್ಯವನ್ನು ನೋಡಿ, ಕುಂತೀಪುತ್ರನಾದ ಅರ್ಜುನನು ಬಹಳ ಸಂತೋಷದಿಂದ ಆ ನಾರಿಯನ್ನು ಕುರಿತು ಈ ಮಾತನ್ನಾಡಿದನು.

ಕಾ ವೈ ತ್ವಮಸಿ ಕಲ್ಯಾಣಿ ಕುತೋ ವಾಽಸಿ ಜಲೇಚರೀ ।
ಕಿಮರ್ಥಂ ಚ ಮಹತ್ ಪಾಪಮಿದಂ ಕೃತವತೀ ಪುರಾ ॥೧೩॥

ಕಲ್ಯಾಣಿಯೇ, ನೀನು ಯಾರು? ನೀನು ಏತಕ್ಕೆ ಜಲಚರಳಾಗಿದ್ದೆ? ನೀನು ಏತಕ್ಕೆ ಹಿಂದೆ ಈ ಮಹಾಪಾಪವನ್ನು ಮಾಡಿದೆ?

ಸ್ತ್ರೀ

ಅಪ್ಸರಾಽಸ್ಮಿ ಮಹಾಬಾಹೋ ದೇವಾರಣ್ಯವಿಚಾರಿಣೀ ।
ಇಷ್ಟಾ ಧನಪತೇರ್ನಿತ್ಯಂ ವೃಂದಾ ನಾಮ ಮಹಾಬಲ ॥೧೪॥

ಮಹಾಬಾಹುವೇ, ನಾನು ದೇವಾರಣ್ಯಗಳಲ್ಲಿ ಸಂಚರಿಸುವ ಅಪ್ಸರೆ. ಮಹಾಬಲನೇ, ನಾನು ಕುಬೇರನಿಗೆ ಯಾವಾಗಲೂ ಪ್ರಿಯಳಾದವಳು. ವೃಂದಾ ಎಂದು ನನ್ನ ಹೆಸರು. (ವರ್ಗಾ ನಾನು. ಪಾ)

ಮಮ ಸಖ್ಯಶ್ಚತಸ್ರೋಽನ್ಯಾಃ ಸರ್ವಾಃ ಕಾಮಗಮಾಃ ಶುಭಾಃ ।
ತಾಭಿಃ ಸಾರ್ಧಂ ಪ್ರಯಾತಾಽಸ್ಮಿ ಲೋಕಪಾಲನಿವೇಶನಮ್ ॥೧೫॥

ಒಮ್ಮೆ ಇಷ್ಟ ಬಂದ ಕಡೆಗೆ ಹೋಗುವ ಸಾಮರ್ಥ್ಯವುಳ್ಳ ಶುಭರಾದ ನನ್ನ ನಾಲ್ಕು ಸಖಿಯರ ಜೊತೆಯಲ್ಲಿ ನಾವೆಲ್ಲರೂ ಲೋಕಪಾಲಕನಾದ ಕುಬೇರನ ಮನೆಗೆ ಹೋದೆವು.

ತತಃ ಪಶ್ಯಾಮ ವೈ ಸರ್ವಾ ಬ್ರಾಹ್ಮಣಂ ಸಂಶಿತವ್ರತಮ್ ।
ರೂಪವಂತಮಧೀಯಾನಮೇಕಮೇಕಾಂತಚಾರಿಣಮ್ ॥೧೬॥

ಆಗ ನಾವೆಲ್ಲರೂ ಅಲ್ಲಿ ಅಧ್ಯಯನವನ್ನು ಮಾಡುತ್ತಿದ್ದ ವ್ರತಸ್ಥನಾದ, ಏಕಾಂತಚಾರಿಯಾದ ಮತ್ತು ಸುಂದರನಾದ ಒಬ್ಬ ಬ್ರಾಹ್ಮಣನನ್ನು ನೋಡಿದೆವು.

ತಸ್ಯೈವ ತಪಸಾ ರಾಜಂಸ್ತದ್ವನಂ ತೇಜಸಾ ವೃತಮ್ ।
ಆದಿತ್ಯ ಇವ ತಂ ದೇಶಂ ಕೃತ್ಸ್ನಮಧ್ಯವಭಾಸಯತ್ ॥೧೭॥

ರಾಜನೇ, ಆ ವನವೆಲ್ಲವೂ ಆ ಬ್ರಾಹ್ಮಣನ ತೇಜಸ್ಸಿನಿಂದ ತುಂಬಿದ್ದಿತು. ಅವನು ಆ ಎಲ್ಲಾ ಪ್ರದೇಶವನ್ನೂ ಸೂರ್ಯನಂತೆ ಬೆಳಗುತ್ತಿದ್ದನು.

ತಸ್ಯ ದೃಷ್ಟ್ವಾ ತಪಸ್ತಾದೃಗ್ ರೂಪಂ ಚಾದ್ಭುತದರ್ಶನಮ್ ।
ಅವತೀರ್ಣೋಽಸ್ಮಿ ತಂ ದೇಶಂ ತಪೋವಿಘ್ನಚಿಕೀರ್ಷಯಾ ॥೧೮॥

ಅವನ ತಪಸ್ಸನ್ನೂ, ಅದ್ಭುತವಾದ ರೂಪವನ್ನೂ ನೋಡಿ, ನಾನು ಅವನ ತಪಸ್ಸಿಗೆ ವಿಘ್ನಮಾಡಲು ಬಯಸಿ, ಆ ಪ್ರದೇಶಕ್ಕೆ ಹೋದೆನು.

ಅಹಂ ಚ ಸೌರಭೇಯೀ ಚ ಸಮೀಚೀ ಲಂಬುಸಾ ಲತಾ ।
ಯೌಗಪದ್ಯೇನ ತಂ ವಿಪ್ರಮಭ್ಯಗಚ್ಛಾಮ ಭಾರತ ॥೧೯॥

ಭಾರತನೇ, ನಾನು, ಸೌರಭೇಯೀ, ಸಮೀಚೀ, ಲಂಬುಸಾ, ಲತಾ ಇವರೆಲ್ಲರೂ ಒಂದೇಕಾಲಕ್ಕೆ ಆ ಬ್ರಾಹ್ಮಣ ಸಮೀಪಕ್ಕೆ ಹೋದೆವು.

ಗಾಯಂತ್ಯೋ ವೈ ಹಸಂತ್ಯಶ್ಚ ನೃತ್ಯಂತ್ಯೋ ವೈ ವರಾಂಗನಾಃ ।
ಪ್ರೇಕ್ಷಣಾನಿ ಚ ಕುರ್ವಂತ್ಯೋ ವಿವೃತಂ ಕಾರಯಂತಿ ಚ ।
ಅನಿಚ್ಛಂತೀರಿವಾಂಗಾನಿ ಹಾಸಭಾವವಿಲಾಸಿತೈಃ ॥೨೦॥

ವರಾಂಗನೆಯರಾದ ನಾವು ಹಾಡುತ್ತಾ, ನಗುತ್ತಾ, ನರ್ತನವನ್ನು ಮಾಡುತ್ತಾ, ಅವನ ಕಡೆಗೆ ನೋಡುತ್ತಾ, ನಮ್ಮ ಹಾವಭಾವವಿಲಾಸಗಳಿಂದ ಇಷ್ಟವಿಲ್ಲದವರಂತೆ ಅವನಿಗೆ ನಮ್ಮ ಅಂಗಾಂಗಗಳನ್ನು ತೋರಿಸುತ್ತಾ (ತಪೋವಿಘ್ನವನ್ನು ಮಾಡಲು ಯತ್ನಿಸಿದೆವು).

ಬಾಹೂರುಮೂಲದಂತಾನಾಂ ದರ್ಶನಂ ವೈ ವರಾಂಗನಾಃ ।
ಕುರ್ವಂತ್ಯೋ ಲೋಭಯಂತ್ಯಶ್ಚ ತಂ ದ್ವಿಜಂ ಪರಿತಃ ಶ್ರಿತಾಃ ॥೨೧॥

ವರಾಂಗನೆಯರಾದ ನಾವು ಬಾಹುಮೂಲವನ್ನೂ, ಊರುಮೂಲವನ್ನೂ ಮತ್ತು ದಂತಗಳನ್ನೂ ಅವನಿಗೆ ತೋರಿಸುತ್ತಾ, ಅವನನ್ನು ಪ್ರಲೋಭಗೊಳಿಸುತ್ತಾ ಸುತ್ತಲೂ ಇದ್ದೆವು.

ಸ ಚ ನಾಸ್ಮಾಸು ಕೃತವಾನ್ ಮನೋ ವೀರ ಕಥಂಚನ ।
ನಾಕಂಪತ ಮಹಾತೇಜಾಃ ಸ್ಥಿತಸ್ತಪಸಿ ನಿರ್ಮಲಃ ॥೨೨॥

ವೀರನೇ, ಅವನು ನಮ್ಮ ಮೇಲೆ ಯಾವರೀತಿಯಲ್ಲಿಯೂ ಮನಸ್ಸನ್ನು ಹಾಕಲಿಲ್ಲ. ಮಹಾತೇಜಸ್ವಿಯೂ, ನಿರ್ಮಲನೂ, ತಪಸ್ವಿಯೂ ಆದ ಅವನು ಅಲುಗಾಡಲೂ ಇಲ್ಲ.

ಸೋಽಶಪತ್ ಕುಪಿತೋಽಸ್ಮಾಂಸ್ತು ಬ್ರಾಹ್ಮಣಃ ಕ್ಷತ್ರಿಯರ್ಷಭ ।
ಗ್ರಾಹಭೂತಾ ಜಲೇ ಯೂಯಂ ಚರಿಷ್ಯಥ ಶತಂ ಸಮಾಃ ॥೨೩॥

ಕ್ಷತ್ರಿಯರ್ಷಭನೇ, ಕುಪಿತನಾದ ಅವನು, ನೀವು ಮೊಸಳೆಗಳಾಗಿ ನೂರುವರ್ಷ ನೀರಿನಲ್ಲಿ ಸಂಚರಿಸುತ್ತಿರಿ ಎಂದು ನಮಗೆ ಶಾಪವನ್ನು ಕೊಟ್ಟನು.

ತತೋ ವಯಂ ಪ್ರವ್ಯಥಿತಾಃ ಸರ್ವಾ ಭಾರತಸತ್ತಮ ।
ಯಾಚಾಮ ಶರಣಂ ವಿಪ್ರಂ ತಂ ತಪೋಧನಮಚ್ಯುತಮ್ ॥೨೪॥

ಭರತಶ್ರೇಷ್ಠನೇ, ಆಗ ನಾವೆಲ್ಲರೂ ದುಃಖಗೊಂಡು ತಪಸ್ಸಿನಿಂದ ಚ್ಯುತನಾಗದ ಆ ತಪೋಧನನಾದ ವಿಪ್ರನಿಗೆ ಶರಣಾಗತರಾಗಿ ಬೇಡಿದೆವು.

ರೂಪೇಣ ವಯಸಾ ಚೈವ ಕಂದರ್ಪೇಣ ಚ ಧರ್ಷಿತಾಃ ।
ಅಯುಕ್ತಂ ಕೃತವತ್ಯಶ್ಚ ಕ್ಷಂತುಮರ್ಹಸಿ ನೋ ದ್ವಿಜ ॥೨೫॥

ಬ್ರಾಹ್ಮಣನೇ, ನಾವು ರೂಪದಿಂದಲೂ, ವಯಸ್ಸಿನಿಂದಲೂ, ಕಾಮದಿಂದಲೂ ದರ್ಪಿತರಾಗಿ ಅಯುಕ್ತವಾದ ಕೆಲಸವನ್ನು ಮಾಡಿದೆವು. ನಮ್ಮನ್ನು ಕ್ಷಮಿಸು.

ಏಷ ಏವ ವಧೋಽಸ್ಮಾಕಂ ಸುಪರ್ಯಾಪ್ತಸ್ತಪೋಧನ ।
ಯದ್ ವಯಂ ಸಂಶಿತಾತ್ಮಾನಂ ಪ್ರಲೋಭಯಿತುಮಾಗತಾಃ ॥೨೬॥

ತಪೋಧನನೇ, ನಿನ್ನಂತಹ ಪರಿಶುದ್ಧನಾದ ತಪಸ್ವಿಯನ್ನು ಪ್ರಲೋಭನೆಗೊಳಿಸಲು ನಾವು ಬಂದುದೇ ನಮಗೆ ಒಂದು ವಧೆ. ನಮಗೆ ಈ ವಧೆಯೇ ಸಾಕು.

ಅವಧ್ಯಾಸ್ತು ಸ್ತ್ರಿಯಃ ಸೃಷ್ಟಾ ಮನ್ಯಂತೇ ಧರ್ಮಚಿಂತಕಾಃ ।
ತಸ್ಮಾದ್ ಧರ್ಮೇಣ ಧರ್ಮಜ್ಞ ನಾಸ್ಮಾನ್ ಹಿಂಸಿತುಮರ್ಹಸಿ ॥೨೭॥

ಧರ್ಮಜ್ಞರಾದವರು ಸ್ತ್ರೀಯರು ಅವಧ್ಯರಾಗಿ ಸೃಷ್ಟರಾಗಿದ್ದಾರೆ ಎಂದು ಭಾವಿಸುತ್ತಾರೆ. ಆದ್ದರಿಂದ ಧರ್ಮಜ್ಞನೇ, ನಮ್ಮನ್ನು ಧರ್ಮದ ದೃಷ್ಟಿಯಿಂದ ಹಿಂಸಿಸಬೇಡ.

ಸರ್ವಭೂತೇಷು ಧರ್ಮಜ್ಞ ಮೈತ್ರೋ ಬ್ರಾಹ್ಮಣ ಉಚ್ಯತೇ ।
ಸತ್ಯೋ ಭವತು ಕಲ್ಯಾಣ ಏಷ ವಾದೋ ಮನೀಷಿಣಾಮ್ ॥೨೮॥

ಧರ್ಮಜ್ಞನೇ, ಎಲ್ಲ ಪ್ರಾಣಿಗಳಲ್ಲಿಯೂ ಬ್ರಾಹ್ಮಣನು ಮೈತ್ರಶೀಲನೆಂದು ಹೇಳುತ್ತಾರೆ. ಕಲ್ಯಾಣನೇ, ವಿವೇಕಿಗಳಾದವರ ಈ ಮಾತು ಸತ್ಯವಾಗಲಿ.

ಶರಣಂ ಚ ಪ್ರಪನ್ನಾನಾಂ ಶಿಷ್ಟಾಃ ಕುರ್ವಂತಿ ಪಾಲನಮ್ ।
ಶರಣಂ ತ್ವಾಂ ಪ್ರಪನ್ನಾಃ ಸ್ಮ ತಸ್ಮಾತ್ ತ್ವಂ ಕ್ಷಂತುಮರ್ಹಸಿ ॥೨೯॥

ಏವಮುಕ್ತಃ ಸ ಧರ್ಮಾತ್ಮಾ ಬ್ರಾಹ್ಮಣಃ ಶುಭಕರ್ಮಕೃತ್ ।
ಪ್ರಸಾದಂ ಕೃತವಾನ್ ವೀರ ರವಿಸೋಮಸಮಪ್ರಭಃ ॥೩೦॥

ಶಿಷ್ಟರಾದವರು ಶರಣಾಗತರಾದವರ ರಕ್ಷಣೆಯನ್ನು ಮಾಡುತ್ತಾರೆ. ನಾವು ನಿನಗೆ ಶರಣಾಗತರಾಗಿದ್ದೇವೆ. ನಮ್ಮನ್ನು ರಕ್ಷಿಸು. ವೀರನೇ, ಅವರು ಹೀಗೆ ಹೇಳಿದಾಗ, ಆ ಧರ್ಮಾತ್ಮನೂ, ಶುಭಕರ್ಮವನ್ನು ಮಾಡುವವನೂ, ಚಂದ್ರಸೂರ್ಯರ ಕಾಂತಿಯನ್ನು ಹೊಂದಿದವನೂ ಆದ ಆ ಬ್ರಾಹ್ಮಣನು ಅವರಿಗೆ ಅನುಗ್ರಹವನ್ನು ಮಾಡಿದನು.

ಬ್ರಾಹ್ಮಣಃ

ದಶಂ ಶತಸಹಸ್ರಂ ಚ ಸರ್ವಮಕ್ಷಯವಾಚಕಮ್ ।
ಪರಿಮಾಣಂ ಶತಂ ತ್ವೇತನ್ನೇದಮಕ್ಷಯವಾಚಕಮ್ ॥೩೧॥

ದಶ, ಶತ, ಸಹಸ್ರ ಈ ಶಬ್ದಗಳೆಲ್ಲವೂ ಅಕ್ಷಯವಾಚಕಗಳು. ನಾನು ಶಾಪಕೊಡುವಾಗ ಹೇಳಿದ ಶತ ಶಬ್ದವು ಅಕ್ಷಯವಾಚಕವಾಗಿರುವುದಿಲ್ಲ.

ಯದಾ ಚ ವೋ ಗ್ರಾಹಭೂತಾ ಗೃಹ್ಣಂತೀಃ ಪುರುಷಾನ್ ಜಲೇ ।
ಉತ್ತರಿಷ್ಯೇಜ್ಜಲಾತ್ ಕಶ್ಚಿತ್ ಸ್ಥಲಂ ಪುರುಷಸತ್ತಮಃ ॥೩೨॥

ತದಾ ಯೂಯಂ ಪುನಃ ಸರ್ವಾಃ ಸ್ವಂ ರೂಪಂ ಪ್ರತಿಪತ್ಸ್ಯಥ ।
ಅನೃತಂ ನೋಕ್ತಪೂರ್ವಂ ಮೇ ಭವಿತಾऽಪಿ ಕದಾಚನ ॥೩೩॥

ಮೊಸಳೆಗಳಾಗಿ ನೀರಿನಲ್ಲಿ ಮನುಷ್ಯರನ್ನು ಹಿಡಿಯುವ ನಿಮ್ಮನ್ನು ಯಾವಾಗ ಒಬ್ಬ ಪುರುಷಶ್ರೇಷ್ಠನು ನೀರಿನಿಂದ ದಡಕ್ಕೆ ಎಳೆದುಹಾಕುತ್ತಾನೋ, ಆಗ ನೀವೆಲ್ಲರೂ ನಿಮ್ಮ ನಿಮ್ಮ ರೂಪಗಳನ್ನು ಹೊಂದುವಿರಿ. ನನ್ನ ಮಾತು ಹಿಂದೆ ಎಂದೂ ಅನೃತವಾಗಿಲ್ಲ, ಮುಂದೆ ಯಾವಾಗಲೂ ಆಗುವುದಿಲ್ಲ.

ತಾನಿ ತೀರ್ಥಾನಿ ಸರ್ವಾಣಿ ತತಃ ಪ್ರಭೃತಿ ಚೈವ ಹ ।
ನಾರೀತೀರ್ಥಾನಿ ನಾಮ್ನೇಹ ಖ್ಯಾತಿಂ ಯಾಸ್ಯಂತಿ ಸರ್ವಶಃ ।
ಪುಣ್ಯಾನಿ ಚ ಭವಿಷ್ಯಂತಿ ಪಾವನಾನಿ ಮನೀಷಿಣಾಮ್ ॥೩೪॥

ಆ ತೀರ್ಥಗಳೆಲ್ಲವೂ ಇನ್ನು ಮುಂದೆ ನಾರೀತೀರ್ಥಗಳೆಂದೇ ಪ್ರಸಿದ್ಧಿಯನ್ನು ಪಡೆಯುತ್ತವೆ. ಅವು ಮುಂದೆ ವಿವೇಕಿಗಳಾದವರಿಗೆ ಪವಿತ್ರವೂ, ಪುಣ್ಯಕರವೂ ಆದ ತೀರ್ಥಗಳಾಗುವುವು.

ವೃಂದಾ

ತತೋऽಭಿವಾದ್ಯ ತಂ ವಿಪ್ರಂ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ವಿಚಿಂತಯಾ ಚಾಪಸೃತ್ಯ ತಸ್ಮಾದ್ ದೇಶಾತ್ ಸುದುಃಖಿತಾಃ ॥೩೫॥

ಆಗ ನಾವು ಆ ಬ್ರಾಹ್ಮಣನಿಗೆ ಪ್ರದಕ್ಷಿಣೆ ಮತ್ತು ನಮಸ್ಕಾರಗಳನ್ನು ಮಾಡಿ, ಆ ಪ್ರದೇಶದಿಂದ ಹೊರಬಂದು ಚಿಂತೆಯಿಂದ ದುಃಖಿತರಾದೆವು.

ಕ್ವ ನು ನಾಮ ವಯಂ ಸರ್ವಾಃ ಕಾಲೇನಾಲ್ಪೇನ ತಂ ನರಮ್ ।
ಸಮಾಗಚ್ಛೇಮ ಯೋ ನಸ್ತದ್ ರೂಪಮಾಪಾದಯೇತ್ ಪುನಃ ॥೩೬॥

ನಾವೆಲ್ಲರೂ, ನಮ್ಮೆಲ್ಲರಿಗೂ ಮೊದಲಿನ ರೂಪವನ್ನು ತಂದುಕೊಡುವ ಆ ಮನುಷ್ಯನನ್ನು ಅಲ್ಪಕಾಲದಲ್ಲಿಯೇ ಎಲ್ಲಿ ಪಡೆಯುತ್ತೇವೆ?

ತಾ ವಯಂ ಚಿಂತಯಿತ್ವೈವಂ ಮುಹೂರ್ತಾದಿವ ಭಾರತ ।
ದೃಷ್ಟವತ್ಯೋ ಮಹಾಭಾಗಂ ದೇವರ್ಷಿಮುತ ನಾರದಮ್ ॥೩೭॥

ಭಾರತನೇ, ಹೀಗೆ ಚಿಂತಿಸುತ್ತಿದ್ದ ನಾವೆಲ್ಲರೂ ಒಂದು ಮುಹೂರ್ತದಲ್ಲಿ ಮಹಾನುಭಾವರಾದ ದೇವರ್ಷಿಗಳಾದ ನಾರದರನ್ನು ನೋಡಿದೆವು.

ಸಂಪ್ರಹೃಷ್ಟಾಃ ಸ್ಮ ತಂ ದೃಷ್ಟ್ವಾ ದೇವರ್ಷಿಮಮಿತದ್ಯುತಿಮ್ ।
ಅಭಿವಾದ್ಯ ಚ ತಂ ಪಾರ್ಥ ಸ್ಥಿತಾ ವ್ರೀಡಿತಚೇತನಾಃ ॥೩೮॥

ಪಾರ್ಥನೇ, ಅಮಿತಕಾಂತಿಯನ್ನುಳ್ಳ ದೇವರ್ಷಿಗಳನ್ನು ನೋಡಿ, ನಾವು ಸಂತೋಷಗೊಂಡು ಅವರಿಗೆ ನಮಸ್ಕರಿಸಿ, ನಾಚಿಕೆಯಿಂದ ನಿಂತುಕೊಂಡೆವು.

ಸ ನೋಽಪೃಚ್ಛದ್ ದುಃಖಮೂಲಮುಕ್ತವತ್ಯೋ ವಯಂ ಚ ತತ್ ।
ಶ್ರುತ್ವಾ ತಚ್ಚ ಯಥಾವೃತ್ತಮಿದಂ ವಚನಮಬ್ರವೀತ್ ॥೩೯॥

ಅವರು ನಮ್ಮ ದುಃಖಕ್ಕೆ ಕಾರಣವನ್ನು ಕೇಳಿದರು. ನಾವು ಎಲ್ಲವನ್ನೂ ಹೇಳಿದೆವು. ನಡೆದ ಎಲ್ಲವನ್ನೂ ಕೇಳಿದ ಅವರು ಈ ಮಾತನ್ನಾಡಿದನು.

ದಕ್ಷಿಣೇ ಸಾಗರಾನೂಪೇ ಪಂಚ ತೀರ್ಥಾನಿ ಸಂತಿ ವೈ ।
ಪುಣ್ಯಾನಿ ರಮಣೀಯಾನಿ ತಾನಿ ಗಚ್ಛತ ಮಾಚಿರಮ್ ॥೪೦॥

ದಕ್ಷಿಣದ ಸಾಗರದ ಸಮೀಪದಲ್ಲಿ ಐದು ತೀರ್ಥಗಳಿವೆ. ಅವು ಪುಣ್ಯವೂ ಮತ್ತು ರಮಣೀಯವೂ ಆಗಿವೆ. ಬೇಗ ಅಲ್ಲಿಗೆ ಹೋಗಿ.

ತತ್ರಾಶು ಪುರುಷವ್ಯಾಘ್ರಃ ಪಾಂಡವೇಯೋ ಧನಂಜಯಃ ।
ಮೋಕ್ಷಯಿಷ್ಯತಿ ಶುದ್ಧಾತ್ಮಾ ಪಾಪಾದಸ್ಮಾನ್ನ ಸಂಶಯಃ ॥೪೧॥

ಅಲ್ಲಿ ಪುರುಷವ್ಯಾಘ್ರನಾದ, ಶುದ್ಧಾತ್ಮನಾದ, ಪಾಂಡುಪುತ್ರನಾದ ಧನಂಜಯನು ಬೇಗ ನಿಮ್ಮನ್ನು ಈ ಪಾಪದಿಂದ ಬಿಡುಗಡೆಗೊಳಿಸುತ್ತಾನೆ. ಇದರಲ್ಲಿ ಸಂಶಯವಿಲ್ಲ.

ವೃಂದಾ

ಇತ್ಯುಕ್ತ್ವಾ ನಾರದಃ ಸರ್ವಾಸ್ತತ್ರೈವಾಂತರಧೀಯತ ।
ತಸ್ಮಾತ್ ಸರ್ವಾ ವಯಂ ವೀರ ನಿವಸಾಮೋಽತ್ರ ನಿತ್ಯಶಃ ॥೪೨॥

ನಾರದರು ನಮಗೆಲ್ಲರಿಗೂ ಹೀಗೆ ಹೇಳಿ ಅಲ್ಲಿಯೇ ಅದೃಶ್ಯರಾದರು. ವೀರನೇ, ಆ ಕಾರಣದಿಂದ ನಾವೆಲ್ಲರೂ ಯಾವಾಗಲೂ ಇಲ್ಲಿಯೇ ವಾಸಮಾಡುತ್ತಿದ್ದೇವೆ.

ತದಿದಂ ಸತ್ಯಮೇವಾದ್ಯ ಮೋಕ್ಷಿತಾಽಹಂ ತ್ವಯಾಽನಘ ।
ಏತಾಸ್ತು ಮಮ ವೈ ಸಖ್ಯಶ್ಚತಸ್ರೋಽನ್ಯಾ ಹ್ರದೇ ಸ್ಥಿತಾಃ ।
ಏತಾ ಅಪಿ ಮಹಾಬಾಹೋ ಮುನಿಶಾಪಾದ್ ವಿಮೋಕ್ಷಯ ॥೪೩॥

ನಾರದರ ಮಾತು ಸತ್ಯವಾಯಿತು. ಅನಘನೇ, ನಾನು ಶಾಪದಿಂದ ಮುಕ್ತಳಾಗಿದ್ದೇನೆ. ಆದರೆ, ನನ್ನ ಉಳಿದ ನಾಲ್ಕು ಸಖಿಯರು ಇಲ್ಲಿಯೇ ತೀರ್ಥಗಳಲ್ಲಿದ್ದಾರೆ. ಮಹಾಬಾಹುವೇ, ಅವರನ್ನೂ ಸಹ ಬ್ರಾಹ್ಮಣಶಾಪದಿಂದ ವಿಮೋಚನೆಗೊಳಿಸು.

ವೈಶಂಪಾಯನಃ

ತಚ್ಛ್ರುತ್ವಾ ಪಾಂಡವಶ್ರೇಷ್ಠಃ ಸರ್ವಾ ಏವ ವಿಶಾಂಪತೇ ।
ತಸ್ಮಾಚ್ಛಾಪಾದದೀನಾತ್ಮಾ ಮೋಕ್ಷಯಾಮಾಸ ವೀರ್ಯವಾನ್ ॥೪೪॥

ರಾಜನೇ, ಅದನ್ನು ಕೇಳಿ ಪಾಂಡವಶ್ರೇಷ್ಠನಾದ, ವೀರ್ಯವಂತನಾದ ಅರ್ಜುನನು ಉದಾರಮನಸ್ಸಿನಿಂದ ಅವರೆಲ್ಲರನ್ನೂ ಶಾಪದಿಂದ ಮೋಚನೆಮಾಡಿದನು.

ಉತ್ಥಾಯ ಚ ಜಲಾತ್ ಸರ್ವಾಃ ಪ್ರತಿಲಭ್ಯ ಸ್ವಕಂ ವಪುಃ ।
ತಾಸ್ತದಾಽಪ್ಸರಸೋ ರಾಜನ್ನದೃಶ್ಯಂತ ಯಥಾ ಪುರಾ ॥೪೫॥

ರಾಜನೇ, ಅವರೆಲ್ಲರೂ ನೀರಿನಿಂದ ಮೇಲೆ ಬಂದು, ತಮ್ಮ ತಮ್ಮ ದೇಹಗಳನ್ನು ಹೊಂದಿ, ಮೊದಲಿನಂತೆ ಅಪ್ಸರೆಯರೇ ಆಗಿ ತೋರಿದರು.

ತೀರ್ಥಾನಿ ಶೋಧಯಿತ್ವಾಽಥ ತಥಾಽನುಜ್ಞಾಯ ತಾಃ ಪ್ರಭುಃ ।
ಚಿತ್ರಾಂಗದಾಂ ಪುನರ್ದ್ರಷ್ಟುಂ ಮಣಲೂರಪುರಂ ಯಯೌ ॥೪೬॥

ಅನಂತರ, ಅರ್ಜುನನು ಆ ತೀರ್ಥಗಳನ್ನು ಶೋಧಿಸಿ, ಆ ನಾರಿಯರ ಅನುಜ್ಞೆಯನ್ನು ಪಡೆದು ಚಿತ್ರಾಂಗದೆಯನ್ನು ನೋಡಲು ಪುನಃ ಮಣಲೂರ ನಗರಕ್ಕೆ ಬಂದನು.

ತಸ್ಯಾಮಜನಯತ್ ಪುತ್ರಂ ರಾಜಾನಂ ಬಭ್ರುವಾಹನಮ್ ।
ತಂ ದೃಷ್ಟ್ವಾ ಪಾಂಡವೋ ರಾಜನ್ ಚಿತ್ರವಾಹನಮಬ್ರವೀತ್ ॥೪೭॥

ಅವಳಲ್ಲಿ ಅವನು ರಾಜನಾದ ಬಭ್ರುವಾಹನನನ್ನು ಮಗನಾಗಿ ಪಡೆದನು. ರಾಜನೇ, ಅವನನ್ನು ನೋಡಿ ಅರ್ಜುನನು ಚಿತ್ರವಾಹನನನ್ನು ಕುರಿತು ಹೇಳಿದನು.

ಚಿತ್ರಾಂಗದಾಯಾಃ ಶುಲ್ಕಾರ್ಥಂ ಗೃಹ್ಣೇಮಂ ಬಭ್ರುವಾಹನಮ್ ।
ಚಿತ್ರಾಂಗದಾಂ ಪುನರ್ವಾಕ್ಯಮಬ್ರವೀತ್ ಪಾಕಶಾಸನಿಃ ॥೪೮॥

ಚಿತ್ರಾಂಗದೆಯ ಶುಲ್ಕದ ಸಲುವಾಗಿ ಈ ಬಭ್ರುವಾಹನನನ್ನು ಸ್ವೀಕರಿಸು. ಇಂದ್ರನ ಪುತ್ರನಾದ ಅರ್ಜುನನು ಚಿತ್ರಾಂಗದೆಯನ್ನು ಕುರಿತು ಪುನಃ ಹೀಗೆ ಹೇಳಿದನು.

ಅನೇನ ತು ಮಹಿಷ್ಯದ್ಯ ಋಣಾನ್ಮುಕ್ತೋ ಜನಾಧಿಪಃ ।
ಇಹೈವ ಭವ ಭದ್ರೇ ತ್ವಂ ಬಭ್ರುವಾಹನವರ್ಧನಾತ್ ॥೪೯॥

ರಾಣಿಯೇ, ಈ ಬಭ್ರುವಾಹನನಿಂದ ರಾಜನು ಋಣಮುಕ್ತನಾಗಿದ್ದಾನೆ. ಭದ್ರೇ, ಬಭ್ರುವಾಹನನನ್ನು ಪೋಷಿಸುವ ಸಲುವಾಗಿ ನೀನು ಇಲ್ಲೇ ಇರು.

ಇಂದ್ರಪ್ರಸ್ಥನಿವಾಸಂ ಮೇ ಆಗತ್ವಾ ತತ್ರ ರಂಸ್ಯಸೇ ।
ಕುಂತೀಂ ಯುಧಿಷ್ಠಿರಂ ಭೀಮಂ ಭ್ರಾತರೌ ಮೇ ಕನೀಯಸೌ ॥೫೦॥

ಆಗತಾ ತತ್ರ ಪಶ್ಯೇಥಾ ಅನ್ಯಾನಪಿ ಚ ಬಾಂಧವಾನ್ ।
ಬಾಂಧವೈಃ ಸಹಿತಾ ಭದ್ರೇ ನಂದಸೇ ತ್ವಮನಿಂದಿತೇ ॥೫೧॥

ನಾನು ಇಂದ್ರಪ್ರಸ್ಥದಲ್ಲಿ ವಾಸಮಾಡುವಾಗ ನೀನು ಅಲ್ಲಿಗೆ ಬಂದು ನನ್ನ ಜೊತೆಯಲ್ಲಿ ಸುಖವಾಗಿರುವಿ. ಅಲ್ಲಿಗೆ ಬಂದು ನೀನು ಕುಂತಿಯನ್ನೂ, ಯುಧಿಷ್ಠಿರನನ್ನೂ, ಭೀಮಸೇನನನ್ನೂ, ನನ್ನ ತಮ್ಮಂದಿರಾದ ನಕುಲಸಹದೇವರನ್ನೂ ಉಳಿದ ಬಂಧುಗಳನ್ನೂ ನೋಡುವಿ. ಅನಿಂದಿತೆಯೇ, ಭದ್ರೆಯೇ, ಬಾಂಧವರಜೊತೆಯಲ್ಲಿ ನೀನು ಸುಖವನ್ನು ಹೊಂದುವಿ.

ಧರ್ಮೇ ಸ್ಥಿತಃ ಸತ್ಯಧೃತಿಃ ಕುಂತೀಪುತ್ರೋ ಯುಧಿಷ್ಠಿರಃ ।
ಜಿತ್ವಾ ತು ಪೃಥಿವೀಂ ಕೃತ್ಸ್ನಾಂ ರಾಜಸೂಯಂ ಕರಿಷ್ಯತಿ ॥೫೨॥

ಧರ್ಮಿಷ್ಠನಾದ, ಸತ್ಯಧೃತಿಯಾದ ಕುಂತೀಪುತ್ರನಾದ ಯುಧಿಷ್ಠಿರನು ಸಮಗ್ರವಾದ ಭೂಮಿಯನ್ನು ಗೆದ್ದು ರಾಜಸೂಯಯಾಗವನ್ನು ಮಾಡುವನು.

ತತ್ರಾಗಚ್ಛಂತಿ ರಾಜಾನಃ ಪೃಥಿವ್ಯಾಂ ನೃಪಸಂಜ್ಞಿತಾಃ ।
ಬಹೂನಿ ರತ್ನಾನ್ಯಾದಾಯ ಆಗಮಿಷ್ಯತಿ ತೇ ಪಿತಾ ॥೫೩॥

ಭೂಮಿಯಲ್ಲಿ ರಾಜನೆಂದು ಕರೆಸಿಕೊಳ್ಳುವ ಎಲ್ಲರೂ ಅಲ್ಲಿಗೆ ಬರುತ್ತಾರೆ. ನಿನ್ನ ತಂದೆಯೂ ಸಹ ಅನೇಕ ರತ್ನಗಳನ್ನು ತೆಗೆದುಕೊಂಡು ಅಲ್ಲಿಗೆ ಬರುವನು.

ಏಕಸಾರ್ಥಂ ಪ್ರಯಾತಾऽಸಿ ಚಿತ್ರವಾಹನಸೇನಯಾ ।
ದ್ರಕ್ಷ್ಯಾಮಿ ರಾಜಸೂಯೇ ತ್ವಾಂ ಪುತ್ರಂ ಪಾಲಯ ಮಾ ಶುಚಃ ॥೫೪॥

ನೀನು ಚಿತ್ರವಾಹನನ ಸೇನೆಯ ಜೊತೆಯಲ್ಲಿ ಒಂದೇ ಗುಂಪಿನಲ್ಲಿ ಬರುವಿ. ನಾನು ನಿನ್ನನ್ನು ರಾಜಸೂಯಯಾಗದಲ್ಲಿ ನೋಡುವೆನು. ಮಗನನ್ನು ರಕ್ಷಿಸು. ಶೋಕಪಡಬೇಡ.

ಬಭ್ರುವಾಹನನಾಮ್ನಾ ತು ಮಮ ಪ್ರಾಣೋ ಬಹಿಶ್ಚರಃ ।
ತಸ್ಮಾದ್ ಭರಸ್ವ ಪುತ್ರಂ ವೈ ಪುರುವಂಶವಿವರ್ಧನಮ್ ॥೫೫॥

ಬಭ್ರುವಾಹನನೆಂದರೆ ಹೊರಗೆ ಸಂಚರಿಸುತ್ತಿರುವ ನನ್ನ ಪ್ರಾಣವೆಂದು ತಿಳಿ. ಆದ್ದರಿಂದ ಪುರುವಂಶವರ್ಧನನಾದ ಈ ಮಗನನ್ನು ಪೋಷಿಸು.

ಚಿತ್ರವಾಹನದಾಯಾದಂ ಧರ್ಮಾತ್ ಪೌರವನಂದನಮ್ ।
ಪಾಂಡವಾನಾಂ ಪ್ರಿಯಂ ಪುತ್ರಂ ತಸ್ಮಾತ್ ಪಾಲಯ ಸರ್ವದಾ ।
ವಿಪ್ರಯೋಗೇಣ ಸಂತಾಪಂ ಮಾ ಕೃಥಾಸ್ತ್ವಮನಿಂದಿತೇ ॥೫೬॥

ಪೌರವನಂದನನಾದ, ಚಿತ್ರವಾಹನನ ಉತ್ತರಾಧಿಕಾರಿಯಾದ, ಪಾಂಡವರಿಗೆ ಪ್ರಿಯನಾದ ಈ ಪುತ್ರನನ್ನು ಆ ಕಾರಣದಿಂದ ಯಾವಾಗಲೂ ಪಾಲಿಸು. ಅನಿಂದಿತೆಯೇ, ನನ್ನ ವಿಯೋಗದಿಂದ ಸಂತಾಪವನ್ನು ಪಡಬೇಡ.

ವೈಶಂಪಾಯನಃ

ಚಿತ್ರಾಂಗದಾಮೇವಮುಕ್ತ್ವಾ ಸಾಗರಾನೂಪಮಾಶ್ರಿತಃ ।
ಸ್ನಾನಂದೂರಂ ಸಮಾಪ್ಲುತ್ಯ ದತ್ವಾ ಬಹುಧನಂ ತದಾ ।
ಕೇರಳಾನ್ ಸಮತಿಕ್ರಮ್ಯ ಗೋಕರ್ಣಮಭಿತೋಽಗಮತ್ ॥೫೭॥

ಅರ್ಜುನನು ಚಿತ್ರಾಂಗದೆಯನ್ನು ಕುರಿತು ಈ ರೀತಿ ಹೇಳಿ ಸಮುದ್ರತೀರಕ್ಕೆ ಹೋಗಿ ಅನಂತಶಯನದಲ್ಲಿ ಸ್ನಾನವನ್ನು ಮಾಡಿ, ಬಹುಧನವನ್ನು ದಾನಮಾಡಿ, ಕೇರಳವನ್ನು ದಾಟಿ, ಗೋಕರ್ಣದ ಸಮೀಪಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟವಿಂಶತ್ಯಧಿಶತತಮೋಽಧ್ಯಾಯಃ॥

॥ ಇತಿ ಅರ್ಜುನವನವಾಸಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ವಿಚಿಂತ್ಯ ಕಾರ್ಯಂ ಯತಿರೂಪಂ ಗೃಹೀತ್ವಾ
ಕುಶಸ್ಥಲೀಂ ಪ್ರಯಯೌ ತಂ ಸಮೀಪೇ ।
ಪ್ರಾಪ್ತಂ ಕೃಷ್ಣಃ ಪ್ರಾಹಸತ್ ಸಂವಿಜಾನನ್
ಸತ್ಯಾಸಹಾಯಃ ಶಯನೀಯಾಧಿರೂಢಃ ॥೧೬೭॥

ಅರ್ಜುನ ತಾನೀಗ ಮಾಡಬೇಕಾದುದನ್ನು ಚೆನ್ನಾಗಿ ಆಲೋಚಿಸಿ ಸಂನ್ಯಾಸಿ ವೇಷಧರಿಸಿ ದ್ವಾರಕೆಗೆ ಹೊರಟ. ರಾತ್ರಿಯಲ್ಲಿ ಸತ್ಯಭಾಮೆಯೊಂದಿಗೆ ಪರ್ಯಂಕದಲ್ಲಿ ಕುಳಿತಿದ್ದ ಕೃಷ್ಣ ಅರ್ಜುನ ತಮ್ಮ ಸಮೀಪಕ್ಕೆ ಬಂದುದನ್ನು ತಿಳಿದು ನಕ್ಕ.

ಸರ್ವಜ್ಞಾ ಸಾ ಲೀಲಯಾ ಹಾಸಹೇತು-
ಮಪೃಚ್ಛತ್ತಂ ಸೋಽಪಿ ತಸ್ಯೈ ಬಭಾಷೇ ।

ಲೀಲಾಭಾಜೌ ದರ್ಶನಾರ್ಥಂ ಪುನಸ್ತಾ-
ವಗಚ್ಛತಾಂ ರೈವತಂ ಶೈಲರಾಜಂ ॥೧೬೮॥

ಸರ್ವಜ್ಞಳಾದರೂ ಲೀಲೆಯಿಂದ ಸತ್ಯಭಾಮೆ ಆ ನಗುವಿಗೆ ಕಾರಣವನ್ನು ಕೇಳಿದಳು. ಕೃಷ್ಣ ಹೇಳಿದ. ಲೀಲೆ ಮಾಡುತ್ತಲೆ ಇಬ್ಬರೂ ಸಂನ್ಯಾಸಿಯ ದರ್ಶನಕ್ಕೆ ರೈವತ ಪರ್ವತಕ್ಕೆ ನಡೆದರು.

★ ★ ★ ★

ಇನ್ನೂರ ಹತ್ತೊಂಭತ್ತನೆಯ ಅಧ್ಯಾಯ

(ಅರ್ಜುನನ ಪ್ರಭಾಸಪ್ರಾಪ್ತಿ. ಸುಭದ್ರೆಯ ಚಿಂತೆಯಿಂದ ಯತಿವೇಷಧಾರಣ. ಕೃಷ್ಣನ ಆಗಮನ, ಸಮ್ಮತಿ ಮತ್ತು ಭೋಜನಾದಿ ವ್ಯವಸ್ಥೆ. ದ್ವಾರಕಾಪಟ್ಟಣಕ್ಕೆ ಪ್ರತಿನಿವೃತ್ತಿ.)

ವೈಶಂಪಾಯನಃ

ಸೋಽಪರಾಂತೇಷು ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ಸರ್ವಾಣಿ ಚಾನುಪೂರ್ವ್ಯೇಣ ಜಗಾಮಾಮಿತವಿಕ್ರಮಃ ॥೧॥

ಅಮಿತವಿಕ್ರಮನಾದ ಅರ್ಜುನನು ಪಶ್ಚಿಮಸಮುದ್ರತೀರದಲ್ಲಿದ್ದ ಎಲ್ಲಾ ತೀರ್ಥಗಳಿಗೂ ಮತ್ತು ಪವಿತ್ರವಾದ ಕ್ಷೇತ್ರಗಳಿಗೂ ಕ್ರಮವಾಗಿ ಹೋದನು.

ಸಮುದ್ರೇ ಪಶ್ಚಿಮೇ ಯಾನಿ ತೀರ್ಥಾನ್ಯಾಯತನಾನಿ ಚ ।
ತಾನಿ ಗತ್ವಾ ಸ ಸರ್ವಾಣಿ ಪ್ರಭಾಸಮುಪಜಗ್ಮಿವಾನ್ ॥೨॥

ಪಶ್ಚಿಮಸಮುದ್ರತೀರದಲ್ಲಿದ್ದ ಎಲ್ಲಾ ತೀರ್ಥಗಳಿಗೂ ಮತ್ತು ಪವಿತ್ರವಾದ ಕ್ಷೇತ್ರಗಳಿಗೂ ಹೋಗಿ, ಅವನು ಪ್ರಭಾಸವನ್ನು ತಲುಪಿದನು.

ಚಿಂತಯಾಮಾಸ ರಾತ್ರೌ ತು ಗದೇನ ಕಥಿತಾಃ ಕಥಾಃ ।
ಸುಭದ್ರಾಯಾಶ್ಚ ಮಾಧುರ್ಯರೂಪಸಂಪದ್ಗುಣಾನಿ ಚ ॥೩॥

ಅವನು ರಾತ್ರಿಯಲ್ಲಿ ಗದನು ಹೇಳಿದ ಸುಭದ್ರೆಯ ಮಾಧುರ್ಯ, ಸದ್ಗುಣ ಮೊದಲಾದ ವಿಷಯದ ಮಾತುಗಳನ್ನು ಚಿಂತಿಸಿದನು.

ಪ್ರಾಪ್ತುಂ ತಾಂ ಚಿಂತಯಾಮಾಸ ಕೋಽತ್ರೋಪಾಯೋ ಭವೇದಿತಿ।
ವೇಷವೈಕೃತಮಾಪನ್ನಃ ಪರಿವ್ರಾಜಕರೂಪಧೃಕ್ ॥೪॥

ಕುಕುರಾಂಧಕವೃಷ್ಣೀನಾಮಜ್ಞಾತೋ ವೇಷಧಾರಣಾತ್ ।
ಭ್ರಮಮಾಣಶ್ಚರನ್ ಭೈಕ್ಷಂ ಪರಿವ್ರಾಜಕವೇಷಧೃಕ್ ॥೫॥

ಅವಳನ್ನು ಪಡೆಯಲು ಯಾವುದು ಉಪಾಯ ಎಂದು ಯೋಚಿಸುತ್ತಾ, ತನ್ನ ವೇಷವನ್ನು ಬದಲಾಯಿಸಿ ಕುಕುರಾಂಧಕವೃಷ್ಣಿಗಳಿಗೆ ತನ್ನ ವೇಷವು ತಿಳಿಯದಂತೆ ಪರಿವ್ರಾಜಕವೇಷವನ್ನು ಧರಿಸಿ, ಭೈಕ್ಷವೃತ್ತಿಯನ್ನು ಮಾಡಿ ತಿರುಗಾಡಿದನು.

ಯೇನ ಕೇನಾಪ್ಯುಪಾಯೇನ ಪ್ರವಿಶ್ಯ ಚ ಗೃಹಂ ಮಹತ್ ।
ದೃಷ್ಟ್ವಾ ಸುಭದ್ರಾಂ ಕೃಷ್ಣಸ್ಯ ಭಗಿನೀಮೇಕಸುಂದರೀಮ್ ॥೬॥

ವಾಸುದೇವಮತಂ ಜ್ಞಾತ್ವಾ ಕರಿಷ್ಯಾಮಿ ಹಿತಂ ಶುಭಮ್ ।
ಏವಂ ವಿನಿಶ್ಚಯಂ ಕೃತ್ವಾ ದೀಕ್ಷಿತೋ ವೈ ತದಾಽಭವತ್ ॥೭॥

ಯಾವ ಉಪಾಯದಿಂದಲಾದರೂ ಕೃಷ್ಣನ ಶ್ರೇಷ್ಠವಾದ ಗೃಹವನ್ನು ಪ್ರವೇಶಿಸಿ, ಕೃಷ್ಣನ ತಂಗಿಯಾದ ಏಕಸುಂದರಿಯಾದ ಸುಭದ್ರೆಯನ್ನು ನೋಡಿ, ಕೃಷ್ಣನ ಅಭಿಪ್ರಾಯವನ್ನು ತಿಳಿದು ಹಿತವನ್ನೂ, ಶುಭವನ್ನೂ ಸಂಪಾದಿಸುತ್ತೇನೆ. ಹೀಗೆ ಚಿಂತನೆಯನ್ನು ಮಾಡಿ ಅವನು ಯತಿರೂಪವನ್ನು ಧರಿಸಿ ದೀಕ್ಷಿತನಾದನು.

ತ್ರಿದಂಡೀ ಮುಂಡಿತಃ ಕುಂಡೀ ಅಕ್ಷಮಾಲಾಂಗುಲೀಯಕಃ ।
ಯೋಗಭಾರವಹಃ ಪಾರ್ಥೋ ವಟವೃಕ್ಷಸ್ಯ ಕೋಟರಮ್ ॥೮॥

ಪ್ರವಿಶನ್ನೇವ ಬೀಭತ್ಸುಶ್ಚಿಂತಯಾಮಾಸ ಕೇಶವಮ್ ।
ಕೇಶವಶ್ಚಿಂತಿತಂ ಜ್ಞಾತ್ವಾ ದಿವ್ಯಜ್ಞಾನೇನ ದೃಷ್ಟವಾನ್ ॥೯॥

ಅರ್ಜುನನು ತಲೆಯನ್ನು ವಪನಮಾಡಿ, ತ್ರಿದಂಡವನ್ನೂ ಮತ್ತು ಕಮಂಡಲವನ್ನೂ ಹಿಡಿದು ಅಕ್ಷಮಾಲೆಯನ್ನು, ಉಂಗುರಗಳನ್ನೂ ಧರಿಸಿ, ತನಗೆ ಬೇಕಾದ ದೇವಪೂಜಾದಿ ಸಾಮಗ್ರಿಗಳನ್ನು ತಾನೇ ಹೊತ್ತುಕೊಂಡು ವಟವೃಕ್ಷದ ಪೊಟರೆಗೆ (ನೆರಳಿಗೆ) ಹೋದನು. ಅರ್ಜುನನು ಅಲ್ಲಿಗೆ ಹೋಗುತ್ತಲೇ, ಕೃಷ್ಣನನ್ನು ಚಿಂತಿಸಿದನು.

ಶಯಾನಃ ಶಯನೇ ಧನ್ಯೇ ಸತ್ಯಭಾಮಾಸಹಾಯವಾನ್ ।
ಕೇಶವಃ ಸಹಸಾ ರಾಜನ್ ಜಹಾಸ ಚ ನನಂದ ಚ ॥೧೦॥

ಕೃಷ್ಣನು ಸತ್ಯಭಾಮೆಯ ಜೊತೆಯಲ್ಲಿ ಶ್ರೇಷ್ಠವಾದ ಹಾಸಿಗೆಯಲ್ಲಿ ಮಲಗಿ, ತನ್ನ ದಿವ್ಯಜ್ಞಾನದಿಂದ ಅರ್ಜುನನ ಚಿಂತಾವಿಷಯವನ್ನು ತಿಳಿದನು. ರಾಜನೇ, ಕೃಷ್ಣನು ಇದ್ದಕ್ಕಿದ್ದಂತೆಯೇ, ನಕ್ಕು ಸಂತೋಷಪಟ್ಟನು.

ಪುನಃ ಪುನಃ ಸತ್ಯಭಾಮಾ ಚಾಬ್ರವೀತ್ ಪುರುಷೋತ್ತಮಮ್ ।
ಭಗವಂಶ್ಚಿಂತಯಾಽಽವಿಷ್ಟಃ ಶಯನೇ ಶಯಿತಃ ಸುಖಮ್ ॥೧೧॥

ಭವಾನ್ ಬಹುಪ್ರಕಾರೇಣ ಜಹಾಸ ಚ ಪುನಃಪುನಃ ।
ಶ್ರೋತವ್ಯಂ ಯದಿ ವಾ ಕೃಷ್ಣ ಪ್ರಸಾದೋ ಯದಿ ಚೇನ್ಮಯಿ ।
ವಕ್ತುಮರ್ಹಸಿ ಲೋಕೇಶ ತಚ್ಛ್ರೋತುಂ ಕಾಮಯೇ ಹ್ಯಹಮ್ ॥೧೨॥

ಸತ್ಯಭಾಮೆಯು ಪುರುಷೋತ್ತಮನಾದ ಕೃಷ್ಣನನ್ನು ಕುರಿತು ಮತ್ತೆ ಮತ್ತೆ ಕೇಳಿದಳು. ಪೂಜ್ಯನೇ, ಚಿಂತೆಯಿಂದ ಕೂಡಿದ್ದ ನೀನು ಹಾಸಿಗೆಯಲ್ಲಿ ಸುಖವಾಗಿ ಮಲಗಿದ್ದೆ. ಈಗ, ಬಹುಪ್ರಕಾರದಿಂದ ಮತ್ತೆ ಮತ್ತೆ ನಗುತ್ತಿದ್ದೀಯೆ. ಕೃಷ್ಣ, ನಾನು ಕೇಳಬಹುದಾದರೆ, ನನ್ನಲ್ಲಿ ನಿನಗೆ ಅನುಗ್ರಹವಿದ್ದರೆ, ನೀನು ಅದಕ್ಕೆ ಕಾರಣವನ್ನು ಹೇಳಬೇಕು. ಲೋಕೇಶನೇ, ನಾನು ಅದನ್ನು ಕೇಳಲು ಬಯಸುತ್ತೇನೆ.

ಶ್ರೀಭಗವಾನ್

ಪಿತೃಷ್ವಸಾಯಾಃ ಪುತ್ರೋ ಮೇ ಭೀಮಸೇನಾನುಜೋಽರ್ಜುನಃ ।
ತೀರ್ಥಯಾತ್ರಾಂ ಗತಃ ಪಾರ್ಥಃ ಕಾರಣಾತ್ ಸಮಯಾತ್ ತದಾ ॥

ನನ್ನ ಸೋದರತ್ತೆಯ ಮಗನಾದ ಭೀಮಸೇನನ ತಮ್ಮನಾದ ಅರ್ಜುನನು ತಾವು ಮಾಡಿಕೊಂಡ ಸಮಯದ ನಿಮಿತ್ತದಿಂದ ತೀರ್ಥಯಾತ್ರೆಗೆ ಹೊರಟನು.

ತೀರ್ಥಯಾತ್ರಾಸಮಾಪ್ತೌ ತು ನಿವೃತ್ತೋ ನಿಶಿ ಭಾರತಃ ।
ಸುಭದ್ರಾಂ ಚಿಂತಯಾನಸ್ತು ತದರ್ಥೇ ಚಾಪಿ ಮಾಂ ಪುನಃ ॥೧೪॥

ಚಿಂತಯನ್ನೇವ ತಾಂ ಭದ್ರೇ ಯತಿರೂಪಧರೋಽಭವತ್ ।
ಯತಿರೂಪಪ್ರತಿಚ್ಛನ್ನೋ ದ್ವಾರಕಾಂ ಪ್ರಾಪ್ಯ ಮಾಧವೀಮ್ ॥೧೫॥

ಅರ್ಜುನನು ತೀರ್ಥಯಾತ್ರೆಯನ್ನು ಮುಗಿಸಿ, ರಾತ್ರಿಯಲ್ಲಿ ಮಲಗಿದಾಗಿ ಸುಭದ್ರೆಯನ್ನು ಕುರಿತು ಚಿಂತಿಸುತ್ತಾ, ಅವಳನ್ನು ಪಡೆಯುವ ಸಲುವಾಗಿ ಪುನಃ ನನ್ನನ್ನೂ ಚಿಂತಿಸುತ್ತಾ ಯತಿವೇಷವನ್ನು ಧರಿಸಿದ್ದಾನೆ.

ಯೇನ ಕೇನಾಪ್ಯುಪಾಯೇನ ದೃಷ್ಟ್ವಾ ತು ವರವರ್ಣಿನೀಮ್ ।
ವಾಸುದೇವಮತಂ ಜ್ಞಾತ್ವಾ ಪ್ರಯತಿಷ್ಯೇ ಮನೋರಥಮ್ ॥೧೬॥

ಯತಿರೂಪದಿಂದ ನನ್ನ ವೇಷವನ್ನು ಮರೆಸಿಕೊಂಡು ದ್ವಾರಕೆಗೆ ಬಂದು ಯಾವುದಾದರೂ ಉಪಾಯದಿಂದ ಸುಂದರಿಯಾದ ಸುಭದ್ರೆಯನ್ನು ನೋಡಿ ಕೃಷ್ಣನ ಅಭಿಪ್ರಾಯವನ್ನು ತಿಳಿದು ನನ್ನ ಮನೋರಥವನ್ನು ಪೂರೈಸಿಕೊಳ್ಳಲು ಪ್ರಯತ್ನಪಡುವೆನು.

ಏವಂ ವ್ಯವಸಿತಃ ಪಾರ್ಥೋ ಯತಿಲಿಂಗೇನ ಪಾಂಡವಃ ।
ಛಾಯಾಯಾಂ ವಟವೃಕ್ಷಸ್ಯ ವೃಷ್ಟಿಂ ವರ್ಷತಿ ವಾಸವೇ ।
ಯೋಗಭಾರಂ ವಹನ್ನೇವ ಮಾನಸಂ ದುಃಖಮಾಪ್ತವಾನ್ ॥೧೭॥

ಪಾಂಡುಪುತ್ರನಾದ ಅರ್ಜುನನು ಹೀಗೆ ನಿರ್ಧರಿಸಿ, ಯತಿವೇಷವನ್ನು ಧರಿಸಿ, ವಟವೃಕ್ಷದ ಛಾಯೆಯಲ್ಲಿ ಇಂದ್ರನು ಮಳೆಯನ್ನು ಸುರಿಸುತ್ತಿರುವಂತೆಯೇ, ತನ್ನ ಯೋಗಭಾರವನ್ನು ಹೊತ್ತುಕೊಂಡು ಕುಳಿತು, ಮನಸ್ಸಿನಲ್ಲಿ ದುಃಖವನ್ನು ಹೊಂದಿದ್ದಾನೆ.

ಈದೃಶಂ ಮಾಂ ವಿಜಾನಾತಿ ಮಾಧವೋ ಯದಿ ಮಾಂ ಸ್ಮರನ್ ।
ಕಿಂಚಿದ್ ವ್ಯಾಜಮವಷ್ಟಭ್ಯ ಯಾಯಾತ್ ಕತಿಪಯೈರ್ದಿನೈಃ ॥೧೮॥

ತದ್ಭಾವಂ ಪ್ರವಿಚಿಂತ್ಯೈವ ಹಸಿತಂ ಮೇ ಸುಲೋಚನೇ ।
ನಾನ್ಯಥಾನ್ಯಾ ವಿಶಂಕೇಥಾಃ ಶಪೇ ಸತ್ಯೇನ ಮೇ ಶುಭೇ ॥೧೯॥

ಮಾಧವನು ನನ್ನನ್ನು ಸ್ಮರಿಸಿ ನಾನು ಈ ಅವಸ್ಥೆಯಲ್ಲಿರುವುದನ್ನು ತಿಳಿದರೆ, ಯಾವುದಾದರೂ ನೆಪವನ್ನು ಮಾಡಿಕೊಂಡು ಕೆಲವರ ಜೊತೆಯಲ್ಲಿ ಇಲ್ಲಿಗೆ ಬರುತ್ತಾನೆ.

ಸುಲೋಚನೆಯೇ, ಅವನ ಈ ಅಭಿಪ್ರಾಯವನ್ನು ಚಿಂತಿಸಿ ನನಗೆ ನಗುವು ಬಂದಿತು. ಬೇರೆ ಏನೂ ಕಾರಣವಿಲ್ಲ. ನನ್ನನ್ನು ಶಂಕಿಸಬೇಡ. ಶುಭಳಾದವಳೇ, ನಾನು ಪ್ರಮಾಣವನ್ನು ಮಾಡಿ ಹೇಳುತ್ತೇನೆ.

ವೈಶಂಪಾಯನಃ

ಭ್ರಾತರಂ ವೋಽಭಿಪಶ್ಯೇತಿ ಸತ್ಯಭಾಮಾಮುದೀರ್ಯ ಸಃ ।
ತತ ಉತ್ಥಾಯ ಶಯನಾತ್ ಪ್ರಸ್ಥಿತೋ ಮಧುಸೂದನಃ ॥೨೦॥

ನಿನ್ನ ಅಣ್ಣನನ್ನು ಹೋಗಿ ನೋಡು ಎಂದು ಸತ್ಯಭಾಮೆಗೆ ಹೇಳಿ, ಕೃಷ್ಣನು ಹಾಸಿಗೆಯಿಂದೆದ್ದು ಅಲ್ಲಿಂದ ಹೊರಟನು.

ಪ್ರಭಾಸಂ ಸಮನುಪ್ರಾಪ್ತಂ ಬೀಭತ್ಸುಮಪರಾಜಿತಮ್ ।
ತೀರ್ಥಾನ್ಯನುಚರಂತಂ ಚ ಶುಶ್ರಾವ ಮಧುಸೂದನಃ ॥೨೧॥

ತೀರ್ಥಯಾತ್ರಾಕ್ರಮದಿಂದ ಅಪರಾಜಿತನಾದ ಅರ್ಜುನನು ಪ್ರಭಾಸಕ್ಕೆ ಬಂದಿದ್ದಾನೆ ಎಂಬ ವಿಷಯವನ್ನು ಕೃಷ್ಣನು ತಿಳಿದನು.

ಚಾರಣಾನಾಂ ತು ವಚನಾದೇಕಾಕೀ ಸ ಜನಾರ್ದನಃ ।
ತತೋಽಭ್ಯಗಚ್ಛತ್ ಕೌಂತೇಯಮಜ್ಞಾತೋಽನ್ಯೇನ ಮಾಧವಃ ॥೨೨॥

ಚಾರರ ಮಾತುಗಳಿಂದ ಇದನ್ನು ತಿಳಿದ ಜನಾರ್ದನನು ಇನ್ನೊಬ್ಬರಿಗೆ ತಿಳಿಯದಂತೆ ಅರ್ಜುನನು ಇದ್ದ ಕಡೆಗೆ ಬಂದನು.

ದದೃಶಾತೇ ತದಾಽನ್ಯೋನ್ಯಂ ಪ್ರಭಾಸೇ ಕೃಷ್ಣಪಾಂಡವೌ ।
ತಾವನ್ಯೋನ್ಯಂ ಸಮಾಶ್ಲಿಷ್ಯ ಪೃಷ್ಟ್ವಾ ಚ ಕುಶಲಂ ಪಥಿ ॥೨೩॥

ಆಸ್ತಾಂ ಪ್ರಿಯಸಖಾಯೌ ತೌ ನರನಾರಯಣಾವೃಷೀ ।
ತತೋಽರ್ಜುನಂ ವಾಸುದೇವಸ್ತತ್ಕಾರ್ಯಂ ಪರ್ಯಪೃಚ್ಛತ ।
ಕಿಮರ್ಥಂ ಪಾಂಡವೇಮಾನಿ ತೀರ್ಥಾನ್ಯನುಚರಸ್ಯುತ ॥೨೪॥

ಆಗ ಪ್ರಭಾಸಕ್ಷೇತ್ರದಲ್ಲಿ ಕೃಷ್ಣಪಾಂಡವರು ಒಬ್ಬರನ್ನೊಬ್ಬರು ನೋಡಿದರು. ನರನಾರಾಯಣಋಷಿಗಳಾದ ಪ್ರಿಯಸ್ನೇಹಿತರಾದ ಅವರು ಪರಸ್ಪರವಾಗಿ ಆಲಿಂಗಿಸಿ,

ಕುಶಲಪ್ರಶ್ನೆಯನ್ನು ಮಾಡಿ ಅಲ್ಲಿಯೇ ಇದ್ದರು. ಅನಂತರ ವಾಸುದೇವನು ಅರ್ಜುನನನ್ನು ಕುರಿತು ಪಾಂಡವನೇ, ಏಕೆ ಈ ತೀರ್ಥಯಾತ್ರೆಯನ್ನು ಮಾಡುತ್ತಿದ್ದೀಯೆ? ಅದರ ಉದ್ದೇಶವೇನು ಎಂದು ಕೇಳಿದನು.

ವೈಶಂಪಾಯನಃ

ತಥಾऽರ್ಜುನೋ ಯಥಾವೃತ್ತಂ ಸರ್ವಮಾಖ್ಯಾತವಾಂಸ್ತದಾ ।
ಶ್ರುತ್ವಾ ಚೋವಾಚ ವಾಷ್ಣೇಯಸ್ತ್ವೇವಮೇತದಿತಿ ಪ್ರಭೋ ॥೨೫॥

ರಾಜನೇ ಆಗ ಅರ್ಜುನನು ನಡೆದ ವಿಷಯಗಳೆಲ್ಲವನ್ನೂ ಹೇಳಿದನು. ಅದನ್ನು ಕೇಳಿದ ಕೃಷ್ಣನು ಹಾಗೆಯೇ ಆಗಲಿ ಎಂದು ಹೇಳಿದನು.

ತೌ ವಿಹೃತ್ಯ ಯಥಾನ್ಯಾಯಂ ಪ್ರಭಾಸೇ ಕೃಷ್ಣಪಾಂಡವೌ ।
ಮಹೀಧರಂ ರೈವತಕಂ ವಾಸಾಯೈವಾಭಿಜಗ್ಮತುಃ ॥೨೬॥

ಕೃಷ್ಣಪಾಂಡವರು ಪ್ರಭಾಸದಲ್ಲಿ ಯಥಾಯೋಗ್ಯವಾಗಿ ವಿಹರಿಸಿ ವಾಸಕ್ಕಾಗಿ ರೈವತಪರ್ವತಕ್ಕೆ ಹೋದರು.

ಪೂರ್ವಮೇವ ತು ಕೃಷ್ಣಸ್ಯ ವಚನಾತ್ ತು ಮಹೀಧರಮ್ ।
ಪುರುಷಾಃ ಸಮಲಂಚಕ್ರುರುಪಜಹ್ರುಶ್ಚ ಭೋಜನಮ್ ॥೨೭॥

ಕೃಷ್ಣನ ವಚನದಂತೆ ಮೊದಲೇ ಪುರುಷರು ಆ ಪರ್ವತವನ್ನು ಅಲಂಕರಿಸಿದ್ದರು. ಅಲ್ಲಿಗೆ ಕೃಷ್ಣಪಾಂಡವರಿಗೆ ಭೋಜನವನ್ನೂ ತಂದರು.

ಪ್ರತಿಗೃಹ್ಯಾರ್ಜುನಃ ಸರ್ವಮುಪಭುಜ್ಯ ಚ ಪಾಂಡವಃ ।
ಸಹೈವ ವಾಸುದೇವೇನ ದೃಷ್ಟವಾನ್ ನಟನರ್ತಕಾನ್ ॥೨೮॥

ಅರ್ಜುನನು ಎಲ್ಲವನ್ನೂ ಸ್ವೀಕರಿಸಿ, ಆಹಾರವನ್ನು ಸೇವಿಸಿ, ಕೃಷ್ಣನ ಜೊತೆಯಲ್ಲಿ ನಟನರ್ತಕರ ಕೌತುಕವನ್ನು ನೋಡಿದನು.

ಅಭ್ಯನುಜ್ಞಾತವಾಂಸ್ತರ್ವಾನರ್ಚಯಿತ್ವಾ ತು ಪಾಂಡವಃ ।
ಸತ್ಕೃತಂ ಶಯನಂ ದಿವ್ಯಮಭ್ಯಗಚ್ಛತ್ ಸಹಾಚ್ಯುತಃ ॥೨೯॥

ಪಾಂಡವನಾದ ಅರ್ಜುನನು ಎಲ್ಲರನ್ನೂ ಸತ್ಕರಿಸಿ ಬೀಳ್ಕೊಟ್ಟು ಅಚ್ಯುತನ ಜೊತೆಯಲ್ಲಿ ಸಿದ್ಧಪಡಿಸಿದ್ದ ದಿವ್ಯವಾದ ಶಯನಕ್ಕೆ ಬಂದನು.

ಸ ಕಥಾಂ ಕಥಯನ್ನೇವ ನಿದ್ರಯಾ ಜನಮೇಜಯ ।
ಕೌಂತೇಯೋಽಪಿ ಹೃತಸ್ತಸ್ಮಿನ್ ಶಯನೇ ಸತ್ಯವಿಕ್ರಮಃ ॥೩೦॥

ಜನಮೇಜಯನೇ, ಸತ್ಯವಿಕ್ರಮನಾದ, ಕೌಂತೇಯನಾದ ಅವನು, ಆ ಹಾಸಿಗೆಯಲ್ಲಿ ಮಲಗಿ ಮಾತನಾಡುತ್ತಲೇ ನಿದ್ರಾವಶನಾದನು.

ಮಧುರೇಣ ಸ ಗೀತೇನ ವೀಣಾಶಬ್ದೇನ ಚಾನಘ ।
ಪ್ರಭೋಧ್ಯಮಾನೋ ಬುಬುಧೇ ಸ್ತುತಿಭಿರ್ಮಂಗಲೈಸ್ತಥಾ ॥೩೧॥

ಅನಘನೇ, ಮಧುರವಾದ ಗೀತದಿಂದಲೂ, ವೀಣಾಶಬ್ದಗಳಿಂದಲೂ, ಸ್ತೋತ್ರಗಳಿಂದಲೂ, ಹಾಗೆಯೇ ಮಂಗಳಗಳಿಂದಲೂ ಎಚ್ಚರಿಸಲ್ಪಟ್ಟು, ಅವನು ಎಚ್ಚರಗೊಂಡನು.

ಸ ಕೃತ್ವಾಽವಶ್ಯಕಾರ್ಯಾಣಿ ವಾರ್ಷ್ಣೇಯೇನಾಭಿನಂದಿತಃ ।
ವಾರ್ಷ್ಣೇಯಂ ಸಮನುಜ್ಞಾಪ್ಯ ತತೋ ವಾಸಮರೋಚಯತ್ ॥೩೨॥

ಅರ್ಜುನನು ಆ ಅವಶ್ಯಕ ಕೃತ್ಯಗಳನ್ನು ಮಾಡಿ ಕೃಷ್ಣನಿಂದ ಅಭಿನಂದಿಸಲ್ಪಟ್ಟು, ಕೃಷ್ಣನನ್ನು ಬೀಳ್ಕೊಟ್ಟು ಅಲ್ಲಿ ವಾಸಮಾಡಲು ಯೋಚಿಸಿದನು.

ತಥೇತ್ಯುಕ್ತ್ವಾ ವಾಸುದೇವೋ ಭೋಜನಂ ವೈ ಶಶಾಸ ಹ ।
ಯತಿರೂಪಧರಂ ಪಾರ್ಥಂ ವಿಸೃಜ್ಯ ಸಹಸಾ ಹರಿಃ ।
ರಥೇನ ಕಾಂಚನಾಂಗೇನ ದ್ವಾರಕಾಮಭಿಜಗ್ಮಿವಾನ್ ॥೩೩॥

ವಾಸುದೇವನು ಯತಿರೂಪಧರನಾದ ಅರ್ಜುನನಿಗೆ ಹಾಗೆಯೇ ಆಗಲಿ ಎಂದು ಅವನಿಗೆ ಭೋಜನವ್ಯವಸ್ಥೆಯನ್ನು ಮಾಡಿ ಅವನನ್ನು ಬಿಟ್ಟು ಸ್ವರ್ಣಮಯವಾದ ರಥದಲ್ಲಿ ಕುಳಿತು ಶೀಘ್ರವಾಗಿ ದ್ವಾರಕೆಗೆ ಹಿಂದಿರುಗಿದನು.

ಅಲಂಕೃತಾ ದ್ವಾರಕಾ ತು ಬಭೂವ ಜನಮೇಜಯ ।
ದಿದೃಕ್ಷವಶ್ಚ ಗೋವಿಂದಂ ದ್ವಾರಕಾವಾಸಿನೋ ಜನಾಃ ।
ನರೇಂದ್ರಮಾರ್ಗಮಾಜಗ್ಮುಸ್ತೂರ್ಯೈಃ ಶತಸಹಸ್ರಶಃ ॥೩೪॥

ಜನಮೇಜಯನೇ, ದ್ವಾರಕಾಪಟ್ಟಣವು ಎಲ್ಲೆಡೆಯಲ್ಲಿಯೂ ಅಲಂಕೃತವಾಗಿತ್ತು. ಗೋವಿಂದನನ್ನು ನೋಡಲು ಬಯಸಿದ ದ್ವಾರಕಾವಾಸಿಗಳಾದ ಜನರು ನೂರುಸಾವಿರ ಸಂಖ್ಯೆಗಳಲ್ಲಿ ಮಂಗಳವಾದ್ಯಗಳನ್ನು ಮೊಳಗಿಸುತ್ತಾ ರಾಜಮಾರ್ಗಕ್ಕೆ ಬಂದರು.

ಕ್ಷಣಾರ್ಧಮಪಿ ವಾರ್ಷ್ಣೇಯಾ ಗೋವಿಂದವಿರಹಾಕ್ಷಮಾಃ ।
ಕೌತೂಹಲಸಮಾವಿಷ್ಟಾ ಭೃಶಮುತ್ಕೇಕ್ಷ್ಯ ಸಂಸ್ಥಿತಾಃ ॥೩೫॥

ವಾರ್ಷ್ಣೇಯರು ಅರ್ಧಕ್ಷಣವೂ ಗೋವಿಂದನ ವಿರಹವನ್ನು ಸಹಿಸುತ್ತಿರಲಿಲ್ಲ. ಕುತೂಹಲದಿಂದ ಕೂಡಿದವರಾಗಿ ಅವನನ್ನೇ ಚಿಂತಿಸುತ್ತಾ ಕುಳಿತಿರುತ್ತಿದ್ದರು.

ಅವಲೋಕಾಯ ನಾರೀಣಾಂ ಸಹಸ್ರಾಣಿ ಶತಾನಿ ಚ ।
ಭೋಜವೃಷ್ಣ್ಯಂಧಕಾನಾಂ ಚ ಸಮವಾಯೋ ಮಹಾನಭೂತ್ ॥೩೬॥

ಕೃಷ್ಣನನ್ನು ನೋಡಲು ಸಹಸ್ರಾರು ಸಂಖ್ಯೆಯಲ್ಲಿ ಬಂದ ಭೋಜ, ವೃಷ್ಣಿ ಮತ್ತು ಅಂಧಕ ಸ್ತ್ರೀಯರಿಗೆ ರಾಜಮಾರ್ಗದಲ್ಲಿ ದೊಡ್ಡ ಸಂವರ್ಧವುಂಟಾಯಿತು.

ಸ ತಥಾ ಸತ್ಕೃತಃ ಸರ್ವೈರ್ಭೋಜವೃಷ್ಣ್ಯಂಧಕಾತ್ಮಜೈಃ ।
ಅಭಿವಾದ್ಯಾಭಿವಾದ್ಯಾಂಶ್ಚ ಸರ್ವೈಶ್ಚ ಪ್ರತಿನಂದಿತಃ ॥೩೭॥

ಕೃಷ್ಣನು ಎಲ್ಲಾ ಭೋಜ, ವೃಷ್ಣಿ ಅಂಧಕರಿಂದಲೂ, ಅವರ ಮಕ್ಕಳಿಂದಲೂ, ಹೀಗೆ ಸತ್ಕರಿಸಲ್ಪಟ್ಟು ನಮಸ್ಕಾರಯೋಗ್ಯರಾದವರಿಗೆ ನಮಸ್ಕಾರವನ್ನು ಮಾಡಿ ಎಲ್ಲರಿಂದಲೂ ಅಭಿನಂದಿಸಲ್ಪಟ್ಟನು.

ಕುಮಾರೈಃ ಸರ್ವಶೋ ವೀರಃ ಸತ್ಕಾರೇಣಾಭಿವಾದಿತಃ ।
ಸಮಾನವಯಸಃ ಸರ್ವಾನಾಶ್ಲಿಷ್ಯ ಸ ಪುನಃಪುನಃ ॥೩೮॥

ಕೃಷ್ಣಾಃ ಸ್ವಭವನಂ ರಮ್ಯಂ ಪ್ರವಿವೇಶ ಮಹಾದ್ಯುತಿಃ ।
ಪ್ರವಾಸಾದಗತಂ ದೇವ್ಯಃ ಸರ್ವಾಃ ಕೃಷ್ಣಮಪೂಜಯನ್ ॥೩೯॥

ತನ್ನ ಎಲ್ಲ ಮಕ್ಕಳಿಂದಲೂ ಸತ್ಕಾರಪೂರ್ವಕವಾಗಿ ನಮಸ್ಕರಿಸಲ್ಪಟ್ಟ ವೀರನೂ, ಮಹಾಕಾಂತಿವಂತನೂ ಆದ ಕೃಷ್ಣನು, ತನ್ನ ಸಮಾನವಯಸ್ಸಿನವರೆಲ್ಲರನ್ನೂ ಮತ್ತೆ ಮತ್ತೆ

ಆಲಿಂಗಿಸಿ, ರಮ್ಯವಾದ ತನ್ನ ಮನೆಯನ್ನು ಪ್ರವೇಶಿಸಿದನು. ಪ್ರವಾಸದಿಂದ ಹಿಂದಿರುಗಿದ ಕೃಷ್ಣನನ್ನು ಅವನ ಎಲ್ಲಾ ಪತ್ನಿಯರೂ ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕೋನವಿಂಶತ್ಯಕದ್ವಿಶತತಮೋऽಧ್ಯಾಯಃ ॥

॥ ಇತಿ ಅರ್ಜುನವನವಾಸಪರ್ವಣಿ ಪಂಚಮೋऽಧ್ಯಾಯಃ ॥

॥ ಅರ್ಜುನವನವಾಸಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಹತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಅರ್ಜುನವನವಾಸಪರ್ವವು ಮುಗಿಯಿತು.

★★★★★

೧೬. ಸುಭದ್ರಾಹರಣಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಆಕ್ರೀಡೋಽಸೌ ವೃಷ್ಣಿಭೋಜಾಂಧಕಾನಾಂ
ತತ್ರಾಪಶ್ಯತ್ ಕೇಶವಃ ಫಲ್ಗುನಂ ತಂ ।
ಸ್ವಸುರ್ದಾನೇ ಸಃ ಪ್ರತಿಜ್ಞಾಂ ರಹೋಽಸ್ಮೈ
ಚಕ್ರೇ ಕೃಷ್ಣೋಽಥಾಸದತ್ ಸರ್ವವೃಷ್ಣೀನ್ ॥೧೬೯॥

ಆ ಬೆಟ್ಟ ಭೋಜವೃಷ್ಣಿ ಅಂಧಕರಿಗೆ ವಿಹಾರಸ್ಥಾನವಾಗಿತ್ತು. ಅಲ್ಲಿ ಕೃಷ್ಣ ಅರ್ಜುನನನ್ನು ಕಂಡು ತಂಗಿಯನ್ನು ಅವನಿಗೆ ಕೊಡುವುದಾಗಿ ರಹಸ್ಯವಾಗಿ ಮಾತುಕೊಟ್ಟ. ಬಳಿಕ ಹೋಗಿ ಎಲ್ಲ ಯಾದವರನ್ನು ಕೂಡಿಕೊಂಡ.

ದೃಷ್ಟ್ವಾಗಿರೌ ರೌಹಿಣೇಯೋ ಯತೀಂದ್ರ-
ವೇಷಂ ಪಾರ್ಥಂ ಜ್ಞಾತಿಯುಕ್ತಃ ಪ್ರಣಮ್ಯ ।
ಚಕ್ರೇ ಪೂಜಾಂ ಫಲ್ಗುನೋಽಪಿ ಪ್ರಣಾಮಂ
ಗುಣಜ್ಯೇಷ್ಠೋಽಸೀತಿ ಚಕ್ರೇ ಬಲಾಯ ॥೧೭೦॥

ಬೆಟ್ಟದಲ್ಲಿ ಯತೀಶ್ವರನ ವೇಷದಲ್ಲಿದ್ದ ಅರ್ಜುನನನ್ನು ಬಲರಾಮ ಬಂಧು ಸಮೇತನಾಗಿ ದರ್ಶನ ಮಾಡಿ ನಮಿಸಿ ಸತ್ಕರಿಸಿದ. ಅರ್ಜುನನೂ ಬಲರಾಮನನ್ನು 'ನೀನು ಗುಣದಲ್ಲಿ ನನಗಿಂತ ಉತ್ತಮನಿರುವಿ' ಎನ್ನುತ್ತ ನಮಿಸಿದ.

★ ★ ★ ★

ಇನ್ನೂರ ಇಪ್ಪತ್ತನೆಯ ಅಧ್ಯಾಯ

(ರೈವತಕಪರ್ವತದಲ್ಲಿ ವೃಷ್ಣ್ಯಂಧಕರ ಮಹೋತ್ಸವ, ಅಲ್ಲಿಗೆ ಕೃಷ್ಣಸುಭದ್ರೆಯ ಆಗಮನ. ಕೃಷ್ಣನಲ್ಲಿ ಅರ್ಜುನನ ಪ್ರಾರ್ಥನೆ. ಕೃಷ್ಣನಿಂದ ಉಪಾಯ ಸೂಚನೆ ಮತ್ತು ಧರ್ಮರಾಜನ ಅನುಮತಿ)

ವೈಶಂಪಾಯನಃ

ತತಃ ಕತಿಪಯಾಹಃಸು ತತ್ರ ರೈವತಕೇ ಗಿರೌ ।
ವೃಷ್ಣ್ಯಂಧಕಾನಾಮಭವತ್ ಸುಮಹಾನುತ್ಸವೋ ನೃಪ ॥೧॥

ರಾಜನೇ, ಅನಂತರ ಕೆಲವು ದಿನಗಳಲ್ಲಿ ರೈವತಕಪರ್ವತದಲ್ಲಿ ವೃಷ್ಣ್ಯಂಧಕರ ದೊಡ್ಡ ಉತ್ಸವವು ನಡೆಯಿತು.

ತತ್ರ ದಾನಂ ದದುರ್ವೀರಾ ಬ್ರಾಹ್ಮಣಾನಾಂ ಸಹಸ್ರಶಃ ।
ಭೋಜವೃಷ್ಣ್ಯಂಧಕಾಶ್ಚೈವ ಮಹೇ ತಸ್ಮಿನ್ ಗಿರೌ ತದಾ ॥೨॥

ಅಲ್ಲಿ ವೀರರಾದ ಭೋಜವೃಷ್ಣ್ಯಂಧಕರು, ಆ ಪರ್ವತದಲ್ಲಿ ಉತ್ಸವದ ಸಮಯದಲ್ಲಿ ಬ್ರಾಹ್ಮಣರಿಗೆ ಸಹಸ್ರಸಂಖ್ಯೆಯಲ್ಲಿ ದಾನವನ್ನು ಕೊಟ್ಟರು.

ಪ್ರಾಸಾದೈ ರತ್ನಚಿತ್ರೈಸ್ತು ಗಿರೇಸ್ತಸ್ಯ ಸಮಂತತಃ ।
ಸ ದೇಶಃ ಶೋಭಿತೋ ರಾಜನ್ ದೀಪವೃಕ್ಷೈಃ ಸಮಂತತಃ ॥೩॥

ಆ ಪರ್ವತದ ಸುತ್ತಲೂ ರತ್ನಖಚಿತವಾದ ಪ್ರಾಸಾದಗಳಿದ್ದವು. ರಾಜನೇ, ಆ ಪ್ರದೇಶವು ಸುತ್ತಲೂ ದೀಪವುಳ್ಳ ಮರಗಳಿಂದ ಕೂಡಿದ್ದಿತು.

ವಾದಿತ್ರಾಣಿ ಚ ತತ್ರ ಸ್ಮ ವಾದಕಾಃ ಸಮವಾದಯನ್ ।
ನನೃತುರ್ನರ್ತಕಾಶ್ಚೈವ ಜಗುರ್ಗೀತಾನಿ ಗಾಯಕಾಃ ॥೪॥

ಅಲ್ಲಿ ವಾದಕರು ವಾದ್ಯಗಳನ್ನು ನುಡಿಸಿದರು, ನರ್ತಕರು ನರ್ತನವನ್ನು ಮಾಡಿದರು, ಗಾಯಕರು ಗಾಯನವನ್ನು ಮಾಡಿದರು.

ಅಲಂಕೃತಾಃ ಕುಮಾರಾಶ್ಚ ವೃಷ್ಣೀನಾಂ ಸುಮಹೌಜಸಃ ।
ಯಾನೈರ್ಹಾಟಕಚಿತ್ರಾಂಗೈಶ್ಚಂಚೂರ್ಯಂತೇ ಸ್ಮ ಸರ್ವಶಃ ॥೫॥

ಮಹಾಪರಾಕ್ರಮಶಾಲಿಗಳಾದ ವೃಷ್ಣಿಕುಮಾರರು ಅಲಂಕೃತರಾಗಿ ಸುವರ್ಣಖಚಿತವಾದ ರಥಗಳಲ್ಲಿ ಅಲ್ಲಲ್ಲಿ ತಿರುಗಾಡುತ್ತಿದ್ದರು.

ಪೌರಾಶ್ಚ ಪಾದಚಾರೇಣ ಯಾನೈರುಚ್ಚಾವಚೈಸ್ತಥಾ ।
ಸದಾರಾಃ ಸಾನುಯಾತ್ರಾಶ್ಚ ಶತಶೋಽಥ ಸಹಸ್ರಶಃ ॥೬॥

ಅನೇಕ ವಿಧವಾದ ವಾಹನಗಳಲ್ಲಿ ಪೌರರು ತಮ್ಮ ಪತ್ನಿಯರ ಜೊತೆಯಲ್ಲಿ ಮತ್ತು ತಮ್ಮ ಅನುಚರರ ಜೊತೆಯಲ್ಲಿ ನೂರುಸಾವಿರ ಸಂಖ್ಯೆಗಳಲ್ಲಿ ತಿರುಗಾಡುತ್ತಿದ್ದರು. ಪಾದಚಾರಿಗಳೂ ತಿರುಗಾಡುತ್ತಿದ್ದರು.

ತತೋ ಹಲಧರಃ ಕ್ಷೀಬೋ ರೇವತೀಸಹಿತಃ ಪ್ರಭುಃ ।
ಅನುಗಮ್ಯಮಾನೋ ಬಹುಭಿರಚರತ್ ತತ್ರ ಭಾರತ ॥೭॥

ಆಗ ಮತ್ತನಾದ ಬಲರಾಮನು ಅನೇಕರಿಂದ ಹಿಂಬಾಲಿಸಲ್ಪಟ್ಟು ರೇವತಿಯ ಜೊತೆಯಲ್ಲಿ ಅಲ್ಲಿ ತಿರುಗಾಡಿದನು.

ತಥೈವ ರಾಜಾ ವೃಷ್ಣೀನಾಮುಗ್ರಸೇನಃ ಪ್ರತಾಪವಾನ್ ।
ಉಪಗೀಯಮಾನೋ ಗಂಧರ್ವೈಃ ಸ್ತ್ರೀಸಹಸ್ರಸಹಾಯವಾನ್ ॥೮॥

ಹಾಗೆಯೇ ವೃಷ್ಣಿಗಳ ಅಧಿಪತಿಯಾದ ಪ್ರತಾಪಶಾಲಿಯಾದ ಉಗ್ರಸೇನನು ಗಂಧರ್ವರಿಂದ ಗಾನಮಾಡಲ್ಪಟ್ಟು ಸಹಸ್ರಸ್ತ್ರೀಯರ ಜೊತೆಯಲ್ಲಿ ತಿರುಗಾಡಿದನು.

ರೌಕ್ಮಿಣೇಯಶ್ಚ ಸಾಂಬಶ್ಚ ಕ್ಷೀಬೌ ಸಮರದುರ್ಮದೌ ।
ದಿವ್ಯಮಾಲ್ಯಾಂಬರಧರೌ ವಿಜಹ್ರಾತೇಽಮರಾವಿವ ॥೯॥

ಯುದ್ಧದುರ್ಮದರಾದ, ಮತ್ತರಾದ ಪ್ರದ್ಯುಮ್ನ ಮತ್ತು ಸಾಂಬರು, ದಿವ್ಯಮಾಲ್ಯಗಳನ್ನೂ, ದಿವ್ಯವಸ್ತ್ರಗಳನ್ನೂ ಧರಿಸಿ, ದೇವತೆಗಳಂತೆ ವಿಹರಿಸಿದರು.

ಅಕ್ರೂರಃ ಸಾರಣಶ್ಚೈವ ಗದೋ ಭಾನುರ್ವಿಡೂರಥಃ ।
ನಿಶಠಶ್ಚಾರುದೇಷ್ಣಶ್ಚ ಪೃಥುರ್ವಿಪೃಥುರೇವ ಚ ॥೧೦॥

ಸತ್ಯಕಃ ಸಾತ್ಯಕಿಶ್ಚೈವ ರಂಗಕಾರಸಹಾಕರೌ ।
ಹಾರ್ದಿಕ್ಯಃ ಕೃತವರ್ಮಾ ಚ ಯೇ ಚಾನ್ಯೇ ನಾನುಕೀರ್ತಿತಾಃ ॥೧೧॥

ಏತೇ ಪರಿವೃತಾಃ ಸ್ತ್ರೀಭಿರ್ಗಂಧರ್ವೈಶ್ಚ ಪೃಥಕ್ಪೃಥಕ್ ।
ತಮುತ್ಸವಂ ರೈವತಕೇ ಶೋಭಯಾಂಚಕ್ರಿರೇ ತದಾ ॥೧೨॥

ಅಕ್ರೂರ, ಸಾರಣ, ಗದ, ಭಾನು, ವಿಡೂರಥ, ನಿಶಠ, ಚಾರುದೇಷ್ಣ, ಪೃಥು, ವಿಪೃಥು, ಸತ್ಯಕ, ಸಾತ್ಯಕಿ, ರಂಗಕಾರ, ಸಹಾಕರ, ಕೃತವರ್ಮ ಮತ್ತು ಇನ್ನೂ ಅನೇಕರು ತಮ್ಮ ಸ್ತ್ರೀಯರ ಮತ್ತು ಗಂಧರ್ವರ ಜೊತೆಯಲ್ಲಿ ಅಶ್ವಗಳ ಮೇಲೆ ಬೇರೆ ಬೇರೆಯಾಗಿ ತಿರುಗಾಡಿ, ರೈವತಪರ್ವತದಲ್ಲಿ ನಡೆಯುವ ಆ ಉತ್ಸವಕ್ಕೆ ಶೋಭೆಯನ್ನುಂಟು ಮಾಡಿದರು.

ವಾಸುದೇವೋ ಯಯೌ ತತ್ರ ಸಹ ಸ್ತ್ರೀಭಿರ್ಗುಣಾನ್ವಿತಃ ।
ದತ್ತ್ವಾ ದಾನಂ ದ್ವಿಜಾತಿಭ್ಯಃ ಪರಿವ್ರಾಜಮಪಶ್ಯತ ॥೧೩॥

ಗುಣಪೂರ್ಣನಾದ ವಾಸುದೇವನು ತನ್ನ ಸ್ತ್ರೀಯರ ಜೊತೆಯಲ್ಲಿ ಅಲ್ಲಿಗೆ ಹೋಗಿ, ಬ್ರಾಹ್ಮಣರಿಗೆ ದಾನವನ್ನು ಕೊಟ್ಟು, ಸಂನ್ಯಾಸಿಯ ವೇಷದಲ್ಲಿದ್ದ ಅರ್ಜುನನನ್ನೂ ನೋಡಿದನು.

ತದಾ ಕೌತೂಹಲೇ ತಸ್ಮಿನ್ ವರ್ತಮಾನೇ ಮಹೋತ್ಸವೇ ।
ವಾಸುದೇವಶ್ಚ ಪಾರ್ಥಶ್ಚ ಸಹಿತೌ ಪರಿಜಗ್ಮತುಃ ॥೧೪॥

ಆಗ ಆ ಉತ್ಸವವು ಕುತೂಹಲದಿಂದ ಜರುಗುತ್ತಿರಲು, ವಾಸುದೇವ ಮತ್ತು ಅರ್ಜುನರು ಜೊತೆಯಲ್ಲಿ ತಿರುಗಾಡಿದರು.

ತತ್ರ ಚಂಕ್ರಮಮಾಣೌ ತೌ ವಸುದೇವಸುತಾಂ ಶುಭಾಮ್ ।
ಅಲಂಕೃತಾಂ ಸಖೀಮಧ್ಯೇ ಭದ್ರಾಂ ದದೃಶತುಸ್ತದಾ ॥೧೫॥

ಹಾಗೆ ತಿರುಗಾಡುತ್ತಿದ್ದ ಅವರು ತನ್ನ ಸಖಿಯರ ಮಧ್ಯದಲ್ಲಿದ್ದ, ವಸುದೇವನ ಮಗಳಾದ ಮನೋಹರಳಾದ, ಅಲಂಕೃತಳಾದ ಸುಭದ್ರೆಯನ್ನು ನೋಡಿದರು.

ದೃಷ್ಟ್ವೈವ ತಾಮರ್ಜುನಸ್ಯ ಕಂದರ್ಪಃ ಸಮಜಾಯತ ।
ತಂ ತ್ವನೇಕಾಗ್ರಮನಸಂ ಕೃಷ್ಣಃ ಪಾರ್ಥಮಲಕ್ಷಯತ್ ॥೧೬॥

ಅರ್ಜುನನಿಗೆ ಅವಳನ್ನು ನೋಡಿದ ಕೂಡಲೇ ಕಾಮವು ಉಂಟಾಯಿತು. ಕೃಷ್ಣನು ಅರ್ಜುನನು ವ್ಯಗ್ರಚಿತ್ತನಾಗಿರುವುದನ್ನು ಗಮನಿಸಿದನು.

ಅಬ್ರವೀತ್ ಪುಂಡರೀಕಾಕ್ಷಃ ಪ್ರಹಸನ್ನಿವ ಭಾರತ ।
ವನೇಚರಸ್ಯ ಕಿಮಿದಂ ಕಾಮೇನಾಲೋಡ್ಯತೇ ಮನಃ ॥೧೭॥

ಭಾರತನೇ, ಪುಂಡರೀಕಾಕ್ಷನು ನಗುತ್ತಾ ಅರ್ಜುನನನ್ನು ಕುರಿತು ವನವಾಸಿಯಾದ ಸನ್ಯಾಸಿಗೆ ಇದೇನು ಮನಸ್ಸು ಕಾಮದಿಂದ ಕದಡಿದೆ ಎಂದು ಕೇಳಿದನು.

ಮಮೈಷಾ ಭಗಿನೀ ಪಾರ್ಥ ಸಾರಣಸ್ಯ ಮಹೋದರಾ ।
ಸುಭದ್ರಾ ನಾಮ ಭದ್ರಂ ತೇ ಪಿತುರ್ಮೇ ದಯಿತಾ ಸುತಾ ।
ಯದಿ ತೇ ವರ್ತತೇ ಬುದ್ಧಿರ್ವಕ್ಷ್ಯಾಮಿ ಪಿತರಂ ಸ್ವಯಮ್ ॥೧೮॥

ಅರ್ಜುನನೇ, ಇವಳು ನನ್ನ ತಂಗಿ. ಸಾರಣನ ಸಹೋದರಿ. ಇವಳ ಹೆಸರು ಸುಭದ್ರೆ . ನಿನಗೆ ಮಂಗಳವಾಗಲಿ. ಇವಳು ನನ್ನ ತಂದೆಗೆ ಪ್ರೀತಿಪಾತ್ರಳಾದ ಮಗಳು. ನಿನಗೆ ಅವಳಲ್ಲಿ ಮನಸ್ಸಿದ್ದರೆ, ನಾನೇ ತಂದೆಯ ಜೊತೆಯಲ್ಲಿ ಮಾತನಾಡುವೆನು.

ಅರ್ಜುನಃ

ದುಹಿತಾ ವಸುದೇವಸ್ಯ ವಾಸುದೇವಸ್ಯ ಚ ಸ್ವಸಾ ।
ರೂಪೇಣ ಚೈವ ಸಂಪನ್ನಾ ಕಮಿವೈಷಾ ನ ಮೋಹಯೇತ್ ॥೧೯॥

ವಸುದೇವನ ಮಗಳು, ವಾಸುದೇವನ ತಂಗಿ ಇಷ್ಟು ರೂಪದಿಂದ ಕೂಡಿದವಳು ಯಾರನ್ನು ಮೋಹಿಸುವುದಿಲ್ಲ?

ಕೃತಮೇತತ್ ತು ಕಲ್ಯಾಣಂ ಸರ್ವಂ ಮಮ ಭವೇದ್ ಧ್ರುವಮ್।
ಯದಿ ಸ್ಯಾನ್ಮಮ ವಾರ್ಷ್ಣೇಯ ಮಹಿಷೀಯಂ ಸ್ವಸಾ ತವ ॥೨೦॥

ವಾಷ್ಣೇರ್ಯನೇ, ಈ ನಿನ್ನ ತಂಗಿಯು ನನ್ನ ಪತ್ನಿಯಾಗುವಂತೆ ನೀನು ಈ ಕಲ್ಯಾಣವನ್ನು ನೆರವೇರಿಸಿದರೆ ನನಗೆ ನಿಶ್ಚಯವಾಗಿ ಎಲ್ಲವನ್ನೂ ನೀನು ಮಾಡಿದಂತೆ ಆಗುತ್ತದೆ.

ಪ್ರಾಪ್ತೌ ತು ಕ ಉಪಾಯೋऽಸ್ಯಾಸ್ತಂ ಬ್ರವೀಹಿ ಜನಾರ್ದನ ।
ಆಸ್ಥಾಸ್ಯಾಮಿ ತಥಾ ಸರ್ವಂ ಯದಿ ಶಕ್ಯಂ ನರೇಣ ತತ್ ॥೨೧॥

ಜನಾರ್ದನನೇ, ಇವಳನ್ನು ಪಡೆಯಲು ಏನು ಉಪಾಯ ಎಂದು ಹೇಳು. ಮನುಷ್ಯರಿಂದ ಮಾಡಲು ಸಾಧ್ಯವಾದರೆ ನಾನು ಅದೆಲ್ಲವನ್ನೂ ಮಾಡುವೆನು.

ವಾಸುದೇವಃ

ಸ್ವಯಂವರಃ ಕ್ಷತ್ರಿಯಾಣಾಂ ವಿವಾಹಃ ಪುರುಷರ್ಷಭ ।
ಸ ಚ ಸಂಶಯಿತಃ ಪಾರ್ಥ ಸ್ವಭಾವಸ್ಯ ನಿಮಿತ್ತತಃ ॥೨೨॥

ಪುರುಷರ್ಷಭನೇ, ಸ್ವಯಂವರವು ಕ್ಷತ್ರಿಯರಿಗೆ ವಿಹಿತವಾದ ವಿವಾಹ ಪದ್ಧತಿ. ಆದರೆ, ನೀನು ಸಂನ್ಯಾಸಿಯ ವೇಷವನ್ನು ಧರಿಸಿರುವುದರಿಂದ ಅದು ಸಂಶಯಗ್ರಸ್ತವಾಗುತ್ತದೆ.

ಪ್ರಸಹ್ಯ ಹರಣಂ ಚಾಪಿ ಕ್ಷತ್ರಿಯಾಣಾಂ ಪ್ರಶಸ್ಯತೇ ।
ವಿವಾಹಹೇತೋಃ ಕನ್ಯಾನಾಮಿತಿ ಧರ್ಮವಿದೋ ವಿದುಃ ॥೨೩॥

ವಿವಾಹನಿಮಿತ್ತವಾಗಿ ಕನ್ಯೆಯನ್ನು ಬಲಾತ್ಕಾರದಿಂದ ಹಾರಿಸಿಕೊಂಡು ಹೋಗುವುದು ಕ್ಷತ್ರಿಯರಿಗೆ ಪ್ರಶಸ್ತವಾದುದೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ಸ ತ್ವಮರ್ಜುನ ಕಲ್ಯಾಣೀಂ ಪ್ರಸಹ್ಯ ಭಗಿನೀಂ ಮಮ ।
ಯತಿರೂಪಧರಸ್ತ್ವಂ ತು ಯದಾ ಕಾಲವಿಪಾಕತಾ ।
ಹರ ಸ್ವಯಂವರೇ ಹ್ಯಸ್ಯಾಃ ಕೋ ವೈ ವೇದ ಚಿಕೀರ್ಷಿತಮ್ ॥೨೪॥

ಅರ್ಜುನ, ನೀನು, ಕಲ್ಯಾಣಿಯಾದ ನನ್ನ ತಂಗಿಯನ್ನು ಬಲದಿಂದ ಹಾರಿಸಿಕೊಂಡು ಹೋಗು. ಯತಿರೂಪವನ್ನು ಧರಿಸಿದ ನೀನು ಕಾಲವು ಪಕ್ವವಾದಾಗ ಈ ಕಾರ್ಯವನ್ನು

ಮಾಡು. ಸ್ವಯಂವರವನ್ನು ಮಾಡಿದರೆ, ಅವಳ ಬುದ್ಧಿಯು ಹೇಗಿರುವುದೋ ಅದು ಯಾರಿಗೆ ತಿಳಿಯುವುದು?

ವೈಶಂಪಾಯನಃ

ತತೋऽರ್ಜುನಶ್ಚ ಕೃಷ್ಣಶ್ಚ ವಿನಿಶ್ಚಿತ್ಯೇತಿಕೃತ್ಯತಾಮ್ ।
ಶೀಘ್ರಗಾನ್ ಪುರುಷಾನ್ ರಾಜನ್ ಪ್ರೇಷಯಾಮಾಸತುಸ್ತದಾ ॥೨೫॥

ಧರ್ಮರಾಜಾಯ ತತ್ಸರ್ವಮಿಂದ್ರಪ್ರಸ್ಥಗತಾಯ ವೈ ।
ಶ್ರುತ್ವೈವ ಚ ಮಹಾಬಾಹುರನುಜಜ್ಞೇ ಸಮಾತೃಕಃ ॥೨೬॥

ರಾಜನೇ, ಆಗ ಕೃಷ್ಣಮತ್ತು ಅರ್ಜುನರು ಮಾಡಬೇಕಾದ ರೀತಿಯನ್ನು ನಿರ್ಧರಿಸಿ, ಇಂದ್ರಪ್ರಸ್ಥದಲ್ಲಿದ್ದ ಧರ್ಮರಾಜನಿಗೆ ಶೀಘ್ರಗಾಮಿಗಳಾದ ಪುರುಷರ ಮೂಲಕ ವಾರ್ತೆಯನ್ನು ಕಳುಹಿಸಿದರು. ಮಹಾಬಾಹುವಾದ ಧರ್ಮರಾಜನು ಮತ್ತು ಅವನ ತಾಯಿಯು ಈ ವಾರ್ತೆಯನ್ನು ಕೇಳಿದ ತಕ್ಷಣ ಅನುಮತಿಯನ್ನು ನೀಡಿದರು.

ಭೀಮಸೇನಸ್ತು ತಚ್ಛ್ರುತ್ವಾ ಕೃತಕೃತ್ಯಾ ಸ್ಮ ಶಕ್ಯತೇ ।
ಇತ್ಯೇವಂ ಮನುಜೈಃ ಸಾರ್ಧಮುಕ್ತ್ವಾ ಪ್ರೀತಿಮುಪೇಯಿವಾನ್ ॥೨೭॥

ಭೀಮಸೇನನು ಈ ವಾರ್ತೆಯನ್ನು ಕೇಳಿ (ಅರ್ಜುನನು ಸುಭದ್ರೆಯನ್ನು ವರಿಸಿದರೆ) ನಾವು ಕೃತಕೃತ್ಯರಾಗುತ್ತೇವೆ. ಅರ್ಜುನನಿಗೆ ಕೃಷ್ಣನು ಸೂಚಿಸಿದಂತೆ ಮಾಡಲು ಸಾಧ್ಯವಿದೆ ಎಂದು ತನ್ನ ಸಮೀಪದಲ್ಲಿದ್ದವರ ಜೊತೆಯಲ್ಲಿ ಹೇಳಿ ಸಂತೋಷವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಸುಭದ್ರಾಹರಣಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸರ್ವಜ್ಞಂ ತಂ ವಾಗ್ಮಿನಂ ವೀಕ್ಷ್ಯರಾಮಃ
ಕನ್ಯಾಗಾರೇ ವರ್ಷಕಾಲೇ ನಿವಾಸಂ ।
ಸತ್ಕಾರಪೂರ್ವಂ ಕಾರಯೇತ್ಯಾಹ ಕೃಷ್ಣಂ
ನೈವೇತ್ಯೂಚೇ ಕೇಶವೋ ದೋಷವಾದೀ ॥೧೭೧॥

ಈ ಯತಿ ಸರ್ವಜ್ಞ ಮತ್ತು ಒಳ್ಳೆಯ ಮಾತುಗಾರ ಎಂದು ತಿಳಿದು ಬಲರಾಮ ಮಳೆಗಾಲದ ಚಾತುರ್ಮಸ್ಯ ಕಾಲ ಪೂರ್ತಿ ಅವನನ್ನು ಕನ್ಯಾಗಾರದ ಬಳಿಯಲ್ಲಿ ಸತ್ಕಾರ ಪೂರ್ವಕವಾಗಿ ಇರಿಸು ಎಂದು ಕೃಷ್ಣನಿಗೆ ಹೇಳಿದ. ಕೃಷ್ಣ ಬೇಡವೆಂದ. ಹಾಗೆ ಮಾಡಿದರೆ ದೋಷವಿದೆ ಎಂದ.

ಯುವಾ ಬಲೀ ದರ್ಶನೀಯೋಽತಿವಾಗ್ಮೀ
ನಾಯಂ ಯೋಗ್ಯಃ ಕನ್ಯಕಾಗಾರವಾಸಂ ।
ಇತ್ಯುಕ್ತವಂತಂ ರಾಮ ಆಹಾಪ್ತವಿದ್ಯೇ
ನಾಸ್ಮಿನ್ ಶಂಕೇತ್ಯೇವ ಲೋಕಾಧಿನಾಥಂ ॥೧೭೨॥

'ಈ ಯತಿ ಯುವಕ ಬಲಿಷ್ಠ. ಸುಂದರ, ಬಲು ಮಾತುಗಾರ. ಅದರಿಂದ ಕನ್ಯಾಗಾರದ ಬಳಿಯಲ್ಲಿ ಇರಿಸಲು ತಕ್ಕವನಲ್ಲ' ಹೀಗೆ ಜಗದೀಶ್ವರನಾದ ಶ್ರೀಕೃಷ್ಣ ಹೇಳಿದಾಗ ಬಲರಾಮನೆಂದ 'ಜ್ಞಾನಿಯಾದ ಈತನಲ್ಲಿ ಸಂದೇಹ ಸಲ್ಲದು' ಎಂದು.

ನಾಸ್ಮನ್ಮತೇ ರೋಚತೇ ತ್ವನ್ಮತಂ ತು
ಸರ್ವೇಷಾಂ ನಃ ಪೂಜ್ಯಮೇವಾಸ್ತು ತೇನ ।
ಇತ್ಯುಕ್ತ್ವಾ ತಂ ಕೇಶವಃ ಸೋದರಾಯ್ಯೈ
ಶುಶ್ರೂಷಸ್ವೇತ್ಯಾಹ ಸಂತಂ ಯತೀಂದ್ರಂ ॥೧೭೩॥

ಶ್ರೀಕೃಷ್ಣನೆಂದ, 'ನನ್ನ ಅಭಿಪ್ರಾಯದಲ್ಲಿ ನಿನ್ನ ಈ ನಿರ್ಣಯ ಸರಿ ಕಾಣುವುದಿಲ್ಲ. ಆದರೂ ನಮಗೆಲ್ಲರಿಗೂ ನಿನ್ನ ನಿರ್ಣಯ ಶಿರಸಾಧಾರ್ಯವಾದುದರಿಂದ ಹಾಗೇ ಆಗಲಿ'. ಹೀಗೆ ಹೇಳಿ ಶ್ರೀಕೃಷ್ಣ ಸುಭದ್ರೆಗೆ ಹೇಳಿದ, 'ಈ ಯತೀಶ್ವರ ಒಳ್ಳೆಯವ, ಇಲ್ಲಿ ಇರುತ್ತಾನೆ, ಅವನನ್ನು ಸೇವಿಸು' ಎಂದು.

ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ

(ಉತ್ಸವವನ್ನು ಮುಗಿಸಿ ಎಲ್ಲರ ನಿರ್ಗಮನ, ಅರ್ಜುನನ ಚಿಂತೆ, ಬಲರಾಮಾದಿಗಳಿಂದ ಪುನಃ ಬಂದು ಚಾತುರ್ಮಾಸ್ಯವನ್ನು ಕನ್ಯಾಗಾರದಲ್ಲಿ ಕಳೆಯಬೇಕೆಂಬ ಪ್ರಾರ್ಥನೆ, ಕೃಷ್ಣನ ವಿರೋಧ ಸೂಚನೆ ಮತ್ತು ಅನುಮತಿ.)

ವೈಶಂಪಾಯನಃ

ಚಾರೈಃ ಸಂಚಾರಿತೇ ತಸ್ಮಿನ್ನನುಜ್ಞಾತೋ ಧನಂಜಯಃ ।
ಗತಾಂ ರೈವತಕೇ ಕನ್ಯಾಂ ವಿದಿತ್ವಾ ಜನಮೇಜಯ ॥೧॥

ವಾಸುದೇವಾಭ್ಯನುಜ್ಞಾತಃ ಕಥಯಿತ್ವೇತಿಕೃತ್ಯತಾಮ್ ।
ಕೃಷ್ಣಸ್ಯ ಮತಮಾಜ್ಞಾಯ ಪ್ರಯಯೌ ಭರತರ್ಷಭಃ ॥೨॥

ಜನಮೇಜಯನೇ, ಚಾರರು ಧರ್ಮರಾಜನ ಅನುಮತಿಯನ್ನು ಅರ್ಜುನನಿಗೆ ತಿಳಿಸುತ್ತಿರಲು ಕೃಷ್ಣನ ಉತ್ತರವನ್ನು ತಿಳಿದುಕೊಂಡು ಮುಂದೆ ಮಾಡಬೇಕಾದ ರೀತಿಯನ್ನು ಸಮಾಲೋಚಿಸಿ ಕೃಷ್ಣನನ್ನು ಬೀಳ್ಕೊಟ್ಟು ತನ್ನ ಮೊದಲನೆಯ ಸ್ಥಾನಕ್ಕೆ ಹಿಂದಿರುಗಿದನು.

ವೃತ್ತೋತ್ಸವಾ ರೈವತಕೇ ವೃಷ್ಣಯೋಽಪ್ಯಗಮನ್ ಪುರೀಮ್ ।
ಸುಭದ್ರಾಽಪ್ಯಥ ಶೈಲೇಂದ್ರಮಭ್ಯರ್ಚ್ಯ ಸಹ ರೈವತಮ್ ॥೩॥

ದೈವತಾನಿ ಚ ಸರ್ವಾಣಿ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಚ ।
ಪ್ರದಕ್ಷಿಣಂ ಗಿರಿಂ ಕೃತ್ವಾ ಪ್ರಯಯೌ ದ್ವಾರಕಾಂ ಪ್ರತಿ ॥೪॥

ರೈವತಕ ಪರ್ವತದಲ್ಲಿ ಉತ್ಸವವನ್ನು ಮುಗಿಸಿದ ವೃಷ್ಣಿಗಳು ದ್ವಾರಕೆಗೆ ಹಿಂದಿರುಗಿದರು. ಸುಭದ್ರೆಯೂ ಸಹ ರೈವತ ಪರ್ವತವನ್ನು ಪೂಜಿಸಿ ಅಲ್ಲಿದ್ದ ದೇವತೆಗಳಿಗೆಲ್ಲಾ ನಮಸ್ಕರಿಸಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡಿ ದ್ವಾರಕೆಗೆ ಹೋದಳು.

ಗತಾಂ ರೈವತಕಾತ್ ಕನ್ಯಾಂ ಪ್ರವಿಷ್ಟಾಂ ದ್ವಾರಕಾಂ ಪ್ರತಿ ।
ಚಿಂತಯಾನಸ್ತತೋ ಭದ್ರಾಮುಪವಿಷ್ಟಃ ಶಿಲಾತಲೇ ॥೫॥

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸರ್ವಜ್ಞಂ ತಂ ವಾಗ್ಮಿನಂ ವೀಕ್ಷ್ಯರಾಮಃ
ಕನ್ಯಾಗಾರೇ ವರ್ಷಕಾಲೇ ನಿವಾಸಂ ।
ಸತ್ಕಾರಪೂರ್ವಂ ಕಾರಯೇತ್ಯಾಹ ಕೃಷ್ಣಂ
ನೈವೇತ್ಯೂಚೇ ಕೇಶವೋ ದೋಷವಾದೀ ॥೧೭೧॥

ಈ ಯತಿ ಸರ್ವಜ್ಞ ಮತ್ತು ಒಳ್ಳೆಯ ಮಾತುಗಾರ ಎಂದು ತಿಳಿದು ಬಲರಾಮ ಮಳೆಗಾಲದ ಚಾತುರ್ಮಸ್ಯ ಕಾಲ ಪೂರ್ತಿ ಅವನನ್ನು ಕನ್ಯಾಗಾರದ ಬಳಿಯಲ್ಲಿ ಸತ್ಕಾರ ಪೂರ್ವಕವಾಗಿ ಇರಿಸು ಎಂದು ಕೃಷ್ಣನಿಗೆ ಹೇಳಿದ. ಕೃಷ್ಣ ಬೇಡವೆಂದ. ಹಾಗೆ ಮಾಡಿದರೆ ದೋಷವಿದೆ ಎಂದ.

ಯುವಾ ಬಲೀ ದರ್ಶನೀಯೋಽತಿವಾಗ್ಮೀ
ನಾಯಂ ಯೋಗ್ಯಃ ಕನ್ಯಕಾಗಾರವಾಸಂ ।
ಇತ್ಯುಕ್ತವಂತಂ ರಾಮ ಆಹಾಪ್ತವಿದ್ಯೇ
ನಾಸ್ಮಿನ್ ಶಂಕೇತ್ಯೇವ ಲೋಕಾಧಿನಾಥಂ ॥೧೭೨॥

'ಈ ಯತಿ ಯುವಕ ಬಲಿಷ್ಠ. ಸುಂದರ, ಬಲು ಮಾತುಗಾರ. ಅದರಿಂದ ಕನ್ಯಾಗಾರದ ಬಳಿಯಲ್ಲಿ ಇರಿಸಲು ತಕ್ಕವನಲ್ಲ' ಹೀಗೆ ಜಗದೀಶ್ವರನಾದ ಶ್ರೀಕೃಷ್ಣ ಹೇಳಿದಾಗ ಬಲರಾಮನೆಂದ 'ಜ್ಞಾನಿಯಾದ ಈತನಲ್ಲಿ ಸಂದೇಹ ಸಲ್ಲದು' ಎಂದು.

ನಾಸ್ಮನ್ಮತೇ ರೋಚತೇ ತ್ವನ್ಮತಂ ತು
ಸರ್ವೇಷಾಂ ನಃ ಪೂಜ್ಯಮೇವಾಸ್ತು ತೇನ ।
ಇತ್ಯುಕ್ತ್ವಾ ತಂ ಕೇಶವಃ ಸೋದರಾಯ್ಯೈ
ಶುಶ್ರೂಷಸ್ವೇತ್ಯಾಹ ಸಂತಂ ಯತೀಂದ್ರಂ ॥೧೭೩॥

ಶ್ರೀಕೃಷ್ಣನೆಂದ, 'ನನ್ನ ಅಭಿಪ್ರಾಯದಲ್ಲಿ ನಿನ್ನ ಈ ನಿರ್ಣಯ ಸರಿ ಕಾಣುವುದಿಲ್ಲ. ಆದರೂ ನಮಗೆಲ್ಲರಿಗೂ ನಿನ್ನ ನಿರ್ಣಯ ಶಿರಸಾಧಾರ್ಯವಾದುದರಿಂದ ಹಾಗೇ ಆಗಲಿ'. ಹೀಗೆ ಹೇಳಿ ಶ್ರೀಕೃಷ್ಣ ಸುಭದ್ರೆಗೆ ಹೇಳಿದ, 'ಈ ಯತೀಶ್ವರ ಒಳ್ಳೆಯವ, ಇಲ್ಲಿ ಇರುತ್ತಾನೆ, ಅವನನ್ನು ಸೇವಿಸು' ಎಂದು.

ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ

(ಉತ್ಸವವನ್ನು ಮುಗಿಸಿ ಎಲ್ಲರ ನಿರ್ಗಮನ, ಅರ್ಜುನನ ಚಿಂತೆ, ಬಲರಾಮಾದಿಗಳಿಂದ ಪುನಃ ಬಂದು ಚಾತುರ್ಮಾಸ್ಯವನ್ನು ಕನ್ಯಾಗಾರದಲ್ಲಿ ಕಳೆಯಬೇಕೆಂಬ ಪ್ರಾರ್ಥನೆ, ಕೃಷ್ಣನ ವಿರೋಧ ಸೂಚನೆ ಮತ್ತು ಅನುಮತಿ.)

ವೈಶಂಪಾಯನಃ

ಚಾರೈಃ ಸಂಚಾರಿತೇ ತಸ್ಮಿನ್ನನುಜ್ಞಾತೋ ಧನಂಜಯಃ ।
ಗತಾಂ ರೈವತಕೇ ಕನ್ಯಾಂ ವಿದಿತ್ವಾ ಜನಮೇಜಯ ॥೧॥

ವಾಸುದೇವಾಭ್ಯನುಜ್ಞಾತಃ ಕಥಯಿತ್ವೇತಿಕೃತ್ಯತಾಮ್ ।
ಕೃಷ್ಣಸ್ಯ ಮತಮಾಜ್ಞಾಯ ಪ್ರಯಯೌ ಭರತರ್ಷಭಃ ॥೨॥

ಜನಮೇಜಯನೇ, ಚಾರರು ಧರ್ಮರಾಜನ ಅನುಮತಿಯನ್ನು ಅರ್ಜುನನಿಗೆ ತಿಳಿಸುತ್ತಿರಲು ಕೃಷ್ಣನ ಉತ್ತರವನ್ನು ತಿಳಿದುಕೊಂಡು ಮುಂದೆ ಮಾಡಬೇಕಾದ ರೀತಿಯನ್ನು ಸಮಾಲೋಚಿಸಿ ಕೃಷ್ಣನನ್ನು ಬೀಳ್ಕೊಟ್ಟು ತನ್ನ ಮೊದಲನೆಯ ಸ್ಥಾನಕ್ಕೆ ಹಿಂದಿರುಗಿದನು.

ವೃತ್ತೋತ್ಸವಾ ರೈವತಕೇ ವೃಷ್ಣಯೋऽಪ್ಯಗಮನ್ ಪುರೀಮ್ ।
ಸುಭದ್ರಾऽಪ್ಯಥ ಶೈಲೇಂದ್ರಮಭ್ಯರ್ಚ್ಯ ಸಹ ರೈವತಮ್ ॥೩॥

ದೈವತಾನಿ ಚ ಸರ್ವಾಣಿ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಚ ।
ಪ್ರದಕ್ಷಿಣಂ ಗಿರಿಂ ಕೃತ್ವಾ ಪ್ರಯಯೌ ದ್ವಾರಕಾಂ ಪ್ರತಿ ॥೪॥

ರೈವತಕ ಪರ್ವತದಲ್ಲಿ ಉತ್ಸವವನ್ನು ಮುಗಿಸಿದ ವೃಷ್ಣಿಗಳು ದ್ವಾರಕೆಗೆ ಹಿಂದಿರುಗಿದರು. ಸುಭದ್ರೆಯೂ ಸಹ ರೈವತ ಪರ್ವತವನ್ನು ಪೂಜಿಸಿ ಅಲ್ಲಿದ್ದ ದೇವತೆಗಳಿಗೆಲ್ಲಾ ನಮಸ್ಕರಿಸಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡಿ ದ್ವಾರಕೆಗೆ ಹೋದಳು.

ಗತಾಂ ರೈವತಕಾತ್ ಕನ್ಯಾಂ ಪ್ರವಿಷ್ಟಾಂ ದ್ವಾರಕಾಂ ಪ್ರತಿ ।
ಚಿಂತಯಾನಸ್ತತೋ ಭದ್ರಾಮುಪವಿಷ್ಟಃ ಶಿಲಾತಲೇ ॥೫॥

ಅರ್ಜುನನು, ಸುಭದ್ರೆಯು ರೈವತಕ ಪರ್ವತದಿಂದ ದ್ವಾರಕೆಗೆ ಹೋದುದನ್ನು ನೋಡಿ ಒಂದು ಶಿಲಾತಳದಲ್ಲಿ ಅವಳನ್ನೇ ಧ್ಯಾನಿಸುತ್ತಾ ಕುಳಿತುಕೊಂಡನು.

ರಮಣೀಯೇ ವನೋದ್ದೇಶೇ ಬಹುಪಾದಪಸಂವೃತೇ ।
ಸಾಲತಾಲಾಶ್ವಕರ್ಣೈಶ್ಚ ಬಕುಲೈರರ್ಜುನೈಸ್ತಥಾ ॥೬॥

ಚಂಪಕಾಶೋಕಪುನ್ನಾಗೈಃ ಕೇತಕೈಃ ಪಾಟಲೈಸ್ತಥಾ ।
ಕರ್ಣಿಕಾರೈರಶೋಕೈಶ್ಚ ಅಂಕೋಲೈರತಿಮುಕ್ತಕೈಃ ॥೭॥

ಏವಮಾದಿಭಿರನ್ಯೈಶ್ಚ ಸಂವೃತೇ ಸ ಶಿಲಾತಳೇ ।
ಪುನಃ ಪುನಶ್ಚಿಂತಯಾನಃ ಸುಭದ್ರಾಂ ಭದ್ರಭಾಷಿಣೀಮ್ ॥೮॥

ಸಾಲ, ತಾಲ, ಅಶ್ವಕರ್ಣ, ಬಕುಲ, ಅರ್ಜುನ, ಚಂಪಕ, ಅಶೋಕ, ಪುನ್ನಾಗ, ಕೇತಕ, ಪಾಟಲ, ಕರ್ಣಿಕಾರ, ಅಂಕೋಲ, ಅತಿಮುಕ್ತಿಕ ಮೊದಲಾದ ವೃಕ್ಷಗಳಿಂದ ಕೂಡಿದ ರಮಣೀಯವಾದ ವನಪ್ರದೇಶದಲ್ಲಿ ಶಿಲಾತಳದ ಮೇಲೆ ಕುಳಿತು ಮಂಜುಳಭಾಷಿಣಿಯಾದ ಸುಭದ್ರೆಯನ್ನು ಮತ್ತೆಮತ್ತೆ ಯೋಚಿಸತೊಡಗಿದನು.

ಯದೃಚ್ಛಯಾ ಚೋಪಪನ್ನಾನ್ ವೃಷ್ಣಿವೀರಾನ್ ದದರ್ಶ ಹ ।
ಬಲದೇವಂ ಚ ಹಾರ್ದಿಕ್ಯಂ ಸಾಂಬಂ ಸಾರಣಮೇವ ಚ ॥೯॥

ಪ್ರದ್ಯುಮ್ನಂ ಚ ಗದಂ ಚೈವ ಚಾರುದೇಷ್ಣಂ ವಿಡೂರಥಮ್ ।
ಭಾನುಂ ಚ ನಿಶಠಂ ಚೈವ ವಿಪೃಥುಂ ಪೃಥುಮೇವ ಚ ।
ತಥಾಽನ್ಯಾಂಶ್ಚ ಬಹೂನ್ ಪಶ್ಯನ್ ಹೃದಿ ಶೋಕಮಧಾರಯತ್ ॥೧೦॥

ಆಗ ಅವನು ಅಲ್ಲಿಗೆ ಇದ್ದಕ್ಕಿದ್ದಂತೆ ಬಂದ ವೃಷ್ಣಿವೀರರಾದ ಬಲರಾಮ, ಕೃತವರ್ಮ, ಸಾಂಬ, ಸಾರಣ, ಪ್ರದ್ಯುಮ್ನ, ಗದ, ಚಾರುದೇಷ್ಣ, ವಿಡೂರಥ, ಭಾನು, ನಿಶಠ, ವಿಪೃಥು, ಪೃಥು ಮತ್ತು ಇನ್ನೂ ಅನೇಕ ಪುರುಷರನ್ನು ನೋಡಿ ತನ್ನ ಶೋಕವನ್ನು ತನ್ನ ಹೃದಯಲ್ಲಿಯೇ ಧರಿಸಿದನು.

ತತಸ್ತೇ ಸಹಿತಾಃ ಸರ್ವೇ ಯತಿಂ ದೃಷ್ಟ್ವಾ ಸಮುತ್ಸುಕಾಃ ।
ವೃಷ್ಣಯೋ ವಿನಯೋಪೇತಾಃ ಪರಿವಾರ್ಯೋಪತಸ್ಥಿರೇ ॥೧೧॥

ಆಗ ಆ ವೃಷ್ಣಿಗಳೆಲ್ಲರೂ ಉತ್ಸುಕರಾಗಿ ಯತಿಯನ್ನು ನೋಡಿ ಅವನನ್ನು ಸುತ್ತುವರಿದು ವಿನಯದಿಂದ ನಿಂತರು.

ತತೋಽರ್ಜುನಃ ಪ್ರೀತಮನಾಃ ಸ್ವಾಗತಂ ವ್ಯಾಜಹಾರ ಸಃ ।
ಆಸ್ಯತಾಮಾಸ್ಯತಾಂ ಸರ್ವೇ ರಮಣೀಯೇ ಶಿಲಾತಳೇ ॥೧೨॥

ಆಗ ಅರ್ಜುನನು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಅವರಿಗೆ ಸ್ವಾಗತವನ್ನು ಹೇಳಿ ಎಲ್ಲರೂ ಮನೋಹರವಾದ ಈ ಶಿಲಾತಳದಲ್ಲಿ ಕುಳಿತುಕೊಳ್ಳಿ ಕುಳಿತುಕೊಳ್ಳಿ ಎಂದು ಹೇಳಿದನು.

ಇತ್ಯೇವಮುಕ್ತಾ ಯತಿನಾ ಪ್ರೀತಾಸ್ತೇ ಯಾದವರ್ಷಭಾಃ ।
ಉಪೋಪವಿವಿಶುಃ ಸರ್ವೇ ಸುಸ್ವಾಗತಮಿತಿ ಸ್ಮ ಹ ॥೧೩॥

ಯತಿಯಿಂದ ಹೀಗೆ ಹೇಳಲ್ಪಟ್ಟ ಆ ಯಾದವಶ್ರೇಷ್ಠರೆಲ್ಲರೂ ಅವನಿಗೂ ಸುಸ್ವಾಗತವನ್ನು ಕೋರಿ ಹತ್ತಿರದಲ್ಲಿ ಕುಳಿತುಕೊಂಡರು.

ಪಲ್ಲವೇಷು ನಿವಿಷ್ಟೇಷು ವೃಷ್ಣಿವೀರೇಷು ಪಾಂಡವಃ ।
ಆಕಾರಂ ಗೂಹಮಾನಸ್ತು ಕುಶಲಪ್ರಶ್ನಮಬ್ರವೀತ್ ॥೧೪॥

ವೃಷ್ಣಿವೀರರು ಚಿಗುರುಗಳ ಮೇಲೆ ಕುಳಿತುಕೊಳ್ಳುತ್ತಿರಲು ಅರ್ಜುನನು ತನ್ನ ಮನಸ್ಸಿನ ಅಭಿಪ್ರಾಯವನ್ನು ಮರೆಮಾಚಿ ಅವರ ಕುಶಲ ಪ್ರಶ್ನೆಯನ್ನು ಮಾಡಿದನು.

ಸರ್ವತ್ರ ಕುಶಲಂ ಚೋಕ್ತ್ವಾ ಬಲದೇವೋಽಬ್ರವೀದಿದಮ್ ।
ಪ್ರಸಾದಂ ಕುರು ಮೇ ವಿಪ್ರ ಕುತಸ್ತ್ವಂ ಚಾಗತೋ ಹ್ಯಸಿ ॥೧೫॥

ತ್ವಯಾ ದೃಷ್ಟಾನಿ ಪುಣ್ಯಾನಿ ವದಸ್ವ ವದತಾಂ ವರ ।
ಪರ್ವತಾಂಶ್ಚೈವ ತೀರ್ಥಾನಿ ವನಾನ್ಯಾಯತನಾನಿ ಚ ॥೧೬॥

ಬಲರಾಮನು ಎಲ್ಲವೂ ಕುಶಲ ಎಂದು ಹೇಳಿ ಈ ಮಾತನ್ನಾಡಿದನು. ಬ್ರಾಹ್ಮಣನೇ, ನಮ್ಮನ್ನು ಅನುಗ್ರಹಿಸು. ನೀನು ಎಲ್ಲಿಂದ ಬರುತ್ತಿದ್ದೀಯೆ? ಮಾತನಾಡುವವರಲ್ಲಿ ಶ್ರೇಷ್ಠನಾದವನೇ, ನೀನು ನೋಡಿದ ಪವಿತ್ರವಾದ ತೀರ್ಥಗಳನ್ನೂ, ವನಗಳನ್ನೂ, ಪರ್ವತಗಳನ್ನೂ, ದೇವಾಲಯಗಳನ್ನೂ ನಮಗೆ ತಿಳಿಸು.

ವೈಶಂಪಾಯನಃ

ತೀರ್ಥಾನಾಂ ದರ್ಶನಂ ಚೈವ ಪರ್ವತಾನಾಂ ಚ ಭಾರತ ।
ಆಪಗಾನಾಂ ವನಾನಾಂ ಚ ಕಥಯಾಮಾಸ ಯಾದವೇ ॥೧೭॥

ಜನಮೇಜಯನೇ, ಆಗ ಅರ್ಜುನನು ಬಲರಾಮನಿಗೆ ತಾನು ನೋಡಿದ ತೀರ್ಥಗಳನ್ನೂ, ಪರ್ವತಗಳನ್ನೂ, ನದಿಗಳನ್ನೂ ಮತ್ತು ವನಗಳನ್ನೂ ತಿಳಿಸಿದನು.

ತಾಃ ಕಥಾಃ ಕಥಯನ್ನೇವ ಕಥಾಂತೇ ಜನಮೇಜಯ ।
ಕಥಾಂ ಧರ್ಮಾರ್ಥಸಂಯುಕ್ತಾಂ ವೃಷ್ಣಿವೀರೇ ನ್ಯವೇದಯತ್ ॥೧೮॥

ಜನಮೇಜಯನೇ, ಅರ್ಜುನನು ಆ ಕಥೆಗಳನ್ನು ಹೇಳುತ್ತಲೇ ಕೊನೆಯಲ್ಲಿ ಧರ್ಮಾರ್ಥಯುಕ್ತವಾದ ಕಥೆಯನ್ನು ಬಲರಾಮನಿಗೆ ಹೇಳಿದನು.

ಶ್ರುತ್ವಾ ಧರ್ಮಕಥಾಂ ಪುಣ್ಯಾಂ ವೃಷ್ಣಿವೀರೋऽಭ್ಯಪೂಜಯತ್ ।
ತತಸ್ತು ಯಾದವಾಃ ಸರ್ವೇ ಮಂತ್ರಯಂತಿ ಸ್ಮ ಭಾರತ ॥೧೯॥

ವೃಷ್ಣಿವೀರನಾದ ಬಲರಾಮನು ಪವಿತ್ರವಾದ ಆ ಧರ್ಮ ಕಥೆಯನ್ನು ಕೇಳಿ ಯತಿಯನ್ನು ಪೂಜಿಸಿದನು. ಭಾರತನೇ, ಆಗ ಯಾದವರು ಪರಸ್ಪರವಾಗಿ ಮಂತ್ರಾಲೋಚನೆಯನ್ನು ಮಾಡಿದರು.

ಅಯಂ ದೇಶಾತಿಥಿಃ ಶ್ರೀಮಾನ್ ಯತಿಲಿಂಗಧರೋ ದ್ವಿಜಃ ।
ಆವಾಸಂ ಕಮುಪಾಶ್ರಿತ್ಯ ವಸೇತ ನಿರುಪದ್ರವಃ ॥೨೦॥

ಯತಿಚಿಹ್ನೆಯನ್ನು ಧರಿಸಿದ ಈ ಶ್ರೇಷ್ಠನಾದ ಬ್ರಾಹ್ಮಣನು ದೇಶಗಳನ್ನು ಸಂಚರಿಸುತ್ತಾ ಇಲ್ಲಿಗೆ ಅತಿಥಿಯಾಗಿ ಬಂದಿದ್ದಾನೆ. ಯಾವ ಆವಾಸದಲ್ಲಿ ಅವನು ಉಪದ್ರವವಿಲ್ಲದಂತೆ ಇರಬಹುದು?

ಇತ್ಯೇವಂ ಕಥಯಂತಸ್ತೇ ರೌಹಿಣೇಯೇನ ಯಾದವಾಃ ।
ದದೃಶುಃ ಕೃಷ್ಣಮಾಯಾಂತಂ ಸರ್ವೇ ಯಾದವನಂದನಮ್ ॥೨೧॥

ಬಲರಾಮನ ಜೊತೆಯಲ್ಲಿ ಹೀಗೆ ಮಾತನಾಡುತ್ತಿದ್ದ ಆ ಯಾದವರೆಲ್ಲರೂ ಯಾದವನಂದನನಾದ ಕೃಷ್ಣನು ಬರುತ್ತಿರುವದನ್ನು ನೋಡಿದರು.

ಏಹಿ ಕೇಶವ ತಾತೇತಿ ರೌಹಿಣೇಯೋಽಬ್ರವೀದಿದಮ್ ।
ಯತಿಲಿಂಗಧರೋ ವಿದ್ವಾನ್ ದೇಶಾತಿಥಿರಯಂ ದ್ವಿಜಃ ॥೨೨॥

ಪ್ರೀತಿಪಾತ್ರವಾದ ಕೇಶವನೇ, ಬಾ ಎಂದು ಕರೆದು ಬಲರಾಮನು ಹೀಗೆ ಹೇಳಿದನು. ಯತಿಚಿಹ್ನೆಯನ್ನು ಧರಿಸಿದ ವಿದ್ವಾಂಸನಾದ ಈ ಬ್ರಾಹ್ಮಣನು ದೇಶಾತಿಥಿಯಾಗಿ ಬಂದಿದ್ದಾನೆ.

ವರ್ಷಾರಾತ್ರನಿವಾಸಾರ್ಥಮಾಗತೋ ನಗರಂ ಪ್ರತಿ ।
ಸ್ಥಾನೇ ಯಸ್ಮಿನ್ ನಿವಸತಿ ತನ್ಮೇ ಬ್ರೂಹಿ ಜನಾರ್ದನ ॥೨೩॥

ವರ್ಷಾಕಾಲದಲ್ಲಿ ಇರಲು ಒಂದು ಆವಾಸವನ್ನು (ಗೃಹವನ್ನು) ಹುಡುಕುತ್ತಾ ಅವನು ನಗರಕ್ಕೆ ಬಂದಿದ್ದಾನೆ, ಜನಾರ್ದನನೇ, ಅವನು (ನಮ್ಮ ನಗರದಲ್ಲಿ) ಎಲ್ಲಿ ನಿವಾಸ ಮಾಡಬಹುದೆಂದು ಹೇಳು.

ಭಗವಾನ್

ತ್ವಯಿ ಸ್ಥಿತೇ ಮಹಾಭಾಗ ಪರವಾನಸ್ಮಿ ಧರ್ಮತಃ ।
ಸ್ವಯಂ ತು ರುಚಿರೇ ಸ್ಥಾನೇ ವಾಸಯಾಮುಂ ಹಿ ಮಾನದ ॥೨೪॥

ಮಹಾನುಭಾವನೇ, ನೀನು ಇರುವಾಗ ನಾನು ಧರ್ಮದಿಂದ ನಿನಗೆ ಅಧೀನನಾಗಿದ್ದೇನೆ. ಮಾನದನೇ. ನೀನೇ ಇವನಿಗೆ ಆವಾಸಕ್ಕಾಗಿ ಒಂದು ಮನೋಹರವಾದ ಸ್ಥಾನವನ್ನು ಕಲ್ಪಿಸು.

ವೈಶಂಪಾಯನಃ

ಸುಪ್ರೀತಸ್ತೇನ ವಾಕ್ಯೇನ ಪರಿಷ್ವಜ್ಯ ಜನಾರ್ದನಮ್ ।
ಬಲದೇವೋಽಬ್ರವೀದ್ ವಾಕ್ಯಂ ಚಿಂತಯಿತ್ವಾ ಮಹಾಬಲಃ ॥೨೫॥

ಆ ವಾಕ್ಯದಿಂದ ಸಂತೋಷಗೊಂಡ ಮಹಾಬಲನಾದ ಬಲರಾಮನು ಜನಾರ್ದನನನ್ನು ಆಲಂಗಿಸಿ ಆಲೋಚಿಸಿ ಹೀಗೆ ಮಾತನಾಡಿದನು.

ಬಲದೇವಃ

ಆರಾಮೇ ತು ವಸೇದ್ ಧೀಮಾಂಶ್ಚತುರೋ ವರ್ಷಮಾಸಕಾನ್ ।
ಕನ್ಯಾಪುರೇ ಸುಭದ್ರಾಯಾ ಭುಕ್ತ್ವಾ ಭೋಜನಮಿಷ್ಟತಃ ॥೨೬॥

ಮೇಧಾವಿಯಾದ ಇವನು ಸುಭದ್ರೆಯ ಕನ್ಯಾಂತಃಪುರಕ್ಕೆ ಹೊಂದಿಕೊಂಡಿರುವ ತೋಟದಲ್ಲಿ ಇಷ್ಟವಾದ ಭೋಜನವನ್ನು ಮಾಡಿಕೊಂಡು ಚಾತುರ್ಮಾಸದ ನಾಲ್ಕು ತಿಂಗಳ ಕಾಲ ವಾಸಮಾಡಲಿ.

ಲತಾಗೃಹೇಷು ವಸತಾಮಿತಿ ಮೇ ಧೀಯತೇ ಮತಿಃ ।
ಲಬ್ಧಾನುಜ್ಞಾಸ್ತ್ವಯಾ ತತ್ರ ಮನ್ಯಂತೇ ಸರ್ವಯಾದವಾಃ ॥೨೭॥

ಅಲ್ಲಿರುವ ಲತಾಗೃಹಗಳಲ್ಲಿ ಇವನು ವಾಸಮಾಡಲಿ ಎಂದು ನನ್ನ ಅಭಿಪ್ರಾಯ. ನೀನು ಅನುಮತಿಯನ್ನು ಕೊಟ್ಟರೆ ಎಲ್ಲಾ ಯಾದವರೂ ಹಾಗೆಯೇ ಭಾವಿಸುತ್ತಾರೆ.

ವಾಸುದೇವಃ

ಬಲವಾನ್ ದರ್ಶನೀಯಶ್ಚ ವಾಗ್ಮೀ ಶ್ರೀಮಾನ್ ಬಹುಶ್ರುತಃ ।
ಕನ್ಯಾಪುರಸಮೀಪೇ ತು ನ ಯುಕ್ತಮಿತಿ ಮೇ ಮತಿಃ ॥೨೮॥

ಇವನು ಬಲಿಷ್ಠನೂ, ಸುಂದರನೂ, ವಾಗ್ಮಿಯೂ, ಯೌವನದ ಕಾಂತಿಯನ್ನು ಹೊಂದಿದವನೂ ಮತ್ತು ಬಹುಶ್ರುತನೂ ಆಗಿದ್ದಾನೆ. ಕನ್ಯಾಂತಃಪುರದ ಸಮೀಪದಲ್ಲಿ ಇವನ ವಾಸವು ಯೋಗ್ಯವಲ್ಲ ಎಂದು ನನ್ನ ಅಭಿಪ್ರಾಯ.

ಗುರುಃ ಶಾಸ್ತಾ ಚ ನೇತಾ ಚ ಶಾಸ್ತ್ರಜ್ಞೋ ಧರ್ಮವಿತ್ತಮಃ ।
ತ್ವಯೋಕ್ತಂ ನ ವಿರುಧ್ಯೇऽಹಂ ಕರಿಷ್ಯಾಮಿ ವಚಸ್ತವ ।
ಶುಭಾಶುಭಸ್ಯ ವಿಜ್ಞಾನೇ ನಾನ್ಯೋऽಸ್ತಿ ಭುವಿ ಕಂಚನ ॥೨೯॥

ನೀನು ಧರ್ಮವನ್ನು ತಿಳಿದವರಲ್ಲಿ ಶ್ರೇಷ್ಠನೂ. ಶಾಸ್ತ್ರಜ್ಞನೂ, ಹಿರಿಯನೂ, ನಮ್ಮೆಲ್ಲರಿಗೂ ಆಜ್ಞೆಯನ್ನು ಮಾಡುವವನೂ ಮತ್ತು ನಮ್ಮ ನಾಯಕನೂ ಆಗಿದ್ದೀಯೆ. ಆದ್ದರಿಂದ ನಾನು ವಿರೋಧ ಮಾಡದೆ ನಿನ್ನ ಮಾತಿನಂತೆ ನಡೆದುಕೊಳ್ಳುವೆನು. ನಿನಗಿಂತ ಅಧಿಕವಾಗಿ ಶುಭಾಶುಭವನ್ನು ತಿಳಿದವರು ಭೂಮಿಯಲ್ಲಿ ಯಾರೂ ಇಲ್ಲ.

ಬಲದೇವಃ

ಅಯಂ ದೇಶಾತಿಥಿಃ ಶ್ರೀಮಾನ್ ಸರ್ವಧರ್ಮವಿಶಾರದಃ ।
ಧೃತಿಮಾನ್ ವಿನಯೋಪೇತಃ ಸತ್ಯವಾನ್ ವಿಜಿತೇಂದ್ರಿಯಃ ॥೩೦॥

ಇವನು ದೇಶಾತಿಥಿಯಾಗಿ ಬಂದಿದ್ದಾನೆ. ಕಾಂತಿಯುಕ್ತನೂ ಸರ್ವಧರ್ಮವಿಶಾರದನೂ, ಧೈರ್ಯಶಾಲಿಯೂ, ವಿನಯ- ಶಾಲಿಯೂ, ಸತ್ಯವಂತನೂ ಮತ್ತು ಜಿತೇಂದ್ರಿಯನೂ ಆಗಿದ್ದಾನೆ.

ಯತಿಲಿಂಗಧರೋ ಹ್ಯೇಷ ಕೋ ವಿಜಾನಾತಿ ಮಾನಸಮ್ ।
ತ್ವಮಿಮಂ ಪುಂಡರೀಕಾಕ್ಷ ನೀತ್ವಾ ಕನ್ಯಾಪುರಂ ಶುಭಮ್ ॥೩೧॥

ನಿವೇದಯ ಸುಭದ್ರಾಯೈ ಮದ್ವಾಕ್ಯಪರಿಚೋದಿತಃ ।
ಭಕ್ಷ್ಯೈರ್ಭೋಜ್ಯೈಶ್ಚ ಪಾನೈಶ್ಚ ಅನ್ಯೈರಿಷ್ಟೈಶ್ಚ ಪೂಜಯ ॥೩೨॥

ಇವನು ಯತಿಗಳ ಚಿಹ್ನೆಯನ್ನು ಧರಿಸಿದವನು. ಅವನ ಮನಸ್ಸನ್ನು ಯಾರು ತಿಳಿಯುತ್ತಾರೆ? ಪುಂಡರೀಕಾಕ್ಷನೇ, ನೀನು ಇವನನ್ನು ಶುಭವಾದ ಕನ್ಯಾಪುರಕ್ಕೆ ಕರೆದುಕೊಂಡು ಹೋಗಿ ನನ್ನ ಮಾತಿನಂತೆ ಸುಭದ್ರೆಗೆ ಇವನಿಗೆ ಇಷ್ಟವಾದ ಭಕ್ಷ್ಯಭೋಜ್ಯಗಳನ್ನು, ಪಾನಗಳನ್ನು ಕೊಟ್ಟು ಇವನನ್ನು ಸತ್ಕರಿಸುವಂತೆ ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕವಿಂಶತ್ಯಕದ್ವಿಶತತಮೋऽಧ್ಯಾಯಃ॥

॥ ಇತಿ ಸುಭದ್ರಾಹರಣಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸಂಯಾಚಿತಃ ಫಲ್ಗುನೇನಾಹ ವಾಕ್ಯಂ
ಯದ್ ವಾಸುದೇವಸ್ತನ್ನ ಜಾನಾತಿ ಕಶ್ಚಿತ್ ।
ಋತೇ ಪಿತ್ರೋರ್ವಿಪೃಥೋಃಸಾತ್ಯಕೇರ್ವಾ
ಸುಭದ್ರಾಂತೇ ಪ್ರದದಾನೀತಿ ಸತ್ಯಂ ॥೧೭೫॥

ಅರ್ಜುನ ಯಾಚಿಸಿದಾಗ ಶ್ರೀಕೃಷ್ಣ ಸುಭದ್ರೆಯನ್ನು ಸತ್ಯವಾಗಿ ನಿನಗೇ ಕೊಡುವೆನೆಂದು ಮಾತುಕೊಟ್ಟಿದ್ದನ್ನು ತಂದೆತಾಯಿಗಳು ವಿಪೃಥು ಸಾತ್ಯಕಿ ಇವರನ್ನು ಹೊರತು ಇನ್ನಾರೂ ಅರಿತಿರಲಿಲ್ಲ.

ಅಸ್ತ್ರೇ ಶಸ್ತ್ರೇ ತತ್ತ್ವವಿದ್ಯಾಸು ಚೈವ
ಶಿಷ್ಯಃ ಶೈನೇಯೋ ವಾಸುದೇವೇಂದ್ರಸೂನ್ವೋಃ ।
ತಸ್ಮಾದಸ್ಮೈ ಕಥಯಾಮಾಸ ಕೃಷ್ಣಃ
ಸ್ವಶಿಷ್ಯತ್ವಾದ್ವಿಪೃಥೋಶ್ಚಾಪಿ ಸರ್ವಂ ॥೧೭೬॥

ಅಸ್ತ್ರ ಶಸ್ತ್ರ ತತ್ತ್ವಜ್ಞಾನಗಳಲ್ಲಿ ಸಾತ್ಯಕಿ ಕೃಷ್ಣಾರ್ಜುನರಿಬ್ಬರಿಗೂ ಶಿಷ್ಯ. ಆದರಿಂದ ಅವನಿಗೆ ಕೃಷ್ಣ ಹೇಳಿದ್ದ. ವಿಪೃಥು ಕೃಷ್ಣನ ಶಿಷ್ಯನಾದ್ದರಿಂದ ಅವನಿಗೂ ಕೃಷ್ಣ ಹೇಳಿದ್ದ.

ಅನ್ಯೇ ಸರ್ವೇ ವಾಸುದೇವಸ್ಯ ಪಾರ್ಥಾನ್
ಪ್ರಿಯಾನ್ ನಿತ್ಯಂ ಜಾನಮಾನಾ ಅಪಿ ಸ್ಮ ।
ರಾಮೇಣಾದಿಷ್ಟಾ ಉದ್ಧವೋಽಥಾಹುಕಾದ್ಯಾ
ಹಾರ್ದಿಕ್ಯಾದ್ಯಾ ನೈವ ದಿತ್ಸಂತಿ ಜಿಷ್ಣೋಃ ॥೧೭೭॥

ಉದ್ಧವ ಆಹುಕ ಕೃತವರ್ಮ ಮುಂತಾದ ಉಳಿದವರೆಲ್ಲರೂ ಪಾಂಡವರನ್ನು ಕೃಷ್ಣನಿಗೆ ಸದಾ ಪ್ರಿಯರೆಂದು ತಿಳಿದವರಾಗಿದ್ದರೂ ಕೂಡ ಬಲರಾಮನ ಆದೇಶಕ್ಕೆ ಬದ್ಧರಾಗಿದ್ದು ಸುಭದ್ರೆಯನ್ನು ಅರ್ಜುನನಿಗೆ ಕೊಡಲು ಒಪ್ಪುತ್ತಿರಲಿಲ್ಲ.

ದುರ್ಯೋಧನೇ ದಾತುಮಿಚ್ಛಂತಿ ಸರ್ವೇ
ರಾಮಪ್ರಿಯಾರ್ಥಂ ಜಾನಮಾನಾ ಹರೇಸ್ತತ್ ।

ಅಪ್ಯಪ್ರಿಯಂ ರಾಕ್ಷಸಾವೇಶಯುಕ್ತಾ
ಸ್ತಸ್ಮಾತ್ ಸರ್ವಾನ್ ವಂಚಯಾಮಾಸ ಕೃಷ್ಣಃ ॥೧೭೮॥

ಬಲರಾಮನ ಸಂತೋಷಕ್ಕಾಗಿ ಎಲ್ಲರೂ ಸುಭದ್ರೆಯನ್ನು ದುರ್ಯೋಧನನಿಗೇ ಕೊಡಲು ಬಯಸಿದ್ದರು. ಅದು ಕೃಷ್ಣನಿಗೆ ಇಷ್ಟವಲ್ಲ ಎಂದು ತಿಳಿದಿದ್ದರೂ ಅವರೆಲ್ಲರೂ ಆಗ ಅಸುರಾವೇಶಯುಕ್ತರಾಗಿದ್ದರು. ಅದರಿಂದ ಎಲ್ಲರನ್ನೂ ಕೃಷ್ಣ ವಂಚಿಸಿದ.

ಪ್ರದ್ಯುಮ್ನಸಾಂಬಪ್ರಮುಖಾಶ್ಚ ವಂಚಿತಾ
ಯಯುಸ್ತೀರ್ಥಾರ್ಥಂ ರಾಮಯುಕ್ತಾಃ ಸಮಗ್ರಾಃ ।
ಪಿಂಡೋದ್ಧಾರಂ ತತ್ರ ಮಹೋತ್ಸವೇಷು-
ವಿವಾವರ್ತಯತ್ಸು ಕ್ವಚಿದೂಚೇ ಸುಭದ್ರಾ ॥೧೭೯॥

ಪ್ರದ್ಯುಮ್ನ ಸಾಂಬ ಮುಂತಾದವರನ್ನೂ ಕೃಷ್ಣ ವಂಚಿಸಿದ. ಒಂದುದಿನ ಎಲ್ಲರೂ ಬಲರಾಮನೊಂದಿಗೆ ಪಿಂಡೋದ್ಧಾರಕ ಕ್ಷೇತ್ರಕ್ಕೆ ತೀರ್ಥಯಾತ್ರೆಗಾಗಿ ಹೋಗಿದ್ದರು. ಅಲ್ಲಿ ದೊಡ್ಡ ಉತ್ಸವದಲ್ಲಿ ಎಲ್ಲರೂ ಪಾಲುಗೊಂಡಿದ್ದಾಗ ಇತ್ತ ದ್ವಾರಕೆಯಲ್ಲಿ ಸುಭದ್ರೆ ಅರ್ಜುನನ ಮುಂದೆ ಕೇಳಿದಳು.

ಯತೇ ತೀರ್ಥಾನಾಚರನ್ ಬಾಂಧವಾಂಸ್ತ್ವ-
ಮದ್ರಾಕ್ಷೀರ್ನಃ ಕಚ್ಚಿದಿಷ್ಟಾನ್ ಸ್ಮ ಪಾರ್ಥಾನ್ ।
ಕುಂತೀಂ ಕೃಷ್ಣಾಂ ಚೇತ್ಯಾಹ ಪೃಷ್ಟಃ ಸ ಪಾರ್ಥ
ಓಮಿತ್ಯೇಷಾಮಾಹ ಚಾನಾಮಯಂ ಸಃ ॥೧೮೦॥

'ಯತಿಯೆ, ನೀನು ತೀರ್ಥಾಟನೆ ಮಾಡುತ್ತ ನಮಗೆ ಬಂಧುಗಳೂ ಇಷ್ಟರೂ ಆದ ಪಾಂಡವರನ್ನು ಕುಂತಿಯನ್ನು ದ್ರೌಪದಿಯನ್ನು ಎಲ್ಲಿಯಾದರೂ ಕಂದೆಯ?' ಹೀಗೆ ಸುಭದ್ರತೆ ಕೇಳಿದಾಗ ಅರ್ಜುನ, 'ಹೌದು, ಕಂಡೆ'ನೆಂದ. 'ಅವರು ಕ್ಷೇಮದಿಂದ ಇದ್ದಾರೆ' ಎಂದ.

ಭೂಯಃ ಸಾವಾದೀದ್ಭಗವನ್ನಿಂದ್ರಸೂನು-
ರ್ಗತಸ್ತೀರ್ಥಾರ್ಥಂ ಬ್ರಾಹ್ಮಣೇಭ್ಯಃ ಶ್ರುತೋ ಮೇ ।
ಕಚ್ಚಿದ್ ದೃಷ್ಟೋ ಭವತೇತ್ಯೋಮಿತಿ ಸ್ಮ
ಪಾರ್ಥೋಽಪ್ಯೂಚೇ ಕ್ವೇತಿ ಸಾಪೃಚ್ಛದೇನಂ ॥೧೮೧॥

ಸುಭದ್ರೆ ಪುನಃ ಕೇಳಿದಳು. 'ಪೂಜ್ಯನೆ ಅರ್ಜುನ ತೀರ್ಥಯಾತ್ರೆಗೆ ಹೋದನೆಂದು ನಾನು ಬ್ರಾಹ್ಮಣರಿಂದ ಕೇಳಿದ್ದೇನೆ. ಅವನನ್ನು ಎಲ್ಲಿಯಾದರೂ ನೋಡಿರುವೆಯಾ?' ಅರ್ಜುನನೆಂದ, 'ಹೌದು ನೋಡಿದ್ದೇನೆ?' 'ಎಲ್ಲಿ?' ಎಂದಳು ಅವಳು.

ಅತ್ರೈವೇತಿ ಸ್ಮಯಮಾನಂ ಚ ಪಾರ್ಥಂ
ಪುನಃಪುನಃ ಪರ್ಯಪೃಚ್ಛದ್ಭಾಂಗೀ ।
ಸೋಽಪ್ಯಾಹೋನ್ನತ್ತೇ ಸೋಽಸ್ಮಿ ಹೀತಿ ಸ್ಮಯಂಸ್ತಾಂ
ಪುಲ್ಲಾಕ್ಷೀ ತಂ ಸಾ ದದರ್ಶಾತಿಹೃಷ್ಟಾ ॥೧೮೨॥

'ಇಲ್ಲಿಯೆ' ಎಂದ ಅರ್ಜುನ ನಗುತ್ತ. ಆ ಮಂಗಳಾಂಗಿ 'ಎಲ್ಲಿ ಎಲ್ಲಿ' ಎಂದು ಪುನಃ ಪುನಃ ಕೇಳಿದಳು. 'ಹುಚ್ಚಿ! ಅವನೆ ನಾನು' ಎಂದ ಅರ್ಜುನ, ನಗುತ್ತ. ಆಗ ಸುಭದ್ರೆ ಆನಂದ ತುಂದಿಲಳಾಗಿ ಕಣ್ಣರಳಿಸಿ ಅವನನ್ನು ನೋಡಿದಳು.

ತತೋಽಹರ್ಷಾಲ್ಲಜ್ಜಯಾ ಚೋತ್ಪಲಾಕ್ಷೀ
ಕಿಂಚಿನ್ನೋಚೇ ಪಾರ್ಥ ಏನಾಮುವಾಚ ।
ಕಾಮಾವಿಷ್ಟೌ ಮುಖ್ಯಕಾಲೋ ಹ್ಯಯಂ ನಾ-
ವುದ್ವಾಹಾರ್ಥೋಕ್ತಸ್ತ್ವಿತಿ ಸಾ ಚೈನಮಾಹ ॥೧೮೩॥

ನಾತಿಕ್ರಮೋ ವಾಸುದೇವಸ್ಯ ಯುಕ್ತ
ಸ್ತಸ್ಮಾತ್ತೇನ ಸ್ವಪಿತೃಭ್ಯಾಂ ಚ ದತ್ತಾಂ ।
ಯುಕ್ತೋ ನಿಜೈರ್ಬಂಧುಭಿಶ್ಚೋತ್ಸವೇ ಮಾಂ
ಸಮುದ್ವಹೇತ್ಯಥ ಕೃಷ್ಣಂ ಸ ದಧ್ಯೌ ॥೧೮೪॥

ಸುಭದ್ರೆ ಆನಂದದಿಂದಲು ಲಜ್ಜೆಯಿಂದಲೂ ಏನೂ ಹೇಳದೆ ಸುಮ್ಮನಿದ್ದಳು. ಅನುರಾಗ ತುಂಬಿದ ಅರ್ಜುನನೆ ಅವಳಿಗೆ ಹೇಳಿದ, 'ನಮ್ಮಿಬ್ಬರಲ್ಲಿ ಅನುರಾಗ ತುಂಬಿರುವ ಈ ಸಮಯವೇ ನಮ್ಮ ಗಾಂಧರ್ವ ವಿವಾಹಕ್ಕೆ ಮುಖ್ಯವಾದ ಶುಭ ಸಮಯವಾಗಲಿ' ಎಂದು. ಸುಭದ್ರೆ ಹೇಳಿದಳು, 'ಕೃಷ್ಣನನ್ನು ಬಿಟ್ಟು ನಾವೇನನ್ನೂ ಮಾಡಬಾರದು. ಕೃಷ್ಣನೂ ನನ್ನ ತಂದೆತಾಯಿಗಳೂ ನನ್ನನ್ನು ನಿನಗೆ ಕೊಟ್ಟ ಮೇಲೆ ನೀನು ನಿನ್ನ ಬಂಧುಗಳೊಂದಿಗೆ ವಿವಾಹಮಹೋತ್ಸವದಲ್ಲಿ ನನ್ನನ್ನು ಮದುವೆಯಾಗು' ಎಂದು. ಆಗ ಅರ್ಜುನ ಕೃಷ್ಣನನ್ನು ಸ್ಮರಿಸಿದ.

ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ

(ಕನ್ಯಾಗಾರದ ಸಮೀಪದಲ್ಲಿ ಅರ್ಜುನನ ವಾಸ, ಸುಭದ್ರೆಯ ಉಪಚಾರ, ಅರ್ಜುನ ಸುಭದ್ರೆಯರ ಸಂವಾದ, ಅರ್ಜುನನ ಜೊತೆಯಲ್ಲಿ ಸಮಾಲೋಚಿಸಿ ಕೃಷ್ಣನಿಂದ ಎಲ್ಲರನ್ನೂ ದ್ವೀಪಾಂತರಕ್ಕೆ ಪ್ರೇಷಣ.)

ವೈಶಂಪಾಯನಃ

ಸ ತಥೇತಿ ಪ್ರತಿಜ್ಞಾಯ ಯತಿನಾ ಸಹಿತೋ ಹರಿಃ ।
ಕೃತ್ವಾ ತು ಸಂವಿದಂ ತೇನ ಪ್ರಹೃಷ್ಟಃ ಕೇಶವೋಽಭವತ್ ॥೧॥

ಕೃಷ್ಣನು ಹಾಗೆಯೇ ಆಗಲಿ ಎಂದು ಬಲರಾಮನಿಗೆ ಹೇಳಿ ಯತಿವೇಷದಲ್ಲಿದ್ದ ಅರ್ಜುನನ ಜೊತೆಯಲ್ಲಿ ಸಮಾಲೋಚಿಸಿ ಸಂತುಷ್ಟನಾದನು.

ಪರ್ವತೇ ತೌ ವಿಹೃತ್ಯೈವ ಯಥೇಷ್ಟಂ ಕೃಷ್ಣಪಾಂಡವೌ ।
ತಾಂ ಪುರೀಂ ಪ್ರವಿವೇಶಾಥ ಗೃಹ್ಯ ಹಸ್ತೇ ಚ ಪಾಂಡವಮ್ ॥೨॥

ಕೃಷ್ಣಪಾಂಡವರು ಆ ಪರ್ವತದಲ್ಲಿ ತೃಪ್ತಿಯಾಗುವಂತೆ ವಿಹರಿಸಿದರು. ಅನಂತರ, ಕೃಷ್ಣನು ಅರ್ಜುನನ ಕೈಯನ್ನು ಹಿಡಿದು ದ್ವಾರಕೆಯನ್ನು ಪ್ರವೇಶಿಸಿದನು.

ಪ್ರವಿಶ್ಯ ಚ ಗೃಹಂ ರಮ್ಯಂ ಸರ್ವಭೋಗಸಮನ್ವಿತಮ್ ।
ಪಾರ್ಥಮಾವೇದಯಾಮಾಸ ರುಗ್ಮಿಣೀಸತ್ಯಭಾಮಯೋಃ ॥೩॥

ಸರ್ವಭೋಗಸಮನ್ವಿತವಾದ ಸುಂದರವಾದ ತನ್ನ ಗೃಹವನ್ನು ಪ್ರವೇಶಿಸಿ ರುಕ್ಮಿಣೀಸತ್ಯಭಾಮೆಯರಿಗೆ ಅರ್ಜುನನ ಪರಿಚಯವನ್ನು ಮಾಡಿಸಿದನು.

ಹೃಷೀಕೇಶವಚಃ ಶ್ರುತ್ವಾ ತೇ ಉಭೇ ಚೋಚತುರ್ಭೃಶಮ್ ।
ಮನೋರಥೋ ಮಹಾನೇಷ ಹೃದಿ ನಃ ಪರಿವರ್ತತೇ ॥೪॥

ಕದಾ ದ್ರಕ್ಷ್ಯಾಮ ಬೀಭತ್ಸುಂ ಪಾಂಡವಂ ಗೃಹಮಾಗತಮ್ ।
ಇತಿ ಚಿಂತಯಮಾನಾನಾಂ ಪಾರ್ಥೋ ದುಃಖಮಪಾನುದತ್ ॥೫॥

ಹೃಷೀಕೇಶನ ವಾಕ್ಯವನ್ನು ಕೇಳಿ ಅವರಿಬ್ಬರೂ ನಮ್ಮ ಮನಸ್ಸಿನಲ್ಲಿ ಮನೆಗೆ ಬಂದ ಪಾಂಡುಪುತ್ರನಾದ ಅರ್ಜುನನನ್ನು ಯಾವಾಗ ನೋಡುವೆವು ಎಂಬ ಮಹದಾಸೆ ಬಹಳ ಕಾಲದಿಂದ ಇದೆ ಎಂದು ಹೇಳಿದರು. ಅರ್ಜುನನು ಹೀಗೆ ಚಿಂತಿಸುವ ಅವರ ದುಃಖವನ್ನು ಪರಿಹರಿಸಿದನು.

ಪ್ರಾಪ್ತಮಜ್ಞಾತಪೂಜಾಭಿರುತ್ತಮಾಭಿರಪೂಜಯನ್ ।
ಸ ತಂ ಪ್ರಿಯಾತಿಥಿಂ ಶ್ರೇಷ್ಠಂ ಸಮೀಕ್ಷ್ಯ ಯತಿಮಾಗತಮ್ ।
ಸೋದರ್ಯಾಂ ಭಗಿನೀಂ ಕೃಷ್ಣಃ ಸುಭದ್ರಾಮಿದಮಬ್ರವೀತ್ ॥೬॥

ಮನೆಗೆ ಬಂದ ಅರ್ಜುನನು ಮೊದಲು ಎಂದೂ ತಿಳಿಯದವನಂತೆ ಉತ್ತಮವಾದ ಸತ್ಕಾರಗಳಿಂದ ಪೂಜಿಸಿದನು. ತನಗೆ ಪ್ರಿಯಾತಿಥಿಯಾಗಿ ಬಂದ ಶ್ರೇಷ್ಠನಾದ ಯತಿಯನ್ನು ನೋಡಿ ಕೃಷ್ಣನು ತಂಗಿಯಾದ ಸುಭದ್ರೆಗೆ ಹೀಗೆ ಹೇಳಿದನು.

ಅಯಂ ದೇಶಾತಿಥಿರ್ಭದ್ರೇ ಸಂಯತೋ ವ್ರತವಾನೃಷಿಃ ।
ಪ್ರಾಪ್ನೋತು ಸತತಂ ಪೂಜಾಂ ತವ ಕನ್ಯಾಪುರೇ ವಸನ್ ॥೭॥

ಸುಭದ್ರೇ, ಈ ಋಷಿಯು ನಮಗೆ ದೇಶಾತಿಥಿಯಾಗಿ ಬಂದಿದ್ದಾನೆ. ಅವನು ವ್ರತವನ್ನು ಧರಿಸಿದವನು ಮತ್ತು ಸಂಯಮಿಯಾದವನು. ಕನ್ಯಾಪುರದಲ್ಲಿ ವಾಸಿಸುವ ಅವನನ್ನು ನೀನು ಸತತವಾಗಿ ಪೂಜಿಸು.

ಆರ್ಯೇಣ ಚ ಪರಿಜ್ಞಾತಃ ಪೂಜನೀಯೋ ಯತಿಃ ಸದಾ ।
ತಸ್ಮಾದ್ ಭರಸ್ವ ವಾರ್ಷ್ಣೇಯಿ ಭಕ್ಷ್ಯೈರ್ಭೋಜ್ಯೈರ್ಯತಿಂ ಸದಾ ॥೮॥

ಈ ಯತಿಯು ಅಣ್ಣನಾದ ಬಲರಾಮನಿಗೆ ಪರಿಚಿತನಾದವನು. ಆದ್ದರಿಂದ ಅವನನ್ನು ಸದಾ ಪೂಜಿಸು. ವೃಷ್ಣಿವಂಶೋದ್ಭವಳೇ, ಈ ಯತಿಯನ್ನು ಯಾವಾಗಲೂ ಭಕ್ಷ್ಯಭೋಜ್ಯಗಳಿಂದ ಪೋಷಿಸು.

ಏಷ ಯದ್ಯದೃಷಿರ್ಬ್ರೂಯಾತ್ ಕಾರ್ಯಮೇವ ನ ಸಂಶಯಃ ।
ಸಖೀಭಿಃ ಸಹಿತಾ ಭದ್ರೇ ಭವೇಥಾ ವಶವರ್ತಿನೀ ॥೯॥

ಈ ಋಷಿಯು ಏನೇನು ಹೇಳುವನೋ ಅದನ್ನೆಲ್ಲಾ ನಿಸ್ಸಂಶಯವಾಗಿ ಮಾಡಲೇಬೇಕು. ಸುಭದ್ರೇ, ನೀನು ನಿನ್ನ ಸಖಿಯರ ಜೊತೆಯಲ್ಲಿ ಅವನಿಗೆ ಸದಾ ವಶವರ್ತಿನಿಯಾಗಿರಬೇಕು.

ಪುರಾऽಪಿ ಯತಯೋ ಭದ್ರೇ ಯೇ ಭೈಕ್ಷಾರ್ಥಮನುವ್ರತಾಃ ।
ತೇ ಬಭೂವುರ್ದಶಾರ್ಹಾಣಾಂ ಕನ್ಯಾಪುರನಿವಾಸಿನಃ ॥೧೦॥

ಸುಭದ್ರೇ, ಹಿಂದೆಯೂ ಸಹ ಭೈಕ್ಷಾರ್ಥವಾಗಿ ಬಂದ ವ್ರತಶೀಲರಾದ ಯತಿಗಳು ದಶಾರ್ಹರ ಕನ್ಯಾಪುರದಲ್ಲಿಯೇ ವಾಸಿಸುತ್ತಿದ್ದರು.

ತೇಭ್ಯೋ ಭೋಜ್ಯಾನಿ ಭಕ್ಷ್ಯಾಣಿ ಯಥಾಕಾಮಮತಂದ್ರಿತಾಃ ।
ಕನ್ಯಾಪುರಗತಾಃ ಕನ್ಯಾಃ ಪ್ರಯಚ್ಛಂತಿ ಯಶಸ್ವಿನಿ ॥೧೧॥

ಯಶಸ್ವಿನಿಯೇ, ಅವರಿಗೆ ಆಯಾ ಕಾಲಕ್ಕೆ ಬೇಕಾದ, ಅವರಿಗೆ ಇಷ್ಟವಾದ ಭಕ್ಷ್ಯಭೋಜ್ಯಗಳನ್ನು ಕನ್ಯಾಂತಃಪುರದಲ್ಲಿದ್ದ ಕನ್ಯೆಯರು ಆಲಸ್ಯವಿಲ್ಲದೇ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು.

ವೈಶಂಪಾಯನಃ

ಸಾ ತಥೋಕ್ತಾऽಬ್ರವೀತ್ ಕೃಷ್ಣಂ ಕರಿಷ್ಯಾಮಿ ಯಥಾऽऽತ್ಥ ಮಾಮ್।
ತೋಷಯಿಷ್ಯಾಮಿ ಋಷ್ಯೇಣ ಕರ್ಮಣಾ ಚ ದ್ವಿಜರ್ಷಭಮ್ ॥೧೨॥

ಹೀಗೆ ಹೇಳಲ್ಪಟ್ಟ ಸುಭದ್ರೆಯು ಕೃಷ್ಣನನ್ನು ಕುರಿತು ನೀನು ನನಗೆ ಹೇಳಿದಂತೆಯೇ ಮಾಡುವೆನು. ಈ ಬ್ರಾಹ್ಮಣ ಶ್ರೇಷ್ಠನನ್ನು ಋಷಿಗೆ ಉಚಿತವಾದ ಕರ್ಮಗಳಿಂದ ಸಂತೋಷಪಡಿಸುವೆನು ಎಂದು ಹೇಳಿದಳು.

ಏವಮೇತೇನ ರೂಪೇಣ ಕಂಚಿತ್ ಕಾಲಂ ಧನಂಜಯಃ ।
ಉವಾಸ ಭಕ್ಷ್ಯೈರ್ಭೋಜ್ಯೈಶ್ಚ ಭದ್ರಯಾ ಪರಮಾರ್ಚಿತಃ ॥೧೩॥

ಹೀಗೆ ಅರ್ಜುನನು ಯತಿವೇಷವನ್ನು ಧರಿಸಿ ಸ್ವಲ್ಪಕಾಲ ಸುಭದ್ರೆಯಿಂದ ಭಕ್ಷ್ಯಭೋಜ್ಯಗಳಿಂದ ಚೆನ್ನಾಗಿ ಸತ್ಕರಿಸಲ್ಪಟ್ಟು ಅಲ್ಲಿ ವಾಸಮಾಡಿದನು.

ತಸ್ಯ ಸರ್ವಗುಣೋಪೇತಾಂ ವಾಸುದೇವಸ್ಯ ಸೋದರಾಮ್ ।
ಪಶ್ಯತಃ ಸತತಂ ಭದ್ರಾಂ ಪ್ರಾದುರಾಸೀನ್ಮನೋಭವಃ ॥೧೪॥

ವಾಸುದೇವನ ತಂಗಿಯಾದ ಎಲ್ಲಾ ಗುಣಗಳಿಂದ ಕೂಡಿದ ಸುಭದ್ರೆಯನ್ನು ಸತತವಾಗಿ ನೋಡುತ್ತಿದ್ದ ಅವನಿಗೆ ಅವಳಲ್ಲಿ ಕಾಮವುಂಟಾಯಿತು.

ಗೂಹಯನ್ನಿವ ಚಾಕಾರಮಾಲೋಕ್ಯ ವರವರ್ಣಿನೀಮ್ ।
ದೀರ್ಘಮುಷ್ಣಂ ನಿಶಶ್ವಾಸ ಪಾರ್ಥಃ ಕಾಮವಶಂ ಗತಃ ॥೧೫॥

ಆ ಸುಂದರಿಯನ್ನು ನೋಡಿ ಕಾಮವಶನಾದ ಅರ್ಜುನನು ತನ್ನ ಆ ವಿಕಾರವನ್ನು ಮುಚ್ಚಿಕೊಂಡು ದೀರ್ಘವಾದ ಮತ್ತು ಉಷ್ಣವಾದ ನಿಟ್ಟುಸಿರನ್ನು ಬಿಡುತ್ತಿದ್ದನು.

ನ ಕೃಷ್ಣಾ ದ್ರೌಪದೀ ರೂಪಂ ವಾಸುದೇವಸಹೋದರಾ ।
ಪ್ರಾಪ್ತಾ ಭೂದಿಂದ್ರಸೇನಾ ವಾ ಸಾಕ್ಷಾದ್ ವಾ ವರುಣಾತ್ಮಜಾ ॥೧೬॥

ದ್ರುಪದನ ಮಗಳಾದ ಕೃಷ್ಣೆಯಾಗಲೀ, ನಳನ ಮಗಳಾದ ಇಂದ್ರಸೇನೆಯಾಗಲೀ, ವರುಣನ ಪುತ್ರಿಯಾದ ಲಕ್ಷ್ಮ್ಯಾಯಾಗಲೀ, ವಾಸುದೇವನ ತಂಗಿಯ ಸೌಂದರ್ಯವನ್ನು ಹೊಂದಿರಲಿಲ್ಲ ಎಂದು ತಿಳಿದನು.

ಅತೀತಸಮಯೇ ಕಾಲೇ ಸೋದರಾಣಾಂ ಧನಂಜಯಃ ।
ನ ಸಸ್ಮಾರ ಸುಭದ್ರಾಯಾಃ ಕಾಮಾಂಕುಶನಿವಾರಿತಃ ॥೧೭॥

ಕಳೆಯುತ್ತಿದ್ದ ಸಮಯದಲ್ಲಿ ಸುಭದ್ರೆಯ ಸಲುವಾಗಿ ಕಾಮಾಂಕುಶಪೀಡಿತನಾದ ಅರ್ಜುನನು ತನ್ನ ಅಣ್ಣತಮ್ಮಂದಿರನ್ನು ಸ್ಮರಿಸಲಿಲ್ಲ.

ಕ್ರೀಡಾರತಿಪರಾಂ ಭದ್ರಾಂ ಸಖೀಜನಶತೈರ್ವೃತಾಮ್ ।
ಪ್ರೀಯತೇ ಸ್ಮಾರ್ಜುನಃ ಪಶ್ಯನ್ ಸ್ವಾಹಾಮಿವ ಹುತಾಶನಃ ॥೧೮॥

ತನ್ನ ನೂರುಜನ ಸಖಿಯರ ಜೊತೆಯಲ್ಲಿ ಕ್ರೀಡೆಯಲ್ಲಿ ತಲ್ಲೀನಳಾದ ಸುಭದ್ರೆಯನ್ನು ನೋಡಿ ಸ್ವಾಹಾದೇವಿಯನ್ನು ನೋಡಿದ ಅಗ್ನಿಯಂತೆ ಅರ್ಜುನನು ಸಂತೋಷಪಡುತ್ತಿದ್ದನು.

ಪಾಂಡವಸ್ಯ ಸುಭದ್ರಾಯಾಃ ಸಕಾಶೇ ತು ಯಶಸ್ವಿನಃ ।
ಸಮುತ್ಪತ್ತಿಃ ಪ್ರಭಾವಶ್ಚ ಗದೇನ ಕಥಿತಃ ಪುರಾ ॥೧೯॥

ಹಿಂದೆ ಸುಭದ್ರೆಯ ಹತ್ತಿರ ಕೃಷ್ಣಾಸೋದರನಾದ ಗದನು ಅರ್ಜುನನ ಜನನ ಪ್ರಕಾರವನ್ನೂ ಅವನ ಪ್ರಭಾವವನ್ನೂ ಹೇಳಿದ್ದನು.

ಶ್ರುತ್ವಾ ಚಾಶನಿನಿಘೋರ್ಷಂ ಕೇಶವೇನೋಪಸೀದತಾ ।
ಉಪಮಾಮರ್ಜುನಂ ಕೃತ್ವಾ ಮತ್ಸರಃ ಕಥಿತಃ ಪುರಾ ॥೨೦॥

ಅರ್ಜುನನ ಜಾನಿಘೋರ್ಷವನ್ನು ಕೇಳಿದ ರಾಜರುಗಳು ಇನ್ನೊಬ್ಬ ರಾಜನನ್ನು ಕುರಿತು ನನ್ನ ಸಮಾನನಾದರೂ ನೀನೇನು ಅರ್ಜುನನೇ ಎಂಬ ಮತ್ಸರದ ಮಾತುಗಳನ್ನು ಕೃಷ್ಣನು ಹೇಳುವುದನ್ನು ಸುಭದ್ರೆಯು ಹಿಂದೆ ಕೇಳಿದ್ದಳು.

ಕ್ರುದ್ಧಮತ್ತಪ್ರಲಾಪಶ್ಚ ವೃಷ್ಣೀನಾಮರ್ಜುನಂ ಪ್ರತಿ ।
ಪೌರುಷಂ ಚೋಪಮಾಂ ಕೃತ್ವಾ ಪ್ರಾವರ್ತಂತ ಧನುಷ್ಮತಾಮ್ ॥೨೧॥

ಧನುರ್ಧಾರಿಗಳಾದ ವೃಷ್ಣಿಗಳು ಕ್ರುದ್ಧರಾಗಿ ಅಥವಾ ಮತ್ತರಾಗಿ ಪ್ರಲಾಪಮಾಡುವಾಗ ಅರ್ಜುನನ ಹೆಸರನ್ನೂ ಅವನ ಪೌರುಷವನ್ನೂ ಉಲ್ಲೇಖಿಸಿ ಮಾತನಾಡುತ್ತಾರೆ ಎಂದೂ ಕೃಷ್ಣನು ಸುಭದ್ರೆಗೆ ಹೇಳಿದ್ದನು.

ಅನ್ಯೋನ್ಯಕಲಹೇ ಚಾಪಿ ವಿವಾದೇ ಚಾಪಿ ವೃಷ್ಣಯಃ ।
ಅರ್ಜುನೋಽಪಿ ನ ಮೇ ತುಲ್ಯಃ ಕುತಸ್ತ್ವಮಿತಿ ತೇಽಬ್ರುವನ್ ॥೨೨॥

ವೃಷ್ಣಿಗಳು ಪರಸ್ಪರ ಕಲಹ ಮಾಡುತ್ತಾ ಅಥವಾ ವಿವಾದ ಮಾಡುತ್ತಾ ಅರ್ಜುನನೂ ನಮಗೆ ಸಮಾನನಲ್ಲ ಇನ್ನು ನೀನು ಎಲ್ಲಿಯವನು ಎಂದು ಹೇಳುತ್ತಾರೆ ಎಂಬುದನ್ನೂ ಕೃಷ್ಣನು ಹೇಳಿದ್ದನು.

ಜಾತಾಂಶ್ಚ ಪುತ್ರಾನ್ ಗೃಹ್ಣಂತ ಆಶಿಷೋ ವೃಷ್ಣಯೋಽಬ್ರುವನ್ ।
ಅರ್ಜುನಸ್ಯ ಸಮೋ ವೀರ್ಯೇ ಭವ ತಾತ ಧನುರ್ಧರಃ ॥೨೩॥

ವೃಷ್ಣಿಗಳು ನವಜಾತರಾದ ಶಿಶುಗಳನ್ನು ಎತ್ತಿಕೊಂಡು ಮಗೂ, ಧನುರ್ಧರನಾಗಿ ಅರ್ಜುನನಿಗೆ ಸಮಾನವಾದ ಪರಾಕ್ರಮವನ್ನು ಹೊಂದು ಎಂದು ಆಶೀರ್ವಾದ ಮಾಡುತ್ತಾರೆ ಎಂದೂ ಕೃಷ್ಣನು ತಿಳಿಸಿದ್ದನು.

ತಸ್ಮಾತ್ ಸುಭದ್ರಾ ಚಕಮೇ ಪೌರುಷಾದ್ ಭರತರ್ಷಭಮ್ ।
ಸತ್ಯಸಂಧಸ್ಯ ರೂಪೇಣ ಚಾತುರ್ಯೇಣ ಚ ಮೋಹಿತಾ ॥೨೪॥

ಆದ್ದರಿಂದ ಅವನ ಸೌಂದರ್ಯದಿಂದಲೂ, ಅವನ ಕೌಶಲದಿಂದಲೂ, ಅವನ ಪೌರುಷದಿಂದಲೂ, ಅವನ ಸತ್ಯಸಂಧತೆಯಿಂದಲೂ ಮೋಹಿತಳಾದ ಸುಭದ್ರೆಯು ಅರ್ಜುನನಲ್ಲಿ ಕಾಮವನ್ನು ಹೊಂದಿದ್ದಳು.

ಚಾರಣಾತಿಥಿಸಂಘಾನಾಂ ಶತಸ್ಯ ಚ ನಿಶತಸ್ಯ ಚ ।
ಅದೃಷ್ಟೇ ಕೃತಭಾವಾऽಭೂತ್ ಸುಭದ್ರಾ ಭರತರ್ಷಭೇ ॥೨೫॥

ಚಾರರ ಮಾತುಗಳಿಂದಲೂ, ಅತಿಥಿಸಮೂಹದ ಮಾತುಗಳಿಂದಲೂ ಶತ ಮತ್ತು ನಿಶತರ ಮಾತುಗಳಿಂದಲೂ ಅರ್ಜುನನನ್ನು ಕೇಳಿದ್ದ ಅವಳು ಅವನನ್ನು ನೋಡದಿದ್ದರೂ ಆ ಭರತರ್ಷಭನಲ್ಲಿ ಪ್ರೀತಿಯನ್ನು ಹೊಂದಿದವಳಾದಳು.

ಕೀರ್ತಯನ್ ದದೃಶೇ ಯೋ ಯಃ ಕಥಂಚಿತ್ ಕುರುಜಾಂಗಲಮ್ ।
ತಂ ತಮೇವ ಸದಾ ಭದ್ರಾ ಬೀಭತ್ಸುಂ ಸ್ಮಾಭಿಪೃಚ್ಛತಿ ॥೨೬॥

ಯಾರು ತನ್ನ ಮಾತುಗಳ ಮಧ್ಯದಲ್ಲಿ ಒಮ್ಮೊಮ್ಮೆ ಕುರುಜಾಂಗಲವನ್ನು ಪ್ರಸ್ತಾಪಿಸುತ್ತಿದ್ದರೋ ಅವರನ್ನು ಕುರಿತು ಸುಭದ್ರೆಯು ಅರ್ಜುನನ ವಿಷಯದಲ್ಲಿ ಪ್ರಶ್ನೆ ಮಾಡುತ್ತಿದ್ದಳು.

ಅಭೀಕ್ಷ್ಣಶಃ ಪರಿಪ್ರಶ್ನಾದಭೀಕ್ಷ್ಣಂ ಶ್ರವಣಾತ್ ತಥಾ ।
ಪ್ರತ್ಯಕ್ಷ ಇವ ಭದ್ರಾಯಾಃ ಪಾಂಡವಃ ಸಮಪದ್ಯತ ॥೨೭॥

ಯಾವಾಗಲೂ ಅವನ ವಿಷಯವನ್ನೇ ಕೇಳುವುವರಿಂದ, ಯಾವಾಗಲೂ ಅವನ ವಿಷಯದಲ್ಲೇ ತಾನು ಪ್ರಶ್ನೆ ಮಾಡುವುದರಿಂದ ಸುಭದ್ರೆಗೆ ಅರ್ಜುನನು ಕಣ್ಣ ಮುಂದೆಯೇ ಇದ್ದಂತೆ ಆಗಿದ್ದನು.

ಭುಜೌ ಭುಜಗಸಂಕಾಶೌ ಜ್ಯಾಘಾತೇನ ಕಿಣೀಕೃತೌ ।
ಪಾರ್ಥೋऽಯಮಿತಿ ಪಶ್ಯಂತ್ಯಾ ನಿಃಸಂಶಯಮಜಾಯತ ॥೨೮॥

ಆ ಯತಿಯ ಸರ್ಪ ಸದೃಶವಾದ, ಧನುಸ್ಸಿನ ಹಗ್ಗದ ಘರ್ಷಣೆಯಿಂದ ಜಡ್ಡುಗಟ್ಟಿದ ಭುಜಗಳನ್ನು ನೋಡಿ ಇವನೇ ಅರ್ಜುನ ಎಂದು ಸ್ಪಷ್ಟವಾದ ಬುದ್ಧಿಯು ಉಂಟಾಯಿತು.

ಯಥಾರೂಪಂ ಹಿ ಶುಶ್ರಾವ ಸುಭದ್ರಾ ಭರತರ್ಷಭಮ್ ।
ತಥಾರೂಪಮವೇಕ್ಷ್ಯೈನಂ ಪರಾಂ ಪ್ರೀತಿಮವಾಪ ಸಾ ॥೨೯॥

ಭರತರ್ಷಭನಾದ ಅರ್ಜುನನು ಎಂತಹ ರೂಪವುಳ್ಳವನು ಎಂದು ಕೇಳಿದ್ದಳೋ ಅದೇ ರೂಪವುಳ್ಳ ಯತಿಯನ್ನು ನೋಡಿ ಅವಳು ತುಂಬಾ ಸಂತೋಷಪಟ್ಟಳು.

ಸಾ ಕದಾಚಿದುಪಾಸೀನಂ ಪಪ್ರಚ್ಛ ಕುರುನಂದನಮ್ ।
ಕಥಂ ಶೈಲಾಃ ಕಥಂ ದೇಶಾ ನಾನಾಜನಪದಾಃ ಕಥಮ್ ॥೩೦॥

ಸರಾಂಸಿ ಸರಿತಶ್ಚೈವ ವನಾನಿ ಚ ಕಥಂ ಚ ತೇ ।
ದಿಶಸ್ತಾಶ್ಚ ಕಥಂ ಪ್ರಾಪ್ತಾಶ್ಚರದ್ಭಗವತಾ ಸದಾ ॥೩೧॥

ಒಮ್ಮೆ ಅವಳು ಕುಳಿತಿದ್ದ ಕುರುನಂದನನಾದ ಅರ್ಜುನನ್ನು ಪ್ರಶ್ನೆ ಮಾಡಿದಳು. ಪೂಜ್ಯರು ಸಂಚರಿಸುತ್ತಾ ನೋಡಿದ ಪರ್ವತಗಳು ಹೇಗಿವೆ? ದೇಶಗಳು ಹೇಗಿವೆ? ನಾನಾ ಜನಪದಗಳು ಹೇಗಿವೆ? ಆ ಸರೋವರಗಳು ನದಿಗಳು ಮತ್ತು ವನಗಳು ಹೇಗಿವೆ? ಪ್ರಯಾಣ ಮಾಡಿದ ದಿಕ್ಕುಗಳು ಹೇಗಿವೆ?

ವೈಶಂಪಾಯನಃ

ಸ ತದ್ ವ್ಯಕ್ತಂ ತದಾ ಭದ್ರಾಂ ಬಹುನರ್ಮಾನ್ವಿತಂ ಬ್ರುವನ್ ।
ಉವಾಚ ಪರಮಪ್ರೀತಸ್ತಸ್ಯಾ ಬಹುವಿಧಾಃ ಕಥಾಃ ॥೩೨॥

ಆಗ ಅರ್ಜುನನು ಅವಳ ಪ್ರಶ್ನೆಗೆ ಉತ್ತರವನ್ನು ಬಹಳ ಸ್ಪಷ್ಟವಾಗಿ ಹಾಸ್ಯದಿಂದ ಕೂಡಿದ ಮಾತುಗಳಿಂದ ಉತ್ತರವನ್ನು ಹೇಳಿ ಬಹಳ ಸಂತುಷ್ಟನಾಗಿ ಇನ್ನೂ ಅನೇಕ ವಿಧವಾದ ಕಥೆಗಳನ್ನು ಹೇಳಿದನು.

ನಿಶಮ್ಯ ವಿವಿಧಂ ತತ್ ಸ್ಮ ಲೋಕೇ ಚರಿತಮಾತ್ಮನಃ ।
ಕಥಾಪರಿಗತೋ ಭಾವಃ ಕನ್ಯಾಯಾಃ ಸಮಪದ್ಯತ ॥೩೩॥

ಅವನು ಆಚರಿಸಿದ ವಿವಿಧ ಕಾರ್ಯಗಳನ್ನು ಕೇಳಿದ ಅವಳಿಗೆ ಕಥೆಯನ್ನು ಕೇಳುತ್ತಿದ್ದಂತೆಯೇ ಅವನಲ್ಲಿ ಪ್ರೀತಿಯುಂಟಾಯಿತು.

ಪರ್ವಸಂಧೌ ತು ಕಸ್ಮಿಂಶ್ಚಿತ್ ಸುಭದ್ರಾ ಭರತರ್ಷಭಮ್ ।
ರಹಸ್ಯೇಕಾಂತಮಾಸಾದ್ಯ ಹೃಷ್ಯಮಾಣಾಽಭ್ಯಭಾಷತ ॥೩೪॥

ಒಮ್ಮೆ ಒಂದು ಪರ್ವಸಂಧಿಯಲ್ಲಿ ಸುಭದ್ರೆಯು ಭರತರ್ಷಭನಾದ ಅರ್ಜುನನನ್ನು ರಹಸ್ಯವಾಗಿ ಏಕಾಂತದಲ್ಲಿ ಸಮೀಪಿಸಿ ಸಂತೋಷದಿಂದ ಹೇಳಿದಳು.

ಯತಿನಾ ಚರತೋ ಲೋಕಾನ್ ಖಾಂಡವಪ್ರಸ್ಥವಾಸಿನೀ ।
ಕಚ್ಚಿದ್ ಭಗವತಾ ದೃಷ್ಟಾ ಪೃಥಾಽಸ್ಮಾಕಂ ಪಿತೃಷ್ವಸಾ ॥೩೫॥

ಪೂಜ್ಯಯತಿಗಳಾದ ತಾವು ಲೋಕಗಳನ್ನು ಸಂಚರಿಸುತ್ತಾ ಖಾಂಡವಪ್ರಸ್ಥದಲ್ಲಿ ನಮ್ಮ ಸೋದರತ್ತೆಯಾದ ಕುಂತಿಯನ್ನು ನೋಡಿದ್ದೀರಾ?

ಭ್ರಾತೃಭಿಃ ಪ್ರೀಯತೇ ಸರ್ವೈ ಕಚ್ಚಿದಾರ್ಯೋ ಯುಧಿಷ್ಠಿರಃ ।
ಕಚ್ಚಿದ್ ಧರ್ಮಪರೋ ಭೀಮೋ ಧರ್ಮರಾಜಸ್ಯ ಧೀಮತಃ ॥೩೬॥

ಪೂಜ್ಯನಾದ ಯುಧಿಷ್ಠಿರನು ತನ್ನ ಎಲ್ಲಾ ತಮ್ಮಂದಿರ ಜೊತೆಯಲ್ಲಿ ಸಂತೋಷದಿಂದ ಇದ್ದಾನೆಯೇ? ಧರ್ಮಿಷ್ಠನಾದ ಭೀಮನು ಮೇಧಾವಿಯಾದ ಧರ್ಮರಾಜನ ವಶವರ್ತಿಯಾಗಿದ್ದಾನೆಯೇ?

ನಿವೃತ್ತಸಮಯಃ ಕಚ್ಚಿದಪರಾಧೀ ಧನಂಜಯಃ ।
ನಿಯಮೇ ಕಾಮಭೋಗಾನಾಂ ವರ್ತಮಾನಃ ಪ್ರಿಯೇ ರತಃ ॥೩೭॥

ಮೊದಲು ಅಪರಾಧವನ್ನು ಮಾಡಿ ನಿಯಮದಂತೆ ತೀರ್ಥಯಾತ್ರೆಯನ್ನು ಮುಗಿಸಿದ ಅರ್ಜುನನು ಇಷ್ಟವಾದ ಕಾಮಭೋಗಗಳನ್ನು ಅನುಭವಿಸಿ ಸಂತೋಷದಲ್ಲಿದ್ದಾನೆಯೆ?

ಕ್ವ ನು ಪಾರ್ಥಶ್ಚರತ್ಯದ್ಯ ಬಹ್ವೀರ್ದುರ್ವಸತೀರ್ವಸನ್ ।
ಸುಖೋಚಿತೋ ಹ್ಯದುಃಖಾರ್ಹೋ ದೀರ್ಘಬಾಹುರರಿಂದಮಃ ।
ಕ್ವಚ್ಚಿಚ್ಛ್ರುತೋ ವಾ ದೃಷ್ಟೋ ವಾ ಪಾರ್ಥೋ ಭಗವತಾಽರ್ಜುನಃ ॥೩೮॥

ಪೂಜ್ಯರಾದ ತಾವು ಕುಂತಿಯ ಪುತ್ರನಾದ ಅರ್ಜುನನನ್ನು ಎಲ್ಲಾದರೂ ಕೇಳಿದ್ದೀರಾ? ಅಥವಾ ನೋಡಿದ್ದೀರಾ?

ವೈಶಂಪಾಯನಃ

ನಿಶಮ್ಯ ವಚನಂ ತಸ್ಯಾಸ್ತಾಮುವಾಚ ಹಸನ್ನಿವ ।
ಮಾತಾ ಕುಶಲಿನೀ ಆರ್ಯಾ ಸಹಪುತ್ರಾ ಸಹಸ್ನುಷಾ ॥೩೯॥

ಅವಳ ಮಾತುಗಳನ್ನು ಕೇಳಿ ನಗುತ್ತಾ ಅರ್ಜುನನು ಹೇಳಿದನು, ಪೂಜ್ಯಳಾದ ತಾಯಿಯು ಪುತ್ರರ ಮತ್ತು ಸೊಸೆಯ ಜೊತೆಯಲ್ಲಿ ಕ್ಷೇಮದಿಂದಿದ್ದಾಳೆ.

ಪ್ರೀಯತೇ ಪಶ್ಯತೀ ಪುತ್ರಾನ್ ಕುರುಕ್ಷೇತ್ರಂ ಚ ಪಶ್ಯತೀ ।
ಅನುಜ್ಞಾತಶ್ಚ ಮಾತ್ರಾ ಚ ಸೋದರ್ಯೈಶ್ಚ ಧನಂಜಯಃ ॥೪೦॥

ದ್ವಾರಕಾಮಾವಸತ್ಯೇಕೋ ಯತಿಲಿಂಗೇನ ಪಾಂಡವಃ ।
ಪಶ್ಯಂತೀ ಸತತಂ ಕಸ್ಮಾನ್ನಾಭಿಜಾನಾಸಿ ಮಾಧವಿ ॥೪೧॥

ಮಕ್ಕಳನ್ನೂ ಮತ್ತು ಕುರುಕ್ಷೇತ್ರವನ್ನು ನೋಡುತ್ತಾ ತಾಯಿಯು ಸಂತೋಷದಿಂದಿದ್ದಾಳೆ. ಪಾಂಡುಪುತ್ರನಾದ ಧನಂಜಯನು ತಾಯಿಯ ಮತ್ತು ಸೋದರರ ಅನುಮತಿಯನ್ನು ಪಡೆದು ಯತಿರೂಪವನ್ನು ಧರಿಸಿ ದ್ವಾರಕಾ ಪಟ್ಟಣದಲ್ಲಿ ಏಕಾಕಿಯಾಗಿ ವಾಸಿಸುತ್ತಿದ್ದಾನೆ. ಮಾಧವಿ, ಅವನನ್ನು ಯಾವಾಗಲೂ ನೋಡುತ್ತಿದ್ದರೂ ಏಕೆ ನೀನು ಗುರುತಿಸುತ್ತಿಲ್ಲ?

ವೈಶಂಪಾಯನಃ

ನಿಶಮ್ಯ ವಚನಂ ತಸ್ಯ ವಾಸುದೇವಸಹೋದರಾ ।
ನಿಶ್ವಾಸಬಹುಲಾ ತಸ್ಥೌ ಕ್ಷಿತಿಂ ವಿಲಿಖತೀ ತದಾ ॥೪೨॥

ಅವನ ಮಾತುಗಳನ್ನು ಕೇಳಿ ವಾಸುದೇವನ ತಂಗಿಯಾದ ಸುಭದ್ರೆಯು ಬಹಳವಾಗಿ ನಿಟ್ಟುಸಿರನ್ನು ಬಿಡುತ್ತಾ ಭೂಮಿಯನ್ನು ಕಾಲಿನ ಬೆರಳುಗಳಿಂದ ಕೆದಕುತ್ತಾ ನಿಂತಳು.

ತತಃ ಪರಮಸಂಹೃಷ್ಟಃ ಸರ್ವಶಸ್ತ್ರಭೃತಾಂ ವರಃ ।
ಅರ್ಜುನೋऽಹಮಿತಿ ಪ್ರೀತಸ್ತಾಮುವಾಚ ಧನಂಜಯಃ ॥೪೩॥

ಆಗ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಧನಂಜಯನು ಪರಮ ಸಂತೋಷದಿಂದ ನಾನೇ ಅರ್ಜುನ ಎಂದು ಅವಳಿಗೆ ಹೇಳಿದನು.

ಯಥಾ ಭಗವತೋ ಭಾವಃ ಶ್ರವಣಾನ್ಮಯಿ ಭಾಮಿನಿ ।
ತ್ವದ್ಗತಃ ಸತತಂ ಭಾವಸ್ತಥಾ ಶತಗುಣೋ ಮಮ ॥೪೪॥

ಭಾಮಿನಿಯೇ, ನನ್ನ ಗುಣಗಳನ್ನು ಕೇಳುವುದರಿಂದ ನನ್ನಲ್ಲಿ ನಿನಗೆ ಹೇಗೆ ಪೂಜ್ಯಭಾವನೆ ಉಂಟಾಗಿದೆಯೋ ಹಾಗೆ ನಿನ್ನ ಗುಣಗಳನ್ನು ಕೇಳುವುದರಿಂದ ಅದಕ್ಕಿಂತ ಮೂರುಪಟ್ಟು ಹೆಚ್ಚಾದ ಪೂಜ್ಯತ್ವ ಭಾವನೆ ನನಗೆ ನಿನ್ನಲ್ಲಿ ಉಂಟಾಗಿದೆ.

ಪ್ರಶಸ್ತೇಽಹನಿ ಧರ್ಮೇಣ ಭದ್ರೇ ತ್ವಯಮಹಂ ವೃತಃ ।
ಸತ್ಯವಾನಿವ ಸಾವಿತ್ರ್ಯಾ ಭವಿಷ್ಯಾಮಿ ಪತಿಸ್ತವ ॥೪೫॥

ಸುಭದ್ರೆಯೇ, ಒಂದು ಪವಿತ್ರವಾದ ದಿನ ನೀನೇ ನನ್ನನ್ನು ಸಾವಿತ್ರಿಯು ಸತ್ಯವಂತನನ್ನು ವರಿಸಿದಂತೆ ವರಿಸುವುದರಿಂದ ನಾನು ನಿನ್ನ ಪತಿಯಾಗುವೆನು.

ಏವಮುಕ್ತ್ವಾ ತತಃ ಪಾರ್ಥಃ ಪ್ರವಿವೇಶ ಲತಾಗೃಹಮ್ ।
ತತಃ ಸುಭದ್ರಾ ಲಲಿತಾ ಲಜ್ಜಾಭಾವಸಮನ್ವಿತಾ ।
ಮುಮೋಹ ಭವನೇ ದಿವ್ಯೇ ಶಯನಾ ನತಥೋಚಿತಾ ॥೪೬॥

ಅರ್ಜುನನು ಹೀಗೆ ಹೇಳಿ ತನ್ನ ಲತಾಗೃಹವನ್ನು ಪ್ರವೇಶಿಸಿದನು. ಆಗ ಲಲಿತಳಾದ ಸುಭದ್ರೆಯು ಲಜ್ಜೆಯಿಂದಲೂ ಮತ್ತು ಕಾಮದಿಂದಲೂ ಕೂಡಿದವಳಾಗಿ ತನ್ನ ದಿವ್ಯವಾದ ಭವನದಲ್ಲಿ ಹಾಸಿಗೆಯಲ್ಲಿ ಮಲಗಿ ಮೋಹಪರವಶಳಾಗಲು ಅರ್ಹಳಲ್ಲದ ಅವಳು ಮೋಹಪರವಶಳಾದಳು.

ಕನ್ಯಾಪುರೇ ಸಂಪ್ರವೃತ್ತಂ ಜ್ಞಾತ್ವಾ ದಿವ್ಯೇನ ಚಕ್ಷುಷಾ ।
ಶಶಾಸ ರುಕ್ಮಿಣೇಂ ಕೃಷ್ಣೋ ಭೋಜನಾನಿ ತದಾಽರ್ಜುನೇ ॥೪೭॥

ಕೃಷ್ಣನು ಕನ್ಯಾಂತಃಪುರದಲ್ಲಿ ನಡೆದ ಘಟನೆಯನ್ನು ತನ್ನ ದಿವ್ಯಜ್ಞಾನದಿಂದ ತಿಳಿದು ರುಕ್ಮಿಣಿಗೆ ಅರ್ಜುನನಿಗೆ ಭೋಜನಾದಿಗಳನ್ನು ಒದಗಿಸುವಂತೆ ಆದೇಶ ನೀಡಿದನು.

ತದಾಪ್ರಭೃತಿ ತಾಂ ಭದ್ರಾಂ ಚಿಂತಯನ್ ವೈ ಧನಂಜಯಃ ।
ಆಸ್ತೇ ಸ್ಮ ಸ ತದಾऽऽರಾಮೇ ಕಾಮೇನ ಭೃಷಪೀಡಿತಃ ।
ಸುಭದ್ರಾऽಪಿ ನ ಚ ಸ್ವಸ್ಥಾ ಪಾರ್ಥಂ ಪ್ರತಿ ಬಭೂವ ಸಾ ॥೪೮॥

ಆಗಿನಿಂದ ಆರಂಭಿಸಿ ಧನಂಜಯನೂ ಸಹ ಸುಭದ್ರೆಯನ್ನೇ ಚಿಂತಿಸಿ ಕಾಮಪರವಶನಾಗಿ ತನ್ನ ಲತಾಗೃಹದಲ್ಲಿ ಇದ್ದನು. ಸುಭದ್ರೆಯೂ ಸಹ ಅರ್ಜುನನನ್ನು ಚಿಂತಿಸಿ ತನ್ನ ಮನಃಸ್ವಾಸ್ಥ್ಯವನ್ನು ಕಳೆದುಕೊಂಡಳು.

ಕೃಶಾ ವಿವರ್ಣವದನಾ ಚಿಂತಾಶೋಕಪರಾಯಣಾ ।
ನಿಶ್ವಾಸಪರಮಾ ಭದ್ರಾ ಮಾನಸೇನ ಮನಸ್ವಿನೀ ॥೪೯॥

ನ ಶಯ್ಯಾಸನಭೋಗೇಷು ರತಿಂ ವಿಂದತಿ ಕೇನಚಿತ್ ।
ನ ನಕ್ತಂ ನ ದಿವಾ ಶೇತೇ ಬಭೂವೋನ್ಮತ್ತದರ್ಶನಾ ॥೫೦॥

ಕೃಶಳಾಗಿ, ಕಾಂತಿಹೀನಳಾಗಿ, ಚಿಂತಾಶೋಕಪರಾಯಣಳಾಗಿ, ಯಾವಾಗಲೂ ನಿಟ್ಟುಸಿರನ್ನು ಬಿಡುತ್ತಾ ಮನಸ್ವಿನಿಯಾದ ಅವಳು ಮನ್ಮಥನಿಂದ ಪೀಡಿತಳಾಗಿ ಶಯನಭೋಜನಾದಿ ಯಾವುದರಿಂದಲೂ ಸುಖವನ್ನು ಹೊಂದಲಿಲ್ಲ. ರಾತ್ರಿಯಾಗಲೀ, ಹಗಲಾಗಲೀ ನಿದ್ರೆಯನ್ನು ಮಾಡದೇ ಹುಚ್ಚಳಂತೆ ಆದಳು.

ಏವಂ ಶೋಕಪರಾಂ ಭದ್ರಾಂ ದೇವಕೀ ವಾಕ್ಯಮಬ್ರವೀತ್ ।
ಮಾ ಶೋಕಂ ಕುರು ವಾರ್ಷ್ಣೇಯಿ ಧೃತಿಮಾಲಂಬ ಶೋಭನೇ ॥೫೧॥

ನಿವೇದಯಿತ್ವಾ ರಾಮಾಯ ಕೃಷ್ಣೇ ಚೈವ ನರರ್ಷಭೇ ।
ಪಶ್ಚಾಜ್ಜ್ಞಾನಾಮಿ ತೇ ವಾರ್ತಾಂ ಮಾ ಶೋಕಂ ಕುರು ಮಾಧವಿ ॥೫೨॥

ಹೀಗೆ ಶೋಕಪರಳಾದ ಸುಭದ್ರೆಯನ್ನುಕುರಿತು ದೇವಕಿಯು ಮಾತನಾಡಿದಳು. ವಾರ್ಷ್ಣೇಯೇ, ಶೋಕಪಡಬೇಡ. ಶೋಭನಳೇ, ಧೈರ್ಯವನ್ನು ತಂದುಕೊ, ನಾನು ಬಲರಾಮನಿಗೂ, ಮತ್ತು ಪುರುಷೋತ್ತಮನಾದ ಕೃಷ್ಣನಿಗೂ ವಿಷಯವನ್ನು ತಿಳಿಸಿ ಅನಂತರ ನಿನ್ನನ್ನು ವಿಚಾರಿಸುತ್ತೇನೆ. ಮಾಧವಿ, ಶೋಕಪಡಬೇಡ.

ವೈಶಂಪಾಯನಃ

ಏವಮುಕ್ತ್ವಾ ಚ ಸಾ ಮಾತಾ ಭದ್ರಾಯಾಃ ಪ್ರಿಯಕಾಮಿನೀ ।
ನಿವೇದಯಾಮಾಸ ತದಾ ಭದ್ರಾಮಾನಕದುಂದುಭೇಃ ।
ರಹಸ್ಯೇಕಾಸನಾ ತತ್ರ ಭರ್ತಾರಮಿದಮಬ್ರವೀತ್ ॥೫೩॥

ಸುಭದ್ರೆಯ ಹಿತವನ್ನು ಬಯಸಿದ ದೇವಕಿಯು ಹೀಗೆ ಮಾತನಾಡಿ, ವಸುದೇವನಿಗೆ ಸುಭದ್ರೆಯ ಸ್ಥಿತಿಯನ್ನು ಏಕಾಸನದಲ್ಲಿ ಕುಳಿತು ತಿಳಿಸುತ್ತಾ ಹೀಗೆ ಮಾತನಾಡಿದಳು.

ಆರಾಮೇಽಸ್ತಿ ಯತಿಃ ಶ್ರೀಮಾನುರ್ಜನಃ ಸೋಽಥ ನಃ ಶ್ರುತಃ ।
ಅಕ್ರೂರಾಯ ಚ ಕೃಷ್ಣಾಯ ಆಹುಕಾಯ ಚ ಸಾತ್ಯಕೇಃ ।
ನಿವೇದ್ಯತಾಂ ಮಹಾಪ್ರಜ್ಞ ಶ್ರೋತವ್ಯಂ ಯದಿ ಬಾಂಧವೈಃ ॥೫೪॥

ಕನ್ಯಾರಾಮದಲ್ಲಿ ತೇಜಸ್ವಿಯಾದ ಯತಿ ಇದ್ದಾನೆ. ಅವನು ಅರ್ಜುನ ಎಂದು ನಾನು ಕೇಳಿದ್ದೇನೆ. ಮಹಾಪ್ರಜ್ಞನೇ, ಈ ವಿಷಯವನ್ನು ಬಂಧುಗಳಿಗೆ ತಿಳಿಸಬಹುದಾದರೆ ಅಕ್ರೂರನಿಗೂ, ಕೃಷ್ಣನಿಗೂ, ಆಹುಕನಿಗೂ ಮತ್ತು ಸಾತ್ಯಕಿಗೂ ಈ ವಿಷಯವನ್ನು ತಿಳಿಸು.

ವಸುದೇವಸ್ತು ತಚ್ಛ್ರುತ್ವಾ ಅಕ್ರೂರಾಹುಕಯೋಸ್ತದಾ ।
ನಿವೇದಯಿತ್ವಾ ಕೃಷ್ಣೇಽಥ ಮಂತ್ರಯಾಮಾಸ ನೈಕಧಾ ॥೫೫॥

ವಸುದೇವನಾದರೋ ಅದನ್ನು ಕೇಳಿ ಅಕ್ರೂರ ಮತ್ತು ಆಹುಕರಿಗೆ ತಿಳಿಸಿ ಅನಂತರ ಕೃಷ್ಣನ ಜೊತೆಯಲ್ಲಿ ಅನೇಕ ರೀತಿಯಲ್ಲಿ ಮಂತ್ರಾಲೋಚನೆ ಮಾಡಿದನು.

ಇದಂ ಕಾರ್ಯಮಿದಂ ಕೃತ್ಯಮಿದಮೇವ ಚ ನಿಶ್ಚಿತಮ್ ।
ಅಕ್ರೂರಶ್ಚೋಗ್ರಸೇನಶ್ಚ ಸತ್ಯಕೇನ ಗದೇನ ಹ ॥೫೬॥

ಪೃಥುಶ್ರವಾಶ್ಚ ಕೃಷ್ಣಶ್ಚ ಸಹಿತಾಃ ಶಿನಿನಾ ಸಹ ।
ರುಗ್ಮಿಣೀ ಸತ್ಯಭಾಮಾ ಚ ದೇವಕೀ ರೇವತೀ ತಥಾ ॥೫೭॥

ವಸುದೇವೇನ ಸಹಿತಾಃ ಪುರೋಹಿತಮತೇ ಸ್ಥಿತಾಃ ।
ವಿವಾಹಂ ಮಂತ್ರಯಾಮಾಸುರ್ದ್ವಾದಶೇಽಹನಿ ಭಾರತ ॥೫೮॥

ಇದು ಮಾಡತಕ್ಕದ್ದು, ಇದೇ ಸರಿಯಾದ ಕಾರ್ಯ, ಇದೇ ನಿಶ್ಚಿತವಾದುದು ಎಂದು ಅಕ್ರೂರ, ಉಗ್ರಸೇನ, ಸತ್ಯಕ, ಗದ, ಪೃಥುಶ್ರವ, ಕೃಷ್ಣ, ಶಿನಿ, ರುಕ್ಮಿಣಿ, ಸತ್ಯಭಾಮೆ, ದೇವಕಿ, ರೇವತಿ, ವಸುದೇವ ಎಲ್ಲರೂ ಪುರೋಹಿತರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಅವತ್ತಿಗೆ ಹನ್ನೆರಡನೆಯ ದಿವಸದಲ್ಲಿ ವಿವಾಹವನ್ನು ನಿರ್ಧರಿಸಿದರು.

ಅಜ್ಞಾತಂ ರೌಹಿಣೇಯಸ್ಯ ಉದ್ಧವಸ್ಯ ಚ ಭಾರತ ।
ವಿವಾಹಂ ತು ಸುಭದ್ರಾಯಾಃ ಕರ್ತುಕಾಮೋ ಗದಾಗ್ರಜಃ ॥೫೯॥

ಮಹಾದೇವಸ್ಯ ಪೂಜಾರ್ಥಂ ವ್ಯಾಜೇನ ಮಧುಸೂದನಃ ।
ನಗರೇ ಘೋಷಯಾಮಾಸ ಹಿತಾರ್ಥಂ ಸವ್ಯಸಾಚಿನಃ ॥೬೦॥

ಭಾರತನೇ, ಗದಾಗ್ರಜನಾದ ಕೃಷ್ಣನು ಉದ್ಧವನಿಗೂ ಮತ್ತು ಬಲರಾಮನಿಗೂ ತಿಳಿಯದಂತೆ ಸುಭದ್ರೆಯ ವಿವಾಹವನ್ನು ಮಾಡಲು ಬಯಸಿ ಮಧುಸೂದನನಾದ ಅವನು ಅರ್ಜುನನ ಹಿತದ ಸಲುವಾಗಿ ಮಹಾದೇವನ ಪೂಜೆಯೆಂಬ ನೆಪದಿಂದ ನಗರದಲ್ಲಿ ಡಂಗುರವನ್ನು ಸಾರಿಸಿದನು.

ಇತಶ್ಚತುರ್ಥೇऽಹನಿ ಚ ಅಂತರ್ದ್ವೀಪಂ ತು ಗಮ್ಯತಾಮ್ ।
ಸದಾರೈಃ ಸಾನುಯಾತ್ರೈಶ್ಚ ಸಪುತ್ರೈಃ ಸಹಬಾಂಧವೈಃ ॥೬೧॥

ವಾಸುದೇವಸಮೈಶ್ಚಾಪಿ ಗಂತವ್ಯಂ ಸರ್ವಯಾದವೈಃ ।
ಗಂತವ್ಯಂ ಸರ್ವವರ್ಣೈಶ್ಚ ಗಂತವ್ಯಂ ಸರ್ವಯಾದವೈಃ ॥೬೨॥

ಇವತ್ತಿಗೆ ನಾಲ್ಕನೇ ದಿನ ಎಲ್ಲರೂ ತಮ್ಮ ಪತ್ನಿ, ಪುತ್ರರೂ, ಸಹಚರರೂ ಮತ್ತು ಬಂಧುಗಳ ಜೊತೆಯಲ್ಲಿ ದ್ವೀಪಾಂತರಕ್ಕೆ ಹೋಗಬೇಕು. ವಾಸುದೇವನ ಜೊತೆಯಲ್ಲಿರುವ ಎಲ್ಲಾ ಯಾದವರೂ ಸಹ ಹೋಗತಕ್ಕದ್ದು. ಎಲ್ಲಾ ವರ್ಣದವರೂ ಮತ್ತು ಎಲ್ಲಾ ಯಾದವರೂ ಹೋಗತಕ್ಕದ್ದು.

ಏವಮುಕ್ತಾಸ್ತು ತೇ ಸರ್ವೇ ತಥಾ ಚಕ್ರುಶ್ಚ ಸರ್ವಶಃ ।
ತತಃ ಸರ್ವದಶಾರ್ಹಾಣಾಮಂತರ್ದ್ವೀಪೇ ನರರ್ಷಭ ।
ಚತುಸ್ತ್ರಿಂಶದಹೋರಾತ್ರಂ ಬಭೂವ ಪರಮೋತ್ಸವಃ ॥೬೩॥

ಹೀಗೆ ಹೇಳಲ್ಪಟ್ಟ ಅವರೆಲ್ಲರೂ ಹಾಗೆಯೇ ಮಾಡಿದರು. ಅನಂತರ, ಮೂವತ್ತನಾಲ್ಕು ದಿವಸಗಳ ಕಾಲ ಅಂತರ್ದ್ವೀಪದಲ್ಲಿ ಎಲ್ಲಾ ದಾಶಾರ್ಹರಿಗೂ ದೊಡ್ಡ ಉತ್ಸವವು ಉಂಟಾಯಿತು.

ಕೃಷ್ಣರಾಮಾಹುಕಾಕ್ರೂರಾಃ ಪ್ರದ್ಯುಮ್ನಃ ಶಿನಿಸಾತ್ಯಕೀ ।
ಸಮುದ್ರಂ ಪ್ರಯಯುರ್ಹೃಷ್ಟಾಃ ಕುಕುರಾಂಧಕವೃಷ್ಣಯಃ ॥೬೪॥

ಯುಕ್ತಯಂತ್ರಪತಾಕಾಭಿರ್ವೃಷ್ಣಯೋ ಬ್ರಾಹ್ಮಣೈಃ ಸಹ ।
ಸಮುದ್ರಂ ಪ್ರಯಯುರ್ನೌಭಿಃ ಸರ್ವೇ ಪುರನಿವಾಸಿನಃ ॥೬೫॥

ಕೃಷ್ಣ, ಬಲರಾಮ, ಆಹುಕ, ಅಕ್ರೂರ, ಪ್ರದ್ಯುಮ್ನ, ಶಿನಿ, ಸಾತ್ಯಕಿ ಇವರು ಮತ್ತು ಕುಕರಾಂಧಕ ವೃಷ್ಣಿಗಳು ಸಂತೋಷದಿಂದ ಸಮುದ್ರವನ್ನು ನೋಡಲು ಹೋದರು. ದ್ವಾರಕಾನಿವಾಸಿಗಳಾದ ಎಲ್ಲ ವೃಷ್ಣಿಗಳೂ ಯಂತ್ರಪತಾಕೆಗಳಿಂದ ಸದ್ಯುತವಾದ ದೋಣಿಯನ್ನೇರಿ ಬ್ರಾಹ್ಮಣರ ಜೊತೆಯಲ್ಲಿ ಸಮುದ್ರವನ್ನು ನೋಡಲು ಹೊರಟರು.

ತತಸ್ತ್ವರಿತಮಾಗತ್ಯ ದಾಸೀಶತಸುಪೂಜಿತಾ ।
ಸುಭದ್ರಾ ಪುಂಡರೀಕಾಕ್ಷಮಬ್ರವೀದ್ ಯತಿಶಾಸನಾತ್ ॥೬೬॥

ಕೃತ್ಯವಾನ್ ದ್ವಾದಶಾಹಾನಿ ಸ್ಥಾತಾ ಸ ಭಗವಾನಿಹ ।
ತಿಷ್ಠತಸ್ತಸ್ಯ ಕಃ ಕುರ್ಯಾದ್ ಉಪಸ್ಥಾನವಿಧಿಂ ಪ್ರತಿ ॥೬೭॥

ಆಗ ತನ್ನ ನೂರು ದಾಸಿಯರಿಂದ ಸತ್ಕೃತಳಾದ ಸುಭದ್ರೆಯು ಬೇಗ ಬಂದು ಕೃಷ್ಣನನ್ನು ಕಂಡು ಯತಿಯ ಶಾಸನದಂತೆ ಈ ಮಾತನ್ನಾಡಿದಳು. ಪೂಜ್ಯನಾದ ಯತಿಯು ಯಾವುದೋ ಉದ್ದೇಶದಿಂದ ಹನ್ನೆರಡು ದಿವಸಗಳ ಕಾಲ ಇಲ್ಲೇ ಇರುತ್ತಾನೆ. ಇಲ್ಲಿರುವ ಸಮಯದಲ್ಲಿ ಅವನಿಗೆ ಯಾರು ಸತ್ಕಾರವನ್ನು ಮಾಡುತ್ತಾರೆ?

ತಮುವಾಚ ಹೃಷೀಕೇಶಃ ಕಸ್ತ್ವದನ್ಯೋ ವಿಶೇಷತಃ ।
ತಮೃಷಿಂ ಪ್ರತ್ಯುಪಸ್ಥಾತುಮಿಹ ನಾರ್ಹತಿ ಮಾನವಃ ॥೬೮॥

ತನ್ಮೇದಾಸ್ಯನ್ತಿನಾಸ್ಯ ಮುಹೂರ್ತಾದರ್ಶದರ್ತಿನೀ ।
ಕುರು ಸರ್ವಾಣಿ ಕಾರ್ಯಾಣಿ ತೀರ್ಥಂ ಧರ್ಮಮುದೇಕ್ಷ್ಯ ಚ ॥೬೯॥

ತಸ್ಯ ಚಾತಿಥಿಮುಖ್ಯಸ್ಯ ಸರ್ವೇಷಾಂ ಚ ತಪಸ್ವಿನಾಮ್ ।
ಸಂವಿಧಾನಪರಾ ಭದ್ರೇ ಭವ ತ್ವಂ ವಶವರ್ತಿನೀ ॥೭೦॥

ಅವಳನ್ನು ಕುರಿತು ಕೃಷ್ಣನು, ನಿನ್ನನ್ನು ಬಿಟ್ಟು ಬೇರೆ ಯಾರಿದ್ದಾರೆ. ನಿನ್ನನ್ನು ಬಿಟ್ಟು ಅವನನ್ನು ಸತ್ಕರಿಸಲು ಬೇರೆ ಯಾರಿಗೂ ಸಾಧ್ಯವಿಲ್ಲ ಎಂದು ಹೇಳಿದನು. ನನ್ನ ಆದೇಶದಂತೆ ನೀನೇ ಆ ಮಹರ್ಷಿಯ ವಶವರ್ತಿನಿಯಾಗಿದ್ದು ಕೀರ್ತಿಯನ್ನು ಮತ್ತು ಧರ್ಮವನ್ನು ಗಮನಿಸಿ ಅವನ ಎಲ್ಲಾ ಕಾರ್ಯಗಳನ್ನೂ ಮಾಡು. ಸುಭದ್ರೆಯೇ, ಅತಿಥಿಶ್ರೇಷ್ಠನಾದ ಅವನಿಗೆ ಹಾಗೂ ಉಳಿದ ತಪಸ್ವಿಗಳಿಗೆ ಇಷ್ಟವಾದ ಉಪಚಾರವನ್ನು ಮಾಡುತ್ತಾ ನೀನು ಅವನ ವಶವರ್ತಿನಿಯಾಗಿ ಇರು. (ಎಂದು ಹೇಳಿದನು)

ವೈಶಂಪಾಯನಃ

ಏವಮಾದಿಶ್ಯ ಭದ್ರಾಂ ಚ ರಕ್ಷಾಂ ಚ ಮಧುಸೂದನಃ ।
ಯಯೌ ಶಂಖನಿನಾದೇನ ಭೇರೀಣಾಂ ಚ ಮಹಾಸ್ವನೈಃ ॥೭೧॥

ಮಧುಸೂದನನು ಸುಭದ್ರೆಗೆ ಹೀಗೆ ಆದೇಶವನ್ನು ನೀಡಿ ರಕ್ಷಣೆಯನ್ನು ಕೊಟ್ಟು ಶಂಖಭೇರಿಗಳ ಮಹಾಸ್ವನದೊಂದಿಗೆ ಅಲ್ಲಿಂದ ಹೊರಟನು.

ತತಸ್ತದ್ದ್ವೀಪಮಾಸಾದ್ಯ ದಾನಧರ್ಮಪರಾಯಣಾಃ ।
ಉಗ್ರಸೇನಮುಖಾಃ ಸರ್ವೇ ವಿಜಹ್ರುಃ ಕುಕುರಾಂಧಕಾಃ ॥೭೨॥

ಅನಂತರ, ಉಗ್ರಸೇನ ಪ್ರಮುಖರಾದ ಎಲ್ಲಾ ಕುಕುರರೂ ಮತ್ತು ಅಂಧಕರೂ ಇನ್ನೊಂದು ದ್ವೀಪಕ್ಕೆ ಹೋಗಿ ದಾನಧರ್ಮಗಳನ್ನು ಮಾಡಿ ಎಲ್ಲರೂ ವಿಹರಿಸಿದರು.

ಸಪ್ತಯೋಜನವಿಸ್ತಾರ ಆಯತೋ ದಶಯೋಜನಮ್ ।
ಬಭೂವ ಸ ಮಹಾದ್ವೀಪಃ ಸಪರ್ವತಮಹಾವನಃ ॥೭೩॥

ಪರ್ವತಗಳಿಂದಲೂ, ವನಗಳಿಂದಲೂ ಕೂಡಿದ್ದ ಆ ಮಹಾದ್ವೀಪವು ಏಳು ಯೋಜನ ಅಗಲವೂ ಮತ್ತು ಹತ್ತು ಯೋಜನ ಉದ್ದವೂ ಆಗಿದ್ದಿತು.

ಸೇತುಪುಷ್ಕರಿಣೀಜಾಲೈರಾಕ್ರೀಡಃ ಸರ್ವಸಾತ್ವತಾಮ್ ।
ವಾಪೀಪಲ್ವಲಸಂಘೈಶ್ಚ ಕಾನನೈಶ್ಚ ಮನೋರಮೈಃ ॥೭೪॥

ಅಲ್ಲಿ ಅನೇಕ ಸೇತುಗಳೂ, ಪುಷ್ಕರಿಣಿಯ ಸಮೂಹಗಳೂ, ಎಲ್ಲ ಸಾತ್ವರಿಗೆ ಬೇಕಾದ ಕ್ರೀಡಾಸ್ಥಾನಗಳೂ, ವಾಪಿಗಳೂ, ಪಲ್ವಲಗಳೂ, ಮನೋಹರವಾದ ಕಾನನಗಳೂ ಇದ್ದವು.

ವಾಸುದೇವೇನ ಚ ದ್ವೀಪಃ ಸ ಸರ್ವೈಃ ಕುಕುರಾಂಧಕೈಃ ।
ಬಭೂವ ಪರಮೋಪೇತಃ ತ್ರಿವಿಷ್ಟಪ ಇವಾಮರೈಃ ॥೭೫॥

ವಾಸುದೇವನಿಂದಲೂ, ಕುಕುರಾಂಧಕರಿಂದಲೂ ತುಂಬಿದ ಆ ದ್ವೀಪವು ದೇವತೆಗಳಿಂದ ತುಂಬಿದ ಸ್ವರ್ಗದಂತೆ ಶೋಭಾಯಮಾನ- ವಾಗಿದ್ದಿತು.

ಚತುಸ್ತ್ರಿಂಶದಹೋರಾತ್ರಂ ದಾನಧರ್ಮಪರಾಯಣಾಃ ।
ಉಗ್ರಸೇನಮುಖಾಃ ಸರ್ವೇ ವಿಜಹ್ರುಃ ಕುಕುರಾಂಧಕಾಃ ॥೭೬॥

ಮೂವತ್ತನಾಲ್ಕು ದಿವಸಗಳ ಕಾಲ ದಾನಧರ್ಮಪರಾಯಣರಾದ ಉಗ್ರಸೇನನೇ ನಾಯಕನಾದ ಕುಕುರಾಂಧಕರೆಲ್ಲರೂ ಹಗಲೂ ರಾತ್ರಿಯೂ ವಿಹರಿಸಿದರು.

ವಿಚಿತ್ರಮಾಲ್ಯಾಭರಣಾಶ್ಚಿತ್ರಗಂಧಾನುಲೇಪನಾಃ ।
ವಿಹಾರಾಭಿಮುಖಾಃ ಸರ್ವೇ ಯಾದವಾಃ ಪಾನಹೇತವಃ ॥೭೭॥

ನೃತ್ತಗೀತವಾದಿತ್ರೈ ರಮಮಾಣಾಸ್ತದಾऽಭವನ್ ।
ತತ್ರ ಯಾತೇ ದಶಾರ್ಹಾಣಾಮೃಷಭೇ ಶಾರ್ಙ್ಗಧನ್ವನಿ ।
ಸುಭದ್ರೋದ್ವಾಹನಂ ಪಾರ್ಥಃ ಪ್ರಾಪ್ತಕಾಲಮಮನ್ಯತ ॥೭೮॥

ವಿಚಿತ್ರವಾದ ಮಾಲ್ಯಗಳನ್ನೂ, ಆಭರಣಗಳನ್ನೂ ಧರಿಸಿ ವಿಚಿತ್ರವಾದ ಗಂಧವನ್ನು ಲೇಪಿಸಿಕೊಂಡು ಮದಹೇತುವಾದ ಪಾನಗಳನ್ನು ಮಾಡಿ ಎಲ್ಲ ಯಾದವರು ವಿಹಾರಶೀಲರಾಗಿ ನೃತ್ತ ವಾದಿತ್ರ ಗೀತಗಳಿಂದ ವಿಹರಿಸಿದರು. ದಶಾರ್ಹರ ನಾಯಕನಾಧ ಶಾರ್ಙ್ಗಧಾರಿಯಾದ ಕೃಷ್ಣನು ಅಲ್ಲಿಗೆ ಹೋಗುತ್ತಿರಲು ಅರ್ಜುನನು

ಸುಭದ್ರೆಯನ್ನು ಕರೆದುಕೊಂಡು ಹೋಗಲು ಇದೇ ಯೋಗ್ಯವಾದ ಕಾಲವೆಂದು ಭಾವಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಾವಿಂಶತ್ಯಕದ್ವಿಶತತಮೋऽಧ್ಯಾಯಃ॥

॥ ಇತಿ ಸುಭದ್ರಾಹರಣಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಮಾತಾಪಿತೃಭ್ಯಾಂ ಸಹಿತೋऽಥ ಕೃಷ್ಣ-
ಸ್ತತ್ರೈವಾಯಾದ್ವಾಸವಶ್ಚಾಥ ಶಚ್ಯಾ ।
ಸಮಂ ಮುನೀಂದ್ರೈಃ ಫಲ್ಗುನೇನ ಸ್ಮೃತಃ
ಸಂಸ್ತತ್ರೈವಾಗಾತ್ ಪ್ರೀತಿಯುಕ್ತೋ ನಿಶಾಯಾಂ ॥೧೮೫॥

ಆಗಲೆ ತಂದೆತಾಯಿಗಳೊಂದಿಗೆ ಕೃಷ್ಣ ಅಲ್ಲಿಗೆ ಬಂದ. ಅರ್ಜುನ ದೇವೇಂದ್ರನನ್ನೂ ನೆನೆದ. ದೇವೇಂದ್ರ ಅದೇ ರಾತ್ರಿಯಲ್ಲಿ ಪ್ರೀತಿಯಿಂದ ಶಚೀ ಸಮೇತನಾಗಿ ವಸಿಷ್ಠ ನಾರದಾದಿ ಮುನೀಂದ್ರರಿಂದೊಡಗೂಡಿ ಬಂದ.

ಕೃಷ್ಣಸ್ತತಃ ಪುರುಹೂತೇನ ಸಾಕಂ
ತಯೋರ್ವಿವಾಹಂ ಕಾರಯಾಮಾಸ ಸಮ್ಯಕ್ ।
ಮಾತಾಪಿತೃಭ್ಯಾಂ ಸಾತ್ಯಕಿನಾಪಿ ಯುಕ್ತೋ
ಮಹೋತ್ಸವೇऽನ್ಯಾವಿದಿತೋ ಮುನೀಂದ್ರೈಃ ॥೧೮೬॥

ಶ್ರೀಕೃಷ್ಣ ಇಂದ್ರನೊಡನೆ, ತಂದೆತಾಯಿಗಳೊಡನೆ, ಸಾತ್ಯಕಿಯೊಡನೆ ಮತ್ತು ಮುನೀಂದ್ರರೊಡನೆ ಕೂಡಿ ಬೇರೆ ಯಾರಿಗೂ ತಿಳಿಯದಂಥ ಮಹೋತ್ಸವದಲ್ಲಿ ಸುಭದ್ರಾರ್ಜುನರಿಗೆ ಚೆನ್ನಾಗಿ ವಿವಾಹ ನಡೆಸಿದ.

ತತಃ ಕೃಷ್ಣಃ ಸ್ಯಂದನಂ ಫಲ್ಗುನಾರ್ಥೇ
ನಿಧಾಯ ಸ್ವಂ ಪ್ರಯಯೌ ತದ್ರಜನ್ಯಾಂ ।
ಗತೇಽಥ ಶಕ್ರೇ ರಥಮಾರುರೋಹ
ಪ್ರಾತಃ ಪಾರ್ಥಃ ಸಹಿತೋ ಭಾರ್ಯಯೈವ ॥೧೪೭॥

ಬಳಿಕ ಶ್ರೀಕೃಷ್ಣ ತನ್ನ ರಥವನ್ನು ಅರ್ಜುನನಿಗಾಗಿ ಅಲ್ಲಿಯೆ ಇರಿಸಿ ಆ ರಾತ್ರಿಯೆ ಪಿಂಡೋದ್ಧಾರ ಕ್ಷೇತ್ರಕ್ಕೆ ಹೊರಟು ಹೋದ. ಇಂದ್ರನೂ ತನ್ನ ಲೋಕಕ್ಕೆ ಹೊರಟು ಹೋದ. ಬೆಳಿಗ್ಗೆ ಅರ್ಜುನ ಸುಭದ್ರೆಯೊಂದಿಗೆ ರಥವನ್ನೇರಿದ.

ಸರ್ವಾಯುಧೈರ್ಯುಕ್ತರರ್ಥಂ ಸಮಾಸ್ಥಿತೇ
ಗೃಹೀತಚಾಪೇ ಫಲ್ಗುನೇ ದ್ವಾರವತ್ಯಾಂ ।
ಆಸೀದ್ರಾವಃ ಕಿಂ ಕಿಮೇತತ್ ತ್ರಿದಂಡೀ
ಕನ್ಯಾಂ ಹರತ್ಯೇಷ ಕೋದಂಡಪಾಣಿಃ ॥೧೪೮॥

ಸಕಲ ಆಯುಧಗಳಿಂದ ಯುಕ್ತವಾದ ಆ ರಥದಲ್ಲಿ ಧನುರ್ಧಾರಿಯಾಗಿ ಅರ್ಜುನ ನಿಂತಾಗ ದ್ವಾರಕೆಯಲ್ಲಿ ಕೋಲಾಹಲವೆದ್ದಿತು- 'ಏನು ಏನಿದು? ತ್ರಿದಂಡಿ ಸಂನ್ಯಾಸಿ ದಂಡ ಬಿಟ್ಟು ಕೋದಂಡಪಾಣಿಯಾಗಿ ಕನ್ಯೆಯನ್ನು ಅಪಹರಿಸುತ್ತಿದ್ದಾನೆ!' ಎಂದು.

ತತಸ್ತು ತಂ ಸತನುತ್ರಂ ಮಹೇಂದ್ರ-
ದತ್ತೇ ದಿವ್ಯೇ ಕುಂಡಲೇ ವಾಸಸೀ ಚ ।
ದಿವ್ಯಾನಿ ರತ್ನಾನಿ ಚ ಭೂಷಣಾನಿ
ದೃಷ್ಟ್ವಾ ಬಿಭ್ರಾಣಂ ರಕ್ಷಿಣೋಽವಾರಯನ್ಸ್ಮ ॥೧೪೯॥

ಮಹೇಂದ್ರ ನೀಡಿದ್ದ ದಿವ್ಯ ಕುಂಡಲಗಳನ್ನೂ ವಸ್ತ್ರಗಳನ್ನೂ ದಿವ್ಯರತ್ನಾಭರಣಗಳನ್ನೂ ಧರಿಸಿ ಕವಚವನ್ನು ತೊಟ್ಟಿದ್ದ ಅರ್ಜುನನನ್ನು ನೋಡಿ ನಗರ ರಕ್ಷಕರು ತಡೆದರು.

ತತಃ ಸ ಆಬದ್ಧತಳಾಂಗುಲಿತ್ರಃ
ಸತೂಣೀರಶ್ಚಾಪಮಾಯಮ್ಯ ಬಾಣೈಃ ।
ಚಕ್ರೇಂತರಿಕ್ಷಂ ಪ್ರದಿಶೋ ದಿಶಶ್ಚ
ನಿರಂತರಂ ಶಿಕ್ಷಯಾ ವಿದ್ಯಯಾ ಚ ॥೧೫೦॥

ಅಂಗೈ ಬೆರಳುಗಳ ಕವಚವನ್ನು ತೊಟ್ಟು ಬತ್ತಳಿಕೆಯನ್ನು ಧರಿಸಿದ ಅರ್ಜುನ ಬಿಲ್ಲನ್ನೆಳೆದು ಬಾಣಗಳಿಂದ ಅಂತರಿಕ್ಷವನ್ನೂ ದಿಕ್ಕು ವಿದಿಕ್ಕುಗಳನ್ನೂ ಅಭ್ಯಾಸ ಬಲ ವಿದ್ಯಾಬಲಗಳಿಂದ ಪೂರ್ತಿಯಾಗಿ ತುಂಬಿಸಿ ಬಿಟ್ಟ.

ಚಕ್ರೇ ಸಾರಥ್ಯಂ ಕೇಶವೇನೈತದರ್ಥೇ
ಸುಶಿಕ್ಷಿತಾ ತಸ್ಯ ಸಮ್ಯಕ್ ಸುಭದ್ರಾ ।
ತಯಾ ಪಾರ್ಥೋ ವಾರಿತೋ ನೈವ ಕಂಚಿತ್
ಭಿನ್ನತ್ವಚಂ ಕೃತವಾನ್ ಕ್ರೀಡಮಾನಃ ॥೧೯೧॥

ಸುಭದ್ರೆಯೆ ಅರ್ಜುನನಿಗೆ ಚೆನ್ನಾಗಿ ಸಾರಥ್ಯ ಮಾಡಿದಳು. ಇದಕ್ಕಾಗಿಯೆ ಕೃಷ್ಣ ಅವಳಿಗೆ ಒಳ್ಳೆಯ ಶಿಕ್ಷಣ ನೀಡಿದ್ದ. ಅವಳು ತಡೆದುದರಿಂದ ಅರ್ಜುನ ಯಾರಿಗೂ ಮೈಯಲ್ಲಿ ಗಾಯ ಮಾಡಲಿಲ್ಲ. ಆಟವಾಡಿದ.

★ ★ ★ ★

ಇನ್ನೂರ ಇಪ್ಪತ್ಮೂರನೆಯ ಅಧ್ಯಾಯ

(ಇಂದ್ರ ಮೊದಲಾದ ದೇವತೆಗಳಿಂದ ಕೃಷ್ಣನ ಸನ್ನಿಧಿಯಲ್ಲಿ ಸುಭದ್ರೆಯ ವಿವಾಹ, ಕೃಷ್ಣನ ಸೂಚನೆಯಂತೆ ರಥದಲ್ಲಿ ಅರ್ಜುನ ಮತ್ತು ಸುಭದ್ರೆಯರ ನಿರ್ಗಮನ, ಕೆಲವರ ಹರ್ಷ ಮತ್ತು ಕೆಲವರ ರೋಷ)

ವೈಶಂಪಾಯನಃ

ವೃಷ್ಣ್ಯಂಧಕಪುರಾನ್ಮೋಕ್ಷಮಪಯಾನಂ ಧನಂಜಯಃ ।
ವಿನಿಶ್ಚಿತ್ಯ ತದಾ ಪಾರ್ಥಃ ಸುಭದ್ರಾಮಿದಮಬ್ರವೀತ್ ॥೧॥

ಶೃಣು ಭದ್ರೇ ಯಥಾಶಾಸ್ತ್ರಂ ಹಿತಾರ್ಥಮೃಷಿಭಿಃ ಕೃತಮ್ ।
ಕನ್ಯಾಯಾಸ್ತು ಪಿತಾ ಭ್ರಾತಾ ಮಾತಾ ಮಾತುಲ ಏವ ಚ ।
ಪಿತುರ್ಭ್ರಾತಾ ಗುರುಶ್ಚಾಪಿ ದಾತುಂ ಪ್ರಭವತಾಂ ಗತಾಃ ॥೨॥

ಕುಂತಿಯ ಮಗನಾದ ಧನಂಜಯನು ವೃಷ್ಣ್ಯಂಧಕ ಪುರದಿಂದ ಹೊರಡುವುದೇ ಕ್ಲಿಷ್ಟಪರಿಸ್ಥಿತಿಯ ಮೋಚನೆ ಎಂದು ತಿಳಿದು ಸುಭದ್ರೆಯನ್ನು ಕುರಿತು ಹೀಗೆ

ಮಾತನಾಡಿದನು. ಸುಭದ್ರೇ, ಋಷಿಗಳು ಶಾಸ್ತ್ರಾನುಸಾರವಾಗಿ ಲೋಕದ ಹಿತಕ್ಕಾಗಿ ಮಾಡಿದ ವ್ಯವಸ್ಥೆಯನ್ನು ಹೇಳುತ್ತೇನೆ ಕೇಳು. ಕನ್ಯಾದಾನವನ್ನು ಮಾಡಲು ತಂದೆಯೂ, ಸೋದರನೂ, ತಾಯಿಯೂ, ಸೋದರಮಾವನೂ, ತಂದೆಯ ಸೋದರನೂ, ಮತ್ತು ಗುರುವೂ ಅರ್ಹರಾಗುತ್ತಾರೆ.

ಮಹೋತ್ಸವಂ ಪಶುಪತೇರ್ದ್ರಷ್ಟುಕಾಮಃ ಪಿತಾ ಗತಃ ।
ಅಂತರ್ದ್ವೀಪಂ ಗತೋ ಭದ್ರೇ ಪುತ್ರೈಃ ಪೌತ್ರೈಃ ಸಬಾಂಧವೈಃ ॥೪॥

ಸುಭದ್ರೇ, ನಿನ್ನ ತಂದೆಯು ರುದ್ರದೇವರ ಮಹೋತ್ಸವವನ್ನು ನೋಡಲು ಮಕ್ಕಳು, ಮೊಮ್ಮಕ್ಕಳು ಮತ್ತು ಬಾಂಧವರೊಡನೆ ಅಂತರ್ದ್ವೀಪಕ್ಕೆ ಹೋಗಿದ್ದಾನೆ.

ಮಮ ಚೈವ ವಿಶಾಲಾಕ್ಷಿ ವಿದೇಶಸ್ಥಾಸ್ತು ಬಾಂಧವಾಃ ।
ತಸ್ಮಾತ್ ಸುಭದ್ರೇ ಗಾಂಧರ್ವೋ ವಿವಾಹಃ ಪಂಚಮೋ ಭವೇತ್ ॥೫॥

ವಿಶಾಲಾಕ್ಷಿಯೇ, ನನ್ನ ಬಂಧುಗಳೆಲ್ಲರೂ ಬೇರೆ ದೇಶದಲ್ಲಿದ್ದಾರೆ. ಆದ್ದರಿಂದ ಸುಭದ್ರೇ, ಐದನೆಯ ವಿವಾಹವಿಧಿಯಾದ ಗಾಂಧರ್ವ ವಿಧಿಯು ಸೂಕ್ತವೆನಿಸುತ್ತದೆ.

ಸಮಾಗಮೇ ತು ಕನ್ಯಾಯಾಃ ಕ್ರಿಯಾಃ ಪ್ರೋಕ್ತಾಶ್ಚತುರ್ವಿಧಾಃ ।
ತಾಸಾಂ ಪ್ರವೃತ್ತಿಂ ಸಾಧೂನಾಂ ಶೃಣು ಮಾಧವಿ ತದ್ಯಥಾ ॥೬॥

ಕನ್ಯೆಯನ್ನು ಸ್ವೀಕರಿಸಲು ನಾಲ್ಕುವಿಧವಾದ ಕ್ರಿಯೆಗಳು ಹೇಳಲ್ಪಟ್ಟಿವೆ. ಮಾಧವೀ, ಆ ಶಾಸ್ತ್ರಸಮ್ಮತವಾದ ನಾಲ್ಕುವಿಧಿಗಳ ವಿವರವನ್ನು ಹೇಳುತ್ತೇನೆ ಕೇಳು.

ವರಮಾಹೂಯ ವಿಧಿನಾ ಪಿತ್ರಾ ದತ್ತಾ ಯಥಾऽರ್ಥಿನೇ ।
ಸಾ ಪತ್ನೀ ತು ಬುಧೈರುಕ್ತಾ ಸಾ ವಶ್ಯಾ ತು ಪತಿವ್ರತಾ ॥೭॥

ಕನ್ಯಾರ್ಥಿಯಾದ ವರನನ್ನು ಕನ್ಯೆಯ ತಂದೆಯಾದವನು ಆಹ್ವಾನಿಸಿ ವಿಧಿ ಪೂರ್ವಕವಾಗಿ ದಾನ ಮಾಡಿದರೆ ಅವಳು ಜ್ಞಾನಿಗಳಿಂದ ಪತ್ನಿಯೆಂದು ಕರೆಯಲ್ಪಡುತ್ತಾಳೆ. ಅವಳು ಪತಿವ್ರತೆಯಾಗಿಯೂ ಪತಿಗೆ ವಶಳಾಗಿಯೂ ಇರುತ್ತಾಳೆ.

ಭೃತ್ಯಾನಾಂ ಭರಣಾರ್ಥಾಯ ಆತ್ಮನಃ ಪೋಷಣಾಯ ಚ ।
ದಾನೇ ಗೃಹೀತಾ ಯಾ ನಾರೀ ಸಾ ಭಾರ್ಯೇತಿ ಬುಧೈರ್ಮತಾ ॥೮॥

ಪರಿಜನರ ಪೋಷಣೆಗೋಸ್ಕರ ಮತ್ತು ತನ್ನ ಪೋಷಣೆಗೋಸ್ಕರ ದಾನವನ್ನು ಸ್ವೀಕರಿಸಿದರೆ ಆ ಸ್ತ್ರೀಯನ್ನು ಭಾರ್ಯೆ ಎಂದು ಜ್ಞಾನಿಗಳು ಕರೆಯುತ್ತಾರೆ.

ಧರ್ಮತೋ ವರಯಿತ್ವಾ ತು ಆನೀಯ ಸ್ವಂ ನಿವೇಶನಮ್ ।
ನ್ಯಾಯೇನ ದತ್ತಾ ತಾರುಣ್ಯೇ ದಾರಾಃ ಪಿತೃಕೃತಾ ಭವೇತ್ ॥೯॥

ಧರ್ಮದಿಂದಲೇ ಕನ್ಯಾವರಣ ಮಾಡಿ ತನ್ನ ಮನೆಗೆ ತಂದು ಅಲ್ಲಿ ದಾನ ಮಾಡಲ್ಪಟ್ಟು ತಾರುಣ್ಯದಲ್ಲೇ ಸ್ವೀಕರಿಸಿದ್ದ ವನಿತೆಯು ದಾರಾ ಎನಿಸುತ್ತಾಳೆ. ಇದು ಅವಳ ತಂದೆಯೇ ಏರ್ಪಡಿಸುವ ವಿವಾಹ.

ಜಾಯತೇ ಯಾऽನು ಭರ್ತಾರಂ ಜಾಯಾ ಇತ್ಯೇವ ನಾಮತಃ ।
ದಾರಾಃ ಪತ್ನೀ ಚ ಭಾರ್ಯಾ ಚ ಜಾಯಾ ಚೇತಿ ಚತುರ್ವಿಧಾಃ ।
ಚತಸ್ರ ಏವಾಗ್ನಿಸಾಕ್ಷ್ಯಃ ಕ್ರಿಯಾಯುಕ್ತಾಸ್ತು ಧರ್ಮತಃ ॥೧೦॥

ಪತಿಯನ್ನು ಅನುಸರಿಸಿ ನನ್ನನ್ನು ಜಾಯೆಯನ್ನಾಗಿ ಮಾಡು ಎಂಬ ಪ್ರಾರ್ಥನೆಯನ್ನು ಮಾಡಿದ ಅವಳಲ್ಲಿ ಪತಿಯೇ ಜನಿಸುವುದರಿಂದ ಅವಳನ್ನು ಜಾಯಾ ಎಂದು ಕರೆಯುತ್ತಾರೆ. ದಾರಾ, ಪತ್ನಿ, ಭಾರ್ಯಾ, ಜಾಯಾ ಈ ನಾಲ್ವರೂ ಸ್ತ್ರೀಯರೂ ಅಗ್ನಿಸಾಕ್ಷಿಯಾಗಿ ವೈದಿಕ ಕ್ರಿಯೆಗಳಿಂದ ಧಾರ್ಮಿಕವಾಗಿ ಸ್ವೀಕರಿಸಲ್ಪಟ್ಟವರು.

ಗಾಂಧರ್ವೇಣ ವಿವಾಹೇನ ರಾಗಾತ್ ಪುತ್ರಾರ್ಥಕಾರಣಾತ್ ।
ಆತ್ಮನಾऽನುಗೃಹೀತಾ ಯಾ ವಶ್ಯಾ ಸಾ ತು ಪ್ರಜಾವತೀ ॥೧೧॥

ರಾಗದಿಂದಲಾಗಲೀ ಅಥವಾ ಮಗನನ್ನು ಪಡೆಯುವ ಕಾರಣದಿಂದಲಾಗಲೀ ಪತಿಯ ಅನುಗ್ರಹವನ್ನು ಸಂಪಾದಿಸಿ ಗಾಂಧರ್ವ ವಿವಾಹದಿಂದ ಅವನನ್ನು ವರಿಸಿ ವಶ್ಯಾ ಎನಿಸಿಕೊಂಡು ಪ್ರಜೆಗಳನ್ನು ಪಡೆಯುತ್ತಾಳೆ.

ಗಾಂಧರ್ವಸ್ತು ಕ್ರಿಯಾಹೀನೋ ರಾಗಾದೇವ ಪ್ರವರ್ತತೇ ।
ಸಕಾಮಾಯಾಃ ಸಕಾಮೇನ ನಿರ್ಮಂತ್ರೋ ರಹಸಾ ಕೃತಃ ॥೧೨॥

ಗಾಂಧರ್ವವಿಧಿಯು ಕ್ರಿಯಾಹೀನವಾದುದು. ಕೇವಲ ರಾಗದಿಂದ
ಜರುಗುತ್ತದೆ. ಕಾಮವುಳ್ಳ ಪುರುಷನಿಗೆ ಕಾಮವುಳ್ಳ ವನಿತೆಯಿಂದ ಮಂತ್ರರಹಿತವಾ
ಏಕಾಂತದಲ್ಲಿ ನಡೆಯುವ ಯೋಗವು ಗಾಂಧರ್ವವಿವಾಹ ಎನಿಸಿಕೊಳ್ಳುತ್ತದೆ.

ಮಯೋಕ್ತಮಕ್ರಿಯಂ ಚಾಪಿ ಕರ್ತವ್ಯಂ ಮಾಧವಿ ತ್ವಯಾ ।
ಅಯನಂ ಚೈವ ಮಾಸಶ್ಚ ಋಕ್ಷಂ ಪಕ್ಷಸ್ತಥಾ ತಿಥಿಃ ॥೧೩

ಕರಣಂ ಚ ಮುಹೂರ್ತಂ ಚ ಲಗ್ನಸಂಪತ್ ತಥಾऽದ್ಯ ವೈ ।
ವಿವಾಹಸ್ಯ ವಿಶಾಲಾಕ್ಷಿ ಪ್ರಶಸ್ತಂ ಚೋತ್ತರಾಯಣಮ್ ॥೧೪॥

ಮಾಧವೀ, ನಾನು ಸೂಚಿಸುವ ಗಾಂಧರ್ವವಿವಾಹವು ಕ್ರಿಯಾಶೂನ್ಯವಾದರು
ನೀನು ಅದರಂತೆ ನಡೆದುಕೊಳ್ಳಬೇಕು. ಅಯನ, ಮಾಸ, ನಕ್ಷತ್ರ, ಪಕ್ಷ, ತಿಥಿ, ಕರಣ
ಮುಹೂರ್ತ, ಲಗ್ನ ಎಲ್ಲವೂ ಈದಿನ ಅನುಕೂಲವಾಗಿವೆ.

ವೈಶಾಖಶ್ಚೈವ ಮಾಸಾನಾಂ ಪಕ್ಷಾಣಾಂ ಶುಭ್ರ ಏವ ಚ ।
ನಕ್ಷತ್ರಾಣಾಂ ತಥಾ ಹಸ್ತಸ್ತೃತೀಯಾ ಚ ತಿಥಿಷ್ವಪಿ ॥೧೫॥

ವಿಶಾಲಾಕ್ಷಿಯೇ, ವಿವಾಹಕ್ಕೆ ಉತ್ತರಾಯಣವು ಪ್ರಶಸ್ತವಾದುದು. ಹಾಗೆಯೇ
ಮಾಸಗಳಲ್ಲಿ ವೈಶಾಖವೂ, ಪಕ್ಷಗಳಲ್ಲಿ ಶುಕ್ಲಪಕ್ಷವೂ , ನಕ್ಷತ್ರಗಳಲ್ಲಿ ಹಸ್ತಾ ನಕ್ಷತ್ರವೂ,
ತಿಥಿಗಳಲ್ಲಿ ತೃತೀಯಾ ತಿಥಿಯೂ ಪ್ರಶಸ್ತವಾದುವು.

ಲಗ್ನೇ ಹಿ ಮಕರಃ ಶ್ರೇಷ್ಠಃ ಕರಣಾನಾಂ ಬವಸ್ತಥಾ ।
ಮೈತ್ರೋ ಮುಹೂರ್ತೋ ವೈವಾಹ್ಯ ಆವಯೋಃ ಶುಭಕರ್ಮಣಿ ॥೧೬॥

ಲಗ್ನಗಳಲ್ಲಿ ಮಕರ ಲಗ್ನವು ಶ್ರೇಷ್ಠ, ಕರಣಗಳಲ್ಲಿ ಬವ ಕರಣವು ಪ್ರಶಸ್ತವಾದುದು.
ನಮ್ಮಿಬ್ಬರ ಶುಭ ವಿವಾಹದ ಸಂದರ್ಭದಲ್ಲಿ ಮೈತ್ರ ಮುಹೂರ್ತವು ಪ್ರಶಸ್ತವಾದುದು.

ಸರ್ವಸಂಪದಿಯಂ ಭದ್ರೇ ಅದ್ಯ ರಾತ್ರೌ ಭವಿಷ್ಯತಿ ।
ಭಗವಾನಸ್ತಮಭ್ಯೇತಿ ಆದಿತ್ಯಸ್ತಪತಾಂ ವರಃ ॥೧೭॥

ಸುಭದ್ರೇ, ಲೋಕವನ್ನು ಬೆಳಗುವ ಪೂಜ್ಯನಾದ ಸೂರ್ಯನು ಅಸ್ತವನ್ನು ಹೊಂದಿದ
ಮೇಲೆ ಈ ಎಲ್ಲಾ ಗ್ರಹನಕ್ಷತ್ರಾದಿ ಸಂಪತ್ತು ಈದಿನ ರಾತ್ರಿ ಉಂಟಾಗುವುದು.

ನಾರಾಯಣೋऽಪಿ ಧರ್ಮಜ್ಞೋ ನಾವಬುಧ್ಯೇತ ವಿಶ್ವಕೃತ್ ।
ಧರ್ಮಸಂಕಟಮಾಪನ್ನೇ ಕಿಂ ನು ಕೃತ್ವಾ ಶುಭಂ ಭವೇತ್ ॥೧೮॥

ಧರ್ಮಸಂಕಟ ಒದಗಿದಾಗ ವಿಶ್ವಕರ್ತನಾದ, ಧರ್ಮಜ್ಞನಾದ ನಾರಾಯಣನಿಗೂ ಏನು ಮಾಡಿದರೆ ಶುಭವುಂಟಾಗುವುದೆಂದು ತಿಳಿಯುವುದಿಲ್ಲ.

ಮನೋಭವೇನ ಕಾಮೇನ ಮೋಹಿತಂ ಮಾಂ ಪ್ರಲಾಪಿನಮ್ ।
ಪ್ರತಿವಾಕ್ಯಂ ಚ ಮೇ ದೇವಿ ಕಿಂ ನ ವಕ್ಷ್ಯಸಿ ಮಾಧವಿ ॥೧೯॥

ದೇವೀ, ಮನೋಭವವಾದ ಕಾಮಕ್ಕೆ ವಶನಾಗಿ ಬಾಯಿಗೆ ಬಂದಂತೆ ಮಾತನಾಡುತ್ತಿರುವ ನನಗೆ ಪ್ರತ್ಯುತ್ತರವನ್ನು ಕೊಡು. ಮಾಧವಿ, ನೀನು ಏಕೆ ಮಾತನಾಡುತ್ತಿಲ್ಲ?

ವೈಶಂಪಾಯನಃ

ಅರ್ಜುನಸ್ಯ ವಚಃ ಶ್ರುತ್ವಾ ಚಿಂತಯಂತೀ ಜನಾರ್ದನಮ್ ।
ನೋವಾಚ ಕಿಂಚಿದ್ ವಚನಂ ಬಾಷ್ಪದೂಷಿತಲೋಚನಾ ॥೨೦॥

ಅರ್ಜುನನ ಮಾತುಗಳನ್ನು ಕೇಳಿ ಸುಭದ್ರೆಯು ಕೃಷ್ಣನನ್ನು ಚಿಂತಿಸುತ್ತಾ ಕಣ್ಣೀರಿನಿಂದ ತುಂಬಿದ ನೇತ್ರವುಳ್ಳವಳಾಗಿ ಎನನ್ನೂ ಮಾತನಾಡಲಿಲ್ಲ.

ರಾಗೋನ್ಮಾದಪ್ರಲಾಪೀ ಸನ್ನರ್ಜುನೋ ಜಯತಾಂ ವರಃ ।
ಚಿಂತಯಾಮಾಸ ಪಿತರಂ ಪ್ರವಿಶ್ಯ ಚ ಲತಾಗೃಹಮ್ ॥೨೧॥

ಜಯಶೀಲರಲ್ಲಿ ಶ್ರೇಷ್ಠನಾದ ಅರ್ಜುನನು ಸುಭದ್ರೆಯ ಮೇಲಿನ ರಾಗದಿಂದಲೂ ಕಾಮದಿಂದ ಉಂಟಾದ ಉನ್ಮಾದದಿಂದಲೂ ಮನಸ್ಸಿಗೆ ಬಂದಂತೆ ಮಾತನಾಡುತ್ತಾ ಲತಾಗೃಹವನ್ನು ಪ್ರವೇಶಿಸಿ ತನ್ನ ತಂದೆಯಾದ ಇಂದ್ರನನ್ನು ಸ್ಮರಿಸಿದನು.

ಚಿಂತಯಾನಂ ತು ಕೌಂತೇಯಂ ಜ್ಞಾತ್ವಾ ಶಚ್ಯಾ ಶಚೀಪತಿಃ ।
ಸಹಿತೋ ನಾರದಾದ್ಯೈಸ್ತು ಮುನಿಸಿದ್ಧಾಪ್ಸರೋಗಣೈಃ ।
ಅರುಂಧತ್ಯಾ ವಸಿಷ್ಠೇನ ಆಜಗಾಮ ಕುಶಸ್ಥಲೀಮ್ ॥೨೨॥

ಕುಂತಿಯ ಮಗನಾದ ಅರ್ಜುನನು ತನ್ನನ್ನೇ ಸ್ಮರಿಸುತ್ತಿರುವುದನ್ನು ತಿಳಿದ ಇಂದ್ರನು ಶಚಿ, ನಾರದಾದಿ ಮುನಿಗಳು, ಸಿದ್ಧರು, ಅಪ್ಸರೆಯರ ಸಮೂಹ, ಅರುಂಧತಿ ಮತ್ತು ವಸಿಷ್ಠರು ಇವರುಗಳ ಜೊತೆಯಲ್ಲಿ ದ್ವಾರಕಾ ಪಟ್ಟಣಕ್ಕೆ ಬಂದನು.

ಚಿಂತಿತಂ ಚ ಸುಭದ್ರಾಯಾಃ ಚಿಂತಯಿತ್ವಾ ಜನಾರ್ದನಃ ।
ನಿದ್ರಯಾऽಪಹೃತಜ್ಞಾನಂ ರೌಹಿಣೇಯಂ ವಿನಾ ತದಾ ।
ಸಹಾಕ್ರೂರೇಣ ಶಿನಿನಾ ಸತ್ಯಕೇನ ಗದೇನ ಚ ॥೨೪॥

ವಸುದೇವೇನ ದೇವಕ್ಯಾ ಆಹುಕೇನ ಚ ಧೀಮತಾ ।
ಆಜಗಾಮ ಪುರೀಂ ರಾತ್ರೌ ದ್ವಾರಕಾಂ ಸ್ವಜನೈರ್ವೃತಃ ॥೨೫॥

ಸುಭದ್ರೆಯು ತನ್ನನ್ನು ಸ್ಮರಿಸುತ್ತಿರುವುದನ್ನು ತಿಳಿದ ಕೃಷ್ಣನು ನಿದ್ದೆ ಮಾಡುತ್ತಿದ್ದ ಬಲರಾಮನನ್ನು ಬಿಟ್ಟು ಅಕ್ರೂರ, ಶಿನಿ, ಸತ್ಯಕ, ಗದ, ವಸುದೇವ, ದೇವಕಿ, ಮೇಧಾವಿಯಾದ ಆಹುಕ ಮತ್ತು ಸ್ವಜನರಿಂದ ಸಹಿತನಾಗಿ ರಾತ್ರಿಯ ವೇಳೆಯಲ್ಲಿ ದ್ವಾರಕಾ ಪಟ್ಟಣಕ್ಕೆ ಬಂದನು.

ಪೂಜಯಿತ್ವಾ ತು ದೇವೇಶಂ ನಾರದಾದ್ಯೈರ್ಮಹರ್ಷಿಭಿಃ ।
ಕುಶಲಪ್ರಶ್ನಮುಕ್ತ್ವಾ ತು ದೇವೇಂದ್ರೇಣಾಭಿಯಾಚಿತಃ ।
ವೈವಾಹಿಕೀಂ ಕ್ರಿಯಾಂ ಕೃಷ್ಣಸ್ತಥೇತ್ಯೇವಮುವಾಚ ಹ ॥೨೬॥

ನಾರದಾದಿ ಮಹರ್ಷಿಗಳಿಂದ ದೇವೇಶನಾದ ಇಂದ್ರನನ್ನು ಪೂಜಿಸಿ ಕುಶಲ ಪ್ರಶ್ನೆಯನ್ನು ಮಾಡಿ ಕೃಷ್ಣನು ವಿವಾಹದ ವಿಧಿಯ ಬಗ್ಗೆ ದೇವೇಂದ್ರನಿಂದ ಪ್ರಾರ್ಥಿಸಲ್ಪಟ್ಟು ಹಾಗೆಯೇ ಆಗಲಿ ಎಂದು ಹೇಳಿ ಅನುಮತಿಯನ್ನು ಕೊಟ್ಟನು.

ಆಹುಕೋ ವಸುದೇವಶ್ಚ ಸಹಾಕ್ರೂರಃ ಸಸಾತ್ಯಕಿಃ ।
ಅಭಿಪ್ರಣಮ್ಯ ಶಿರಸಾ ಪಾಕಶಾಸನಮಬ್ರುವನ್ ॥೨೭॥

ಆಹುಕ, ವಸುದೇವ, ಅಕ್ರೂರ ಮತ್ತು ಸಾತ್ಯಕಿ ಇವರು ಇಂದ್ರನಿಗೆ ಶಿರಸಾ ಪ್ರಣಾಮವನ್ನು ಮಾಡಿ ಹೀಗೆ ಹೇಳಿದರು.

ದೇವದೇವ ನಮಸ್ತೇಽಸ್ತು ಲೋಕನಾಥ ಜಗತ್ಪತೇ ।
ವಯಂ ಧನ್ಯಾಃ ಸ್ಮ ಲೋಕೇಷು ಬಾಂಧವೈಃ ಸಹಿತಾಃ ಪ್ರಭೋ ।
ಕೃತಪ್ರಸಾದಾಸ್ತು ವಯಂ ತವ ವಾಕ್ಯೇನ ವಿಶ್ವಜಿತ್ ॥೨೮॥

ದೇವದೇವನೇ, ಲೋಕನಾಥನೇ, ಜಗತ್ಪತಿಯೇ, ಪ್ರಭುವೇ, ನಿನ್ನ ವಿವಾಹವನ್ನು ಅನುಮೋದಿಸುವ ಮಾತುಗಳಿಂದ, ಬಾಂಧವರಿಂದ ಸಹಿತರಾದ ನಾವು ಧನ್ಯರಾಗಿದ್ದೇವೆ. ವಿಶ್ವಜಯಶಾಲಿಯೇ, ನಿನ್ನ ಮಾತು ನಮಗೆ ಅನುಗ್ರಹರೂಪವಾಗಿದೆ.

ಏವಮುಕ್ತ್ವಾ ಪ್ರಸಾದ್ಯೈನಂ ಪೂಜಯಿತ್ವಾ ಪ್ರಯತ್ನತಃ ।
ಮಹೇಂದ್ರಶಾಸನಾತ್ ಸರ್ವೇ ಸಹಿತಾಶ್ಚ ಮಹರ್ಷಿಭಿಃ ॥೨೯॥

ವಿವಾಹಂ ಕಾರಯಾಮಾಸುಃ ಶಕ್ರಪುತ್ರಸ್ಯ ಶಾಸ್ತ್ರತಃ ।
ಅರುಂಧತೀ ಶಚೀ ದೇವೀ ರುಗ್ಮಿಣೀ ದೇವಕೀ ತಥಾ ॥೩೦॥

ಹೀಗೆ ಹೇಳಿ ಅವನನ್ನು ಸಂತೋಷಪಡಿಸಿ ಪ್ರಯತ್ನಪೂರ್ವಕವಾಗಿ ಪೂಜಿಸಿ ಮಹೇಂದ್ರನ ಶಾಸನದಂತೆ ಮಹರ್ಷಿಗಳಿಂದ ಸಹಿತರಾಗಿ ಎಲ್ಲ ಬಂಧುಗಳೂ ಇಂದ್ರಪುತ್ರನಾದ ಅರ್ಜುನನ ವಿವಾಹವನ್ನು ಶಾಸ್ತ್ರೋಕ್ತರೀತಿಯಿಂದ ನೆರವೇರಿಸಿದರು.

ದಿವ್ಯಸ್ತ್ರೀಭಿಶ್ಚ ಸಹಿತಾಃ ಕ್ರಿಯಾಂ ಭದ್ರೇ ಪ್ರಯೋಜಯನ್ ॥೩೧॥

ಒಂದು ಮಂಗಳಮಹೂರ್ತದಲ್ಲಿ ಅರುಂಧತಿ, ಶಚಿ, ರುಕ್ಮಿಣಿ, ದೇವಕಿ ಮತ್ತು ಉಳಿದ ದಿವ್ಯಸ್ತ್ರೀಯರು ಎಲ್ಲರೂ ಸೇರಿ ವಿವಾಹ ವಿಧಿಯನ್ನು ನೆರವೇರಿಸಿದರು.

ಮಹರ್ಷಿಃ ಕಾಶ್ಯಪೋ ಹೋತಾ ಸದಸ್ಯಾ ನಾರದಾದಯಃ ।
ಪುಣ್ಯಾಶಿಷಃ ಪ್ರಯೋಕ್ತಾರಃ ಸರ್ವೇ ಹ್ಯಾಸಂಸ್ತದಾಽರ್ಜುನೇ ॥೩೨॥

ಆಗ ಮಹರ್ಷಿಗಳಾದ ಕಾಶ್ಯಪರು ಹೋತ್ರುಗಳಾಗಿದ್ದರು, ನಾರದಾದಿಗಳು ಸದಸ್ಯರಾಗಿದ್ದರು. ಉಳಿದವರೆಲ್ಲರೂ ಅರ್ಜುನನಿಗೆ ಮಂಗಳ ಆಶೀರ್ವಾದಗಳನ್ನು ನುಡಿದರು.

ಅಭಿಷೇಕಂ ತತಃ ಕೃತ್ವಾ ಮಹೇಂದ್ರಃ ಪಾಕಶಾಸನಿಮ್ ।
ಲೋಕಪಾಲೈಸ್ತು ಸಹಿತಃ ಸರ್ವದೇವೈರಭಿಷ್ಟುತಃ ।
ಕಿರೀಟಾಂಗದಹಾರಾದ್ಯೈರ್ಹಸ್ತಾಭರಣಕುಂಡಲೈಃ ॥೩೩॥

ಭೂಷಯಿತ್ವಾ ತದಾ ಪಾರ್ಥಂ ದ್ವಿತೀಯಮಿವ ವಾಸವಮ್ ।
ಪಾರ್ಥಂ ಪರಿಷ್ವಜ್ಯ ತದಾ ಪ್ರೀತಿಮಾಪ ಪುರಂದರಃ ॥೩೪॥

ಅನಂತರ, ಮಹೇಂದ್ರನು ಲೋಕಪಾಲಕರ ಜೊತೆಯಲ್ಲಿ ಅರ್ಜುನನಿಗೆ ಅಭಿಷೇಕವನ್ನು ಮಾಡಿ ಎಲ್ಲ ದೇವತೆಗಳಿಂದಲೂ ಸ್ತೋತ್ರ ಮಾಡಲ್ಪಟ್ಟು ಅರ್ಜುನನಿಗೆ ಕಿರೀಟ, ಹಾರ, ಅಂಗದಗಳಿಂದಲೂ, ಹಸ್ತಾಭರಣ- ಕುಂಡಲಗಳಿಂದಲೂ ಅಲಂಕಾರವನ್ನು ಮಾಡಿ ಎರಡನೆಯ ಇಂದ್ರನಂತಿದ್ದ ಅವನನ್ನು ಆಲಿಂಗಿಸಿ ಬಹಳ ಸಂತೋಷವನ್ನು ಹೊಂದಿದನು.

ಶಚೀ ದೇವೀ ತದಾ ಭದ್ರಾಮರುಂಧತ್ಯಾದಿಬಿಸ್ತಥಾ ।
ಕಾರಯಾಮಾಸ ವೈವಾಹ್ಯಾನ್ ಮಾಂಗಲ್ಯಾನ್ ಯಾದವಸ್ತ್ರಿಯಃ ॥೩೫॥

ಆಗ ಶಚೀದೇವಿಯು ಅರುಂಧತಿ ಮೊದಲಾದವರಿಂದಲೂ ಮತ್ತು ಯಾದವಸ್ತ್ರೀಯರಿಂದಲೂ ಸುಭದ್ರೆಗೆ ವಿವಾಹ ಸಂಬಂಧಿಯಾದ ಮಂಗಳ ಕ್ರಿಯೆಗಳನ್ನು ಮಾಡಿಸಿದಳು.

ಸಹಾಪ್ಸರೋಭಿರ್ಮುದಿತಾ ಭೂಷಣೈಶ್ಚಾಭ್ಯಭೂಷಯನ್ ।
ಪೌಲೋಮೀಮಿವ ಮನ್ಯಂತೇ ಸುಭದ್ರಾಂ ಭದ್ರಭಾಷಿಣೀಮ್ ॥೩೬॥

ಸಂತೋಷದಿಂದ ಕೂಡಿದವಳಾಗಿ ಅಪ್ಸರೆಯರ ಜೊತೆಯಲ್ಲಿ ಸೇರಿ ಸುಭದ್ರೆಗೆ ಆಭರಣಗಳಿಂದ ಅಲಂಕಾರವನ್ನು ಮಾಡಿದಳು. ಮಂಜುಳಭಾಷಿಣಿಯಾದ ಸುಭದ್ರೆಯನ್ನು ಎಲ್ಲ ಜನರೂ ಶಚಿಯಂತಿದ್ದಾಳೆ ಎಂದು ತಿಳಿದರು.

ತತೋ ವಿವಾಹೋ ವವೃತೇ ಸ್ಫೀತಃ ಸರ್ವಗುಣಾನ್ವಿತಃ ।
ತಸ್ಯಾಃ ಪಾಣಿಂ ಗೃಹೀತ್ವಾಽಸೌ ಮಂತ್ರಹೋಮಪುರಸ್ಕೃತಃ ॥೩೭॥

ಅನಂತರ, ಪರಿಶುದ್ಧವಾದ ಮತ್ತು ಸರ್ವಗುಣಾನ್ವಿತವಾದ ವಿವಾಹವು ಜರುಗಿತು. ಅರ್ಜುನನು ಮಂತ್ರಹೋಮಪುರಸ್ಕರವಾಗಿ ಸುಭದ್ರೆಯ ಪಾಣಿಯನ್ನು ಗ್ರಹಣ ಮಾಡಿದನು.

ಯಥಾ ತಸ್ಯೈವ ಹಿ ಪಿತಾ ಶಚ್ಯಾ ಇವ ಶತಕ್ರತುಃ ।
ಸಾ ಜಿಷ್ಣುಮಧಿಕಂ ಭೇಜೇ ಸುಭದ್ರಾ ಚಾರುದರ್ಶನಾ ॥೩೮॥

ಪಾರ್ಥಸ್ಯ ಸದೃಶೀ ಭದ್ರಾ ರೂಪೇಣ ವಯಸಾ ತಥಾ ।
ಸುಭದ್ರಾಯಾಶ್ಚ ಪಾರ್ಥೋಽಪಿ ಸದೃಶೋ ರೂಪಲಕ್ಷಣೈಃ ।
ಇತ್ಯೂಚುಃ ಸ್ಮ ತದಾ ದೇವಾಃ ಪ್ರೀತಾಃ ಸೇಂದ್ರಪುರೋಗಮಾಃ ॥೩೯॥

ಅವನ ತಂದೆಯೇ ಆದ ಇಂದ್ರನು ಶಚಿಯ ಜೊತೆಯಲ್ಲಿ ಶೋಭಿಸಿದಂತೆ ಸುಂದರಿಯಾದ ಸುಭದ್ರೆಯ ಜೊತೆಯಲ್ಲಿ ಅರ್ಜುನನು ಇನ್ನೂ ಅಧಿಕವಾಗಿ ಶೋಭಿಸಿದನು. ಸುಭದ್ರೆಯೂ ರೂಪದಿಂದಲೂ ಮತ್ತು ವಯಸ್ಸಿನಿಂದಲೂ ಅರ್ಜುನನಿಗೆ ಸದೃಶಳಾದವಳು. ಅರ್ಜುನನೂ ಸಹ ರೂಪಲಕ್ಷಣಗಳಿಂದ ಸುಭದ್ರೆಗೆ ಅನುರೂಪನಾದವನು ಎಂದು ಇಂದ್ರನೇ ಮೊದಲಾದ ದೇವತೆಗಳು ಮಾತನಾಡಿಕೊಂಡರು.

ಏವಂ ನಿವೇಶ್ಯ ದೇವಾಸ್ತು ಗಂಧರ್ವೈಶ್ಚಾಪ್ಸರೋಗಣೈಃ ।
ಆಮಂತ್ರ್ಯ ಯಾದವಾಂಸ್ತರ್ವೇ ವಿಪ್ರಜಗ್ಮುರ್ಯಥಾಗತಮ್ ।
ಯಾದವಾಃ ಪಾರ್ಥಮಾಮಂತ್ರ್ಯ ಅಂತರ್ದ್ವೀಪಂ ಗತಾಸ್ತದಾ ॥೪೦॥

ಹೀಗೆ ದೇವತೆಗಳು ಗಂಧರ್ವರ ಮತ್ತು ಅಪ್ಸರೆಯರ ಜೊತೆಯಲ್ಲಿ ವಿವಾಹವನ್ನು ನೆರವೇರಿಸಿ ಎಲ್ಲ ಯಾದವರ ಅನುಮತಿಯನ್ನು ಪಡೆದು ಎಲ್ಲರೂ ಬಂದಂತೆಯೇ ಹೊರಟುಹೋದರು. ಯಾದವರೂ ಸಹ ಅರ್ಜುನನ ಅನುಮತಿಯನ್ನು ಪಡೆದು ಅಂತರ್ದ್ವೀಪಕ್ಕೆ ಹೊರಟುಹೋದರು.

ವಾಸುದೇವಸ್ತದಾ ಪಾರ್ಥಮುವಾಚ ಯದುನಂದನಃ ।
ದ್ವಾವಿಂಶದ್ದಿವಸಾನ್ ಪಾರ್ಥ ಇಹೋಷ್ಯ ಭರತರ್ಷಭ ॥೪೧॥

ಮಾಮಕಂ ರಥಮಾರೂಹ್ಯ ಸೈನ್ಯಸುಗ್ರೀವಯೋಜಿತಮ್ ।
ಸುಭದ್ರಯಾ ಸುಖಂ ಪಾರ್ಥ ಖಾಂಡವಪ್ರಸ್ಥಮಾವಿಶ ॥೪೨॥

ಆಗ ಯದುನಂದನನಾದ ವಾಸುದೇವನು ಅರ್ಜುನನನ್ನು ಕುರಿತು ಹೇಳಿದನು. ಭರತಶ್ರೇಷ್ಠನಾದ ಅರ್ಜುನನೇ, ನೀನು ಇಲ್ಲಿ ಇಪ್ಪತ್ತೆರಡು ದಿವಸಗಳ ಕಾಲ ಸುಭದ್ರೆಯ ಜೊತೆಯಲ್ಲಿ ವಾಸಮಾಡಿ ಅನಂತರ ಸೈನ್ಯಸುಗ್ರೀವಾದಿ ಅಶ್ವಗಳನ್ನು ಹೂಡಿದ ನನ್ನ ರಥವನ್ನು ಏರಿ ಸುಭದ್ರೆಯ ಜೊತೆಯಲ್ಲಿ ಸುಖವಾಗಿ ಖಾಂಡವಪ್ರಸ್ಥಕ್ಕೆ ಹೋಗು.

ಯಾದವೈಃ ಸಹಿತಃ ಪಶ್ಚಾದಾಗಮಿಷ್ಯಾಮಿ ಭಾರತ ।
ಯತಿವೇಷೇಣ ನಿರತೋ ವಸೇಸ್ತ್ವಂ ರುಗ್ಮಿಣೀಗೃಹೇ: ॥೪೩॥

ಭಾರತನೇ, ಅನಂತರ ನಾನು ಯಾದವರ ಜೊತೆಯಲ್ಲಿ ಅಲ್ಲಿಗೆ ಬರುವೆನು. ನೀನು ಯತಿವೇಷವನ್ನು ಧರಿಸಿಯೇ ಸುವರ್ಣಾಭರಣಗಳಿಂದ ಭೂಷಿತಳಾದ ಸುಭದ್ರೆಯ ಜೊತೆಯಲ್ಲಿ ರುಗ್ಮಿಣಿಯ ಮನೆಯಲ್ಲಿ ವಾಸಮಾಡು.

ವೈಶಂಪಾಯನಃ

ಏವಮುಕ್ತ್ವಾ ಪ್ರಚಕ್ರಾಮ ಅಂತರ್ದ್ವೀಪಂ ಜನಾರ್ದನಃ ।
ಕೃತೋದ್ವಾಹಸ್ತದಾ ಪಾರ್ಥಃ ಕೃತಕಾರ್ಯೋಽಭವತ್ ತದಾ ।
ತಸ್ಯಾಂ ಚೋತ್ಪತಿತೋ ಭಾವಃ ಪಾರ್ಥಸ್ಯ ಸಹಸಾಽಽಗತಃ ॥೪೪॥

ಕೃಷ್ಣನು ಹೀಗೆ ಹೇಳಿ ಅಂತರ್ದ್ವೀಪಕ್ಕೆ ಹೋದನು. ವಿವಾಹವನ್ನು ಮಾಡಿಕೊಂಡ ಅರ್ಜುನನು ಆಗ ಕೃತಕೃತ್ಯನಾದನು. ಅವನಿಗೆ ಇದ್ದಂತೆಯೇ ಅವಳಲ್ಲಿ ಕಾಮವು ಅಧಿಕವಾಯಿತು.

ಸ ತಯಾ ಯುಯುಜೇ ವೀರೋ ಭದ್ರಯಾ ಭರತರ್ಷಭಃ ।
ಅಭಿನಿಷ್ಪನ್ನಯಾ ರಾಮಃ ಸೀತಯೇವ ಸಮನ್ವಿತಃ ।
ಸ ಹಿ ಜಿಷ್ಣುರ್ವಿಜಜ್ಞೇ ತಾಂ ಹ್ರೀಂ ಶ್ರಿಯಂ ಸನ್ನತಿಂ ಕ್ರಿಯಾಮ್॥೪೫॥

ಭರತರ್ಷಭನಾದ ಅರ್ಜುನನು ಸೀತೆಯ ಜೊತೆಯಲ್ಲಿ ರಾಮನು ಸಂಯೋಗವನ್ನು ಹೊಂದಿದಂತೆ ಹೊಸದಾಗಿ ದೊರೆತ ಅವಳ ಜೊತೆಯಲ್ಲಿ ಸಂಯೋಗವನ್ನು ಹೊಂದಿದನು. ಅರ್ಜುನನು ಅವಳನ್ನು ಹ್ರೀ ಎಂದೂ, ಶ್ರೀ ಎಂದೂ, ಸನ್ನತಿ ಎಂದೂ, ಕ್ರಿಯಾ ಎಂದೂ ತಿಳಿದನು.

ದ್ವಾದಶಾನಾಂ ವರಸ್ತ್ರೀಣಾಂ ರೂಪೇಣಾಸದೃಶೀಂ ಸತೀಮ್ ॥೪೬॥

ಅರ್ಜುನನು ಅಸದೃಶವಾದ ರೂಪವುಳ್ಳ ಅವಳನ್ನು ವಾಗೀಶ್ವರೀ, ಕ್ರಿಯಾ, ಕೀರ್ತಿ, ಲಕ್ಷ್ಮಿ, ಪುಷ್ಟಿ, ಸನ್ನತಿ, ಕಾಂತಿ, ಹ್ರೀ, ಶ್ರೀ, ಶುಚಿ, ಜ್ಯೇಷ್ಠಾ ಪ್ರತಿ ಈ ದ್ವಾದಶಸ್ತ್ರೀಯರಲ್ಲಿ ಸುಭದ್ರೆಯನ್ನು ಶ್ರೀದೇವಿಯೆಂದೂ, ಸನ್ನತಿಯೆಂದೂ, ಕ್ರಿಯೆಯೆಂದೂ ತಿಳಿದನು. ಅಸಾಧಾರಣ ರೂಪವನ್ನು ಹೊಂದಿದವಳು ಎಂದೂ ತಿಳಿದನು.

ಸ ಪ್ರಕೃತ್ಯಾ ಶ್ರಿಯಾ ದೀಪ್ತಃ ಸಂದಿದೀಪೇ ತಯಾऽಧಿಕಮ್ ।
ಉದ್ಯತ್ಸಹಸ್ರದೀಪ್ತಾಂಶುಃ ಶರದೀವ ದಿವಾಕರಃ ।
ಸಾ ತು ತಂ ಮನುಜವ್ಯಾಘ್ರಮನುರಕ್ತಾ ಮನಸ್ವಿನೀ ।
ಕನ್ಯಾ ಪುರಗತಾ ಭೂತ್ವಾ ತತ್ಪ್ರಸಾದಮಪದ್ಯತ ॥೪೭॥

ಸಹಜವಾಗಿ ಬೆಳಗುತ್ತಿದ್ದ ಅವನು ಅವಳ ಜೊತೆಯಲ್ಲಿ ಸೇರಿ ಶರತ್ಕಾಲದಲ್ಲಿ ಸೂರ್ಯನು ಸಹಸ್ರಕಿರಣಗಳಿಂದ ಬೆಳಗುವಂತೆ ಬೆಳಗಿದನು. ಮನಸ್ವಿನಿಯಾದ ಸುಭದ್ರೆಯು ಮನುಜವ್ಯಾಘ್ರನಾದ ಅವನಲ್ಲಿ ಅನುರಾಗವನ್ನು ಹೊಂದಿ ದ್ವಾರಕಾಪಟ್ಟಣದಲ್ಲಿ ಇದ್ದು ಅವನ ಅನುಗ್ರಹವನ್ನು ಪಡೆದಳು.

ವೈಶಂಪಾಯನಃ

ವೃಷ್ಣ್ಯಂಧಕಪುರಾತ್ ತತ್ರ ಅಪಯಾಂತು ಧನಂಜಯಃ ।
ವಿನಿಶ್ಚಿತ್ಯ ತದಾ ಪಾರ್ಥಃ ಸುಭದ್ರಾಮಿದಮಬ್ರವೀತ್ ।
ದ್ವಿಜಾನಾಂ ಗಣಮುಖ್ಯಾನಾಂ ಯಥಾರ್ಹಂ ಪ್ರತಿಪಾದಯ ॥೪೮॥

ಅರ್ಜುನನು ವೃಷ್ಣ್ಯಂಧಕ ಪುರವಾದ ದ್ವಾರಕೆಯಿಂದ ಹೊರಡಲು ನಿಶ್ಚಯಿಸಿ ಸುಭದ್ರೆಯನ್ನು ಕುರಿತು ಹೀಗೆ ಹೇಳಿದನು. ಬ್ರಾಹ್ಮಣರಿಗೆ ಮತ್ತು ನಿನ್ನ ಅನುಚರ ಸಮೂಹಕ್ಕೂ ಯೋಗ್ಯವಾದ ದಕ್ಷಿಣೆಯನ್ನು ಕೊಡು.

ಭೋಜ್ಯೈರ್ಭಕ್ಷ್ಯೈಶ್ಚ ಪೇಯೈಶ್ಚ ಪ್ರಯಚ್ಛ ಪ್ರತಿಯಾಸ್ಯತಾಮ್ ।
ಆತ್ಮನಶ್ಚ ಸಮುದ್ದಿಶ್ಯ ಮಹಾವ್ರತಸಮಾಪನಮ್ ॥೪೯॥

ನಿನ್ನನ್ನು ಬಿಟ್ಟು ಹೋಗುವವರಿಗೆ ನಿನ್ನ ಮಹಾವ್ರತದ ಸಮಾಪ್ತಿ ಎಂದು ಹೇಳಿ ಇಷ್ಟವಾದ ಭಕ್ಷ್ಯಭೋಜ್ಯಗಳನ್ನೂ, ಪೇಯಗಳನ್ನೂ ಕೊಡು.

ಗಚ್ಛ ಭದ್ರೇ ಸ್ವಯಂ ತೂರ್ಣಂ ಮಹಾರಾಜನಿವೇಶನಮ್ ॥೫೦॥

ತೇಜೋಬಲಜವೋಪೇತೈಃ ಶಕ್ಲ್ಯರ್ಹಯವರೋತ್ತಮೈಃ ।
ಶೈಬ್ಯಸುಗ್ರೀವಸಂಯುಕ್ತಂ ರಥಂ ತೂರ್ಣಮಿಹಾನಯ ॥೫೧॥

ಯಾದವೈಃ ಸಹಿತಃ ಪಶ್ಚಾದಾಗಮಿಷ್ಯಾಮಿ ಭಾರತ ।
ಯತಿವೇಷೇಣ ನಿರತೋ ವಸೇಸ್ತ್ವಂ ರುಗ್ಮಿಣೀಗೃಹೇ: ॥೪೩॥

ಭಾರತನೇ, ಅನಂತರ ನಾನು ಯಾದವರ ಜೊತೆಯಲ್ಲಿ ಅಲ್ಲಿಗೆ ಬರುವೆನು. ನೀನು ಯತಿವೇಷವನ್ನು ಧರಿಸಿಯೇ ಸುವರ್ಣಾಭರಣಗಳಿಂದ ಭೂಷಿತಳಾದ ಸುಭದ್ರೆಯ ಜೊತೆಯಲ್ಲಿ ರುಗ್ಮಿಣಿಯ ಮನೆಯಲ್ಲಿ ವಾಸಮಾಡು.

ವೈಶಂಪಾಯನಃ

ಏವಮುಕ್ತ್ವಾ ಪ್ರಚಕ್ರಾಮ ಅಂತರ್ದ್ವೀಪಂ ಜನಾರ್ದನಃ ।
ಕೃತೋದ್ವಾಹಸ್ತದಾ ಪಾರ್ಥಃ ಕೃತಕಾರ್ಯೋಽಭವತ್ ತದಾ ।
ತಸ್ಯಾಂ ಚೋತ್ಪತಿತೋ ಭಾವಃ ಪಾರ್ಥಸ್ಯ ಸಹಸಾಽಽಗತಃ ॥೪೪॥

ಕೃಷ್ಣನು ಹೀಗೆ ಹೇಳಿ ಅಂತರ್ದ್ವೀಪಕ್ಕೆ ಹೋದನು. ವಿವಾಹವನ್ನು ಮಾಡಿಕೊಂಡ ಅರ್ಜುನನು ಆಗ ಕೃತಕೃತ್ಯನಾದನು. ಅವನಿಗೆ ಇದ್ದಂತೆಯೇ ಅವಳಲ್ಲಿ ಕಾಮವು ಅಧಿಕವಾಯಿತು.

ಸ ತಯಾ ಯುಯುಜೇ ವೀರೋ ಭದ್ರಯಾ ಭರತರ್ಷಭಃ ।
ಅಭಿನಿಷ್ಪನ್ನಯಾ ರಾಮಃ ಸೀತಯೇವ ಸಮನ್ವಿತಃ ।
ಸ ಹಿ ಜಿಷ್ಣುರ್ವಿಜಜ್ಞೇ ತಾಂ ಹ್ರೀಂ ಶ್ರಿಯಂ ಸನ್ನತಿಂ ಕ್ರಿಯಾಮ್॥೪೫॥

ಭರತರ್ಷಭನಾದ ಅರ್ಜುನನು ಸೀತೆಯ ಜೊತೆಯಲ್ಲಿ ರಾಮನು ಸಂಯೋಗವನ್ನು ಹೊಂದಿದಂತೆ ಹೊಸದಾಗಿ ದೊರೆತ ಅವಳ ಜೊತೆಯಲ್ಲಿ ಸಂಯೋಗವನ್ನು ಹೊಂದಿದನು. ಅರ್ಜುನನು ಅವಳನ್ನು ಹ್ರೀ ಎಂದೂ, ಶ್ರೀ ಎಂದೂ, ಸನ್ನತಿ ಎಂದೂ, ಕ್ರಿಯಾ ಎಂದೂ ತಿಳಿದನು.

ದ್ವಾದಶಾನಾಂ ವರಸ್ತ್ರೀಣಾಂ ರೂಪೇಣಾಸದೃಶೀಂ ಸತೀಮ್ ॥೪೬॥

ಅರ್ಜುನನು ಅಸದೃಶವಾದ ರೂಪವುಳ್ಳ ಅವಳನ್ನು ವಾಗೀಶ್ವರೀ, ಕ್ರಿಯಾ, ಕೀರ್ತಿ, ಲಕ್ಷ್ಮಿ, ಪುಷ್ಟಿ, ಸನ್ನತಿ, ಕಾಂತಿ, ಹ್ರೀ, ಶ್ರೀ, ಶುಚಿ, ಜ್ಯೇಷ್ಠಾ, ಪ್ರತಿ ಈ ದ್ವಾದಶಸ್ತ್ರೀಯರಲ್ಲಿ ಸುಭದ್ರೆಯನ್ನು ಶ್ರೀದೇವಿಯೆಂದೂ, ಸನ್ನತಿಯೆಂದೂ, ಕ್ರಿಯೆಯೆಂದೂ ತಿಳಿದನು. ಅಸಾಧಾರಣ ರೂಪವನ್ನು ಹೊಂದಿದವಳು ಎಂದೂ ತಿಳಿದನು.

ಸ ಪ್ರಕೃತ್ಯಾ ಶ್ರಿಯಾ ದೀಪ್ತಃ ಸಂದಿದೀಪೇ ತಯಾऽಧಿಕಮ್ ।
ಉದ್ಯತ್ಸಹಸ್ರದೀಪ್ತಾಂಶುಃ ಶರದೀವ ದಿವಾಕರಃ ।
ಸಾ ತು ತಂ ಮನುಜವ್ಯಾಘ್ರಮನುರಕ್ತಾ ಮನಸ್ವಿನೀ ।
ಕನ್ಯಾ ಪುರಗತಾ ಭೂತ್ವಾ ತತ್ಪ್ರಸಾದಮಪದ್ಯತ ॥೪೭॥

ಸಹಜವಾಗಿ ಬೆಳಗುತ್ತಿದ್ದ ಅವನು ಅವಳ ಜೊತೆಯಲ್ಲಿ ಸೇರಿ ಶರತ್ಕಾಲದಲ್ಲಿ ಸೂರ್ಯನು ಸಹಸ್ರಕಿರಣಗಳಿಂದ ಬೆಳಗುವಂತೆ ಬೆಳಗಿದನು. ಮನಸ್ವಿನಿಯಾದ ಸುಭದ್ರೆಯು ಮನುಜವ್ಯಾಘ್ರನಾದ ಅವನಲ್ಲಿ ಅನುರಾಗವನ್ನು ಹೊಂದಿ ದ್ವಾರಕಾಪಟ್ಟಣದಲ್ಲಿ ಇದ್ದು ಅವನ ಅನುಗ್ರಹವನ್ನು ಪಡೆದಳು.

ವೈಶಂಪಾಯನಃ

ವೃಷ್ಣ್ಯಂಧಕಪುರಾತ್ ತತ್ರ ಅಪಯಾಂತು ಧನಂಜಯಃ ।
ವಿನಿಶ್ಚಿತ್ಯ ತದಾ ಪಾರ್ಥಃ ಸುಭದ್ರಾಮಿದಮಬ್ರವೀತ್ ।
ದ್ವಿಜಾನಾಂ ಗಣಮುಖ್ಯಾನಾಂ ಯಥಾರ್ಹಂ ಪ್ರತಿಪಾದಯ ॥೪೮॥

ಅರ್ಜುನನು ವೃಷ್ಣ್ಯಂಧಕ ಪುರವಾದ ದ್ವಾರಕೆಯಿಂದ ಹೊರಡಲು ನಿಶ್ಚಯಿಸಿ ಸುಭದ್ರೆಯನ್ನು ಕುರಿತು ಹೀಗೆ ಹೇಳಿದನು. ಬ್ರಾಹ್ಮಣರಿಗೆ ಮತ್ತು ನಿನ್ನ ಅನುಚರ ಸಮೂಹಕ್ಕೂ ಯೋಗ್ಯವಾದ ದಕ್ಷಿಣೆಯನ್ನು ಕೊಡು.

ಭೋಜ್ಯೈರ್ಭಕ್ಷ್ಯೈಶ್ಚ ಪೇಯೈಶ್ಚ ಪ್ರಯಚ್ಛ ಪ್ರತಿಯಾಸ್ಯತಾಮ್ ।
ಆತ್ಮನಶ್ಚ ಸಮುದ್ದಿಶ್ಯ ಮಹಾವ್ರತಸಮಾಪನಮ್ ॥೪೯॥

ನಿನ್ನನ್ನು ಬಿಟ್ಟು ಹೋಗುವವರಿಗೆ ನಿನ್ನ ಮಹಾವ್ರತದ ಸಮಾಪ್ತಿ ಎಂದು ಹೇಳಿ ಇಷ್ಟವಾದ ಭಕ್ಷ್ಯಭೋಜ್ಯಗಳನ್ನೂ ಪೇಯಗಳನ್ನೂ ಕೊಡು.

ಗಚ್ಛ ಭದ್ರೇ ಸ್ವಯಂ ತೂರ್ಣಂ ಮಹಾರಾಜನಿವೇಶನಮ್ ॥೫೦॥

ತೇಜೋಬಲಜವೋಪೇತೈಃ ಶಲ್ಯೈರ್ಹಾರ್ಯವರೋತ್ತಮೈಃ ।
ಶೈಬ್ಯಸುಗ್ರೀವಸಂಯುಕ್ತಂ ರಥಂ ತೂರ್ಣಮಿಹಾನಯ ॥೫೧॥

ಸುಭದ್ರೇ, ಬೇಗ ಮಹಾರಾಜನ ಅರಮನೆಗೆ ಹೋಗಿ ಶೀಘ್ರಗಾಮಿಗಳಾದ ತೇಜಸ್ಸು ಮತ್ತು ಬಲ ಮತ್ತು ಕೌಶಲದಿಂದ ಕೂಡಿದ ಶೈಬ್ಯ(ಸೈನ್ಯ) ಸುಗ್ರೀವಾದಿ ಕುದುರೆಗಳನ್ನು ಹೂಡಿದ ರಥವನ್ನು ಬೇಗ ಇಲ್ಲಿಗೆ ತೆಗೆದುಕೊಂಡು ಬಾ.

ವ್ರತಾರ್ಥಮಿವ ಭಾಷಿತ್ವಾ ಸಖೀಭಿಃ ಸುಭಗೇ ಸಹ ।
ಕ್ಷಿಪ್ರಮಾದಾಯ ಪರ್ಯೇಹಿ ಸಹ ಸರ್ವಾಯುಧಾನಿ ಚ ॥೫೨॥

ಸುಂದರಿಯೇ, ವ್ರತದ ಅಂಗವಾಗಿ ದೇವತಾದರ್ಶನವನ್ನು ಮಾಡಲು ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ಹೇಳಿ ಸಖಿಯರ ಜೊತೆಯಲ್ಲಿ ಸರ್ವಾಯುಧಗಳಿಂದ ಕೂಡಿದ ರಥವನ್ನು ತೆಗೆದುಕೊಂಡು ಬೇಗ ಹಿಂದಿರುಗು.

ಅನುಕರ್ಷಪತಾಕಾಶ್ಚ ತೂಣೀರಾಂಶ್ಚ ಧನೂಂಷಿ ಚ ।
ಸರ್ವಾನ್ ರಥವರೇ ಕುರ್ಯಾಃ ಸೋತ್ಸೇಧಾಶ್ಚ ಮಹಾಗದಾಃ ॥೫೩॥

ಪತಾಕೆಗಳನ್ನು ಎಳೆಯುವ ಹಗ್ಗಗಳನ್ನೂ, ಬತ್ತಳಿಕೆಗಳನ್ನೂ, ಧನುಸ್ಸುಗಳನ್ನೂ, ಮಹಾಗದೆಗಳನ್ನೂ, ಅವುಗಳನ್ನು ಎತ್ತುವ ಸಾಧನಗಳನ್ನೂ ಎಲ್ಲವನ್ನೂ ರಥದಲ್ಲಿ ತುಂಬಿಸು.

ವೈಶಂಪಾಯನಃ

ಅರ್ಜುನೇನೈವಮುಕ್ತಾ ಸಾ ಸುಭದ್ರಾ ಭದ್ರಭಾಷಿಣೀ ।
ಜಗಾಮ ನೃಪತೇರ್ವೇಶ್ಮ ಸಖೀಭಿಸ್ತ್ವರಿತಾ ಸಹ ॥೫೪॥

ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಮಂಜುಳಭಾಷಿಣಿಯಾದ ಸುಭದ್ರೆಯು ತನ್ನ ಸಖಿಯರ ಜೊತೆಯಲ್ಲಿ ಶೀಘ್ರವಾಗಿ ರಾಜಭವನಕ್ಕೆ ಹೋದಳು.

ಕ್ರೀಡಾರ್ಥಮಿತಿ ತತ್ರಸ್ಥಾನ್ ರಕ್ಷಿಣೋ ವಾಕ್ಯಮಬ್ರವೀತ್ ।
ರಥೇನಾನೇನ ಯಾಸ್ಯಾಮಿ ಮಹಾವ್ರತಸಮಾಪನಮ್ ।
ಶೈಬ್ಯಸುಗ್ರೀವಯುಕ್ತೇನ ಸಾಯುಧೇನ ಚ ಶಾರ್ಙ್ಗಿಣಃ ॥೫೫॥

ಅಲ್ಲಿದ್ದ ರಕ್ಷಕರಿಗೆ ನನ್ನ ಮಹಾವ್ರತದ ಸಮಾಪ್ತಿಯ ಸಂದರ್ಭದಲ್ಲಿ ಕ್ರೀಡಾರ್ಥವಾಗಿ ಶೈಬ್ಯ ಸುಗ್ರೀವಾದಿ ಅಶ್ವಗಳಿಂದ ಕೂಡಿದ ಮತ್ತು ಆಯುಧಗಳಿಂದ ಕೂಡಿದ ಕೃಷ್ಣನ ರಥವನ್ನು ಎಳೆದುಕೊಂಡು ಹೋಗುತ್ತಿರುವೆನು ಎಂದು ಹೇಳಿದಳು.

ಸುಭದ್ರಯೈವಮುಕ್ತೇ ತು ಜನಾಃ ಪ್ರಾಂಜಲಯೋಽಭವನ್ ।
ರಥೇನಾನೇನ ಭದ್ರೇ ತ್ವಂ ಯಥೇಷ್ಟಂ ಕ್ರಿಯತಾಮಿತಿ ॥೫೬॥

ಸುಭದ್ರೆಯು ಹೀಗೆ ಹೇಳುತ್ತಿರಲು ಪರಿಜನರು ಕೈಗಳನ್ನು ಜೋಡಿಸಿ ಸುಭದ್ರೇ, ಈ ರಥವನ್ನು ತೆಗೆದುಕೊಂಡು ನಿನಗೆ ಬೇಕಾದಂತೆ ಮಾಡು ಎಂದು ಹೇಳಿದರು.

ಯೋಜಯಿತ್ವಾ ರಥವರಂ ಕಲ್ಯಾಣೈರಭಿಭಾಷ್ಯ ತಾನ್ ।
ಯಥೋಕ್ತಂ ಸರ್ವಮಾರೋಪ್ಯ ಆಯುಧಾನಿ ಚ ಭಾಮಿನೀ।
ಕ್ಷಿಪ್ರಮಾದಾಯ ಕಲ್ಯಾಣೀ ಸುಭದ್ರಾಽರ್ಜುನಮಬ್ರವೀತ್ ॥೫೭॥

ಕಲ್ಯಾಣಿಯಾದ ಸುಭದ್ರೆಯು ಕುದುರೆಗಳನ್ನು ರಥಕ್ಕೆ ಹೂಡಿ ಪರಿಜನರಿಗೆ ಮಧುರವಾದ ಮಾತುಗಳನ್ನು ಆಡಿ, ಹೇಳಿದ ಎಲ್ಲಾ ವಸ್ತುಗಳನ್ನು ರಥದಲ್ಲಿ ತುಂಬಿಸಿ ಬೇಗ ರಥವನ್ನು ಅರ್ಜುನನ ಬಳಿಗೆ ತೆಗೆದುಕೊಂಡು ಬಂದು ಹೀಗೆ ಹೇಳಿದಳು.

ರಥೋಽಯಂ ರಥಿನಾಂ ಶ್ರೇಷ್ಠ ಆನೀತಸ್ತವ ಶಾಸನಾತ್ ।
ಸ್ವಸ್ತಿ ಯಾಹಿ ಯಥಾಕಾಮಂ ಕುರೂನ್ ಕೌರವನಂದನ ॥೫೮॥

ರಥಿಶ್ರೇಷ್ಠನೇ, ನಿನ್ನ ಆಪ್ಣೆಯಂತೆ ರಥವನ್ನು ತಂದಿದ್ದೇನೆ. ಕೌರವನಂದನನೇ, ನಿನ್ನ ಇಚ್ಛೆಯಂತೆ ಯಾವ ಅನಿಷ್ಟವೂ ಇಲ್ಲದಂತೆ ಕುರುಜಾಂಗಲಕ್ಕೆ ಪ್ರಯಾಣ ಮಾಡು.

ವೈಶಂಪಾಯನಃ

ನಿವೇದ್ಯ ತು ರಥಂ ಭರ್ತುಃ ಸುಭದ್ರಾ ಭದ್ರಸಮ್ಮತಾ ।
ಬ್ರಾಹ್ಮಣಾನಾಂ ದದೌ ಹೃಷ್ಟಾ ತದಾ ಸಾ ವಿವಿಧಂ ವಸು ॥೫೯॥

ಮಂಗಳ ಸ್ವರೂಪಳಾದ ಸುಭದ್ರೆಯು ತನ್ನ ಪತಿಗೆ ಈ ರೀತಿ ನಿವೇದಿಸಿ ಬ್ರಾಹ್ಮಣರಿಗೆ ಸಂತೋಷದಿಂದ ವಿಧವಿಧವಾದ ದಾನಗಳನ್ನು ಕೊಟ್ಟಳು.

ಸ್ನೇಹವಂತಿ ಚ ಭೋಜ್ಯಾನಿ ಪ್ರದದಾವೀಪ್ಸಿತಾನಿ ಚ ।
ಯಥಾಕಾಮಂ ಯಥಾಶ್ರದ್ಧಂ ವಸ್ತ್ರಾಣಿ ವಿವಿಧಾನಿ ಚ ॥೬೦॥

ಅವರಿಗೆ ಇಷ್ಟವಾದ ಘೃತಪಕ್ವವಾದ ಭೋಜ್ಯಗಳನ್ನು ವಿಧವಿಧವಾದ ವಸ್ತ್ರಗಳನ್ನೂ ತನ್ನ ಶ್ರದ್ಧೆಗೆ ಮತ್ತು ಅವರ ಆಸೆಗೆ ಅನುಗುಣವಾಗಿ ದಾನ ಮಾಡಿದಳು.

ತರ್ಪಿತಾ ವಿವಿಧೈರ್ಭಕ್ಷ್ಯೈಸ್ತಾನ್ಯವಾಪ್ಯ ವಸೂನಿ ಚ ।
ಬ್ರಾಹ್ಮಣಾಃ ಸ್ವಗೃಹಂ ಜಗ್ಮುಃ ಪ್ರಯುಜ್ಯ ಪರಮಾಶಿಷಃ ॥೬೧॥

ವಿಧವಿಧವಾದ ಭಕ್ಷ್ಯಗಳಿಂದಲೂ, ವಿಧವಿಧವಾದ ದಾನದಿಂದಲೂ, ತೃಪ್ತಿಗೊಂಡ ಬ್ರಾಹ್ಮಣರು ಶ್ರೇಷ್ಠವಾದ ಆಶೀರ್ವಾದಗಳನ್ನು ಮಾಡಿ ತಮ್ಮ ಮನೆಗಳಿಗೆ ಹೋದರು.

ಸುಭದ್ರಯಾ ತು ವಿಜ್ಞಪ್ತಃ ಪೂರ್ವಮೇವ ಧನಂಜಯಃ ।
ಅಭೀಶುಗ್ರಹಣೇ ಪಾರ್ಥ ನ ಮೇಽಸ್ತಿ ಸದೃಶೋ ಭುವಿ ॥೬೨॥

ಸುಭದ್ರೆಯು ಮೊದಲೇ ಅರ್ಜುನನಿಗೆ ಅರ್ಜುನ, ನನ್ನಂತೆ ರಥಾಶ್ವಗಳ ಕಡಿವಾಣಗಳನ್ನು ಹಿಡಿಯುವವರು ಭೂಮಿಯಲ್ಲಿ ಯಾರೂ ಇಲ್ಲ ಎಂದು ಹೇಳಿದ್ದಳು.

ತಸ್ಮಾತ್ ಸಾ ಪೂರ್ವಮಾರುಹ್ಯ ರಶ್ಮೀನ್ ಜಗ್ರಾಹ ಮಾದವೀ ।
ಸೋದರಾ ವಾಸುದೇವಸ್ಯ ಕೃತಸ್ವಸ್ತ್ಯಯನಾ ಹಯಾನ್ ॥೬೩॥

ಆದ್ದರಿಂದ ಕೃಷ್ಣನ ತಂಗಿಯಾದ ಅವಳು ಸ್ವಸ್ತಿವಾಚನವನ್ನು ಮಾಡಿಸಿ ಮೊದಲೇ ರಥವನ್ನೇರಿ ಕುದುರೆಗಳ ಕಡಿವಾಣವನ್ನು ಕೈಯಲ್ಲಿ ಹಿಡಿದಳು.

ವ್ಯತ್ಯಯಿತ್ವಾ ತು ತಲ್ಲಿಂಗಂ ಸಮುಚ್ಛ್ರಿತಮಹಾಧನುಃ ।
ಆರುರೋಹ ರಥಶ್ರೇಷ್ಠಂ ಶುಕ್ಲವಾಸಾ ಧನಂಜಯಃ ॥೬೪॥

ಧನಂಜಯನು ತನ್ನ ಯತಿವೇಷವನ್ನು ತೊರೆದು ದೊಡ್ಡ ಧನುಸ್ಸನ್ನು ಹಿಡಿದು ಬಿಳಿಯ ವಸ್ತ್ರಗಳನ್ನು ಉಟ್ಟು ಶ್ರೇಷ್ಠವಾದ ರಥವನ್ನು ಏರಿದನು.

ಮಹೇಂದ್ರದತ್ತಂ ಮಕುಟಂ ತಥಾ ಹ್ಯಾಭರಣಾನಿ ಚ ।
ಅಲಂಕೃತ್ಯ ತು ಕೌಂತೇಯಃ ಪ್ರಯಾತುಮುಪಚಕ್ರಮೇ ॥೬೫॥

ಕುಂತೀಪುತ್ರನಾದ ಅರ್ಜುನನು ಇಂದ್ರನು ಕೊಟ್ಟ ಕಿರೀಟವನ್ನು ಮತ್ತು ಆಭರಣಗಳನ್ನು ಧರಿಸಿ ಅಲಂಕಾರ ಮಾಡಿಕೊಂಡು ಹೊರಡಲು ಅನುವಾದನು.

ತತಃ ಕನ್ಯಾಪುರೇ ಘೋಷಸ್ತುಮುಲಃ ಸಮಪದ್ಯತ ।
ದೃಷ್ಟ್ವಾ ರಥಗತಂ ಪಾರ್ಥಂ ಖಡ್ಗಬಾಣಧನುರ್ಧರಮ್ ॥೬೬॥

ಆಗ ರಥದಲ್ಲಿ ಖಡ್ಗ ಬಾಣ ಧನುಸ್ಸುಗಳನ್ನು ಹಿಡಿದ ಅರ್ಜುನನನ್ನು ನೋಡಿ ಕನ್ಯಾಪುರದಲ್ಲಿ ತುಮುಲನಾದ ಉಂಟಾಯಿತು.

ಅಭೀಷುಹಸ್ತಾಂ ಸುಶ್ರೋಣೀಮರ್ಜುನೇನ ರಥೇ ಸ್ಥಿತಾಮ್ ।
ಜಗುಃ ಕನ್ಯಾಪುರೇ ಕನ್ಯಾ ವಾಸುದೇವಸಹೋದರಾಮ್ ॥೬೭॥

ಅರ್ಜುನನ ರಥದಲ್ಲಿ ಕೃಷ್ಣನ ಸಹೋದರಿಯಾದ, ಸುಂದರಿಯಾದ ಸುಭದ್ರೆಯು ಕಡಿವಾಣವನ್ನು ಹಿಡಿದು ಕುಳಿತಿರುವುದನ್ನು ನೋಡಿ ಗಾನ ಮಾಡಿದರು.

ಸರ್ವೇ ಕಾಮಾಃ ಸಮೃದ್ಧಾಸ್ತೇ ಸುಭದ್ರೇ ಭದ್ರಭಾಷಿಣಿ ।
ವಾಸುದೇವಪ್ರಿಯಂ ಲಬ್ಧ್ವಾ ಭರ್ತಾರಂ ವೀರಮರ್ಜುನಮ್ ॥೬೮॥

ಸರ್ವಸೀಮಂತಿನೀನಾಂ ತ್ವಂ ಶ್ರೇಷ್ಠಾ ಕೃಷ್ಣಸಹೋದರೇ ।
ಯಸ್ಮಾತ್ ಸರ್ವಮನುಷ್ಯಾಣಾಂ ಶ್ರೇಷ್ಠೋ ಭರ್ತಾ ತವಾರ್ಜುನಃ ॥

ಮಂಗಳಭಾಷಿಣಿಯಾದ ಸುಭದ್ರೆಯೇ, ಕೃಷ್ಣನಿಗೆ ಪ್ರಿಯನಾದ ವೀರನಾದ ಅರ್ಜುನನನ್ನು ಪತಿಯಾಗಿ ಪಡೆದು ನಿನ್ನ ಎಲ್ಲಾ ಕಾಮಗಳೂ ಪೂರ್ಣವಾಗಿವೆ. ಕೃಷ್ಣಸೋದರಿಯೇ, ನಿನ್ನ ಪತಿಯಾದ ಅರ್ಜುನನು ಎಲ್ಲಾ ಮನುಷ್ಯರಿಗಿಂತಲೂ ಶ್ರೇಷ್ಠನಾದ ಕಾರಣ ನೀನು ಎಲ್ಲಾ ಸುಮಂಗಲಿಯರಿಗಿಂತಲೂ ಶ್ರೇಷ್ಠಳಾದವಳು.

ಉಪಪನ್ನಸ್ತ್ವಯಾ ವೀರಃ ಸರ್ವಲೋಕಮಹಾರಥಃ ।
ಸ್ವಸ್ತಿ ಯಾಹಿ ಗೃಹಂ ಭದ್ರೇ ಸುಹೃದ್ಭಿಃ ಸಂಗಮೋಽಸ್ತು ತೇ ॥೭೦॥

ಸರ್ವಲೋಕಮಹಾರಥನಾದ, ವೀರನನ್ನು ಪತಿಯಾಗಿ ಪಡೆದಿದ್ದೀಯೆ. ನಿನಗೆ ಮಂಗಳವಾಗಲಿ, ಪತಿಗೃಹಕ್ಕೆ ಹೋಗಿ ಸುಹೃಜ್ಜನರಿಂದ ಸಮಾಗಮವನ್ನು ಪಡೆಯುವವಳಾಗು.

ವೈಶಂಪಾಯನಃ

ಏವಮುಕ್ತಾ ಪ್ರಹೃಷ್ಟಾಭಿಃ ಸಖೀಭಿಃ ಪ್ರತಿನಂದಿತಾ ।
ಭದ್ರಾ ಭದ್ರಜವೋಪೇತಾನಶ್ವಾನ್ ಪುನರಚೋದಯತ್ ।
ಪಾರ್ಶ್ವೇ ವಾಮೇ ಪುರಸ್ತಾಚ್ಚ ಸಖಾ ತಸ್ಯಾಗ್ರಣೀರಿವ ॥೭೧॥

ಸಂತೋಷ ಹೊಂದಿದ ಸಖಿಯರಿಂದ ಹೀಗೆ ಅಭಿನಂದಿಸಲ್ಪಟ್ಟ ಸುಭದ್ರೆಯು ಪಾರ್ಥಸಾರಥಿಯಾದ ಕೃಷ್ಣನಂತೆ ಎಡಭಾಗದಲ್ಲಿ, ಬಲಭಾಗದಲ್ಲಿ ಮತ್ತು ಮುಂಭಾಗದಲ್ಲಿರುವ ವೇಗಶಾಲಿಗಳಾದ ಅಶ್ವಗಳನ್ನು ಪ್ರೇರಿಸಿ ಓಡಿಸಿದಳು.

ಅಥ ಕನ್ಯಾಪುರದ್ವಾರಾತ್ ಸಘೋಷಮಭಿನಿಃಸೃತಮ್ ।
ದದೃಶುಸ್ತಂ ರಥಶ್ರೇಷ್ಠಂ ಜನಾ ಜೀಮೂತನಿಸ್ವನಮ್ ॥೭೨॥

ಅನಂತರ ಕನ್ಯಾಪುರದ ದ್ವಾರದಿಂದ ಮೇಘಘೋಷದಂತೆ ನಾದವನ್ನು ಮಾಡುತ್ತಾ ಹೊರಗೆ ಹೊರಟ ಆ ಶ್ರೇಷ್ಠವಾದ ರಥವನ್ನು ಜನರು ನೋಡಿದರು.

ಸುಭದ್ರಾಸಂಗೃಹೀತಸ್ಯ ರಥಸ್ಯ ಮಹತೋ ರವಮ್ ।
ಮೇಘಸ್ವನಮಿವಾಕಾಶೇ ಶುಶ್ರುವುಃ ಪುರವಾಸಿನಃ ॥೭೩॥

ಪುರವಾಸಿಗಳೂ ಸಹ ಸುಭದ್ರೆಯ ಸಾರಥ್ಯದಿಂದ ಕೂಡಿದ ಮೇಘನಾದದಂತೆ ಗಂಭೀರವಾದ ಆ ರಥದ ಮಹಾಘೋಷವನ್ನು ಆಕಾಶದಲ್ಲಿ ಕೇಳಿದರು.

ಸುಭದ್ರಯಾ ಚ ಸಂಪನ್ನೇ ತಿಷ್ಠನ್ ರಥವರೇऽರ್ಜುನಃ ।
ಪ್ರಬಭೌ ಪರಯೋಪೇತಃ ಕೈಲಾಸ ಇವ ಗಂಗಯಾ ॥೭೪॥

ಸುಭದ್ರೆಯಿಂದ ಕೂಡಿದ ಆ ಶ್ರೇಷ್ಠರಥದಲ್ಲಿ ಕುಳಿತ ಅರ್ಜುನನು ಗಂಗೆಯ ಜೊತೆಯಲ್ಲಿ ಕೂಡಿದ ಕೈಲಾಸ ಪರ್ವತದಂತೆ ಅತ್ಯಂತವಾಗಿ ಶೋಭಿಸಿದನು.

ಪಾರ್ಥಃ ಸುಭದ್ರಾಸಹಿತೋ ವಿರರಾಜ ಮಹಾರಥಃ ।
ಪಾರ್ಥಸ್ಯೈವ ಪಿತಾ ಶಕ್ರೋ ಯಥಾ ಶಚ್ಯಾ ಸಮನ್ವಿತಃ ॥೭೫॥

ಮಹಾರಥನಾದ ಪಾರ್ಥನು ಸುಭದ್ರೆಯನ್ನು ಕೂಡಿ ತಂದೆಯಾದ ಇಂದ್ರನು ಶಚಿಯಿಂದ ಕೂಡಿ ಶೋಭಿಸುವಂತೆ ಶೋಭಿಸಿದನು.

ಸುಭದ್ರಾಂ ಪ್ರೇಕ್ಷ್ಯ ಧರ್ಮೇಣ ಹ್ರಿಯಮಾಣಾಂ ಯಶಸ್ವಿನೀಮ್ ।
ಚಕ್ರುಃ ಕಿಲಕಿಲಾಶಬ್ದಮಾಸಾದ್ಯ ಬಹವೋ ಜನಾಃ ॥೭೬॥

ಯಶಸ್ವಿನಿಯಾದ ಸುಭದ್ರೆಯು ಧರ್ಮದಿಂದ ವರಿಸಲ್ಪಡುತ್ತಿರುವವನನ್ನು ನೋಡಿದ ಬಹಳ ಜನರು ಸಂತೋಷದ ಶಬ್ದಗಳನ್ನು ಮಾಡಿದರು.

ದಾಶಾರ್ಹಾಣಾಂ ಕುಲಸ್ಯ ಶ್ರೀಃ ಸುಭದ್ರಾ ಭದ್ರಭಾಷಿಣೀ ।
ಅಭಿಕಾಮಾ ಸಕಾಮೇನ ಪಾರ್ಥೇನ ಸಹ ಗಚ್ಛತಿ ॥೭೭॥

ದಾಶಾರ್ಹಕುಲದ ಲಕ್ಷ್ಮಿಯಾದ, ಭದ್ರಭಾಷಿಣಿಯಾದ ಸುಭದ್ರೆಯು ಅರ್ಜುನನಲ್ಲಿ ಅನುರಕ್ತಳಾಗಿ ತನ್ನಲ್ಲಿ ಅನುರಕ್ತನಾದ ಅರ್ಜುನನೊಂದಿಗೆ ಹೋಗುತ್ತಿದ್ದಾಳೆ (ಎಂದು ಮಾತನಾಡಿದರು)

ಅಥಾಪರೇ ತು ಸಂಕ್ರುದ್ಧಾ ಗೃಹ್ಣೀತ ಘ್ನತ ಮಾಚಿರಮ್ ।
ಇತಿ ಸಂಭಾಷಮಾಣಾನಾಂ ಸನ್ನಾದಃ ಸಮಹಾನಭೂತ್ ॥೭೮॥

ಇನ್ನು ಕೆಲವರು ಕ್ರೋಧವನ್ನು ತಾಳಿ ಅವನನ್ನು ಹಿಡಿಯಿರಿ, ಬೇಗ ವಧೆಮಾಡಿ ಎಂದು ಮಾತನಾಡಿದರು. ಹೀಗೆ ಮಾತನಾಡುವರ ಮಾತುಗಳಿಂದ ದೊಡ್ಡ ಶಬ್ದವುಂಟಾಯಿತು.

ಸ ತೇನ ಜನಘೋಷೇಣ ವೀರೋ ರಾಜ ಇವಾರ್ದಿತಃ ।
ವವರ್ಷ ಶರವರ್ಷಾಣಿ ನ ತು ಕಂಚನ ರೋಷಯತ್ ॥೭೯॥

ಈ ಜನಗಳ ಘೋಷದಿಂದ ಅರ್ದಿತನಾದ ವೀರನಾದ ಗಜದಂತಿದ್ದ ಅರ್ಜುನನು ಜನರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು. ಆದರೆ ಯಾರನ್ನೂ ಗಾಯಗೊಳಿಸಲಿಲ್ಲ ಅಥವಾ ವಧೆ ಮಾಡಲಿಲ್ಲ. ಆದ್ದರಿಂದ ಯಾರಿಗೂ ರೋಷವನ್ನು ಉಂಟುಮಾಡಲಿಲ್ಲ.

ಮುಮೋಚ ನಿಶಿತಾನ್ ಬಾಣಾನ್ ದೀಪ್ಯಮಾನಾನ್ ಸ್ವತೇಜಸಾ ।
ಪ್ರಾಸಾದವರಸಂಘೇಷು ಹರ್ಮ್ಯೇಷು ಭವನೇಷು ಚ ॥೮೦॥

ಕ್ಷೋಭಯಿತ್ವಾ ಪುರಶ್ರೇಷ್ಠಂ ಗರುತ್ಮಾನಿವ ಸಾಗರಮ್ ।
ಪ್ರೇಕ್ಷನ್ ರೈವತಕದ್ವಾರಂ ನಿರ್ಯಯೌ ಭರತರ್ಷಭಃ ॥೮೧॥

ತನ್ನ ಹೊಳೆಯುತ್ತಿದ್ದ ಹರಿತವಾದ ಬಾಣಗಳನ್ನು ಮನೆಗಳ ಉಪ್ಪರಿಗೆಗಳ ಮೇಲೆಯೂ, ಅನೇಕ ಅಂತಸ್ತುಗಳ ಮನೆಗಳ ಮೇಲೆಯೂ, ಉಳಿದ ಮನೆಗಳ ಮೇಲೆಯೂ ಪ್ರಯೋಗ ಮಾಡುತ್ತಿದ್ದನು. ಗರುಡನು ಸಾಗರವನ್ನು ಅಲ್ಲೋಲ ಕಲ್ಲೋಲ

ಮಾಡಿದಂತೆ ದ್ವಾರಕಾಪಟ್ಟಣವನ್ನು ಅಲ್ಲೋಲಕಲ್ಲೋಲ ಮಾಡಿ ಭರತಶ್ರೇಷ್ಠನಾದ ಅರ್ಜುನನು ರೈವತಕ ಪರ್ವತದ ದ್ವಾರವನ್ನು ನೋಡುತ್ತಾ ಅಲ್ಲಿಂದ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಯೋವಿಂಶತ್ಯಧಿಕದ್ವಿಶತತಮೋऽಧ್ಯಾಯಃ॥

॥ ಇತಿ ಸುಭದ್ರಾಹರಣಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸ ಶಿಕ್ಷಯಾ ತ್ವದ್ಭುತಯಾ ಶರೌಘೈ
ರ್ವಿದ್ರಾಪ್ಯ ತಾನ್ ಭೀಷಯಿತ್ವೈವ ಸರ್ವಾನ್ ।
ನಿರ್ಗತ್ಯ ಪುರ್ಯಾ ವಿಪೃಥುಂ ದದರ್ಶ
ರಾಮೇಣ ಪುರ್ಯಾ ರಕ್ಷಣೇ ಸನ್ನಿಯುಕ್ತಂ ॥೧೯೨॥

ಅತ್ಯದ್ಭುತವಾದ ಅಭ್ಯಾಸದಿಂದ ಬಾಣಸಮೂಹಗಳ ಮೂಲಕ ಯಾದವ ಸೈನಿಕರೆಲ್ಲರನ್ನೂ ಅಂಜಿಸಿಯೆ ಓಡಿಸಿದ ಅರ್ಜುನ. ನಗರದಿಂದ ಹೊರಗೆ ಬರುತ್ತ ಅಲ್ಲಿ ನಗರ ರಕ್ಷಣೆಗಾಗಿ ಬಲರಾಮನಿಂದ ನೇಮಿಸಲ್ಪಟ್ಟಿದ್ದ ವಿಪೃಥುವನ್ನು ಕಂಡ.

ಪ್ರಿಯಂ ಕುರ್ವನ್ನಿವ ರಾಮಸ್ಯ ಸೋऽಪಿ
ವ್ಯಾಜೇನ ಪಾರ್ಥಂ ಸೇನಯೈವಾವೃಣೋತ್ತಂ ।
ಕೃಷ್ಣಾದೇಶಾನ್ನೈವ ಪಾರ್ಥಸ್ಯ ಚಕ್ರೇ
ಸಮ್ಯಗ್‌ರೋಧಂ ಯುಯುಧೇ ಚ ಚ್ಛಲೇನ ॥೧೯೩॥

ವಿಪೃಥು ಬಲರಾಮನಿಗೆ ಪ್ರಿಯವಾದುದನ್ನೆ ಮಾಡುವಂತೆ ತೋರಿಕೊಂಡು ನೆಪಮಾತ್ರಕ್ಕೆ ಅರ್ಜುನನನ್ನು ಸೈನ್ಯದಿಂದ ಸುತ್ತುವರಿದ. ಕೃಷ್ಣನ ಆಜ್ಞೆ ಇದ್ದುದರಿಂದ ಅರ್ಜುನನಿಗೆ ಬಲವಾಗಿ ವಿರೋಧ ಮಾಡಲಿಲ್ಲ. ನೆಪಮಾತ್ರಕ್ಕೆ ಯುದ್ಧ ಮಾಡಿದ.

ಏಕೋಽಸೌ ಮರುತಾಂ ಸೌಮ್ಯನಾಮಾ
ಶುಶ್ರೂಷಾರ್ಥಂ ವಾಸುದೇವಸ್ಯ ಜಾತಃ ।
ತಂ ಯಾದವಂ ಶರವರ್ಷೈರ್ವವರ್ಷ
ಯಥಾ ಕೃತಂ ನ ಭವೇತ್ ಸವ್ಯಸಾಚೀ ॥೧೯೪॥

ವಿಪೃಥು ಮರುತ್ತುಗಳಲ್ಲಿ ಒಬ್ಬ. ಸೌಮ್ಯ ಎಂಬ ಹೆಸರಿನವನು. ಕೃಷ್ಣನ ಸೇವೆಗಾಗಿ ಅವತರಿಸಿದವನು. ಅರ್ಜುನ ಅವನಿಗೆ ಒಂದಿಷ್ಟೂ ಗಾಯವಾಗದಂತೆ ಅವನಮೇಲೆ ಬಾಣಗಳ ಮಳೆಗೆರೆದ.

ನಿರಾಯುಧಂ ವಿರಥಂ ಚೈವ ಚಕ್ರೇ
ಪಾರ್ಥಃ ಸೇನಾಂ ತಸ್ಯ ನೈವಾಹನಚ್ಚ ।
ದೃಷ್ಟ್ವಾ ಶರಾಂಸ್ತಸ್ಯ ತೀಕ್ಷ್ಣಾಂಸ್ತ ಚೋಪಿ
ನಚ್ಛೇದಕಾನ್ ವಿಪೃಥುಃ ಸಂತುತೋಷ ॥೧೯೫॥

ಅರ್ಜುನ ವಿಪೃಥುವನ್ನು ನಿರಾಯುಧನನ್ನಾಗಿಯೂ ವಿರಥನನ್ನಾಗಿಯೂ ಮಾಡಿದ. ಆದರೆ ಅವನ ಸೈನ್ಯವನ್ನು ನಾಶಮಾಡಲಿಲ್ಲ. ಅರ್ಜುನನ ತೀಕ್ಷ್ಣ ಬಾಣಗಳು ಚರ್ಮವನ್ನು ಕೂಡ ಗಾಯಗೊಳ್ಸದಿರುವುದನ್ನು ಕಂಡು ವಿಪೃಥು ಸಂತುಷ್ಟನಾದ.

ಶಿಕ್ಷಾಂ ಪಾರ್ಥಸ್ಯಾಧಿಕಂ ಮಾನಯಾನ
ಉಪೇತ್ಯ ಪಾರ್ಥಂ ಚ ಶಶಂಸ ಸರ್ವಂ ।
ಆಜ್ಞಾಂ ವಿಷ್ಣೋಃ ಸನ್ನಿಯುಧ್ಯನ್ನಿವಾಸ್ಮೈ
ಕೃತ್ತಾಯುಧಃ ಫಲ್ಗುನೇನೈವ ಪೂರ್ವಂ ॥೧೯೬॥

ವಿಪೃಥು ತನ್ನ ಆಯುಧಗಳೆಲ್ಲವೂ ತುಂಡಾದಾಗ ಅರ್ಜುನನೊಡನೆ ಮುಷ್ಟಿಯುದ್ಧಕ್ಕೆ ಹೊರಟವನಂತೆ ಅವನ ಬಳಿಗೆ ಬಂದ. ವಸ್ತುತಃ ಅರ್ಜುನನ ಉತ್ತಮವಾದ ಶಸ್ತ್ರಾಭ್ಯಾಸ ಕೌಶಲ್ಯವನ್ನು ಅಭಿನಂದಿಸುವುದಕ್ಕಾಗಿ ಬಂದಿದ್ದ. ಹಾಗೆ ಬಂದು ಕೃಷ್ಣನ ಎಲ್ಲ ಆಜ್ಞೆಯನ್ನೂ ತಿಳಿಸಿದ.

ತತಃ ಪರಾಜಿತವಚ್ಛೀಘ್ರಮೇತ್ಯ
ಶಶಂಸ ಸರ್ವಂ ಹಲಿನೇಽಥ ಸೋಽಪಿ ।

ಪ್ರದ್ಯುಮ್ನಸಾಂಬಾದಿಯುತೋಽಥ ಕೋಪಾ-
ದಾಯಾತ್ ಪುರೀಂ ಹಂತುಕಾಮೋರ್ಜುನಂ ಚ ॥೧೯೭॥

ಬಳಿಕ ವಿಪೃಥು ಪರಾಜಿತನಂತೆ ಬೇಗನೆ ಪಿಂಡೋದ್ದಾರಕ್ಕೆ ಬಂದು ಬಲರಾಮನಿಗೆ ಎಲ್ಲವನ್ನೂ ಹೇಳಿದ. ಬಲರಾಮ ಕೋಪದಿಂದ ಅರ್ಜುನನನ್ನು ಕೊಲ್ಲಲು ಬಯಸಿ ಪ್ರದ್ಯುಮ್ನ ಸಾಂಬ ಮುಂತಾದವರೊಂದಿಗೆ ದ್ವಾರಕೆಗೆ ಬಂದ.

★ ★ ★ ★

ಇನ್ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ

(ದ್ವಾರಕೆಯಿಂದ ಸುಭದ್ರೆಯ ಜೊತೆಯಲ್ಲಿ ಅರ್ಜುನನ ನಿರ್ಗಮನ, ಮಧ್ಯಮಾರ್ಗದಲ್ಲಿ ವಿಪೃಥುವಿನ ಪ್ರತಿರೋಧ ಮತ್ತು ಸಮ್ಮತಿ, ವೃಷ್ಣ್ಯಂಧಕರ ಸಭೆ, ಬಲರಾಮನ ಕೋಪ, ಕೃಷ್ಣನ ಮೌನ.)

ವೈಶಂಪಾಯನಃ

ಶಾಸನಾತ್ ಪುರುಷೇಂದ್ರಸ್ಯ ಬಲೇನ ಮಹತಾ ಬಲೀ ।
ಗಿರೌ ರೈವತಕೇ ನಿತ್ಯಂ ಬಭೂವ ವಿಪೃಥುಶ್ರವಾಃ ॥೧॥

ಪುರುಷೋತ್ತಮನಾದ ಕೃಷ್ಣನ ಆಜ್ಞೆಯಂತೆ ಬಲಿಷ್ಠನಾದ ವಿಪೃಥುವು ದೊಡ್ಡ ಸೈನ್ಯದೊಂದಿಗೆ ಯಾವಾಗಲೂ ರೈವತಕ ಪರ್ವತದಲ್ಲಿ ಇರುತ್ತಿದ್ದನು.

ಪ್ರವಾಸೇ ವಾಸುದೇವಸ್ಯ ತಸ್ಮಿನ್ ಹಲಧರೋಪಮಃ ।
ಸಂಬಭೂವ ತದಾ ಗೋಪ್ತಾ ಪುರಸ್ಯ ಪುರವರ್ಧನಃ ॥೨॥

ಪ್ರಾಪ್ಯ ಪಾಂಡವನಿರ್ಯಾಣಂ ನಿರ್ಯಯೌ ವಿಪೃಥುಶ್ರವಾಃ ।
ನಿಶಮ್ಯ ಪುರನಿರ್ಘೋಷಂ ಸ್ವಮನೀಕಮಚೋದಯತ್ ॥೩॥

ಕೃಷ್ಣನು ಪ್ರವಾಸಕ್ಕೆ ಹೋದಾಗ ಬಲರಾಮನಿಗೆ ಸದೃಶನಾಗಿ ಪುರವರ್ಧನನಾಗಿದ್ದ ಅವನು ಪಟ್ಟಣಕ್ಕೆ ರಕ್ಷಕನಾಗಿರುತ್ತಿದ್ದನು. ಅರ್ಜುನನ ನಿರ್ಗಮನವನ್ನೂ, ನಗರದ ಘೋಷವನ್ನೂ ಗಮನಿಸಿದ ವಿಪೃಥುವು ತನ್ನ ಸೈನ್ಯವನ್ನು ಪ್ರಚೋದಿಸಿದನು.

ಸೋಽಭಿಪತ್ಯ ತದಾಽಧ್ವಾನಂ ದದರ್ಶ ಪುರುಷರ್ಷಭಮ್ ।
ನಿಃಸೃತಂ ದ್ವಾರಕಾದ್ವಾರಾದಂಶುಮಂತಮಿವಾಂಬುದಾತ್ ॥೪॥

ಸವಿದ್ಯುತಮಿವಾಂಭೋದಂ ಪ್ರೇಕ್ಷ್ಯ ಬಾಣಧನುರ್ಧರಮ್ ।
ಪಾರ್ಥಮಾಸಾದ್ಯ ಯೋಧಾನಾಂ ವಿಸ್ಮಯಃ ಸಮಪದ್ಯತ ॥೫॥

ಅವನು ರೈವತಕ ಪರ್ವತದಿಂದ ಮಾರ್ಗಕ್ಕೆ ಬಂದು ಮೋಡದಿಂದ ಹೊರಬಂದ ಸೂರ್ಯನಂತೆ ಅರ್ಜುನನು ದ್ವಾರಕಾ ಪಟ್ಟಣದಿಂದ ಹೊರಬರುತ್ತಿರುವುದನ್ನು ನೋಡಿದನು. ಮಿಂಚಿನಿಂದ ಕೂಡಿದ ಮೋಡದಂತೆ ಇದ್ದ ಧನುರ್ಬಾಣಧರನಾದ ಅರ್ಜುನನನ್ನು ನೋಡಿ ಮತ್ತು ಸಮೀಪಿಸಿ ಸೈನಿಕರಿಗೆ ಆಶ್ಚರ್ಯವುಂಟಾಯಿತು.

ಉದೀರ್ಣರಥನಾಗಾಶ್ವಮನೀಕಮಭಿವೀಕ್ಷ್ಯ ತತ್ ।
ಉವಾಚ ಪರಮಪ್ರೀತಾ ಸುಭದ್ರಾ ಭರತರ್ಷಭಮ್ ॥೬॥

ಸುಭದ್ರೆಯು ಸಮೃದ್ಧವಾದ ರಥ, ಗಜ, ಅಶ್ವಪತಾಕೆಗಳಿಂದ ಕೂಡಿದ ವಿಪೃಥುವಿನ ಆ ಸೈನ್ಯವನ್ನು ನೋಡಿ ಪರಮಸಂತುಷ್ಟಳಾಗಿ ಭರತಶ್ರೇಷ್ಠನಾದ ಅರ್ಜುನನನ್ನು ಕುರಿತು ಹೇಳಿದಳು.

ಸಂಗೃಹೀತುಮಭಿಪ್ರಾಯೋ ದೀರ್ಘಕಾಲಕೃತೋ ಮಮ ।
ಯುಧ್ಯಮಾನಸ್ಯ ಸಂಗ್ರಾಮೇ ರಥಂ ತವ ನರರ್ಷಭ ॥೭॥

ಪುರುಷಶ್ರೇಷ್ಠನೇ, ನೀನು ಯುದ್ಧಮಾಡುವಾಗ ನಿನ್ನ ರಥದ ಕುದುರೆಗಳ ಕಡಿವಾಣವನ್ನು ಹಿಡಿಯಬೇಕೆಂದು ನನಗೆ ಬಹುಕಾಲದಿಂದಲೂ ಆಸೆಯಿದ್ದಿತು.

ಓಜಸ್ತೇಜೋದ್ಯುತಿಬಲೈರಜಿತಸ್ಯ ಮಹಾತ್ಮನಃ ।
ಪಾರ್ಥಸ್ಯ ವೈ ಸಾರಥಿತ್ವೇ ಭವೇಥಾ ಇತ್ಯಶಿಕ್ಷಯತ್ ॥೮॥

ಓಜಸ್ಸು, ತೇಜಸ್ಸು, ಕಾಂತಿ, ಮತ್ತು ಬಲಗಳಿಂದ ಕೂಡಿ ಎಂದೂ ಪರಾಜಯವನ್ನು ಹೊಂದದ ಮಹಾನುಭಾವನಾದ ಅರ್ಜುನನಿಗೆ ನೀನು ಸಾರಥಿಯಾಗಬೇಕು ಎಂದು ಕೃಷ್ಣನು ನನಗೆ ಸಾರಥ್ಯವನ್ನು ಕಲಿಸಿದ್ದನು.

ಏವಮುಕ್ತಃ ಪ್ರಿಯಃ ಪ್ರೀತಃ ಪ್ರತ್ಯುವಾಚ ನರರ್ಷಭಃ ।
ಚೋದಯಾಶ್ವಾನಸಂಸಕ್ತಾನ್ ವಿಶಂತು ವಿಪೃಥೋರ್ಬಲಮ್ ॥೯॥

ಈ ಮಾತುಗಳನ್ನು ಕೇಳಿದ ಪುರುಷಶ್ರೇಷ್ಠನಾದ ಅರ್ಜುನನು ಸಂತೋಷಗೊಂಡು ಕುದುರೆಗಳು ಪರಸ್ಪೈನ್ಯದೊಡನೆ ಸಂಸಕ್ತವಾಗದಂತೆ ಅವುಗಳನ್ನು ನಡೆಸಿ ವಿಪೃಥುವಿನ ಸೈನ್ಯವನ್ನು ಪ್ರವೇಶಿಸು ಎಂದು ಹೇಳಿದನು.

ಬಹುಭಿರ್ಯುಧ್ಯಮಾನಸ್ಯ ತಾವಕಾನಜಿಘಾಂಸತಃ ।
ಪಶ್ಯ ಬಾಹುಬಲಂ ಭದ್ರೇ ಶರಾನ್ ವಿಕ್ಷಿಪತೋ ಮಮ ॥೧೦॥

ಭದ್ರೇ, ನಿನ್ನವರಾದ ಬಹುಸೈನಿಕರ ಜೊತೆಯಲ್ಲಿ ಯುದ್ಧಮಾಡಿ ಯಾರನ್ನೂ ಗಾಯಗೊಳಿಸದಂತೆ ಬಾಣಗಳನ್ನು ಪ್ರಯೋಗಿಸುವ ನನ್ನ ಕೌಶಲವನ್ನು ನೋಡು.

ವೈಶಂಪಾಯನಃ

ಏವಮುಕ್ತಾ ತದಾ ಭದ್ರಾ ಪಾರ್ಥೇನ ಭರತರ್ಷಭ ।
ಚುಚೋದ ಚಾಶ್ವಾನ್ ವಿಸ್ರಬ್ಧಾ ತತಸ್ತೇ ವಿವಿಶುರ್ಬಲಮ್ ॥೧೧॥

ಭರತರ್ಷಭನೇ, ಅರ್ಜುನನು ಹೀಗೆ ಹೇಳುತ್ತಿರಲು ಸುಭದ್ರೆಯು ವಿಶ್ವಾಸದಿಂದ ರಥದ ಕುದುರೆಗಳನ್ನು ಪ್ರಚೋದಿಸಿದಳು. ಅವು ವಿಪೃಥುವಿನ ಸೈನ್ಯವನ್ನು ಹೊಕ್ಕವು.

ತದಾಹತಮಹಾವಾದ್ಯಂ ಸಮುದಗ್ರಧ್ವಜಾಯುಧಮ್ ।
ಅನೀಕಂ ವಿಪೃಥೋರ್ಹೃಷ್ಟಂ ಪಾರ್ಥಮೇವಾನ್ವವರ್ತತ ॥೧೨॥

ಮಹಾವಾದ್ಯಗಳ ನಾದದಿಂದ ಕೂಡಿದ, ಎತ್ತಿದ ಧ್ವಜ ಮತ್ತು ಆಯುಧಗಳಿಂದ ಕೂಡಿದ ಸಂತುಷ್ಟಗೊಂಡ ವಿಪೃಥುವಿನ ಸೈನ್ಯವು ಅರ್ಜುನನ ಕಡೆಗೆ ಮುಂದುವರಿಯಿತು.

ರಥೈರ್ಬಹುವಿಧೈರ್ಹೃಷ್ಟಾ ಸದಶ್ವೈಶ್ಚ ಮಹಾಜವೈಃ ।
ಕಿರಂತಃ ಶರವರ್ಷಾಣಿ ಪರಿವವ್ರುರ್ಧನಂಜಯಮ್ ॥೧೩॥

ಸಂತುಷ್ಟರಾದ ಆ ಸೈನಿಕರು ಮಹಾವೇಗವುಳ್ಳ ಸದಶ್ವಗಳು ಹೂಡಲ್ಪಟ್ಟ ರಥಗಳಲ್ಲಿ ಕುಳಿತು ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತೇಷಾಮಸ್ತ್ರಾಣಿ ಸಂವಾರ್ಯ ದಿವ್ಯೈರಸ್ತ್ರೈರ್ಮಹಾಸ್ತ್ರವಿತ್ ।
ಆವೃಣೋನ್ಮಹದಾಕಾಶಂ ಶರೈಃ ಪರಪುರಂಜಯಃ ॥೧೪॥

ಪರಪುರಂಜಯನಾದ, ಅಸ್ತ್ರಜ್ಞನಾದ ಅರ್ಜುನನು ಅವರ ಅಸ್ತ್ರಗಳನ್ನು ದಿವ್ಯಾಸ್ತ್ರಗಳಿಂದ ನಿರೋಧಿಸಿ ಸಮಗ್ರದ ಆಕಾಶವನ್ನೇ ಬಾಣಗಳಿಂದ ಮುಚ್ಚಿದನು.

ತೇಷಾಂ ಬಾಣಾನ್ ಮಹಾಬಾಹುರ್ವಿಸೃಷ್ಟಾನ್ ಸಂಧಿತಾನಪಿ ।
ಚಿಚ್ಛೇದ ನಿಶಿತೈರ್ಬಾಣೈಃ ಶರಾಸೀಂಶ್ಚ ಧನೂಂಷಿ ಚ ॥೧೫॥

ಮಹಾಬಾಹುವಾದ ಅರ್ಜುನನು ಅವರು ಪ್ರಯೋಗಿಸಿದ ಬಾಣಗಳನ್ನು, ಧನುಸ್ಸಿನಲ್ಲಿ ಹೂಡಿದ ಬಾಣಗಳನ್ನು, ಧನುಸ್ಸುಗಳನ್ನು ಮತ್ತು ಖಡ್ಗಗಳನ್ನು ಹರಿತವಾದ ಬಾಣಗಳಿಂದ ಕತ್ತರಿಸಿದನು.

ಯುಗಾನೀಷಾ ರಥಾದೀಂಶ್ಚ ಯಂತ್ರಾಣಿ ವಿವಿಧಾನಿ ಚ ।
ಅಜಿಘಾಂಸುಶ್ಚರನ್ ಪಾರ್ಥಶ್ಚಿಚ್ಛೇದ ನಿಶಿತೈಃ ಶರೈಃ ॥೧೬॥

ಅರ್ಜುನನು ಯಾವ ಸೈನಿಕರಿಗೂ ಹಿಂಸೆಯಾಗದಂತೆ ಅವರ ರಥಗಳ ನೊಗಗಳನ್ನು, ನಿಶಾದಂಡಗಳನ್ನು (ಮೂಕಿಗಳನ್ನು) ವಿವಿಧವಾದ ಯಂತ್ರಗಳನ್ನು ತನ್ನ ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿದನು.

ನಿರ್ಧನುಷ್ಕಾನ್ ವಿಕವಚಾನ್ ವಿರಥಾಂಶ್ಚ ಮಹಾರಥಾನ್ ।
ಕೃತ್ವಾ ಪಾರ್ಥಃ ಪ್ರಿಯಾಂ ಪ್ರೀತಃ ಪ್ರೇಕ್ಷ್ಯತಾಮಿತ್ಯದರ್ಶಯತ್ ॥೧೭॥

ಅರ್ಜುನನು ಆ ಮಹಾರಥರಾದ ಸೈನಿಕರನ್ನು ಧನುಸ್ಸು ಮತ್ತು ಕವಚದಿಂದ ರಹಿತರನ್ನಾಗಿ ಮಾಡಿ ಹಾಗೆಯೇ ರಥಹೀನರನ್ನಾಗಿ ಮಾಡಿ ಸಂತೋಷಗೊಂಡು ತನ್ನ ಪ್ರಿಯೆಯನ್ನು ಕುರಿತು ನೋಡು ಎಂದು ತೋರಿಸಿದನು.

ಸಾ ದೃಷ್ಟ್ವಾ ಮಹದಾಶ್ಚರ್ಯಂ ಸುಭದ್ರಾ ಪಾರ್ಥಮಬ್ರವೀತ್ ।
ಆವಾಪ್ತಾರ್ಥಾऽಸ್ಮಿ ಭದ್ರಂ ತೇ ಯಾಹಿ ಪಾರ್ಥ ಯಥಾಸುಖಮ್ ॥

ಅವಳು ಆ ಮಹದಾಶ್ಚರ್ಯವನ್ನು ನೋಡಿ ಅರ್ಜುನನನ್ನು ಕುರಿತು ಅರ್ಜುನನೇ, ನಾನು ಕೃತಕೃತ್ಯಳಾಗಿದ್ದೇನೆ. ನಿನಗೆ ಮಂಗಳವಾಗಲಿ ಸುಖವಾಗಿ ಮುಂದೆಹೋಗು ಎಂದು ಹೇಳಿದಳು.

ವೈಶಂಪಾಯನಃ

ಸಂಸಕ್ತಂ ಪಾಂಡುಪುತ್ರೇಣ ಸಮೀಕ್ಷ್ಯ ವಿಪೃಥುರ್ಬಲಮ್ ।
ತ್ವರಮಾಣೋಽಭಿನಿಷ್ಕಮ್ಯ ಸ್ಥೀಯತಾಮಿತ್ಯಭಾಷತ ॥೧೯॥

ವಿಪೃಥುವು ತನ್ನ ಸೈನ್ಯವು ಅರ್ಜುನನ ಜೊತೆಯಲ್ಲಿ ಸಂಸಕ್ತವಾದುದನ್ನು ನೋಡಿ ಬೇಗ ಹೊರಗೆ ಬಂದು ತನ್ನ ಸೈನ್ಯಕ್ಕೆ ನಿಲ್ಲಿ ಎಂದು ಹೇಳಿದನು.

ತತ್ತು ಸೇನಾಪತೇರ್ವಾಕ್ಯಂ ನಾತ್ಯವರ್ತಂತ ಯಾದವಾಃ ।
ಸಾಗರೇ ಮಾರುತೋದ್ಧೂತಾ ವೇಲಾಮಿವ ಮಹೋರ್ಮಯಃ ॥೨೦॥

ಸಾಗರದಲ್ಲಿ ವಾಯು ಎಬ್ಬಿಸಿದ ಮಹಾಅಲೆಗಳು ತೀರವನ್ನು ಮೀರದಿರುವಂತೆ ಸೇನಾಪತಿಯ ಆ ಆಜ್ಞೆಯನ್ನು ಯಾದವಸೈನಿಕರು ಮೀರಲಿಲ್ಲ.

ತತೋ ರಥವರಾತ್ ತೂರ್ಣಮವರುಹ್ಯ ನರರ್ಷಭಃ ।
ಅಭಿಗಮ್ಯ ನರವ್ಯಾಘ್ರಂ ಪ್ರಹೃಷ್ಟಃ ಪರಿಷಸ್ವಜೇ ॥೨೧॥

ಆಗ ಪುರುಷಶ್ರೇಷ್ಠನಾದ ವಿಪೃಥು ಬೇಗ ತನ್ನ ಶ್ರೇಷ್ಠವಾದ ರಥದಿಂದ ಇಳಿದು ಅರ್ಜುನನಿಗೆ ಎದುರಾಗಿ ಬಂದು ಆ ನರವ್ಯಾಘ್ರನನ್ನು ಸಂತೋಷದಿಂದ ಆಲಿಂಗಿಸಿದನು.

ಸೋಽಬ್ರವೀತ್ ಪಾರ್ಥಮಾಸಾದ್ಯ ದೀರ್ಘಕಾಲಮಿದಂ ತವ ।
ನಿವಾಸಮಭಿಜಾನಾಮಿ ಶಂಖಚಕ್ರಗದಾಧರಾತ್ ॥೨೨॥

ಅವನು ಅರ್ಜುನನ್ನು ಸಮೀಪಿಸಿ ನಿನ್ನ ಈ ನಿವಾಸವನ್ನು ಕೃಷ್ಣನಿಂದ ನಾನು ಬಹುಕಾಲದಿಂದಲೂ ತಿಳಿದಿದ್ದೇನೆ ಎಂದು ಹೇಳಿದನು.

ನ ಚಾಸ್ಯವಿದಿತಂ ಕಿಂಚಿದ್ ಯದ್ಯದಾಚರಿತಂ ತ್ವಯಾ ।
ಸುಭದ್ರಾಸಂಪ್ರಯೋಗೇಣ ಪ್ರೀತಸ್ತವ ಜನಾರ್ದನಃ ॥೨೩॥

ನೀನು ಮಾಡಿದ ಎಲ್ಲಾ ಕ್ರಿಯೆಗಳೂ ನನಗೆ ತಿಳಿದಿವೆ. ಯಾವುದೂ ಅಜ್ಞಾತವಲ್ಲ. ಸುಭದ್ರೆಯ ಸಮಾಗಮದಿಂದ ಕೃಷ್ಣನು ನಿನ್ನಲ್ಲಿ ಪ್ರೀತನಾಗಿದ್ದಾನೆ.

ಪ್ರಾಪ್ತಸ್ಯ ಯತಿಲಿಂಗೇನ ದ್ವಾರಕಾಂ ತು ಧನಂಜಯ ।
ವಿಸೃಷ್ಟಾ ಸರ್ವವೃಷ್ಣೀನಾಮೃಷಭೇಣ ಚ ಸೋದರಾ ॥೨೪॥

ಧನಂಜಯನೇ, ನೀನು ಯತಿವೇಷವನ್ನು ಧರಿಸಿ ದ್ವಾರಕೆಗೆ ಬಂದಾಗ ಸರ್ವವೃಷ್ಣಿಗಳಲ್ಲಿ ಶ್ರೇಷ್ಠನಾದ ಕೃಷ್ಣನೇ ತನ್ನ ತಂಗಿಯನ್ನು ನಿನ್ನ ಸೇವೆಗೆ ನಿಯೋಜಿಸಿದನು.

ತ್ವಮಿಮಾಂ ವೀರ ದಶಾರ್ಹೀಂ ಶಚೀಮಿವ ಶಚೀಪತಿಃ ।
ಭಕ್ತಾಂ ಗುಣವತೀಂ ಭದ್ರಾಂ ಸದಾ ಸತ್ಕರ್ತುಮರ್ಹಸಿ ॥೨೫॥

ವೀರನೇ, ನೀನು ದಾಶಾರ್ಹ ಕನ್ಯೆಯಾದ, ಗುಣವಂತಳಾದ, ನಿನ್ನಲ್ಲಿ ಅನುರಕ್ತಳಾದ ಸುಭದ್ರೆಯನ್ನು, ಇಂದ್ರನು ಶಚಿಯನ್ನು ಸತ್ಕರಿಸಿದಂತೆ ಯಾವಾಗಲೂ ಸತ್ಕರಿಸಬೇಕು.

ಬಂಧುರ್ಭವ ಸುಭದ್ರಾಯಾ ಗತಿಶ್ಚ ತ್ವಂ ಧನಂಜಯ ।
ಬಂಧುಮಾನಸಿ ರಾಮೇಣ ಮಹೇಂದ್ರಾವರಜೇನ ಚ ॥೨೬॥

ಧನಂಜಯನೇ, ನೀನು ಬಲರಾಮನನ್ನು ಮತ್ತು ಮಹೇಂದ್ರನ ತಮ್ಮನಾದ ಕೃಷ್ಣನನ್ನು ಹಿತರನ್ನಾಗಿ ಪಡೆದು ಬಂಧುಗಳಿಂದ ಕೂಡಿದವನಾಗಿದ್ದೀಯೆ. ಹಾಗೆಯೇ ನೀನು ಸುಭದ್ರೆಗೆ ಬಂಧುವೂ, ಗತಿಯೂ ಆಗಬೇಕು.

ಮಾಮೇವ ಹಿ ಸದಾऽಕಾರ್ಷೀನ್ಮಂತ್ರಿಣಂ ಮಧುಸೂದನಃ ।
ಅಂತರೇಣ ಸುಭದ್ರಾಂ ಚ ತ್ವಾಂ ಚ ವಕ್ತುಂ ಧನಂಜಯ ॥೨೭॥

ಧನಂಜಯನೇ, ಮಧುಸೂದನನು ನಿನ್ನನ್ನೂ ಮತ್ತು ಸುಭದ್ರೆಯನ್ನೂ ಮಧ್ಯಮಾರ್ಗದಲ್ಲಿ ನಿಲ್ಲಿಸಿ ಮಾತನಾಡಲು ನನ್ನನ್ನೇ ಯಾವಾಗಲೂ ಮಂತ್ರಿಯಾಗಿ ನಿಯೋಜಿಸಿದನು.

ಇಮಂ ರಥವರಂ ದಿವ್ಯಂ ಸರ್ವಶಾಸ್ತ್ರಸಮನ್ವಿತಮ್ ।
ಇದಮೇವಾನುಯಾತ್ರಂ ಚ ನಿರ್ದಿಶ್ಯ ಗದಪೂರ್ವಜಃ ।
ಅಂತರ್ದ್ವೀಪಂ ತದಾ ವೀರ ಯಾತೋ ವೃಷ್ಣಿಸುಖಾವಹಃ ॥೨೮॥

ಎಲೈ ವೀರನೇ, ವೃಷ್ಣಿಗಳಿಗೆ ಸುಖಪ್ರದನಾದ ಕೃಷ್ಣನು ಸರ್ವಶಸ್ತ್ರಸಮನ್ವಿತವಾದ ದಿವ್ಯವಾದ ಇದೇ ಶ್ರೇಷ್ಠ ರಥವನ್ನು, ಇದೇ ಪರಿಜನಸಮೂಹವನ್ನು ನಿರ್ದೇಶ ಮಾಡಿ ಗದನ ಅಣ್ಣನಾದ ಅವನು ಅಂತರ್ದ್ವೀಪಕ್ಕೆ ಹೋದನು.

ದೀರ್ಘಕಾಲಾವರುದ್ಧಂ ತ್ವಾಂ ಸಂಪ್ರಾಪ್ತಂ ಪ್ರಿಯಯಾ ಸಹ ।
ಪಶ್ಯಂತು ಭ್ರಾತರಸ್ತತ್ರ ವಜ್ರಪಾಣಿಮಿವಾಮರಾಃ ॥೨೯॥

ಧೀರ್ಘಕಾಲ ದೂರದಲ್ಲಿದ್ದು ಪ್ರಿಯೆಯ ಜೊತೆಯಲ್ಲಿ ಬಂದ ನಿನ್ನನ್ನು ನಿನ್ನ ಅಣ್ಣತಮ್ಮಂದಿರು ಇಂದ್ರಪ್ರಸ್ಥದಲ್ಲಿ ದೇವತೆಗಳು ಇಂದ್ರನನ್ನು ನೋಡಿದಂತೆ ನೋಡಲಿ.

ಆಗತೇ ತು ದಶಾರ್ಹಾಣಾಮೃಷಭೇ ಶಾರ್ಙ್ಗಧನ್ವನಿ ।
ಭದ್ರಾಮನುಗಮಿಷ್ಯಂತಿ ರತ್ನಾನಿ ಚ ವಸೂನಿ ಚ ॥೩೦॥

ದಶಾರ್ಹರ ನಾಯಕನಾದ ಸಾರಂಗಧಾರಿಯಾದ ಕೃಷ್ಣನು ಹಿಂದಿರುಗಿ ಬಂದ ಮೇಲೆ ರತ್ನಗಳೂ ಮತ್ತು ಧನಗಳೂ ಸುಭದ್ರೆಯ ಹಿಂದೆ ಬರಲಿವೆ.

ಅರಿಷ್ಟಂ ಗಚ್ಛ ಪಂಥಾನಂ ಸುಖೀ ಭವ ಧನಂಜಯ ।
ನಷ್ಟಶೋಕೈರ್ವಿಶೋಕಸ್ಯ ಸುಹೃದ್ಭಿಃ ಸಂಗಮೋऽಸ್ತು ತೇ ॥೩೧॥

ಧನಂಜಯನೇ, ಕ್ಷೇಮದಿಂದ ಪ್ರಯಾಣ ಮಾಡು, ಸುಖವನ್ನು ಹೊಂದು. ಶೋಕರಹಿತರಾದ ಬಂಧುಗಳ ಜೊತೆಯಲ್ಲಿ ಶೋಕರಹಿತನಾದ ನಿನಗೆ ಸಮಾಗಮವುಂಟಾಗಲಿ.

ತತೋ ವಿಪೃಥುಮಾಮಂತ್ರ್ಯ ಪಾರ್ಥಃ ಪ್ರೀತೋऽಭಿವಾದ್ಯ ಚ ।
ಕೃಷ್ಣಸ್ಯ ಮತಮಾಸ್ಥಾಯ ಕೃಷ್ಣಸ್ಯ ರಥಮಾಸ್ಥಿತಃ ।
ಪೂರ್ವಮೇವ ತು ಪಾರ್ಥಾಯ ಕೃಷ್ಣೇನ ವಿನಿಯೋಜಿತಮ್ ॥೩೨॥

ಅನಂತರ ಅರ್ಜುನನು ಸಂತೋಷದಿಂದ ವಿಪೃಥುವಿಗೆ ನಮಸ್ಕಾರವನ್ನು ಮಾಡಿ ಅವನ ಅನುಮತಿಯನ್ನು ಪಡೆದು, ಕೃಷ್ಣನು ತನಗಾಗಿ ಮೊದಲೇ ಸಿದ್ಧಪಡಿಸಿದ್ದ ಕೃಷ್ಣರಥವನ್ನೇರಿ ಕೃಷ್ಣನ ಮನಸ್ಸಿನ ಅಭಿಪ್ರಾಯದಂತೆ ಮುಂದೆ ನಡೆದನು.

ಸರ್ವರತ್ನಸುಸಂಪೂರ್ಣಂ ಸರ್ವಭೋಗಸಮಾನ್ವಿತಮ್ ।
ರಥೇನ ಕಾಂಚನಾಂಗೇನ ಕಲ್ಪಿತೇನ ಯಥಾವಿಧಿ ॥೩೩॥

ಶೈಬ್ಯಸುಗ್ರೀವಯುಕ್ತೇನ ಕಿಂಕಿಣೀಜಾಲಮಾಲಿನಾ ।
ಸರ್ವಶಸ್ತ್ರೋಪಪನ್ನೇನ ಜೀಮೂತರವನಾದಿನಾ ॥೩೪॥

ಜ್ವಲಿತಾಗ್ನಿಪ್ರಕಾಶೇನ ದ್ವಿಷತಾಂ ಹರ್ಷಘಾತಿನಾ ।
ಸನ್ನದ್ಧಃ ಕವಚೀ ಖಡ್ಗೀ ಬದ್ಧಗೋಧಾಂಗುಲಿತ್ರವಾನ್ ॥೩೫॥

ಗುಪ್ತಃ ಸೇನಾನುಯಾತ್ರೇಣ ರಥಮಾರೋಪ್ಯ ಮಾಧವೀಮ್ ।
ರಥೇನಾಕಾಶಗೇನೇವ ಪ್ರಯಯೌ ಸ್ವಪುರಂ ಪ್ರತಿ ॥೩೬॥

ಅರ್ಜುನನು ಸರ್ವರತ್ನಸಂಪೂರ್ಣವಾದ, ಸರ್ವಭೋಗ ಸಮನ್ವಿತವಾದ, ಸುವರ್ಣಮಯವಾದ, ಶಾಸ್ತ್ರೋಕ್ತವಿಧಿಯಿಂದ ನಿರ್ಮಿತವಾದ ಕಿಂಕಿಣೀ ಮಾಲೆಗಳಿಂದ ಅಲಂಕೃತವಾದ ಸರ್ವಶಸ್ತ್ರಗಳಿಂದ ಕೂಡಿದ ಮೇಘಗರ್ಜನೆಯಂತೆ ಘೋಷವನ್ನು ಹೊಂದಿದ ಅಗ್ನಿಯ ಪ್ರಕಾಶದಂತೆ ಹೊಳೆಯುವ, ಶತ್ರುಗಳ ಸಂತೋಷವನ್ನು ನಾಶಮಾಡುವ, ಶೈಬ್ಯ ಸುಗ್ರೀವ ಅಶ್ವಗಳನ್ನು ಹೂಡಿದ ರಥದಲ್ಲಿ, ಕವಚವನ್ನು ಧರಿಸಿ, ಖಡ್ಗವನ್ನು ಹಿಡಿದು ಅಂಗುಲಿ ತ್ರಾಣಗಳನ್ನು ಧರಿಸಿ ಅಲ್ಪ ಸೇನೆಯಿಂದ ಹಿಂಬಾಲಿಸಲ್ಪಟ್ಟು, ಸುಭದ್ರೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಆಕಾಶ ಮಾರ್ಗದಲ್ಲಿ ರಥದಲ್ಲಿ ಹೋಗುವಂತೆ ಪ್ರಯಾಣ ಮಾಡಿ ತನ್ನ ಪಟ್ಟಣಕ್ಕೆ ಹಿಂದಿರುಗಿದನು.

ಹ್ರಿಯಮಾಣಾಂ ತು ತಾಂ ದೃಷ್ಟ್ವಾ ಸುಭದ್ರಾಂ ಸೈನಿಕೋ ಜನಃ ।
ವ್ಯಾಕ್ರೋಶತ್ ಪ್ರಾದ್ರವತ್ ಸರ್ವೇ ದ್ವಾರಕಾಮಭಿತಃ ಪುರೀಮ್ ॥೩೭॥

ಸುಭದ್ರೆಯು ಅಪಹರಿಸಲ್ಪಡುವುದನ್ನು ನೋಡಿದ ಸೈನಿಕ ಜನರೆಲ್ಲರೂ ದ್ವಾರಕಾ ಪಟ್ಟಣದ ಎಲ್ಲ ಕಡೆಗಳಿಂದ ಕಿರಿಚುತ್ತಾ ದ್ವಾರಕಾ ಪಟ್ಟಣದ ಸಭೆಗೆ ಓಡಿಬಂದರು.

ತೇ ಸಮಾಸಾದ್ಯ ಸಹಿತಾಃ ಸುಧರ್ಮಾಮಭಿತಃ ಪುರೀಮ್ ।
ಸಭಾಪಾಲಸ್ಯ ತತ್ ಸರ್ವಮಾಚಖ್ಯುಃ ಪಾರ್ಥವಿಕ್ರಮಮ್ ॥೩೮॥

ಅವರು ಎಲ್ಲ ಕಡೆಗಳಿಂದಲೂ ಒಟ್ಟಿಗೆ ಓಡಿಬಂದು ಸುಧರ್ಮಾ ಸಭೆಯನ್ನು ತಲುಪಿ ಸಭಾಪಾಲಕರಿಗೆ ಅರ್ಜುನನ ವಿಕ್ರಮವನ್ನೆಲ್ಲಾ ವಿವರಿಸಿದರು.

ತೇಷಾಂ ಶ್ರುತ್ವಾ ಸಭಾಪಾಲೋ ಭೇರೀಂ ಸನ್ನಾಹಯತ್ ತದಾ ।
ಸಮಾಜಘ್ನೇ ಮಹಾಘೋಷಾಂ ಜಾಂಬೂನದಪರಿಷ್ಕೃತಾಮ್ ॥೩೯॥

ಅವರ ಮಾತುಗಳನ್ನು ಕೇಳಿದ ಸಭಾಪಾಲಕನು ಸುವರ್ಣಾಲಂಕೃತವಾದ ಮಹಾಘೋಷವುಳ್ಳ ಭೇರಿಯನ್ನು ಬಾರಿಸಿದನು.

ಕ್ಷೋಭಿತಾಸ್ತೇನ ಶಬ್ದೇನ ಭೋಜವೃಷ್ಣ್ಯಂಧಕಾಸ್ತದಾ ।
ಅಂತರ್ದ್ವಿಪಾತ್ ಸಮುತ್ಪೇತುಃ ಸಹಸಾ ಸಹಿತಾಸ್ತದಾ ।
ಅನ್ನಪಾನಮಪಾಹಾಯ ಸಮಾಪೇತುಃ ಸಮಂತತಃ ॥೪೨॥

ಆ ಶಬ್ದವನ್ನು ಕೇಳಿ ಕ್ಷೋಭೆಗೊಂಡ ಭೋಜರೂ, ವೃಷ್ಣಿಗಳೂ ಮತ್ತು ಅಂಧಕರೂ ತಕ್ಷಣದಲ್ಲಿಯೇ ಅಂತರ್ದ್ವೀಪದಿಂದ ಅಲ್ಲಿಗೆ ಬಂದರು. ಅನ್ನಪಾನಗಳನ್ನು ತೊರೆದು ಅವರು ಎಲ್ಲಕಡೆಗಳಿಂದಲೂ ಅಲ್ಲಿಗೆ ಶೀಘ್ರವಾಗಿ ಬಂದರು.

ತತೋ ಜಾಂಬೂನದಾಂಗಾನಿ ಪರಾರ್ಘ್ಯಾಸ್ತರಣಾನಿ ಚ ।
ಮಣಿವಿದ್ರುಮಚಿತ್ರಾಣಿ ಜ್ವಲಿತಾಗ್ನಿಪ್ರಭಾಣಿ ಚ ॥೪೩॥

ಭೇಜಿರೇ ಪುರುಷವ್ಯಾಘ್ರಾ ವೃಷ್ಣ್ಯಂಧಕಮಹಾರಥಾಃ
ಸಿಂಹಾಸನಾನಿ ಶತಶೋ ಧಿಷ್ಣ್ಯಾನೀವ ಹುತಾಶನಾಃ ॥೪೪॥

ಅನಂತರ, ಪುರುಷವ್ಯಾಘ್ರರಾದ ವೃಷ್ಣ್ಯಂಧಕ ಮಹಾರಥರು ಸುವರ್ಣಮಯವಾದ ಬೆಲೆಬಾಳುವ ಹೊದಿಕೆಗಳಿಂದ ಕೂಡಿದ ಮಣಿಗಳಿಂದಲೂ, ಹವಳಗಳಿಂದಲೂ ಅಲಂಕರಿಸಿದ ಅಗ್ನಿಜ್ವಾಲೆಯಂತೆ ಬೆಳಗುವ ಶ್ರೇಷ್ಠವಾದ ಸಿಂಹಾಸನಗಳಲ್ಲಿ ತಮ್ಮತಮ್ಮ ಸ್ಥಾನಗಳಲ್ಲಿ ಜ್ವಲಿಸುವ ಅಗ್ನಿಗಳಂತೆ ಜ್ವಲಿಸುತ್ತಾ ನೂರಾರು ಸಂಖ್ಯೆಯಲ್ಲಿ ಕುಳಿತರು.

ತೇಷಾಂ ಸಮುಪವಿಷ್ಟಾನಾಂ ದೇವಾನಾಮುಪಸಂಗಮೇ ।
ಆಚಖ್ಯೌ ಚೇಷ್ಟಿತಂ ಜಿಷ್ಣೋಃ ಸಭಾಪಾಲಃ ಸಹಾನುಗಃ ॥೪೫॥

ದೇವತೆಗಳಂತಿದ್ದ ಅವರೆಲ್ಲರೂ ಕುಳಿತುಕೊಂಡ ಮೇಲೆ ಸಭಾಪಾಲನು ತನ್ನ ಅನುಚರರೊಂದಿಗೆ ಅರ್ಜುನನು ಮಾಡಿದ ಎಲ್ಲಾ ಚೇಷ್ಟೆಗಳನ್ನೂ ವಿವರಿಸಿದನು.

ತಚ್ಛ್ರುತ್ವಾ ವೃಷ್ಣಿವೀರಾಸ್ತೇ ಮದರಕ್ತಾಂತಲೋಚನಾಃ ।
ಅಮೃಷ್ಯಮಾಣಾಃ ಪಾರ್ಥಸ್ಯ ಸಮುತ್ಪೇತುರ್ಮಹಾಬಲಾಃ ॥೪೬॥

ಅದನ್ನು ಕೇಳಿದ ಆ ಮಹಾಬಲಿಷ್ಠರಾದ ವೃಷ್ಣಿವೀರರು ಅರ್ಜುನನನ್ನು ಸಹಿಸದೆ ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ತಮ್ಮ ಆಸನದಿಂದ ಎದ್ದರು.

ಯೋಜಯಿತ್ವಾ ರಥಾನಾಶು ನಾಗಾನಶ್ವಾಂಸ್ತಥೈವ ಚ ।
ಕವಚಾನಾಹರನ್ ಕ್ಷಿಪ್ರಂ ಪ್ರಾಸಾನಾಹರತೇತಿ ಚ ।
ಧನೂಂಷಿ ಚ ಮಹಾರ್ಹಾಣಿ ಕವಚಾನಿ ಬೃಹಂತಿ ಚ ॥೪೭॥

ತಮ್ಮ ರಥಗಳನ್ನು ಬೇಗ ಹೂಡಿ ಗಜಗಳನ್ನೂ, ಅಶ್ವಗಳನ್ನೂ ತೆಗೆದುಕೊಂಡು ಬಂದು ಕವಚವನ್ನು ಧರಿಸಿ ಬೇಗ ಪ್ರಾಸಗಳನ್ನು, ಧನುಸ್ಸುಗಳನ್ನು, ಬೆಲೆಬಾಳುವ ಕವಚಗಳನ್ನು ತೆದುಕೊಂಡು ಬನ್ನಿ ಎಂದು ಹೇಳಿದರು.

ಸೂತಾನ್ ವಿಚುಕ್ರುಶುಃ ಕೇಚಿದ್ ರಥಾನ್ ಯೋಜಯತೇತಿ ಚ ।
ಸ್ವಯಂ ಚ ತುರಗಾನ್ ಕೇಚಿತ್ ನಿನ್ಯುರ್ಹೇಮವಿಭೂಷಿತಾನ್ ॥೪೮॥

ರಥೇಷ್ವಾನೀಯಮಾನೇಷು ಕವಚೇಷು ಧ್ವಜೇಷು ಚ ।
ಅಭಿಕ್ರಂದೋ ನೃವೀರಾಣಾಂ ತದಾಸೀತ್ ತುಮುಲೋ ಮಹಾನ್ ॥

ಕೆಲವರು ತಮ್ಮ ಸೂತರನ್ನು ಕುರಿತು ಬೇಗ ರಥಗಳನ್ನು ಹೂಡಿ ಎಂದು ಕಿರುಚುತ್ತಿದ್ದರು. ಇನ್ನು ಕೆಲವರು ಸುವರ್ಣಾಲಂಕೃತವಾದ ತುರಗಗಳನ್ನು ತಾವೇ ರಥದ ಬಳಿ ತೆಗೆದುಕೊಂಡು ಹೋಗುತ್ತಿದ್ದರು. ರಥಗಳನ್ನು ತರಲ್ಪಡುತ್ತಿರಲು ಹಾಗೆಯೇ ವೀರರಾದ ಯಾದವರು ಕವಚಗಳನ್ನು ಧರಿಸಿ ಧ್ವಜಗಳನ್ನು ಎತ್ತುತ್ತಿರಲು ಆಗ ದೊಡ್ಡ ತುಮುಲ ನಾದವು ಉಂಟಾಯಿತು.

ವನಮಾಲೀ ತತಃ ಕ್ಷೀಬಃ ಕೈಲಾಸಶಿಖರೋಪಮಃ ।
ನೀಲವಾಸಾ ಮದೋತ್ಕಿಪ್ತ ಇದಂ ವಚನಮಬ್ರವೀತ್ ॥೫೦॥

ಆಗ ವನಮಾಲಿಯೂ, ನೀಲವಸ್ತ್ರವನ್ನು ಧರಿಸಿದವನೂ, ಮತ್ತನೂ, ಕೈಲಾಸಶಿಖರದಂತೆ ಉನ್ನತನೂ ಆಗಿದ್ದ ಬಲರಾಮನು ಹೀಗೆ ಮಾತನಾಡಿದನು.

ಕಿಮಿದಂ ಚಾಕೃತಪ್ರಜ್ಞಾಸ್ತೂಷ್ಣೀಂಭೂತೇ ಜನಾರ್ದನೇ ।
ಅಸ್ಯ ಭಾವಮವಿಜ್ಞಾಯ ಸಂಕ್ರುದ್ಧಾ ಮೋಘಗರ್ಜಿತಾಃ ॥೫೧॥

ಮೂರ್ಖರೇ, ಕೃಷ್ಣನು ಸುಮ್ಮನಿರುವಾಗ ಅವನ ಅಭಿಪ್ರಾಯವನ್ನು ತಿಳಿಯದೇ ನೀವು ಏಕೆ ಕ್ರುದ್ಧರಾಗಿ ವ್ಯರ್ಥವಾಗಿ ಗರ್ಜಿಸುತ್ತಿದ್ದೀರಿ?

ಏಷ ತಾವದಭಿಪ್ರಾಯಮಾಖ್ಯಾತು ಮಮ ಯದ್ಧೃದಿ ।
ಯದಸ್ಯ ಸೂಚಿತಂ ಕರ್ತುಂ ತತ್ ಕುರುಧ್ವಮತಂದ್ರಿತಾಃ ॥೫೨॥

ಇವನು ತನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ನನಗೆ ತಿಳಿಸಲಿ, ಅನಂತರ ಅವನು ಮಾಡಬೇಕೆಂದು ಸೂಚಿಸುವ ಕಾರ್ಯವನ್ನು ಆಲಸ್ಯವಿಲ್ಲದೆ ಮಾಡಿ.

ತತಸ್ತೇ ವಚನಂ ಶ್ರುತ್ವಾ ಗ್ರಾಹ್ಯರೂಪಂ ಹಲಾಯುಧಾತ್ ।
ತೂಷ್ಣೀಂಭೂತಾಸ್ತತಃ ಸರ್ವೇ ಸಾಧುಸಾಧ್ವಿತಿ ಚಾಬ್ರುವನ್ ॥೫೩॥

ಆಗ ಅವರು ಬಲರಾಮನ ಯುಕ್ತವಾದ ಮಾತುಗಳನ್ನು ಕೇಳಿ ಒಳ್ಳೆಯದು ಒಳ್ಳೆಯದು ಎಂದು ಹೇಳುತ್ತಾ ಎಲ್ಲರೂ ಸುಮ್ಮನಾದರು.

ಸಮಾ ವಾಚೋ ನಿಶಮ್ಯೈವ ಬಲದೇವಸ್ಯ ಧೀಮತಃ ।
ಪುನರೇವ ಸಭಾಮಧ್ಯೇ ಸರ್ವೇ ತೇ ಸಮುಪಾವಿಶನ್ ॥೫೪॥

ಮೇಧಾವಿಯಾದ ಬಲರಾಮನ ಸಮಾಧಾನದ ಮಾತುಗಳನ್ನು ಕೇಳಿ ಅವರೆಲ್ಲರೂ ಪುನಃ ಸಭೆಯಲ್ಲಿ ಕುಳಿತುಕೊಂಡರು.

ತತೋಽಬ್ರವೀತ್ ಕಾಮಪಾಲೋ ವಾಸುದೇವಂ ಪರಂತಪಮ್ ।
ತ್ರೈಲೋಕ್ಯನಾಥ ಭೋ ಕೃಷ್ಣ ಭೂತಭವ್ಯಭವಿಷ್ಯವಿತ್ ।
ಕಿಮುವಾಽತ್ರೋಪವಿಷ್ಟೋಽಸಿ ಪ್ರೇಕ್ಷಮಾಣೋ ಜನಾಕುಲಮ್ ॥೫೫॥

ಅನಂತರ ಬಲರಾಮನು ಪರಂತಪನಾದ ಕೃಷ್ಣನನ್ನು ಕುರಿತು ತ್ರೈಲೋಕ್ಯನಾಥನೇ, ಭೂತಭವ್ಯಭವಿಷ್ಯತ್ತನ್ನು ತಿಳಿದಿರುವ ಕೃಷ್ಣನೇ, ಈ ಜನರ ವ್ಯಾಕುಲತೆಯನ್ನು ನೋಡುತ್ತಾ ಏಕೆ ಸುಮ್ಮನೆ ಇಲ್ಲಿ ಕುಳಿತಿದ್ದೀಯೆ?

ಸತೃತಸ್ತ್ವ ತೃತೇ ಪಾರ್ಥಃ ಸರ್ವೈರಸ್ಮಾಭಿರಚ್ಯುತ ।
ನ ಚ ಸೋಽರ್ಹತಿ ತಾಂ ಪೂಜಾಂ ದುರ್ಬುದ್ಧಿಃ ಕುಲಪಾಂಸನಃ ।
ಕೋ ಹಿ ತತ್ರೈವ ಭುಕ್ತ್ವಾನ್ನಂ ಭಾಜನಂ ಭೇತ್ತುಮರ್ಹತಿ ॥೫೬॥

ಅಚ್ಯುತನೇ, ನಿನ್ನ ಸಲುವಾಗಿ ನಾವೆಲ್ಲರೂ ಅರ್ಜುನನನ್ನು ಸತ್ಕರಿಸಿದೆವು. ಕುಲಪಾಂಸನನಾದ ಆ ದುರ್ಬುದ್ಧಿಯು ನಮ್ಮ ಪೂಜೆಗೆ ಅರ್ಹನಲ್ಲ. ಯಾವನು ತಾನೆ ಅಲ್ಲಿಯೇ ಊಟವನ್ನು ಮಾಡಿ ಅಲ್ಲಿಯೇ ಪಾತ್ರೆಯನ್ನು ಒಡೆಯುತ್ತಾನೆ.

ಮನ್ಯಮಾನಃ ಕುಲೇ ಜಾತಮಾತ್ಮಾನಂ ಪುರುಷಃ ಕ್ವಚಿತ್ ।
ಈಪ್ಸಮಾನಶ್ಚ ಸಂಬಂಧಂ ಕೃತಪೂರ್ವಂ ಚ ಮಾನಯನ್ ।
ಕೋ ಹಿ ನಾಮ ಭವೇದರ್ಥೀ ಸಾಹಸೇನ ಚರೇದ್ ಬುಧಃ ॥೫೭॥

ಯಾವ ಮನುಷ್ಯನು ಒಳ್ಳೆಕುಲದಲ್ಲಿ ತಾನು ಜನಿಸಿದವನೆಂದು ತಿಳಿದು ಒಳ್ಳೆಕುಲದ ಸಂಬಂಧವನ್ನು ಅಪೇಕ್ಷಿಸಿ ಹಿಂದೆ ಮಾಡಿದ ಉಪಕಾರವನ್ನು ಗೌರವಿಸಿ ತನ್ನ ಕಾರ್ಯವನ್ನು ಸಾಧಿಸಬೇಕಾದ ವಿವೇಕಿಯು ಇಂತಹ ಸಾಹಸದ ಕೆಲಸವನ್ನು ಮಾಡುತ್ತಾನೆ.

ಸೋಽವಮತ್ಯ ಚ ನಾಮಾಸ್ಮಾನವಮತ್ಯ ಚ ಕೇಶವಮ್ ।
ಪ್ರಸಹ್ಯ ಹೃತವಾನದ್ಯ ಸುಭದ್ರಾಂ ಮೃತ್ಯುಮಾತ್ಮನಃ ॥೬೦॥

ಅವನು ಕೃಷ್ಣನನ್ನು ಅವಮಾನ ಮಾಡಿ, ನಮ್ಮೆಲ್ಲರನ್ನೂ ಅವಮಾನ ಮಾಡಿ ತನಗೆ ಮೃತ್ಯುರೂಪಳಾದ ಸುಭದ್ರೆಯನ್ನು ಈ ದಿನ ಬಲಾತ್ಕಾರದಿಂದ ಅಪಹರಿಸಿದ್ದಾನೆ.

ಕಥಂ ಹಿ ಶಿರಸೋ ಮಧ್ಯೇ ಕೃತಂ ತೇನ ಪದಂ ಮಮ ।
ತ್ವಯಾ ಚೇದಭ್ಯನುಜ್ಞಾತೋ ಮರ್ಷಯಿಷ್ಯಾಮಿ ಮಾಧವ ।
ನ ಮರ್ಷಯಿಷ್ಯೇ ಗೋವಿಂದ ಪಾದಸ್ಪರ್ಶಮಿವೋರಗಃ ॥೬೧॥

ಅವನು ಹೇಗೆ ನನ್ನ ತಲೆಯ ಮೇಲೆ ಕಾಲಿಡಲು ಸಾಧ್ಯ ? ಮಾಧವನೇ, ನಿನ್ನ ಸಮ್ಮತಿಯಿದ್ದರೆ ನಾನು ಸುಮ್ಮನಾಗುವೆನು. ಗೋವಿಂದನೇ, ಇಲ್ಲದಿದ್ದರೆ ಸರ್ಪವು ಪಾದಸ್ಪರ್ಶವನ್ನು ಸಹಿಸದಿರುವಂತೆ ನಾನು ಸಹಿಸುವುದಿಲ್ಲ.

ಅದ್ಯ ನಿಷ್ಕೌರವಾಮೇಕಃ ಕರಿಷ್ಯಾಮಿ ವಸುಂಧರಾಮ್ ।
ನ ಹಿ ಮೇ ಮರ್ಷಣೀಯೋಽಯಮರ್ಜುನಸ್ಯ ವ್ಯತಿಕ್ರಮಃ ।
ತಮಹಂ ಭ್ರಾತೃಭಿಃ ಸಾರ್ಧಂ ನಿಹನ್ಮಿ ಕುಲಪಾಂಸನಮ್ ॥೬೨॥

ಈ ದಿನ ನಾನೊಬ್ಬನೇ ಭೂಮಿಯ ಮೇಲೆ ಕೌರವರ ಕುಲವು ಇಲ್ಲದಂತೆ ಮಾಡುತ್ತೇನೆ. ಅರ್ಜುನನ ಈ ಅಪಚಾರವನ್ನು ನಾನು ಕ್ಷಮಿಸಲು ಸಾಧ್ಯವಿಲ್ಲ. ಕುಲಪಾಂಸನನಾದ ಅವನನ್ನು ಅವನ ಸಹೋದರರ ಜೊತೆಯಲ್ಲಿ ಕೊಲ್ಲುತ್ತೇನೆ.

ವೈಶಂಪಾಯನಃ

ರೌಹಿಣೇಯಂ ಗರ್ಜಮಾನಂ ಮೇಘದುಂದುಭಿನಿಸ್ವನಮ್ ।
ಅನ್ವಪದ್ಯಂತ ತೇ ಸರ್ವೇ ಭೋಜವೃಷ್ಣ್ಯಂಧಕಾಸ್ತಥಾ ॥೬೩॥

ಮೇಘಸ್ವನದಂತೆ, ದುಂದುಭಿಯ ಸ್ವನದಂತೆ ಗರ್ಜಿಸುತ್ತಿದ್ದ ಬಲರಾಮನನ್ನು ಎಲ್ಲಾ ಭೋಜರೂ, ವೃಷ್ಣಿಗಳೂ ಮತ್ತು ಅಂಧಕರೂ ಅನುಮೋದಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಚತುರ್ವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಸುಭದ್ರಾಹರಣಪರ್ವಣಿ ಪಂಚಮೋऽಧ್ಯಾಯಃ ॥

॥ ಸುಭದ್ರಾಹರಣಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಸುಭದ್ರಾಹರಣಪರ್ವವು ಮುಗಿಯಿತು.

★★★★★

೧೭. ಹರಣಹಾರಿಕಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಕೃಷ್ಣೋಽಪಿ ಸರ್ವಂ ವಿಪೃಥೋರ್ನಿಶಮ್ಯ
ಪ್ರಾಪ್ತಃ ಸುಧರ್ಮಾಂ ವಿಮನಾ ಇವಾಸೀತ್ ।
ಅವಾಙ್ಮುಖಸ್ತತ್ರ ಯದುಪ್ರವೀರಾಃ
ಪ್ರದ್ಯುಮ್ನಾದ್ಯಾ ಆಹುರುಚ್ಚೈರ್ನದಂತಃ ॥೧೯೮॥

ಶ್ರೀಕೃಷ್ಣನೂ ವಿಪೃಥುವಿನಿಂದ ಎಲ್ಲವನ್ನೂ ಕೇಳಿ ಸುಧರ್ಮ ಸಭೆಗೆ ಬಂದ. ಬಲು ಬೇಸರಗೊಂಡವನಂತೆ ಮುಖತಗ್ಗಿಸಿ ಕುಳಿತ. ಪ್ರದ್ಯುಮ್ನ ಮುಂತಾದ ಯಾದವ ವೀರರು ದೊಡ್ಡ ಧ್ವನಿಯಿಂದ ಗರ್ಜಿಸುತ್ತ ನುಡಿದರು.

ಮಾಯಾವ್ರತಂ ತಂ ವಿನಿಹತ್ಯ ಶೀಘ್ರಂ
ವಯಂ ಸುಭದ್ರಾಮಾನಯಾಮ ಕ್ಷಣೇನ ।
ಇತ್ಯುಕ್ತವಾಕ್ಯಾನವದದ್ ಬಲಸ್ತಾನ್
ಕೃಷ್ಣಾಜ್ಞಯಾ ಯಾಂತು ನ ಸ್ವೇಚ್ಛಯೈವ ॥೧೯೯॥

'ಕಪಟವನ್ನೆ ವ್ರತವಾಗಿಟ್ಟುಕೊಂಡಿರುವ ಆ ಅರ್ಜುನನನ್ನು ನಾವು ಕೊಂದು ಬೇಗನೆ ಕ್ಷಣದಲ್ಲಿ ಸುಭದ್ರೆಯನ್ನು ತರೋಣ' ಎಂದರು. ಅವರು ಹೀಗೆ ಹೇಳಿದಾಗ ಬಲರಾಮ ಅವರಿಗೆ 'ಕೃಷ್ಣನ ಆಜ್ಞೆಪಡೆದೇ ಹೊರಡಿರಿ. ಸ್ವೇಚ್ಛೆಯಿಂದಲ್ಲ' ಎಂದ.

ಜ್ಞಾತವ್ಯಮೇತಸ್ಯ ಮತಂ ಪುರಸ್ತಾತ್
ಹರೇರ್ವಿರೋಧೇ ನ ಜಯೋ ಭವೇದ್‌ವಃ ।
ಇತ್ಯುಕ್ತವಾಕ್ಯೇ ಹಲಿನಿ ಸ್ಮ ಸರ್ವೇ
ಪಪ್ರಚ್ಛುರಾನಮ್ಯ ಜನಾರ್ದನಂ ತಂ ॥೨೦೦॥

'ಮೊದಲು ಕೃಷ್ಣನ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಅವನ ಸಮ್ಮತಿ ಇಲ್ಲದಿದ್ದಲ್ಲಿ ನಿಮಗೆ ಕಾರ್ಯಜಯವಾಗುವುದಿಲ್ಲ'. ಹೀಗೆ ಬಲರಾಮ ಹೇಳಿದಾಗ ಎಲ್ಲರೂ ಕೃಷ್ಣನಿಗೆ ನಮಿಸಿ ಕೇಳಿದರು.

ಅಥಾಬ್ರವೀದ್‌ವಾಸುದೇವೋಽಮಿತೌಜಾಃ
ಶೃಣ್ವಂತು ಸರ್ವೇ ವಚನಂ ಮದೀಯಂ ।
ಪುರೈವೋಕ್ತಂ ತನ್ಮಯಾ ಕನ್ಯಕಾಯಾ
ಮಾಯಾಬ್ರತೋನಾರ್ಹತಿ ಸನ್ನಿಧಿಸ್ಥಿತಿಂ ॥೨೦೧॥

ಬಳಿಕ ಅಮಿತಶಕ್ತಿ ಉಳ್ಳ ಕೃಷ್ಣನುಡಿದ, 'ಎಲ್ಲರೂ ನನ್ನ ಮಾತನ್ನು ಕೇಳಿ, ಮೊದಲೆ ನಾನು ಹೇಳಿದ್ದೆ, ಕಪಟ ವ್ರತವನ್ನು ತೊಟ್ಟ ಈ ಯತಿ ಕನ್ಯೆಯ ಬಳಿ ಇರಲು ತಕ್ಕವಲ್ಲ ಎಂದು.

ತಾಂ ಮೇ ವಾಚಂ ನಾಗ್ರಹೀದಗ್ರಜೋಽಯಂ
ಬಹೂನ್ ದೋಷಾನ್ ವ್ಯಾಹರತೋಽಪ್ಯತೋ ಮಯಾ ।
ಅನುಲ್ಲಂಘ್ಯತ್ವಾದಗ್ರಜೋಽನುಪ್ರವೃತ್ತಃ
ಕನ್ಯಾಗೃಹೇ ವಾಸನೇ ಕೂಟಬದ್ಧೇಃ ॥೨೦೨॥

'ನಾನು ಅದರಲ್ಲಿ ಬಹಳ ತೊಂದರೆಗಳಿವೆ ಎಂದು ಹೇಳುತ್ತಿದ್ದರೂ ನನ್ನ ಆ ಮಾತನ್ನು ಅಣ್ಣ ಒಪ್ಪಲಿಲ್ಲ. ಅದರಿಂದ ಅಣ್ಣನ ಅಭಿಪ್ರಾಯವನ್ನು ಮೀರಲಾಗದೆಂದು ನಾನು ಕಪಟ ಬುದ್ಧಿಯವನಾದ ಅರ್ಜುನನನ್ನು ಕನ್ಯಾಗೃಹದ ಬಳಿ ಇರಿಸಲು ಮುಂದಾದೆ.

ಅತೀತಶ್ಚಾಯಂ ಕಾರ್ಯಯೋಗೋಽಸಮಕ್ಷಂ
ಹೃತಾ ಕನ್ಯಾ ಏತೋ ನೋಽತ್ರ ಕಾ ಮಾನಹಾನಿಃ ।
ಭೂಯಸ್ತರಾಂ ಮಾನಿನಸ್ತಸ್ಯ ಸಾ ಸ್ಯಾತ್
ಜ್ಞಾತಾ ಚ ವೋ ವಿಪೃಥೋಃ ಪಾರ್ಥತಾಸ್ಯ ॥೨೦೩॥

'ಈಗ ಕಾರ್ಯ ಮಿಂಚಿಹೋಯಿತು. ನಮ್ಮ ಅನುಪಸ್ಥಿತಿಯಲ್ಲಿ ಆತ ಕನ್ಯೆಯನ್ನು ಅಪಹರಿಸಿದ್ದಾನೆ. ಆದರೂ ಅದರಿಂದ ನಮಗೆ ಏನು ಮಾನಹಾನಿಯಾದಂತಾಯಿತು? ಬಹಳ ಅಭಿಮಾನಿಯಾದ ಅವನಿಗೇ ಮಾನಹಾನಿಯಾದೀತು. ಅವನು ಅರ್ಜುನನೆಂಬುದು ವಿಪೃಥುವಿನಿಂದ ನಿಮಗೇ ಗೊತ್ತಾಗಿದೆ.

ದೇಯಾ ಚ ಕನ್ಯಾ ನಾಸ್ತಿ ಪಾರ್ಥೇನ ತುಲ್ಯೋ
ವರೋಽಸ್ಮಾಕಂ ಕೌರವೇಯಶ್ಚ ಪಾರ್ಥಃ ।
ಪೌತ್ರಶ್ಚ ಕೃಷ್ಣಸ್ಯ ಸುಪೂರ್ಣಶಕ್ತೇಃ
ಪೈತೃಶ್ವಸೇಯೋ ವೀರತಮೋ ಗುಣಾಢ್ಯಃ ॥೨೦೪॥

'ಕನ್ಯೆಯನ್ನು ಒಬ್ಬ ವರನಿಗೆ ಕೊಡಲೇಬೇಕು. ನಮಗೆ ಅರ್ಜುನನಂಥ ವರ ಇನ್ನೊಬ್ಬನಿಲ್ಲ. ಆತ ಕುರುಕುಲದವನು. ಪರಿಪೂರ್ಣಶಕ್ತರಾದ ವೇದವ್ಯಾಸರ ಮೊಮ್ಮಗ. ಅಲ್ಲದೇ ನಮ್ಮ ಸೋದರತ್ತೆಯ ಮಗನೂ ಆಗಿದ್ದಾನೆ. ಮಹಾವೀರ, ಒಳ್ಳೆಯ ಗುಣಶಾಲಿಯೂ ಕೂಡ.

ಅಥೋಽಸ್ಮಾಭಿಃ ಸ್ವಯಮೇವಾಹರತ್ ಸ
ಶಕ್ರಾತ್ಮಜೋ ನಾತ್ರ ನಃ ಕಾರ್ಯಹಾನಿಃ ।
ಅನುದ್ಯಮ್ಯೈನಂ ಯದಿ ಚ ಸ್ಯಾತ್ ಪರಾಜಯೋ
ಹಾನಿರ್ದೃಢಂ ಯಶಸೋ ವೋ ಭವೇತ ॥೨೦೫॥

'ಇಂಥ ಅರ್ಜುನನನ್ನು ನಾನೇ ಕೇಳಬೇಕಾಗಿತ್ತು. ಈಗ ಅವನು ತಾನಾಗಿ ಬಂದು ಕನ್ಯೆಯನ್ನು ಅಪಹರಿಸಿದ್ದಾನೆ. ಇದರಲ್ಲಿ ನಮಗೆ ಕಾರ್ಯಹಾನಿ ಏನಾಗಲಿಲ್ಲ. ಇನ್ನು ಅವನನ್ನು ಬೆನ್ನಟ್ಟಿ ಹೋಗಿ ಒಂದುವೇಳೆ ನೀವೆ ಪರಾಜಿತರಾದಿರೆಂದರೆ ನಿಮ್ಮ ಯಶಸ್ಸಿಗೆ ನಿಶ್ಚಯವಾಗಿ ಕುಂದು ಬಂದೀತು.

ಜಿತ್ವಾ ಯದ್ಯೇನಂ ಕನ್ಯಕಾ ಚಾಹೃತಾ ಚೇತ್
ಪರಾಮೃಷ್ಟಾಂ ನೈವ ಕಶ್ಚಿದ್ವಿಲಿಪ್ಸೇತ್ ।
ಅತೋ ನ ಮೇ ರೋಚತೇ ವೋಽನುಯಾನ-
ಮಿತ್ಯೂಚಿವಾನಾಸ ತೂಷ್ಣೀಂ ಪರೇಶಃ ॥೨೦೬॥

'ಅರ್ಜುನನನ್ನು ಗೆದ್ದು ಕನ್ಯೆಯನ್ನು ನೀವು ತಿರುಗಿ ತಂದರೂ ಇನ್ನೊಬ್ಬರು ಸ್ಪರ್ಶಿಸಿದ ಆ ಕನ್ಯೆಯನ್ನು ಯಾರೊಬ್ಬನೂ ಮದುವೆಯಾಗಲು ಬಯಸಲಾರ. ಅದರಿಂದ ಅವನನ್ನು ನೀವು ಬೆನ್ನಟ್ಟಿ ಹೋಗುವುದು ನನಗೆ ಸರಿಕಾಣುವುದಿಲ್ಲ'. ಹೀಗೆ ಹೇಳಿ ಕೃಷ್ಣಸುಮ್ಮನಾದ.

ಶ್ರುತ್ವಾ ಹಲೀ ಕೃಷ್ಣವಾಕ್ಯಂ ಬಭಾಷೇ
ಮಾ ಯಾತ ಚಿತ್ತಂ ವಿದಿತಂ ಮಮಾಸ್ಯ ।
ಅಸ್ಯಾನುವೃತ್ತಿರ್ವಿಜಯಾಯ ನಃ ಸ್ಯಾತ್
ಶುಭಾಯ ಶಾಂತ್ಯೈ ಪರತಶ್ಚ ಮುಕ್ತ್ಯೈ ॥೨೦೭॥

ಬಲರಾಮ ಕೃಷ್ಣನ ಮಾತನ್ನು ಕೇಳಿ ಯಾದವ ವೀರರಿಗೆ ನುಡಿದ 'ನೀವು ಹೋಗಬೇಡಿರಿ. ಕೃಷ್ಣನ ಅಭಿಪ್ರಾಯ ನನಗೆ ತಿಳಿಯಿತು. ಅವನು ಹೇಳಿದಂತೆ ನಡೆಯುವುದರಲ್ಲಿಯೆ ನಮಗೆ ವಿಜಯವಿದೆ. ಮಂಗಳ, ಸಕಲಾರಿಷ್ಟ ಶಾಂತಿ ಪರಲೋಕದಲ್ಲಿ ಮುಕ್ತಿ ಎಲ್ಲವೂ ಇದೆ'.

ತತೋಽರ್ಜುನೋ ಯತ್ರ ತಿಷ್ಠೇನ್ನ ಕಶ್ಚಿತ್
ಪರಾಜವಂ ಯಾತಿ ಕೃಷ್ಣಾಜ್ಞಯೈವ ।
ರಥೇನ ತೇನೈವ ಯಯೌ ಸಭಾರ್ಯಃ
ಶಕ್ರಪ್ರಸ್ಥಂ ಚಾವಿಶದ್ ಭ್ರಾತೃಗುಪ್ತಂ ॥೨೦೮॥

ಅರ್ಜುನನೆಲ್ಲಿರುವನೋ ಅಲ್ಲಿ ಯಾರೊಬ್ಬನಿಗೂ ಪರಾಭವವೆ ಇಲ್ಲವೆಂದು ವೇದವ್ಯಾಸರ ಶಾಸನವೆ ಇದೆ. ಅಂಥ ಅರ್ಜುನ ಕೃಷ್ಣ ರಥದಿಂದಲೆ ಪ್ರಯಾಣ ಮಾಡಿದ. ಸೋದರರಿಂದ ಪಾಲಿತವಾಗುತ್ತಿದ್ದ ಇಂದ್ರಪ್ರಸ್ಥವನ್ನು ಪತ್ನೀಸಮೇತನಾಗಿ ಪ್ರವೇಶಿಸಿದ.

★ ★ ★ ★

ಇನ್ನೂರ ಇಪ್ಪತ್ತೈದನೆಯ ಅಧ್ಯಾಯ

(ಕೃಷ್ಣನ ಹಿತೋಪದೇಶದಿಂದ ಬಲರಾಮಾದಿಗಳ ಸಮಾಧಾನ, ಅರ್ಜುನನನ್ನು ಹಿಂಬಾಲಿಸಿದ ಯಾದವರ ಪ್ರತಿನಿವೃತ್ತಿ, ನೀಳದೇಶವನ್ನು ಅತಿಕ್ರಮಿಸಿ ಅರ್ಜುನನ ಕುರುದೇಶ ಪ್ರಾಪ್ತಿ.)

ವೈಶಂಪಾಯನಃ

ಉಕ್ತವಂತೋ ಯದಾ ವಾಕ್ಯಮಸಕೃತ್ ಸರ್ವವೃಷ್ಣಯಃ ।
ತತೋಽಬ್ರವೀದ್ ವಾಸುದೇವೋ ವಾಕ್ಯಂ ಧರ್ಮಾರ್ಥಸಂಹಿತಮ್ ॥

ಎಲ್ಲ ವೃಷ್ಣಿಗಳೂ ಅನೇಕ ಬಾರಿ ಹೀಗೆ ಮಾತನಾಡಿದ ಮೇಲೆ ವಾಸುದೇವನು ಧರ್ಮಾರ್ಥಯುಕ್ತವಾದ ಮಾತುಗಳನ್ನು ಆಡಿದನು.

ಮಯೋಕ್ತಂ ನ ಶ್ರುತಂ ಪೂರ್ವಂ ಸಹಿತೈಃ ಸರ್ವಯಾದವೈಃ ।
ಅತಿಕ್ರಾಂತಮತಿಕ್ರಾಂತಂ ನ ನಿವರ್ತತಿ ಕರ್ಹಿ ಚಿತ್ ॥೨॥

ನಾನು ಮೊದಲು ಹೇಳಿದ ಮಾತುಗಳನ್ನು ಯಾವ ಯಾದವರೂ ಕೇಳಲಿಲ್ಲ. ಆದದ್ದು ಆಗಿಹೋಯಿತು, ಕಳೆದು ಹೋದದನ್ನು ಹಿಂದಿರುಗಿಸಲು ಸಾಧ್ಯವಿಲ್ಲ.

ಶ್ರುಣುಧ್ವಂ ಸಹಿತಾಃ ಸರ್ವೇ ಮಮ ವಾಕ್ಯಂ ಸಹೇತುಕಮ್ ।
ನಾವಮಾನಂ ಕುಲಸ್ಯಾಸ್ಯ ಗುಡಾಕೇಶಃ ಪ್ರಯುಕ್ತವಾನ್ ॥೩॥

ನನ್ನ ಯುಕ್ತಿಯುಕ್ತವಾದ ಮಾತುಗಳನ್ನು ಎಲ್ಲರೂ ಜೊತೆಯಲ್ಲಿ ಕೇಳಿ. ಅರ್ಜುನನು ನಮ್ಮ ವಂಶಕ್ಕೆ ಯಾವ ಅವಮಾನವನ್ನೂ ಮಾಡಿಲ್ಲ.

ಸಮ್ಮಾನೋಽಭ್ಯಧಿಕಸ್ತೇನ ಪ್ರಯುಕ್ತೋಽಯಂ ನ ಸಂಶಯಃ ।
ಅರ್ಥಲುಬ್ಧಾನ್ ನ ವಃ ಪಾರ್ಥೋ ಮನ್ಯತೇ ಸಾತ್ವತಾನ್ ಸದಾ ॥೪॥

ಅದಕ್ಕೆ ಬದಲಾಗಿ ಅವನು ನಿಸ್ಸಂಶಯವಾಗಿ ನಮಗೆ ಹೆಚ್ಚಿನ ಸನ್ಮಾನವನ್ನೇ ಮಾಡಿದ್ದಾನೆಂದು ನನ್ನ ಅಭಿಪ್ರಾಯ. ಅರ್ಜುನನು ನಮ್ಮನ್ನು ಎಂದೂ ಧನದ ಲೋಭವುಳ್ಳವರು ಎಂದು ತಿಳಿದಿಲ್ಲ. (ಹಾಗೆ ತಿಳಿದಿದ್ದರೆ ಅವನು ಅಧಿಕವಾದ

ಕನ್ಯಾಶುಲ್ಕವನ್ನು ಕೊಟ್ಟು ಸುಭದ್ರೆಯನ್ನು ಕರೆದುಕೊಂಡು ಹೋಗಿರುತ್ತಿದ್ದನು. ಹಾಗೆ ತಿಳಿಯದಿರುವುದು ಮೊದಲನೆಯ ಸನ್ಮಾನ)

ಸ್ವಯಂವರಮನಾಧೃಷ್ಯಂ ಮನ್ಯತೇ ಚಾಪಿ ಪಾಂಡವಃ ।
ಪ್ರದಾನಮಪಿ ಕನ್ಯಾಯಾಃ ಪಶುವತ್ ಕೋ ನು ಮಂಸ್ಯತಿ ॥೫॥

ಅರ್ಜುನನು ಸ್ವಯಂವರವನ್ನು ಅನಾಧೃಷ್ಯವೆಂದು ತಿಳಿದಿಲ್ಲ. (ಸ್ವಯಂವರದಲ್ಲಿ ಏನಾದರೂ ಪಣವನ್ನು ಒಡ್ಡಿದರೆ ಆ ಪಣವನ್ನು ಪೂರೈಸುವ ವೀರರು ಯಾದವರಲ್ಲೂ ಅನೇಕರಿರುವುದರಿಂದ ತನಗೆ ಸುಭದ್ರೆಯು ದೊರೆಯದಿರಬಹುದೆಂದು ತಿಳಿದಿದ್ದಾನೆ. ಇದು ನಮಗೆ ನೀಡಿದ ಎರಡನೆಯ ಸನ್ಮಾನ) ಪಶುದಾನವನ್ನು ಮಾಡಿದಂತೆ ಕನ್ಯಾದಾನವನ್ನು ಯಾವ ವೀರನು ಮನ್ನಿಸುತ್ತಾನೆ?

ವಿಕ್ರಿಯಂ ಚಾಪ್ಯಪತ್ಯಸ್ಯ ಕಃ ಕುರ್ಯಾತ್ ಪುರುಷೋ ಭುವಿ ।
ಏತಾನ್ ದೋಷಾಂಸ್ತು ಕೌಂತೇಯೋ ದೃಷ್ಟವಾನಿತಿ ಮೇ ಮತಿಃ ॥೬॥

ಭೂಮಿಯಲ್ಲಿ ಯಾವ ಪುರುಷನು ತನ್ನ ಮಕ್ಕಳ ವಿಕ್ರಯವನ್ನು ಮಾಡುತ್ತಾನೆ? (ಯಾದವರು ತಮ್ಮ ಪುತ್ರಿಯ ವಿಕ್ರಯವನ್ನು ಮಾಡುವುದಿಲ್ಲವೆಂದು ಅವನು ತಿಳಿದಿರುವುದು ನಮಗೆ ಮೂರನೆಯ ಸನ್ಮಾನ) ಕುಂತೀಪುತ್ರನಾದ ಅರ್ಜುನನು ಈ ದೋಷಗಳನ್ನು ಗಮನಿಸಿದ್ದಾನೆಂದು ನನ್ನ ಅಭಿಪ್ರಾಯ.

ಕ್ಷತ್ರಿಯಾಣಾಂ ತು ವೀರ್ಯೇಣ ಪ್ರಶಸ್ತಂ ಹರಣಂ ಬಲಾತ್ ।
ಅತಃ ಪ್ರಸಹ್ಯ ಹೃತವಾನ್ ಕನ್ಯಾಂ ಧರ್ಮೇಣ ಪಾಂಡವಃ ॥೭॥

ಕ್ಷತ್ರಿಯರಿಗೆ ತಮ್ಮ ಪರಾಕ್ರಮದಿಂದ ಬಲಾತ್ಕಾರದಿಂದ ಕನ್ಯೆಯನ್ನು ಹರಣಮಾಡುವುದು ಪ್ರಶಸ್ತವಾದುದು. ಆದ್ದರಿಂದ ಅರ್ಜುನನು ಬಲಪ್ರಯೋಗವನ್ನು ಮಾಡಿ ಧರ್ಮದಿಂದಲೇ ಕನ್ಯೆಯನ್ನು ಅಪಹರಿಸಿದ್ದಾನೆ.

ಉಚಿತಶ್ಚೈವ ಸಂಬಂಧಃ ಸುಭದ್ರಾ ಚ ಯಶಸ್ವಿನೀ ।
ಏತಸ್ಯಾಃ ಸದೃಶಃ ಪಾರ್ಥಃ ಪ್ರಸಹ್ಯ ಹೃತವಾನುತ ॥೮॥

ಈ ಸಂಬಂಧವು ನಮಗೆ ಉಚಿತವೇ ಆಗಿದೆ. ಯಶಸ್ವಿನಿಯಾದ ಸುಭದ್ರೆಗೆ ಅರ್ಜುನನು ಸದೃಶನಾದ ಪತಿ. ಅವಳನ್ನು ಅವನು ತನ್ನ ಪರಾಕ್ರಮದಿಂದ ಅಪಹರಿಸಿದ್ದಾನೆ.

ಭರತಸ್ಯಾನ್ವಯೇ ಜಾತಂ ಶಂತನೋಃ ಪೌತ್ರಮದ್ಯ ವೈ ।
ಕುಂತಿಭೋಜಾತ್ಮಜಾಪುತ್ರಂ ಕೋ ಬುಭೂಷೇನ್ನಚಾರ್ಜುನಮ್ ॥೯॥

ಭರತಕುಲದಲ್ಲಿ ಜನಿಸಿದ ಶಂತನುವಿನ ಪೌತ್ರನಾದ, ಕುಂತಿಭೋಜನ ಮಗಳಾದ ಕುಂತಿಯ ಪುತ್ರನಾದ ಅರ್ಜುನನನ್ನು ಈ ದಿನ ಹೊಂದಿ ಯಾರು ತಾನೆ ಶೋಭಿಸುವುದಿಲ್ಲ?

ನ ಚ ಪಶ್ಯಾಮಿ ಯಃ ಪಾರ್ಥಂ ವಿಕ್ರಮೇಣ ಪರಾಜಯೇತ್ ।
ಅಪಿ ಸರ್ವೇಷು ಲೋಕೇಷು ಸದೇವಮನುಜೇಷ್ವಪಿ ॥೧೦॥

ಅಲ್ಲದೇ, ದೇವಾಸುರಮನುಷ್ಯಸಹಿತವಾದ ಎಲ್ಲಾ ಲೋಕಗಳಲ್ಲಿ ಅರ್ಜುನನನ್ನು ತನ್ನ ಪರಾಕ್ರಮದಿಂದ ಸೋಲಿಸುವ ಒಬ್ಬ ವ್ಯಕ್ತಿಯನ್ನೂ ನಾನು ಕಾಣುತ್ತಿಲ್ಲ.

ಸ ಚ ನಾಮ ರಥಸ್ತಾದೃಙ್ ಮದೀಯಾಸ್ತೇ ಚ ವಾಜಿನಃ ।
ಮಮ ಶಸ್ತ್ರಾ ವಿಶೇಷೇಣ ತೂಣೇ ಚಾಕ್ಷಯಸಾಯಕೌ ।
ಯೋದ್ಧಾ ಪಾರ್ಥಶ್ಚ ಶೀಘ್ರಾಸ್ತ್ರಃ ಕೋ ನು ತೇನ ಸಮೋ ಭವೇತ್ ॥

ಆ ನನ್ನ ರಥವು ಅಂತಹ ಮಹಿಮೆವುಳ್ಳದ್ದು. ಅಶ್ವಗಳೂ ನನ್ನವೇ, ಶಸ್ತ್ರಗಳೂ ವಿಶೇಷವಾಗಿ ನನ್ನವೇ, ಅಕ್ಷಯಬಾಣಗಳುಳ್ಳ ಬತ್ತಳಿಕೆಗಳಿವೆ, ಶೀಘ್ರಾಸ್ತ್ರನಾದ ಅರ್ಜುನನು ಯುದ್ಧಮಾಡುವವನು. ಅವನಿಗೆ ಸಮಾನರು ಯಾರಿದ್ದಾರೆ?

ತಮನುದ್ಯಮ್ಯ ಸಾಂತ್ವೇನ ಪರಮೇಣ ಧನಂಜಯಮ್ ।
ಹೃಷ್ಟಾಃ ಸರ್ವೇ ನಿವರ್ತಧ್ವಂ ಮಮೈಷಾ ಪರಮಾ ಮತಿಃ ॥೧೨॥

ಅರ್ಜುನನನ್ನು ಪರಮಸಮಾಧಾನದಿಂದ ಹಿಂಬಾಲಿಸಿ ಅವನನ್ನು ಸಂತೋಷಪಡಿಸಿ ನೀವೂ ಸಂತುಷ್ಟರಾಗಿ ಹಿಂದಿರುಗಿ. ಇದು ನನ್ನ ಶ್ರೇಷ್ಠವಾದ ಅಭಿಪ್ರಾಯ.

ಯದಿ ನಿರ್ಜಿತ್ಯ ವಃ ಪಾರ್ಥೋ ಬಲಾದ್ ಗಚ್ಛೇತ್ ಸ್ವಕಂ ಪುರಮ್।
ವಿನಶ್ಯೇದ್ ವೋ ಯಶಃ ಸದ್ಯೋ ನ ತು ಸಾಂತ್ವೇ ಪರಾಜಯಃ ।
ಪಿತೃಷ್ವಸಾಯಾಃ ಪುತ್ರೋ ಮೇ ಸಂಬಂಧಂ ನಾರ್ಹತಿ ದ್ವಿಷಾಮ್ ॥೧೩॥

ಒಂದು ಪಕ್ಷ ಅರ್ಜುನನು ನಿಮ್ಮನ್ನು ಗೆದ್ದು ತನ್ನ ಪಟ್ಟಣಕ್ಕೆ ಹೋದರೆ ನಿಮ್ಮ ಕೀರ್ತಿಯು ತಕ್ಷಣದಲ್ಲಿಯೇ ನಾಶವನ್ನು ಹೊಂದುತ್ತದೆ. ಸಮಾಧಾನದಿಂದ ರಾಜಿ ಮಾಡಿಕೊಂಡರೆ ಅದೆಂದೂ ಪರಾಜಯವಲ್ಲ. ನನ್ನ ಸೋದರತ್ತೆಯ ಪುತ್ರನಾದ ಅರ್ಜುನನು ನನ್ನ ಶತ್ರುಗಳ ಸಂಬಂಧಕ್ಕೆ ಯೋಗ್ಯನಲ್ಲವೇ ಹೊರತು, ನಮ್ಮ ಸಂಬಂಧಕ್ಕೆ ಯೋಗ್ಯನಲ್ಲ ಎಂಬ ಮಾತು ಎಂದಿಗೂ ಇಲ್ಲ.

ವೈಶಂಪಾಯನಃ

ತಚ್ಛ್ರುತ್ವಾ ವಾಸುದೇವಸ್ಯ ತಥಾ ಕರ್ತುಂ ಜನಾಧಿಪ ।
ಉದ್ಯೋಗಂ ಕೃತವಂತಸ್ತೇ ಭೇರೀಂ ಸನ್ನಾದ್ಯ ಯಾದವಾಃ ॥೧೪॥

ಜನಾಧಿಪನೇ, ವಾಸುದೇವನ ಆ ಮಾತುಗಳನ್ನು ಕೇಳಿ ಅದರಂತೆ ನಡೆದುಕೊಳ್ಳಲು ನಿರ್ಧರಿಸಿ ಯಾದವರೆಲ್ಲರೂ ಭೇರಿನಾದವನ್ನು ಮಾಡಿ ತಮ್ಮ ಉದ್ಯೋಗವನ್ನು ಉಪಕ್ರಮಿಸಿದರು.

ಅರ್ಜುನಸ್ತು ತದಾ ಶ್ರುತ್ವಾ ಭೇರೀಸನ್ನಾದನಂ ಮಹತ್ ।
ಕೌಂತೇಯಸ್ತ್ವರಮಾಣಸ್ತು ಸುಭದ್ರಾಮಭ್ಯಭಾಷತ ॥೧೫॥

ಅರ್ಜುನನಾದರೋ ಭೇರಿಗಳ ಈ ದೊಡ್ಡಧ್ವನಿಯನ್ನು ಕೇಳಿ ತ್ವರೆಮಾಡುತ್ತಾ ಸುಭದ್ರೆಗೆ ಹೇಳಿದನು.

ಅರ್ಜುನಃ

ಆಯಾಂತಿ ವೃಷ್ಣಯಃ ಸರ್ವೇ ಸಸುಹೃಜ್ಜನಬಾಂಧವಾಃ ।
ತ್ವದರ್ಥಂ ಯೋದ್ಧುಕಾಮಾಸ್ತೇ ಮದರಕ್ತಾಂತಲೋಚನಾಃ ॥೧೬॥

ನಿನ್ನ ಸುಹೃಜನರೂ ಮತ್ತು ಬಾಂಧವರಾದ ಎಲ್ಲಾ ವೃಷ್ಣಿಗಳೂ ಬರುತ್ತಿದ್ದಾರೆ. ಮದದಿಂದ ಕೆಂಪಾದ ಕಣ್ಣುಳ್ಳ ಅವರು ನಿನ್ನ ಸಲುವಾಗಿ ಯುದ್ಧಮಾಡಲು ಬಯಸಿದ್ದಾರೆ.

ಪ್ರಮದಾನಶುಚೀನ್ ಮೂಢಾನ್ ಸುರಾಮತ್ತಾನ್ ನರಾಧಮಾನ್ ।
ವಮನಂ ಪಾನಶಾಟೀಂಸ್ತಾನ್ ಕರಿಷ್ಯಾಮಿ ಶರೋತ್ತಮೈಃ ।
ಉತಾಹೋ ವಾ ಮದೋನ್ಮತ್ತಾನ್ ನಯಿಷ್ಯಾಮಿ ಯಮಕ್ಷಯಮ್ ॥

ನಾನು ನನ್ನ ಶ್ರೇಷ್ಠವಾದ ಬಾಣಗಳಿಂದ ಪ್ರಮತ್ತರೂ, ಅಶುಚಿಗಳೂ ಮೂಢರೂ, ಸುರಾಪಾನಮತ್ತರೂ, ಸುರೆಯ ಹಂಡೆಯಂತಿರುವವರೂ ಆದ ಆ ನರಾಧಮರನ್ನು ಸುರೆಯನ್ನು ಕಕ್ಕುವಂತೆ ಮಾಡುವೆನು, ಇಲ್ಲದಿದ್ದರೆ ಮದೋನ್ಮತ್ತರಾದ ಅವರನ್ನು ಯಮಲೋಕಕ್ಕೆ ಕಳುಹಿಸುವೆನು.

ವೈಶಂಪಾಯನಃ

ಏವಮುಕ್ತ್ವಾ ಪ್ರಿಯಾಂ ಪಾರ್ಥೋ ನ್ಯವರ್ತತ ಮಹಾಬಲಃ ।
ನಿವರ್ತಮಾನಂ ದೃಷ್ಟ್ವೈವ ಸುಭದ್ರಾ ತ್ರಸ್ತತಾಂ ಗತಾ ।
ಏವಂ ಮಾ ವದ ಪಾರ್ಥೇತಿ ಪಾದಯೋಃ ಪತಿತಾ ತದಾ ॥೧೮॥

ಮಹಾಬಲನಾದ ಅರ್ಜುನನು ತನ್ನ ಪ್ರಿಯೆಗೆ ಹೀಗೆ ಹೇಳಿ ಹಿಂದಿರುಗಿ ನಿಂತನು. ಹಿಂದಿರುಗಿದ ಅರ್ಜುನನನ್ನು ನೋಡಿದ ಕೂಡಲೇ ಸುಭದ್ರೆಯು ಭಯಗ್ರಸ್ತಳಾದಳು. ಅರ್ಜುನ, ಹೀಗೆ ಮಾಡಬೇಡ ಎಂದು ಹೇಳುತ್ತಾ ಅವನ ಪಾದಗಳ ಮೇಲೆ ಬಿದ್ದಳು.

ಸುಭದ್ರಾ

ಸುಭದ್ರಾ ತು ಕಲಿರ್ಜಾತಾ ವೃಷ್ಣೀನಾಂ ನಿಧನಾಯ ಚ ।
ಏವಂ ಬ್ರುವಂತಃ ಪೌರಾಸ್ತೇ ಜನವಾದಂ ಜನಾಃ ಪ್ರಭೋ ॥೧೯॥

ಮಮ ಶೋಕಂ ವಿವರ್ಧಂತೇ ತಸ್ಮಾತ್ ಪಾಪಂ ನ ಚಿಂತಯ ।
ಪರಿವಾದಭಯಾನ್ಮುಕ್ತಾ ತ್ವತ್ಪ್ರಸಾದಾದ್ ಭವಾಮ್ಯಹಮ್ ॥೨೦॥

ಪ್ರಭು, ವೃಷ್ಣಿಗಳ ನಿಧನಕ್ಕಾಗಿ ಸುಭದ್ರೆಯು ಕಲಹಬೀಜಳಾದಳು ಎಂಬ ಅಪವಾದವನ್ನು ಪೌರಜನರು ಎಲ್ಲಾ ಕಡೆಯಲ್ಲಿ ಹರಡಿ ನನ್ನ ಶೋಕವನ್ನು ಹೆಚ್ಚಿಸುತ್ತಾರೆ, ಆದ್ದರಿಂದ ಕೆಟ್ಟದ್ದನ್ನು ಯೋಚಿಸಬೇಡ. ನಿನ್ನ ಅನುಗ್ರಹದಿಂದ ನಾನು ಲೋಕಾಪವಾದದಿಂದ ಮುಕ್ತಳಾಗುತ್ತೇನೆ.

ವೈಶಂಪಾಯನಃ

ಏವಮುಕ್ತಸ್ತತಃ ಪಾರ್ಥಃ ಪ್ರಿಯಯಾ ಭದ್ರಯಾ ತದಾ ।
ಗಮನಾಯ ಮತಿಂ ಚಕ್ರೇ ಪಾರ್ಥಃ ಸತ್ಯಪರಾಕ್ರಮಃ ॥೨೧॥

ಪ್ರಿಯೆಯಾದ ಸುಭದ್ರೆಯು ಹೀಗೆ ಹೇಳಿದಾಗ ಸತ್ಯಪರಾಕ್ರಮನಾದ ಪಾರ್ಥನು ಅಲ್ಲಿಂದ ಪುನಃ ಹೊರಡಲು ನಿರ್ಧರಿಸಿದನು.

ಸ್ಮಿತಪೂರ್ವಂ ತದಾऽऽಭಾಷ್ಯ ಪರಿಷ್ವಜ್ಯ ಪ್ರಿಯಾಂ ತದಾ ।
ಉತ್ಥಾಪ್ಯ ಚ ತತಃ ಪಾರ್ಥೋ ಯಾಹಿ ಯಾಹೀತಿ ಸೋऽಬ್ರವೀತ್ ॥

ಅರ್ಜುನನು ತನ್ನ ಪ್ರಿಯೆಯನ್ನು ಎತ್ತಿ ಅವಳನ್ನು ಆಲಿಂಗಿಸಿ ಮುಗುಳ್ನಗೆಯಿಂದ ಮಾತನಾಡಿಸಿ ಹೊರಡು ಹೊರಡು ಎಂದು ಹೇಳಿದನು.

ತತಃ ಸುಭದ್ರಾ ತ್ವರಿತಾ ರಶ್ಮೀನ್ ಸಂಗೃಹ್ಯ ಪಾಣಿನಾ ।
ಚೋದಯಾಮಾಸ ಜವನಾನ್ ಶೀಘ್ರಮಶ್ವಾನ್ ಕೃತತ್ವರಾ ॥೨೩॥

ಆಗ ಸುಭದ್ರೆಯು ಶೀಘ್ರವಾಗಿ ಕಡಿವಾಣವನ್ನು ಹಿಡಿದು ತ್ವರೆಮಾಡಿ ವೇಗವಾಗಿ ಚಲಿಸುವ ಅಶ್ವಗಳನ್ನು ಪ್ರಚೋದಿಸಿದಳು.

ತತಸ್ತು ಕೃತಸನ್ನಾಹಾ ವೃಷ್ಣಿವೀರಾಃ ಸಮಾಹಿತಾಃ ।
ಪ್ರತ್ಯಾನಯಾರ್ಥಂ ಪಾರ್ಥಸ್ಯ ಜವನೈಸ್ತುರಗೋತ್ತಮೈಃ ॥೨೪॥

ಅನಂತರ, ಏಕಾಗ್ರತೆಯಿಂದ ಕೂಡಿದ್ದ ವೃಷ್ಣಿವೀರರು ಅರ್ಜುನನು ಹಿಂದೆ ಕರೆತರಲು ವೇಗವಾಗಿ ಚಲಿಸುವ ಕುದುರೆಗಳನ್ನು ರಥಗಳಿಗೆ ಹೂಡಿ ಹೊರಟರು.

ರಾಜಮಾರ್ಗಮನುಪ್ರಾಪ್ತಾ ದೃಷ್ಟ್ವಾ ಪಾರ್ಥಸ್ಯ ವಿಕ್ರಮಮ್ ।
ಪ್ರಾಸಾದಪಂಕ್ತಿಸ್ತಂಭೇಷು ವೇದಿಕಾಸು ಧ್ವಜೇಷು ಚ ।
ಅರ್ಜುನಸ್ಯ ಶರಾನ್ ದೃಷ್ಟ್ವಾ ವಿಸ್ಮಯಂ ಪರಮಂ ಗತಾಃ ॥೨೫॥

ಅವರು ರಾಜಮಾರ್ಗವನ್ನು ತಲುಪಿ ಪ್ರಾಸಾದಪಂಕ್ತಿಗಳಲ್ಲಿಯೂ, ಕಂಬಗಳಲ್ಲಿಯೂ, ವೇದಿಕೆಗಳಲ್ಲಿಯೂ, ಧ್ವಜಗಳಲ್ಲಿಯೂ ನಾಟಿದ್ದ ಅರ್ಜುನನ ಬಾಣಗಳನ್ನು ನೋಡಿ ಅವನ ವಿಕ್ರಮವನ್ನು ನೆನೆದು ಬಹಳ ವಿಸ್ಮಿತರಾದರು.

ಕೇಶವಸ್ಯ ವಚಸ್ತಥ್ಯಂ ಮನ್ಯಮಾನಾಸ್ತು ಯಾದವಾಃ ।
ಅತೀತ್ಯ ಶೈಲಂ ರೈವತಕಂ ಶ್ರುತ್ವಾ ತು ವಿಪೃಥೋರ್ವಚಃ ॥೨೬॥

ಅರ್ಜುನೇನ ಕೃತಂ ಶ್ರುತ್ವಾ ಗಂತುಕಾಮಾಸ್ತು ವೃಷ್ಣಯಃ ।
ಶ್ರುತ್ವಾ ದೀರ್ಘಗತಂ ಪಾರ್ಥಂ ನ್ಯವರ್ತಂತ ನರಾಧಿಪಾಃ ॥೨೭॥

ಕೃಷ್ಣನ ಮಾತು ಸತ್ಯವೆಂದು ತಿಳಿದ ಯಾದವರು ರೈವತಕಪರ್ವತವನ್ನು ದಾಟಿ ವಿಪೃಥುವಿನ ಮಾತುಗಳನ್ನು ಕೇಳಿ, ಅರ್ಜುನನ ಕೌಶಲದ ಕಾರ್ಯವನ್ನು ಕೇಳಿ ಮುಂದೆ ಪ್ರಯಾಣ ಮಾಡಲು ಬಯಸಿ ಅರ್ಜುನನು ಬಹಳ ದೂರ ಹೋಗಿದ್ದಾನೆ ಎಂಬ ವಾರ್ತೆಯನ್ನು ಕೇಳಿ ಹಿಂದಿರುಗಿದರು.

ಪುರೋದ್ಯಾನಮತಿಕ್ರಮ್ಯ ವಿಶಾಲಂ ಚ ಗಿರಿವ್ರಜಮ್ ।
ಸಾನೂನ್ಯುಜ್ಜಾಯಿನೀಂ ಚೈವ ವನಾನ್ಯುಪವನಾನಿ ಚ ।
ಪುಣ್ಯೇಷ್ವಾನರ್ತರಾಷ್ಟ್ರೇಷು ವಾಪೀಪದ್ಮಸರಾಂಸಿ ಚ ॥೨೮॥

ಪ್ರಾಪ್ಯ ಧೇನುಮತೀತೀರ್ಥಮಶ್ವರೋಧಸರಃ ಪ್ರತಿ ।
ಪ್ರೇಕ್ಷ್ಯವೃತ್ತಸ್ತತಃ ಶೈಲಮಂಬುದಂ ಚ ನಗೋತ್ತಮಮ್ ॥೨೯॥

ಇತ್ತಕಡೆ ಅರ್ಜುನನು ಪುರೋದ್ಯಾನವನ್ನು ದಾಟಿ ವಿಶಾಲವಾದ ಗಿರಿವ್ರಜವನ್ನೂ, ಪರ್ವತಶಿಖರಗಳನ್ನೂ, ವನಉಜ್ಜಯಿನಿಯನ್ನೂ, ವನ ಮತ್ತು ಉಪವನಗಳನ್ನೂ, ಪವಿತ್ರವಾದ ಆರ್ತ ದೇಶವನ್ನೂ, ವಾಪಿಗಳನ್ನೂ, ಪದ್ಮಸರೋವರಗಳನ್ನೂ ದಾಟಿ ಧೇನುಮತಿ ತೀರ್ಥವನ್ನೂ, ಅಶ್ವರೋಧ ಸರೋವರವನ್ನೂ ತಲುಪಿ ಎಲ್ಲವನ್ನೂ ನೋಡಿ ಸಂತುಷ್ಟನಾಗಿ ಅಲ್ಲಿಂದ ಮುಂದೆ ಪರ್ವತಶ್ರೇಷ್ಠವಾದ ಅಂಬುದ ಪರ್ವತದ ಕಡೆಗೆ ಸಾಗಿದನು.

ಆರಾಚ್ಛೃಂಗಮಥಾಸ್ಥಾಯ ತೀರ್ತ್ವಾ ಕಾರವತೀಂ ನದೀಮ್ ।
ಪ್ರಾಪ್ಯ ಸಾಲ್ವೇಯರಾಷ್ಟ್ರಾಣಿ ನಿಷಧಾನಪ್ಯತೀತ್ಯ ಚ ॥೩೦॥

ದೇವಾಪೃಥುಪುರಂ ಪಶ್ಯನ್ ಸರ್ವತಃ ಸುಸಮಾಹಿತಃ ।
ತಮತೀತ್ಯ ಮಹಾಬಾಹುರ್ದೇವಾರಣ್ಯಮಪಶ್ಯತ ॥೩೧॥

ಅನಂತರ, ಶೃಂಗ ಪರ್ವತವನ್ನು ತಲುಪಿ ಕಾರವತಿ ನದಿಯನ್ನು ದಾಟಿ, ಸಾಲ್ವರಾಷ್ಟ್ರಗಳನ್ನೂ, ನಿಷಧರಾಷ್ಟ್ರಗಳನ್ನೂ ದಾಟಿ ದೇವಾಪೃಥು ಪಟ್ಟಣವನ್ನು ನೋಡುತ್ತಾ ಸಮಾಧಾನದಿಂದ ಅದನ್ನು ದಾಟಿ ಮಹಾಬಾಹುವಾದ ಅವನು ದೇವಾರಣ್ಯವನ್ನು ನೋಡಿದನು.

ಪೂಜಯಾಮಾಸುರಾಯಾಂತಂ ದೇವಾರಣ್ಯೇ ಮಹರ್ಷಯಃ ।
ಸ ವನಾನಿ ನದೀಃ ಶೈಲಾನ್ ಗಿರಿಪ್ರಸ್ರವಣಾನಿ ಚ ॥೩೨॥

ಅತೀತ್ಯ ಚ ತದಾ ಪಾರ್ಥಃ ಸುಭದ್ರಾಸಾರಥಿಸ್ತಥಾ ।
ಕೌರವಂ ವಿಷಯಂ ಪ್ರಾಪ್ಯ ವಿಶೋಕಃ ಸಮಪದ್ಯತ ॥೩೩॥

ದೇವಾರಣ್ಯದಲ್ಲಿ ಮಹರ್ಷಿಗಳು ಅಲ್ಲಿಗೆ ಬಂದ ಅರ್ಜುನನನ್ನು ಪೂಜಿಸಿದರು. ಅರ್ಜುನನು ಅಲ್ಲಿಂದ ಹೊರಟು ವನಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ, ಗಿರಿನದಿಗಳನ್ನೂ ದಾಟಿ ಸುಭದ್ರೆಯ ಸಾರಥ್ಯದಲ್ಲಿ ಕುರುದೇಶವನ್ನು ತಲುಪಿ ನಿಶ್ಚಿಂತನಾದನು.

ಸೋದರ್ಯಾಣಾಂ ಮಹಾಬಾಹುಃ ಸಿಂಹಾಶ್ರಯಮಿವಾಶಯಮ್ ।
ಆರಾದುಪವನೋಪೇತಂ ದದರ್ಶಾಪ್ರತಿಮಂ ಪುರಮ್ ॥೩೪॥

ಮಹಾಬಾಹುವಾದ ಅರ್ಜುನನು ಸಿಂಹದ ಗುಹೆಯಂತೆ ತನ್ನ ಸಹೋದರರಿಗೆ ಆಶ್ರಯವಾದ, ಉಪವನಗಳಿಂದ ಕೂಡಿದ ಆ ಅಸದೃಶವಾದ ಪಟ್ಟಣವನ್ನು ದೂರದಿಂದ ನೋಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಹರಣಹಾರಿಕಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸಂಭಾವಿತೋ ಭ್ರಾತೃಭಿಶ್ಚಾತಿತುಷ್ಟೈ-
ರೂಚೇಽಥ ಸರ್ವಂ ತೇಷು ಯಚ್ಚಾತ್ಮವೃತ್ತಂ ।
ಶಾಂತೇಷು ವಾಕ್ಯಾದಾತ್ಮನೋ ಯಾದವೇಷು
ಕೃಷ್ಣೋ ಯುಕ್ತೋ ಹಲಿನಾಗಾಚ್ಚ ಪಾರ್ಥಾನ್ ॥೨೦॥

ಸೋದರರೆಲ್ಲರೂ ಬಲು ಸಂತುಷ್ಟರಾಗಿ ಅರ್ಜುನನನ್ನು ಆದರಿಸಿದರು. ಬಳಿಕ ಅರ್ಜುನ ತನ್ನ ಎಲ್ಲ ವೃತ್ತಾಂತವನ್ನೂ ಬಣ್ಣಿಸಿದ. ಕೃಷ್ಣ ತನ್ನ ಮಾತಿನಿಂದ ಯಾದವರೆಲ್ಲರೂ ಶಾಂತರಾದಾಗ ಬಲರಾಮನೊಂದಿಗೆ ಪಾಂಡವರ ಬಳಿಗೆ ಬಂದ.

★★★★★

ಇನ್ನೂರ ಇಪ್ಪತ್ತಾರನೆಯ ಅಧ್ಯಾಯ

(ಅರ್ಜುನನ ಸ್ವಭವನ ಪ್ರಾಪ್ತಿ, ಗೋಪಾಲಿಕೆ ವೇಷದಿಂದ ಸುಭದ್ರೆಯ ಪ್ರವೇಶ, ಕುಂತಿಯ ಮತ್ತು ದ್ರೌಪದಿಯ ಆಶೀರ್ವಾದ, ಎಲ್ಲರ ಹರ್ಷ.)

ವೈಶಂಪಾಯನಃ

ಕ್ರೋಶಮಾತ್ರೇ ಪುರಸ್ಯಾಸೀದ್ ಗೋಷ್ಠಃ ಪಾರ್ಥಸ್ಯ ಶೋಭನಃ ।
ತತ್ರಾಭಿಯಾತ್ವಾ ಬೀಭತ್ಸುರ್ನಿವಿಷ್ಟೋ ಯದುಕನ್ಯಯಾ ॥೧॥

ಇಂದ್ರಪ್ರಸ್ಥಪಟ್ಟಣದಿಂದ ಒಂದು ಕ್ರೋಶ ದೂರದಲ್ಲಿ ಅರ್ಜುನನ ಶ್ರೇಷ್ಠವಾದ ಕೊಟ್ಟಿಗೆ ಇದ್ದಿತು. ಅರ್ಜುನನು ಸುಭದ್ರೆಯ ಜೊತೆಯಲ್ಲಿ ಹೋಗಿ ಅಲ್ಲಿ ತಂಗಿದನು. (ಒಂದು ಮೈಲು ಕ್ರೋಶ)

ತತಃ ಸುಭದ್ರಾಂ ಸತ್ಕೃತ್ಯ ಪಾರ್ಥೋ ವಚನಮಬ್ರವೀತ್ ।
ಗೋಪಾಲಿಕಾನಾಂ ವೇಷೇಣ ಗಚ್ಛ ತ್ವಂ ವ್ರಜಿನಂ ಪುರಮ್ ॥೨॥

ಅನಂತರ ಅರ್ಜುನನು ಸುಭದ್ರೆಯನ್ನು ಸತ್ಕರಿಸಿ ನೀನು ಗೋಪಾಲಿಕೆ ವೇಷದಿಂದ ವ್ರಜಿನ ಪಟ್ಟಣಕ್ಕೆ ಹೋಗು ಎಂದು ಹೇಳಿದನು.

ವ್ರಜಿನ ಎಂದರೆ ವಕ್ರ. ಕೌರವರು ಮೊದಲು ವಕ್ರವಾದ ವಾಸ್ತುವಿನಿಂದ ನಿರ್ಮಿಸಿದ ಕಾರಣ ಇಂದ್ರಪ್ರಸ್ಥಕ್ಕೆ ವ್ರಜಿನಪುರ ಎಂದು ಹೆಸರು. ಸುತ್ತಲೂ ಗೋಶಾಲೆಗಳಿರುವದರಿಂದಲೂ ಅದು ವ್ರಜಿನಪುರ. ಶತ್ರುಗಳು ಪ್ರವೇಶಿಸದಂತೆ ವಕ್ರವಾದ ಮಾರ್ಗಗಳನ್ನು ಹೊಂದಿರುವುದರಿಂಲೂ ಅದು ವ್ರಜಿನಪುರ. ದುರ್ಜನರಿಗೆ ಸಹಿಸಲು ಅಸಾಧ್ಯವಾಗಿ ವಕ್ರವಾಗಿರುವ ಕಾರಣದಿಂದಲೂ ಅದು ವ್ರಜಿನಪುರ. ನಾನಾ ಸೇವಕ ವ್ರಜವುಳ್ಳ ಧರ್ಮರಾಜನು ನೇತಾರನಾದುದರಿಂದಲೂ ಅದಕ್ಕೆ ವ್ರಜಿನಪುರ ಎಂದು ಹೆಸರು.

ಕಾಮವ್ಯಾಹಾರಿಣೀ ಕೃಷ್ಣಾ ರೋಚತಾಂ ತೇ ವಚೋ ಮಮ ।
ದೃಷ್ಟ್ವಾ ತು ಪರುಷಂ ಬ್ರೂಯಾತ್ ಸಹ ತತ್ರ ಮಯಾ ಗತಾಮ್ ॥೩॥

ದ್ರೌಪದಿಯು ತನ್ನ ಮನಸ್ಸಿಗೆ ಬಂದಂತೆ ಪ್ರಿಯವಾಗಿ ಅಥವಾ ನಿಷ್ಠುರವಾಗಿ ಮಾತನಾಡುವ ಸ್ವಭಾವದವಳು. ನೀನು ನನ್ನ ಮಾತನ್ನು ಕೇಳು. ನೀನು ನನ್ನ ಜೊತೆಯಲ್ಲಿ ಅವಳ ಸಮೀಪಕ್ಕೆ ಬಂದರೆ ಅವಳು ನಿಷ್ಠುರವಾಗಿ ಮಾತುಗಳನ್ನು ಆಡಬಹುದು.

ಅನ್ಯವೇಷೇಣ ತು ಗತಾಂ ದೃಷ್ಟ್ವಾ ಸಾ ತ್ವಾ ಪ್ರಿಯಂ ವದೇತ್ ।
ಯತ್ತು ಸಾ ಪ್ರಥಮಂ ಬ್ರೂಯಾನ್ನ ತಸ್ಯಾಸ್ತಿ ನಿವರ್ತನಮ್ ॥೪॥

ತಸ್ಮಾನ್ಮಾನಂ ಚ ದರ್ಪಂ ಚ ವ್ಯಪನೀಯ ಸ್ವಯಂ ವ್ರಜ ।
ತಸ್ಯ ತದ್ವಚನಂ ಶ್ರುತ್ವಾ ಸುಭದ್ರಾ ಪ್ರತ್ಯಭಾಷತ ।
ಏವಮೇತತ್ ಕರಿಷ್ಯಾಮಿ ಯಥಾ ತ್ವಂ ಪಾರ್ಥ ಭಾಷಸೇ ॥೫॥

ನೀನು ವೇಷಾಂತರದಿಂದ ಹೋದರೆ ಅವಳು ನಿನ್ನನ್ನು ನೋಡಿ ಪ್ರಿಯವಾಗಿಯೇ ಮಾತನಾಡುತ್ತಾಳೆ. ಅವಳು ಮೊದಲು ಏನು ನುಡಿಯುತ್ತಾಳೋ ಅದನ್ನು ಎಂದಿಗೂ ಬದಲಾಯಿಸುವುದಿಲ್ಲ. ಆದ್ದರಿಂದ ನೀನು ಮಾನವನ್ನೂ ಮತ್ತು ದರ್ಪವನ್ನೂ ಬಿಟ್ಟು ನೀನೆ ಅಲ್ಲಿಗೆ ಹೋಗು. ಅವನ ಈ ಮಾತುಗಳನ್ನು ಕೇಳಿ ಸುಭದ್ರೆಯು ಪಾರ್ಥನೇ, ನಿನ್ನ ಮಾತಿನಂತೆಯೇ ನಡೆಯುವೆನು ಎಂದು ಪ್ರತ್ಯುತ್ತರವನ್ನು ಕೊಟ್ಟಳು.

ವೈಶಂಪಾಯನಃ

ಸುಭದ್ರಾವಚನಂ ಶ್ರುತ್ವಾ ಸುಪ್ರೀತಃ ಪಾಕಶಾಸನಿಃ ।
ಗೋಪಾಲಾನ್ ಸ ಸಮಾನೀಯ ತ್ವರಿತೋ ವಾಕ್ಯಮಬ್ರವೀತ್ ॥೬॥

ಸುಭದ್ರೆಯ ಮಾತನ್ನು ಕೇಳಿ ಸಂತೋಷಗೊಂಡ ಅರ್ಜುನನು ತಕ್ಷಣ ಗೋಪಾಲಕರನ್ನು ಕರೆದು ಮಾತನಾಡಿದನು.

ತರುಣ್ಯಃ ಸಂತಿ ಯಾವತ್ಯಸ್ತಾಃ ಸರ್ವಾ ವ್ರಜಯೋಷಿತಃ ।
ಆಗಚ್ಛಂತು ಗಮಿಷ್ಯಂತ್ಯಾ ಭದ್ರಯಾ ಸಹ ಸಂಗತಾಃ ।
ಇಂದ್ರಪ್ರಸ್ಥಂ ಪುರವರಂ ಕೃಷ್ಣಾಂ ದ್ರಷ್ಟುಂ ಯಶಸ್ವಿನೀಮ್ ॥೭॥

ವ್ರಜಸ್ತ್ರೀಯರಲ್ಲಿ ಎಷ್ಟು ಜನ ತರುಣಿಯರಿದ್ದಾರೆಯೋ ಅವರೆಲ್ಲರೂ ಯಶಸ್ವಿನಿಯಾದ ದ್ರೌಪದಿಯನ್ನು ನೋಡಲು ಶ್ರೇಷ್ಠವಾದ ಇಂದ್ರಪ್ರಸ್ಥ ಪಟ್ಟಣಕ್ಕೆ ಹೋಗುತ್ತಿರುವ ಸುಭದ್ರೆಯ ಜೊತೆಯಲ್ಲಿ ಸೇರಿಕೊಂಡು ಒಟ್ಟಿಗೆ ಹೋಗಲಿ.

ವೈಶಂಪಾಯನಃ

ಏತಚ್ಛ್ರುತ್ವಾ ತು ಗೋಪಾಲೈರಾನೀತಾ ವ್ರಜಯೋಷಿತಃ ।
ತತಸ್ತಾಭಿಃ ಪರಿವೃತಾಂ ವ್ರಜಸ್ತ್ರೀಭಿಃ ಸಮಂತತಃ ॥೮॥

ಸುಭದ್ರಾಂ ತ್ವರಮಾಣಸ್ತು ರಕ್ತಕೌಶೇಯವಾಸಸೀಮ್ ।
ಪಾರ್ಥಃ ಪ್ರಸ್ಥಾಪಯಾಮಾಸ ಕೃತ್ವಾ ಗೋಪಾಲಿಕಾವಪುಃ ॥೯॥

ಈ ಮಾತನ್ನು ಕೇಳಿ ಗೋಪಾಲಕರು ವ್ರಜತರುಣಿಯರನ್ನು ಕರೆದು ತಂದರು. ಆಗ ಅರ್ಜುನನು ಸುಭದ್ರೆಗೆ ಕೆಂಪುರೇಶ್ಮೆಯ ವಸ್ತ್ರಗಳನ್ನು ಉಡಿಸಿ ಗೋಪಾಲಿಕರ ವೇಷದಲ್ಲಿ ಅಲಂಕರಿಸಿ ಅವರ ಜೊತೆಯಲ್ಲಿ ಶೀಘ್ರವಾಗಿ ಕಳುಹಿಸಿದನು.

ಸಾऽಧಿಕಂ ತೇನ ರೂಪೇಣ ಶೋಭಮಾನಾ ಯಶಸ್ವಿನೀ ।
ಗೋಪಾಲಿಕಾಮಧ್ಯಗತಾ ಪ್ರಯಯೌ ವ್ರಜಿನಂ ಪುರಮ್ ॥೧೦॥

ಗೋಪಾಲಿಕೆಯರ ಮಧ್ಯದಲ್ಲಿ ಗೋಪಾಲಿಕರ ವೇಷವನ್ನು ಧರಿಸಿದ್ದ ಯಶಸ್ವಿನಿಯಾದ ಸುಭದ್ರೆಯು ಇನ್ನೂ ಅಧಿಕವಾಗಿ ಶೋಭಿಸುತ್ತಾ ಇಂದ್ರಪ್ರಸ್ಥಕ್ಕೆ ಹೊರಟಳು.

ತತಃ ಪುರವರಶ್ರೇಷ್ಠಮಿಂದ್ರಪ್ರಸ್ಥಂ ಯಶಸ್ವಿನೀ ।
ತ್ವರಿತಾ ಖಾಂಡವಪ್ರಸ್ಥಮಾಸಸಾದ ವಿವೇಶ ಚ ॥೧೧॥

ಅನಂತರ, ಯಶಸ್ವಿನಿಯಾದ ಅವಳು ಖಾಂಡವಪ್ರಸ್ಥ ಪ್ರದೇಶವನ್ನು ತಲುಪಿ ಅಲ್ಲಿ ಇಂದ್ರಪ್ರಸ್ಥನಗರವನ್ನು ಪ್ರವೇಶಿಸಿದಳು.

ಸಾ ಗೃಹಶ್ರೇಷ್ಠಮಾಸಾದ್ಯ ವೀರಪತ್ನೀ ಯಶಸ್ವಿನೀ ।
ವವಂದೇ ಪೃಥುತಾಮ್ರಾಕ್ಷೀ ಪೃಥಾಂ ಭದ್ರಾ ಪಿತೃಷ್ವಸಾಮ್ ॥೧೨॥

ವೀರಪತ್ನಿಯೂ, ಯಶಸ್ವಿನಿಯೂ ವಿಶಾಲರಕ್ತಾಕ್ಷಿಯೂ ಆದ ಸುಭದ್ರೆಯು ಶ್ರೇಷ್ಠವಾದ ಮನೆಯನ್ನು ಪ್ರವೇಶಿಸಿ ತನ್ನ ಸೋದರತ್ತೆಯನ್ನು ನಮಸ್ಕರಿಸಿದಳು.

ತತೋಽಭಿಗಮ್ಯ ತ್ವರಿತಾ ಪೂರ್ಣೇಂದುಸದೃಶಾನನಾ ।
ವವಂದೇ ದ್ರೌಪದೀಂ ಭದ್ರಾ ಪ್ರೇಷ್ಯಾಽಹಮಿತಿ ಚಾಬ್ರವೀತ್ ॥೧೩॥

ಪೂರ್ಣೇಂದುಸದೃಶವಾದ ಮುಖವುಳ್ಳ ಅವಳು ಶೀಘ್ರವಾಗಿ ಅಲ್ಲಿಂದ ಬಂದು ದ್ರೌಪದಿಯನ್ನು ಸಮೀಪಿಸಿ ನಾನು ನಿನ್ನ ಸೇವಕಿ ಎಂದು ಹೇಳುತ್ತಾ ಅವಳಿಗೆ ನಮಸ್ಕರಿಸಿದಳು.

ಪ್ರತ್ಯುತ್ಥಾಪ್ಯ ತು ತಾಂ ದೇವೀಂ ಕೃಷ್ಣಾ ಕೃಷ್ಣಸಹೋದರೀಮ್ ।
ಸಸ್ವಜೇ ಚಾವದತ್ ಪ್ರೀತ್ಯಾ ನಿಃಸಪತ್ನೋಽಸ್ತು ತೇ ಪತಿಃ ॥೧೪॥

ಕೃಷ್ಣೆಯು ಕೃಷ್ಣಸಹೋದರಿಯಾದ ಅವಳನ್ನು ಎತ್ತಿ ಆಲಿಂಗಿಸಿ ನಿನ್ನ ಪತಿಯು ನಿಶ್ಶತ್ರುವಾಗಲಿ ಎಂದು ಪ್ರೀತಿಯಿಂದ ಹೇಳಿದಳು.

ವೀರಸೂರ್ಭವ ಭದ್ರೇ ತ್ವಂ ಭವ ಭರ್ತೃಪ್ರಿಯಾ ತಥಾ ।
ಓಜಸಾ ನಿರ್ಜಿತಾ ಬಹ್ವೀರುವಾಚ ಪರಮಾಶಿಷಃ ॥೧೫॥

ತಥೈವ ಮುದಿತಾ ಭದ್ರಾ ತಾಮುವಾಚ ತಥಾಽಸ್ತ್ವಿತಿ ।

ಮಂಗಳಸ್ವರೂಪಳೇ, ನೀನು ಪತಿಗೆ ಪ್ರಿಯಳಾಗಿ ವೀರರಾದ ಮಕ್ಕಳನ್ನು ಪಡೆ ಎಂದು ಮೊದಲಾಗಿ ಅವಳ ಕಾಂತಿಯಿಂದ ಮನಸೋತು ಅನೇಕ ಮಂಗಳಾಶೀರ್ವಾದದ ಮಾತುಗಳನ್ನು ಆಡಿದಳು. ಸುಭದ್ರೆಯೂ ಸಹ

ಸಂತೋಷದಿಂದ ಅವಳನ್ನು ಕುರಿತು ನಿನ್ನ ಆಶೀರ್ವಾದದಂತೆಯೇ ಆಗಲಿ ಎಂದು ಹೇಳಿದಳು.

ತತಃ ಸುಭದ್ರಾಂ ವಾರ್ಷ್ಣೇಯೀ ಪರಿಷ್ವಜ್ಯ ಶುಭಾನನಾಮ್ ॥೧೬॥

ಅಂಕೇ ನಿವೇಶ್ಯ ಮುದಿತಾ ವಾಸುದೇವಂ ಪ್ರಶಸ್ಯ ಚ ।
ತತಃ ಕಿಲಕಿಲಾಶಬ್ದಃ ಕ್ಷಣೇನ ಸಮಪದ್ಯತ ॥೧೭॥

ಅನಂತರ, ವಾರ್ಷ್ಣೇಯಿಯಾದ ಕುಂತಿಯು ಸುಂದರವಾದ ಸುಭದ್ರೆಯನ್ನು ಆಲಿಂಗಿಸಿ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಕೃಷ್ಣನನ್ನು ಪ್ರಶಂಸಿಸಿ ಸಂತೋಷಪಟ್ಟಳು.

ಹರ್ಷಾದಾನರ್ತಯೋಧಾನಾಮಾಸಾದ್ಯ ವ್ರಜಿನಂ ಪುರಮ್ ।
ದೇವಪುತ್ರಪ್ರಕಾಶಾಸ್ತೇ ಜಾಂಬೂನದಮಯಧ್ವಜಾಃ ॥೧೮॥

ಆ ವೇಳೆಗೆ ಅರ್ಜುನನನ್ನು ಹಿಂಬಾಲಿಸಿ ಇಂದ್ರಪ್ರಸ್ಥವನ್ನು ತಲುಪಿದ ಯಾದವಸೈನಿಕರ ಕೋಲಾಹಲ ಶಬ್ದವುಂಟಾಯಿತು.

ಪೃಷ್ಠತೋಽನುಯಯುಃ ಪಾರ್ಥಂ ಪುರುಹೂತಮಿವಾಮರಾಃ ।
ಗೋಭಿರುಷ್ಟ್ರೈಃ ಸದಶ್ವೈಶ್ಚ ಯುಕ್ತಾನಿ ಬಹುಲಾ ಜನಾಃ ॥೧೯॥

ದೇವಕುಮಾರರಂತಿದ್ದ ಆ ಸೈನಿಕರು ಸುವರ್ಣಮಯವಾದ ಧ್ವಜಗಳುಳ್ಳ ರಥಗಳಲ್ಲಿ ಕುಳಿತು ದೇವತೆಗಳು ಇಂದ್ರನನ್ನು ಹಿಂಬಾಲಿಸಿದಂತೆ ಅರ್ಜುನನನ್ನು ಹಿಂಬಾಲಿಸಿದ್ದರು.

ದದೃಶುರ್ಯಾನಮುಖ್ಯಾನಿ ದಾಶಾರ್ಹಪುರವಾಸಿನಾಮ್ ।
ತತಃ ಪುರವರೇ ಯೂನಾಂ ಪ್ರಹರ್ಷಃ ಸಮಜಾಯತ ॥೨೦॥

ಇಂದ್ರಪ್ರಸ್ಥನಿವಾಸಿಗಳು ವೃಷಭಗಳಿಂದಲೂ, ಒಂಟೆಗಳಿಂದಲೂ, ಅಶ್ವಗಳಿಂದಲೂ ಹೂಡಲ್ಪಟ್ಟ ದ್ವಾರಕಾನಿವಾಸಿಗಳ ಶ್ರೇಷ್ಠವಾದ ವಾಹನಗಳನ್ನು ನೋಡಿದರು.

ಪ್ರವಾಸಾದಗತಂ ಪಾರ್ಥಂ ದೃಷ್ಟ್ವಾ ಸ್ವಮಿವ ಬಾಂಧವಮ್ ।
ಸೋಽಭಿಯಾಯ ನರಶ್ರೇಷ್ಠೋ ದಾಶಾರ್ಹಗಣಸಂವೃತಃ ॥೨೧॥

ಆಗ ಪ್ರವಾಸದಿಂದ ಹಿಂದಿರುಗಿದ ಅರ್ಜುನನನ್ನು ನೋಡಿ ತಮ್ಮ ಬಂಧುವೆಂದೇ ತಿಳಿದು ಇಂದ್ರಪ್ರಸ್ಥನಿವಾಸಿಗಳಾದ ಯುವಕರು ಬಹಳ ಸಂತೋಷವನ್ನು ಹೊಂದಿದರು.

ಪೌರೈಃ ಪುರವರೇ ಪ್ರೀತ್ಯಾ ಪರಯಾ ಚಾಭಿನಂದಿತಃ ।
ಪ್ರಾಪ್ಯ ಚಾಂತಃಪುರದ್ವಾರಮವರುಹ್ಯ ರಥರ್ಷಭಮ್ ।
ವವಂದೇ ಧೌಮ್ಯಮಾಸಾದ್ಯ ಮಾತರಂ ಚ ಧನಂಜಯಃ ॥೨೨॥

ನರಶ್ರೇಷ್ಠನಾದ ಅರ್ಜುನನು ಇಂದ್ರಪ್ರಸ್ಥ ನಿವಾಸಿಗಳಿಂದ ಸಂತೋಷದಿಂದ ಅಭಿನಂದಿಸಲ್ಪಟ್ಟು ಯಾದವಸಮೂಹದಿಂದ ಆವೃತನಾಗಿ ಮುಂದೆ ಸಾಗಿದನು. ಅಂತಃಪುರದ್ವಾರವನ್ನು ತಲುಪಿ ತನ್ನ ಶ್ರೇಷ್ಠವಾದ ರಥದಿಂದ ಇಳಿದು ಧೌಮ್ಯರನ್ನು ಸಮೀಪಿಸಿ ಅರ್ಜುನನು ಅವರಿಗೂ ಮತ್ತು ಕುಂತಿಗೂ ನಮಸ್ಕಾರ ಮಾಡಿದನು.

ಸ್ಪೃಷ್ಟ್ವಾ ಚ ಚರಣೌ ರಾಜ್ಞೋ ಭೀಮಸ್ಯ ಚ ಧನಂಜಯಃ ।
ಯಮಾಭ್ಯಾಂ ವಂದಿತೋ ಹೃಷ್ಟಃ ಸಸ್ವಜೇ ತೌ ನನಂದ ಚ ॥೨೩॥

ಬ್ರಾಹ್ಮಣಪ್ರಮುಖಾನ್ ಸರ್ವಾನ್ ಭ್ರಾತೃಭಿಃ ಸಹ ಸಂಗತಃ ।
ಯಥಾರ್ಹಂ ಮಾನಯಾಮಾಸ ಪೌರಜಾನಪದಾನಪಿ ॥೨೪॥

ಧನಂಜಯನೇ, ಧರ್ಮರಾಜನ ಪಾದಗಳಿಗೂ ಭೀಮನ ಪಾದಗಳಿಗೂ ನಮಸ್ಕರಿಸಿ ನಕುಲ ಸಹದೇವರಿಂದ ನಮಸ್ಕರಿಸಲ್ಪಟ್ಟು ಅವರನ್ನು ಆಲಿಂಗಿಸಿ ಬಹಳ ಸಂತೋಷವನ್ನು ಹೊಂದಿದನು. ಅವನು ತನ್ನ ಸಹೋದರರ ಜೊತೆಯಲ್ಲಿ ಬ್ರಾಹ್ಮಣರೇ ಮೊದಲಾದ ಎಲ್ಲಾ ಪೌರರನ್ನೂ ಮತ್ತು ಜಾನಪದರನ್ನೂ ಯಥೋಚಿತವಾಗಿ ಸತ್ಕರಿಸಿದನು.

(ಅರ್ಜುನನನ್ನು ದ್ರೌಪದಿಯು ಮೂದಲಿಸುವ ಮೂರು ಅಧಿಕ ಶ್ಲೋಕಗಳು ಔತ್ತರೇಯ ಪಾಠದಲ್ಲಿದೆ).

ತತಸ್ತಾನ್ಯನುಯಾತ್ರಾಣಿ ಪ್ರದಾಯ ಗುರವೇ ವಸೂನ್ ।
ಪೂಜಯಾಂಚಕ್ರುರಾಸಾದ್ಯ ಕುಂತೀಪುತ್ರಂ ಯುಧಿಷ್ಠಿರಮ್ ॥೨೫॥

ಅನಂತರ, ಅರ್ಜುನನನ್ನು ಹಿಂಬಾಲಿಸಿ ಬಂದ ಯಾದವರು ಹಿರಿಯನಾದ ಕುಂತೀಪುತ್ರನಾದ ಯುಧಿಷ್ಠಿರನಿಗೆ ತಂದ ಧನವನ್ನು ಕೊಟ್ಟುನಮಸ್ಕರಿಸಿದರು.

ಪುರಸ್ತಾದೇವ ವೈ ತೇಷಾಂ ಸ ಮಹಾತ್ಮಾ ಮಹಾಯಶಾಃ ।
ಪೂಜನಾರ್ಹೋಽಭವದ್ ರಾಜಾ ಯಥಾ ವೈ ಗದಪೂರ್ವಜಃ ॥೨೬॥

ಪಾಂಡವೇನ ಯಥಾರ್ಹಂ ತೇ ಪೂಜಾರ್ಹೇಣ ಸುಪೂಜಿತಾಃ
ನ್ಯವಿಶಾಂತಾಭ್ಯನುಜ್ಞಾತಾ ರಾಜ್ಞಾ ತುಷ್ಟಾ ಯಶಸ್ವಿನಾ ॥೨೭॥

ಗದಾಗ್ರಜನಾದ ಕೃಷ್ಣನು ಹೇಗೆ ಯಾದವರಿಗೆ ಪೂಜ್ಯನೋ ಹಾಗೆಯೇ ಮಹಾಕೀರ್ತಿವಂತನೂ, ಮಹಾನುಭಾವನೂ ಆದ ಧರ್ಮರಾಜನು ಈ ಸಂಬಂಧವಾಗುವುದಕ್ಕೆ ಮೊದಲಿಂದಲೂ ಯಾದವರಿಗೆ ಪೂಜಾರ್ಹನಾಗಿದ್ದನು. ಪೂಜಾರ್ಹನಾದ ಧರ್ಮರಾಜನಿಂದ ಯಥೋಚಿತವಾಗಿ ಪೂಜಿಸಲ್ಪಟ್ಟ ಆ ಯಾದವರು ಕೀರ್ತಿವಂತನಾದ ಅವನ ಅನುಜ್ಞೆಯನ್ನು ಪಡೆದು ತಮ್ಮ ಆಸನಗಳಲ್ಲಿ ಸಂತೋಷದಿಂದ ಕುಳಿತುಕೊಂಡರು.

ತಾಮದೀನಾಮದೀನಾರ್ಹಾಂ ಸುಭದ್ರಾಂ ಪ್ರೀತಿವರ್ಧಿನೀಮ್ ।
ಸಾಕ್ಷಾಚ್ಛ್ರಿಯಮಮನ್ಯಂತ ಪಾರ್ಥಾಃ ಕೃಷ್ಣಸಹೋದರಾಮ್ ॥೨೮॥

ದೈನ್ಯಕ್ಕೆ ಅರ್ಹಳಲ್ಲದ, ಉದಾರಳಾದ, ಸಂತೋಷಕಾರಕಳಾದ ಕೃಷ್ಣನ ತಂಗಿಯಾದ ಸುಭದ್ರೆಯನ್ನು ಪಾಂಡವರು ಸಾಕ್ಷಾತ್ ಲಕ್ಷ್ಮಿಯೆಂದು ತಿಳಿದರು.

ಗುರೂಣಾಂ ಶ್ವಶುರಾಣಾಂ ಚ ದೇವರಾಣಾಂ ತಥೈವ ಚ ।
ಸುಭದ್ರಾ ಸ್ವೇನ ವೃತ್ತೇನ ಬಭೂವ ಪರಮಪ್ರಿಯಾ ॥೨೯॥

ಸುಭದ್ರೆಯು ತನ್ನ ನಡತೆಯಿಂದ ಹಿರಿಯರಿಗೂ, ಮಾವಂದಿರಿಗೂ ಮತ್ತು ಪತಿಯ ಸಹೋದರರಿಗೂ ಪರಮಪ್ರಿಯಳಾದಳು.

ತತಸ್ತೇ ಹೃಷ್ಟಮನಸಃ ಪಾಂಡವೇಯಾ ಮಹಾರಥಾಃ ।
ಯುಧಿಷ್ಠಿರಮುಖಾಃ ಪ್ರೀತಾ ಬಭೂವುರ್ಜನಮೇಜಯ ।
ಕುಂತೀ ಚ ಸತತಂ ಪ್ರೀತಾ ಕೃಷ್ಣಾ ಚ ಸತತಂ ತಥಾ ॥೩೦॥

ಜನಮೇಜಯನೇ, ಆಗ ಮಹಾರಥರಾದ ಪಾಂಡುಪುತ್ರರಾದ ಯುಧಿಷ್ಠಿರಾದಿಗಳು ಸಂತೋಷಗೊಂಡ ಮನಸ್ಸುಳ್ಳವರಾಗಿ ಆನಂದವನ್ನು ಹೊಂದಿದರು. ಕುಂತಿಯು ಮತ್ತು ದ್ರೌಪದಿಯೂ ಸಹ ಆನಂದವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಷಡ್ವಿಂಶತ್ಯಧಿಕದ್ವಿಶತತಮೋऽಧ್ಯಾಯಃ॥

॥ ಇತಿ ಹರಣಹಾರಿಕಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸಾರ್ಧಂ ಯಯೌ ಶಕಟೈ ರತ್ನಪೂರ್ಣೈಃ
ಶಕ್ರಪ್ರಸ್ಥಂ ಪೂಜಿತಸ್ತತ್ರ ಪಾರ್ಥೈಃ ।
ದದೌ ತೇಷಾಂ ತಾನಿ ರಾಮೇಣ ಯುಕ್ತ-
ಸ್ತಥಾ ಕೃಷ್ಣಾಯೈ ಭೂಷಣಾನಿ ಸ್ವಸುಶ್ಚ ॥೨೧೦॥

ರತ್ನಗಳಿಂದ ತುಂಬಿದ ಬಂಡಿಗಳೊಂದಿಗೇ ಬಲರಾಮ ಸಮೇತನಾದ ಕೃಷ್ಣ ಇಂದ್ರಪ್ರಸ್ಥಕ್ಕೆ ಬಂದಿದ್ದ. ಅಲ್ಲಿ ಅವನು ಪಾಂಡವರಿಂದ ಸತ್ಕೃತನಾದ. ರತ್ನಗಳನ್ನು ಪಾಂಡವರಿಗೂ ದ್ರೌಪದಿಗೂ ಸುಭದ್ರೆಗೂ ಕೊಟ್ಟ.

ಮಾಸಾನುಷಿತ್ವಾ ಕತಿಚಿದ್ರೌಹಿಣೇಯೋ
ಯಯೌ ಪುರೀಂ ಸ್ವಾಂ ಕೇಶವೋऽತ್ರಾವಸಚ್ಚ ।
ಬಹೂನ್ ವರ್ಷಾನ್ ಪಾಂಡವೈಃ ಪೂಜ್ಯಮಾನಃ
ಪ್ರೀತಿಂ ತೇಷಾಮಾದಧಾನೋऽಧಿಕಾಂ ಚ ॥೨೧೧॥

ಕೆಲವು ತಿಂಗಳು ಬಲರಾಮ ಅಲ್ಲಿ ಇದ್ದು ತನ್ನ ಪಟ್ಟಣಕ್ಕೆ ಹಿಂತಿರುಗಿದ. ಕೃಷ್ಣ ಅಲ್ಲಿಯೆ ಪಾಂಡವರಿಂದ ಸತ್ಕೃತನಾಗಿ ಅವರಲ್ಲಿ ತನ್ನವರೆಂಬ ಪ್ರೀತಿಯನ್ನು ದಿನೇದಿನೇ ಹೆಚ್ಚಿಸುತ್ತ ಬಹುವರ್ಷಗಳ ಕಾಲ ವಾಸಮಾಡಿದ.

ಇನ್ನೂರ ಇಪ್ಪತ್ತೇಳನೆಯ ಅಧ್ಯಾಯ

(ಯಾದವರಿಂದ ಇಂದ್ರಪ್ರಸ್ಥಕ್ಕೆ ಉಡುಗೊರೆಗಳ ಆಹರಣ, ಇಂದ್ರಪ್ರಸ್ಥದಲ್ಲಿ ಏಳು ದಿನಗಳ ಕಾಲ ಅರ್ಜುನ-ಸುಭದ್ರೆಯರ ವಿವಾಹ, ಯಾದವರ ನಿರ್ಗಮನ, ಇಂದ್ರಪ್ರಸ್ಥದಲ್ಲಿ ಕೃಷ್ಣನ ವಾಸ.)

ವೈಶಂಪಾಯನಃ

ಅಥ ಶುಶ್ರಾವ ನಿವೃತ್ತೇ ವೃಷ್ಣೀನಾಂ ಪರಮೋತ್ಸವೇ ।
ಅರ್ಜುನೇನ ಹೃತಾಂ ಭದ್ರಾಂ ಶಂಕಚಕ್ರಗದಾಧರಃ ॥೧॥

ಅಂತರ್ವೇದಿಪದಲ್ಲಿ ವೃಷ್ಣಿಗಳ ಪರಮೋತ್ಸವವು ಮುಗಿದ ಮೇಲೆ ಶಂಕಚಕ್ರಗದಾಧರನಾದ ಕೃಷ್ಣನು ಅರ್ಜುನನು ಸುಭದ್ರೆಯನ್ನು ಅಪಹರಿಸಿಕೊಂಡು ಹೋಗಿದ್ದಾನೆಂಬ ವಾರ್ತೆಯನ್ನು ಕೇಳಿದನು.

ಪುರಸ್ತಾದೇವ ಪೌರಾಣಾಂ ಸಂಶಯಃ ಸಮಜಾಯತ ।
ಜಾನತಾ ವಾಸುದೇವೇನ ವಾಸಿತೋ ಭರತರ್ಷಭಃ ॥೨॥

ಪೌರರಿಗೆ ವಾಸುದೇವನು ಎಲ್ಲವನ್ನೂ ತಿಳಿದೇ ಅರ್ಜುನನನ್ನು ದ್ವಾರಕೆಗೆ ಕರೆದುಕೊಂಡು ಬಂದಿದ್ದಾನೆ ಎಂಬ ಸಂಶಯವಿದ್ದಿತು.

ಲೋಕಸ್ಯ ವಿದಿತಂ ಹ್ಯಾಸೀತ್ ಪೂರ್ವಂ ವಿಪೃಥುನಾ ಯದಾ ।
ಸಾಂತ್ವಯಿತ್ವಾಽಭ್ಯನುಜ್ಞಾತೋ ಭದ್ರಯಾ ಸಹ ಸಂಗತಃ ॥೩॥

ವಿಪೃಥುವು ಸುಭದ್ರೆಯ ಸಹಿತನಾದ ಅರ್ಜುನನ ಜೊತೆಯಲ್ಲಿ ಸಮಾಧಾನದ ಮಾತುಗಳನ್ನಾಡಿ ಅವರನ್ನು ಬೀಳ್ಕೊಟ್ಟ ವಿಷಯವೂ ಸಹ ಜನರಿಗೆ ತಿಳಿದಿದ್ದಿತು.

ದಿತ್ಸಿತಾಂ ಸೋದರಾಂ ತಸ್ಮೈ ಪತತ್ರಿವರಕೇತುನಾ ।
ಅರ್ಹತೇ ಪುರುಷೇಂದ್ರಾಯ ಪಾರ್ಥಾಯಾಯತಲೋಚನಾಮ್ ॥೪॥

ಸತೃತ್ಯ ಚತುರಂಗೇಣ ಬಲೇನ ಮಹತಾ ವೃತಃ ।
ಭದ್ರಯಾ ಸಹ ಬೀಭತ್ಸುಃ ಪ್ರಾಪಿತೋ ವ್ರಜಿನಂ ಪುರಮ್ ॥೫॥

ಯೋಗ್ಯನಾದ ಪುರುಷಶ್ರೇಷ್ಠನಾದ ಅರ್ಜುನನಿಗೆ ತನ್ನ ತಂಗಿಯಾದ ವಿಶಾಲನೇತ್ರೆಯಾದ ಸುಭದ್ರೆಯನ್ನು ಕೊಡಲು ಬಯಸಿದ ಗರುಡಧ್ವಜನಾದ ಕೃಷ್ಣನು ಅರ್ಜುನನನ್ನು ಸತ್ಕರಿಸಿ ದೊಡ್ಡ ಚತುರಂಗಸೈನ್ಯದ ಜೊತೆಯಲ್ಲಿ ಸುಭದ್ರಾಸಹಿತನಾದ ಅರ್ಜುನನನ್ನು ಇಂದ್ರಪ್ರಸ್ಥಕ್ಕೆ ಕಳುಹಿಸಿದ್ದಾನೆ.

ಇತಿ ಪೌರಜನಾಃ ಸರ್ವೇ ವದಂತಿ ಸ್ಮ ಸಮಂತತಃ ।
ಶ್ರುತ್ವಾ ತು ಪುಂಡರೀಕಾಕ್ಷಃ ಸಂಪ್ರಾಪ್ತಂ ಸ್ವಪುರೋತ್ತಮಮ್ ॥೬॥

ಅರ್ಜುನಂ ಪಾಂಡವಶ್ರೇಷ್ಠಮಿಂದ್ರಪ್ರಸ್ಥಗತಂ ತದಾ ।
ಯಿಯಾಸುಃ ಖಾಂಡವಪ್ರಸ್ಥಮಮಂತ್ರಯತ ಕೇಶವಃ ॥೭॥

ಹೀಗೆ ಪೌರಜನರು ಎಲ್ಲಾ ಸ್ಥಳಗಳಲ್ಲಿಯೂ ಮಾತನಾಡುತ್ತಿದ್ದರು. ಪುಂಡರೀಕಾಕ್ಷನಾದ ಕೇಶವನು ಅರ್ಜುನನು ತನ್ನ ನಗರವಾದ ಇಂದ್ರಪ್ರಸ್ಥವನ್ನು ತಲುಪಿದ್ದಾನೆಂದು ಕೇಳಿ ತಾನೂ ಇಂದ್ರಪ್ರಸ್ಥಕ್ಕೆ ಹೋಗಲು ಬಯಸಿ ಮಂತ್ರಾಲೋಚನೆಯನ್ನು ಮಾಡಿದನು.

ಪೂರ್ವಂ ಸತ್ಕೃತ್ಯ ರಾಜಾನಮಾಹುಕಂ ಮಧುಸೂದನಃ ।
ರಾಜಾ ವಿಪೃಥುರಕ್ರೂರಃ ಸಂಕರ್ಷಣಭಯೇ ಸಖೇ ॥೮॥

ಪಿತ್ರಾ ಚ ಪುರುಷೇಂದ್ರೇಣ ಪುರಸ್ತಾದಭಿಮಾನಿತಃ ।
ಸಂಪ್ರೀತಃ ಪ್ರೀಯಮಾಣೇನ ವೃಷ್ಣಿರಾಜ್ಞಾ ಜನಾರ್ದನಃ ॥೯॥

ಸ್ನೇಹಿತನೇ, ಸಂಕರ್ಷಣಭಯವಿದ್ದ ಕಾರಣ ಮಧುಸೂದನನು ಮತ್ತು ವಸುದೇವನು ಮತ್ತು ಮೊದಲೇ ವಿಪೃಥು ಮತ್ತು ಅಕ್ರೂರರನ್ನು ಮತ್ತು ಆಹುಕನನ್ನು ಸುಭದ್ರೆಯ ವಿವಾಹದ ವಿಷಯದಲ್ಲಿ ಅಭಿಮಾನವುಳ್ಳವರನ್ನಾಗಿ ಮಾಡಿದನು. (ಎಂದು ಜನಗಳು ಆಡಿಕೊಳ್ಳುತ್ತಿದ್ದರು.)

ಅಭಿಮಂತ್ರ್ಯಾಭ್ಯನುಜ್ಞಾತೋ ಯೋಜಯಾಮಾಸ ವಾಹಿನೀಮ್ ।
ತತಸ್ತು ಯಾನಾನ್ಯಾಸಾದ್ಯ ದಾಶಾರ್ಹಪುರವಾಸಿನಾಮ್ ॥೧೦॥

ಸಂತೋಷಗೊಂಡ ವೃಷ್ಣಿರಾಜನನ್ನು ನೋಡಿ ಸಂತೋಷಗೊಂಡ ಜನಾರ್ದನನು ಅವನ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಸೈನ್ಯವನ್ನು ನಿಯೋಜಿಸಿದನು.

ಸಿಂಹನಾದಃ ಪ್ರಹೃಷ್ಟಾನಾಂ ಕ್ಷಣೇನ ಸಮಪದ್ಯತ ।
ಯೋಜಯಂತಃ ಸದಶ್ವಾಂಸ್ತು ಯಾನಯುಗ್ಯರಥಾಂಸ್ತದಾ ॥೧೧॥

ಅನಂತರ, ಒಂದು ಕ್ಷಣದಲ್ಲಿ ಸಂತುಷ್ಟರಾದ ದಾಶಾರ್ಹಪುರವಾಸಿಗಳು ತಮ್ಮ ತಮ್ಮ ವಾಹನಗಳನ್ನು ಸಮೀಪಿಸಿ ಸಿಂಹನಾದವನ್ನು ಮಾಡಿದರು.

ಗಜಾಂಶ್ಚ ಪರಮಪ್ರೀತಾಃ ಸಮಪದ್ಯಂತ ವೃಷ್ಣಯಃ ।
ವೃಷ್ಣ್ಯಂಧಕಮಹಾಮಾತ್ರೈಃ ಸಹ ವೀರೈರ್ಮಹಾರಥೈಃ ॥೧೨॥

ಭ್ರಾತೃಭಿಶ್ಚ ಕುಮಾರೈಶ್ಚ ಯೋಧೈಶ್ಚ ಶತಶೋ ವೃತಃ ।
ಸೈನ್ಯೇನ ಮಹತಾ ಶೌರಿರಭಿಗುಪ್ತಃ ಪರಂತಪಃ ॥೧೩॥

ಪ್ರಯಾಣಕ್ಕೆ ಯೋಗ್ಯವಾದ ಶ್ರೇಷ್ಠವಾದ ಅಶ್ವಗಳನ್ನು ರಥದಲ್ಲಿ ಹೂಡುತ್ತಾ ಗಜಗಳನ್ನು ಸಿದ್ದಪಡಿಸುತ್ತಾ ವೃಷ್ಣಿಗಳು ವೃಷ್ಣ್ಯಂಧಕ ಪ್ರಧಾನರಿಂದಲೂ, ವೀರರಾದ ಮಹಾರಥರಿಂದಲೂ ಕೂಡಿ ಪರಮ ಸಂತುಷ್ಟರಾದರು. ಪರಂತಪನಾದ ಕೃಷ್ಣನು ತನ್ನ ಸೋದರರಿಂದಲೂ, ಪುತ್ರರಿಂದಲೂ, ಯೋಧರಿಂದಲೂ, ನೂರಾರು ಸಂಖ್ಯೆಯಲ್ಲಿ ಆವೃತನಾಗಿ ದೊಡ್ಡ ಸೈನ್ಯದಿಂದ ರಕ್ಷಿತನಾಗಿ ಮುಂದೆ ಪ್ರಯಾಣ ಮಾಡಿದನು.

ತತ್ರ ದಾನಪತಿರ್ಧೀಮಾನ್ ಜಗಾಮ ಸುಮಹಾಯಶಾಃ ।
ಅಕ್ರೂರೋ ವೃಷ್ಣಿವೀರಾಣಾಂ ಸೇನಾಪತಿರರಿಂದಮಃ ॥೧೪॥

ಆಗ ಮಹಾಕೀರ್ತಿವಂತನಾದ ಮೇಧಾವಿಯೂ, ಅರಿಂದಮನೂ ಆದ ವೃಷ್ಣಿವೀರರ ಸೇನಾಪತಿಯಾದ ದಾನಪತಿಯಾದ ಅಕ್ರೂರನೂ ಹೊರಟನು.

ಅನಾಧೃಷ್ಟಿರ್ಮಹಾಬಾಹುರುದ್ಧವಶ್ಚ ಮಹಾಯಶಾಃ ।
ಸಾಕ್ಷಾದ್ ಬೃಹಸ್ಪತೇಃ ಶಿಷ್ಯೋ ಮಹಾಬುದ್ಧಿರ್ಮಹಾಯಶಾಃ ॥೧೫॥

ಎಂದೂ ಘರ್ಷಣೆಗೆ ಒಳಗಾಗದ ಬೃಹಸ್ಪತಿಯ ಸಾಕ್ಷಾತ್ ಶಿಷ್ಯನಾದ ಮಹಾಬುದ್ಧಿಯೂ, ಮಹಾಕೀರ್ತಿವಂತನೂ ಆದ ಉದ್ಧವನೂ ಹೊರಟನು.

ಸಾತ್ಯಕಿಶ್ಚ ಮಹೇಶ್ವಾಸಃ ಕೃತವರ್ಮಾ ಮಹಾರಥಃ ।
ಪ್ರದ್ಯುಮ್ನಶ್ಚೈವ ಸಾಂಬಶ್ಚ ನಿಶಂಕುಃ ಶಂಕುರೇವ ಚ ॥೧೬॥

ಮಹಾಧನುರ್ಧಾರಿಯಾದ ಸಾತ್ಯಕಿಯೂ, ಮಹಾರಥನಾದ ಕೃತವರ್ಮನೂ, ಪ್ರದ್ಯುಮ್ನ, ಸಾಂಬ, ನಿಶಂಕು ಮತ್ತು ಶಂಕು ಇವರೂ ಹೊರಟರು.

ಚಾರುದೇಷ್ಣಶ್ಚ ವಿಕ್ರಾಂತೋ ಝಿಲ್ಲಿರ್ವಿಪೃಥುರೇವ ಚ ।
ಸಾರಣಶ್ಚ ಮಹಾತೇಜಾ ಗದಶ್ಚ ವಿದುಷಾಂ ವರಃ ॥೧೭॥

ವಿಕ್ರಮಶಾಲಿಯಾದ ಚಾರುದೇಷ್ಣ, ಝಿಲ್ಲಿ, ವಿಪೃಥು ಮಹಾತೇಜಸ್ವಿಯಾದ ಸಾರಣ, ಜ್ಞಾನಶ್ರೇಷ್ಠನಾದ ಗದ ಎಲ್ಲರೂ ಹೊರಟರು.

ಏತೇ ಚಾನ್ಯೇ ಚ ಬಹವೋ ವೃಷ್ಣಿಭೋಜಾಂಧಕಾಸ್ತಥಾ ।
ಆಜಗ್ಮುಃ ಖಾಂಡವಪ್ರಸ್ಥಮಾದಾಯ ಹರಣಂ ಬಹು ॥೧೮॥

ಇವರೂ ಮತ್ತು ಇನ್ನೂ ಅನೇಕ ವೃಷ್ಣಿಗಳು, ಭೋಜರು ಮತ್ತು ಅಂಧಕರೂ ಬಹಳವಾದ ಉಡುಗೊರೆಗಳನ್ನು ತೆಗೆದುಕೊಂಡು ಖಾಂಡವಪ್ರಸ್ಥಕ್ಕೆ ಹೊರಟರು.

ಅನ್ವಾಹಾರ್ಯಂ ಸಮಾದಾಯ ಪೃಥಗ್ ವೃಷ್ಣಿಪುರೋಗಮಾಃ ।
ಪ್ರಯಯುಃ ಸಿಂಹನಾದೇನ ಸುಭದ್ರಾಮವಲೋಕಕಾಃ ॥೧೯॥

ವೃಷ್ಣಿಪ್ರಮುಖರು ವಧುವಿನ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾದ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಸಿಂಹನಾದವನ್ನು ಮಾಡುತ್ತಾ ಸುಭದ್ರೆಯನ್ನು ನೋಡುವ ಆಸೆಯಿಂದ ಹೊರಟರು.

ತೇ ತ್ವದೀರ್ಘೇಣ ಕಾಲೇನ ಕೃಷ್ಣೇನ ಸಹ ಯಾದವಾಃ ।
ಪುರಮಾಸಾದ್ಯ ಪಾರ್ಥಾನಾಂ ಪರಾಂ ಪ್ರೀತಿಮವಾಪ್ನುವನ್ ॥೨೦॥

ಕೃಷ್ಣನಿಂದ ಸಹಿತಳಾದ ಆ ಯಾದವರು ಅಲ್ಪಕಾಲದಲ್ಲಿಯೇ ಪಾರ್ಥರ ಪಟ್ಟಣವಾದ ಇಂದ್ರಪ್ರಸ್ಥವನ್ನು ತಲುಪಿ ಬಹಳ ಸಂತೋಷವನ್ನು ಹೊಂದಿದರು.

ತತೋ ಯುಧಿಷ್ಠಿರೋ ರಾಜಾ ಶ್ರುತ್ವಾ ಮಾಧವಮಾಗತಮ್ ।
ಪ್ರತಿಗ್ರಹಾರ್ಥಂ ಕೃಷ್ಣಸ್ಯ ಯಮೌ ಪ್ರಾಸ್ಥಾಪಯದ್ ಗೃಹಾತ್ ॥೨೧॥

ಆಗ ರಾಜನಾದ ಯುಧಿಷ್ಠಿರನು ಬರುತ್ತಿದ್ದಾನೆಂಬ ವಾರ್ತೆಯನ್ನು ಕೇಳಿ ಅವನನ್ನು ಸ್ವೀಕರಿಸಲು ನಕುಲಸಹದೇವರನ್ನು ತನ್ನ ಮನೆಯಿಂದ ಕಳುಹಿಸಿದನು.

ತಾಭ್ಯಾಂ ಪ್ರತಿಗೃಹೀತಂ ತು ವೃಷ್ಣಿಚಕ್ರಂ ಸಮೃದ್ಧಿಮತ್ ।
ವಿವೇಶ ಖಾಂಡವಪ್ರಸ್ಥಂ ಪತಾಕಾಧ್ವಜಶೋಭಿತಮ್ ॥೨೨॥

ನಕುಲಸಹದೇವರಿಂದ ಸ್ವೀಕರಿಸಲ್ಪಟ್ಟ ಪತಾಕೆ ಮತ್ತು ಧ್ವಜಗಳಿಂದ ಶೋಭಿತವಾದ ಸಮೃದ್ಧವಾದ ವೃಷ್ಣಿಸೈನ್ಯವು ಖಾಂಡವಪ್ರಸ್ಥವನ್ನು ಪ್ರವೇಶಿಸಿತು.

ಚಂದನಸ್ಯ ರಸೈಃ ಶೀತೈಃ ಪುಣ್ಯಗಂಧೈರ್ನಿಷೇವಿತಮ್ ।
ದಹ್ಯತಾऽಗುರುಣಾ ಚೈವ ದೇಶೇದೇಶೇ ಸುಗಂಧಿನಮ್ ॥೨೩॥

ಸುಮೃಷ್ಟಜನತಾಕೀರ್ಣಂ ವಣಿಗ್ಭಿರುಪಶೋಭಿತಮ್ ।
ಪ್ರತಿಪೇದೇ ಮಹಾಬಾಹುಃ ಸಹ ರಾಮೇಣ ಕೇಶವಃ ॥೨೪॥

ಶೀತಲವಾದ ಚಂದನರಸದಿಂದ ತೊಯ್ದುಮಾರ್ಗಗಳುಳ್ಳ, ಸುಗಂಧಗಳಿಂದ ಯುಕ್ತವಾದ ಎಲ್ಲ ಕಡೆಗಳಲ್ಲಿಯೂ ಉರಿಯುವ ಅಗುರು ಸುಗಂಧದಿಂದ ವ್ಯಾಪ್ತವಾದ, ಅಲಂಕೃತರಾದ ಜನರಿಂದ ನಿಬಿಡವಾದ, ವೈಶ್ಯರಿಂದ ಶೋಭಿತವಾದ ಇಂದ್ರಪ್ರಸ್ಥನಗರವನ್ನು ಬಲರಾಮನ ಜೊತೆಯಲ್ಲಿ ಕೃಷ್ಣನು ತಲುಪಿದನು.

ವೃಷ್ಣ್ಯಂಧಕೈಸ್ತಥಾ ಭೋಜ್ಯೈಃ ಸಮೇತಃ ಪುರುಷೋತ್ತಮಃ ।
ಸಂಪೂಜ್ಯಮಾನಃ ಪೌರೈಶ್ಚ ಬ್ರಾಹ್ಮಣೈಶ್ಚ ಸಹಸ್ರಶಃ ।
ವಿವೇಶ ಭವನಂ ರಾಜ್ಞಃ ಪುರಂದರಗೃಹೋಪಮಮ್ ॥೨೫॥

ವೃಷ್ಣಿ, ಅಂಧಕ, ಭೋಜರಿಂದ ಸಹಿತನಾದ ಪುರುಷೋತ್ತಮನಾದ ಕೃಷ್ಣನು ಸಹಸ್ರಸಂಖ್ಯೆಯಲ್ಲಿ ಪೌರರಿಂದಲೂ, ಬ್ರಾಹ್ಮಣರಿಂದಲೂ ಪೂಜಿಸಲ್ಪಟ್ಟು ಇಂದ್ರನ ಅರಮನೆಯಂತಿದ್ದ ಧರ್ಮರಾಜನ ಭವನವನ್ನು ಪ್ರವೇಶಿಸಿದನು.

ಯುಧಿಷ್ಠಿರಸ್ತು ರಾಮೇಣ ಸಮಾಗಚ್ಛದ್ ಯಥಾವಿಧಿ ।
ಮೂರ್ಧ್ನಿ ಕೇಶವಮಾಘ್ರಾಯ ಪರಿಷ್ವಜ್ಯ ಚ ಬಾಹುನಾ ॥೨೬॥

ಯುಧಿಷ್ಠಿರನಾದರೋ ಕೃಷ್ಣನನ್ನು ಬಾಹುಗಳಿಂದ ಆಲಿಂಗಿಸಿ, ಶಿರಸ್ಸಿನಲ್ಲಿ ಆಘ್ರಾಣಿಸಿ ವಿಧಿಪೂರ್ವಕವಾಗಿ ಬಲರಾಮನೊಡನೆ ಸಮಾಗಮವನ್ನು ಹೊಂದಿದನು.

ತಂ ಪ್ರೀಯಮಾಣಃ ಕೃಷ್ಣಸ್ತು ವಿನಯೇನಾಭ್ಯಪೂಜಯತ್ ।
ಭೀಮಂ ಚ ಪುರುಷವ್ಯಾಘ್ರಂ ವಿಧಿವತ್ ಪ್ರತ್ಯಪೂಜಯತ್ ॥೨೭॥

ಸಂತೋಷಗೊಂಡ ಕೃಷ್ಣನು ವಿನಯದಿಂದ ಅವನನ್ನು ಪೂಜಿಸಿದನು, ಹಾಗೆಯೇ ಪುರುಷವ್ಯಾಘ್ರನಾದ ಭೀಮನನ್ನೂ ವಿಧಿವತ್ತಾಗಿ ಪೂಜಿಸಿದನು.

ತಾಂಶ್ಚ ವೃಷ್ಣ್ಯಂಧಕಶ್ರೇಷ್ಠಾನ್ ಧರ್ಮರಾಜೋ ಯುಧಿಷ್ಠಿರಃ ।
ಪ್ರತಿಜಗ್ರಾಹ ಸತ್ಕಾರೈರ್ಯಥಾವಿಧಿ ಯಥೋಚಿತಮ್ ॥೨೮॥

ಧರ್ಮರಾಜನಾದ ಯುಧಿಷ್ಠಿರನು ಆ ವೃಷ್ಣ್ಯಂಧಕಪ್ರಧಾನರನ್ನು ಸ್ವೀಕರಿಸಿ ಯಥೋಚಿತವಾಗಿ ವಿಧಿವತ್ತಾಗಿ ಸತ್ಕರಿಸಿದನು.

ಗುರುವತ್ ಪೂಜಯಾಮಾಸ ಕಾಂಶ್ಚಿತ್ ಕಾಂಶ್ಚಿದ್ ವಯಸ್ಯವತ್ ।
ಕಾಂಶ್ಚಿದಭ್ಯವದತ್ ಪ್ರೀತಃ ಕೈಶ್ಚಿದಪ್ಯಭಿವಾದಿತಃ ॥೨೯॥

ಕೆಲವರನ್ನು ಹಿರಿಯರಂತೆ ಪೂಜಿಸಿದನು, ಕೆಲವರನ್ನು ಸ್ನೇಹಿತರಂತೆ ಸತ್ಕರಿಸಿದನು, ಕೆಲವರನ್ನು ಸಂತೋಷದಿಂದ ಅಭಿವಂದಿಸಿದನು, ಇನ್ನೂ ಕೆಲವರಿಂದ ಅವನೇ ಅಭಿವಂದಿಸಲ್ಪಟ್ಟನು.

ತತಃ ಪೃಥಾ ಚ ಪಾರ್ಥಾಶ್ಚ ಮುದಿತಾಃ ಕೃಷ್ಣಯಾ ಸಹ ।
ಪುಂಡರೀಕಾಕ್ಷಮಾಸಾದ್ಯ ಬಭೂವುರ್ಮುದಿತೇಂದ್ರಿಯಾಃ ॥೩೦॥

ಅನಂತರ, ಕುಂತಿಯು ಮತ್ತು ಪಾಂಡವರು ಸಂತೋಷಗೊಂಡು ಕೃಷ್ಣೆಯ ಜೊತೆಯಲ್ಲಿ ಕೃಷ್ಣನನ್ನು ಸಮೀಪಿಸಿ ಪರಮಸಂತುಷ್ಟರಾದರು.

ಹರ್ಷಾದಭಿಗತೌ ದೃಷ್ಟ್ವಾ ಸಂಕರ್ಷಣಜನಾರ್ದನೌ ।
ಬಂಧುಮಂತಂ ಪೃಥಾ ಪಾರ್ಥಂ ಯುಧಿಷ್ಠಿರಮಮನ್ಯತ ॥೩೧॥

ಸಂತೋಷದಿಂದ ಬಂದ ಕೃಷ್ಣಬಲರಾಮರನ್ನು ನೋಡಿ ಕುಂತಿಯು ಯುಧಿಷ್ಠಿರನನ್ನು ಬಂಧುಯುಕ್ತನೆಂದು ಭಾವಿಸಿದಳು.

ತತಃ ಸಂಕರ್ಷಣಾಕ್ರೂರಾವಪ್ರಮೇಯಮದೀನವತ್ ।
ಭದ್ರವತ್ಯೈ ಸುಭದ್ರಾಯೈ ಧನೌಘಮುಪಜಹ್ರತುಃ ॥೩೨॥

ಪ್ರವಾಳಾನಿ ಚ ಹಾರಾಣಿ ಭೂಷಣಾನಿ ಸಹಸ್ರಶಃ ।
ಕುಥಾಸ್ತರಪರಿಸ್ತೋಮಾನ್ ವ್ಯಾಲಾಜಿನಪುರಸ್ಕೃತಾನ್ ॥೩೩॥

ಅನಂತರ, ಅದೀನರಾದ ಸಂಕರ್ಷಣ ಅಕ್ರೂರರು ಅಸಂಖ್ಯಾತವಾದ ಧನರಾಶಿಯನ್ನು ಮಂಗಳಯುಕ್ತಳಾದ ಸುಭದ್ರೆಗೆ ಉಡುಗೊರೆಯಾಗಿ ಕೊಟ್ಟರು. ಹವಳಗಳನ್ನೂ, ಹಾರಗಳನ್ನೂ, ಸಹಸ್ರಾರು ಭೂಷಣಗಳನ್ನೂ, ಆಸನಗಳ ಮೇಲೆ ಹಾಕುವ ಹಾಸುಗಳನ್ನೂ, ವ್ಯಾಲಾಜಿನ ಮೊದಲಾದವುಗಳನ್ನೂ ಕೊಟ್ಟರು.

ತದಾऽऽಭರಣರತ್ನೌಘೈರ್ದೀಪ್ತಪ್ರಭಮಜಾಯತ ।
ಶಯನಾಸನಯಾನೈಶ್ಚ ಯುಧಿಷ್ಠಿರನಿವೇಶನಮ್ ॥೩೪॥

ಆಗ ಶಯನಾಸನವಾಹನಗಳಿಂದಲೂ, ಆಭರಣರತ್ನ ಸಮೂಹಗಳಿಂದಲೂ, ಯುಧಿಷ್ಠಿರನ ಮನೆಯು ಶ್ರೇಷ್ಠವಾದ ಪ್ರಭೆವುಳ್ಳದ್ದಾಯಿತು.

ತತಃ ಪ್ರೀತಿಕರೋ ಯೂನಾಂ ವಿವಾಹಪರಮೋತ್ಸವಃ ।
ಭದ್ರವತ್ಯೈ ಸುಭದ್ರಾಯೈ ಸಪ್ತರಾತ್ರಮವರ್ತತ ॥೩೫॥

ಅನಂತರ, ಯುವಕರಿಗೆ ಸಂತೋಷಕರವಾದ ಸುಭದ್ರೆಯ ವಿವಾಹ ಮಹೋತ್ಸವವು ಏಳು ದಿನಗಳವರೆಗೆ ಜರುಗಿತು.

ತತೋ ದದೌ ವಾಸುದೇವಃ ಕನ್ಯಾರ್ಥೇ ಧನಮುತ್ತಮಮ್ ।
ಹರಣಂ ವೈ ಸುಭದ್ರಾಯಾ ಜ್ಞಾತ್ವಿದೇಯಂ ಮಹಾಯಶಾಃ ॥೩೬॥

ರಥಾನಾಂ ಕಾಂಚನಾಂಗಾನಾಂ ಕಿಂಕಿಣೀಜಾಲಮಾಲಿನಾಮ್ ।
ಚತುರ್ಯುಜಾಮುಪೇತಾನಾಂ ಸೂತ್ಯೈಃ ಕುಶಲಸಮ್ಮತೈಃ ॥೩೭॥

ಸಹಸ್ರಂ ಪ್ರದದೌ ಕೃಷ್ಣೋ ಗವಾಂ ನಿಯುತಮೇವ ಚ ।
ಉಪಪಾದ್ಯ ತು ವಶ್ಯಾನಾಂ ದೋಗ್ಧ್ರೀಣಾಂ ಪುಣ್ಯವರ್ಚಸಾಮ್ ॥೩೮॥

ಆಗ ಮಹಾಕೀರ್ತಿವಂತನಾದ ವಾಸುದೇವನು ತನ್ನ ತಂಗಿಯಾದ ಸುಭದ್ರೆಗೆ ವಿವಾಹಕಾಲದಲ್ಲಿ ಬಂಧುಗಳು ಕೊಡಬೇಕಾದ ಎಲ್ಲ ವಸ್ತುಗಳನ್ನೂ ಮತ್ತು ಶ್ರೇಷ್ಠವಾದ ಧನಗಳನ್ನೂ ಕೊಟ್ಟನು. ಕೃಷ್ಣನು ಸುವರ್ಣಾಂಗಗಳಿಂದ ಕೂಡಿದ, ಕಿಂಕಿಣೀಜಾಲವನ್ನು ಧರಿಸಿದ, ನಾಲ್ಕುಅಶ್ವಗಳಿಂದ ಉಪೇತವಾದ, ಕುಶಲರೆಂದು ಪ್ರಸಿದ್ಧರಾದ ಸೂತರನ್ನು ಹೊಂದಿದ್ದ ಸಹಸ್ರರಥಗಳನ್ನು ಉಡುಗೊರೆಯಾಗಿ ಕೊಟ್ಟನು. ಸಾಧುಗಳಾದ ಹಾಲನ್ನು ಕೊಡುವ ಪುಣ್ಯಕೀರ್ತಿಯುಳ್ಳ ಒಂದು ಲಕ್ಷ ಗೋವುಗಳನ್ನು ಒಟ್ಟುಮಾಡಿ ಅವುಗಳನ್ನು ಕೊಟ್ಟನು.

ಗಜಾನಾಂ ತು ಪ್ರಭಿನ್ನಾನಾಂ ತ್ರಿಧಾ ಪ್ರಸ್ರವತಾಂ ಮದಮ್ ।
ಗಿರಿಕೂಟನಿಕಾಶಾನಾಂ ಸಮರೇಷ್ವನಿವರ್ತಿನಾಮ್ ।
ಸುವರ್ಣಕಕ್ಷ್ಯಾಗ್ರೈವೇಯಸುವರ್ಣಾಂಕುಶಭೂಷಿತಮ್ ॥೩೯॥

ಕ್ಲೃಪ್ತಾನಾಂ ಪಟುಘಂಟಾನಾಂ ಚಾರೂಣಾಂ ಹೇಮಮಾಲಿನಾಮ್।
ಹಸ್ತ್ಯಾರೋಹೈರುಪೇತಾನಾಂ ಸಹಸ್ರಂ ಸಾಹಸಪ್ರಿಯಃ ॥೪೦॥

ಮೂರು ಕಡೆಗಳಿಂದಲೂ ಮದದ್ರವವನ್ನು ಸುರಿಸುವ ಪರ್ವತಸಮೂಹದಂತಿರುವ ಯುದ್ಧದಿಂದ ಹಿಂದಿರುಗದ, ಸುವರ್ಣಕಕ್ಷ್ಯಗ್ರೇವ್ಯೆಯ ಮತ್ತು ಅಂಕುಶಗಳಿಂದ ಕೂಡಿದ ಹೇಮಮಾಲೆಗಳನ್ನೂ, ಒಳ್ಳೆಯ ಘಂಟೆಗಳನ್ನೂ, ಕಟ್ಟಿದ್ದ ಮಾವುತರಿಂದ ಸಹಿತವಾದ ಮನೋಹರವಾದ ಸಹಸ್ರ ಗಜಗಳನ್ನೂ ಸಾಹಸಪ್ರಿಯನಾದ ಅವನು ಕೊಟ್ಟನು.

ಪ್ರದದೌ ವಾಸುದೇವಸ್ತು ವಸುದೇವಾಜ್ಞಯಾ ತದಾ ।
ಬಡಬಾನಾಂ ಚ ಶುಭ್ರಾಣಾಂ ಚಂದ್ರಾಂಶುಸಮವರ್ಚಸಾಮ್ ॥೪೧॥

ದದೌ ಜನಾರ್ದನಃ ಪ್ರೀತ್ಯಾ ಸಹಸ್ರಂ ಹೇಮಮಾಲಿನಾಮ್ ।
ಕಾಂಭೋಜಾರಟ್ಟಬಾಹ್ಲೀಕಸಿಂಧುಜಾನಾಂ ಚ ಭಾರತ ॥೪೨॥

ವಸುದೇವನ ಆಜ್ಞೆಯಂತೆ ವಾಸುದೇವನು ಚಂದ್ರನಸಮಾನ ಕಾಂತಿಯನ್ನು ಹೊಂದಿದ್ದ, ಹೇಮಮಾಲೆಗಳನ್ನು ಧರಿಸಿದ್ದ ಶುಭ್ರವಾದ ಸಹಸ್ರ ಹೆಣ್ಣುಕುದುರೆಗಳನ್ನು ಸಂತೋಷದಿಂದ ಕೊಟ್ಟನು. ಭಾರತನೇ, ಆ ಕುದುರೆಗಳು ಕಾಂಭೋಜ, ಅರಟ್ಟ, ಬಾಹ್ಲೀಕ, ಸೈಂಧವ ಮೊದಲಾದ ಅನೇಕ ಜಾತಿಗಳಿಗೆ ಸೇರಿದವು.

ಸುವರ್ಣಕೃತಸನ್ನಾಹಘಂಟಾರಾವವಿನಾದಿನಾನ್ ।
ಶ್ವೇತಚಾಮರಸಂಚ್ಛನ್ನಾನ್ ಸರ್ವಶಸ್ತ್ರೈರಲಂಕೃತಾನ್ ॥೪೩॥

ಜಾತ್ಯಶ್ವಾನಾಂ ಸಹಸ್ರಾಣಿ ಪಂಚಾಶತ್ ಪ್ರದದೌ ತದಾ ।
ಹಯಾನಾಂ ಚಂದ್ರಕಾಶಾನಾಂ ಶ್ಯಾಮಕರ್ಣಂ ದದೌ ಶತಮ್ ॥೪೪॥

ಸುವರ್ಣಮಯವಾದ ಕಡಿವಾಣಗಳಿಂದ ಕೂಡಿದ, ಘಂಟಾ- ಶಬ್ದಗಳಿಂದ ಭೂಷಿತವಾದ, ಶ್ವೇತಚಾಮರಗಳನ್ನು ಹೊಂದಿದ್ದ, ಯಾವಶಸ್ತ್ರಗಳಿಂದಲೂ ಗಾಯವಾಗದ ಐವತ್ತುಸಹಸ್ರ ಸಂಖ್ಯೆಯ ಒಳ್ಳೆಯ ಜಾತಿಯ ಕುದುರೆಗಳನ್ನು ಕೊಟ್ಟನು. ಒಂದು ಕಿವಿಯು ಕಪ್ಪಗಿದ್ದು ಉಳಿದೆಲ್ಲ ಕಡೆಯೂ ಶರೀರವು ಬೆಳ್ಳಗಿರುವ ನೂರು ಕುದುರೆಗಳನ್ನು ಕೊಟ್ಟನು.

ತಥೈವಾಶ್ವತರೀಣಾಂ ಚ ದಾಂತಾನಾಂ ವಾತರಂಹಸಾಮ್ ।
ಶತಾನ್ಯಂಜನಕೇಶಾನಾಂ ಶ್ವೇತಾನಾಂ ಪಂಚ ಪಂಚ ಚ ॥೪೫॥

ಪಳಗಿಸಿದ ವಾಯುವೇಗವುಳ್ಳ ತಲೆಯ ಮೇಲೆ ಕಪ್ಪುಕೂದಲುಗಳನ್ನುಳ್ಳ, ಉಳಿದೆಲ್ಲ ಕಡೆಯೂ ಬಿಳಿಯಾದ ಇಪ್ಪತ್ತೈದು ಅಶ್ವತರಿಗಳನ್ನು (ಹೇಸರಗತ್ತೆಗಳನ್ನು) ಕೊಟ್ಟನು.

ಶಿಬಿಕಾನಾಂ ಸಹಸ್ರಂ ಚ ಪ್ರದದೌ ಮಧುಸೂದನಃ ।
ಕೃಷ್ಣಾನಾಮಪಿ ಚಾಶ್ವಾನಾಂ ಬಾಹ್ಲೀಕಾನಾಂ ಜನಾರ್ದನಃ ।
ದದೌ ಶತಸಹಸ್ರಂ ವೈ ಕನ್ಯಾಧನಮನುತ್ತಮಮ್ ॥೪೬॥

ಮಧುಸೂದನನು ಒಂದು ಸಹಸ್ರ ಪಲ್ಲಕ್ಕಿಗಳನ್ನು ಕೊಟ್ಟನು. ಜನಾರ್ದನನು ಬಾಹ್ಲೀಕದೇಶದ ಜಾತಿಯ ಹತ್ತುಸಾವಿರ ಕಪ್ಪುಕುದುರೆಗಳನ್ನು ಶ್ರೇಷ್ಠವಾದ ಕನ್ಯಾಧನವಾಗಿ ಕೊಟ್ಟನು.

ಸ್ನಾಪನಾಚ್ಛಾದನೇ ಚೈವ ಭೋಜನೇ ಪಾಚನೇ ತಥಾ ।
ಆದಾನೋದ್ವಾಸನೇ ಚೈವ ಪ್ರೇಷಣೇ ಯತ್ರ ಕುತ್ರ ಚಿತ್ ।
ಅನುಲೇಪನೇ ಚ ಗಂಧಾನಾಂ ಪೇಷಣೇ ಚ ವಿಚಕ್ಷಣಾಮ್ ॥೪೭॥

ಸರ್ವಕರ್ಮಣಿ ನಿಷ್ಣಾತಂ ಯುಕ್ತಂ ಚ ವಯಸಾऽನ್ವಿತಮ್ ।
ಸ್ತ್ರೀಣಾಂ ಸಹಸ್ರಂ ಗೌರೀಣಾಂ ಸವೇಷಾಣಾಂ ಸುವರ್ಚಸಾಮ್ ॥೪೮॥

ಸ್ನಾನಮಾಡಿಸುವುದರಲ್ಲಿಯೂ, ವಸ್ತ್ರಉಡಿಸುವುದರಲ್ಲಿಯೂ, ಭೋಜನದಲ್ಲಿಯೂ, ಪಾಕದಲ್ಲಿಯೂ, ಸ್ವೀಕರಿಸುವುದರಲ್ಲಿಯೂ, ಕಳುಹಿಸಿಕೊಡುವುದರಲ್ಲಿಯೂ, ವಿಸರ್ಜನಮಾಡುವುದರಲ್ಲಿಯೂ, ಗಂಧವನ್ನು ಅರೆದು ಅನುಲೇಪನಮಾಡುವುದರಲ್ಲಿಯೂ ಸಮರ್ಥರಾದ ಎಲ್ಲಕರ್ಮಗಳಲ್ಲಿಯೂ ನಿಪುಣರಾದ ಒಳ್ಳೆಯ ವಯಸ್ಸಿನಿಂದ ಕೂಡಿದ, ಒಳ್ಳೆಯ ವೇಷವನ್ನೂ ಕಾಂತಿಯನ್ನೂ ಧರಿಸಿದ ಇಪ್ಪತ್ತೆರಡು ವರ್ಷದ ಒಂದು ಸಾವಿರ ಯುವತಿಯರನ್ನು ಉಡುಗೊರೆಯಾಗಿ ಕೊಟ್ಟನು.

ಸುವರ್ಣಶತಕೀರ್ಣಾನಾಮರೋಗಾಣಾಂ ಸುವರ್ಚಸಾಮ್ ।
ಪರಿಚರ್ಯಾಸು ದಕ್ಷಾಣಾಂ ಪ್ರದದೌ ಪುಷ್ಕರೇಕ್ಷಣಃ ॥೪೯॥

ಕೃತಾಕೃತಸ್ಯ ಮುಖ್ಯಸ್ಯ ಕನಕಸ್ಯ ಸುವರ್ಚಸಃ ।
ಮನುಷ್ಯಭಾರಾನ್ ದಾಶಾರ್ಹಃ ಪ್ರದದೌ ಪ್ರಯುತಂ ತದಾ ॥೫೦॥

ಭೂಷಣಾನಾಂ ಚ ಮುಖ್ಯಾನಾಂ ಶತಭಾರಂ ದದೌ ಧನಮ್ ।
ಮುಕ್ತಾಹಾರಾಣಿ ಶುಭ್ರಾಣಿ ಶತಸಂಖ್ಯಾನಿ ಕೇಶವಃ ॥೫೧॥

ಸುವರ್ಣಾಭರಣಗಳಿಂದ ಭೂಷಿತರಾದ ರೋಗರಹಿತರಾದ ಕಾಂತಿಯುಕ್ತರಾದ ಪರಿಚರ್ಯೆಯಲ್ಲಿ ಕುಶಲರಾದ ಯುವತಿಯರ ಸಮೂಹವನ್ನು ಕಮಲನಯನನಾದ ಕೃಷ್ಣನು ಉಡುಗೊರೆಯಾಗಿ ನೀಡಿದನು. ಕೇವಲ ಸುವರ್ಣಗಳಿಂದ ಮಾಡಿದ ಆಭರಣಗಳನ್ನು, ರತ್ನಗಳನ್ನು ಮೆತ್ತಿದ್ದ ಸುವರ್ಣಾಭರಣಗಳನ್ನು ಹತ್ತು ಮನುಷ್ಯರು ಹೊರುವ ಭಾರವುಳ್ಳ ಹತ್ತು ಸಾವಿರ ಆಭರಣಗಳನ್ನು ಕೃಷ್ಣನು ಆಗ ಕೊಟ್ಟನು. ಮುಖ್ಯವಾದ ಭೂಷಣಗಳ ನೂರರಷ್ಟು ಭಾರದ ಧನವನ್ನು ಕೊಟ್ಟನು. ಕೇಶವನು ನೂರರ ಸಂಖ್ಯೆಯಲ್ಲಿ ಶುಭ್ರವಾದ ಮುತ್ತಿನ ಹಾರಗಳನ್ನು ಕೊಟ್ಟನು.

ಪ್ರವಾಳಾನಾಂ ಸಹಸ್ರಂ ಚ ತಥಾ ವೈ ಶಯನಾಸನಾನ್ ।
ಸುವರ್ಣಾಪಾದಪೀಠಾನಾಂ ಮಹಾರ್ಹಾಸ್ತರಣಾಂಸ್ತಥಾ ।
ಪರ್ಯಂಕಾಣಾಂ ಸಹಸ್ರಂ ದದೌ ಕನ್ಯಾಧನಂ ತಥಾ ॥೫೩॥

ಒಂದು ಸಹಸ್ರ ಹವಳಗಳನ್ನು, ಹಾಗೆಯೇ ಹಾಸಿಗೆ ಮತ್ತು ಆಸನಗಳನ್ನು, ಸುವರ್ಣಮಯವಾದ ಪಾದಪೀಠಗಳನ್ನು, ಅನರ್ಘ್ಯವಾದ ಹಾಸುವ ಬಟ್ಟೆಗಳನ್ನು, ಒಂದು ಸಹಸ್ರಮಂಚಗಳನ್ನು, ಕನ್ಯಾಧನವಾಗಿ ಕೊಟ್ಟನು.

ರಾಮಃ ಪಾಣಿಗ್ರಹನಿಕಂ ದದೌ ಪಾರ್ಥಾಯ ಲಾಂಗಲೀ ।
ಪ್ರೀಯಮಾಣೋ ಹಲಧರಃ ಸಂಬಂಧಪ್ರೀತಮಾನಸಃ ॥೫೪॥

ನೇಗಿಲನ್ನು ಹಿಡಿದ ಬಲರಾಮನು ಸಂತುಷ್ಟನಾಗಿ ಅರ್ಜುನನಿಗೆ ಅನೇಕ ಮದುವೆಯ ಉಡುಗೊರೆಗಳನ್ನು ಈ ಸಂಬಂಧಿಂದ ಪ್ರಸನ್ನನಾಗಿ ನೀಡಿದನು.

ಸ ಮಹಾಧನರತ್ನೌಘೋ ವಸ್ತ್ರಕಂಬಲಫೇನವಾನ್ ।
ಮಹಾರಥಗಜಗ್ರಾಹೋ ಜಾತ್ಯಶ್ವೈಃ ಶೈವಲಾಕುಲಃ ।
ಪಾಂಡುಸಾಗರಮಾವಿದ್ಧಂ ಪ್ರವಿವೇಶ ಮಹಾನದಃ ॥೫೫॥

ಆ ಮಹಾಧನ ಮತ್ತು ರತ್ನಗಳ ಪ್ರವಾಹವು ವಸ್ತ್ರಕಂಬಳಿಗಳ ರೂಪದ ನೊರೆಯಿಂದಲೂ, ಮಹಾರಥಗಳೂ ಮತ್ತು ಗಜಗಳೆಂಬ ಮೊಸಳೆಗಳಿಂದಲೂ, ಜಾತ್ಯಶ್ವಗಳೆಂಬ ಶೈವಲದಿಂದಲೂ ಕೂಡಿದುದವಾಗಿ ಮಹಾನದಿಯ ರೂಪದಲ್ಲಿ ಪಾಂಡುಸಾಗರದ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಪಾಂಡುಸಾಗರವನ್ನು ಪ್ರವೇಶಿಸಿತು.

ಪೂರ್ಣಮಾಪೂರಯಂಸ್ತೇಷಾಮಭೀಷ್ಟಃ ಸರ್ವಭೋಗವಾನ್ ।
ಪ್ರತಿಜಗ್ರಾಹ ತತ್ಸರ್ವಂ ಧನೌಘಂ ವೈ ಯುಧಿಷ್ಠಿರಃ ॥೫೬॥

ಮೊದಲೇ ಪೂರ್ಣವಾಗಿದ್ದ ಅವರ ಸಮೃದ್ಧಿಯನ್ನು ಇನ್ನೂ ಹೆಚ್ಚಿಸುತ್ತಾ ಹರಿದುಬಂದ ಸರ್ವಭೋಗಪ್ರದವಾದ ಇಷ್ಟವಾದ ಆ ನದಿಯ ರೂಪದ ಧನರಾಶಿಯೆಲ್ಲವನ್ನೂ ಧರ್ಮರಾಜನು ಸ್ವೀಕರಿಸಿದನು.

ಪೂಜಯಾಮಾಸ ತಾಂಶ್ಚೈವ ವೃಷ್ಣ್ಯಂಧಕಮಹಾರಥಾನ್ ।
ತೇ ಸಮೇತಾ ಮಹಾತ್ಮಾನಃ ಕುರುವೃಷ್ಣ್ಯಂಧಕೋತ್ತಮಾಃ ॥೫೭॥

ವಿಜಹ್ರುರಮರಾವಾಸೇ ನರಾಃ ಸುಕೃತಿನೋ ಯಥಾ ।
ತತ್ರತತ್ರ ಮಹಾಪಾನೈರಾಸವೈಶ್ಚ ಮಹಾಧನೈಃ ॥೫೮॥

ಧರ್ಮರಾಜನು ವೃಷ್ಣ್ಯಂಧಕ ಮಹಾರಥರೆಲ್ಲರನ್ನೂ ತಾನು ಪೂಜಿಸಿದನು. ಮಹಾನುಭಾವರಾದ ಕುರುಶ್ರೇಷ್ಠರು, ವೃಷ್ಣಿಶ್ರೇಷ್ಠರು ಮತ್ತು ಅಂಧಕಶ್ರೇಷ್ಠರು ಒಟ್ಟಿಗೆ ಸೇರಿ ಪುಣ್ಯವನ್ನು ಮಾಡಿದ ಪುರುಷನು ಸ್ವರ್ಗದಲ್ಲಿ ವಿಹಾರ ಮಾಡಿದಂತೆ ವಿಹಾರವನ್ನು ಮಾಡಿದರು. ಅಲ್ಲಲ್ಲಿ ಮಹಾಪಾನಗಳಿಂದಲೂ, ಮಹಾಧನಗಳಿಂದಲೂ, ಮಹಾಆಸವಗಳಿಂದಲೂ, ಸಂತೋಷಪಡುತ್ತಾ ವಿಹರಿಸಿದರು.

ಪೀತ್ವಾಪೀತ್ವಾ ಚ ಮೈರೇಯಾನ್ ಉತ್ಕೃಷ್ಟತಳತಾಡಿತಾಃ ।
ಯಥಾಯೋಗಂ ಯಥಾಪ್ರೀತಿ ವಿಜಹ್ರುಃ ಕುರುವೃಷ್ಣಯಃ ॥೬೦॥

ಕುರುವೃಷ್ಣಿಗಳು ಮೈರೇಯರಸವನ್ನು ಮತ್ತೆ ಮತ್ತೆ ಪಾನಮಾಡುತ್ತಾ ಚಪ್ಪಾಳೆಗಳನ್ನು ತಟ್ಟಿ ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಯಥೋಚಿತವಾಗಿ ವಿಹರಿಸಿದರು.

ಏವಂ ಬಹುವಿಧೈರ್ಭೋಗೈರ್ವಿಹೃತ್ಯ ದಿವಸಾನ್ ಬಹೂನ್ ।
ಪೂಜಿತಾಃ ಕುರುಭಿರ್ಜಗ್ಮುಃ ಪುನರ್ದ್ವಾರವತೀಂ ಪ್ರತಿ ॥೬೧॥

ಹೀಗೆ ಅನೇಕ ದಿವಸಗಳವರೆಗೆ ಅನೇಕ ಭೋಗಗಳಿಂದ ಕುರುಗಳ ಜೊತೆಯಲ್ಲಿ ವಿಹಾರವನ್ನು ಮಾಡಿ ಕುರುಗಳಿಂದ ಪೂಜಿಸಲ್ಪಟ್ಟು ಪುನಃ ದ್ವಾರಾವತೀ ಪಟ್ಟಣಕ್ಕೆ ಹಿಂತಿರುಗಿದರು.

ರತ್ನಾನ್ಯಾದಾಯ ಶುಭ್ರಾಣಿ ದತ್ತಾನಿ ಕುರುಸತ್ತಮೈಃ ।
ರಾಮಂ ಪುರಸ್ಕೃತ್ಯ ಯಯುರ್ವೃಷ್ಣ್ಯಂಧಕಮಹಾರಥಾಃ ॥೬೨॥

ಕುರುಶ್ರೇಷ್ಠರು ಕೊಟ್ಟ ದಿವ್ಯವಾದ ರತ್ನಗಳನ್ನು ತೆಗೆದುಕೊಂಡು ವೃಷ್ಣ್ಯಂಧಕ ಮಹಾರಥರು ರಾಮನನ್ನು ಮುಂದೆಮಾಡಿಕೊಂಡು ಅಲ್ಲಿಂದ ಹೊರಟರು.

ರಾಮಃ ಸುಭದ್ರಾಂ ಸಂಪೂಜ್ಯ ಪರಿಷ್ವಜ್ಯ ಸ್ವಸಾಂ ತದಾ ।
ನ್ಯಾಸೇತಿ ದ್ರೌಪದೀಮುಕ್ತ್ವಾ ಪರಿದಾಯ ಮಹಾಬಲಃ ॥೬೩॥

ಪಿತೃಷ್ವಸಾಯಾಶ್ಚರಣಾವಭಿವಾದ್ಯ ಯಯೌ ತದಾ ।
ತಸ್ಮಿನ್ ಕಾಲೇ ಪೃಥಾ ಪ್ರೀತಾ ಪೂಜಯಾಮಾಸ ತಂ ತಥಾ ॥೬೪॥

ವೃಷ್ಣಿಪ್ರವೀರಃ ಪಾರ್ಥೈಶ್ಚ ಪೌರೈಶ್ಚ ಪರಮಾರ್ಚಿತಃ ।
ಯಯೌ ದ್ವಾರವತೀಂ ರಾಮೋ ವೃಷ್ಣಿಭಿಃ ಸಹ ಸಂಯುತಃ ॥೬೫॥

ಬಲರಾಮನು ಸುಭದ್ರೆಯನ್ನು ಆಲಿಂಗಿಸಿ ತಂಗಿಯಾದ ಅವಳನ್ನು ಸತ್ಕರಿಸಿ ಇವಳನ್ನು ನ್ಯಾಸವಾಗಿ ನಿನ್ನ ಬಳಿ ಇಟ್ಟಿದ್ದೇನೆ ಎಂದು ದ್ರೌಪದಿಗೆ ಹೇಳಿ ಅವಳ ಅನುಮತಿಯನ್ನು ಪಡೆದು ಸೋದರತ್ತೆಯ ಪಾದಗಳಿಗೆ ನಮಸ್ಕರಿಸಿ ಅಲ್ಲಿಂದ ಹೊರಟನು. ಆ ಕಾಲದಲ್ಲಿ ಕುಂತಿಯು ಸಂತೋಷದಿಂದ ಬಲರಾಮನನ್ನು ಪೂಜಿಸಿದಳು. ವೃಷ್ಣಿವೀರನಾದ ಬಲರಾಮನು ಪಾಂಡವರಿಂದಲೂ ಮತ್ತು ಪೌರರಿಂದಲೂ ಉತ್ತಮವಾಗಿ ಸತ್ಕರಿಸಲ್ಪಟ್ಟು ವೃಷ್ಣಿಗಳ ಜೊತೆಯಲ್ಲಿ ದ್ವಾರವತೀ ನಗರಕ್ಕೆ ಹಿಂದಿರುಗಿದನು.

ವಾಸುದೇವಸ್ತು ಪಾರ್ಥೇನ ತತ್ರೈವ ಸಹ ಭಾರತ ।
ಚತುಸ್ತ್ರಿಂಶದಹೋರಾತ್ರಂ ರಮಮಾಣೋ ಮಹಾಬಲಃ ॥೬೬॥

ಉವಾಸ ನಗರೇ ರಮ್ಯೇ ಶಕ್ರಪ್ರಸ್ಥೇ ಮಹಾತ್ಮನಾ ।
ವ್ಯಚರದ್ ಯಮುನಾಕೂಲೇ ಪಾರ್ಥೇನ ಸಹ ಭಾರತ ॥೬೭॥

ವಾಸುದೇವನಾದರೋ ಇನ್ನೂ ಮೂವತ್ನಾಲ್ಕು ದಿವಸಗಳು ಮಹಾತ್ಮನಾದ ಅರ್ಜುನನ ಜೊತೆಯಲ್ಲಿ ವಿಹಾರ ಮಾಡುತ್ತಾ ಮನೋಹರವಾದ ಇಂದ್ರಪ್ರಸ್ಥನಗರದಲ್ಲಿ ವಾಸಿಸಿ ಅರ್ಜುನನ ಜೊತೆಯಲ್ಲಿ ಯಮುನಾತೀರದಲ್ಲಿ ಸಂಚರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತವಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಹರಣಹಾರಿಕಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಆಸನ್ ಕೃಷ್ಣಾಯಾಃ ಪಂಚ ಸುತಾ ಗುಣಾಢ್ಯಾ
ವಿಶ್ವೇದೇವಾಃ ಪಂಚಗಂಧರ್ವಮುಖ್ಯೈಃ ।
ಆವಿಷ್ಟಾಸ್ತೇ ಚಿತ್ರರಥಾಭಿತಾಮ್ರ-
ಕಿಶೋರಗೋಪಾಲಬಲೈಃ ಕ್ರಮೇಣ ॥೨೧೨॥

ದ್ರೌಪದಿಯಲ್ಲಿ ಪಾಂಡವರಿಂದ ಐದು ಮಂದಿ ಗುಣಾಢ್ಯರಾದ ಮಕ್ಕಳು ಜನಿಸಿದರು. ಅವರು ಹಿಂದೆ ವಿಶ್ವೇದೇವತೆಗಳು ಕ್ರಮವಾಗಿ ಚಿತ್ರರಥ ಅಭಿತಾಮ್ರ ಕಿಶೋರ ಗೋಪಾಲ ಬಲ ಎಂಬ ಐವರು ಶ್ರೇಷ್ಠ ಗಂಧರ್ವರಿಂದ ಆವಿಷ್ಟರು.

ಪ್ರತಿವಿಂಧ್ಯಃ ಸುತಸೋಮಃ ಶ್ರುತಾಖ್ಯಕೀರ್ತಿಃ
ಶತಾನೀಕ ಉತ ಶ್ರುತಕ್ರಿಯಃ ।
ಯುಧಿಷ್ಠಿರಾದ್ಯೈಃ ಕ್ರಮಶಃ ಪ್ರಜಾತಾ-
ಸ್ತೇಷಾಂ ದ್ವಯೋಶ್ಚಾವರಜೋಽಭಿಮನ್ಯುಃ ॥೨೧೩॥

ಪ್ರತಿವಿಂಧ್ಯ ಸುತಸೋಮ ಶ್ರುತಕೀರ್ತಿ ಶತಾನೀಕ ಶ್ರುತಕ್ರಿಯ- ಇವರೆ ಆ ಐವರು ಮಕ್ಕಳು. ಕ್ರಮವಾಗಿ ಯುಧಿಷ್ಠಿರ ಮುಂತಾದ ಐವರಿಂದ ಹುಟ್ಟಿದರು. ಅವರಲ್ಲಿ ಪ್ರತಿವಿಂಧ್ಯ ಸುತಸೋಮರ ಬಳಿಕ ಹುಟ್ಟಿದವನು ಅಭಿಮನ್ಯು.

ಚಂದ್ರಾಂಶಯುಕ್ತೋಽತಿತರಾಂ ಬುಧೋಽಸೌ
ಜಾತಃ ಸುಭದ್ರಾ ಜಠರೇಽರ್ಜುನೇನ ।
ಧರ್ಮೇರಶಕ್ರಾಂಶಯುತೋಽಶ್ವಿನೋಶ್ಚ
ತಥೈವ ಕೃಷ್ಣಸ್ಯ ಸ ಸನ್ನಿಧಾನಯುಕ್ ॥೨೧೪॥

ಚಂದ್ರನ ಬಹು ಆವೇಶಯುಕ್ತನಾದ ಬುಧನೆ ಅಭಿಮನ್ಯು. ಅರ್ಜುನನಿಂದ ಸುಭದ್ರೆಯ ಗರ್ಭದಲ್ಲಿ ಅವತರಿಸಿದ್ದ. ಅವನು ಯಮ ವಾಯು ಇಂದ್ರರ ಅಂಶಗಳಿಂದಲೂ ಶ್ರೀಕೃಷ್ಣನ ಸನ್ನಿಧಾನದಿಂದಲೂ ಯುಕ್ತನಾಗಿದ್ದ.

ಸರ್ವೇऽಪಿ ತೇ ವೀರ್ಯವಂತಃ ಸುರೂಪಾ
ಭಕ್ತಾ ವಿಷ್ಣೋಃ ಸರ್ವಶಾಸ್ತ್ರೇಷ್ವಭಿಜ್ಞಾಃ ।
ಮೋದಂ ಯಯುಃ ಪಾಂಡವಾಸ್ತೈಃ ಸುತೈಶ್ಚ
ವಿಶೇಷತಃ ಸಾತ್ವತೀನಂದನೇನ ॥೨೧೫॥

ಪಾಂಡವರ ಮಕ್ಕಳು ಎಲ್ಲರೂ ಬಲಶಾಲಿಗಳು, ಸ್ಫುರದ್ರೂಪಿಗಳು, ವಿಷ್ಣುಭಕ್ತರು, ಸರ್ವಶಾಸ್ತ್ರಾಭಿಜ್ಞರು. ಈ ಮಕ್ಕಳನ್ನು ಅವರಲ್ಲಿಯೂ ವಿಶೇಷವಾಗಿ ಅಭಿಮನ್ಯುವನ್ನು ನೋಡಿ ಪಾಂಡವರು ಆನಂದಿಸಿದರು.

★ ★ ★ ★

ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ

(ಅಭಿಮನ್ಯುವಿನ ಜನನ, ಕೃಷ್ಣನಿಂದ ಅವನ ಲಾಲನ, ಅರ್ಜುನನಿಂದ ಶಸ್ತ್ರಾಸ್ತ್ರ ಪ್ರಾಪ್ತಿ, ಪಂಚದ್ರೌಪದೇಯರ ಜನನ.)

ವೈಶಂಪಾಯನಃ

ತತಃ ಸುಭದ್ರಾ ಸೌಭದ್ರಂ ಕೇಶವಸ್ಯ ಪ್ರಿಯಾ ಸ್ವಸಾ ।
ಜಯಂತಮಿವ ಪೌಲೋಮೀ ದ್ಯುತಿಮಂತಮಜೀಜನತ್ ॥೧॥

ಅನಂತರ, ಕೇಶವನ ಪ್ರೀತಿಪಾತ್ರಳಾದ ತಂಗಿಯಾದ ಸುಭದ್ರೆಯು ಪೌಲೋಮಿಯು ಜಯಂತನನ್ನು ಪಡೆದಂತೆ ಕಾಂತಿಯುಕ್ತನಾದ ಮಗನನ್ನು ಪಡೆದಳು.

ದೀರ್ಘಬಾಹುಂ ಮಹಾಸತ್ವಂ ವೃಷಭಾಕ್ಷಮರಿಂದಮಮ್ ।
ಸುಭದ್ರಾ ಸುಷುವೇ ವೀರಮಭಿಮನ್ಯುಂ ನರರ್ಷಭಮ್ ॥೨॥

ದೀರ್ಘಬಾಹುವೂ, ಮಹಾಸತ್ವನೂ, ವೃಷಭಾಕ್ಷನೂ, ಅರಿಂದಮನೂ, ವೀರನೂ, ನರಶ್ರೇಷ್ಠನೂ ಆದ ಅಭಿಮನ್ಯುವನ್ನು ಸುಭದ್ರೆಯು ಪ್ರಸವಿಸಿದಳು.

ಅಭೀಶ್ಚ ಮನ್ಯುಮಾಂಶ್ಚೈವ ತತಸ್ತಮರಿಮರ್ದನಮ್ ।
ಅಭಿಮನ್ಯುರಿತಿ ಪ್ರಾಹುರಾರ್ಜುನಿಂ ಬ್ರಾಹ್ಮಣರ್ಷಭಾಃ ॥೩॥

ಭಯರಹಿತನಾದ ಕಾರಣದಿಂದ ಮತ್ತು ಶತ್ರುಗಳ ಮೇಲೆ ಮನ್ಯು ಎಂದರೆ ಕೋಪವುಳ್ಳ ಕಾರಣದಿಂದ ಅರಿಮರ್ದನನಾದ ಆ ಅರ್ಜುನನ ಪುತ್ರನನ್ನು ಬ್ರಾಹ್ಮಣಶ್ರೇಷ್ಠರು ಅಭಿಮನ್ಯು ಎಂದು ಕರೆದರು.

ಸ ಸಾತ್ವತ್ಯಾಮತಿರಥಃ ಸಂಬಭೂವ ಧನಂಜಯಾತ್ ।
ಮಖೇ ನಿರ್ಮಥ್ಯಮಾನಾದ್ವಾ ಶಮೀಗರ್ಭಾದ್ಧುತಾಶನಃ ॥೪॥

ಅತಿರಥನಾದ ಅವನು ನಿರ್ಮಥಿಸಲ್ಪಡುವ ಶಮಿಯ ಅರಣ್ಯಗಳ ಗರ್ಭದಿಂದ ಅಗ್ನಿಯು ಉದಯಿಸುವಂತೆ ಧನಂಜಯನಿಂದ ಸಾತ್ವತಿಯಾದ ಸುಭದ್ರೆಯಲ್ಲಿ ಉದಯಿಸಿದನು.

ಯಸ್ಮಿಂಜಾತೇ ಮಹಾಬಾಹುಃ ಕುಂತೀಪುತ್ರೋ ಯುಧಿಷ್ಠಿರಃ ।
ಅಯುತಂ ಗಾ ದ್ವಿಜಾತಿಭ್ಯಃ ಪ್ರಾದಾನ್ನಿಷ್ಕಾಂಶ್ಚ ತಾವತಃ ॥೫॥

ಅವನ ಜನನ ಸಮಯದಲ್ಲಿ ಮಹಾಬಾಹುವಾದ ಕುಂತೀಪುತ್ರನಾದ ಯುಧಿಷ್ಠಿರನು ಅಯುತಗೋವುಗಳನ್ನು ಮತ್ತು ಅಯುತನಿಷ್ಕಗಳನ್ನು ಬ್ರಾಹ್ಮಣರಿಗೆ ದಾನಮಾಡಿದನು.

ಲಾಲಿತೋ ವಾಸುದೇವಸ್ಯ ಬಾಲ್ಯಾತ್ ಪ್ರಭೃತಿ ಚಾಭವತ್ ।
ಪಿತೄಣಾಂ ಚೈವ ಸರ್ವೇಷಾಂ ಪ್ರಜಾನಾಮಿವ ಚಂದ್ರಮಾಃ ॥೬॥

ಅಭಿಮನ್ಯುವು ಬಾಲ್ಯದಿಂದಲೂ ಕೃಷ್ಣನಿಂದ ಲಾಲಿತನಾದನು. ಎಲ್ಲಾ ಪ್ರಜೆಗಳಿಗೆ ಚಂದ್ರನಂತೆ, ಎಲ್ಲಾ ಪಿತೃಗಳಿಗೆ ಆಹ್ಲಾದಕರನಾದನು.

ಜನ್ಮಪ್ರಭೃತಿ ಕೃಷ್ಣಸ್ತು ಚಕ್ರೇ ತಸ್ಯ ಕ್ರಿಯಾಃ ಶುಭಾಃ ।
ಸ ಚಾಪಿ ವವೃಧೇ ಬಾಲಃ ಶುಕ್ಲಪಕ್ಷೇ ಯಥಾ ಶಶೀ ॥೭॥

ಅವನ ಜನನದಿಂದ ಆರಂಭಿಸಿ ಎಲ್ಲಾ ಸಂಸ್ಕಾರಗಳನ್ನು ಕೃಷ್ಣನೇ ಅವನಿಗೆ ಮಾಡಿಸಿದನು. ಆ ಬಾಲನಾದರೋ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಿದನು.

ಚತುಷ್ಪಾದಂ ದಶವಿಧಂ ಧನುರ್ವೇದಮರಿಂದಮ ।
ಅರ್ಜುನಾದ್ ವೇದ ವೇದಜ್ಞಾತ್ ಸಕಲಂ ದಿವ್ಯಮಾನುಷಮ್ ॥೮॥

ಅರಿಂದಮನೇ, ವಿಧಿಪಾದ, ಮಂತ್ರಪಾದ, ಪೂಜಾಪಾದ ಮತ್ತು ರಹಸ್ಯಪಾದ ಎಂಬ ನಾಲ್ಕು ಪಾದಗಳಿಂದ ಕೂಡಿದ ಶಿಷ್ಟಾ, ವಿಧಿ, ಪ್ರಯೋಗ, ಮುಷ್ಟಿ, ಲಕ್ಷ್ಯನಿಪಾತನ, ಅಸ್ತ್ರ, ಅಸ್ತ್ರತಪಶ್ಚರ್ಯೆ, ದಿವ್ಯಪ್ರಮೋಕ್ಷ, ಮಾನುಷಪ್ರಮೋಕ್ಷ, ಮತ್ತು ಉಪಸಂಹಾರ ಎಂಬ ಹತ್ತು ವಿಧದಿಂದ ಕೂಡಿದ ದಿವ್ಯಮಾನುಷಪ್ರಭೇದವುಳ್ಳ ಧನುರ್ವೇದವನ್ನು ಸರ್ವವೇದಜ್ಞಾನಿಯಾದ ಅರ್ಜುನನಿಂದ ಅವನು ಸಮಗ್ರವಾಗಿ ಕಲಿತನು.

ವಿಜ್ಞಾನೇಷ್ವಪಿ ಶಸ್ತ್ರಾಣಾಂ ಸೌಷ್ಠವೇ ಚ ಮಹಾಬಲಃ ।
ಕ್ರಿಯಾಸ್ವಪಿ ಚ ಸರ್ವಾಸು ವಿಶೇಷಾನಭ್ಯಶಿಕ್ಷಯತ್ ॥೯॥

ಶಸ್ತ್ರಗಳ ವಿಜ್ಞಾನದಲ್ಲಿಯೂ, ಶಸ್ತ್ರಗಳ ಕೌಶಲದಲ್ಲಿಯೂ ಮತ್ತು ಎಲ್ಲಾ ಕ್ರಿಯೆಗಳಲ್ಲಿಯೂ ಮಹಾಬಲನಾದ ಅವನು ಅರ್ಜುನನಿಂದ ವಿಶೇಷವಾದುದನ್ನು ಕಲಿತನು.

ಆಗಮೇ ಚ ಪ್ರಯೋಗೇ ಚ ಚಕ್ರೇ ತುಲ್ಯಮಿವಾತ್ಮನಃ ।
ತುತೋಷ ಪುತ್ರಂ ಸೌಭದ್ರಂ ಪ್ರೇಕ್ಷಮಾಣೋ ಧನಂಜಯಃ ॥೧೦॥

ವಿದ್ಯೆಯಲ್ಲಿಯೂ ಮತ್ತು ವಿದ್ಯೆಯ ಅನುಷ್ಠಾನದಲ್ಲಿಯೂ ಅರ್ಜುನನು ಅವನನ್ನು ತನಗೆ ಸಮಾನನನ್ನಾಗಿ ಮಾಡಿದನು. ಸುಭದ್ರೆಯ ಮಗನಾದ ಅಭಿಮನ್ಯುವನ್ನು ನೋಡುತ್ತಾ ಅರ್ಜುನನು ಬಹಳ ಸಂತೋಷಪಟ್ಟನು.

ಸರ್ವಸಂಹನನೋಪೇತಂ ಸರ್ವಲಕ್ಷಣಲಕ್ಷಿತಮ್ ।
ದುರ್ಧರ್ಷಮೃಷಭಸ್ಕಂಧಂ ವ್ಯಾತ್ತಾನನಮಿವಾಂತಕಮ್ ॥೧೧॥

ಸಿಂಹದರ್ಪಂ ಮಹೇಷ್ವಾಸಂ ಮತ್ತಮಾತಂಗವಿಕ್ರಮಮ್ ।
ಮೇಘದುಂದುಭಿನಿರ್ಘೋಷಂ ಪೂರ್ಣಚಂದ್ರನಿಭಾನನಮ್ ॥೧೨॥

ಕೃಷ್ಣಸ್ಯ ಸದೃಶಂ ಶೌರ್ಯೇ ವೀರ್ಯೇ ರೂಪೇ ತಥಾऽऽಕೃತೌ ।
ದದರ್ಶ ಪುತ್ರಂ ಬೀಭತ್ಸುರ್ಜಯಂತಂ ಮಘವಾನಿವ ॥೧೩॥

ದೃಢವಾದ ಶರೀರದಿಂದ ಕೂಡಿದ, ಸರ್ವಲಕ್ಷಣಸಂಪನ್ನನಾದ, ಶತ್ರುಗಳಿಗೆ ಎಂದೂ ಸೋಲದ, ವೃಷಭಸ್ಕಂಧನಾದ ಆಕರ್ಷಿಸುತ್ತಿರುವ, ಯಮನಂತಿದ್ದ, ಸಿಂಹದದರ್ಪವುಳ್ಳ ಮಹಾಧನುರ್ಧರನಾದ ಮದಗಜವಿಕ್ರಮವನ್ನು ಹೊಂದಿದ, ಮೇಘದುಂದುಭಿನಿರ್ಘೋಷವನ್ನು ಹೊಂದಿದ, ಪೂರ್ಣಚಂದ್ರನಂತಿರುವ ಮುಖವುಳ್ಳ, ಶೌರ್ಯದಲ್ಲಿಯೂ, ವೀರ್ಯದಲ್ಲಿಯೂ, ರೂಪದಲ್ಲಿಯೂ, ಆಕಾರದಲ್ಲಿಯೂ ಕೃಷ್ಣನನ್ನು ಹೋಲುವ ತನ್ನ ಮಗನನ್ನು ಕಂಡು ಅರ್ಜುನನು ಇಂದ್ರನು ಜಯಂತನನ್ನು ಕಂಡು ಸಂತೋಷಪಡುವಂತೆ ಸಂತೋಷಪಟ್ಟನು.

ಪೂರ್ವಮೇವ ತು ಪಾಂಚಾಲೀ ಪಂಚಭಿಃ ಪತಿಭಿಃ ಶುಭಾ ।
ಲೇಭೇ ಪಂಚ ಸುತಾನ್ ವೀರಾನ್ ಶ್ರೇಷ್ಠಾನ್ ಪಂಚಾನಲಾನಿವ ॥೧೪॥

ಇದಕ್ಕೆ ಮೊದಲೇ ದ್ರೌಪದಿಯು ಪಂಚಪತಿಗಳಿಂದ ಪಂಚಾಗ್ನಿಗಳಂತಿರುವ ವೀರರಾದ ಶ್ರೇಷ್ಠಪುತ್ರರನ್ನು ಪಡೆದಳು.

ಯುಧಿಷ್ಠಿರಾತ್ ಪ್ರತಿವಿಂಧ್ಯಂ ಸುತಸೋಮಂ ವೃಕೋದರಾತ್ ।
ಅರ್ಜುನಾತ್ ಶ್ರುತಕೀರ್ತಿಂ ಚ ಶತಾನೀಕಂ ಚ ನಾಕುಲಿಮ್ ॥೧೫॥

ಸಹದೇವಾತ್ ಶ್ರುತಕ್ರಿಯಮೇತಾನ್ ಪಂಚ ಮಹಾರಥಾನ್ ।
ಪಾಂಚಾಲೀ ಸುಷುವೇ ವೀರಾನ್ ಆದಿತ್ಯಾನದಿತಿರ್ಯಥಾ ॥೧೬॥

ಯುಧಿಷ್ಠಿರನಿಂದ ಪ್ರತಿವಿಂಧ್ಯನನ್ನು, ಭೀಮಸೇನನಿಂದ ಸುತಸೋಮನನ್ನು, ಅರ್ಜುನನಿಂದ ಶ್ರುತಕೀರ್ತಿಯನ್ನು, ನಕುಲನಿಂದ ಶತಾನೀಕನನ್ನು, ಸಹದೇವನಿಂದ ಶ್ರುತಕ್ರಿಯನನ್ನು ಈ ವೀರರಾದ ಮಹಾರಥರನ್ನು ದ್ರೌಪದಿಯು ಅದಿತಿಯು ಆದಿತ್ಯರನ್ನು ಪಡೆದಂತೆ ಪಡೆದಳು.

ಶಾಸ್ತ್ರತಃ ಪ್ರತಿವಿಂಧ್ಯಂ ತಮೂಚುರ್ವಿಪ್ರಾ ಯುಧಿಷ್ಠಿರಮ್ ।
ಪರಪ್ರಹರಣಜ್ಞಾನೇ ಪ್ರತಿವಿಂಧ್ಯೋ ಭವತ್ವಯಮ್ ॥೧೭॥

ಬ್ರಾಹ್ಮಣರು ಯುಧಿಷ್ಠಿರನ್ನು ಕುರಿತು ಶಾಸ್ತ್ರದೃಷ್ಟಿಯಿಂದ ಸಮಾಲೋಚಿಸಿ, ಶತ್ರುಗಳ ಎದುರಿನಲ್ಲಿ ವಿಂಧ್ಯಪರ್ವತದಂತೆ ಅಚಲನಾಗಿರುವ ಕಾರಣದಿಂದಲೂ, ತಾನೇ ಶಸ್ತ್ರಜ್ಞಾನವನ್ನು ಸಂಪಾದಿಸಿ ಪ್ರತಿಭಟರನ್ನು ಹಿಂಸಿಸುವ ಕಾರಣದಿಂದಲೂ ಇವನಿಗೆ ಪ್ರತಿವಿಂಧ್ಯನೆಂದು ಹೆಸರಿರಲಿ ಎಂದು ಹೇಳಿದರು.

ಸುತೇ ಸೋಮಸಹಸ್ರೇ ತು ಸೋಮಾರ್ಕಸಮತೇಜಸಾಮ್ ।
ಸುತಸೋಮಂ ಮಹಾಪ್ರಾಜ್ಞಂ ಸುಷುವೇ ಭೀಮಸೇನತಃ ॥೧೮॥

ಸೋಮಯಾಗವನ್ನು ಮಾಡಿದ ಸಹಸ್ರರಾಜರ ಮಧ್ಯದಲ್ಲಿ ಸೂರ್ಯನಂತೆ, ಚಂದ್ರನಂತೆ ತೇಜಃಶಾಲಿಯಾದ ಮಹಾಪ್ರಾಜ್ಞನಾದ ಸುತಸೋಮನನ್ನು ಭೀಮಸೇನನಿಂದ ಪಡೆದಳು. (ಸುತಸೋಮರಿಗೆ ಸದೃಶನಾಗಿರುವುದರಿಂದ ಭೀಮನ ಮಗನಿಗೆ ಸುತಸೋಮ ಎಂದು ಹೆಸರು)

ಶ್ರುತಂ ಕರ್ಮ ಮಹತ್ ಕೃತ್ವಾ ನಿವೃತ್ತೇನ ಕಿರೀಟಿನಾ ।
ಜಾತಃ ಪುತ್ರಸ್ತಥೇತ್ಯೇವಂ ಶ್ರುತಕೀರ್ತಿಃ ತತೋऽಭವತ್ ॥೧೯॥

ದೊಡ್ಡ ಕರ್ಮವನ್ನು ಮಾಡಿ ಅದರ ಕೀರ್ತಿಯನ್ನು ಕೇಳುತ್ತಾ ಹಿಂದಿರುಗಿದ ಅರ್ಜುನನಿಗೆ ಜನಿಸಿದ ಪುತ್ರನು ಅದರಂತೆಯೇ ಶ್ರುತಕೀರ್ತಿ ಎಂಬ ನಾಮವನ್ನು ಧರಿಸಿದನು.

ಶತಾನೀಕಸ್ಯ ರಾಜರ್ಷೇಃ ಕೌರವ್ಯಸ್ಯ ಮಹಾತ್ಮನಃ ।
ಚಕ್ರೇ ಪುತ್ರಂ ಸನಾಮಾನಂ ನಕುಲಃ ಕೀರ್ತಿವರ್ಧನಃ ॥೨೦॥

ಸರ್ವಸಂಹನನೋಪೇತಂ ಸರ್ವಲಕ್ಷಣಲಕ್ಷಿತಮ್ ।
ದುರ್ಧರ್ಷಮೃಷಭಸ್ಕಂಧಂ ವ್ಯಾತ್ತಾನನಮಿವಾಂತಕಮ್ ॥೧೧॥

ಸಿಂಹದರ್ಪಂ ಮಹೇಷ್ವಾಸಂ ಮತ್ತಮಾತಂಗವಿಕ್ರಮಮ್ ।
ಮೇಘದುಂದುಭಿನಿರ್ಘೋಷಂ ಪೂರ್ಣಚಂದ್ರನಿಭಾನನಮ್ ॥೧೨॥

ಕೃಷ್ಣಸ್ಯ ಸದೃಶಂ ಶೌರ್ಯೇ ವೀರ್ಯೇ ರೂಪೇ ತಥಾऽऽಕೃತೌ ।
ದದರ್ಶ ಪುತ್ರಂ ಬೀಭತ್ಸುರ್ಜಯಂತಂ ಮಘವಾನಿವ ॥೧೩॥

ದೃಢವಾದ ಶರೀರದಿಂದ ಕೂಡಿದ, ಸರ್ವಲಕ್ಷಣಸಂಪನ್ನನಾದ, ಶತ್ರುಗಳಿಗೆ ಎಂದೂ ಸೋಲದ, ವೃಷಭಸ್ಕಂಧನಾದ ಆಕರ್ಷಿಸುತ್ತಿರುವ, ಯಮನಂತಿದ್ದ ಸಿಂಹದದರ್ಪವುಳ್ಳ ಮಹಾಧನುರ್ಧರನಾದ ಮದಗಜವಿಕ್ರಮವನ್ನು ಹೊಂದಿದ, ಮೇಘದುಂದುಭಿನಿರ್ಘೋಷವನ್ನು ಹೊಂದಿದ, ಪೂರ್ಣಚಂದ್ರನಂತಿರುವ ಮುಖವುಳ್ಳ, ಶೌರ್ಯದಲ್ಲಿಯೂ, ವೀರ್ಯದಲ್ಲಿಯೂ, ರೂಪದಲ್ಲಿಯೂ, ಆಕಾರದಲ್ಲಿಯೂ ಕೃಷ್ಣನನ್ನು ಹೋಲುವ ತನ್ನ ಮಗನನ್ನು ಕಂಡು ಅರ್ಜುನನು ಇಂದ್ರನು ಜಯಂತನನ್ನು ಕಂಡು ಸಂತೋಷಪಡುವಂತೆ ಸಂತೋಷಪಟ್ಟನು.

ಪೂರ್ವಮೇವ ತು ಪಾಂಚಾಲೀ ಪಂಚಭಿಃ ಪತಿಭಿಃ ಶುಭಾ ।
ಲೇಭೇ ಪಂಚ ಸುತಾನ್ ವೀರಾನ್ ಶ್ರೇಷ್ಠಾನ್ ಪಂಚಾನಲಾನಿವ ॥೧೪॥

ಇದಕ್ಕೆ ಮೊದಲೇ ದ್ರೌಪದಿಯು ಪಂಚಪತಿಗಳಿಂದ ಪಂಚಾಗ್ನಿಗಳಂತಿರುವ ವೀರರಾದ ಶ್ರೇಷ್ಠಪುತ್ರರನ್ನು ಪಡೆದಳು.

ಯುಧಿಷ್ಠಿರಾತ್ ಪ್ರತಿವಿಂಧ್ಯಂ ಸುತಸೋಮಂ ವೃಕೋದರಾತ್ ।
ಅರ್ಜುನಾತ್ ಶ್ರುತಕೀರ್ತಿಂ ಚ ಶತಾನೀಕಂ ಚ ನಾಕುಲಿಮ್ ॥೧೫॥

ಸಹದೇವಾತ್ ಶ್ರುತಕ್ರಿಯಮೇತಾನ್ ಪಂಚ ಮಹಾರಥಾನ್ ।
ಪಾಂಚಾಲೀ ಸುಷುವೇ ವೀರಾನ್ ಆದಿತ್ಯಾನದಿತಿರ್ಯಥಾ ॥೧೬॥

ಯುಧಿಷ್ಠಿರನಿಂದ ಪ್ರತಿವಿಂಧ್ಯನನ್ನು, ಭೀಮಸೇನನಿಂದ ಸುತಸೋಮನನ್ನು, ಅರ್ಜುನನಿಂದ ಶ್ರುತಕೀರ್ತಿಯನ್ನು, ನಕುಲನಿಂದ ಶತಾನೀಕನನ್ನು, ಸಹದೇವನಿಂದ ಶ್ರುತಕ್ರಿಯನನ್ನು ಈ ವೀರರಾದ ಮಹಾರಥರನ್ನು ದ್ರೌಪದಿಯು ಅದಿತಿಯು ಆದಿತ್ಯರನ್ನು ಪಡೆದಂತೆ ಪಡೆದಳು.

ಶಾಸ್ತ್ರತಃ ಪ್ರತಿವಿಂಧ್ಯಂ ತಮೂಚುರ್ವಿಪ್ರಾ ಯುಧಿಷ್ಠಿರಮ್ ।
ಪರಪ್ರಹರಣಜ್ಞಾನೇ ಪ್ರತಿವಿಂಧ್ಯೋ ಭವತ್ವಯಮ್ ॥೧೭॥

ಬ್ರಾಹ್ಮಣರು ಯುಧಿಷ್ಠಿರನ್ನು ಕುರಿತು ಶಾಸ್ತ್ರದೃಷ್ಟಿಯಿಂದ ಸಮಾಲೋಚಿಸಿ, ಶತ್ರುಗಳ ಎದುರಿನಲ್ಲಿ ವಿಂಧ್ಯಪರ್ವತದಂತೆ ಅಚಲನಾಗಿರುವ ಕಾರಣದಿಂದಲೂ, ತಾನೇ ಶಸ್ತ್ರಜ್ಞಾನವನ್ನು ಸಂಪಾದಿಸಿ ಪ್ರತಿಭಟರನ್ನು ಹಿಂಸಿಸುವ ಕಾರಣದಿಂದಲೂ ಇವನಿಗೆ ಪ್ರತಿವಿಂಧ್ಯನೆಂದು ಹೆಸರಿರಲಿ ಎಂದು ಹೇಳಿದರು.

ಸುತೇ ಸೋಮಸಹಸ್ರೇ ತು ಸೋಮಾರ್ಕಸಮತೇಜಸಾಮ್ ।
ಸುತಸೋಮಂ ಮಹಾಪ್ರಾಜ್ಞಂ ಸುಷುವೇ ಭೀಮಸೇನತಃ ॥೧೮॥

ಸೋಮಯಾಗವನ್ನು ಮಾಡಿದ ಸಹಸ್ರರಾಜರ ಮಧ್ಯದಲ್ಲಿ ಸೂರ್ಯನಂತೆ, ಚಂದ್ರನಂತೆ ತೇಜಃಶಾಲಿಯಾದ ಮಹಾಪ್ರಾಜ್ಞನಾದ ಸುತಸೋಮನನ್ನು ಭೀಮಸೇನನಿಂದ ಪಡೆದಳು. (ಸುತಸೋಮರಿಗೆ ಸದೃಶನಾಗಿರುವುದರಿಂದ ಭೀಮನ ಮಗನಿಗೆ ಸುತಸೋಮ ಎಂದು ಹೆಸರು)

ಶ್ರುತಂ ಕರ್ಮ ಮಹತ್ ಕೃತ್ವಾ ನಿವೃತ್ತೇನ ಕಿರೀಟಿನಾ ।
ಜಾತಃ ಪುತ್ರಸ್ತಥೇತ್ಯೇವಂ ಶ್ರುತಕೀರ್ತಿಃ ತತೋಽಭವತ್ ॥೧೯॥

ದೊಡ್ಡ ಕರ್ಮವನ್ನು ಮಾಡಿ ಅದರ ಕೀರ್ತಿಯನ್ನು ಕೇಳುತ್ತಾ ಹಿಂದಿರುಗಿದ ಅರ್ಜುನನಿಗೆ ಜನಿಸಿದ ಪುತ್ರನು ಅದರಂತೆಯೇ ಶ್ರುತಕೀರ್ತಿ ಎಂಬ ನಾಮವನ್ನು ಧರಿಸಿದನು.

ಶತಾನೀಕಸ್ಯ ರಾಜರ್ಷೇಃ ಕೌರವ್ಯಸ್ಯ ಮಹಾತ್ಮನಃ ।
ಚಕ್ರೇ ಪುತ್ರಂ ಸನಾಮಾನಂ ನಕುಲಃ ಕೀರ್ತಿವರ್ಧನಃ ॥೨೦॥

ಕೀರ್ತಿವರ್ಧನನಾದ ನಕುಲನು ಮಹಾನುಭಾವನಾದ ತಮ್ಮ ಪೂರ್ವಿಕನಾದ ರಾಜರ್ಷಿಯಾದ ಶತಾನಿಕನ ಹೆಸರನ್ನೇ ತನ್ನ ಮಗನಿಗೆ ಇಟ್ಟನು.

ತತಸ್ತ್ವಜೀಜನತ್ ಕೃಷ್ಣಾ ನಕ್ಷತ್ರೇ ವಹ್ನಿದೈವತೇ ।
ಸಹದೇವಾತ್ ಸುತಂ ತಸ್ಮಾತ್ ಶ್ರುತಸೇನೇತಿ ತಂ ವಿದುಃ ॥೨೧॥

ಅನಂತರ, ದ್ರೌಪದಿಯು ಕೃತ್ತಿಕಾನಕ್ಷತ್ರದಲ್ಲಿ ಸಹದೇವನಿಂದ ಪಡೆದ ಮಗುವನ್ನು ಪ್ರಸವಿಸಿದಳು. ಆದ್ದರಿಂದ ಬ್ರಾಹ್ಮಣರು ಅವನಿಗೆ ಶ್ರುತಸೇನ ಎಂದು ಹೆಸರಿಟ್ಟರು.

ಏಕವರ್ಷಾಂತರಾಸ್ತ್ವೇವಂ ದ್ರೌಪದೇಯಾ ಯಶಸ್ವಿನಃ ।
ಅನ್ವಜಾಯಂತ ರಾಜೇಂದ್ರ ಪರಸ್ಪರಹಿತೇ ರತಾಃ ॥೨೨॥

ಈ ಕೀರ್ತಿಶಾಲಿಗಳಾದ ಈ ದ್ರೌಪದಿಯ ಮಕ್ಕಳಿಗೆ ಒಂದೊಂದು ವರ್ಷದ ಅಂತರವಿದೆ. ರಾಜೇಂದ್ರನಾದ ಜನಮೇಜಯನೇ, ಇವರು ಒಬ್ಬರಾದ ಮೇಲೆ ಒಬ್ಬರು ಜನಿಸಿ ಪರಸ್ಪರ ಹಿತದಲ್ಲಿ ರತರಾದರು.

ಜಾತಕರ್ಮಾಣ್ಯಾನುಪೂರ್ವ್ಯಾಚ್ಚೂಡೋಪನಯನಾನಿ ಚ ।
ಚಕಾರ ವಿಧಿವದ್ ಧೌಮ್ಯಸ್ತೇಷಾಂ ಭರತಸತ್ತಮ ॥೨೩॥

ಭರತಶ್ರೇಷ್ಠನೇ, ಧೌಮ್ಯರು ಅವರಿಗೆ ಜ್ಯೇಷ್ಠಕ್ರಮದಿಂದ ಜಾತಕರ್ಮ, ಚೂಡಾಕರ್ಮ, ಉಪನಯನ ಮೊದಲಾದ ಸಮಸ್ತ ಸಂಸ್ಕಾರಗಳನ್ನು ವಿಧಿಪೂರ್ವಕವಾಗಿ ಮಾಡಿದರು.

ಕೃತ್ವಾ ತು ವೇದಾಧ್ಯಯನಂ ತತಃ ಸುಚರಿತವ್ರತಾಃ ।
ಜಗೃಹುಃ ಸರ್ವಮಿಷ್ವಸ್ತ್ರಮರ್ಜುನಾದ್ ದಿವ್ಯಮಾನುಷಮ್ ॥೨೪॥

ಶ್ರೇಷ್ಠವಾದ ವ್ರತಧಾರಿಗಳಾದ ದ್ರೌಪದೇಯರು ವೇಧಾಧ್ಯಯನವನ್ನು ಮಾಡಿ ಅನಂತರ ಅರ್ಜುನನಿಂದ ದಿವ್ಯಮಾನುಷಪ್ರಭೇದವುಳ್ಳ ಎಲ್ಲಾ ಅಸ್ತ್ರಶಸ್ತ್ರವಿದ್ಯೆಗಳನ್ನೂ ಕಲಿತರು.

ದಿವ್ಯಗರ್ಭೋಪಮೈಃ ಪುತ್ರೈರ್ವ್ಯೂಢೋರಸ್ಕೈರ್ಮಹಾಬಲೈಃ ।
ಅನ್ವಿತಾ ರಾಜಶಾರ್ದೂಲ ಪಾಂಡವಾ ಮುದಮಾಪ್ನುವನ್ ॥೨೫॥

ರಾಜಶಾರ್ದೂಲನೇ, ವಿಶಾಲ ವಕ್ಷಸ್ಥಳವುಳ್ಳ ಮಹಾಬಲಶಾಲಿಗಳಾದ ದೇವಕುಮಾರರಂತಿರುವ ಪುತ್ರರಿಂದ ಒಡಗೂಡಿ ಪಾಂಡವರು ಸಂತೋಷನ್ನೂ ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಅಷ್ಟವಿಂಶತ್ಯಧಿಕದ್ವಿಶತತಮೋऽಧ್ಯಾಯಃ॥

॥ ಇತಿ ಹರಣಹಾರಿಕಪರ್ವಣಿ ಚತುರ್ಥೋऽಧ್ಯಾಯಃ ॥

॥ ಹರಣಹಾರಿಕಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಹರಣಹಾರಿಕಪರ್ವ ಸಮಾಪ್ತವಾಯಿತು.

★★★★★

೧೮. ಖಾಂಡವದಾಹಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ತತಃ ಕದಾಚಿತ್ ಖಾಂಡವಂ ಕೃಷ್ಣಪಾರ್ಥೌ
ಚಿಕ್ರೀಡಿಷೂ ಸತ್ಯಭಾಮಾಸುಭದ್ರೇ ।
ಆದಾಯ ಯಾತೌ ಪರಿಚಾರಕೈಶ್ಚ
ರಥೇನ ಗಂಧರ್ವವರಾನುಗೀತೌ ॥೨೧೬॥

ಒಂದು ದಿನ ಕೃಷ್ಣಾರ್ಜುನರು ಸತ್ಯಭಾಮಾ ಸುಭದ್ರೆಯರನ್ನು ಕರೆದುಕೊಂಡು ಸೇವಕರಿಂದ ಸಮೇತರಾಗಿ, ಗಂಧರ್ವಶ್ರೇಷ್ಠರು ಯಶೋಗಾನವನ್ನು ಮಾಡುತ್ತಿದ್ದಂತೆ ವಿಹಾರಕ್ಕಾಗಿ ರಥದಿಂದ ಖಾಂಡವವನಕ್ಕೆ ತೆರಳಿದರು.

★ ★ ★ ★

ಇನ್ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ

(ನಗರವಿಹಾರವನ್ನು ಮುಗಿಸಿ ಯಮುನಾ ತೀರದಲ್ಲಿ ವಿಹರಿಸಲು ಕೃಷ್ಣಾರ್ಜುನರ ನಿರ್ಧಾರ, ಖಾಂಡವವನ ಪ್ರಾಪ್ತಿ ಮತ್ತು ವರ್ಣನೆ.)

ವೈಶಂಪಾಯನಃ

ಇಂದ್ರಪ್ರಸ್ಥೇ ವಸಂತಸ್ತೇ ಜಘ್ನುರನ್ಯಾನ್ ನರಾಧಿಪಾನ್ ।
ಶಾಸನಾದ್ ಧೃತರಾಷ್ಟ್ರಸ್ಯ ರಾಜ್ಞಃ ಶಾಂತನವಸ್ಯ ಚ ॥೧॥

ಇಂದ್ರಪ್ರಸ್ಥದಲ್ಲಿ ವಾಸಮಾಡುತ್ತಾ ಪಾಂಡವರು ಧೃತರಾಷ್ಟ್ರನ ಮತ್ತು ಭೀಷ್ಮರ ಶಾಸನದಂತೆ ಬೇರೆ ರಾಜರನ್ನೂ ಸೋಲಿಸಿದರು. (ಸಂಹರಿಸಿದರು)

ಆಶ್ರಿತ್ಯ ಧರ್ಮರಾಜಾನಂ ಸರ್ವಲೋಕೋಽವಸತ್ ಸುಖಮ್ ।
ಪುಣ್ಯಲಕ್ಷಣಧರ್ಮಾಣಂ ಸ್ವದೇಹಮಿವ ದೇಹಿನಃ ॥೨॥

ಜೀವರು ಪುಣ್ಯದಿಂದ ಸಂಪಾದಿಸಿದ ತಮ್ಮ ದೇಹವನ್ನು ಹೊಂದಿ ಸುಖಪಡುವಂತೆ ಎಲ್ಲ ಜನರೂ ಧರ್ಮರಾಜನನ್ನು ಆಶ್ರಯಿಸಿ ಸುಖವಾಗಿದ್ದರು.

ಸ ಸಮಂ ಧರ್ಮಕಾಮಾರ್ಥಾನ್ ಸಿಷೇವೇ ಭರತರ್ಷಭ ।
ತ್ರೀನಿವಾತ್ಮಸಮಾನ್ ಬಂಧೂನ್ ಬಂಧುಮಾನಿವ ಮಾನಯನ್ ॥೩॥

ಭರತಶ್ರೇಷ್ಠನೇ, ಬಂಧುಗಳನ್ನು ಹೊಂದಿದವನು ತನ್ನ ಬಂಧುಗಳನ್ನು ಸಮಾನವಾಗಿ ಸಮ್ಮಾನಿಸುವಂತೆ ಧರ್ಮರಾಜನು ಧರ್ಮಾರ್ಥಕಾಮಗಳನ್ನು ಸಮಾನವಾಗಿ ಸಮ್ಮಾನಿಸಿ ಸೇವಿಸಿದನು.

ತೇಷಾಂ ಸಮವಿಭಕ್ತಾನಾಂ ಕ್ಷಿತೌ ದೇಹವತಾಮಿವ ।
ಬಭೌ ಧರ್ಮಾರ್ಥಕಾಮಾನಾಂ ಚತುರ್ಥ ಇವ ಪಾರ್ಥಿವಃ ॥೪॥

ತನ್ನ ರಾಷ್ಟ್ರದಲ್ಲಿ ಇರುವ ಸಮಾನವಾಗಿ ವಿಭಕ್ತವಾದ ಧರ್ಮಾರ್ಥಕಾಮಗಳ ಜೊತೆಯಲ್ಲಿ ರಾಜನು ನಾಲ್ಕನೆಯದಾದ ಮೋಕ್ಷದಂತೆ ಶೋಭಿಸಿದನು.

ಅಧ್ಯೇತಾರಂ ಯಥಾ ವೇದಾಃ ಪ್ರಯೋಕ್ತಾರಂ ಮಹಾಧ್ವರಾಃ ।
ರಕ್ಷಿತಾರಂ ತಥಾ ವರ್ಣಾ ಲೇಭಿರೇ ತಂ ಜನಾಧಿಪಮ್ ॥೫॥

ವೇದಾಧ್ಯಯನ ಮಾಡುವವನನ್ನು ವೇದಗಳು ಬಯಸುವಂತೆ, ಕರ್ಮನಿಷ್ಣಾತರನ್ನು ದೊಡ್ಡಯಜ್ಞಗಳು ಬಯಸುವಂತೆ ಎಲ್ಲಾ ಪ್ರಜೆಗಳು ಆ ರಾಜನನ್ನು ರಕ್ಷಕನನ್ನಾಗಿ ಬಯಸಿದರು.

ಅಧಿಷ್ಠಾನವತೀ ಲಕ್ಷ್ಮೀಃ ಪರಾಯಣವತೀ ಮಹೀ ।
ಬಂಧುಮಾನಖಿಲೋ ಲೋಕಸ್ತೇನಾಸೀತ್ ಪೃಥಿವೀಕ್ಷಿತಾ ॥೬॥

ಧರ್ಮರಾಜನು ರಾಜನಾಗಿರುವಾಗ ಅವನಿಂದ ಸಂಪತ್ತು ಅಧಿಷ್ಠಾನವನ್ನು ಪಡೆಯಿತು, ಭೂಮಿಯು ಶ್ರೇಷ್ಠವಾದ ಆಶ್ರಯವನ್ನು ಪಡೆಯಿತು, ಎಲ್ಲ ಜನರೂ ಬಂಧುವನ್ನು ಪಡೆದರು.

ಭ್ರಾತೃಭಿಃ ಸಹಿತೋ ರಾಜಾ ಚತುರ್ಭಿರಧಿಕಂ ಬಭೌ ।
ಪ್ರಯುಜ್ಯಮಾನೋ ಏತತೋ ವೇದೈರಿವ ಮಹಾಧ್ವರಃ ॥೭॥

ಪ್ರಯೋಗಿಸಲ್ಪಡುವ ದೊಡ್ಡ ಯಜ್ಞವು ವೇದಗಳಿಂದ ಶೋಭಿಸುವಂತೆ ರಾಜನ ನಾಲ್ಕುಜನ ಸಹೋದರರಿಂದ ಕೂಡಿ ಇನ್ನೂ ಅಧಿಕವಾಗಿ ಶೋಭಿಸಿದನು.

ತಂ ತು ಧೌಮ್ಯಾದಯೋ ವಿಪ್ರಾಃ ಪರಿವಾರ್ಯೋಪತಸ್ಥಿರೇ ।
ಬೃಹಸ್ಪತಿಸಮಾ ಬುದ್ಧ್ಯಾ ಪ್ರಜಾಪತಿಮಿವಾಧ್ವರೇ ॥೮॥

ಬೃಹಸ್ಪತಿಗೆ ಸಮಾನವಾದ ಬುದ್ಧಿಯುಳ್ಳ ಧೌಮ್ಯಾದಿ ಬ್ರಾಹ್ಮಣರು ಯಜ್ಞದಲ್ಲಿ ದಕ್ಷಪ್ರಜಾಪತಿಯನ್ನು ಬ್ರಾಹ್ಮಣರು ಸುತ್ತುವರಿದಂತೆ ಅವನನ್ನು ಸುತ್ತುವರಿದು ನಿಂತರು

ಧರ್ಮರಾಜೇ ಹ್ಯತಿಪ್ರೀತ್ಯಾ ಪೂರ್ಣಚಂದ್ರ ಇವಾಮಲೇ ।
ಪ್ರಜಾನಾಂ ರೇಮಿರೇ ನಿತ್ಯಂ ನೇತ್ರಾಣಿ ಹೃದಯಾನಿ ಚ ॥೯॥

ಧರ್ಮರಾಜನನ್ನು ನೋಡಿದಾಗ ನಿಷ್ಕಳಂಕನಾದ ಪೂರ್ಣಚಂದ್ರನನ್ನು ನೋಡಿದಂತೆ ಪ್ರಜೆಗಳ ನೇತ್ರಗಳೂ ಮತ್ತು ಮನಸ್ಸು ಸಂತೋಷಗೊಂಡಿತು.

ನ ತು ಕೇವಲದೈವೇನ ಪ್ರಜಾ ಭಾವೇನ ರೇಮಿರೇ ।
ಯದ್ ಬಭೂವ ಮನಃಕಾಂತಂ ಕರ್ಮಣಾ ಸ ಚಕಾರ ತತ್ ॥೧೦॥

ಪ್ರಜೆಗಳು ದೈವದತ್ತ ಐಹಿಕವಿಷಯಗಳ ಭೋಗದಿಂದ ಮಾತ್ರ ಸಂತೋಷಪಟ್ಟದ್ದಲ್ಲ, ಪ್ರಜೆಗಳ ಮನಸ್ಸಿಗೆ ಪ್ರಿಯವಾದುದನ್ನೆಲ್ಲಾ ರಾಜನು ತನ್ನ ಕರ್ಮದಿಂದ ಸಾಧಿಸಿದನು.

ನ ಹ್ಯಯುಕ್ತಂ ನ ದೈನ್ಯಂ ಚ ನಾನೃತಂ ನ ಚ ವಿಪ್ರಿಯಮ್ ।
ಭಾಷಿತಂ ಚಾರುಭಾಷಸ್ಯ ಜಜ್ಞೇ ಪಾರ್ಥಸ್ಯ ಧೀಮತಃ ॥೧೧॥

ಮೇಧಾವಿಯಾದ, ಸುಂದರವಾಗಿ ಮಾತನಾಡುವ ಧರ್ಮರಾಜನ ಮಾತು ಎಂದೂ ಅಯುಕ್ತವಾದುದಾಗಲೀ, ದೈನ್ಯದಿಂದ ಕೂಡಿದುದಾಗಲೀ, ನಾನೃತವಾಗಲೀ ಅಥವಾ ಅಪ್ರಿಯವಾಗಲೀ ಆಗಿರಲಿಲ್ಲ.

ಸ ಹಿ ಸರ್ವಸ್ಯ ಲೋಕಸ್ಯ ಹಿತಮಾತ್ಮನ ಏವ ಚ ।
ಚಿಕೀರ್ಷುಃ ಸುಮಹಾತೇಜಾ ರೇಮೇ ಭರತಸತ್ತಮ ॥೧೨॥

ಭರತಶ್ರೇಷ್ಠನೇ, ಮಹಾತೇಜಸ್ವಿಯಾದ ಅವನು ಎಲ್ಲ ಜನರಿಗೂ ಮತ್ತು ತನಗೂ ಹಿತವನ್ನು ಮಾಡಲು ಬಯಸಿ ಸಂತೋಷಪಟ್ಟನು.

ತಥಾ ತು ಮುದಿತಾಃ ಸರ್ವೇ ಪಾಂಡವಾ ವಿಗತಜ್ವರಾಃ ।
ಅಜಯನ್ ಪೃಥಿವೀಪಾಲಾನ್ ತ್ರಾಸಯಂತಃ ಸ್ವತೇಜಸಾ ॥೧೩॥

ಹಾಗೆ ಸಂತೋಷದಿಂದ ಕೂಡಿದ ನಿರಾತಂಕರಾದ ಎಲ್ಲ ಪಾಂಡವರು ತಮ್ಮ ಪರಾಕ್ರಮದಿಂದ ಉಳಿದ ರಾಜರನ್ನು ಹೆದರಿಸುತ್ತಾ ಅವರನ್ನು ಸೋಲಿಸಿದರು.

ತತಃ ಕತಿಪಯಾಹಃಸು ಬೀಭತ್ಸುಃ ಕೃಷ್ಣಮಬ್ರವೀತ್ ।
ಕೃಷ್ಣಕೃಷ್ಣ ನಿವರ್ತಂತಾಂ ಗಚ್ಛಾವ ಯಮುನಾಂ ಪ್ರತಿ ॥೧೪॥

ಅನಂತರ, ಕೆಲವು ದಿನಗಳು ಕಳೆದಮೇಲೆ ಅರ್ಜುನನು ಕೃಷ್ಣನನ್ನು ಕುರಿತು ಕೃಷ್ಣ, ನಗರ ವಿಹಾರವು ಸಾಕು. ನಾವು ಯಮುನಾ ನದಿಗೆ ಹೋಗೋಣ ಎಂದು ಹೇಳಿದನು.

ಸುಹೃಜ್ಜನಯುತಾಸ್ತತ್ರ ವಿಹೃತ್ಯ ಮಧುಸೂದನ ।
ಸಾಯಾಹ್ನೇ ವಿನಿವರ್ತಾಮೋ ರೋಚತಾಂ ತೇ ಜನಾರ್ದನ ॥೧೫॥

ಜನಾರ್ದನನೇ, ಮಧುಸೂದನನೇ, ನಿನ್ನ ಮನಸ್ಸಿಗೆ ಬಂದರೆ ನಾವು ಸುಹೃಜ್ಜನರ ಜೊತೆಯಲ್ಲಿ ಅಲ್ಲಿ ವಿಹರಿಸಿ ಸಾಯಂಕಾಲದ ಸಮಯಕ್ಕೆ ಹಿಂದಿರುಗೋಣ.

ವಾಸುದೇವಃ

ಕುಂತೀಮಾತರ್ಮಮಾಪ್ಯೇಷ ರೋಚತೇ ಯದ್ ವಯಂ ಜಲೇ ।
ಸುಹೃಜ್ಜನವೃತಾಃ ಪಾರ್ಥ ವಿಹರೇಮ ಯಥಾಸುಖಮ್ ॥೧೬॥

ಕುಂತೀಪುತ್ರನಾದ ಅರ್ಜುನನೇ, ನಾವು ಸುಹೃಜ್ಜನರ ಜೊತೆಯಲ್ಲಿ ಸಂತೋಷದಿಂದ ಜಲವಿಹಾರಮಾಡುವ ವಿಷಯವು ನನಗೂ ಇಷ್ಟವಾಗಿದೆ.

ವೈಶಂಪಾಯನಃ

ಆಮಂತ್ರ್ಯ ತೌ ಧರ್ಮರಾಜಮನುಜ್ಞಾಪ್ಯ ಚ ಭಾರತ ।
ಜಗ್ಮತುಃ ಪಾರ್ಥಗೋವಿಂದೌ ಸುಹೃಜ್ಜನವೃತೌ ತದಾ ॥೧೭॥

ಭಾರತನೇ, ಅವರಿಬ್ಬರೂ ಧರ್ಮರಾಜನ ಅನುಜ್ಞೆಯನ್ನು ಪಡೆದು ಅವನನ ಬೀಳ್ಕೊಟ್ಟು ಸುಹೃಜ್ಜನರಿಂದ ಸಹಿತರಾಗಿ ಯಮುನಾ ನದಿಯ ಬಳಿಗೆ ಬಂದರು.

ವಿಹರನ್ ಖಾಂಡವಪ್ರಸ್ಥೇ ಕಾನನೇಷು ಚ ಮಾಧವಃ ।
ಪುಷ್ಪಿತೋಪವನಾಂ ರಮ್ಯಾಂ ದದರ್ಶ ಯಮುನಾಂ ನದೀಮ್ ॥೧೮॥

ಮಾಧವನು ಖಾಂಡವಪ್ರಸ್ಥದ ವನಗಳಲ್ಲಿ ವಿಹರಿಸುತ್ತಾ ಪುಷ್ಪಭರಿತವಾದ ಉಪವನಗಳಿಂದ ಕೂಡಿದ ಮನೋಹರವಾದ ಯಮುನಾನದಿಯನ್ನು ನೋಡಿದನು.

ಆಲಯಂ ಸರ್ವಭೂತಾನಾಂ ಖಾಂಡವಂ ಖಡ್ಗಚರ್ಮಭೃತ್ ।
ದದರ್ಶ ಖಾಂಡವಂ ದೇಶಂ ಸಹಿತಃ ಸವ್ಯಸಾಚಿನಾ ॥೧೯॥

ಖಡ್ಗಚರ್ಮಧಾರಿಯಾದ ಕೃಷ್ಣನು ಸವ್ಯಸಾಚಿಯಾದ ಅರ್ಜುನನಿಂದ ಸಹಿತನಾಗಿ ಎಲ್ಲಪ್ರಾಣಿಗಳಿಗೂ ಆವಾಸಸ್ಥಾನವಾದ ಖಾಂಡವವನ ಪ್ರದೇಶವನ್ನು ನೋಡಿದನು.

ಋಕ್ಷಗೋಮಾಯುಸಂಘುಷ್ಟಂ ಹಂಸಸಾರಸನಾದಿತಮ್ ।
ಶಾಖಾಮೃಗಗಣೈರ್ಜುಷ್ಟಂ ನಿಕೇತಂ ಸರ್ವರಕ್ಷಸಾಮ್ ॥೨೦॥

ದ್ವೀಪಿಗೋಮಾಯುಸಿಂಹರ್ಷ್ಟವರಾಹರುರುವಾರಣೈಃ ।
ನಾನಾಮೃಗಸಹಸ್ರೈಶ್ಚ ಪಕ್ಷಿಭಿಶ್ಚ ಸಮಾವೃತಮ್ ॥೨೧॥

ಅದು ಕರಡಿಗಳ ಮತ್ತು ನರಿಗಳ ಘೋಷದಿಂದಲೂ, ಹಂಸಸಾರಸ ಪಕ್ಷಿಗಳ ಕಲರವದಿಂದಲೂ, ಅನೇಕ ಕಪಿಸಮೂಹಗಳಿಂದಲೂ, ಕೂಡಿದುದಾಗಿ ಎಲ್ಲ ರಾಕ್ಷಸರಿಗೂ ಆವಾಸಸ್ಥಾನವಾಗಿದ್ದಿತು. ಅದು ದ್ವೀಪಿಗಳಿಂದಲೂ, ನರಿಗಳಿಂದಲೂ, ಸಿಂಹ, ಕರಡಿ, ವರಾಹಗಳಿಂದಲೂ, ರುರುಗಜಗಳಿಂದಲೂ, ಇನ್ನೂ ಸಹಸ್ರಾರು ಮೃಗಗಳಿಂದಲೂ ಮತ್ತು ಪಕ್ಷಿಗಳಿಂದಲೂ ಕೂಡಿದ್ದಿತು.

ಮಾನಾರ್ಹಂ ತಚ್ಚ ಸರ್ವೇಷಾಂ ದೇವದಾನವರಕ್ಷಸಾಮ್ ।
ಆಲಯಂ ಪನ್ನಗೇಂದ್ರಸ್ಯ ತಕ್ಷಕಸ್ಯ ಮಹಾತ್ಮನಃ ॥೨೨॥

ಎಲ್ಲಾ ದೇವದಾನವರಾಕ್ಷಸರ ಸಮ್ಮಾನಕ್ಕೆ ಯೋಗ್ಯವಾದ ಆ ಪ್ರದೇಶವು ಮಹಾನುಭಾವನಾದ ನಾಗೇಂದ್ರನಾದ ತಕ್ಷಕನ ಆವಾಸಸ್ಥಾನವಾಗಿದ್ದಿತು.

ವೇಣುಶಾಲ್ಮಲಿಮಾಲ್ವಂಗೈರುಪೇತಂ ವೇತ್ರಸಂವೃತಮ್ ।
ಶಾಕಪದ್ಮಕತಾಲೈಶ್ಚ ಶತಶಾಖೈಶ್ಚ ರೌಹಿಣೈಃ ॥೨೩॥

ಆ ಪ್ರದೇಶವು ಬಿದಿರು, ಶಾಲ್ಮಲಿ, (ಬೂರುಗಹತ್ತಿ) ಮಾಲ್ವಲ, ಮೊದಲಾದ ಮರಗಳಿಂದಲೂ, ವೇತ್ರದ(ಬೆತ್ತ) ಪೊದೆಗಳಿಂದಲೂ, ಶಾಕಪದ್ಮ ಮತ್ತು ತಾಲ ವೃಕ್ಷಗಳಿಂದಲೂ, ನೂರುಶಾಖೆಗಳುಳ್ಳ ವಟವೃಕ್ಷದಿಂದಲೂ ಕೂಡಿದ್ದಿತು.

ನಿರುದ್ದೇಶಸಮಪ್ರಖ್ಯಮಾವೃತಂ ಗಜಸಂಸ್ಥಿತೈಃ ।
ಗುಲ್ಮೈಃ ಕೀಚಕವೇಣೂನಾಮಾಶೀವಿಷನಿಷೇವಿತಮ್ ॥೨೪॥

ಆನೆಗಳು ಅಲ್ಲಲ್ಲಿ ನಿಲ್ಲುವುದರಿಂದ ಉನ್ನತಪ್ರದೇಶಗಳಿಂದ ಶೂನ್ಯವಾಗಿ ಸಮತಲವಾದ ಭೂಮಿಯಿಂದ ಕೂಡಿ ಕೀಚಕ ಮತ್ತು ವೇಣುಗುಲ್ಮಗಳಿಂದಲೂ ಕೂಡಿ ಮಹಾಸರ್ಪಗಳಿಗೂ ಆವಾಸಸ್ಥಾನವಾಗಿದ್ದಿತು.

ವಿಹಂಗೌಘಮಹಾಭಾಸಂ ಪ್ರತಾನಂ ದ್ರುಮಸಂಕಟಮ್ ।
ಸ್ರುನಿವೇತ್ರಕುಳಿಂಗಾಕ್ಷೈರ್ಹಿಂತಾಲೈಶ್ಚ ಸಮಾವೃತಮ್ ॥೨೫॥

ಪಕ್ಷಿಗಳ ಸಮೂಹದಿಂದ ಮಹಾಕಾಂತಿಯಿಂದ ಕೂಡಿ ನಿಬಿಡವಾದ ಮತ್ತು ವಿಸ್ತಾರವಾದ ಸ್ರುನಿ, ವೇತ್ರ , ಕುಳಿಂಗಾಕ್ಷ, (ಕಾಡಿನಕಬ್ಬು) ಹಿಂತಾಲ ಮೊದಲಾದ ನಿಬಿಡವಾದ ಮರಗಳಿಂದ ಕೂಡಿದ್ದಿತು.

ವ್ಯಾಲದಂಷ್ಟ್ರಿಗ ಣಾಕೀರ್ಣಂ ವರ್ಜಿತಂ ಸರ್ವಮಾನುಷೈಃ ।
ರಕ್ಷಸಾಂ ಭುಜಗೇಂದ್ರಾಣಾಂ ಪಕ್ಷಿಣಾಂ ಚ ಮಹಾಲಯಮ್ ॥೨೬॥

ಮದಗಜಗಳಿಂದಲೂ, ದಂಷ್ಟ್ರಿಗಳ ಸಮೂಹದಿಂದಲೂ ಕೂಡಿದ್ದು ಪಕ್ಷಿಗಳಿಗೂ, ರಾಕ್ಷಸರಿಗೂ ಮತ್ತು ಮಹಾಸರ್ಪಗಳಿಗೂ ಆಶ್ರಯವಾಗಿದ್ದು ಆ ಕಾರಣದಿಂದ ಎಲ್ಲ ಮನುಷ್ಯರಿಂದಲೂ ಆ ಪ್ರದೇಶವು ವರ್ಜಿಸಲ್ಪಟ್ಟಿದ್ದಿತು.

ದೇವೇಶಃ ಸರ್ವಭೂತೇಶಃ ಸರ್ವಲೋಕವಿಭಾಗವಿತ್ ।
ಪೀತಾಂಬರಧರೋ ದೇವಸ್ತದ್ವನಂ ಬಹುಧಾ ಚರನ್ ॥೨೭॥

ಸದ್ರುಮಸ್ಯ ಸಯಕ್ಷಸ್ಯ ಸಭೂತಗಣಪಕ್ಷಿಣಃ ।
ಖಾಂಡವಸ್ಯ ವಿನಾಶಂ ತಂ ದದರ್ಶ ಮಧುಸೂದನಃ ॥೨೮॥

ದೇವತೆಗಳ ಒಡೆಯನೂ, ಸರ್ವಜೀವರಿಗೆ ಒಡೆಯನೂ ಸರ್ವಲೋಕವಿಭಾಗಗಳನ್ನು ತಿಳಿದವನೂ, ಪೀತಾಂಬರಧಾರಿಯೂ ಆದ ಕೃಷ್ಣನು ಆ ವನಪ್ರದೇಶದಲ್ಲಿ ಬಹಳವಾಗಿ ಸಂಚರಿಸುತ್ತಾ ವೃಕ್ಷಗಳಿಂದಲೂ, ಯಕ್ಷರಿಂದಲೂ, ಭೂತಗಣ ಮತ್ತು ಪಕ್ಷಿಗಣಗಳಿಂದಲೂ ಸಹಿತವಾದ ಆ ಖಾಂಡವವನದ ಆಸನ್ನವಾದ ವಿನಾಶವನ್ನು (ದಿವ್ಯಜ್ಞಾನದಿಂದ) ನೋಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕೋನತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ॥

॥ ಇತಿ ಖಾಂಡವದಾಹಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸ್ವೈರಂ ತಯೋಸ್ತತ್ರ ಚಿಕ್ರೀಡತೋಶ್ಚ
ಸ್ತ್ರೀರತ್ನಾಭ್ಯಾಂ ಮಂದವಾತಾನುಜುಷ್ಟೇ ।
ವನೇ ಪ್ರಸೂನಸ್ತಬಕೋರುರಾಜಿತೇ
ಜಲೇ ಚ ತಿಗ್ಮದ್ಯುತಿಕನ್ಯಕಾಯಾಃ ॥೨೧೭॥

ಭೂತ್ವಾ ವಿಪ್ರಸ್ತೌ ಯಯಾಚೇऽನ್ನಮೇತ್ಯ
ಕೃಶಾನುರೂಚೇ ಚ ಮತೇ ರಮೇಶಿತುಃ ।
ಪಾರ್ಥಃ ಕೀದೃಕ್ ತೇऽನ್ನಮಿಷ್ಟಂ ವದೇತಿ
ಸ ಚಾವಾದೀದ್‌ವಹ್ನಿರಹಂ ವನಾರ್ಥೀ ॥೨೧೮॥

ಹೂಗೊಂಚಲುಗಳಿಂದ ಶೋಭಿಸುತ್ತ ಮಂದಮಾರುತದಿಂದ ಯುಕ್ತವಾಗಿದ್ದ ಆ ಕಾಡಿನಲ್ಲಿಯೂ ಯಮುನಾ ಜಲದಲ್ಲಿಯೂ ಕೃಷ್ಣಾರ್ಜುನರು ಸ್ತ್ರೀರತ್ನ ಸಮೇತರಾಗಿ ಯಥೇಚ್ಛ ವಿಹರಿಸುತ್ತಿದ್ದಾಗ ಅಗ್ನಿ ಬ್ರಾಹ್ಮಣನಾಗಿ ಕೃಷ್ಣಾರ್ಜುನರ ಬಳಿಗೆ ಬಂದು ಅನ್ನವನ್ನು ಬೇಡಿದ. ಅರ್ಜುನ ಶ್ರೀಕೃಷ್ಣನ ಅನುಮತಿ ಪಡೆದು 'ನಿನಗೆ ಎಂಥ ಅನ್ನಬೇಕು ಹೇಳು' ಎಂದ. 'ನಾನು ಅಗ್ನಿ ಈ ಕಾಡನ್ನು ಬಯಸುತ್ತೇನೆ' ಎಂದ ಅಗ್ನಿ.

ಪ್ರಯಾಜಾನ್ ದೇವಾನನುಯಾಜಾಂಶ್ಚ ಶುಲ್ಕಂ
ಹವಿರ್ದಾನೇ ದೇವತಾನಾಮಯಾಚಿಷಂ ।
ಬಲಹ್ರಾಸಸ್ತವ ಭೂಯಾದಿತಿ ಸ್ಮ
ಶಪ್ತೈವ ತೇ ತಾಂಶ್ಚ ದದುಃ ಪುರಾ ಮಮ ॥೨೧೯॥

'ನಾನು ಬಹು ಹಿಂದೆ ದೇವತೆಗಳಿಗೆ ಹವಿಸ್ಸನ್ನು ಒಯ್ದು ಕೊಡುವುದಕ್ಕೆ ವೇತನವಾಗಿ ಪ್ರಯಾಜ ಅನುಯಾಜವೆಂಬ ಆಹುತಿಗಳನ್ನು ಕೊಡಬೇಕೆಂದು ಕೇಳಿಕೊಂಡೆ. ಅದಕ್ಕೆ ಅವರು ನಿನಗೆ ಪಚನಶಕ್ತಿ ಹ್ರಾಸವಾಗಲೆಂದು ಶಪಿಸಿ ಆ ಆಹುತಿಗಳನ್ನು ಕೊಟ್ಟರು.

ಪುನಃ ಪೂರ್ತಿಃ ಕೇನ ಮೇ ಸ್ಯಾದ್‌ಬಲಸ್ಯೇ-
ತ್ಯಬ್ಜೋದ್ಭವಂ ಪೃಷ್ಟವಾನಸ್ಮಿ ನತ್ವಾ ।
ಯದಾ ವನಂ ಖಾಂಡವಂ ಹಿ ತ್ವಮತ್ಸಿ
ತದಾ ಬಲಂ ತೇ ಭವತೀತಿ ಸೋಽಬ್ರವೀತ್ ॥೨೨೦॥

'ನನಗೆ ಪಚನಶಕ್ತಿ ಪುನಃ ಯಾವುದರಿಂದ ತುಂಬಿ ಬಂದೀತೆಂದು ಬ್ರಹ್ಮನನ್ನು ನಮಿಸಿ ಕೇಳಿದೆ. ಖಾಂಡವವನವನ್ನು ಭಕ್ಷಿಸಿದಾಗ ಅದು ನಿನಗೆ ಲಭ್ಯವಾಗುವುದು ಎಂದ ಬ್ರಹ್ಮ.

ಶಕ್ರಸ್ಯೇದಂ ಖಾಂಡವಂ ತೇನ ವಿಘ್ನಂ
ಕರೋತ್ಯಸೌ ತೇನ ವಾಂ ಪ್ರಾರ್ಥಯಾಮಿ ।
ಇತ್ಯುಕ್ತೇ ತಂ ಪಾರ್ಥ ಊಚೇ ಯದಿ ಸ್ಯಾತ್
ರಥೋ ಧನುಶ್ಚಾಥ ಶಕ್ರಂ ನಿರೋತ್ಸ್ಯೇ ॥೨೨೧॥

'ಈ ಖಾಂಡವ ವನ ಇಂದ್ರನದು. ಅದರಿಂದ ಅವನು ನನಗೆ ವಿಘ್ನ ಮಾಡುತ್ತಿದ್ದಾನೆ. ಅದರಿಂದ ನಾನು ನಿನ್ನನ್ನು ಬೇಡುತ್ತೇನೆ' ಎಂದು ಅಗ್ನಿ ಹೇಳಿದಾಗ ಅರ್ಜುನನೆಂದ, 'ನನಗೆ ಒಂದು ರಥವೂ ಧನಸ್ಸೂ ಸಿಕ್ಕಿದರೆ ಇಂದ್ರನನ್ನು ಇದಿರಿಸಬಲ್ಲೆ' ಎಂದು.

★ ★ ★ ★

ಇನ್ನೂರ ಮೂವತ್ತನೆಯ ಅಧ್ಯಾಯ

(ಯಮುನಾತೀರದಲ್ಲಿ ವಿಪ್ರವೇಷದಿಂದ ಬಂದು ಅಗ್ನಿಯಿಂದ ತನ್ನ ದುಃಸ್ಥಿತಿಯನ್ನು ತಿಳಿಸಿ ಖಾಂಡವದಹನಕ್ಕಾಗಿ ಕೃಷ್ಣಾರ್ಜುನರ ಸಹಾಯದ ಪ್ರಾರ್ಥನೆ. ತಮ್ಮ ತಮ್ಮ ಅಸ್ತ್ರವನ್ನು ಪಡೆದ ಕೃಷ್ಣಾರ್ಜುನರಿಂದ ಆಶ್ವಾಸನೆ, ಖಾಂಡವದಾಹದ ಉಪಕ್ರಮ.)

ವೈಶಂಪಾಯನಃ

ವಿಹಾರದೇಶಂ ಸಂಪ್ರಾಪ್ಯ ನಾನಾದ್ರುಮಲತಾಕುಲಮ್ ।
ಗೃಹೈರುಚ್ಚಾವಚೈರ್ಯುಕ್ತಂ ಪುರಂದರಪುರೋಪಮಮ್ ॥೧॥

ಭಕ್ಷೈರ್ಭೋಜ್ಯೈಶ್ಚ ಪೇಯೈಶ್ಚ ರಸವದ್ಭಿರ್ಮಹಾಧನೈಃ ।
ಮಾಲ್ಯೈಶ್ಚ ವಿವಿಧೈರ್ಯುಕ್ತಂ ಗೃಹಂ ವಾರ್ಷ್ಣೇಯಪಾಂಡವೌ ॥೨॥

ಆವಿವಿಶತುರಾಪೂರ್ಣಂ ರತ್ನೈರುಚ್ಚಾವಚೈಃ ಶುಭೈಃ ।
ಯಥೋಪಜೋಷಂ ಸರ್ವಶ್ಚ ಜನಶ್ಚಿಕ್ರೀಡ ಭಾರತ ॥೩॥

ನಾನಾದ್ರುಮಲತೆಗಳಿಂದ ಕೂಡಿದ್ದ, ಅನೇಕ ಸಣ್ಣಪುಟ್ಟಮರಗಳಿಂದ ಕೂಡಿದ್ದ, ಇಂದ್ರನ ಪಟ್ಟಣದಂತಿದ್ದ ವಿಹಾರದೇಶವನ್ನು ತಲುಪಿ ಅಲ್ಲಿ ಭಕ್ಷ್ಯಭೋಜ್ಯಗಳಿಂದಲೂ, ಮಹಾ ಬೆಲೆಬಾಳುವ ರುಚಿಯಾದ ಪಾನಗಳಿಂದಲೂ, ವಿವಿಧ ಪುಷ್ಪ ಮಾಲೆಗಳಿಂದಲೂ, ವಿಧವಿಧವಾದ ಶ್ರೇಷ್ಠವಾದ ರತ್ನಗಳಿಂಲೂ, ಪೂರ್ಣವಾಗಿದ್ದ ಒಂದು ಗೃಹವನ್ನು ಕೃಷ್ಣಾರ್ಜುನರು ಪ್ರವೇಶಿಸಿದರು. ಭಾರತನೇ, ಉಳಿದ ಜನರೂ ಸಹ ಅಲ್ಲಿ ತಮಗೆ ಇಷ್ಟಬಂದಂತೆ ವಿಹರಿಸಿದರು.

ವನೇ ಕಾಶ್ಚಿಜ್ಜಲೇ ಕಾಶ್ಚಿತ್ ಕಾಶ್ಚಿದ್ ವೇಶ್ಮಸು ಚಾಂಗನಾಃ ।
ಯಥಾಜೋಷಂ ಯಥಾಪ್ರೀತಿ ಚಿಕ್ರೀಡುಃ ಕೃಷ್ಣಪಾರ್ಥಯೋಃ ॥೪॥

ಕೃಷ್ಣಪಾರ್ಥರ ಅಂಗನೆಯರು ಕೆಲವರು ಜಲದಲ್ಲಿಯೂ, ಕೆಲವರು ವನದಲ್ಲಿಯೂ, ಕೆಲವರು ಗೃಹಗಳಲ್ಲಿಯೂ ತಮ್ಮ ಮನಸ್ಸಿಗೆ ತೋರಿದಂತೆ ಸಂತೋಷದಿಂದ ವಿಹರಿಸಿದರು.

ವಾಸುದೇವಪ್ರಿಯಾ ನಿತ್ಯಂ ಸತ್ಯಭಾಮಾ ಚ ಭಾಮಿನೀ ।
ದ್ರೌಪದೀ ಚ ಸುಭದ್ರಾ ಚ ವಾಸಾಂಸ್ಯಾಭರಣಾನಿ ಚ ॥೫॥

ಪ್ರಾಯಚ್ಛತಾಂ ಮಹಾರ್ಹಾಣಿ ಸ್ತ್ರೀಣಾಂ ತಾಃ ಸ್ಮ ಮದೋತ್ಕಟಾಃ ।

ಕೃಷ್ಣನ ಪ್ರಿಯೆಯಾದ ಸುಂದರಿಯಾದ ಸತ್ಯಭಾಮೆಯು ಮತ್ತು ದ್ರೌಪದಿಯೂ ಮತ್ತು ಸುಭದ್ರೆಯೂ ಅತಿಶಯವಾದ ಆನಂದದಿಂದ ಅಲ್ಲಿಗೆ ಬಂದಿದ್ದ ಸ್ತ್ರೀಯರಿಗೆ ಬೆಲೆಬಾಳುವ ವಸ್ತ್ರಗಳನ್ನೂ ಮತ್ತು ಆಭರಣಗಳನ್ನು ದಾನ ಮಾಡಿದರು.

ಕಾಶ್ಚಿತ್ ಪ್ರಹೃಷ್ಟಾ ನನೃತುಶ್ಚುಕ್ರುಶುಶ್ಚ ತಥಾऽಪರಾಃ ॥೬॥

ಜಹಸುಶ್ಚ ಪರಾ ನಾರ್ಯಃ ಪಪುಶ್ಚಾನ್ಯಾ ವರಾಸವಮ್ ।
ರುರುಧುಶ್ಚಾಪರಾಸ್ತತ್ರ ಪ್ರಜಲ್ಪುಶ್ಚ ಪರಸ್ಪರಮ್ ॥೭॥

ಕೆಲವರು ಸಂತೋಷದಿಂದ ನರ್ತಿಸಿದರು. ಇನ್ನು ಕೆಲವರು ಕೇಕೆ ಹಾಕುತ್ತಿದ್ದರು, ಕೆಲವು ಸ್ತ್ರೀಯರು ನಗುತ್ತಿದ್ದರು, ಇನ್ನು ಕೆಲವರು ಶ್ರೇಷ್ಠವಾದ ಆಸವಗಳನ್ನು ಪಾನಮಾಡುತ್ತಿದ್ದರು.

ಮಂತ್ರಯಾಮಾಸುರನ್ಯಾಶ್ಚ ರಹಸ್ಯಾನಿ ಪರಸ್ಪರಮ್ ।
ಕಾಶ್ಚಿನ್ಮಾಲ್ಯಾನಿ ಚಿನ್ವಂತೀಃ ಕಾಶ್ಚಿನ್ಮಾಲ್ಯಾನಿ ದಧ್ರಿರೇ ॥೮॥

ಇನ್ನು ಕೆಲವರು ಪರಸ್ಪರವಾಗಿ ತಡೆಯುತ್ತಿದ್ದರು, ಕೆಲವರು ಪರಸ್ಪರವಾಗಿ ಮಾತನಾಡುತ್ತಿದ್ದರು, ಇನ್ನು ಕೆಲವರು ಪರಸ್ಪರವಾಗಿ ರಹಸ್ಯವಿಷಯಗಳ ಮಂತ್ರಾಲೋಚನೆಯನ್ನು ಮಾಡುತ್ತಿದ್ದರು, ಕೆಲವರು ಹೂಮಾಲೆಗಳನ್ನು ಹೆಣೆಯುತ್ತಿದ್ದರು, ಇನ್ನು ಕೆಲವರು ಹೂಮಾಲೆಗಳನ್ನು ಧರಿಸುತ್ತಿದ್ದರು.

ವೇಣುವೀಣಾಮೃದಂಗಾನಾಂ ಮನೋಜ್ಞಾನಾಂ ಚ ಸರ್ವಶಃ ।
ಶಬ್ದೇನ ಪೂರ್ಯತೇ ಹ ಸ್ಮ ತದ್ವನಂ ಸುಮಹದ್ದಿಮತ್ ॥೯॥

ಎಲ್ಲ ಕಡೆಗಳಲ್ಲಿಯೂ ವೇಣುವೀಣಾಮೃದಂಗ ಶಬ್ದಗಳಿಂದ ಸಮೃದ್ಧವಾದ ಆ ವನವು ತುಂಬಿಹೋಯಿತು.

ತಸ್ಮಿಂಸ್ತದಾ ವರ್ತಮಾನೇ ಕುರುದಾಶಾರ್ಹನಂದನೌ ।
ಸಮೀಪಂ ಜಗ್ಮತುಃ ಕಂಚಿದುದ್ದೇಶಂ ಸುಮನೋಹರಮ್ ॥೧೦॥

ಎಲ್ಲವೂ ಹೀಗೆ ಜರುಗುತ್ತಿರಲು ಕೃಷ್ಣಾರ್ಜುನರು ಅಲ್ಲಿಯೇ ಸ್ವಲ್ಪ ಎತ್ತರವಾದ ಮನೋಹರವಾದ ಒಂದು ಪ್ರದೇಶವನ್ನು ತಲುಪಿದರು.

ತತ್ರ ಗತ್ವಾ ಮಹಾತ್ಮಾನೌ ಕೃಷ್ಣೌ ಪರಪುರಂಜಯೌ ।
ಮಹಾರ್ಹಾಸನಯೋ ರಾಜಂಸ್ತತಸ್ತೌ ಸನ್ನಿಷೀದತುಃ ॥೧೧॥

ರಾಜನೇ, ಪರಪುರಂಜಯರಾದ, ಮಹಾನುಭಾವರಾದ ಕೃಷ್ಣಾರ್ಜುನರು ಅಲ್ಲಿಗೆ ಹೋಗಿ ಶ್ರೇಷ್ಠವಾದ ಆಸನಗಳಲ್ಲಿ ಕುಳಿತುಕೊಂಡರು.

ತತ್ರ ಪೂರ್ವವ್ಯತೀತಾನಿ ವಿಕ್ರಾಂತಾನಿ ಮಹಾಂತಿ ಚ ।
ಬಹೂನಿ ಕಥಯಿತ್ವಾ ತೌ ರೇಮಾತೇ ಪಾರ್ಥಮಾಧವೌ ॥೧೨॥

ಅಲ್ಲಿ ಕೃಷ್ಣಾರ್ಜುನರು ಹಿಂದೆ ನಡೆದ ಅನೇಕ ವಿಕ್ರಮದ ದೊಡ್ಡದೊಡ್ಡ ಕಥೆಗಳನ್ನು ಹೇಳುತ್ತಾ ವಿಹರಿಸಿದರು.

ತತ್ರೋಪವಿಷ್ಟೌ ಮುದಿತೌ ನಾಕಪೃಷ್ಠೇऽಶ್ವಿನಾವಿವ ।
ಅಭ್ಯಾಗಚ್ಛತ್ ತದಾ ವಿಪ್ರೋ ವಾಸುದೇವಧನಂಜಯೌ ॥೧೩॥

ಸ್ವರ್ಗದಲ್ಲಿ ಸಂತುಷ್ಠರಾದ ಅಶ್ವಿನೀದೇವತೆಗಳಂತೆ ಅಲ್ಲಿ ಕುಳಿತಿದ್ದ ಕೃಷ್ಣಾರ್ಜುನರ ಸಮೀಪಕ್ಕೆ ಆಗ ಒಬ್ಬ ವಿಪ್ರನು ಬಂದನು.

ಬೃಹತ್ಸಾಲಪ್ರತೀಕಾಶಃ ಪ್ರತಪ್ತಕನಕಪ್ರಭಃ ।
ಹರಿಪಿಂಗೋಜ್ಜ್ವಲಶ್ಮಶ್ರುಃ ಪ್ರಮಾಣಾಯಾಮತಃ ಸಮಃ ॥೧೪॥

ಅರುಣಾದಿತ್ಯಸಂಕಾಶಶ್ಚೀರವಾಸಾ ಜಟಾಧರಃ ।
ಪದ್ಮಪತ್ರಾನನಃ ಪಿಂಗಸ್ತೇಜಸಾ ಪ್ರಜ್ವಲನ್ನಿವ ।
ಜಗಾಮ ತೌ ಕೃಷ್ಣಪಾರ್ಥೌ ದಿಧಕ್ಷನ್ ಖಾಂಡವಂ ವನಮ್ ॥೧೫॥

ದೊಡ್ಡ ಸಾಲವೃಕ್ಷದಂತೆ ತೋರುತ್ತಿದ್ದ ಪುಟವಿಟ್ಟ ಚಿನ್ನದ ಕಾಂತಿಯನ್ನು ಹೊಂದಿದ್ದ, ಹಸಿರುಕೆಂಪು ಬಣ್ಣದ ಉಜ್ವಲವಾದ ಮೀಸೆಯನ್ನು ಹೊಂದಿದ್ದ, ಅನುಗುಣವಾದ ಎತ್ತರ ಮತ್ತು ವಿಸ್ತಾರಗಳಿಂದ ಕೂಡಿದ್ದ, ಉದಯಿಸುವ ಸೂರ್ಯನ ಕಾಂತಿಯನ್ನು ಹೊಂದಿದ್ದ, ನಾರುಮಡಿಯನ್ನುಟ್ಟು ಜಟಾಧರನಾಗಿದ್ದ, ಪದ್ಮಪತ್ರದಂತೆ ಮುಖವನ್ನು ಹೊಂದಿದ್ದ, ಕೆಂಪುಬಣ್ಣದ ತೇಜಸ್ಸಿನಿಂದ ಉರಿಯುವವನಂತೆ ತೋರುತ್ತಿದ್ದ ಆ ಬ್ರಾಹ್ಮಣನು ಖಾಂಡವವನವನ್ನು ದಹಿಸುವ ಆಸೆಯಿಂದ ಕೃಷ್ಣಪಾರ್ಥರನ್ನು ಸಮೀಪಿಸಿದನು.

ಉಪಸೃಷ್ಟಂ ತು ತಂ ಕೃಷ್ಣೋ ಭ್ರಾಜಮಾನಂ ದ್ವಿಜೋತ್ತಮಮ್ ।
ದೃಷ್ಟ್ವಾ ಜಗಾಮ ಮನಸಾ ಪಾವಕೋಽಯಮಿತಿ ಪ್ರಭುಃ ॥೧೬॥

ಕೃಷ್ಣನು ಸಮೀಪಕ್ಕೆ ಬಂದ ಪ್ರಕಾಶಮಾನವಾಗಿದ್ದ ಆ ಬ್ರಾಹ್ಮಣನನ್ನು ನೋಡಿ ಇವನು ಅಗ್ನಿ ಎಂದು ತಿಳಿದನು.

ಅರ್ಜುನೋ ವಾಸುದೇವಶ್ಚ ತೂರ್ಣಮುತ್ಥಾಯ ತಸ್ಥತುಃ ।
ಸೋಽಬ್ರವೀದರ್ಜುನಂ ಚೈವ ವಾಸುದೇವಂ ಚ ಮಾಧವಮ್ ॥

ಕೃಷ್ಣಾರ್ಜುನರಿಬ್ಬರೂ ತಕ್ಷಣ ಎದ್ದುನಿಂತರು. ಆ ವಿಪ್ರನು ಅರ್ಜುನನನ್ನೂ ಮತ್ತು ಮಾಧವನನ್ನೂ ಕುರಿತು ಹೇಳಿದನು.

ಲೋಕಪ್ರವೀರೌ ತಿಷ್ಠಂತೌ ಖಾಂಡವಸ್ಯ ಸಮೀಪತಃ ।
ಬ್ರಾಹ್ಮಣೋ ಬಹುಭೋಕ್ತಾಽಸ್ಮಿ ಭುಂಜೇಽಪರಿಮಿತಂ ಸದಾ ।
ಭಿಕ್ಷೇ ವಾರ್ಷ್ಣೇಯಪಾರ್ಥೌ ವಾಮೇಕಾಂ ತೃಪ್ತಿಂ ಪ್ರಯಚ್ಛತಾಮ್॥೧೮॥

ಲೋಕವೀರರಾದ ನೀವಿಬ್ಬರೂ ಖಾಂಡವವನದ ಬಳಿಯಲ್ಲಿದ್ದೀರಿ. ನಾನು ಬಹು ಭೋಜನವುಳ್ಳ ಬ್ರಾಹ್ಮಣ, ಯಾವಾಗಲೂ ಅಪರಿಮಿತವಾದ ಆಹಾರವನ್ನು

ಭುಂಜಿಸುತ್ತೇನೆ. ಕೃಷ್ಣಾರ್ಜುನರಾದ ನಿಮ್ಮನ್ನು, ನಾನು ನನಗೆ ತೃಪ್ತಿಯಾಗುವಂತಹ ದೊಡ್ಡ ಒಂದು ಭೋಜನವನ್ನು ಬೇಡುತ್ತಿದ್ದೇನೆ.

ವೈಶಂಪಾಯನಃ

ಏವಮುಕ್ತೌ ತಮಬ್ರೂತಾಂ ತತಸ್ತೌ ಕೃಷ್ಣಪಾಂಡವೌ ।
ಕೇನಾನ್ನೇನ ಭವಾಂಸ್ತೃಪ್ಯೇತ್ ತಸ್ಯಾನ್ನಸ್ಯ ಯತಾವಹೇ ॥೧೯॥

ಅಗ್ನಿಯು ಹೀಗೆ ಹೇಳುತ್ತಿರಲು, ಕೃಷ್ಣಪಾಂಡವರು ಅವನನ್ನು ಕುರಿತು ನಿನಗೆ ಯಾವ ಅನ್ನದಿಂದ ತೃಪ್ತಿಯುಂಟಾಗುತ್ತದೆ ಎಂದು ಹೇಳು. ನಿನಗೆ ಆ ಅನ್ನವನ್ನು ದೊರಕಿಸಲು ನಾವು ಪ್ರಯತ್ನಪಡುವೆವು.

ಏವಮುಕ್ತಃ ಸ ಭಗವಾನ್ ಅಬ್ರವೀತ್ ತಾವುಭೌ ತತಃ ।
ಭಾಷಮಾಣೌ ತದಾ ವೀರೌ ಕಿಮನ್ನಂ ಕ್ರಿಯತಾಮಿತಿ ॥೨೦॥

ಯಾವ ಅನ್ನವನ್ನು ಕೊಡಬೇಕು ಎಂದು ಮಾತನಾಡುತ್ತಿದ್ದ ಆ ಇಬ್ಬರು ವೀರರನ್ನು ಕುರಿತು, ಆಗ ಪೂಜ್ಯನಾದ ಅಗ್ನಿಯು ಮಾತನಾಡಿದನು.

ನಾಹಮನ್ನಂ ಬುಭುಕ್ಷೇ ವೈ ಪಾವಕಂ ಮಾಂ ನಿಬೋಧತಮ್ ।
ಯದನ್ನಮನುರೂಪಂ ಮೇ ತದ್ ಯುವಾಂ ಸಂಪ್ರಯಚ್ಛತಮ್ ॥೨೧॥

ನಾನು ಸಾಮಾನ್ಯವಾದ ಅನ್ನವನ್ನು ತಿನ್ನುವವನಲ್ಲ. ನಾನು ಅಗ್ನಿ ಎಂದು ತಿಳಿಯಿರಿ. ನೀವಿಬ್ಬರೂ ನನಗೆ ಅನುರೂಪವಾದ ಅನ್ನವನ್ನು ನೀಡಬೇಕು.

ಇದಮಿಂದ್ರಃ ಸದಾ ದಾವಂ ಖಾಂಡವಂ ಪರಿರಕ್ಷತಿ ।
ನ ಚ ಶಕ್ನೋಮ್ಯಹಂ ದಗ್ಧುಂ ರಕ್ಷ್ಯಮಾಣಂ ಮಹಾತ್ಮನಾ ॥೨೨॥

ಈ ಖಾಂಡವವನವನ್ನು ಇಂದ್ರನು ಯಾವಾಗಲೂ ರಕ್ಷಿಸುತ್ತಾನೆ. ಮಹಾತ್ಮನಾದ ಅವನಿಂದ ರಕ್ಷಿಸಲ್ಪಡುವ ಈ ವನವನ್ನು ದಹಿಸುವ ಶಕ್ತಿ ನನಗಿಲ್ಲ.

ವಸತ್ಯಸ್ಯ ಸಖಾ ಚಾತ್ರ ತಕ್ಷಕಃ ಪನ್ನಗಃ ಸದಾ ।
ಸಗಣಸ್ತತ್ಕೃತೇ ದಾವಂ ಪರಿರಕ್ಷತಿ ವಜ್ರಭೃತ್ ॥೨೩॥

ಇಲ್ಲಿ ಯಾವಾಗಲೂ ಇಂದ್ರನ ಸ್ನೇಹಿತನಾದ ನಾಗೇಂದ್ರನಾದ ತಕ್ಷಕನು ತನ್ನ ಪರಿವಾರದೊಂದಿಗೆ ವಾಸಿಸುತ್ತಾನೆ. ಆ ಕಾರಣದಿಂದ ವಜ್ರಧರನಾದ ಇಂದ್ರನು ಈ ವನವನ್ನು ರಕ್ಷಿಸುತ್ತಾನೆ.

ತತ್ರ ಭೂತಾನ್ಯನೇಕಾನಿ ರಕ್ಷ್ಯಂತೇ ಸ್ಮ ಪ್ರಸಂಗತಃ ।
ತಂ ನಿರ್ದಗ್ಧುಂ ನ ಶಕ್ನೋಮಿ ದಾವಂ ಶಕ್ರಸ್ಯ ತೇಜಸಾ ॥೨೪॥

ತಕ್ಷಕನನ್ನು ರಕ್ಷಿಸುವ ಪ್ರಸಂಗದಿಂದ ಇಲ್ಲಿರುವ ಅನೇಕ ಪ್ರಾಣಿಗಳು ರಕ್ಷಿಸಲ್ಪಡುತ್ತವೆ. ಶಕ್ರನ ಪರಾಕ್ರಮದ ಕಾರಣದಿಂದಾಗಿ ನಾನು ಈ ವನವನ್ನು ಸುಡಲು ಸಮರ್ಥನಾಗುತ್ತಿಲ್ಲ.

ಸ ಮಾಂ ಪ್ರಜ್ವಲಿತಂ ದೃಷ್ಟ್ವಾ ಮೇಘೈರೇವಾಭಿವರ್ಷತಿ ।
ಅತೋ ದಗ್ಧುಂ ನ ಶಕ್ನೋಮಿ ದಿಧಕ್ಷುರ್ದಾವಮೀಪ್ಸಿತಮ್ ॥೨೫॥

ಇಲ್ಲಿ ನಾನು ಪ್ರಜ್ವಲಿತನಾದ ಕೂಡಲೇ ಇಂದ್ರನು ಮೇಘಗಳಿಂದ ಮಳೆಯನ್ನು ಸುರಿಸುತ್ತಾನೆ. ಆದ್ದರಿಂದ ನನಗೆ ಇಷ್ಟವಾದ ಈ ವನವನ್ನು ದಹಿಸಲು ನನಗೆ ಸಾಧ್ಯವಾಗುತ್ತಿಲ್ಲ.

ಸ ಯುವಾಭ್ಯಾಂ ಸಹಾಯಾಭ್ಯಾಮಸ್ತ್ರವಿದ್ಭ್ಯಾಂ ಸಮಾಗತಃ ।
ದಹೇಯಂ ಖಾಂಡವಂ ದಾವಮೇತದನ್ನಂ ವೃತಂ ಮಯಾ ॥೨೬॥

ಅಂತಹ ನಾನು ಅಸ್ತ್ರಜ್ಞರಾದ ನಿಮ್ಮಿಬ್ಬರ ಸಹಾಯವನ್ನು ಹೊಂದಿದರೆ ಈ ಖಾಂಡವವನವನ್ನು ದಹಿಸಬಲ್ಲೆ. ಈ ಖಾಂಡವವನವನ್ನು ನನ್ನ ಅನ್ನವಾಗಿ ನಿಮ್ಮ ಬಳಿ ಬೇಡುತ್ತಿದ್ದೇನೆ.

ಯುವಾಂ ಹ್ಯುದಕಧಾರಾಸ್ತಾ ಭೂತಾನಿ ಚ ಮಹಾಭುಜೌ ।
ಉತ್ತಮಾಸ್ತ್ರವಿದೌ ಸಮ್ಯಕ್ ಸರ್ವತೋ ವಾರಯಿಷ್ಯಥಃ ॥೨೭॥

ಮಹಾಭುಜರಾದ, ಪರಮಾಸ್ತ್ರವೇತ್ತರಾದ ನೀವಿಬ್ಬರೂ ಆ ಮಳೆಯನೀರಿನ ಧಾರೆಗಳನ್ನು ಒಳಗೆ ಬರದಂತೆ, ಒಳಗಿರುವ ಪ್ರಾಣಿಗಳನ್ನು ಹೊರಗೆ ಹೋಗದಂತೆ ತಡೆಯುವಿರಿ.

ಜನಮೇಜಯಃ

ಕಿಮರ್ಥಂ ಭಗವಾನಗ್ನಿಃ ಖಾಂಡವಂ ದಗ್ಧುಮಿಚ್ಛತಿ ।
ಕಸ್ಯ ವಾ ವಿಪ್ರಿಯಂ ಕುರ್ವನ್ ಕಸ್ಯ ವಾ ಪ್ರಿಯಮೇವ ಚ ॥

ಪೂಜ್ಯನಾದ ಅಗ್ನಿಯು ಏಕೆ ಖಾಂಡವವನವನ್ನು ದಹಿಸಲು ಬಯಸುತ್ತಾನೆ. ಅದರಿಂದ ಅವನು ಯಾರಿಗೆ ಪ್ರಿಯವನ್ನು ಉಂಟುಮಾಡಬೇಕು. ಅಥವಾ ಯಾರಿಗೆ ಅಪ್ರಿಯವನ್ನು ಉಂಟುಮಾಡಬೇಕು.

ರಕ್ಷ್ಯಮಾಣಂ ಮಹೇಂದ್ರೇಣ ನಾನಾಸತ್ತ್ವಸಮಾಯುತಮ್ ।
ನ ಹ್ಯೇತತ್ಕಾರಣಂ ಬ್ರಹ್ಮನ್ನಲ್ಪಂ ಸಂಪ್ರತಿಭಾತಿ ಮೇ ॥೨೯॥

ಬ್ರಾಹ್ಮಣರೇ, ಮಹೇಂದ್ರನಿಂದ ರಕ್ಷಿತವಾದ ನಾನಾ ಪ್ರಾಣಿಗಳಿಂದ ನಿಬಿಡವಾದ ಈ ವನವನ್ನು ದಹಿಸಲು ಅಗ್ನಿಗೆ ಒಂದು ಅಲ್ಪವಾದ ಕಾರಣವೂ ಇರಲಾರದೆಂದು ನನಗೆ ತೋರುತ್ತದೆ.

ನ ಹ್ಯಲ್ಪೇ ಕಾರಣೇ ವಹ್ನಿರ್ಬಂಧಂ ಕರ್ತುಮರ್ಹತಿ ।
ಯದ್ ದದಾಹ ಸುಸಂಕ್ರುದ್ಧಃ ಖಾಂಡವಂ ಹವ್ಯವಾಹನಃ ॥೩೦॥

ಕ್ಷುಲ್ಲಕ ಕಾರಣಕ್ಕಾಗಿ ಅಗ್ನಿಯು ಇಂತಹ ಒತ್ತಾಯವನ್ನು ಮಾಡಲಾರನು. ಬಹಳ ರೋಷಗೊಂಡ ಅಗ್ನಿಯು ಖಾಂಡವವನ್ನು ದಹಿಸಿದನಷ್ಟೆ.

ಏತತ್ ವಿಸ್ತರಶೋ ಬ್ರಹ್ಮನ್ ಶ್ರೋತುಮಿಚ್ಛಾಮಿ ತತ್ತ್ವತಃ ।
ಖಾಂಡವಸ್ಯ ಪುರಾ ದಾಹೋ ಯಥಾ ಸಮಭವನ್ಮುನೇ ।
ತಥಾ ಮೇ ಕಾರಣಂ ಬ್ರೂಹಿ ಪರಂ ಕೌತೂಹಲಂ ಹಿ ಮೇ ॥೩೧॥

ಬ್ರಾಹ್ಮಣರೇ, ಇದನ್ನು ವಿಸ್ತಾರವಾಗಿ ಮತ್ತು ಸರಿಯಾಗಿ ಕೇಳಲು ಬಯಸುತ್ತೇನೆ. ಋಷಿಗಳೇ, ಹಿಂದೆ ಖಾಂಡವದಾಹವು ಹೇಗೆ ಉಂಟಾಯಿತು ಎಂಬುದಕ್ಕೆ ನನಗೆ ಕಾರಣವನ್ನು ಹೇಳಿ. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ.

ವೈಶಂಪಾಯನಃ

ಶೃಣು ಮೇ ಬ್ರುವತೋ ರಾಜನ್ ಸರ್ವಮೇತದ್ ಯಥಾತಥಮ್ ।
ಯನ್ನಿಮಿತ್ತಂ ದದಾಹಾಗ್ನಿಃ ಖಾಂಡವಂ ಪೃಥಿವೀಪತೇ ॥೩.೨॥

ರಾಜನೇ, ಎಲ್ಲವನ್ನೂ ಯಥಾರ್ಥವಾಗಿ ಹೇಳುವ ನನ್ನ ಮಾತನ್ನು ಕೇಳು. ರಾಜನೇ, ಯಾವಕಾರಣದಿಂದ ಅಗ್ನಿಯು ಖಾಂಡವವನ್ನು ದಹಿಸಿದನು ಎಂದು ಹೇಳುತ್ತೇನೆ.

ಹಂತ ತೇ ಕಥಯಿಷ್ಯಾಮಿ ಪೌರಾಣೇಮೃಷಿಸಂಸ್ತುತಾಮ್ ।
ಕಥಾಮಿಮಾಂ ನರಶ್ರೇಷ್ಠ ಖಾಂಡವಸ್ಯ ವಿನಾಶನೀಮ್ ॥೩.೩॥

ರಾಜನೇ, ಬಹಳ ಸಂತೋಷ. ಪುರಾಣಪ್ರಸಿದ್ಧವಾದ, ಋಷಿಗಳಿಂದ ಸ್ತುತ್ಯವಾದ ಖಾಂಡವವನದ ವಿನಾಶದ ಈ ಕಥೆಯನ್ನು ನಿನಗೆ ಹೇಳುವೆನು.

ಪೌರಾಣಃ ಶ್ರೂಯತೇ ತಾತ ರಾಜಾ ಹರಿಹಯೋಪಮಃ ।
ಇಕ್ಷ್ವಾಕೂಣಾಮತಿರಥೋ ಯಜ್ವಾ ವಿಪುಲದಕ್ಷಿಣಃ ॥೩.೪॥

ಶ್ವೇತಕಿರ್ನಾಮ ವಿಖ್ಯಾತೋ ಬಲವಿಕ್ರಮಸಂಯುತಃ ।
ಯಜ್ವಾ ದಾನಪತಿರ್ಧೀಮಾನ್ ಯಥಾ ನಾನ್ಯೋಽಸ್ತಿ ಕಂಚನ ॥೩.೫॥

ಪ್ರೀತಿಪಾತ್ರನೇ, ಇಕ್ಷ್ವಾಕುವಂಶದ ಇಂದ್ರನಂತಿದ್ದ ಶ್ವೇತಕಿ ಎಂಬ ರಾಜನು ಹಿಂದಿನ ಕಾಲದಲ್ಲಿ ಇದ್ದನು. ಅವನು ಅತಿರಥನೂ, ಯಾಗಗಳನ್ನು ಮಾಡುವವನೂ, ಬಹಳ ದಕ್ಷಿಣೆಯನ್ನು ಕೊಡುವವನೂ, ಬಲಪರಾಕ್ರಮಗಳಿಂದ ಕೂಡಿದವನೂ ಆಗಿ ಪ್ರಖ್ಯಾತನಾದನು. ಅವನಂತಹ ಯಜ್ಞಶೀಲರೂ, ದಾನಪತಿಯೂ ಮತ್ತು ಮೇಧಾವಿಯೂ ಯಾರೂ ಇರಲಿಲ್ಲ.

ಈಜೇ ಚ ಸ ಮಹಾಸತ್ರೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ತಸ್ಯ ನಾನ್ಯಾಽಭವದ್ ಬುದ್ಧಿರ್ದಿವಸೇದಿವಸೇ ನೃಪ ॥೩.೬॥

ಸತ್ಯೇ ಕ್ರಿಯಾಸಮಾರಂಭೇ ದಾನೇಷು ವಿವಿಧೇಷು ಚ ।
ಋಷಿಭಿಃ ಸಹಿತೋ ಧೀಮಾನ್ ಕಲ್ಪಜ್ಞೈಃ ಸಹ ಭೂಮಿಪಃ ॥೩.೭॥

ಅವನು ಮಹಾಸತ್ರಗಳನ್ನೂ, ಬಹಳ ದಕ್ಷಿಣೆಸಹಿತವಾದ ಅನೇಕ ಕ್ರತುಗಳನ್ನೂ ಮಾಡಿದನು. ಅವನಿಗೆ ದಿನಗಳು ಕಳೆದಂತೆ ಇದೇ ಬುದ್ಧಿಉಂಟಾಯಿತು. ಧಾರ್ಮಿಕ ಕ್ರಿಯಾಕಲಾಪಗಳನ್ನು ಬಲ್ಲ ಋಷಿಗಳಿಂದ ಕೂಡಿ ವಿವಿಧ ಯಜ್ಞಗಳನ್ನು ದಾನಗಳನ್ನೂ ಧರ್ಮರಾಜನು ಮಾಡಿದನು.

ತತಸ್ತು ಋತ್ವಿಜಸ್ತಸ್ಯ ಧೂಮವ್ಯಾಕುಲಲೋಚನಾಃ ।
ಕಾಲೇನ ಮಹತಾ ಖಿನ್ನಾಸ್ತತ್ಯಜುಸ್ತಂ ನರಾಧಿಪಮ್ ॥೩೮॥

ಮೇಧಾವಿಯಾದ ಆ ರಾಜನು ಯಜ್ಞದ ವಿಧಾನಗಳನ್ನು ತಿಳಿದ ಋಷಿಗಳಿಂದ ಸಹಿತನಾಗಿ ಅನೇಕ ಯಜ್ಞಗಳನ್ನು ಮಾಡಿದನು. ಆಗ ಹವ್ಯದಿಂದ ಉಪದ್ರುತವಾದ ಕಣ್ಣುಗಳುಳ್ಳ ಅವನ ಋತ್ವಿಜರು ಬಹಳ ಕಾಲದ ಮೇಲೆ ಖಿನ್ನರಾಗಿ ಆ ರಾಜನನ್ನು ತೊರೆದರು.

ತತಃ ಪ್ರಚೋದಯಾಮಾಸ ಋತ್ವಿಜಸ್ತಾನ್ ಮಹೀಪತಿಃ ।
ಚಕ್ಷುರ್ವೈಫಲ್ಯತಾಂ ಪ್ರಾಪ್ತಾನ್ ನ ಪ್ರಪೇದುಶ್ಚ ತೇ ತು ತಮ್ ॥೩೯॥

ತತಸ್ತೇಷಾಮನುಮತೇ ವಿಘ್ನಿತಸ್ತು ನರಾಧಿಪಃ ।
ಸತ್ರಂ ಸಮಾಪಯಾಮಾಸ ಋತ್ವಿಗ್ಭಿರಪರೈಃ ಸಹ ॥೪೦॥

ಅನಂತರ ರಾಜನು ಮಂದದೃಷ್ಟಿಯುಳ್ಳ ಆ ಋತ್ವಿಜರನ್ನು ಬಹಳ ಒತ್ತಾಯಪಡಿಸಿದನು. ಆದರೆ ಅವರು ಅವನ ಸಮೀಪಕ್ಕೆ ಬರಲಿಲ್ಲ. ಆಗ ನಡೆಯುತ್ತಿದ್ದ ಸತ್ರಯಾಗಕ್ಕೆ ವಿಘ್ನವನ್ನು ಹೊಂದಿದ ರಾಜನು ಆ ಋತ್ವಿಜರ ಅನುಮತಿಯನ್ನು ಪಡೆದು ಬೇರೆ ಋತ್ವಿಜರಿಂದ ಆ ಸತ್ರವನ್ನು ಸಮಾಪ್ತಿಗೊಳಿಸಿದನು.

ತಸ್ಯೈವಂ ವರ್ತಮಾನಸ್ಯ ಕದಾಚಿತ್ ಕಾಲಪರ್ಯಯೇ ।
ಸತ್ರಮಾಹರ್ತುಕಾಮಸ್ಯ ಸಂವತ್ಸರಶತಂ ಕಿಲ ।
ಋತ್ವಿಜೋ ನಾಭ್ಯಪದ್ಯಂತ ಸಮಾಹರ್ತುಂ ಮಹಾತ್ಮನಃ ॥೪೧॥

ಹೀಗೆ ಕಾಲವು ಕಳೆಯುತ್ತಿರಲು ಒಮ್ಮೆ ಅವನಿಗೆ ನೂರುವರ್ಷಗಳ ಕಾಲದ ಒಂದು ಸತ್ರಯಾಗವನ್ನು ಮಾಡಬೇಕೆಂದು ಆಸೆಯಾಯಿತು. ಆದರೆ ಆ ಮಹಾನುಭಾವನ ಸಲುವಾಗಿ ಆ ಸತ್ರವನ್ನು ನೆರವೇರಿಸಲು ಯಾವ ಋತ್ವಿಜರೂ ಮುಂದೆ ಬರಲಿಲ್ಲ.

ಸ ತು ರಾಜಾऽಕರೋದ್ ಯತ್ನಂ ಮಹಾಂತಂ ಸಸುಹೃಜ್ಜನಃ ।
ಪ್ರಣಿಪಾತೇನ ಸಾಂತ್ವೇನ ದಾನೇನ ಚ ಮಹಾಯಶಾಃ ॥೪೨॥

ಆ ಕೀರ್ತಿವಂತನಾದ ರಾಜನು ತನ್ನ ಸುಹೃಜ್ಜನಗಳ ಜೊತೆಯಲ್ಲಿ ಸೇರಿ ಋತ್ವಿಜರಿಗೆ ನಮಸ್ಕಾರವನ್ನು ಮಾಡಿ ಸಮಾಧಾನದ ಮಾತುಗಳನ್ನಾಡಿ ದಾನಗಳನ್ನು ಕೊಟ್ಟು ಮಹಾಪ್ರಯತ್ನವನ್ನು ಮಾಡಿದನು.

ಋತ್ವಿಜೋऽನುನಯಾಮಾಸ ಭೂಯೋಭೂಯಸ್ತ ತಂದ್ರಿತಃ ।
ತೇ ಚಾಸ್ಯ ತಮಭಿಪ್ರಾಯಂ ನ ಚಕ್ರುರಮಿತೌಜಸಃ ॥೪೩॥

ಮತ್ತೆಮತ್ತೆ ಆಲಸ್ಯವಿಲ್ಲದೆ ಅವನು ಋತ್ವಿಜರನ್ನು ಒಪ್ಪಿಸಲು ಪ್ರಯತ್ನ ಪಟ್ಟನು. ಆದರೆ, ಅಮಿತಶಕ್ತಿಯುಳ್ಳ ಋತ್ವಿಜರು ಅವನ ಅಭಿಪ್ರಾಯದಂತೆ ನಡೆಯಲು ಒಪ್ಪಲಿಲ್ಲ.

ಸ ಚಾಶ್ರಮಸ್ಥಾನ್ ರಾಜರ್ಷಿಸ್ತಾನುವಾಚ ರುಷಾऽನ್ವಿತಃ ।
ಯದ್ಯಹಂ ಪತಿತೋ ವಿಪ್ರಾಃ ಶುಶ್ರೂಷಾಯಾಂ ನ ಚ ಸ್ಥಿತಃ ॥೪೪॥

ಆಶು ತ್ಯಾಜ್ಯೋऽಸ್ಮಿ ಯುಷ್ಮಾಭಿರ್ಬ್ರಾಹ್ಮಣೈಶ್ಚ ಜುಗುಪ್ಸಿತಃ ।
ತನ್ನಾರ್ಹತ ಕ್ರತುಶ್ರದ್ಧಾಂ ವ್ಯಾಘಾತಯಿತುಮುತ್ತಮಾಮ್ ॥೪೫॥

ರಾಜರ್ಷಿಯಾದ ಅವನು ಸಿಟ್ಟಿನಿಂದ ಕೂಡಿದವನಾಗಿ ಆಶ್ರಮದಲ್ಲಿದ್ದ ಋಷಿಗಳಿಗೆ ಹೀಗೆ ಹೇಳಿದನು. ಬ್ರಾಹ್ಮಣರೇ, ನಾನು ಒಂದುಪಕ್ಷ ಪತಿತನಾಗಿದ್ದರೆ ಅಥವಾ ನಿಮ್ಮ ಸೇವೆಯಲ್ಲಿ ನಿರತನಾಗಿರದಿದ್ದರೆ ನೀವು ಮತ್ತು ಉಳಿದ ಬ್ರಾಹ್ಮಣರು ಜುಗುಪ್ಸಿತನಾದ ನನ್ನನ್ನು ತಕ್ಷಣ ಪರಿತ್ಯಾಗ ಮಾಡುವುದು ಯೋಗ್ಯವಾಗಿರುತ್ತಿತ್ತು, ನಾನು ಹಾಗೆ ಮಾಡಿಲ್ಲವಾದ ಕಾರಣ ನನ್ನ ಶ್ರೇಷ್ಠವಾದ ಕ್ರತುಶ್ರದ್ಧೆಯನ್ನು ನೀವು ವಿನಾಶಗೊಳಿಸಬಾರದು.

ಸಾಂತ್ವದಾನಾದಿಭಿರ್ವಾಕ್ಯೈರ್ಭವಂತಃ ಕಾರ್ಯವತ್ತಯಾ ।
ಪ್ರಸಾದಯಿತ್ವಾ ವಕ್ಷ್ಯಾಮಿ ಯನ್ನಃ ಕಾರ್ಯಂ ದ್ವಿಜೋತ್ತಮಾಃ ॥೪೬॥

ದ್ವಿಜೋತ್ತಮರೇ, ಕಾರ್ಯಸಾಧಕನಾದ ನಾನು ಸಾಂತ್ವದಾನಗಳಿಂದ ಕೂಡಿದ ಮಾತುಗಳಿಂದ ನಿಮ್ಮನ್ನು ಸಂತೋಷಗೊಳಿಸಿ ನನಗೆ ಆಗಬೇಕಾದ ಕಾರ್ಯದ ಬಗ್ಗೆ ಹೇಳುತ್ತಿದ್ದೇನೆ.

ಅಥವಾऽಹಂ ಪರಿತ್ಯಕ್ತೋ ಭವದ್ಭಿರ್ದ್ವೇಷಕಾರಣಾತ್ ।
ಋತ್ವಿಜೋऽನ್ಯಾನ್ ಗಮಿಷ್ಯಾಮಿ ಯಾಜನಾರ್ಥಂ ದ್ವಿಜೋತ್ತಮಾಃ।
ಏತಾವದುಕ್ತ್ವಾ ವಚನಂ ವಿರರಾಮ ಸ ಪಾರ್ಥಿವಃ ॥೪೭॥

ಅಥವಾ ನೀವು ನನ್ನ ಮೇಲಿನ ದ್ವೇಷದಿಂದ ನನ್ನನ್ನು ಪರಿತ್ಯಾಗ ಮಾಡಿದರೆ, ಬ್ರಾಹ್ಮಣಶ್ರೇಷ್ಠರೇ, ನಾನು ಯಾಗವನ್ನು ಮಾಡಿಸುವ ಸಲುವಾಗಿ ಬೇರೆ ಋತ್ವಿಜರ ಬಳಿ ಹೋಗುವೆನು. ಆ ರಾಜನು ಇಷ್ಟು ಮಾತುಗಳನ್ನಾಡಿ ಸುಮ್ಮನಾದನು.

ಯದಾ ನ ಶೇಕೂ ರಾಜಾನಂ ಯಾಜನಾರ್ಥಂ ಪರಂತಪಾಃ ।
ತತಸ್ತೇ ಯಾಜಕಾಃ ಕ್ರುದ್ಧಾಸ್ತಮೂಚುರ್ನೃಪಸತ್ತಮಮ್ ॥೪೮॥

ಪರಂತಪನಾದ ಜನಮೇಜಯನೇ, ಯಾವಾಗ ಆ ಯಾಜಕರು ರಾಜನಿಗೆ ಯಾಗವನ್ನು ಮಾಡಲು ತಿರಸ್ಕರಿಸಿದರೋ ಆಗ ಅವರು ಕ್ರುದ್ಧರಾಗಿ ಆ ರಾಜನಿಗೆ ಹೇಳಿದರು.

ತವ ಕರ್ಮಾಣ್ಯಜಸ್ರಂ ವೈ ವರ್ತಂತೇ ಪಾರ್ಥಿವೋತ್ತಮ ।
ತತೋ ವಯಂ ಪರಿಶ್ರಾಂತಾಃ ಸತತಂ ಕರ್ಮವಾಹಿನಃ ॥೪೯॥

ರಾಜಶ್ರೇಷ್ಠನೇ, ನಿನ್ನ ಕರ್ಮಗಳು ಸತತವಾಗಿ ನಡೆಯುತ್ತಿವೆ. ಯಾವಾಗಲೂ ನಿನ್ನ ಕರ್ಮಗಳನ್ನು ನಡೆಸುತ್ತಿರುವ ನಾವು ಬಳಲಿದ್ದೇವೆ.

ಶ್ರಮಾದಸ್ಮಾತ್ ಪರಿಶ್ರಾಂತಾನ್ ಸ ತ್ವಂ ನಸ್ಯಕ್ತುಮರ್ಹಸಿ ।
ಬುದ್ಧಿಮೋಹಂ ಸಮಾಸ್ಥಾಯ ತ್ವರಾಸಂಭಾವಿತೋऽನಘ ।
ಗಚ್ಛ ರುದ್ರಸಕಾಶಂ ತ್ವಂ ಸ ಹಿ ತ್ವಾಂ ಯೋಜಯಿಷ್ಯತಿ ॥೫೦॥

ಆಯಾಸದಿಂದ ಬಳಲಿದ ನಮ್ಮನ್ನು ನೀನು ಪರಿತ್ಯಾಗ ಮಾಡು. ಅನಘನೇ, ನಾವು ಬುದ್ಧಿಮೋಹವನ್ನು ಹೊಂದಿ ಶೀಘ್ರವಾಗಿ ಮಾಡಿಸಿ ತಪ್ಪುಗಳನ್ನು ಮಾಡಬಹುದು. ನೀನು ರುದ್ರದೇವರ ಬಳಿಗೆ ಹೋಗು, ಅವರು ನಿನಗೆ ಸರಿಯಾದ ಪುರೋಹಿತರ ಯೋಗವನ್ನು ಒದಗಿಸುವರು.

ವೈಶಂಪಾಯನಃ

ಸಾಧಿಕ್ಷೇಪಂ ವಚಃ ಶ್ರುತ್ವಾ ಸಂಕ್ರುದ್ಧಃ ಶ್ವೇತಕಿರ್ನೃಪಃ ।
ಕೈಲಾಸಪರ್ವತಂ ಗತ್ವಾ ತಪ ಉಗ್ರಂ ಸಮಾಸ್ಥಿತಃ ॥೫೧॥

ನಿಂದಾಸಹಿತವಾದ ಮಾತುಗಳನ್ನು ಕೇಳಿ ಕೋಪಗೊಂಡ ಶ್ವೇತಕಿ ರಾಜನು ಕೈಲಾಸಪರ್ವತಕ್ಕೆ ಹೋಗಿ ಉಗ್ರವಾದ ತಪಸ್ಸನ್ನು ಮಾಡಲು ಪ್ರಾರಂಭಿಸಿದನು.

ಆರಾಧಯನ್ ಮಹಾದೇವಂ ನಿಯತಃ ಸಂಶಿತವ್ರತಃ ।
ಉಪವಾಸಪರೋ ರಾಜನ್ ದೀರ್ಘಕಾಲಮತಿಷ್ಠತ ॥೫೨॥

ರಾಜನೇ, ಮಹಾದೇವನನ್ನು ಆರಾಧಿಸುತ್ತಾ ನಿಯಮಗಳನ್ನೂ ಮತ್ತು ವ್ರತಗಳನ್ನೂ ಹಿಡಿದ ಅವನು ಉಪವಾಸಪರನಾಗಿ ದೀರ್ಘಕಾಲ ತಪಸ್ಸುಮಾಡಿದನು.

ಕದಾಚಿದ್ ದ್ವಾದಶೇ ಕಾಲೇ ಕದಾಚಿದಪಿ ಷೋಡಶೇ ।
ಆಹಾರಮಕರೋದ್ ರಾಜಾ ಮೂಲಾನಿ ಚ ಫಲಾನಿ ಚ ॥೫೩॥

ಒಮ್ಮೊಮ್ಮೆ ಆ ರಾಜನು ದಿವಸದ ಕೊನೆಯ ಹನ್ನೆರಡನೆಯ ಅಥವಾ ಹದಿನಾರನೆಯ ಒಂದು ಭಾಗದಲ್ಲಿ ಗೆಡ್ಡೆಗಳನ್ನು ಅಥವಾ ಹಣ್ಣುಗಳನ್ನು ಆಹಾರವಾಗಿ ಸ್ವೀಕರಿಸುತ್ತಿದ್ದನು.

ಊರ್ಧ್ವಬಾಹುಸ್ತ್ವನಿಮಿಷಸ್ತಿಷ್ಠನ್ ಸ್ಥಾಣುರಿವಾಚಲಃ ।
ಷಣ್ಮಾಸಾನಭವದ್ ರಾಜಾ ಶ್ವೇತಕಿಃ ಸುಸಮಾಹಿತಃ ॥೫೪॥

ಬಾಹುಗಳನ್ನು ಮೇಲಕ್ಕೆತ್ತಿ, ರೆಪ್ಪೆಗಳನ್ನು ಮುಚ್ಚದೇ ಮರದಬುಡದಂತೆ ಅಚಲನಾಗಿ ನಿಂತು ಶ್ವೇತಕಿ ರಾಜನು ಮನಸ್ಸಮಾಧಾನದಿಂದ ಕೂಡಿ ತಪಸ್ಸನ್ನು ಮಾಡುತ್ತಾ ಆರು ತಿಂಗಳುಗಳನ್ನು ಕಳೆದನು.

ತಂ ತಥಾ ನೃಪಶಾರ್ದೂಲಂ ತಪ್ಯಮಾನಂ ಮಹತ್ತಪಃ ।
ಶಂಕರಃ ಪರಮಪ್ರೀತ್ಯಾ ದರ್ಶಯಾಮಾಸ ಭಾರತ ॥೫೫॥

ಭಾರತನೇ, ಅವನ ತಪಸ್ಸಿಗೆ ಮೆಚ್ಚಿದ ಶಂಕರನು ಪರಮಪ್ರೀತನಾಗಿ ಆ ನೃಪಶಾರ್ದೂಲನಿಗೆ ತನ್ನ ದರ್ಶನವನ್ನು ನೀಡಿದನು.

ಉವಾಚ ಚೈನಂ ಭಗವಾನ್ ಸ್ನಿಗ್ಧಗಂಭೀರಯಾ ಗಿರಾ ।
ಪ್ರೀತೋಽಸ್ಮಿ ನರಶಾರ್ದೂಲ ತಪಸಾ ತೇ ಪರಂತಪ ।
ವರಂ ವೃಣೀಷ್ವ ಭದ್ರಂ ತೇ ಯಂ ತ್ವಮಿಚ್ಛಸಿ ಪಾರ್ಥಿವ ॥೫೬॥

ಮತ್ತು ಅವನನ್ನು ಕುರಿತು ಸ್ನಿಗ್ಧಗಂಭೀರವಾಣಿಯಿಂದ ಹೇಳಿದನು. ಪರಂತಪನಾದ ನರಶಾರ್ದೂಲನೇ, ನಾನು ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ನಿನಗೆ,ಬೇಕಾದ ವರವನ್ನು ಕೇಳು. ರಾಜನೇ ನಿನಗೆ ಮಂಗಳವಾಗಲಿ.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ರುದ್ರಸ್ಯಾಮಿತತೇಜಸಃ ।
ಪ್ರಣಿಪತ್ಯ ಮಹಾತ್ಮಾನಂ ರಾಜರ್ಷಿಃ ಪ್ರತ್ಯಭಾಷತ ॥೫೭॥

ಅಮಿತತೇಜಸ್ವಿಗಳಾದ ರುದ್ರದೇವರ ಈ ಮಾತುಗಳನ್ನು ಕೇಳಿ ರಾಜರ್ಷಿಯಾದ ಅವನು ಮಹಾನುಭಾವರಾದ ಅವರಿಗೆ ನಮಸ್ಕರಿಸಿ ಮಾತನಾಡಿದನು.

ಯದಿ ಮೇ ಭಗವನ್ ಪ್ರೀತಃ ಸರ್ವಲೋಕನಮಸ್ಕೃತಃ ।
ಸ್ವಯಂ ಮಾಂ ದೇವದೇವೇಶ ಯಾಜಯಸ್ವ ಸುರೇಶ್ವರ ॥೫೮॥

ದೇವದೇವೇಶನೇ, ಸುರೇಶ್ವರನೇ, ಪೂಜ್ಯನೇ, ಸರ್ವಲೋಕ ನಮಸ್ಕೃತ್ಯನಾದ ನೀನು ನನಗೆ ಸಂತುಷ್ಟನಾಗಿದ್ದರೆ ನೀನೇ ನನ್ನಿಂದ ಯಾಗವನ್ನು ಮಾಡಿಸು.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ರಾಜ್ಞಾ ತೇನ ಪ್ರಭಾಷಿತಮ್ ।
ಉವಾಚ ಭಗವಾನ್ ಪ್ರೀತಃ ಸ್ಮಿತಪೂರ್ವಮಿದಂ ವಚಃ ॥೫೯॥

ರಾಜನು ಆಡಿದ ಈ ಮಾತುಗಳನ್ನು ಕೇಳಿ ಪೂಜ್ಯರಾದ ರುದ್ರದೇವರು ನಗುತ್ತಾ ಸಂತೋಷದಿಂದ ಈ ಮಾತನ್ನಾಡಿದರು.

ನಾಸ್ಮಾಕಮೇತದ್ವಿಷಯೋ ವರ್ತತೇ ಯಾಜನಂ ಪ್ರತಿ ।
ತ್ವಯಾ ಚ ಸುಮಹತ್ ತಪ್ತಂ ತಪೋ ರಾಜನ್ ವರಾರ್ಥಿನಾ ॥೬೦॥

ಯಾಗವನ್ನು ಮಾಡಿಸುವ ವಿಷಯವು ನಮಗೆ ಸೇರಿದುದಲ್ಲ. ರಾಜನೇ, ನೀನಾದರೂ ವರವನ್ನು ಉದ್ದೇಶಿಸಿ ದೊಡ್ಡ ತಪಸ್ಸನ್ನು ಆಚರಿಸಿದ್ದೀಯೆ.

ಯಾಜಯಿಷ್ಯಾಮಿ ರಾಜಂಸ್ತ್ವಾಂ ಸಮಯೇನ ಪರಂತಪ ।
ಸಮಾ ದ್ವಾದಶ ರಾಜೇಂದ್ರ ಬ್ರಹ್ಮಚಾರೀ ಸಮಾಹಿತಃ ॥೬೧॥

ಸತತಂ ತ್ವಾಜ್ಯಧಾರಾಭಿರ್ಯದಿ ತರ್ಪಯಸೇಽನಲಮ್ ।
ಕಾಮಂ ಪ್ರಾರ್ಥಯಸೇ ಯಂ ತ್ವಂ ಮತ್ತಃ ಪ್ರಾಪ್ಸ್ಯಸಿ ತಂ ನೃಪ ॥೬೨॥

ಪರಂತಪನಾದ ರಾಜನೇ, ಈ ಷರತ್ತಿನಮೇಲೆ ನಿನಗೆ ಯಾಗವನ್ನು ಮಾಡಿಸುತ್ತೇನೆ. ರಾಜೇಂದ್ರನೇ, ನೀನು ಬ್ರಹ್ಮಚಾರಿಯಾಗಿ ಇದ್ದು ಸಮಾಧಾನದಿಂದ ಕೂಡಿ ಸತತವಾಗಿ ಹನ್ನೆರಡುವರ್ಷಗಳ ಕಾಲ ಆಜ್ಯಧಾರೆಗಳಿಂದ ಅಗ್ನಿಯನ್ನು ಸಂತೋಷಗೊಳಿಸಿದರೆ ನೀನು ಕೇಳಿದ ವರವನ್ನು ನಾನು ನಿನಗೆ ಕೊಡುವೆನು.

ವೈಶಂಪಾಯನಃ

ಏವಮುಕ್ತಸ್ತು ರುದ್ರೇಣ ಶ್ವೇತಕಿರ್ಮನುಜಾಧಿಪಃ ।
ತಥಾ ಚಕಾರ ತತ್ ಸರ್ವಂ ಯಥೋಕ್ತಂ ಶೂಲಪಾಣಿನಾ ॥೬೩॥

ರುದ್ರದೇವರಿಂದ ಹೀಗೆ ಹೇಳಲ್ಪಟ್ಟ ರಾಜನಾದ ಶ್ವೇತಕಿಯು ಶೂಲಪಾಣಿಗಳಾದ ಅವರು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ಪೂರ್ಣೇ ತು ದ್ವಾದಶೇ ವರ್ಷೇ ಪುನರಾಯಾನ್ಮಹೇಶ್ವರಮ್ ।
ದೃಷ್ಟ್ವೈವ ಸ ಚ ರಾಜಾನಂ ಶಂಕರೋ ಲೋಕಭಾವನಃ ।
ಉವಾಚ ಪರಮಪ್ರೀತಃ ಶ್ವೇತಕಂ ನೃಪಸತ್ತಮಮ್ ॥೬೪॥

ಹನ್ನೆರಡು ವರ್ಷಗಳು ತುಂಬಿದಮೇಲೆ ಪುನಃ ರುದ್ರದೇವರ ಬಳಿಗೆ ಹೋದನು. ಆ ರಾಜನನ್ನು ನೋಡಿದ ಕೂಡಲೇ ಸಂತೋಷಗೊಂಡ ಲೋಕಭಾವನರಾದ ರುದ್ರ ದೇವರು ಶ್ವೇತಕಿಯನ್ನು ಕುರಿತು ಹೇಳಿದರು.

ತೋಷಿತೋಽಹಂ ನೃಪಶ್ರೇಷ್ಠ ತ್ವಯೇಹಾದ್ಯೇನ ಕರ್ಮಣಾ ।
ಯಾಜನಂ ಬ್ರಾಹ್ಮಣಾನಾಂ ತು ವಿಧಿದೃಷ್ಟಂ ಪರಂತಪ ।
ಅತೋಽಹಂ ತ್ವಾಂ ಸ್ವಯಂ ನಾದ್ಯ ಯಾಜಯಾಮಿ ಪರಂತಪ ॥೬೫॥

ನೃಪಶ್ರೇಷ್ಠನೇ, ಶ್ರೇಷ್ಠವಾದ ಕರ್ಮದಿಂದ ನೀನು ನನ್ನನ್ನು ಸಂತೋಷಪಡಿಸಿದ್ದೀಯೆ, ಪರಂತಪನೇ ಯಾಗವನ್ನು ಮಾಡಿಸುವುದು ಬ್ರಾಹ್ಮಣರಿಗೆ ವಿಹಿತವಾದದ್ದು. ಪರಂತಪನೇ, ಆದ್ದರಿಂದ ನಾನು ಸ್ವತಃ ನಿನಗೆ ಯಾಗವನ್ನು ಮಾಡಿಸುವುದಿಲ್ಲ.

ಮಮಾಂಶಸ್ತು ಕ್ಷಿತಿತಳೇ ಮಹಾಭಾಗೋ ದ್ವಿಜೋತ್ತಮಃ ।
ದುರ್ವಾಸಾ ಇತಿ ವಿಖ್ಯಾತಃ ಸ ಹಿ ತ್ವಾಂ ಯಾಜಯಿಷ್ಯತಿ ।
ಮನ್ನಿಯೋಗಾನ್ಮಹಾತೇಜಾಃ ಸಂಭಾರಾಃ ಸಂಭ್ರಿಯಂತು ತೇ ॥೬೬॥

ಭೂಮಿಯಲ್ಲಿ ನನ್ನ ಅಂಶವೇ ಆದ ಮಹಾನುಭಾವರಾದ ಬ್ರಾಹ್ಮಣಶ್ರೇಷ್ಠರಾದ ದುರ್ವಾಸ ಎಂದು ಪ್ರಖ್ಯಾತರಾದ ಋಷಿಗಳಿದ್ದಾರೆ. ಮಹಾತೇಜಸ್ವಿಗಳಾದ ಅವರು ನನ್ನ ಶಾಸನದಂತೆ ನಿನಗೆ ಯಾಗವನ್ನು ಮಾಡಿಸುವರು. ನೀನು ಯಾಗಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸು.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ರುದ್ರೇಣ ಸಮುದಾಹೃತಮ್ ।
ಸ್ವಪುರಂ ಪುನರಾಗಮ್ಯ ಸಂಭಾರಾನ್ ಪುನರಾರ್ಜಯತ್ ॥೬೭॥

ರುದ್ರದೇವರು ಹೇಳಿದ ಈ ಮಾತುಗಳನ್ನು ಕೇಳಿ ಶ್ವೇತಕಿಯು ಪುನಃ ತನ್ನ ಪಟ್ಟಣಕ್ಕೆ ಬಂದು ಯಜ್ಞಸಾಮಗ್ರಿಗಳನ್ನು ಪುನಃ ಸಿದ್ಧಪಡಿಸಿದನು.

ತತಃ ಸಂಭೃತಸಂಭಾರೋ ಭೂಯೋ ರುದ್ರಮುಪಾಗಮತ್ ।
ಸಂಭೃತಾ ಮಮ ಸಂಭಾರಾಃ ಸರ್ವೋಪಕರಣಾನಿ ಚ ।
ತತ್ತಪ್ರಸಾದಾನ್ಮಹಾದೇವ ಶ್ವೋ ಮೇ ದೀಕ್ಷಾ ಭವೇದಿತಿ ॥೬೮॥

ಅನಂತರ, ಯಜ್ಞಸಾಮಗ್ರಿಗಳನ್ನು ಅಣಿಗೊಳಿಸಿ ಪುನಃ ರುದ್ರದೇವರ ಬಳಿಗೆ ಹೋಗಿ ಮಹಾದೇವನೇ, ನಿನ್ನ ಅನುಗ್ರಹದಿಂದ ಎಲ್ಲಾ ಸಾಮಗ್ರಿಗಳೂ ಮತ್ತು ಉಪಕರಣಗಳೂ ಸಿದ್ಧವಾಗಿವೆ. ನಾಳೆಯ ದಿನ ನನಗೆ ದೀಕ್ಷೆಯಾಗಬೇಕು ಎಂದು ಹೇಳಿದನು.

ಏತಚ್ಛ್ರುತ್ವಾ ತು ವಚನಂ ತಸ್ಯ ರಾಜ್ಞೋ ಮಹಾತ್ಮನಃ ।
ದುರ್ವಾಸಸಂ ಸಮಾಹೂಯ ರುದ್ರೋ ವಚನಮಬ್ರವೀತ್ ॥೬೯॥

ಏಷ ರಾಜಾ ಮಹಾಭಾಗಃ ಶ್ವೇತಕಿರ್ದ್ವಿಜಸತ್ತಮ ।
ಏನಂ ಯಾಜಯ ವಿಪ್ರೇಂದ್ರ ಮನ್ನಿಯೋಗೇನ ಭೂಮಿಪಮ್ ॥೭೦॥

ಮಹಾನುಭಾವನಾದ ರಾಜನ ಈ ಮಾತುಗಳನ್ನು ಕೇಳಿ ರುದ್ರದೇವರು ದುರ್ವಾಸರನ್ನು ಕರೆದು ಹೀಗೆ ಮಾತನಾಡಿದರು. ಬ್ರಾಹ್ಮಣಶ್ರೇಷ್ಠರೇ, ಇವನು ಮಹಾನುಭಾವನಾದ ಶ್ವೇತಕಿ ಎಂಬ ರಾಜ. ವಿಪ್ರೇಂದ್ರರೇ, ನನ್ನ ಆದೇಶದಂತೆ ಇವನಿಗೆ ಯಾಗವನ್ನು ಮಾಡಿಸಿ.

ವೈಶಂಪಾಯನಃ

ಬಾಢಮಿತ್ಯೇವ ವಚನಂ ರುದ್ರಂ ತ್ವೃಷಿರುವಾಚ ಹ ।
ತತಃ ಸತ್ರಂ ಸಮಭವತ್ ತಸ್ಯ ರಾಜ್ಞೋ ಮಹಾತ್ಮನಃ ।
ಯಥಾಕಾಮಂ ಯಥೋಕ್ತಂ ಚ ಸತ್ರಂ ಸುಬಹುದಕ್ಷಿಣಮ್ ॥೭೧॥

ರುದ್ರದೇವರನ್ನು ಕುರಿತು ದುರ್ವಾಸರು ಹಾಗೆಯೇ ಆಗಲಿ ಎಂದು ಹೇಳಿದರು. ಅನಂತರ, ಮಹಾನುಭಾವನಾದ ರಾಜನ ಸತ್ರಯಾಗವು ಉದ್ದೇಶದಂತೆ ಶಾಸ್ತ್ರೋಕ್ತ ರೀತಿಯಲ್ಲಿ ಬಹುದಕ್ಷಿಣೆಯಿಂದ ಕೂಡಿದುದಾಗಿ ಜರುಗಿತು.

ತಸ್ಮಿನ್ ಪರಿಸಮಾಪ್ತೇ ತು ರಾಜ್ಞಃ ಸತ್ರೇ ಮಹಾತ್ಮನಃ ।
ದುರ್ವಾಸಸಾऽಭ್ಯನುಜ್ಞಾತಾ ವಿಪ್ರತಸ್ಥುಃ ಸ್ಮ ಯಾಜಕಾಃ ।
ಯೇ ತತ್ರ ದೀಕ್ಷಿತಾಃ ಸರ್ವೇ ಸದಸ್ಯಾಶ್ಚ ಮಹೌಜಸಃ ॥೭೨॥

ಮಹಾತ್ಮನಾದ ರಾಜನ ಸತ್ರಯಾಗವು ಸಮಾಪ್ತಿಗೊಳ್ಳುತ್ತಿರಲು ಎಲ್ಲಾ ಯಾಜಕರು ದುರ್ವಾಸರ ಅನುಮತಿಯನ್ನು ಪಡೆದು ಹೊರಟುಹೋದರು. ಅಲ್ಲಿ ದೀಕ್ಷಿತರಾದ ಮಹಾಶಕ್ತಿಯುಳ್ಳ ಯಾಜಕರ ಜೊತೆಯಲ್ಲಿ ಎಲ್ಲಾ ಸದಸ್ಯರೂ ಹೊರಟುಹೋದರು.

ಸೋऽಪಿ ರಾಜಾ ಮಹಾಭಾಗಃ ಸ್ವಪುರಂ ಪ್ರಾವಿಶತ್ ತದಾ ।
ತತೋ ಭಗವತೋ ವಹ್ನೇರ್ವಿಕಾರಃ ಸಮಜಾಯತ ।
ತೇಜಸಾ ವಿಪ್ರಹೀಣಶ್ಚ ಗ್ಲಾನಿಶ್ಚೈನಂ ಸಮಾವಿಶತ್ ॥೭೩॥

ಅನಂತರ ರಾಜನು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ಆಗ ಅಗ್ನಿದೇವನಿಗೆ ಉದರದಲ್ಲಿ ವಿಕಾರವುಂಟಾಯಿತು. ತೇಜಸ್ಸನ್ನು ಕಳೆದುಕೊಂಡ ಅವನನ್ನು ಗ್ಲಾನಿಯು ಆವರಿಸಿತು.

ಸ ಲಕ್ಷಯಿತ್ವಾ ಚಾತ್ಮಾನಂ ತೇಜೋಹೀನಂ ಹುತಾಶನಃ ।
ಜಗಾಮ ಸದನಂ ಪುಣ್ಯಂ ಬ್ರಹ್ಮಣೋ ಲೋಕಪೂಜಿತಮ್ ॥೭೪॥

ಅಗ್ನಿಯು ತಾನು ತೇಜೋಹೀನನಾಗಿರುವುದನ್ನು ಗಮನಿಸಿ ಲೋಕಪೂಜಿತವಾದ, ಪವಿತ್ರವಾದ ಬ್ರಹ್ಮಸದನಕ್ಕೆ ಹೋದನು.

ತತ್ರ ಬ್ರಹ್ಮಾಣಮಾಸೀನಮಿದಂ ವಚನಮಬ್ರವೀತ್ ।
ತೇಜಸಾ ವಿಪ್ರಹೀಣೋಽಸ್ಮಿ ಬಲೇನ ಚ ಜಗತ್ಪತೇ ।
ಇಚ್ಛೇಯಂ ತ್ವತ್ಪ್ರಸಾದೇನ ಆತ್ಮನಃ ಪ್ರಕೃತಿಂ ಸ್ಥಿರಾಮ್ ॥೭೫॥

ಅಲ್ಲಿ ಕುಳಿತಿದ್ದ ಬ್ರಹ್ಮದೇವನ್ನು ನೋಡಿ ಅಗ್ನಿಯು ಹೇಳಿದನು. ಜಗತ್ಪತಿಯೇ, ನಾನು ತೇಜಸ್ಸನ್ನೂ ಮತ್ತು ಬಲವನ್ನೂ ಕಳೆದುಕೊಂಡಿದ್ದೇನೆ. ನಿನ್ನ ಅನುಗ್ರಹದಿಂದ ಮೊದಲಿನ ತೇಜಸ್ಸು ಮತ್ತು ಬಲವನ್ನೂ ಸ್ಥಿರವಾಗಿ ಪಡೆಯಲು ಬಯಸುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ಭಗವಾಂತ್ಸರ್ವಲೋಕಕೃತ್ ।
ಹವ್ಯವಾಹಮಿದಂ ವಾಕ್ಯಮುವಾಚ ಪ್ರಹಸನ್ನಿವ ॥೭೬॥

ಈ ಮಾತುಗಳನ್ನು ಕೇಳಿ ಸರ್ವಲೋಕಕರ್ತರಾದ ಪೂಜ್ಯರಾದ ಬ್ರಹ್ಮದೇವರು ಅಗ್ನಿಯನ್ನು ಕುರಿತು ನಗುತ್ತಾ ಈ ಮಾತುಗಳನ್ನಾಡಿದರು.

ತ್ವಯಾ ದ್ವಾದಶವರ್ಷಾಣಿ ವಸೋರ್ಧಾರಾಹೃತಂ ಹವಿಃ ।
ಉಪಯುಕ್ತಂ ಮಹಾಭಾಗ ತೇನ ತ್ವಾಂ ಗ್ಲಾನಿರಾವಿಶತ್ ॥೭೭॥

ಮಹಾನುಭಾವನೇ, ನೀನು ಹನ್ನೆರಡುವರ್ಷಗಳ ಕಾಲ ಸತತವಾಗಿ ವಸುವಿನಿಂದ ಧಾರಾರೂಪದಿಂದ ಕೊಡಲ್ಪಟ್ಟ ಹವಿಸ್ಸನ್ನು ಭುಂಜಿಸಿದ್ದೀಯೆ, ಆದ್ದರಿಂದ ನಿನಗೆ ಗ್ಲಾನಿಯು ಉಂಟಾಗಿದೆ.

ತೇಜಸಾ ವಿಪ್ರಹೀಣಸ್ತ್ವಂ ಸಹಸಾ ಹವ್ಯವಾಹನ ।
ಮಾ ಗಮಸ್ತ್ವಂ ವ್ಯಥಾಂ ವಹ್ನೇ ಪ್ರಕೃತಿಸ್ಥೋ ಭವಿಷ್ಯಸಿ ।
ಅರುಚಿಂ ನಾಶಯಿಷ್ಯೇ ತೇ ಸಮಯಂ ಪ್ರತಿಪದ್ಯ ತು ॥೭೮॥

ಹವ್ಯವಾಹನನೇ, ನೀನು ತೇಜಸ್ಸಿನಿಂಲೂ ಮತ್ತು ಬಲದಿಂದಲೂ ಹೀನನಾಗಿದ್ದೀಯೆ, ವಹ್ನಿಯೇ, ಆದರೆ ವ್ಯಥೆಪಡಬೇಡ, ನೀನು ಮೊದಲಿನ ಸ್ವಭಾವವನ್ನು ಹೊಂದುವಿ. ನಾನು ಸೂಕ್ತವಾದ ಸಮಯದಲ್ಲಿ ನಿನಗೆ ಉದರವಿಕಾರದಿಂದ ಉಂಟಾಗಿರುವ ಅರುಚಿಯನ್ನು ಪರಿಹರಿಸುವೆನು.

ಪುರಾ ದೇವನಿಯೋಗೇನ ನ ತ್ವಯಾ ಭಸ್ಮಸಾತ್ಕೃತಮ್ ।
ಆಲಯಂ ದೇವಶತ್ರೂಣಾಂ ಸುಘೋರಃ ಖಾಂಡವಂ ವನಮ್ ॥೭೯॥

ನೀನು ಹಿಂದೆ ದೇವತೆಗಳ ಆಜ್ಞೆಯಂತೆ ಎಲ್ಲ ರಾಕ್ಷಸರಿಗೆ ಆಶ್ರಯವಾದ ಘೋರವಾದ ಖಾಂಡವವನವನ್ನು ದಹಿಸಲಿಲ್ಲ.

ತತ್ರ ಸರ್ವಾಣಿ ಸತ್ತ್ವಾನಿ ನಿವಸಂತಿ ವಿಭಾವಸೋ ।
ತೇಷಾಂ ತ್ವಂ ಮೇದಸಾ ತೃಪ್ತಃ ಪ್ರಕೃತಿಸ್ಥೋ ಭವಿಷ್ಯಸಿ ॥೮೦॥

ಮತ್ಪ್ರಸಾದಾಚ್ಛವಿಃ ಸಮ್ಯಕ್ ತ್ವಯಿ ವಹ್ನೇ ಭವಿಷ್ಯತಿ ।
ಗಚ್ಛ ಶೀಘ್ರಂ ವನಂ ದಗ್ಧುಂ ತತ್ರ ಮೋಕ್ಷ್ಯಸಿ ಕಿಲ್ಬಿಷಾತ್ ॥೮೧॥

ಅಗ್ನಿಯೇ, ಅಲ್ಲಿ ಎಲ್ಲ ಪ್ರಾಣಿಗಳೂ ವಾಸಮಾಡುತ್ತಿವೆ. ನೀನು ಆ ಪ್ರಾಣಿಗಳ ಮೇದಸ್ಸನ್ನು ಭುಂಜಿಸಿ ತೃಪ್ತನಾಗು. ಮೊದಲಿನ ತೇಜಸ್ಸು ಮತ್ತು ಬಲಗಳನ್ನು ಹೊಂದುವಿ. ಅಗ್ನಿಯೇ, ನನ್ನ ಅನುಗ್ರಹದಿಂದ ನಿನಗೆ ಒಳ್ಳೆಯ ಕಾಂತಿಯುಂಟಾಗುವುದು. ಖಾಂಡವವನವನ್ನು ದಹಿಸಲು ನೀನು ಬೇಗ ಹೋಗು. ಅಲ್ಲಿ ನೀನು ಪಾತಕದಿಂದ ಮುಕ್ತನಾಗುವಿ.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ಪರಮೇಷ್ಠಿಮುಖಾಚ್ಚ್ಯುತಮ್ ।
ಉತ್ತಮಂ ಜವಮಾಸ್ಥಾಯ ಪ್ರದುದ್ರಾವ ಹುತಾಶನಃ ॥೮೨॥

ಬ್ರಹ್ಮದೇವರ ಮುಖದಿಂದ ಹೊರಹೊರಟ ಈ ಮಾತುಗಳನ್ನು ಕೇಳಿದ ಅಗ್ನಿಯು ಉತ್ತಮವಾದ ವೇಗವನ್ನು ಹೊಂದಿ ಅಲ್ಲಿಂದ ಓಡಿದನು.

ಆಗಮ್ಯ ಖಾಂಡವಂ ದಾವಮುತ್ತಮಂ ಜವಮಾಸ್ಥಿತಃ ।
ಸಹಸಾ ಪ್ರಜ್ವಲತ್ಯಗ್ನಿಃ ಕ್ರುದ್ಧೋ ವಾಯುಸಮೀರಿತಃ ॥೮೩॥

ಉತ್ತಮ ಜವವನ್ನು ಹೊಂದಿ ಖಾಂಡವವನವನ್ನು ತಲುಪಿ ತಕ್ಷಣದಲ್ಲಿಯೇ ಅಗ್ನಿಯು ವಾಯುವಿನಿಂದ ಸಹಕೃತನಾಗಿ, ಕ್ರುದ್ಧನಾಗಿ ಜ್ವಲಿಸಲು ಆರಂಭಿಸಿದನು.

ಪ್ರದೀಪ್ತಂ ಖಾಂಡವಂ ದೃಷ್ಟ್ವಾ ಯೇ ಸ್ಯುಸ್ತತ್ರ ನಿವಾಸಿನಃ ।
ಪರಮಂ ಯತ್ನಮಾತಿಷ್ಠನ್ ಪಾವಕಸ್ಯ ಪ್ರಶಾಂತಯೇ ॥೮೪॥

ಜ್ವಲಿಸುತ್ತಿರುವ ಅಗ್ನಿಯನ್ನು ನೋಡಿ ಖಾಂಡವವನ ನಿವಾಸಿಗಳು ಅಗ್ನಿಯನ್ನು ನಿವಾರಿಸಲು ಬಹಳ ಪ್ರಯತ್ನವನ್ನು ಪಟ್ಟರು.

ಕರೈಸ್ತು ಕರಿಣಃ ಶೀಘ್ರಂ ಜಲಮಾದಾಯ ಸತ್ವರಾಃ ।
ಸಿಷಿಚುಃ ಪಾವಕಂ ಕ್ರುದ್ಧಾಃ ಶತಶೋಽಥ ಸಹಸ್ರಶಃ ॥೮೫॥

ಆನೆಗಳು, ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ತಮ್ಮ ಸೊಂಡಿಲುಗಳಿಂದ ನೀರನ್ನು ತಂದು ಶೀಘ್ರವಾಗಿ ಅಗ್ನಿಯ ಮೇಲೆ ಸಿಂಪಡಿಸಿದವು.

ಬಹುಶೀರ್ಷಾಸ್ತಥಾ ನಾಗಾಃ ಶಿರೋಭಿರ್ಜಲಸಂತತಿಮ್ ।
ಮುಮುಚುಃ ಪಾವಕಾಭ್ಯಾಶೇ ಸತ್ವರಾಃ ಕ್ರೋಧಮೂರ್ಚ್ಛಿತಾಃ ॥೮೬॥

ಕ್ರೋಧಗೊಂಡ ಅನೇಕ ತಲೆಗಳುಳ್ಳ ಸರ್ಪಗಳು ಶೀಘ್ರವಾಗಿ ಅಗ್ನಿಯ ಸಮೀಪದಲ್ಲಿ ತಮ್ಮ ಮುಖಗಳಿಂದ ಜಲಸಂತತಿಯನ್ನು ಸೃಷ್ಟಿಸಿದವು.

ತಥೈವಾನ್ಯಾನಿ ಸತ್ವಾನಿ ನಾನಾಪ್ರಹರಣೋದ್ಯಮೈಃ ।
ವಿಲಯಂ ಪಾವಕಂ ಶೀಘ್ರಮನಯನ್ ಭರತರ್ಷಭ ॥೮೭॥

ಭರತಶ್ರೇಷ್ಠನೇ, ಹಾಗೆಯೇ ಉಳಿದ ಪ್ರಾಣಿಗಳು ತಮ್ಮ ಪ್ರಯತ್ನಗಳಿಂದ ಮತ್ತು ಸಲಕರಣೆಗಳಿಂದ ಶೀಘ್ರವಾಗಿ ಅಗ್ನಿಯನ್ನು ನಾಶಮಾಡಿದವು.

ಅನೇನ ತು ಪ್ರಕಾರೇಣ ಭೂಯೋ ಭೂಯಶ್ಚ ಪ್ರಜ್ವಲನ್ ।
ಸಪ್ತಜಿಹ್ವಃ ಪ್ರಶಮಿತಃ ಖಾಂಡವೇ ಹವ್ಯವಾಹನಃ ॥೮೮॥

ಮತ್ತೆಮತ್ತೆ ಪ್ರಜ್ವಲಿಸುವ ಸಪ್ತಜಿಹ್ವನಾದ ಅಗ್ನಿಯು ಈ ರೀತಿಯಿಂದ ಖಾಂಡವ ವನದಲ್ಲಿ ನಾಶಮಾಡಲ್ಪಟ್ಟನು.

ಸ ತು ನೈರಾಶ್ಯಮಾಪನ್ನಃ ಸದಾ ಗ್ಲಾನಿಸಮನ್ವಿತಃ ।
ಪಿತಾಮಹಮುಪಾಗಚ್ಛತ್ ಸಂಕ್ರುದ್ಧೋ ಹವ್ಯವಾಹನಃ ॥೮೯॥

ಕ್ರುದ್ಧನಾದ ಹವ್ಯವಾಹನನು ನಿರಾಶೆಯಿಂದಲೂ, ಸತತವಾದ ಗ್ಲಾನಿಯಿಂದಲೂ ಕೂಡಿದವನಾಗಿ ಬ್ರಹ್ಮದೇವನ ಬಳಿಗೆ ಹೋದನು.

ತಚ್ಚ ಸರ್ವಂ ಯಥಾನ್ಯಾಯಂ ಬ್ರಹ್ಮಣೇ ಸ ನ್ಯವೇದಯತ್ ।
ಉವಾಚ ಚೈನಂ ಭಗವಾನ್ ಮುಹೂರ್ತಂ ಸ ವಿಚಿಂತ್ಯ ತು ॥೯೦॥

ನಡೆದುದೆಲ್ಲವನ್ನೂ ಬ್ರಹ್ಮದೇವರಿಗೆ ಕ್ರಮಪ್ರಕಾರವಾಗಿ ತಿಳಿಸಿದನು. ಬ್ರಹ್ಮದೇವರು ಒಂದು ಮುಹೂರ್ತಕಾಲ ಆಲೋಚಿಸಿ ಅಗ್ನಿಯನ್ನು ಕುರಿತುಹೇಳಿದರು.

ಉಪಾಯಃ ಪರಿದೃಷ್ಟೋ ಮೇ ಯಥಾ ತ್ವಂ ಧಕ್ಷ್ಯಸೇಽನಘ ।
ಕಾಲಂ ಚ ಕಂಚಿತ್ ಕ್ಷಮತಾಂ ತತಸ್ತಂ ಧಕ್ಷ್ಯತೇ ಭವಾನ್ ॥೯೧॥

ಅನಘನೇ, ನೀನು ಖಾಂಡವವನವನ್ನು ಸುಡಲು ನಾನು ಉಪಾಯವನ್ನು ಯೋಚಿಸಿದ್ದೇನೆ. ಸ್ವಲ್ಪಕಾಲ ಸುಮ್ಮನಿರು. ಅನಂತರ ನೀನು ಖಾಂಡವವನ್ನು ದಹಿಸುವಿ.

ಭವಿಷ್ಯತಃ ಸಹಾಯೌ ತೌ ನರನಾರಾಯಣಾವೃಷೀ ।
ತಾಭ್ಯಾಂ ತ್ವಂ ರಕ್ಷಿತೋ ದಾವಂ ಧಕ್ಷ್ಯಸೇ ಹವ್ಯವಾಹನ ॥೯೨॥

ಮುಂದೆ ನಿನಗೆ ನರನಾರಾಯಣಋಷಿಗಳು ಸಹಾಯಕರಾಗುತ್ತಾರೆ. ಅಗ್ನಿಯೇ, ಅವರಿಂದ ರಕ್ಷಿತನಾಗಿ ನೀನು ಖಾಂಡವವನವನ್ನು ದಹಿಸುವಿ.

ವೈಶಂಪಾಯನಃ

ಏವಮಸ್ತ್ವಿ ತಿ ತಂ ವಹ್ನಿರ್ಬ್ರಹ್ಮಾಣಂ ಸಮಭಾಷತ ।
ಕಾಲಸ್ಯ ಸಹನೋ ರಾಜನ್ ತಸ್ಯ ವಾಕ್ಯಂ ಸ್ವಯಂಭುವಃ ।
ಅನುಸ್ಮೃತ್ಯ ಜಗಾಮಾಥ ಪುನರೇವ ಪಿತಾಮಹಮ್ ॥೯೩॥

ಅಗ್ನಿಯು ಬ್ರಹ್ಮದೇವರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು. ರಾಜನೇ, ಬ್ರಹ್ಮದೇವರ ಮಾತನ್ನು ಅನುಸರಿಸಿ ಕಾಲವನ್ನು ಕಳೆಯುತ್ತಾ ಪುನಃ ಬ್ರಹ್ಮ ದೇವರ ಬಳಿಗೆ ಹೋದನು.

ಅಬ್ರವೀಚ್ಚ ತದಾ ಬ್ರಹ್ಮ ಯಥಾ ತ್ವಂ ಧಕ್ಷ್ಯಸೇಽನಲ ।
ಖಾಂಡವಂ ದಾವಮದ್ಯೈವ ಮಿಷತೋಽಸ್ಯ ಶಚೀಪತೇಃ ॥೯೪॥

ಆಗ ಬ್ರಹ್ಮದೇವರು ಹೇಳಿದರು - ಅಗ್ನಿಯೇ, ನೀನು ಈ ದಿನವೇ ಶಚಿಪತಿಯಾದ ಇಂದ್ರನು ನೋಡುತ್ತಿರುವಂತೆಯೇ ಖಾಂಡವವನವನ್ನು ದಹಿಸುವಿ.

ನರನಾರಾಯಣೌ ಯೌ ತೌ ಪೂರ್ವದೇವೌ ವಿಭಾವಸೋ ।
ಸಂಪ್ರಾಪ್ತೌ ಮಾನುಷಂ ದೇಹಂ ಕಾರ್ಯಾರ್ಥಂ ಹಿ ದಿವೌಕಸಾಮ್ ॥೯೫॥

ಅರ್ಜುನಂ ವಾಸುದೇವಂ ಚ ಯೌ ತೌ ಲೋಕೋಽಭಿಮನ್ಯತೇ ।
ತಾವೈತೌ ಸಹಿತೌ ವಹ್ನೇ ಖಾಂಡವಸ್ಯ ಸಮೀಪತಃ ॥೯೬॥

ಅಗ್ನಿಯೇ, ಪ್ರಾಚೀನರಾದ, ಪ್ರಸಿದ್ಧರಾದ ನರನಾರಾಯಣ ಋಷಿಗಳು ದೇವಕಾರ್ಯವನ್ನು ಸಾಧಿಸುವ ಸಲುವಾಗಿ ಮನುಷ್ಯದೇಹವನ್ನು ಧರಿಸಿ ಇಲ್ಲಿಗೆ ಬಂದಿದ್ದಾರೆ. ಜನರು ಅವರನ್ನು ಅರ್ಜುನ ಮತ್ತು ಕೃಷ್ಣ ಎಂದು ತಿಳಿದಿದ್ದಾರೆ. ಅಗ್ನಿಯೇ, ಸದ್ಯಕ್ಕೆ ಅವರಿಬ್ಬರೂ ಖಾಂಡವದ ಸಮೀಪದಲ್ಲಿಯೇ ಇದ್ದಾರೆ.

ತೌ ತ್ವಂ ಯಾಚಸ್ವ ಸಾಹಾಯ್ಯೇ ದಾಹಾರ್ಥಂ ಖಾಂಡವಸ್ಯ ಚ ।
ತತೋ ಧಕ್ಷ್ಯಸಿ ತಂ ದಾವಂ ರಕ್ಷಿತಂ ತ್ರಿದಶೈರಪಿ ॥೯೭॥

ತೌ ತು ಸತ್ವಾನಿ ಸರ್ವಾಣಿ ಯತ್ನತೋ ವಾರಯಿಷ್ಯತಃ ।
ದೇವರಾಜಂ ಚ ಸಹಿತೌ ತತ್ರ ಮೇ ನಾಸ್ತಿ ಸಂಶಯಃ ॥೯೮॥

ನೀನು ಹೋಗಿ ಖಾಂಡವವನ್ನು ದಹಿಸಲು ಅವರ ಸಹಾಯವನ್ನು ಯಾಚಿಸು. ಅನಂತರ, ಅದು ದೇವತೆಗಳಿಂದ ರಕ್ಷಿತವಾದರೂ ನೀನು ಖಾಂಡವವನ್ನು ದಹಿಸುವಿ. ಅವರು ತಮ್ಮ ಪ್ರಯತ್ನದಿಂದ ಯಾವ ಪ್ರಾಣಿಯೂ ಹೊರಗೆ ಹೋಗದಂತೆ ತಡೆಯುವರು. ದೇವರಾಜನು ಸುರಿಸುವ ಮಳೆಯನ್ನೂ ಸಹ ಒಳಗೆ ಪ್ರವೇಶಿಸದಂತೆ ತಡೆಯುವರು.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ತ್ವರಿತೋ ಹವ್ಯವಾಹನಃ ।
ಕೃಷ್ಣಪಾರ್ಥಾವುಪಾಗಮ್ಯ ಯತ್ ಪಾರ್ಥಂ ಪ್ರತ್ಯಭಾಷತ ।
ತತ್ ತೇ ಕಥಿತವಾನಸ್ಮಿ ಪೂರ್ವಮೇವ ನೃಪೋತ್ತಮ ॥೯೯॥

ಇದನ್ನು ಕೇಳಿದ ಅಗ್ನಿಯು ಬೇಗ ಕೃಷ್ಣಪಾರ್ಥರ ಸಮೀಪಕ್ಕೆ ಬಂದನು. ನೃಪೋತ್ತಮನೇ, ಅವನು ಪಾರ್ಥನಿಗೆ ಹೇಳಿದ ವಿಷಯವನ್ನು ನಾನು ಮೊದಲೇ ನಿನಗೆ ತಿಳಿಸಿದ್ದೇನೆ.

ತಚ್ಛ್ರುತ್ವಾ ವಚನಂ ತ್ವಗ್ನೇರ್ಬೀಭತ್ಸುರ್ಜಾತವೇದಸಮ್ ।
ಅಬ್ರವೀನ್ನೃಪಶಾರ್ದೂಲ ತತ್ಕಾಲಸದೃಶಂ ವಚಃ ।
ದಿಧಕ್ಷುಂ ಖಾಂಡವಂ ದಾವಮಕಾಮಸ್ಯ ಶತಕ್ರತೋಃ ॥೧೦೦॥

ಅಗ್ನಿಯ ಮಹಾ ಮಾತುಗಳನ್ನು ಕೇಳಿ ಬೀಭತ್ಸುವು ಇಂದ್ರನ ಇಚ್ಛೆಗೆ ವಿರುದ್ಧವಾಗಿ ಖಾಂಡವವನ್ನು ಸುಡಲು ಬಯಸಿದ ಅಗ್ನಿಯನ್ನು ಕುರಿತು ಆ ಸಮಯಕ್ಕೆ ಉಚಿತವಾದ ಮಾತುಗಳನ್ನಾಡಿದನು.

ಉತ್ತಮಾಸ್ತ್ರಾಣಿ ಮೇ ಸಂತಿ ದಿವ್ಯಾನಿ ಚ ಬಹೂನಿ ಚ ।
ಯೈರಹಂ ಶಕ್ನುಯಾಂ ಯೋದ್ಧುಮಪಿ ವಜ್ರಭೃತೋ ಬಹೂನ್ ॥

ನನ್ನ ಬಳಿ ಅನೇಕ ದಿವ್ಯವಾದ ಉತ್ತಮಾಸ್ತ್ರಗಳಿವೆ. ಅವುಗಳ ಬಲದಿಂದ ನಾನು ಅನೇಕ ಇಂದ್ರರು ಬಂದರೂ ಅವರ ಜೊತೆಯಲ್ಲಿ ಯುದ್ಧಮಾಡುವ ಸಾಮರ್ಥ್ಯವನ್ನು ಹೊಂದಿದ್ದೇನೆ.

ಧನುರ್ಮೇ ನಾಸ್ತಿ ಭಗವನ್ ಬಾಹುವೀರ್ಯೇಣ ಸಮ್ಮಿತಮ್ ।
ಕುರ್ವತಃ ಸಮರೇ ಯತ್ನಂ ವೇಗಂ ಯದ್ ವಿಷಹೇತ ವಾ ॥೧೦೨॥

ಪೂಜ್ಯನೇ, ಆದರೆ ನನ್ನ ಬಾಹುಬಲಕ್ಕೆ ಯೋಗ್ಯವಾದ, ಯುದ್ಧದಲ್ಲಿ ನನ್ನ ಪ್ರಯತ್ನವನ್ನು ಮತ್ತು ವೇಗವನ್ನು ಸಹಿಸಬಲ್ಲ ಧನುಸ್ಸು ಇಲ್ಲ.

ಶರೈಸ್ತ್ವದರ್ಥೇ ಬಹುಭಿರಕ್ಷಯೈಃ ಕ್ಷಿಪ್ರಮಸ್ಯತಃ ।
ನ ಹಿ ವೋಢುಂ ರಥಃ ಶಕ್ತಃ ಶರಾನ್ ಮಮ ಯಥೇಪ್ಸಿತಾನ್ ॥೧೦೩॥

ನಿನ್ನ ಸಲುವಾಗಿ ಅಕ್ಷಯಬಾಣಗಳನ್ನು ಪ್ರಯೋಗಿಸುವ ನನ್ನ ಇಷ್ಟವಾದ ಬಾಣಗಳನ್ನು ಸಹಿಸಬಲ್ಲ ರಥವೂ ಇಲ್ಲ.

ಅಶ್ವಾಂಶ್ಚ ದಿವ್ಯಾನಿಚ್ಛೇಯಂ ಪಾಂಡರಾನ್ ವಾತರಂಹಸಃ ।
ರಥಂ ಚ ಮೇಘನಿರ್ಘೋಷಂ ಸೂರ್ಯಪ್ರತಿಮತೇಜಸಮ್ ॥೧೦೪॥

ನನಗೆ ಶ್ವೇತವರ್ಣದ ವಾಯುವೇಗವುಳ್ಳ ದಿವ್ಯವಾದ ಅಶ್ವಗಳೂ ಬೇಕು. ಮೇಘಘೋಷದಂತಹ ಘೋಷದಿಂದ ಕೂಡಿದ ಸೂರ್ಯನಂತೆ ಪ್ರಕಾಶಿಸುವ ರಥವೂ ಬೇಕು.

ತಥಾ ಕೃಷ್ಣಸ್ಯ ವೀರ್ಯೇಣ ನಾಯುಧಂ ವಿದ್ಯತೇ ಸಮಮ್ ।
ಯೇನ ನಾಗಾನ್ ಪಿಶಾಚಾಂಶ್ಚ ನಿಹನ್ಯಾನ್ಮಾಧವೋ ರಣೇ ॥೧೦೫॥

ಹಾಗೆಯೇ, ಯಾವ ಆಯುಧದಿಂದ ಮಾಧವನು ಯುದ್ಧದಲ್ಲಿ ಸರ್ಪಗಳನ್ನೂ ಮತ್ತು ಪಿಶಾಚಿಗಳನ್ನೂ ಕೊಲ್ಲಬಹುದೋ ಅವನ ಪರಾಕ್ರಮಕ್ಕೆ ಸದೃಶವಾದ ಆಯುಧವಿಲ್ಲ.

ಉಪಾಯಂ ಕರ್ಮಣಃ ಸಿದ್ಧೌ ಭಗವನ್ ವಕ್ತುಮರ್ಹಸಿ ।
ನಿವಾರಯೇಯಂ ಯೇನೇಂದ್ರಂ ವರ್ಷಮಾಣಂ ಮಹಾಶನಿಮ್ ॥

ಪೂಜ್ಯನೇ, ನಾನು ಇಂದ್ರನ ವಜ್ರಾಯುಧವನ್ನೂ, ಅವನು ಸುರಿಸುವ ಮಳೆಯನ್ನು ತಡೆದು ಕರ್ಮಸಿದ್ಧಿಯನ್ನು ಉಂಟುಮಾಡುವ ಉಪಾಯಗಳನ್ನು ನೀನೇ ಸೂಚಿಸಬೇಕು.

ಪೌರುಷೇಣ ತು ಯತ್ ಕಾರ್ಯಂ ತತ್ ಕರ್ತಾರೌ ಸ್ವ ಪಾವಕ ।
ಕರಣಾನಿ ಸಮರ್ಥಾನಿ ಭಗವನ್ ದಾತುಮರ್ಹಸಿ ॥೧೦೭॥

ಅಗ್ನಿಯೇ, ಪುರುಷಪ್ರಯತ್ನದಿಂದ ಏನು ಮಾಡಬಹುದೋ ಅದನ್ನು ನಾವಿಬ್ಬರೂ ಮಾಡುವೆವು. ಅಗ್ನಿಯೇ, ಸಮರ್ಥವಾದ ಸಾಧನಗಳನ್ನು ನೀನು ಒದಗಿಸಬೇಕು.

ವೈಶಂಪಾಯನಃ

ಏವಮುಕ್ತಸ್ತು ಭಗವಾನ್ ಧೂಮಕೇತುರ್ಹುತಾಶನಃ ।
ಚಿಂತಯಾಮಾಸ ವರುಣಂ ಲೋಕಪಾಲಂ ದಿದೃಕ್ಷಯಾ ॥೧೦೮॥

ಶ್ವೇತಕುಂಡಲಿನಂ ದೇವಂ ಸರ್ವಾಭರಣಭೂಷಿತಮ್ ।
ಸ ಚ ಸಂಚಿಂತಿತಂ ಜ್ಞಾತ್ವಾ ದರ್ಶಯಾಮಾಸ ಪಾವಕಮ್ ॥೧೦೯॥

ಹೀಗೆ ಹೇಳಲ್ಪಟ್ಟ ಪೂಜ್ಯನಾದ ಧೂಮಕೇತುವಾದ ಅಗ್ನಿಯು ಲೋಕಪಾಲನಾದ, ಶ್ವೇತಕುಂಡಲವುಳ್ಳ, ಸರ್ವಾಭರಣಭೂಷಿತನಾದ ವರುಣ ದೇವನನ್ನು ನೋಡುವ ಇಚ್ಛೆಯಿಂದ ವರುಣನನ್ನು ಚಿಂತಿಸಿದನು. ವರುಣನಾದರೋ ಅಗ್ನಿಯ ಚಿಂತನೆಯನ್ನು ತಿಳಿದು ಅವನಿಗೆ ತನ್ನ ದರ್ಶನವನ್ನು ನೀಡಿದನು.

ತಮಬ್ರವೀದ್ ಧೂಮಕೇತುಃ ಪ್ರತಿಪೂಜ್ಯ ಜಲೇಶ್ವರಮ್ ।
ಚತುರ್ಥಂ ಲೋಕಪಾಲಾನಾಂ ರಕ್ಷಿತಾರಂ ಮಹೇಶ್ವರಮ್ ॥೧೧೦॥

ಅಗ್ನಿಯು ತನ್ನಿಂದ ನಾಲ್ಕನೆಯ ಲೋಕಪಾಲಕನಾದ ಜಲೇಶ್ವರನಾದ ರಕ್ಷಕನಾದ ಪ್ರಭುವಾದ ಅವನನ್ನು ಕುರಿತು ಹೇಳಿದನು.

ಸೋಮೇನ ರಾಜ್ಞಾ ಯದ್ ದತ್ತಂ ಧನುಶ್ಚೈವೇಷುಧೀ ಚ ಯೇ ।
ತತ್ ಪ್ರಯಚ್ಛೋಭಯಂ ದಿವ್ಯಂ ತ್ವಮಸ್ಮೈ ಸವ್ಯಸಾಚಿನೇ ॥೧೧೧॥

ದಿವ್ಯೈರಶ್ವೈಃ ಸಮಾಯುಕ್ತಂ ರಥಂ ಚ ಕಪಿಲಕ್ಷಣಮ್ ।
ಕಾರ್ಯಂ ಚ ಸುಮಹತ್ ಪಾರ್ಥೋ ಗಾಂಡೀವೇನ ಕರಿಷ್ಯತಿ ।
ಚಕ್ರೇಣ ವಾಸುದೇವಶ್ಚ ತನ್ಮದರ್ಥೇ ಪ್ರದೀಯತಾಮ್ ॥೧೧೨॥

ಸೋಮರಾಜನು ನಿನಗೆ ಕೊಟ್ಟಿರುವ ದಿವ್ಯವಾದ ಧನುಸ್ಸನ್ನು ಮತ್ತು ಎರಡು ಬತ್ತಳಿಕೆಗಳನ್ನು ನೀನು ಈ ಸವ್ಯಸಾಚಿಯಾದ ಅರ್ಜುನನಿಗೆ ಕೊಡು. ದಿವ್ಯಾಶ್ವಗಳಿಂದ ಕೂಡಿದ ಕಪಿಧ್ವಜವುಳ್ಳ ರಥವನ್ನೂ ಸಹ ಕೊಡು. ಗಾಂಡೀವಧನುಸ್ಸಿನಿಂದ ಅರ್ಜುನನು ದೊಡ್ಡಕಾರ್ಯವನ್ನು ಮಾಡುವನು, ವಾಸುದೇವನು ಸುದರ್ಶನ ಚಕ್ರದಿಂದ ಮಹತ್ಕಾರ್ಯವನ್ನು ಮಾಡುವನು, ನನ್ನ ಸಲುವಾಗಿ ಅವುಗಳನ್ನು ಅವರಿಗೆ ಕೊಡು.

ವೈಶಂಪಾಯನಃ

ದದಾನೀತ್ಯೇವ ವರುಣಃ ಪಾವಕಂ ಪ್ರತ್ಯಭಾಷತ ।
ತದದ್ಭುತಂ ಮಹಾವೀರ್ಯಂ ಯಶಃಕೀರ್ತಿವಿವರ್ಧನಮ್ ॥೧೧೩॥

ಸರ್ವಶಸ್ತ್ರೈರನಾಧೃಷ್ಯಂ ಸರ್ವಶಸ್ತ್ರಪ್ರಮಾಥಿನಮ್ ।
ಸರ್ವಾಯುಧಮಹಾಮಾತ್ರಂ ಪರಸೇನಾಪ್ರಧರ್ಷಣಮ್ ॥೧೧೪॥

ಏಕಂ ಶತಸಹಸ್ರೇಣ ಸಮ್ಮಿತಂ ರಾಷ್ಟ್ರವರ್ಧನಮ್ ।
ಚಿತ್ರಮುಚ್ಚಾವಚೈರ್ವರ್ಣೈಃ ಶೋಭಿತಂ ಶ್ಲಕ್ಷ್ಣಮವ್ರಣಮ್ ॥೧೧೫॥

ದೇವಗಂಧರ್ವಋಷಿಭಿಃ ಪೂಜಿತಂ ಶಾಶ್ವತೀಃ ಸಮಾಃ ।
ಪ್ರಾದಾಚ್ಚೈವ ಧನೂರತ್ನಮಕ್ಷಯ್ಯೇ ಚ ಮಹೇಷುಧೀ ॥೧೧೬॥

ನಾನು ಕೊಡುತ್ತೇನೆ ಎಂದೇ ವರುಣನು ಅಗ್ನಿಗೆ ಪ್ರತ್ಯುತ್ತರವನ್ನು ಕೊಟ್ಟನು. ಅನಂತರ ಅದ್ಭುತವಾದ ಮಹಾವೀರ್ಯೋಪೇತವಾದ, ಕೀರ್ತಿದಾಯಕವಾದ, ಯಾವಶಸ್ತ್ರಗಳಿಂದಲೂ ಪರಾಭವಕ್ಕೆ ಒಳಗಾಗದ, ಎಲ್ಲ ಶಸ್ತ್ರಗಳನ್ನು ವಿನಾಶಗೊಳಿಸುವ, ಎಲ್ಲ ಆಯುಧಗಳಿಗಿಂತಲೂ ಪ್ರಧಾನವಾದ, ಶತ್ರುಸೈನ್ಯವನ್ನು ಸದೆಬಡಿಯುವ, ಒಂದು ಲಕ್ಷ ಶಸ್ತ್ರಗಳಿಗೆ ಸಮಾನವಾದ, ರಾಷ್ಟ್ರವರ್ಧಕವಾದ, ಅನೇಕ ವರ್ಣಗಳಿಂದ ಕೂಡಿದ ಮೃದುವಾದ ಮತ್ತು ಗಾಯಗಳಿಂದ, ದೇವಗಂಧರ್ವಋಷಿಗಳಿಂದ ಬಹುಕಾಲದಿಂದಲೂ ಪೂಜಿತವಾದ ಧನುಶ್ರೇಷ್ಠವಾದ ಗಾಂಡೀವ ಧನುಸ್ಸನ್ನು ಮತ್ತು ಅಕ್ಷಯಬತ್ತಳಿಕೆಗಳನ್ನು ಅರ್ಜುನನಿಗೆ ಕೊಟ್ಟನು.

ರಥಂ ಚ ದಿವ್ಯಾಸ್ತ್ರಯುಜಂ ಕಪಿಪ್ರವರಲಕ್ಷಣಮ್ ।
ಉಪೇತಂ ಕಾಮಗೈರಶ್ವೈರ್ಗಾಂಧರ್ವೈರ್ಹೇಮಮಾಲಿಭಿಃ ॥೧೧೭॥

ದಿವ್ಯಾಸ್ತ್ರಗಳಿಂದ ಕೂಡಿದ, ಕಪಿಶ್ರೇಷ್ಠನಾದ ಹನುಮಂತನ ಚಿನ್ಹೆಯುಳ್ಳ, ಚಿನ್ನದ ಮಾಲೆಗಳನ್ನು ಧರಿಸಿದ, ಮನಸ್ಸಿನ ಇಚ್ಛೆಯನ್ನು ಅನುಸರಿಸಿ ಹೋಗುವ ಗಾಂಧರ್ವಜಾತಿಯ ಅಶ್ವಗಳಿಂದ ಕೂಡಿದ ರಥವನ್ನೂ ಕೊಟ್ಟನು.

ಪಾಂಡರಾಭ್ರಪ್ರತೀಕಾಶೈರ್ಮನೋವಾಯುಸಮೈರ್ಜವೇ ।
ಸರ್ವೋಪಕರಣೈರ್ಯುಕ್ತಮಜಯ್ಯಂ ದೇವದಾನವೈಃ ॥೧೧೮॥

ಆ ರಥವು ಬಿಳಿಯಮೋಡಗಳ ಕಾಂತಿಯನ್ನು ಹೊಂದಿದ ವೇಗದಲ್ಲಿ ಮನೋವೇಗ ಮತ್ತು ವಾಯುವೇಗಕ್ಕೆ ಸಮವಾದ ಅಶ್ವಗಳಿಂದ ಕೂಡಿದ್ದು ಸರ್ವಾಯುಧಸಂಪನ್ನವಾಗಿ ದೇವತೆಗಳಿಂದಲೂ ಮತ್ತು ದಾನವರಿಂದಲೂ ಅಜೇಯವಾಗಿದ್ದಿತು.

ಭಾನುಮಂತಂ ಮಹಾಘೋಷಂ ಸರ್ವಭೂತಮನೋಹರಮ್ ।
ಸಸರ್ಜ ಯಂ ಸುತಪಸಾ ಭುವನೇ ಭುವನಪ್ರಭುಃ ॥೧೧೯॥

ಪ್ರಕಾಶಮಾನವಾದ, ಮಹಾಘೋಷವುಳ್ಳ, ಎಲ್ಲಪ್ರಾಣಿಗಳಿಗೂ ಮನೋಹರವಾದ ಆ ರಥವನ್ನು ಹಿಂದೆ ಭುವನಪ್ರಭುವಾದ ಪ್ರಜಾಪತಿಯಾದ ಬ್ರಹ್ಮದೇವರು ತಮ್ಮ ತಪಸ್ಸಿನಿಂದ ಸೃಷ್ಟಿಸಿದರು.

ಪ್ರಜಾಪತಿರನಿರ್ದೇಶ್ಯಂ ಯಸ್ಯ ರೂಪಂ ರವೇರಿವ ।
ಯಂ ಸ್ಮ ಸೋಮಃ ಸಮಾರುಹ್ಯ ದಾನವಾನಜಯತ್ ಪ್ರಭುಃ ॥೧೨೦॥

ಭವ್ಯರೂಪದಂತೆ ಆ ರಥದ ರೂಪವು ನಿರ್ದೇಶಿಸಲು ಅಸಾಧ್ಯವಾಗಿದ್ದಿತು. ಆ ರಥವನ್ನು ಏರಿ ಪ್ರಭುವಾದ ಸೋಮನು ಹಿಂದೆ ದಾನವರನ್ನು ಜಯಿಸಿದ್ದನು.

ನವಮೇಘಪ್ರತೀಕಾಶಂ ಜ್ವಲಂತಮಿವ ಚ ಶ್ರಿಯಾ ।
ಆಶ್ರಿತಾ ತಂ ರಥಶ್ರೇಷ್ಠಂ ಶಕ್ರಾಯುಧಸಮಾ ಬಭೌ ।
ತಾಪನೀಯಾ ಸುರುಚಿರಾ ಧ್ವಜಯಷ್ಟಿರನುತ್ತಮಾ ॥೧೨೧॥

ಆ ರಥವನ್ನು ಆಶ್ರಯಿಸಿ ಶಕ್ರಾಯುಧಕ್ಕೆ ಸಮವಾದ ಸುವರ್ಣಾಲಂಕೃತವಾದ, ಮನೋಹರವಾದ, ಶ್ರೇಷ್ಠವಾದ ಧ್ವಜವಿದ್ದಿತು.

ತಸ್ಯಾಂ ತು ವಾನರೋ ದಿವ್ಯಃ ಸಿಂಹಲಾಂಗೂಲಲಕ್ಷಣಃ ।
ಭೀಮೋ ನನರ್ದ ತತ್ರಸ್ಥಃ ಸಂಸ್ಥಿತೋ ಮೂರ್ಧ್ನಿ ಶೋಭತ ॥೧೨೨॥

ಧ್ವಜೇ ಭೂತಾನಿ ತತ್ರಾಸನ್ ವಿವಿಧಾನಿ ಮಹಾಂತಿ ಚ ।
ನಾದೇನ ಪರಸೈನ್ಯಾನಾಂ ಯೇಷಾಂ ಪ್ರಜ್ಞಾ ಪ್ರಣಶ್ಯತಿ ॥೧೨೩॥

ಆ ಧ್ವಜದಲ್ಲಿ ಸಿಂಹಲಾಂಗುಲವುಳ್ಳ ದಿವ್ಯವಾದ ವಾನರವು ಧ್ವಜದ ಮೇಲ್ಭಾಗದಲ್ಲಿ ಕುಳಿತು ಭಯಂಕರವಾಗಿ ಗರ್ಜಿಸುತ್ತಿತ್ತು. ಆ ಧ್ವಜದಲ್ಲಿ ಶ್ರೇಷ್ಠವಾದ ಕಪಿಯಲ್ಲದೇ

ವೈಶಂಪಾಯನಃ

ದದಾನೀತ್ಯೇವ ವರುಣಃ ಪಾವಕಂ ಪ್ರತ್ಯಭಾಷತ ।
ತದದ್ಭುತಂ ಮಹಾವೀರ್ಯಂ ಯಶಃಕೀರ್ತಿವಿವರ್ಧನಮ್ ॥೧೧೩॥

ಸರ್ವಶಸ್ತ್ರೈರನಾಧೃಷ್ಯಂ ಸರ್ವಶಸ್ತ್ರಪ್ರಮಾಥಿನಮ್ ।
ಸರ್ವಾಯುಧಮಹಾಮಾತ್ರಂ ಪರಸೇನಾಪ್ರಧರ್ಷಣಮ್ ॥೧೧೪॥

ಏಕಂ ಶತಸಹಸ್ರೇಣ ಸಮ್ಮಿತಂ ರಾಷ್ಟ್ರವರ್ಧನಮ್ ।
ಚಿತ್ರಮುಚ್ಚಾವಚೈರ್ವರ್ಣೈಃ ಶೋಭಿತಂ ಶ್ಲಕ್ಷ್ಣಮವ್ರಣಮ್ ॥೧೧೫॥

ದೇವಗಂಧರ್ವಋಷಿಭಿಃ ಪೂಜಿತಂ ಶಾಶ್ವತೀಃ ಸಮಾಃ ।
ಪ್ರಾದಾಚ್ಚೈವ ಧನೂರತ್ನಮಕ್ಷಯ್ಯೇ ಚ ಮಹೇಷುಧೀ ॥೧೧೬॥

ನಾನು ಕೊಡುತ್ತೇನೆ ಎಂದೇ ವರುಣನು ಅಗ್ನಿಗೆ ಪ್ರತ್ಯುತ್ತರವನ್ನು ಕೊಟ್ಟನು. ಅನಂತರ ಅದ್ಭುತವಾದ ಮಹಾವೀರ್ಯೋಪೇತವಾದ, ಕೀರ್ತಿದಾಯಕವಾದ, ಯಾವಶಸ್ತ್ರಗಳಿಂದಲೂ ಪರಾಭವಕ್ಕೆ ಒಳಗಾಗದ, ಎಲ್ಲ ಶಸ್ತ್ರಗಳನ್ನು ವಿನಾಶಗೊಳಿಸುವ, ಎಲ್ಲ ಆಯುಧಗಳಿಗಿಂತಲೂ ಪ್ರಧಾನವಾದ, ಶತ್ರುಸೈನ್ಯವನ್ನು ಸದೆಬಡಿಯುವ, ಒಂದು ಲಕ್ಷ ಶಸ್ತ್ರಗಳಿಗೆ ಸಮಾನವಾದ, ರಾಷ್ಟ್ರವರ್ಧಕವಾದ, ಅನೇಕ ವರ್ಣಗಳಿಂದ ಕೂಡಿದ ಮೃದುವಾದ ಮತ್ತು ಗಾಯಗಳಿಂದ, ದೇವಗಂಧರ್ವಋಷಿಗಳಿಂದ ಬಹುಕಾಲದಿಂದಲೂ ಪೂಜಿತವಾದ ಧನುಶ್ರೇಷ್ಠವಾದ ಗಾಂಡೀವ ಧನುಸ್ಸನ್ನು ಮತ್ತು ಅಕ್ಷಯಬತ್ತಳಿಕೆಗಳನ್ನು ಅರ್ಜುನನಿಗೆ ಕೊಟ್ಟನು.

ರಥಂ ಚ ದಿವ್ಯಾಸ್ತ್ರಯುಜಂ ಕಪಿಪ್ರವರಲಕ್ಷಣಮ್ ।
ಉಪೇತಂ ಕಾಮಗೈರಶ್ವೈರ್ಗಾಂಧರ್ವೈರ್ಹೇಮಮಾಲಿಭಿಃ ॥೧೧೭॥

ದಿವ್ಯಾಸ್ತ್ರಗಳಿಂದ ಕೂಡಿದ, ಕಪಿಶ್ರೇಷ್ಠನಾದ ಹನುಮಂತನ ಚಿನ್ಹೆಯುಳ್ಳ, ಚಿನ್ನದ ಮಾಲೆಗಳನ್ನು ಧರಿಸಿದ, ಮನಸ್ಸಿನ ಇಚ್ಛೆಯನ್ನು ಅನುಸರಿಸಿ ಹೋಗುವ ಗಾಂಧರ್ವಜಾತಿಯ ಅಶ್ವಗಳಿಂದ ಕೂಡಿದ ರಥವನ್ನೂ ಕೊಟ್ಟನು.

ಪಾಂಡರಾಭ್ರಪ್ರತೀಕಾಶೈರ್ಮನೋವಾಯುಸಮೈರ್ಜವೇ ।
ಸರ್ವೋಪಕರಣೈರ್ಯುಕ್ತಮಜಯ್ಯಂ ದೇವದಾನವೈಃ ॥೧೧೮॥

ಆ ರಥವು ಬಿಳಿಯಮೋಡಗಳ ಕಾಂತಿಯನ್ನು ಹೊಂದಿದ ವೇಗದಲ್ಲಿ ಮನೋವೇಗ ಮತ್ತು ವಾಯುವೇಗಕ್ಕೆ ಸಮವಾದ ಅಶ್ವಗಳಿಂದ ಕೂಡಿದ್ದು ಸರ್ವಾಯುಧಸಂಪನ್ನವಾಗಿ ದೇವತೆಗಳಿಂದಲೂ ಮತ್ತು ದಾನವರಿಂದಲೂ ಅಜೇಯವಾಗಿದ್ದಿತು.

ಭಾನುಮಂತಂ ಮಹಾಘೋಷಂ ಸರ್ವಭೂತಮನೋಹರಮ್ ।
ಸಸರ್ಜ ಯಂ ಸುತಪಸಾ ಭುವನೇ ಭುವನಪ್ರಭುಃ ॥೧೧೯॥

ಪ್ರಕಾಶಮಾನವಾದ, ಮಹಾಘೋಷವುಳ್ಳ, ಎಲ್ಲಪ್ರಾಣಿಗಳಿಗೂ ಮನೋಹರವಾದ ಆ ರಥವನ್ನು ಹಿಂದೆ ಭುವನಪ್ರಭುವಾದ ಪ್ರಜಾಪತಿಯಾದ ಬ್ರಹ್ಮದೇವರು ತಮ್ಮ ತಪಸ್ಸಿನಿಂದ ಸೃಷ್ಟಿಸಿದರು.

ಪ್ರಜಾಪತಿರನಿರ್ದೇಶ್ಯಂ ಯಸ್ಯ ರೂಪಂ ರವೇರಿವ ।
ಯಂ ಸ್ಮ ಸೋಮಃ ಸಮಾರುಹ್ಯ ದಾನವಾನಜಯತ್ ಪ್ರಭುಃ ॥೧೨೦॥

ಭವ್ಯರೂಪದಂತೆ ಆ ರಥದ ರೂಪವು ನಿರ್ದೇಶಿಸಲು ಅಸಾಧ್ಯವಾಗಿದ್ದಿತು. ಆ ರಥವನ್ನು ಏರಿ ಪ್ರಭುವಾದ ಸೋಮನು ಹಿಂದೆ ದಾನವರನ್ನು ಜಯಿಸಿದ್ದನು.

ನವಮೇಘಪ್ರತೀಕಾಶಂ ಜ್ವಲಂತಮಿವ ಚ ಶ್ರಿಯಾ ।
ಆಶ್ರಿತಾ ತಂ ರಥಶ್ರೇಷ್ಠಂ ಶಕ್ರಾಯುಧಸಮಾ ಬಭೌ ।
ತಾಪನೀಯಾ ಸುರುಚಿರಾ ಧ್ವಜಯಷ್ಟಿರನುತ್ತಮಾ ॥೧೨೧॥

ಆ ರಥವನ್ನು ಆಶ್ರಯಿಸಿ ಶಕ್ರಾಯುಧಕ್ಕೆ ಸಮವಾದ ಸುವರ್ಣಾಲಂಕೃತವಾದ, ಮನೋಹರವಾದ, ಶ್ರೇಷ್ಠವಾದ ಧ್ವಜವಿದ್ದಿತು.

ತಸ್ಯಾಂ ತು ವಾನರೋ ದಿವ್ಯಃ ಸಿಂಹಲಾಂಗೂಲಲಕ್ಷಣಃ ।
ಭೀಮೋ ನನರ್ದ ತತ್ರಸ್ಥಃ ಸಂಸ್ಥಿತೋ ಮೂರ್ಧ್ನಿ ಶೋಭತ ॥೧೨೨॥

ಧ್ವಜೇ ಭೂತಾನಿ ತತ್ರಾಸನ್ ವಿವಿಧಾನಿ ಮಹಾಂತಿ ಚ ।
ನಾದೇನ ಪರಸೈನ್ಯಾನಾಂ ಯೇಷಾಂ ಪ್ರಜ್ಞಾ ಪ್ರಣಶ್ಯತಿ ॥೧೨೩॥

ಆ ಧ್ವಜದಲ್ಲಿ ಸಿಂಹಲಾಂಗುಲವುಳ್ಳ ದಿವ್ಯವಾದ ವಾನರವು ಧ್ವಜದ ಮೇಲ್ಭಾಗದಲ್ಲಿ ಕುಳಿತು ಭಯಂಕರವಾಗಿ ಗರ್ಜಿಸುತ್ತಿತ್ತು. ಆ ಧ್ವಜದಲ್ಲಿ ಶ್ರೇಷ್ಠವಾದ ಕಪಿಯಲ್ಲದೇ

ಇನ್ನೂ ಅನೇಕ ದೊಡ್ಡ ದೊಡ್ಡ ಭೂತಗಳಿದ್ದವು. ಅವುಗಳ ದೊಡ್ಡನಾದದಿಂದ ಶತ್ರುಸೈನ್ಯದ ಸೈನಿಕರ ಬುದ್ಧಿಯೇ ಕೆಡುತ್ತಿತ್ತು.

ಸ ತಂ ನಾನಾಪತಾಕಾಭಿಃ ಶೋಭಿತಂ ರಥಸತ್ತಮಮ್ ।
ಪ್ರದಕ್ಷಿಣಮುಪಾವೃತ್ಯ ದೈವತೇಭ್ಯಃ ಪ್ರಣಮ್ಯ ಚ ॥೧೨೪॥

ಸನ್ನದ್ಧಃ ಕವಚೀ ಖಡ್ಗೀ ಬದ್ಧಗೋಧಾಂಗುಲಿತ್ರವಾನ್ ।
ಆರುರೋಹ ತದಾ ಪಾರ್ಥೋ ವಿಮಾನಂ ಸುಕೃತೀ ಯಥಾ ॥೧೨೫॥

ಅರ್ಜುನನು ನಾನಾಪತಾಕೆಗಳಿಂದ ಶೋಭಿಸುತ್ತಿದ್ದ ಆ ಶ್ರೇಷ್ಠವಾದ ರಥಕ್ಕೆ ಪ್ರದಕ್ಷಿಣೆಯನ್ನು ಮಾಡಿ, ದೇವತೆಗಳಿಗೆ ನಮಸ್ಕರಿಸಿ ಯುದ್ಧಸಾಮಗ್ರಿಗಳಿಂದ ಸನ್ನದ್ಧನಾಗಿ ಕವಚವನ್ನೂ, ಕೈಬೆರಳುಗಳ ರಕ್ಷೆಗಳನ್ನೂ ಧರಿಸಿ, ಖಡ್ಗವನ್ನು ಹಿಡಿದು ಪುಣ್ಯವನ್ನು ಮಾಡಿದವನು ವಿಮಾನವನ್ನು ಹತ್ತುವಂತೆ ಆ ರಥವನ್ನು ಏರಿದನು.

ತಚ್ಚ ದಿವ್ಯಂ ಧನುಃಶ್ರೇಷ್ಠಂ ಬ್ರಹ್ಮಣಾ ನಿರ್ಮಿತಂ ಪುರಾ ।
ಗಾಂಡೀವಮುಪಸಂಗೃಹ್ಯ ಬಭೂವ ಮುದಿತೋऽರ್ಜುನಃ ॥೧೨೬॥

ಹಿಂದೆ ಬ್ರಹ್ಮದೇವರು ನಿರ್ಮಿಸಿದ ಶ್ರೇಷ್ಠವೂ, ದಿವ್ಯವೂ ಆದ ಗಾಂಡೀವ ಧನುಸ್ಸನ್ನು ಹಿಡಿದು ಅರ್ಜುನನು ಸಂತುಷ್ಟನಾದನು.

ಹುತಾಶನಂ ನಮಸ್ಕೃತ್ಯ ತತಸ್ತದತಿವೀರ್ಯವಾನ್ ।
ಜಗ್ರಾಹ ಬಲಮಾಸ್ಥಾಯ ಜ್ಯಯಾ ಚ ಯುಯುಜೇ ಧನುಃ ॥೧೨೭॥

ಅಗ್ನಿಯನ್ನು ನಮಸ್ಕರಿಸಿ ಅತಿಪರಾಕ್ರಮಶಾಲಿಯಾದ ಅರ್ಜುನನು ತನ್ನ ಬಲವನ್ನು ಉಪಯೋಗಿಸಿ ಧನುಸ್ಸನ್ನು ಹೆದೆಯಿಂದ ಕಟ್ಟಿದನು.

ಮೌರ್ವ್ಯಾಂ ತು ಯುಜ್ಯಮಾನಾಯಾಂ ಪಾಂಡವೇನ ಬಲೀಯಸಾ ।
ಯೇऽಶೃಣ್ವನ್ ಕೂಜಿತಂ ತತ್ರ ತೇಷಾಂ ತು ವ್ಯಥತೇ ಮನಃ ॥೧೨೮॥

ಬಲಿಷ್ಠನಾದ ಅರ್ಜುನನು ಧನುಸ್ಸನ್ನು ಬಗ್ಗಿಸಿ ಹೆದೆಯನ್ನು ಕಟ್ಟಿದಾಗ ಉಂಟಾದ ಶಬ್ದವನ್ನು ಕೇಳಿದ ಜನರು ಮನಸ್ಸಿನಲ್ಲಿಯೇ ವ್ಯಥೆಪಟ್ಟರು.

ಲಬ್ಧ್ವಾ ಧನೂ ರಥಂ ಚೈವ ತಥಾऽಕ್ಷಯ್ಯೇ ಮಹೇಷುಧೀ ।
ಬಭೂವ ಕಲ್ಯಃ ಕೌಂತೇಯಃ ಪ್ರಹೃಷ್ಟಃ ಸಾಹ್ಯಕರ್ಮಣಿ ॥೧೨೯॥

ಅರ್ಜುನನು ಶ್ರೇಷ್ಠವಾದ ಧನುಸ್ಸನ್ನೂ, ರಥವನ್ನೂ, ಅಕ್ಷಯಬತ್ತಳಿಕೆಗಳನ್ನೂ ಹೊಂದಿ ಸಂತುಷ್ಟನಾದನು. ಸಹಾಯಕರ್ಮವನ್ನು ಮಾಡಲು ಸಮರ್ಥನಾದನು.

ವಜ್ರನಾಭಂ ಪುನಶ್ಚಕ್ರಂ ದದೌ ಕೃಷ್ಣಾಯ ಪಾವಕಃ ।
ಆಗ್ನೇಯಮಸ್ತ್ರಂ ದಯಿತಂ ಸ ಚ ಕಲ್ಪೋऽಭವತ್ ತದಾ ॥೧೩೦॥

ಅಗ್ನಿಯು ವಜ್ರನಾಭಿಯುಳ್ಳ, ಆಗ್ನೇಯಾಸ್ತ್ರವನ್ನು ಹೋಲುವ, ವಿಷ್ಣುವಿನ ಪ್ರಿಯವಾದ ಚಕ್ರಾಯುಧವನ್ನು ಕೃಷ್ಣನಿಗೆ ಕೊಟ್ಟನು. ಕೃಷ್ಣನೂ ಕೂಡ ಶತ್ರುಗಳನ್ನು ನಿವಾರಿಸಲು ಆಗ ಸಮರ್ಥನಾದನು.

ಅಬ್ರವೀತ್ ಪಾವಕಶ್ಚೈತದೇತೇನ ಮಧುಸೂದನ ।
ಅಮಾನುಷಾನಪಿ ರಣೇ ವಿಜೇಷ್ಯಸಿ ನ ಸಂಶಯಃ ॥೧೩೧॥

ಆಗ ಅಗ್ನಿಯು ಕೃಷ್ಣನನ್ನು ಕುರಿತು ಮಧುಸೂದನನೇ, ನೀನು ಈ ಆಯುಧದಿಂದ ಅಮಾನುಷರನ್ನು ಸೋಲಿಸುತ್ತೀಯೆ ಎಂಬ ವಿಷಯದಲ್ಲಿ ಸಂಶಯವಿಲ್ಲ ಎಂದು ಹೇಳಿದನು.

ಅನೇನ ತ್ವಂ ಮನುಷ್ಯಾಣಾಂ ದೇವಾನಾಮಪಿ ಚಾಹವೇ ।
ರಕ್ಷಃಪಿಶಾಚದೈತ್ಯಾನಾಂ ನಾಗಾನಾಂ ಚಾಧಿಕಸ್ತಥಾ ।
ಭವಿಷ್ಯಸಿ ನ ಸಂದೇಹಃ ಪ್ರವೀರಾರೀನ್ ನಿಹನ್ ರಣೇ ॥೧೩೨॥

ಈ ಆಯುಧವನ್ನು ಹಿಡಿದ ನೀನು ಯುದ್ಧದಲ್ಲಿ ಮನುಷ್ಯರಿಗಿಂತಲೂ, ದೇವತೆಗಳಿಗಿಂತಲೂ, ರಾಕ್ಷಸರಿಗಿಂತಲೂ, ಪಿಶಾಚಗಳಿಗಿಂತಲೂ, ದೈತ್ಯರಿಗಿಂತಲೂ, ಸರ್ಪಗಳಿಗಿಂತಲೂ ಅಧಿಕನಾಗುವಿ. ಮಹಾವೀರನೇ, ಯುದ್ಧದಲ್ಲಿ ಶತ್ರುಗಳನ್ನು ವಿನಾಶಪಡಿಸುವ ವಿಷಯದಲ್ಲಿ ಸಂಶಯವಿಲ್ಲ.

ತವೈತಚ್ಚಕ್ರಮಸ್ತ್ರಂ ಯತ್ ಸುದರ್ಶನಂ ನಾಮ ನಾಮತಃ ।
ತಚ್ಚಾಸ್ಮಿನ್ನರ್ಪಯ ವಿಭೋ ದೈತ್ಯಘಾತೇ ಯಥಾ ಪುರಾ ॥೧೩೩॥

ವಿಭುವೇ, ನಿನ್ನ ಚಕ್ರವೂ ಮತ್ತು ಆಯುಧವೂ ಆಗಿರುವ ಈ ಸುದರ್ಶನವನ್ನು ಮೊದಲಿನಂತೆ ದೈತ್ಯರನ್ನು ವಿನಾಶಮಾಡಲು ಪ್ರಯೋಗಿಸು.

ಕ್ಷಿಪ್ತಂ ಕ್ಷಿಪ್ತಂ ರಣೇ ಚೈತತ್ ತ್ವಯಾ ಮಾಧವ ಶತ್ರುಷು ।
ಹತ್ವಾऽಪ್ರತಿಹತಂ ಸಂಖೇ ಪಾಣಿಮೇಷ್ಯತಿ ತೇ ಪುನಃ ॥೧೩೪॥

ಮಾಧವನೇ, ನೀನು ಈ ಆಯುಧವನ್ನು ಶತ್ರುಗಳ ಮೇಲೆ ಎಷ್ಟುಬಾರಿ ಪ್ರಯೋಗಿಸಿದರೂ ಅದು ಶತ್ರುಗಳನ್ನು ಕೊಂದು ತಾನು ಯುದ್ಧದಲ್ಲಿ ಯಾರಿಂದಲೂ ತಡೆಯಲ್ಪಡದೆ ಪುನಃ ಬಂದು ನಿನ್ನ ಕೈಯನ್ನೇ ಸೇರುವುದು.

ವರುಣಶ್ಚ ದದೌ ತಸ್ಮೈ ಗದಾಮಶನಿನಿಸ್ವನಾಮ್ ।
ದೈತ್ಯಾಂತಕರಣೇಂ ಘೋರಾಂ ಗದಾಂ ಕೌಮೋದಕೀಂ ಹರೇಃ ॥೧೩೫॥

ವರುಣನು ವಜ್ರಾಯುಧದಂತಿರುವ ದೈತ್ಯವಿನಾಶಕವಾದ ಘೋರವಾದಹರಿಯ ಕೌಮೋದಕೀ ಗದೆಯನ್ನು ಕೃಷ್ಣನಿಗೆ ಕೊಟ್ಟನು.

ತತಃ ಪಾವಕಮಬ್ರೂತಾಂ ಪ್ರಹೃಷ್ಟಾವರ್ಜುನಾಚ್ಯುತೌ ।
ಕೃತಾಸ್ತ್ರೌ ಶಸ್ತ್ರಸಂಪನ್ನೌ ರಥಿನೌ ಧ್ವಜಿನಾವಪಿ ॥೧೩೬॥

ಕಲ್ಯೌ ಸ್ವೋ ಭಗವನ್ ಯೋದ್ಧುಮಪಿ ಸರ್ವೈಃ ಸುರಾಸುರೈಃ ।
ಕಿಂ ಪುನರ್ವಜ್ರಿಣೈಕೇನ ಪನ್ನಗಾರ್ಥೇ ಯುಯುತ್ಸತಾ ॥೧೩೭॥

ಆಗ ಸಂತೋಷಗೊಂಡ ಕೃಷ್ಣಾರ್ಜುನರು ಅಗ್ನಿಯನ್ನು ಕುರಿತು ಹೇಳಿದರು. ಪೂಜ್ಯನೇ, ಅಸ್ತ್ರವಿದ್ಯೆಯನ್ನು ಬಲ್ಲ ನಾವು ಶಸ್ತ್ರಸಂಪನ್ನರಾಗಿ ರಥಗಳಿಂದಲೂ, ಧ್ವಜಗಳಿಂದಲೂ ಯುಕ್ತರಾಗಿ ಎಲ್ಲಾ ದೇವಾಸುರರ ಜೊತೆಯಲ್ಲಿ ಯುದ್ಧಮಾಡಲು ಸಮರ್ಥರಾಗಿದ್ದೇವೆ. ಇನ್ನು ತಕ್ಷಕನ ಸಲುವಾಗಿ ಯುದ್ಧವನ್ನು ಮಾಡುವ ಒಬ್ಬ ಇಂದ್ರನ ಜೊತೆಯಲ್ಲಿ ಯುದ್ಧವನ್ನು ಮಾಡುವುದು ಯಾವ ದೊಡ್ಡ ವಿಷಯ.

ಅರ್ಜುನಃ

ಚಕ್ರಮಸ್ತ್ರಂ ಚ ವಾರ್ಷ್ಣೇಯೋ ವಿಸೃಜನ್ ಯುಧಿ ವೀರ್ಯವಾನ್ ।
ತ್ರಿಷು ಲೋಕೇಷು ತನ್ನಾಸ್ತಿ ಯನ್ನ ಜೇಯಾಜ್ಜನಾರ್ದನಃ ॥೧೩೮॥

ಯುದ್ಧದಲ್ಲಿ ಪರಾಕ್ರಮಶಾಲಿಯಾದ ವಿಷ್ಣುವು ತನ್ನ ಆಯುಧವಾದ ಸುದರ್ಶನವನ್ನು ಪ್ರಯೋಗಿಸಿದರೆ ಆ ಜನಾರ್ದನನು ಗೆಲ್ಲಲಾರದ ವಸ್ತುವು ಮೂರುಲೋಕಗಳಲ್ಲಿ ಯಾವುದೂ ಇಲ್ಲ.

ಗಾಂಡೀವಂ ಧನುರಾದಾಯ ತಥಾಽಕ್ಷಯ್ಯೇ ಮಹೇಷುಧೀ ।
ಅಹಮಪ್ಯುತ್ಸಹೇ ಲೋಕಾನ್ ವಿಜೇತುಂ ಯುಧಿ ಪಾವಕ ॥೧೩೯॥

ಅಗ್ನಿಯೇ, ನಾನೂ ಸಹ ಗಾಂಡೀವಧನುಸ್ಸನ್ನು ಹಿಡಿದು ಅಕ್ಷಯ ಬತ್ತಳಿಕೆಗಳನ್ನು ಧರಿಸಿ ಲೋಕಗಳನ್ನು ಯುದ್ಧದಲ್ಲಿ ಗೆಲ್ಲಲು ಪ್ರಯತ್ನಪಡುತ್ತೇನೆ.

ಸರ್ವತಃ ಪರಿವಾರ್ಯೈನಂ ನಾದೇನ ಮಹತಾ ಪ್ರಭೋ ।
ಕಾಮಂ ಸಂಪ್ರಜ್ವಲಾದ್ಯೈವ ಕಲ್ಯೋ ಸ್ವಃ ಸಾಹ್ಯಕರ್ಮಣಿ ॥೧೪೦॥

ಈ ಖಾಂಡವವನವನ್ನು ಎಲ್ಲಕಡೆಗಳಿಂದಲೂ ಸುತ್ತುವರಿದು ದೊಡ್ಡನಾದದಿಂದ ನಿನಗೆ ಇಷ್ಟಬಂದಂತೆ ಈ ದಿನವೇ ದಹಿಸು, ಪ್ರಭುವೇ ನಿನಗೆ ಸಹಾಯ ಮಾಡಲು ನಾವಿಬ್ಬರೂ ಸಮರ್ಥರಾಗಿದ್ದೇವೆ.

ಯದಿ ಖಾಂಡವಮೇಷ್ಯತಿ ಪ್ರಮಾದಾತ್
ಸಗಣೋ ವಾ ಪರಿರಕ್ಷಿತುಂ ಮಹೇಂದ್ರಃ ।
ಶರತಾಡಿತಕಂಠಕುಂಡಲಾನಾಂ
ವ್ಯಸನಂ ದ್ರಕ್ಷ್ಯತಿ ದೇವವಾಹಿನೀನಾಮ್ ॥೧೪೧॥

ಮಹೇಂದ್ರನು ಪ್ರಮಾದದಿಂದಲಾಗಲೀ ಅಥವಾ ರಕ್ಷಿಸುವ ಉದ್ದೇಶದಿಂದಾಗಲೀ ಈ ದಿನ ಖಾಂಡವಕ್ಕೆ ಬಂದರೆ ನನ್ನ ಬಾಣಗಳಿಂದ ಕತ್ತರಿಸಲ್ಪಟ್ಟ ಕಂಠಗಳನ್ನು ಮತ್ತು ಕುಂಡಲಗಳನ್ನೂ ಉಳ್ಳ ದೇವಸೈನ್ಯದ ದುಃಖವನ್ನು ಅವನು ನೋಡುವನು.

ವೈಶಂಪಾಯನಃ

ಏವಮುಕ್ತಃ ಸ ಭಗವಾನ್ ದಾಶಾರ್ಹೇಣಾರ್ಜುನೇನ ಹ ।
ತೈಜಸಂ ರೂಪಮಾಸ್ಥಾಯ ದಗ್ಧುಂ ದಾವಂ ಪ್ರಚಕ್ರಮೇ ॥೧೪೨॥

ಅರ್ಜುನನಿಂದಲೂ ಮತ್ತು ಕೃಷ್ಣನಿಂದಲೂ ಹೀಗೆ ಹೇಳಲ್ಪಟ್ಟ ಪೂಜ್ಯನಾದ ಅಗ್ನಿಯು ವಿಪ್ರರೂಪವನ್ನು ತ್ಯಜಿಸಿ ಜ್ವಾಲೆಯ ರೂಪವನ್ನು ಹೊಂದಿ ಖಾಂಡವವನ್ನು ದಹಿಸಲು ಪ್ರಾರಂಭಿಸಿದನು.

ಸರ್ವತಃ ಪರಿವಾರ್ಯೈನಂ ದಾವಂ ಸುವಿತತಂ ಪ್ರಭೋ ।
ದದಾಹ ಖಾಂಡವಂ ಕ್ರುದ್ಧೋ ಯುಗಾಂತಮಿವ ದರ್ಶಯನ್ ॥೧೪೩॥

ಪ್ರಭುವಾದ ಜನಮೇಜಯನೇ, ಅಗ್ನಿಯು ಖಾಂಡವವನವನ್ನು ಎಲ್ಲಾ ಕಡೆಗಳಿಂದಲೂ ಸುತ್ತುವರಿದು ಯುಗಾಂತವನ್ನು ತೋರಿಸುವವನೋ ಎಂಬಂತೆ ಕ್ರುದ್ಧನಾಗಿ ವಿಸ್ತಾರವಾದ ಆ ವನವನ್ನು ದಹಿಸಿದನು.

ಪರಿಗೃಹ್ಯ ಸಮಾವಿಷ್ಟಸ್ತದ್ವನಂ ಮನುಜರ್ಷಭ ।
ಮೇಘಸ್ತನಿತನಿರ್ಘೋಷಃ ಸರ್ವಭೂತಾನಿ ನಿರ್ದಹನ್ ॥೧೪೪॥

ಮನುಜಶ್ರೇಷ್ಠನೇ, ಆ ವನದಲ್ಲಿ ಕುಳಿತು ಅದನ್ನು ಸ್ವೀಕರಿಸಿ ಮೇಘಗರ್ಜನೆಯ ಘೋಷವನ್ನು ಉಂಟುಮಾಡಿ ಎಲ್ಲ ಪ್ರಾಣಿಗಳನ್ನೂ ದಹಿಸಿದನು.

ದಹ್ಯತಸ್ತಸ್ಯ ಚ ಬಭೌ ರೂಪಂ ದಾವಸ್ಯ ಭಾರತ ।
ಮೇರೋರಿವ ಮಹೀಧ್ರಸ್ಯ ಕಾಂಚನಸ್ಯ ಮಹಾದ್ಯುತೇಃ ॥೧೪೫॥

ಭಾರತನೇ, ಆ ವನವನ್ನು ದಹಿಸುವ ಅಗ್ನಿಯ ರೂಪವು ಮಹಾಪ್ರಕಾಶವುಳ್ಳ ಸುವರ್ಣಮಯವಾದ ಮೇರುಪರ್ವತದ ರೂಪವನ್ನು ಹೋಲುತ್ತಿದ್ದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಖಾಂಡವದಾಹಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಮೂವತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ನರಾವೇಶಾದನ್ನದಾನಪ್ರತಿಶ್ರವಾತ್
ಸ್ವಸ್ಯಾಪಿ ಶಕ್ರಸ್ಯ ವಿರೋಧಮೈಚ್ಛತ್ ।
ಪಾರ್ಥಃ ಕೃಷ್ಣಸ್ಯ ಪ್ರೇರಣಾಚ್ಚೈವ ವಹ್ನಿಃ
ಪಾರ್ಥಂ ಯಯಾಚೇ ಶಕ್ರವಿರೋಧಶಾಂತ್ಯೈ ॥೨೨೨॥

ಅರ್ಜುನ ನರಾವೇಶದಿಂದಲೂ, ಅನ್ನದಾನ ಪ್ರತಿಜ್ಞೆ ಮಾಡಿದ್ದರಿಂದಲೂ, ಕೃಷ್ಣನ ಪ್ರೇರಣೆಯಿಂದಲೂ, ತನ್ನಿಂದ ಅಭಿನ್ನನೆ ಆದ ಇಂದ್ರನಲ್ಲಿ ಯುದ್ಧ ಮಾಡಲು ಬಯಸಿದ. ಅಗ್ನಿ ಇಂದ್ರನ ವಿರೋಧ ಪರಿಹಾರಕ್ಕೆ ಅರ್ಜುನನನ್ನೇ ಬೇಡಿದ್ದ.

ನ ಹಿ ಸ್ವದತ್ತಸ್ಯ ಪುನಃ ಸ ವೈರಂ
ಶಕ್ರಃ ಕುರ್ಯಾತ್ ಸ್ವಯಮಿಂದ್ರೋ ಹಿ ಪಾರ್ಥಃ ।
ನಾಪ್ರೇರಿತೋ ವಿಷ್ಣುನಾ ತಸ್ಯ ರೋಧಂ
ಪಾರ್ಥಃ ಕುರ್ಯಾದಿತಿ ಕೃಷ್ಣಂ ಯಯಾಚೇ ॥೨೨೩॥

ಇಂದ್ರ ತಾನು ಕೊಟ್ಟಿದ್ದಕ್ಕೆ ತಾನೇ ಪುನಃ ವಿರೋಧ ಮಾಡಲಾರ. ಏಕೆಂದರೆ ಅರ್ಜುನ ಸ್ವಯಂ ಇಂದ್ರನೆ. ಅರ್ಜುನ ಕೃಷ್ಣನ ಪ್ರೇರಣೆಯಿಲ್ಲದೆ ಇಂದ್ರನನ್ನು ವಿರೋಧಿಸಲಾರನೆಂದು ಅಗ್ನಿ ಕೃಷ್ಣನನ್ನೂ ಬೇಡಿದ್ದ.

ನ ಚಾಯುಕ್ತಃ ಕೇಶವೇನೈಷ ಶಕ್ತ
ಇತಿ ಕೃಷ್ಣಾದಾಪ ಭೂಯೋಽಪ್ಯನುಜ್ಞಾಂ ।
ಯಯೌ ಸಮೀಪಂ ಚ ಹರೇರ್ಬದರ್ಯಾ-
ಮಾದಾಯ ಚಕ್ರಂ ಚಾಮುತಃ ಕೇಶವೇಽದಾತ್ ॥೨೨೪॥

ಶ್ರೀಕೃಷ್ಣ ಜೊತೆಗೆ ಇಲ್ಲದಿದ್ದರೆ ಅರ್ಜುನ ಶಕ್ತನಾಗಲಾರ ಎಂದು ಅಗ್ನಿ ಪುನಃ ಕೃಷ್ಣನಿಂದಲೂ ಅನುಜ್ಞೆ ಪಡೆದ. ಬಳಿಕ ಬದರಿಯ ನಾರಾಯಣನ ಬಳಿಗೆ ಹೋದ. ಅವನಿಂದ ಚಕ್ರವನ್ನು ತೆಗೆದುಕೊಂಡು ಬಂದು ಕೃಷ್ಣನಿಗೆ ನೀಡಿದ.

ಚಕ್ರಂ ಗೋಮಂತೇ ಕೃಷ್ಣಮಾಪಾಪಿ ಪೂರ್ವಂ
ಭಕ್ತ್ಯಾವಹ್ನಿಃ ಕೇಶವೇऽದಾತ್ ಪುನಸ್ತತ್ ।
ಚಕ್ರಂ ಚ ವಿಷ್ಣೋರ್ಬಹುಧಾ ವ್ಯವಸ್ಥಿತಂ
ತದಗ್ನಿದತ್ತಂ ಪ್ರಾಕ್ತನಂ ಚೈಕಧಾಸೀತ್ ॥೨೨೫॥

ಈ ಹಿಂದೆಯೆ ಗೋಮಂತ ಪರ್ವತದಲ್ಲಿ ಕೃಷ್ಣನ ಕೈಗೆ ಸುದರ್ಶನ ಚಕ್ರ ಬಂದಿತ್ತು. ಅಗ್ನಿ ಈಗ ಭಕ್ತಿಯಿಂದ ಪುನಃ ಅದನ್ನೆ ಕೃಷ್ಣನಿಗೆ ನೀಡಿದ. ವಿಷ್ಣುವಿನ ಚಕ್ರ ಬಹುರೂಪವಾಗಿದೆ. ಅದರಿಂದ ಹಿಂದೆ ಬಂದಿದ್ದ ಚಕ್ರವೂ ಈಗ ಅಗ್ನಿದತ್ತವಾದ ಚಕ್ರವೂ ಸೇರಿ ಒಂದೇ ಆಯಿತು.

ಧನುಶ್ಚ ಗಾಂಡೀವಮಥಾಬ್ಜಜಸ್ಯ
ಕರೋತಿ ಯೇನಾಖಿಲಸಂಹೃತಿಂ ಸಃ ।
ಅಂಶೇನ ದತ್ತಂ ತದುಮಾಪತೇಶ್ಚ
ಶಕ್ರಸ್ಯ ಸೋಮಸ್ಯ ಜಲೇಶಿತುಶ್ಚ ॥೨೨೬॥

ಅಗ್ನಿ ಗಾಂಡೀವ ಧನುಸ್ಸನ್ನು ವರುಣನಿಂದ ತಂದು ಅರ್ಜುನನಿಗೆ ನೀಡಿದ. ಅದು ಬ್ರಹ್ಮನ ಧನುಸ್ಸು. ಆ ಧನುಸ್ಸಿನಿಂದ ಅವನು ಸರ್ವಲಯ ಮಾಡುತ್ತಾನೆ. ಅವನು ಅದನ್ನು ಒಂದು ಅಂಶದಿಂದ ಶಿವನಿಗೂ ಇಂದ್ರನಿಗೂ ಚಂದ್ರನಿಗೂ ವರುಣನಿಗೂ ಕೊಟ್ಟಿದ್ದ.

ತೇನೈವ ತೇ ಜಿಗ್ಯುರಥೋ ಜಗತ್ತ್ರಯಂ
ಪ್ರಸಾದತಸ್ತೇ ಕ್ರಮಶೋऽಬ್ಜಯೋನೇಃ ।
ಅನನ್ಯಧಾರ್ಯಂ ವಿಜಯಾವಹಂ ಚ
ಭಾರೇಣ ಲಕ್ಷ್ಯ ಸಮಂ ಶುಭಾವಹಂ ॥೨೨೭॥

ಆ ಗಾಂಡೀವ ಧನುಸ್ಸಿನಿಂದಲೆ ರುದ್ರಾದಿ ದೇವತೆಗಳು ಕ್ರಮವಾಗಿ ಬ್ರಹ್ಮನ ಅನುಗ್ರಹದಿಂದ ಮೂಲೋರ್ಕವನ್ನು ಗೆದ್ದರು. ಅದು ಬೇರೆಯವರಿಗೆ ಧರಿಸಲಾಗದುದು. ಲಕ್ಷಭಾರದಷ್ಟು ಭಾರ, ವಿಜಯಪ್ರದ ಮತ್ತು ಶುಭದಾಯಕ.

ರಥಂ ಚ ಶುಭ್ರಾಶ್ವಯುತಂ ಜಯಾವಹಂ
ತೂಣೌ ತಥಾ ಚಾಕ್ಷಯಸಾಯಕೌ ಶುಭೌ ।
ಧ್ವಜಂ ಚ ರಾಮಸ್ಯ ಹನೂಮದಂಕ-
ಮಾದಾಯ ಸರ್ವಂ ವರುಣಾದರ್ಜುನೇऽದಾತ್ ॥೨೨೮॥

ಬಿಳಿ ಕುದುರೆಗಳಿಂದ ಯುಕ್ತವಾಗಿದ್ದು ಶುಭದಾಯಕವಾದ ರಥವನ್ನೂ ಅಕ್ಷಯ ಬಾಣಗಳುಳ್ಳ ಶುಭದಾಯಕವಾದ ಎರಡು ಬತ್ತಳಿಕೆಗಳನ್ನೂ ಹನುಮಂತನ ಚಿಹ್ನೆಯುಳ್ಳ ಶ್ರೀರಾಮನ ಧ್ವಜವನ್ನೂ ಎಲ್ಲವನ್ನೂ ಅಗ್ನಿ ವರುಣನಿಂದ ತೆಗೆದುಕೊಂಡು ಬಂದು ಅರ್ಜುನನಿಗೆ ನೀಡಿದ.

ವಿಶೇಷತೋ ಧ್ವಜಸಂಸ್ಥೇ ಹನೂಮ-
ತ್ಯಜೇಯತಾ ಸ್ಯಾಜ್ಜಯರೂಪೋ ಯತೋऽಸೌ ।
ಸರ್ವಂ ಚ ತದ್ ದಿವ್ಯಮಭೇದ್ಯಮೇವ
ವಿದ್ಯುತ್ಪ್ರಭಾ ಜ್ಯಾ ಚ ಗಾಂಡೀವಸಂಸ್ಥಾ ॥೨೨೯॥

ಧ್ವಜದಲ್ಲಿ ಹನುಮಂತನಿದ್ದರೆ ರಥಿಕನಿಗೆ ವಿಶೇಷವಾಗಿ ಅಜೇಯತ್ವ ಬರುತ್ತದೆ. ಏಕೆಂದರೆ ಹನುಮಂತ ಜಯಸ್ವರೂಪ. ಗಾಂಡೀವ ಮುಂತಾದುವೆಲ್ಲವೂ ಲೋಕವಿಲಕ್ಷಣ ಮತ್ತು ಅಭೇದ್ಯ . ಗಾಂಡಿವನದಲ್ಲಿರುವ ಹೆದೆಯೂ ಮಿಂಚಿನಂತೆ ಹೊಳೆಯುವಂತಹುದು.

ಗಾಂಡೀವಮಪ್ಯಾಸ ಕೃಷ್ಣಪ್ರಸಾದಾತ್
ಶಕ್ಯಂ ಧರ್ತುಂ ಪಾಂಡವಸ್ಯಾಪ್ಯಧಾರ್ಯಂ ।
ದೇವೈಶ್ಚ ತೈರ್ಬ್ರಹ್ಮವರಾದ್ಧೃತಂ ತತ್
ಬ್ರಹ್ಮೈವಸಾಕ್ಷಾತ್ ಪ್ರಭುರಸ್ಯ ಧಾರಣೇ ॥೨೩೦.೧

ಗಾಂಡೀವ ಬ್ರಹ್ಮನಿಗೆ ಹೊರತು ಅನ್ಯರಿಗೆ ಧರಿಸಲಾಗದಿದ್ದರೂ ಶ್ರೀಕೃಷ್ಣನ ಅನುಗ್ರಹದಿಂದ ಅರ್ಜುನನಿಗೆ ಧರಿಸಲು ಶಕ್ಯವಾಯಿತು. ರುದ್ರಾದಿ ದೇವತೆಗಳೂ ಬ್ರಹ್ಮನ ವರದಿಂದ ಅದನ್ನು ಧರಿಸಿದ್ದರು. ಸ್ವಶಕ್ತಿಯಿಂದ ಬ್ರಹ್ಮನೊಬ್ಬನೆ ಅದನ್ನು ಧರಿಸಲು ಸಮರ್ಥ.

ಇಂದ್ರಸ್ಯ ದತ್ತಶ್ಚ ವರಃ ಸ್ವಯಂಭುವಾ
ತೇನಾಪಿ ಪಾರ್ಥಸ್ಯ ಬಭೂವ ಧಾರ್ಯಂ ।
ಇಂದ್ರೋ ಹ್ಯಸೌ ಫಲ್ಗುನತ್ವೇನ ಜಾತ-
ಸ್ತತಃ ಸೋಽಸ್ತ್ರೈಃ ಶರಶಾಲಾಂ ಚಕಾರ ॥೨೩೧॥

ಇಂದ್ರನಿಗೆ ಬ್ರಹ್ಮ ವರನೀಡಿದ್ದ. ಅದರಿಂದಲೂ ಅರ್ಜುನನಿಗೆ ಗಾಂಡೀವವನ್ನು ಧರಿಸಲು ಶಕ್ಯವಾಯಿತು. ಏಕೆಂದರೆ ಇಂದ್ರನೇ ಅರ್ಜುನನಾಗಿ ಹುಟ್ಟಿದ್ದ. ಅದರಿಂದ ಅರ್ಜುನ ಅಸ್ತ್ರಗಳಿಂದ ಒಂದು ಭವನವನ್ನೇ ನಿರ್ಮಿಸಿದ.

★ ★ ★ ★

ಇನ್ನೂರ ಮೂವತ್ತೊಂದನೆಯ ಅಧ್ಯಾಯ

(ಕೃಷ್ಣಾರ್ಜುನರ ರಕ್ಷಣೆಯಲ್ಲಿ ಅಗ್ನಿಯಿಂದ ಖಾಂಡವ ದಹನ, ಸರ್ವಪ್ರಾಣಿಗಳ ವಿನಾಶ. ದೇವತಾಗಣದ ಜೊತೆಯಲ್ಲಿ ಬಂದು ಇಂದ್ರನ ಯುದ್ಧ ಮತ್ತು ಅರ್ಜುನನ ಪ್ರತೀಕಾರ.)

ವೈಶಂಪಾಯನಃ

ತೌ ರಥಾಭ್ಯಾಂ ಸುಯುಕ್ತಾಭ್ಯಾಂ ದಾವಸ್ಯೋಭಯತಃ ಸ್ಥಿತೌ ।
ದಿಕ್ಷು ಸರ್ವಾಸು ಭೂತಾನಾಂ ಚಕ್ರಾತೇ ಕದನಂ ತದಾ ॥೧॥

ಕೃಷ್ಣಾರ್ಜುನರಿಬ್ಬರೂ ತಮ್ಮ ಸನ್ನದ್ಧವಾದ ರಥಗಳಲ್ಲಿ ಖಾಂಡವವನದ ಎರಡೂ ಕಡೆಗಳಲ್ಲಿ ನಿಂತು ಎಲ್ಲ ದಿಕ್ಕುಗಳಲ್ಲಿಯೂ ಆಗ ಯುದ್ಧವನ್ನು ಮಾಡಿದರು.

ಯತ್ರಯತ್ರ ಹಿ ದೃಶ್ಯಂತೇ ಪ್ರಾಣಿನಃ ಖಾಂಡವಾಲಯಾಃ ।
ಪಲಾಯಂತಸ್ತತ್ರತತ್ರ ತೌ ವೀರೌ ಪರ್ಯಧಾವತಾಮ್ ॥೨॥

ಖಾಂಡವನಿವಾಸಿಗಳಾದ ಪ್ರಾಣಿಗಳು ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾ ಎಲ್ಲೆಲ್ಲಿ ಕಾಣುತ್ತವೆಯೋ, ಅಲ್ಲಲ್ಲಿಗೆ ಆ ವೀರರು ಧಾವಿಸಿದರು.

ಛಿದ್ರಂ ನ ಸ್ಮ ಪ್ರಪಶ್ಯಂತಿ ರಥಯೋರಾಶುವಿಕ್ರಮಾಃ ।
ಆವಿದ್ಧಾವಿವ ದೃಶ್ಯೇತೇ ರಥಿನೌ ತೌ ರಥೋತ್ತಮೇ ॥೩॥

ಮಹಾವಿಕ್ರಮಶಾಲಿಗಳಿಗೂ ಕೂಡ ಆ ರಥಗಳ ಮಧ್ಯೆ ವಿವರವು ಕಾಣಿಸುತ್ತಿರಲಿಲ್ಲ. ಆ ರಥೋತ್ತಮಗಳಲ್ಲಿ ಇದ್ದ ರಥಿಗಳಾದ ಅವರಿಬ್ಬರೂ ಪರಸ್ಪರವಾಗಿ ಸೇರಿಕೊಂಡಂತೆ ತೋರುತ್ತಿದ್ದರು.

ಖಾಂಡವೇ ದಹ್ಯಮಾನೇ ತು ಭೂತಾನ್ಯಥ ಸಹಸ್ರಶಃ ।
ಉತ್ಪೇತುರ್ಭೈರವಾನ್ ನಾದಾನ್ ವಿನದಂತೋ ದಿಶೋ ದಶ ॥೪॥

ಖಾಂಡವವು ದಹಿಸಲ್ಪಡುತ್ತಿರಲು ಅಲ್ಲಿದ್ದ ಪ್ರಾಣಿಗಳು ಸಹಸ್ರಸಂಖ್ಯೆಯಲ್ಲಿ ಭೈರವನಾದವನ್ನು ಮಾಡುತ್ತಾ ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುವಂತೆ ಚೀರುತ್ತಾ ಮೇಲಕ್ಕೆ ನೆಗೆದವು.

ದಗ್ಧೈಕದೇಶಾ ಬಹವೋ ನಿಷ್ಪಪ್ತಾಶ್ಚ ವಿಚೇತಸಃ ।
ಸ್ಫುಟಿತಾಕ್ಷಾ ವಿಶೀರ್ಣಾಶ್ಚ ವಿಪ್ಲುತಾಕ್ಷಾ ವಿಚೇತಸಃ ॥೫॥

ಅನೇಕ ಪ್ರಾಣಿಗಳ ದೇಹದ ಭಾಗಗಳು ಸುಟ್ಟುಹೋದವು. ಇನ್ನೂ ಇತರ ಪ್ರಾಣಿಗಳು ಅಗ್ನಿಯಿಂದ ಬೆಂದು ಪ್ರಜ್ಞಾಶೂನ್ಯವಾದವು. ಕೆಲವು ಪ್ರಾಣಿಗಳು ಕಣ್ಣುಗಳು ಸಿಡಿದು ಅಥವಾ ವಿಕಾರಹೊಂದಿ, ಅವಯವಗಳು ಬೇರೆಬೇರೆಯಾಗಿ ಪ್ರಜ್ಞೆಯನ್ನು ಕಳೆದುಕೊಂಡವು.

ಸಮಾಲಿಂಗ್ಯ ಸುತಾನನ್ಯೇ ಪಿತೄನ್ ಭ್ರಾತೄಂಸ್ತಥಾऽಪರೇ ।
ತ್ಯಕ್ತುಂ ನ ಶೇಕುಃ ಸ್ನೇಹೇನ ತತ್ರೈವ ನಿಧನಂ ಗತಾಃ ॥೬॥

ಇನ್ನೂ ಕೆಲವು ಪ್ರಾಣಿಗಳು ಮಕ್ಕಳನ್ನು, ತಂದೆಗಳನ್ನೂ, ಇನ್ನೂ ಕೆಲವು ಸೋದರರನ್ನೂ ಆಲಿಂಗಿಸಿ ಸ್ನೇಹದಿಂದ ಒಬ್ಬರನ್ನೊಬ್ಬರು ಬಿಡಲು ಸಾಧ್ಯವಾಗದೆ, ಅಲ್ಲಿಯೇ ನಿಧನವನ್ನು ಹೊಂದಿದವು.

ವಿಕೃತೈರ್ದಶನೈರನ್ಯೇ ಖಮುತ್ಪೇತುಃ ಸಹಸ್ರಶಃ ।
ತತ್ರತತ್ರ ವಿಧೂನ್ವಂತಃ ಪುನರಗ್ನೌ ಪ್ರಪೇದಿರೇ ॥೭॥

ವಿಕಾರವಾದ ಹಲ್ಲುಗಳನ್ನು ಹೊಂದಿ ಇನ್ನೂ ಕೆಲವು ಪ್ರಾಣಿಗಳು ಸಹಸ್ರಸಂಖ್ಯೆಯಲ್ಲಿ ಆಕಾಶಕ್ಕೆ ಹಾರಿದವು. ಅಲ್ಲಿಯೇ ಸ್ವಲ್ಪ ಒದ್ದಾಡಿ ಪುನಃ ಅಗ್ನಿಯೊಳಗೆ ಬಿದ್ದವು.

ದಗ್ಧಪಕ್ಷಾಕ್ಷಿಚರಣಾ ವಿವೇಷ್ಟಂತೋ ಮಹೀತಳೇ ।
ತತ್ರತತ್ರ ಪ್ರದೃಶ್ಯಂತೇ ವಿನಶ್ಯಂತಃ ಶರೀರಿಣಃ ॥೮॥

ತಮ್ಮ ಪಕ್ಷಗಳನ್ನೂ, ಕಣ್ಣುಗಳನ್ನೂ, ಪಾದಗಳನ್ನೂ ಸುಟ್ಟುಕೊಂಡು ಭೂಮಿಯ ಮೇಲೆ ಹೊರಳಾಡುತ್ತಾ ವಿನಾಶವನ್ನು ಹೊಂದುತ್ತಿರುವ ಪ್ರಾಣಿಗಳು ಅಲ್ಲಲ್ಲಿ ಕಂಡುಬಂದವು.

ಜಲಸ್ಥಾನೇಷು ತಪ್ತೇಷು ಕ್ವಥ್ಯಮಾನೇಷು ವಹ್ನಿನಾ ।
ಗತಸತ್ತ್ವಾಃ ಸ್ಮ ದೃಶ್ಯಂತೇ ಕೂರ್ಮಮತ್ಸ್ಯಾಃ ಸಹಸ್ರಶಃ ॥೯॥

ಜಲಾಶಯಗಳು ಬೆಂಕಿಯಿಂದ ಕಾದು ಕುದಿಯುತ್ತಿರಲು, ಅವುಗಳಲ್ಲಿದ್ದ ಮತ್ಸ್ಯಕೂರ್ಮಾದಿಗಳೂ ಸಹಸ್ರಸಂಖ್ಯೆಯಲ್ಲಿ ಪ್ರಾಣಗಳನ್ನು ಬಿಟ್ಟವು.

ಶರೀರೈಃ ಸಂಪ್ರದೀಪ್ತೈಶ್ಚ ದೇಹವಂತ ಇವಾಗ್ನಯಃ ।
ಅದೃಶ್ಯಂತ ವನೇ ತತ್ರ ಪ್ರಾಣಿನಃ ಪ್ರಾಣಿಸಂಕ್ಷಯೇ ॥೧೦॥

ಪ್ರಾಣಿಸಂಕ್ಷಯ ಉಂಟಾಗುವ ಆ ಕಾಲದಲ್ಲಿ ಪ್ರಾಣಿಗಳು ಹೊತ್ತಿ ಉರಿಯುತ್ತಿರುವ ತಮ್ಮ ದೇಹಗಳಿಂದ ಓಡಿ ದೇಹವುಳ್ಳ ಅಗ್ನಿಯಂತೆ ತೋರುತ್ತಿದ್ದವು.

ತಾಂಸ್ತಥೋತ್ಪತತಃ ಪಾರ್ಥಃ ಶರೈಃ ಸಂಛಿದ್ಯ ಖಂಡಶಃ ।
ದೀಪ್ಯಮಾನೇ ತತಃ ಪ್ರಾಸ್ಯತ್ ಸಹಸ್ರಂ ಕೃಷ್ಣವರ್ತ್ಮನಿ ॥೧೧॥

ಹಾಗೆ ಮೇಲೆ ಹಾರುವ ಪ್ರಾಣಿಗಳನ್ನು ಅರ್ಜುನನು ತನ್ನ ಬಾಣಗಳಿಂದ ಚೂರುಚೂರಾಗಿ ಕತ್ತರಿಸಿ ಉರಿಯುತ್ತಿರುವ ಅಗ್ನಿಯಲ್ಲಿ ಸಹಸ್ರಸಂಖ್ಯೆಯಲ್ಲಿ ಹಾಕುತ್ತಿದ್ದನು.

ತೇ ಶರಾಚಿತಸರ್ವಾಂಗಾ ನಿನದಂತೋ ಮಹಾರವಾನ್ ।
ಊರ್ಧ್ವಮುತ್ಪತ್ಯ ವೇಗೇನ ನಿಪೇತುಃ ಪಾವಕೇ ಪುನಃ ॥೧೨॥

ಮೈಯಲ್ಲೆಲ್ಲಾ ಬಾಣಗಳು ನೆಟ್ಟು, ಭೈರವನಾದಗಳನ್ನು ಮಾಡುತ್ತಾ, ಮೇಲ್ಮುಖವಾಗಿ ನೆಗೆದು ಪುನಃ ವೇಗದಿಂದ ಕೆಳಮುಖವಾಗಿ ಅಗ್ನಿಯಲ್ಲಿ ಬೀಳುತ್ತಿದ್ದವು.

ಶರೈರಭ್ಯಾಹತಾನಾಂ ಚ ದಹ್ಯತಾಂ ಚ ವನೌಕಸಾಮ್ ।
ವಿರಾವಃ ಶ್ರೂಯತೇ ಹ್ಯಸ್ಮಿನ್ ಸಮುದ್ರಸ್ಯೇವ ಮಥ್ಯತಃ ॥೧೩॥

ಬಾಣಗಳಿಂದ ಹೊಡೆಯಲ್ಪಟ್ಟು, ಅಗ್ನಿಯಿಂದ ದಹಿಸಲ್ಪಡುವ ಆ ಪ್ರಾಣಿಗಳ ಆರ್ತನಾದವು ಮಥಿಸಲ್ಪಡುವ ಸಮುದ್ರದ ಘೋಷದಂತೆ ಕೇಳಿಬರುತ್ತಿತ್ತು.

ವಹ್ನೇಶ್ಚಾಪಿ ಪ್ರವೃದ್ಧಸ್ಯ ಸಮುತ್ಪೇತುರ್ಮಹಾರ್ಚಿಷಃ ।
ಜನಯಾಮಾಸುರುದ್ವೇಗಂ ಸುಮಹಾಂತಂ ದಿವೌಕಸಾಮ್ ॥೧೪॥

ಚೆನ್ನಾಗಿ ಅಭಿವೃದ್ಧಿಯನ್ನು ಹೊಂದಿದ ಅಗ್ನಿಯ ದೊಡ್ಡದೊಡ್ಡ ಜ್ವಾಲೆಗಳು ಸ್ವರ್ಗವಾಸಿಗಳಾದ ದೇವತೆಗಳಿಗೆ ದೊಡ್ಡಭಯವನ್ನುಂಟು ಮಾಡಿದವು.

ತತೋ ಜಗ್ಮುರ್ಮಹಾತ್ಮಾನಃ ಸರ್ವ ಏವ ದಿವೌಕಸಃ ।
ಶರಣಂ ದೇವರಾಜಂ ತಂ ಸಹಸ್ರಾಕ್ಷಂ ಪುರಂದರಮ್ ॥೧೫॥

ಆಗ ಮಹಾನುಭಾವರಾದ ದೇವತೆಗಳೆಲ್ಲರೂ ದೇವರಾಜನಾದ, ಸಹಸ್ರಾಕ್ಷನಾದ ಪುರಂದರನನ್ನು ಶರಣುಹೊಂದಿದರು.

ದೇವಾಃ

ಕಿಮಿದಂ ಮಾನವಾಃ ಸರ್ವೇ ದಹ್ಯಂತೇ ಕೃಷ್ಣವರ್ತ್ಮನಾ ।
ಕಚ್ಚಿನ್ನ ಸಂಕ್ಷಯಃ ಪ್ರಾಪ್ತೋ ಲೋಕಾನಾಮಮರೇಶ್ವರ ॥೧೬॥

ಇದೇನು ಎಲ್ಲ ಮಾನವರೂ ಅಗ್ನಿಯಿಂದ ದಹಿಸಲ್ಪಡುತ್ತಿದ್ದಾರೆ? ದೇವರಾಜನೇ, ಲೋಕದ ವಿನಾಶವೇನೂ ಪ್ರಾಪ್ತವಾಗಿಲ್ಲವಷ್ಟೇ.

ವೈಶಂಪಾಯನಃ

ತಚ್ಛ್ರುತ್ವಾ ವೃತ್ರಹಾ ತೇಭ್ಯಃ ಸ್ವಯಮೇವಾನ್ವವೇಕ್ಷ್ಯ ಚ ।
ಖಾಂಡವಸ್ಯ ವಿಮೋಕ್ಷಾರ್ಥಂ ಪ್ರಯಯೌ ಹರಿವಾಹನಃ ॥೧೭॥

ಅದನ್ನು ಕೇಳಿದ ವೃತ್ರಹಂತ್ರುವಾದ ಇಂದ್ರನು ತಾನೇ ಸ್ವತಃ ನೋಡಿ ಖಾಂಡವವನ್ನು ವಿಮೋಚನೆಗೊಳಿಸಲು ಹರ್ಯಶ್ವಗಳಿಂದ ಯುಕ್ತವಾದ ರಥದಲ್ಲಿ ಹೊರಟನು.

ಮಹತಾ ಮೇಘಜಾಲೇನ ನಾನಾರೂಪೇಣ ವಜ್ರಭೃತ್ ।
ಆಕಾಶಂ ತಮಸಾऽऽಸ್ತೀರ್ಯ ಪ್ರಯಯಾವಮರೇಶ್ವರಃ ॥೧೮॥

ವಜ್ರಧರನಾದ, ದೇವರಾಜನಾದ, ಇಂದ್ರನು ನಾನಾರೂಪಗಳನ್ನು ಹೊಂದಿದ ಮೇಘಗಳ ದೊಡ್ಡಸಮೂಹದಿಂದ ಆಕಾಶವನ್ನು ಮುಚ್ಚಿ ಕತ್ತಲೆಯನ್ನು ಉಂಟುಮಾಡಿ ಮುಂದೆ ನಡೆದನು.

ತತ್ರಾಕ್ಷಮಾತ್ರಾ ವಿಸೃಜನ್ ಧಾರಾಃ ಶತಸಹಸ್ರಶಃ ।
ಅಭ್ಯವರ್ಷತ್ ಸಹಸ್ರಾಕ್ಷಃ ಪಾವಕಂ ಖಾಂಡವಂ ಪ್ರತಿ ॥೧೯॥

ಅವನು ಒನಕೆಯ ಪ್ರಮಾಣದ ಮಳೆಯಧಾರಗಳನ್ನು, ನೂರಾರು ಸಾವಿರ ಸಂಖ್ಯೆಯಲ್ಲಿ ಸೃಷ್ಟಿಸುತ್ತಾ, ಖಾಂಡವವನ್ನು ದಹಿಸುವ ಅಗ್ನಿಯ ಮೇಲೆ ಸುರಿಸಿದನು.

ಅಸಂಪ್ರಾಪ್ತಾಸ್ತು ತಾ ಧಾರಾಸ್ತೇಜಸಾ ಜಾತವೇದಸಃ ।
ಖ ಏವ ಸಮಶುಷ್ಯಂತ ನ ಕಾಶ್ಚಿತ್ ಪಾವಕಂ ಗತಾಃ ॥೨೦॥

ಆ ಮಳೆಯಧಾರಗಳು ಅಗ್ನಿಯ ಶಾಖದಿಂದ ಆಕಾಶದಲ್ಲೇ ಒಣಗಿಹೋದವು. ಯಾವ ಧಾರೆಯೂ ಅಗ್ನಿಯವರೆಗೆ ಬರಲಿಲ್ಲ.

ತತೋ ನಮುಚಿಹಾ ಕ್ರುದ್ಧೋ ಭೃಶಮರ್ಚಿಷ್ಮತಸ್ತದಾ ।
ಪುನರೇವಾತಿವರ್ಷೇಣ ವವರ್ಷ ಬಲವೃತ್ರಹಾ ॥೨೧॥

ಅನಂತರ ನಮುಚಿಸಂಹಾರಿಯೂ, ಬಲವೃತ್ರಸಂಹಾರಿಯೂ ಆದ ಇಂದ್ರನು ಅಗ್ನಿಯ ಮೇಲೆ ಕೋಪಗೊಂಡು ಪುನಃ ದೊಡ್ಡಮಳೆಯನ್ನು ಸುರಿಸಿದನು.

ಅರ್ಚಿರ್ಜ್ವಾಲಾಭಿಸಂಬದ್ಧಂ ಸ್ತನಯಿತ್ನುಸುಘೋಷವತ್ ।
ಬಭೂವ ತದ್ವನಂ ಘೋರಂ ಧೂಮವಿದ್ಯುತ್ಸಮಾಕುಲಮ್ ॥೨೨॥

ಅಗ್ನಿಯ ಜ್ವಾಲೆಗಳಿಂದಲೂ, ಮೇಘದ ಗರ್ಜನೆಯಿಂದಲೂ ಕೂಡಿದ ಆ ಘೋರವಾದ ವನವು ಹೊಗೆ ಮತ್ತು ಮಿಂಚುಗಳಿಂದ ತುಂಬಿಹೋಯಿತು.

ತಸ್ಯಾಭಿವರ್ಷತೋ ವಾರಿ ಖಾಂಡವಂ ಪ್ರತ್ಯವಾರಯತ್ ।
ಶರವರ್ಷೇಣ ಬೀಭತ್ಸುರುತ್ತಮಾಸ್ತ್ರಾಣಿ ದರ್ಶಯನ್ ॥೨೩॥

ಇಂದ್ರನು ಖಾಂಡವವನದ ಮೇಲೆ ಹಾಗೆ ಮಳೆಯನ್ನು ಸುರಿಸುತ್ತಿರಲು ಅರ್ಜುನನು ತನ್ನ ಉತ್ತಮಾಸ್ತ್ರಗಳನ್ನು ತೋರಿಸುತ್ತಾ, ತನ್ನ ಬಾಣಗಳ ಪ್ರಯೋಗದಿಂದ ಆ ಮಳೆಯ ಹನಿಗಳು ಖಾಂಡವವನಕ್ಕೆ ಬರದಂತೆ ತಡೆದನು.

ಶರೈಃ ಸಮಂತತಃ ಸರ್ವಂ ಖಾಂಡವಂ ಚಾಪಿ ಪಾಂಡವಃ ।
ಛಾದಯಾಮಾಸ ತದ್ವರ್ಷಮಪಕೃತ್ಯ ತತೋ ವನಾತ್ ॥೨೪॥

ಅರ್ಜುನನು ಖಾಂಡವವನವನ್ನು ಬಾಣಗಳಿಂದ ಸಂಪೂರ್ಣವಾಗಿ ಆಚ್ಛಾದಿಸಿ, ಆ ಮಳೆಯನ್ನು ತಡೆದು ಆ ಮಳೆಯು ಖಾಂಡವವನಕ್ಕೆ ಬರದಂತೆ ತಡೆದನು.

ನ ಚ ಸ್ಮ ಕಿಂಚಿಚ್ಛಕ್ನೋತಿ ಭೂತಂ ನಿಶ್ಚರಿತುಂ ತತಃ ।
ಸಂಸ್ತೀರ್ಯಮಾಣೈಃ ಖಗಮೈರಸ್ಯತಾ ಸವ್ಯಸಾಚಿನಾ ॥೨೫॥

ಅರ್ಜುನನು ಆಕಾಶದಲ್ಲಿ ಹರಡುತ್ತಿದ್ದ ಬಾಣಗಳ ನಿಮಿತ್ತದಿಂದಾಗಿ ಯಾವ ಪ್ರಾಣಿಯೂ ಅಲ್ಲಿಂದ ಚಲಿಸಲು ಸಾಧ್ಯವಾಗಲಿಲ್ಲ.

ತಕ್ಷಕಸ್ತು ನ ತತ್ರಾಸೀನ್ನಾಗರಾಜೋ ಮಹಾಬಲಃ ।
ದಹ್ಯಮಾನೇ ತು ತಸ್ಮಿಂಸ್ತು ಕುರುಕ್ಷೇತ್ರೇಽಭವತ್ ತದಾ ॥೨೬॥

ಖಾಂಡವವನವು ದಹಿಸಲ್ಪಡುತ್ತಿರುವಾಗ ಮಹಾಬಲನಾದ ನಾಗರಾಜನಾದ ತಕ್ಷಕನು ಅಲ್ಲಿ ಇರಲಿಲ್ಲ. ಅವನು ಆಗ ಕುರುಕ್ಷೇತ್ರಕ್ಕೆ ಹೋಗಿದ್ದನು.

ಇದೇನು ಎಲ್ಲ ಮಾನವರೂ ಅಗ್ನಿಯಿಂದ ದಹಿಸಲ್ಪಡುತ್ತಿದ್ದಾರೆ? ದೇವರಾಜನೇ, ಲೋಕದ ವಿನಾಶವೇನೂ ಪ್ರಾಪ್ತವಾಗಿಲ್ಲವಷ್ಟೇ.

ವೈಶಂಪಾಯನಃ

ತಚ್ಛ್ರುತ್ವಾ ವೃತ್ರಹಾ ತೇಭ್ಯಃ ಸ್ವಯಮೇವಾನ್ವವೇಕ್ಷ್ಯ ಚ।
ಖಾಂಡವಸ್ಯ ವಿಮೋಕ್ಷಾರ್ಥಂ ಪ್ರಯಯೌ ಹರಿವಾಹನಃ ॥೧೭॥

ಅದನ್ನು ಕೇಳಿದ ವೃತ್ರಹಂತ್ರುವಾದ ಇಂದ್ರನು ತಾನೇ ಸ್ವತಃ ನೋಡಿ ಖಾಂಡವವನ್ನು ವಿಮೋಚನೆಗೊಳಿಸಲು ಹರ್ಯಶ್ವಗಳಿಂದ ಯುಕ್ತವಾದ ರಥದಲ್ಲಿ ಹೊರಟನು.

ಮಹತಾ ಮೇಘಜಾಲೇನ ನಾನಾರೂಪೇಣ ವಜ್ರಭೃತ್ ।
ಆಕಾಶಂ ತಮಸಾऽऽಸ್ತೀರ್ಯ ಪ್ರಯಯಾವಮರೇಶ್ವರಃ ॥೧೮॥

ವಜ್ರಧರನಾದ, ದೇವರಾಜನಾದ, ಇಂದ್ರನು ನಾನಾರೂಪಗಳನ್ನು ಹೊಂದಿದ ಮೇಘಗಳ ದೊಡ್ಡಸಮೂಹದಿಂದ ಆಕಾಶವನ್ನು ಮುಚ್ಚಿ ಕತ್ತಲೆಯನ್ನು ಉಂಟುಮಾಡಿ ಮುಂದೆ ನಡೆದನು.

ತತ್ರಾಕ್ಷಮಾತ್ರಾ ವಿಸೃಜನ್ ಧಾರಾಃ ಶತಸಹಸ್ರಶಃ ।
ಅಭ್ಯವರ್ಷತ್ ಸಹಸ್ರಾಕ್ಷಃ ಪಾವಕಂ ಖಾಂಡವಂ ಪ್ರತಿ ॥೧೯॥

ಅವನು ಒನಕೆಯ ಪ್ರಮಾಣದ ಮಳೆಯಧಾರಗಳನ್ನು, ನೂರಾರು ಸಾವಿರ ಸಂಖ್ಯೆಯಲ್ಲಿ ಸೃಷ್ಟಿಸುತ್ತಾ, ಖಾಂಡವವನ್ನು ದಹಿಸುವ ಅಗ್ನಿಯ ಮೇಲೆ ಸುರಿಸಿದನು.

ಅಸಂಪ್ರಾಪ್ತಾಸ್ತು ತಾ ಧಾರಾಸ್ತೇಜಸಾ ಜಾತವೇದಸಃ ।
ಖ ಏವ ಸಮಶುಷ್ಯಂತ ನ ಕಾಶ್ಚಿತ್ ಪಾವಕಂ ಗತಾಃ ॥೨೦॥

ಆ ಮಳೆಯಧಾರಗಳು ಅಗ್ನಿಯ ಶಾಖದಿಂದ ಆಕಾಶದಲ್ಲೇ ಒಣಗಿಹೋದವು. ಯಾವ ಧಾರೆಯೂ ಅಗ್ನಿಯವರೆಗೆ ಬರಲಿಲ್ಲ.

ತತೋ ನಮುಚಿಹಾ ಕ್ರುದ್ಧೋ ಭೃಶಮರ್ಚಿಷ್ಮತಸ್ತದಾ ।
ಪುನರೇವಾತಿವರ್ಷೇಣ ವವರ್ಷ ಬಲವೃತ್ರಹಾ ॥೨೧॥

ಅನಂತರ ನಮುಚಿಸಂಹಾರಿಯೂ, ಬಲವೃತ್ರಸಂಹಾರಿಯೂ ಆದ ಇಂದ್ರನು ಅಗ್ನಿಯ ಮೇಲೆ ಕೋಪಗೊಂಡು ಪುನಃ ದೊಡ್ಡಮಳೆಯನ್ನು ಸುರಿಸಿದನು.

ಅರ್ಚಿರ್ಜ್ವಾಲಾಭಿಸಂಬದ್ಧಂ ಸ್ತನಯಿತ್ನುಸುಘೋಷವತ್ ।
ಬಭೂವ ತದ್ವನಂ ಘೋರಂ ಧೂಮವಿದ್ಯುತ್ಸಮಾಕುಲಮ್ ॥೨೨॥

ಅಗ್ನಿಯ ಜ್ವಾಲೆಗಳಿಂದಲೂ, ಮೇಘದ ಗರ್ಜನೆಯಿಂದಲೂ ಕೂಡಿದ ಆ ಘೋರವಾದ ವನವು ಹೊಗೆ ಮತ್ತು ಮಿಂಚುಗಳಿಂದ ತುಂಬಿಹೋಯಿತು.

ತಸ್ಯಾಭಿವರ್ಷತೋ ವಾರಿ ಖಾಂಡವಂ ಪ್ರತ್ಯವಾರಯತ್ ।
ಶರವರ್ಷೇಣ ಬೀಭತ್ಸುರುತ್ತಮಾಸ್ತ್ರಾಣಿ ದರ್ಶಯನ್ ॥೨೩॥

ಇಂದ್ರನು ಖಾಂಡವವನದ ಮೇಲೆ ಹಾಗೆ ಮಳೆಯನ್ನು ಸುರಿಸುತ್ತಿರಲು ಅರ್ಜುನನು ತನ್ನ ಉತ್ತಮಾಸ್ತ್ರಗಳನ್ನು ತೋರಿಸುತ್ತಾ , ತನ್ನ ಬಾಣಗಳ ಪ್ರಯೋಗದಿಂದ ಆ ಮಳೆಯ ಹನಿಗಳು ಖಾಂಡವವನಕ್ಕೆ ಬರದಂತೆ ತಡೆದನು.

ಶರೈಃ ಸಮಂತತಃ ಸರ್ವಂ ಖಾಂಡವಂ ಚಾಪಿ ಪಾಂಡವಃ ।
ಛಾದಯಾಮಾಸ ತದ್ವರ್ಷಮಪಕೃತ್ಯ ತತೋ ವನಾತ್ ॥೨೪॥

ಅರ್ಜುನನು ಖಾಂಡವವನವನ್ನು ಬಾಣಗಳಿಂದ ಸಂಪೂರ್ಣವಾಗಿ ಆಚ್ಛಾದಿಸಿ, ಆ ಮಳೆಯನ್ನು ತಡೆದು ಆ ಮಳೆಯು ಖಾಂಡವವನಕ್ಕೆ ಬರದಂತೆ ತಡೆದನು.

ನ ಚ ಸ್ಮ ಕಿಂಚಿಚ್ಚಕ್ನೋತಿ ಭೂತಂ ನಿಶ್ಚರಿತುಂ ತತಃ ।
ಸಂಸ್ತೀರ್ಯಮಾಣೈಃ ಖಗಮೈರಸ್ಯತಾ ಸವ್ಯಸಾಚಿನಾ ॥೨೫॥

ಅರ್ಜುನನು ಆಕಾಶದಲ್ಲಿ ಹರಡುತ್ತಿದ್ದ ಬಾಣಗಳ ನಿಮಿತ್ತದಿಂದಾಗಿ ಯಾವ ಪ್ರಾಣಿಯೂ ಅಲ್ಲಿಂದ ಚಲಿಸಲು ಸಾಧ್ಯವಾಗಲಿಲ್ಲ.

ತಕ್ಷಕಸ್ತು ನ ತತ್ರಾಸೀನ್ನಾಗರಾಜೋ ಮಹಾಬಲಃ ।
ದಹ್ಯಮಾನೇ ತು ತಸ್ಮಿಂಸ್ತು ಕುರುಕ್ಷೇತ್ರೇಽಭವತ್ ತದಾ ॥೨೬॥

ಖಾಂಡವವನವು ದಹಿಸಲ್ಪಡುತ್ತಿರುವಾಗ ಮಹಾಬಲನಾದ ನಾಗರಾಜನಾದ ತಕ್ಷಕನು ಅಲ್ಲಿ ಇರಲಿಲ್ಲ. ಅವನು ಆಗ ಕುರುಕ್ಷೇತ್ರಕ್ಕೆ ಹೋಗಿದ್ದನು.

ಅಶ್ವಸೇನಸ್ತು ತತ್ರಾಸೀತ್ ತಕ್ಷಕಸ್ಯ ಸುತೋ ಬಲೀ ।
ಸ ಯತ್ನಮಕರೋತ್ ತೀವ್ರಂ ಮೋಕ್ಷಾರ್ಥಂ ಹವ್ಯವಾಹನಾತ್ ॥೨೭॥

ತಕ್ಷಕನ ಮಗನಾದ ಬಲಿಷ್ಠನಾದ ಅಶ್ವಸೇನನು ಅಲ್ಲಿಯೇ ಇದ್ದನು. ಅವನು ಅಗ್ನಿಯಿಂದ ಪಾರಾಗಲು ಬಹಳ ಪ್ರಯತ್ನವನ್ನು ಮಾಡಿದನು.

ನ ಶಶಾಕ ಸ ನಿರ್ಗಂತುಂ ಕೌಂತೇಯಶರಪೀಡಿತಃ ।
ಮೋಕ್ಷಯಾಮಾಸ ತಂ ಮಾತಾ ನಿಗೀರ್ಯ ಭುಜಗಾತ್ಮಜಾ ॥೨೮॥

ಅರ್ಜುನನ ಬಾಣಗಳಿಂದ ಪೀಡಿತನಾದ ಅವನು ಅಲ್ಲಿಂದ ಹೊರಗೆಹೋಗಲು ಸಾಧ್ಯವಾಗಲಿಲ್ಲ. ಅವನ ತಾಯಿಯಾದ ಭುಜಗಕನ್ಯೆಯು ಅವನನ್ನು ನುಂಗಿ ಅಗ್ನಿಯಿಂದ ಪಾರುಮಾಡಿದಳು.

ತಸ್ಯ ಪೂರ್ವಂ ಶಿರೋ ಗ್ರಸ್ತಂ ಪುಚ್ಛಮಸ್ಯ ನಿಗೀರ್ಯತೇ ।
ಊರ್ಧ್ವಮತ್ಯಕ್ರಮೀತ್ ಸಾ ತು ಪನ್ನಗೀ ಪುತ್ರಗೃದ್ಧಿನೀ ॥೨೯॥

ಅವಳು ಅವನನ್ನು ತಲೆಯ ಭಾಗದಿಂದ ನುಂಗಲು ಪ್ರಾರಂಭಿಸಿ ಪುಚ್ಛವನ್ನು ನುಂಗುತ್ತಾ ಮಗನನ್ನು ಉಳಿಸುವ ಆಸೆಯಿಂದ ಅಂತರಿಕ್ಷಕ್ಕೆ ನೆಗೆದಳು.

ತಸ್ಯಾಸ್ತೀಕ್ಷ್ಣೇನ ಭಲ್ಲೇನ ಪೃಥುಧಾರೇಣ ಪಾಂಡವಃ ।
ಶಿರಶ್ಚಿಚ್ಛೇದ ಗಚ್ಛಂತ್ಯಾಸ್ತಾಮಪಶ್ಯತ್ ಸುರೇಶ್ವರಃ ॥೩೦॥

ಅರ್ಜುನನು ಹರಿತವಾದ ಅಂಚುಳ್ಳ ಭಲ್ಲದಿಂದ ಅವಳ ತಲೆಯನ್ನು ಕತ್ತರಿಸಿದನು. ಅವಳು ಮೇಲಕ್ಕೆ ಹಾರಿದುದನ್ನು ಸುರೇಶ್ವರನಾದ ಇಂದ್ರನು ನೋಡಿದನು.

ತಂ ಮುಮೋಚಯಿಷುರ್ವಜ್ರೀ ವಾತವರ್ಷೇಣ ಪಾಂಡವಮ್ ।
ಮೋಹಯಾಮಾಸ ತತ್ಕಾಲೇ ಹ್ಯಶ್ವಸೇನಸ್ತ್ವಮುಚ್ಯತ ॥೩೧॥

ವಜ್ರಧರನಾದ ಇಂದ್ರನು ಅಶ್ವಸೇನನ ಮಾತೆಯನ್ನು ಪಾರುಮಾಡುವ ಉದ್ದೇಶದಿಂದ ವಾತವರ್ಷಗಳಿಂದ ಅರ್ಜುನನಿಗೆ ಮೋಹವುಂಟಾಗುವಂತೆ ಮಾಡಿದನು. ಈ ಮಧ್ಯದಲ್ಲಿ ಅಶ್ವಸೇನನು ಅಗ್ನಿಯಿಂದ ತಪ್ಪಿಸಿಕೊಂಡನು.

ತಾಂ ಚ ಮಾಯಾಂ ತದಾ ದೃಷ್ಟ್ವಾ ಘೋರಾಂ ನಾಗೇನ ವಂಚಿತಃ ।
ದ್ವಿಧಾ ತ್ರಿಧಾ ಚ ಚಿಚ್ಛೇದ ಖಗತಾನ್ ಭರತರ್ಷಭ ॥೩೨॥

ಭರತಶ್ರೇಷ್ಠನೇ, ಅರ್ಜುನನು ಘೋರವಾದ ಆ ವಂಚನೆಯನ್ನು ನೋಡಿ, ಅಶ್ವಸೇನನಿಂದ ವಂಚಿತನಾಗಿ ಆಕಾಶದಲ್ಲಿದ್ದ ಪ್ರಾಣಿಗಳನ್ನು ಎರಡುಮೂರು ಭಾಗಗಳಾಗಿ ಕತ್ತರಿಸಿದನು.

ಶಶಾಪ ತು ತತಃ ಕ್ರುದ್ಧೋ ಬೀಭತ್ಸುಂ ಜಿಹ್ಮಗಾಮಿನೀ ।
ಪಾವಕೋ ವಾಸುದೇವಶ್ಚಾಪ್ಯಪ್ರತಿಷ್ಠೌ ಭವತ್ವಿಹ ॥೩೩॥

ಕುಟಲಗತಿಯುಳ್ಳ ಸರ್ಪವು ಶೋಕದಿಂದ ಅರ್ಜುನನನ್ನು ಕುರಿತು ಅಗ್ನಿಯೂ, ವಾಸುದೇವನೂ ಮತ್ತು ನೀನೂ ಸಹ ಈ ಲೋಕದಲ್ಲಿ ಸ್ಥಿತಿಯನ್ನು ಹೊಂದುವುದು ಬೇಡ ಎಂದು ಶಾಪವನ್ನು ಕೊಟ್ಟಿತು.

(ತಾತ್ಪರ್ಯನಿರ್ಣಯದ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಅರ್ಜುನನೇ ಸರ್ಪಕ್ಕೆ ಶಾಪಕೊಟ್ಟಂತಿದೆ. ಇಲ್ಲಿ ಲಕ್ಷಾಲಂಕಾರವು ಪ್ರಕ್ಷಿಪ್ತದಂತಿದೆ).

ತತೋ ಜಿಷ್ಣುಃ ಸಹಸ್ರಾಕ್ಷಂ ಖೇ ವಿತತ್ಯಾಶುಗೈಃ ಶರೈಃ ।
ಯೋಧಯಾಮಾಸ ಸಂಕ್ರುದ್ಧೋ ವಂಚನಾಂ ತಾಮನುಸ್ಮರನ್ ॥೩೪॥

ಆಗ ಅರ್ಜುನನು, ಇಂದ್ರನು ಮಾಡಿದ ಆ ವಂಚನೆಯನ್ನು ಸ್ಮರಿಸಿ, ಅವನ ಜೊತೆಯಲ್ಲಿ ಶುಕ್ರವಾದ ಬಾಣಗಳ ಮಳೆಯನ್ನು ಕರೆದು ಕ್ರೋಧದಿಂದ ಯುದ್ಧಮಾಡಿದನು.

ದೇವರಾಜೋಽಪಿ ತಂ ದೃಷ್ಟ್ವಾ ಸಂರಬ್ಧಮತಿಫಲ್ಗುನಮ್ ।
ದಿವ್ಯಾಸ್ತ್ರಂ ವ್ಯಸೃಜದ್ ಯತ್ ತತಾನಾಖಿಲಾ ದಿಶಃ ॥೩೫॥

ದೇವರಾಜನಾದ ಇಂದ್ರನೂ ಕೂಡ, ಕ್ರುದ್ಧನಾದ ಅರ್ಜುನನನ್ನು ನೋಡಿ ಅರ್ಜುನನನ್ನು ಮೀರಿಸುವ ಉದ್ದೇಶದಿಂದ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಎಲ್ಲ ದಿಕ್ಕುಗಳನ್ನೂ ಬಾಣಗಳಿಂದ ತುಂಬಿದನು.

ತತೋ ವಾಯುರ್ಮಹಾಘೋರಃ ಕ್ಷೋಭಯಾಮಾಸ ಸಾಗರಾನ್ ।
ವಿಯತ್ಸ್ಥೇ ಜನಯನ್ ಮೇಘಾನ್ ಜಲಧಾರಮುಚೋಽತುಲಾನ್॥೩೬॥

ಆಗ ಮಹಾಘೋರವಾದ ವಾಯುವು ಬೀಸಿ ಸಾಗರವನ್ನು ಅಲ್ಲೋಲಕಲ್ಲೋಲ ಮಾಡಿ, ಆಕಾಶದಲ್ಲಿ ಮೇಘಗಳನ್ನು ಉಂಟುಮಾಡಿ ಅಸದೃಶವಾದ ಆ ಮೇಘಗಳು ಮಳೆಯನ್ನು ಸುರಿಸುವಂತೆ ಮಾಡಿದನು.

ತದ್ವಿಘಾತಾರ್ಥಮಸೃಜದರ್ಜುನೋಽಪ್ಯಸ್ತ್ರಮದ್ಭುತಮ್ ।
ವಾಯವ್ಯಮೇವಾಭಿಮಂತ್ರ್ಯ ಅಸ್ತ್ರಂ ಪ್ರತಿ ವಿಶಾರದಃ ॥೩೭॥

ಅಸ್ತ್ರವಿಶಾರದನಾದ ಅರ್ಜುನನು ಆ ಅಸ್ತ್ರಕ್ಕೆ ಪ್ರತೀಕಾರವನ್ನು ಮಾಡಲು ತಾನೂ ಪುನಃ ವಾಯವ್ಯಾಸ್ತ್ರವನ್ನೇ ಅಭಿಮಂತ್ರಿಸಿ ಪ್ರಯೋಗಿಸಿದನು.

ತೇನೇಂದ್ರಾಶನಿಮೇಘಾನಾಂ ವೀರ್ಯೌಜಸ್ತದ್ ವಿನಾಶಿತಮ್ ।.
ಜಲಧಾರಾಶ್ಚ ತಾಃ ಶೋಷಂ ಜಗ್ಮುರ್ನೇಶುಶ್ಚ ವಿದ್ಯುತಃ ॥೩೮॥

ಆಗ ಅರ್ಜುನನು ಪ್ರಯೋಗಮಾಡಿದ ವಾಯವ್ಯಾಸ್ತ್ರದಿಂದ ಇಂದ್ರನು ಸೃಷ್ಟಿಮಾಡಿದ ಮೇಘಗಳ ಮತ್ತು ಸಿಡಿಲುಗಳ ಆರ್ಭಟವು ವಿನಾಶವನ್ನು ಹೊಂದಿತು. ಜಲಧಾರೆಗಳೆಲ್ಲಾ ಒಣಗಿಹೋದವು. ಮಿಂಚುಗಳು ಮಾಯವಾದವು.

ಕ್ಷಣೇನ ಚಾಭವದ್ ವ್ಯೋಮ ಸಂಪ್ರಶಾಂತರಜಸ್ತಮಃ ।
ಸುಖಶೀತಾನಿಲವಹಂ ಪ್ರಕೃತಿಸ್ಥಾರ್ಕಮಂಡಲಮ್ ॥೩೯॥

ಒಂದು ಕ್ಷಣದಲ್ಲಿ ಆಕಾಶವು ಧೂಳಿನಿಂದಲೂ, ಕತ್ತಲಿನಿಂದಲೂ ಮುಕ್ತವಾಗಿ, ಪ್ರಶಾಂತವಾಯಿತು. ಸುಖಶೀತ ಅನಿಲವು ಬೀಸಿತು. ಸೂರ್ಯಮಂಡಲವು ಮೊದಲಿನಂತೆಯೇ ಬೆಳಗಿತು.

ನಿಷ್ಪ್ರತೀಕಾರಹೃಷ್ಟಶ್ಚ ಹುತಭುಗ್ವಿಧಾಕೃತಿಃ ।
ಪ್ರಜಜ್ವಾಲಾಥ ಸೋಽರ್ಚಿಷ್ಮಾನ್ ಸ್ವನಾದ್ಯೈಃ ಪೂರಯನ್ ದಿಶಃ ॥೪೦॥

ಪ್ರತೀಕಾರವನ್ನು ಮಾಡುವವರು ಯಾರೂ ಇಲ್ಲದಿದುರಿಂದ ಸಂತೋಷಗೊಂಡ ಅಗ್ನಿಯು ವಿವಿಧಾಕೃತಿಗಳನ್ನು ತಾಳಿ, ಮಹಾಜ್ವಾಲೆಗಳನ್ನು ಹೊಂದಿ ತನ್ನ ನಾದಗಳಿಂದ ದಿಕ್ಕುಗಳನ್ನು ತುಂಬುತ್ತಾ ಪ್ರಜ್ವಲಿಸಿದನು.

ಕೃಷ್ಣಾಭ್ಯಾಂ ರಕ್ಷಿತಂ ದೃಷ್ಟ್ವಾ ತಂ ಚ ದಾವಮಹಂಕೃತಾಃ ।
ಸಮುತ್ಪೇತುರಥಾಕಾಶಂ ಸುಪರ್ಣಾದ್ಯಾಃ ಪತತ್ರಿಣಃ ॥೪೧॥

ಖಾಂಡವವನವು ಕೃಷ್ಣಾರ್ಜುನರಿಂದ ರಕ್ಷಿಸಲ್ಪಟ್ಟಿದ್ದನ್ನು ನೋಡಿದ ಸುಪರ್ಣಾದಿಪಕ್ಷಿಗಳು ಅಹಂಕಾರದಿಂದ ಆಕಾಶಮಾರ್ಗದಿಂದ ಬಂದವು.

ಗರುಡಾ ವಜ್ರಸದೃಶೈಃ ಪಕ್ಷತುಂಡನಖೈಸ್ತಥಾ ।
ಪ್ರಹರ್ತುಕಾಮಾಃ ಸಂಪೇತುರಾಕಾಶಂ ಕೃಷ್ಣಪಾಂಡವೌ ॥೪೨॥

ಗರುಡಗಳು ವಜ್ರಸದೃಶವಾದ ತಮ್ಮ ಕೊಕ್ಕುಗಳೂ, ಉಗುರುಗಳೂ ಮತ್ತು ರೆಕ್ಕೆಗಳಿಂದ ಕೃಷ್ಣ ಮತ್ತು ಪಾಂಡವರನ್ನು ಹಿಂಸಿಸುವ ಉದ್ದೇಶದಿಂದ ಆಕಾಶದಲ್ಲಿ ಬಂದವು.

ತಥೈವೋರಗಸಂಘಾಶ್ಚ ಪಾಂಡವಸ್ಯ ಸಮೀಪತಃ ।
ಉತ್ಸೃಜಂತೋ ವಿಷಂ ಘೋರಂ ವಿಚೇರುರ್ಜ್ವಲಿತಾನನಾಃ ॥೪೩॥

ಹಾಗೆಯೇ, ಉರಗಸಮೂಹಗಳು ಘೋರವಾದ ವಿಷವನ್ನು ಉಗುಳುತ್ತಾ ದೀಪ್ತವಾದ ಮುಖವುಳ್ಳವುಗಳಾಗಿ ಅರ್ಜುನನ ಸಮೀಪದಲ್ಲಿ ಸಂಚರಿಸಿದವು

ತಾಂಶ್ಚಕರ್ತ ಶರೈಃ ಪಾರ್ಥಃ ಸರೋಷಾನ್ ದೃಶ್ಯ ಖೇಚರಾನ್ ।
ವಿವಶಾ ವಿವಿಶುರ್ದೀಪ್ತಂ ದೇಹಾಭಾವಾಯ ಪಾವಕಮ್ ॥೪೪॥

ಅರ್ಜುನನು ರೋಷದಿಂದ ಕೂಡಿದ, ಆಕಾಶದಲ್ಲಿ ಸಂಚರಿಸುವ ಆ ಪಕ್ಷಿಗಳನ್ನು ನೋಡಿ ಅವುಗಳನ್ನು ಕತ್ತರಿಸಿದನು. ಅವು ವಿವಶವಾಗಿ ದೀಪ್ತವಾದ ಅಗ್ನಿಯಲ್ಲಿ ಬಿದ್ದು, ನಾಶವನ್ನು ಹೊಂದಿದವು.

ತತೋಽಸುರಾಃ ಸಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಉತ್ಪೇತುರ್ನಾದಮತುಲಮುತ್ಸೃಜಂತೋ ರಣಾರ್ಥಿನಃ ॥೪೫॥

ಅನಂತರ ಅಸುರರೂ, ಗಂಧರ್ವರೂ, ಪನ್ನಗಗಳೂ, ಯಕ್ಷರಾಕ್ಷಸರೂ, ಯುದ್ಧವನ್ನು ಬಯಸಿ ಘೋರವಾದ ನಾದವನ್ನು ಮಾಡುತ್ತಾ ಮೇಲೆರಗಿ ಬಂದರು.

ಅಯಃಕಾಂಚನಚಕ್ರಾಶ್ಚ ಗದಾಮುಸಲಪಾಣಯಃ ।
ಕೃಷ್ಣಪಾರ್ಥೌ ಜಿಘಾಂಸಂತಃ ಕ್ರೋಧಸಮ್ಮೂರ್ಛಿತೌಜಸಃ ॥೪೬॥

ಕೃಷ್ಣಾರ್ಜುನರನ್ನು ಕೊಲ್ಲಲು ಬಯಸಿ ಕ್ರೋಧದಿಂದ ಮೂರ್ಛಿತರಾದ ಮಹಾಬಲಶಾಲಿಗಳಾದ ಅವರು ಕೈಗಳಲ್ಲಿ ಗದೆಗಳನ್ನೂ, ಮುಸಲಗಳನ್ನೂ ಹಿಡಿದು ಅಯಃಚಕ್ರಗಳನ್ನೂ, ಕಾಂಚನಚಕ್ರಗಳನ್ನೂ ಪ್ರಯೋಗಿಸಿದರು.

ತೇಷಾಮಪಿ ವ್ಯಾಹರತಾಂ ಶಸ್ತ್ರವರ್ಷಾಣಿ ಮುಂಚತಾಮ್ ।
ಪ್ರಮಮಾಥೋತ್ತಮಾಂಗಾನಿ ಬೀಭತ್ಸುರ್ನಿಶಿತೈಃ ಶರೈಃ ॥೪೭॥

ಅರ್ಜುನನು ತನ್ನ ಹರಿತವಾದ ಬಾಣಗಳಿಂದ ಬಾಯಿಂದ ಮಾತನಾಡುತ್ತಾ ತನ್ನ ಮೇಲೆ ಬಾಣಗಳ ಮಳೆಯನ್ನು ಕರೆಯುತ್ತಿದ್ದ ಅವರ ತಲೆಗಳನ್ನು ಕತ್ತರಿಸಿದನು.

ಕೃಷ್ಣಶ್ಚ ಸುಮಹಾತೇಜಾಶ್ಚಕ್ರೇಣಾರಿವಿಘಾತಿನಾ ।
ದೈತ್ಯದಾನವಸಂಘಾನಾಂ ಚಕಾರ ಕದನಂ ಮಹತ್ ॥೪೮॥

ಮಹಾತೇಜಸ್ವಿಯಾದ ಕೃಷ್ಣನೂ ಸಹ ಶತ್ರುನಾಶಕವಾದ ಚಕ್ರವನ್ನು ಹಿಡಿದು ದೈತ್ಯದಾನವಸಮೂಹದ ಜೊತೆಯಲ್ಲಿ ದೊಡ್ಡಯುದ್ಧವನ್ನು ಮಾಡಿದನು.

ಅಪರೇ ತು ಶರೈರ್ವಿದ್ಧಾಶ್ಚಕ್ರವೇಗೇರಿತಾಸ್ತದಾ ।
ವೇಲಾಮಿವ ಸಮಾಸಾದ್ಯ ವ್ಯವೇಷ್ಟಂತ ಮಹೌಜಸಃ ॥೪೯॥

ಇನ್ನು ಕೆಲವು ಮಹಾಬಲಿಷ್ಠರು ಅರ್ಜುನನ ಶರದಿಂದ ತಾಡಿತರಾಗಿ, ಕೃಷ್ಣನ ವೇಗದಿಂದ ಎಸೆಯಲ್ಪಟ್ಟು ತೀರಕ್ಕೆ ಬಂದು ಹೊರಳಾಡಿದರು.

ತತಃ ಶಕ್ರೋಽತಿಸಂಕ್ರುದ್ಧಸ್ತ್ರಿದಶಾನಾಂ ಮಹೇಶ್ವರಃ ।
ಪಾಂಡರಂ ಗಜಮಾಸ್ಥಾಯ ತಾವುಭೌ ಸಮುಪಾದ್ರವತ್ ॥೫೦॥

ಅನಂತರ ದೇವತೆಗಳ ಒಡೆಯನಾದ ಇಂದ್ರನು ಅತ್ಯಂತ ಕ್ರೋಧದಿಂದ ಕೂಡಿದವನಾಗಿ ಬಿಳಿಯ ಆನೆಯಾದ ಐರಾವತದ ಮೇಲೆ ಕುಳಿತು ಅವರಿಬ್ಬರ ಕಡೆಗೆ ಧಾವಿಸಿಬಂದನು.

ಅಶನಿಂ ಗೃಹ್ಯ ತರಸಾ ವಜ್ರಂ ಚೋದ್ಯಮ್ಯ ಚಾಹವೇ ।
ನಿಘ್ನತೈತಾವಿತಿ ಪ್ರಾಹ ಸುರಾನಸುರಸೂದನಃ ॥೫೧॥

ಅಸುರ ಸಂಹಾರಕನಾದ ಅವನು ಯುದ್ಧದಲ್ಲಿ ಒಂದು ಕೈಯಲ್ಲಿ ಅಶನಿಯನ್ನು ಹಿಡಿದು, ಇನ್ನೊಂದು ಕೈಯಿಂದ ವಜ್ರಾಯುಧವನ್ನು ಮೇಲಕ್ಕೆತ್ತಿ ಇವರಿಬ್ಬರನ್ನೂ ಕೊಲ್ಲಿ ಎಂದು ದೇವತೆಗಳಿಗೆ ಹೇಳಿದನು.

ತತಃ ಸಮುದ್ಯತಾಂ ದೃಷ್ಟ್ವಾ ದೇವೇಂದ್ರೇಣ ಮಹಾಶನಿಮ್ ।
ಜಗೃಹುಃ ಸರ್ವಶಾಸ್ತ್ರಾಣಿ ಸ್ವಾನಿಸ್ವಾನಿ ತತಸ್ತದಾ ॥೫೨॥

ದೇವೇಂದ್ರನು ತನ್ನ ಕೈಯಲ್ಲಿ ಮಹಾಶನಿಯನ್ನು ಎತ್ತಿಹಿಡಿದುದನ್ನು ನೋಡಿದ ದೇವತೆಗಳು ತಮ್ಮ ಕೈಯಲ್ಲಿ ತಮ್ಮ ತಮ್ಮ ಆಯುಧಗಳನ್ನು ಎತ್ತಿಕೊಂಡರು.

ಕಾಲದಂಡಂ ಯಮೋ ರಾಜನ್ ಶಿಬಿಕಾಂ ಚ ಧನೇಶ್ವರಃ ।
ಪಾಶಾಂಶ್ಚ ತತ್ರ ವರುಣಃ ತ್ರಿಶೂಲಂ ಚ ತಥಾ ಶಿವಃ ॥೫೩॥

ಸ್ಕಂದಃ ಶಕ್ತಿಂ ಸಮಾದಾಯ ತಸ್ಥೌ ಮೇರುರಿವಾಚಲಃ ।
ಓಷಧೀರ್ದೀಪ್ಯಮಾನಾಶ್ಚ ಜಗೃಹಾತೇऽಶ್ವಿನಾವಪಿ ॥೫೪॥

ರಾಜನೇ, ಯಮನು ಕಾಲದಂಡವನ್ನೂ, ಶಿಬಿಕೆಯನ್ನು ಏರಿದ ಕುಬೇರನು ಮುದ್ಗಲವನ್ನೂ, ಶಿವನು ತ್ರಿಶೂಲವನ್ನೂ, ಸ್ಕಂದನು ಶಕ್ತಿಯನ್ನೂ ಹಿಡಿದು ಮೇರುಪರ್ವತದಂತೆ ಅಲುಗಾಡದೆ ನಿಂತರು. ಅಶ್ವಿನಿಗಳು ದೀಪ್ತವಾದ ಓಷಧಿಗಳನ್ನು ಹಿಡಿದರು.

ಜಗೃಹೇ ಚ ಧನುರ್ಧಾತಾ ಮುಸಲಂ ತು ಧನುಸ್ತಥಾ ।
ಪರ್ವತಂ ಚಾಪಿ ಜಗ್ರಾಹ ಕ್ರುದ್ಧಸ್ತ್ವಷ್ಟಾ ಮಹಾಬಲಃ ॥೫೫॥

ಧಾತೃವು ಧನುಸ್ಸನ್ನೂ ಮತ್ತು ಮುಸಲವನ್ನೂ ತೆಗೆದುಕೊಂಡನು. ಮಹಾಬಲನಾದ ತ್ವಷ್ಟೃವು ಕ್ರೋಧದಿಂದ ಧನುಸ್ಸನ್ನೂ ಮತ್ತು ಪರ್ವತವನ್ನೂ ಕೈಗೆ ತೆಗೆದುಕೊಂಡನು.

ಸ್ಕಂದಸ್ತು ಶಕ್ತಿಂ ಜಗ್ರಾಹ ಮೃತ್ಯುರ್ದೇವಃ ಪರಶ್ವಧಮ್ ।
ಪ್ರಗೃಹ್ಯ ಪರಿಘಂ ಘೋರಂ ಪ್ರಚಚಾರಾರ್ಯಮಾऽಪಿ ಚ ॥೫೬॥

ಸ್ಕಂದನು ಶಕ್ತಿಯನ್ನೂ, ಯಮನ ತಮ್ಮನಾದ ಮೃತ್ಯುವು ಪರಶ್ವಧವನ್ನೂ, ಅರ್ಯಮನು ಘೋರವಾದ ಪರಿಘವನ್ನೂ ತೆಗೆದುಕೊಂಡು ಸಂಚರಿಸಿದರು.

ಮಿತ್ರಶ್ಚ ಕ್ಷುರಪರ್ಯಂತಂ ಚಕ್ರಂ ಗೃಹ್ಯ ವ್ಯತಿಷ್ಠತ ।
ಪೂಷಾ ಭಗಶ್ಚ ಸಂಕ್ರುದ್ಧಃ ಸವಿತಾ ಚ ವಿಶಾಂಪತೇ ॥೫೭॥

ಆತ್ತಕಾರ್ಮುಕನಿಸ್ತ್ರಿಂಶಾಃ ಕೃಷ್ಣಪಾರ್ಥಾವಭಿದ್ರವನ್ ।
ರುದ್ರಾಶ್ಚ ವಸವಶ್ಚೈವ ಮರುತಶ್ಚ ಮಹಾಬಲಾಃ ॥೫೮॥

ಮಿತ್ರನು ಕತ್ತಿಯಂತೆ ಅಲಗುಗಳನ್ನುಳ್ಳ ಚಕ್ರವನ್ನು ಹಿಡಿದು ಎದುರಾದನು. ರಾಜನೇ, ಪೂಷಾ, ಭಗ ಮತ್ತು ಸಂಕ್ರುದ್ಧನಾದ ಸವಿತೃ ಇವರು ಬಿಲ್ಲುಗಳನ್ನೂ ಮತ್ತು ಖಡ್ಗಗಳನ್ನೂ ಹಿಡಿದು ಕೃಷ್ಣಾರ್ಜುನರಿಗೆ ಅಭಿಮುಖವಾಗಿ ಬಂದರು.

ವಿಶ್ವೇದೇವಾಸ್ತಥಾ ಸಾಧ್ಯಾ ದೀಪ್ಯಮಾನಾಃ ಸ್ವತೇಜಸಾ ।
ಏತೇ ಚಾನ್ಯೇ ಚ ಬಹವೋ ದೇವಾಸ್ತೌ ಪುರುಷೋತ್ತಮೌ ॥೫೯॥

ಕೃಷ್ಣಪಾರ್ಥೌ ಜಿಘಾಂಸಂತಃ ಪ್ರತೀಯುರ್ವಿವಿಧಾಯುಧಾಃ ।
ತತ್ರಾದ್ಭುತಾನ್ಯದೃಶ್ಯಂತ ವಿವಿಧಾನಿ ಮಹಾವನೇ ॥೬೦॥

ರುದ್ರರೂ, ವಸುಗಳೂ, ಮಹಾಬಲರಾದ ಮರುತ್ತುಗಳೂ, ವಿಶ್ವೇದೇವತೆಗಳೂ, ಸಾಧ್ಯರೂ ತಮ್ಮ ತೇಜಸ್ಸಿನಿಂದ ಬೆಳಗುತ್ತಾ, ಇನ್ನೂ ಅನೇಕ ದೇವತೆಗಳ ಜೊತೆಯಲ್ಲಿ ಕೈಯಲ್ಲಿ ವಿವಿಧವಾದ ಆಯುಧಗಳನ್ನು ಹಿಡಿದು ಪುರುಷೋತ್ತಮರಾದ ಕೃಷ್ಣಾರ್ಜುನರನ್ನು ಕೊಲ್ಲುವ ಉದ್ದೇಶದಿಂದ ಅವರ ಕಡೆಗೆ ಧಾವಿಸಿದರು. ಭಾರತನೇ, ಆಗ ಆ ಕಾಡಿನಲ್ಲಿ ಅನೇಕವಿಧವಾದ ಅದ್ಭುತಗಳು ಕಂಡುಬಂದವು.

ಯುಗಾಂತಸಮರೂಪಾಣಿ ಭೂತೋತ್ಪಾತಾಶ್ಚ ಭಾರತ ।
ತಥಾ ದೃಷ್ಟ್ವಾ ಸುಸಂರಬ್ಧಂ ಶಕ್ರಂ ದೇವೈಃ ಸಹಾಚ್ಯುತೌ ॥೬೧॥

ಯುಗಾಂತಸಮಯದಲ್ಲಿ ಕಂಡುಬರುವ ಭೂತೋತ್ಪಾತಗಳು ಕಂಡುಬಂದವು.

ಅಭೀತೌ ಯುಧಿ ದುರ್ಧರ್ಷೌ ತಸ್ಥತುಃ ಸಜ್ಯಕಾರ್ಮುಕೌ ।
ಆಗತಾಂಶ್ಚೈವ ತಾನ್ ದೃಷ್ಟ್ವಾ ದೇವಾನೇಕೈಕಶಸ್ತಥಾ ॥೬೨॥

ಕೃಷ್ಣಪಾರ್ಥರು ದೇವತೆಗಳ ಜೊತೆಯಲ್ಲಿ ಕ್ರೋಧದಿಂದ ಬಂದ ಇಂದ್ರನನ್ನು ನೋಡಿ, ಹೆದರದೆ ಹೆದೆಯೇರಿಸಿದ ಬಿಲ್ಲುಗಳನ್ನು ಹಿಡಿದು ದುರ್ಧರ್ಷರಾಗಿ ನಿಂತರು.

ವಾರಯೇತಾಂ ಸುಸಂಕ್ರುದ್ಧೌ ಬಾಣೈರ್ವಜ್ರೋಪಮೈಸ್ತದಾ ।
ಅಸಕೃದ್ ಭಗ್ನಸಂಕಲ್ಪಾಃ ಸುರಾಃ ಶರಬಹುಕ್ಷತಾಃ ॥೬೩॥

ಬಹಳ ಕ್ರೋಧಗೊಂಡ ಕೃಷ್ಣಾರ್ಜುನರು ಒಬ್ಬೊಬ್ಬರಾಗಿ ಬಂದ ದೇವತೆಗಳನ್ನು ತಮ್ಮ ವಜ್ರಸದೃಶವಾದ ಬಾಣಗಳಿಂದ ಹಿಂದೆ ಕಳುಹಿಸಿದರು.

ಭಯಾದ್ ರಣಂ ಪರಿತ್ಯಜ್ಯ ಶಕ್ರಮೇವಾಭಿಸಂಶ್ರಯುಃ ।
ದೃಷ್ಟ್ವಾ ನಿವಾರಿತಾನ್ ದೇವಾನ್ ಮಾಧವೇನಾರ್ಜುನೇನ ಚ ॥೬೪॥

ಅನೇಕಬಾರಿ ಭಗ್ನಸಂಕಲ್ಪರಾದ ದೇವತೆಗಳು ಬಾಣಗಳಿಂದ ಗಾಯಗೊಂಡು ಭಯದಿಂದ ರಣವನ್ನು ಪರಿತ್ಯಾಗಮಾಡಿ ಇಂದ್ರನನ್ನೇ ಆಶ್ರಯಿಸಿದರು.

ಆಶ್ಚರ್ಯಮಗಮಂಸ್ತತ್ರ ಮುನಯೋ ದಿವಿ ನಿಷ್ಠಿತಾಃ ।
ಶಕ್ರಶ್ಚಾಪಿ ತಯೋರ್ವೀರ್ಯಮುಪಲಭ್ಯಾಸಕೃದ್ ರಣೇ ॥೬೫॥

ಕೃಷ್ಣಾರ್ಜುನರಿಂದ ಹಿಂದಿರುಗಿಸಲ್ಪಟ್ಟ ದೇವತೆಗಳನ್ನು ನೋಡಿ ಆಕಾಶದಲ್ಲಿ ನಿಂತ ಮುನಿಗಳು ಆಶ್ಚರ್ಯಚಕಿತರಾದರು.

ಬಭೂವ ಪರಮಪ್ರೀತೋ ಭೂಯಶ್ಚೈತಾವಯೋಧಯತ್ ।
ತತೋऽಶ್ಮವರ್ಷಂ ಸುಮಹದ್ ವ್ಯಸೃಜತ್ ಪಾಕಶಾಸನಃ ॥೬೬॥

ಇಂದ್ರನೂ ಸಹ ಯುದ್ಧದಲ್ಲಿ ಅವರ ಪರಾಕ್ರಮವನ್ನು ಅನೇಕಬಾರಿ ನೋಡಿ ಪರಮಸಂತುಷ್ಟನಾದನು. ಆದರೂ ಪುನಃ ಅವರ ಜೊತೆಯಲ್ಲಿ ಕಲ್ಲಿನ ಮಳೆ ಸುರಿಸುವ ಮೂಲಕ ಯುದ್ಧವನ್ನು ಮುಂದುವರೆಸಿದನು.

ಭೂಯ ಏವ ತದಾ ವೀರ್ಯಂ ಜಿಜ್ಞಾಸುಃ ಸವ್ಯಸಾಚಿನಃ ।
ತಚ್ಛರೈರರ್ಜುನೋ ವರ್ಷಂ ಪ್ರತಿಜಘ್ನೇಽತ್ಯಮರ್ಷಣಃ ॥೬೭॥

ಅನಂತರ ಪಾಕಶಾಸನನಾದ ಇಂದ್ರನು ಅರ್ಜುನನ ಪರಾಕ್ರಮವನ್ನು ತಿಳಿಯಲು ಬಯಸಿ, ಪುನಃ ದೊಡ್ಡದಾದ ಕಲ್ಲುಗಳ ಮಳೆಯನ್ನು ಸೃಷ್ಟಿಸಿದನು. ಬಹಳ ಸಿಟ್ಟಿನಿಂದ ಕೂಡಿದ ಅರ್ಜುನನು ಆ ಮಳೆಯನ್ನು ತನ್ನ ಬಾಣಗಳಿಂದ ನಾಶಮಾಡಿದನು.

ವಿಫಲಂ ಕ್ರಿಯಮಾಣಂ ತತ್ ಸಂಪ್ರೇಕ್ಷ್ಯ ಚ ಶತಕ್ರತುಃ ।
ಭೂಯಃ ಸಂವರ್ಧಯಾಮಾಸ ತದ್ವರ್ಷಂ ದೇವರಾಡಪಿ ॥೬೮॥

ತನ್ನ ಪ್ರಯತ್ನವು ವಿಫಲವಾಗುತ್ತಿರುವುದನ್ನು ನೋಡಿದ ದೇವರಾಜನಾದ ಇಂದ್ರನು ಆ ಮಳೆಯನ್ನು ಇನ್ನೂ ಹೆಚ್ಚುಮಾಡಿದನು.

ಸೋಽಶ್ಮವರ್ಷಂ ಮಹಾವೇಗೈರಿಷುಭಿಃ ಪಾಕಶಾಸನಿಃ ।
ವಿಲಯಂ ಗಮಯಾಮಾಸ ಹರ್ಷಯನ್ ಪಿತರಂ ತಥಾ ॥೬೯॥

ಅರ್ಜುನನು ಮಹಾವೇಗವುಳ್ಳ ತನ್ನ ಬಾಣಗಳಿಂದ ಆ ಶಿಲಾವರ್ಷವನ್ನು ನಾಶಮಾಡಿ ತಂದೆಯಾದ ಇಂದ್ರನನ್ನು ಸಂತೋಷಪಡಿಸಿದನು.

ಸಮುತ್ಕ್ಷಿಪ್ಯ ತು ಪಾಣಿಭ್ಯಾಂ ಮಂದರಾಚ್ಛಿಖರಂ ಮಹತ್ ।
ಸದ್ರುಮಂ ವ್ಯಸೃಜಚ್ಛಕ್ರೋ ಜಿಘಾಂಸುಃ ಪಾಂಡುನಂದನಮ್ ॥೭೦॥

ಆಗ ಇಂದ್ರನು ಮಂದರಪರ್ವತದ ವೃಕ್ಷಗಳಿಂದ ಕೂಡಿದ ದೊಡ್ಡಪರ್ವತವನ್ನು ತನ್ನ ಬಾಹುಗಳಿಂದ ಎತ್ತಿ ಅರ್ಜುನನನ್ನು ಕೊಲ್ಲಲು ಬಯಸಿ ಅರ್ಜುನನ ಮೇಲೆ ಎಸೆದನು.

ತತೋಽರ್ಜುನೋ ವೇಗವದ್ಭಿರ್ಜ್ವಲಿತಾನಲಸನ್ನಿಭೈಃ ।
ಬಾಣೈರ್ವಿಧ್ವಂಸಯಾಮಾಸ ಗಿರೇಃ ಶೃಂಗಂ ಸಹಸ್ರಶಃ ॥೭೦॥

ಆಗ ಅರ್ಜುನನು ವೇಗವುಳ್ಳ, ದೀಪ್ತವಾದ ಅಗ್ನಿಯಂತೆ ಪ್ರಕಾಶಮಾನವಾದ ತನ್ನ ಬಾಣಗಳಿಂದ ಆ ಪರ್ವತಶೃಂಗವನ್ನು ಸಹಸ್ರಾರು ಚೂರುಗಳನ್ನು ಮಾಡಿ ನಾಶಮಾಡಿದನು.

ಗಿರೇರ್ವಿಕೀರ್ಯಮಾಣಸ್ಯ ತಸ್ಯ ರೂಪಂ ತದಾ ಬಭೌ ।
ಸಾರ್ಕಚಂದ್ರಗ್ರಹಸ್ಯೇವ ನಭಸಃ ಪ್ರವಿಶೀರ್ಯತಃ ॥೭೨॥

ಅರ್ಜುನನ ಬಾಣಗಳ ವೇಗದಿಂದ ಬಿರಿದುಬೀಳುತ್ತಿದ್ದ ಆ ಪರ್ವತಶಿಖರವು ಚಂದ್ರಸೂರ್ಯಗ್ರಹಗಳಿಂದ ಕೂಡಿದ ಆಕಾಶವೇ ಬಿರಿಯುವಂತೆ ತೋರುತ್ತಿದ್ದಿತು.

ತೇನ ಚಾಪತತಾ ದೇಶೇ ಶೈಲೇನ ಮಹತಾ ಭೃಶಮ್ ।
ಭೂಯ ಏವ ತತಸ್ತತ್ರ ಪ್ರಾಣಿನಾಂ ಪ್ರಾಣಸಂಕ್ಷಯಃ ॥೭೩॥

ಆ ದೊಡ್ಡಶಿಖರವು ಭೂಮಿಯ ಮೇಲೆ ಬೀಳುತ್ತಾ ತನ್ನ ಭಾರದಿಂದ ಅನೇಕ ಪ್ರಾಣಿಗಳ ವಿನಾಶವನ್ನು ಉಂಟುಮಾಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ ಏಕತ್ರಿಂಶತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಇತಿ ಖಾಂಡವದಾಹಪರ್ವಣಿ ತೃತೀಯೋಽಧ್ಯಾಯಃ ॥

॥ ಖಾಂಡವದಾಹಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಖಾಂಡವದಾಹಪರ್ವವು ಮುಗಿಯಿತು.

★ ★ ★ ★

೧೯. ಮಯದರ್ಶನಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ಸ ಯೋಜನದ್ವಾದಶಕಾಭಿವಿಸ್ತೃತಂ
ಪುರಂ ಚಕಾರಾಶು ಪುರಂದರಾತ್ಮಜಃ ।
ಹುತಾಶನೋಽಪ್ಯಾಶು ವನಂ ಪ್ರಗೃಹ್ಯ
ಪ್ರಭಕ್ಷಯಾಮಾಸ ಸಮುದ್ಧತಾರ್ಚಿಃ ॥೨೩೨॥

ಅರ್ಜುನ ಬೇಗನೆ ಬಾಣಗಳಿಂದ ಹನ್ನೆರಡು ಯೋಜನಗಳವರೆಗೆ ವಿಸ್ತೃತವಾದ ಶರಪಂಜರವನ್ನು ನಿರ್ಮಿಸಿದ. ಅಗ್ನಿ ಬೇಗನೆ ಜ್ವಾಲೆಯನ್ನು ಎತ್ತರಕ್ಕೆ ಚಾಚಿ ಕಾಡನ್ನು ಹಿಡಿದು ಭಕ್ಷಿಸತೊಡಗಿದ.

ಪ್ರಭಕ್ಷ್ಯಮಾಣಂ ನಿಜಕಕ್ಷವೀಕ್ಷ್ಯ
ಸಂಧುಕ್ಷಯಾಮಾಸ ತದಾಶುಶುಕ್ಷಣಿಂ ।
ಅಕ್ಷ್ಣೋಪಮಾಭಿರ್ಬಹುಲೇಕ್ಷಣೋಽಂಭಸಾಂ
ಧಾರಾಭಿರಾಕ್ಷುಬ್ಧಮನಾಃ ಕ್ಷಯಾಯ ॥೨೩೩॥

ಇಂದ್ರ ತನ್ನ ಕಾಡು ಬೆಂಕಿಯಿಂದ ಭಕ್ಷಿತವಾಗುವುದನ್ನು ಕಂಡು ಮನಸ್ಸಿನಲ್ಲಿ ಕ್ಷೋಭೆಗೊಂಡವನಂತೆ ರಥದ ಅಚ್ಚು ಮರದಷ್ಟು ಗಾತ್ರದ ಜಲಧಾರೆಗಳಿಂದ ಬೆಂಕಿಯ ಜ್ವಾಲೆಯನ್ನು ಆರಿಸಲು ಯತ್ನಿಸಿದ.

ಅಸ್ತ್ರೈಸ್ತು ವೃಷ್ಟಿಂ ವಿನಿವಾರ್ಯ ಕೃಷ್ಣಃ
ಪಾರ್ಥಶ್ಚ ಶಕ್ರಂ ಸುರಪೂಗಯುಕ್ತಂ ।
ಅಯುಧ್ಯತಾಂ ಸೋಽಪಿ ಪರಾಜಿತೋಽಭೂತ್
ಪ್ರೀತಶ್ಚ ದೃಷ್ಟ್ವಾ ಬಲಮಾತ್ಮನಸ್ತತ್ ॥೨೩೪॥

ಕೃಷ್ಣಾರ್ಜುನರು ವಾಯವ್ಯಾದಿ ಅಸ್ತ್ರಗಳಿಂದ ಮಳೆಯನ್ನು ತಡೆದು, ದೇವ ಸಮೂಹ ಸಮೇತನಾಗಿ ಬಂದ ಇಂದ್ರನೊಡನೆ ಹೋರಾಡಿದರು. ಅವನು ಪರಾಜಿತನಾದ. ತನ್ನ ಮಗನ ಪರಾಕ್ರಮವನ್ನು ಕಂಡು ಸಂತುಷ್ಟನೂ ಆದ.

ಸ್ನೇಹಂ ಚ ಕೃಷ್ಣಸ್ಯ ತದಾಽರ್ಜುನೇ ಧೃತಂ
ವಿಲೋಕ್ಯ ಪಾರ್ಥಸ್ಯ ಬಲಂ ಚ ತಾದೃಶಂ ।
ನಿವರ್ತ್ಯ ಮೇಘಾನತಿತುಷ್ಟಚಿತ್ತಃ
ಪ್ರಣಮ್ಯ ಕೃಷ್ಣಂ ತನಯಂ ಸಮಾಶ್ಲಿಷತ್ ॥೨೩೫॥

ಅರ್ಜುನನಲ್ಲಿ ಶ್ರೀಕೃಷ್ಣನಿರಿಸಿದ್ದ ಪ್ರೀತಿಯನ್ನೂ ಅರ್ಜುನನ ಆ ಅಸಾಧಾರಣ ಪರಾಕ್ರಮವನ್ನೂ ಕಂಡು ದೇವೇಂದ್ರ ಬಹಳ ಸಂತುಷ್ಟಚಿತ್ತನಾಗಿ ಮೋಡಗಳನ್ನು ಹಿಂದೆ ಕಳಿಸಿ ಕೃಷ್ಣನನ್ನು ನಮಿಸಿ ಮಗನನ್ನು ಆಲಿಂಗಿಸಿದ.

ವಿಷ್ಣುಶ್ಚ ಶಕ್ರೇಣ ಸಹೈತ್ಯ ಕೇಶವಂ
ಸಮಾಶ್ಲಿಷನ್ನಿರ್ವಿಶೇಷೋಽಪ್ಯನಂತಃ ।
ಸ ಕೇವಲಂ ಕ್ರೀಡಮಾನಃ ಸಶಕ್ರಃ
ಸ್ಥಿತೋ ಹಿ ಪೂರ್ವಂ ಯುಯುಧೇ ನ ಕಿಂಚಿತ್ ॥೨೩೬॥

ಶ್ರೀವಿಷ್ಣು ಅನಂತನಾಗಿದ್ದು ಅವತಾರಗಳಲ್ಲಿ ಭೇದರಹಿತನಾದರೂ ಇಂದ್ರನೊಂದಿಗೆ ಬಂದು ಶ್ರೀಕೃಷ್ಣನನ್ನು ಆಲಿಂಗಿಸಿದ. ಅವನು ಅಷ್ಟರವರೆಗೆ ಇಂದ್ರನ ಜೊತೆ ನಿಂತು ಕೇವಲ ಕ್ರೀಡೆ ಮಾಡುತ್ತಿದ್ದನೇ ಹೊರತು ಒಂದಿಷ್ಟೂ ಯುದ್ಧ ಮಾಡಲಿಲ್ಲ.

ಬ್ರಹ್ಮಾ ಚ ಶರ್ವಶ್ಚ ಸಮೇತ್ಯ ಕೃಷ್ಣಂ
ಪ್ರಣಮ್ಯ ಪಾರ್ಥಸ್ಯ ಚ ಕೃಷ್ಣನಾಮ ।
ಸಂಚಕ್ರತುಶ್ಚಾಪಿ ಶಿಕ್ಷಾಪ್ರಕರ್ಷಾತ್
ಚಕ್ರುಶ್ಚ ಸರ್ವೇ ಸ್ವಾಸ್ತ್ರದಾನೇ ಪ್ರತಿಜ್ಞಾಂ ॥೨೩೭॥

ಬ್ರಹ್ಮನೂ ರುದ್ರನೂ ಬಂದು ಕೃಷ್ಣನನ್ನು ನಮಿಸಿ, ಅರ್ಜುನನ ಶಸ್ತ್ರಾಭ್ಯಾಸ ಉತ್ಕೃಷ್ಟವಾದ್ದರಿಂದ ಅವನಿಗೆ ಕೃಷ್ಣ ಎಂದು ನಾಮಕರಣ ಮಾಡಿದರು. ಎಲ್ಲರೂ ಸಮಯ ಬಂದಾಗ ತಮ್ಮ ತಮ್ಮ ಅಸ್ತ್ರಗಳನ್ನು ಅವನಿಗೆ ಉಪದೇಶಿಸುವುದಾಗಿ ಪ್ರತಿಜ್ಞೆಗೈದರು.

ಅನುಜ್ಞಾತಾಸ್ತೆ ಪ್ರಯಯುಃ ಕೇಶವೇನ
ಕ್ರೀಡಾರ್ಥಮಿಂದ್ರೋ ಯುಯುಧೇ ಹಿ ತತ್ರ ।
ಪ್ರೀತ್ಯಾ ಕೀರ್ತಿಂ ದಾತುಮಪ್ಯರ್ಜುನಸ್ಯ
ತತಸ್ತುಷ್ಟಃ ಸಹ ದೇವೈಸ್ತಯೋ ಸಃ ॥೨೩೮॥

ಶ್ರೀಕೃಷ್ಣನ ಅನುಜ್ಞೆ ಪಡೆದು ಬ್ರಹ್ಮಾದಿ ದೇವತೆಗಳು ಹೊರಟುಹೋದರು. ಇಂದ್ರ ಕ್ರೀಡೆಗೋಸ್ಕರವೆ ಕೃಷ್ಣನೊಡನೆ ಯುದ್ಧ ಮಾಡಿದ್ದ. ಅಸುರಾವೇಶದಿಂದಲ್ಲ. ಅರ್ಜುನನಿಗೆ ಕೀರ್ತಿ ತಂದುಕೊಡುವುದಕ್ಕಾಗಿ ಅವನೊಡನೆಯೂ ಪ್ರೀತಿಯಿಂದಲೆ ಯುದ್ಧಮಾಡಿದ್ದ. ಅದರಿಂದ ಸಂತುಷ್ಟನಾಗಿ ದೇವತೆಗಳೊಂದಿಗೆ ಅವನೂ ಸ್ವರ್ಗಕ್ಕೆ ತೆರಳಿದ.

★ ★ ★ ★

ಇನ್ನೂರ ಮೂವತ್ತೆರಡನೆಯ ಅಧ್ಯಾಯ

(ಕೃಷ್ಣಾರ್ಜುನರ ರಕ್ಷಣೆಯಲ್ಲಿ ಅಗ್ನಿಯಿಂದ ಖಾಂಡವವನ ದಾಹ. ಕೃಷ್ಣಾರ್ಜುನರಿಂದ ಯುದ್ಧಕ್ಕೆ ಬಂದ ದೇವತೆಗಳ ಪರಾಜಯ. ಆಶರೀರವಾಣಿಯಿಂದ ಇಂದ್ರನ ನಿವೃತ್ತಿ. ಅಗ್ನಿಯ ಹರ್ಷ. ಮಯನಿಗೆ ಅಭಯದಾನ.)

ವೈಶಂಪಾಯನಃ

ತಥಾ ಶೈಲನಿಪಾತೇನ ಧರ್ಷಿತಾಃ ಖಾಂಡವಾಲಯಾಃ ।
ದಾನವಾ ರಾಕ್ಷಸಾ ನಾಗಾಸ್ತರಕ್ಷ್ವಕ್ಷವನೌಕಸಃ ॥೧॥

ದ್ವಿಪಾಃ ಪ್ರಭಿನ್ನಾಃ ಶಾರ್ದೂಲಾಃ ಸಿಂಹಾಃ ಕೇಸರಿಣಸ್ತಥಾ ।
ಮೃಗಾಶ್ಚ ಮಹಿಷಾಶ್ಚೈವ ಶತಶಃ ಪಕ್ಷಿಣಸ್ತಥಾ ॥೨॥

ಸಮುದ್ವಿಗ್ನಾ ವಿಸಸೃಪುಸ್ತಥಾऽನ್ಯಾ ಭೂತಜಾತಯಃ ।
ತಂ ದಾವಂ ಸಮುದೈಕ್ಷಂತ ಕೃಷ್ಣಂ ಚಾಭ್ಯುದ್ಯತಾಯುಧಮ್ ।
ತತ್ಪಾತನಾದಶಬ್ದೇನ ತ್ರಾಸಿತಾ ಇವ ಚಾಭವನ್ ॥೩॥

ಆ ರೀತಿಯಲ್ಲಿ ಗಿರಿಶೃಂಗವು ಬೀಳುತ್ತಿರಲು, ಖಾಂಡವನಿವಾಸಿಗಳಾದ ದಾನವರೂ, ರಾಕ್ಷಸರೂ, ನಾಗಗಳೂ, ವ್ಯಾಘ್ರಗಳೂ, ಕರಡಿಗಳೂ, ವನೌಕಸರೂ, ಮದಗಜಗಳೂ, ಶಾರ್ದೂಲಗಳೂ, ಕೇಸರವನ್ನು ಹೊಂದಿದ ಸಿಂಹಗಳೂ, ಮೃಗಗಳೂ, ಮಹಿಷಗಳೂ, ಪಕ್ಷಿಗಳೂ, ಮತ್ತು ಇತರಭೂತಜಾತಿಗಳೂ ಶತಸಂಖ್ಯೆಯಲ್ಲಿ ಉಪದ್ರವಕ್ಕೆ ಒಳಗಾಗಿ ಸಮದ್ವಿಗ್ನರಾಗಿ ಅಲ್ಲಲ್ಲಿ ತಿರುಗಾಡಿದವು. ಅವುಗಳು ಆಯುಧವನ್ನು ಎತ್ತಿಹಿಡಿದ ಕೃಷ್ಣನನ್ನೂ ಮತ್ತು ಸುಡಲ್ಪಡುತ್ತಿರುವ ವನವನ್ನೂ ನೋಡಿದವು. ಗಿರಿಶೃಂಗ ಉತ್ಪಾತದಿಂದ ಶಬ್ದದಿಂದ ಎಲ್ಲರೂ ಹೆದರಿಹೋದರು.

ಸ್ವತೇಜೋಭಾಸ್ವರಂ ಚಕ್ರಮುತ್ಸಸರ್ಜಾತಿವೇಗವಾನ್ ।
ತೇನಾರ್ತಾ ಜಾತಯಃ ಕ್ಷುದ್ರಾಃ ಸದಾನವನಿಶಾಚರಾಃ ।
ನಿಕೃತ್ತಾಃ ಶತಶಃ ಪೇತುರನಲೇ ಪ್ರಾಣಿನಃ ಕ್ಷಣಾತ್ ॥೪॥

ಕೃಷ್ಣನು ತನ್ನ ಪ್ರಕಾಶದಿಂದಲೇ ಬೆಳಗುವ ಚಕ್ರವನ್ನು ವೇಗದಿಂದ ಪ್ರಯೋಗಿಸಿದನು. ಅದರಿಂದ ಕ್ಷುದ್ರಜಾತಿಗಳೂ, ದಾನವರೂ ಮತ್ತು ನಿಶಾಚರರು ತಮ್ಮ ಕತ್ತುಗಳು ಕತ್ತರಿಸಲ್ಪಡುತ್ತಿರಲು ಆರ್ತವಾಗಿ ಒಂದೇ ಕ್ಷಣದಲ್ಲಿ ಅಗ್ನಿಯಲ್ಲಿ ಬಿದ್ದವು.

ನ್ಯಪತತ್ ರಾಕ್ಷಸಾಸ್ತತ್ರ ಕೃಷ್ಣಚಕ್ರವಿದಾರಿತಾಃ ।
ವಸಾರುಧಿರಸಂಪೃಕ್ತಾಃ ಸಂಧ್ಯಾಯಾಮಿವ ತೋಯದಾಃ ॥೫॥

ಕೃಷ್ಣನ ಚಕ್ರದಿಂದ ಸೀಳಲ್ಪಟ್ಟ ರಾಕ್ಷಸರು ಸಾಯಂಕಾಲದ ಮೋಡಗಳಂತೆ ಕೊಬ್ಬು ಮತ್ತು ರಕ್ತಗಳಿಂದ ತೊಯ್ದವರಾಗಿ ಕೆಳಗೆ ಬಿದ್ದರು.

ಪಿಶಾಚಾನ್ ಪಕ್ಷಿಣೋ ನಾಗಾನ್ ಪಶೂಂಶ್ಚೈವ ಸಹಸ್ರಶಃ ।
ನಿಘ್ನಂಶ್ಚರತಿ ವಾರ್ಷ್ಣೇಯಃ ಕಾಲವತ್ ತತ್ರ ಭಾರತ ॥೬॥

ಭಾರತನೇ, ವಾರ್ಷ್ಣೇಯನಾದ ಕೃಷ್ಣನು ಪಿಶಾಚಗಳನ್ನೂ, ಪಕ್ಷಿಗಳನ್ನು, ನಾಗಗಳನ್ನೂ ಮತ್ತು ಉಳಿದ ಪಶುಗಳನ್ನೂ ಸಹಸ್ರಸಂಖ್ಯೆಯಲ್ಲಿ ಕೊಲ್ಲುತ್ತಾ ಅಲ್ಲಿ ಯಮನಂತೆ ಸಂಚರಿಸಿದನು.

ಕ್ಷಿಪ್ತಂಕ್ಷಿಪ್ತಂ ಪುನಶ್ಚಕ್ರಂ ಕೃಷ್ಣಸ್ಯಾಮಿತತೇಜಸಃ ।
ಹತ್ವಾಽನೇಕಾನಿ ಸತ್ವಾನಿ ಪಾಣಿಮೇತಿ ಪುನಃಪುನಃ ॥೭॥

ಅಮಿತತೇಜಸ್ಸುಳ್ಳ ಕೃಷ್ಣನು ಪ್ರಯೋಗಿಸಿದಂತೆ ಆ ಚಕ್ರವು ಅನೇಕ ಪ್ರಾಣಿಗಳನ್ನು ಕೊಂದು ಪುನಃ ಪುನಃ ಕೃಷ್ಣನ ಕೈಯನ್ನೇ ಸೇರುತ್ತಿತ್ತು.

ತಥಾ ತು ನಿಘ್ನತಸ್ತಸ್ಯ ಸರ್ವಭೂತಾನಿ ಭಾರತ ।
ಬಭೂವ ರೂಪಮತ್ಯುಗ್ರಂ ಸರ್ವಭೂತಾತ್ಮನಸ್ತದಾ ॥೮॥

ಭಾರತನೇ, ಎಲ್ಲ ಪ್ರಾಣಿಗಳನ್ನೂ ಕೊಲ್ಲುವ ಅವನ ರೂಪವು ಪ್ರಳಯಕಾಲದಲ್ಲಿ ಸರ್ವಪ್ರಾಣಿಸಂಹಾರಕವಾದ ಅವನ ಘೋರರೂಪವನ್ನು ತೋರುತ್ತಿದ್ದಿತು.

ಸಮೇತಾನಾಂ ಹಿ ದೇವಾನಾಂ ದಾನವಾನಾಂ ಚ ಸರ್ವಶಃ ।
ವಿಜೇತಾ ನಾಭವತ್ ಕಶ್ಚಿತ್ ಕೃಷ್ಣಪಾಂಡವಯೋರ್ಮೃಧೇ ॥೯॥

ಅಲ್ಲಿ ಎಲ್ಲ ಕಡೆಗಳಿಂದಲೂ ಬಂದು ಸೇರಿದ ದೇವತೆಗಳು ಮತ್ತು ದಾನವರ ಮಧ್ಯದಲ್ಲಿ ಯುದ್ಧದಲ್ಲಿ ಕೃಷ್ಣಾರ್ಜುನರನ್ನು ಸೋಲಿಸುವವನು ಒಬ್ಬನೂ ಇರಲಿಲ್ಲ.

ತಯೋರ್ಬಲಾತ್ ಪರಿತ್ರಾತುಂ ತಂ ಚ ದಾವಂ ಯದಾ ಸುರಾಃ ।
ನಾಶಕ್ನುವನ್ ಶಮಯಿತುಂ ತದಾऽಭೂವನ್ ಪರಾಙ್ಮುಖಾಃ ॥

ಪ್ರಾಣಿಗಳನ್ನು ಅವರಿಬ್ಬರ ಬಲದಿಂದ ಮೋಚನೆಮಾಡಲು ಅಥವಾ ಖಾಂಡವವನವನ್ನು ಅಗ್ನಿಯಿಂದ ಮೋಚನೆಮಾಡಲು ಅಸಮರ್ಥರಾದಾಗ ದೇವತೆಗಳು ಯುದ್ಧದಿಂದ ವಿಮುಖರಾದರು.

ಶತಕ್ರತುಸ್ತು ಸಂಪ್ರೇಕ್ಷ್ಯ ವಿಮುಖಾನ್ ದೇವತಾಗಣಾನ್ ।
ಬಭೂವಾವಸ್ಥಿತಃ ಪ್ರೀತಃ ಪ್ರಶಂಸನ್ ಕೃಷ್ಣಪಾಂಡವೌ ॥೧೧॥

ಇಂದ್ರನು ದೇವತೆಗಳ ಸಮೂಹವು ವಿಮುಖವಾದುದನ್ನು ನೋಡಿ ಕೃಷ್ಣಪಾಂಡವರನ್ನು ಸಂತೋಷದಿಂದ ಪ್ರಶಂಸೆಮಾಡುತ್ತಾ ಅಲ್ಲಿಯೇ ನಿಂತನು.

ವಿನಿವೃತ್ತೇಷು ದೇವೇಷು ವಾಗುವಾಚಾಶರೀರಿಣೀ ।
ಶತಕ್ರತುಮಭಿಪ್ರೇಕ್ಷ್ಯ ತದಾ ಗಂಭೀರನಿಸ್ವನಾ ॥೧೨॥

ದೇವತೆಗಳು ನಿವೃತ್ತರಾದ ಮೇಲೆ ಗಂಭೀರನಾದವುಳ್ಳ ಒಂದು ಅಶರೀರವಾಣಿಯು ಇಂದ್ರನನ್ನು ಉದ್ದೇಶಿಸಿ ಹೀಗೆ ಹೇಳಿತು.

ನ ತೇ ಸಖಾ ಸನ್ನಿಹಿತಸ್ತಕ್ಷಕಃ ಪನ್ನಗೋತ್ತಮಃ ।
ದಾಹಕಾಲೇ ಖಾಂಡವಸ್ಯ ಕುರುಕ್ಷೇತ್ರಂ ಗತೋ ಹ್ಯಸೌ ॥೧೩॥

ನಿನ್ನ ಸ್ನೇಹಿತನಾದ ಪನ್ನಗೇಂದ್ರನಾದ ತಕ್ಷಕನು ಇಲ್ಲಿ ಇರಲಿಲ್ಲ. ಖಾಂಡವದಹನಕಾಲದಲ್ಲಿ ಅವನು ಕುರುಕ್ಷೇತ್ರಕ್ಕೆ ಹೋಗಿದ್ದನು.

ನ ಚ ಶಕ್ಯೋ ತ್ವಯಾ ಜೇತುಂ ಯುದ್ಧೇಽಸ್ಮಿನ್ ಸಮವಸ್ಥಿತೌ ।
ವಾಸುದೇವಾರ್ಜುನೌ ಶಕ್ರ ನಿಬೋಧೇದಂ ವಚೋ ಮಮ ॥೧೪॥

ಇಂದ್ರನೇ, ಯುದ್ಧದಲ್ಲಿ ಜೊತೆಯಲ್ಲಿ ನಿಂತು ಎದುರಾದ ಈ ಕೃಷ್ಣಾರ್ಜುನರನ್ನು ಜಯಿಸಲು ನಿನಗೆ ಸಾಧ್ಯವಿಲ್ಲ. ಈ ನನ್ನ ಮಾತನ್ನು ಚೆನ್ನಾಗಿ ತಿಳಿ.

ನರನಾರಾಯಣಾವೇತೌ ತಾವೇತೌ ಲೋಕಭಾವನೌ ।
ಭವಾನಪ್ಯಭಿಜಾನಾತಿ ಯದ್ವೀರ್ಯೌ ಯತ್ಪರಾಕ್ರಮೌ ॥೧೫॥

ಲೋಕಭಾವನರಾದ ಈ ನರನಾರಾಯಣರು ಎಂತಹ ವೀರ್ಯವನ್ನೂ, ಎಂತಹ ಪರಾಕ್ರಮವನ್ನೂ ಹೊಂದಿದ್ದಾರೆಂದು ನೀನೂ ತಿಳಿದಿದ್ದೀಯೆ.

ನೈತೌ ಶಕ್ಯೌ ದುರಾಧರ್ಷೌ ವಿಜೇತುಮಮರೈರಪಿ ।
ಅಪಿ ಸರ್ವೇಷು ಲೋಕೇಷು ಪುರಾಣಾವೃಷಿಸತ್ತಮೌ ॥೧೬॥

ಪುರಾತನರಾದ, ಋಷಿಶ್ರೇಷ್ಠರಾದ, ಅದೃಶ್ಯರಾದ ಇವರಿಬ್ಬರನ್ನು ಎಲ್ಲ ಲೋಕಗಳಲ್ಲಿಯೂ ದೇವತೆಗಳೂ ಸಹ ಗೆಲ್ಲಲು ಸಾಧ್ಯವಿಲ್ಲ.

ಪೂಜನೀಯತಮಾವೇತಾವಪಿ ಸರ್ವೈಃ ಸುರಾಸುರೈಃ ।
ಸಯಕ್ಷರಕ್ಷೋಗಂಧರ್ವೈರ್ಗುಹ್ಯಕಿನ್ನರಪನ್ನಗೈಃ ॥೧೭॥

ಇವರಿಬ್ಬರೂ ಎಲ್ಲಾ ಸುರಾಸುರರಿಂದಲೂ, ಯಕ್ಷರಿಂದಲೂ, ರಾಕ್ಷಸರಿಂದಲೂ, ಗಂಧರ್ವರಿಂದಲೂ, ಗುಹ್ಯಕರಿಂದಲೂ, ಕಿನ್ನರರಿಂದಲೂ ಮತ್ತು ಸರ್ಪಗಳಿಂದಲೂ ಪೂಜೆಗೆ ಅತ್ಯಂತ ಅರ್ಹರಾದವರು.

ತಸ್ಮಾದಿತಃ ಸುರೈಃ ಸಾರ್ಧಂ ಗಂತುಮರ್ಹಸಿ ವಾಸವ ।
ದಿಷ್ಟಂ ಚಾಪ್ಯನುಪಶ್ಯೈತತ್ ಖಾಂಡವಸ್ಯ ಚ ನಾಶನಮ್ ॥೧೮॥

ಇಂದ್ರನೇ, ಆದ್ದರಿಂದ ಖಾಂಡವವನದ ವಿನಾಶವು ಮೊದಲೇ ಕ್ಲುಪ್ತವಾಗಿದೆ ಎಂದು ತಿಳಿದು ದೇವತೆಗಳ ಜೊತೆಯಲ್ಲಿ ನೀನು ಹಿಂದಿರುಗುವುದು ಒಳ್ಳೆಯದು.

ವೈಶಂಪಾಯನಃ

ಇತಿ ವಾಕ್ಯಮುಪಶ್ರುತ್ಯ ತಥ್ಯಮಿತ್ಯಮರೇಶ್ವರಃ ।
ರೋಷಾಮರ್ಷೌ ಸಮುತ್ಸೃಜ್ಯ ಸಂಪ್ರತಸ್ಥೇ ದಿವಂ ತದಾ ॥೧೯॥

ದೇವರಾಜನಾದ ಇಂದ್ರನು ಈ ಮಾತುಗಳನ್ನು ಕೇಳಿ, ಅವುಗಳು ಸತ್ಯವೆಂದು ತಿಳಿದು, ರೋಷಾಮರ್ಷಗಳನ್ನು ತ್ಯಜಿಸಿ ಸ್ವರ್ಗಲೋಕಕ್ಕೆ ಹೊರಟನು.

ಸಂಪ್ರಸ್ಥಿತಂ ಮಹಾತ್ಮಾನಂ ಸರ್ವ ಏವ ದಿವೌಕಸಃ ।
ತ್ವರಿತಾಃ ಸಹಿತಾ ರಾಜನ್ನನುಜಗ್ಮುಃ ಶತಕ್ರತುಮ್ ॥೨೦॥

ರಾಜನೇ, ಮಹಾನುಭಾವನಾದ ಇಂದ್ರನು ಹಿಂದಿರುಗಿ ಹೊರಟಿದುದನ್ನು ನೋಡಿ, ಎಲ್ಲಾ ಸ್ವರ್ಗವಾಸಿಗಳೂ ಶೀಘ್ರವಾಗಿ ಅವನನ್ನು ಹಿಂಬಾಲಿಸಿದರು.

ದೇವರಾಜಂ ತಥಾ ಯಾಂತಂ ಸಹ ದೇವೈರುದೀಕ್ಷ್ಯ ತು ।
ವಾಸುದೇವಾರ್ಜುನೌ ವೀರೌ ಸಿಂಹನಾದಂ ವಿನೇದತುಃ ॥೨೧॥

ದೇವರಾಜನಾದ ಇಂದ್ರನು ದೇವತೆಗಳ ಜೊತೆಯಲ್ಲಿ ಹಿಂದಿರುಗುವುದನ್ನು ನೋಡಿದ ವೀರರಾದ ಕೃಷ್ಣಾರ್ಜುನರು ಸಿಂಹನಾದವನ್ನು ಮಾಡಿದರು.

ದೇವರಾಜೇ ಗತೇ ರಾಜನ್ ಪ್ರಹೃಷ್ಟೌ ಕೃಷ್ಣಪಾಂಡವೌ ।
ನಿರ್ವಿಶಂಕೌ ಪುನರ್ದಾವಂ ದಾಹಯಾಮಾಸತುಸ್ತದಾ ॥೨೨॥

ರಾಜನೇ, ದೇವರಾಜನು ಹಿಂದಿರುಗಿದ ಮೇಲೆ, ಕೃಷ್ಣಾರ್ಜುನರು ಸಂತೋಷಗೊಂಡು ಯಾವ ಭಯವೂ ಇಲ್ಲದೆ, ಪುನಃ ಖಾಂಡವವನವನ್ನು ಅಗ್ನಿಯಿಂದ ದಾಹಮಾಡಿಸಿದರು.

ಸ ಮಾರುತ ಇವಾಭ್ರಾಣಿ ನಾಶಯಿತ್ವಾऽರ್ಜುನಃ ಸುರಾನ್ ।
ವ್ಯಧಮಚ್ಛರಸಂಪಾತೈಃ ಪ್ರಾಣಿನಃ ಖಾಂಡವಾಲಯಾನ್ ॥೨೩॥

ವಾಯುವು ಮೇಘಗಳನ್ನು ಚದುರಿಸಿದಂತೆ ಅರ್ಜುನನು ದೇವತೆಗಳನ್ನು ಚದುರಿಸಿ, ಖಾಂಡವನಿವಾಸಿಗಳಾದ ಪ್ರಾಣಿಗಳನ್ನು ತನ್ನ ಬಾಣಪ್ರಯೋಗದಿಂದ ನಾಶಮಾಡಿದನು.

ನ ಚ ಸ್ಮ ಕಿಂಚಿಚ್ಛಕ್ತೋऽಭೂದ್ ಭೂತಂ ನಿಶ್ಚರಿತುಂ ತತಃ ।
ಸಂಧ್ಯಮಾನಮಿಷುಭಿರಸ್ಯತಾ ಸವ್ಯಸಾಚಿನಾ ॥೨೪॥

ಅರ್ಜುನನಿಂದ ಬಾಣಗಳಿಂದ ಸಂಪೂರ್ಣವಾಗಿ ಮುಚ್ಚಲ್ಪಟ್ಟ ಕಾರಣದಿಂದ ಯಾವೊಂದು ಪ್ರಾಣಿಯೂ ಖಾಂಡವವನದಿಂದ ಹೊರಗೆ ಬರಲು ಸಾಧ್ಯವಾಗಲಿಲ್ಲ.

ನಾಶಕಂಶ್ಚಾಪಿ ಭೂತಾನಿ ಮಹಾತ್ಮಾನಂ ರಣೇऽರ್ಜುನಮ್ ।
ನಿರೀಕ್ಷಿತುಮಮೋಘೇಷುಂ ಕರಿಷ್ಯಂತಿ ಕುತೋ ರಣಮ್ ॥೨೫॥

ಯಾರಿಗೂ ಯುದ್ಧದಲ್ಲಿ ಮಹಾತ್ಮನಾದ ಅರ್ಜುನನನ್ನು ನೋಡುವುದಕ್ಕೂ ಸಾಧ್ಯವಾಗಲಿಲ್ಲ. ಇನ್ನು ಅವನ ಜೊತೆಯಲ್ಲಿ ಯುದ್ಧವನ್ನು ಹೇಗೆ ಮಾಡುತ್ತಾರೆ?

ಶತೇನೈಕಂ ಚ ವಿವ್ಯಾಧ ಶತಂ ಚೈಕೇನ ಪತ್ರಿಣಾ ।
ವ್ಯಸವಸ್ತೇ ಪತಂತ್ಯಗ್ನೌ ಸಾಕ್ಷಾತ್ ಕಾಲಹತಾ ಇವ ॥೨೬॥

ಅರ್ಜುನನು ನೂರು ಬಾಣಗಳಿಂದ ಒಂದು ಪ್ರಾಣಿಯನ್ನು, ಒಂದು ಬಾಣದಿಂದ ನೂರು ಪ್ರಾಣಿಗಳನ್ನೂ ಹೊಡೆದು ಉರುಳಿಸಿದನು. ಸಾಕ್ಷಾತ್ ಯಮನ ಏಟಿಗೆ ಸಿಕ್ಕಿದಂತೆ ಆ ಪ್ರಾಣಿಗಳು ಪ್ರಾಣವನ್ನು ಕಳೆದುಕೊಂಡು ಅಗ್ನಿಯೊಳಗೆ ಬಿದ್ದವು.

ನ ಚಾಲಭಂತ ತೇ ಶರ್ಮ ರೋಧಃಸು ವಿಷಮೇಷು ಚ ।
ಪಿತೃದೇವನಿವಾಸೇಷು ಸಂತಾಪಶ್ಚೈವ ಜಾಯತೇ ॥೨೭॥

ಕಾಡಿನ ಅಂಚುಗಳಲ್ಲಿಯೂ, ವಿಷಮಪ್ರದೇಶಗಳಲ್ಲಿಯೂ ಬಿದ್ದ ಆ ಪ್ರಾಣಿಗಳು ಎಂದೂ ಸುಖವನ್ನು ಪಡೆಯಲಿಲ್ಲ. ಪಿತೃನಿವಾಸಗಳಲ್ಲಿಯೂ, ದೇವನಿವಾಸಗಳಲ್ಲಿಯೂ ಸಂತಾಪವು ಉಂಟಾಯಿತು.

ಭೂತಸಂಘಸಹಸ್ರಾಣಿ ದೀನಾಶ್ಚಕ್ರುರ್ಮಹಾಸ್ವನಮ್ ।
ರುರುದುರ್ದಾರುಣಂ ಚೈವ ತಥಾನ್ಯೇ ಮೃಗಪಕ್ಷಿಣಃ ॥೨೮॥

ಸಹಸ್ರಾರು ಪ್ರಾಣಿಸಮೂಹಗಳು ದೈನ್ಯದಿಂದ ಮಹಾನಾದವನ್ನು ಮಾಡಿದವು. ಇನ್ನೂ ಕೆಲವು ಮೃಗಪಕ್ಷಿಗಳು ದಾರುಣವಾಗಿ ರೋದನವನ್ನು ಮಾಡಿದವು.

ತೇನ ಶಬ್ದೇನ ವಿತ್ರೇಸುರ್ಗಂಗೋದಧಿಚರಾ ಝಷಾಃ ।
ಅಪ್ಸು ನ ವ್ಯಚರಂಶ್ಚೈವ ತಥಾಽನ್ಯೇ ಮೃಗಪಕ್ಷಿಣಃ ॥೨೯॥

ಆ ಶಬ್ದದಿಂದ ಹೆದರಿದ ಮೀನುಗಳು ಗಂಗೆಯ ನೀರಿನೊಳಗೆ ತಾವು ಸಂಚರಿಸುವುದನ್ನು ನಿಲ್ಲಿಸಿದವು. ಉಳಿದ ಮೃಗಪಕ್ಷಿಗಳೂ ಸಂಚಾರವನ್ನು ನಿಲ್ಲಿಸಿ ಸ್ಥಗಿತವಾದವು.

ನ ಹ್ಯರ್ಜುನಂ ಮಹಾಬಾಹುಂ ನಾಪಿ ಕೃಷ್ಣಂ ಮಹಾಬಲಮ್ ।
ನಿರೀಕ್ಷಿತುಂ ಚ ಶಕ್ನೋತಿ ಕಶ್ಚಿದ್ ಯೋದ್ಧುಂ ಕುತಃ ಪುನಃ ॥೩೦॥

ಮಹಾಬಾಹುವನ್ನಾದ ಅರ್ಜುನನ್ನಾಗಲೀ, ಮಹಾಬಲನಾದ ಕೃಷ್ಣನನ್ನಾಗಲೀ ನೋಡಲು ಯಾರಿಗೂ ಧೈರ್ಯವಿರಲಿಲ್ಲ. ಇನ್ನು ಯುದ್ಧಮಾಡುವುದು ಎಲ್ಲಿಂದ?

ಏಕಾಯನಗತಾ ಯೇಽಪಿ ಉತ್ಪತಂತ್ಯತ್ರ ಕೇಚನ ।
ರಾಕ್ಷಸಾನ್ ದಾನವಾನ್ ನಾಗಾನ್ ಜಘ್ನೇ ಚಕ್ರೇಣ ತಾನ್ ಹರಿಃ॥೩೧॥

ತೇ ತು ಭಿನ್ನಶಿರೋದೇಹಾಶ್ಚಕ್ರವೇಗಾದ್ ಗತಾಸವಃ ।
ಪೇತುರಾಸ್ಯೇ ಮಹಾಕಾಯಾಃ ದೀಪ್ತಸ್ಯ ವಸುರೇತಸಃ ॥೩೨॥

ಒಂದೇ ಯಾನದಲ್ಲಿ ಕುಳಿತು ಮೇಲೆ ಹಾರುವ ರಾಕ್ಷಸರನ್ನೂ, ದಾನವರನ್ನೂ, ನಾಗಗಳನ್ನೂ, ಕೃಷ್ಣನು ತನ್ನ ಚಕ್ರದಿಂದ ಸಂಹರಿಸಿದನು. ಮಹಾಕಾಯರಾದ ಅವರು ತಲೆಗಳನ್ನು ಒಡೆದುಕೊಂಡು ಚಕ್ರವೇಗದಿಂದ ದೇಹಗಳು ಕತ್ತರಿಸಲ್ಪಟ್ಟು, ಪ್ರಾಣಗಳನ್ನು ಕಳೆದುಕೊಂಡು ಹಿರಣ್ಯರೇತನಾದ ಪ್ರಜ್ವಲಿಸುವ ಅಗ್ನಿಯ ಮುಖದಲ್ಲಿ ಬಿದ್ದರು.

ಸಮಾಂಸರುಧಿರೌಘೈಶ್ಚ ಮೇದೌಘೈಶ್ಚ ಸಮೀರಿತಃ ।
ಉಪರ್ಯಾಕಾಶಗೋ ವಹ್ನಿರ್ವಿಧೂಮ ಇವ ದೃಶ್ಯತೇ ॥೩೩॥

ಮಾಂಸರುಧಿರ ಸಮೂಹಗಳಿಂದಲೂ, ಮೇದಸ್ಸಿನ ಸಮೂಹದಿಂದಲೂ, ಅಭಿವೃದ್ಧಿಗೊಂಡ ಅಗ್ನಿಯು ಮೇಲೆ ಆಕಾಶದಲ್ಲಿ ಧೂಮವೇ ಇಲ್ಲದಂತೆ ಪ್ರಕಾಶಿಸುತ್ತಿತ್ತು.

ದೀಪ್ತಾಕ್ಷೋ ದೀಪ್ತಜಿಹ್ವಶ್ಚ ದೀಪ್ತವ್ಯಾತ್ತಮಹಾನನಃ ।
ದೀಪ್ತೋರ್ಧ್ವಕೇಶಃ ಪಿಂಗಾಕ್ಷೋ ವಿಷ್ವಕ್ ಪ್ರಾಣಭೃತಾಂ ವರಃ ॥೩೪॥

ತಾಂ ಸ ಕೃಷ್ಣಾರ್ಜುನಕೃತಾಂ ಸುಧಾಂ ಪ್ರಾಪ್ಯ ಹುತಾಶನಃ ।
ಬಭೂವ ಮುದಿತಃ ಸದ್ಯಃ ಪರಾಂ ನಿರ್ವೃತಿಮಾಗತಃ ॥೩೫॥

ಉರಿಯುವ ಕಣ್ಣುಳ್ಳವನೂ, ಉರಿಯುವ ಜಿಹ್ವೆಯುಳ್ಳವನೂ, ಉರಿಯುವ ತೆರೆದ ದೊಡ್ಡ ಮುಖವನ್ನುಳ್ಳವನೂ, ಉರಿಯುವ ಊರ್ಧ್ವಕೇಶಗಳನ್ನುಳ್ಳವನೂ, ಪಿಂಗಾಕ್ಷನೂ, ಜೀವರಲ್ಲಿ ಶ್ರೇಷ್ಠನಾದವನೂ, ಆದ ವೈಶ್ವಾನರನು ಕೃಷ್ಣಾರ್ಜುನರು ಒದಗಿಸಿಕೊಟ್ಟ ಅಮೃತಾಹಾರವನ್ನು ಸ್ವೀಕರಿಸಿ ಸಂತೋಷಗೊಂಡು ತಕ್ಷಣದಲ್ಲಿ ಬಹಳ ತೃಪ್ತಿಯನ್ನು ಪಡೆದನು.

ಅಥಾಽಸುರಂ ಮಯಂ ನಾಮ ತಕ್ಷಕಸ್ಯ ನಿವೇಶನಾತ್ ।
ವಿಪ್ರದ್ರವಂತಂ ಸಹಸಾ ದದರ್ಶ ಮಧುಸೂದನಃ ॥೩೬॥

ತಮಗ್ನಿಃ ಪ್ರಾರ್ಥಯಾಮಾಸ ದಿಧಕ್ಷುರ್ವಾತಸಾರಥಿಃ ।
ದೇಹವಾನ್ ವೈ ಜಟೀ ಭೂತ್ವಾ ನರ್ದಂಶ್ಚ ಜಲದೋ ಯಥಾ ॥೩೭॥

ಆಗ ಮಧುಸೂದನನು ತಕ್ಷಕನ ನಿವೇಶನದಿಂದ ಹೊರಗೆ ಓಡಿಹೋಗುತ್ತಿರುವ ಮಯಾಸುರನನ್ನು ಇದ್ದಕ್ಕಿದ್ದಂತೆಯೇ ನೋಡಿದನು. ವಾತಸಾರಥಿಯಾದ ಅಗ್ನಿಯು ಅವನನ್ನು ದಹಿಸಲು ಬಯಸಿ ಕೃಷ್ಣನನ್ನು ಪ್ರಾರ್ಥಿಸಿದನು.

ಜಿಘ್ರಾಂಸುರ್ವಾಸುದೇವಶ್ಚ ಚಕ್ರಮುದ್ಯಮ್ಯ ವಿಷ್ಠಿತಃ ।
ಸ ಚಕ್ರಮುದ್ಯತಂ ದೃಷ್ಟ್ವಾ ದಿಧಕ್ಷುಂ ಚ ಹುತಾಶನಮ್ ॥೩೮॥

ಅಗ್ನಿಯು ದೇಹವನ್ನು ಧರಿಸಿ, ಜಟೆಯನ್ನೂ ಧರಿಸಿ, ಮೇಘದಂತೆ ಗರ್ಜಿಸುತ್ತಾ ಮಯನನ್ನು ಭಕ್ಷಿಸಲು ಬಯಸಿದನು. ವಾಸುದೇವನೂ ಸಹ ಚಕ್ರವನ್ನು ಎತ್ತಿಹಿಡಿದು ನಿಂತನು.

ಅಭಿಧಾಯಾರ್ಜುನೇತ್ಯೇವಂ ಮಯಶ್ಚುಕ್ರೋಶ ಭಾರತ ।
ತಸ್ಯ ಭೀತಸ್ವನಂ ಶ್ರುತ್ವಾ ಮಾ ಭೈರಿತಿ ಧನಂಜಯಃ ॥೩೯॥

ಅವನು ಚಕ್ರವನ್ನು ಎತ್ತಿಹಿಡಿದ ವಾಸುದೇವನನ್ನೂ, ತನ್ನನ್ನು ತಿನ್ನಲು ಬಯಸಿದ ಅಗ್ನಿಯನ್ನೂ ನೋಡಿ, ಅರ್ಜುನ ಎಂದು ಗಟ್ಟಿಯಾಗಿ ಹೇಳಿ ಆ ಮಯನು ಕಿರುಚಿದನು.

ಪ್ರತ್ಯುವಾಚ ಮಯಂ ಪಾರ್ಥೋ ಜೀವಯನ್ನಿವ ಭಾರತ ।
ಯಂ ನ ಭೇತವ್ಯಮಿತ್ಯಾಹ ಮಯಂ ಪಾರ್ಥೋ ದಯಾಪರಃ ॥೪೦॥

ಅರ್ಜುನನು ಅವನ ಭಯಯುಕ್ತವಾದ ಸ್ವರವನ್ನು ಕೇಳಿ ಅವನನ್ನು ಪುನಶ್ಚೇತನಗೊಳಿಸುವಂತೆ ಹೆದರಬೇಡ ಎಂದು ಹೇಳಿದನು.

ತಂ ಪಾರ್ಥೇನಾಭಯೇ ದತ್ತೇ ನಮುಚೇರ್ಭ್ರಾತರಂ ಮಯಮ್।
ನ ಹಂತುಮೈಚ್ಛದ್ ದಾಶಾರ್ಹಃ ಪಾವಕೋ ನ ದದಾಹ ಚ ॥೪೧॥

ದಯಾಪರನಾದ ಅರ್ಜುನನು ನಮುಚಿಯ ತಮ್ಮನಾದ ಮಯನಿಗೆ ಹೆದರಬೇಡ ಎಂದು ಹೇಳಿ ಅಭಯದಾನವನ್ನು ಮಾಡುತ್ತಿರಲು, ದಾಶಾರ್ಹನಾದ ಕೃಷ್ಣನು ಅವನನ್ನು ಕೊಲ್ಲಲು ಬಯಸಲಿಲ್ಲ. ಅಗ್ನಿಯೂ ಅವನನ್ನು ದಹಿಸಲಿಲ್ಲ.

ತದ್ವನಂ ಪಾವಕೋ ಧೀಮಾನ್ ದಿನಾನಿ ದಶ ಪಂಚ ಚ ।
ದದಾಹ ಕೃಷ್ಣಪಾರ್ಥಾಭ್ಯಾಂ ರಕ್ಷಿತಃ ಪಾಕಶಾಸನಾತ್ ॥೪೨॥

ಕೃಷ್ಣಾರ್ಜುನರಿಂದ ರಕ್ಷಿಸಲ್ಪಟ್ಟ ಮೇಧಾವಿಯಾದ ಅಗ್ನಿಯು ಇಂದ್ರನಿಂದ ರಕ್ಷಿಸಲ್ಪಟ್ಟ ಆ ಖಾಂಡವವನವನ್ನು ಹದಿನೈದು ದಿನಗಳ ಕಾಲ ದಹಿಸಿದನು.

ತಸ್ಮಿನ್ ವನೇ ದಹ್ಯಮಾನೇ ಷಡಗ್ನಿರ್ನ ದದಾಹ ಚ ।
ಅಶ್ವಸೇನಂ ಮಯಂ ಚೈವ ಚತುರಃ ಶಾರ್ಙ್ಗಕಾಂಸ್ತಥಾ ॥೪೩॥

ಆ ವನವನ್ನು ಸುಡುತ್ತಿರುವಾಗ ಅಗ್ನಿಯು ಆರು ಜನರನ್ನು ಸುಡಲಿಲ್ಲ. ಅವರು ಅಶ್ವಸೇನ, ಮಯ ಮತ್ತು ಮರಿಗಳಾದ ನಾಲ್ಕು ಶಾರ್ಙ್ಗಪಕ್ಷಿಗಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ದ್ವಾತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಮಯದರ್ಶನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೦

ದೈತ್ಯಾಶ್ಚ ನಾಗಾಶ್ಚ ಪಿತಾಚಯಕ್ಷಾ
ಹತಾಃ ಸರ್ವೇ ತದ್ವನಸ್ಥಾ ಹಿ ತಾಭ್ಯಾಂ ।
ಋತೇ ಚತುಷ್ಪಕ್ಷಿಣಶ್ಚಾಶ್ವಸೇನಂ
ಮಯಂ ಚ ನಾನ್ಯತ್ ಕಿಂಚಿದಾಸಾತ್ರ ಮುಕ್ತಂ ॥೨೩೯॥

ದೈತ್ಯರು ನಾಗರು ಪಿಶಾಚರು ಯಕ್ಷರು ಮುಂತಾಗಿ ಆ ಕಾಡಿನಲ್ಲಿದ್ದ ಎಲ್ಲರೂ ಕೃಷ್ಣಾರ್ಜುನರಿಂದ ಹತರಾದರು. ನಾಲ್ಕು ಪಕ್ಷಿಗಳನ್ನೂ ಅಶ್ವಸೇನನನ್ನೂ ಮಯನನ್ನು ಬಿಟ್ಟರೆ ಬೇರೇನೂ ಅಲ್ಲಿ ಉಳಿಯಲಿಲ್ಲ.

ಅಯಮಗ್ನೇಜರಿತೇತ್ಯಾದಿಮಂತ್ರೈಃ
ಸ್ತುತ್ವಾ ವಹ್ನಿಂ ಪಕ್ಷಿಣೋ ನೋಪದಗ್ಧಾಃ ।
ಸ ಚಾಶ್ವಸೇನಃ ಪುತ್ರಕಸ್ತಕ್ಷಕಸ್ಯ
ಮಾತ್ರಾ ಗ್ರಸ್ತಃ ಪ್ರಾತಿಲೋಮ್ಯೇನ ಕಂಠೇ ॥೨೪೦॥

ಛಿನ್ನೇಽರ್ಜುನೇ ನಾಂತರಿಕ್ಷೇ ಪತಂತ್ಯಾ-
ಸ್ತಸ್ಯಾ ಶಕ್ರೇಣಾಮಿತಶ್ಚಿನ್ನಪುಚ್ಛಃ ।
ವಧಾನ್ಮಾತುಃ ಪುಚ್ಛಭಂಗಾಚ್ಚ ರೋಷಾತ್
ಹಂತುಂ ಪಾರ್ಥಂ ಕರ್ಣತೂಣೀರಗೋಽಭೂತ್ ॥೨೪೧॥

'ಅಯಮಗ್ನೇ ಜರಿತಾ' ಇತ್ಯಾದಿ ಮಂತ್ರಗಳಿಂದ ಅಗ್ನಿಯನ್ನು ಸ್ತೋತ್ರ ಮಾಡಿದ್ದರಿಂದ ಪಕ್ಷಿಗಳು ಸುಟ್ಟುಹೋಗಲಿಲ್ಲ. ಅಶ್ವಸೇನ ತಕ್ಷಕನ ಮಗ. ಅವನ ತಾಯಿ ಅವನನ್ನು ಹಿಂದು ಮುಂದಾಗಿ ನುಂಗಿ ಆಕಾಶದಲ್ಲಿ ಹಾರುತ್ತಿದ್ದಾಗ ಅವಳ ಕುತ್ತಿಗೆಯನ್ನು ಅರ್ಜುನ ಕತ್ತರಿಸಿದ. ಅದರಿಂದ ಅವನ ಬಾಲ ತುಂಡಾಯಿತು. ಆದರೆ ಅವನನ್ನು ಇಂದ್ರ ರಕ್ಷಿಸಿದ. ಅವನು, ತನ್ನ ತಾಯಿಯನ್ನು ಕೊಂದಿದ್ದಕ್ಕೆ ಮತ್ತು ತನ್ನ ಬಾಲವನ್ನೂ ಕತ್ತರಿಸಿದ್ದಕ್ಕೆ ಕೋಪದಿಂದ ಅರ್ಜುನನನ್ನು ಕೊಲ್ಲುವ ಉದ್ದೇಶದಿಂದ ಕರ್ಣನ ಬತ್ತಳಿಕೆಯನ್ನು ಸೇರಿಕೊಂಡ.

★ ★ ★ ★

ಇನ್ನೂರ ಮೂವತ್ಮೂರನೆಯ ಅಧ್ಯಾಯ

(ಶಾಂರ್ಗಕಪಕ್ಷಿಗಳ ಅದಾಹಕ್ಕೆ ಕಾರಣಪ್ರಶ್ನೆ, ಮಂದಪಾಲಚರಿತೆ, ಮಕ್ಕಳಿಲ್ಲದ ಅವನಿಂದ ಶಾಂರ್ಗಕ- ಪಕ್ಷಿರೂಪವನ್ನು ಧರಿಸಿ ಮಕ್ಕಳ ಉತ್ಪಾದನೆ.)

ಜನಮೇಜಯಃ

ಕಿಮರ್ಥಂ ಶಾಂರ್ಗಕಾನಗ್ನಿರ್ನ ದದಾಹ ತಥಾಗತೇ ।
ತಸ್ಮಿನ್ ವನೇ ದಹ್ಯಮಾನೇ ಬ್ರಹ್ಮನ್ನೇತದ್ ಪ್ರಚಕ್ಷ್ವಮೇ ॥೧॥

ಬ್ರಾಹ್ಮಣಶ್ರೇಷ್ಠರೇ, ಖಾಂಡವವನವು ದಹಿಸಲ್ಪಡುತ್ತಿರುವ ಆ ಪರಿಸ್ಥಿತಿಯಲ್ಲಿ ಅಗ್ನಿಯು ಶಾಂರ್ಗಕಗಳನ್ನು ಏಕೆ ದಹಿಸಲಿಲ್ಲ. ಇದನ್ನು ನನಗೆ ತಿಳಿಸಿ.

ನಾಗಸ್ಯಾಪ್ಯಶ್ವಸೇನಸ್ಯ ದಾನವಸ್ಯ ಮಯಸ್ಯ ಚ ।
ಕಾರಣಂ ಕೀರ್ತಿತಂ ಬ್ರಹ್ಮನ್ ಶಾಂರ್ಗಕಾಣಾಂ ನ ಕೀರ್ತಿತಮ್ ॥೨॥

ಅಶ್ವಸೇನಸರ್ಪವು ಮತ್ತು ದಾನವನಾದ ಮಯನು ದಹಿಸಲ್ಪಡದಿರುವುದಕ್ಕೆ ಕಾರಣವನ್ನು ಹೇಳಿದ್ದೀರಿ. ಆದರೆ, ಬ್ರಾಹ್ಮಣಶ್ರೇಷ್ಠರೇ, ಶಾಂರ್ಗಕಗಳ ವಿಷಯದಲ್ಲಿ ಕಾರಣವನ್ನು ಹೇಳಲಿಲ್ಲ.

ತದೇತದದ್ಭುತಂ ಬ್ರಹ್ಮನ್ ಶಾಂರ್ಗಕಾಣಾಮನಾಶನಮ್ ।
ಕೀರ್ತಯಸ್ವಾಗ್ನಿಸಮ್ಮರ್ದೇ ಕಥಂ ತೇ ನ ವಿನಾಶಿತಾಃ ॥೩॥

ಬ್ರಾಹ್ಮಣರೇ, ಶಾಂರ್ಗಕಗಳ ಅದಾಹವು ಅದ್ಭುತವಾಗಿ ತೋರುತ್ತದೆ. ಅಂತಹ ಅಗ್ನಿಸಮ್ಮರ್ದವುಂಟಾದಾಗ ಅವು ಏಕೆ ದಹಿಸಲ್ಪಡಲಿಲ್ಲ ಎಂಬುದನ್ನು ಹೇಳಿ.

ವೈಶಂಪಾಯನಃ

ಯದರ್ಥಂ ಶಾಂರ್ಗಕಾನಗ್ನಿರ್ನ ದದಾಹ ತಥಾ ಗತೇ ।
ತತ್ ತೇ ಸಮ್ಯಗ್ ಯಥಾವೃತ್ತಂ ಕಥಯಿಷ್ಯಾಮಿ ಭಾರತ ॥೪॥

ಭಾರತನೇ, ಅಗ್ನಿಯು ಆ ಪರಿಸ್ಥಿತಿಯಲ್ಲಿ ಶಾಂರ್ಗಕಗಳನ್ನು ದಹಿಸದಿರುವುದಕ್ಕೆ ಕಾರಣವನ್ನು ಹೇಳುತ್ತಾ, ನಡೆದ ಘಟನೆಯನ್ನು ಸರಿಯಾಗಿ ಹೇಳುವೆನು.

ಧರ್ಮಜ್ಞಾನಾಂ ಮುಖ್ಯತಮಸ್ತಪಸ್ವೀ ಸಂಶಿತವ್ರತಃ ।
ಆಸೀನ್ಮಹರ್ಷಿಃ ಶ್ರುತವಾನ್ ಮಂದಪಾಲ ಇತಿ ಶ್ರುತಃ ॥೫॥

ಧರ್ಮಜ್ಞರಲ್ಲಿ ಶ್ರೇಷ್ಠನಾದವನೂ, ತಪಸ್ವಿಯೂ, ಶ್ರೇಷ್ಠವಾದ ವ್ರತಧಾರಿಯೂ, ಬಹುಶ್ರುತನೂ ಆದ ಮಂದಪಾಲನೆಂಬ ಮಹರ್ಷಿಯಿದ್ದನು.

ಮಾರ್ಗಂ ಸಮಾಸ್ಥಿತೋ ರಾಜನ್ ಋಷೀಣಾಮೂರ್ಧ್ವರೇತಸಾಮ್।
ಸ್ವಾಧ್ಯಾಯವಾನ್ ಧರ್ಮರತಸ್ತಪಸ್ವೀ ವಿಜಿತೇಂದ್ರಿಯಃ ॥೬॥

ರಾಜನೇ, ಅವನು ಊರ್ಧ್ವರೇತಸ್ಕರಾದ ಋಷಿಗಳ ಮಾರ್ಗವನ್ನು ಹಿಡಿದು ಜಿತೇಂದ್ರಿಯನಾಗಿ ಸ್ವಾಧ್ಯಾಯವನ್ನು ಮಾಡುತ್ತಾ, ಧರ್ಮದಲ್ಲಿಯೂ ಮತ್ತು ತಪಸ್ಸಿನಲ್ಲಿಯೂ ರತನಾಗಿದ್ದನು.

ಸ ಗತ್ವಾ ತಪಸಾಂ ಪಾರಂ ದೇಹಮುತ್ಸೃಜ್ಯ ಭಾರತ ।
ಜಗಾಮ ಪಿತೃಲೋಕಾಯ ನ ಲೇಭೇ ತತ್ರ ತತ್ಫಲಮ್ ॥೭॥

ಅವನು ತಪಸ್ಸಿನ ಉನ್ನತಮಟ್ಟವನ್ನು ತಲುಪಿ, ದೇಹವನ್ನು ಪರಿತ್ಯಾಗಮಾಡಿ, ಪಿತೃಲೋಕಕ್ಕೆ ಹೋದನು. ಆದರೆ ಅಲ್ಲಿ ತನ್ನ ತಪಸ್ಸಿನ ಫಲವನ್ನು ಪಡೆಯಲಿಲ್ಲ.

ಸ ಲೋಕಾನಾವೃತಾನ್ ದೃಷ್ಟ್ವಾ ತಪಸಾ ನಿರ್ಜಿತಾನಪಿ ।
ಪಪ್ರಚ್ಛ ಧರ್ಮರಾಜಸ್ಯ ಸಮೀಪಸ್ಥಾನ್ ದಿವೌಕಸಃ ॥೮॥

ಅವನು ತಾನು ತಪಸ್ಸಿನಿಂದ ಸಂಪಾದಿಸಿದ ಲೋಕಗಳು ತನಗೆ ಮುಚ್ಚಲ್ಪಟ್ಟಿರುವುದನ್ನು ನೋಡಿ ಧರ್ಮರಾಜನ ಸಮೀಪದಲ್ಲಿದ್ದ ದೇವತೆಗಳನ್ನು ಕೇಳಿದನು.

ಮಂದಪಾಲಃ

ಕಿಮರ್ಥಮಾವೃತಾ ಲೋಕಾ ಮಯೇಹ ತಪಸಾऽರ್ಜಿತಾಃ ।
ಕಿಂ ಮಯಾ ನ ಕೃತಂ ತತ್ರ ಯಸ್ಯೇದಂ ಕರ್ಮಣಃ ಫಲಮ್ ॥೯॥

ನಾನು ತಪಸ್ಸಿನಿಂದ ಜಯಿಸಿದ ಲೋಕಗಳು ನನಗೆ ಏಕೆ ಮುಚ್ಚಲ್ಪಟ್ಟಿವೆ. ನಾನು ಯಾವ ಕರ್ಮವನ್ನು ಮಾಡದೇ ಇದ್ದುದರ ಫಲವಾಗಿ ಈ ಫಲವು ಉಂಟಾಗಿದೆ?

ತತ್ರಾಹಂ ತತ್ ಕರಿಷ್ಯಾಮಿ ಯದರ್ಥಮಿದಾಮಾವೃತಮ್ ।
ಫಲಮೇತಸ್ಯ ತಪಸಃ ಕಥಯಧ್ವಂ ದಿವೌಕಸಃ ॥೧೦॥

ನಾನು ಭೂಮಿಗೆ ಹೋಗಿ ಈ ಆವರಣವನ್ನು ತೆಗೆಯುವ ಕ್ರಮವನ್ನು ಮಾಡುತ್ತೇನೆ. ದೇವತೆಗಳೇ, ಈ ತಪಸ್ಸಿನ ಫಲವನ್ನು ಹೇಳಿ.

ದೇವಾಃ

ಋಣೈರ್ನೋ ಮಾನವಾ ಬ್ರಹ್ಮನ್ ಸರ್ವೇ ಜಾಯಂತಿ ತಚ್ಛೃಣು ।
ಬ್ರಹ್ಮಚರ್ಯೇಣ ಯಜ್ಞೇನ ಪ್ರಜಯಾ ಚ ನ ಸಂಶಯಃ ॥೧೧॥

ತದಪಾಕ್ರಿಯತೇ ಸರ್ವಂ ಯಜ್ಞೇನ ತಪಸಾ ಸುತೈಃ ।
ತಪಸ್ವೀ ಯಜ್ವಕೃಚ್ಚಾಸಿ ನ ಚ ತೇ ವಿದ್ಯತೇ ಪ್ರಜಾ ॥೧೨॥

ಬ್ರಾಹ್ಮಣನೇ, ಅದನ್ನು ಕೇಳು. ಎಲ್ಲ ಮನುಷ್ಯರೂ ಹುಟ್ಟುತ್ತಾ ಮೂರು ಋಣಗಳನ್ನು ತೆಗೆದುಕೊಂಡು ಹುಟ್ಟುತ್ತಾರೆ. ಬ್ರಹ್ಮಚರ್ಯದಿಂದ, ಯಜ್ಞದಿಂದ ಮತ್ತು ಪ್ರಜೆಗಳಿಂದ

ಆ ಋಣಗಳೆಲ್ಲವೂ ತೀರಿಸಲ್ಪಡುತ್ತವೆ. ನೀನು ಯಜ್ಞಗಳನ್ನು ಮಾಡಿ ತಪಸ್ವಿಯಾಗಿದ್ದರೂ, ನಿನಗೆ ಮಕ್ಕಳಿಲ್ಲ.

ತ ಇಮೇ ಪ್ರಸವಸ್ಯಾರ್ಧೇ ತವ ಲೋಕಾಃ ಸಮಾವೃತಾಃ ।
ಪ್ರಜಾಯಸ್ವ ತತೋ ಲೋಕಾನುಪಭೋಕ್ತಾಸಿ ಶಾಶ್ವತಾನ್ ॥೧೩॥

ನಿನಗೆ ಮಕ್ಕಳಿಲ್ಲದ ಕಾರಣ ಈ ಲೋಕಗಳು ಮುಚ್ಚಲ್ಪಟ್ಟಿವೆ. ನೀನು ಮಕ್ಕಳನ್ನು ಪಡೆ. ಅನಂತರ, ಶಾಶ್ವತವಾದ ಲೋಕಗಳನ್ನು ಅನುಭವಿಸುವಿ.

ಪುನ್ನಾಮ್ನೋ ನರಕಾತ್ ಪುತ್ರಸ್ತ್ರಾತೀತಿ ಪಿತರಂ ಮುನೇ ।
ತಸ್ಮಾದಪತ್ಯಸಂತಾನೇ ಯತಸ್ವ ದ್ವಿಜಸತ್ತಮ ॥೧೪॥

ಋಷಿಯೇ, ಪುತಿ ಎಂಬ ನರಕದಿಂದ ತಂದೆಯನ್ನು ರಕ್ಷಿಸುವ ಕಾರಣದಿಂದ ಮಗನನ್ನು ಪುತ್ರನೆಂದು ಕರೆಯುತ್ತಾರೆ. ದ್ವಿಜಶ್ರೇಷ್ಠನೇ, ಆದ್ದರಿಂದ ಮಕ್ಕಳನ್ನು ಪಡೆಯಲು ಪ್ರಯತ್ನಿಸು.

ವೈಶಂಪಾಯನಃ

ತಚ್ಛ್ರುತ್ವಾ ಮಂದಪಾಲಸ್ತು ತೇಷಾಂ ವಾಕ್ಯಂ ಮಹಾನೃಷಿಃ ।
ಕ್ವ ತು ಶೀಘ್ರಮಪತ್ಯಂ ಸ್ಯಾದ್ ಬಹುಲಂ ಚೇತ್ಯಚಿಂತಯತ್ ॥೧೫॥

ಅವರ ಮಾತನ್ನು ಕೇಳಿದ ಮಹರ್ಷಿಯಾದ ಮಂದಪಾಲನು ಹೇಗೆ ಶೀಘ್ರವಾಗಿ ಬಹಳ ಮಕ್ಕಳನ್ನು ಪಡೆಯಬಹುದು ಎಂದು ಚಿಂತಿಸಿದನು.

ಸ ಚಿಂತಯನ್ನಭ್ಯಗಚ್ಛತ್ ಬಹುಲಪ್ರಸವಾನ್ ಖಗಾನ್ ।
ಶಾಂರ್ಗಿಕಾಂ ಶಾಂರ್ಗಕೋ ಭೂತ್ವಾ ಜರಿತಾಂ ಸಮುಪೇಯಿವಾನ್ ॥

ಸ ತಸ್ಯಾಂ ಜನಯಾಮಾಸ ಚತುರಃ ಶಂರ್ಗಕಾನೃಷೀನ್ ।
ತಾನಪಾಸ್ಯ ಚ ತತ್ರೈವ ಜಗಾಮ ಲಪಿತಾಂ ಪ್ರತಿ ॥೧೭॥

ಅವನು ಚಿಂತಿಸುತ್ತಾ, ಶಾಂರ್ಗಕಪಕ್ಷಿಗಳಿಗೆ ಬಹಳ ಮರಿಗಳಾಗುತ್ತವೆಂದು ನಿರ್ಧರಿಸಿದನು. ತಾನು ಶಾಂರ್ಗಕಪಕ್ಷಿಯ ರೂಪವನ್ನು ತೆಗೆದುಕೊಂಡು, ತನ್ನ

ಪತ್ನಿಯಾದ ಜರಿತೆಯು ಆ ಪಕ್ಷಿಯ ಹೆಣ್ಣುರೂಪವನ್ನು ತೆಗೆದುಕೊಳ್ಳುವಂತೆ ಮಾಡಿ ಅವಳ ಸಮಾಗಮವನ್ನು ಮಾಡಿ ಅವಳಲ್ಲಿ ಋಷಿಗಳಾದ ನಾಲ್ಕು ಶಾರ್ಙ್ಗಕಗಳನ್ನು ಉತ್ಪಾದಿಸಿದನು.

ಬಾಲಾನ್ ಸ ತಾನಂಡಗತಾನ್ ಸಹ ಮಾತ್ರಾ ಮುನಿರ್ವನೇ ।
ತಸ್ಮಿನ್ ಗತೇ ಮಹಾಭಾಗೇ ಲಪಿತಾಂ ಪ್ರತಿ ಭಾರತ ॥೧೮॥

ಆ ಋಷಿಯು ಇನ್ನೂ ಮೊಟ್ಟೆಯೊಳಗಿರುವ ಆ ಮಕ್ಕಳನ್ನು ತಾಯಿಯ ಜೊತೆಯಲ್ಲಿ ಆ ಕಾಡಿನಲ್ಲಿಯೇ ಬಿಟ್ಟು ತನ್ನ ಇನ್ನೊಬ್ಬ ಪತ್ನಿಯಾದ ಲಪಿತೆಯ ಬಳಿ ಹೋದನು.

ಅಪತ್ಯಸ್ನೇಹಸಂವಿಗ್ನಾ ಜರಿತಾ ಬಹ್ವಚಿಂತಯತ್ ।
ತೇನ ತ್ಯಕ್ತಾನಸಂತ್ಯಾಜ್ಯಾನ್ ಋಷೀನಂಡಗತಾನ್ ವನೇ ॥೧೯॥

ಭಾರತನೇ, ಆ ಮಹಾನುಭಾವನಾದ ಋಷಿಯು, ಲಪಿತೆಯ ಬಳಿ ಹೋಗುತ್ತಿರಲು, ಋಷಿಗಳಾದ ತನ್ನ ಮಕ್ಕಳ ಮೇಲಿನ ಸ್ನೇಹದಿಂದ ಉದ್ವಿಗ್ನಳಾದ ಜರಿತೆಯು ವನದಲ್ಲಿ ಬಹುವಾಗಿ ಚಿಂತಿಸಿದಳು.

ನಾಜಹಾತ್ ಪುತ್ರಕಾನ್ ತಾನ್ ಸ್ಮ ಜರಿತಾ ಖಾಂಡವೇ ನೃಪ ।
ಬಭಾರ ಚೈತಾನ್ ಸಂಜಾತಾನ್ ಸ್ವಪುತ್ರಾನ್ ಸ್ನೇಹವದ್ ದ್ವಿಜ ॥೨೦॥

ರಾಜನೇ, ಮಂದಪಾಲನಿಂದ ತ್ಯಜಿಸಲ್ಪಟ್ಟ ಪರಿತ್ಯಾಗಾನರ್ಹರಾದ ಮೊಟ್ಟೆಯೊಳಗಿರುವ ತನ್ನ ಪುತ್ರರಾದ ಋಷಿಗಳನ್ನು ಜರಿತೆಯು ಆ ಕಾಡಿನಲ್ಲಿ ಒಂದು ಕ್ಷಣವೂ ಬಿಟ್ಟು ಅಗಲಲಿಲ್ಲ. ಅವರು ಮೊಟ್ಟೆಯೊಡೆದು ಬಂದ ಮೇಲೆ, ಆ ತನ್ನ ಮಕ್ಕಳನ್ನು ಪ್ರೀತಿಯಿಂದ ಸಾಕಿದಳು.

ತತೋಽಗ್ನಿಂ ಖಾಂಡವಂ ದಗ್ಧುಮಾಯಾಂತಂ ದೃಷ್ಟವಾನೃಷಿಃ ।
ಮಂದಪಾಲಶ್ಚರಂಸ್ತಸ್ಮಿನ್ ವನೇ ಲಪಿತಯಾ ಸಹ ॥೨೧॥

ಅನಂತರ, ಆ ಕಾಡಿನಲ್ಲಿ ಲಪಿತೆಯ ಜೊತೆಯಲ್ಲಿ ಸಂಚರಿಸುತ್ತಾ ಮಂದಪಾಲಋಷಿ ಖಾಂಡವವನವನ್ನು ದಹಿಸಲು ಬರುತ್ತಿದ್ದ ಅಗ್ನಿಯನ್ನು ನೋಡಿದನು.

ತಂ ಸಂಕಲ್ಪಂ ವಿದಿತ್ವಾಸ್ಯ ಜ್ಞಾತ್ವಾ ಪುತ್ರಾಂಶ್ಚ ಬಾಲಕಾನ್ ।
ಮಹರ್ಷಿರ್ಮಂದಪಾಲೋಽಸೌ ವಹ್ನಿಂ ಸ್ತೋತುಂ ಪ್ರಚಕ್ರಮೇ ॥೨೨॥

ಅಗ್ನಿಯ ಆ ಸಂಕಲ್ಪವನ್ನು ತಿಳಿದ ಅವನು ತನ್ನ ಮಕ್ಕಳು ಇನ್ನೂ ಚಿಕ್ಕವರೆಂದು ಗಮನಿಸಿ, ಅಗ್ನಿಯನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು.

ಸೋಽಭಿತುಷ್ಟಾವ ವಿಪ್ರರ್ಷಿರ್ಬ್ರಾಹ್ಮಣಂ ಜಾತವೇದಸಮ್ ।
ಪುತ್ರಾನ್ ಪ್ರತಿ ವದನ್ ಭೀತೋ ಲೋಕಪಾಲಂ ಮಹೌಜಸಮ್॥೨೩॥

ಮಂದಪಾಲಋಷಿಯು ಬ್ರಾಹ್ಮಣರೂಪದಲ್ಲಿದ್ದ ಮಹಾಸಾಮರ್ಥ್ಯವುಳ್ಳ, ಲೋಕಪಾಲನಾದ ಆ ಅಗ್ನಿಯನ್ನು ತನ್ನ ಮಕ್ಕಳ ಕ್ಷೇಮದ ವಿಷಯದಲ್ಲಿ ಹೆದರಿ ಸ್ತೋತ್ರಮಾಡಿದನು.

ಮಂದಪಾಲಃ

ತ್ವಮಗ್ನೇ ಸರ್ವಲೋಕಾನಾಂ ಮುಖಂ ತ್ವಮಸಿ ಹವ್ಯವಾಟ್ ।
ತ್ವಮಂತಃ ಸರ್ವಭೂತಾನಾಂ ಗೂಢಶ್ಚರಸಿ ಪಾವಕ ॥೨೪॥

ಅಗ್ನಿಯೇ, ನೀನು ಎಲ್ಲಾ ಲೋಕಗಳಿಗೆ ಮುಖವಾಗಿದ್ದೀಯೆ. ನೀನು ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡುಹೋಗಿ ಕೊಡುವವನು. ಪಾವಕನೇ, ನೀನು ಎಲ್ಲಾ ಪ್ರಾಣಿಗಳೊಳಗೆ ಅದೃಶ್ಯನಾಗಿ ಸಂಚರಿಸುತ್ತೀಯೆ.

ತ್ವಾಮೇಕಮಾಹುರ್ಮುನಯಸ್ತ್ವಾಮಾಹುಸ್ತ್ರಿವಿಧಂ ಪುನಃ ।
ತ್ವಾಮಷ್ಟಧಾ ಕಲ್ಪಯಿತ್ವಾ ಯಜ್ಞವಾಟಮಕಲ್ಪಯನ್ ॥೨೫॥

ಋಷಿಗಳು ನಿನ್ನನ್ನು ಒಬ್ಬನೆಂದು ಹೇಳುತ್ತಾರೆ. ಪುನಃ ತ್ರೇತಾಗ್ನಿರೂಪನಾಗಿ ಮೂರು ವಿಧ ಎಂದು ಹೇಳುತ್ತಾರೆ. ನೀನು ಅಣಿಮಾದಿ ಅಷ್ಟೈಶ್ವರ್ಯಸಂಪನ್ನನೆಂದು ತಿಳಿದು ನಿನ್ನ ಆರಾಧನೆಗಾಗಿ ಯಜ್ಞಶಾಲೆಯನ್ನು ಕಲ್ಪಿಸುತ್ತಾರೆ.

ತ್ವಯಾ ಸೃಷ್ಟಮಿದಂ ಸರ್ವಂ ವದಂತಿ ಪರಮರ್ಷಯಃ ।
ತ್ವದೃತೇ ಹಿ ಜಗತ್ ಸರ್ವಂ ಸದ್ಯೋ ನಶ್ಯೇದ್ ಹುತಾಶನ ॥೨೬॥

ನೀನೇ ಈ ಜಗತ್ತನ್ನು ಸೃಷ್ಟಿಮಾಡಿದವನೆಂದು ಪರಮರ್ಷಿಗಳು ಹೇಳುತ್ತಾರೆ. ಅಗ್ನಿಯೇ, ನೀನಿಲ್ಲದಿದ್ದರೆ, ಈ ಜಗತ್ತು ತಕ್ಷಣವೇ ನಾಶವನ್ನು ಹೊಂದುತ್ತದೆ.

ಯಸ್ಯ ಕೃತ್ವಾ ನಮೋ ವಿಪ್ರಾಃ ಸ್ವಕರ್ಮವಿಹಿತಾಂ ಗತಿಮ್ ।
ಗಚ್ಛಂತಿ ಸಹ ಪತ್ನೀಭಿಃ ಪುತ್ರೈರಪಿ ಚ ಶಾಶ್ವತೀಮ್ ॥೨೭॥

ನಿನಗೆ ನಮಸ್ಕಾರವನ್ನು ಮಾಡಿ ಬ್ರಾಹ್ಮಣರು ತಮ್ಮ ಪತ್ನೀಪುತ್ರರ ಜೊತೆಯಲ್ಲಿ ತಮ್ಮ ಕರ್ಮಗಳಿಂದ ಸಂಪಾದಿಸಿದ ಶಾಶ್ವತವಾದ ಗತಿಯನ್ನು ಹೊಂದುತ್ತಾರೆ.

ತ್ವಾಮಗ್ನೇ ಜಲದಾನಾಹುಃ ಖೇ ವಿಪಕ್ತಾನ್ ಸವಿದ್ಯುತಃ ।
ದಹಂತಿ ಸರ್ವಭೂತಾನಿ ತತ್ತೋ ನಿಷ್ಕ್ರಮ್ಯ ಹಾಯನಾಃ ॥೨೮॥

ಅಗ್ನಿಯೇ, ಆಕಾಶದಲ್ಲಿ ಲಗ್ನವಾದ ಮಿಂಚುಗಳಿಂದ ಕೂಡಿದ ಮೋಡಗಳನ್ನು ನಿನ್ನ ರೂಪವೆಂದೇ ಹೇಳುತ್ತಾರೆ. ಚಲಿಸುವ ಮೋಡಗಳಿಂದ ಹೊರಟ ಮಿಂಚುಗಳು ನಿನ್ನಿಂದ ಹೊರಬಂದು ಎಲ್ಲಾ ಪ್ರಾಣಿಗಳನ್ನೂ ಸುಡುತ್ತವೆ.

ಜಾತವೇದಸ್ತ್ವಯ್ಯೇವೇದಂ ವಿಶ್ವಂ ಸೃಷ್ಟಂ ಮಹಾದ್ಯುತೇ ।
ತವೈವ ಕರ್ಮ ವಿಹಿತಂ ಭೂತಂ ಸರ್ವಂ ಚರಾಚರಮ್ ॥೨೯॥

ಜಾತವೇದನೇ, ಈ ಜಗತ್ತೆಲ್ಲವೂ ನಿನ್ನಿಂದಲೇ ಸೃಷ್ಟವಾಗಿದೆ. ಚರಾಚರವಾದ ಎಲ್ಲಾ ವಸ್ತುಗಳೂ ನಿನ್ನ ವ್ಯಾಪಾರದ ಸ್ಥಳವೇ ಆಗಿವೆ.

ತ್ವಯಾऽऽಪೋ ವಿಹಿತಾಃ ಪೂರ್ವಂ ತ್ವಯಿ ಸರ್ವಮಿದಂ ಜಗತ್ ।
ತ್ವಯಿ ಹವ್ಯಂ ಚ ಕವ್ಯಂ ಚ ಯಥಾವತ್ ಸಂಪ್ರತಿಷ್ಠಿತಮ್ ॥೩೦॥

ನೀನು ಮೊದಲು ಜಲವನ್ನು ಸೃಷ್ಟಿಸಿದೆ. ಈ ಜಗತ್ತೆಲ್ಲವೂ, ನಿನ್ನನ್ನು ಆಶ್ರಯಿಸಿದೆ. ಹವ್ಯಕವ್ಯಗಳೆಲ್ಲವೂ ಯಥಾರ್ಥವಾಗಿ ನಿನ್ನನ್ನೇ ಅವಲಂಬಿಸಿವೆ.

ತ್ವಮೇವ ದಹನೋ ದೇವ ತ್ವಂ ಧಾತಾ ತ್ವಂ ಬೃಹಸ್ಪತಿಃ ।
ತ್ವಮಶ್ವಿನೌ ಯಮೌ ಮಿತ್ರಃ ಸೋಮಸ್ತ್ವಮಸಿ ಚಾನಿಲಃ ॥೩೧॥

ಅಗ್ನಿಯೇ, ನೀನೇ ದಹನ, ನೀನೇ ಧಾತೃ, ನೀನೇ ಬೃಹಸ್ಪತಿ. ನೀನೇ ಅಶ್ವಿನಿದೇವತೆಗಳು. ಮಿತ್ರ, ಸೋಮ, ಅನಿಲ ಎಲ್ಲವೂ ನೀನೇ. (ಅಗ್ನಿಯ

ಅಂತರ್ಯಾಮಿಯಾದ ಹರಿಯು ದಹನ, ಧಾತೃ ಮೊದಲಾದ ಎಲ್ಲಾ ಶಬ್ದಗಳಿಂದಲೂ ವಾಚ್ಯನಾಗಿದ್ದಾನೆ ಎಂದು ತಾತ್ಪರ್ಯ.)

ವೈಶಂಪಾಯನಃ

ಏವಂ ಸ್ತುತಸ್ತದಾ ತೇನ ಮಂದಪಾಲೇನ ಪಾವಕಃ ।
ಹವ್ಯವಾಹಸ್ತು ನೃಪತೇ ಮುನೇರಮಿತತೇಜಸಃ ।
ಉವಾಚ ಚೈನಂ ಪ್ರೀತಾತ್ಮಾ ಕಿಮಿಷ್ಟಂ ಕರವಾಣಿ ತೇ ॥೩೨॥

ರಾಜನೇ, ಮಂದಪಾಲನಿಂದ ಹೀಗೆ ಸ್ತೋತ್ರಮಾಡಲ್ಪಟ್ಟ ಅಮಿತತೇಜಸ್ಸುಳ್ಳ ಮಂದಪಾಲಋಷಿಯ ಹವ್ಯವಾಹಕನಾದ ಅಗ್ನಿಯು ಸಂತೋಷದಿಂದ ಅವನನ್ನು ಕುರಿತು ನಿನಗೆ ಏನು ಪ್ರಿಯವನ್ನುಂಟುಮಾಡಲಿ ಎಂದು ಕೇಳಿದನು.

ತಮಬ್ರವೀನ್ಮಂದಪಾಲಃ ಪ್ರಾಂಜಲಿರ್ಹವ್ಯವಾಹನಮ್ ।
ಸಂದಹನ್ ಖಾಂಡವೇ ದಾವಂ ಮಮ ಪುತ್ರಾನ್ ವಿಸರ್ಜಯ ॥೩೩॥

ಮಂದಪಾಲನು ಅಗ್ನಿಗೆ ಕೈಗಳನ್ನು ಮುಗಿದು ಖಾಂಡವವನವನ್ನು ದಹಿಸುವಾಗ ನನ್ನ ಮಕ್ಕಳನ್ನು ಬಿಟ್ಟು ದಹಿಸಬೇಕು ಎಂದು ಹೇಳಿದನು.

ತಥೇತಿ ತತ್ ಪ್ರತಿಶ್ರುತ್ಯ ಭಗವಾನ್ ಹವ್ಯವಾಹನಃ ।
ಖಾಂಡವೇ ತೇನ ಕಾಲೇ ನ ಪ್ರಜಜ್ವಾಲ ದಿಧಕ್ಷಯಾ ॥೩೪॥

ಹಾಗೆಯೇ ಆಗಲಿ ಎಂದು ಅವನಿಗೆ ವಾಗ್ದಾನ ಮಾಡಿದ್ದ ಪೂಜ್ಯನಾದ ಅಗ್ನಿಯು ಖಾಂಡವವನವನ್ನು ದಹಿಸುವ ಕಾಲದಲ್ಲಿ ಅವನ ಪುತ್ರರಾದ ಶಾರ್ಙ್ಗಕಗಳನ್ನು ದಹಿಸಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ತ್ರಯಸ್ತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಮಯದರ್ಶನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಮೂವತ್ತನಾಲ್ಕನೆಯ ಅಧ್ಯಾಯ

(ಸಮೀಪಿಸುತ್ತಿರುವ ಅಗ್ನಿಯನ್ನು ನೋಡಿ ಜರಿತೆಯ ವಿಹ್ವಲತಾ, ಮಕ್ಕಳನ್ನು ಉಳಿಸಲು ಅವರ ಜೊತೆಯಲ್ಲಿ ಸಂವಾದ. ಮೂಷಿಕಬಿಲವನ್ನು ಪ್ರವೇಶಿಸಲು ಮಕ್ಕಳ ನಿರಾಕರಣೆ.)

ವೈಶಂಪಾಯನಃ

ತತಃ ಪ್ರಜ್ವಲಿತೇ ಶುಕ್ಲೇ ಶಾಂರ್ಗಕಾಸ್ತೇ ಸುದುಃಖಿತಾಃ ।
ಬಭೂವುಃ ಪರಮೋದ್ವಿಗ್ನಾ ನಾಧಿಜಗ್ಮುಃ ಪರಾಯಣಮ್ ॥೧॥

ಆಗ ಅಗ್ನಿಯು ಪ್ರಜ್ವಲಿಸುತ್ತಿರಲು ಆ ಶಾಂರ್ಗಕಗಳು ದುಃಖದಿಂದ ಕೂಡಿ ಬಹಳ ಉದ್ವಿಗ್ನವಾದವು. ಅವರಿಗೆ ಯಾವ ರಕ್ಷಕರೂ ಕಾಣಲಿಲ್ಲ.

ನಿಶಮ್ಯ ಪುತ್ರಕಾನ್ ಬಾಲಾನ್ ಮಾತಾ ತೇಷಾಂ ತಪಸ್ವಿನೀ ।
ಜರಿತಾ ದುಃಖಶೋಕಾರ್ತಾ ವಿಲಲಾಪ ನರೇಶ್ವರ ॥೨॥

ರಾಜನೇ, ತನ್ನ ಮಕ್ಕಳು ಇನ್ನೂ ಚಿಕ್ಕವರಾಗಿರುವುದನ್ನು ನೋಡಿ ತಪಸ್ವಿನಿಯಾದ ಅವರ ತಾಯಿಯಾದ ಜರಿತೆಯು ದುಃಖಶೋಕಗಳಿಂದ ಕೂಡಿ ವಿಲಾಪವನ್ನು ಮಾಡಿದಳು.

ಅಯಮಗ್ನಿರ್ದಹನ್ ಕಕ್ಷಮಿತ ಆಯಾತಿ ಭೀಷಣಃ ।
ಜಗತ್ ಸಂದೀಪಯನ್ ಭೀಮೋ ಮಮ ದುಃಖವಿವರ್ಧನಃ ॥೩॥

ಈ ಭಯಂಕರವಾದ ಅಗ್ನಿಯು ಕಾಡನ್ನು ಸುಡುತ್ತಾ ಈ ಕಡೆಗೇ ಬರುತ್ತಿದ್ದಾನೆ. ಜಗತ್ತನ್ನೇ ಸುಡುತ್ತಿರುವ ಈ ಅಗ್ನಿಯು ನನ್ನ ದುಃಖವನ್ನು ಹೆಚ್ಚಿಸುತ್ತಿದ್ದಾನೆ.

ಇಮೇ ಚ ಮಾರ್ಗಯಂತೀಹ ಶಿಶವೋ ಮಂದಚೇತಸಃ ।
ಅಬಹ್ವಾಶ್ಚರಣೈರ್ಹೀನಾಃ ಪೂರ್ವೇಷಾಂ ನಃ ಪರಾಯಣಾಃ ॥೪॥

ಮಂದಪ್ರಜ್ಞರಾದ ಇನ್ನೂ ರೆಕ್ಕೆಗಳೂ, ಪಾದಗಳೂ ಹುಟ್ಟದಿರುವ ನಮ್ಮ ಪೂರ್ವಜರಿಗೆ ಆಲಂಬನವಾದ ಈ ನನ್ನ ಮಕ್ಕಳು ಇಲ್ಲಿಯೇ ಏನನ್ನೋ ಹುಡುಕುತ್ತಿದ್ದಾರೆ.

ತ್ರಾಸಯಂಶ್ಚಾಯಮಾಯಾತಿ ಲೇಲಿಹಾನೋ ಮಹೀರುಹಾನ್ ।
ಅಶಕ್ತಿಮಂತಶ್ಚ ಸುತಾ ಸರಣೇ ಗಮನೇ ಚ ಮೇ ॥೫॥

ಈ ಅಗ್ನಿ ದೊಡ್ಡ ದೊಡ್ಡ ವೃಕ್ಷಗಳನ್ನೇ ಹೆದರಿಸುತ್ತಾ ಈ ಕಡೆಗೇ ಬರುತ್ತಿದ್ದಾನೆ. ನನ್ನ ಮಕ್ಕಳಾದರೋ ಚಲಿಸುವುದಕ್ಕೂ ಅಥವಾ ಮುಂದೆ ಹೋಗುವುದಕ್ಕೂ ಶಕ್ತಿಯಿಲ್ಲದವರು.

ಆದಾಯ ತಾನ್ ನಶಕ್ತಾಽಸ್ಮಿ ಪುತ್ರಾಂಸ್ತರಿತುಮಂತತಃ ।
ನ ಚ ತ್ಯಕ್ತುಮಹಂ ಶಕ್ತಾ ಹೃದಯಂ ದೂಯತೀವ ಮೇ ॥೬॥

ನನಗೆ ಈ ಮಕ್ಕಳನ್ನು ತೆಗೆದುಕೊಂಡು ಈ ಕಾಡನ್ನು ದಾಟಲು ಶಕ್ತಿಯಿಲ್ಲ. ಈ ಮಕ್ಕಳನ್ನು ಬಿಡಲೂ ನನಗೆ ಮನಸ್ಸಿಲ್ಲ. ನನ್ನ ಹೃದಯವು ದುಃಖದಿಂದ ಬಿರಿದುಹೋಗುತ್ತಿದೆ.

ಕಂ ನು ತ್ಯಜಾಮ್ಯಹಂ ಪುತ್ರಂ ಕಮಾದಾಯ ವ್ರಜಾಮ್ಯಹಮ್ ।
ಕಿಂ ನು ಮೇ ಸ್ಯಾತ್ ಕೃತಂ ಕೃತ್ವಾ ಮನ್ಯಧ್ವಂ ಪುತ್ರಕಾಃ ಕಥಮ್ ॥೭॥

ನಾನು ಯಾವ ಮಗನನ್ನು ಬಿಡಲಿ? ಯಾವ ಮಗನನ್ನು ತೆಗೆದುಕೊಂಡು ಹೋಗಲಿ? ಏನು ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ? ಮಕ್ಕಳೇ ನಿಮ್ಮ ಅಭಿಪ್ರಾಯವೇನು?

ಚಿಂತಯಾನಾಽಪಿ ಮೋಕ್ಷಂ ವೈ ನಾಧಿಗಚ್ಛಾಮಿ ಕಿಂಚನ ।
ಛಾದಯಿತ್ವಾ ಹಿ ವೋ ಗಾತ್ರೈಃ ಕರಿಷ್ಯೇ ಮರಣಂ ಸಹ ॥೮॥

ಎಷ್ಟು ಯೋಚನೆ ಮಾಡಿದರೂ ಈ ಸಂಕಟದಿಂದ ಪಾರಾಗುವ ಉಪಾಯವು ಕಾಣುತ್ತಿಲ್ಲ. ನಿಮ್ಮೆಲ್ಲರನ್ನೂ ನನ್ನ ರೆಕ್ಕೆಗಳಿಂದ ಮುಚ್ಚಿಕೊಂಡು ನಾನು ಮರಣವನ್ನು ಹೊಂದುವೆನು.

ಜರಿತಾರೌ ಕುಲಂ ಹೀದಂ ಜ್ಯೇಷ್ಠೇ ತ್ವೇವ ಪ್ರತಿಷ್ಠಿತಮ್ ।
ಸಾರಿಸೃಕ್ಕಃ ಪ್ರಜಾಯೇತ ಪಿತೄಣಾಂ ಕುಲವರ್ಧನಃ ॥೯॥

ಸ್ತಂಬಮಿತ್ರಸ್ತಪಃ ಕುರ್ಯಾದ್ ದ್ರೋಣೋ ಬ್ರಹ್ಮವಿದುತ್ತಮಃ ।
ಇತ್ಯೇವಮುಕ್ತ್ವಾ ಪ್ರಯಯೌ ಪಿತಾ ವೋ ನಿರ್ಋಣಃ ಪುರಾ ॥೧೦॥

ಹಿರಿಯ ಮಗನಾದ ಜರಿತಾರಿಯಲ್ಲಿ ಈ ವಂಶವು ಪ್ರತಿಷ್ಠಿತವಾಗಿದೆ, ಎರಡನೆಯ ಮಗನಾದ ಸಾರಿಸೃಕ್ಕನು ಮಕ್ಕಳನ್ನು ಪಡೆದು ಪಿತೃವಂಶವನ್ನು ಅಭಿವೃದ್ಧಿಪಡಿಸುತ್ತಾನೆ, ಮೂರನೆಯವನಾದ ಸ್ತಂಬಮಿತ್ರನು ತಪಸ್ಸನ್ನು ಮಾಡುತ್ತಾನೆ, ನಾಲ್ಕನೆಯವನಾದ ದ್ರೋಣನು ಶ್ರೇಷ್ಠನಾದ ಬ್ರಹ್ಮಜ್ಞಾನಿಯಾಗುತ್ತದೆ ಎಂದು ಹೇಳಿ ನಿರ್ಗಮಿಸಿದ ನಿಮ್ಮ ತಂದೆಯು ಹೊರಟುಹೋದನು.

ತ್ಯಕ್ತ್ವಾऽಹಂ ಚರಿತುಂ ಬಾಲಾನ್ನ ಶಕ್ನೋಮಿ ತಪೋವನಾತ್ ।
ಕಮುಪಾದಾಯ ಶಕ್ಯೇತ್ ಗಂತುಂ ಕಸ್ಯಾಪದುತ್ತಮಾ ॥೧೧॥

ಈ ಮಕ್ಕಳನ್ನು ತಪೋವನದಲ್ಲಿಯೇ ಬಿಟ್ಟು ನಾನು ಹೊರಗೆ ಹೋಗಲಾರೆ. ನಾನು ಯಾರನ್ನು ಕರೆದುಕೊಂಡು ಹೋಗಲಿ? ವಿಪತ್ತು ಯಾರಿಗೆ ಹಿತವನ್ನುಂಟುಮಾಡುತ್ತದೆ?

ಕಿಂ ನು ಕೃತ್ವಾ ಕೃತಂ ಕಾರ್ಯಂ ಭವೇದಿತಿ ಚ ವಿಹ್ವಲಾ ।
ನಾಪಶ್ಯತ್ ಸ್ವಧಿಯಾ ಮೋಕ್ಷಂ ಸ್ವಸುತಾನಾಂ ತದಾऽನಲಾತ್ ॥೧೨॥

ಏನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಚಿಂತಿಸುತ್ತಾ ವಿಹ್ವಲಳಾದ ಅವಳು ತನ್ನ ಮಕ್ಕಳನ್ನು ಅಗ್ನಿಯಿಂದ ಪಾರುಮಾಡಲು ತನ್ನ ಬುದ್ಧಿಯಿಂದ ಎಷ್ಟು ಯೋಚಿಸಿದರೂ, ಯಾವ ಉಪಾಯವನ್ನೂ ಕಾಣಲಿಲ್ಲ.

ಏವಂ ಬ್ರುವಂತೀಂ ಶಾಂರ್ಗಾಸ್ತೇ ಪ್ರತ್ಯೂಚುಶ್ಚ ಸ್ವಮಾತರಮ್ ।
ಸ್ನೇಹಮುತ್ಸೃಜ್ಯ ಮಾತಸ್ತ್ವಂ ಪತ ಯತ್ರ ನ ಹವ್ಯವಾಟ್ ॥೧೩॥

ಹೀಗೆ ಮಾತನಾಡುತ್ತಿದ್ದ ತಮ್ಮ ತಾಯಿಯನ್ನು ಕುರಿತು ಆ ಶಾಂರ್ಗಪಕ್ಷಿಗಳು ಹೇಳಿದವು. ಅಮ್ಮಾ ನಮ್ಮ ಮೇಲಿನ ಸ್ನೇಹವನ್ನು ತೊರೆದು ಅಗ್ನಿಯಿಲ್ಲದ ಕಡೆಗೆ ನೀನು ಹಾರಿಹೋಗು.

ಅಸ್ಮಾಸು ಹಿ ವಿನಷ್ಟೇಷು ಭವಿತಾರಃ ಸುತಾಸ್ತವ ।
ತ್ವಯಿ ಮಾತರ್ವಿನಷ್ಟಾಯಾಂ ನ ತು ಸ್ಯಾತ್ ಕುಲಸಂತತಿಃ ॥೧೪॥

ನಾವು ನಾಶವನ್ನು ಹೊಂದಿದರೂ ನಿನಗೆ ಬೇರೆ ಮಕ್ಕಳು ಜನಿಸುವರು. ನೀನು ನಾಶವನ್ನು ಹೊಂದಿದರೆ, ನಮ್ಮ ಕುಲದ ಸಂತತಿಯೇ ಉಂಟಾಗುವುದಿಲ್ಲ.

ಅನ್ವವೇಕ್ಷ್ಯೋಭಯಂ ಕ್ಷೇಮಂ ಸ್ಯಾದ್ ಯತ್ ಕುಲಸ್ಯ ನಃ ।
ತದ್ ವೈ ಕರ್ತುಂ ಪರಂ ಕಾಮೋ ಮಾತರೇಷ ಭವೇತ್ ತವ ॥೧೫॥

ಅಮ್ಮಾ, ಈ ಎರಡು ಅಂಶಗಳನ್ನೂ ಗಮನಿಸಿ, ನಮ್ಮ ಕುಲದ ಕ್ಷೇಮವನ್ನೂ ಗಮನಿಸಿ ಈ ಎರಡರಲ್ಲಿ ಯಾವುದು ಶ್ರೇಷ್ಠವೋ ಅದನ್ನು ಮಾಡಲು ನೀನು ನಿರ್ಧರಿಸು.

ಮಾ ವೈ ಕುಲವಿನಾಶಾಯ ಸ್ನೇಹಂ ಕಾರ್ಷೀಃ ಸುತೇಷು ತೇ ।
ನ ಹೀದಂ ಕರ್ಮ ಮೋಘಂ ಸ್ಯಾಲ್ಲೋಕಕಾಮಸ್ಯ ನಃ ಪಿತುಃ ॥೧೬॥

ನಿನ್ನ ಮಕ್ಕಳಲ್ಲಿ ಸ್ನೇಹವನ್ನು ಮಾಡಿ ಕುಲದ ವಿನಾಶವನ್ನು ಮಾಡಬೇಡ. ಪರಲೋಕಕಾಮನಾದ ನಮ್ಮ ತಂದೆಯು ನಿನ್ನನ್ನು ವಿವಾಹ ಮಾಡಿಕೊಂಡುದು ವ್ಯರ್ಥವಾಗದಿರಲಿ.

ಜರಿತಾ

ಇದಮಾಖೋರ್ಬಿಲಂ ಭೂಮೌ ವೃಕ್ಷಸ್ಯಾಸ್ಯ ಸಮೀಪತಃ ।
ತದಾವಿಶಧ್ವಂ ತ್ವರಿತಾ ವಹ್ನೇರತ್ರ ನ ನೋ ಭಯಮ್ ॥೧೭॥

ಈ ಮರದ ಸಮೀಪದಲ್ಲಿ ಇಲಿಯ ಒಂದು ಬಿಲವಿದೆ. ನೀವೆಲ್ಲರೂ ಬೇಗ ಅದರೊಳಗೆ ಹೋಗಿ. ಅಲ್ಲಿ ನಮಗೆ ಅಗ್ನಿಯ ಭಯವಿಲ್ಲ.

ತತೋಽಹಂ ಪಾಂಸುನಾ ಛಿದ್ರಮಪಿಧಾಸ್ಯಾಮಿ ಪುತ್ರಕಾಃ ।
ಏವಂ ಪ್ರತಿಕೃತಂ ಮನ್ಯೇ ಜ್ವಲಿತಾತ್ ಕೃಷ್ಣವರ್ತ್ಮನಃ ॥೧೮॥

ಮಕ್ಕಳೇ, ಅನಂತರ ನಾನು ಆ ಬಿಲದ ದ್ವಾರವನ್ನು ಮಣ್ಣಿನಿಂದ ಮುಚ್ಚುವೆನು. ಹೀಗೆ ಮಾಡಿದರೆ, ಉರಿಯುತ್ತಿರುವ ಅಗ್ನಿಯಿಂದ ಪ್ರತೀಕಾರವು ದೊರೆಯುವುದೆಂದು ಭಾವಿಸುತ್ತೇನೆ.

ತತ ಏಷ್ಯಾಮ್ಯತೀತೇಽಗ್ನೌ ವಿಹಂತುಂ ಪಾಂಸುಸಂಚಯಮ್ ।
ರೋಚತಾಮೇಷ ವೋ ಯೋಗೋ ವಿಮೋಕ್ಷಾಯ ಹುತಾಶನಾತ್ ॥

ಅಗ್ನಿಯು ಶಾಂತನಾದ ಮೇಲೆ ನಾನು ಪುನಃ ಬಂದು ಆ ಮುಚ್ಚಿರುವ ಮಣ್ಣನ್ನು ತೆಗೆಯುವೆನು. ಅಗ್ನಿಯಿಂದ ಪಾರಾಗಲು ನಾನು ಯೋಚಿಸಿರುವ ಈ ಉಪಾಯವು ನಿಮ್ಮ ಮನಸ್ಸಿಗೂ ಬರಲಿ.

ಶಾರ್ಙ್ಗಕಾಃ

ಅಬರ್ಹಾನ್ ಮಾಂಸಭೂತಾನ್ ನಃ ಕ್ರವ್ಯಾದಾಖುರ್ವಿನಾಶಯೇತ್।
ಪಶ್ಯ ಮಾತರ್ಭಯಮಿದಂ ನ ಶಕ್ಷ್ಯಾಮ ನಿವಾರಿತುಮ್ ॥೨೦॥

ರೆಕ್ಕೆಯು ಮೂಡದ ಮಾಂಸದಂತಿರುವ ನಮ್ಮನ್ನು ಮಾಂಸಹಾರಿಯಾದ ಇಲಿಯು ತಿಂದುಹಾಕಬಹುದು. ಅಮ್ಮಾ, ಈ ಭಯವನ್ನು ಗಮನಿಸು. ಇದನ್ನು ನಿವಾರಿಸಲು ನಾವು ಶಕ್ತರಾಗುವುದಿಲ್ಲ.

ಕಥಮಗ್ನಿರ್ನ ನೋ ಹನ್ಯಾತ್ ಕಥಮಾಖುರ್ನ ಭಕ್ಷಯೇತ್ ।
ಕಥಂ ನ ಸ್ಯಾತ್ ಪಿತಾ ಮೋಘಃ ಕಥಂ ಮಾತಾ ಧ್ರಿಯೇತ ನಃ ॥೨೧॥

ಅಗ್ನಿಯು ಹೇಗೆ ನಮ್ಮನ್ನು ದಹಿಸದೇ ಇದ್ದಾನು? ಇಲಿಯು ನಮ್ಮನ್ನು ಹೇಗೆ ಭಕ್ಷಿಸದೇ ಇದ್ದೀತು? ನಮ್ಮ ತಂದೆಯ ಸಂಕಲ್ಪವು ಹೇಗೆ ವ್ಯರ್ಥವಾಗದೇ ಇದ್ದೀತು? ನಮ್ಮ ತಾಯಿಯು ಹೇಗೆ ಬದುಕಿಯಾಳು?

ಬಿಲ ಆಖೋರ್ವಿನಾಶಃ ಸ್ಯಾದಗ್ನೇರಾಕಾಶಚಾರಿಣಾಮ್ ।
ಅನ್ವವೇಕ್ಷ್ಯೋಭಯಂ ಶ್ರೇಯಾನಾಖೋರ್ನ ಭಕ್ಷಣಮ್ ॥೨೨॥

ಬಿಲದಲ್ಲಿ ಇಲಿಯಿಂದ ವಿನಾಶವು ಉಂಟಾಗುತ್ತದೆ. ಆಕಾಶದಲ್ಲಿ ಹಾರಿದರೆ ಅಗ್ನಿಯಿಂದ ವಿನಾಶವು ಉಂಟಾಗುತ್ತದೆ. ಇವೆರಡನ್ನೂ ಗಮನಿಸಿದರೆ, ಇಲಿಯಿಂದ ಮರಣವು ಎಂದೂ ಒಳ್ಳೆಯದಲ್ಲ.

ಗರ್ಹಿತಂ ಮರಣಂ ನಃ ಸ್ಯಾದಾಖುನಾ ಖಾದಿತೇ ಬಿಲೇ ।
ಶಿಷ್ಟದೃಷ್ಟಃ ಪರಿತ್ಯಾಗಃ ಶರೀರಸ್ಯ ಹುತಾಶನೇ ।
ಅಗ್ನಿದಾಹೇ ತು ನಿಯತಂ ಬ್ರಹ್ಮಲೋಕೇ ಧ್ರುವಾ ಗತಿಃ ॥೨೩॥

ಇಲಿಯು ನಮ್ಮನ್ನು ಬಿಲದಲ್ಲಿ ಭಕ್ಷಿಸಿದರೆ, ನಮಗೆ ನಿಂದಿತವಾದ ಮರಣವು ಉಂಟಾಗುತ್ತದೆ. ಶರೀರವನ್ನು ಅಗ್ನಿಯಲ್ಲಿ ಪರಿತ್ಯಾಗ ಮಾಡುವುದು ಶಿಷ್ಟರ ಮಾರ್ಗದಲ್ಲಿ ಕಂಡುಬಂದಿದೆ. ಅಗ್ನಿಯಿಂದ ದಗ್ಧರಾದರೆ, ನಿಶ್ಚಯವಾಗಿ ಬ್ರಹ್ಮಲೋಕದಲ್ಲಿ ಶಾಶ್ವತವಾದ ಗತಿಯು ದೊರೆಯುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಚತುಸ್ತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ॥

॥ ಇತಿ ಮಯದರ್ಶನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಮೂವತ್ತೈದನೆಯ ಅಧ್ಯಾಯ

(ಇಲಿಯ ಬಿಲವನ್ನು ಪ್ರವೇಶಿಸಲು ತಾಯಿಯ ನಿರ್ಬಂಧ. ಮಕ್ಕಳಿಂದ ಅದರ ನಿರಾಕರಣೆ. ತಾಯಿಯು ಹೇಳಿದ ಶ್ಯೇನವೃತ್ತಾಂತದಲ್ಲಿ ಮಕ್ಕಳ ಅವಿಶ್ವಾಸ. ಜರಿತಾರಿಯಿಂದ ಅಗ್ನಿಯ ಸ್ತೋತ್ರ.)

ಜರಿತಾ

ಅಸ್ಮಾದ್ ಬಿಲಾನ್ನಿಷ್ಪತಿತಮಾಖುಂ ಶ್ಯೇನೋ ಜಹಾರ ತಮ್ ।
ಕ್ಷುದ್ರಂ ಗೃಹೀತ್ವಾ ಪಾದಾಭ್ಯಾಂ ಭಯಂ ನ ಭವಿತಾ ತತಃ ॥೧॥

ಈ ಬಿಲದಿಂದ ಹೊರಗೆ ಬಂದ ಇಲಿಯನ್ನು ಒಂದು ಶ್ಯೇನವು (ಗಿಡುಗವು) ಕಾಲುಗಳಲ್ಲಿ ಹಿಡಿದುಕೊಂಡು ಹಾರಿಹೋಯಿತು. ಆದ್ದರಿಂದ ಈ ಬಿಲದಲ್ಲಿ ಭಯವಿಲ್ಲ.

ಶಾರ್ಂಗಕಾಃ

ನ ವಿದ್ಮಹೇ ಹೃತಂ ಮಾತಃ ಶ್ಯೇನೇನಾಖುಂ ಕಥಂಚನ ।
ಅನ್ಯೇऽಪಿ ಭವಿತಾರೋऽತ್ರ ತೇಭ್ಯೋऽಪಿ ಭಯಮೇವ ನಃ ॥೨॥

ಅಮ್ಮಾ, ಶ್ಯೇನವು ಇಲಿಯನ್ನು ತೆಗೆದುಕೊಂಡುಹೋದ ವಿಷಯವು ನಮಗೆ ತಿಳಿದಿಲ್ಲ. ಬಿಲದಲ್ಲಿ ಬೇರೆ ಇಲಿಗಳೂ ಇರಬಹುದು. ಅವುಗಳಿಂದ ನಮಗೆ ಭಯವು ಇದ್ದೇ ಇದೆ.

ಸಂಶಯಂ ಹ್ಯಗ್ನಿರಾಗಚ್ಛೇದ್ ದೃಷ್ಟಂ ವಾಯೋರ್ನಿವರ್ತನಮ್ ।
ಮೃತ್ಯುರ್ನೋ ಬಿಲವಾಸಿಭ್ಯೋ ಭವೇನ್ನಾತರಸಂಶಯಃ ॥೩॥

ಇಲ್ಲಿಗೆ ಅಗ್ನಿಯು ಬರುವುದು ಸಂದಿಗ್ಧವಾಗಿದೆ. ಏಕೆಂದರೆ ವಾಯುವಿನಿಂದ ಅಗ್ನಿಯು ಶಾಂತವಾಗುವುದುಂಟು. ಆದರೆ, ಬಿಲವಾಸಿಗಳಿಂದ ನಮಗೆ ಮೃತ್ಯುವುಂಟಾಗುವುದು ನಿಶ್ಚಿತವಾಗಿದೆ. ಇದರಲ್ಲಿ ಸಂಶಯವೇ ಇಲ್ಲ.

ನಿಃಸಂಶಯಾತ್ ಸಂಶಯಿತೋ ಮೃತ್ಯುರ್ಮಾತರ್ವಿಶಿಷ್ಯತೇ ।
ಚರ ಖೇ ತ್ವಂ ಯಥಾನ್ಯಾಯಂ ಪುತ್ರಾನಾಪ್ಸ್ಯಸಿ ಶೋಭನಾನ್ ॥೪॥

ನಿಸ್ಸಂಶಯ ಮೃತ್ಯುವಿಗಿಂತ ಸಂಶಯಗ್ರಸ್ತವಾದ ಮೃತ್ಯುವನ್ನು ಆರಿಸುವುದು ಒಳ್ಳೆಯದು. ನೀನು ಆಕಾಶಮಾರ್ಗದಲ್ಲಿ ಹಾರಿಹೋಗು. ನಿನಗೆ ಪುನಃ ಒಳ್ಳೆಯ ಮಕ್ಕಳು ಜನಿಸುವರು.

ಜರಿತಾ

ಅಹಂ ವೈ ಶ್ಯೇನಮಾಯಾಂತಮದ್ರಾಕ್ಷಂ ಬಿಲಮಂತಿಕಾತ್ ।
ಸಂಚರಂತಂ ಸಮಾದಾಯ ಜಹಾರಾಖುಂ ಬಿಲಾದ್ ಬಲೀ ॥೫॥

ನಾನು ಈ ಬಿಲದ ಹತ್ತಿರ ಶ್ಯೇನವು ಬಂದದ್ದನ್ನು ನೋಡಿದೆನು. ಬಿಲದಿಂದ ಹೊರಗೆ ಬಂದು ಸಂಚರಿಸುತ್ತಿದ್ದ ಇಲಿಯನ್ನು ಬಲಿಷ್ಠವಾದ ಶ್ಯೇನವು ಹಿಡಿದುಕೊಂಡು ಹೋಯಿತು.

ತಂ ಪತಂತಮಹಂ ಶ್ಯೇನಂ ತ್ವರಿತಾ ಪೃಷ್ಠಮನ್ವಗಾಮ್ ।
ಆಶಿಷೋऽಸ್ಯ ಪ್ರಯುಂಜಾನಾ ಹರಂತಂ ಮೂಷಿಕಂ ಬಿಲಾತ್ ॥೬॥

ಬಿಲದಿಂದ ಮೂಷಿಕವನ್ನು ಅಪಹರಿಸಿ ಹಾರಿಹೋಗುತ್ತಿದ್ದ ಶ್ಯೇನವನ್ನು ನಾನು ಅದಕ್ಕೆ ಆಶೀರ್ವಾದವನ್ನು ಮಾಡುತ್ತಾ ಶೀಘ್ರವಾಗಿ ಹಿಂಬಾಲಿಸಿದೆ.

ಯೋ ನೋ ದ್ವೇಷ್ಟಾರಮಾದಾಯ ಶ್ಯೇನರಾಜ ವಿಧಾವಸಿ ।
ಭವ ತ್ವಂ ದಿವಮಾಸ್ಥಾಯ ನಿರಮಿತ್ರೋ ಹಿರಣ್ಮಯಃ ॥೭॥

ಶ್ಯೇನರಾಜನೇ, ನಮ್ಮ ಶತ್ರುವನ್ನು ತೆಗೆದುಕೊಂಡು ಓಡಿಹೋಗುವ ನಿನಗೆ ಆಕಾಶದಲ್ಲಿ ಯಾವ ಶತ್ರುವೂ ಇಲ್ಲದಿರಲಿ. ನೀನು ಹಿರಣ್ಮಯನಾಗು.

ಸ ಯದಾ ಭಕ್ಷಿತಸ್ತೇನ ಕ್ಷುಧಿತೇನ ಪತತ್ರಿಣಾ ।
ತದಾऽಹಂ ತಮನುಜ್ಞಾಪ್ಯ ಪ್ರತ್ಯುಪಾಯಾಂ ಗೃಹಾನ್ ಪ್ರತಿ ॥೮॥

ಹಸಿದಿದ್ದ ಆ ಪಕ್ಷಿಯು ಇಲಿಯನ್ನು ಭಕ್ಷಿಸಿದ ಮೇಲೆ ನಾನು ಅದರ ಅನುಮತಿಯನ್ನು ಪಡೆದು ಮನೆಗೆ ಹಿಂದುರುಗಿದೆ.

ಪ್ರವಿಶಧ್ವಂ ಬಿಲಂ ಪುತ್ರಾ ವಿಸ್ರಬ್ಧಾ ನಾಸ್ತಿ ವೋ ಭಯಮ್ ।
ಶ್ಯೇನೇನ ಮಮ ಪಶ್ಯಂತ್ಯಾ ಹೃತ ಆಖುರ್ನ ಸಂಶಯಃ ॥೯॥

ಮಕ್ಕಳೇ, ನಿಶ್ಶಂಕೆಯಿಂದ ಬಿಲವನ್ನು ಪ್ರವೇಶಿಸಿ. ನಿಮಗೆ ಭಯವಿಲ್ಲ. ನನ್ನ ಕಣ್ಣೆದುರಿಗೇ ಶ್ಯೇನವು ಸತ್ಯವಾಗಿ ಇಲಿಯನ್ನು ತೆಗೆದುಕೊಂಡು ಹೋಯಿತು.

ಶಾಂರ್ಗಕಾಃ

ನ ವಿದ್ಮಹೇ ವಯಂ ಮಾತರ್ಹೃತಮಾಖುಮಿತಃ ಪುರಾ ।
ಅವಿಜ್ಞಾಯ ನ ಶಕ್ಷ್ಯಾಮಃ ಬಿಲಮಾವೇಶಿತುಂ ವಯಮ್ ॥೧೦॥

ಅಮ್ಮಾ, ಶ್ಯೇನವು ಈ ಹಿಂದೆ ಇಲಿಯನ್ನು ತೆಗೆದುಕೊಂಡು ಹೋದುದನ್ನು ನಾವು ಅರಿಯೆವು. ಅದನ್ನು ತಿಳಿಯದೆ ನಾವು ಬಿಲವನ್ನು ಪ್ರವೇಶಿಸಲು ಸಾಧ್ಯವಿಲ್ಲ.

ಜರಿತಾ

ಅಹಂ ಹಿ ತಂ ವಿಜಾನಾಮಿ ಹೃತಂ ಶ್ಯೇನೇನ ಮೂಷಿಕಮ್ ।
ಅತ ಏವ ಭಯಂ ನಾಸ್ತಿ ಕ್ರಿಯತಾಂ ವಚನಂ ಮಮ ॥೧೧॥

ನಾನು ಶ್ಯೇನವು ಇಲಿಯನ್ನು ತೆಗೆದುಕೊಂಡು ಹೋದದ್ದನ್ನು ನೋಡಿದ್ದೇನೆ. ಆದ್ದರಿಂದಲೇ ಭಯವಿಲ್ಲ. ನನ್ನ ಮಾತಿನಂತೆ ನಡೆದುಕೊಳ್ಳಿ.

ಶಾಂರ್ಗಕಾಃ

ನ ತ್ವಂ ಮಿಥ್ಯೋಪಚಾರೇಣ ಮೋಕ್ಷಯೇಥಾ ಭಯಂ ಮಹತ್ ।
ಸಮಾಕುಲೇಷು ಜ್ಞಾನೇಷು ನ ಬುದ್ಧಿಕೃತಮೇವ ತತ್ ॥೧೨॥

ನೀನು ಸುಳ್ಳುಉಪಚಾರದ ಮಾತುಗಳಿಂದ ನಮ್ಮನ್ನು ಭಯದಿಂದ ಪಾರುಮಾಡಲು ಯೋಚಿಸಬೇಡ. ಜ್ಞಾನವು ಸಂದಿಗ್ಧವಾಗಿರುವಾಗ ತೆಗೆದುಕೊಳ್ಳುವ ನಿರ್ಧಾರವು ಒಳ್ಳೆಯದಾಗಿರುವುದಿಲ್ಲ.

ನ ಚೋಪಕೃತಮಸ್ಮಾಭಿರ್ನ ಚಾಸ್ಮಾನ್ ವೇತ್ಥ ಯೇ ವಯಮ್ ।
ಪೀಡ್ಯಮಾನಾನ್ ಭರಸ್ಯಸ್ಮಾನ್ ಕಾ ಸತೀ ಕೇ ವಯಂ ತವ ॥೧೩॥

ನಾವು ನಿನಗೆ ಏನೂ ಉಪಕಾರವನ್ನು ಮಾಡಿಲ್ಲ. ನೀನು ನಮ್ಮನ್ನು ಯಾರು ಎಂದೂ ತಿಳಿದಿಲ್ಲ. ಕಷ್ಟಕ್ಕೆ ಸಿಲುಕಿರುವ ನಮ್ಮನ್ನು ಪೋಷಿಸಲು ಬಯಸುತ್ತಿದ್ದೀಯೆ. ಸಾಧ್ವಿಯಾದ ನೀನು ನಮಗೆ ಯಾರು? ನಾವು ನಿನಗೆ ಯಾರು?

ತರುಣೀ ದರ್ಶನೀಯಾऽಸಿ ಸಮರ್ಥಾ ಭತುರೇಷಣೇ ।
ಅನುಗಚ್ಛಸ್ವ ಭರ್ತಾರಂ ಪುತ್ರಾಂಲ್ಲಪ್ಸ್ಯಸಿ ಶೋಭನೇ ॥೧೪॥

ನೀನು ತರುಣಿಯೂ, ಸುಂದರಿಯೂ, ಪತಿಯನ್ನು ನೋಡಿಕೊಳ್ಳುವ ಸಾಮರ್ಥ್ಯವುಳ್ಳವಳೂ ಆಗಿದ್ದೀಯೆ. ಶೋಭನಳೇ, ಪತಿಯನ್ನು ಅನುಸರಿಸಿಹೋಗು. ಮತ್ತೆ ಮಕ್ಕಳನ್ನು ಪಡೆಯುವಿ.

ವಯಮಗ್ನಿಂ ಸಮಾವಿಶ್ಯ ಲೋಕಾನ್ ಪ್ರಾಪ್ಸ್ಯಾಮಹೇ ಶುಭೇ ।
ಅಥಾಸ್ಮಾನ್ ನ ದಹೇದಗ್ನಿರಂಬಾಯಾಃ ಪುನರೇವ ನಃ ॥೧೫॥

ಶುಭಳಾದವಳೇ, ನಾವು ಅಗ್ನಿಯನ್ನು ಪ್ರವೇಶಿಸಿ ಒಳ್ಳೆಯ ಲೋಕಗಳನ್ನು ಹೊಂದುವೆವು. ಅಮ್ಮಾ, ಒಂದುಪಕ್ಷ ಅಗ್ನಿಯು ನಮ್ಮನ್ನು ಸುಡದಿದ್ದರೆ, ನೀನು ಪುನಃ ನಮ್ಮ ಬಳಿಗೆ ಬಾ.

ವೈಶಂಪಾಯನಃ

ಏವಮುಕ್ತಾ ತತಃ ಶಾಂಗೀ ಪುತ್ರಾನುತ್ಸೃಜ್ಯ ಖಾಂಡವೇ ।
ಜಗಾಮ ತ್ವರಿತಾ ದೇಶಂ ಕ್ಷೇಮಮಗ್ನೇರನಾಶ್ರಯಮ್ ॥೧೬॥

ಹೀಗೆ ಹೇಳಲ್ಪಟ್ಟ ಶಾಂಗೀ ಯು ಖಾಂಡವವನದಲ್ಲಿ ಮಕ್ಕಳನ್ನು ಬಿಟ್ಟು ಅಗ್ನಿಯಿಲ್ಲದ ಕ್ಷೇಮದ ದೇಶಕ್ಕೆ ಶೀಘ್ರವಾಗಿ ಹೊರಟುಹೋದಳು.

ತತಸ್ತೀಕ್ಷ್ಣಾರ್ಚಿರಭ್ಯಾಗಾಜ್ಜ್ವಲಿತೋ ಹವ್ಯವಾಹನಃ ।
ಯತ್ರ ಶಾಂರ್ಗಾ ಬಭೂವುಸ್ತೇ ಮಂದಪಾಲಸ್ಯ ಪುತ್ರಕಾಃ ॥೧೭॥

ಅನಂತರ ಉಗ್ರವಾದ ಜ್ವಾಲೆಗಳಿಂದ ಕೂಡಿದ ಅಗ್ನಿಯು ಮಂದಪಾಲನ ಮಕ್ಕಳಾದ ಶಾಂರ್ಗಗಳು ಇದ್ದ ಕಡೆಗೆ ಬಂದನು.

ತತಸ್ತಂ ಜ್ವಲಿತಂ ದೃಷ್ಟ್ವಾ ಜ್ವಲನಂ ತೇ ವಿಹಂಗಮಾಃ ।
ವ್ಯಥಿತಾಃ ಕರುಣಾ ವಾಚಃ ಶ್ರಾವಯಾಮಾಸುರಂತಿಕಾತ್ ।
ಜರಿತಾರಿಸ್ತತೋ ವಾಕ್ಯಂ ಶ್ರಾವಯಾಮಾಸ ಪಾವಕಮ್ ॥೧೮॥

ಜ್ವಲಿತವಾದ ಅಗ್ನಿಯನ್ನು ನೋಡಿ ಆ ಪಕ್ಷಿಗಳು ವ್ಯಥೆಯಿಂದ ಕೂಡಿ ಅಗ್ನಿಯ ಸಮೀಪದಲ್ಲಿ ನಿಂತು ಕರುಣಾಜನಕವಾದ ಮಾತುಗಳನ್ನು ಆಡಿದರು. ಜರಿತಾರಿಯು ಆಗ ಅಗ್ನಿಯನ್ನು ಸ್ತೋತ್ರಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಪಂಚತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಮಯದರ್ಶನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಮೂವತ್ತಾರನೆಯ ಅಧ್ಯಾಯ

(ಸಮೀಪದಲ್ಲಿ ಬರುತ್ತಿರುವ ಅಗ್ನಿಯನ್ನು ನೋಡಿ ಜರಿತಾರಿಯಾದಿಗಳ ಸ್ತೋತ್ರ. ಪ್ರಸನ್ನನಾದ ಅಗ್ನಿಯಿಂದ ಅವರ ಮೋಚನೆ.)

ಜರಿತಾರಿಃ

ಪುರತಃ ಕೃಚ್ಛ್ರಕಾಲಸ್ಯ ಧೀಮಾನ್ ಜಾಗರ್ತಿ ಪೂರುಷಃ ।
ಸ ಕೃಚ್ಛ್ರಕಾಲಂ ಸಂಪ್ರಾಪ್ಯ ವ್ಯಥಾಂ ನೈವೈತಿ ಕರ್ಹಿಚಿತ್ ॥೧॥

ಮೇಧಾವಿಯಾದವನು ಕಷ್ಟಕಾಲವು ಬರುವುದಕ್ಕಿಂತ ಮುಂಚೆಯೇ, ಎಚ್ಚರಿಕೆಯಿಂದಿರುತ್ತಾನೆ. ಅಂತಹವನು ಕಷ್ಟಕಾಲವು ಬಂದಾಗ ವ್ಯಥೆಪಡುವುದಿಲ್ಲ.

ಯಸ್ತು ಕೃಚ್ಛ್ರಮಸಂಪ್ರಾಪ್ತಂ ವಿಶ್ವಾಸಾನ್ನಾವಬುಧ್ಯತೇ ।
ಸ ಕೃಚ್ಛ್ರಕಾಲೇ ವ್ಯಥಿತೋ ನ ಪ್ರಜಾನಾತಿ ಕಿಂಚನ ॥೨॥

ಯಾವನು ಕಷ್ಟಕಾಲವು ಬರುವುದಕ್ಕಿಂತ ಮುಂಚೆ ಕೆಟ್ಟಧೈರ್ಯವನ್ನು ಹೊಂದಿ ಅದನ್ನು ನಿರೀಕ್ಷಿಸುವುದಿಲ್ಲವೋ, ಅವನು ಕಷ್ಟಕಾಲ ಬಂದಾಗ ವ್ಯಥೆಯನ್ನು ಪಡುತ್ತಾನೆ. ಆಗ ಅವನಿಗೆ ಏನೂ ತೋರುವುದಿಲ್ಲ.

ಸಾರಿಸೃಕ್ಕಃ

ಧೀರಸ್ತ್ವಮಸಿ ಮೇಧಾವೀ ಪ್ರಾಣಕೃಚ್ಛ್ರಮಿದಂ ಚ ನಃ ।
ಶೂರಃ ಪ್ರಾಜ್ಞೋ ಬಹೂನಾಂ ಹಿ ಭವತ್ಯೇಕೋ ಗುಣಾಧಿಕಃ ॥೩॥

ಜರಿತಾರಿಯೇ, ನೀನು ಧೀರನೂ, ಮೇಧಾವಿಯೂ ಆಗಿದ್ದೀಯೆ. ನಮಗೆ ಈಗ ಪ್ರಾಣಸಂಕಟವು ಬಂದೊದಗಿದೆ. ಅನೇಕಜನರಲ್ಲಿ ಒಬ್ಬನು ಶೂರನೂ, ಪ್ರಾಜ್ಞನೂ ಮತ್ತು ಗುಣಾಧಿಕನೂ ಆಗುತ್ತಾನೆ.

ಸ್ತಂಬಮಿತ್ರಃ

ಜ್ಯೇಷ್ಠಸ್ತಾತೋ ಭವತಿ ವೈ ಜ್ಯೇಷ್ಠೋ ಮುಂಚತಿ ಕೃಚ್ಛ್ರತಃ ।
ಜ್ಯೇಷ್ಠಶ್ಚೇನ್ನ ಪ್ರಜಾನಾತಿ ಕನೀಯಾನ್ ಕಿಂ ಕರಿಷ್ಯತಿ ॥೪॥

ಅಣ್ಣನು ತಂದೆಯಂತೆ ಇರುತ್ತಾನೆ. ಅಣ್ಣನು ಸಂಕಟಗಳಿಂದ ಪಾರುಮಾಡುತ್ತಾನೆ. ಅಣ್ಣನಿಗೇ ಉಪಾಯವು ತಿಳಿಯದಿದ್ದಾಗ ತಮ್ಮನು ಏನು ಮಾಡುವನು?

ದ್ರೋಣಃ

ಹಿರಣ್ಯರೇತಾಸ್ತ್ವರಿತೋ ಜ್ವಲನ್ನಾಯಾತಿ ನಃ ಕ್ಷಯಮ್ ।
ಸಪ್ತಜಿಹ್ವೋಽನಲಃ ಕ್ಷಾಮೋ ಲೇಲಿಹಾನೋ ವಿಸರ್ಪತಿ ॥೫॥

ಹಿರಣ್ಯರೇತನಾದ ಅಗ್ನಿಯು ಪ್ರಜ್ವಲಿಸುತ್ತಾ ನಮ್ಮ ನಿವಾಸದ ಕಡೆಗೆ ಬರುತ್ತಿದ್ದಾನೆ. ಸಪ್ತಜಿಹ್ವನಾದ ಹಸಿದ ಅಗ್ನಿಯು ತುಟಿಗಳನ್ನು ಸವರಿಕೊಳ್ಳುತ್ತಾ ಈ ಕಡೆಗೇ ಬರುತ್ತಿದ್ದಾನೆ.

ವೈಶಂಪಾಯನಃ

ಏವಮುಕ್ತೋ ಭ್ರಾತೃಭಿಸ್ತು ಜರಿತಾರಿರ್ವಿಭಾವಸುಮ್ ।
ತುಷ್ಟಾವ ಪ್ರಾಂಜಲಿರ್ಭೂತ್ವಾ ಯತ್ ತಚ್ಛೃಣು ನರಾಧಿಪ ॥೬॥

ರಾಜನೇ, ತನ್ನ ತಮ್ಮಂದಿರಿಂದ ಹೀಗೆ ಹೇಳಲ್ಪಟ್ಟ ಜರಿತಾರಿಯು ಅಗ್ನಿದೇವನಿಗೆ ಕೈಗಳನ್ನು ಮುಗಿದು ಸ್ತೋತ್ರಮಾಡಿದನು. ನೀನು ಅದನ್ನು ಕೇಳು.

ಜರಿತಾರಿಃ

ಆತ್ಮಾ ಸ ವಾಯುಃ ಪವನ ಶರೀರಮುತ ವೀರುಧಃ ।
ಯೋನಿರಾಪಶ್ಚ ತೇ ಶುಕ್ಲ ಯೋನಿಸ್ತ್ವಮಸಿ ಚಾಂಭಸಃ ॥೭॥

ಪವಿತ್ರನಾದ ಅಗ್ನಿಯೇ, ಪರಮಾತ್ಮನೂ, ವಾಯುವೂ, ಶರೀರವೂ, ಲತೆಗಳೂ ಮತ್ತು ಪ್ರಳಯಕಾಲದ ಜಲವೂ ನಿನ್ನ ಉತ್ಪತ್ತಿಸ್ಥಾನಗಳು. ನೀನು ಜಲದ ಉತ್ಪತ್ತಿಗೆ ಕಾರಣನಾಗಿಯೂ ಇದ್ದೀಯೆ.

ಊರ್ಧ್ವಂ ಚಾಧಶ್ಚ ಗಚ್ಛಂತಿ ವಿಸರ್ಪಂತಿ ಚ ಪಾರ್ಶ್ವತಃ ।
ಅರ್ಚಿಷಸ್ತೇ ಮಹಾವೀರ್ಯ ರಶ್ಮಯಃ ಸವಿತುರ್ಯಥಾ ॥೮॥

ಮಹಾವೀರ್ಯಶಾಲಿಯೇ, ನಿನ್ನ ಜ್ವಾಲೆಗಳು ಸೂರ್ಯನ ಕಿರಣಗಳಂತೆ ಮೇಲ್ಮುಖವಾಗಿಯೂ ಮತ್ತು ಕೆಳಮುಖವಾಗಿಯೂ ಹೋಗುತ್ತವೆ ಮತ್ತು ಪಾರ್ಶ್ವಗಳಲ್ಲಿಯೂ ಹರಡುತ್ತವೆ.

ಸಾರಿಸೃಕ್ಕಃ

ಮಾತಾ ಪ್ರಪನ್ನಾ ಪಿತರಂ ನ ವಿದ್ಮಃ
ಪಕ್ಷಾಶ್ಚ ನೋ ನ ಸುಜಾತಾ ಭವಂತಿ ।
ನ ನಸ್ತ್ರಾತಾ ವಿದ್ಯತೇ ವೈ ತ್ವದನ್ಯಃ
ತಸ್ಮಾದಸ್ಮಾನ್ ಪರಿಧತ್ಸ್ವೈಕವೀರ ॥೯॥

ತಾಯಿಯು ದೂರ ಹೋಗಿದ್ದಾಳೆ. ತಂದೆಯು ಎಲ್ಲಿದ್ದಾನೋ ತಿಳಿಯದು. ನಮಗೆ ರೆಕ್ಕೆಗಳು ಇನ್ನೂ ಚೆನ್ನಾಗಿ ಬೆಳೆದಿಲ್ಲ. ನಿನ್ನನ್ನು ಬಿಟ್ಟು ನಮಗೆ ಯಾರೂ ರಕ್ಷಕರಿಲ್ಲ. ಏಕವೀರನೇ, ಆದ್ದರಿಂದ ನೀನೇ ನಮ್ಮನ್ನು ಧರಿಸಿ ರಕ್ಷಿಸು.

ಯದಗ್ನೇ ತೇ ಶಿವಂ ರೂಪಂ ಯೇ ಚ ತೇ ಸಪ್ತ ಹೇತಯಃ ।
ತೇನ ನಃ ಪರಿರಕ್ಷೇಥಾಃ ಪೀಡಿತಾನ್ ಶರಣೈಷಿಣಃ ॥೧೦॥

ಅಗ್ನಿಯೇ, ದುಃಖದಿಂದ ಕೂಡಿ ನಿನಗೆ ಶರಣಾಗತರಾದ ನಮ್ಮನ್ನು ನಿನ್ನ ಮಂಗಳವಾದ ರೂಪದಿಂದ ಮತ್ತು ನಿನ್ನ ಸಪ್ತ ಆಯುಧಗಳಿಂದ ರಕ್ಷಿಸು.

ತ್ವಮೇವೈಕಸ್ತಪಸಾಂ ಜಾತವೇದೋ
ನಾನ್ಯಸ್ತಪ್ತಾ ವಿದ್ಯತೇ ಗೋಷು ದೇವ ।
ಋಷೀನಸ್ಮಾನ್ ಬಾಲಕಾನ್ ಪಾಲಯಸ್ವ
ಪರೇಣಾಸ್ಮಾನ್ ಪ್ರೇಹಿ ವೈ ಹವ್ಯವಾಹ ॥೧೧॥

ಜಾತವೇದನೇ, ತಪನಶಕ್ತಿಯುಳ್ಳವರಲ್ಲಿ ನೀನು ಪ್ರಧಾನನಾದವನು. ದೇವನೇ, ಕಿರಣಗಳಿಂದ ದಹಿಸುವವರು ಬೇರೆ ಯಾರೂ ಇಲ್ಲ. ಋಷಿಗಳೂ, ಬಾಲಕರೂ ಆದ ನಮ್ಮನ್ನು ರಕ್ಷಿಸು. ಹವ್ಯವಾಹನೇ, ನಮ್ಮನ್ನು ದೂರದಿಂದ ಬಳಸಿಕೊಂಡು ಹೋಗು.

ಸ್ತಂಬಮಿತ್ರಃ

ಸರ್ವಮಗ್ನೇ ತ್ವಮೇವೈಕಸ್ತ್ವಯಿ ಸರ್ವಮಿದಂ ಜಗತ್ ।
ತ್ವಂ ಧಾರಯಸಿ ಭೂತಾನಿ ಭುವನಂ ತ್ವಂ ಬಿಭರ್ಷಿ ಚ ॥೧೨॥

ಅಗ್ನಿಯೇ, ನೀನೇ ಎಲ್ಲವೂ ಆಗಿದ್ದೀಯೆ. ಈ ಜಗತ್ತು ನಿನ್ನನ್ನು ಆಶ್ರಯಿಸಿ ನಿನ್ನ ಅಧೀನವಾಗಿಯೇ ಇದೆ. ನೀನೇ ಎಲ್ಲಾ ಪ್ರಾಣಿಗಳನ್ನೂ ಮತ್ತು ಲೋಕಗಳನ್ನೂ ಧರಿಸಿ ಪೋಷಿಸುತ್ತೀಯೆ.

ದ್ರೋಣಃ

ತ್ವಮಗ್ನೇ ಹವ್ಯವಾಟ್ ಚೈವ ತ್ವಮೇವ ಪರಮಾ ಗತಿಃ ।
ಮನೀಷಿಣಸ್ತಾ ತ್ವಂ ಯಜಂತೇ ಬಹುಧಾ ಚೈಕಧಾऽಪಿ ಚ ॥೧೩॥

ಅಗ್ನಿಯೇ, ನೀನೇ ಹವ್ಯವಾಹಕನಾದವನು. ನೀನೇ ಪರಮಗಮ್ಯನಾದವನು. ವಿವೇಕಿಗಳಾದವರು ನಿನ್ನನ್ನು ಬಹುರೂಪಗಳಿಂದಲೂ, ಒಂದೇ ರೂಪದಿಂದಲೂ, ಅರ್ಚಿಸುತ್ತಾರೆ.

ಸೃಷ್ಟ್ವಾ ಲೋಕಾಂಸ್ತ್ರೀನಿಮಾನ್ ಹವ್ಯವಾಹ
ಕಾಲೇ ಪ್ರಾಪ್ತೇ ಪಚಸಿ ಪುನಃ ಸಮಿದ್ಧಃ ।
ಸರ್ವಸ್ಯಾಸ್ಯ ಭುವನಸ್ಯ ಪ್ರಸೂತಿಃ
ತ್ವಮಗ್ನೇ ಭವಸಿ ಪುನಃ ಪ್ರತಿಷ್ಠಾ ॥೧೪॥

ಹವ್ಯವಾಹನೇ, ನೀನು ಈ ಮೂರುಲೋಕಗಳನ್ನು ಸೃಷ್ಟಿಮಾಡಿ, ಸಂಹಾರಕಾಲವು ಬಂದಾಗ ಸಮಿದ್ಧನಾಗಿ ಎಲ್ಲವನ್ನೂ ಸಂಹಾರಮಾಡುತ್ತೀಯೆ. ಅಗ್ನಿಯೇ, ನೀನೇ ಪುನಃ ಎಲ್ಲಾ ಲೋಕಗಳನ್ನೂ ಸೃಷ್ಟಿಮಾಡಿ ಅವುಗಳಿಗೆ ಆಧಾರನಾಗಿರುತ್ತೀಯೆ.

ತ್ವಮನ್ನಂ ಪ್ರಾಣಿನಾಂ ಭುಂಕ್ಷೇ ಅಂತರ್ಭೂತೋ ಜಗತ್ಪತೇ ।
ನಿತ್ಯಪ್ರವೃದ್ಧಃ ಪಚಸಿ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೧೫॥

ನೀನು ಸರ್ವಪ್ರಾಣಿಗಳ ಶರೀರದೊಳಗಿದ್ದು ಈ ಜಠರಾಗ್ನಿರೂಪದಿಂದ ಅನ್ನವನ್ನು ಭುಂಜಿಸುತ್ತೀಯೆ. ನಿತ್ಯವೂ ಪ್ರವೃದ್ಧನಾಗಿ ಅನ್ನವನ್ನು ಪಚನಮಾಡುತ್ತೀಯೆ. ಎಲ್ಲವೂ ನಿನ್ನಲ್ಲಿ ಪ್ರತಿಷ್ಠಿತವಾಗಿದೆ.

ಸೂರ್ಯೋ ಭೂತ್ವಾ ರಶ್ಮಿಭಿರ್ಜಾತವೇದೋ
ಭೂಮೇರಾಪೋ ಭೂಮಿಗತಾನ್ ರಸಾಂಶ್ಚ ।

ವಿಶ್ವಂ ಚಾದಾಯ ಪುನರುತ್ಸರ್ಗಕಾಲೇ
ಸೃಷ್ಟಾ ವೃಷ್ಟ್ಯಾ ಭಾವಯಸೀಹ ಶುಕ್ಲ ॥೧೬॥

ಜಾತವೇದನೆ, ನೀನೇ ಸೂರ್ಯನಾಗಿ ಭೂಮಿಯಲ್ಲಿರುವ ನೀರನ್ನು ಮತ್ತು ಭೂಮಿಯಲ್ಲಿರುವ ಎಲ್ಲಾ ರಸಗಳನ್ನೂ ನಿನ್ನ ಕಿರಣಗಳಿಂದ ತೆಗೆದುಕೊಂಡು ಅದನ್ನು ಪುನಃ ಕೊಡುವ ಕಾಲದಲ್ಲಿ ಮಳೆಯ ಮೂಲಕವಾಗಿ ನೀರನ್ನೂ ಮತ್ತು ರಸಗಳನ್ನೂ ಸೃಷ್ಟಿಮಾಡಿ ಪೋಷಿಸುತ್ತೀಯೆ.

ತ್ವತ್ತ ಏತಾಃ ಪುನಃ ಶುಕ್ಲ ವೀರುಧೋ ಹರಿತಚ್ಛದಾಃ ।
ಜಾಯಂತೇ ಪುಷ್ಕರಿಣ್ಯಶ್ಚ ಸುಭದ್ರಶ್ಚ ಮಹೋದಧಿಃ ॥೧೭॥

ಶುಕ್ಲನೇ, ನಿನ್ನಿಂದಾಗಿ ಈ ಎಲ್ಲಾ ಲತೆಗಳೂ ಪುನಃ ಹಸಿರು ಎಲೆಗಳಿಂದ ಕೂಡುತ್ತವೆ. ಪುಷ್ಕರಿಣಿಗಳೂ ಉಂಟಾಗುತ್ತವೆ. ಮಹಾಸಾಗರವು ಸುಭದ್ರವಾಗಿರುತ್ತದೆ.

ಶೋಭನಂ ಸದ್ಮ ತಿಗ್ಮಾಂಶೋ ವರುಣಸ್ಯ ಪರಾಯಣಮ್ ।
ಶಿವಸ್ತ್ವಾತ್ತಾ ಭವಾಸ್ಮಾಕಂ ಮಾऽಸ್ಮಾನದ್ಯ ವಿನಾಶಯ ॥೧೮॥

ತಿಗ್ಮಾಂಶುವೇ, ವರುಣನ ಆಲಯವು ನಿನ್ನ ಮಂಗಳವಾದ ನಿವಾಸಸ್ಥಾನ. ನೀನು ನಮಗೆ ಮಂಗಳಪ್ರದನೂ ಮತ್ತು ರಕ್ಷಕನೂ ಆಗು. ಈ ದಿನ ನಮ್ಮನ್ನು ನಾಶಮಾಡಬೇಡ.

ಪಿಂಗಲಾಕ್ಷ ಹಯಗ್ರೀವ ಕೃಷ್ಣವರ್ತ್ಮನ್ ಹುತಾಶನ ।
ಪರೇಣ ಪ್ರೇಹಿ ಮುಂಚಾಸ್ಮಾನ್ ಸಾಗರಸ್ಯ ಗ್ರಹಾನಿವ ॥೧೯॥

ಪಿಂಗಳಾಕ್ಷನೇ, ಹಯಗ್ರೀವನೇ, ಕೃಷ್ಣವರ್ತ್ಮನೇ, ಹುತಾಶನನೇ, ಸಾಗರದಲ್ಲಿರುವ ವಡವಾಗ್ನಿಯು ಮೊಸಳೆಗಳನ್ನು ಉಳಿಸಿ ಬಳಸಿಕೊಂಡು ಹೋಗುವಂತೆ ನೀನು ದೂರದಿಂದ ನಮ್ಮನ್ನು ಬಳಸಿಕೊಂಡುಹೋಗು. ನಮ್ಮನ್ನು ಬಿಡುಗಡೆಗೊಳಿಸು.

ಏವಮುಕ್ತೋ ಜಾತವೇದಾ ದ್ರೋಣೇನಾಕ್ಲಿಷ್ಟಕರ್ಮಣಾ ।
ದ್ರೋಣಮಾಹ ಪ್ರತೀತಾತ್ಮಾ ಮಂದಪಾಲಪ್ರತಿಜ್ಞಯಾ ॥೨೦॥

ಶುಭಕರ್ಮನಾದ ದ್ರೋಣನು ಹೀಗೆ ಹೇಳುತ್ತಿರಲು ಅಗ್ನಿಯು ಸಂತೋಷಗೊಂಡು ಮಂದಪಾಲನಲ್ಲಿ ತಾನು ಮಾಡಿದ ಪ್ರತಿಜ್ಞೆಯನ್ನು ಸ್ಮರಿಸಿ ದ್ರೋಣನನ್ನು ಕುರಿತು ಹೇಳಿದನು.

ಅಗ್ನಿಃ

ಋಷಿರ್ದ್ರೋಣಸ್ತ್ವಮಸಿ ಬ್ರಹ್ಮೈತದ್ ವ್ಯಾಹೃತಂ ತ್ವಯಾ ।
ಈಪ್ಸಿತಂ ತೇ ಕರಿಷ್ಯಾಮಿ ನ ಚ ತೇ ವಿದ್ಯತೇ ಭಯಮ್ ॥೨೧॥

ನೀನು ಋಷಿಯಾದ ದ್ರೋಣನಾಗಿದ್ದೀಯೆ. ನನ್ನ ಸ್ತೋತ್ರರೂಪದಲ್ಲಿ ನೀನು ವೇದವನ್ನೇ ಹೇಳಿದ್ದೀಯೆ. ನಿನ್ನ ಇಷ್ಟವನ್ನು ನೆರವೇರಿಸುವೆನು. ನಿನಗೆ ನನ್ನ ಭಯವು ಇರುವುದಿಲ್ಲ.

ಮಂದಪಾಲೇನ ಯೂಯಂ ಹಿ ಮಮ ಪೂರ್ವಂ ನಿವೇದಿತಾಃ ।
ವರ್ಜಯೇಃ ಪುತ್ರಕಾನ್ ಮಹ್ಯಂ ದಹನ್ ದಾವಮಿತಿ ಸ್ಮ ಹ ॥೨೨॥

ನಿಮ್ಮ ತಂದೆಯಾದ ಮಂದಪಾಲನು ನನ್ನನ್ನು ಕುರಿತು ಮೊದಲೇ, ನೀನು ಖಾಂಡವವನವನ್ನು ದಹಿಸುವಾಗ ನನ್ನ ಮಕ್ಕಳನ್ನು ಬಿಡಬೇಕು ಎಂದು ನಿಮ್ಮನ್ನು ನನಗೆ ಸಮರ್ಪಿಸಿದ್ದನು.

ಯಚ್ಚ ತದ್ವಚನಂ ತಸ್ಯ ತ್ವಯಾ ಯಚ್ಚೇಹ ಭಾಷಿತಮ್ ।
ಉಭಯಂ ಮೇ ಗರೀಯಸ್ತಾ ದ್ ಬ್ರೂಹಿ ಕಿಂ ಕರವಾಣಿ ತೇ ।
ಭೃಶಂ ಪ್ರೀತೋಽಸ್ಮಿ ಭದ್ರಂ ತೇ ಬ್ರಹ್ಮನ್ ಸ್ತೋತ್ರೇಣ ತೇ ವಿಭೋ ॥

ಅವನ ಆ ಮಾತು ಮತ್ತು ನಿನ್ನ ಈ ಸ್ತೋತ್ರರೂಪವಾದ ಮಾತು ಎರಡೂ ಸಹ ನನಗೆ ಪೂಜ್ಯವಾದದ್ದೆ. ಬ್ರಾಹ್ಮಣನೇ, ನಿನ್ನ ಸ್ತೋತ್ರದಿಂದ ನಾನು ಬಹಳ ಸಂತುಷ್ಟನಾಗಿದ್ದೇನೆ. ನಿನಗೆ ಏನು ಮಾಡಲಿ ಎಂದು ಹೇಳು.

ದ್ರೋಣಃ

ಇಮೇ ಮಾರ್ಜಾರಕಾಃ ಶುಕ್ಲ ನಿತ್ಯಮುದ್ವೇಜಯಂತಿ ನಃ ।
ಏತಾನ್ ಕುರುಷ್ವ ದಂಷ್ಟ್ರಾಸು ಹವ್ಯವಾಡಾರ್ತಿಸಂಭವಾನ್ ॥೨೩॥

ಶುಕ್ಲನೇ, ಈ ಮಾರ್ಜಾಲಗಳು ನಮಗೆ ನಿತ್ಯವೂ ಭಯವನ್ನು ಉಂಟುಮಾಡುತ್ತವೆ. ಹವ್ಯವಾಹನನೇ, ನಮಗೆ ದುಃಖವನ್ನು ನೀಡುವ ಇವುಗಳನ್ನು ನಿನ್ನ ಕೋರೆದಾಡೆಗಳಿಗೆ ಹಾಕಿಕೊಂಡು ವಿನಾಶಪಡಿಸು.

ವೈಶಂಪಾಯನಃ

ತಥಾ ತತ್ ಕೃತವಾನಗ್ನಿರಭ್ಯನುಜ್ಞಾಯ ಶಾಂರ್ಗಕಾನ್ ।
ದದಾಹ ಖಾಂಡವಂ ಚೈವ ಸಮಿದ್ಧೋ ಜನಮೇಜಯ ॥೨೪॥

ಆಗ ಅಗ್ನಿಯು ಶಾಂರ್ಗಕಗಳಿಗೆ ಹಾಗೆಯೇ ಆಗಲಿ ಎಂದು ಅನುಮತಿಯನ್ನು ನೀಡಿ ದ್ರೋಣನು ಹೇಳಿದಂತೆಯೇ ಮಾಡಿದನು. ಜನಮೇಜಯನೇ, ದೊಡ್ಡಜ್ವಾಲೆಗಳಿಂದ ಪ್ರವೃದ್ಧನಾಗಿ ಖಾಂಡವವನವನ್ನು ದಹಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಷಟ್‌ತ್ರಿಂಶತ್ಯಧಿಕದ್ವಿಶತತಮೋऽಧ್ಯಾಯಃ ॥

॥ ಇತಿ ಮಯದರ್ಶನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ಇನ್ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಇನ್ನೂರ ಮೂವತ್ತೇಳನೆಯ ಅಧ್ಯಾಯ

(ಮಂದಪಾಲನಿಗೆ ಲಪಿತೆಯ ಮತ್ತು ಜರಿತೆಯ ತಿರಸ್ಕಾರದ ವಚನಗಳು. ಪತ್ನೀಪುತ್ರರೊಡನೆ ಮಂದಪಾಲನ ದೇಶಾಂತರ ಗಮನ. ಸ್ವರ್ಗದಿಂದ ಇಂದ್ರನ ಆಗಮನ. ಸಂತೋಷಪ್ರಕಟನ ಮತ್ತು ವರದಾನ.)

ವೈಶಂಪಾಯನಃ

ಮಂದಪಾಲೋऽಪಿ ಕೌರವ್ಯ ಚಿಂತಯಾನಃ ಸುತಾನ್ ತದಾ ।
ಉಕ್ತವಾನಪ್ಯಶೀತಾಂಶುಂ ಸ ನೈವ ಸ್ಮ ನ ತಪ್ಯತೇ ।
ಸ ತಪ್ಯಮಾನಃ ಪುತ್ರಾರ್ಥೇ ಲಪಿತಾಮಿದಮಬ್ರವೀತ್ ॥೧॥

ಜನಮೇಜಯನೇ, ಮಂದಪಾಲನು ಅಗ್ನಿದೇವನಲ್ಲಿ ತನ್ನ ಮಕ್ಕಳ ರಕ್ಷಣೆಯ ಪ್ರಾರ್ಥನೆಯನ್ನು ಮಾಡಿದ್ದರೂ, ಮಕ್ಕಳನ್ನು ನೆನೆದು ಸಂತಾಪಪಡದೇ ಇರಲಿಲ್ಲ. ಅವನು ಮಕ್ಕಳ ವಿಷಯದಲ್ಲಿ ಸಂತಾಪಪಡುತ್ತಾ ಲಪಿತೆಯನ್ನು ಕುರಿತು ಇದನ್ನು ಹೇಳಿದನು.

ಮಂದಪಾಲಃ

ಕಥಂ ತ್ವಶಕ್ತಾಃ ಪತನೇ ಲಪಿತೇ ಮಮ ಪುತ್ರಕಾಃ ।
ವರ್ಧಮಾನೇ ಹುತವಹೇ ವಾತೇ ಶೀಘ್ರಂ ಪ್ರವಾಯತಿ ॥೨॥

ಅಸಮರ್ಥಾ ವಿಮೋಕ್ಷಾಯ ಭವಿಷ್ಯಂತಿ ಮಮಾತ್ಮಜಾಃ ।
ಕಥಂ ನು ಶಕ್ತಾ ತ್ರಾಣಾಯ ಮಾತಾ ತೇಷಾಂ ತಪಸ್ವಿನೀ ॥೩॥

ಲಪಿತೆ, ಅಗ್ನಿಯು ಹಬ್ಬುತ್ತಿರಲು ಮತ್ತು ಗಾಳಿಯು ಜೋರಾಗಿ ಬೀಸುತ್ತಿರಲು ದುರ್ಬಲರಾದ ನನ್ನ ಮಕ್ಕಳು ಹೇಗೆ ಅಗ್ನಿಯಿಂದ ಬಿಡಿಸಿಕೊಳ್ಳಲು ಸಮರ್ಥರಾಗುವರು?

ಭವಿಷ್ಯತ್ಯಸುಖಾವಿಷ್ಟಾ ಪುತ್ರತ್ರಾಣಮಪಶ್ಯತೀ ।
ಕಥಂ ಚ ಸರಣೇऽಶಕ್ತಾನ್ ಪತನೇ ಚ ಮಮಾತ್ಮಜಾನ್ ॥೪॥

ಅವರ ಶೋಚನೀಯಳಾದ ತಾಯಿಯು ಮಕ್ಕಳನ್ನು ರಕ್ಷಿಸುವ ಉಪಾಯವನ್ನು ಕಾಣದೆ, ದುಃಖದಿಂದ ಕೂಡಿದವಳಾಗಿ ಹೇಗೆ ಮಕ್ಕಳನ್ನು ರಕ್ಷಿಸುವಳು?

ಸಾ ತಪ್ಯಮಾನಾ ಭೀತಾ ವಾ ಗಮನಾಯಾಭಿಧಾವತೀ ।
ಜರಿತಾರಿಃ ಕಥಂ ಪುತ್ರಃ ಸಾರಿಸೃಕ್ಕಃ ಕಥಂ ಭವೇತ್ ।
ಸ್ತಂಬಮಿತ್ರಃ ಕಥಂ ದ್ರೋಣಃ ಕಥಂ ಸಾ ಚ ತಪಸ್ವಿನೀ ॥೫॥

ಚಲಿಸದೆ ಅಥವಾ ಹಾರದೆ, ಅಸಮರ್ಥಳಾದ ನನ್ನ ಮಕ್ಕಳನ್ನು ಸಂತಾಪದಿಂದಲೂ ಮತ್ತು ಭಯದಿಂದಲೂ ಅಲ್ಲಿಂದಿಲ್ಲಿಗೆ ಓಡುತ್ತಾ ಅವಳು ಹೇಗೆ ರಕ್ಷಿಸುವಳು?

ನನ್ನ ಮಗನಾದ ಜರಿತಾರಿಯು ಹೇಗಿದ್ದಾನೆ? ಸಾರಿಸೃಕ್ಕನು ಹೇಗಿದ್ದಾನೆ? ಸ್ತಂಬಮಿತ್ರನು ಹೇಗಿದ್ದಾನೆ? ದ್ರೋಣನು ಹೇಗಿದ್ದಾನೆ? ಆ ಶೋಚನೀಯಳಾದ ಜರಿತೆಯು ಹೇಗಿದ್ದಾಳೆ?

ವೈಶಂಪಾಯನಃ

ಲಾಲಪ್ಯಮಾನಂ ತಮೃಷಿಂ ಮಂದಪಾಲಂ ತಥಾ ವನೇ ।
ಲಪಿತಾ ಪ್ರತ್ಯುವಾಚೇದಂ ಸಾಸೂಯಮಿವ ಭಾರತ ॥೬॥

ಭಾರತನೇ, ಕಾಡಿನಲ್ಲಿ ಹೀಗೆ ಬಡಬಡಿಸುತ್ತಿರುವ ಆ ಮಂದಪಾಲ ಋಷಿಯನ್ನು ಕುರಿತು ಲಪಿತೆಯು ಅಸೂಯೆಯಿಂದ ಈ ಮಾತನ್ನಾಡಿದಳು.

ನ ತೇ ಪುತ್ರೇಷ್ವವೇಕ್ಷಾಽಸ್ತಿ ಯಾನ್ ಋಷೀನುಕ್ತವಾನಸಿ ।
ತೇಜಸ್ವಿನೋ ವೀರ್ಯವಂತೋ ನ ತೇಷಾಂ ಜ್ವಲನಾದ್ ಭಯಮ್ ॥

ನೀನು ಯಾವ ಋಷಿಗಳ ಹೆಸರನ್ನು ಹೇಳಿದೆಯೋ, ನಿನಗೆ ಮಕ್ಕಳಾದ ಅವರನ್ನು ನೋಡುವ ಆಸೆಯಿಲ್ಲ (ಅಥವಾ ನೋಡಬೇಕಾದ ಅಗತ್ಯವಿಲ್ಲ). ಅವರು ತೇಜಸ್ವಿಗಳೂ ಮತ್ತು ವೀರ್ಯವಂತರು. ಅವರಿಗೆ ಅಗ್ನಿಯಿಂದ ಭಯವಿಲ್ಲ.

ದಾವಾಗ್ನೇಃ ಪರಿದತ್ತಾಶ್ಚ ತ್ವಯಾ ಹಿ ಮಮ ಸನ್ನಿಧೌ ।
ಪ್ರತಿಶ್ರುತಂ ತಥಾ ತೇನ ಜ್ವಲನೇನ ಮಹಾತ್ಮನಾ ॥೮॥

ನೀನು ನನ್ನ ಸನ್ನಿಧಿಯಲ್ಲಿಯೇ ಅವರನ್ನು ಅಗ್ನಿಗೆ ನಿವೇದಿಸಿದ್ದೀಯೆ. ಮಹಾನುಭಾವನಾದ ಅಗ್ನಿಯೂ ಸಹ ರಕ್ಷಣೆಯ ವಾಗ್ದಾನವನ್ನು ಮಾಡಿದ್ದಾನೆ.

ಲೋಕಪಾಲೋಽನೃತಾಂ ವಾಚಂ ನ ಚ ವಕ್ತಾ ಕಥಂಚನ ।
ನಾಸಮಂಜಸವೇತ್ತಾ ವೈ ನ ತೇ ತೇಷ್ವಸ್ತಿ ಮಾನಸಮ್ ॥೯॥

ಲೋಕಪಾಲಕನಾದ ಅಗ್ನಿಯು ಎಂದೂ ಸುಳ್ಳನ್ನು ಹೇಳುವುದಿಲ್ಲ ಅಥವಾ ನಿನ್ನ ಮಾತನ್ನು ತಪ್ಪಾಗಿ ಗ್ರಹಿಸುವುದೂ ಇಲ್ಲ. ನಿನಗೆ ಆ ಮಕ್ಕಳಲ್ಲಿ ಮನಸ್ಸಿಲ್ಲ.

ತಾಮೇವ ಹಿ ಮಮಾಮಿತ್ರಾಂ ಚಿಂತಯನ್ ಪರಿತಪ್ಯಸೇ ।
ಧ್ರುವಂ ಮಯಿ ನ ತೇ ಸ್ನೇಹೋ ಯಥಾ ತಸ್ಯಾಂ ಪುರಾಽಭವತ್ ॥೧೦॥

ನನ್ನ ಶತ್ರುವಾದ ಅವಳನ್ನು (ಜರಿತೆಯನ್ನು) ಚಿಂತಿಸುತ್ತಾ ತಾಪಪಡುತ್ತಿದ್ದೀಯೆ. ಅವಳಲ್ಲಿ ಇದ್ದಂತೆ ನಿನಗೆ ನನ್ನಲ್ಲಿ ಸ್ನೇಹವಿಲ್ಲ ಎಂಬುದು ನಿಶ್ಚಿತವಾದುದು.

ನ ಹಿ ಪಕ್ಷವತಾ ಭಾವ್ಯಂ ನಿಃಸ್ನೇಹೇನ ಸುಹೃಜ್ಜನೇ ।
ಪೀಡ್ಯಮಾನ ಉಪಸ್ಪಷ್ಟಂ ಶಕ್ಯೋ ನಾತ್ಮಾ ಕಥಂಚನ ॥೧೧॥

ಸುಹೃಜ್ಜನರಲ್ಲಿ ಸ್ನೇಹರಹಿತನಾಗಿ ಎಂದೂ ಪಕ್ಷಪಾತವನ್ನು ಮಾಡಬಾರದು. ಪಕ್ಷಪಾತ ಮಾಡುವ ಪುರುಷನ ಕರಸ್ಪರ್ಶವೂ ಸಹ ನ್ಯಾಯವಾಗುವುದಿಲ್ಲ. (ಸಹ್ಯವಾಗುವುದಿಲ್ಲ).

ಗಚ್ಛ ತ್ವಂ ಜರಿತಾಮೇವ ಯಸ್ಯಾರ್ಥೇ ಪರಿತಪ್ಯಸೇ ।
ಚರಿಷ್ಯಾಮ್ಯದ್ಯ ಚೈವೈಕಾ ಯಥಾ ಕಾಪುರುಷೇ ರತಾ ॥೧೨॥

ಯಾವ ಜರಿತೆಗಾಗಿ ಸಂಕಟಪಡುತ್ತಿದ್ದೀಯೋ, ನೀನು ಅವಳ ಬಳಿಗೇ ಹೋಗು. ನಾನು ದುಷ್ಟಪುರುಷನನ್ನು ಹೊಂದಿದ ಸ್ತ್ರೀಯಂತೆ ಒಬ್ಬಳೇ ಸಂಚರಿಸುವೆನು.

ಮಂದಪಾಲಃ

ನಾಹಮೇವಂ ಚರೇ ಲೋಕೇ ಯಥಾ ತ್ವಮಭಿಮನ್ಯಸೇ ।
ಅಪತ್ಯಹೇತೋರ್ವಿಚರೇ ತಚ್ಚ ಕೃಚ್ಛ್ರತರಂ ಮಮ ॥೧೩॥

ನೀನು ಯೋಚಿಸಿದಂತೆ ನಾನು ಹೋಗುತ್ತಿಲ್ಲ. ಮಕ್ಕಳ ಸಲುವಾಗಿ ನಾನು ಹೋಗುತ್ತಿದ್ದೇನೆ. ಮಕ್ಕಳ ಕಷ್ಟವು ನನಗೆ ಸಹಿಸಲು ಅಸಾಧ್ಯವಾದುದು.

ಭೂತಂ ಹಿತ್ವಾ ಭವಿಷ್ಯತ್ತೇ ಯೋ ರಮೇತ ಸ ಮಂದಧೀಃ ।
ಅವಮತ್ಯ ತಥಾ ಲೋಕಾನ್ ಯಥೇಚ್ಛಸಿ ತಥಾ ಕುರು ॥೧೪॥

ಕೈಯಲ್ಲಿರುವ ಮಕ್ಕಳನ್ನು ಬಿಟ್ಟು, ಹಾಗೆಯೇ ಜನರಿಗೆ ಅವಮಾನ ಮಾಡಿ ಮುಂದೆ ಹುಟ್ಟಬಹುದಾದ ಮಕ್ಕಳಲ್ಲಿ ಯಾವನು ಸಂತೋಷಪಡುತ್ತಾನೋ, ಅವನು ಮೂರ್ಖನಾದವನು. ನೀನು ನಿನಗೆ ಇಷ್ಟಬಂದಂತೆ ಮಾಡು.

ಏಷ ಹಿ ಜ್ವಲಮಾನೋಽಗ್ನಿರ್ಲೇಲಿಹಾನೋ ಮಹೀರುಹಾನ್ ।
ದ್ವೇಷ್ಯಂ ಹಿ ಹೃದಿ ಸಂತಾಪಂ ಜನಯತ್ಯಶಿವಂ ಮಮ ॥೧೫॥

ಈ ಅಭಿವೃದ್ಧನಾಗುತ್ತಿರುವ ಅಗ್ನಿಯು ವೃಕ್ಷಗಳನ್ನು ನುಂಗುತ್ತಾ, ನನ್ನ ಹೃದಯದಲ್ಲಿ ಸಹಿಸಲು ಅಸಾಧ್ಯವಾದ ಅಮಂಗಳವಾದ ಸಂತಾಪವನ್ನು ಉಂಟುಮಾಡುತ್ತಿದ್ದಾನೆ.

ಭಾರತನೇ, ಕಾಡಿನಲ್ಲಿ ಹೀಗೆ ಬಡಬಡಿಸುತ್ತಿರುವ ಆ ಮಂದಪಾಲ ಋಷಿಯನ್ನು ಕುರಿತು ಲಪಿತೆಯು ಅಸೂಯೆಯಿಂದ ಈ ಮಾತನ್ನಾಡಿದಳು.

ನ ತೇ ಪುತ್ರೇಷ್ವವೇಕ್ಷಾಽಸ್ತಿ ಯಾನ್ ಋಷೀನುಕ್ತವಾನಸಿ ।
ತೇಜಸ್ವಿನೋ ವೀರ್ಯವಂತೋ ನ ತೇಷಾಂ ಜ್ವಲನಾದ್ ಭಯಮ್ ॥

ನೀನು ಯಾವ ಋಷಿಗಳ ಹೆಸರನ್ನು ಹೇಳಿದೆಯೋ, ನಿನಗೆ ಮಕ್ಕಳಾದ ಅವರನ್ನು ನೋಡುವ ಆಸೆಯಿಲ್ಲ (ಅಥವಾ ನೋಡಬೇಕಾದ ಅಗತ್ಯವಿಲ್ಲ). ಅವರು ತೇಜಸ್ವಿಗಳೂ ಮತ್ತು ವೀರ್ಯವಂತರು. ಅವರಿಗೆ ಅಗ್ನಿಯಿಂದ ಭಯವಿಲ್ಲ.

ದಾವಾಗ್ನೇಃ ಪರಿದತ್ತಾಶ್ಚ ತ್ವಯಾ ಹಿ ಮಮ ಸನ್ನಿಧೌ ।
ಪ್ರತಿಶ್ರುತಂ ತಥಾ ತೇನ ಜ್ವಲನೇನ ಮಹಾತ್ಮನಾ ॥೮॥

ನೀನು ನನ್ನ ಸನ್ನಿಧಿಯಲ್ಲಿಯೇ ಅವರನ್ನು ಅಗ್ನಿಗೆ ನಿವೇದಿಸಿದ್ದೀಯೆ. ಮಹಾನುಭಾವನಾದ ಅಗ್ನಿಯೂ ಸಹ ರಕ್ಷಣೆಯ ವಾಗ್ದಾನವನ್ನು ಮಾಡಿದ್ದಾನೆ.

ಲೋಕಪಾಲೋಽನೃತಾಂ ವಾಚಂ ನ ಚ ವಕ್ತಾ ಕಥಂಚನ ।
ನಾಸಮಂಜಸವೇತ್ತಾ ವೈ ನ ತೇ ತೇಷ್ವಸ್ತಿ ಮಾನಸಮ್ ॥೯॥

ಲೋಕಪಾಲಕನಾದ ಅಗ್ನಿಯು ಎಂದೂ ಸುಳ್ಳನ್ನು ಹೇಳುವುದಿಲ್ಲ ಅಥವಾ ನಿನ್ನ ಮಾತನ್ನು ತಪ್ಪಾಗಿ ಗ್ರಹಿಸುವುದೂ ಇಲ್ಲ. ನಿನಗೆ ಆ ಮಕ್ಕಳಲ್ಲಿ ಮನಸ್ಸಿಲ್ಲ.

ತಾಮೇವ ಹಿ ಮಮಾಮಿತ್ರಾಂ ಚಿಂತಯನ್ ಪರಿತಪ್ಯಸೇ ।
ಧ್ರುವಂ ಮಯಿ ನ ತೇ ಸ್ನೇಹೋ ಯಥಾ ತಸ್ಯಾಂ ಪುರಾಽಭವತ್ ॥೧೦॥

ನನ್ನ ಶತ್ರುವಾದ ಅವಳನ್ನು (ಜರಿತೆಯನ್ನು) ಚಿಂತಿಸುತ್ತಾ ತಾಪಪಡುತ್ತಿದ್ದೀಯೆ. ಅವಳಲ್ಲಿ ಇದ್ದಂತೆ ನಿನಗೆ ನನ್ನಲ್ಲಿ ಸ್ನೇಹವಿಲ್ಲ ಎಂಬುದು ನಿಶ್ಚಿತವಾದುದು.

ನ ಹಿ ಪಕ್ಷವತಾ ಭಾವ್ಯಂ ನಿಃಸ್ನೇಹೇನ ಸುಹೃಜ್ಜನೇ ।
ಪೀಡ್ಯಮಾನ ಉಪಸ್ಪ್ರಷ್ಟುಂ ಶಕ್ಯೋ ನಾತ್ಮಾ ಕಥಂಚನ ॥೧೧॥

ಸುಹೃಜ್ಜನರಲ್ಲಿ ಸ್ನೇಹರಹಿತನಾಗಿ ಎಂದೂ ಪಕ್ಷಪಾತವನ್ನು ಮಾಡಬಾರದು. ಪಕ್ಷಪಾತ ಮಾಡುವ ಪುರುಷನ ಕರಸ್ಪರ್ಶವೂ ಸಹ ನ್ಯಾಯವಾಗುವುದಿಲ್ಲ. (ಸಹ್ಯವಾಗುವುದಿಲ್ಲ).

ಗಚ್ಛ ತ್ವಂ ಜರಿತಾಮೇವ ಯಸ್ಯಾರ್ಥೇ ಪರಿತಪ್ಯಸೇ ।
ಚರಿಷ್ಯಾಮ್ಯದ್ಯ ಚೈವೈಕಾ ಯಥಾ ಕಾಪುರುಷೇ ರತಾ ॥೧೨॥

ಯಾವ ಜರಿತೆಗಾಗಿ ಸಂಕಟಪಡುತ್ತಿದ್ದೀಯೋ, ನೀನು ಅವಳ ಬಳಿಗೇ ಹೋಗು. ನಾನು ದುಷ್ಟಪುರುಷನನ್ನು ಹೊಂದಿದ ಸ್ತ್ರೀಯಂತೆ ಒಬ್ಬಳೇ ಸಂಚರಿಸುವೆನು.

ಮಂದಪಾಲಃ

ನಾಹಮೇವಂ ಚರೇ ಲೋಕೇ ಯಥಾ ತ್ವಮಭಿಮನ್ಯಸೇ ।
ಅಪತ್ಯಹೇತೋರ್ವಿಚರೇ ತಚ್ಚ ಕೃಚ್ಛ್ರತರಂ ಮಮ ॥೧೩॥

ನೀನು ಯೋಚಿಸಿದಂತೆ ನಾನು ಹೋಗುತ್ತಿಲ್ಲ. ಮಕ್ಕಳ ಸಲುವಾಗಿ ನಾನು ಹೋಗುತ್ತಿದ್ದೇನೆ. ಮಕ್ಕಳ ಕಷ್ಟವು ನನಗೆ ಸಹಿಸಲು ಅಸಾಧ್ಯವಾದುದು.

ಭೂತಂ ಹಿತ್ವಾ ಭವಿಷ್ಯತ್ತೇ ಯೋ ರಮೇತ ಸ ಮಂದಧೀಃ ।
ಅವಮತ್ಯ ತಥಾ ಲೋಕಾನ್ ಯಥೇಚ್ಛಸಿ ತಥಾ ಕುರು ॥೧೪॥

ಕೈಯಲ್ಲಿರುವ ಮಕ್ಕಳನ್ನು ಬಿಟ್ಟು ಹಾಗೆಯೇ ಜನರಿಗೆ ಅವಮಾನ ಮಾಡಿ ಮುಂದೆ ಹುಟ್ಟಬಹುದಾದ ಮಕ್ಕಳಲ್ಲಿ ಯಾವನು ಸಂತೋಷಪಡುತ್ತಾನೋ, ಅವನು ಮೂರ್ಖನಾದವನು. ನೀನು ನಿನಗೆ ಇಷ್ಟಬಂದಂತೆ ಮಾಡು.

ಏಷ ಹಿ ಜ್ವಲಮಾನೋऽಗ್ನಿರ್ಲೇಲಿಹಾನೋ ಮಹೀರುಹಾನ್ ।
ದ್ವೇಷ್ಯಂ ಹಿ ಹೃದಿ ಸಂತಾಪಂ ಜನಯತ್ಯಶಿವಂ ಮಮ ॥೧೫॥

ಈ ಅಭಿವೃದ್ಧನಾಗುತ್ತಿರುವ ಅಗ್ನಿಯು ವೃಕ್ಷಗಳನ್ನು ನುಂಗುತ್ತಾ, ನನ್ನ ಹೃದಯದಲ್ಲಿ ಸಹಿಸಲು ಅಸಾಧ್ಯವಾದ ಅಮಂಗಳವಾದ ಸಂತಾಪವನ್ನು ಉಂಟುಮಾಡುತ್ತಿದ್ದಾನೆ.

ವೈಶಂಪಾಯನಃ

ತಸ್ಮಾದ್ ದೇಶಾದತಿಕ್ರಾಂತೇ ಜ್ವಲನೇ ಚ ಮಹಾತ್ಮನಿ ।
ಜಗಾಮ ಪುತ್ರಕಾನೇವ ಜರಿತಾ ಪುತ್ರಗೃದ್ಧಿನೀ ॥೧೬॥

ಮಹಾನುಭಾವನಾದ ಅಗ್ನಿಯು ಖಾಂಡವವನದಿಂದ ನಿವೃತ್ತನಾದ ಮೇಲೆ ಜರಿತೆಯು ಮಕ್ಕಳ ಮೇಲಿನ ಆಸೆಯಿಂದ, ಮಕ್ಕಳಿದ್ದಲ್ಲಿಗೆ ಹೋದಳು.

ಸಾ ತಾನ್ ಕುಶಲಿನಃ ಸರ್ವಾನ್ ವಿಮುಕ್ತಾನ್ ಜಾತವೇದಸಃ ।
ರೋರೂಯಮಾಣಾ ಕೃಪಣಾ ಸುತಾನ್ ದೃಷ್ಟ್ವತೀ ವನೇ ॥೧೭॥

ಕೃಪಣಳಾದ ಅವಳು ಕಾಡಿನಲ್ಲಿ, ಅಗ್ನಿಯಿಂದ ಮುಕ್ತರಾದ, ಕ್ಷೇಮದಿಂದಿರುವ ಎಲ್ಲಾ ಮಕ್ಕಳನ್ನೂ ಅಳುತ್ತಾ ನೋಡಿದಳು.

ಅಶ್ರದ್ಧೇಯತಮಂ ತೇಷಾಂ ದರ್ಶನಂ ಸಾ ಪುನಃಪುನಃ ।
ಏಕೈಕಶಶ್ಚ ಪುತ್ರಾಂಸ್ತಾನ್ ಕ್ರೋಶಮಾನಾऽನ್ವಪದ್ಯತ ॥೧೮॥

ಅವರ ದರ್ಶನವು ಇನ್ನೊಮ್ಮೆ ಆಗುವುದಿಲ್ಲವೆಂದು ತಿಳಿದಿದ್ದ ಅವಳು ಕಿರುಚುತ್ತಾ ಒಬ್ಬೊಬ್ಬ ಮಗನ ಹತ್ತಿರಕ್ಕೂ ಹೋದಳು.

ಜರಿತಾ ತು ಪರಿಷ್ವಜ್ಯ ಪುತ್ರಸ್ನೇಹಾಚ್ಚುಚುಂಬ ಹ ।
ತತೋऽಭ್ಯಗಚ್ಛತ್ ಸಹಸಾ ಮಂದಪಾಲೋऽಪಿ ಭಾರತ ॥೧೯॥

ಜರಿತೆಯು ಪುತ್ರಸ್ನೇಹದಿಂದ ಮಕ್ಕಳನ್ನು ಆಲಿಂಗಿಸಿ ಚುಂಬಿಸಿದಳು. ಭಾರತನೇ, ಆ ವೇಳೆಗೆ ಸರಿಯಾಗಿ ಮಂದಪಾಲನೂ ಇದ್ದಕ್ಕಿದ್ದಂತೆಯೇ ಅಲ್ಲಿಗೆ ಬಂದನು.

ಅಥ ತೇ ಸರ್ವ ಏವೈನಂ ನಾಭ್ಯಜಾನಂತ ವೈ ಸುತಾಃ ।
ಗುರುತ್ವಾನ್ಮಂದಪಾಲಸ್ಯ ತಪಸಶ್ಚ ವಿಶೇಷತಃ ॥೨೦॥

ಮೊದಲು ಆ ಮಕ್ಕಳು ಅವನನ್ನು ಬಹಳ ಕಾಲ ಬೇರೆಯ ಸ್ಥಳದಲ್ಲಿದ್ದ ಕಾರಣದಿಂದ ಗುರುತಿಸಲಿಲ್ಲ. ಆದರೆ, ಅವನು ತಂದೆಯಾದ ಕಾರಣದಿಂದಲೂ, ವಿಶೇಷವಾದ ತಪಸ್ಸಿನ ನಿಮಿತ್ತದಿಂದಲೂ, ಅನಂತರ ಅವನನ್ನು ಗುರುತಿಸಿದರು.

ಅಭಿವಾದಯಾಮಹೇ ಸರ್ವೇ ಜಾತಪಕ್ಷಾಃ ಪ್ರಸಾದತಃ ।
ಏವಮುಕ್ತವತಾಂ ತೇಷಾಂ ಪ್ರತಿನಂದ್ಯ ಮಹಾತಪಾಃ ॥೨೧॥

ಪರಿಷ್ವಜ್ಯ ಚ ತಾನ್ ಸರ್ವಾನ್ ಮೂರ್ಧ್ನ್ಯುಪಾಘ್ರಾಯ ಬಾಲಕಾನ್ ।
ಪುತ್ರಸ್ಪರ್ಶಾತ್ ತು ಯಾ ಪ್ರೀತಿಸ್ತಾಮವಾಪ ಸ ಗೌತಮಃ ॥೨೨॥

ನಿನ್ನ ಅನುಗ್ರಹದಿಂದ ರೆಕ್ಕೆಗಳನ್ನು ಹೊಂದಿದ ನಾವೆಲ್ಲರೂ ನಿನಗೆ ನಮಸ್ಕರಿಸುತ್ತೇವೆ. ಹೀಗೆ ಹೇಳಿದ ಅವರ ಮಾತಗಳನ್ನು ಅಭಿನಂದಿಸಿ, ಮಹಾತಪಸ್ವಿಯಾದ ಗೌತಮಗೋತ್ರದಲ್ಲಿ ಜನಿಸಿದ್ದ ಮಂದಪಾಲನು, ಆ ಎಲ್ಲಾ ಮಕ್ಕಳನ್ನೂ ಆಲಂಗಿಸಿ ಶಿರಸ್ಸಿನಲ್ಲಿ ಆಘ್ರಾಣಿಸಿ ಪುತ್ರಸ್ಪರ್ಶದಿಂದ ಪಡೆಯುವ ಸುಖವನ್ನು ಪಡೆದನು.

ಲಾಲಪ್ಯಮಾನಾ ಏಕೈಕಂ ಜರಿತಾ ಚ ಪುನಃಪುನಃ ।
ಉಚ್ಯತೇ ವಚನಂ ಕಿಂಚಿನ್ನ ಚೈವ ಸಾಧ್ವಸಾಧು ವಾ ॥೨೩॥

ಜರಿತೆಯು ಪುನಃ ಒಬ್ಬೊಬ್ಬನ ಹತ್ತಿರವೂ ಪ್ರಲಾಪಮಾಡಿದಳು. ಆದರೆ ಆ ಮಕ್ಕಳು ಶುಭವನ್ನಾಗಲಿ, ಅಶುಭವನ್ನಾಗಲಿ, ಏನನ್ನೂ ಮಾತನಾಡಲಿಲ್ಲ.

ಮಂದಪಾಲಃ

ಜ್ಯೇಷ್ಠಃ ಸುತಸ್ತೇ ಕತಮಸ್ತಥಾನುಜ್ಯೇಷ್ಠ ಏವ ಚ ।
ಮಧ್ಯಮಃ ಕತಮಃ ಪುತ್ರಃ ಕನೀಯಾನ್ ಕತಮಶ್ಚ ತೇ ॥೨೪॥

ನಿನ್ನ ಹಿರಿಯ ಪುತ್ರನು ಯಾರು? ಅವನ ತಮ್ಮನು ಯಾರು? ಮಧ್ಯಮಪುತ್ರನು ಯಾರು? ಕಿರಿಯವನು ಯಾರು?

ಏವಂ ಬ್ರುವಂತಂ ದುಃಖಾರ್ತಂ ಕಿಂ ಮಾಂ ನ ಪ್ರತಿಭಾಷಸೇ ।
ಕೃತವಾನಪಿ ಹವ್ಯಾಶೇ ನೈವ ಶಾಂತಿಮಿತೋ ಲಭೇ ॥೨೫॥

ಹೀಗೆ ಕೇಳುತ್ತಿರುವ ದುಃಖಾರ್ತನಾದ ನನಗೆ ನೀನು ಏಕೆ ಉತ್ತರವನ್ನು ಕೊಡುತ್ತಿಲ್ಲ? ನಾನು ಅಗ್ನಿಗೆ ಮಕ್ಕಳನ್ನು ನಿವೇದಿಸಿದ್ದರೂ, ಮನಸ್ಸಿಗೆ ಶಾಂತಿಯನ್ನು ಹೊಂದುತ್ತಿಲ್ಲ.

ವೈಶಂಪಾಯನಃ

ಏವಂ ಜರಾಂ ತತಃ ಪತ್ನೀಂ ಮಂದಪಾಲಸ್ತದಾऽಸ್ಪೃಶತ್ ॥೨೬॥

ಹೀಗೆ ಹೇಳಿ, ಮಂದಪಾಲನು ತನ್ನ ಪತ್ನಿಯಾದ ಜರಿತೆಯನ್ನು ಕೈಯಿಂದ ಮುಟ್ಟಿದನು.

ಜರಿತಾ

ಕಿಂ ತೇ ಜ್ಯೇಷ್ಠೇ ಸುತೇ ಕಾರ್ಯಂ ಕಿಮನಂತರಜೇನ ವಾ ।
ಕಿಂ ಚ ತೇ ಮಧ್ಯಮೇ ಕಾರ್ಯಂ ಕನಿಷ್ಠೇ ತಪೋಧನ ॥೨೭॥

ನಿನಗೆ ಹಿರಿಯ ಮಗನಿಂದ ಏನಾಗಬೇಕಾಗಿದೆ? ಅವನ ತಮ್ಮನಿಂದ ಏನಾಗಬೇಕಾಗಿದೆ? ಮಧ್ಯಮಪುತ್ರನಿಂದ ಏನಾಗಬೇಕಾಗಿದೆ? ತಪೋಧನನೇ, ಕಿರಿಯ ಪುತ್ರನಿಂದ ಏನಾಗಬೇಕಾಗಿದೆ?

ಯತ್ರ ಮಾಂ ಸರ್ವಶೋ ಹೀನಾಮುತ್ಸೃಜ್ಯಾಸಿ ಗತಃ ಪುರಾ ।
ತಾಮೇವ ಲಪಿತಾಂ ಗಚ್ಛ ತರುಣೀಂ ಚಾರುಹಾಸಿನೀಮ್ ॥೨೮॥

ಯಾವ ಸಹಾಯವೂ ಇಲ್ಲದ ನನ್ನನ್ನು ಬಿಟ್ಟು ನೀನು ಯಾರ ಬಳಿಗೆ ಮೊದಲು ಹೋಗಿದ್ದೆಯೋ ಆ ತರುಣಿಯೂ, ಚಾರುಹಾಸಿನಿಯೂ ಆದ ಲಪಿತೆಯ ಬಳಿಗೇ ಪುನಃ ಹೋಗು.

ಮಂದಪಾಲಃ

ನ ಸ್ತ್ರೀಣಾಂ ವಿದ್ಯತೇ ಕಿಂಚಿದನ್ಯತ್ರ ಪುರುಷಾಂತರಾತ್ ।
ಸಾಪತ್ನಿಕಮೃತೇ ಲೋಕೇ ವರ್ತತೇ ಕಿಂಚಿದಪ್ರಿಯಮ್ ॥೨೯॥

ಸ್ತ್ರೀಯರಿಗೆ ತನ್ನ ಪತಿಯ ವಿರಹವುಂಟಾದರೆ, ಸವತಿಯನ್ನು ಚಿಂತಿಸಿ ದುಃಖಪಡುವುದಕ್ಕಿಂತ ಅಪ್ರಿಯವಾದದ್ದು ಬೇರೆ ಯಾವುದೂ ಇಲ್ಲ.

ಸುವ್ರತಾ ಚಾಪಿ ಕಲ್ಯಾಣೀ ಸರ್ವಲೋಕಪರಿಶ್ರುತಾ ।
ಅರುಂಧತೀ ಪರ್ಯಶಂಕದ್ ವಸಿಷ್ಠಮೃಷಿಸತ್ತಮಮ್ ॥೩೦॥

ಸುವ್ರತಳೂ, ಸರ್ವಲೋಕವಿಖ್ಯಾತಳೂ, ಕಲ್ಯಾಣಿಯೂ ಆದ ಅರುಂಧತಿಯು ಋಷಿಶ್ರೇಷ್ಠರಾದ ವಸಿಷ್ಠರನ್ನೇ ಶಂಕಿಸಿದಳು.

ವಿಶುದ್ಧಭಾವಮತ್ಯಂತಂ ಸದಾ ಪ್ರಿಯಹಿತೇ ರತಮ್ ।
ಸಪ್ತರ್ಷಿಮಧ್ಯಗಂ ವಿಪ್ರಮವಮೇನೇ ಚ ತಂ ಮುನಿಮ್ ॥೩೧॥

ಅತ್ಯಂತ ಪರಿಶುದ್ಧರಾದ ತನ್ನ (ಅರುಂಧತಿಯ) ಪ್ರಿಯಹಿತಗಳಲ್ಲಿಯೇ ರತರಾದ ಸಪ್ತರ್ಷಿಗಳಲ್ಲಿ ಒಬ್ಬರಾದ ಆ ಋಷಿಗಳಿಗೆ ಅವಮಾನ ಮಾಡಿದಳು.

ಅಪಧ್ಯಾತಾ ಚ ಸಾ ತೇನ ತತೋ ಧೂಮ್ರಾರುಣಾಕೃತಿಃ ।
ಲಕ್ಷ್ಯಾಲಕ್ಷ್ಯಾ ನಾತಿರೂಪಾ ನಿಮಿತ್ತಮಿವ ಲಕ್ಷ್ಯತೇ ॥೩೨॥

ಋಷಿಯ ಅವಕೃಪೆಗೆ ಒಳಗಾದ ಅವಳು ಹೊಗೆಯಿಂದ ಕೂಡಿದ ಕೆಂಪುಬಣ್ಣವುಳ್ಳವಳಾಗಿ, ತನ್ನ ಮಹಾ ಸೌಂದರ್ಯವನ್ನು ಕಳೆದುಕೊಂಡು, ಪತಿಸೇವಾ, ಪತಿಪ್ರಾತಿಕೂಲ್ಯ ನಿಮಿತ್ತವನ್ನು ಅನುಸರಿಸಿ ಕೆಲವು ಸಲ ದೃಷ್ಟಿಗೋಚರಳಾಗುತ್ತಾಳೆ, ಕೆಲವು ಸಲ ದೃಷ್ಟಿಗೋಚರಳಾಗುವುದಿಲ್ಲ.

ಅಪತ್ಯಹೇತೋಃ ಸಂಪ್ರಾಪ್ತಂ ತಥಾ ತ್ವಮಪಿ ಮಾಮಿಹ ।
ಇಷ್ಟಮೇವಂ ಗತಂ ಹಿತ್ವಾ ತ್ವಂ ತಥೈವ ಚ ವರ್ತಸೇ ॥೩೩॥

ಮಕ್ಕಳ ನಿಮಿತ್ತದಿಂದಾಗಿ ಇಲ್ಲಿಗೆ ಬಂದ ನನ್ನನ್ನು ನನ್ನ ವಿಷಯದಲ್ಲಿ ನೀನೂ ಸಹ ಇಷ್ಟವಾದ ಸಖ್ಯವನ್ನು ತೊರೆದು ಹಾಗೆಯೇ ನಡೆದುಕೊಳ್ಳುತ್ತಿದ್ದೀಯೆ.

ನ ವೈ ಭಾರ್ಯೇತಿ ವಿಶ್ವಾಸಃ ಕಾರ್ಯಃ ಪುಂಸಾ ಕಥಂಚನ ।
ಹಿತಂ ಕಾರ್ಯಮನುಧ್ಯಾತಿ ಭಾರ್ಯಾ ಪುತ್ರವತೀ ಸತೀ ॥೩೪॥

ಮನುಷ್ಯನು ಹೆಂಡತಿ ಎಂಬ ಕಾರಣದಿಂದ ಎಂದೂ ಅವಳಲ್ಲಿ ವಿಶ್ವಾಸವನ್ನು ಮಾಡಬಾರದು. ಮಗನನ್ನು ಪಡೆದ ಹೆಂಡತಿಯು ಯಾವಾಗಲೂ ತನ್ನ ಸ್ವಾರ್ಥವನ್ನೇ ಚಿಂತಿಸುತ್ತಾಳೆ.

ವೈಶಂಪಾಯನಃ

ತತಸ್ತೇ ಸರ್ವ ಏವೈನಂ ಪುತ್ರಾಃ ಸಮ್ಯಗುಪಾಸತೇ ।
ಸ ಚ ತಾನಾತ್ಮಜಾನ್ ರಾಜನ್ನಾಶ್ವಾಸಯಿತುಮಾರಭತ್ ॥೩೫॥

ಅನಂತರ, ಆ ಮಕ್ಕಳೆಲ್ಲರೂ ಅವನನ್ನು ಸತ್ಕರಿಸಿದರು. ರಾಜನೇ, ಅವನಾದರೋ, ಆ ಮಕ್ಕಳಿಗೆ ಸಮಾಧಾನಮಾಡಲು ಪ್ರಾರಂಭಿಸಿದನು.

ಮಂದಪಾಲಃ

ಯುಷ್ಮಾಕಂ ಪರಿರಕ್ಷಾರ್ಥಂ ವಿಜ್ಞಪ್ತೋ ಜ್ವಲನೋ ಮಯಾ ।
ಅಗ್ನಿನಾ ಚ ತಥೇತ್ಯೇವಂ ಪೂರ್ವಮೇವ ಪ್ರತಿಶ್ರುತಮ್ ॥೩೬॥

ನಿಮ್ಮನ್ನು ರಕ್ಷಿಸಬೇಕೆಂದು ನಾನು ಅಗ್ನಿಗೆ ಮೊದಲೇ ವಿಜ್ಞಾಪನೆಯನ್ನು ಮಾಡಿದ್ದೆ. ಅಗ್ನಿಯೂ ಸಹ, ಹಾಗೆಯೇ ಆಗಲಿ ಎಂದು ವಾಗ್ದಾನ ಮಾಡಿದ್ದನು.

ಅಗ್ನೇರ್ವಚನಮಾದಾಯ ಮಾತುರ್ಧರ್ಮಜ್ಞತಾಂ ಚ ವಃ ।
ಯುಷ್ಮಾಕಂ ಚ ವರಂ ವೀರ್ಯಂ ನಾಹಂ ಪೂರ್ವಮಿಹಾಗತಃ ॥೩೭॥

ಅಗ್ನಿಯ ಮಾತನ್ನು ಸ್ವೀಕರಿಸಿ ನಿಮ್ಮ ತಾಯಿಯ ಧರ್ಮಶೀಲತೆಯನ್ನೂ ತಿಳಿದು, ನಿಮ್ಮ ತಪಃಶಕ್ತಿಯನ್ನೂ ತಿಳಿದ ನಾನು, ಆ ಕಾರಣದಿಂದ ಮೊದಲು ಇಲ್ಲಿಗೆ ಬರಲಿಲ್ಲ.

ನ ಸಂತಾಪೋ ಹಿ ವಃ ಕಾರ್ಯಃ ಪುತ್ರಕಾ ಮರಣಂ ಪ್ರತಿ ।
ಋಷೀನ್ ವೇದ ಹುತಾಶೋಽಪಿ ಬ್ರಹ್ಮೈತದ್ ವಿದಿತಂ ಚ ವಃ ॥೩೮॥

ಮಕ್ಕಳೇ, ಮರಣವುಂಟಾಗುತ್ತಿದ್ದಿತೆಂಬ ಸಂತಾಪವನ್ನು ಮಾಡಬೇಡಿ. ನಿಮಗೆ ವೇದದ ಜ್ಞಾನವಿದೆ. ಅಗ್ನಿಯೂ ಸಹ ನೀವು ಋಷಿಗಳೆಂದು ತಿಳಿದಿದ್ದಾನೆ.

ವೈಶಂಪಾಯನಃ

ಏವಮಾಶ್ವಾಸ್ಯ ಪುತ್ರಾಂಶ್ಚ ಭಾರ್ಯಾಮಾದಾಯ ಭಾರತ ।
ಮಂದಪಾಲಸ್ತತೋ ದೇಶಾದನ್ಯಂ ದೇಶಂ ಜಗಾಮ ಹ ॥೩೯॥

ಭಾರತನೇ, ಮಂದಪಾಲನು ಮಕ್ಕಳಿಗೆ ಹೀಗೆ ಸಮಾಧಾನವನ್ನು ಮಾಡಿ, ತನ್ನ ಪತಿಯನ್ನೂ ಕರೆದುಕೊಂಡು, ಆ ದೇಶವನ್ನು ಬಿಟ್ಟು ಬೇರೆ ದೇಶಕ್ಕೆ ಹೋದನು.

ಭಗವಾನಪಿ ತಿಗ್ಮಾಂಶುಃ ಸಮಿದ್ಧಃ ಖಾಂಡವಂ ವನಮ್ ।
ದದಾಹ ಪರಮಪ್ರೀತಃ ಕೃಷ್ಣಾಭ್ಯಾಂ ಪರಿರಕ್ಷಿತಃ ॥೪೦॥

ಪೂಜ್ಯನಾದ ಅಗ್ನಿಯು ಕೃಷ್ಣಾರ್ಜುನರಿಂದ ರಕ್ಷಿತನಾಗಿ ಪರಮಸಂತೋಷದಿಂದ ದೊಡ್ಡಜ್ವಾಲೆಗಳನ್ನು ಧರಿಸಿ ಖಾಂಡವವನವನ್ನು ದಹನಮಾಡಿದನು.

ವಸಾಮೇದೋವಹಾಃ ಕುಲ್ಯಾಸ್ತತ್ರ ಪೀತ್ವಾ ಚ ಪಾವಕಃ ।
ಅಗಚ್ಛತ್ ಪರಮಾಂ ತೃಪ್ತಿಂ ದರ್ಶಯಾಮಾಸ ಚಾರ್ಜುನಮ್ ॥೪೧॥

ಅಗ್ನಿಯು ವಸಾ ಮತ್ತು ಮೇದಸ್ಸುಗಳ ಸರೋವರಗಳನ್ನು ಪಾನಮಾಡಿ ಬಹಳ ತೃಪ್ತಿಯನ್ನು ಹೊಂದಿ ಅರ್ಜುನನಿಗೆ ತನ್ನ ರೂಪವನ್ನು ತೋರಿಸಿದನು.

ತತೋಽಂತರಿಕ್ಷಾದ್ ಭಗವಾನವತೀರ್ಯ ಶತಕ್ರತುಃ ।
ಮರುತ್ಪರಿವೃತಃ ಪಾರ್ಥಂ ಮಾಧವಂ ಚಾಬ್ರವೀದಿದಮ್ ॥೪೨॥

ಆಗ, ಪೂಜ್ಯನಾದ ಇಂದ್ರನು ಮರುತ್ತಗಳ ಜೊತೆಯಲ್ಲಿ ಸ್ವರ್ಗದಿಂದ ಕೆಳಗೆ ಇಳಿದು ಬಂದು ಅರ್ಜುನನನ್ನೂ ಮತ್ತು ಕೃಷ್ಣನನ್ನೂ ಕುರಿತು ಹೀಗೆ ಹೇಳಿದನು.

ಕೃತಂ ಯುವಾಭ್ಯಾಂ ಕರ್ಮೇದಮಮರೈರಪಿ ದುಷ್ಕರಮ್ ।
ವರಾನ್ ವೃಣೀತಂ ತುಷ್ಟೋಽಸ್ಮಿ ದುರ್ಲಭಾನಪ್ಯಮಾನುಷಾನ್ ॥೪೩॥

ನೀವಿಬ್ಬರೂ ದೇವತೆಗಳಿಗೂ ಅಸಾಧ್ಯವಾದ ಈ ಕರ್ಮವನ್ನು ಮಾಡಿದ್ದೀರಿ. ನಿಮಗೆ ಪ್ರಸನ್ನನಾಗಿದ್ದೇನೆ. ಮನುಷ್ಯರಿಗೆ ಲಭ್ಯವಾಗದ ದಿವ್ಯವಾದ ವರಗಳನ್ನು ಕೇಳಿ.

ಪಾರ್ಥಸ್ತು ವರಯಾಮಾಸ ಶಕ್ರಾದಸ್ತ್ರಾಣಿ ಸರ್ವಶಃ ।
ಗೃಹೀತಂ ತಚ್ಚ ಶಕ್ರಸ್ತು ದದೌ ಕಾಲಂ ಚ ಕರ್ಮ ಚ ॥೪೪॥

ಅರ್ಜುನನು ಇಂದ್ರನಿಂದ ಎಲ್ಲಾ ಅಸ್ತ್ರಗಳನ್ನೂ ಸ್ವೀಕರಿಸಲು ವರವನ್ನು ಕೇಳಿದನು. ಇಂದ್ರನಾದರೋ ಒಂದು ಕಾಲವನ್ನೂ ಮತ್ತು ಕರ್ಮವನ್ನೂ ಸೂಚಿಸಿ ವರವನ್ನು ನೀಡಿದನು.

ಇಂದ್ರಃ

ಯದಾ ಪ್ರಸನ್ನೋ ಭಗವಾನ್ ಮಹಾದೇವೋ ಭವಿಷ್ಯತಿ ।
ತುಭ್ಯಂ ತದಾ ಪ್ರದಾಸ್ಯಾಮಿ ಪಾಂಡವಾಸ್ತ್ರಾಣಿ ಸರ್ವಶಃ ॥೪೫॥

ಪಾಂಡವನೇ, ನಿನಗೆ ಯಾವಾಗ ರುದ್ರದೇವರು ಪ್ರಸನ್ನರಾಗುವರೋ, ಆಗ ನಿನಗೆ ಎಲ್ಲಾ ಅಸ್ತ್ರಗಳನ್ನೂ ಕೊಡುವೆನು.

ಅಹಮೇವ ಚ ತಂ ಕಾಲಂ ವೇತ್ಸ್ಯಾಮಿ ಕುರುನಂದನ ।
ತಪಸಾ ಮಹತಾ ಚಾಪಿ ಭವತೋ ದಾಸ್ಯಾಮಿ ತಾನ್ಯಹಮ್ ॥೪೬॥

ಕುರುನಂದನನೇ, ಆ ಕಾಲವು ಯಾವುದೆಂದು ನಾನೇ ತಿಳಿದಿದ್ದೇನೆ. ದೊಡ್ಡ ತಪಸ್ಸಿನಿಂದ ಕೂಡಿದ ನಾನು ನಿನಗೆ ಆ ಅಸ್ತ್ರಗಳನ್ನು ಕೊಡುವೆನು.

ಆಗ್ನೇಯಾನಿ ಚ ಸರ್ವಾಣಿ ವಾಯವ್ಯಾನಿ ಧನಂಜಯ ।
ಮದೀಯಾನಿ ಚ ಸರ್ವಾಣಿ ಗ್ರಹೀಷ್ಯಸಿ ಧನಂಜಯ ॥೪೭॥

ಧನಂಜಯನೇ, ನೀನೂ ಎಲ್ಲಾ ಆಗ್ನೇಯಾಸ್ತ್ರಗಳನ್ನೂ, ಎಲ್ಲಾ ವಾಯವ್ಯಾಸ್ತ್ರಗಳನ್ನೂ, ಎಲ್ಲಾ ಇಂದ್ರಾಸ್ತ್ರಗಳನ್ನೂ ಪಡೆಯುವಿ.

ವೈಶಂಪಾಯನಃ

ವಾಸುದೇವೋಽಪಿ ಪಾರ್ಥೇನ ಪ್ರೀತಿಂ ವವ್ರೇ ಚ ಶಾಶ್ವತೀಮ್ ।
ದದೌ ಚ ತಸ್ಮೈ ದೇವೇಂದ್ರಸ್ತಂ ವರಂ ಪ್ರೀತಿಮಾಂಸ್ತದಾ ॥೪೯॥

ವಾಸುದೇವನೂ ಸಹ ಅರ್ಜುನನ ಜೊತೆಯಲ್ಲಿ ಶಾಶ್ವತವಾದ ಪ್ರೀತಿಯಿರಲೆಂದು ವರವನ್ನು ಕೇಳಿದನು. ದೇವೇಂದ್ರನು ಸಂತೋಷದಿಂದ ಅವನಿಗೆ ಆ ವರವನ್ನು ಕೊಟ್ಟನು.

ಪಾವಕಶ್ಚಾಪಿ ತಂ ದಾವಂ ದಗ್ಧ್ವಾ ಸಮೃಗಪಕ್ಷಿಣಮ್ ।
ಅಹೋಭಿರೇಕವಿಂಶದ್ಭಿರ್ವಿರರಾಮ ಸುತರ್ಪಿತಃ ॥೪೯॥

ಅಗ್ನಿಯೂ ಸಹ ಮೃಗಪಕ್ಷಿಗಳಿಂದ ಕೂಡಿದ್ದ ಆ ವನವನ್ನು ಇಪ್ಪತ್ತೊಂದು ದಿನಗಳ ಕಾಲ ದಹಿಸಿ ತೃಪ್ತಿಯನ್ನು ಹೊಂದಿ ಶಾಂತನಾದನು.

ಜಗ್ಧ್ವಾ ಮಾಂಸಾನಿ ಪೀತ್ವಾ ಚ ಮೇದಾಂಸಿ ರುಧಿರಾಣಿ ಚ ।
ಯುಕ್ತಃ ಪರಮಯಾ ಪ್ರೀತ್ಯಾ ತಾವುವಾಚ ವಿಶಾಂಪತೇ ॥೫೦॥

ಜನಮೇಜಯರಾಜನೇ, ಮಾಂಸಗಳನ್ನು ಭಕ್ಷಿಸಿ, ಮೇದಸ್ಸುಗಳನ್ನೂ ಮತ್ತು ರಕ್ತಗಳನ್ನೂ ಪಾನಮಾಡಿ ಪರಮಪ್ರೀತನಾದ ಅಗ್ನಿಯು ಕೃಷ್ಣಾರ್ಜುನರನ್ನು ಕುರಿತು ಹೇಳಿದನು.

ಯುವಾಭ್ಯಾಂ ಪುರುಷಾಗ್ರ್ಯಾಭ್ಯಾಂ ತರ್ಪಿತೋಽಸ್ಮಿ ಯಥಾಸುಖಮ್ ।
ಅನುಜಾನಾಮಿ ವಾಂ ವೀರೌ ಚರತಂ ಯತ್ರ ವಾಂಛಿತಮ್ ॥೫೧॥

ಪುರುಷಶ್ರೇಷ್ಠರಾದ ನಿಮ್ಮಿಬ್ಬರಿಂದ ನಾನು ಬಹಳ ತೃಪ್ತಿಯನ್ನು ಹೊಂದಿದ್ದೇನೆ. ವೀರರಾದ ನಿಮಗೆ ಸಂತೋಷದಿಂದ ಅನುಮತಿಯನ್ನು ನೀಡುತ್ತಿದ್ದೇನೆ. ನಿಮಗೆ ಇಷ್ಟವಾದ ಸ್ಥಳಕ್ಕೆ ನೀವು ಹೋಗಬಹುದು.

ವೈಶಂಪಾಯನಃ

ಏವಂ ತೌ ಸಮನುಜ್ಞಾತೋ ಪಾವಕೇನ ಮಹಾತ್ಮನಾ ।
ಅರ್ಜುನೋ ವಾಸುದೇವಶ್ಚ ದಾನವಶ್ಚ ಮಯಸ್ತಥಾ ॥೫೨॥

ಪರಿಕ್ರಮ್ಯ ತತಃ ಸರ್ವೇ ತ್ರಯೋ ವೈ ಭರತರ್ಷಭ ।
ರಮಣೀಯೇ ನದೀಕೂಲೇ ಸಹಿತಾಃ ಸಮುಪಾವಿಶನ್ ॥೫೩॥

ಭರತಶ್ರೇಷ್ಠನೇ, ಮಹಾನುಭಾವನಾದ ಅಗ್ನಿಯಿಂದ ಹೀಗೆ ಅನುಮತಿಯನ್ನು ಪಡೆದ ಅರ್ಜುನ, ಕೃಷ್ಣ ಮತ್ತು ಮಯಾಸುರರು ಅನಂತರ, ಮೂವರೂ ಅವನಿಗೆ ಪ್ರದಕ್ಷಿಣೆಯನ್ನು ಮಾಡಿ ರಮಣೀಯವಾದ ನದೀತೀರದಲ್ಲಿ ಜೊತೆಯಲ್ಲಿ ಕುಳಿತುಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತತ್ರಿಂಶತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಇತಿ ಮಯದರ್ಶನಪರ್ವಣಿ ಷಷ್ಠೋಽಧ್ಯಾಯಃ ॥

॥ ಮಯದರ್ಶನಪರ್ವ ಸಮಾಪ್ತಮ್ ॥

॥ ಆದಿಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ಇನ್ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

ಮಯದರ್ಶನಪರ್ವವು ಮುಗಿಯಿತು.

ಇಲ್ಲಿಗೆ ಆದಿಪರ್ವವು ಮುಗಿಯಿತು.

★★★★★

ಸಭಾಪರ್ವ

ಮಹಾಭಾರತ

ಸಭಾಪರ್ವ

೧. ಮಂತ್ರಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಓಂ ಜನಾರ್ದನಾಜ್ಞಯಾ ಮಯಃ ಸಮಸ್ತ ಕೌತುಕೋತ್ತರಾಂ ।
ಸಭಾಂ ವಿಧಾಯ ಭೂಭೃತೇ ದದೌ ಗದಾಂ ವೃಕೋದರೇ ॥೧॥

ಶ್ರೀಕೃಷ್ಣನ ಆಜ್ಞೆಯಿಂದ ಮಯಾಸುರ ಎಲ್ಲ ಆಶ್ಚರ್ಯಗಳಿಂದ ತುಂಬಿ ಉತ್ತಮವಾಗಿರುವ ಸಭಾಭವನವನ್ನು ನಿರ್ಮಿಸಿ ಧರ್ಮರಾಜನಿಗೆ ನೀಡಿದ. ಹಾಗೆಯೆ ಒಂದು ಗದೆಯನ್ನು ಭೀಮನಿಗೆ ತಂದಿತ್ತ.

★ ★ ★ ★

ಒಂದನೆಯ ಅಧ್ಯಾಯ

(ತನಗೆ ಮಾಡಿದ ಉಪಕಾರಕ್ಕಾಗಿ ಪ್ರತ್ಯುಪಕಾರವನ್ನು ಸ್ವೀಕರಿಸೆಂದು ಅರ್ಜುನನಿಗೆ ಮಯನ ಪ್ರಾರ್ಥನೆ. ಅರ್ಜುನನ ನಿರಾಕರಣೆ, ಸಭೆಯನ್ನು ನಿರ್ಮಾಣ ಮಾಡುವಂತೆ ಕೃಷ್ಣನಿಂದ ಆದೇಶ.)

ಜನಮೇಜಯಃ

ಅರ್ಜುನೋ ಜಯತಾಂ ಶ್ರೇಷ್ಠೋ ಮೋಕ್ಷಯಿತ್ವಾ ಮಯಂ ತದಾ ।
ಕಿಂ ಚಕಾರ ಮಹಾತೇಜಾಸ್ತನ್ಮೇ ಬ್ರೂಹಿ ದ್ವಿಜೋತ್ತಮ ॥೧॥

ಎಲೈ ಬ್ರಾಹ್ಮಣಶ್ರೇಷ್ಠನೇ! ಮಹಾತೇಜಸ್ವಿಯಾದ ಜಯಶೀಲರಲ್ಲಿ ಅಗ್ರಗಣ್ಯನಾ
ಅರ್ಜುನನು ಮಯನನ್ನು ಅಗ್ನಿದಾಹದಿಂದ ವಿಮೋಚನೆಗೊಳಿಸಿ ಅನಂತರ ಏನ
ಮಾಡಿದನೆಂದು ನನಗೆ ಹೇಳು.

ವೈಶಂಪಾಯನಃ

ಶೃಣು ರಾಜನ್ ಯಥಾತತ್ತ್ವಂ ಚರಿತಂ ಪೂರ್ವಜಸ್ಯ ತೇ ।
ಮೋಕ್ಷಯಿತ್ವಾ ಮಯಂ ತತ್ರ ಪಾರ್ಥಃ ಶಸ್ತ್ರಭೃತಾಂ ವರಃ ॥೨॥

ಗಾಂಡೀವಂ ಕಾರ್ಮುಕಶ್ರೇಷ್ಠಂ ತೂಣೇ ಚಾಕ್ಷಯಸಾಯಕೌ ।
ದಿವ್ಯಾನ್ಯಸ್ತ್ರಾಣಿ ರಾಜೇಂದ್ರ ದುರ್ಲಭಾನಿ ನೃಪೈರ್ಭುವಿ ॥೩॥

ರಥಂ ಧ್ವಜಂ ಪತಾಕಾಶ್ಚ ಶ್ವೇತಾಶ್ವೈಃ ಸಹ ವೀರ್ಯವಾನ್ ।
ಏತಾನಿ ಪಾವಕಾತ್ ಪ್ರಾಪ್ಯ ಮುದಾ ಪರಮಯಾ ಯುತಃ ।
ತಸ್ಥೌ ಪಾರ್ಥೋ ಮಹಾಬಾಹುಸ್ತದಾ ಸಹ ಮಯೇನ ಸಃ ॥೪॥

ರಾಜನೇ! ನಿನ್ನ ಪೂರ್ವಜನಾದ ಅರ್ಜುನನ ಚರಿತ್ರೆಯನ್ನು ಯಥಾವತ್ತಾಗಿ ಹೇಳುತ್ತೇನೆ ಕೇಳು. ಶಸ್ತ್ರಧಾರಿಗಳಲ್ಲಿ ಅಗ್ರಗಣ್ಯನಾದ ಅರ್ಜುನನು ಮಯನನ್ನು ವಿಮೋಚನೆಗೊಳಿಸಿ, ಶ್ರೇಷ್ಠವಾದ ಗಾಂಡೀವಧನುಸ್ಸನ್ನೂ ಅಕ್ಷಯಬಾಣಗಳಿರುವ ಎರಡು ಬತ್ತಳಿಕೆಗಳನ್ನು ಮನುಷ್ಯರಿಗೆ ಎಂದೂ ಲಭ್ಯವಾಗದ ದಿವ್ಯವಾದ ಅಸ್ತ್ರಗಳನ್ನೂ ಅಗ್ನಿಯಿಂದ ಪಡೆದು ಸಂತೋಷದಿಂದ ಕೂಡಿದವನಾಗಿ; ಮಹಾಬಾಹುವಾದ ಅವನು ಸಂತೋಷದಿಂದ ಮಯನ ಜೊತೆಯಲ್ಲಿ ನಿಂತನು.

ವೈಶಂಪಾಯನಃ

ತತೋಽಬ್ರವೀನ್ಮಯಃ ಪಾರ್ಥಂ ವಾಸುದೇವಸ್ಯ ಸನ್ನಿಧೌ ।
ಪಾಂಡವೇನ ಪರಿತ್ರಾತಃ ತತ್ಕೃತಂ ಪರ್ಯನುಸ್ಮರನ್ ।
ಪ್ರಾಂಜಲಿಃ ಶ್ಲಕ್ಷ್ಣಯಾ ವಾಚಾ ಪೂಜಯಿತ್ವಾ ಪುನಃ ಪುನಃ ॥೫॥

ಅನಂತರ ಕೃಷ್ಣನ ಸನ್ನಿಧಿಯಲ್ಲಿ ಅರ್ಜುನನನ್ನು ಕುರಿತು, ಅರ್ಜುನನಿಂದ ರಕ್ಷಿಸಲ್ಪಟ್ಟ ಮಯನು ಅವನ ಉಪಕಾರವನ್ನು ಬಹಳವಾಗಿ ಸ್ಮರಣೆ ಮಾಡುತ್ತಾ ಕೈಗಳನ್ನು ಮುಗಿದು ಮಧುರವಾದ ಮಾತುಗಳಿಂದ ಅವನನ್ನು ಮತ್ತೆ ಮತ್ತೆ ಗೌರವಿಸಿ ಮಾತನಾಡಿದನು.

ಅಸ್ಮಾಚ್ಚ ಕೃಷ್ಣಾತ್ ಸಂಕ್ರುದ್ಧಾತ್ ಪಾವಕಾಚ್ಚ ದಿಧಕ್ಷತಃ ।
ತ್ವಯಾ ತ್ರಾತೋಽಸ್ಮಿ ಕೌಂತೇಯ ಬ್ರೂಹಿ ಕಿಂ ಕರವಾಣಿ ತೇ ॥೬॥

ಕ್ರುದ್ಧನಾದ ಈ ಕೃಷ್ಣನಿಂದಲೂ ಮತ್ತು ದಹಿಸುವ ಅಗ್ನಿಯಿಂದಲೂ ನೀನು ನನ್ನನ್ನು ರಕ್ಷಿಸಿದ್ದೀಯೆ. ಎಲೈ ಕೌಂತೇಯನೇ ನಾನು ನಿನಗೆ ಏನು ಪ್ರತ್ಯುಪಕಾರವನ್ನು ಮಾಡಲಿ ಎಂದು ಹೇಳು.

ಅಹಂ ಹಿ ವಿಶ್ವಕರ್ಮಾ ವಾ ಅಸುರಾಣಾಂ ಪರಂತಪ ।
ತಸ್ಮಾತ್ ತೇ ವಿಸ್ಮಯಂ ಕಿಂಚಿತ್ ಕುರ್ಯಾಮನ್ಯೈಃ ಸುದುಷ್ಕರಮ್ ॥

ಪರಂತಪನೇ! ನಾನು ಅಸುರರ ಶಿಲ್ಪಿಯಾದ ಮಯ. ಆದ್ದರಿಂದ ನಿನಗೆ ಬೇರೆಯವರು ಮಾಡಲು ಸಾಧ್ಯವಾಗದ ಆಶ್ಚರ್ಯಕರವಾದ ಏನನ್ನಾದರೂ ನಿರ್ಮಿಸುತ್ತೇನೆ. (ಕಟ್ಟಿಗೆಗೆ ಸಂಬಂಧಿಸಿದ ಕುಸುರಿ ಕೆಲಸಗಳೆಲ್ಲವನ್ನೂ ಮಾಡಬಲ್ಲವನಾದ್ದರಿಂದ ಮಯನು ವಿಶ್ವಕರ್ಮ ನೆನಿಸಿದ್ದಾನೆ).

ವೈಶಂಪಾಯನಃ

ಏವಮುಕ್ತೋ ಮಹಾವೀರ್ಯಃ ಪಾರ್ಥೋ ಮಾಯಾವಿನಂ ಮಯಮ್ ।
ಧ್ಯಾತ್ವಾ ಮುಹೂರ್ತಂ ಕೌಂತೇಯಃ ಪ್ರಹಸನ್ ವಾಕ್ಯಮಬ್ರವೀತ್ ॥೮॥

ಮಯನಿಂದ ಹೀಗೆ ಹೇಳಲ್ಪಟ್ಟ ಅರ್ಜುನನು, ಒಂದು ಕ್ಷಣ ಚಿಂತಿಸಿ ನಗುತ್ತಾ ಅನೇಕ ವಿಚಿತ್ರ ಶಕ್ತಿಯಿಂದ ಕೂಡಿದ್ದ ಮಯನನ್ನು ಕುರಿತು ಹೀಗೆ ಮಾತನಾಡಿದನು.

ಕೃತಮೇವ ತ್ವಯಾ ಸರ್ವಂ ಸ್ವಸ್ತಿ ಗಚ್ಚ ಮಹಾಸುರ ।
ಪ್ರೀತಿಮಾನ್ ಭವ ನೋ ನಿತ್ಯಂ ಪ್ರೀತಿಮಂತೋ ವಯಂ ತ್ವಯಿ ।
ಪ್ರಾಪ್ತೋಪಕಾರಾದರ್ಥಂ ಹಿ ನಾದಾಸ್ಯಾಮೀತಿ ಮೇ ವ್ರತಮ್ ॥೯॥

ಮಹಾಸುರನೇ ! ನೀನು ನನಗೆ ಎಲ್ಲವನ್ನು ಮಾಡಿದಂತೆಯೇ ಆಯಿತು. ನೀನು ಹೊರಡು. ನಮ್ಮಲ್ಲಿ ಯಾವಾಗಲೂ ಪ್ರೀತಿಯನ್ನು ಇಟ್ಟುಕೊಂಡಿರು. ನಾವು ನಿನ್ನಲ್ಲಿ ಯಾವಾಗಲೂ ಪ್ರೀತಿಯನ್ನು ಹೊಂದಿರುತ್ತೇವೆ. ಉಪಕಾರವನ್ನೂ ಮಾಡಿದುದಕ್ಕೆ ಪ್ರತಿಯಾಗಿ ನಾನು ಯಾವ ಉಪಕಾರವನ್ನೂ ಸ್ವೀಕರಿಸುವುದಿಲ್ಲ ಎಂಬುದು ನನ್ನ ವ್ರತವಾಗಿದೆ.

ಮಯಃ

ಯುಕ್ತಮೇತತ್ ತ್ವಯಿ ವಚೋ ಯದಾತ್ಥ ಪುರುಷರ್ಷಭ ।
ಪ್ರೀತಿಪೂರ್ವಮಹಂ ಕಿಂಚಿತ್ ಕರ್ತುಮಿಚ್ಛಾಮಿ ತೇ ಪ್ರಿಯಮ್ ॥

ಪುರುಷಶ್ರೇಷ್ಠನೇ! ನೀನು ಹೇಳಿದ ಮಾತುಗಳು ನಿನಗೆ ಯೋಗ್ಯವಾಗಿಯೇ ಇವೆ. ನಾನು ನಿನ್ನ ಮೇಲಿನ ಪ್ರೀತಿಯಿಂದಲೇ ನಿನಗೆ ಪ್ರಿಯವಾದ ಏನನ್ನಾದರೂ ಮಾಡಲು ಬಯಸುತ್ತೇನೆ.

ಅಹಂ ಹಿ ವಿಶ್ವಕರ್ಮಾ ವೈ ದಾನವಾನಾಂ ಮಹಾಕವಿಃ ।
ಸೋಽಹಂ ವೈ ತ್ವತ್ಕೃತೇ ಕಿಂಚಿತ್ ಕರ್ತುಮಿಚ್ಛಾಮಿ ಪಾಂಡವ ॥೧೧॥

ನಾನು ಬಹಳ ಜ್ಞಾನವನ್ನು ಹೊಂದಿದ ದಾನವರ ಶಿಲ್ಪಿಯಾಗಿದ್ದೇನೆ. ಪಾಂಡವನೇ ! ಆ ಕಾರಣದಿಂದ ನಾನು ನಿನಗೆ ಏನಾದರೂ ಅಲ್ಪ ಕಾರ್ಯವನ್ನು ಮಾಡಲು ಬಯಸುತ್ತೇನೆ.

ದಾನವಾನಾಂ ಪುರಾ ಪಾರ್ಥ ಪ್ರಾಸಾದಾ ಹಿ ಮಯಾ ಕೃತಾಃ ।
ಉದ್ಯಾನಾನಿ ಚ ರಮ್ಯಾಣಿ ಸರಾಂಸಿ ವಿವಿಧಾನಿ ಚ ॥೧೨॥

ಪಾರ್ಥನೇ ! ನಾನು ಹಿಂದೆ ದಾನವರಿಗಾಗಿ ಅನೇಕ ಪ್ರಾಸಾದಗಳನ್ನು ಉದ್ಯಾನಗಳನ್ನು ಮತ್ತು ಅನೇಕ ವಿಧವಾದ ಸುಂದರವಾದ ಸರೋವರಗಳನ್ನು ನಿರ್ಮಿಸಿದ್ದೇನೆ.

ರಮ್ಯಾಣಿ ಸುಖದರ್ಶಾನಿ ಭೋಗಾಢ್ಯಾನಿ ಸಹಸ್ರಶಃ ।
ವಿಚಿತ್ರಾಣಿ ಚ ಶಸ್ತ್ರಾಣಿ ರಥಾಃ ಕಾಮಗಮಾಸ್ತಥಾ ॥೧೩॥

ಸುಂದರವಾದ ನೋಡಲು ಸಂತೋಷವಾಗುವ ಅನೇಕ ಭೋಗಗಳಿಂದ ಕೂಡಿರುವ ವಿಚಿತ್ರವಾದ ಗೃಹಗಳನ್ನು ಸಹಸ್ರಸಂಖ್ಯೆಯಲ್ಲಿ ನಿರ್ಮಿಸಿದ್ದೇನೆ. ಹಾಗೂ ವಿಚಿತ್ರವಾದ ಶಸ್ತ್ರಗಳನ್ನೂ ರಥಿಕನ ಇಚ್ಛೆಯಂತೆ ಚಲಿಸುವ ರಥಗಳನ್ನೂ ನಿರ್ಮಿಸಿದ್ದೇನೆ.

ನಗರಾಣಿ ವಿಶಾಲಾನಿಸಾಟ್ಟ ಪ್ರಾಕಾರತೋರಣೈಃ ।
ವಾಹನಾನಿ ಚ ಮುಖ್ಯಾನಿ ವಿಚಿತ್ರಾಣಿ ಸಹಸ್ರಶಃ ॥೧೪॥

ವಿಶಾಲವಾದ ನಗರಗಳನ್ನೂ ಅವುಗಳಲ್ಲಿ ಉಪ್ಪರಿಗೆಗಳನ್ನೂ ಕೋಟೆಗಳನ್ನೂ ಮತ್ತು ತೋರಣಗಳನ್ನೂ ಶ್ರೇಷ್ಠವಾದ ಮತ್ತು ವಿಚಿತ್ರವಾದ ವಾಹನಗಳನ್ನೂ ಸಹಸ್ರಾರು ಸಂಖ್ಯೆಯಲ್ಲಿ ನಿರ್ಮಿಸಿದ್ದೇನೆ.

ಬಿಲಾನಿ ರಮಣೀಯಾನಿ ಸುಖಯುಕ್ತಾನಿ ವೈ ಭೃಶಮ್ ।
ಏತೇ ಕೃತಾ ಮಯಾ ಸರ್ವೇ ತಸ್ಮಾದಿಚ್ಛಾಮಿ ಫಲ್ಗುನ ॥೧೫॥

ಅರ್ಜುನನೇ! ಅನೇಕಸುಂದರವಾದ ಸುಖಯುಕ್ತವಾದ ಪ್ರಾಸಾದಗಳನ್ನು ಅಂತರ್ಭೂಮಿಯಲ್ಲಿ ರಚಿಸಿದ್ದೇನೆ. ನಾನು ಇವೆಲ್ಲವನ್ನೂ ಮಾಡಿದ್ದೇನೆ. ಆದ್ದರಿಂದ ನಿನಗೆ ಏನಾದರೂ ಉಪಕಾರವನ್ನು ಮಾಡಲು ಬಯಸುತ್ತೇನೆ.

ಅರ್ಜುನಃ

ಪ್ರಾಣಕೃಚ್ಛ್ರಾದ್ ವಿನಿರ್ಮುಕ್ತಮ್ ಆತ್ಮಾನಂ ಮನ್ಯಸೇ ಮಯಾ ।
ಏವಂ ಗತೇ ನ ಶಕ್ಷ್ಯಾಮಿ ಕಿಂಚಿತ್ ಕಾರಯಿತುಂ ತ್ವಯಾ ॥೧೬॥

ಮಯನೇ! ನಾನು ನಿನ್ನನ್ನು ಪ್ರಾಣಸಂಕಟದಿಂದ ವಿಮೋಚನೆಗೊಳಿಸಿದ್ದೇನೆ ಎಂದು ನೀನು ತಿಳಿದಿದ್ದೀಯೆ ಪರಿಸ್ಥಿತಿಯು ಹೀಗಿರುವಾಗ ನಾನು ನಿನ್ನಿಂದ ಯಾವ ಉಪಕಾರವನ್ನೂ ಪಡೆಯಲು ಬಯಸುವುದಿಲ್ಲ.

ನಚಾಪಿ ತವ ಸಂಕಲ್ಪಂ ಮೋಘಮಿಚ್ಛಾಮಿ ದಾನವ ।
ಕೃಷ್ಣಸ್ಯ ಕ್ರಿಯತಾಂ ಕಿಂಚಿತ್ ತಥಾ ಪ್ರತಿಕೃತಂ ಮಯಾ ॥೧೭॥

ದಾನವನೇ! ನಿನ್ನ ಸಂಕಲ್ಪವನ್ನೇ ವ್ಯರ್ಥಮಾಡುವುದಕ್ಕೂ ನನಗೆ ಮನಸ್ಸಿಲ್ಲ ಆದ್ದರಿಂದ ಕೃಷ್ಣನಿಗಾಗಿ ಏನಾದರೂ ಮಾಡು. ಅದನ್ನೇ ನನಗೆ ಮಾಡಿದ ಪ್ರತ್ಯುಪಕಾರವೆಂದು ಭಾವಿಸುತ್ತೇನೆ.

ಮಯಃ

ವಾಸುದೇವ ಮಯಾ ಕರ್ತುಂ ಕಿಮಿಚ್ಛಸಿ ಶುಭಾನನ ॥೧೮॥

ಎಲೈ ಸುಂದರವದನನಾದ ವಾಸುದೇವನೇ! ನಾನು ಏನು ಮಾಡಬೇಕೆಂದು ಬಯಸುತ್ತೀಯೆ?

ವೈಶಂಪಾಯನಃ

ಚೋದಿತೋ ವಾಸುದೇವಸ್ತು ಮಯೇನ ಭರತರ್ಷಭ ।
ಮುಹೂರ್ತಮಿವ ಸಂದಧ್ಯೌ ಕಿಮಯಂ ಚೋದ್ಯತಾಮಿತಿ ॥೧೯॥

ಚೋದಯಾಮಾಸ ತಂ ಕೃಷ್ಣಃ ಸಭಾ ವೈ ಕ್ರಿಯತಾಮಿತಿ ॥೨೦॥

ಭರತರ್ಷಭನೇ! ಮಯನಿಂದ ಹೀಗೆ ಪ್ರೇರಿಸಲ್ಪಟ್ಟ ವಾಸುದೇವನು ಒಂದು ಮೂಹೂರ್ತದ ಕಾಲ ಇವನಿಗೆ ಏನು ಆದೇಶವನ್ನು ನೀಡಲಿ ಎಂದು ಚಿಂತಿಸಿ, ಅನಂತರ ಒಂದು ಸಭೆಯನ್ನು ನಿರ್ಮಿಸು ಎಂದು ಮಯನಿಗೆ ಪ್ರೇರಿಸಿದನು.

ಶ್ರೀ ಭಗವಾನ್

ಧರ್ಮರಾಜಸ್ಯ ದಯಿತಾಂ ಯಾದೃಶೀಮಿವ ಮನ್ಯಸೇ ।
ಯಾಂ ಕೃತಾಂ ನಾನುಕುರ್ಯುಸ್ತೇ ಮಾನವಾಃ ಪ್ರೇಕ್ಷ್ಯ ವಿಸ್ಮಿತಾಃ ।
ಮನುಷ್ಯಲೋಕೇ ಕೃತ್ಸ್ನೇಽಸ್ಮಿನ್ ತಾದೃಶೀಂ ಕುರು ವೈ ಸಭಾಮ್ ॥೨೧॥

ಮಯನೇ! ಎಂತಹ ಸಭೆಯನ್ನು ನಿರ್ಮಾಣ ಮಾಡಿದರೆ ಧರ್ಮರಾಜನಿಗೆ ಪ್ರಿಯವಾಗುವುದು ಎಂದು ನೀನು ಭಾವಿಸುತ್ತೀಯೋ, ಎಂತಹ ಸಭೆಯನ್ನು ನೋಡಿದ ಮೇಲೆ, ವಿಸ್ಮಿತರಾದ ಮನುಷ್ಯರು, ಮನುಷ್ಯಲೋಕದಲ್ಲಿ ಅಂತಹ ಸಭೆಯನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲವೋ, ಅಂತಹ ಸಭೆಯನ್ನು ನಿರ್ಮಾಣ ಮಾಡು.

ಯತ್ರ ದಿವ್ಯಾನಭಿಪ್ರಾಯಾನ್ ಪಶ್ಯೇಮ ವಿಹಿತಾಂಸ್ತ್ವಯಾ ।
ಆಸುರಾನ್ ಮಾನುಷಾಂಶ್ಚೈವ ತಾದೃಶೀಂ ಕುರು ವೈ ಸಭಾಮ್ ॥೨೨॥

ಯಾವ ಸಭೆಯಲ್ಲಿ ದೇವಲೋಕಕ್ಕೆ ಸಂಬಂಧಪಟ್ಟ ಅಭಿಪ್ರಾಯಗಳು (ಕಲ್ಪನೆಗಳು) ಮನುಷ್ಯಲೋಕಕ್ಕೆ ಮತ್ತು ಅಸುರಲೋಕಕ್ಕೆ ಸಂಬಂಧಿಸಿದ ಕಲ್ಪನೆಗಳು ನೋಡಲ್ಪಡಬಹುದೋ ಅಂತಹ ಸಭೆಯನ್ನು ನಿರ್ಮಾಣಮಾಡು.

ವೈಶಂಪಾಯನಃ

ಪ್ರತಿಗೃಹ್ಯ ತು ತದ್ವಾಕ್ಯಂ ಸಂಪ್ರಹೃಷ್ಟೋ ಮಯಸ್ತದಾ ।
ವಿಮಾನಪ್ರತಿಮಾಂ ಚಕ್ರೇ ಪಾಂಡವಸ್ಯ ಸಭಾಂ ಮುದಾ ॥೨೩॥

ಆಗ ಮಯನು ಸಂತೋಷದಿಂದ ಕೃಷ್ಣನ ಆ ವಾಕ್ಯವನ್ನು ಸ್ವೀಕರಿಸಿ ಅರ್ಜುನನ ಸಲುವಾಗಿ ಅನೇಕ ಉಪ್ಪರಿಗೆಗಳಿಂದ ಕೂಡಿದ ಸಭೆಯನ್ನು ಸಂತೋಷದಿಂದ ನಿರ್ಮಾಣ ಮಾಡಿದನು.

ತತಃ ಕೃಷ್ಣಶ್ಚ ಪಾರ್ಥಶ್ಚ ಧರ್ಮರಾಜೇ ಯುಧಿಷ್ಠಿರೇ ।
ಸರ್ವಮೇತದ್ ಯಥಾऽऽವೇದ್ಯ ದರ್ಶಯಾಮಾಸತುರ್ಮಯಮ್ ॥೨೪॥

ಅನಂತರ ಕೃಷ್ಣ ಮತ್ತು ಅರ್ಜುನರು ಮಯನನ್ನು ಧರ್ಮರಾಜನಾದ ಯುಧಿಷ್ಠಿರನ ಬಳಿ ಕರೆದುಕೊಂಡುಹೋಗಿ, ನಡೆದುದೆಲ್ಲವನ್ನೂ ಯಥಾವತ್ತಾಗಿ ನಿರೂಪಿಸಿ ಧರ್ಮರಾಜನಿಗೆ ಮಯನನ್ನು ತೋರಿಸಿದರು.

ತಸ್ಮೈ ಯುಧಿಷ್ಠಿರಃ ಪೂಜಾಂ ಯಥಾರ್ಹಮಕರೋತ್ ತದಾ ।
ಆಸನಂ ಕಲ್ಪಯಾಮಾಸ ಪೂಜಯಾಮಾಸ ಚ ಪ್ರಭುಃ ।
ಸ ಚ ತಾಂ ಪ್ರತಿಜಗ್ರಾಹ ಮಯಃ ಸತ್ಕೃತ್ಯ ಸತ್ಕೃತಃ ॥೨೫॥

ಆಗ ಧರ್ಮರಾಜನು ಮಯನಿಗೆ ಯಥೋಚಿತವಾದ ಪೂಜೆಯನ್ನು ಮಾಡಿದನು. ಪ್ರಭುವಾದ ಅವನು ಮಯನಿಗೆ ಒಂದು ಆಸನವನ್ನು ನೀಡಿ ಗೌರವಿಸಿದನು. ಧರ್ಮರಾಜನಿಂದ ಸತ್ಕೃತನಾದ ಮಯನು ಧರ್ಮರಾಜನನ್ನು ಸತ್ಕರಿಸಿ ಅವನು ನೀಡಿದ ಪೂಜೆಯನ್ನು ಸ್ವೀಕರಿಸಿದನು.

ಸ ಪೂರ್ವದೇವಚರಿತಂ ತದಾ ತತ್ರ ವಿಶಾಂಪತೇ ।
ಕಥಯಾಮಾಸ ದೈತೇಯಃ ಪಾಂಡಪುತ್ರೇಷು ಭಾರತ ॥೨೬॥

ಭರತವಂಶೋತ್ಪನ್ನನಾದ ರಾಜನೇ! ಆಗ ದೈತೇಯನಾದ ಮಯನು ಪಾಂಡವರನ್ನು ಕುರಿತು ದಾನವರ ಅನೇಕ ಕಥೆಗಳನ್ನು ಹೇಳಿದನು.

ಸ ಕಾಲಂ ಕಂಚಿದಾಶ್ವಸ್ಯ ವಿಶ್ವಕರ್ಮಾ ವಿಚಿಂತ್ಯ ಚ ।
ಸಭಾಂ ಪ್ರಚಕ್ರಮೇ ಕರ್ತುಂ ಪಾಂಡವಾನಾಂ ಮಹಾತ್ಮನಾಮ್ ।
ಅಭಿಪ್ರಾಯೇಣ ಪಾರ್ಥಸ್ಯ ಕೃಷ್ಣಸ್ಯ ಚ ಮಹಾತ್ಮನಃ ॥೨೭॥

ದೈತ್ಯರ ಶಿಲ್ಪಿಯಾದ ಮಯನು ಸ್ವಲ್ಪಸಮಯ ಸುಧಾರಿಸಿಕೊಂಡು ಮಹಾತ್ಮರಾದ ಕೃಷ್ಣ ಮತ್ತು ಅರ್ಜುನರ ಅಭಿಪ್ರಾಯಕ್ಕೆ ಅನುಗುಣವಾಗಿ ಮಹಾತ್ಮರಾದ ಪಾಂಡವರಿಗೋಸ್ಕರ ಸಭೆಯನ್ನು ನಿರ್ಮಾಣ ಮಾಡಲು ಉಪಕ್ರಮಿಸಿದನು.

ಪುಣ್ಯೇऽಹನಿ ಮಹಾಬಾಹುಃ ಕೃತಕೌತುಕಮಂಗಲಃ ।
ತರ್ಪಯಿತ್ವಾ ದ್ವಿಜಶ್ರೇಷ್ಠಾನ್ ಪಾಯಸೇನ ಸಹಸ್ರಶಃ ॥೨೮॥

ಧನಂ ಬಹುವಿಧಂ ದತ್ವಾ ತೇಭ್ಯ ಏವ ಚ ವೀರ್ಯವಾನ್ ।
ದಶ ಕಿಷ್ಕುಸಹಸ್ರಾಣಿ ಮಾಪಯಾಮಾಸ ಸರ್ವತಃ ॥೨೯॥

ಮಹಾಬಾಹುವಾದ ಮಯನು ಒಂದು ಶುಭದಿನದಲ್ಲಿ ಮಂಗಳಸ್ನಾನವನ್ನು ಮಾಡಿ ಪುಣ್ಯಹವಾಚನವನ್ನು ಮಾಡಿಸಿ ಸಹಸ್ರಸಂಖ್ಯೆಯಲ್ಲಿ ಬ್ರಾಹ್ಮಣರಿಗೆ ಪಾಯಸಮಿಶ್ರಿತವಾದ ಭೋಜನವನ್ನು ಮಾಡಿಸಿ ಅವರಿಗೆ ಅನೇಕ ವಿಧವಾದ ಧನವನ್ನು ದಾನವಾಗಿಕೊಟ್ಟು ಸಮರ್ಥನಾದ ಅವನು ಸಭೆಯ ನಿರ್ಮಾಣಕ್ಕಾಗಿ ಹತ್ತುಸಾವಿರ ಮೊಳಗಳಷ್ಟು ಭೂಮಿಯನ್ನು ಅಳೆಸಿದನು.

ಒಂದು ಕಿಷ್ಕು ಎಂದರೆ ಒಂದು ಹಸ್ತ ಎಂದರೆ ಅಂಗೈ ಮತ್ತು ಬೆರಳುಗಳು ಒಟ್ಟು ಉದ್ದ ಇಂತಹ ಹತ್ತುಸಾವಿರ ಹಸ್ತಗಳನ್ನು ಪೂರ್ವ ಪಶ್ಚಿಮವಾಗಿ ಮತ್ತು ದಕ್ಷಿಣೋತ್ತರವಾಗಿ ಅಳೆದು ಸಭೆಯ ನಿರ್ಮಾಣಪ್ರದೇಶವನ್ನು ಗುರುತುಪಡಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಪ್ರಥಮೋऽಧ್ಯಾಯಃ ॥
॥ ಮಂತ್ರಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಪುನಶ್ಚ ವತ್ಸರದ್ವಯಂ ಸಮುಷ್ಯ ಕೇಶವೋ ಯಯೌ ।
ಸಮರ್ಚಿತಶ್ಚ ಪಾಂಡವೈರ್ವಿಯೋಜನೇಽಸ್ಯ ಚಾಕ್ಷಮೈಃ ॥೩॥

ಇಂದ್ರಪ್ರಸ್ಥದಲ್ಲಿ ಶ್ರೀಕೃಷ್ಣ ಪುನಃ ಎರಡು ವರ್ಷಕಾಲ ವಾಸ ಮಾಡಿ ದ್ವಾರಕೆಗೆ ಹೊರಟ. ಆಗ ಅವನ ವಿಯೋಗವನ್ನು ಸಹಿಸಲು ಅಸಮರ್ಥರಾದ ಪಾಂಡವರು ಅವನನ್ನು ಬಹಳ ಸತ್ಕರಿಸಿದರು.

★ ★ ★ ★

ಎರಡನೆಯ ಅಧ್ಯಾಯ

(ಕೃಷ್ಣನ ಪ್ರಯಾಣ ಧರ್ಮರಾಜ ಮೊದಲಾದವರ ಸಾರಥ್ಯಗಳು ಸ್ವಲ್ಪದೂರಹೋಗಿ ಧರ್ಮರಾಜಾದಿಗಳ ಹಿಂದುರುಗುವಿಕೆ. ಕೃಷ್ಣನ ದ್ವಾರಕಾಪ್ರಾಪ್ತಿ ಮತ್ತು ದ್ವಾರಕೆಯಲ್ಲಿ ಸುಖವಾಸ.)

ವೈಶಂಪಾಯನಃ

ಉಷಿತ್ವಾ ಖಾಂಡವಪ್ರಸ್ಥೇ ಸುಖವಾಸಂ ಜನಾರ್ದನಃ ।
ಪಾರ್ಥೈಃ ಪ್ರೀತಿಸಮಾಯುಕ್ತೈಃ ಪೂಜನಾರ್ಹೋಽಭಿಪೂಜಿತಃ ।
ಗಮನಾಯ ಮತಿಂ ಚಕ್ರೇ ಪಿತುರ್ದರ್ಶನಲಾಲಸಃ ॥೧॥

ಪೂಜಾರ್ಹನಾದ ಜನಾರ್ದನನು ಇಂದ್ರಪ್ರಸ್ಥದಲ್ಲಿ ಸುಖವಾಗಿವಾಸಿಸಿ ಪ್ರೀತಿಯುಕ್ತರಾದ ಪಾಂಡವರಿಂದ ಪೂಜಿಸಲ್ಪಟ್ಟು ತಂದೆಯಾದ ವಸುದೇವನನ್ನು ನೋಡುವ ಆಕಾಂಕ್ಷೆಯುಳ್ಳವನಾಗಿ ಪ್ರಯಾಣಮಾಡಲು ನಿರ್ದರಿಸಿದನು.

ಧರ್ಮರಾಜಮಥಾಮಂತ್ರ್ಯ ಪೃಥಾಂ ಚ ಪೃಥುಲೋಚನಃ ।
ವವಂದೇ ಚರಣೌ ಮೂರ್ಧ್ನಾ ಜಗದ್ವಂದ್ಯಃ ಪಿತೃಷ್ವಸುಃ ॥೨॥

ಜಗದ್ವಂದ್ಯನಾದ ವಿಶಾಲನೇತ್ರನಾದ ಕೃಷ್ಣನು ಧರ್ಮರಾಜನ ಅನುಮತಿಯನ್ನು ಪಡೆದು, ಸೋದರತ್ತೆಯಾದ ಕುಂತಿಯ ಪಾದಗಳಿಗೆ ಶಿರಸಹಿತವಾದ ಸಾಷ್ಟಾಂಗಪ್ರಣಾಮಗಳನ್ನುಮಾಡಿದನು.

ಸ ತಯಾ ಮೂರ್ಧ್ನ್ಯುಪಾಘ್ರಾಯ ಪರಿಷ್ವಕ್ತಶ್ಚ ಕೇಶವಃ ।
ದದರ್ಶಾನಂತರಂ ಕೃಷ್ಣೋ ಭಗಿನೀಂ ಸ್ವಾಂ ಮಹಾಯಶಾಃ ॥೩॥

ಮಹಾ ಕೀರ್ತಿವಂತನಾದ ಕೇಶವನು, ಕುಂತಿಯಿಂದ ಆಲಿಂಗಿಸಲ್ಪಟ್ಟು ಶಿರಸ್ಸಿನಲ್ಲಿ ಆಘ್ರಾಣಿಸಲ್ಪಟ್ಟವನಾಗಿ, ಅನಂತರ ತನ್ನ ತಂಗಿಯಾದ ಸುಭದ್ರೆಯನ್ನು ನೋಡಿದನು.

ತಾಮುಪೇತ್ಯ ಹೃಷೀಕೇಶಃ ಪ್ರೀತ್ಯಾ ಬಾಷ್ಪಸಮನ್ವಿತಃ ।
ಅರ್ಘ್ಯಂ ತಥ್ಯಂ ಹಿತಂ ವಾಕ್ಯಂ ಲಘು ಯುಕ್ತಮನುತ್ತಮಮ್ ।
ಉವಾಚ ಭಗವಾನ್ ಭದ್ರಾಂ ಸುಭದ್ರಾಂ ಭದ್ರಭಾಷಿಣೀಮ್ ॥೪॥

ಹೃಷೀಕೇಶನು ಮಂಜುಳವಾಗಿಮಾತನಾಡುವ ತಂಗಿಯಾದ ಸುಭದ್ರೆಯನ್ನು ಸಮೀಪಿಸಿ ವಾತ್ಸಲ್ಯದಿಂದ ಬಾಷ್ಪಪೂರಿತಲೋಚನನಾಗಿ ಪ್ರಾರ್ಥನೀಯಾವಾದ ಯಥಾರ್ಥವಾದ ಹಿತಕರವಾದ ಶ್ರೇಷ್ಠವಾದ, ಯುಕ್ತಿಯುಕ್ತವಾದ ಮಿತವಾದ ಮಾತುಗಳನ್ನು ಆಡಿದನು.

ತಯಾ ಸ ಗಜಗಾಮಿನ್ಯಾ ಶ್ರಾವಿತೋ ವಚನಾನಿ ಚ ।
ಸಂಪೂಜಿತಶ್ಚಾಪ್ಯಸಕೃಚ್ಚಿರಸಾ ಚಾಭಿವಂದಿತಃ ॥೫॥

ಕೃಷ್ಣನು, ಗಜಗಾಮಿನಿಯಾದ ಆ ಸುಭದ್ರೆಯಿಂದ ಮಧುರವಾಗಿ ಮಾತನಾಡಿಸಲ್ಪಟ್ಟು ಅರ್ಚಿಸಲ್ಪಟ್ಟು ಪುನಃ ಪುನಃ ನಮಸ್ಕರಿಸಲ್ಪಟ್ಟನು.

ತಾಮನುಜ್ಞಾಪ್ಯ ವಾರ್ಷ್ಣೇಯಃ ಪ್ರತಿನಂದ್ಯ ಚ ಭಾಮಿನೀಮ್ ।
ದದರ್ಶಾನಂತರಂ ಕೃಷ್ಣಾಂ ಧೌಮ್ಯಂ ಚಾಪಿ ಜನಾರ್ದನಃ ॥೬॥

ವೃಷ್ಣಿಕುಲಸಂಭೂತನಾದ ಜನಾರ್ದನನು ಭಾಮಿನಿಯಾದ ಸುಭದ್ರೆಯನ್ನು ಅಭಿನಂದಿಸಿ ಅನುಮತಿಯನ್ನು ಪಡೆದು ಅನಂತರ ದ್ರೌಪದಿಯನ್ನು ಮತ್ತು ಧೌಮ್ಯರನ್ನು ಸಂದರ್ಶಿಸಿದನು.

ವವಂದೇ ಚ ಯಥಾನ್ಯಾಯಂ ಧೌಮ್ಯಂ ಪುರುಷಸತ್ತಮಃ ।
ದ್ರೌಪದೀಂ ಸಾಂತ್ವಯಿತ್ವಾ ಚ ಸುಭದ್ರಾಂ ಪರಿರಭ್ಯ ಚ ।
ಭ್ರಾತೃನಭ್ಯಗಮದ್ ಧೀಮಾನ್ ಪಾರ್ಥೇನ ಸಹಿತೋ ವಶೀ ॥೭॥

ಪುರುಷಶ್ರೇಷ್ಠನಾದ ಕೃಷ್ಣನು ಯಥೋಚಿತವಾಗಿ ಧೌಮ್ಯರಿಗೆ ನಮಸ್ಕರಿಸಿದನು. ದ್ರೌಪದಿಯನ್ನು ಕುರಿತು ಸಮಾದಾನದ ಮಾತುಗಳನ್ನು ಆಡಿ ಸುಭದ್ರೆಯನ್ನು ಆಲಿಂಗಿಸಿ ಧೀಮಂತನೂ, ಸ್ವತಂತ್ರನೂ, ಆದ ಕೃಷ್ಣನು ಅರ್ಜುನನ ಜೊತೆಯಲ್ಲಿ ಉಳಿದ ಸಹೋದರರನ್ನು ನೋಡಲು ಹೊರಟನು.

ಭ್ರಾತೃಭಿಃ ಪಂಚಭಿಃ ಕೃಷ್ಣೋ ವೃತಃ ಶಕ್ರ ಇವಾಮರೈಃ ।
ಯಾತ್ರಾಕಾಲಸ್ಯ ಯೋಗ್ಯಾನಿ ಕರ್ಮಾಣಿ ಗರುಡಧ್ವಜಃ ॥೮॥

ಕರ್ತುಕಾಮಃ ಶುಚಿರ್ಭೂತ್ವಾ ಸ್ನಾತ್ವಾ ಚ ಸಮಲಂಕೃತಃ ।
ಅರ್ಚಯಾಮಾಸ ದೇವಾಂಶ್ಚ ದ್ವಿಜಾಂಶ್ಚ ಯದುಪುಂಗವಃ ॥೯॥

ಯದುಪುಂಗವನಾದ ಕೃಷ್ಣನು ದೇವತೆಗಳ ಜೊತೆಯಲ್ಲಿ ನೆರೆದ ಇಂದ್ರನಂತೆ ಪಾಂಡವರ ಜೊತೆಯಲ್ಲಿ ಕೂಡಿದವನಾಗಿ, ಗರುಡಧ್ವಜನಾದ ಅವನು, ಪ್ರಯಾಣಕಾಲದಲ್ಲಿ ಆಚರಿಸಿಬೇಕಾದ ಯೋಗ್ಯವಾದ ಕರ್ಮಗಳನ್ನು ಆಚರಿಸಿಲು ಬಯಸಿ ಸ್ನಾನವನ್ನುಮಾಡಿ ಶುಚಿಯಾಗಿ ಅಲಂಕೃತನಾಗಿ ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ಪೂಜಿಸಿದನು.

ಮಾಲ್ಯೈರಪಿ ನಮಸ್ಕಾರೈರ್ಗಂಧೈರುಚ್ಚಾವಚೈಸ್ತಥಾ ।
ಸ ಕೃತ್ವಾ ಸರ್ವಕಾರ್ಯಾಣಿ ಪ್ರತಸ್ಥೇ ಪುಷ್ಕರೇಕ್ಷಣಃ ॥೧೦॥

ಕಮಲಲೋಚನನಾದ ಕೃಷ್ಣನು ಪುಷ್ಪಮಾಲೆಗಳಿಂದಲೂ ಗಂಧಗಳಿಂದಲೂ ಅನೇಕ ವಿಧವಾದ ದ್ರವ್ಯಗಳಿಂದಲೂ, ಮತ್ತು ನಮಸ್ಕಾರಗಳಿಂದಲೂ ಅವರನ್ನು ಅರ್ಚಿಸಿ ಉಳಿದ ಎಲ್ಲಾ ಕಾರ್ಯಗಳನ್ನು ಮಾಡಿ ಹೊರಟನು.

ಸ್ವಸ್ತಿ ವಾಚ್ಯಾರ್ಹತೋ ವಿಪ್ರಾನ್ ದಧಿಪುಷ್ಪಫಲಾಕ್ಷತೈಃ ।
ವಸು ಪ್ರದಾಯ ಚ ತತಃ ಪ್ರದಕ್ಷಿಣಮವರ್ತತ ॥೧೧॥

ಕೃಷ್ಣನು ಯೋಗ್ಯರಾದ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಅವರನ್ನು ದಧಿ, ಪುಷ್ಪ ಮತ್ತು ಅಕ್ಷತೆಗಳಿಂದ ಪೂಜಿಸಿ ಅವರಿಗೆ ಧನವನ್ನು ದಾನಮಾಡಿ ಅನಂತರ ಪ್ರದಕ್ಷಿಣೆಯನ್ನು ಮಾಡಿದನು.

ತತಃ ಸ ಕೃತಮಂಗಲ್ಯೋ ಬ್ರಾಹ್ಮಣೈರ್ವೇದಪಾರಗೈಃ ।
ಕಾಂಚನಂ ರಥಮಾಸ್ಥಾಯ ತಾರ್ಕ್ಷ್ಯಕೇತನಮಾಶುಗಮ್ ॥೧೨॥

ಗದಾಚಕ್ರಾಸಿಶಾರ್ಙ್ಗಾದ್ಯೈರಾಯುಧೈಶ್ಚ ಸಮನ್ವಿತಮ್ ।
ತಿಥಾವಥ ಚ ನಕ್ಷತ್ರೇ ಮುಹೂರ್ತೇ ಚ ಗುಣಾನ್ವಿತೇ ।
ಪ್ರಯಯೌ ಪುಂಡರೀಕಾಕ್ಷಃ ಶೈಬ್ಯಸುಗ್ರೀವವಾಹನಃ ॥೧೩॥

ಅನಂತರ ವೇದಪಾರಂಗತರಾದ ಬ್ರಾಹ್ಮಣರಿಂದ ಮಂಗಳವಾಚನವನ್ನು ಮಾಡಿಸಿಕೊಂಡ ಪುಂಡರೀಕಾಕ್ಷನಾದ ಕೃಷ್ಣನು ಗರುಡಧ್ವಜದಿಂದ ಕೂಡಿದ್ದ ಶೀಘ್ರವಾಗಿ ಸಂಚರಿಸುವ ಗದಾ, ಚಕ್ರ, ಅಸಿ, ಶಾರ್ಙ್ಗ, ಮೊದಲಾದ ಆಯುಧಗಳಿಂದ ಕೂಡಿದ್ದ ಶೈಬ್ಯ ಸುಗ್ರೀವ ಮೊದಲಾದ ಅಶ್ವಗಳನ್ನು ಹೂಡಿದ್ದ ಸುವರ್ಣಮಯವಾದ ರಥವನ್ನು ಏರಿ ಶುಭನಕ್ಷತ್ರ, ಶುಭತಿಥಿ, ಶುಭಮೂಹೂರ್ತ, ಮತ್ತು ಉಳಿದ ಶುಭಗುಣಗಳುಳ್ಳ ಲಗ್ನದಲ್ಲಿ ಇಂದ್ರಪ್ರಸ್ಥದಿಂದ ಹೊರಟನು.

ಅನ್ವಾರುರೋಹ ತಂ ಚಾಪಿ ಪ್ರೇಮ್ಣಾ ರಾಜಾ ಯುಧಿಷ್ಠಿರಃ ।
ಅಪಾಸ್ಯ ಚಾಸ್ಯ ಯಂತಾರಂ ದಾರುಕಂ ಸೂತಮುತ್ತಮಮ್ ।
ಅಭೀಶೂನ್ ಪ್ರತಿಜಗ್ರಾಹ ಸ್ವಯಂ ಕುರುಪತಿಸ್ತದಾ ॥೧೪॥

ರಾಜನಾದ ಯುಧಿಷ್ಠಿರನು, ಕೃಷ್ಣನು ಏರಿದ ಮೇಲೆ ಪ್ರೀತಿಯಿಂದ ರಥವನ್ನು ಏರಿ, ಕೃಷ್ಣನ ಶ್ರೇಷ್ಠಸಾರಥಿಯಾದ ದಾರುಕನನ್ನು ಬದಿಗೆ ಇರಿಸಿ, ಕುರುಪತಿಯಾದ ಧರ್ಮರಾಜನು ಕೃಷ್ಣನ ರಥದ ಅಶ್ವಗಳ ಕಡಿವಾಣವನ್ನು ತಾನೇ ಹಿಡಿದನು.

ಉಪಾರುಹ್ಯಾರ್ಜುನಶ್ಚಾಪಿ ಚಾಮರವ್ಯಜನಂ ಸಿತಮ್ ।
ರುಗ್ಮದಂಡಂ ಬೃಹನ್ಮೂರ್ಧ್ನಿ ದುಧಾವಾಭಿಪ್ರದಕ್ಷಿಣಮ್ ॥೧೫॥

ಅನಂತರ ಅರ್ಜುನನು ರಥವನ್ನು ಏರಿ ಸುವರ್ಣಮಯವಾದ ದಂಡವುಳ್ಳ ದೊಡ್ಡ ಬಿಳಿಯ ಚಾಮರ ವ್ಯಜನಗಳನ್ನು ಪ್ರದಕ್ಷಿಣಾಕಾರವಾಗಿ ಕೃಷ್ಣನ ತಲೆಯ ಮೇಲೆ ಬೀಸಿದನು.

ತಥೈವ ಭೀಮಸೇನೋಽಪಿ ರಥಮಾರುಹ್ಯ ವೀರ್ಯವಾನ್ ।
ಛತ್ರಂ ಶತಶಲಾಕಂ ಚ ದಿವ್ಯಮಾಲ್ಯೋಪಶೋಭಿತಮ್ ॥೧೬॥

ವೈಡೂರ್ಯಮಣಿದಂಡಂ ಚ ಚಾಮೀಕರವಿಭೂಷಿತಮ್ ।
ದಧಾರ ತರಸಾ ಭೀಮಃ ಛತ್ರಂ ತಚ್ಛಾರ್ಙ್ಗಧನ್ವನೇ ॥೧೭॥

ಅನಂತರ ಪರಾಕ್ರಮಶಾಲಿಯಾದ ಭೀಮಸೇನನು ರಥವನ್ನು ಏರಿ ನೂರು ಸಲಾಕೆಗಳಿಂದ ಕೂಡಿದ ದಿವ್ಯಮಾಲೆಗಳಿಂದ ಅಲಂಕೃತವಾದ ವೈಡೂರ್ಯಮಣಿಯಿಂದ ಮಾಡಿದ ದಂಡವುಳ್ಳ ಸುವರ್ಣದಿಂದ ಭೂಷಿತವಾದ ಛತ್ರವನ್ನು ಶಾರ್ಙ್ಗಧಾರಿಯಾದ ಕೃಷ್ಣನ ಶಿರಸ್ಸಿನ ಮೇಲೆ ಹಿಡಿದನು.

ಉಪಾರುಹ್ಯ ರಥಂ ಶೀಘ್ರಂ ಚಾಮರವ್ಯಜನೇ ಸಿತೇ ।
ನಕುಲಃ ಸಹದೇವಶ್ಚ ಧೂಯಮಾನೌ ಜನಾರ್ದನಮ್ ॥೧೮॥

ಅನಂತರ ನಕುಲಸಹದೇವರು ಶೀಘ್ರವಾಗಿ ರಥವನ್ನು ಏರಿ ಶ್ವೇತವರ್ಣದ ಚಾಮರವ್ಯಜನಗಳನ್ನು ಕೃಷ್ಣನಿಗೆ ಬೀಸಿದರು.

ಸ ತತ ಭ್ರಾತೃಭಿಃ ಸಾರ್ಧಮ್ ಕೇಶವಃ ಪರವೀರಹಾ ।
ಅನುಗಮ್ಯಮಾನಃ ಶುಶುಭೇ ಶಿಷ್ಯೈರಿವ ಗುರುಃ ಪ್ರಿಯೈಃ ॥೧೯॥

ಪರವೀರರನ್ನು ಸಂಹರಿಸುವ ಕೇಶವನು, ಆ ಸಹೋದರರಿಂದ ಹೀಗೆ ಸೇವಿಸಲ್ಪಟ್ಟು ಅನುಸರಿಸಲ್ಪಟ್ಟವನಾಗಿ ಪ್ರಿಯಶಿಷ್ಯರಿಂದ ಕೂಡಿದ ಗುರುವಿನಂತೆ ಶೋಭಿಸಿದನು.

ಅಭಿಮನ್ಯುಂ ಚ ಸೌಭದ್ರಂ ವೃದ್ಧೈಃ ಪರಿವೃತಸ್ತತಃ ।
ರಥಮಾರೋಪ್ಯ ನಿರ್ಯಾತೋ ಧೌಮ್ಯೋ ಬ್ರಾಹ್ಮಣಪುಂಗವಃ ॥೨೦॥

ಅನಂತರ ಬ್ರಾಹ್ಮಣಶ್ರೇಷ್ಠರಾದ ಧೌಮ್ಯರು ವೃದ್ಧರಿಂದ ಪರಿವೃತರಾಗಿ ಸುಭದ್ರೆಯ ಮಗನಾದ ಅಭಿಮನ್ಯುವನ್ನು ರಥದಲ್ಲಿ ಕೂಡಿಸಿಕೊಂಡು ಅಲ್ಲಿಂದ ಹೊರಟರು.

ಇಂದ್ರಪ್ರಸ್ಥಮತಿಕ್ರಮ್ಯ ಕ್ರೋಶಮಾತ್ರಂ ಮಹಾದ್ಯುತಿಃ ।
ಪಾರ್ಥಮಾಮಂತ್ರ್ಯ ಗೋವಿಂದಃ ಪರಿಷ್ವಜ್ಯ ಸಹಾನುಜಮ್ ॥೨೧॥

ಯುಧಿಷ್ಠಿರಂ ಪೂಜಯಿತ್ವಾ ಭೀಮಸೇನಂ ಯಮೌ ತಥಾ ।
ಪರಿಷ್ವಕ್ತೋ ಭೃಶಂ ತಾಭ್ಯಾಂ ಯಮಾಭ್ಯಾಮಭಿವಾದಿತಃ ॥೨೨॥

ಮಹಾತೇಜಸ್ವಿಯಾದ ಗೋವಿಂದನು ಇಂದ್ರಪ್ರಸ್ಥವನ್ನು ದಾಟಿ, ಒಂದು ಕ್ರೋಶದೂರ ಹೊದಮೇಲೆ ಯುಧಿಷ್ಠಿರನನ್ನು ಮತ್ತು ತಮ್ಮಂದಿರನ್ನು ಆಲಿಂಗಿಸಿ ಅನುಮತಿಯನ್ನು ಪಡೆದನು. ಯುಧಿಷ್ಠಿರನನ್ನು ಪೂಜಿಸಿ ಹಾಗೆಯೇ ಭೀಮಸೇನನನ್ನು ಪೂಜಿಸಿ ನಕುಲಸಹದೇವರಿಂದ ಆಲಿಂಗಿತನಾಗಿ ನಮಸ್ಕರಿಸಲ್ಪಟ್ಟನು.

ತತಸ್ತೈಃ ಸಂವಿದಂ ಕೃತ್ವಾ ಯಥಾವನ್ಮಧುಸೂದನಃ ।
ಯೋಜನಾರ್ಧಮಥೋ ಗತ್ವಾ ಕೃಷ್ಣಃ ಪರಪುರಂಜಯಃ ॥೨೩॥

ಯುಧಿಷ್ಠಿರಂ ಸಮಾಮಂತ್ರ್ಯ ನಿವರ್ತಸ್ವೇತಿ ಚಾಬ್ರವೀತ್ ।
ತತೋಽಭಿವಾದ್ಯ ಗೋವಿಂದಃ ಪಾದೌ ಜಗ್ರಾಹ ಧರ್ಮವಿತ್ ॥೨೪॥

ಅನಂತರ ಶತ್ರುಪುರವನ್ನು ನಾಶಮಾಡುವ ಕೃಷ್ಣನು ಅವರ ಜೊತೆಯಲ್ಲಿ ಯಥೋಚಿತವಾಗಿ ಮಾತನಾಡಿ ಇನ್ನೂ ಅರ್ಧಯೋಜನ ಮುಂದೆ ಪ್ರಯಾಣಮಾಡಿ ಯುಧಿಷ್ಠಿರನನ್ನು ಕುರಿತು ಇನ್ನು ಹಿಂದಿರುಗು ಎಂದು ಹೇಳಿದನು. ಅನಂತರ ಮಧುಸೂದನನಾದ ಧರ್ಮವನ್ನು ತಿಳಿದ ಆ ಗೋವಿಂದನು, ಧರ್ಮರಾಜನ ಪಾದಗಳಿಗೆ ನಮಸ್ಕರಿಸಿದನು.

ನಿವರ್ತಯಿತ್ವಾ ಚ ತದಾ ಪಾಂಡವಾನ್ ಸ ಪದಾನುಗಾನ್ ।
ಸ್ವಾಂ ಪುರೀಂ ಪ್ರಯಯೌ ಹೃಷ್ಟಃ ಪುರಂದರ ಇವಾಪರಃ ॥೨೫॥

ಕೃಷ್ಣನು ತನ್ನನ್ನೇ ಹಿಂಬಾಲಿಸಿಕೊಂಡು ಬಂದ ಪಾಂಡವರನ್ನು ಹಿಂದಿರುಗಿಸಿ ಅನಂತರ ಸಂತೋಷದಿಂದ ಕೂಡಿದವನಾಗಿ ಇನ್ನೊಬ್ಬ ಇಂದ್ರನಂತೆ ತನ್ನ ದ್ವಾರಕಾಪಟ್ಟಣವನ್ನು ಕುರಿತು ಹೊರಟನು.

ಲೋಚನೈರನುಜಗ್ಮುಸ್ತೇ ತಮಾದೃಷ್ಟಿಪಥಾತ್ ಪುನಃ ।
ಮನೋಭಿರನುಜಗ್ಮುಸ್ತೇ ಕೃಷ್ಣಂ ಪ್ರೀತಿಸಮನ್ವಿತಾಃ ॥೨೬॥

ಪ್ರೀತಿಯುಳ್ಳ ಆ ಪಾಂಡವರು ಕೃಷ್ಣನು ಕಾಣುವವರೆಗೂ ತಮ್ಮ ನೇತ್ರಗಳಿಂದ ಅವನ್ನು ಹಿಂಬಾಲಿಸಿ, ಕೃಷ್ಣನು ಕಣ್ಮರೆಯಾದ ಮೇಲೆ ತಮ್ಮ ಮನಸ್ಸುಗಳಿಂದ ಅವನನ್ನು ಹಿಂಬಾಲಿಸಿದರು.

ಅತೃಪ್ತಮನಸಾಮೇವ ತೇಷಾಂ ಕೇಶವದರ್ಶನೇ ।
ಕ್ಷಿಪ್ರಮಂತರ್ದಧೇ ಶೌರಿಃ ಚಕ್ಷುಷಾಂ ಪ್ರಿಯದರ್ಶನಃ ॥೨೭॥

ಎಲ್ಲರ ನಯನಗಳಿಗೆ ಹಬ್ಬವನ್ನು ಉಂಟುಮಾಡುವ ಕೃಷ್ಣನು, ಪಾಂಡವರು ಮನಸ್ಸಿನಲ್ಲಿ ತನ್ನ ದರ್ಶನದಿಂದ ಇನ್ನೂ ತೃಪ್ತಿಯನ್ನು ಪಡೆಯದಿರುವಂತೆಯೇ, ಬೇಗ ಅಂತರ್ಧಾನವನ್ನು ಹೊಂದಿದನು.

ಅಕಾಮಾ ಇವ ಪಾರ್ಥಾಶ್ಚ ಗೋವಿಂದಗತಮಾನಸಾಃ ।
ನಿವೃತ್ಯ ಪ್ರಯಯುಃ ಸರ್ವೇ ಸ್ವಂ ಪುರಂ ಭರತರ್ಷಭಾಃ ॥೨೮॥

ಕೃಷ್ಣನಲ್ಲಿ ಆಸಕ್ತವಾದ ಮನಸ್ಸುಳ್ಳ ಭರತಶ್ರೇಷ್ಠರಾದ ಆ ಪಾಂಡವರೆಲ್ಲರೂ, ಮನಸ್ಸಿಲ್ಲದೆಯೇ ಹಿಂದಿರುಗಿ ತಮ್ಮ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿದರು.

ನಿವೃತ್ತೋ ಧರ್ಮರಾಜಸ್ತು ಸಹ ಭ್ರಾತೃಭಿರಚ್ಯುತಃ ।
ಸುಹೃಜ್ಜನವೃತೋ ರಾಜಾ ಪ್ರವಿವೇಶ ಪುರೋತ್ತಮಮ್ ॥೨೯॥

ತನ್ನ ತಮ್ಮಂದಿರ ಜೊತೆಯಲ್ಲಿ ಹಿಂದಿರುಗಿದ ಭಕ್ತಾದಿ ಗುಣಗಳಿಂದ ಚ್ಯುತನಾಗದ ಧರ್ಮರಾಜನು ಸುಹೃಜ್ಜನರಿಂದ ಪರಿವೃತನಾಗಿ ತನ್ನ ಪಟ್ಟಣವನ್ನು ಪ್ರವೇಶಿಸಿದನು.

ವಿಸೃಜ್ಯ ಸರ್ವಾನ್ ಸುಹೃದೋ ಭ್ರಾತೄನ್ ಪುತ್ರಾಂಶ್ಚ ಧರ್ಮರಾಟ್ ।
ಮುಮೋದ ಪುರುಷವ್ಯಾಘ್ರೋ ದ್ರೌಪದ್ಯಾ ಸಹ ಭಾರತ ॥೩೦॥

ಎಲೈ ಭಾರತನೇ! ಪುರುಷವ್ಯಾಘ್ರನಾದ ಧರ್ಮರಾಜನು ತನ್ನ ಎಲ್ಲಾ ಸುಹೃಜ್ಜನರನ್ನು ಕಳುಹಿಸಿಕೊಟ್ಟು ತನ್ನ ತಮ್ಮಂದಿರನ್ನೂ ಮಕ್ಕಳನ್ನೂ ಸಹ ಬೀಳ್ಕೊಟ್ಟು ದ್ರೌಪದಿಯ ಜೊತೆಯಲ್ಲಿ ಸಂತೋಷದಿಂದ ಕಾಲವನ್ನು ಕಳೆದನು.

ಸ್ಯಂದನೇನಾಥ ಕೃಷ್ಣೋಽಪಿ ಸಮಯೇ ದ್ವಾರಕಾಮಗಾತ್ ।
ಕೇಶವೋಽಪಿ ಮುದಾ ಯುಕ್ತಃ ಪ್ರವಿವೇಶ ಪುರೋತ್ತಮಮ್ ॥೩೧॥

ಆನಂತರ ಕೃಷ್ಣನೂ ಸಹ ಸಂತೋಷದಿಂದ ಕೂಡಿದವನಾಗಿ, ತನ್ನ ರಥದಲ್ಲಿ ದ್ವಾರಕೆಯನ್ನು ತಲುಪಿ ತನ್ನ ಶ್ರೇಷ್ಠವಾದ ಪಟ್ಟಣವನ್ನು ಪ್ರವೇಶಿಸಿದನು.

ದಾರುಕೇಣ ಚ ಸೂತೇನ ಸಹಿತೋ ದೇವಕೀಸುತಃ ।
ಪೂಜ್ಯಮಾನೋ ಯದುಶ್ರೇಷ್ಠೈರುಗ್ರಸೇನೋದ್ಧವಾದಿಭಿಃ ॥೩೨॥

ದೇವಕಿಸುತನಾದ ಕೃಷ್ಣನು, ತನ್ನ ಸೂತನಾದ ದಾರುಕನ ಜೊತೆಯಲ್ಲಿ ದ್ವಾರಕೆಯನ್ನು ಪ್ರವೇಶಿಸಿ ಯದುಶ್ರೇಷ್ಠರಾದ ಉಗ್ರಸೇನ, ಉದ್ಧವ ಮೊದಲಾದರಿಂದ ಪೂಜಿಸಿಲ್ಪಟ್ಟನು.

ಆಹುಕಂ ಪಿತರಂ ವೃದ್ಧಂ ಮಾತರಂ ಚ ಯಶಸ್ವಿನೀಮ್ ।
ಅಭಿವಾದ್ಯ ಬಲಂ ಚೈವ ಸ್ಥಿತಃ ಕಮಲಲೋಚನಃ ॥೩೩॥

ಕಮಲನಯನನಾದ ಕೃಷ್ಣನು, ಆಹುಕನನ್ನೂ, ತಂದೆಯಾದ ವೃದ್ಧನಾದ ವಸುದೇವನನ್ನೂ, ಕೀರ್ತಿಶಾಲಿಯಾದ ತನ್ನ ತಾಯಿಯನ್ನೂ ಮತ್ತು ಅಣ್ಣನಾದ ಬಲರಾಮನನ್ನೂ ನಮಸ್ಕರಿಸಿ ದ್ವಾರಕೆಯಲ್ಲಿ ನೆಲೆಸಿದನು.

ಪ್ರದ್ಯುಮ್ನಸಾಂಬೌ ನಿಶಠಂ ಚಾರುದೇಷ್ಣಂ ಗದಂ ತಥಾ ।
ಅನಿರುದ್ಧಂ ಚ ಭಾನುಂ ಚ ಪರಿಷ್ವಜ್ಯ ಜನಾರ್ದನಃ ॥೩೪॥

ವೃದ್ಧೈಸ್ತೈಶ್ಚಾಭ್ಯನುಜ್ಞಾತೋ ರುಗ್ಮಿಣ್ಯಾ ಭವನಂ ಯಯೌ ।
ಸ ತತ್ರ ಭವನೇ ದಿವ್ಯೇ ಪ್ರಮುಮೋದ ಸುಖೀ ಸುಖಮ್ ॥೩೫॥

ಜನಾರ್ದನನು ಪ್ರದ್ಯುಮ್ನ, ಸಾಂಬ, ನಿಶಠ, ಚಾರುದೇಷ್ಣ, ಗದಾ, ಅನಿರುದ್ಧ, ಭಾನು, ಮೊದಲಾದವರನ್ನು ಆಲಿಂಗಿಸಿ ಹಿರಿಯರಿಂದ ಅನುಮತಿಯನ್ನು ಪಡೆದು ರುಗ್ಮಿಣಿಯ ಅರಮನೆಗೆ ಹೋಗಿ ಆ ದಿವ್ಯಭವನದಲ್ಲಿ ಆನಂದಪೂರ್ಣನಾಗಿ ವಾಸಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ದ್ವಿತೀಯೋಽಧ್ಯಾಯಃ ॥

॥ ಮಂತ್ರಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★★★★★

ಮೂರನೆಯ ಅಧ್ಯಾಯ

(ಸಭೆಯನ್ನು ನಿರ್ಮಾಣ ಮಾಡುವ ದ್ರವ್ಯಗಳನ್ನು ತರಲು ಬಿಂದುಸರೋವರಕ್ಕೆ ಮಯನ ಪ್ರಯಾಣ, ಗದಾ ಮತ್ತು ಶಂಖಗಳ ಜೊತೆಯಲ್ಲಿ ನಿರ್ಮಾಣ ಸಾಮಗ್ರಿಗಳನ್ನು ತೆಗೆದುಕೊಂಡು ಹಿಂದಿರುಗುವಿಕೆ, ಭೀಮಾರ್ಜುನರಿಗೆ ಗದಾಶಂಖಗಳನ್ನು ಕೊಟ್ಟು ಸಭೆಯ ನಿರ್ಮಾಣ.)

ವೈಶಂಪಾಯನಃ

ಏತಸ್ಮಿನ್ನಂತರೇ ರಾಜನ್ ಮಯೋ ದೈತ್ಯಾಧಿಪಸ್ತಥಾ ।
ವಿಧಿವತ್ ಕಲ್ಪಯಾಮಾಸ ಸಭಾಂ ಧರ್ಮಸುತಾಯ ವೈ ।
ಅಥಾಬ್ರವೀನ್ಮಯಃ ಪಾರ್ಥಮರ್ಜುನಂ ಜಯತಾಂ ವರಮ್ ॥೧॥

ಎಲೈರಾಜನೇ ! ದೈತ್ಯಾಧಿಪತಿಯಾದ ಮಯನು ಈ ಸಂದರ್ಭದಲ್ಲಿ ಧರ್ಮರಾಜನ ಸಲುವಾಗಿ ಶಾಸ್ತ್ರೋಕ್ತರೀತಿಯಿಂದ ಸಭೆಯನ್ನು ನಿರ್ಮಿಸಿದನು. ಆಗ ಜಯಶೀಲನಾದ ಕುಂತೀಪುತ್ರನಾದ ಅರ್ಜುನನನ್ನು ಕುರಿತು ಮಯನು ಮಾತನಾಡಿದನು.

ಆಪೃಚ್ಛೇ ತ್ವಾಂ ಗಮಿಷ್ಯಾಮಿ ಕ್ಷಿಪ್ರಮೇಷ್ಯಾಮಿ ಚಾಪ್ಯಹಮ್ ।
ವಿಶ್ರುತಾಂ ತ್ರಿಷು ಲೋಕೇಷು ಪಾರ್ಥ ದಿವ್ಯಾಂ ಸಭಾಂ ತವ ॥೨॥

ಪ್ರಾಣಿನಾಂ ವಿಸ್ಮಯಕರೀಂ ತವ ಪ್ರೀತಿವಿವರ್ಧನೀಮ್ ।
ಪಾಂಡವಾನಾಂ ಚ ಸರ್ವೇಷಾಂ ಕರಿಷ್ಯಾಮಿ ಧನಂಜಯ ॥೩॥

ಪಾರ್ಥನೇ! ನಾನು ನಿನ್ನ ಅನುಮತಿಯನ್ನು ಪಡೆದು ಇಲ್ಲಿಂದ ಹೊರಟು ಶೀಘ್ರವಾಗಿ ಹಿಂದಿರುಗುತ್ತೇನೆ. ನಿನಗಾಗಿ ಮೂರುಲೋಕಗಳಲ್ಲಿಯೂ ಪ್ರಖ್ಯಾತವಾದಂತಹ ಎಲ್ಲರಿಗೂ ಆಶ್ಚರ್ಯವನ್ನು ಉಂಟುಮಾಡುವಂತಹ ಪಾಂಡವರೆಲ್ಲರಿಗೂ ಸಂತೋಷವನ್ನು ಉಂಟುಮಾಡುವಂತಹ ದಿವ್ಯವಾದ ಸಭೆಯನ್ನು ನಿರ್ಮಿಸುವೆನು.

ಉತ್ತರೇಣ ತು ಕೈಲಾಸಂ ಮೈನಾಕಂ ಪರ್ವತಂ ಪ್ರತಿ ।
ಯಕ್ಷ್ಯಮಾಣೇಷು ಕ್ರತುಷು ದಾನವೇಷು ತದಾ ಮಯಾ ॥೪॥

ಕೃತಂ ಮಣಿಮಯಂ ಭಾಂಡಂ ಹೈಮಂ ಬಿಂದುಸರಃ ಪ್ರತಿ ।
ಸಭಾಯಾಂ ದಾನವೇಂದ್ರಸ್ಯ ಯದಾಸೀದ್ ವೃಷಪರ್ವಣಃ ।
ಆಗಮಿಷ್ಯಾಮಿ ತದ್ ಗೃಹ್ಯ ಯದಿ ತಿಷ್ಠತಿ ಭಾರತ ॥೫॥

ಕೈಲಾಸಪರ್ವತದ ಉತ್ತರ ದಿಕ್ಕಿನಲ್ಲಿ, ಅಲ್ಲಿಂದ ಮೈನಾಕಪರ್ವತದವರೆಗೆ ಪ್ರಸರಿಸಿರುವ ಬಿಂದು ಸರೋವರವಿದೆ. ಹಿಂದೆ ದಾನವರು ಯಾಗವನ್ನು ಮಾಡುವಾಗ ನಾನು ಅನೇಕ ಸುವರ್ಣಮಯವಾದ ಮತ್ತು ಮಣಿಮಯವಾದ ಭಾಂಡಗಳನ್ನು ನಿರ್ಮಾಣಮಾಡಿ, ಅದನ್ನು ಬಿಂದುಸರೋವರದ ಸಮೀಪದಲ್ಲಿ ಇರಿಸಿದ್ದೆನು. ಅವೆಲ್ಲವೂ ದಾನವೇಂದ್ರನಾದ ವೃಷಪರ್ವತನ ಸಭೆಯಲ್ಲಿ ನಿರ್ಮಾಣಕ್ಕೆ ಉಪಯೋಗವನ್ನು ಪಡೆದಿದ್ದವು. ಎಲೈ ಭರತನೇ! ಅವುಗಳು ಇನ್ನೂ ಅಲ್ಲೇ ಇದ್ದರೆ ಅವುಗಳನ್ನು ತೆಗೆದುಕೊಂಡು ನಾನು ಹಿಂದಿರುಗುವೆನು.

ತತಃ ಸಭಾಂ ಕರಿಷ್ಯಾಮಿ ಪಾಂಡವಾಯ ಮಹಾತ್ಮನೇ ।
ಮನಃಪ್ರಹ್ಲಾದಜನನೀಂ ಸರ್ವರತ್ನವಿಭೂಷಿತಾಮ್ ॥೬॥

ಅನಂತರ ಮಹಾತ್ಮನಾದ ಪಾಂಡವನಾದ ಧರ್ಮರಾಜನ ಮನಸ್ಸಿಗೆ ಸಂತೋಷವನ್ನು ಉಂಟುಮಾಡುವಂತಹ ಸರ್ವರತ್ನಗಳಿಂದ ವಿಭೂಷಿತವಾದ ಸಭೆಯನ್ನು ನಿರ್ಮಾಣ ಮಾಡುವೆನು.

ಅಸ್ತಿ ಬಿಂದುಸರಸ್ಯೇವ ಗದಾ ಶ್ರೇಷ್ಠಾ ಕುರೂದ್ವಹ ।
ನಿಹಿತಾ ಯೌವನಾಶ್ವೇನ ರಾಜ್ಞಾ ಹತ್ವಾ ರಿಪೂನ್ ರಣೇ ॥೭॥

ಕುರುಶ್ರೇಷ್ಠನೇ! ಹಿಂದೆ ಯುವನಾಶ್ವನ ಮಗನಾದ ಮುಚುಕುಂದನು ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸಿ ತನ್ನ ಶ್ರೇಷ್ಠವಾದ ಗದೆಯನ್ನು ಬಿಂದುಸರೋವರದ ಸಮೀಪದಲ್ಲಿಯೇ ಇರಿಸಿದನು.

ಸುವರ್ಣಬಿಂದುಭಿಶ್ಚಿತ್ರಾ ಗುರ್ವೀ ಭಾರಸಹಾ ದೃಢಾ ।
ಸಾ ವೈ ಭಾರಸಹಸ್ರಸ್ಯ ಸಮ್ಮಿತಾ ಶತ್ರುಘಾತಿನೀ ।
ಅನುರೂಪಾ ಚ ಭೀಮಸ್ಯ ಗಾಂಡೀವಂ ಭವತೋ ಯಥಾ ॥೮॥

ಆ ಗದೆಯು ಚಿನ್ನದ ಬಿಂದುಗಳಿಂದ ಅಲಂಕೃತವಾಗಿದೆ. ಬಹಳ ಭಾರವುಳ್ಳದ್ದು. ಶತ್ರುವಿನ ಗದೆಯ ಭಾರವನ್ನು ತಡೆಯಬಲ್ಲದು. ಮತ್ತು ದೃಢವಾದುದೂ ಆಗಿದೆ. ಶತ್ರುಗಳನ್ನು ಸಂಹರಿಸುವ ಆ ಗದೆಯು ನೂರುಮಣ ಭಾರವನ್ನು ಹೊಂದಿದೆ. ನಿನಗೆ ಗಾಂಡೀವಧನುಸ್ಸು ಅನುರೂಪವಾಗಿರುವಂತೆ ಭೀಮಸೇನನಿಗೆ ಆ ಗದೆಯು ಅನುರೂಪವಾಗಿದೆ.

ವಾರುಣಶ್ಚ ಮಹಾಶಂಖೋ ದೇವದತ್ತಃ ಸುಘೋಷವಾನ್ ।
ಸರ್ವಮೇತತ್ ಪ್ರದಾಸ್ಯಾಮಿ ಪಾಂಡವಾಯ ಮಹಾತ್ಮನೇ ॥೯॥

ವರುಣನಿಗೆ ಸೇರಿದ ಒಳ್ಳೆಯ ಘೋಷವುಳ್ಳ ದೇವದತ್ತನೆಂಬ ಶಂಖವು ಅಲ್ಲಿದೆ. ಅವುಗಳನ್ನು ತಂದು ಮಹಾತ್ಮನಾದ ಧರ್ಮರಾಜನಿಗೆ ಒಪ್ಪಿಸುವೆನು.

ವೈಶಂಪಾಯನಃ

ಇತ್ಯುಕ್ತ್ವಾ ಸೋಽಸುರಃ ಪಾರ್ಥಂ ಪ್ರಾಗುದೀಚೀಮಗಾದ್ ದಿಶಮ್।
ಅಭ್ಯುತ್ತರೇಣ ಕೈಲಾಸಂ ಮೈನಾಕಂ ಪರ್ವತಂ ಪ್ರತಿ ॥೧೦॥

ಅರ್ಜುನನನ್ನು ಕುರಿತು ಹೀಗೆ ಹೇಳಿ ಆ ಅಸುರನಾದ ಮಯನು ಕೈಲಾಸಪರ್ವತದ ಉತ್ತರ ಭಾಗದಲ್ಲಿ ಈಶಾನ್ಯದಿಕ್ಕಿನ ಕಡೆಗೆ ಇರುವ ಮೈನಾಕಪರ್ವತದ ಕಡೆಗೆ ಹೊರಟನು.

ಹಿರಣ್ಯಶೃಂಗೋ ಭಗವಾನ್ ಮಹಾಮಣಿಮಯೋ ಗಿರಿಃ ।
ರಮ್ಯಂ ಬಿಂದುಸರೋ ನಾಮ ಯತ್ರ ರಾಜಾ ಭಗೀರಥಃ ।
ದೃಷ್ಟ್ವಾ ಭಾಗೀರಥೀಂ ಗಂಗಾಮ್ ಉವಾಸ ಬಹವಃ ಸಮಾಃ ॥೧೧॥

ಆ ಮೈನಾಕ ಪರ್ವತವು ಸುವರ್ಣಮಯವಾದ ಶೃಂಗಗಳಿಂದಲೂ ಮಹಾಮಣಿಗಳಿಂದಲೂ ಕೂಡಿರುವುದಾಗಿ ಬಹಳ ಪೂಜ್ಯವಾಗಿದೆ. ಅದರ ಸಮೀಪದಲ್ಲಿರುವ ಬಿಂದುಸರೋವರದಲ್ಲಿ ಭಗೀರಥರಾಜನು ಭಾಗೀರಥಿಯನ್ನು ಪ್ರತ್ಯಕ್ಷೀಕರಿಸಿಕೊಂಡು ಬಹಳ ವರ್ಷಗಳವರೆಗೆ ವಾಸಮಾಡಿದನು.

ಯತ್ರ ವೈ ಸರ್ವಭೂತಾನಾಮೀಶ್ವರೇಣ ಮಹಾತ್ಮನಾ ।
ಆಹೃತಾಃ ಕ್ರತವೋ ಮುಖ್ಯಾಃ ಸಹಸ್ರಾಣಿ ಶತಾನಿ ಚ ॥೧೨॥

ಆ ಬಿಂದುಸರೋವರದಲ್ಲಿಯೇ ಸರ್ವಜೀವರಿಗೆ ಒಡೆಯನಾದ ಮಹಾತ್ಮನಾದ ನಾರಾಯಣನು ನೂರಾರು ಸಾವಿರಾರು ಪ್ರಧಾನವಾದ ಯಾಗವನ್ನು ನೆರವೇರಿಸಿದನು.

ಯತ್ರ ಯೂಪಾ ಮಣಿಮಯಾಶ್ಚೈತ್ಯಾಶ್ಚೈವ ಹಿರಣ್ಮಯಾಃ ।
ಶೋಭಾರ್ಥಂ ವಿಹಿತಾಸ್ತತ್ರ ನ ತ್ವದೃಷ್ಟಾರ್ಥತಃ ಕೃತಾಃ ॥೧೩॥

ಅಲ್ಲಿ ಯೂಪಸ್ತಂಭಗಳು ಮಣಿಮಯವಾಗಿವೆ. ಎಲ್ಲ ಪವಿತ್ರ ವೃಕ್ಷಗಳು ಸುವರ್ಣಮಯವಾಗಿವೆ. ಕಾಂತಿಯನ್ನು ತರುವ ಸಲುವಾಗಿ ಹೀಗೆ ಮಾಡಲ್ಪಟ್ಟಿವೆ, ಪುಣ್ಯದ ದೃಷ್ಟಿಯಿಂದ ಅಲ್ಲ.

ಯತ್ರ ಭೂತಪತಿಃ ಸೃಷ್ಟ್ವಾ ಸರ್ವಾಲ್ಲೋಕಾನ್ ಸನಾತನಃ ।
ಉಪಾಸ್ಯತೇ ತಿಗ್ಮತೇಜಾ ಧೃತೋ ಭೂತೈಃ ಸಹಸ್ರಶಃ ॥೧೪॥

ಅಲ್ಲಿ ವೇದಪ್ರತಿಪಾದ್ಯನಾದ ಸರ್ವಜೀವರಿಗೆ ಒಡೆಯನಾದ ಮಹಾಪರಾಕ್ರಮಶಾಲಿಯಾದ ನಾರಾಯಣನು ಲೋಕಗಳನ್ನು ಸೃಷ್ಟಿಮಾಡಿ ಎಲ್ಲ ಜೀವರುಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಉಪಾಸನೆ ಮಾಡಲ್ಪಡುತ್ತಾನೆ.

ನರನಾರಾಯಣೌ ಬ್ರಹ್ಮಾ ಯಮಃ ಸ್ಥಾಣುಶ್ಚ ಪಂಚಮಃ ।
ಉಪಾಸತೇ ಯತ್ರ ಪರಂ ಸಹಸ್ರಯುಗಪರ್ಯಯೇ ॥೧೫॥

ಒಂದು ಸಹಸ್ರಚರ್ತುಯುಗಗಳು ಕಳೆದ ಮೇಲೆ ಅಲ್ಲಿ ನರನಾರಾಯಣರು ಬ್ರಹ್ಮದೇವರು ಯಮ ಮತ್ತು ರುದ್ರದೇವರು ಜೊತೆಯಲ್ಲಿ ಇರುತ್ತಾರೆ.

ಯತ್ರೇಷ್ಟಂ ವಾಸುದೇವೇನ ಸತ್ರೈರ್ವರ್ಷಸಹಸ್ರಕೈಃ ।
ಶ್ರದ್ಧಾನೇನ ಸತತಂ ಶಿಷ್ಟಾನಾಂ ಪ್ರತಿಪತ್ತಯೇ ॥೧೬॥

ಅಲ್ಲಿ ವಾಸುದೇವನಾದ ನಾರಾಯಣನು, ಶಿಷ್ಟರಿಗೆ ಆಚಾರಕ್ರಮದಲ್ಲಿ ಶ್ರದ್ಧೆ ಹುಟ್ಟಿಸುವುದಕ್ಕಾಗಿ, ಸತತವಾಗಿ ಶ್ರದ್ಧೆಯಿಂದ ಅನೇಕ ಸಹಸ್ರವರ್ಷಗಳ ಕಾಲ ಸತ್ರಯಾಗವನ್ನು ಆಚರಿಸಿದನು.

ಸುವರ್ಣಮಾಲಿನೋ ಯೂಪಾಸ್ತಸ್ಯ ಚಿತ್ರಾಶ್ಚ ಭಾಸ್ವರಾಃ ।
ದದೌ ಯತ್ರ ಸಹಸ್ರಾಣಾಮರ್ಬುದಾನಿ ಜನಾರ್ದನಃ ॥೧೭॥

ಅಲ್ಲಿ ಇರುವ ಯೂಪಗಳು ವಿಚಿತ್ರವಾದವೂ ಪ್ರಕಾಶಮಾನವಾದವೂ ಮತ್ತು ಸುವರ್ಣಮಯವಾದ ಮಾಲೆಗಳಿಂದ ಅಲಂಕೃತವಾದವೂ ಆಗಿದ್ದವು. ಸತ್ರಯಾಗದ ಕೊನೆಯಲ್ಲಿ ಜನಾರ್ದನನು ಸಹಸ್ರಾರ್ಬುದಧನವನ್ನು ದಾನಮಾಡಿದನು.

ತತ್ರ ಗತ್ವಾ ಸ ಜಗ್ರಾಹ ಗದಾಂ ಶಂಖಂ ಚ ಭಾರತ ।
ತಸ್ಮಾದ್ ಗಿರೇರುಪಾದಾಯ ಶಿಲಾಃ ಸುರುಚಿರಾಃ ಶುಭಾಃ ॥೧೮॥

ಸ್ಫಾಟಿಕಂ ಚ ಸಭಾದ್ರವ್ಯಂ ಯದಾಸೀದ್ ವೃಷಪರ್ವಣಃ ।
ಕಿಂಕರೈಃ ಸಹ ರಕ್ಷೋಭಿರಗೃಹ್ಣಾತ್ ಸರ್ವಮೇವ ತತ್ ॥೧೯॥

ಎಲೈ ಭಾರತನೇ! ಮಯನು ಅಲ್ಲಿಗೆ ಹೋಗಿ, ಆಲ್ಲಿಂದ ಗದೆಯನ್ನು ಶಂಖವನ್ನು ಮತ್ತು ಆ ಪರ್ವತದ ಸುಂದರವಾದ, ಶುಭ್ರವಾದ, ಪವಿತ್ರವಾದ, ಶಿಲೆಗಳನ್ನು ಮತ್ತು ವೃಷಪರ್ವನ ಸಭೆಯಲ್ಲಿದ್ದ ಸ್ಫಟಿಕಮಯಾದ ಸಭಾನಿರ್ಮಾಣದ್ರವ್ಯಗಳನ್ನು ತೆಗೆದುಕೊಂಡು ಆ ಪದಾರ್ಥಗಳನ್ನು ಕಿಂಕರ ಎಂಬ ಹೆಸರಿನ ರಾಕ್ಷಸರಿಂದ ಹೊರಿಸಿಕೊಂಡು ಎಲ್ಲವನ್ನೂ ತೆಗದುಕೊಂಡು ಬಂದನು.

ತದಾಹೃತ್ಯ ತು ತಾಂ ಚಕ್ರೇ ಪಾರ್ಥಾಯಾಪ್ರತಿಮಾಂ ಸಭಾಮ್ ।
ವಿಶ್ರುತಾಂ ತ್ರಿಷು ಲೋಕೇಷು ದಿವ್ಯಾಂ ಮಣಿಮಯೀಂ ಶುಭಾಮ್ ॥೨೦॥

ಅವುಗಳೆಲ್ಲವನ್ನೂ ತೆಗೆದುಕೊಂಡು ಬಂದು ಮಯನು ಧರ್ಮರಾಜನ ಸಲುವಾಗಿ ಮೂರುಲೋಕಗಳಲ್ಲಿಯೂ ಪ್ರಖ್ಯಾತವಾದ ಅಸದೃಶವಾದ, ಮಣಿಮಯವಾದ, ನಿರ್ಮಲವಾದ, ಮತ್ತು ದಿವ್ಯವಾದ ಸಭೆಯನ್ನು ನಿರ್ಮಾಣ ಮಾಡಿದನು.

ಗದಾಂ ಚ ಭೀಮಸೇನಾಯ ಪ್ರದದೌ ಪ್ರವರಾಂ ತದಾ ।
ದೇವದತ್ತಂ ಚ ಪಾರ್ಥಾಯ ದದೌ ಶಂಖಮನುತ್ತಮಮ್ ।
ಯಸ್ಯ ಶಂಖಸ್ಯ ನಾದೇನ ಭೂತಾನಿ ಪ್ರಚಕಂಪಿರೇ ॥೨೧॥

ಶ್ರೇಷ್ಠವಾದ ಗದೆಯನ್ನು ಭೀಮಸೇನನಿಗೆ ಕೊಟ್ಟನು. ಶ್ರೇಷ್ಠವಾದ ದೇವದತ್ತ ಎಂಬ ಶಂಖವನ್ನು ಅರ್ಜುನನಿಗೆ ಕೊಟ್ಟನು. ಆ ಶಂಖದ ನಾದಕ್ಕೆ ಎಲ್ಲ ಮನುಷ್ಯರೂ ಮತ್ತು ಪ್ರಾಣಿಗಳೂ ನಡುಗುತ್ತಾರೆ.

ಸ ಕಾಲಂ ಕಂಚಿದಾಶ್ವಸ್ಯ ವಿಶ್ವಕರ್ಮಾ ವಿಚಿಂತ್ಯ ಚ ।
ಸಭಾಂ ಪ್ರಚಕ್ರಮೇ ಕರ್ತುಂ ಪಾಂಡವಾನಾಂ ಮಹಾತ್ಮನಾಮ್ ॥೨೨॥

ದಾನಪರ ಶಿಲ್ಪಿಯಾದ ಮಯನು ಸ್ವಲ್ಪಕಾಲ ವಿಶ್ರಾಂತಿಯನ್ನು ಪಡೆದು, ಚೆನ್ನಾಗಿ ಆಲೋಚಿಸಿ, ಮಹಾತ್ಮನಾದ ಪಾಂಡವರ ಸಲುವಾಗಿ ಸಭೆಯನ್ನು ನಿರ್ಮಾಣ ಮಾಡಲು ಉಪಕ್ರಮಿಸಿದನು.

ಅಭಿಪ್ರಾಯೇಣ ಪಾರ್ಥಾನಾಂ ಕೃಷ್ಣಸ್ಯ ಚ ಮಹಾತ್ಮನಃ ।
ಸರ್ವರ್ತುಗುಣಸಂಪನ್ನಾಂ ದಿವ್ಯರೂಪಾಮಲಂಕೃತಾಮ್ ।
ತರ್ಪಯಿತ್ವಾ ದ್ವಿಜಶ್ರೇಷ್ಠಾನ್ ಪಾಯಸೇನ ಸಹಸ್ರಶಃ ॥೨೩॥

ಮಹಾತ್ಮನಾದ ಕೃಷ್ಣನ ಮತ್ತು ಪಾಂಡವರ ಅಭಿಪ್ರಾಯಕ್ಕೆ ಅನುಗುಣವಾಗಿ ಬ್ರಾಹ್ಮಣಶ್ರೇಷ್ಠರನ್ನು ಸಹಸ್ರಸಂಖ್ಯೆಯಲ್ಲಿ ಭೋಜನದಾನಾದಿಗಳಿಂದ ತೃಪ್ತಿಪಡಿಸಿ ಎಲ್ಲಾ ಋತುಗಳ ಗುಣಗಳಿಂದ ಕೂಡಿದ ದಿವ್ಯವಾದ ಅಲಂಕೃತವಾದಂತಹ ಸಭೆಯನ್ನು ನಿರ್ಮಿಸಿದನು.

ಸಭಾ ತು ಸಾ ಮಹಾರಾಜ ಶಾತಕುಂಭಮಯದ್ರುಮಾ ।
ದಶಕಿಷ್ಕುಸಹಸ್ರಾಣಿ ಸಮಂತಾದಾಯತಾऽಭವತ್ ॥೨೪॥

ಎಲೈ ಮಹಾರಾಜನೇ! ಸುವರ್ಣಮಯವಾದ ವೃಕ್ಷಗಳಿಂದ ಕೂಡಿದ ಆ ಸಭೆಯು ಎಲ್ಲಾ ಕಡೆಗಳಲ್ಲಿಯೂ ವಿಸ್ತಾರದಿಂದ ಹತ್ತು ಸಹಸ್ರ ಹಸ್ತಗಳ ಪರಿಮಾಣವುಳ್ಳದ್ದಾಗಿದ್ದಿತು.

ಯಥಾ ವಹ್ನೇರ್ಯಥಾऽರ್ಕಸ್ಯ ಸೋಮಸ್ಯ ಚ ಯಥೈವ ಹ ।
ಭ್ರಾಜಮಾನಾ ತಥಾ ದಿವ್ಯಾ ಸಾ ಚಿತ್ರಾ ಪರಮಾ ಬಭೌ ॥೨೫॥

ವಹ್ನಿಯ ಪ್ರಭೆಯಂತೆ, ಸೂರ್ಯನ ಪ್ರಭೆಯಂತೆ, ಚಂದ್ರನ ಕಾಂತಿಯಂತೆ ಆ ದಿವ್ಯವಾದ ಸಭೆಯು ವಿಚಿತ್ರವಾಗಿ ಪರಮಕಾಂತಿಯಿಂದ ಬೆಳಗುತ್ತಿದ್ದಿತು.

ಪ್ರತಿಘ್ನತೀವ ಪ್ರಭಯಾ ಪ್ರಭಾಮರ್ಕಸ್ಯ ಭಾಸ್ವರಾಮ್ ।
ಪ್ರಬಭೌ ಜ್ವಲಮಾನೇವ ದಿವ್ಯಾ ದಿವ್ಯೇನ ವರ್ಚಸಾ ॥೨೬॥

ತನ್ನ ಕಾಂತಿಯಿಂದ ಸೂರ್ಯನ ಕಾಂತಿಯನ್ನು ಸೋಲಿಸುವಂತಿದ್ದ ಆ ದಿವ್ಯವಾದ ಸಭೆಯು ತನ್ನ ದಿವ್ಯವಾದ ವರ್ಚಸ್ಸಿನಿಂದ ಬೆಳಗುತ್ತಿರುವಂತೆ ಕಂಡಿತು.

ನವಮೇಘಪ್ರತೀಕಾಶಾ ದಿವಮಾವೃತ್ಯ ವಿಷ್ಠಿತಾ ।
ಆಯತಾ ವಿಮಲಾ ಶ್ಲಕ್ಷ್ಣಾ ವಿಪಾಪ್ಮಾ ವಿಗತಕ್ಲಮಾ ॥೨೭॥

ಆ ಸಭೆಯು ಹೊಸ ಮೇಘದ ಕಾಂತಿಯನ್ನು ಹೊಂದಿ ಅಂತರಿಕ್ಷವನ್ನು ವ್ಯಾಪಿಸಿ ನಿಂತಿದ್ದಿತು. ಅದು ವಿಸ್ತಾರವಾಗಿಯೂ ಶುಭ್ರವಾಗಿಯೂ, ಮಧುರವಾಗಿಯೂ, ಪಾಪಪರಿಹಾರಕವಾಗಿಯೂ, ಶ್ರಮಪರಿಹಾರಶಕ್ತಿ ಉಳ್ಳದ್ದಾಗಿಯೂ ಇದ್ದಿತು.

ಉತ್ತಮದ್ರವ್ಯಸಂಪನ್ನಾ ಮಣಿಪ್ರಾಕಾರತೋರಣಾ ।
ಬಹುರತ್ನಾ ಬಹುಧನಾ ನಿರ್ಮಿತಾ ವಿಶ್ವಕರ್ಮಣಾ ॥೨೮॥

ದಾನವರ ಶಿಲ್ಪಿಯಾದ ಮಯನಿಂದ ನಿರ್ಮಿತವಾದ ಆ ಸಭೆಯು, ಉತ್ತಮದ್ರವ್ಯಗಳಿಂದಲೂ, ಬಹುರತ್ನಗಳಿಂದಲೂ, ಬಹುಧನದಿಂದಲೂ, ನಿರ್ಮಿತವಾಗಿ ಮಣಿಮಯವಾದ ಪ್ರಾಕಾರಗಳನ್ನು ಮತ್ತು ಬಿಲ್ಲಿನ ಆಕಾರದ ಪ್ರವೇಶದ್ವಾರಗಳನ್ನು ಹೊಂದಿದ್ದಿತು.

ತ್ರಿದಶಾನಾಂ ಸುಧರ್ಮಾ ವಾ ಬ್ರಹ್ಮಣೋ ವಾऽಪಿ ತಾದೃಶೀ ।
ಆಸೀದ್ ರೂಪೇಣ ಸಂಪನ್ನಾ ಯಾಂ ಚಕ್ರೇऽಪ್ರತಿಮಾಂ ಮಯಃ॥೨೯॥

ದೇವತೆಗಳ ಸುಧರ್ಮಸಭೆಯು ಅಥವಾ ಬ್ರಹ್ಮದೇವರ ವೈಜಯಂತಿಸಭೆಯು ಎಂತಹ ರೂಪವನ್ನು ಹೊಂದಿರುತ್ತದೆಯೋ ಅಂತಹ ಅಸದೃಶವಾದ ರೂಪವನ್ನು ಮಯನು ನಿರ್ಮಿಸಿದ ಆ ಸಭೆಯು ಹೊಂದಿದ್ದಿತು.

ತಾಂ ಸ್ಮ ದಿವ್ಯಾಂ ಮಯೇನೋಕ್ತಾಃ ಕಿಂಕರಾ ನಾಮ ರಾಕ್ಷಸಾಃ ।
ಸಭಾಮಷ್ಟೌ ಸಹಸ್ರಾಣಿ ರಕ್ಷಂತಿ ಚ ವಹಂತಿ ಚ ॥೩೦॥

ಮಯನ ಆದೇಶವನ್ನು ಪಾಲಿಸುವ ಕಿಂಕರ ಎಂಬ ಹೆಸರಿನ ಎಂಟುಸಾವಿರ ರಾಕ್ಷಸರು ಆ ಸಭೆಯ ನಿರ್ಮಾಣದ ದ್ರವ್ಯಗಳನ್ನು ಹೊತ್ತುತಂದು ಸಭೆಯನ್ನು ನಿರ್ಮಿಸಿ ಅದನ್ನು ರಕ್ಷಿಸಿದರು.

ಅಂತರಿಕ್ಷಚರಾ ಘೋರಾ ಮಹಾಕಾಯಾ ಮಹಾಬಲಾಃ ।
ರಕ್ತಾಕ್ಷಾಃ ಪಿಂಗಲಾಕ್ಷಾಶ್ಚ ಶಂಕುಕರ್ಣಾಃ ಪ್ರಹಾರಿಣಃ ॥೩೧॥

ಆ ಕಿಂಕರ ರಾಕ್ಷಸರು ಮಹಾದೇಹವುಳ್ಳವರು ಮಹಾಬಲವುಳ್ಳವರು, ಘೋರರೂಪವುಳ್ಳವರು, ಕೆಂಪಾದ ಕಣ್ಣುಳ್ಳವರು, ಕೆಲವರು ಕಂದುಬಣ್ಣದ ಕಣ್ಣುಳ್ಳವರು, ಶಂಖದಂತೆ ಕಿವಿಯುಳ್ಳವರು ಮತ್ತು ಯಾರೊಡನೆಯೂ ಹೋರಾಡುವ ಸಾಮರ್ಥ್ಯವುಳ್ಳವರು. ಮತ್ತು ಅಂತರಿಕ್ಷದಲ್ಲಿ ಚಲಿಸುವ ಸಾಮರ್ಥ್ಯವುಳ್ಳವರು.

ತಸ್ಯಾಂ ಸಭಾಯಾಂ ನಳಿನೀಂ ಚಕಾರಾಪ್ರತಿಮಾಂ ಮಯಃ ।
ವೈಡೂರ್ಯಪತ್ರವಿತತಾಂ ಮಣಿನಾಳಾಂ ಶುಭಾಂಬುಜಾಮ್ ॥೩೨॥

ಆ ಸಭೆಯಲ್ಲಿ ಮಯನು ವೈಡೂರ್ಯಮಯಪತ್ರಗಳನ್ನೂ ಮಣಿಮಯವಾದ ನಾಳಗಳನ್ನೂ ಹೊಂದಿದ್ದ ಶುಭ್ರವಾದ ಪದ್ಮಗಳನ್ನು ಹೊಂದಿದ ಒಂದು ಅಸದೃಶವಾದ ಸರೋವರವನ್ನು ನಿರ್ಮಿಸಿದನು.

ಪದ್ಮಸೌಗಂಧಿಕವತೀಂ ನಾನಾದ್ವಿಜಗಣೈರ್ಯುತಾಮ್ ।
ಪುಷ್ಪಿತೈಃ ಪಂಕಜೈಶ್ಚಿತ್ರಾಂ ಕೂರ್ಮೈರ್ಮತ್ಸ್ಯೈಶ್ಚ ಸಂಯುತಾಮ್ ॥೩೩॥

ಆ ಸರೋವರವು ಪದ್ಮಗಂಧವುಳ್ಳದುದೂ ಅನೇಕ ಪಕ್ಷಿಗಳಿಂದ ಕೂಡಿದುದೂ ಅರಳಿದ ಕಮಲಗಳಿಂದ ಶೋಭಿಸುವುದೂ ಮತ್ತು ಜಲಪ್ರಾಣಿಗಳಾದ ಮತ್ಸ್ಯಕೂರ್ಮಗಳಿಂದ ಸಂಯುತವಾದುದೂ ಆಗಿದ್ದಿತು.

ಸುಖತೀರ್ಥಾಮಕಲುಷಾಂ ಸರ್ವರ್ತುಸಲಿಲಾಂ ಶುಭಾಮ್।
ಮಾರುತೇನೈವ ಚೋದ್ಧೂತೈರ್ಮುಕ್ತಾಬಿಂದುಭಿರಾಚಿತಾಮ್ ।
ಮಹಾಮಣಿಶಿಲಾಪಟ್ಟಬದ್ಧಪರ್ಯಂತವೇದಿಕಾಮ್ ॥೩೪॥

ಆ ಸರೋವರದ ನೀರು ಸುಖಸ್ಪರ್ಶವುಳ್ಳದ್ದಾಗಿಯೂ, ಕಾಲುಷ್ಯರಹಿತವಾಗಿಯೂ, ಎಲ್ಲ ಋತುಗಳಲ್ಲಿಯೂ ಸೇವ್ಯಮಾನವಾದುದಾಗಿಯೂ, ಪವಿತ್ರವಾಗಿಯೂ ಇದ್ದಿತು. ಮಂದವಾಯುವಿನಿಂದ ಉಂಟಾದ ಮುತ್ತಿನ ಬಿಂದುಗಳಿಂತಿರುವ ನೀರಿನ ಹನಿಗಳಿಂದ

ಎಲ್ಲಾ ಕಡೆಯೂ ತುಂಬಿದ್ದಿತು. ಆ ಸರೋವರದ ದಡವು ಮಹಾಮಣಿಗಳಿಂದ ಮಾಡಿದ ಶಿಲೆಗಳಿಂದ ಬದ್ಧವಾದ- ವೇದಿಕೆಯುಳ್ಳದ್ದಾಗಿದ್ದಿತು.

ಮಣಿರತ್ನಚಿತಾಂ ತಾಂ ತು ಕೇಚಿದಭ್ಯೇತ್ಯ ಪಾರ್ಥಿವಾಃ ।
ದೃಷ್ಟ್ವಾಪಿ ನಾಭ್ಯಜಾನಂತ ತೇऽಜ್ಞಾನಾತ್ ಪ್ರಪತಂತ್ಯುತ ॥೩೫॥

ಸರೋವರದ ತಳದಲ್ಲಿ ಪೂರ್ಣವಾಗಿ ಮಣಿರತ್ನಗಳಿಂದ ತುಂಬಿದ, ಆ ಸರೋವರವನ್ನು ನೋಡಿ, ಅನೇಕ ರಾಜರು, ನೋಡಿದರೂ ಸರೋವರವೆಂದು ತಿಳಿಯದೆ ಅಜ್ಞಾನದಿಂದ ಅದರೊಳಗೆ ಬೀಳುತ್ತಿದ್ದರು.

ತಾಂ ಸಭಾಮಭಿತೋ ನಿತ್ಯಂ ಪುಷ್ಪವಂತೋ ಮಹಾದ್ರುಮಾಃ ।
ಆಸನ್ ನಾನಾವಿಧಾ ನೀಲಾಃ ಶೀತಚ್ಛಾಯಾ ಮನೋರಮಾಃ ॥೩೬॥

ಆ ಸಭೆಯ ಸುತ್ತಲೂ ಸರ್ವದಾ ಪುಷ್ಪಭರಿತವಾದ, ನಾನಾವಿಧವಾದ ಶೀತವಾದ ನೆರಳನ್ನು ಕೊಡುವ, ಮನೋರಮವಾದ ಅನೇಕ ಮಹಾವೃಕ್ಷಗಳು ಇದ್ದವು.

ಕಾನನಾನಿ ಸುಗಂಧೀನಿ ಪುಷ್ಕರಿಣ್ಯಶ್ಚ ಸರ್ವಶಃ ।
ಹಂಸಕಾರಂಡವಯುತಾಶ್ಚಕ್ರವಾಕೋಪಕೂಜಿತಾಃ ॥೩೭॥

ಆ ಮರಗಳ ಸುತ್ತ ಇದ್ದ ಕಾನನದಲ್ಲಿ ಸುಗಂಧವುಳ್ಳ ಅನೇಕ ಸರೋವರಗಳು ಹಂಸಕಾರಂಡವ ಮೊದಲಾದ ಪಕ್ಷಿಗಳಿಂದಲೂ ಚಕ್ರವಾಕ ಮೊದಲಾದ ಪಕ್ಷಿಗಳ ಧ್ವನಿಗಳಿಂದಲೂ ಕೂಡಿದುದಾಗಿ ಎಲ್ಲಾ ಕಡೆಗಳಲ್ಲಿ ಶೋಭಿಸುತ್ತಿತ್ತು.

ಜಲಜಾನಾಂ ಚ ಮಾಲ್ಯಾನಾಂ ಸ್ಥಲಜಾನಾಂ ಚ ಸರ್ವಶಃ ।
ಮಾರುತೋ ಗಂಧಮಾದಾಯ ಪಾಂಡವಾನ್ ಸ್ಮ ನಿಷೇವತೇ ॥೩೮॥

ವಾಯುವು ನೀರಿನಲ್ಲಿ ಬೆಳೆದ ಮತ್ತು ಭೂಮಿಯಲ್ಲಿ ಬೆಳೆದ ಪುಷ್ಪಗಳ ಸೌರಭವನ್ನು ತೆಗದುಕೊಂಡು ಬಂದು ಪಾಂಡವರ ಸೇವೆಯನ್ನು ಮಾಡುತ್ತಿದ್ದಿತು.

ಈದೃಶೀಂ ತಾಂ ಸಭಾಂ ಕೃತ್ವಾ ಮಾಸೈಃ ಪರಿಚತುರ್ದಶೈಃ ।
ನಿರ್ಮಿತಾಂ ಧರ್ಮರಾಜಾಯ ಮಯೋ ರಾಜ್ಞೇ ನ್ಯವೇದಯತ್ ॥೩೯॥

ಮಯನು ಹದಿನಾಲ್ಕುತಿಂಗಳುಗಳಕಾಲ ಇಂತಹ ಅದ್ಭುತವಾದ ಸಭೆಯನ್ನು ನಿರ್ಮಾಣ ಮಾಡಿ ರಾಜನಾದ ಧರ್ಮರಾಜನಿಗೆ ಸಭೆಯನ್ನು ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ತೃತೀಯೋಽಧ್ಯಾಯಃ ॥
॥ ಮಂತ್ರಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★★★★★

ನಾಲ್ಕನೆಯ ಅಧ್ಯಾಯ

(ಯುಧಿಷ್ಠಿರ ಸಭಾಪ್ರವೇಶ)

ವೈಶಂಪಾಯನಃ

ತಾಂ ತು ಕೃತ್ವಾ ಸಭಾಂ ಶ್ರೇಷ್ಠಾಂ ಮಯಶ್ಚಾರ್ಜುನಮಬ್ರವೀತ್ ।
ಏಷಾ ಸಭಾ ಸವ್ಯಸಾಚಿನ್ ಧ್ವಜಾಗ್ರ್ಯಶ್ಚ ಭವಿಷ್ಯತಿ ॥೧॥

ಅಂತಹ ಶ್ರೇಷ್ಠಸಭೆಯನ್ನು ನಿರ್ಮಾಣಮಾಡಿ ಮಯನು ಅರ್ಜುನನನ್ನು ಕುರಿತು, ಸವ್ಯಸಾಚಿಯೇ! ಇದು ನಾನು ನಿರ್ಮಿಸಿರುವ ಸಭೆ ಮುಂದೆ ಶ್ರೇಷ್ಠವಾದ ಧ್ವಜವನ್ನು ನಿರ್ಮಿಸುವೆನು ಎಂದು ಹೇಳಿದನು.

ಭೂತಾನಾಂ ಚ ಮಹಾವೀರ್ಯೋ ಧ್ವಜಾಗ್ರೇ ಕಿಂಕರೋ ಗಣಃ ।
ತವ ವಿಷ್ಫಾರಘೋಷೇಣ ಮೇಘವನ್ನಿನದಿಷ್ಯತಿ ॥೨॥

ಧ್ವಜದ ಅಗ್ರಭಾಗದಲ್ಲಿ ಮಹಾಬಲಶಾಲಿಗಳಾದ ಕಿಂಕರರೆಂಬ ಭೂತಗಳ ಗಣವಿರುತ್ತದೆ. ನಿನ್ನ ಧನುಸ್ಸಿನ ಠೇಂಕಾರದ ಧ್ವನಿಯನ್ನು ಕೇಳಿ ಅದು ಮೇಘದಂತೆ ಗರ್ಜಿಸುವುದು.

ಅಯಂ ಹಿ ಸೂರ್ಯಸಂಕಾಶೋ ಜ್ವಲನಸ್ಯ ರಥೋತ್ತಮಃ ।
ಇಮೇ ಚ ದಿವಿಜಾಃ ಶ್ವೇತಾ ವೀರ್ಯವಂತೋ ಹಯೋತ್ತಮಾಃ ॥೩॥

ಇದು ಸೂರ್ಯನಂತೆ ಹೊಳೆಯುವ ಶ್ರೇಷ್ಠವಾದ ಅಗ್ನಿಯರಥ. ಈ ಸಾಮರ್ಥ್ಯೋಪೇತವಾದ ಶ್ವೇತಾಶ್ವಗಳು ಸ್ವರ್ಗಲೋಕದಲ್ಲಿ ಜನಿಸಿದವು.

ಮಾಯಾಮಯಃ ಕೃತೋ ಹ್ಯೇಷ ಧ್ವಜೋ ವಾನರಲಕ್ಷಣಃ ।
ಅಸಜ್ಜಮಾನೋ ವೃಕ್ಷೇಷು ಧೂಮರಾಶಿರಿವೋಚ್ಛ್ರಿತಃ ॥೪॥

ವಾನರ ಚಿಹ್ನೆಯಿಂದ ಕೂಡಿದ ಈ ಧ್ವಜವು ವಿಚಿತ್ರಶಕ್ತಿಯಿಂದ ಕೂಡಿದೆ. ಎತ್ತರವಾಗಿರುವ ಈ ಧ್ವಜವು ಧೂಮದ ರಾಶಿಯು ಹೇಗೆ ಮರಗಳಲ್ಲಿ ಸಿಲುಕಿಹಾಕಿಕೊಳ್ಳುವುದಿಲ್ಲವೋ ಅದರಂತೆ ಸಂಚಾರ ಮಾಡುವಾಗ ವೃಕ್ಷಗಳಲ್ಲಿ ಸಿಲುಕಿಕೊಳ್ಳುವುದಿಲ್ಲ.

ಬಹುವರ್ಣಂ ಹಿ ಲಕ್ಷ್ಯೇತ ಧ್ವಜಂ ವಾನರಲಕ್ಷಣಮ್ ।
ಧ್ವಜೋತ್ಕಟಂ ಹ್ಯನವಮಂ ಯುದ್ಧೇ ದ್ರಕ್ಷ್ಯಸಿ ವಿಷ್ಠಿತಮ್ ॥೫॥

ಈ ವಾನರಧ್ವಜವು ಅನೇಕ ಬಣ್ಣಗಳಿಂದ ಕೂಡಿರುವುದಾಗಿ ತೋರುತ್ತದೆ. ಈ ವಾನರಾಧಿಷ್ಠಿತವಾದ ಧ್ವಜವು ಯುದ್ಧಭೂಮಿಯಲ್ಲಿ ಉಳಿದೆಲ್ಲಾ ಧ್ವಜಗಳಿಗಿಂತ ಶ್ರೇಷ್ಠವಾಗಿ ಎದ್ದುಕಾಣುತ್ತದೆ.

ವೈಶಂಪಾಯನಃ

ಇತ್ಯುಕ್ತ್ವಾ ಽಽಲಿಂಗ್ಯ ಬೀಭತ್ಸುಂ ವಿಸೃಷ್ಟಃ ಪ್ರಯಯೌ ಮಯಃ ॥೬॥

ಅರ್ಜುನನನ್ನು ಕುರಿತು ಹೀಗೆ ಹೇಳಿದ ಮಯನು ಅರ್ಜುನನಿಂದ ಆಲಿಂಗಿಸಲ್ಪಟ್ಟು ಬೀಳ್ಕೊಟ್ಟು ಹೊರಟುಹೋದನು.

ತತಃ ಪ್ರವೇಶನಂ ಚಕ್ರೇ ತಸ್ಯಾಂ ರಾಜಾ ಯುಧಿಷ್ಠಿರಃ ।
ಅಯುತಂ ಭೋಜಯಾಮಾಸ ಬ್ರಾಹ್ಮಣಾನಾಂ ನರಾಧಿಪಃ ॥೭॥

ಪರಮಾನ್ನೇನ ಶುಚಿನಾ ಮೋದಕೈಶ್ಚ ಫಲೈಸ್ತಥಾ ।
ಕೃಸರೇಣ ಚ ಶುದ್ಧೇನ ಹವಿಷ್ಯೇಣ ಚ ಸರ್ವಶಃ ॥೮॥

ಭಕ್ಷ್ಯಪ್ರಕಾರೈರ್ವಿವಿಧೈರ್ಲೇಹ್ಯೈಶ್ಚಾಪಿ ತಥಾ ನೃಪಃ ।
ಚೋಷ್ಯೈಶ್ಚ ವಿವಿಧೈ ರಾಜನ್ ಪೇಯೈಶ್ಚ ಬಹುವಿಸ್ತರೈಃ ॥೯॥

ಎಲ್ಲೆರಾಜನೇ! ರಾಜನಾದ ಯುಧಿಷ್ಠಿರನು ಅನಂತರ ಆ ಸಭೆಯ ಪ್ರವೇಶೋತ್ಸವವನ್ನು ಮಾಡಿದನು. ರಾಜನಾದ ಅವನು ಹತ್ತುಸಾವಿರ ಬ್ರಾಹ್ಮಣರಿಗೆ ಪರಮಾನ್ನ, ಶುದ್ಧವಾದ ಮೋದಕಗಳು, ಫಲಗಳು, ಶುದ್ಧವಾದ ಹವಿಷ್ಯವಾದ ಧಾನ್ಯಗಳು ನಾನಾವಿಧವಾದ ಭಕ್ಷ್ಯಗಳು ಮತ್ತು ಲೇಹ್ಯಗಳು ಹಾಗೂ ವಿಧವಿಧವಾದ ಚೋಷ್ಯಗಳು ಮತ್ತು ಬಹುವಿಸ್ತಾರವಾದ ಪೇಯಗಳಿಂದ ಭೋಜನವನ್ನು ಮಾಡಿಸಿದನು.

ಅಹತೈಶ್ಚೈವ ವಾಸೋಭಿರ್ಧನೇನ ಚ ಸಹಸ್ರಶಃ ।
ತರ್ಪಯಾಮಾಸ ವಿಪ್ರೇಂದ್ರಾನ್ ನಾನಾದಿಗ್ಭ್ಯಃ ಸಮಾಗತಾನ್ ॥೧೦॥

ಅವನು ನಾನಾದಿಕ್ಕುಗಳಿಂದ ಬಂದಿದ್ದ ವಿಪ್ರಶ್ರೇಷ್ಠರನ್ನು ಉತ್ತಮವಾದ ಅಖಂಡಿತವಾದ ವಸ್ತ್ರಗಳಿಂದಲೂ ಸಹಸ್ರಸಂಖ್ಯೆಯ ದಕ್ಷಿಣೆಯಿಂದಲೂ ಸಂತೋಷಪಡಿಸಿದನು.

ದದೌ ತೇಭ್ಯಃ ಸಹಸ್ರಾಣಿ ಗವಾಂ ಪ್ರತ್ಯೇಕಶಃ ಪ್ರಭುಃ ।
ಪುಣ್ಯಾಹಘೋಷಸ್ತತ್ರಾಸೀದ್ ದಿವಃ ಸ್ಪೃಕ್ ಕೀರ್ತಿವರ್ಧನಃ ॥೧೧॥

ಪ್ರಭುವಾದ ಧರ್ಮರಾಜನು ಅವರಲ್ಲಿ ಒಬ್ಬಬ್ಬರಿಗೂ ಒಂದು ಸಹಸ್ರಗೋವುಗಳನ್ನು ದಾನಮಾಡಿದನು. ರಾಜನ ಕೀರ್ತಿಯನ್ನು ಹೆಚ್ಚಿಸುವ ಬ್ರಾಹ್ಮಣ ಪುಣ್ಯಾಹಘೋಷವು ಅಲ್ಲಿ ಮುಗಿಲನ್ನು ಮುಟ್ಟಿತು.

ವಾದಿತ್ರೈರ್ವಿವಿಧೈರ್ಗಂಧೈರ್ಮಾಲ್ಯೈರುಚ್ಚಾವಚೈರಪಿ ।
ಅಪೂಜಯತ್ ಕುರುಶ್ರೇಷ್ಠೋ ದೈವತಾನಿ ನಿವೇಶ್ಯ ಚ ॥೧೨॥

ಕುರುರಾಜನಾದ ಯುಧಿಷ್ಠಿರನು ವಿವಿಧವಾದ ವಾದ್ಯಘೋಷಗಳ ಜೊತೆಯಲ್ಲಿ ದೇವತಾಪ್ರತಿಷ್ಠೆಯನ್ನು ಮಾಡಿ ಅನೇಕ ವಿಧವಾದ ಶ್ರೇಷ್ಠವಾದ ಗಂಧಮಾಲ್ಯಗಳಿಂದ ಪೂಜಿಸಿದನು.

ತತ್ರ ಮಲ್ಲಾ ನಟಾ ಹಲ್ಲಾಃ ಸೂತಮಾಗಧವಂದಿನಃ ।
ಉಪತಸ್ಥುರ್ಮಹಾತ್ಮಾನಂ ಸಪ್ತರಾತ್ರಂ ಯುಧಿಷ್ಠಿರಮ್ ॥೧೩॥

ಆ ಸಮಯದಲ್ಲಿ ಮಲ್ಲರು, ನಟರು, ನಾನಾವಾದ್ಯಕುಶಲರು. ಸೂತಮಾಗಧಬಂದಿಗಳು, ಮಹಾತ್ಮನಾದ ಧರ್ಮರಾಜನನ್ನು ಏಳುದಿವಸಗಳಕಾಲ ಸೇವೆಮಾಡಿದರು.

ತಥಾ ಸ ಪೂತಾಂ ತಾಂ ಕೃತ್ವಾ ಭ್ರಾತೃಭಿಃ ಸಹ ಪಾಂಡವಃ ।
ತಸ್ಯಾಂ ಸಭಾಯಾಂ ರಮ್ಯಾಯಾಂ ರೇಮೇ ಶಕ್ರೋ ಯಥಾ ದಿವಿ ॥

ಆ ರೀತಿಯಲ್ಲಿ ಸಭೆಯನ್ನು ಪಾವನಗೊಳಿಸಿ ಧರ್ಮರಾಜನು ತನ್ನ ತಮ್ಮಂದಿರ ಜೊತೆಯಲ್ಲಿ ಆ ಸುಂದರವಾದ ಸಭೆಯನ್ನು ಪ್ರವೇಶಿಸಿ ದೇವೇಂದ್ರನು ಸ್ವರ್ಗದಲ್ಲಿ ಸುಖಿಸುವಂತೆ ಆನಂದಪಟ್ಟನು.

ಸಭಾಯಾಮೃಷಯಸ್ತಸ್ಯಾಂ ಪಾಂಡವೈಶ್ಚ ಸಹಾಸಿರೇ ।
ಆಸಾಂಚಕ್ರುರ್ನರೇಂದ್ರಾಶ್ಚ ನಾನಾದೇಶ್ಯಾಃ ಸಮಾಗತಾಃ ॥೧೫॥

ಆ ಸಭೆಯಲ್ಲಿ ಪಾಂಡವರ ಜೊತೆಯಲ್ಲಿ ಋಷಿಗಳೂ ಸಹ ಕುಳಿತಿದ್ದರು. ಅನೇಕ ದೇಶಗಳಿಂದ ಬಂದ ರಾಜಶ್ರೇಷ್ಠರೂ ಸಹ ಆ ಸಭೆಯಲ್ಲಿ ಕುಳಿತುಕೊಂಡರು.

ಅಸಿತೋ ದೇವಲಃ ಸತ್ಯಃ ಸುಮಾಲೀ ಚಾಪ್ಯಥಾಂಗಿರಾಃ ।
ಅರ್ವಾವಸುಃ ಸುಮಿತ್ರಶ್ಚ ಮೈತ್ರೇಯಃ ಶೌನಕೋ ಬಲೀ ॥೧೬॥

ಅಸಿತ, ದೇವಲ. ಸತ್ಯ, ಸುಮಾಲೀ, ಅಂಗಿರಸ, ಅರ್ವಾವಸು, ಸುಮಿತ್ರ, ಮೈತ್ರೇಯ, ಪ್ರಬಲರಾದ ಶೌನಕರು.

ಆತ್ರೇಯಃ ಕಣ್ವಜಠರೌ ಮೌದ್ಗಲ್ಯೋ ಹಸ್ತಿಕಾಶ್ಯಪೌ ।
ಬಕೋ ದಾಲ್ಭ್ಯಃ ಸ್ಥೂಲಶಿರಾಃ ಕೃಷ್ಣದ್ವೈಪಾಯನಃ ಶುಕಃ ।
ಸುಮಂತುರ್ಜೈಮಿನಿಃ ಪೈಲೋ ವೈಶಂಪಾಯನ ಏವ ಚ ॥೧೭॥

ಆತ್ರೇಯ, ಕಣ್ವ, ಜಠರ, ಮೌದ್ಗಲ್ಯ, ಹಸ್ತಿ, ಕಾಶ್ಯಪ, ದಲ್ಭರಪುತ್ರನಾದ ಬಕ, ಸ್ಥೂಲಶಿರ, ಕೃಷ್ಣದ್ವೈಪಾಯನ, ಶುಕ, ಸುಮಂತು, ಜೈಮಿನಿ, ಪೈಲ, ವೈಶಂಪಾಯನ.

ತಿತ್ತಿರಿರ್ಯಾಜ್ಞವಲ್ಕ್ಯಶ್ಚ ಸಂಯುಕ್ತೋ ರೋಮಹರ್ಷಣಃ ।
ಅಪ್ಸುಜಾತಶ್ಚ ಧೌಮ್ಯಶ್ಚ ಆಣಿಮಾಂಡವ್ಯಕೌಶಿಕೌ ॥೧೮॥

ತಿತ್ತಿರಿ, ಯಾಜ್ಞವಲ್ಕ್ಯ, ಸಂಯುಕ್ತ, ರೋಮಹರ್ಷಣ, ಅಪ್ಲುಜಾತ, ಧೌಮ್ಯ, ಆಣಿಮಾಂಡವ್ಯ, ಕೌಶಿಕ,

ದಾಮೋಷ್ಣೀಷಸ್ತ್ರಿಷವಣಃ ಪರ್ಣಾದೋ ಘಟಜಾನುಕಃ ।
ಮೌಂಜಾಯನೋ ವಾಯುಭಕ್ಷಃ ಪಾರಾಶರ್ಯಶ್ಚ ಹಾರಿತಃ ॥೧೯॥

ದಾಮೋಷ್ಣೀಷ, ಸ್ತ್ರಿಷವಣ, ಪರ್ಣಾದ, ಘಟಜಾನುಕ, ಮೌಂಜಾಯನ, ವಾಯುಭಕ್ಷ, ಪರಾಶರರ ಪುತ್ರನಾದ ಹಾರಿತ,

ಶೀಲವಾನಶನಿರ್ಧಾತಾ ಶೂನ್ಯಪಾಲಃ ಕೃತಶ್ರಮಃ ।
ಜಾತೂಕರ್ಣಃ ಶಿಖಾವಾಂಶ್ಚ ಪ್ರಲಂಬಃ ಪಾರಿಜಾತಕಃ ॥೨೦॥

ಶೀಲವಾನ್, ಅಶನಿ, ಧಾತಾ, ಶೂನ್ಯಪಾಲ, ಕೃತಶ್ರಮ, ಜಾತೂಕರ್ಣ, ಶಿಖಾವಾನ್, ಪ್ರಲಂಬ, (ಸುಬಲ) ಪಾರಿಜಾತಕ,

ಪರ್ವತಶ್ಚ ಮಹಾಭಾಗೋ ಮಾರ್ಕಂಡೇಯಸ್ತಥಾ ಮುನಿಃ ।
ಪವಿತ್ರಪಾಣಿಃ ಸಾವರ್ಣಿರ್ವಾಲ್ಮಕಿರ್ಗಾಲವಸ್ತಥಾ ॥೨೧॥

ಮಹಾನುಭಾವನಾದ ಪರ್ವತ, ಮಾರ್ಕಂಡೇಯ ಋಷಿ, ಪವಿತ್ರಪಾಣಿ, ಸಾವರ್ಣಿ, ವಾಲುಕಿ, ಗಾಲವ,

ಜಂಘಾಬಂಧಶ್ಚ ರೈಭ್ಯಶ್ಚ ಕೋಪವೇಗಸ್ತಥಾ ಭೃಗುಃ ।
ಪರಿಬಭ್ರುಶ್ಚ ಕೌಂಡಿನ್ಯೋ ಬಭ್ರುಮಾಲೀ ಸನಾತನಃ ॥೨೨॥

ಜಂಘಾಬಂಧ, ರೈಭ್ಯ, ಕೋಪವೇಗ, ಭೃಗು, ಪರಿಬಭ್ರ, ಕೌಂಡಿನ್ಯ, ಬಭ್ರುಮಾಲಿ, ಸನಾತನ,

ಕಕ್ಷೀವಾನೌಶಿಜಶ್ಚೈವ ನಾಚಿಕೇತೋऽಥ ಗೌತಮಃ ।
ಪೈಂಗಿರ್ವರಾಹಃ ಶುನಕಃ ಶಾಂಡಿಲ್ಯಶ್ಚ ಮಹಾತಪಾಃ ॥೨೩॥

ಉಶಿಜನ ಪುತ್ರನಾದ ಕಕ್ಷೀವಾನ್, ನಚಿಕೇತನ ಪುತ್ರನಾದ ಗೌತಮ, ಪಿಂಗಪುತ್ರನಾದ ವರಾಹ, ಶುನಕ, ಮಹಾತಪಸ್ವಿಯಾದ ಶಾಂಡಿಲ್ಯ.

ಕುರರೋ ವೇಣುಜಂಘಶ್ಚ ಕಲಾಪಃ ಕಠ ಏವ ಚ ।
ಶಾರ್ಙ್ಗರಸ್ತೈಲಕುಂಡ್ಯಶ್ಚ ಪರ್ಣವಲ್ಕಸ್ತಥೈವ ಚ ॥೨೪॥

ಕುರರ, ವೇಣುಜಂಘ, ಕಲಾಪ, ಕಠ, ಶಾರ್ಙ್ಗರ, ತೈಲಕುಂಡ್ಯ, ಪರ್ಣವಲ್ಕಲ,

ಮುನಯೋ ಧರ್ಮಸಹಿತಾ ಜಿತಾತ್ಮಾನೋ ಜಿತೇಂದ್ರಿಯಾಃ ।
ಏತೇ ಚಾನ್ಯೇ ಚ ಬಹವೋ ವೇದವೇದಾಂಗಪಾರಗಾಃ ॥೨೫॥

ಧರ್ಮಸಹಿತರಾದವರೂ ಜಿತಮನಸ್ಕರೂ ಜಿತೇಂದ್ರಿಯರೂ ಆದ ಈ ಎಲ್ಲಾ ಋಷಿಗಳೂ ಆ ಸಭೆಯಲ್ಲಿ ಆಸೀನರಾದರು. ಇವರೇ ಅಲ್ಲದೆ ವೇದವೇದಾಂಗಪಾರಂಗತರಾದ ಇನ್ನೂ ಅನೇಕ ಋಷಿಗಳು ಆ ಸಭೆಯಲ್ಲಿ ಆಸೀನರಾದರು.

ಉಪಾಸಿರೇ ಮಹಾತ್ಮಾನಃ ಸಭಾಯಾಮೃಷಿಸತ್ತಮಾಃ ।
ಕಥಯಂತಃ ಕಥಾಃ ಶುಭ್ರಾಃ ಶುಚಯೋ ಧರ್ಮವತ್ಸಲಾಃ ॥೨೬॥

ಧರ್ಮವತ್ಸಲರಾದ ಶುದ್ಧರಾದ ಮಹಾತ್ಮರಾದ ಋಷಿಶ್ರೇಷ್ಠರು ಆ ಸಭೆಯಲ್ಲಿ ಪವಿತ್ರವಾದ ಕಥೆಗಳನ್ನು ಹೇಳುತ್ತಾ ಧರ್ಮರಾಜನ ಸಮೀಪದಲ್ಲಿ ಕುಳಿತುಕೊಂಡರು.

ತಥೈವ ಕ್ಷತ್ರಿಯಶ್ರೇಷ್ಠಾ ಧರ್ಮರಾಜಮುಪಾಸಿರೇ ।
ಶ್ರೀಮಾಂಶ್ಚ ಸುಮಹಾತ್ಮಾ ಚ ಮುಂಜಕೇತುರ್ವಿವರ್ಧನಃ ।
ಸಂಗ್ರಾಮಜಯಮುಖ್ಯಾಶ್ಚಾಪ್ಯುಗ್ರಸೇನಶ್ಚ ಭಾರತ ॥೨೭॥

ಎಲೈ ಭಾರತನೇ! ಹಾಗೆಯೇ ಆ ಸಭೆಯಲ್ಲಿ ಕ್ಷತ್ರಿಯಶ್ರೇಷ್ಠರೂ ಕೂಡ ಧರ್ಮರಾಜನನ್ನು ಉಪಾಸನೆ ಮಾಡಿದರು. ಕಾಂತಿಯುಕ್ತನೂ ಮಹಾತ್ಮನೂ ಆದ ಮುಂಜಕೇತು, ವಿವರ್ಧನ, ಸಂಗ್ರಾಮಜಯ, ಮೊದಲಾದವರು ಮತ್ತು ಉಗ್ರಸೇನ,

ಕ್ಷೇಮಶ್ಚ ವಸುದಾನಶ್ಚ ವೈದೇಹಶ್ಚ ಕೃತಕ್ಷಣಃ ।
ಕಕ್ಷಸೇನಃ ಕ್ಷಿತಿಪತಿಃ ಕ್ಷೇಮಕಶ್ಚಾಪರಾಜಿತಃ ॥೨೮॥

ಕ್ಷೇಮ, ವಸುದಾನ, ಅವಕಾಶವನ್ನು ಮಾಡಿಕೊಂಡು ಬಂದ ವಿದೇಹರಾಜ, ಕಕ್ಷಸೇನರಾಜ, ಯುದ್ಧದಲ್ಲಿ ಸೋಲದ ಕ್ಷೇಮಕರಾಜ.

ಕಾಂಭೋಜರಾಜಃ ಕಮಠಃ ಕಂಪನಶ್ಚ ಮಹಾಬಲಃ ।
ಸತತಂ ಕಂಪಯಾಮಾಸ ಯವನಾನೇಕ ಏವ ಯಃ ॥೨೯॥

ಯಥಾऽಸುರಾನ್ ಕಾಲಿಕೇಯಾನ್ ದೇವೋ ವಜ್ರಧರಸ್ತಥಾ ।
ಬಲಪೌರುಷಸಂಪನ್ನಾನ್ ಕೃತಾಸ್ತ್ರಾನಮಿತೌಜಸಃ ॥೩೦॥

ಕಾಂಬೋಜರಾಜ, ಕಮಠ, ಮತ್ತು ಯವನರನ್ನು ಸತತವಾಗಿ ನಡುಗಿಸಿದ ಮಹಾಬಲಿಷ್ಠನಾದ ಕಂಪನ. ಮಹಾಪರಾಕ್ರಮಶಾಲಿಗಳಾದ ಅಸ್ತ್ರವಿದ್ಯೆಯನ್ನು ಬಲ್ಲ ಬಲಿಷ್ಠರಾದ ಪೌರುಷಸಂಪನ್ನರಾದ ಅಸುರರನ್ನು ಮತ್ತು ಕಾಲಿಕೇಯರನ್ನು ವಜ್ರಧರನಾದ ದೇವೇಂದ್ರನು ನಡುಗಿಸಿದಂತೆ ಕಂಪನನು ಯವನರನ್ನು ನಡುಗಿಸಿದ್ದವನು.

ಜಟಾಸುರೋ ಭದ್ರಕಾಂತಶ್ಚ ರಾಜಾ
ಕುಣಿಃ ಪುಲಿಂದಶ್ಚ ಕಿರಾತರಾಜಃ ।
ತಥಾऽಂಗವಂಗೌ ಸಹ ಪುಂಡ್ರಕೇಣ
ಪಾಂಡ್ಯೋऽಥ ರಾಜಾ ಸಹ ಕೇರಳೇನ ॥೩೧॥

ಜಟಾಸುರ, ಭದ್ರಕಾಂತರಾಜ, ಕುಣಿ, ಕಿರಾತರಾಜನಾದ ಪುಲಿಂದ, ಅಂಗ, ವಂಗ, ಪೌಂಡ್ರಕರಾಜನಾದ ಪಾಂಡ್ಯ ಮತ್ತು ಕೇರಳರಾಜರು,

ಕಿರಾತರಾಜಃ ಸುಮನಾಃ ಯವನಾಧಿಪತಿಸ್ತಥಾ ।
ಪಾಂಚಾಲಶ್ಚ ವಿರಾಟಶ್ಚ ದ್ರುಮಶಲ್ಯಃ ಪೃಥುಶ್ರವಾಃ ॥೩೨॥

ಕಿರಾತರಾಜನಾದ ಸುಮನಸ್, ಯವನಾಧಿಪತಿ, ಪಾಂಚಾಲ, ವಿರಾಟ, ದ್ರುಮಶಲ್ಯ , ಪೃಥುಶ್ರವ,

ಸುಶರ್ಮಾ ಚೇಕಿತಾನಶ್ಚ ಮುಖ್ಯಸೇನಶ್ಚ ಭಾರತ ।
ಸುಧರ್ಮಾ ಚಾನಿರುದ್ಧಶ್ಚ ಶ್ರುತಾಯುಶ್ಚ ಮಹಾರಥಃ ॥೩೩॥

ಸುಶರ್ಮಾ, ಚೇಕಿತಾನ, ಮುಖ್ಯಸೇನ, ಸುಧರ್ಮ, ಅನಿರುದ್ಧ ಮಹಾರಥನಾದ ಶ್ರುತಾಯು,

ಅನೂಪರಾಜೋ ದುರ್ಧರ್ಷಃ ಕ್ಷೇಮಜಿಚ್ಚ ಸುದಕ್ಷಿಣಃ ।
ಶಿಶುಪಾಲೋ ದಶಗ್ರೀವಃ ಕರೂಶಾಧಿಪತಿಸ್ತಥಾ ॥೩೪॥

ಸಮುದ್ರತೀರದ ರಾಜನಾದ ದುರ್ಧರ್ಷ, ಕ್ಷೇಮಜಿತ್, ಸುದಕ್ಷಿಣ, ಶಿಶುಪಾಲ, ದಶಗ್ರೀವ, ಕರೂಶಾಧಿಪತಿಯಾದ ದಂತವಕ್ರ,

ವೃಷ್ಣೀನಾಂ ಚೈವ ದುರ್ಧರ್ಷಾಃ ಕುಮಾರಾ ದೇವರೂಪಿಣಃ ।
ಆಹುಕೋ ವಿಪೃಥುಶ್ಚೈವ ಗದಃ ಸಾರಣ ಏವ ಚ ।
ಅಕ್ರೂರಃ ಕೃತವರ್ಮಾ ಚ ಸಾತ್ಯಕಿಶ್ಚ ಶಿನೇಃ ಸುತಃ ॥೩೫॥

ದೇವತೆಗಳಂತೆ ಕಂಗೊಳಿಸುವ ಯುದ್ಧದಲ್ಲಿ ದುರ್ಧರಾದ ವೃಷ್ಣಿಕುಮಾರರು, ಆಹುಕ, ವಿಪೃಥು, ಗದ, ಸಾರಣ, ಅಕ್ರೂರ, ಕೃತವರ್ಮ, ಶಿನಿಪುತ್ರನಾದ ಸಾತ್ಯಕಿ,

ಭೀಷ್ಮಕೋ ಹೃದಿಕಶ್ಚೈವ ದ್ಯುಮತ್ಸೇನಶ್ಚ ವೀರ್ಯವಾನ್ ।
ಕೇಕಯಾಶ್ಚ ಮಹೇಷ್ವಾಸಾ ಯಜ್ಞಸೇನಶ್ಚ ಸೋಮಕಿಃ ॥೩೬॥

ಭೀಷ್ಮಕ, ಹೃದಿಕ, ಪರಾಕ್ರಮಶಾಲಿಯಾದ ದ್ಯುಮತ್ಸೇನ, ಧನುವಿದ್ಯೆಯಲ್ಲಿ ಪಾರಂಗತರಾದ ಕೇಕಯದೇಶದ ರಾಜರು, ಸೋಮಕನ ಮಗನಾದ ಯಜ್ಞಸೇನ.

ಏತೇ ಚಾನ್ಯೇ ಚ ಬಹವಃ ಕ್ಷತ್ರಿಯಾ ಮುಖ್ಯಸಮ್ಮತಾಃ ।
ಉಪಾಸತೇ ಸಭಾಯಾಂ ಸ್ಮ ಕುಂತೀಪುತ್ರಂ ಯುಧಿಷ್ಠಿರಮ್ ॥೩೭॥

ಇವರೂ ಎಲ್ಲಾ ಕ್ಷತ್ರಿಯರೂ ಮತ್ತು ಇನ್ನು ಅನೇಕ ಕ್ಷತ್ರಿಯಶ್ರೇಷ್ಠರೂ ಆ ಸಭೆಯಲ್ಲಿ ಕುಂತಿಪುತ್ರನಾದ ಯುಧಿಷ್ಠರನಿಗೆ ಸೇವೆಯನ್ನು ಸಲ್ಲಿಸಿದರು.

ಅರ್ಜುನಂ ತೂಪಸಂಗೃಹ್ಯ ರಾಜಪುತ್ರಾ ಯಶಸ್ವಿನಃ ।
ಶಿಕ್ಷಂತೇ ಸ್ಮ ಧನುರ್ವೇದಂ ರೌರವಾಜಿನವಾಸಸಃ ॥೩೮॥

ಅಲ್ಲಿ ಕೀರ್ತಿಮಂತರಾದ ರಾಜಕುಮಾರರು (ಕೌರವ ಎಂಬ ಜಿಂಕೆ ವಿಶೇಷ ಅದರ ಚರ್ಮವನ್ನು) ರೌರವಾಜಿನವನ್ನು ಧರಿಸಿ ಅರ್ಜುನನ್ನು ಸಮೀಪಿಸಿ ಅವನನ್ನು ಗುರುವೆಂದು ಸ್ವೀಕರಿಸಿ ಅವನಿಂದ ಧನುರ್ವಿದ್ಯೆಯನ್ನು ಕಲಿತರು.

ತತ್ರೈವ ಶಿಕ್ಷಿತಾಃ ಸರ್ವೇ ವೃಷ್ಣಿಪುತ್ರಾ ಯಶಸ್ವಿನಃ ।
ಪ್ರದ್ಯುಮ್ನೋ ರೌಕ್ಮಿಣೇಯಶ್ಚ ಯುಯುಧಾನಶ್ಚ ಸಾತ್ಯಕಿಃ ॥೩೯॥

ಚಾಣೂರೋ ದೇವರಾತಶ್ಚ ಭೋಜೋ ಭೈಮರಥೋऽಪಿ ಚ ।
ಶತಾಯುಧಶ್ಚ ಕಾಳಿಂಗೋ ಯಜ್ಞಸೇನಶ್ಚ ಮಾಗಧಃ ॥೪೦॥

ಏತೇ ಚಾನ್ಯೇ ಚ ಬಹವೋ ರಾಜಪುತ್ರಾ ಮಹಾಬಲಾಃ ।
ಧನಂಜಯಮುಪಾತಿಷ್ಠನ್ ಧನುರ್ವೇದಚಿಕೀರ್ಷವಃ ॥೪೧॥

ಕೀರ್ತಿವಂತರಾದ ಎಲ್ಲಾ ವೃಷ್ಣಿಕುಮಾರರೂ ಅಲ್ಲಿಯೇ ಧರ್ನುವಿದ್ಯೆಯನ್ನು ಕಲಿತರು. ರುಕ್ಮಿಣಿಯ ಮಗನಾದ ಪ್ರದ್ಯುಮ್ನ, ಯುಯುಧಾನ, ಸಾತ್ಯಕಿ, ಚಾಣೂರ, ದೇವರಾತ, ಭೋಜ, ಭೀಮರಥ, ಕಳಿಂಗಾಧಿಪತಿಯಾದ ಶತಾಯುಧ, ಮಗಧಾಧಿಪತಿಯಾದ ಯಜ್ಞಸೇನ, ಇವರೂ ಮತ್ತು ಇನ್ನು ಅನೇಕರಾದ ರಾಜಪುತ್ರರೂ ಧರ್ನುವೇದವನ್ನು ಕಲಿಯುವ ಆಸೆಯಿಂದ ಅರ್ಜುನನ ಉಪಸತ್ತಿಯನ್ನು ಮಾಡಿದರು.

ಧನಂಜಯಸಖಾ ತತ್ರ ನಿತ್ಯಮಾಸ್ತೇ ಸ ತುಂಬುರುಃ ।
ಉಪಾಸತೇ ತಮಾಸೀನಂ ಗಂಧರ್ವಾಃ ಸಪ್ತವಿಂಶತಿಃ ॥೪೨॥

ತುಂಬುರುವು ಆ ಸಭೆಯಲ್ಲಿ ನಿತ್ಯವೂ ಅರ್ಜುನನ ಸ್ನೇಹಿತನಾಗಿ ಇರುತ್ತಿದ್ದನು. ಇಪ್ಪತ್ತೇಳು ಮಂದಿ ಗಂಧರ್ವರು ಸಭೆಯಲ್ಲಿ ಆಸೀನನಾದ ಅರ್ಜುನನಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು.

ಚಿತ್ರಸೇನಃ ಸಹಾಮಾತ್ಯೋ ಗಂಧರ್ವಾಪ್ಸರಸಾಂ ಗಣೈಃ ।
ತಸ್ಯಾಂ ಸಭಾಯಾಮಾಸ್ತೇ ಸ್ಮ ಬಹುಭಿಃ ಪರಿವಾರಿತಃ ॥೪೩॥

ಚಿತ್ರಸೇನನೆಂಬ ಗಂಧರ್ವರಾಜನು ಗಂಧರ್ವರ ಮತ್ತು ಅಪ್ಸರೆಯರ ಅನೇಕ ಗಣಗಳಿಂದ ಪರಿವಾರಿತನಾಗಿ ತನ್ನ ಮಂತ್ರಿಯ ಜೊತೆಯಲ್ಲಿ ಆ ಸಭೆಯಲ್ಲಿ ಯಾವಾಗಲೂ ಇರುತ್ತಿದ್ದನು.

ಗೀತವಾದಿತ್ರಕುಶಲಾಃ ಶಮ್ಯಾತಾಳವಿಶಾರದಾಃ ।
ಪ್ರಮಾಣೇ ಚ ಲಯೇ ಸ್ಥಾನೇ ಕಿನ್ನರಾಶ್ಚ ಕೃತಶ್ರಮಾಃ ॥೪೪॥

ಗೀತಾವಾದ್ಯಗಳಲ್ಲಿ ಕುಶಲರಾದ ಅನೇಕ ತಾಳ ಪ್ರಮಾಣಗಳಲ್ಲಿಯೂ ಲಯದಲ್ಲಿಯೂ, ಸ್ವರಸ್ಥಾನದಲ್ಲಿಯೂ, ಸ್ವರದಸ್ಥಾಯಿಯಲ್ಲಿಯೂ, ಪರಿಶ್ರಮವನ್ನು ಪಟ್ಟು ವಿಶಾರದರಾದ ಕಿನ್ನರರು, ಆ ಸಭೆಯಲ್ಲಿ ಇದ್ದರು.

ತೇ ಚೋದಿತಾಸ್ತುಂಬುರುಣಾ ಗಂಧರ್ವಾಃ ಕಿನ್ನರೈಃ ಸಹ ।
ದಿವ್ಯತಾನೇಷು ಗಾಯಂತಿ ಗಾಥಾ ದಿವ್ಯಾಶ್ಚ ಭಾರತ ॥೪೫॥

ಎಲೈ ಭಾರತನೇ! ತುಂಬುರುವಿನಿಂದ ಪ್ರೇರಿಸಲ್ಪಟ್ಟವರಾಗಿ ಆ ಗಂಧರ್ವರು ಕಿನ್ನರರ ಜೊತೆಯಲ್ಲಿ ಸೇರಿ ದಿವ್ಯವಾದ ತಾನಗಳಲ್ಲಿ ದಿವ್ಯವಾದ ಗೀತೆಗಳನ್ನು ಹಾಡುತ್ತಿದ್ದರು.

ಶಮ್ಯಾತಾಳೇಷು ಕುಶಲಾಃ ಗೀತವಾದ್ಯವಿಶಾರದಾಃ ।
ಪಾಂಡವೇಯಾನೃಷೀಂಶ್ಚೈವ ರಮಯಂತ ಉಪಾಸತೇ ॥೪೬॥

ಅವರು ಗೀತವಾದ್ಯಗಳಲ್ಲಿ ವಿಶಾರದರಾಗಿ, ವಿವಿಧತಾಳಪ್ರಭೇದಗಳಲ್ಲಿ ಕುಶಲರಾಗಿ, ಪಾಂಡವರನ್ನೂ ಮತ್ತು ಋಷಿಗಳನ್ನೂ ಸಂತೋಷ ಪಡಿಸುತ್ತಾ ಸಭೆಯಲ್ಲಿ ತಮ್ಮ ಸೇವೆಯನ್ನು ಅರ್ಪಿಸಿದರು.

ತಸ್ಯಾಂ ಸಭಾಯಾಮೃಷಯೋ ರಾಜಾನಶ್ಚ ಪೃಥಗ್ವಿಧಾಃ ।
ದಿವೀವ ದೇವಾ ದೇವೇಶಂ ಯುಧಿಷ್ಠಿರಮುಪಾಸತೇ ॥೪೭॥

ಆ ಸಭೆಯಲ್ಲಿ ಅನೇಕ ವಿಧವಾದ ಋಷಿಗಳು ಮತ್ತು ರಾಜರುಗಳು ಸ್ವರ್ಗದಲ್ಲಿ ದೇವತೆಗಳು ದೇವೇಂದ್ರನನ್ನು ಸತ್ಕರಿಸಿದಂತೆ ಯುಧಿಷ್ಠರನ ಸುತ್ತ ನೆರೆದು ಅವನನ್ನು ಸತ್ಕರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಚತುರ್ಥೋಽಧ್ಯಾಯಃ ॥
॥ ಮಂತ್ರಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಐದನೆಯ ಅಧ್ಯಾಯ

(ಸಭೆಗೆ ನಾರದರ ಆಗಮನ, ಯುಧಿಷ್ಠಿರನ ಜೊತೆಯಲ್ಲಿ ಕುಶಲ ಪ್ರಶ್ನೆಯನ್ನು ಮಾಡುವ ನೆಪದಿಂದ ಅವನಿಗೆ ರಾಜನೀತಿಯ ಉಪದೇಶ)

ವೈಶಂಪಾಯನಃ

ಅಥೋಪವಿಷ್ಟೇಷ್ವೃಷಿಷು ಪಾರ್ಥಿವೇಷು ಚ ಭಾರತ ।
ಮಹತ್ಸು ಚೋಪವಿಷ್ಟೇಷು ಗಂಧರ್ವೇಷು ಚ ಸರ್ವಶಃ ॥೧॥

ಭರತವಂಶೋತ್ಪನ್ನನಾದ ಜನಮೇಜಯನೇ! ಅನಂತರ ಆ ಸಭೆಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಋಷಿಗಳು, ರಾಜರು ಮತ್ತು ಮಹಾತ್ಮರಾದ ಗಂಧರ್ವರು ಕುಳಿತುಕೊಂಡಿರಲು (ಅಲ್ಲಿಗೆ ನಾರದರು ಬಂದರು.)

ವೇದೋಪನಿಷದಾಂ ವೇತ್ತಾ ಸುರಾಸುರಗಣಾರ್ಚಿತಃ ।
ಇತಿಹಾಸಪುರಾಣಜ್ಞಃ ಕ್ರಿಯಾಕಲ್ಪವಿಶೇಷವಿತ್ ॥೨॥

ಸ್ತುತಿಸ್ತೋಮಗ್ರಹಸ್ತೋಭಪದಕ್ರಮವಿಭಾಗವಿತ್ ।
ನ್ಯಾಯವಿದ್ ಧರ್ಮತತ್ತ್ವಜ್ಞಃ ಷಡಂಗವಿದನುತ್ತಮಃ ॥೩॥

ಐಕ್ಯಸಂಯೋಗನಾನಾತ್ವಸಮವಾಯವಿಶಾರದಃ ।
ಶಿಕ್ಷಾಕ್ಷರವಿಶೇಷಜ್ಞಃ ಪುರಾಕಲ್ಪವಿಶೇಷವಿತ್ ॥೪॥

ವಕ್ತಾ ಪ್ರಗಲ್ಭೋ ಮೇಧಾವೀ ಸ್ಮೃತಿಮಾನ್ ನಯವಿತ್ ಕವಿಃ ।
ಪರಾಪರವಿಭಾಗಜ್ಞಃ ಪ್ರಮಾಣೇ ಕೃತನಿಶ್ಚಯಃ ॥೫॥

ಪಂಚಾವಯವಯುಕ್ತಸ್ಯ ವಾಕ್ಯಸ್ಯ ಗುಣದೋಷವಿತ್ ।
ಉತ್ತರೋತ್ತರವಕ್ತಾ ಚ ಬ್ರುವತೋಽಪಿ ಬೃಹಸ್ಪತೇಃ ॥೬॥

ಧರ್ಮಕಾಮಾರ್ಥಮೋಕ್ಷೇಷು ಯಥಾವತ್ ಕೃತನಿಶ್ಚಯಃ ।
ವಿಭುಶ್ಚೈವ ಚ ಕೋಶಸ್ಯ ಅನ್ವಿತಸ್ಯ ಮಹಾಮತಿಃ ॥೭॥

ಪ್ರತ್ಯಕ್ಷದರ್ಶೀ ಸರ್ವಸ್ಯ ತಿರ್ಯಗೂರ್ಧ್ವಮಧಸ್ತಥಾ ।
ಸಾಂಖ್ಯಯೋಗವಿಧಾನಜ್ಞೋ ನಿರ್ವಿವಿಕ್ಷುರುದಾರಧೀಃ ॥೮॥

ಸಂಧಿವಿಗ್ರಹತತ್ತ್ವಜ್ಞೋ ಯಾನಾಸನವಿಭಾಗವಿತ್ ।
ಷಾಡ್ಗುಣ್ಯವಿಧಿಯುಕ್ತಶ್ಚ ಅರ್ಥಶಾಸ್ತ್ರವಿಶಾರದಃ ॥
ನೃತ್ತಗಾಂಧರ್ವವೇದೀ ಚ ಸರ್ವಸ್ಯಾಪ್ರತಿಮಸ್ತಥಾ ॥೯॥

ಏತೈಶ್ಚಾನ್ಯೈಶ್ಚ ಬಹುಭಿರ್ಯುಕ್ತೋ ಗುಣಗಣೈರ್ಮುನಿಃ ।
ಲೋಕಾನನುಚರನ್ ಸರ್ವಾನ್ ಆಗಮತ್ ತಾಂ ಸಭಾಮೃಷಿಃ ॥೧೦॥

ವೇದ ಮತ್ತು ಉಪನಿಷತ್ತುಗಳನ್ನು ತಿಳಿದವರು; ದೇವತೆಗಳ ಮತ್ತು ಅಸುರರ ಸಮೂಹಗಳಿಂದ ಪೂಜಿಸಲ್ಪಡುವವರು. ಇತಿಹಾಸ ಪುರಾಣಗಳನ್ನು ತಿಳಿದವರು. ಕ್ರಿಯೆಗಳನ್ನು ಮತ್ತು ಕಲ್ಪೋಕ್ತವಿಧಾನಗಳನ್ನು ತಿಳಿದವರು. ಯಜ್ಞಕ್ಕೆ ಸಂಬಂಧಿಸಿದ ಸ್ತುತಿಸ್ತೋಮ ಮತ್ತು ಗ್ರಹಗಳನ್ನು ತಿಳಿದವರು. ವೇದಗಳಿಗೆ ಸಂಬಂಧಿಸಿದ ಸ್ತೋಭಾಕ್ಷರಗಳು ಪದ ಮತ್ತು ಕ್ರಮಗಳ ವಿಭಾಗಗಳನ್ನು ತಿಳಿದವರು. ವೇದಾಂಗವಾದ ಶಿಕ್ಷಾಶಾಸ್ತ್ರಕ್ಕೆ ಅನುಗುಣವಾಗಿ ಅಕ್ಷರಗಳ ಸ್ವರೂಪವನ್ನು ತಿಳಿದವರು. ಪುರಾಣಗಳನ್ನು ವಿಶೇಷವಾಗಿ ಅಧ್ಯಯನಮಾಡಿದವರು. ನ್ಯಾಯಗಳನ್ನು ಬಲ್ಲವರು. ಧರ್ಮತತ್ತ್ವಗಳನ್ನು ಅರಿತವರು. ವೇದದ ಆರು ಅಂಗವಿದ್ಯೆಗಳಲ್ಲಿಯೂ ಶ್ರೇಷ್ಠವಾದ ಪರಿಣತಿಯನ್ನು ಪಡೆದವರು, ಭೇದ, ಅಭೇದ, ಸಂಯೋಗ, ಸಮವಾಯ ಮೊದಲಾದ ಪರಿಕಲ್ಪಗಳನ್ನು ತಿಳಿದವರಲ್ಲಿ ವಿಶಾರದರು, ವಾಗ್ಮಿಗಳು ಪ್ರತಿಭಾನ್ವಿತರು, ಮೇಧಾವಿಗಳು, ಸ್ಮರಣಶಕ್ತಿಯುಳ್ಳವರು, ನೀತಿಶಾಸ್ತ್ರವನ್ನು ಬಲ್ಲವರು, ಕವಿಗಳು, ಉಚ್ಚನೀಚವಸ್ತುಗಳ ವಿಭಾಗಗಳನ್ನು ತಿಳಿದವರು. ಪ್ರಮಾಣಶಾಸ್ತ್ರವನ್ನು ಚನ್ನಾಗಿ ಅರಿತವರು, ಪಂಚಾವಯವಗಳುಳ್ಳ ಅನುಮಾನಪ್ರಯೋಗದ ಗುಣದೋಷಗಳನ್ನು ತಿಳಿದವರು. ಬೃಹಸ್ಪತಿಯ ಜೊತೆಯಲ್ಲಿ ಮಾತನಾಡಿದರೂ ಅವನ ಮಾತಿಗೆ ಮರು ಉತ್ತರವನ್ನು ಕೊಡುತ್ತಾ ಮತ್ತೆ ಮತ್ತೆ ವಾದವಾಡುವವರು. ಧರ್ಮ, ಅರ್ಥ ,ಕಾಮ, ಮೋಕ್ಷಗಳ ಯಥಾವಸ್ಥಿತವಾದ ಜ್ಞಾನವುಳ್ಳವರು, ಶಬ್ದಕೋಶಗಳನ್ನು ತಿಳಿದವರು. ಶಬ್ದಗಳ ಅನ್ವಯಪ್ರಕಾರದಲ್ಲಿ ಮಹಾಬುದ್ಧಿಯುಳ್ಳವರು, ಊರ್ಧ್ವಲೋಕಗಳಲ್ಲಿ ಅಧೋಲೋಕಗಳಲ್ಲಿ ಮತ್ತು ಭೂಲೋಕದಲ್ಲಿ ನಡೆಯುವ ಎಲ್ಲಾ ವಿಷಯವನ್ನು ಪ್ರತ್ಯಕ್ಷವಾಗಿ ನೋಡುವವರು. ಸಾಂಖ್ಯಶಾಸ್ತ್ರವನ್ನು, ಯೋಗಶಾಸ್ತ್ರವನ್ನು ಬಲ್ಲವರು. ಉದಾರವಾದ ಬುದ್ಧಿಯುಳ್ಳವರು. ತಮ್ಮ ಗುಣವನ್ನು ತೋರಿಸಿಕೊಳ್ಳದವರು. ರಾಜರಿಗೆ ಬೇಕಾದ ಸಂಧಿ,ಮತ್ತು ಯುದ್ಧಗಳ ತತ್ವವನ್ನು ತಿಳಿದವರು. ಯುದ್ಧಕ್ಕಾಗಿ ಪ್ರಯಾಣ

ಮಾಡುವ ವಿಷಯವನ್ನು ಮತ್ತು ಶತ್ರುರಾಜರ ರಾಜ್ಯದ ಸುತ್ತಲೂ ಬೀಡು ಬಿಡುವ ವಿಷಯವನ್ನು ಚೆನ್ನಾಗಿ ತಿಳಿದವರು ರಾಜನೀತಿಗೆ ಬೇಕಾದ ಆರು ಗುಣಗಳ ವಿಧಾನವನ್ನು ಚೆನ್ನಾಗಿ ಬಲ್ಲವರು. ಅರ್ಥಶಾಸ್ತ್ರವನ್ನು ತಿಳಿದವರು. ನೃತ್ಯವನ್ನು ಗಾನವನ್ನು ತಿಳಿದವರು ಎಲ್ಲಾ ವಿಷಯಗಳಲ್ಲಿಯೂ ದೃಷ್ಟಾಂತರಹಿತರಾದವರು. ಈ ಗುಣಗಳಿಂದ ಮತ್ತು ಇನ್ನೂ ಅನೇಕ ಗುಣಗಣಗಳಿಂದ ಸಂಪನ್ನರಾದ ನಾರದಮಹರ್ಷಿಗಳು ಎಲ್ಲಾ ಲೋಕಗಳನ್ನು ಸಂಚರಿಸುತ್ತಾ ಆ ಧರ್ಮರಾಜನ ಸಭೆಗೆ ಬಂದರು.

ನಾರದಃ ಸುಮಹಾತೇಜಾ ಋಷಿಭಿಃ ಸಹಿತಸ್ತದಾ ।
ಪಾರಿಜಾತೇನ ರಾಜೇಂದ್ರ ರೈವತೇನ ಚ ಧೀಮತಾ ॥೧೦॥

ಸುಮುಖೇನ ಚ ಸೌಮ್ಯೇನ ದೇವರ್ಷಿರಮಿತದ್ಯುತಿಃ ।
ಸಭಾಸ್ಥಾನ್ ಪಾಂಡವಾನ್ ದ್ರಷ್ಟುಂ ಪ್ರೀಯಮಾಣೋ ಮನೋಜವಃ ॥

ಎಲೈ ರಾಜೇಂದ್ರನೇ! ಅಮಿತಕಾಂತಿಯುಳ್ಳವರೂ ಮಹಾತೇಜಸ್ವಿಗಳೂ ದೇವರ್ಷಿಗಳೂ ಆದ ನಾರದರು ಸಭೆಯಲ್ಲಿದ್ದ ಪಾಂಡವರನ್ನು ನೋಡಿ ಸಂತೋಷಪಡಲು ಬಯಸಿ ಮನೋಜವವನ್ನು ಹೊಂದಿದ್ದ ಅವರು ಪಾರಿಜಾತ, ಮೇಧಾವಿಯಾದ ರೈವತ, ಸುಮುಖ, ಸೌಮ್ಯ , ಮೊದಲಾದ ಋಷಿಗಳ ಸಹಿತವಾಗಿ ಅಲ್ಲಿಗೆ ಬಂದರು.

ತಮಾಗತಮೃಷಿಂ ದೃಷ್ಟ್ವಾ ನಾರದಂ ಸರ್ವಧರ್ಮವಿತ್ ।
ಸಹಸಾ ಪಾಂಡವಶ್ರೇಷ್ಠಃ ಪ್ರತ್ಯುತ್ಥಾಯಾನುಜೈಃ ಸಹ ॥೧೨॥

ಅಭ್ಯವಾದಯತ ಪ್ರೀತ್ಯಾ ವಿನಯಾವನತಸ್ತದಾ ।
ಜಯಾಶೀರ್ವಚನೇನಾಥ ಧರ್ಮರಾಜಾನಮರ್ಚಯತ್ ॥೧೩॥

ಪ್ರಾಪ್ತರಾದ ನಾರದರನ್ನು ನೋಡಿ ಸರ್ವಧರ್ಮಜ್ಞನಾದ ಪಾಂಡವಶ್ರೇಷ್ಠನಾದ ಧರ್ಮರಾಜನು ತನ್ನ ಸಹೋದರರ ಜೊತೆಯಲ್ಲಿ ಶೀಘ್ರವಾಗಿ ಎದ್ದುನಿಂತು ಅವರಿಗೆ ನಮಸ್ಕಾರವನ್ನು ಮಾಡಿ, ಸಂತೋಷದಿಂದ ಕೂಡಿದವನಾಗಿ ವಿನಯದಿಂದ ತಲೆಯನ್ನು ಬಾಗಿಸಿ ನಿಲ್ಲಲು ನಾರದರು ಅವನನ್ನು ಜಯಶಬ್ದಗಳಿಂದಲೂ, ಆಶೀರ್ವಾದಗಳಿಂದಲೂ ಸತ್ಕರಿಸಿದರು.

ತದರ್ಹಮಾಸನಂ ತಸ್ಮೈ ಸಂಪ್ರದಾಯ ಯಥಾವಿಧಿ ।
ಅರ್ಚಯಾಮಾಸ ರತ್ನೈಶ್ಚ ಸರ್ವಕಾಮೈಶ್ಚ ಪಾರ್ಥಿವಃ ॥೧೪॥

ಧರ್ಮರಾಜನು ಅವರಿಗೆ ಯೋಗ್ಯವಾದ ಆಸನವನ್ನು ನೀಡಿ ವಿಧಿಪೂರ್ವಕವಾಗಿ ಸತ್ಕಾರವನ್ನು ಮಾಡಿ ರತ್ನಗಳಿಂದಲೂ ಮತ್ತು ಅವರಿಗೆ ಅಭೀಷ್ಟವಾದ ಎಲ್ಲಾ ವಸ್ತುಗಳಿಂದಲೂ ಅವರನ್ನು ಸಂತೋಷಪಡಿಸಿದನು.

ತುತೋಷ ಚ ಯಥಾವತ್ ಸ ಪೂಜಾಂ ಪ್ರಾಪ್ಯ ಯುಧಿಷ್ಠಿರಾತ್।
ಸೋಽರ್ಚಿತಃ ಪಾಂಡವೈಃ ಸರ್ವೈರ್ಮಹರ್ಷಿರ್ವೇದಪಾರಗಃ ।
ಧರ್ಮಕಾಮಾರ್ಥಸಂಯುಕ್ತಂ ಪಪ್ರಚ್ಛೇದಂ ಯುಧಿಷ್ಠಿರಮ್ ॥೧೫॥

ಧರ್ಮರಾಜನಿಂದ ವಿಧಿವತ್ತಾಗಿ ಪೂಜೆಯನ್ನು ಸ್ವೀಕರಿಸಿದ ನಾರದರು ಸಂತೋಷಪಟ್ಟರು. ವೇದಪಾರಂಗತರಾದ ಮಹರ್ಷಿಗಳಾದ ನಾರದರು ಎಲ್ಲಾ ಪಾಂಡವರಿಂದಲೂ ಪೂಜಿಸಲ್ಪಟ್ಟು ಅನಂತರ ಯುಧಿಷ್ಠಿರನನ್ನು ಕುರಿತು ಧರ್ಮ, ಕಾಮ ಮತ್ತು ಅರ್ಥಗಳಿಂದ ಕೂಡಿದ ಈ ಕುಶಲಪ್ರಶ್ನೆಯನ್ನು ಮಾಡಿದರು.

ಕಚ್ಚಿದರ್ಥಾಶ್ಚ ಕಲ್ಪ್ಯಂತೇ ಮನಶ್ಚ ನ ವಿಹನ್ಯತೇ ।
ಸುಖಾನಿ ಚಾನುಭೂಯಂತೇ ಧರ್ಮೇ ಚ ರಮತೇ ಮನಃ ॥೧೬॥

ರಾಜನೇ! ನಿನಗೆ ಅರ್ಥವು ಸಿದ್ಧಿಸುತ್ತಿದೆಯಷ್ಟೇ ? ಮನಸ್ಸಿಗೆ ಖೇದವಾಗುವುದಿಲ್ಲವಷ್ಟೇ ? ಭೋಗಗಳನ್ನು ಅನುಭವಿಸುತ್ತಿರುವೆಯಷ್ಟೇ? ನಿನ್ನ ಮನಸ್ಸು ಧರ್ಮದಲ್ಲೇ ರತವಾಗಿದೆಯಷ್ಟೇ?

ಕಚ್ಚಿದಾಚರಿತಾ ಪೂರ್ವೈರ್ನರದೇವ ಪಿತಾಮಹೈಃ ।
ವರ್ತತೇ ವೃತ್ತಿರಕ್ಷೀಣಾ ಧರ್ಮಾರ್ಥಸಹಿತಾ ನೃಷು ॥೧೯॥

ನರದೇವನೇ! ನಿನ್ನ ಪಿತಾಮಹರು ಆಚರಿಸಿದಂತಹ ಧರ್ಮಾರ್ಥ ಪೋಷಕವಾದಂತಹ ಪರಿಪೂರ್ಣವಾದ ನಡೆವಳಿಕೆಯನ್ನೇ ಪ್ರಜೆಗಳ ವಿಷಯದಲ್ಲಿ ನೀನು ಆಚರಿಸುತ್ತಿರುವೆಯಷ್ಟೇ ?

ಕಚ್ಚಿದರ್ಥೇನ ವಾ ಧರ್ಮಂ ಧರ್ಮೇಣಾರ್ಥಮಥಾಪಿ ವಾ ।
ಉಭೌ ವಾ ಪ್ರೀತಿಸಾರೇಣ ನ ಕಾಮೇನ ವಿಬಾಧಸೇ ॥೨೦॥

ಧರ್ಮದಿಂದ ಅರ್ಥವನ್ನಾಗಲೀ ಅಥವಾ ಅರ್ಥದಿಂದ ಧರ್ಮವನ್ನಾಗಲೀ ಅಥವಾ ಅತಿಯಾದ ಸ್ನೇಹಪರವಶನಾಗಿ ಆ ಸ್ನೇಹದಿಂದ ಉಂಟಾದ ಕಾಮದಿಂದ ಧರ್ಮ ಮತ್ತು ಅರ್ಥ ಎರಡನ್ನೂ ನೀನು ಬಾಧಿಸುತ್ತಿಲ್ಲವಷ್ಟೇ ? ವನಿತಾದಿ ವಿಷಯಾಸಕ್ತನಾಗಿ ಧರ್ಮಾರ್ಥಗಳನ್ನು ಬಿಟ್ಟಿಲ್ಲವಷ್ಟೇ !

ಕಚ್ಚಿದರ್ಥಂ ಚ ಕಾಮಂ ಚ ಧರ್ಮಂ ಚ ಜಯತಾಂ ವರ ।
ವಿಭಜ್ಯ ಕಾಲೇ ಕಾಲಜ್ಞಃ ಸದಾ ವರದ ಸೇವಸೇ ॥೨೧॥

ವರದನಾದ ಮತ್ತು ಜಯಶೀಲನಾದ ರಾಜನೇ! ನೀನು ಸಮಯಪ್ರಜ್ಞೆ ಉಳ್ಳವನಾಗಿ ಸಮಯವನ್ನು ವಿಭಾಗಿಸಿ ಯೋಗ್ಯವಾದ ಸಮಯದಲ್ಲಿ ಧರ್ಮವನ್ನು ಮತ್ತು ಯೋಗ್ಯವಾದ ಸಮಯದಲ್ಲಿ ಕಾಮುವನ್ನು ಯಾವಾಗಲೂ ಸೇವಿಸುತ್ತಿರುವೆಯಷ್ಟೇ ?

ಕಚ್ಚಿದ್ ರಾಜಗುಣೈಃ ಷಡ್ಭಿಃ ಸಪ್ತೋಪಾಯಾಂಸ್ತಥೈವ ಚ ।
ಬಲಾಬಲಂ ಚ ಸಮ್ಯಕ್ ಚ ಕಾರ್ಯಂ ದಶ ನಿಷೇವಸೇ ॥೨೨॥

ನೀನು ರಾಜನ ಆರು ಗುಣಗಳಿಂದಲೂ ಸಪ್ತ ಉಪಾಯಗಳಿಂದಲೂ ಯುಕ್ತನಾದವನಾಗಿ ನಿನ್ನ ಮತ್ತು ಶತ್ರುಗಳ ಬಲಾಬಲಗಳನ್ನು ಚೆನ್ನಾಗಿ ವಿಮರ್ಶೆಮಾಡಿ, ಮಾಡಬೇಕಾದ ಹತ್ತು ವಿಧವಾದ ಕಾರ್ಯಗಳನ್ನು ಮಾಡುತ್ತಿರುವೆಯಷ್ಟೇ?

ಸಂಧಿ, ವಿಗ್ರಹ, ಯಾನ, ಆಸನ, ದ್ವಯೀಭಾವ, ಆಶ್ರಯ, ಇವು ಆರು ರಾಜನಿಗೆ ತಿಳಿದಿರಬೇಕಾದ ಗುಣಗಳು. ಸಾಮ, ದಾನ, ಭೇದ, ದಂಡ, ಪ್ರಭಾವ, ಉತ್ಸಾಹ, ಮಂತ್ರ , ಈ ಏಳು ಉಪಾಯಗಳು.

ಕಚ್ಚಿದಾತ್ಮಾನಮನ್ವೀಕ್ಷ್ಯ ಪರಾಂಶ್ಚ ಜಯತಾಂ ವರ ।
ತಥಾ ಸಂಧಾಯಿ ಕರ್ಮಾಣಿ ಭಾರತಃ ಕಿಂ ನು ವರ್ತಸೇ ॥೨೩॥

ಜಯಶೀಲನಾದ ರಾಜನೇ! ಭರತವಂಶದಲ್ಲಿ ಜನಿಸಿದ ನೀನು ನಿನ್ನ ಬಲವನ್ನು ಮತ್ತು ಶತ್ರುಗಳ ಬಲವನ್ನು ಚೆನ್ನಾಗಿ ವಿಮರ್ಶೆಮಾಡಿ ಸಂಧಾನ ಮಾಡಿಕೊಳ್ಳಬೇಕಾದ ಪ್ರಸಂಗಗಳಲ್ಲಿ ಅದಕ್ಕೆ ಅನುಗುಣವಾದ ಕಾರ್ಯಗಳನ್ನು ಮಾಡುತ್ತಿರುವೆಯಷ್ಟೇ?

ಕಚ್ಚಿತ್ ಪ್ರಕೃತಯಃ ಷಟ್ ತೇ ಹ್ಯಲುಪ್ತಾ ಭರತರ್ಷಭ ।
ಆಪ್ತಾಶ್ಚೈವಾವ್ಯವಸಿನಃ ಸ್ಥನುರಕ್ತಾಶ್ಚ ಸರ್ವಶಃ ॥೨೪॥

ಭರತರ್ಷಭನೇ! ಆರು ವಿಧವಾದ ನಿನ್ನ ಪ್ರಜೆಗಳು ಸಮೃದ್ಧಿಯಿಂದ ಕೂಡಿರುವರಷ್ಟೇ? ನಿನಗೆ ಆಪ್ತರೆನಿಸಿಕೊಂಡಮಂತ್ರಿ ಮೊದಲಾದವರು ನಿನಗೆ ವಿರುದ್ಧವಾದ ಅಭಿಪ್ರಾಯವನ್ನು ಹೊಂದದೆ ಯಾವಾಗಲೂ ನಿನ್ನಲ್ಲೇ ಅನುರಕ್ತರಾಗಿರುವರಷ್ಟೇ?

ಕಚ್ಚಿನ್ನ ತರ್ಕೈರತ್ಯೂಹ್ಯೈರ್ಯೇ ಚಾಪ್ಯಪರಿಶಂಕಿತಾಃ ।
ತ್ವಯಾ ವಾ ತವ ಚಾಮಾತ್ಯೈರ್ಭಿದ್ಯತೇ ತವ ಮಂತ್ರಿತಮ್ ॥೨೫॥

ವಾದಕ್ಕೆ ಪ್ರತಿವಾದವನ್ನು ಮಾಡುವ, ಶತ್ರುಪಕ್ಷದವರೆಂಬ ಸೂಚನೆಯನ್ನು ಕೊಡದಿರುವ, ನಿನ್ನ ದೂತರು ನಿನ್ನ ಅಥವಾ ನಿನ್ನ ಮಂತ್ರಿಗಳ ಮಂತ್ರಾಲೋಚನೆಯನ್ನು ಭೇದಿಸುತ್ತಿಲ್ಲವಷ್ಟೇ?

ಮಿತ್ರೋದಾಸೀನಶತ್ರೂಣಾಂ ಕಚ್ಚಿದ್ ವೇತ್ಸಿ ಚಿಕೀರ್ಷಿತಮ್ ।
ಕಚ್ಚಿತ್ ಸಂಧಿಂ ಯಥಾನ್ಯಾಯಂ ವಿಗ್ರಹಂ ಚೋಪಸೇವಸೇ ॥೨೬॥

ನಿನ್ನ ಮಿತ್ರರು ಶತ್ರುಗಳು ಮತ್ತು ನಿನ್ನಲ್ಲಿ ಉದಾಸೀನರಾದವರು ಯಾವ ಕಾರ್ಯವನ್ನು ಮಾಡುವ ಅಭಿಪ್ರಾಯವನ್ನು ಹೊಂದಿದ್ದಾರೆಂದು ತಿಳಿದಿರುವೆಯಷ್ಟೇ? ಸಂಧಿಯ ಕಾಲ ಯಾವುದು, ಹೋರಾಟದ ಕಾಲ ಯಾವುದು ಎಂದು, ತಿಳಿದು ನೀನು ಅದನ್ನು ಅನುಸರಿಸುತ್ತಿರುವೆಯಷ್ಟೇ?

ಉದಾಸೀನೇಷು ವೃತ್ತಿಶ್ಚ ಮಧ್ಯಮೇಷೂಪಪದ್ಯತೇ ।
ಕಚ್ಚಿದಾತ್ಮಸಮಾ ಬುದ್ಧ್ಯಾ ಶುಚಯೋ ವಿಗತಕ್ಲಮಾಃ ॥೨೭॥

ಕುಲೀನಾಶ್ಚಾನುರಕ್ತಾಶ್ಚ ತ್ರಯಸ್ತೇ ವೀರ ಮಂತ್ರಿಣಃ ॥೨೮॥

ನಿನ್ನಲ್ಲಿ ಉದಾಸೀನರಾದವರ ವಿಷಯದಲ್ಲಿಯೂ ಹಾಗೂ ನಿನ್ನಲ್ಲಿ ಮತ್ತು ನಿನ್ನ ಶತ್ರುಗಳಲ್ಲಿ ಇಬ್ಬರಲ್ಲಿಯೂ ತಟಸ್ಥರಾಗಿರುವವರ ವಿಷಯದಲ್ಲಿಯೂ ಸರಿಯಾಗಿ ನಡೆದುಕೊಳ್ಳುತ್ತಿದ್ದಿಯಷ್ಟೇ? ವೀರನೇ! ಬುದ್ಧಿಯಲ್ಲಿ ನಿನಗೆ ಸಮಾನರಾದಂತಹ

ಶುದ್ಧರಾದ ಆಲಸ್ಯವನ್ನು ಹೊಂದದಿರುವ ಉನ್ನತಕುಲದಲ್ಲಿ ಪ್ರಸೂತರಾದ ನಿನ್ನಲ್ಲಿ ಅನುರಕ್ತರಾದ ಮೂರುಜನ ಮಂತ್ರಿಗಳನ್ನು ಹೊಂದಿರುವೆಯಷ್ಟೇ ?

ಕಚ್ಚಿನ್ಮಂತ್ರಯಸೇ ನೈಕಃ ಕಚ್ಚಿನ್ನ ಬಹುಭಿಃ ಸಹ ।
ಕಚ್ಚಿತ್ ತೇ ಮಂತ್ರಿತೋ ಮಂತ್ರೋ ನ ರಾಷ್ಟ್ರಂ ಪರಿಧಾವತಿ ॥೨೯॥

ನೀನು ಮಂತ್ರಾಲೋಚನೆಯನ್ನು ಮಾಡುವಾಗ ಒಬ್ಬನೇ ಕುಳಿತುಮಾಡುವುದಿಲ್ಲವಷ್ಟೇ ? ಅಥವಾ ಬಹಳಜನ ಪರಿಚಿತರ ಮತ್ತು ಅಪರಿಚಿತರ ಗುಂಪಿನಲ್ಲಿ ಕುಳಿತು ಮಾಡುವುದಿಲ್ಲವಷ್ಟೇ? ನಿನ್ನ ಮಂತ್ರಾಲೋಚನೆಯು ರಹಸ್ಯವಾಗಿ ಉಳಿಯದೆ ರಾಷ್ಟ್ರದಲ್ಲೆಲ್ಲಾ ಸಂಚಾರ ಮಾಡುವುದಿಲ್ಲವಷ್ಟೇ ?

ಮಂತ್ರೋ ವಿಜಯಮೂಲಂ ಹಿ ರಾಜ್ಞಾಂ ಭವತಿ ಭಾರತ ।
ಸುಸಂವೃತೋ ಮಂತ್ರಧರೈರಮಾತ್ಯೈಃ ಶಾಸ್ತ್ರಕೋವಿದೈಃ ॥೩೦॥

ಭಾರತನೇ! ರಾಜರ ಮಂತ್ರಾಲೋಚನೆಯು ಶಾಸ್ತ್ರಕೋವಿದರಾದ ಮಂತ್ರಾಲೋಚನೆಯಲ್ಲಿ ಭಾಗವಹಿಸಿದ ಮಂತ್ರಿಗಳಿಂದ ರಹಸ್ಯವಾಗಿ ರಕ್ಷಿಸಲ್ಪಟ್ಟರೆ ಮಾತ್ರ ಆದು ವಿಜಯಕ್ಕೆ ಕಾರಣವಾಗುತ್ತದೆ.

ಕಚ್ಚಿನ್ನಿದ್ರಾವಶಂ ನೈಷಿ ಕಚ್ಚಿತ್ ಕಾಲೇ ವಿಬುದ್ಧ್ಯಸೇ ।
ಕಚ್ಚಿಚ್ಚಾಪರರಾತ್ರೇಷು ಚಿಂತಯಸ್ಯರ್ಥಮರ್ಥವಿತ್ ॥೩೧॥

ರಾಜನೇ! ನೀನು ಬಹಳ ನಿದ್ರಾವಶನಾಗಿರುವುದಿಲ್ಲವಷ್ಟೇ ? ಸರಿಯಾದ ಕಾಲದಲ್ಲಿ ಏಳುವಿಯಷ್ಟೇ ? ಆರ್ಥಜ್ಞನಾದ ನೀನು ಬೆಳಗಿನ ಜಾವದಲ್ಲಿ ಎದ್ದು ಆರ್ಥಗಳ ಚಿಂತನೆಯನ್ನು ಮಾಡುವಿಯಷ್ಟೇ?

ಕಚ್ಚಿದರ್ಥಾನ್ ವಿನಿಶ್ಚಿತ್ಯ ಲಘೂಪಾಯಾನ್ ಮಹೋದಯಾನ್ ।
ಕ್ಷಿಪ್ರಮಾರಭಸೇ ಕರ್ತುಂ ನ ದೀರ್ಘಯಸಿ ತಾದೃಶಾನ್ ॥೩೨॥

ಸುಲಭೋಪಾಯ ಸಾಧ್ಯವಾದ ಮತ್ತು ಮಹಾಫಲವನ್ನು ಕೊಡುವ ಅರ್ಥಗಳನ್ನು ನಿಶ್ಚಯಿಸಿ ಶೀಘ್ರವಾಗಿ ಅವುಗಳನ್ನು ಪ್ರಾರಂಭಿಸುತ್ತಿಯಷ್ಟೇ? ಅಂತಹ ಕಾರ್ಯಗಳಲ್ಲಿ ವಿಳಂಬಮಾಡುವುದಿಲ್ಲವಷ್ಟೇ?

ಕಚ್ಚಿನ್ನ ಸರ್ವೇ ಕರ್ಮಾಂತಾಃ ಪ್ರತ್ಯಕ್ಷಾಸ್ತೇ ನರರ್ಷಭ ।
ಪರೋಕ್ಷಂ ವಾ ಮಹಾರಾಜ ಮಧ್ಯಂ ಹ್ಯತ್ರ ಪ್ರಶಸ್ಯತೇ ॥೩೩॥

ನರರ್ಷಭನೇ! ನಿನ್ನ ಎಲ್ಲಾ ಸೇವಕರು ನಿನ್ನ ಎದುರಿನಲ್ಲೇ ಕೆಲಸಮಾಡುತ್ತಾರೆಯೇ? ಅಥವಾ ಎಲ್ಲರೂ ನಿನಗೆ ಪರೋಕ್ಷವಾಗಿಯೇ ಮಾಡುತ್ತಾರೆಯೇ? ಮಹಾರಾಜನೇ! ಕೆಲವು ಸೇವಕರನ್ನು ಪ್ರತ್ಯಕ್ಷದಲ್ಲಿ ಕೆಲಸಮಾಡುವಂತೆ ಇನ್ನು ಕೆಲವು ಸೇವಕರನ್ನು ಪರೋಕ್ಷದಲ್ಲಿ ಕೆಲಸಮಾಡುವಂತೆ ಇಟ್ಟುಕೊಳ್ಳುವುದು ಪ್ರಶಸ್ತವಾದುದು.

ದಾನಸತ್ಕಾರಾದಿ ಕರ್ಮಗಳನ್ನು ಎದುರು ಇರುವ ಸೇವಕರ ಸಹಾಯದಿಂದ ತಾನೇ ಸ್ವತಃ ಮಾಡಬೇಕು. ಬಂಧನ, ಶಿಕ್ಷೆ ಮೊದಲಾದವುಗಳನ್ನು ಪರೋಕ್ಷವಾದ ಸೇವಕರಿಂದ ಮಾಡಿಸಬೇಕು.

ಕಚ್ಚಿದ್ ರಾಜನ್ ಕೃತಾನ್ಯೇವ ಕೃತಪ್ರಾಯಾಣಿ ವಾ ಪುನಃ ।
ವಿದುಸ್ತೇ ವೀರ ಕರ್ಮಾಣಿ ನಾನವಾತ್ತಾನಿ ಕರ್ಹಿಚಿತ್ ॥೩೪॥

ರಾಜನೇ! ವೀರರಾದ ನಿನ್ನ ಪ್ರಜೆಗಳು ನೀನು ಆರಂಭಿಸಿ ಪೂರ್ಣಗೊಳಿಸಿದ ಅಥವಾ ಪೂರ್ಣಗೊಳ್ಳುವಂತಹ ಹಂತದಲ್ಲಿರುವ ಕಾರ್ಯಗಳನ್ನಷ್ಟೇ ತಿಳಿಯುತ್ತಾರಷ್ಟೇ? ನೀನು ಸಂಕಲ್ಪಿಸಿ ಪ್ರಾರಂಭಮಾಡದಿದ್ದ ಕಾರ್ಯಗಳನ್ನು ಎಂದೂ ತಿಳಿಯುವುದಿಲ್ಲವಷ್ಟೇ.

ಕಚ್ಚಿತ್ ಕಾರಣಿಕಾಃ ಸರ್ವೇ ಸರ್ವಶಾಸ್ತ್ರೇಷು ಕೋವಿದಾಃ ।
ಕಾರಯಂತಿ ಕುಮಾರಾಂಶ್ಚ ಯೋಧಮುಖ್ಯಾಂಶ್ಚ ಸರ್ವಶಃ ॥೩೫॥

ಯುದ್ಧಕೌಶಲವನ್ನು ಕಲಿಸುವ ಆಚಾರ್ಯರೆಲ್ಲರೂ ಎಲ್ಲ ಶಾಸ್ತ್ರಗಳಲ್ಲಿಯೂ ನಿಪುಣರಾಗಿದ್ದಾರಷ್ಟೇ? ಕುಮಾರರಿಗೆ ಒಳ್ಳೆಯ ಶಿಕ್ಷಣವನ್ನು ಕೊಟ್ಟು ಎಲ್ಲಾ ರೀತಿಯಿಂದಲೂ ಶ್ರೇಷ್ಠವಾದ ಯೋಧರನ್ನಾಗಿ ಮಾಡುತ್ತಾರಷ್ಟೇ?

ಕಚ್ಚಿತ್ ಸಹಸ್ರೈರ್ಮೂರ್ಖಾಣಾಮೇಕಮಿಚ್ಛಸಿ ಪಂಡಿತಮ್ ।
ಪಂಡಿತೋ ಹ್ಯರ್ಥಕೃಚ್ಛ್ರೇಷು ಕುರ್ಯಾನ್ನಿಃಶ್ರೇಯಸಂ ಪರಮ್ ॥೩೬॥

ಏಕೋऽಪ್ಯಮಾತ್ಯೋ ಮೇಧಾವೀ ಶೂರೋ ದಾಂತೋ ವಿಚಕ್ಷಣಃ ।
ರಾಜಾನಂ ರಾಜಪುತ್ರಂ ವಾ ಪ್ರಾಪಯೇನ್ಮಹತೀಂ ಶ್ರಿಯಮ್ ॥೩೭॥

ನೀನು ನೂರುಜನ ಮೂರ್ಖರ ಬದಲು ಒಬ್ಬ ಪಂಡಿತನ ಜೊತೆಯಲ್ಲಿ ಇರಲು ಬಯಸುತ್ತಿಯಷ್ಟೇ ? ಅರ್ಥಸಂಕಟ ಒದಗಿದಾಗ ಪಂಡಿತನಾದವನು ಶ್ರೇಷ್ಠವಾದ ಶ್ರೇಯಸ್ಸನ್ನು ಉಂಟುಮಾಡಲು ಸಮರ್ಥನಾಗುತ್ತಾನೆ. ಅಮಾತ್ಯನು ಒಬ್ಬನೇ ಆದರೂ ಅವನು ಮೇಧಾವಿಯೂ, ಶೂರನೂ, ಇಂದ್ರಿಯನಿಗ್ರಹವುಳ್ಳವನೂ, ಮತ್ತು ನಿಪುಣನೂ ಆಗಿದ್ದರೆ ರಾಜನಿಗೂ ಮತ್ತು ರಾಜಪುತ್ರನಿಗೂ ಶ್ರೇಷ್ಠವಾದ ಸಂಪತ್ತನ್ನು ಹೊಂದಿಸಿಕೊಡಲು ಸಮರ್ಥನಾಗುತ್ತಾನೆ.

ಕಚ್ಚಿತ್ ಸರ್ವಾಣಿ ದುರ್ಗಾಣಿ ಧನಧಾನ್ಯೋದಕಾಯುಧೈಃ ।
ಕಚ್ಚಿತ್ ಸೂತ್ರಾಣಿ ವರ್ಧಂತೇ ಸರ್ವಾಣಿ ಚ ನರರ್ಷಭ ॥೩೮॥

ನರರ್ಷಭನೇ! ನಿನ್ನ ಎಲ್ಲಾ ಕೋಟೆಕೊತ್ತಲಗಳು ಜಲ, ಧನ, ಧಾನ್ಯ, ಆಯುಧಗಳಿಂದ ಪೂರ್ಣವಾಗಿವೆಯಷ್ಟೇ ? ನಿನ್ನ ರಾಜ್ಯದಲ್ಲಿ ಅಶ್ವಶಾಸ್ತ್ರ, ಗಜಶಾಸ್ತ್ರ, ಮೊದಲಾದ ಎಲ್ಲಾ ಶಾಸ್ತ್ರಗಳು ಅಧ್ಯಯನದ ಸಂಪ್ರದಾಯದಲ್ಲಿ ಇವೆಯಷ್ಟೇ ?

ಹಸ್ತಿಶಿಕ್ಷಾಶ್ವಸೂತ್ರಂ ಚ ರಥಸೂತ್ರಂ ಚ ವಾ ವಿಭೋ ।
ಧನುರ್ವೇದಸ್ಯ ಸೂತ್ರಂ ಚ ಯಂತ್ರಸೂತ್ರಂ ಚ ನಾಗರಮ್ ॥೩೯॥

ವಿಭುವೇ! ಗಜಶಿಕ್ಷಾಸೂತ್ರ, ಅಶ್ವಶಿಕ್ಷಾ ಶಾಸ್ತ್ರ, ರಥಶಾಸ್ತ್ರ, ಧರ್ನುವೇದಶಾಸ್ತ್ರ, ಯಂತ್ರಶಾಸ್ತ್ರ, ನಗರಶಾಸ್ತ್ರ ಎಲ್ಲಾ ಶಾಸ್ತ್ರಗಳೂ ಪ್ರಚಲಿತವಾಗಿವೆಯಷ್ಟೇ ?

ಕಚ್ಚಿತ್ ಸೂತ್ರಾಣಿ ಸರ್ವಾಣಿ ಬ್ರಹ್ಮದಂಡಶ್ಚ ಸರ್ವಶಃ ।
ವಿಷಯೋಗಾಶ್ಚ ತೇ ಸರ್ವೇ ವಿದಿತಾಃ ಶತ್ರುನಾಶನಾಃ ॥೪೦॥

ಬ್ರಾಹ್ಮಣರಿಗೆ ಅಪಕಾರಮಾಡಿದಾಗ ವಿಧಿಸಬೇಕಾದ ದಂಡಗಳು, ಶತ್ರುಗಳನ್ನು ಸಂಹಾರಮಾಡುವ ಎಲ್ಲಾ ವಿಷಪ್ರಯೋಗಗಳನ್ನು ವಿಧಿಸುವ, ಎಲ್ಲಾ ಶಾಸ್ತ್ರಗಳೂ ನಿನಗೆ ತಿಳಿದಿವೆಯಷ್ಟೇ ?

ಕಚ್ಚಿತ್ ಕೃತಂ ವಿಜಾನಾಸಿ ಕರ್ತಾರಂ ಚ ಪ್ರಶಂಸಸಿ ।
ಸತಾಂ ಮಧ್ಯೇ ಮಹಾರಾಜ ಸತ್ಕೃತ್ಯ ಪ್ರತಿಪೂಜ್ಯ ಚ ॥೪೧॥

ಮಹಾರಾಜನೇ! ಒಳ್ಳೆಯ ಕಾರ್ಯವನ್ನು ಮಾಡಿದವನನ್ನು ಗುರುತಿಸಿ ಅವನನ್ನು ಸಜ್ಜನರ ಮಧ್ಯದಲ್ಲಿ ಸಭೆಯಲ್ಲಿ ಸತ್ಕರಿಸಿ ದಾನಮಾನಾದಿಗಳಿಂದ ಪೂಜಿಸಿ ಪ್ರಶಂಸಿಸುತ್ತೀಯಷ್ಟೇ?

ಕಚ್ಚಿತ್ತೇ ಯಾಸ್ಯತೋ ಯಾತ್ರಾಂ ನಿತ್ಯಂ ಗಚ್ಛಂತ್ಯನುಷ್ಠಿತಾಃ ।
ಚಾರಾಃ ಸಾಮ ಚ ದಾನಂ ಚ ತ್ರಯಃ ಪೂರ್ವಂ ಸಮಾ ಗುಣೈಃ ॥೪೨॥

ನೀನು ಯುದ್ಧಕ್ಕೆ ಹೊರಡುವಾಗ ನಿನ್ನನ್ನು ಅನುಸರಿಸಿರುವವರೆಲ್ಲರೂ ಯಾವಾಗಲೂ ನಿನ್ನ ಜೊತೆಯಲ್ಲಿ ಹೊರಡುತ್ತಾರಷ್ಟೇ ? ಸಾಮ ಮತ್ತು ದಾನಗಳನ್ನು ತಿಳಿದಿರುವೆಯಾ? ಮೂರುಮೂರು ಜನ ಗುಣವಂತರಾದ ಸಮಚಿತ್ತವುಳ್ಳ ಚಾರರ ಗುಂಪನ್ನು ನೀನು ಯುದ್ಧಕ್ಕೆ ಹೊರಡುವ ಮುಂಚೆಯೇ ಶತ್ರುರಾಜ್ಯಕ್ಕೆ ಕಳುಹಿಸುತ್ತೀಯಷ್ಟೇ?

ಶತ್ರುಗಳ ರಾಜ್ಯದಲ್ಲಿ ಛದ್ಮವೇಶದಿಂದ ತಿಳಿಸಲು ಒಂದು ಗುಂಪು, ಅವರು ಸಂಗ್ರಹಿಸಿದ ವಾರ್ತೆಯನ್ನು ತಮ್ಮ ರಾಜ್ಯಕ್ಕೆ ತಲುಪಿಸಲು ಇನ್ನೊಂದುಗುಂಪು, ಈ ರಾಜ್ಯದಲ್ಲಿ ಆ ವಾರ್ತೆಯನ್ನು ತನಗೆ ತಿಳಿಸಲು ಇನ್ನೊಂದು ಗುಂಪು ಹೀಗೆ ಮೂರುಗುಂಪುಗಳು ಅಂತಹ ಚಾರರನ್ನು ಪ್ರಿಯವಚನಗಳು ಮತ್ತು ಯೋಗ್ಯವಾದ ದಾನಗಳಿಂದ ಸತ್ಕರಿಸಿ ಕಳುಹಿಸುತ್ತಿರುವೆಯಾ?

ಕಚ್ಚಿನ್ಮೂಲಂ ದೃಢಂ ಕೃತ್ವಾ ಯಾತ್ರಾಂ ಯಾಸ್ಯಸಿ ಭೂಮಿಪ ।
ತಚ್ಚ ವಿಕ್ರಮಸೇ ಜೇತುಂ ಲಕ್ಷಂ ಚ ಪರಿರಕ್ಷಸಿ ॥೪೩॥

ರಾಜನೇ! ನಿನ್ನ ಮೂಲಸ್ಥಾನದ ರಕ್ಷಣೆಯನ್ನು ಗಟ್ಟಿಮಾಡಿಕೊಂಡು ಯುದ್ಧಕ್ಕೆ ಹೊರಡುವೆಯಾ? ಶತ್ರುಸೈನ್ಯವನ್ನು ಜಯಿಸಿಲು ವಿಕ್ರಮವನ್ನು ತೋರುವೆಯಾ? ನಿನ್ನ ಲಕ್ಷ್ಯವನ್ನು ಎಂದೂ ಕಳೆದುಕೊಳ್ಳುವುದಿಲ್ಲವಷ್ಟೇ ?

ಕಚ್ಚಿದಾತ್ಮಾನಮೇವಾಗ್ರೇ ವಿಜಿತ್ಯ ವಿಜಿತೇಂದ್ರಿಯಃ ।
ಆತ್ಮಾನಮುಪಮಾಂ ಕೃತ್ವಾ ವಿಜಯಾಯ ಪ್ರವರ್ತಸೇ ॥೪೪॥

ಮೊದಲು ನಿನ್ನ ಮನಸ್ಸನ್ನು ಗೆದ್ದು ಜಿತೇಂದ್ರಿಯನಾಗಿ ನಿನ್ನನ್ನೇ ಸೈನ್ಯಕರಿಗೆ ದೃಷ್ಟಾಂತ ಮಾಡಿಕೊಂಡು ಅನಂತರ ಶತ್ರುವಿಜಯಕ್ಕಾಗಿ ಹೊರಡುವೆಯಾ ?

ಕಚ್ಚಿದಷ್ಟಾದಶಾನ್ಯೇಷಾಂ ಸ್ವಪಕ್ಷೇ ದಶ ಸಪ್ತ ಚ ।
ತ್ರಿಭಿಸ್ತ್ರಿಭಿರವಿಜ್ಞಾತೈರ್ವೇತ್ಸಿ ತೀರ್ಥಾನಿ ಚಾರಕೈಃ ॥೪೫॥

ಅವಿಜ್ಞಾತರಾದ ಮೂರು ಮೂರು ಚಾರರ ಗುಂಪನ್ನು ನೇಮಿಸಿ ನಿನ್ನ ಪಕ್ಷದ ಹದಿನೆಂಟು ಅವಶ್ಯಕವಾಗಿ ತಿಳಿಯಬೇಕಾದ ವಿಷಯಗಳನ್ನೂ ಶತ್ರುಪಕ್ಷದಲ್ಲಿ ಅವಶ್ಯವಾಗಿ ತಿಳಿಯಬೇಕಾದ ಹದಿನೇಳು ಅಂಶಗಳನ್ನೂ ತಿಳಿಯುವುವೆಯಾ?

ತನ್ನ ಪಕ್ಷದಲ್ಲಿ ಸ್ವಾಮಿ, ಅಮಾತ್ಯ , ಜನಪದ, ದುರ್ಗ, ದಂಡ, ಕೋಶ, ಮಿತ್ರ ಎಂಬ ರಾಷ್ಟ್ರಾಲಂಕಾರಭೂಷಿತರಾದ ಏಳು ಪ್ರಕೃತಿಗಳು. ಹಾಗೆ ವಿದ್ವಾಂಸರು, ಕವಿಗಳು, ಸೂತರು, ಗಾಯಕರು. ವಿದೂಷಕರು, ಪುರಾಣ, ಪೌರಾಣಿಕರು, ಧರ್ಮಶಾಸ್ತ್ರನಿರ್ಣಯಕಾರರು ಈ ಏಳು ವರ್ಗದವರು ಸಭಾಲಂಕಾರರು. ಕರ್ಮಕಾರರು, ವೈದ್ಯರು, ಗಣಕರು, ಮತ್ತು ಸೇನೆ, ಇವರು ಎಲ್ಲರಿಗೂ ಉಪಕಾರವನ್ನು ಮಾಡುವ ಪ್ರಕೃತಿಗಳು. ಹೀಗೆ ತನ್ನ ಪಕ್ಷದಲ್ಲಿ ಹದಿನೆಂಟು ಅಂಶಗಳು. ಇಲ್ಲಿ ಸ್ವಾಮಿಯೆಂದರೆ ರಾಜ. ಪರಪಕ್ಷದಲ್ಲಿ ರಾಜನನ್ನು ಬಿಟ್ಟು ಹದಿನೇಳು ಅಂಶಗಳು.ಪವಿತ್ರವಾದ ತೀರ್ಥವನ್ನು ನಿತ್ಯವೂ ಸೇವಿಸುವಂತೆ ಇಷ್ಟು ಅಂಶಗಳನ್ನು ಯಾವಾಗಲೂ ಗಮನದಲ್ಲಿ ಇಟ್ಟುಕೊಂಡಿರಬೇಕು. ಆದ್ದರಿಂದ ಇವುಗಳು ಯಾವಾಗಲೂ ತೀರ್ಥಗಳೆನಿಸಿಕೊಳ್ಳುತ್ತವೆ.

ಕಚ್ಚಿದ್ ದ್ವಿಷಾಮವಿಜ್ಞಾತಃ ಕೃತಯತ್ನಶ್ಚ ಸರ್ವದಾ ।
ನಿತ್ಯಯುಕ್ತೋ ರಿಪೂನ್ ಸರ್ವಾನ್ ವೀಕ್ಷಸೇ ರಿಪುಸೂದನ ॥೪೬॥

ಶತ್ರುಸೂದನನೇ! ನೀನು ಶತ್ರುಗಳಿಗೆ ತಿಳಿಯದಂತೆ ಯಾವಾಗಲೂ ಪ್ರಯತ್ನಶೀಲನಾಗಿದ್ದು ನಿತ್ಯದಲ್ಲಿಯೂ ನಿನ್ನ ಆ ಎಲ್ಲ ಶತ್ರುಗಳನ್ನೂ ನೋಡುವುದರಲ್ಲಿ (ಚಾರರ ಮೂಲಕ) ತೊಡಗಿಸಿಕೊಂಡಿರುತ್ತೀಯಷ್ಟೇ ?

ಕಚ್ಚಿದ್ ವಿನಯಸಂಪನ್ನಃ ಕುಲಪುತ್ರೋ ಬಹುಶ್ರುತಃ ।
ಅನಸೂಯುರನುಪ್ರಷ್ಟಾ ಸತ್ಕೃತಸ್ತೇ ಪುರೋಹಿತಃ ॥೪೭॥

ವಿನಯಸಂಪನ್ನನೂ, ಸತ್ಕುಲಪ್ರಸೂತನೂ, ಅನೇಕ ಶಾಸ್ತ್ರಗಳನ್ನು ಬಲ್ಲವನೂ, ಅಸೂಯಾರಹಿತನೂ, ಹೇಳಿದ ಮಾತನ್ನು ಕೇಳುವವನೂ, ಆದ ನಿನ್ನ ಪುರೋಹಿತನನ್ನು ನೀನು ಸತ್ಕರಿಸುತ್ತೀಯಷ್ಟೇ ?

ಕಚ್ಚಿದಗ್ನಿಷು ತೇ ಯುಕ್ತೋ ವಿಧಿಜ್ಞೋ ಮತಿಮಾನೃಜುಃ ।
ಹುತಂ ಚ ಹೋಷ್ಯಮಾಣಂ ಚ ಕಾಲೇ ವೇದಯತೇ ಸದಾ ॥೪೮॥

ನಿನ್ನ ಪುರೋಹಿತನು ಬುದ್ಧವಂತನಾಗಿದ್ದು ಆರ್ಜವವನ್ನು ಹೊಂದಿದವನಾಗಿ ಅಗ್ನಿಹೋತ್ರದ ವಿಧಾನವನ್ನು ತಿಳಿದವನಾಗಿ ಆ ಕಾಲದಲ್ಲಿ ಮಾಡಬೇಕಾದ ಹೋಮವನ್ನೂ ಅನಂತರ ಕಾಲದಲ್ಲಿ ಮಾಡಬೇಕಾದ ಹೋಮವನ್ನೂ ತಿಳಿದು ನಿನಗೆ ತಿಳಿಸುತ್ತಿರುತ್ತಾನಷ್ಟೇ ?

ಕಚ್ಚಿತ್ ಷಡಂಗನಿಷ್ಣಾತೋ ಜ್ಯೋತಿಷಾಂ ಪ್ರತಿಪಾಠಕಃ ।
ಉತ್ಪಾತೇಷು ಚ ಸರ್ವೇಷು ದೈವಜ್ಞಃ ಕುಶಲಃ ಸದಾ ॥೪೯॥

ರಾಜನೇ! ನಿನ್ನ ಪುರೋಹಿತನು ಷಡಂಗಗಳಲ್ಲಿ ಪ್ರವೀಣನಾಗಿ ಜ್ಯೋತಿಶ್ಶಾಸ್ತ್ರದಲ್ಲಿ ಕುಶಲನಾಗಿ ಎಲ್ಲಾ ಅಪಶಕುನಗಳು ಉಂಟಾದಾಗ ಯಾವಾಗಲೂ ಅವುಗಳ ಫಲಗಳನ್ನು ತಿಳಿಯುದರಲ್ಲಿ ಕುಶಲನಾಗಿ ಇರುತ್ತಾನಷ್ಟೇ ?

ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷು ಚ ಮಧ್ಯಮಾಃ ।
ಜಘನ್ಯಾಶ್ಚ ಜಘನ್ಯೇಷು ಭೃತ್ಯಾಃ ಕರ್ಮಸು ಯೋಜಿತಾಃ ॥೫೦॥

ನಿನ್ನ ಭೃತ್ಯರಲ್ಲಿ ಉತ್ತಮರಾದವರನ್ನು ಉತ್ತಮರ ಸೇವೆಗೂ, ಮಧ್ಯಮರಾದವರನ್ನು ಮಧ್ಯಮರಸೇವೆಗೂ, ಅಧಮರಾದವರನ್ನು ಅಧಮರ ಸೇವೆಗೆ ನಿಯೋಜಿಸಿರುವೆಯಾ?

ಅಮಾತ್ಯಾನುಪಧಾತೀತಾನ್ ಪಿತೃಪೈತಾಮಹಾನ್ ಶುಚೀನ್ ।
ಶ್ರೇಷ್ಠಾನ್ ಶ್ರೇಷ್ಠೇಷು ಕಚ್ಚಿತ್ ತ್ವಂ ನಿಯೋಜಯಸಿ ಕರ್ಮಸು ॥೫೧॥

ನಿರ್ವ್ಯಾಜವಾಗಿ ನಿನ್ನಲ್ಲಿ ಅನುರಕ್ತನಾದ ಪಿತೃಪಿತಾಮಹರಕಾಲದಿಂದ ಅಮಾತ್ಯವೃತ್ತಿಯನ್ನು ಮಾಡಿರುವ ಶುದ್ಧರಾದ ಗುಣಸಂಪನ್ನರಾದ ಅಮಾತ್ಯರನ್ನು ಶ್ರೇಷ್ಠವಾದ ಕಾರ್ಯಗಳಲ್ಲಿ ನಿಯಮಿಸುತ್ತೀಯಷ್ಟೇ ?

ಕಚ್ಚಿನ್ನೋಗ್ರೇಣ ದಂಡೇನ ಭೃಶಮುದ್ವೇಜಿತಪ್ರಜಮ್ ।
ರಾಷ್ಟ್ರಂ ತವಾನುಶಾಸಂತಿ ಮಂತ್ರಿಣೋ ಭರತರ್ಷಭ ॥೫೨॥

ಭರತರ್ಷಭನೇ! ಅಪರಾಧ ಮಾಡಿದವರಿಗೆ ಉಗ್ರವಾದ ದಂಡವನ್ನು ಕೊಟ್ಟು ಅದನ್ನು ನೋಡಿ ನಡುಗುತ್ತಿರುವ ಪ್ರಜೆಗಳನ್ನು ಮತ್ತು ನಿನ್ನ ರಾಷ್ಟ್ರವನ್ನು ನಿನ್ನ ಮಂತ್ರಿಗಳೇ ಆಳುವುದಿಲ್ಲವಷ್ಟೇ ?

ಕಚ್ಚಿತ್ ತ್ವಾಂ ನಾವಜಾನಂತಿ ಯಾಜಕಾಃ ಪತಿತಂ ಯಥಾ ।
ಉಗ್ರಪ್ರತಿಗ್ರಹೀತಾರಂ ಕಾಮಯಾನಮಿವ ಸ್ತ್ರಿಯಃ ॥೫೩॥

ಅತಿಕಾಮುಕನಾದ ಪುರುಷನನ್ನು ವನಿತೆಯರು ಅಪಮಾನಗೊಳಿಸಿದಂತೆ ಪ್ರಜೆಗಳಿಂದ ಅತಿಯಾದ ಕರವನ್ನು ಸ್ವೀಕರಿಸುವ ನಿನ್ನನ್ನು ಯಾಜಕರು ಪತಿತನಂತೆ ನೋಡಿ ಅವಮಾನ ಮಾಡುವುದಿಲ್ಲವಷ್ಟೇ ?

ಕಚ್ಚಿದ್ ಧೃಷ್ಟಶ್ಚ ಶೂರಶ್ಚ ಮತಿಮಾನ್ ಧೃತಿಮಾನ್ ಶುಚಿಃ ।
ಕುಲೀನಶ್ಚಾನುರಕ್ತಶ್ಚ ದಕ್ಷಃ ಸೇನಾಪತಿಸ್ತವ ॥೫೪॥

ಧೈರ್ಯಶಾಲಿಯೂ, ಶೂರನೂ, ಮೇಧಾವಿಯೂ, ಸ್ಥೈರ್ಯವುಳ್ಳವನೂ, ಶುಚಿಯೂ, ಕುಲೀನನೂ, ನಿನ್ನಲ್ಲೇ ಅನುರಕ್ತನೂ, ಮತ್ತು ಸಮರ್ಥನೂ ಆದ ಪುರುಷನು ನಿನ್ನ ಸೇನಾಪತಿಯಾಗಿದ್ದಾನಷ್ಟೇ?

ಕಚ್ಚಿದ್ ಬಲಸ್ಯ ತೇ ಮುಖ್ಯಾಃ ಸರ್ವಯುದ್ಧವಿಶಾರದಾಃ ।
ದೃಷ್ಟಾಃ ಪ್ರದಾನಾಃ ವಿಕ್ರಾಂತಾಃ ತ್ವಯಾ ಸತ್ಕೃತ್ಯ ಮಾನಿತಾಃ ॥೫೫॥

ನಿನ್ನ ಸೈನ್ಯದಲ್ಲಿ ಮುಖ್ಯಸ್ಥಾನದಲ್ಲಿರುವವರೆಲ್ಲರೂ ಎಲ್ಲಾ ವಿಧವಾದ ಯುದ್ಧಗಳಲ್ಲಿಯೂ ನಿಪುಣರಾಗಿದ್ದಾರಷ್ಟೆ? ಯುದ್ಧದಲ್ಲಿ ಶತ್ರುಗಳ ಸಂಹಾರವನ್ನು ಮಾಡಿ ವಿಕ್ರಮವನ್ನು ತೋರಿಸಿದ ನಿನ್ನ ಸೈನಿಕರನ್ನು ನೀನು ಸತ್ಕರಿಸಿ ಸನ್ಮಾನಿಸುವಿಯಷ್ಟೇ?

ಕಚ್ಚಿದ್ ಬಲಸ್ಯ ಭಕ್ತಂ ಚ ವೇತನಂ ಚ ಯಥೋಚಿತಮ್ ।
ಸಂಪ್ರಾಪ್ತಕಾಲೇ ದಾತವ್ಯಂ ದದಾಸಿ ನ ವಿಕರ್ಷಸಿ ॥೫೬॥

ನಿನ್ನ ಸೈನ್ಯಕ್ಕೆ ಯೋಗ್ಯವಾದ ಕಾಲದಲ್ಲಿ ಕೊಡಬೇಕಾದ ಸಂಬಳವನ್ನು ಮತ್ತು ಭತ್ಯವನ್ನು ಸರಿಯಾದ ಸಮಯದಲ್ಲಿ ಕೊಡುತ್ತಿದ್ದೀಯಷ್ಟೇ? ನಿಷ್ಕಾರಣವಾಗಿ ಆ ಸಂಬಳ ಮತ್ತು ಭತ್ಯಗಳಲ್ಲಿ ಕಡಿತವನ್ನು ಮಾಡುವುದಿಲ್ಲವಷ್ಟೇ ?

ಕಾಲಾತಿಕ್ರಮಣಾದೇತೇ ಭಕ್ತವೇತನಯೋರ್ಭೃತಾಃ ।
ಭರ್ತುಃ ಕುಪ್ಯಂತಿ ದೂಷ್ಯಂತಿ ಸೋಽನರ್ಥಃ ಸುಮಹಾನ್ ಸ್ಮೃತಃ ॥

ಭಟರು ತಮಗೆ ಬರಬೇಕಾದ ಭತ್ಯ ಮತ್ತು ವೇತನಗಳು ಕಾಲಕ್ಕೆ ಸರಿಯಾಗಿ ಬರದಿದ್ದರೆ ಸ್ವಾಮಿಯ ಮೇಲೆ ಕೋಪಗೊಂಡು ಅವನನ್ನು ದೂಷಿಸುತ್ತಾರೆ. ಅದು ಮಹಾ ಅನರ್ಥಕ್ಕೆ ಕಾರಣವಾಗುತ್ತದೆ.

ಕಚ್ಚಿತ್ ಸರ್ವೇಽನುರಕ್ತಾಸ್ತಾ ತ್ವಂ ಕುಲಪುತ್ರಾಃ ಪ್ರಧಾವತಃ ।
ಕಚ್ಚಿತ್ ಪ್ರಾಣಾಂಸ್ತವಾರ್ಥೇಷು ಸಂತ್ಯಜಂತಿ ಸದಾ ಯುಧಿ ॥೫೮॥

ನೀನು ಯುದ್ಧಕ್ಕೆ ಹೋಗುವಾಗ ನಿನ್ನಲ್ಲಿ ಅನುರಕ್ತರಾದ ಕುಲಪುತ್ರರೆಲ್ಲರೂ ನಿನ್ನನ್ನು ಹಿಂಬಾಲಿಸುತ್ತಾರಷ್ಟೇ ?. ನಿನ್ನ ಸಲುವಾಗಿ ಯುದ್ಧದಲ್ಲಿ ಅವರು ಪ್ರಾಣತ್ಯಾಗವನ್ನು ಮಾಡಲೂ ಸಿದ್ಧರಾಗಿರುತ್ತಾರಷ್ಟೇ ?

ಕಚ್ಚಿನ್ನೈಕೋ ಬಹೂನರ್ಥಾನ್ ಸರ್ವಶಃ ಸಾಂಪರಾಯಿಕಾನ್ ।
ಅನುಶಾಧಿ ಯಥಾಕಾಮಂ ಕಾಮಾತ್ಮಾ ಶಾಸನಾನಿ ಚ ॥೫೯॥

ನೀನು ಏಕಾಂಗಿಯಾಗಿ ಮೋಕ್ಷೋಪಯೋಗಿಯಾದ ಶ್ರವಣ ಮನನ ಮೊದಲಾದ ಅರ್ಥಗಳನ್ನು ಅಥವಾ ಪುರಾಣಗಳ ವಿಧಿಶಾಸನಗಳನ್ನು ನಿನ್ನ ಮನಸ್ಸಿಗೆ ಬಂದಂತೆ ಕಾಮುಕ್ಕೆ ಒಳಗಾದವನಾಗಿ ಇವುಗಳಿಂದ ಏನು ಪ್ರಯೋಜನ ಎಂದು ತಿರಸ್ಕರಿಸುವುದಿಲ್ಲವಷ್ಟೆ?

ಕಚ್ಚಿತ್ ಪುರುಷಕಾರೇಣ ಪುರುಷಃ ಕರ್ಮ ಶೋಭಯನ್ ।
ಲಭತೇ ಮಾನಮತ್ಯಂತಂ ಭೃತೋ ವಾ ವೇತನಂ ತ್ವಯಿ ॥೬೦॥

ಮಹಾಪ್ರಯತ್ನದಿಂದ ಶ್ರೇಷ್ಠವಾದ ಕರ್ಮವನ್ನು ಮಾಡಿದ ನಿನ್ನ ಭಟನು ನಿನ್ನಿಂದ ಬಹಳವಾದ ಸನ್ಮಾನವನ್ನು ಮತ್ತು ವೇತನವೃದ್ಧಿಯನ್ನು ಪಡೆಯುತ್ತಾನಷ್ಟೇ ?

ಕಚ್ಚಿದ್ ವಿದ್ಯಾವಿನೀತಾಂಶ್ಚ ನರಾನ್ ಜ್ಞಾನವಿಶಾರದಾನ್ ।
ಯಥಾರ್ಹಂ ಗುಣತಶ್ಚೈವ ದಾನೇನಾಭ್ಯವಪದ್ಯಸೇ ॥೬೧॥

ವಿದ್ಯಾಸಂಪನ್ನರಾದಂತಹ ಜ್ಞಾನಪಾರಂಗತರಾದಂತಹ ಮನುಷ್ಯರನ್ನು ಅವರವರ ಗುಣಕ್ಕೆ ಅನುಗುಣವಾದ ರೀತಿಯಲ್ಲಿ ದಾನದಿಂದ ಪೂಜಿಸುತ್ತಿರುವಿಯಷ್ಟೇ ?

ಕಚ್ಚಿದ್ ದಾರಾರ್ಭಕಾಣಾಂ ತ್ವಂ ತವಾರ್ಥೇ ಮೃತ್ಯುಮೀಯುಷಾಮ್ ।
ವ್ಯಸನೇ ಚಾಭ್ಯುಪೇತಾನಾಂ ಬಿಭರ್ಷಿ ಭರತರ್ಷಭ ॥೬೨॥

ಭರತರ್ಷಭನೇ! ಯುದ್ಧದಲ್ಲಿ ನಿನ್ನಸಲುವಾಗಿ ಹತರಾದ ಸೈನಿಕರ ಹೆಂಡತಿ ಮಕ್ಕಳು ಕಷ್ಟಕ್ಕೆ ಸಿಲುಕಿ ನಿನಗೆ ಶರಣಾಗತರಾದಾಗ ಅವರನ್ನು ಪೋಷಿಸುತ್ತಿರುವಿಯಷ್ಟೇ?

ಕಚ್ಚಿದ್ ಭಯಾದುಪಗತಂ ರಿಪುಂ ವಾ ಗೃಹಮಾಗತಮ್ ।
ಯುಧಿ ವಾ ವಿಜಿತಂ ಪಾರ್ಥ ಪುತ್ರವತ್ ಪರಿರಕ್ಷಸಿ ॥೬೩॥

ಕುಂತಿಪುತ್ರನೇ! ಯುದ್ಧದಲ್ಲಿ ಸೆರೆ ಸಿಕ್ಕಿದ ಅಥವಾ ಭಯದಿಂದ ನಿನ್ನ ಮನೆಗೆ ಬಂದು ಶರಣಾಗತನಾದ ಶತ್ರುವನ್ನು ನಿನ್ನ ಮಗನಂತೆ ರಕ್ಷಿಸುತ್ತಿರುವಿಯಷ್ಟೇ ?

ಕಚ್ಚಿತ್ ತ್ವಮೇವ ಸರ್ವಸ್ಯಾಃ ಪೃಥಿವ್ಯಾಃ ಪೃಥಿವೀಪತೇ ।
ಸಮಶ್ಚ ನಾತಿಶಂಕ್ಯಶ್ಚ ಯಥಾ ಪುತ್ರೋ ಯಥಾ ಪಿತಾ ॥೬೪॥

ಭೂಮಿಪಾಲನೇ! ನೀನೇ ಎಲ್ಲಾ ಭೂಮಿಗೂ ಒಡೆಯನಾಗಿ ಎಲ್ಲರಿಗೂ ಸಮನಾಗಿ ಯಾರಿಂದಲೂ ಶಂಕಿಸಲ್ಪಡದೆ ಎಲ್ಲರಿಗೂ ಪುತ್ರನಂತೆ ಅಥವಾ ತಂದೆಯಂತೆ ವರ್ತಿಸುತ್ತಿರುವಿಯಷ್ಟೇ ?

ಕಚ್ಚಿದ್ ವ್ಯಸನಿನಂ ಶತ್ರುಂ ನಿಶಮ್ಯ ಭರತರ್ಷಭ ।
ಅಭಿಯಾಸಿ ಜವೇನೈವ ಸಮೀಕ್ಷ್ಯ ತ್ರಿವಿಧಂ ಬಲಮ್ ।
ಪಾರ್ಷ್ಣಿಮೂಲೇ ಚ ವಿಜ್ಞಾಯ ವ್ಯವಸಾಯಪುರೋಗಮಃ ॥೬೫॥

ಭರತರ್ಷಭನೇ! ಶತ್ರುವಿನ ವ್ಯಸನಸ್ಥಾನಗಳನ್ನು ತಿಳಿದು ಶತ್ರುವು ವ್ಯಸನಾಸಕ್ತನಾಗಿರುವ ಸಮಯದಲ್ಲಿ ನಿನ್ನ ಭುಜಬಲವನ್ನು ನಿನ್ನ ಸೇನಾಬಲವನ್ನು ಮತ್ತು ದೈವಬಲವನ್ನು ಗಮನಿಸಿ ಅವನಿಗೆ ಸಹಾಯಕರಾಗಿರುವವರು ಮತ್ತು

ಆಧಾರಭೂತರಾದವರನ್ನು ಗಮನಿಸಿ ಪ್ರಯತ್ನವನ್ನು ಮುಂದೆಮಾಡಿಕೊಂಡು ಶೀಘ್ರವಾಗಿ ಅವನ ಮೇಲೆ ಯುದ್ಧಕ್ಕೆ ಹೊರಡುವಿಯಷ್ಟೇ?

ಬಲಸ್ಯ ಚ ಮಹಾರಾಜ ದತ್ವಾ ವೇತನಮಗ್ರತಃ ।
ಕಚ್ಚಿಚ್ಚ ಬಲಮುಖ್ಯೇಭ್ಯಃ ಪರರಾಷ್ಟ್ರೇ ಪರಂತಪ ।
ಅವಿಚ್ಛಿನ್ನಾನಿ ರತ್ನಾನಿ ಪ್ರಯಚ್ಛಸಿ ಯಥಾರ್ಹತಃ ॥೬೬॥

ಮಹಾರಾಜನೇ! ಮತ್ತು ಪರಂತಪನೇ! ಪರರಾಷ್ಟ್ರಗಳಲ್ಲಿರುವ ನಿನ್ನ ಸೇನಾಮುಖ್ಯಸ್ಥರಿಗೆ ಮೊದಲೇ ವೇತನವನ್ನು ಕೊಟ್ಟು ಅವರು ಅಭೀಷ್ಟವಾದ ಕಾರ್ಯವನ್ನು ಮಾಡಿದ ಮೇಲೆ ಅದಕ್ಕೆ ಅನುಗುಣವಾಗಿ ರತ್ನಾದಿಗಳನ್ನು ಅವಿಚ್ಛಿನ್ನವಾಗಿ ಕೊಡುತ್ತಿರುವೆಯಷ್ಟೇ ?

ಕಚ್ಚಿನ್ಮೂಲಂ ದೃಢಂ ಕೃತ್ವಾ ಯಾತ್ರಾಂ ಯಾಸಿ ವಿಶಾಂಪತೇ ।
ತತೋ ವಿಕ್ರಮಸೇ ಜೇತುಂ ಜಿತ್ವಾ ಚ ಪರಿರಕ್ಷಸಿ ॥೬೭॥

ರಾಜನೇ! ನಿನ್ನ ಮೂಲವನ್ನು ಭದ್ರಪಡಿಸಿಕೊಂಡು ಯುದ್ಧಕ್ಕೆ ಹೊರಟು ಪರಾಕ್ರಮವನ್ನು ತೋರಿಸಿ ಶತ್ರುವನ್ನು ಜಯಿಸಿ ಅನಂತರ ಆ ಶತ್ರುವನ್ನು ರಕ್ಷಿಸುತ್ತೀಯಷ್ಟೇ ?

ಕಚ್ಚಿದಷ್ಟಾಂಗಸಂಯುಕ್ತಾ ಚತುರ್ವಿಧಬಲಾ ಚಮೂಃ ।
ಬಲಮುಖ್ಯಾ ಸುನೀತಾ ತೇ ದ್ವಿಷತಃ ಪ್ರತಿಬಾಧತೇ ॥೬೮॥

ಅಷ್ಟಾಂಗಗಳಿಂದ ಕೂಡಿದ ಚತುರ್ವಿಧವಾದ ನಿನ್ನ ಸೈನ್ಯವು ಬಲದಲ್ಲಿಯೂ ನೀತಿಯಲ್ಲಿಯೂ ಪ್ರಧಾನವಾಗಿದ್ದು ಶತ್ರುಗಳನ್ನು ಬಾಧಿಸುತ್ತಿದೆಯಷ್ಟೇ ?

ಯಂತಾ, ಸಾರಥಿ, ಸೂತ, ಚರ್ಮ, ವರ್ಮ, ಶರ, ಚಾಪ, ಮತ್ತು ಆಯುಧ ಇದು ಸೈನ್ಯದ ಎಂಟು ಅಂಶಗಳು ಗಜ, ತುರಗ, ರಥ, ಪದಾತಿಗಳು, ಸೈನ್ಯದ ನಾಲ್ಕು ವಿಭಾಗಗಳು.

ಕಚ್ಚಿಲ್ಲವಂ ಚ ಮುಷ್ಟಿಂ ಚ ಪರರಾಷ್ಟ್ರೇ ಪರಂತಪ ।
ಅಭಿಯಾಯ ಮಹಾರಾಜ ನಿಹಂಸಿ ಸಮರೇ ರಿಪೂನ್ ॥೬೯॥

ಎಲೈ ಪರಂತಪನಾದ ಮಹಾರಾಜನೇ! ನೀನು ಪರರಾಷ್ಟ್ರಗಳ ಮೇಲೆ ದಂಡೆತ್ತಿಹೊಗಿ ಮೊದಲು ಆಯುಧಗಳಿಂದ ಕಟಾವು ಮಾಡುವ ಭತ್ತ ಗೋದಿ ಬೆಳೆಗಳನ್ನೂ ಮುಷ್ಟಿಯಿಂದ ಕೀಳುವ ಉದ್ದು ಹೆಸರು ಮುಂತಾದವುಗಳನ್ನೂ ನಾಶಮಾಡಿ ಅನಂತರ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುತ್ತೀಯಷ್ಟೇ ?

ಕಚ್ಚಿತ್ ಸ್ವಪರರಾಷ್ಟ್ರೇಷು ಬಹವೋಽಧಿಕೃತಾಸ್ತ್ವಯಾ ।
ಅರ್ಥಂ ಸಮನುತಿಷ್ಠಂತಿ ರಕ್ಷಂತಿ ಚ ಪರಸ್ಪರಮ್ ॥೭೦॥

ನಿನ್ನ ರಾಷ್ಟ್ರಮತ್ತು ಪರರಾಷ್ಟ್ರಗಳಲ್ಲಿ ನಿನ್ನಿಂದ ನಿಯಮಿಸಲ್ಪಟ್ಟ ಅನೇಕ ಅಧಿಕಾರಿಗಳು ತಮ್ಮ ತಮ್ಮ ಕೆಲಸವನ್ನು ಚೆನ್ನಾಗಿ ನಿರ್ವಾಹಮಾಡಿ ಪರಸ್ಪರವಾಗಿ ರಕ್ಷಿಸಿಕೊಳ್ಳುತ್ತಿದ್ದಾರಷ್ಟೇ ?

ಕಚ್ಚಿತ್ ತೇಽಭ್ಯವಹಾರ್ಯಾಣಿ ಗಾತ್ರಸಂಸ್ಪರ್ಶನಾನಿ ಚ ।
ಘ್ರೇಯಾಣಿ ಚ ಮಹಾರ್ಹಾಣಿ ರಕ್ಷತ್ಯವಿಮನಾ ಭಿಷಕ್ ॥೭೧॥

ನೀನು ತಿನ್ನುವ ಆಹಾರವನ್ನು ನೀನು ಹೊದೆಯುವ ವಸ್ತ್ರಗಳನ್ನು ನೀನು ಮೂಸಿನೋಡುವ ಬೆಲೆಬಾಳುವ ಸುಗಂಧ ದ್ರವ್ಯಗಳನ್ನು ವೈದ್ಯರು ಎಚ್ಚರಿಕೆಯಿಂದ ಪರೀಕ್ಷಿಸುತ್ತಿದ್ದಾರಷ್ಟೇ ?

ಕಚ್ಚಿತ್ ಕೋಶಂ ಚ ಕೋಷ್ಠಂ ಚ ವಾಹನಂ ಪರಮಾಯುಧಮ್ ।
ಆಯಶ್ಚ ಕೃತಕಲ್ಯಾಣೈಸ್ತವ ಭಕ್ತೈರನುಷ್ಠಿತಃ ॥೭೨॥

ನಿನ್ನ ಕೋಶ, ಗೋಶಾಲೆ, ವಾಹನ, ಮತ್ತು ಆಯುಧ, ಇವುಗಳ ವೃದ್ಧಿಯನ್ನು ನಿನ್ನಿಂದ ಸತ್ಕರಿಸಲ್ಪಟ್ಟ ನಿನ್ನಲ್ಲಿ ಅನುರಕ್ತರಾದ ಅಧಿಕಾರಿಗಳು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಯೇ?

ಕಚ್ಚಿದಾಭ್ಯಂತರೇಭ್ಯಶ್ಚ ಬಾಹ್ಯೇಭ್ಯಶ್ಚ ವಿಶಾಂಪತೇ ।
ರಕ್ಷಸ್ಯಾತ್ಮಾನಮೇವಾಗ್ರೇ ತಾಂಶ್ಚ ತೇಭ್ಯೋ ಮಿಥಶ್ಚ ತಾನ್ ॥೭೩॥

ರಾಜನೇ! ನೀನು ನಿನ್ನ ದೇಶದಲ್ಲಿ ಇರುವ ಸೂತ, ಸೇನಾಪತಿ, ಮೊದಲಾದವರಿಂದಲೂ ಪರರಾಷ್ಟ್ರಗಳಲ್ಲಿರುವ ಅಂತಪಾಲಕರಿಂದಲೂ ನಿನ್ನನ್ನು

ರಕ್ಷಿಸಿಕೊಳ್ಳುತ್ತಿದ್ದೀಯಷ್ಟೇ ? ನಿನ್ನ ಅಧಿಕಾರಿಗಳಲ್ಲಿ ಪರಸ್ಪರ ಭೇದ ಉಂಟಾಗದಂತೆ ಮತ್ತು ಶತ್ರುಗಳಿಂದ ಅವರಿಗೆ ಬಾಧೆ ಉಂಟಾಗದಂತೆ ರಕ್ಷಿಸುತ್ತಿದ್ದೀಯಷ್ಟೇ ?

ಕಚ್ಚಿನ್ನ ಪಾನೇ ದ್ಯೂತೇ ವಾ ಕ್ರೀಡಾಸು ಪ್ರಮದಾಸು ಚ ।
ಪ್ರತಿಜಾನಂತಿ ಪೂರ್ವಾಹ್ಣೇ ವ್ಯಯಂ ವ್ಯಸನಜಂ ತವ ॥೭೪॥

ನೀನು ವ್ಯಸನಕ್ಕೆ (ಚಟಕ್ಕೆ) ಒಳಗಾಗಿ ರಾತ್ರಿಯ ವೇಳೆಯಲ್ಲಿ ಪಾನದಲ್ಲಿಯಾಗಲೀ ದ್ಯೂತದಲ್ಲಿ ಆಗಲೀ ಅಕ್ಷಕ್ರೀಡಾದಿಗಳಲ್ಲಾಗಲೀ, ಸ್ತ್ರೀಯರಲ್ಲಾಗಲೀ, ವ್ಯಯಮಾಡಿದ ಸಂಪತ್ತನ್ನು ನಿನ್ನ ಪ್ರಜೆಗಳು ತಿಳಿಯುವುದಿಲ್ಲವಷ್ಟೇ?

ಕಚ್ಚಿದಾಯಸ್ಯ ವಾऽರ್ಧೇನ ಚತುರ್ಭಾಗೇನ ವಾ ಪುನಃ ।
ಪಾದಭಾಗೈಸ್ತ್ರಿಭಿರ್ವಾऽಪಿ ವ್ಯಯಃ ಸಂಶುದ್ಧ್ಯತೇ ತವ ॥೭೫॥

ನಿನ್ನ ವ್ಯಯವು ನಿನ್ನ ಲಾಭದ ಅರ್ಧಭಾಗವನ್ನಾಗಲೀ ಅಥವಾ ಕಾಲುಭಾಗವನ್ನಾಗಲೀ ಅಥವಾ ಮುಕ್ಕಾಲು ಭಾಗವನ್ನಾಗಲೀ ಎಂದೂ ಮೀರದೆ ಶುದ್ಧವಾಗಿರುತ್ತದೆಯಷ್ಟೇ ?

ಕಚ್ಚಿದ್ ಜ್ಞಾತೀನ್ ಗುರೂನ್ ವೃದ್ಧಾನ್ ವಣಿಜಃ ಶಿಲ್ಪಿನಃ ಶ್ರಿತಾನ್ ।
ಅಭಿಪುಷ್ಣಾಸಿ ಧನತೋ ಧಾನ್ಯೇನ ಚ ಸುದುರ್ಗತಾನ್ ॥೭೬॥

ಬಂಧುಗಳಾಗಲೀ, ಗುರುಗಳಾಗಲೀ, ಹಿರಿಯರಾಗಲೀ ವರ್ತಕರಾಗಲೀ ಕುಶಲಕರ್ಮಿಗಳಾಗಲೀ ನಿನ್ನನ್ನು ಆಶ್ರಯಿಸಿರುವವರು ದುರ್ಗತಿಯನ್ನು ಹೊಂದಿದಾಗ ಅವರನ್ನು ಧನ ಧಾನ್ಯದಿಂದ ಪೋಷಿಸುತ್ತಿರುವಿಯಷ್ಟೇ ?

ಕಚ್ಚಿದಾಯವ್ಯಯೇ ಯುಕ್ತಾಃ ಸರ್ವೇ ಗಣಕಲೇಖಕಾಃ ।
ಅನುತಿಷ್ಠಂತಿ ಪೂರ್ವಾಹ್ಣೇ ನಿತ್ಯಮಾಯವ್ಯಯೌ ತವ ॥೭೭॥

ನೀನು ಆಯವ್ಯಯಪರಿಶೋಧನೆಯಲ್ಲಿ ನಿಯಮಿಸಿದ ಲೇಖಕರು ಮತ್ತು ಗಣಕರು ಪ್ರತಿದಿನವೂ ಪ್ರಾತಃಕಾಲದಲ್ಲಿ ಆಯವ್ಯಯದ ಲೆಕ್ಕವನ್ನು ಸರಿಯಾಗಿ ಮಾಡುತಿದ್ದಾರಷ್ಟೇ ?

ಕಚ್ಚಿದರ್ಥೇಷು ಸಂಪ್ರೌಢಾನ್ ಜಿತಕಾಮಾನನುಪ್ರಿಯಾನ್ ।
ನಾಪಕರ್ಷಸಿ ಕರ್ಮಭ್ಯಃ ಪೂರ್ವಮಜ್ಞಾಯ ಕಿಲ್ಬಿಷಮ್ ॥೭೮॥

ಅರ್ಥಶಾಸ್ತ್ರದಲ್ಲಿ ಪ್ರೌಢರಾದ ಆಶಾರಹಿತರಾದ ನಿನಗೆ ಪ್ರಿಯರಾದ ಅಧಿಕಾರಿಗಳನ್ನು ಅವರಲ್ಲಿ ಯಾವ ದೋಷವನ್ನೂ ತಿಳಿಯದೆ ಅವರವರ ಸ್ಥಾನದಿಂದ ನೀನು ತೆಗದುಹಾಕುವುದಿಲ್ಲವಷ್ಟೇ ?

ಕಚ್ಚಿದ್ ವಿದಿತ್ವಾ ಪುರುಷಾನ್ ಉತ್ತಮಾಧಮಮಧ್ಯಮಾನ್ ।
ತ್ವಂ ಕರ್ಮಸ್ವನುರೂಪೇಷು ನಿಯೋಜಯಸಿ ನಿತ್ಯಶಃ ॥೭೯॥

ನಿನ್ನ ಸೇವಕರಲ್ಲಿ ಉತ್ತಮ ಮಧ್ಯಮ ಮತ್ತು ಅಧಮರನ್ನು ಗುರುತಿಸಿ ನಿತ್ಯವೂ ಅವರವರಿಗೆ ಅನುರೂಪವಾದ ಕಾರ್ಯಗಳಲ್ಲಿ ಅವರನ್ನು ನೇಮಿಸಿರುವೆಯಾ?

ಕಚ್ಚಿನ್ನ ಲುಬ್ಧಾಶ್ಚೋರಾ ವಾ ವೈರಿಣೋ ವಾ ವಿಶಾಂಪತೇ ।
ಅಪ್ರಾಪ್ತವ್ಯವಹಾರಾ ವಾ ತವ ಕರ್ಮಸ್ವಧಿಷ್ಠಿತಾಃ ॥೮೦॥

ರಾಜನೇ! ಆಸೆಬುರಕರನ್ನಾಗಲೀ, ಚೋರರನ್ನಾಗಲೀ ಅಥವಾ ಶತ್ರುಗಳನ್ನಾಗಲೀ ಅಥವಾ ಯಾರ ಚಲನವಲನ ತಿಳಿಯುವುದಿಲ್ಲವೋ ಅಂತಹವರನ್ನಾಗಲೀ ಎಂದೂ ಅಧಿಕಾರಿಯನ್ನಾಗಿ ನೇಮಿಸಿಲ್ಲವಷ್ಟೇ ?

ಕಚ್ಚಿನ್ನ ಲುಬ್ಧೈಶ್ಚೋರೈರ್ವಾ ಕುಮಾರೈರ್ವಿವಿಧೈರಪಿ ।
ತ್ವಯಾ ವಾ ಪೀಡ್ಯತೇ ರಾಷ್ಟ್ರಂ ಕಚ್ಚಿತ್ ತುಷ್ಟಾಃ ಕೃಷೀವಲಾಃ ॥೮೧॥

ನಿನ್ನ ರಾಷ್ಟ್ರವು ಲೋಭವುಳ್ಳವರಿಂದಾಗಲೀ ಚೋರರಿಂದಾಗಲೀ ಅನೇಕ ಬಾಲಬುದ್ಧಿಯವರಿಂದಾಗಲೀ ಅಥವಾ ನಿನ್ನಿಂದಾಗಲೀ ಪೀಡಿಸಲ್ಪಡುವುದಿಲ್ಲವಷ್ಟೇ ? ನಿನ್ನ ಕೃಷೀವಲರು ಸಂತುಷ್ಟರಾಗಿದ್ದಾರಷ್ಟೇ ?

ಕಚ್ಚಿದ್ ರಾಷ್ಟ್ರೇ ತಟಾಕಾನಿ ಪೂರ್ಣಾನಿ ಚ ಮಹಾಂತಿ ಚ ।
ಭಾಗಶೋ ವಿನಿವಿಷ್ಟಾನಿ ನ ಕೃಷಿರ್ದೇವಮಾತೃಕಾ ॥೮೨॥

ನಿನ್ನ ರಾಷ್ಟ್ರದಲ್ಲಿ ಕೆರೆಗಳು ಪೂರ್ಣವಾಗಿದ್ದು ಮತ್ತು ದೊಡ್ಡದಾಗಿದ್ದು ಅವುಗಳಿಗೆ ಯೋಗ್ಯವಾದ ಸ್ಥಳಗಳಲ್ಲಿ ಅವುಗಳನ್ನು ನಿರ್ಮಿಸಿದ್ದೀಯಷ್ಟೇ ? ನಿನ್ನ ರಾಜ್ಯ ಕೃಷಿಯು ದೇವಮೂಲವಾದ ಮಳೆಯನ್ನೇ ಅವಲಂಬಿಸಿಲ್ಲವಷ್ಟೇ ?

ಕಚ್ಚಿದ್ ಬೀಜಂ ಚ ಭಕ್ತಂ ಚ ಕರ್ಷಕಾಯಾವಸೀದತೇ ।
ಪ್ರತಿಗುಂಜಾಶತಂ ವೃದ್ಧ್ಯಾ ದದಾಸ್ಯೃಣಮನುಗ್ರಹಾತ್ ॥೮೩॥

ನಿನ್ನ ರಾಜ್ಯದ ಕೃಷೀವಲರು ದುರ್ಗತಿಗೆ ಈಡಾದಾಗ ಅವರಿಗೆ ನೂರುಸುವರ್ಣನಾಣ್ಯಗಳಿಗೆ ಒಂದು ಗುಂಜಿಯ ತೂಕದಷ್ಟು ಸುವರ್ಣನಾಣ್ಯದ ಬಡ್ಡಿಯ ಮೇರೆಗೆ ಅನುಗ್ರಹವನ್ನು ಮಾಡಿ ಸಾಲವನ್ನು ಕೊಡುತ್ತಿರುವಿಯಷ್ಟೇ ?

ಕಚ್ಚಿತ್ ತೇ ದಯಿತಾಃ ಸರ್ವೇ ಕೃಷಿಗೋರಕ್ಷಜೀವಿನಃ ।
ಕಚ್ಚಿತ್ ಸ್ವನುಷ್ಠಿತಾ ತಾತ ವಾರ್ತಾ ತೇ ಸಾಧುಭಿರ್ಜನೈಃ ॥೮೪॥

ಪ್ರೀತಿಪಾತ್ರನೇ! ಕೃಷಿಯನ್ನೂ ಗೋರಕ್ಷೆಯನ್ನೂ ಅವಲಂಬಿಸಿ ಜೀವಿಸುವವರೆಲ್ಲರೂ ನಿನಗೆ ಪ್ರಿಯವಾಗಿದ್ದಾರಷ್ಟೇ? ನಿನ್ನ ರಾಜ್ಯದಲ್ಲಿ ಸಜ್ಜನರು ವ್ಯಾಪಾರಗಳನ್ನು ಚೆನ್ನಾಗಿ ಮಾಡುತ್ತಿದ್ದಾರಷ್ಟೇ?

ವಾರ್ತಾಯಾಂ ಸಂಶ್ರಿತಸ್ತಾತ ಲೋಕೋಽಯಂ ಸುಖಮೇಧತೇ ।
ಕಚ್ಚಿಚ್ಚುಚಿಕೃತಪ್ರಜ್ಞಾಃ ಪಂಚ ಪಂಚಸ್ವನುಷ್ಠಿತಾಃ ।
ಕ್ಷೇಮಂ ಕುರ್ವಂತಿ ಸಂಹತ್ಯ ರಾಜನ್ ಜನಪದೇ ತವ ॥೮೫॥

ಪ್ರೀತಿಪಾತ್ರನೇ! ವ್ಯಾಪಾರವನ್ನು ಅವಲಂಬಿಸಿದ ಜನರು ಲೋಕದಲ್ಲಿ ಸುಖವಾಗಿರುತ್ತಾರೆ. ರಾಜನೇ! ನೀನು ನಿನ್ನ ರಾಷ್ಟ್ರದಲ್ಲಿ ಪ್ರತಿಗ್ರಾಮದಲ್ಲಿಯೂ ಅಧಿಕಾರಿಗಳನ್ನಾಗಿ ಇರಿಸಿದ ಐದೈದು ಜನ ವಿದ್ವಾಂಸರು ಆ ಗ್ರಾಮಗಳಿಗೆ ಕ್ಷೇಮವನ್ನು ಮಾಡುತ್ತಿರುವರಷ್ಟೇ ?

ಕಚ್ಚಿನ್ನಗರಗುಪ್ತ್ಯರ್ಥಂ ಗ್ರಾಮಾ ನಗರವತ್ ಕೃತಾಃ ।
ಗ್ರಾಮವಚ್ಚ ಕೃತಾ ರಕ್ಷಾ ತೇ ಚ ಸರ್ವೇ ತ್ವದರ್ಪಣಾಃ ॥೮೬॥

ನಿನ್ನ ನಗರವನ್ನು ರಕ್ಷಿಸುವ ಸಲುವಾಗಿ ನಗರದ ಸುತ್ತಮುತ್ತಲಿನ ಗ್ರಾಮಗಳನ್ನು ನಗರದಂತೆಯೇ ಕಲ್ಪಿಸಿರುವಿಯಷ್ಟೇ . ಗ್ರಾಮಗಳನ್ನು ಸಹ ಗ್ರಾಮಗಳಿಗೆ ಯೋಗ್ಯವಾದ ರೀತಿಯಲ್ಲಿ ಅಷ್ಟೇ ಕೃಷೀವಲರನ್ನು ಇಟ್ಟು ರಕ್ಷಿಸಿರುವಿಯಷ್ಟೇ ? ನಗರವಾಸಿಗಳು ಮತ್ತು ಗ್ರಾಮವಾಸಿಗಳು ನಿನ್ನಲ್ಲೇ ಅನುರಕ್ತರಾಗಿರುವರಷ್ಟೇ ?

ಕಚ್ಚಿದ್ ಬಲೇನಾನುಮತಾಃ ಸಮಾನಿ ವಿಷಮಾಣಿ ಚ ।
ಪುರಾಣೆ ಚಾರಾಃ ಸಾಧ್ಯಕ್ಷಾಃ ಚರಂತಿ ವಿಷಯೇ ತವ ॥೮೭॥

ನಿನ್ನ ರಾಜ್ಯದಲ್ಲಿ ಯಾವಾಗಲೂ ಸಂಚರಣಸಾಮರ್ಥ್ಯವನ್ನು ಹೊಂದಿದ್ದ ನಿನ್ನ ಅಧಿಕಾರಿಗಳು. ಮಹಾ ನಗರಗಳಲ್ಲಿ ತಮ್ಮ ಅಧ್ಯಕ್ಷರಿಂದ ಒಡಗೂಡಿ ಲೋಕಸಮ್ಮತವಾದ ಕಾರ್ಯಗಳನ್ನು ಮತ್ತು ರಾಜನೀತಿಗೆ ಮತ್ತು ಲೋಕಕ್ಕೆ ಅವಿರುದ್ಧವಾದ ಕಾರ್ಯಗಳನ್ನು ಆಚರಿಸುತ್ತಿರುವರಷ್ಟೇ ?

ಕಚ್ಚಿತ್ ಸ್ತ್ರಿಯಃ ಸಾಂತ್ವಯಸಿ ಕಚ್ಚಿತ್ ತಾತ ಸುರಕ್ಷಿತಾಃ ।
ಕಚ್ಚಿನ್ನ ಶ್ರದ್ದಧಾಸ್ಯಾಸಾಂ ಕಚ್ಚಿದ್ ಗುಹ್ಯಂ ನ ಭಾಷಸೇ ॥೮೮॥

ಪ್ರೀತಿಪಾತ್ರನೇ! ಕಷ್ಟಕ್ಕೆ ಸಿಲುಕಿದ ಸ್ತ್ರೀಯರನ್ನು ನೀನು ಸಮಾಧಾನಪಡಿಸುತ್ತಿರುವಿಯಷ್ಟೇ ?ನಿನ್ನ ರಾಜ್ಯದಲ್ಲಿ ಸ್ತ್ರೀಯರು ಸುರಕ್ಷಿತರಾಗಿ ಇರುವರಷ್ಟೇ ? ನೀನು ಹೆಂಗಸರು ಆಡಿದ ಮಾತೆಲ್ಲವನ್ನೂ ನಂಬುವುದಿಲ್ಲವಷ್ಟೇ ? ಮತ್ತು ಅವರ ಬಳಿ ರಹಸ್ಯವಾದ ವಿಷಯಗಳನ್ನು ಮಾತನಾಡುವುದಿಲ್ಲವಷ್ಟೇ ?

ಕಚ್ಚಿಚ್ಚಾರಾನ್ನಿಶಿ ಶ್ರುತ್ವಾ ತತ್ಕಾರ್ಯಮನುಚಿಂತ್ಯ ಚ ।
ಪ್ರಿಯಾಣ್ಯನುಭವನ್ ಶೇಷೇ ವಿದಿತ್ವಾಽಭ್ಯಂತರಂ ಜನಮ್ ॥೮೯॥

ರಾತ್ರಿಯ ವೇಳೆಯಲ್ಲಿ ಚಾರರ ಆ ದಿನದ ಕಾರ್ಯಗಳನ್ನು ಕೇಳಿ ಅದನ್ನು ವಿಮರ್ಶೆಮಾಡಿ ಅಂತಃಪುರದಲ್ಲಿ ಇರುವ ಜನರನ್ನು ತಿಳಿದುಕೊಂಡು ರಾತ್ರಿಯ ವೇಳೆಯಲ್ಲಿ ಸುಖವನ್ನು ಅನುಭವಿಸುವಿಯಷ್ಟೇ?

ಕಚ್ಚಿದ್ ದ್ವೌ ಪ್ರಥಮೌ ಯಾಮೌ ರಾತ್ರೌ ಸುಪ್ತ್ವಾ ವಿಶಾಂಪತೇ।
ವಿಚಿಂತಯಸಿ ಧರ್ಮಾರ್ಥೌ ಯಾಮ ಉತ್ಥಾಯ ಪಶ್ಚಿಮೇ ॥೯೦॥

ರಾಜನೇ! ರಾತ್ರಿಯಲ್ಲಿ ಮೊದಲ ಯಾಮವು ಕಳೆದಮೇಲೆ ಎರಡು ಯಾಮಗಳನ್ನು ನಿದ್ರೆಯಿಂದ ಕಳೆದು, ಮೂರನೆಯ ಯಾಮದಲ್ಲಿ ಎಚ್ಚರಗೊಂಡು ಧರ್ಮಾರ್ಥಗಳನ್ನು ಚಿಂತಿಸುತ್ತೀಯಷ್ಟೇ ?

ಕಚ್ಚಿದ್ ದರ್ಶಯಸೇ ನಿತ್ಯಂ ಮನುಷ್ಯಾನ್ ಸಮಲಂಕೃತಃ ।
ಉತ್ಥಾಯ ಕಾಲೇ ಕಾಲಜ್ಞೈಃ ಸಹ ಪಾಂಡವ ಮಂತ್ರಿಭಿಃ ॥೯೧॥

ಪಾಂಡವನೇ! ನೀನು ಪ್ರಾತಃಕಾಲದಲ್ಲಿ ಎದ್ದು ಉಚಿತಕಾಲವನ್ನು ತಿಳಿದ ಮಂತ್ರಿಗಳ ಜೊತೆಯಲ್ಲಿ ನಿನ್ನ ಪ್ರಜೆಗಳಿಗೆ ಅಲಂಕೃತನಾಗಿ ದರ್ಶನವನ್ನು ಕೊಡುತ್ತಿರುವಿಯಷ್ಟೇ ?

ಕಚ್ಚಿದ್ ರಕ್ತಾಂಬರಧರಾಃ ಖಡ್ಗಹಸ್ತಾಃ ಸಕುಂಡಲಾಃ ।
ಅಭಿತಸ್ತಾ ಮುಪಾಸಂತೇ ರಕ್ಷಣಾರ್ಥಮರಿಂದಮ ॥೯೨॥

ಅರಿಂದಮನೇ! ರಕ್ತವಸ್ತ್ರವನ್ನು ಧರಿಸಿದ ಕರ್ಣಕುಂಡಲಗಳನ್ನು ಧರಿಸಿದ ಕೈಯಲ್ಲಿ ಖಡ್ಗವನ್ನು ಹಿಡಿದ ಅಂಗರಕ್ಷಕರು ಯಾವಾಗಲೂ ನಿನ್ನ ಸುತ್ತಲೂ ಇದ್ದು ನಿನ್ನ ರಕ್ಷಣೆಯನ್ನು ಮಾಡುತ್ತಾ ಸೇವೆಸಲ್ಲಿಸುವರಷ್ಟೇ ?

ಕಚ್ಚಿದ್ ದಂಡ್ಯೇಷು ಯಮವತ್ ಪೂಜ್ಯೇಷು ಚ ವಿಶಾಂಪತೇ ।
ಪರೀಕ್ಷ್ಯ ವರ್ತಸೇ ಸಮ್ಯಗ್ ಅಪ್ರಿಯೇಷು ಪ್ರಿಯೇಷು ಚ ॥೯೩॥

ರಾಜನೇ! ನೀನು ಶಿಕ್ಷಾರ್ಹರಾದ ಅಪ್ರಿಯರಲ್ಲಿಯೂ, ಪೂಜಾರ್ಹರಾದ ಪ್ರಿಯರಲ್ಲಿಯೂ, ಚೆನ್ನಾಗಿ ಪರೀಕ್ಷೆಮಾಡಿ ಯಮನಂತೆ ನಿಷ್ಪಕ್ಷಪಾತದಿಂದ ವರ್ತಿಸುತ್ತಿರುವಿಯಾ?

ಕಚ್ಚಿಚ್ಛಾರೀರಮಾಬಾಧಮೌಷಧೈರ್ನಿಯಮೇನ ಚ ।
ಮಾನಸಂ ವೃದ್ಧಸೇವಾಭಿಃ ಸದಾ ಪಾರ್ಥಾಪಕರ್ಷಸಿ ॥೯೪॥

ಪಾರ್ಥನೇ! ನಿನ್ನ ಶರೀರದುಃಖಗಳನ್ನು ಔಷದಿ ಮತ್ತು ನಿಯಮಗಳಿಂದಲೂ ಮಾನಸದುಃಖವನ್ನು ವೃದ್ಧರಸೇವೆಯಿಂದಲೂ ಕಳೆದುಕೊಳ್ಳುತ್ತಿರುವಿಯಷ್ಟೇ ?

ಕಚ್ಚಿದ್ ವೈದ್ಯಾಶ್ಚಿಕಿತ್ಸಾಯಾಮಷ್ಟಾಂಗಾಯಾಂ ವಿಶಾರದಾಃ ।
ಸುಹೃದಶ್ಚಾನುರಕ್ತಾಶ್ಚ ಶರೀರೇ ತೇ ಹಿತಾಃ ಸದಾ ॥೯೫॥

ನಿನ್ನ ವೈದ್ಯರು ಅಷ್ಟಾಂಗಚಿಕಿತ್ಸೆಯಲ್ಲಿ ವಿಶಾರದರಾಗಿ, ನಿನ್ನಲ್ಲಿ ವಿಶ್ವಾಸವುಳ್ಳವರಾಗಿ ಮತ್ತು ಅನುರಕ್ತರಾಗಿ ಯಾವಾಗಲೂ ನಿನ್ನ ಹಿತವನ್ನು ಸಾಧಿಸುತ್ತಿದ್ದಾರಷ್ಟೇ ?

ಕಚ್ಚಿನ್ನ ಮೋಹಾನ್ಮಾನಾದ್ವಾ ಕಾಮಾದ್ವಾಽಪಿ ವಿಶಾಂಪತೇ ।
ಅರ್ಥಿಪ್ರತ್ಯರ್ಥಿನಃ ಪ್ರಾಪ್ತಾನ್ ನಾಪಾಸ್ಯಸಿ ಕಥಂಚನ ॥೯೪॥

ರಾಜನೇ! ಅರ್ಥಿಯಾಗಿ ಬಂದ ಸ್ವಜನರನ್ನಾಗಲೀ ಅಥವಾ ವಿರೋಧಗಳಾಗಿ ಬಂದ ಶತ್ರುಗಳನ್ನಾಗಲೀ ನೀನು ಮದದಿಂದಲಾಗಲೀ, ಅಹಂಕಾರದಿಂದಲಾಗಲೀ, ಅಥವಾ ಕಾಮದಿಂದಲಾಗಲೀ, ಯಾವ ಕಾರಣಕ್ಕಾಗಿಯೂ ಉದಾಸೀನಮಾಡುತ್ತಿಲ್ಲವಷ್ಟೇ ?

ಕಚ್ಚಿನ್ನ ಲೋಭಾದ್ ದ್ವೇಷಾದ್ವಾ ವಿಸ್ರಂಭಾತ್ ಪ್ರಣಯೇನ ವಾ ।
ವರ್ತಮಾನೋ ಮನುಷ್ಯಾಣಾಂ ವೃತ್ತಿಂ ತ್ವಮನುರುದ್ಧ್ಯಸೇ ॥೯೫॥

ಲೋಭದಿಂದಲಾಗಲೀ, ದ್ವೇಷದಿಂದಲಾಗಲೀ, ಅತಿವಿಶ್ವಾಸದಿಂದಲಾಗಲೀ, ಅಥವಾ ಸ್ನೇಹದಿಂದಲಾಗಲೀ, ಕೂಡಿದವನಾಗಿ ನೀನು ನಿನ್ನ ಪ್ರಜೆಗಳ ಜೀವನೋಪಾಯಕ್ಕೆ ಭಂಗವನ್ನು ತರುತ್ತಿಲ್ಲವಷ್ಟೇ ?

ಕಚ್ಚಿತ್ ಅರ್ಥೇಷು ಸಂಪ್ರೋಕ್ತಾನ್ ಅರ್ಥಕರ್ಮ ವಿವಕ್ಷಣಾನ್।
ನಾಪಕರ್ಷಸಿ ಕರ್ಮಭ್ಯೋ ಹ್ಯರ್ಥಯುಕ್ತಾ ಇತೀವ ಹಿ ॥೯೬॥

ಧನದ ವ್ಯವಹಾರದಲ್ಲಿ ನಿಷ್ಣಾತರಾದಂತಹ, ಮತ್ತು ಧನದ ವಿಷಯದಲ್ಲಿ ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸುವಂತಹ, ನಿನ್ನ ಅಧಿಕಾರಿಗಳನ್ನು ಇವರು ಯಾವಾಗಲೂ ಧನದ ಸಮೀಪದಲ್ಲಿ ಇರುತ್ತಾರೆ ಎಂಬ ಕಾರಣದಿಂದ ಅವರನ್ನು ಅಧಿಕಾರಸ್ಥಾನದಿಂದ ತೆಗೆಯುವುದಿಲ್ಲವಷ್ಟೇ ?

ಕಚ್ಚಿತ್ ಪೌರಾ ನ ಸಹಿತಾ ಯೇ ಚ ತೇ ರಾಷ್ಟ್ರವಾಸಿನಃ ।
ತ್ವಯಾ ಸಹ ವಿರುದ್ಧ್ಯಂತೇ ಪರೈಃ ಕ್ರೀತಾಃ ಕಥಂಚನ ॥೯೭॥

ನಿನ್ನ ರಾಷ್ಟ್ರವಾಸಿಗಳಾದ ಪ್ರಜೆಗಳು ಶತ್ರುಗಳಿಂದ ಕೊಂಡುಕೊಳ್ಳಲ್ಪಟ್ಟವರಾಗಿ, ಎಲ್ಲರೂ ಒಂದುಗೂಡಿ ನಿನಗೆ ವಿರೋಧವನ್ನು ಮಾಡುವುದಿಲ್ಲವಷ್ಟೇ ?

ಕಚ್ಚಿತ್ ತೇ ದುರ್ಬಲಃ ಶತ್ರುರ್ಬಲಿನಾಽಪಿ ನಿಪೀಡಿತಃ ।
ಮಂತ್ರೇಣ ಬಲವಾನ್ ಕಚ್ಚಿತ್ ತ್ವಮುಭಾಭ್ಯಾಂ ತಥಾ ಸಮಃ ॥೯೮॥

ನಿನಗೆ ದುರ್ಬಲನಾದ ಒಬ್ಬ ಶತ್ರು, ಇನ್ನೊಬ್ಬನು ಮಂತ್ರಶಕ್ತಿಯಿಂದ ಬಲಿಷ್ಠನಾದವನು, ಅವನು ಪ್ರಬಲ ಶತ್ರುವಿನಿಂದ ಪೀಡಿತನಾದವನು, ಇವರಿಬ್ಬರ ವಿಷಯದಲ್ಲಿಯೂ ನೀನು ಒಂದೇ ರೀತಿ ಸಮನಾಗಿ ನಡೆದುಕೊಳ್ಳವಿಯಷ್ಟೇ ?

ಕಚ್ಚಿತ್ ಸರ್ವೇऽನುರಕ್ತಾಶ್ಚ ಭೂಮಿಪಾಲಾಃ ಪ್ರಧಾನತಃ ।
ಕಚ್ಚಿತ್ ಪ್ರಾಣಾಂಸ್ತವಾರ್ಥೇಷು ಸಂತ್ಯಜಂತಿ ಸಮಾಹಿತಾಃ ॥೯೯॥

ನಿನ್ನ ಪ್ರಧಾನರಾದ ಸಾಮಂತರೆಲ್ಲರೂ, ನಿನ್ನಲ್ಲಿ ಅನುರಕ್ತರಾಗಿ ನಿನ್ನ ಹಿತಕ್ಕಾಗಿ, ಸಂತೋಷದಿಂದ ತಮ್ಮ ಪ್ರಾಣಗಳನ್ನು ತ್ಯಾಗಮಾಡಲು ಸಿದ್ಧರಾಗಿದ್ದಾರಷ್ಟೇ ?

ಕಚ್ಚಿತ್ ತೇ ಸರ್ವವೈದ್ಯೇಷು ಗುಣೇನಾರ್ಚಾ ಪ್ರವರ್ತತೇ ।
ಬ್ರಾಹ್ಮಣಾನಾಂ ಚ ತತ್ ಸುಷ್ಠು ತವ ನಿಶ್ರೇಯಸಂ ಚ ತತ್ ॥೧೦೦॥

ಬೇರೆ ಬೇರೆ ವಿದ್ಯೆಗಳಲ್ಲಿ ನಿಪುಣರಾದವರನ್ನು ಅವರ ವಿದ್ಯಾಗುಣಕ್ಕೆ ಅನುರೂಪವಾಗಿ ನೀನು ಪೂಜಿಸುತ್ತಿರುವೆಯಷ್ಟೇ? ವಿದ್ಯೆಗೆ ಅನುಗುಣವಾದ ಪೂಜೆಯು ಬ್ರಾಹ್ಮಣರಿಗೆ ಬಹಳ ಪ್ರಿಯವಾದುದು ಮತ್ತು ನಿನಗೆ ಒಳ್ಳೆಯ ಶ್ರೇಯಸ್ಸನ್ನು ಕೊಡುವಂತಹದು.

ಕಚ್ಚಿದ್ಧರ್ಮೇ ತ್ರಯೀಮೂಲೇ ಪೂರ್ವೈರಾಚರಿತೇ ಜನೈಃ ।
ವರ್ತಮಾನಸ್ತಥಾ ಕರ್ತುಂ ತಸ್ಮಿನ್ ಕರ್ಮಣಿ ವರ್ತಸೇ ॥೧೦೧॥

ನಿನ್ನ ಪೂರ್ವಜರು ಆಚರಿಸಿದ ವೇದಮೂಲವಾದ ಕರ್ಮಗಳನ್ನು ತಿಳಿದು ಅದರಂತೆ ಆಚರಿಸುತ್ತಿರುವಿಯಷ್ಟೇ ?

ಕಚ್ಚಿತ್ತವ ಗೃಹೇऽನ್ನಾನಿ ಸ್ವಾದೂನ್ಯಶ್ನಂತಿ ವೈ ದ್ವಿಜಾಃ ।
ಗುಣವಂತಿ ಗುಣೋಪೇತಾಸ್ತವಾದ್ಯ ಕುರುಸತ್ತಮ ॥೧೦೨॥

ಕುರುಶ್ರೇಷ್ಠನೇ! ನಿನ್ನ ಮನೆಯಲ್ಲಿ ಗುಣವಂತರಾದ ಬ್ರಾಹ್ಮಣರು ಈಗ ಮಧುರವಾದ, ಮತ್ತು ಗುಣದಿಂದ ಕೂಡಿದ ಅನ್ನವನ್ನು ಭೋಜನಮಾಡುತ್ತಿದ್ದಾರೆಯೇ?

ಕಚ್ಚಿತ್ ಕ್ರತೂನ್ ಏಕಚಿತ್ತೋ ವಾಜಪೇಯಾಂಶ್ಚ ಸರ್ವಶಃ ।
ಪೌಂಡರೀಕಾಂಶ್ಚ ಕಾರ್ತ್ಸ್ನ್ಯೇನ ಯಥಸೇ ಕರ್ತುಮಾದರಾತ್ ॥೧೦೩॥

ವಾಜಪೇಯ, ಪೌಂಡರೀಕ, ಮೊದಲಾದ ಯಾಗಗಳನ್ನು ಏಕಚಿತ್ತದಿಂದ ಮತ್ತು ಆದರದಿಂದ ಸಮಗ್ರವಾಗಿ ಮಾಡಲು ಪ್ರಯತ್ನ ಪಡುತ್ತಿರುವೆಯಷ್ಟೇ ?

ಕಚ್ಚಿದ್ ದ್ವಿಜಾನ್ ಗುರೂನ್ ವೃದ್ಧಾನ್ ದೈವತಾಂಸ್ತಾಪಸಾಂಸ್ತಥಾ ।
ಚೈತ್ಯವೃಕ್ಷಾನ್ ಸುಕಲ್ಯಾಣಾನ್ ಬ್ರಾಹ್ಮಣಾಂಸ್ತ್ವಂ ನಮಸ್ಯಸಿ ॥೧೦೪॥

ಬ್ರಾಹ್ಮಣರನ್ನೂ, ಗುರುಗಳನ್ನೂ, ಹಿರಿಯರನ್ನೂ, ದೇವತೆಗಳನ್ನೂ, ತಪಸ್ವಿಗಳನ್ನೂ, ಪೂಜನೀಯವಾದ ವೃಕ್ಷಗಳನ್ನೂ ಮತ್ತು ಮಂಗಳಕರವಾದ ಬ್ರಾಹ್ಮಣರನ್ನೂ ನಮಸ್ಕರಿಸುವಿಯಷ್ಟೇ ?

ಕಚ್ಚಿದೇಷಾ ಚ ತೇ ಬುದ್ಧಿರ್ವೃತ್ತಿರೇಷಾ ಚ ತೇಽನಘ ।
ಆಯುಷ್ಯಾಯ ಯಶಸ್ಯಾಯ ಧರ್ಮಾರ್ಥಶುಭದರ್ಶಿನೀ ॥೧೦೫॥

ದೋಷದೂರನಾದವನೇ! ನಿನ್ನ ಈ ಬುದ್ಧಿಯು ಮತ್ತು ಈ ನಡವಳಕೆಯು ನಿನಗೆ ಆಯುಸ್ಸನ್ನೂ, ಕೀರ್ತಿಯನ್ನೂ, ಧರ್ಮಾರ್ಥಗಳನ್ನೂ ಸಂಪಾದಿಸಿಕೊಡುತ್ತಿವೆಯಷ್ಟೇ ?

ಏತಯಾ ವರ್ತಮಾನಸ್ಯ ಬುದ್ಧ್ಯಾ ರಾಜ್ಯಂ ನ ಸೀದತಿ ।
ನಿರ್ಜಿತ್ಯ ಚ ಮಹಾರಾಜ ಸೋಽನಂತಂ ಸುಖಮಶ್ನುತೇ ॥೧೦೬॥

ಮಹಾರಾಜನೇ! ಇಂತಹ ಬುದ್ಧಿಯಿಂದ ನಡೆದುಕೊಳ್ಳುವ ರಾಜನಿಗೆ ಎಂದೂ ರಾಜ್ಯವು ನಾಶವನ್ನು ಹೊಂದುವುದಿಲ್ಲ. ಅವನು ಉಳಿದ ರಾಜರನ್ನು ಸೋಲಿಸಿ ಅನಂತವಾದ ಸುಖವನ್ನು ಹೊಂದುತ್ತಾನೆ.

ಕಚ್ಚಿದಾರ್ಯೋ ವಿಶುದ್ಧಾತ್ಮಾ ಹಾರಿತಶ್ಚೌರಕರ್ಮಣಿ ।
ಅದುಷ್ಟಶಾಸ್ತ್ರಕುಶಲೈರ್ನ ಲೋಭಾದ್ ಬುದ್ಧ್ಯತೇಽಶುಚಿಃ ॥೧೦೭॥

ಪರಿಶುದ್ಧನಾದ ನಿರಪರಾಧಿಯಾದ ಗೌರವಾನ್ವಿತನಾದ ಪುರುಷನನ್ನು ಪರೀಕ್ಷೆಮಾಡುವುದರಲ್ಲಿನಿಪುಣರಲ್ಲದ ಅಧಿಕಾರಿಗಳು, ಲೋಭದಿಂದ ಅವನ ಮೇಲೆ

ಕಳ್ಳತನದ ಅಪವಾದವನ್ನು ಹೊರಿಸಿ ದೇಶಾಂತರಕ್ಕೆ ಕಳುಹಿಸಿದ ಆ ವ್ಯಕ್ತಿಯನ್ನು ನೀನು ಅಶುದ್ಧನೆಂದು ಭಾವಿಸುವುದಿಲ್ಲವಷ್ಟೇ ?

ದುಷ್ಟೋ ಗೃಹೀತಸ್ತತ್ಕಾರೀ ತಜ್ಜ್ಞೈರ್ದೃಷ್ಟಃ ಸಕಾರಣೈಃ ।
ಕಚ್ಚಿನ್ನ ಮುಚ್ಯತೇ ಸ್ತೇನೋ ಹ್ಯರ್ಥಲೋಭಾನ್ನರರ್ಷಭ ॥೧೦೮॥

ನರಶ್ರೇಷ್ಠನೇ! ಕಳ್ಳನ ಚೋರಕರ್ಮವನ್ನು ನೋಡಿ ಕಳ್ಳತನದ ಪರೀಕ್ಷೆಯ ಕೆಲಸದಲ್ಲಿ ಕುಶಲರಾದವರು ಅದನ್ನು ಪುನಃ ನಿರ್ಧರಿಸಿದ ಮೇಲೆ ಧನದ ಲೋಭದಿಂದ ಕಳ್ಳರನ್ನು ವಿಮೋಚನೆಗೊಳಿಸುತ್ತಿಲ್ಲವಷ್ಟೇ ?

ವ್ಯಕ್ತಂ ತೇ ಕಚ್ಚಿದಾಢ್ಯಸ್ಯ ದರಿದ್ರಸ್ಯ ಚ ಭಾರತ ।
ಅರ್ಥಾನ್ನ ಪಥ್ಯಾ ಪಶ್ಯಂತಿ ತವಾಮಾತ್ಯಾ ಹೃತಾ ಧನೈಃ ॥೧೦೯॥

ನಿನ್ನ ಅಮಾತ್ಯರಾದುದರಿಂದ ಸನ್ಮಾರ್ಗದಲ್ಲಿಯೇ ನಡೆಯಬೇಕಾದ ನಿನ್ನ ಅಮಾತ್ಯರು ಯಾರಿಂದಲಾದರೂ ದುಷ್ಪರಿಂದ ಧನವನ್ನು ಸ್ವೀಕರಿಸಿ ಭಾಗ್ಯವಂತನ ಅಥವಾ ದರಿದ್ರನ ಧನವನ್ನು ತಪ್ಪಾಗಿ ಗ್ರಹಿಸಿ ಅವರನ್ನು ನಾಶಪಡಿಸುಪಡಿಸುತ್ತಿಲ್ಲವಷ್ಟೇ ?

ನಾಸ್ತಿಕ್ಯಮನೃತಂ ಕ್ರೋಧಂ ಪ್ರಮಾದಂ ದೀರ್ಘಸೂತ್ರತಾಮ್ ।
ಅದರ್ಶನಂ ಜ್ಞಾನವತಾಮಾಲಸ್ಯಮಕೃತಜ್ಞತಾಮ್ ॥೧೧೦॥

ಏಕಚಿಂತನಮರ್ಥಾನಾಮನರ್ಥಜ್ಞೈಶ್ಚ ಚಿಂತನಮ್ ।
ನಿಶ್ಚಿತಾನಾಮನಾರಂಭಂ ಮಂತ್ರಸ್ಯಾಪರಿಪಾಲನಮ್ ॥೧೧೧॥

ಮಂಗಲಸ್ಯಾಪ್ರಯೋಗಂ ಚ ಪ್ರಸಂಗಂ ವಿಷಯೇಷು ಚ ।
ಕಚ್ಚಿತ್ ತ್ವಂ ವರ್ಜಯಸ್ಯೇತಾನ್ ರಾಜದೋಷಾಂಶ್ಚತುರ್ದಶ ॥೧೧೨॥

ನಾಸ್ತಿಕ್ಯ , ಅನೃತ, ಕ್ರೋಧ, ಪ್ರಮಾದ, ಬಹಳ ವಿಳಂಬಮಾಡಿಕಾರ್ಯವನ್ನು ಆಚರಿಸುವುದು, ಜ್ಞಾನಿಗಳದರ್ಶನವನ್ನು ಮಾಡದಿರುವುದು, ಆಲಸ್ಯ, ಕೃತಜ್ಞತೆ ಇಲ್ಲದಿರುವುದು, ಯಾವಾಗಲೂ ಧನವನ್ನು ಚಿಂತಿಸುವುದು, ಅರ್ಥಶಾಸ್ತ್ರವನ್ನು ತಿಳಿಯದಿರುವ ಜನರ ಜೊತೆಯಲ್ಲಿ ಅರ್ಥವನ್ನು ಚಿಂತಿಸುವುದು, ಮಾಡಬೇಕೆಂದು ನಿಶ್ಚಯಮಾಡಿದ ಕಾರ್ಯಗಳನ್ನು ಪ್ರಾರಂಬಿಸದಿರುವುದು, ಮಂತ್ರಾಲೋಚನೆಯನ್ನು

ರಕ್ಷಣೆಮಾಡಿಕೊಳ್ಳದಿರುವುದು ಮಂಗಳಕಾರ್ಯಗಳನ್ನು ಮಾಡದಿರುವುದು, ಭೋಗಗಳಲ್ಲಿ ಆಸಕ್ತನಾಗುವುದು, ಈ ಹದಿನಾಲ್ಕು ರಾಜದೋಷಗಳು. ನೀನು ಇವುಗಳನ್ನು ವರ್ಜಿಸಿರುವೆಯಾ?

ಕಚ್ಚಿತ್ ತೇ ಸಫಲಾ ವೇದಾಃ ಕಚ್ಚಿತ್ ತೇ ಸಫಲಂ ಧನಮ್ ।
ಕಚ್ಚಿತ್ ತೇ ಸಫಲಾ ದಾರಾಃ ಕಚ್ಚಿತ್ ತೇ ಸಫಲಂ ಶ್ರುತಮ್ ॥೧೧೩॥

ನಿನ್ನ ವೇದಗಳು ಸಫಲವಾಗಿವೆಯೇ, ನಿನ್ನ ಧನವು ಸಫಲವಾಗಿದೆಯೇ, ನಿನ್ನ ಪತ್ನಿಯರು ಸಫಲರಾಗಿದ್ದಾರೆಯೇ, ನಿನ್ನ ವಿದ್ಯೆಯು ಸಫಲವಾಗಿದೆಯೇ?

ಯುಧಿಷ್ಠಿರಃ

ಕಥಂ ವೈ ಸಫಲಾ ವೇದಾಃ ಕಥಂ ವೈ ಸಫಲಂ ಧನಮ್ ।
ಕಥಂ ವೈ ಸಫಲಾ ದಾರಾಃ ಕಥಂ ವೈ ಸಫಲಂ ಶ್ರುತಮ್ ॥೧೧೪॥

ವೇದಗಳು ಹೇಗೆ ಸಫಲವಾಗುತ್ತವೆ? ಧನವು ಹೇಗೆ ಸಫಲವಾಗುತ್ತದೆ? ಭಾರ್ಯೆಯು ಹೇಗೆ ಸಫಲಳಾಗುತ್ತಾಳೆ? ವಿದ್ಯೆಯು ಹೇಗೆ ಸಫಲವಾಗುತ್ತದೆ?

ನಾರದಃ

ಅಗ್ನಿಹೋತ್ರಫಲಾ ವೇದಾ ದತ್ತಭುಕ್ತಫಲಂ ಧನಮ್ ।
ರತಿಪುತ್ರಫಲಾ ದಾರಾಃ ಶೀಲವೃತ್ತಫಲಂ ಶ್ರುತಮ್ ॥೧೧೫॥

ಅಗ್ನಿಹೋತ್ರವು ವೇದಗಳ ಫಲವು, ದಾನ ಮತ್ತು ಭೋಗವು ಧನದ ಫಲ, ರತಿ ಮತ್ತು ಪುತ್ರರು ಭಾರ್ಯೆಯ ಫಲ, ಶೀಲವೃತ್ತಗಳು ವಿದ್ಯೆಯ ಫಲ.

ವೈಶಂಪಾಯನಃ

ಏತದಾಖ್ಯಾಯ ಸ ಮುನಿರ್ನಾರದೋ ವೈ ಮಹಾತಪಾಃ ।
ಪಪ್ರಚ್ಛಾನಂತರಮಿದಂ ಧರ್ಮಾತ್ಮಾನಂ ಯುಧಿಷ್ಠಿರಮ್ ॥೧೧೬॥

ಮಹಾತಪಸ್ವಿಗಳಾದ ಆ ನಾರದ ಮಹರ್ಷಿಗಳು, ಇದನ್ನು ಹೇಳಿ ಅನಂತರ ಧರ್ಮಾತ್ಮನಾದ ಯುಧಿಷ್ಠಿರನನ್ನು ಕುರಿತು ಹೀಗೆ ಪ್ರಶ್ನೆಮಾಡಿದರು.

ಕಚ್ಚಿದಭ್ಯಾಗತಾ ದೂರಾದ್ ವಣಿಜೋ ಲಾಭಕಾರಣಾತ್ ।
ಯಥೋಕ್ತಮೇವ ಹಾರ್ಯಂತೇ ಶುಲ್ಕಂ ಶುಲ್ಕೋಪಜೀವಿಭಿಃ ॥೧೧೭॥

ದೂರದಿಂದ ವ್ಯಾಪಾರವನ್ನು ಮಾಡಿ ಲಾಭವನ್ನು ಗಳಿಸಬೇಕೆಂದು ಬಂದ ವರ್ತಕರಿಂದ ನಿನ್ನ ತೆರಿಗೆಯ ಅಧಿಕಾರಿಗಳು ಶಾಸ್ತ್ರವಿಹಿತವಾದಷ್ಟು ತೆರಿಗೆಯನ್ನು ಮಾತ್ರ ಸ್ವೀಕರಿಸುತ್ತಿದ್ದಾರಷ್ಟೇ ?

ಕಚ್ಚಿತ್ ತೇ ಪುರುಷಾ ರಾಜನ್ ಪುರೇ ರಾಷ್ಟ್ರೇ ಚ ಪಾಲಿತಾಃ ।
ಉತ್ಪಾದಯಂತಿ ಪುಣ್ಯಾನಿ ಉಪಧಾಭಿರವಂಚಿತಾಃ ॥೧೧೮॥

ರಾಜನೇ! ರಾಜಧಾನಿಯಲ್ಲಿಯೂ ಮತ್ತು ರಾಷ್ಟ್ರದಲ್ಲಿಯೂ ನಿನ್ನಿಂದ ರಕ್ಷಿಸಲ್ಪಟ್ಟ ಪ್ರಜೆಗಳು ಯಾವ ನೆಪಗಳಿಂದಲೂ ವಂಚಿತರಾಗದೆ ಪುಣ್ಯವಾದ ಕೆಲಸವನ್ನು ಮಾಡುತ್ತಿದ್ದಾರಷ್ಟೇ ?

ಕಚ್ಚಿಚ್ಚ್ರೋಣೋಷಿ ವೃದ್ಧಾನಾಂ ಧರ್ಮಾರ್ಥಸಹಿತಾ ಗಿರಃ ।
ನಿತ್ಯಮಾತ್ಮವಿದಾಂ ತಾತ ಯಥಾಧರ್ಮಾನುದರ್ಶಿನಾಮ್ ॥೧೧೯॥

ಪ್ರೀತಿಪಾತ್ರನೇ! ಆತ್ಮಜ್ಞರಾದ ಧರ್ಮವನ್ನು ಯಥಾರ್ಥವಾಗಿನೋಡುವ ವೃದ್ಧರ ಧರ್ಮಾರ್ಥಯುಕ್ತವಾದ ಮಾತುಗಳನ್ನು ನೀನು ನಿತ್ಯವೂ ಕೇಳಿತ್ತಿರುವೆಯಷ್ಟೇ ?

ಕಚ್ಚಿತ್ ತೇ ಕೃಷಿತಂತ್ರೇಷು ಗೋಷು ಪುಷ್ಪಫಲೇಷು ಚ ।
ನಿಯುಕ್ತಾಃ ಕುಶಲಾಸ್ತೇಷು ವಿಭಾಗಜ್ಞಾಃ ಕುಲೋಚಿತಾಃ ।
ಧರ್ಮಾರ್ಥಂ ಚ ದ್ವಿಜಾತಿಭ್ಯೋ ದೀಯತೇ ಮಧುಸರ್ಪಿಷೀ ॥೧೨೦॥

ನೀನು ಕೃಷಿವಿಧಾನಗಳಲ್ಲಿಯೂ, ಗೋರಕ್ಷಣೆಯ ವಿಧಾನದಲ್ಲಿಯೂ, ಪುಷ್ಪಫಲಗಳ ಉತ್ಪಾದನೆಯಲ್ಲಿಯೂ, ಕುಲೋಚಿತರಾದಂತಹ ಅವುಗಳ ಪ್ರಭೇದಗಳನ್ನು ತಿಳಿದಂತಹ ಕುಶಲರಾದ ಪುರುಷರನ್ನೇ ಯೋಜಿಸಿರುವೆಯಷ್ಟೇ ? ಬ್ರಾಹ್ಮಣರಿಗೆ ಧರ್ಮಾರ್ಥವಾಗಿ ಜೇನುತುಪ್ಪ ಮತ್ತು ಘೃತಗಳನ್ನು ಕೊಡುತ್ತಿರುವಿಯಷ್ಟೆ?

ದ್ರವ್ಯೋಪಕರಣಂ ಕಿಂಚಿತ್ ಸರ್ವದಾ ಸರ್ವಶಿಲ್ಪಿನಾಮ್ ।
ಚಾತುರ್ಮಾಸ್ಯಾದಧಿಕೃತಂ ನಿಯತಂ ಸಂಪ್ರಯಚ್ಛಸಿ ॥೧೨೧॥

ಮನೆಯನ್ನು ಕಟ್ಟುವವರು ಮೊದಲಾದ ಕುಶಲಕರ್ಮವನ್ನು ಬಲ್ಲವರಿಗೆ ತಮ್ಮ ಕಾರ್ಯಕ್ಕೆ ಬೇಕಾದ ದ್ರವ್ಯಗಳನ್ನು ಮತ್ತು ಉಪಕರಣಗಳನ್ನು ಮುಂದಿನ ನಾಲ್ಕು ತಿಂಗಳುಗಳಲ್ಲಿ ಬೇಕಾಗುವ ಪ್ರಮಾಣಕ್ಕಿಂತ ಅಧಿಕವಾಗಿ ನಿಯತವಾಗಿ ಕೊಡುತ್ತಿರುವಿಯಷ್ಟೇ ?

ಕಚ್ಚಿತ್ ಕೃತಂ ಚ ಜಾನೀಷೇ ಕರ್ತಾರಂ ಚ ಪ್ರಶಂಸಸಿ ।
ಸತಾಂ ಮಧ್ಯೇ ಮಹಾರಾಜ ಸತ್ಕರೋಷಿ ಚ ಪೂಜಯನ್ ॥೧೨೨॥

ಸತ್ಕಾರ್ಯಮಾಡಿದವನನ್ನು ಗುರುತಿಸಿ ಅವನನ್ನು ಸಜ್ಜನರ ಮಧ್ಯದಲ್ಲಿ ಪ್ರಶಂಸಿಸಿ ಸತ್ಕಾರವನ್ನು ಮಾಡಿ ಗೌರವಿಸುತ್ತಿರುವಿಯಷ್ಟೇ ?

ಕಚ್ಚಿತ್ ಸೂತ್ರಾಣಿ ಸರ್ವಾಣಿ ಗೃಹ್ಣಾಸಿ ಭರತರ್ಷಭ ।
ಹಸ್ತಿಸೂತ್ರಾಶ್ವಸೂತ್ರಾಣಿ ರಥಸೂತ್ರಾಣಿ ಚಾಭಿಭೋ ॥೧೨೩॥

ಶತ್ರುಗಳನ್ನು ಸೊಲಿಸುವವನೇ ಭರತರ್ಷಭನೇ! ಅಶ್ವಶಾಸ್ತ್ರ, ಗಜಶಾಸ್ತ್ರ, ತರ್ಕಶಾಸ್ತ್ರ ಮೊದಲಾದ ಎಲ್ಲ ಶಾಸ್ತ್ರಗಳನ್ನೂ ಅಭ್ಯಾಸಮಾಡುತ್ತಿರುವಿವೆಯಷ್ಟೇ ?

ಕಚ್ಚಿದಭ್ಯಸ್ಯತೇ ಶಶ್ವದ್ ಗೃಹೇ ತೇ ಭರತರ್ಷಭ ।
ಧನುರ್ವೇದಸ್ಯ ಸೂತ್ರಂ ಚ ಯಂತ್ರಸೂತ್ರಂ ಚ ನಾಗರಮ್ ॥೧೨೪॥

ಭರತರ್ಷಭನೇ! ನಿನ್ನ ಮನೆಯಲ್ಲಿ ಸರ್ವಕಾಲದಲ್ಲಿಯೂ ಧರ್ನುವೇದವಿದ್ಯೆಯು, ಯಂತ್ರವಿದ್ಯೆಯು ಮತ್ತು ನಗರವಿದ್ಯೆಯು ಅಭ್ಯಾಸಮಾಡಲ್ಪಡುತ್ತಿರುವುದಷ್ಟೇ ?

ಕಚ್ಚಿದಸ್ತ್ರಾಣಿ ಸರ್ವಾಣಿ ಬ್ರಹ್ಮದಂಡಶ್ಚ ತೇऽನಘ ।
ವಿಷಯೋಗಾಶ್ಚ ತೇ ಸರ್ವೇ ವಿದಿತಾಃ ಶತ್ರುನಾಶನಾಃ ॥೧೨೫॥

ದೋಷದೂರನಾದವನೇ! ನೀನು ಎಲ್ಲಾ ಅಸ್ತ್ರಗಳನ್ನೂ ಬ್ರಹ್ಮದಂಡವನ್ನೂ ಶತ್ರುನಾಶಕವಾದ ಎಲ್ಲಾ ವಿಷದಂಡಗಳನ್ನೂ ತಿಳಿದಿರುವೆಯಷ್ಟೇ ?

ಕಚ್ಚಿದಗ್ನಿಭಯಾಚ್ಚೈವ ಮೃಗವ್ಯಾಲಭಯಾತ್ ತಥಾ ।
ರೋಗರಕ್ಷೋಭಯಾಚ್ಚಾಪಿ ಸ್ವರಾಷ್ಟ್ರಂ ಪರಿರಕ್ಷಸಿ ॥೧೨೬॥

ನಿನ್ನ ರಾಷ್ಟ್ರವನ್ನು ಅಗ್ನಿಭಯದಿಂದಲೂ, ವನ್ಯಮೃಗಗಳ ಭಯದಿಂದಲೂ, ಗಜಸರ್ಪಗಳ ಭಯದಿಂದಲೂ, ರೋಗ ಮತ್ತು ರಾಕ್ಷಸರ ಭಯದಿಂದಲೂ ರಕ್ಷಿಸುತ್ತಿರುವಿಯಷ್ಟೇ ?

ಕಚ್ಚಿದಂಧಾಂಶ್ಚ ಮೂಕಾಂಶ್ಚ ಪಂಗೂನ್ ವ್ಯಂಗಾಂಶ್ಚ ಮಾನವಾನ್ ।
ಪಿತೇವ ಪಾಸಿ ಧರ್ಮಜ್ಞ ತಥಾ ಪ್ರವ್ರಜಿತಾನಪಿ ॥೧೨೭॥

ಧರ್ಮಜ್ಞನೇ! ನೀನು ಅಂಧರಾದ, ಮೂಕರಾದ, ಕುಂಟರಾದ, ಅಂಗಹೀನರಾದ ಮತ್ತು ಸನ್ಯಾಸವನ್ನು ಸ್ವೀಕರಿಸಿದ ಪ್ರಜೆಗಳನ್ನು ತಂದೆಯಂತೆ ರಕ್ಷಿಸುತ್ತಿರುವಿಯಷ್ಟೇ ?

ವೈಶಂಪಾಯನಃ

ಏವಂ ಕುರೂಣಾಮೃಷಭೋ ಮಹಾತ್ಮಾ
ಶ್ರುತ್ವಾ ಗಿರೋ ಬ್ರಹ್ಮವಿದುತ್ತಮಸ್ಯ ।
ಪ್ರಣಮ್ಯ ಪಾದಾವಭಿವಾದ್ಯ ಹೃಷ್ಟೋ
ರಾಜಾऽಬ್ರವೀನ್ನಾರದಂ ದೇವರೂಪಮ್ ॥೧೨೮॥

ಹೀಗೆ ಮಹಾತ್ಮನಾದ ಕುರುಶ್ರೇಷ್ಠನಾದ ಧರ್ಮರಾಜನು ಬ್ರಹ್ಮಜ್ಞಾನಿಗಳಲ್ಲಿ ಅಗ್ರಗಣ್ಯರಾದ ದೇವತೆಯಂತೆ ಕಂಗೊಳಿಸುವ ಆ ನಾರದರ ಮಾತುಗಳನ್ನು ಕೇಳಿ ಅವರ ಪಾದಗಳಿಗೆ ನಮಸ್ಕರಿಸಿ ಸಂತೋಷದಿಂದ ಅವರನ್ನು ಕುರಿತು ಮಾತನಾಡಿದನು.

ಏವಂ ಕರಿಷ್ಯಾಮಿ ಯಥಾ ತ್ವಯೋಕ್ತಂ
ಪ್ರಜ್ಞಾ ಹಿ ಮೇ ಭೂಯ ಏವಾಭಿವೃದ್ಧಾ ।
ಉಕ್ತ್ವಾ ತಥಾ ಚೈವ ಚಕಾರ ರಾಜಾ
ಲೇಭೇ ಮಹೀಂ ಸಾಗರಮೇಖಲಾಂ ಚ ॥೧೨೯॥

ಪೂಜ್ಯರೇ! ನೀವು ಹೇಳಿದಂತೆಯೇ ಮಾಡುತ್ತಿದ್ದೇನೆ. ನಿಮ್ಮ ಉಪದೇಶದಿಂದ ನನ್ನ ಜ್ಞಾನವು ಇನ್ನೂ ಅಭಿವೃದ್ಧಿಯಾಯಿತು. ಧರ್ಮರಾಜನು ಹೀಗೆ ಹೇಳಿ ಅದರಂತೆಯೇ ನಡೆದುಕೊಂಡು ಸಮುದ್ರಮೇಖಲೆಯಾದ ಭೂಮಿಯನ್ನು ಪಡೆದನು.

ನಾರದಃ

ಏವಂ ಯೋ ವರ್ತತೇ ರಾಜಾ ಚಾತುರ್ವರ್ಣ್ಯಸ್ಯ ರಕ್ಷಣೇ ।
ಸ ಏಹಿತ್ಯೈವ ಸುಸುಖೀ ಶಕ್ರಸ್ಯೈತಿ ಸಲೋಕತಾಮ್ ॥೧೩೦॥

ಯಾವ ರಾಜನು ಈ ರೀತಿಯಲ್ಲಿ ನಡೆದುಕೊಂಡು ಚಾತುರ್ವರ್ಣ್ಯವನ್ನು ರಕ್ಷಿಸುತ್ತಾನೆಯೋ ಅವನು ಈ ಲೋಕದಲ್ಲಿ ಸುಖದಿಂದ ವಿಹಾರಮಾಡಿ ಮರಣಾನಂತರದಲ್ಲಿ ಇಂದ್ರಸಾಲೋಕ್ಯವನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ಪಂಚಮೋऽಧ್ಯಾಯಃ ॥
॥ ಮಂತ್ರಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ತತಃ ಕದಾಚಿತ್ ಪ್ರವರೇ ಸಭಾತಲೇ
ಧರ್ಮಾತ್ಮಜೋ ರಾಜಭಿರ್ಭ್ರಾತೃಭಿಶ್ಚ ।
ವೃತೋ ನಿಶಮ್ಯೈವ ಸಭಾಃ ಸುರಾಣಾಂ
ಯಥಾ ಸ್ಥಿತಾ ನಾರದಮನ್ವಪೃಚ್ಛತ್ ॥೫೫॥

ಒಮ್ಮೆ ದೊಡ್ಡ ಸಭಾಂಗಣದಲ್ಲಿ ರಾಜರುಗಳಿಂದಲೂ ಸೋದರರಿಂದಲೂ ಪರಿವೃತನಾದ ಯುಧಿಷ್ಠಿರ ನಾರದರಿಂದ ದೇವಸಭೆಗಳ ಬಗ್ಗೆ ಯಥಾವತ್ತಾಗಿ ಕೇಳಿ ತಿಳಿದ ಬಳಿಕ ಪುನಃ ಪ್ರಶ್ನಿಸಿದ.

★ ★ ★ ★

ಆರನೆಯ ಅಧ್ಯಾಯ

(ಸಂತುಷ್ಟನಾದ ಯುಧಿಷ್ಠಿರನಿಂದ ನಾರದರನ್ನು ಕುರಿತು ಉಳಿದ ಸಭೆಗಳ ಬಗ್ಗೆ ಪ್ರಶ್ನೆ, ಉತ್ತರವನ್ನು ಹೇಳಲು ನಾರದರ ಪ್ರತಿಜ್ಞೆ.)

ವೈಶಂಪಾಯನಃ

ಸಂಪೂಜ್ಯಾಥಾಭ್ಯನುಜ್ಞಾತೋ ಮಹರ್ಷೇರ್ವಚನಾತ್ ಪರಮ್।
ಪ್ರತ್ಯುವಾಚಾನುಪೂರ್ವ್ಯೇಣ ಧರ್ಮರಾಜೋ ಯುಧಿಷ್ಠಿರಃ ॥೧॥

ಧರ್ಮರಾಜನಾದ ಯುಧಿಷ್ಠರನು ಮಹರ್ಷಿಗಳಾದ ನಾರದರ ವಚನದನಂತರ ಅವರನ್ನು ಸಂಪೂಜಿಸಿ ಅವರ ಅನುಮತಿಯನ್ನು ಪಡೆದು ಕ್ರಮವಾಗಿ ಮಾತನಾಡಲು ಪ್ರಾರಂಭಿಸಿದನು.

ಭಗವನ್ ಯನ್ಮಮಾಹೈತನ್ಮದರ್ಥಂ ಧರ್ಮಸಂಹಿತಮ್ ।
ಯಥಾಶಕ್ತಿ ಯಥಾನ್ಯಾಯಂ ಕ್ರಿಯತೇऽಯಂ ವಿಧಿರ್ಮಯಾ ॥೨॥

ಪೂಜ್ಯರೇ! ನೀವು ನನ್ನ ಸಲುವಾಗಿ ಹೇಳಿರುವ ಧರ್ಮಸಂಹಿತೆಯನ್ನು ನಾನು ಶಕ್ತಿಯಿದ್ದಷ್ಟು ಮತ್ತು ನನಗೆ ನ್ಯಾಯವೆಂದು ತೋರಿದ ರೀತಿಯಲ್ಲಿ ನಾನು ಅನುಸರಿಸಿಕೊಂಡು ಬರುತ್ತಿದ್ದೇನೆ.

ರಾಜಭಿಸ್ತು ತಥಾ ಕಾರ್ಯಂ ಪುರಾಣಜ್ಞೈರ್ನ ಸಂಶಯಃ ।
ಯಥಾನ್ಯಾಯೋಪನೀತಾರ್ಥಂ ಕೃತಂ ಹೇತುಮದರ್ಥವತ್ ॥೩॥

ಹಿಂದಿನ ರಾಜರುಗಳ ಚರಿತ್ರೆಯನ್ನು ಕೇಳಿದ ರಾಜರು, ಅವರಂತೆಯೇ ನ್ಯಾಯದಿಂದ ಪ್ರಾಪ್ತವಾದಂತಹ ಸಕಾರಣವಾದ ಮತ್ತು ಪ್ರಯೋಜನಕಾರಿಯಾದ ಕಾರ್ಯವನ್ನು ಮಾಡಲು ಪ್ರಯತ್ನಿಸಬೇಕು ಎಂಬುದರಲ್ಲಿ ಸಂಶಯವಿಲ್ಲ.

ವಯಂ ತು ಸತ್ಪಥೇ ತೇಷಾಂ ಯಾತುಮಿಚ್ಛಾಮಹೇ ಪ್ರಭೋ ।
ನತು ಶಕ್ಯಂ ತಥಾ ಗಂತುಂ ಯಥಾ ತೈರ್ನಿಯತಾತ್ಮಭಿಃ ॥೪॥

ಪ್ರಭುಗಳಾದ ನಾರದರೇ! ನಾನಾದರೋ ಆ ಪ್ರಾಚೀನರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯಲು ಬಯಸುತ್ತೇನೆ. ಆದರೆ ಅಜಿತಾತ್ಮನಾದ ನನಗೆ ಪ್ರಾಚೀನರು ನಡೆದಂತೆ ನಡೆಯುವದಕ್ಕೆ ಸಾಮರ್ಥ್ಯವಿಲ್ಲ.

ಏವಮುಕ್ತ್ವಾ ಸ ಧರ್ಮಾತ್ಮಾ ವಾಕ್ಯಂ ತಮಭಿಪೂಜ್ಯ ಚ ।
ಮುಹೂರ್ತಾತ್ ಪ್ರಾಪ್ತಕಾಲಂ ಚ ದೃಷ್ಟ್ವಾ ಲೋಕಚರಂ ಮುನಿಮ್ ॥

ಧರ್ಮಾತ್ಮನಾದ ಯುಧಿಷ್ಠಿರನು ಹೀಗೆ ಹೇಳಿ ನಾರದರನ್ನು ಪೂಜಿಸಿ ಒಂದು ಮೂಹೂರ್ತದ ನಂತರ ಇದು ಸರಿಯಾದ ಕಾಲ ಎಂದು ತಿಳಿದು, ಸಮಸ್ತ ಲೋಕಸಂಚಾರಿಗಳಾದ ನಾರದಮಹರ್ಷಿಗಳನ್ನು ಕುರಿತು(ಕೇಳಿದನು.)

ನಾರದಂ ಸುಸ್ಥಮಾಸೀನಮ್ ಉಪಾಸೀನೋ ಯುಧಿಷ್ಠಿರಃ ।
ತಂ ತು ವಿಶ್ರಾಂತಮಾಸೀನಂ ದೇವರ್ಷಿಮಮಿತದ್ಯುತಿಮ್ ।
ಅಪೃಚ್ಛದ್ ರಾಜಮಧ್ಯೇ ತಂ ಪ್ರೀತಿಪೂರ್ವಮಿದಂ ತದಾ ॥೬॥

ಸುಖವಾದ ಆಸನದಲ್ಲಿ ನಾರದರು ಕುಳಿತ ನಂತರ ಸಮೀಪದಲ್ಲಿ ಕುಳಿತಿದ್ದ ಯುಧಿಷ್ಠಿರನು ಅಮಿತಕಾಂತಿಯುಳ್ಳ ದೇವರ್ಷಿಗಳಾದ ನಾರದರು ವಿಶ್ರಾಂತರಾಗಿರುವುದನ್ನು ಗಮನಿಸಿ, ರಾಜಸಮೂಹದ ಮಧ್ಯದಲ್ಲಿ ಪ್ರೀತಿಪೂರ್ವಕವಾಗಿ ಆಗ ಈ ಮಾತುಗಳನ್ನು ಆಡಿದನು.

ಭಗವನ್ ಸಂಚರಂಲ್ಲೋಕಾನ್ ಸದಾ ನಾನಾವಿಧಾನ್ ಬಹೂನ್ ।
ಬ್ರಹ್ಮಣಾ ನಿರ್ಮಿತಾನ್ ಪೂರ್ವಂ ಪ್ರೇಕ್ಷಮಾಣೋ ಮನೋಜವಃ ॥

ಪೂಜ್ಯರೇ! ನೀವು ಮನೋಜವದಿಂದ ಯುಕ್ತರಾಗಿ ಬ್ರಹ್ಮದೇವರು ಸೃಷ್ಟಿಮಾಡಿದ ಬಹುವಿಧವಾದ ಅನೇಕ ಲೋಕಗಳನ್ನು ಹಿಂದೆ ನೋಡಿದ್ದೀರಿ.

ಈದೃಶೀ ಭವಿತಾ ಕಾಚಿದ್ ದೃಷ್ಟಪೂರ್ವಾ ಸಭಾ ಕ್ವಚಿತ್ ।
ಇತೋ ವಾ ಶ್ರೇಯಸೀ ಬ್ರಹ್ಮಂಸ್ತನ್ಮಾಚಕ್ಷ್ವ ಪೃಚ್ಛತಃ ॥೮॥

ಪೂಜ್ಯರೇ! ತಾವು ಇದಕ್ಕಿಂತ ಮೊದಲು ಈ ರೀತಿಯ ಸಭೆಯನ್ನು ಎಲ್ಲಿಯಾದರೂ ನೋಡಿದ್ದೀರಾ, ಅಥವಾ ಇದಕ್ಕಿಂತ ಉತ್ತಮವಾದ ಸಭೆಯನ್ನು ಎಲ್ಲಿಯಾದರೂ ನೋಡಿದ್ದೀರಾ ಎಂಬ ವಿಷಯವನ್ನು ಪ್ರಶ್ನೆಮಾಡುತ್ತಿರುವ ನನಗೆ ತಿಳಿಸಿ.

ತಚ್ಛ್ರುತ್ವಾ ನಾರದಸ್ತಸ್ಯ ಧರ್ಮರಾಜಸ್ಯ ಭಾಷಿತಮ್ ।
ಪಾಂಡವಂ ಪ್ರತ್ಯುವಾಚೇದಂ ಸ್ಮಯನ್ ಮಧುರಯಾ ಗಿರಾ ॥೯॥

ಧರ್ಮರಾಜನ ಆ ಮಾತುಗಳನ್ನು ಕೇಳಿದ ನಾರದರು ಮುಗುಳ್ನಗುತ್ತಾ ಮಧುರವಾದ ಮಾತುಗಳಿಂದ ಧರ್ಮರಾಜನಿಗೆ ಹೀಗೆ ಉತ್ತರವನ್ನು ಕೊಟ್ಟರು.

ಮಾನುಷೇಷು ನ ಮೇ ಕಾಚಿದ್ ದೃಷ್ಟಪೂರ್ವಾ ನಚ ಶ್ರುತಾ ।
ಸಭಾ ಮಣಿಮಯೀ ರಾಜನ್ ಯಥೇಯಂ ತವ ಭಾರತ ॥೧೦॥

ಭಾರತರಾಜನೇ! ನಿನ್ನ ಸಭೆಯು ಹೇಗೆ ಮಣಿಮಯವಾಗಿದೆಯೋ ಅಂತಹ ಸಭೆಯನ್ನು ನಾನು ಇದುವರೆಗೆ ಮನುಷ್ಯಲೋಕದಲ್ಲಿ ಎಂದೂ ನೋಡಲಿಲ್ಲ.

ಸಭಾಂ ತು ಪಿತೃರಾಜಸ್ಯ ವರುಣಸ್ಯ ಚ ಧೀಮತಃ ।
ಕಥಯಿಷ್ಯೇ ತಥೇಂದ್ರಸ್ಯ ಕೈಲಾಸನಿಲಯಸ್ಯ ಚ ॥೧೧॥

ನಾನು ನಿನಗೆ ಪಿತೃರಾಜನಾದ ಯಮನ ಸಭೆಯನ್ನೂ, ಮೇಧಾವಿಯಾದ ವರುಣನ ಸಭೆಯನ್ನೂ, ಇಂದ್ರನ ಸಭೆಯನ್ನೂ, ಕೈಲಾಸವಾಸಿಯದ ರುದ್ರನ ಸಭೆಯನ್ನೂ ವರ್ಣಿಸುತ್ತೇನೆ.

ಬ್ರಹ್ಮಣಶ್ಚ ಸಭಾಂ ದಿವ್ಯಾಂ ಕಥಯಿಷ್ಯೇ ಗತಕ್ಲಮಾಮ್ ।
ಯದಿ ತೇ ಶ್ರವಣೇ ಬುದ್ಧಿರ್ವರ್ತತೇ ಭರತರ್ಷಭ ॥೧೨॥

ಭರತರ್ಷಭನೇ! ನಿನಗೆ ಆ ಸಭೆಗಳ ವಿವರವನ್ನು ಕೇಳುವ ಅಭಿಪ್ರಾಯವಿದ್ದರೆ ನಾನು ಆ ಸಭೆಗಳನ್ನೂ ಮತ್ತು ದುಃಖರಹಿತವಾದ ದಿವ್ಯವಾದ ಬ್ರಹ್ಮದೇವರ ಸಭೆಯನ್ನೂ ವರ್ಣಿಸುತ್ತೇನೆ.

ನಾರದೇನೈವಮುಕ್ತಸ್ತು ಧರ್ಮರಾಜೋ ಯುಧಿಷ್ಠಿರಃ ।
ಪ್ರಾಂಜಲಿರ್ಭ್ರಾತೃಭಿಃ ಸಾರ್ಧಂ ತೈಶ್ಚ ಸರ್ವೈರ್ನರ್ಷಿಭಿರ್ವೃತಃ ॥೧೩॥

ನಾರದಂ ಪ್ರತ್ಯುವಾಚೇದಂ ಸಭಾಮಧ್ಯೇ ವ್ಯವಸ್ಥಿತಮ್ ।
ಸಭಾಃ ಕಥಯ ತಾಃ ಸರ್ವಾಃ ಶ್ರೋತುಮಿಚ್ಛಾಮಹೇ ವಯಮ್ ॥೧೪॥

ನಾರದರಿಂದ ಹೀಗೆ ಹೇಳಲ್ಪಟ್ಟ ಧರ್ಮರಾಜನಾದ ಯುಧಿಷ್ಠಿರನು ತನ್ನ ಸಹೋದರರ ಜೊತೆಯಲ್ಲಿ ಆ ಋಷಿಗಳಿಗೆ ಕೈಮುಗಿದು ಎಲ್ಲ ರಾಜರಿಂದ ಕೂಡಿಕೊಂಡವನಾಗಿ ಸಭೆಯ ಮಧ್ಯದಲ್ಲಿ ನಾರದರನ್ನು ಕುರಿತು ನಾವೆಲ್ಲರೂ, ಆ ಎಲ್ಲಾ ಸಭೆಗಳನ್ನೂ ಕೇಳಲು ಕೂತೂಹಲದಿಂದ ಕೂಡಿದ್ದೇವೆ. ದಯವಿಟ್ಟು ಅವುಗಳನ್ನು ವರ್ಣಿಸಿ ಎಂದು ಹೇಳಿದನು.

ಕಿಂದ್ರವ್ಯಾಸ್ತಾಃ ಸಭಾ ಬ್ರಹ್ಮನ್ ಕಿಂವಿಸ್ತಾರಾಃ ಕಿಮಾಯತಾಃ ।
ಪಿತಾಮಹಂ ಚ ಕೇ ತಸ್ಯಾಂ ಸಭಾಯಾಂ ಪರ್ಯುಪಾಸತೇ ॥೧೫॥

ಪೂಜ್ಯರೇ! ಆ ಸಭೆಗಳನ್ನು ಯಾವ ದ್ರವ್ಯಗಳಿಂದ ನಿರ್ಮಿಸಲಾಗಿದೆ? ಅವುಗಳ ಉದ್ದ ಅಗಲಗಳೆಷ್ಟು? ಬ್ರಹ್ಮದೇವರ ಸಭೆಯಲ್ಲಿ ಯಾರು ಬ್ರಹ್ಮದೇವರನ್ನು ಉಪಾಸನೆಮಾಡುತ್ತಾರೆ?

ವಾಸವಂ ದೇವರಾಜಂ ಚ ಯಮಂ ವೈವಸ್ವತಂ ಚ ಕೇ ।
ವರುಣಂ ಚ ಕುಬೇರಂ ಚ ಸಭಾಯಾಂ ಸಮುಪಾಸತೇ ॥೧೬॥

ಇಂದ್ರನ ಸಭೆಯಲ್ಲಿ ದೇವರಾಜನಾದ ಇಂದ್ರನನ್ನೂ, ಯಮನ ಸಭೆಯಲ್ಲಿ ವೈವಸ್ವತನಾದ ಯಮನನ್ನೂ, ವರುಣನ ಸಭೆಯಲ್ಲಿ ವರುಣನನ್ನೂ, ಮತ್ತು ಕುಬೇರನ ಸಭೆಯಲ್ಲಿ ಕುಬೇರನನ್ನೂ ಯಾರು ಉಪಾಸನೆ ಮಾಡುತ್ತಾರೆ?

ಏತತ್ ಸರ್ವಂ ಯಥಾತತ್ತ್ವಂ ದೇವರ್ಷೇ ವದತಸ್ತವ ।
ಶ್ರೋತುಮಿಚ್ಛಾಮ ಸಹಿತಾಃ ಪರಂ ಕೌತೂಹಲಂ ಹಿ ನಃ ॥೧೭॥

ದೇವರ್ಷಿಗಳೇ! ಈ ಎಲ್ಲ ವಿಷಯಗಳನ್ನು ಯಥಾರ್ಥವಾಗಿ ಹೇಳುವ ನಿಮ್ಮಿಂದ ನಾವೆಲ್ಲರೂ ಕೂಡಿ ಕೇಳಲು ಬಯಸುತ್ತೇನೆ. ನಮಗೆ ಈ ವಿಷಯದಲ್ಲಿ ತುಂಬಾ ಕುತೂಹಲವಿದೆ.

ವೈಶಂಪಾಯನಃ

ಏವಮುಕ್ತಃ ಪಾಂಡವೇನ ನಾರದಃ ಪ್ರತ್ಯುವಾಚ ಹ ।
ಕ್ರಮೇಣ ರಾಜನ್ ದಿವ್ಯಾಸ್ತಾಃ ಶ್ರೂಯತಾಮಿಹ ನಃ ಸಭಾಃ ॥೧೮॥

ರಾಜನೇ! ಪಾಂಡವನಾದ ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ನಾರದರು ನಮ್ಮಿಂದ ಕೇಳಿ ಎಂದು ಹೇಳಿ, ಆ ಎಲ್ಲಾ ದಿವ್ಯಸಭೆಗಳನ್ನೂ ಕ್ರಮವಾಗಿ ವರ್ಣಿಸಲು ಪ್ರಾರಂಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷಷ್ಠೋಽಧ್ಯಾಯಃ ॥
॥ ಮಂತ್ರಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಆರನೆಯ ಅಧ್ಯಾಯವು ಮುಗಿಯಿತು.

★★★★★

ಏಳನೆಯ ಅಧ್ಯಾಯ

(ಇಂದ್ರಸಭೆಯ ವರ್ಣನೆ)

ನಾರದಃ

ಶತಕ್ರತೋಃ ಸಭಾ ದಿವ್ಯಾ ಭಾಸ್ವರಾ ಕರ್ಮನಿರ್ಮಿತಾ ।
ಸ್ವಯಂ ಶಕ್ರೇಣ ಕೌರವ್ಯ ನಿರ್ಜಿತಾರ್ಕಸಮಪ್ರಭಾ ॥೧॥

ಕುರುರಾಜನಾದ ಯುಧಿಷ್ಠಿರನೇ! ಇಂದ್ರನ ಸಭೆಯು ದಿವ್ಯವೂ ಪ್ರಕಾಶಮಾನವೂ ಆಗಿದ್ದು, ಅವನ ಸತ್ಕರ್ಮಗಳಿಂದ ನಿರ್ಮಿತವಾಗಿದೆ. ಸೂರ್ಯನಿಗೆ ಸಮಾನವಾದ ಪ್ರಭೆಯುಳ್ಳ ಆ ಸಭೆಯು ಇಂದ್ರನ ಸತ್ಕರ್ಮಗಳ ಫಲವಾಗಿ ಜಿತವಾಗಿದೆ.

ವಿಸ್ತೀರ್ಣಾ ಯೋಜನಶತಂ ಶತಮರ್ಧಾರ್ಧಮಾಯತಾ ।
ವೈಹಾಯಸೀ ಕಾಮಗಮಾ ಪಂಚಯೋಜನಮುಚ್ಛ್ರಿತಾ ॥೨॥

ಆ ಸಭೆಯ ವಿಸ್ತೀರ್ಣವು ನೂರುಯೋಜನಗಳು ಅದರ ಉದ್ದ ನೂರೈವತ್ತು ಯೋಜನಗಳು. ಸಭೆಯ ಎತ್ತರ ಐದು ಯೋಜನಗಳು. ಅದು ಆಕಾಶದಲ್ಲಿ ಯಥೇಷ್ಟವಾಗಿ ಸಂಚಾರಮಾಡುವ ಸಾಮರ್ಥ್ಯವುಳ್ಳದ್ದು.

ಜರಾಶೋಕಕ್ಲಮಾಪೇತಾ ನಿರಾತಂಕಾ ಶಿವಾ ಸುಖಾ ।
ವೇಶ್ಮಾಸನವತೀ ರಮ್ಯಾ ದಿವ್ಯಪಾದಪಶೋಭಿತಾ ॥೩॥

ಆ ಸಭೆಯಲ್ಲಿ ಮುಪ್ಪು ದುಃಖ ಆಯಸ ಮತ್ತು ಆತಂಕಗಳು ಇಲ್ಲ. ಅದು ಯಾವಾಗಲೂ ಮಂಗಳವೂ ಸುಖಪ್ರದವೂ ಆಗಿದೆ. ಅದರಲ್ಲಿ ಅನೇಕ ಮನೆಗಳು ಮತ್ತು ದಿವ್ಯ ಆಸನಗಳು ಇದ್ದು ಸುಂದರವಾಗಿದೆ. ಆ ಸಭೆಯಲ್ಲಿ ಅನೇಕ ದಿವ್ಯ ವೃಕ್ಷಗಳು ಶೋಭೆಯನ್ನು ತಂದುಕೊಡುತ್ತವೆ.

ತಸ್ಯಾಂ ದೇವೇಶ್ವರಃ ಪಾರ್ಥ ಸಭಾಯಾಂ ಪರಮಾಸನೇ ।
ಆಸ್ತೇ ಶಚ್ಯಾ ಸಹೇಂದ್ರಾಣ್ಯಾ ಶ್ರಿಯಾ ಲಕ್ಷ್ಮ್ಯಾ ಚ ಭಾರತ ॥೪॥

ಪಾರ್ಥನೇ! ಆ ಸಭೆಯಲ್ಲಿ ದೇವೇಶ್ವರನಾದ ಇಂದ್ರನು ಶ್ರೇಷ್ಠವಾದ ಆಸನದಲ್ಲಿ ತನ್ನ ಪತ್ನಿಯಾದ ಶಚಿಯಿಂದಲೂ, ಮತ್ತು ಸ್ವರ್ಗಲೋಕದ ಲಕ್ಷ್ಮಿಯಿಂದಲೂ, ಸಹಿತನಾಗಿ ಆಸೀನನಾಗಿರುತ್ತಾನೆ.

ಬಿಭ್ರದ್ವಪುರನಿರ್ದೇಶ್ಯಂ ಕಿರೀಟೀ ಲೋಹಿತಾಂಗದಃ ।
ವಿರಜೋಂಬರಶ್ಚಿತ್ರಮಾಲ್ಯೋ ಹ್ರೀಕೀರ್ತಿದ್ಯುತಿಭಿಃ ಸಹ ॥೫॥

ಇಂದ್ರನ ದೇಹವು ಸಹ ಅನಿರ್ದೇಶ್ಯವಾದುದು. ಅವನು ಕಿರೀಟವನ್ನೂ ಅರುಣಬಣ್ಣದ ಅಂಗದಗಳನ್ನೂ ಶುದ್ಧವಾದ ವಸ್ತ್ರಗಳನ್ನೂ ವಿಚಿತ್ರವಾದ ಮಾಲೆಗಳನ್ನೂ ಧರಿಸಿ, ಕೀರ್ತಿಕಾಂತಿ ಮತ್ತು ವಿನಯಗಳಿಂದ ಕಂಗೊಳಿಸುತ್ತಾನೆ.

ತಸ್ಯಾಂ ತೂಪಾಸತೇ ನಿತ್ಯಂ ಮಹಾತ್ಮಾನಂ ಶತಕ್ರತುಮ್ ।
ಮರುತಃ ಸರ್ವತೋ ರಾಜನ್ ಸರ್ವೇ ಚ ಗೃಹಮೇಧಿನಃ ॥೬॥

ರಾಜನೇ! ಆ ಸಭೆಯಲ್ಲಿ ಮಹಾತ್ಮನಾದ ದೇವೇಂದ್ರನನ್ನು ಎಲ್ಲ ದಿಕ್ಕುಗಳಲ್ಲಿಯೂ ಮರುತ್ತುಗಳು ಮತ್ತು ಗೃಹಸ್ಥರಾಗಿ ಸಿದ್ಧಿಯನ್ನು ಪಡೆದವರೆಲ್ಲರೂ ಯಾವಾಗಲೂ ಉಪಾಸನೆಮಾಡುತ್ತಾರೆ.

ಸಿದ್ಧಾ ದೇವರ್ಷಯಶ್ಚೈವ ಸಾಧ್ಯಾ ದೇವಗಣಾಸ್ತಥಾ ।
ಮರುದ್ಗಣಾಶ್ಚ ಸಹಿತಾ ಭಾಸ್ವಂತೋ ಹೇಮಮಾಲಿನಃ ॥೭॥

ಪ್ರಕಾಶಮಾನರಾಗಿ, ಸುವರ್ಣಮಯವಾದ, ಮಾಲೆಗಳನ್ನು ಧರಿಸಿದ ಸಿದ್ಧರು ದೇವರ್ಷಿಗಳು ಸಾಧ್ಯರು ದೇವಗಣವು ಮತ್ತು ಮರುದ್ಗಣವು ಅವನನ್ನು ಉಪಾಸನೆಮಾಡುತ್ತಾರೆ.

ಏತೇ ಸಾನುಚರಾಃ ಸರ್ವೇ ದಿವ್ಯರೂಪಾಃ ಸ್ವಲಂಕೃತಾಃ ।
ಉಪಾಸತೇ ಮಹಾತ್ಮಾನಂ ದೇವರಾಜಂ ಶತಕ್ರತುಮ್ ॥೮॥

ಇವರೆಲ್ಲರೂ ದಿವ್ಯರೂಪವನ್ನು ಧರಿಸಿ ಚೆನ್ನಾಗಿ ಅಲಂಕೃತರಾಗಿ ತಮ್ಮ ಅನುಚರರ ಜೊತೆಯಲ್ಲಿ ಮಹಾತ್ಮನಾದ ದೇವರಾಜನಾದ ಶತಕ್ರತುವನ್ನು ಉಪಾಸನೆಮಾಡುತ್ತಾರೆ.

ತಥಾ ದೇವರ್ಷಯಃ ಸರ್ವೇ ಪಾರ್ಥ ಶಕ್ರಮುಪಾಸತೇ ।
ಅಮಲಾ ಧೂತಪಾಪ್ಮಾನೋ ದೀಪ್ಯಮಾನಾ ಇವಾಗ್ನಯಃ ॥೯॥

ಪಾರ್ಥನೇ! ಹಾಗೆಯೇ ಪರಿಶುದ್ಧರಾದ ಪಾಪನಿರ್ಮುಕ್ತರಾದ ಅಗ್ನಿಗಳಂತೆ ಶೋಭಿಸುವ ಎಲ್ಲಾ ದೇವರ್ಷಿಗಳೂ ಶಕ್ರನನ್ನು ಉಪಾಸನೆ ಮಾಡುತ್ತಾರೆ.

ತೇಜಸ್ವಿನಃ ಸೋಮಪಾಶ್ಚ ವಿಪಾಪಾ ವಿಗತಕ್ಲಮಾಃ ।
ಪರಾಶರಃ ಪರ್ವತಶ್ಚ ತಥಾ ಸಾವರ್ಣಿಗಾಲವೌ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹಾಮುನಿಃ ॥೧೦॥

ತೇಜಸ್ವಿಗಳೂ, ಪಾಪರಹಿತರೂ, ಶ್ರಮರಹಿತರೂ, ಆದ ಸೋಮಪಾನಾರ್ಹರಾದ ಎಲ್ಲರೂ ದೇವೇಂದ್ರನನ್ನು ಉಪಾಸನೆಮಾಡುತ್ತಾರೆ. ಅಲ್ಲದೆ ಪರಾಶರ, ಪರ್ವತ, ಸಾವರ್ಣಿ, ಗಾಲವ, ಏಕತ, ದ್ವಿತ, ಮತ್ತು ಮಹರ್ಷಿ ತ್ರಿತ,

ಶಂಖಶ್ಚ ಲಿಖಿತಶ್ಚೈವ ತಥಾ ಗೌರಶಿರಾ ಮುನಿಃ ।
ದುರ್ವಾಸಾ ವೈ ದೀರ್ಘತಮಾ ಯಾಜ್ಞವಲ್ಕ್ಯೋಽಥ ಭಾಲುಕಿಃ ॥೧೧॥

ಉದ್ದಾಲಕಃ ಶ್ವೇತಕೇತುಃ ತಾಂಡ್ಯಃ ಶಾಟ್ಯಾಯನಿಸ್ತಥಾ ।
ಹವಿಷ್ಮಾಂಶ್ಚ ಹವಿಷ್ಯಶ್ಚ ಹರಿಶ್ಚಂದ್ರಶ್ಚ ಪಾರ್ಥಿವಃ ॥೧೨॥

ಹೃದ್ಯಶ್ಚೈದರಶಾಂಡಿಲ್ಯಃ ಪಾರಾಶರ್ಯಗವಿಷ್ಠಲೌ ।
ಜಾಬಾಲಿರ್ವಾಮದೇವಶ್ಚ ಶಕ್ತಿರ್ಗಾರ್ಗ್ಯಸುವಾಮನೌ ॥೧೩॥

ಶಂಖ, ಲಿಖಿತ, ಹಾಗೆಯೇ ಗೌರಶಿರಾ, ದುರ್ವಾಸ, ದೀರ್ಘತಮ, ಯಾಜ್ಞವಲ್ಕ್ಯ, ಭಾಲುಕಿ, ಉದ್ದಾಲಕ, ಶ್ವೇತಕೇತು, ತಾಂಡ್ಯ, ಶಾಟ್ಯಾಯನಿ, ಹವಿಷ್ಮಾನ್, ಹವಿಷ್ಯ, ಹರಿಶ್ಚಂದ್ರರಾಜ. ಹೃದ್ಯ, ಔದರಶಾಂಡಿಲ್ಯ, ಪಾರಾಶರ್ಯ, ಗವಿಷ್ಠದ, ಜಾಬಾಲಿ, ವಾಮದೇವ, ಶಕ್ತಿ, ಗಾರ್ಗ್ಯ, ಸುವಾಮನ,

ವಾತಸ್ಕಂಧೋ ವಿಶಾಖಶ್ಚ ವಿಧಾತಾ ಕಾಲ ಏವ ಚ ।
ಅನಂತದತ್ತಸ್ತ್ವಷ್ಟಾ ಚ ವಿಶ್ವಕರ್ಮಾ ಚ ತುಂಬುರುಃ ॥೧೪॥

ಮರುತ್ತಶ್ಚ ಮರೀಚಿಶ್ಚ ಸ್ಥಾಣುಶ್ಚಾತ್ರಿರ್ಮಹಾತಪಾಃ ।
ಕಕ್ಷೀವಾನ್ ಗೌತಮಸ್ತಾರ್ಕ್ಷ್ಯಃ ತಥಾ ವೈಶ್ವಾನರೋ ಮುನಿಃ ॥೧೫॥

ಷಡರ್ತುಃ ಕವಷೋ ಧೌಮ್ಯೋ ರೈಭ್ಯೋ ನಲಪರಾವಸೂ ।
ಸ್ವಸ್ತ್ಯಾತ್ರೇಯೋ ಜರತ್ಕಾರುಃ ಕಹೋಳಃ ಕಾಶ್ಯಪಸ್ತಥಾ ॥೧೬॥

ವಿಭಂಡಕರ್ಶ್ಯಶೃಂಗೌ ಚ ಉನ್ಮುಖೋ ವಿಮುಖಸ್ತಥಾ ।
ಋಷಿಃ ಕಾಲಕವರ್ಷೀಯಃ ಸುಶ್ರುತೋಽಥ ಹಿರಣ್ಯದಃ ॥೧೭॥

ಸಂವರ್ತೋ ವೇದಹವ್ಯಶ್ಚ ವಿಶ್ವಸೇನಶ್ಚ ವೀರ್ಯವಾನ್ ।
ದಿವ್ಯಾ ಆಪಸ್ತಥೌಷಧ್ಯಃ ಶ್ರದ್ಧಾ ಮೇಧಾ ಸರಸ್ವತೀ ॥೧೮॥

ವಾತಸ್ಕಂಧ, ವಿಶಾಖ, ವಿಧಾತ, ಕಾಲ, ಅನಂತದತ್ತ, ತ್ವಷ್ಟಾ, ವಿಶ್ವಕರ್ಮ, ತುಂಬುರು.ಮರುತ್ತ, ಮರೀಚಿ, ಸ್ಥಾಣು (ಋಷಿ), ಮಹಾತಪಸ್ವಿಯಾದ ಅತ್ರಿ, ಕಕ್ಷೀವಾನ್, ಗೌತಮ, ತಾರ್ಕ್ಷ್ಯ, ವೈಶ್ವಾನರ ಋಷಿ,ಷಡರ್ತು, ಕವಷ, ಧೌಮ್ಯ, ರೈಭ್ಯ, ನಲ, ಪರಾವಸು, ಸ್ವಸ್ತ್ಯಾತ್ರೇಯ, ಜರತ್ಕಾರು, ಕಹೋಳ, ಮತ್ತು ಕಾಶ್ಯಪ, ವಿಭಾಂಡಕ, ಋಷ್ಯಶೃಂಗ, ಉನ್ಮುಖ, ವಿಮುಖ, ಕಾಲಕವರ್ಷೀಯ, ಸುಶ್ರುತ, ಹಿರಣ್ಯದ,ಸಂವರ್ತ, ವೇದಹವ್ಯ, ಪರಾಕ್ರಮಿಯಾದ ವಿಶ್ವಸೇನ, ಜಲಾಭಿಮಾನಿದೇವತೆಗಳು, ಓಷದಿ ಅಭಿಮಾನಿದೇವತೆಗಳು, ಶ್ರದ್ಧ, ಮೇಧ, ಸರಸ್ವತಿ, ಇವರೆಲ್ಲರೂ ದೇವೇಂದ್ರನನ್ನು ಉಪಾಸನೆಮಾಡುತ್ತಾರೆ.

ಅಥೋ ಧರ್ಮಶ್ಚ ಕಾಮಶ್ಚ ವಿದ್ಯುತಶ್ಚಾಪಿ ಪಾಂಡವ ।
ಪ್ರಾಚೀ ದಿಗ್ ಯಜ್ಞವಾಹಾಶ್ಚ ಪಾವಕಾಃ ಸಪ್ತವಿಂಶತಿಃ ॥೧೯॥

ಅರ್ಥ, ಧರ್ಮ, ಕಾಮ, ವಿದ್ಯುತ್‌ಗಳು, ಪೂರ್ವದಿಕ್, ಯಜ್ಞವಾಹಕರಾದ ಇಪ್ಪತ್ತೇಳು ಅಗ್ನಿಗಳು ಎಲ್ಲರೂ ದೇವೇಂದ್ರನನ್ನು ಉಪಾಸನೆಮಾಡುತ್ತಾರೆ.

ಅಗ್ನೀಷೋಮೌ ತಥೇಂದ್ರಾಗ್ನೀ ಮಿತ್ರಶ್ಚ ಸವಿತಾऽರ್ಯಮಾ ।
ಭಗೋ ವಿಶ್ವೇ ಚ ಸಾಧ್ಯಾಶ್ಚ ಶುಕ್ರೋ ಮಂತ್ರೀ ಚ ಭಾರತ ॥೨೦॥

ಯಜ್ಞಾಶ್ಚ ದಕ್ಷಿಣಾಶ್ಚೈವ ಗ್ರಹಾಃ ಸೋಮಾಶ್ಚ ಸರ್ವಶಃ ।
ಯಜ್ಞವಾಹಾಶ್ಚ ಯೇ ಮಂತ್ರಾಃ ಸರ್ವೇ ಶಕ್ರಮುಪಾಸತೇ ॥೨೧॥

ಭಾರತನೇ! ಅಗ್ನಿಸೋಮರು ಇಂದ್ರಾಗ್ನಿಗಳು, ಮಿತ್ರ, ಸವಿತಾ. ಅರ್ಯಮಾ, ಭಗ, ವಿಶ್ವೇದೇವತೆಗಳು ಸಾಧ್ಯರು ಮಂತ್ರಿಯಾದ ಶುಕ್ರ. ಯಜ್ಞಾಭಿಮಾನಿದೇವತೆಗಳು ದಕ್ಷಿಣಾಭಿಮಾನಿದೇವತೆಗಳು ಗ್ರಹಾಭಿಮಾನಿದೇವತೆಗಳು, ಎಲ್ಲಾ ಸೋಮಾಭಿಮಾನಿದೇವತೆಗಳು, ಯಜ್ಞದಲ್ಲಿ ಉಪಯೋಗಿಸುವ ಮಂತ್ರಗಳ ಅಭಿಮಾನಿಗಳಾದ ಎಲ್ಲಾ ದೇವತೆಗಳು ಇಂದ್ರನನ್ನು ಉಪಾಸನೆಮಾಡುತ್ತಾರೆ.

ತಥೈವಾಪ್ಸರಸೋ ರಾಜನ್ ರಂಭೋರ್ವಶ್ಯಥ ಮೇನಕಾ ।
ಘೃತಾಚೀ ಪಂಚಚೂಡಾ ಚ ವಿಪ್ರಚಿತ್ತಿಪುರೋಗಮಾಃ ॥೨೨॥

ರಾಜನೇ ಹಾಗೆಯೇ, ಅಪ್ಸರೆಯರಾದ ರಂಭೆ, ಊರ್ವಶಿ, ಮೇನಕಾ, ಘೃತಾಚೀ, ಪಂಚಚೂಡಾ, ವಿಪ್ರಚಿತ್ತಿ, ಮೊದಲಾದವರು ಇಂದ್ರನನ್ನು ಉಪಾಸನೆಮಾಡುತ್ತಾರೆ.

ವಿಶ್ವಾವಸುಶ್ಚಿತ್ರಸೇನಃ ಪರ್ವತಸ್ತುಂಬುರುಸ್ತಥಾ ।
ವಿದ್ಯಾಧರಾಶ್ಚ ರಾಜೇಂದ್ರ ಗಂಧರ್ವಾಶ್ಚ ಮನೋರಮಾಃ ॥೨೩॥

ನೃತ್ತವಾದಿತ್ರಗೀತೈಶ್ಚ ಭಾವೈಶ್ಚ ವಿವಿಧೈರಪಿ ।
ರಮಯಂತಿ ಮಹಾತ್ಮಾನಂ ದೇವರಾಜಂ ಶತಕ್ರತುಮ್ ॥೨೪॥

ರಾಜೇಂದ್ರನೇ! ಹಾಗೆಯೇ ವಿಶ್ವಾವಸು ಚಿತ್ರಸೇನ, ಪರ್ವತ, ತುಂಬುರು, ವಿದ್ಯಾಧರರು ಮತ್ತು ಮನೋಹರರಾದ ಗಂಧರ್ವರು ಇವರೆಲ್ಲರೂ ನೃತ್ಯ ವಾದಿತ್ರ ಗೀತಗಳಿಂದಲೂ ವಿವಿಧ ಭಾವಗಳಿಂದಲೂ ಮಹಾತ್ಮನಾದ ದೇವರಾಜನಾದ ಶತಕ್ರತುವನ್ನು ಸಂತೋಷಪಡಿಸುತ್ತಾರೆ.

ಸ್ತುತಿಭಿರ್ಮಂಗಲೈಶ್ಚೈವ ಸ್ತುವಂತಃ ಕರ್ಮಭಿಸ್ತಥಾ ।
ವಿಕ್ರಮೈಶ್ಚ ಮಹಾತ್ಮಾನಂ ಸ್ತುವಂತೋ ರಮಯಂತಿ ತಮ್ ॥೨೫॥

ಇವರು ಮಂಗಳವಾದ ಸ್ತೋತ್ರಗಳಿಂದಲೂ ಅವನು ಮಾಡಿದ ಪರಾಕ್ರಮದ ಕರ್ಮಗಳಿಂದಲೂ ಮಹಾತ್ಮನಾದ ಅವನನ್ನು ಸ್ತೋತ್ರಮಾಡುತ್ತಾ ಸಂತೋಷಪಡಿಸುತ್ತಾರೆ.

ಬ್ರಹ್ಮರಾಜರ್ಷಯಃ ಸರ್ವೇ ತಥಾ ದೇವರ್ಷಯೋಽಪ್ಯುತ ।
ವಿಮಾನೈರ್ವಿವಿಧೈ ರಮ್ಯೈರ್ಭ್ರಾಜಮಾನೈರಿವಾಗ್ನಿಭಿಃ ॥೨೬॥

ಸ್ರಗ್ವಿಣೋ ಭೂಷಿತಾಃ ಸರ್ವೇ ಯಾಂತಿ ಚಾಯಾಂತಿ ಚಾಪರೇ ।
ಬೃಹಸ್ಪತಿಶ್ಚ ಶುಕ್ರಶ್ಚ ನಿತ್ಯಮಾಸ್ತಾಂ ವಿಶಾಂಪತೇ ॥೨೭॥

ಹಾಗೆಯೇ ಎಲ್ಲಾ ಬ್ರಹ್ಮರ್ಷಿಗಳೂ, ರಾಜರ್ಷಿಗಳೂ, ಮತ್ತು ದೇವರ್ಷಿಗಳೂ ಅಗ್ನಿಯಂತೆ ಪ್ರಕಾಶಮಾನವಾದ ವಿಚಿತ್ರವಾದ ವಿಮಾನಗಳಲ್ಲಿ ಎಲ್ಲರೂ ಮಾಲೆಗಳನ್ನು ಧರಿಸಿ ವಿಭೂಷಿತರಾಗಿ ಸಭೆಯಲ್ಲಿ ಗಮನಾಗಮನಗಳನ್ನು ಮಾಡುತ್ತಾರೆ. ರಾಜನೇ! ಆ ಸಭೆಯಲ್ಲಿ ಬೃಹಸ್ಪತಿ ಮತ್ತು ಶುಕ್ರಾಚಾರ್ಯರು ಯಾವಾಗಲೂ ಇರುತ್ತಾರೆ.

ಏತೇ ಚಾನ್ಯೇ ಚ ಬಹವೋ ವಿಪಾಪ್ಮಾನೋ ಯತವ್ರತಾಃ ।
ವಿಮಾನೈಃ ಸೂರ್ಯಸಂಕಾಶೈಃ ಸೋಮವತ್ ಪ್ರಿಯದರ್ಶನಾಃ ।
ಬ್ರಹ್ಮಣೋ ವಚನಾದ್ ರಾಜನ್ ಭೃಗುಃ ಸಪ್ತರ್ಷಯಸ್ತಥಾ ॥೨೮॥

ಇವರೂ ಮತ್ತು ಇನ್ನೂ ಅನೇಕ ಧೃತವ್ರತರೂ ಪಾಪರಹಿತರೂ ಚಂದ್ರನಂತೆ ಪ್ರಿಯದರ್ಶನರೂ ಆದ ಅನೇಕರು ಸೂರ್ಯಪ್ರಭೆಯಂತೆ ಹೊಳೆಯುವ ವಿಮಾನಗಳಲ್ಲಿ ಅಲ್ಲಿ ಸಂಚರಿಸುತ್ತಾರೆ. ರಾಜನೇ! ಬ್ರಹ್ಮದೇವರ ವಚನದಂತೆ ಭೃಗು ಋಷಿಗಳು ಮತ್ತು ಸಪ್ತ ಋಷಿಗಳು ಅಲ್ಲಿ ಇರುತ್ತಾರೆ.

ಏಷಾ ಸಭಾ ಮಯಾ ದೃಷ್ಟಾ ದಿವ್ಯಾ ಪುಷ್ಕರಮಾಲಿನೀ ।
ಶತಕ್ರತೋರ್ಮಹಾಬಾಹೋ ಯಾಮ್ಯಾಂ ಶೃಣು ಮಮಾನಘ ॥೨೯॥

ಮಹಾಬಾಹುವೇ! ದೋಷರಹಿತನಾದವನೇ! ಇದು ನಾನು ನೋಡಿದ ದಿವ್ಯವಾದ ಪುಷ್ಪಮಾಲೆಗಳಿಂದ ಶೋಭಿಸುವ ಇಂದ್ರದೇವರ ಸಭೆ. ಯಮ ದೇವರ ಸಭೆಯನ್ನು ವರ್ಣಿಸುತ್ತೇನೆ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತಮೋऽಧ್ಯಾಯಃ ॥

॥ ಮಂತ್ರಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★★★★★

ಎಂಟನೆಯ ಅಧ್ಯಾಯ

(ಯಮಸಭೆಯ ವರ್ಣನೆ)

ನಾರದಃ

ಕಥಯಿಷ್ಯೇ ಸಭಾಂ ದಿವ್ಯಾಂ ಯಾಮ್ಯಾಂ ರಾಜನ್ ನಿಬೋಧ ಮೇ ।
ವೈವಸ್ವತಸ್ಯ ಚಾರ್ಥಾಯ ವಿಶ್ವಕರ್ಮಾ ಚಕಾರ ಯಾಮ್ ॥೧॥

ರಾಜನೇ! ನಾನು ವಿಶ್ವಕರ್ಮನು ಬಹಳ ಪ್ರಯೋಜನದ ಉದ್ದೇಶದಿಂದ ವೈವಸ್ವತನಾದ ಯಮನಿಗೆ ನಿರ್ಮಿಸಿದ ದಿವ್ಯವಾದ ಸಭೆಯನ್ನು ವರ್ಣಿಸುತ್ತೇನೆ ಕೇಳು.

ತೇಜಸ್ವಿನೀ ಸಭಾ ರಾಜನ್ ಬಭೂವ ಶತಯೋಜನಾ ।
ವಿಸ್ತಾರಾಯಾಮಸಂಪನ್ನಾ ಭೂಯಸೀ ಚಾಪಿ ಪಾಂಡವ ॥೨॥

ರಾಜನೇ! ಆ ಸಭೆಯು ಬಹಳ ತೇಜಸ್ಸುಳ್ಳದ್ದಾಗಿದೆ. ಉದ್ದವೂ ಅಗಲವೂ ನೂರು ಯೋಜನದಷ್ಟು ಇದೆ. ಪಾಂಡವನೇ! ಅದೊಂದು ಶ್ರೇಷ್ಠವಾದ ಸಭೆ.

ಅರ್ಕಪ್ರಕಾಶಾ ಭ್ರಾಜಿಷ್ಣುಃ ಸರ್ವತಃ ಕಾಮಚಾರಿಣೀ ।
ನೈವಾತಿಶೀತಾ ನಾತ್ಯುಷ್ಣಾ ಮನಸಶ್ಚ ಪ್ರಹರ್ಷಿಣೀ ॥೩॥

ಸೂರ್ಯನ ಪ್ರಕಾಶದಂತಹ ಪ್ರಕಾಶದಿಂದ ಬೆಳಗುವ ಆ ಸಭೆಯು, ಎಲ್ಲಾ ಕಡೆಗಳಲ್ಲಿಯೂ ಸಂಚಾರವನ್ನು ಹೊಂದುವ ಸಾಮರ್ಥ್ಯವನ್ನು ಹೊಂದಿದೆ. ಅದು ಸಮಶೀತೋಷ್ಣವಾಗಿದ್ದು ಮನಸ್ಸಿಗೆ ಹರ್ಷವನ್ನು ಕೊಡುತ್ತದೆ.

ನ ಶೋಕೋ ನ ಜರಾ ತಸ್ಯಾಂ ಕ್ಷುತ್ಪಿಪಾಸೇ ನಚಾಪ್ರಿಯಮ್ ।
ನ ದೈನ್ಯಂ ನಚ ಕಾರ್ಪಣ್ಯಂ ಪ್ರತಿಕೂಲಂ ನಚಾಪ್ಯುತ ॥೪॥

ಅಲ್ಲಿ ಶೋಕವಾಗಲೀ, ಮುಪ್ಪಾಗಲೀ, ಹಸಿವೆ ಬಾಯಾರಿಕೆಯಾಗಲೀ ಯಾವುದೇ ಅಪ್ರಿಯವಾಗಲೀ ದೈನ್ಯವಾಗಲೀ ಕಾರ್ಪಣ್ಯವಾಗಲೀ ಪ್ರತೀಕೂಲವಾದದ್ದಾಗಲೀ ಯಾವುದೂ ಉಂಟಾಗುವುದಿಲ್ಲ.

ಸರ್ವೇ ಕಾಮಾಃ ಸ್ಥಿತಾಸ್ತಸ್ಯಾಂ ಯೇ ದಿವ್ಯಾ ಯೇ ಚ ಮಾನುಷಾಃ ।
ರಸವಂತಃ ಪ್ರಭೂತಾಶ್ಚ ಭಕ್ಷ್ಯಭೋಜ್ಯಾಶ್ಚ ಭಾರತ ॥೫॥

ಎಲೈ ಭಾರತನೇ! ಆ ಸಭೆಯಲ್ಲಿ ಮನುಷ್ಯರು ಮತ್ತು ದೇವತೆಗಳು ಅಪೇಕ್ಷಿಸುವ ಎಲ್ಲಾ ಪದಾರ್ಥಗಳು ತುಂಬಿವೆ. ಒಳ್ಳೆಯ ರಸದಿಂದ ಕೂಡಿದ ಭಕ್ಷ್ಯ ಭೋಜ್ಯಗಳು. ಹೇರಳವಾಗಿವೆ.

ಪುಣ್ಯಗಂಧಾಃ ಸ್ರಜಸ್ತತ್ರ ನಿತ್ಯಪುಷ್ಪಫಲಾ ದ್ರುಮಾಃ ।
ರಸವಂತಿ ಚ ರಮ್ಯಾಣಿ ಶೀತಾನ್ಯುಷ್ಣಾನಿ ಚೈವ ಹ ॥೬॥

ವೃಕ್ಷಾಶ್ಚ ವಿವಿಧಾಸ್ತತ್ರ ನಿತ್ಯಪುಷ್ಪಾ ಮನೋರಮಾಃ ।
ಶೀತಳಾನಿ ಚ ತೋಯಾನಿ ಸುಖೋಷ್ಣಾನಿ ಚ ಭಾರತ ॥೭॥

ಆ ಸಭೆಯಲ್ಲಿರುವ ಹೂವಿನಮಾಲಿಕೆಗಳು ಪವಿತ್ರವಾದ ಸುಗಂಧವನ್ನು ಬೀರುತ್ತವೆ. ಅಲ್ಲಿಯ ವೃಕ್ಷಗಳು ಎಲ್ಲಾ ಋತುಗಳಲ್ಲಿಯೂ ಪುಷ್ಪಫಲಗಳಿಂದ ಕೂಡಿರುತ್ತವೆ. ಆ ವೃಕ್ಷದ ಫಲಗಳು ಮನೋಹರವಾಗಿಯೂ ರಸಪೂರ್ಣವಾಗಿಯೂ ಕೆಲವು ಶೀತಲವಾಗಿಯೂ, ಕೆಲವು ಬಿಸಿಯಾಗಿಯೂ, ಇರುತ್ತವೆ.

ಯಮಂ ವೈವಸ್ವತಂ ತಾತ ಪ್ರಹೃಷ್ಟಾಃ ಪರ್ಯುಪಾಸತೇ ।
ಯಯಾತಿರ್ನಹುಷಃ ಪೂರುರ್ಮಾಂಧಾತಾ ಸೋಮಕೋ ನೃಗಃ ।
ತ್ರಸದಸ್ಯುಶ್ಚೈತ್ರರಥಃ ಕೃತವೀರ್ಯಃ ಶ್ರುತಶ್ರವಾಃ ॥೮॥

ವಿವಸ್ವತನ ಮಗನಾದ ಯಮಧರ್ಮರಾಜನನ್ನು ಈ ಕೆಳಕಂಡ ರಾಜರುಗಳೆಲ್ಲಾ ಸಂತೋಷದಿಂದ ಉಪಾಸನೆಮಾಡುತ್ತಾರೆ. ಯಯಾತಿ, ನಹುಷ, ಪೂರು, ಮಾಂಧಾತಾ, ಸೋಮಕ, ನೃಗ, ತ್ರಸದಸ್ಯು, ಚೈತ್ರರಥ, ಕೃತವೀರ್ಯ, ಶ್ರುತಶ್ರವ,

ಅರಿಪುಂಡ್ರಃ ಸುವಿಷ್ಣುಶ್ಚ ಕೃತವೇದಃ ಕೃತಾಕೃತಿಃ ।
ಪ್ರತರ್ದನಃ ಶಿಬಿರ್ಮಾತ್ಸ್ಯಃ ಪೃಥುವಕ್ಷಾ ಬೃಹದ್ರಥಃ ॥೯॥

ಐಲೋ ಮರುತ್ತಃ ಕುಶಿಕಃ ಸಾಂಕಾಶ್ಯಃ ಸಾಂಕೃತಿರ್ಭವಃ ।
ಶಂತನುಶ್ಚ ಸದಶ್ವೋರ್ಮೀ ಕಾರ್ತವೀರ್ಯಶ್ಚ ಪಾರ್ಥಿವಃ ॥೧೦॥

ಅರಿಪುಂಡ್ರ, ಸುವಿಷ್ಣು, ಕೃತವೇದ, ಕೃತಾಕೃತಿ, ಪ್ರತರ್ದನ, ಶಿಬಿ, ಮಾತ್ಸ್ಯ, ಪೃಥುವಕ್ಷ, ಬೃಹದ್ರಥ, ಐಲವಂಶದ ಮರುತ್ತ, ಕುಶಿಕ, ಸಾಂಕಾಶ್ಯ, ಸಾಂಕೃತಿ, ಭವ, ಶಂತನು, ಸದಶ್ವ, ಊರ್ಮಿ, ಕಾರ್ತವೀರ್ಯ.

ಭರತಸ್ತಥೈಲಃ ಸುರಥಃ ಸುನೀಥೋ ನೈಷಧೋ ನಳಃ ।
ದಿವೋದಾಸೋ ವಸುಮನಾ ಅಂಬರೀಷೋ ಭಗೀರಥಃ ॥೧೧॥

ವ್ಯಶ್ವಃ ಸದಶ್ವೋ ವಾಧ್ಯಶ್ವಃ ಪಂಚಹಸ್ತಃ ಪೃಥುಶ್ರವಾಃ ।
ಋಷಭೋ ವೃಷಸೇನಶ್ಚ ಕೂಪಶ್ಚ ಸುಮಹಾಬಲಃ ॥೧೨॥

ಐಲವಂಶದ ಭರತ, ಸುರಥ, ಸುನೀಥ, ನಿಷಧಾಧಿಪತಿಯಾದ ನಳ, ದಿವೋದಾಸ, ವಸುಮನಾ, ಅಂಬರೀಷ, ಭಗೀರಥ, ವ್ಯಶ್ವ, ಸದಶ್ವ, ವಾಧ್ಯಶ್ವ, ಪಂಚಹಸ್ತ, ಪೃಥುಶ್ರವಾ, ಋಷಭ, ವೃಷಸೇನ, ಮಹಾಬಲಿಷ್ಠನಾದ ಕೂಪ,

ಪೃಷದಶ್ವೋಽಥ ಸುಮನಾಃ ಪುರುಕುತ್ಸೋ ಧ್ವಜೀ ರಥೀ ।
ಆರ್ಷ್ಟಿಷೇಣೋ ದಿಲೀಪಶ್ಚ ಮಹಾತ್ಮಾ ಚಾಪ್ಯುಶೀನರಃ ॥೧೩॥

ಔಶೀನರಃ ಪುಂಡರೀಕೋ ಯಯಾತಿರ್ಭರತಃ ಶುಚಿಃ ।
ಅಂಗೋಽರಿಷ್ಟಶ್ಚ ದೈವಾಶ್ವೋ ದುಃಷಂತಃ ಸಂಜಯೋ ಜಯಃ ॥೧೪॥

ಭಾಗಸ್ವರಿಃ ಸುನೀಥಶ್ಚ ನಿಷಧೋಽಥ ನಿಮೀ ರಥೀ ।
ಕರಂಧಮೋ ಬಾಹಕಶ್ಚ ಸುದ್ಯುಮ್ನೋ ಬಲವಾನ್ ಮಧುಃ ॥೧೫॥

ಕಪೋತರೋಮಾ ತೃಣಕಃ ಸಹದೇವಾರ್ಜುನೌ ತಥಾ ।
ರಾಮೋ ದಾಶರಥಿಶ್ಚೈವ ಲಕ್ಷ್ಮಣೋಽಥ ಪ್ರತರ್ದನಃ ॥೧೬॥

ಪೃಷದಶ್ವ, ಸುಮನ, ಪುರುಕುತ್ಸ, ಧ್ವಜೀ, ರಥೀ, ಆರ್ಷ್ಟಿಷೇಣ, ದಿಲೀಪ, ಮಹಾತ್ಮನಾದ ಉಶೀನರ, ಉಶೀನರನ ಪುತ್ರನಾದ ಪುಂಡರೀಕ, ಯಯಾತಿ, ಭರತ, ಶುಚಿ, ಅಂಗ, ಅರಿಷ್ಟ, ದೇವಾಶ್ವ, ದುಃಷಂತ, ಸಂಜಯ, ಜಯ. ಭಾಗಸ್ವರಿ, ಸುನೀಥ, ನಿಷಧ, ನಿಮಿ, ರಥೀ, ಕರಂಧಮ, ಬಾಹಕ, ಸುದ್ಯುಮ್ನ, ಮಧು, ಕಪೋತರೋಮ, ತೃಣಕ, ಸಹದೇವ, ಅರ್ಜುನ, ದಾಶರಥಿರಾಮ, ಲಕ್ಷ್ಮಣ, ಪ್ರತರ್ದನ,

ಅಳರ್ಕಃ ಕಕ್ಷಸೇನಶ್ಚ ಗಯೋ ಗೌರಾಶ್ವ ಏವ ಚ ।
ಜಾಮದಗ್ನ್ಯಶ್ಚ ರಾಮಶ್ಚ ನಾಭಾಗಸಗರೌ ತಥಾ ॥೧೭॥

ಭೂರಿದ್ಯುಮ್ನೋ ಹ್ಯಧೀರಶ್ಚ ಪೃಥಾಶ್ವೋ ಜನಕಸ್ತಥಾ ।
ವೈನ್ಯೋ ರಾಜಾ ಪಾರಿಷೇಣಃ ಪುರುಜೋ ಜನಮೇಜಯಃ ॥೧೮॥

ಅಳರ್ಕ, ಕಕ್ಷಸೇನ, ಗಯ, ಗೌರಾಶ್ವ, ಜಾಮದಗ್ನ್ಯನಾದ ಪರಶುರಾಮ, ನಾಭಾಗ, ಸಗರ, ಭೂರಿದ್ಯುಮ್ನ, ಅಧೀರ, ಪೃಥಾಶ್ವ, ಜನಕ, ವೈನ್ಯ, ಪಾರಿಷೇಣ, ಪುರಜ, ಜನಮೇಜಯ,

ಬ್ರಹ್ಮದತ್ತಸ್ತ್ರಿಗರ್ತಶ್ಚ ರಾಜೋಪರಿಚರಸ್ತಥಾ ।
ಮಹಾಭುಜೋ ಮಹಾಜಾನುರ್ಮಾಯಾಶ್ವೋ ಹಯೋಽನಘಃ ॥

ಪಾದ್ಮಶ್ಚ ಮುಚುಕುಂದಶ್ಚ ಇಂದ್ರದ್ಯುಮ್ನಃ ಪ್ರಸೇನಜಿತ್ ।
ಅರಿಷ್ಟನೇಮಿಃ ಪ್ರದ್ಯುಮ್ನಃ ಪೃಥುಶ್ಚ ಜನಕಸ್ತಥಾ ॥೨೦॥

ಬ್ರಹ್ಮದತ್ತ, ತ್ರಿಗರ್ತ, ರಾಜೋಪರಿಚರ, ಮಹಾಭುಜ, ಮಹಾಜಾನು, ಮಾಯಾಶ್ವಹಯ, ಅನಘ, ಪಾದ್ಮ, ಮುಚುಕುಂದ, ಇಂದ್ರದ್ಯುಮ್ನ, ಪ್ರಸೇನಜಿತ್, ಅರಿಷ್ಟನೇಮಿ, ಪ್ರದುಮ್ನ, ಪೃಥು, ಜನಕ.

ಶತಂ ಮತ್ಸ್ಯಾ ನೃಪತಯಃ ಶತಂ ನೀಪಾಃ ಶತಂ ಗಯಾಃ ।
ಧೃತರಾಷ್ಟ್ರಾಶ್ಚೈವ ಶತಮಶೀತಿರ್ಜನಮೇಜಯಾಃ ॥೨೧॥

ನೂರು ಮತ್ಸ್ಯ ಭೂಪಾಲರು. ನೀಪರಾಜರು ನೂರು. ಗಯಾ ರಾಜರು ನೂರು. ಧೃತರಾಷ್ಟ್ರರು ನೂರು. ಜನಮೇಜಯರು ಎಂಬತ್ತು (ಇವರೆಲ್ಲರೂ ಯಮನನ್ನು ಉಪಾಸನೆಮಾಡುತ್ತಾರೆ.)

ಶತಂ ಚ ಬ್ರಹ್ಮದತ್ತಾನಾಂ ವೈರಿಣೋ ವೈರಿಣಸ್ತಥಾ ।
ಶಂತನುಶ್ಚೈವ ರಾಜರ್ಷಿಃ ಪಾಂಡುಶ್ಚೈವ ಪಿತಾ ತವ ॥೨೨॥

ಬ್ರಹ್ಮದತ್ತರು ನೂರುಮಂದಿ. ಮರುಭೂಮಿಯ ರಾಜರು ನೂರುಮಂದಿ, ರಾಜರ್ಷಿಯಾದ ಶಂತನು ಮತ್ತು ನಿನ್ನ ತಂದೆಯಾದ ಪಾಂಡು (ಎಲ್ಲರೂ ಮಯನನ್ನು ಉಪಾಸನೆಮಾಡುತ್ತಾರೆ.)

ಋಷಡ್ಭವಃ ಶತರಥೋ ದೇವರಾಜೋ ಜಯದ್ರಥಃ ।
ವೃಷಾದರ್ವಿಶ್ಚ ರಾಜರ್ಷಿರ್ಧಾಮ್ನಾ ಸಹ ಸಮೃದ್ಧಿನಾ ॥೨೩॥

ಋಷಡ್ಭವ, ಶತರಥ, ದೇವರಾಜ, ಜಯದ್ರಥ, ವೃಷಾದರ್ವಿ, ಧಾಮ, ಸಮೃದ್ಧಿ,

ಅಥಾಪರೇ ಸಹಸ್ರಾಣಿ ಯೇ ಗತಾಃ ಶಶಬಿಂದವಃ ।
ಇಷ್ಟ್ವಾಽಶ್ವಮೇಧೈರ್ಬಹುಭಿರ್ಮಹದ್ಭಿರ್ಭೂರಿದಕ್ಷಿಣೈಃ ॥೨೪॥

ಇವರಲ್ಲದೆ ಭೂರಿದಕ್ಷಿಣೆಯುಳ್ಳ ಅನೇಕ ಅಶ್ವಮೇಧಯಾಗಗಳನ್ನು ಮಾಡಿದ ಶಶಬಿಂದುವಿನ ವಂಶದ ಸಹಸ್ರಾರು ರಾಜರು ಸಹ (ಯಮನನ್ನು ಉಪಾಸನೆಮಾಡುತ್ತಾರೆ.)

ಏತೇ ರಾಜರ್ಷಯಃ ಪುಣ್ಯಾಃ ಕೀರ್ತಿಮಂತೋ ಬಹುಶ್ರುತಾಃ ।
ತಸ್ಯಾಂ ಸಭಾಯಾಂ ರಾಜರ್ಷೇ ವೈವಸ್ವತಮುಪಾಸತೇ ॥೨೫॥

ರಾಜರ್ಷಿಯಾದ ಧರ್ಮರಾಜನೇ! ಬಹುವಿದ್ಯಾಸಂಪನ್ನರೂ ಕೀರ್ತಿವಂತರೂ ಪುಣ್ಯವಂತರೂ ಆದ ಈ ರಾಜರ್ಷಿಗಳೆಲ್ಲರೂ ಆ ಸಭೆಯಲ್ಲಿ ವೈವಸ್ವತನಾದ ಯಮನನ್ನು ಉಪಾಸನೆಮಾಡುತ್ತಾರೆ.

ಅಗಸ್ತ್ಯೋಽಥ ಮತಂಗಶ್ಚ ಕಾಲೋ ಮೃತ್ಯುಸ್ತಥೈವ ಚ ।
ಯಜ್ವಾನಶ್ಚೈವ ಸಿದ್ಧಾಶ್ಚ ಯೇ ಚ ಯೋಗಶರೀರಿಣಃ ॥೨೬॥

ಅನಂತರ ಅಗಸ್ತ್ಯ ಮತಂಗ ಕಾಲ ಮೃತ್ಯು ಅನೇಕಯಾಗಗಳನ್ನುಮಾಡಿದವರು ಸಿದ್ಧರು ಯೋಗಶರೀರವುಳ್ಳವರು.

ಅಗ್ನಿಷ್ವಾತ್ತಾಶ್ಚ ಪಿತರಃ ಫೇನಪಾಶ್ಚೋಷ್ಮಪಾಶ್ಚ ಯೇ ।
ಸ್ವಧಾವಂತೋ ಬರ್ಹಿಷದೋ ಮೂರ್ತಾಮೂರ್ತಾಶ್ಚ ಯೇ ಸ್ಮೃತಾಃ ॥೨೭॥

ಅಗ್ನಿಷ್ವಾತ್ತ ಎಂಬ ಪಿತೃಗಣಗಳು ಫೇನಪರು ಊಷ್ಮಪರು, ಸ್ವಧಾವಂತರು, ಬರ್ಹಿಷದರು. ಮೂರ್ತಾಮೂರ್ತಾ ಪಿತೃಗಣಗಳು (ಯಮನನ್ನು ಉಪಾಸನೆಮಾಡುತ್ತಾರೆ.)

ಕಾಲಚಕ್ರಂ ಚ ಸಾಕ್ಷಾಚ್ಚ ಭಗವಾನ್ ಹವ್ಯವಾಹನಃ ।
ನರಾ ದುಷ್ಕೃತಕರ್ಮಾಣೋ ದಕ್ಷಿಣಾಯನಮೃತ್ಯವಃ ।
ಕಾಲಸ್ಯ ನಯನೇ ಯುಕ್ತಾ ಯಮಸ್ಯ ಪುರುಷಾಶ್ಚ ಯೇ ॥೨೮॥

ಕಾಲಚಂಕ್ರದ ಅಭಿಮಾನಿದೇವತೆಗಳು ಸಾಕ್ಷಾತ್ ಪೂಜ್ಯನಾದ ಅಗ್ನಿದೇವ, ದಕ್ಷಿಣಾಯದಲ್ಲಿಮೃತ್ಯುವನ್ನು ಹೊಂದಿದ ದುಷ್ಕರ್ಮವನ್ನು ಮಾಡಿರುವ ಮನುಷ್ಯರು, ಕಾಲಚಕ್ರದ ತಿರುಗುವಿಕೆಯಲ್ಲಿ ಯುಕ್ತರಾದ ಯಮಭಟರು (ಇವರೆಲ್ಲರೂ ಯಮನನ್ನು ಉಪಾಸನೆಮಾಡುತ್ತಾರೆ.)

ತಸ್ಯಾಂ ಶಿಂಶುಪಪಾಲಾಶಾಃ ತಥಾ ಕಾಶಕುಶಾದಯಃ ।
ಉಪಾಸತೇ ಯಮಂ ರಾಜನ್ ಮೂರ್ತಿಮಂತೋ ನಿರಾಮಯಾಃ ॥೨೯॥

ರಾಜನೇ! ಆ ಸಭೆಯಲ್ಲಿ ಶಿಂಶುಪ ಫಲಾಶ ಮೊದಲಾದ ವೃಕ್ಷಾಭಿಮಾನಿದೇವತೆಗಳು, ಕಾಶ ಕುಶ ಮೊದಲಾದ ತೃಣಾಭಿಮಾನಿದೇವತೆಗಳು, ಶುದ್ಧವಾದ ಮತ್ತು ಸುಂದರವಾದ ದೇಹಗಳನ್ನು ಧರಿಸಿದವರಾಗಿ ಯಮದೇವರನ್ನು ಉಪಾಸನೆ ಮಾಡುತ್ತಾರೆ.

ಏತೇ ಚಾನ್ಯೇ ಚ ಬಹವಃ ಪಿತೃರಾಜಸಭಾಸದಃ ।
ಅಶಕ್ಯಾಃ ಪರಿಸಂಖ್ಯಾತುಂ ನಾಮಭಿಃ ಕರ್ಮಭಿಸ್ತಥಾ ॥೩೦॥

ಇವರೂ ಇನ್ನೂ ಅನೇಕಾನೇಕರೂ ಪಿತೃರಾಜನಾದ ಯಮನ ಸಭೆಯಲ್ಲಿ ಸಭಾಸದರಾಗಿರುತ್ತಾರೆ. ಅವರ ಹೆಸರುಗಳನ್ನಾಗಲೀ ಅವರು ಮಾಡಿದ ಕರ್ಮಗಳನ್ನಾಗಲೀ ಗಣನೆಮಾಡಲು ಸಾಧ್ಯವಿಲ್ಲ.

ಅಸಂಬಾಧಾ ಹಿ ಸಾ ಪಾರ್ಥ ರಮ್ಯಾ ಕಾಮಗಮಾ ಸಭಾ ।
ದೀರ್ಘಕಾಲಂ ತಪಸ್ತಪ್ತ್ವಾ ನಿರ್ಮಿತಾ ವಿಶ್ವಕರ್ಮಣಾ ॥೩೧॥

ಎಲೈ ಪಾರ್ಥನೇ! ಯಮದೇವರ ಆ ಸಭೆಯು ಜನಸಂಮರ್ದರಹಿತವಾಗಿ ಮನೋಹರವಾಗಿ ಮನಸ್ಸಿಗೆ ಬಂದಕಡೆ ಸಂಚಾರಮಾಡುವ ಸಾಮರ್ಥ್ಯವನ್ನು ಹೊಂದಿದೆ. ವಿಶ್ವಕರ್ಮನು ಬಹುಕಾಲ ತಪಸ್ಸನ್ನುಮಾಡಿ ಆ ಸಭೆಯನ್ನು ನಿರ್ಮಾಣ ಮಾಡಿದನು.

ಪ್ರಭಾಸಂತೀ ಜ್ವಲಂತೀ ಚ ತೇಜಸಾ ಸ್ವೇನ ಭಾರತ ।
ತಾಮುಗ್ರತಪಸೋ ಯಾಂತಿ ಸುವ್ರತಾಃ ಸತ್ಯವಾದಿನಃ ॥೩೨॥

ಎಲೈ ಭಾರತನೇ! ತನ್ನ ತೇಜಸ್ಸಿನಿಂದ ಆದು ಬೆಳಗುತ್ತಾ ಮತ್ತು ಪ್ರಕಾಶವನ್ನು ಸೂಸುತ್ತಾ ಇರುತ್ತದೆ. ಉಗ್ರತಪಸ್ಸನ್ನುಮಾಡಿದವರೂ, ಒಳ್ಳೆಯ ವ್ರತವನ್ನುಮಾಡಿದವರೂ ಮತ್ತು ಸತ್ಯವಾದಿಗಳೂ ಅಲ್ಲಿಗೆ ಹೋಗುತ್ತಾರೆ.

ಶಾಂತಾಃ ಸಂನ್ಯಾಸಿನಃ ಶುದ್ಧಾಃ ಪೂತಾಃ ಪುಣ್ಯೇನ ಕರ್ಮಣಾ ।
ಸರ್ವೇ ಭಾಸ್ವರದೇಹಾಶ್ಚ ಸರ್ವೇ ಚ ವಿರಜೋಂಬರಾಃ ॥೩೩॥

ಪುಣ್ಯಕರ್ಮಗಳನ್ನು ಆಚರಿಸುತ್ತಾ ಪವಿತ್ರರಾಗಿ ಶಾಂತರೂ ಶುದ್ಧರೂ ಆದ ಸಂನ್ಯಾಸಿಗಳು ಆ ಸಭೆಗೆ ಹೋಗುತ್ತಾರೆ. ಅವರೆಲ್ಲರೂ ಪ್ರಕಾಶಮಾನದೇಹವುಳ್ಳವರಾಗಿ ಶುಭ್ರವಾದ ವಸ್ತ್ರಗಳನ್ನು ಧರಿಸಿರುತ್ತಾರೆ.

ಚಿತ್ರಾಂಗದಾಶ್ಚಿತ್ರಮಾಲ್ಯಾಃ ಸರ್ವೇ ಜ್ವಲಿತಕುಂಡಲಾಃ ।
ಸ್ವಕೃತೈಃ ಕರ್ಮಭಿಃ ಪುಣ್ಯೈಃ ಪಾರಿಬರ್ಹೈಶ್ಚ ಭೂಷಿತಾಃ ॥೩೪॥

ಅವರೆಲ್ಲರೂ ವಿಚಿತ್ರಮಾಲೆಗಳನ್ನು ಧರಿಸಿ ವಿಚಿತ್ರವಾದ ಅಂಗದಗಳನ್ನು ಮತ್ತು ಜ್ವಲಿಸುವ ಕರ್ಣಕುಂಡಲಗಳನ್ನು ಧರಿಸಿರುತ್ತಾರೆ. ಅವರು ತಮ್ಮ ಪುಣ್ಯಕರ್ಮಗಳಿಂದಲೂ ಮತ್ತು ಪಾರಿಬರ್ಹಗಳಿಂದಲೂ ಭೂಷಿತರಾಗಿರುತ್ತಾರೆ.

ಗಂಧರ್ವಾಶ್ಚ ಮಹಾತ್ಮಾನಃ ಶತಶೋಽಪ್ಸರಸಾಂ ಗಣಾಃ ।
ವಾದಿತ್ರಂ ನೃತ್ತಗೀತಂ ಚ ಹಾಸ್ಯಂ ಲಾಸ್ಯಂ ಚ ಸರ್ವಶಃ ॥೩೫॥

ಅಲ್ಲಿ ಮಹಾತ್ಮರಾದ ಗಂಧರ್ವರೂ ನೂರು ಸಂಖ್ಯೆಯಲ್ಲಿ ಅಪ್ಸರೆಯರ ಸಮೂಹವೂ ಎಲ್ಲೆಡೆಗಳಲ್ಲಿಯೂ ಗೀತ ವಾದಿತ್ರ ನೃತ್ತ ಹಾಸ್ಯ ಮತ್ತು ಲಾಸ್ಯಗಳಿಂದ ಯಮದೇವರ ಸೇವೆಯನ್ನು ಮಾಡುತ್ತಾರೆ.

ಪುಣ್ಯಾಶ್ಚ ಗಂಧಾಃ ಶಬ್ದಾಶ್ಚ ತಸ್ಯಾಂ ಪಾರ್ಥ ಸಮಂತತಃ ।
ದಿವ್ಯಾನಿ ಚೈವ ಮಾಲ್ಯಾನಿ ಉಪತಿಷ್ಠಂತಿ ನಿತ್ಯಶಃ ॥೩೬॥

ಎಲೈ ಪಾರ್ಥನೇ! ಆ ಸಭೆಯಲ್ಲಿ ಎಲ್ಲಾ ಕಡೆಗಳಿಂದಲೂ ಪವಿತ್ರವಾದ ಗಂಧವೂ ಪವಿತ್ರವಾದ ಶಬ್ದಗಳೂ, ದಿವ್ಯವಾದ ಮಾಲೆಗಳೂ, ಯಾವಾಗಲೂ ಉಂಟಾಗುತ್ತವೆ.

ಶತಶೋಽಥ ಸಹಸ್ರಾಣಿ ಧರ್ಮಿಷ್ಠಂ ತಂ ಪ್ರಜೇಶ್ವರಮ್ ।
ಉಪಾಸತೇ ಮಹಾತ್ಮಾನೋ ರೂಪಯುಕ್ತಾ ಸ್ವಲಂಕೃತಾಃ ॥೩೭॥

ಧರ್ಮಿಷ್ಠನಾದ ಪ್ರಜಾಪತಿಯಾದ ಆ ಯಮನನ್ನು ಸುಂದರರೂ ಅಲಂಕೃತರೂ ಆದ ಮಹಾತ್ಮರು ನೂರಾರು ಸಾವಿರಾರು ಸಂಖ್ಯೆಯಲ್ಲಿ ಉಪಾಸನೆಮಾಡುತ್ತಾರೆ.

ಈದೃಶೀ ಸಾ ಸಭಾ ರಾಜನ್ ಪಿತೃರಾಜ್ಞೋ ಮಹಾತ್ಮನಃ ।
ವರುಣಸ್ಯಾಪಿ ವಕ್ಷ್ಯಾಮಿ ಸಭಾಂ ಪುಷ್ಕರಮಾಲಿನೀಮ್ ॥೩೮॥

ರಾಜನೇ! ಆ ಮಹಾತ್ಮನಾದ ಪಿತೃರಾಜನಾದ ಯಮನ ಸಭೆಯು ಹೀಗಿರುತ್ತದೆ. ಇನ್ನು ಪುಷ್ಕರಮಾಲೆಗಳಿಂದ ಅಲಂಕೃತವಾದ ವರುಣನ ಸಭೆಯನ್ನು ವರ್ಣಿಸುತ್ತೇನೆ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಷ್ಟಮೋಽಧ್ಯಾಯಃ ॥
॥ ಮಂತ್ರಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★★★★★

ಒಂಭತ್ತನೆಯ ಅಧ್ಯಾಯ

(ವರುಣಸಭೆಯವರ್ಣನೆ)

ನಾರದಃ

ಯುಧಿಷ್ಠಿರ ಸಭಾ ದಿವ್ಯಾ ವರುಣಸ್ಯ ಮಿತಪ್ರಭಾ ।
ಪ್ರಮಾಣೇನ ಯಥಾ ಯಾಮ್ಯಾ ಶುಭಪ್ರಾಕಾರತೋರಣಾ ॥೧॥

ಯುಧಿಷ್ಠಿರನೇ! ವರುಣನ ದಿವ್ಯವಾದ ಅಮಿತಕಾಂತಿಯುಳ್ಳ ಸಭೆಯು ಒಳ್ಳೆಯ ಪ್ರಾಕಾರ ಮತ್ತು ತೋರಣಗಳಿಂದ ಅಲಂಕೃತವಾಗಿದ್ದು ಯಮಸಭೆಯಷ್ಟೇ ವಿಸ್ತಾರವುಳ್ಳದ್ದಾಗಿದೆ.

ಅಂತಃಸಲಿಲಮಾಸ್ಥಾಯ ವಿಹಿತಾ ವಿಶ್ವಕರ್ಮಣಾ ।
ದಿವ್ಯೈಃ ರತ್ನಮಯೈರ್ವೃಕ್ಷೈಃ ಫಲಪುಷ್ಪಪ್ರದೈರ್ಯುತಾ ॥೨॥

ನೀಲಪೀತಹರಿಚ್ಛ್ಯಾಮೈಃ ಸಿತೈರ್ಲೋಹಿತಕೈರಪಿ ।
ಅವತಾನೈಸ್ತಥಾ ಗುಲ್ಮೈಃ ಪುಷ್ಪಮಂಜರಿಧಾರಿಭಿಃ ॥೩॥

ವಿಶ್ವಕರ್ಮನು ನೀರಿನ ಮಧ್ಯದಲ್ಲಿ ದಿವ್ಯವಾದ ರತ್ನಮಯವಾದ ಫಲಪುಷ್ಪಗಳಿಂದ ತುಂಬಿದ ವೃಕ್ಷಗಳಿಂದ ಕೂಡಿದುದಾಗಿಯೂ ಮತ್ತು ಹೂವಿನ ಗೊಂಚಲುಗಳನ್ನು ಧರಿಸಿರುವ ನೀಲ, ಪೀತ, ಹಸಿರು, ಶ್ಯಾಮ, ಶ್ವೇತ, ಕೆಂಪು, ಮೊದಲಾದ ಬಣ್ಣಗಳ ಕೆಳಗೆ ವಿಸ್ತಾರವಾಗಿ ಹರಡಿರುವ ಪೊದೆಗಳಿಂದ ಕೂಡಿದುದಾಗಿಯೂ ಅದನ್ನು ನಿರ್ಮಿಸಿದ್ದಾನೆ.

ಸದಾ ಶಕುನಯಸ್ತಸ್ಯಾಂ ನಾನಾವರ್ಣಾ ಮೃದುಸ್ವರಾಃ ।
ಅನಿರ್ದೇಶ್ಯಾ ವಪುಷ್ಮಂತಃ ಶತಶೋऽಥ ಸಹಸ್ರಶಃ ॥೪॥

ಆ ಸಭೆಯಲ್ಲಿ ನಾನಾವರ್ಣಗಳುಳ್ಳ ಮಧುರವಾದ ಸ್ವರಗಳಿಂದ ಕೂಗುವ ವರ್ಣಿಸಲು ಅಸಾಧ್ಯವಾದ ದೇಹಗಳನ್ನು ಹೊಂದಿರುವ ಪಕ್ಷಿಗಳು ನೂರಾರುಗಟ್ಟಲೆ ಮತ್ತು ಸಾವಿರಾರು ಗಟ್ಟಲೆ ಇವೆ.

ಸಾ ಸಭಾ ಸುಖಸಂಸ್ಪರ್ಶಾ ನಾತಿಶೀತಾ ನ ಘರ್ಮದಾ ।
ಶುಭಾಸನವತೀ ರಮ್ಯಾ ಸಿತಾ ವರುಣಸಮ್ಮತಾ ॥೫॥

ಆ ಸಭೆಯು ಅತಿಶೀತವಾಗಿಯೂ, ಉಷ್ಣವಾಗಿಯೂ ಇರದೆ, ಸುಖಸ್ಪರ್ಶವುಳ್ಳದ್ದಾಗಿದೆ. ವರುಣನಿಗೆ ಪ್ರಿಯವಾದ ಆ ಶ್ವೇತವರ್ಣದ ಸಭೆಯು, ಒಳ್ಳೆಯ ಆಸನಗಳಿಂದ ಕೂಡಿದ್ದು ಮನೋಹರವಾಗಿದೆ.

ತತ್ರಾಸ್ತೇ ವರುಣೋ ರಾಜಾ ವಾರುಣ್ಯಾ ಸಹ ಭಾರತ ।
ದಿವ್ಯಮಾಲ್ಯಾಂಬರಧರೋ ದಿವ್ಯರತ್ನವಿಭೂಷಿತಃ ॥೬॥

ಭಾರತನೇ! ಅಲ್ಲಿ ವರುಣನು ದಿವ್ಯಮಾಲ್ಯಗಳನ್ನು ಮತ್ತು ವಸ್ತ್ರಗಳನ್ನು ಧರಿಸಿ ದಿವ್ಯರತ್ನಗಳಿಂದ ವಿಭೂಷಿತನಾಗಿ ತನ್ನ ಪತ್ನಿಯಾದ ವಾರುಣಿಯ ಜೊತೆಯಲ್ಲಿ ಇರುತ್ತಾನೆ.

ದ್ವಿತೀಯೇನ ತು ನಾಮ್ನಾ ವೈ ಗೌರೀತಿ ಭುವಿ ವಿಶ್ರುತಾ ।
ಪತ್ನ್ಯಾ ಸ ವರುಣೋ ದೇವಃ ಪ್ರಮೋದತಿ ಸುಖೀ ಸುಖಮ್ ॥೭॥

ಗೌರಿ ಎಂಬ ನಾಮದಿಂದ ಭೂಮಿಯಲ್ಲಿ ಪ್ರಸಿದ್ಧವಾದ ವಾರುಣಿಯ ಇನ್ನೊಂದು ರೂಪದ ಜೊತೆಯಲ್ಲಿಯೂ ವರುಣದೇವನು ಅಲ್ಲಿ ಸುಖವನ್ನು ಅನುಭವಿಸುತ್ತಾನೆ.

ದಿವ್ಯಮಾಲ್ಯಾಂಬರಧರಾ ದಿವ್ಯಾಲಂಕಾರಭೂಷಿತಾಃ ।
ಆದಿತ್ಯಾಸ್ತತ್ರ ವರುಣಂ ಜಲೇಶ್ವರಮುಪಾಸತೇ ॥೮॥

ಅಲ್ಲಿ ದಿವ್ಯಮಾಲ್ಯಗಳನ್ನು ಮತ್ತು ವಸ್ತ್ರಗಳನ್ನು ಧರಿಸಿದ ದಿವ್ಯಾಲಂಕಾರಭೂಷಿತರಾದ ಆದಿತ್ಯರು ಜಲೇಶ್ವರನಾದ ವರುಣನನ್ನು ಉಪಾಸನೆಮಾಡುತ್ತಾರೆ.

ವಾಸುಕಿಸ್ತಕ್ಷಕಶ್ಚೈವ ನಾಗಶ್ಚೈರಾವತಸ್ತಥಾ ।
ಕೃಷ್ಣಶ್ಚ ಲೋಹಿತಶ್ಚೈವ ಪದ್ಮಶ್ಚಿತ್ರಶ್ಚ ವೀರ್ಯವಾನ್ ॥೯॥

ಕಂಬಳಾಶ್ವತರೌ ನಾಗೌ ಧೃತರಾಷ್ಟ್ರಬಲಾಹಕೌ ।
ಘೃಣೀನಾಗಶ್ಚ ನಾಗಶ್ಚ ಮಣಿಃ ಶಂಖಿನಖಿಸ್ತಥಾ ॥೧೦॥

ಕೌರವ್ಯಃ ಸ್ವಸ್ತಿಕಶ್ಚೈವ ಏಲಾಪತ್ರಶ್ಚ ವಾಮನಃ ।
ಅಪರಾಜಿತಶ್ಚ ದೋಷಶ್ಚ ನಂದಕಃ ಪೂರಣಸ್ತಥಾ ॥೧೧॥

ಅಲ್ಲಿ ವಾಸುಕಿ, ಕಕ್ಷಕ ಐರಾವತ ಕೃಷ್ಣಲೋಹಿತ ಪದ್ಮ ಪರಾಕ್ರಮಿಯಾದ ಚಿತ್ರ ಕಂಬಳ ಅಶ್ವತರ, ಧೃತರಾಷ್ಟ್ರ, ಬಲಾಹಕ, ಪೃಣಿನಾಗ, ನಾಗ, ಮಣಿ, ಶಂಖನಖ, ಕೌರವ್ಯ , ಸ್ವಸ್ತಿಕ, ಏಲಾಪತ್ರ , ವಾಮನ, ಅಪರಾಜಿತ, ದೋಷ, ನಂದಕ, ಪೂರಣ(ಮೊದಲಾದ ಸರ್ಪಗಳಿವೆ.)

ಅಭೀಕಃ ಶಭಿಕಃ ಶ್ವೇತೋ ಭದ್ರೋ ಭದ್ರೇಶ್ವರಸ್ತಥಾ ।
ಮಣಿಮಾನ್ ಪಿಂಡಕಃ ಸಾರಃ ಕಾರ್ಕೋಟಕಧನಂಜಯೌ ॥೧೨॥

ಪ್ರಹ್ಲಾದೋ ಮೂಷಿಕಾದಶ್ಚ ತಥೈವ ಜನಮೇಜಯಃ ।
ಪತಾಕಿನೋ ಮಂಡಲಿನಃ ಫಣವಂತಶ್ಚ ಸರ್ವಶಃ ॥೧೩॥

ಅಭೀಕ, ಶಭಿಕ, ಶ್ವೇತ, ಭದ್ರ , ಭದ್ರೇಶ್ವರ, ಮಣಿಮಾನ್, ಪಿಂಡಕ, ಸಾರ, ಕಾರ್ಕೋಟಕ, ಧನಂಜಯ, ಪ್ರಹ್ಲಾದ, ಮೂಷಿಕಾದ, ಮತ್ತು ಜನಮೇಜಯ, ಈ ಸರ್ಪಗಳೆಲ್ಲವೂ ಪತಾಕೆಗಳನ್ನು ಮಂಡಲಗಳನ್ನು ಮತ್ತು ಹೆಡೆಗಳನ್ನು ಹೊಂದಿ ಆ ಸಭೆಯಲ್ಲಿ ಎಲ್ಲಾ ಕಡೆಯಲ್ಲಿಯೂ ಇರುತ್ತವೆ.

ಅನಂತಶ್ಚ ಮಹಾನಾಗೋ ಯಂ ದೃಷ್ಟ್ವಾ ಸ ಜಲೇಶ್ವರಃ ।
ಅಭ್ಯರ್ಚಯತಿ ಸತ್ಕಾರೈರಾಸನೇನ ಚ ತಂ ವಿಭುಮ್ ॥೧೪॥

ಮಹಾನಾಗನಾದ ಅಲ್ಲಿರುವ ಅನಂತನನ್ನು (ಶೇಷನನ್ನು) ಜಲೇಶ್ವರನಾದ ವರುಣನು ನೋಡಿ, ವಿಭುವಾದ ಅವನನ್ನು ಆಸನಾದಿಸತ್ಕಾರಗಳಿಂದ ಭಕ್ತಿಯಿಂದ ಪೂಜಿಸುತ್ತಾನೆ.

ವಾಸುಕಿಪ್ರಮುಖಾಶ್ಚೈವ ಸರ್ವೇ ಪ್ರಾಂಜಲಯಃ ಸ್ಥಿತಾಃ ।
ಅನುಜ್ಞಾತಾಶ್ಚ ಶೇಷೇಣ ಯಥಾರ್ಹಮುಪವಿಶ್ಯ ಚ ।
ಏತೇ ಚಾನ್ಯೇ ಚ ಬಹವಃ ಸರ್ಪಾಸ್ತಸ್ಯಾಂ ಯುಧಿಷ್ಠಿರ ॥೧೫॥

ವಾಸುಕಿ ಮೊದಲಾದ ಸರ್ಪಗಳು ಶೇಷದೇವರ ಅನುಮತಿಯನ್ನು ಪಡೆದು ತಮತಮಗೆ ಯೋಗ್ಯವಾದ ಆಸನಗಳಲ್ಲಿ ಕುಳಿತು, ಶೇಷದೇವರಿಗೆ ಕೈಮುಗಿಯುತ್ತಾರೆ. ಯುಧಿಷ್ಠರನೇ! ಇವುಗಳೂ ಇನ್ನೂ ಅನೇಕ ಸರ್ಪಗಳೂ ಆ ಸಭೆಯಲ್ಲಿವೆ.

ವೈನತೇಯಶ್ಚ ಗರುಡೋ ಯೇ ಚಾನ್ಯೇ ಪರಿಚಾರಿಣಃ ।
ಉಪಾಸತೇ ಮಹಾತ್ಮಾನಂ ವರುಣಂ ವಿಗತಜ್ವರಾಃ ॥೧೬॥

ವೈನತೇಯನಾದ ಗರುಡನು ಅಲ್ಲಿದ್ದಾನೆ. ವರುಣನ ಪಾರಿಚಾಲಕರೆಲ್ಲರೂ ಬಹಳ ಎಚ್ಚರಿಕೆಯಿಂದ ಅಲ್ಲಿ ಮಹಾತ್ಮನಾದ ವರುಣನ ಸೇವೆಯನ್ನು ಮಾಡುತ್ತಾರೆ.

ಬಲಿರ್ವೈರೋಚನಿಶ್ಚೈವ ನರಕಃ ಪೃಥಿವೀಂಜಯಃ ।
ಪ್ರಹ್ಲಾದೋ ವಿಪ್ರಚಿತ್ತಿಶ್ಚ ಕಾಲಕೇಯಾಶ್ಚ ಸರ್ವಶಃ ।
ಸುಮುಖೋ ದುರ್ಮುಖಃ ಶಂಖಃ ಸುಮನಾಃ ಸುಮತಿಃ ಸ್ವನಃ ॥೧೭॥

ವಿರೋಚನನ ಮಗನಾದ ಬಲಿ, ಭೂಮಿಯನ್ನು ಗೆದ್ದ ನರಕ, ಪ್ರಹ್ಲಾದ, ವಿಪ್ರಚಿತ್ತಿ, ಎಲ್ಲಾ ಕಾಲಕೇಯರು, ಸುಮುಖ, ದುರ್ಮುಖ, ಶಂಖ, ಸುಮನಾ, ಸುಮತಿ, ಮತ್ತು ಸ್ವನ, (ಇವರೆಲ್ಲರೂ ಅಲ್ಲಿರುತ್ತಾರೆ.)

ಘಟೋದರೋ ಮಹಾಪಾರ್ಶ್ವಃ ಕ್ರಥಶ್ಚ ಪಿತರಸ್ತಥಾ ।
ವಿಶ್ವರೂಪಃ ಸ್ವರೂಪಶ್ಚ ವಿರೂಪಶ್ಚ ಮಹಾಶಿರಾಃ ।
ದಶಗ್ರೀವಶ್ಚ ವಾಲೀ ಚ ಮೇಘವಾಸಾಶ್ಚ ಭಾರತ ॥೧೮॥

ಘಟೋದರ, ಮಹಾಪಾರ್ಶ್ವ, ಕ್ರಥ, ಎಲ್ಲ ಪಿತೃಗಳು, ವಿಶ್ವರೂಪ, ಸ್ವರೂಪ, ವಿರೂಪ, ಮಹಾಶಿರಾ, ದಶಗ್ರೀವ, ವಾಲಿ, ಮೇಘವಾಸ,

ದೋದಂಭೋ ವಿಗದೂಭಶ್ಚ ಪ್ರಭವಶ್ಚೇಂದ್ರತಾಪನಃ ।
ದೈತ್ಯದಾನವಸಂಘಾಶ್ಚ ಸರ್ವೇ ರುಚಿರಕುಂಡಲಾಃ ॥೧೯॥

ದೋದಂಭ, ವಿಗದೂಭ, ಪ್ರಭವ, ಇಂದ್ರತಾಪನ, ಇವರಲ್ಲದೆ ಇನ್ನೂ ಅನೇಕ ದೈತ್ಯದಾನವಸಮೂಹವು ಸುಂದರವಾದ ಕರ್ಣಕುಂಡಲವನ್ನು ಧರಿಸಿ ಅಲ್ಲಿರುತ್ತಾರೆ.

ಸ್ರಗ್ವಿಣೋ ಮೌಲಿನಃ ಸರ್ವೇ ಸರ್ವೇ ಚ ಚರಿತವ್ರತಾಃ ।
ಸರ್ವೇ ಲಬ್ಧವರಾಃ ಶೂರಾಃ ಸರ್ವೇ ವಿಜಿತಮೃತ್ಯವಃ ॥೨೦॥

ಎಲ್ಲರೂ ಮಾಲೆಯನ್ನು ಮತ್ತು ಕಿರೀಟವನ್ನು ಧರಿಸಿರುತ್ತಾರೆ. ಎಲ್ಲರೂ ಮಹಾಚರಿತ್ರೆ ಮತ್ತು ವ್ರತಗಳನ್ನು ಹೊಂದಿದವರು. ಎಲ್ಲರೂ ಶೂರರು ಮತ್ತು ತಪಸ್ಸನ್ನುಮಾಡಿ ವರಗಳನ್ನು ಪಡೆದವರು ಮತ್ತು ಎಲ್ಲರೂ ಮೃತ್ಯುವನ್ನು ಜಯಿಸಿದವರು.

ತೇ ತಸ್ಯಾಂ ವರುಣಂ ಪಾರ್ಥ ಧರ್ಮಪಾಶಸ್ಥಿತಾಃ ಸದಾ ।
ಉಪಾಸತೇ ಮಹಾತ್ಮಾನಂ ಸರ್ವೇ ದಿವ್ಯಪರಿಚ್ಛದಾಃ ॥೨೧॥

ಪಾರ್ಥನೇ! ಅವರೆಲ್ಲರೂ ಧರ್ಮಪಾಶದಿಂದ ಬದ್ಧರಾಗಿ ದಿವ್ಯವಾದ ಸಲಕರಣೆಯನ್ನು ಹೊಂದಿ ಯಾವಾಗಲೂ ಮಹತ್ಮನಾದ ವರುಣನ ಉಪಾಸನೆಯನ್ನು ಮಾಡುತ್ತಾರೆ.

ತಥಾ ಸಮುದ್ರಾಶ್ಚತ್ವಾರೋ ನದೀ ಭಾಗೀರಥೀ ಚ ಯಾ ।
ಕಾಳಿಂದೀ ವಿದಿಶಾ ವೇಣ್ಣಾ ನರ್ಮದಾ ವೇಗವಾಹಿನೀ ॥೨೨॥

ಹಾಗೆಯೇ ನಾಲ್ಕು ಸಮುದ್ರಗಳು ಭಾಗೀರಥಿನದಿ, ಕಾಳಿಂದಿ, ವಿದಿಶಾ, ವೇಣ್ಣಾ, ನರ್ಮದಾ, ವೇಗವಾಹಿನಿ,

ವಿಪಾಶಾ ಚ ಶತದ್ರುಶ್ಚ ಚಂದ್ರಭಾಗಾ ಸರಸ್ವತೀ ।
ಇರಾವತೀ ವಿತಸ್ತಾ ಚ ಸಿಂಧುರ್ದೇವನದಸ್ತಥಾ ॥೨೩॥

ಗೋದಾವರೀ ಕೃಷ್ಣವೇಣೀ ಕಾವೇರೀ ಸರಿತಾಂ ವರಾ ।
ಕಂಬುದಾ ಚ ವಿಶಲ್ಯಾ ಚ ಕೌಶಿಕೀ ಗೋಮತೀ ತಥಾ ॥೨೪॥

ದೇವಿಕಾ ಚ ವಿಪಾಕಾ ಚ ತಥಾ ವೈತರಣೀ ನದೀ ।
ತೃತೀಯಾ ಜ್ಯೇಷ್ಠಿಲಾ ಚೈವ ಶೋಣಶ್ಚೈವ ಮಹಾನದಃ ॥೨೫॥

ಚರ್ಮಣ್ವತೀ ಶ್ವೇತನದೀ ಫಲ್ಗುನೀ ಚ ಮಹಾನದೀ ।
ಸರಯೂಶ್ಚೀರವಲ್ಕೇಲಾ ಕುಲಿಶ್ಯಾ ಸರಿತಸ್ತಥಾ ॥೨೬॥

ವಾಸುಕಿ ಮೊದಲಾದ ಸರ್ಪಗಳು ಶೇಷದೇವರ ಅನುಮತಿಯನ್ನು ಪಡೆದು ತಮತಮಗೆ ಯೋಗ್ಯವಾದ ಆಸನಗಳಲ್ಲಿ ಕುಳಿತು, ಶೇಷದೇವರಿಗೆ ಕೈಮುಗಿಯುತ್ತಾರೆ. ಯುಧಿಷ್ಠರನೇ! ಇವುಗಳೂ ಇನ್ನೂ ಅನೇಕ ಸರ್ಪಗಳೂ ಆ ಸಭೆಯಲ್ಲಿವೆ.

ವೈನತೇಯಶ್ಚ ಗರುಡೋ ಯೇ ಚಾನ್ಯೇ ಪರಿಚಾರಿಣಃ ।
ಉಪಾಸತೇ ಮಹಾತ್ಮಾನಂ ವರುಣಂ ವಿಗತಜ್ವರಾಃ ॥೧೬॥

ವೈನತೇಯನಾದ ಗರುಡನು ಅಲ್ಲಿದ್ದಾನೆ. ವರುಣನ ಪಾರಿಚಾಲಕರೆಲ್ಲರೂ ಬಹಳ ಎಚ್ಚರಿಕೆಯಿಂದ ಅಲ್ಲಿ ಮಹಾತ್ಮನಾದ ವರುಣನ ಸೇವೆಯನ್ನು ಮಾಡುತ್ತಾರೆ.

ಬಲಿರ್ವೈರೋಚನಿಶ್ಚೈವ ನರಕಃ ಪೃಥಿವೀಂಜಯಃ ।
ಪ್ರಹ್ಲಾದೋ ವಿಪ್ರಚಿತ್ತಿಶ್ಚ ಕಾಲಕೇಯಾಶ್ಚ ಸರ್ವಶಃ ।
ಸುಮುಖೋ ದುರ್ಮುಖಃ ಶಂಖಃ ಸುಮನಾಃ ಸುಮತಿಃ ಸ್ವನಃ ॥೧೭॥

ವಿರೋಚನನ ಮಗನಾದ ಬಲಿ, ಭೂಮಿಯನ್ನು ಗೆದ್ದ ನರಕ, ಪ್ರಹ್ಲಾದ, ವಿಪ್ರಚಿತ್ತಿ, ಎಲ್ಲಾ ಕಾಲಕೇಯರು, ಸುಮುಖ, ದುರ್ಮುಖ, ಶಂಖ, ಸುಮನಾ, ಸುಮತಿ, ಮತ್ತು ಸ್ವನ, (ಇವರೆಲ್ಲರೂ ಅಲ್ಲಿರುತ್ತಾರೆ.)

ಘಟೋದರೋ ಮಹಾಪಾರ್ಶ್ವಃ ಕ್ರಥಶ್ಚ ಪಿತರಸ್ತಥಾ ।
ವಿಶ್ವರೂಪಃ ಸ್ವರೂಪಶ್ಚ ವಿರೂಪಶ್ಚ ಮಹಾಶಿರಾಃ ।
ದಶಗ್ರೀವಶ್ಚ ವಾಲೀ ಚ ಮೇಘವಾಸಾಶ್ಚ ಭಾರತ ॥೧೮॥

ಘಟೋದರ, ಮಹಾಪಾರ್ಶ್ವ, ಕ್ರಥ, ಎಲ್ಲ ಪಿತೃಗಳು, ವಿಶ್ವರೂಪ, ಸ್ವರೂಪ, ವಿರೂಪ, ಮಹಾಶಿರಾ, ದಶಗ್ರೀವ, ವಾಲಿ, ಮೇಘವಾಸ,

ದೋದಂಭೋ ವಿಗದೂಭಶ್ಚ ಪ್ರಭವಶ್ಚೇಂದ್ರತಾಪನಃ ।
ದೈತ್ಯದಾನವಸಂಘಾಶ್ಚ ಸರ್ವೇ ರುಚಿರಕುಂಡಲಾಃ ॥೧೯॥

ದೋದಂಭ, ವಿಗದೂಭ, ಪ್ರಭವ, ಇಂದ್ರತಾಪನ, ಇವರಲ್ಲದೆ ಇನ್ನೂ ಅನೇಕ ದೈತ್ಯದಾನವಸಮೂಹವು ಸುಂದರವಾದ ಕರ್ಣಕುಂಡಲವನ್ನು ಧರಿಸಿ ಅಲ್ಲಿರುತ್ತಾರೆ.

ಸ್ರಗ್ವಿಣೋ ಮೌಲಿನಃ ಸರ್ವೇ ಸರ್ವೇ ಚ ಚರಿತವ್ರತಾಃ ।
ಸರ್ವೇ ಲಬ್ಧವರಾಃ ಶೂರಾಃ ಸರ್ವೇ ವಿಜಿತಮೃತ್ಯವಃ ॥೨೦॥

ಎಲ್ಲರೂ ಮಾಲೆಯನ್ನು ಮತ್ತು ಕಿರೀಟವನ್ನು ಧರಿಸಿರುತ್ತಾರೆ. ಎಲ್ಲರೂ ಮಹಾಚರಿತ್ರೆ ಮತ್ತು ವ್ರತಗಳನ್ನು ಹೊಂದಿದವರು. ಎಲ್ಲರೂ ಶೂರರು ಮತ್ತು ತಪಸ್ಸನ್ನುಮಾಡಿ ವರಗಳನ್ನು ಪಡೆದವರು ಮತ್ತು ಎಲ್ಲರೂ ಮೃತ್ಯುವನ್ನು ಜಯಿಸಿದವರು.

ತೇ ತಸ್ಯಾಂ ವರುಣಂ ಪಾರ್ಥ ಧರ್ಮಪಾಶಸ್ಥಿತಾಃ ಸದಾ ।
ಉಪಾಸತೇ ಮಹಾತ್ಮಾನಂ ಸರ್ವೇ ದಿವ್ಯಪರಿಚ್ಛದಾಃ ॥೨೧॥

ಪಾರ್ಥನೇ! ಅವರೆಲ್ಲರೂ ಧರ್ಮಪಾಶದಿಂದ ಬದ್ಧರಾಗಿ ದಿವ್ಯವಾದ ಸಲಕರಣೆಯನ್ನು ಹೊಂದಿ ಯಾವಾಗಲೂ ಮಹತ್ಮನಾದ ವರುಣನ ಉಪಾಸನೆಯನ್ನು ಮಾಡುತ್ತಾರೆ.

ತಥಾ ಸಮುದ್ರಾಶ್ಚತ್ವಾರೋ ನದೀ ಭಾಗೀರಥೀ ಚ ಯಾ ।
ಕಾಳಿಂದೀ ವಿದಿಶಾ ವೇಣ್ಣಾ ನರ್ಮದಾ ವೇಗವಾಹಿನೀ ॥೨೨॥

ಹಾಗೆಯೇ ನಾಲ್ಕು ಸಮುದ್ರಗಳು ಭಾಗೀರಥಿನದಿ, ಕಾಳಿಂದಿ, ವಿದಿಶಾ, ವೇಣ್ಣಾ, ನರ್ಮದಾ, ವೇಗವಾಹಿನಿ,

ವಿಪಾಶಾ ಚ ಶತದ್ರುಶ್ಚ ಚಂದ್ರಭಾಗಾ ಸರಸ್ವತೀ ।
ಇರಾವತೀ ವಿತಸ್ತಾ ಚ ಸಿಂಧುರ್ದೇವನದಸ್ತಥಾ ॥೨೩॥

ಗೋದಾವರೀ ಕೃಷ್ಣವೇಣೀ ಕಾವೇರೀ ಸರಿತಾಂ ವರಾ ।
ಕಂಬುದಾ ಚ ವಿಶಲ್ಯಾ ಚ ಕೌಶಿಕೀ ಗೋಮತೀ ತಥಾ ॥೨೪॥

ದೇವಿಕಾ ಚ ವಿಪಾಕಾ ಚ ತಥಾ ವೈತರಣೀ ನದೀ ।
ತೃತೀಯಾ ಜ್ಯೇಷ್ಠಿಲಾ ಚೈವ ಶೋಣಶ್ಚೈವ ಮಹಾನದಃ ॥೨೫॥

ಚರ್ಮಣ್ವತೀ ಶ್ವೇತನದೀ ಫಲ್ಗುನೀ ಚ ಮಹಾನದೀ ।
ಸರಯೂಶ್ಚೀರವಲ್ಕೇಲಾ ಕುಲಿಶ್ಯ ಸರಿತಸ್ತಥಾ ॥೨೬॥

ಏತಾಶ್ಚಾನ್ಯಾಶ್ಚ ಸರಿತಃ ತೀರ್ಥಾನಿ ಚ ಸರಾಂಸಿ ಚ ।
ಹ್ರದಾಶ್ಚ ವರುಣಂ ದೇವಂ ಸಭಾಯಾಂ ಪರ್ಯುಪಾಸತೇ ॥೨೭॥

ವಿಪಾಶಾ, ಶತದ್ರು, ಚಂದ್ರಭಾಗಾ, ಸರಸ್ವತೀ,ಇರಾವತೀ, ವಿತಸ್ತಾ, ಸಿಂಧು ದೇವನದ, ಗೋದಾವರಿ, ಕೃಷ್ಣವೇಣ, ನದಿಗಳಲ್ಲಿಶ್ರೇಷ್ಠವಾದ ಕಾವೇರಿ, ಕಂಬುದಾ, ವಿಶಲ್ಯಾ, ಕೌಶಿಕೀ, ಮತ್ತು ಗೋಮತಿ. ದೇವಿಕಾ, ವಿಪಾಕಾ, ವೈತರಣೀ, ಜ್ಯೇಷ್ಠಿಲಾ, ಶೋಣನದಾ, ಚರ್ಮಣ್ವತೀ, ಶ್ವೇತನದೀ, ಫಲ್ಗುನೀ, ಮಹಾನದೀ, ಸರಯೂ, ಚೀರವಲ್ಕಾ, ಕುಲಿ, ಮೊದಲಾದ ನದಿಗಳು.ಇವು ಮತ್ತು ಇನ್ನೂ ಅನೇಕ ನದಿಗಳು ತೀರ್ಥಗಳು, ಸರೋವರಗಳು, ಮತ್ತು ಮಡುಗಳು, ಆ ಸಭೆಯಲ್ಲಿವರುಣದೇವನನ್ನು ಉಪಾಸನೆ ಮಾಡುತ್ತಾರೆ.

ಕೂಪಾಶ್ಚ ಸಪ್ರಸ್ರವಣಾ ದೇಹವಂತೋ ಯುಧಿಷ್ಠಿರ ।
ಪಲ್ವಲಾನಿ ತಟಾಕಾನಿ ದೇಹವಂತ್ಯಥ ಭಾರತ ॥೨೮॥

ಭಾರತನೇ! ಭಾವಿಗಳು ಝರಿಗಳು, ಜೌಗುಪ್ರದೇಶಗಳು, ತಟಾಕಗಳು, ಇವುಗಳ ಅಭಿಮಾನಿಗಳು ದೇಹವನ್ನು ಧರಿಸಿ ವರುಣನನ್ನು ಉಪಾಸನೆಮಾಡುತ್ತಾರೆ.

ದಿಶಶ್ಚಾಥ ಮಹೀ ಚೈವ ವಿದಿಶಶ್ಚ ಮಹೀಧರಾಃ ।
ಉಪಾಸತೇ ಮಹಾತ್ಮಾನಂ ಸರ್ವೇ ಜಲಚರಾಸ್ತಥಾ ॥೨೯॥

ದಿಕ್ಕುಗಳು ವಿದಿಕ್ಕುಗಳು ಭೂಮಿ, ಮತ್ತು ಪರ್ವತಗಳು, ಮತ್ತು ಎಲ್ಲಾ ಜಲಚರಪ್ರಾಣಿಗಳು ಮಹಾತ್ಮನಾದ ವರುಣನನ್ನು ಉಪಾಸನೆಮಾಡುತ್ತಾರೆ.

ಗೀತವಾದಿತ್ರವಾದಾಶ್ಚ ಗಂಧರ್ವಾಪ್ಸರಸಾಂ ಗಣಾಃ ।
ಸ್ತುವಂತಸ್ತತ್ರ ವರುಣಂ ಸಭಾಯಾಂ ಚ ಸಮಾಸತೇ ॥೩೦॥

ಗಂಧರ್ವ ಮತ್ತು ಅಪ್ಸರೆಯರ ಸಮೂಹವು ಗೀತವಾದಿತ್ರ ನೃತ್ಯಗಳಿಂದ ವರುಣನನ್ನು ಸ್ತೋತ್ರಮಾಡುತ್ತಾ ಆ ಸಭೆಯನ್ನು ಅಲಂಕರಿಸಿರುತ್ತಾರೆ.

ಮಹೀಧರಾ ರತ್ನವಂತೋ ರಸಾ ಯೇ ಚ ಪ್ರತಿಷ್ಠಿತಾಃ ।

ಅನೇಕ ರತ್ನಗಳುಳ್ಳ ಪರ್ವತಗಳು ಮತ್ತು ರಸಗಳು ಸಹ ದೇಹವನ್ನು ಧರಿಸಿ ಸುಮಧುರವಾದ ಕಥೆಗಳನ್ನು ಹೇಳುತ್ತಾ ಆ ಸಭೆಯಲ್ಲಿ ಇರುತ್ತಾರೆ.

ವರುಣಸ್ಯ ಮಹಾಮಂತ್ರೀ ಸುನಾಭಃ ಪರ್ಯುಪಾಸತೇ ।
ಪುತ್ರಪೌತ್ರೈಃ ಪರಿವೃತೋ ಗೋನಾಮ್ನಾ ಪುಷ್ಕರೇಣ ಚ ।
ಸರ್ವೇ ವಿಗ್ರಹವಂತಸ್ತೇ ತಮೀಶ್ವರಮುಪಾಸತೇ ॥೩೨॥

ವರುಣನ ಮಹಾ ಮಂತ್ರಿಯಾದ ಸುನಾಭನು ತನ್ನ ಮಕ್ಕಳು ಮತ್ತು ಮೊಮ್ಮಕ್ಕಳ ಜೊತೆಯಲ್ಲಿ ಮತ್ತು ಗೋ, ಎಂಬ ನಾಮವುಳ್ಳ ಪುಷ್ಕರನ ಜೊತೆಯಲ್ಲಿ ಸೇರಿ, ಅಲ್ಲಿ ಎಲ್ಲರೂ ದೇಹವನ್ನು ಧರಿಸಿ ಪ್ರಭುವಾದ ವರುಣನನ್ನು ಉಪಾಸನೆಮಾಡುತ್ತಾರೆ.

ಏಷಾ ಮಯಾ ಸಂಪ್ರಗೀತಾ ವಾರುಣೇ ಭರತರ್ಷಭ ।
ದೃಷ್ಟಪೂರ್ವಾ ಸಭಾ ರಮ್ಯಾ ಕುಬೇರಸ್ಯ ಸಭಾಂ ಶೃಣು ॥೩೩॥

ಭರತಶ್ರೇಷ್ಠನೇ! ನಾನು ನಿನಗೆ ಹಿಂದೆ ನೋಡಿದ ವರುಣನ ಸಭೆಯನ್ನು ವರ್ಣಿಸಿದೆ. ಇನ್ನು ಸುಂದರವಾದ ಕುಬೇರನ ಸಭೆಯನ್ನು ವರ್ಣಿಸುತ್ತೇನೆ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ನವಮೋऽಧ್ಯಾಯಃ ॥
॥ ಮಂತ್ರಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಒಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ಹತ್ತನೆಯ ಅಧ್ಯಾಯ

(ಕುಬೇರಸಭೆಯ ವರ್ಣನೆ)

ನಾರದಃ

ಸಭಾವೈಶ್ರವಣೀ ರಾಜನ್ ಶತಯೋಜನಮಾಯತಾ ।
ವಿಸ್ತೀರ್ಣಾ ಸಪ್ತತಿಶ್ಚೈವ ಯೋಜನಾನಾಂ ಸಿತಪ್ರಭಾ ॥೧॥

ರಾಜನೇ! ಕುಬೇರನ ಸಭೆಯು ಶ್ವೇತವರ್ಣದಿಂದ ಕೂಡಿದ್ದು ನೂರುಯೋಜನ ಉದ್ದವೂ ಮತ್ತು ಎಪ್ಪತ್ತು ಯೋಜನ ಅಗಲವೂ ಆಗಿದೆ.

ತಪಸಾ ನಿರ್ಮಿತಾ ರಾಜನ್ ಸ್ವಯಂ ವೈಶ್ರವಣೇನ ಸಾ ।
ಶಶಿಪ್ರಭಾ ಖೇಚರಾಣಾಂ ಕೈಲಾಸಶಿಖರೋಪಮಾ ॥೨॥

ರಾಜನೇ! ಅದನ್ನು ಕುಬೇರನು ತಾನೇ ಸ್ವತಃ ತಪಸ್ಸಿನಿಂದ ನಿರ್ಮಿಸಿದ್ದಾನೆ. ಚಂದ್ರನಕಾಂತಿಯನ್ನು ಹೊಂದಿರುವ ಆ ಸಭೆಯು ಆಕಾಶದಲ್ಲಿ ಸಂಚರಿಸುವವರಿಗೆ ಕೈಲಾಸಪರ್ವತದ ಶಿಖರದಂತೆ ಕಾಣುತ್ತದೆ.

ಗುಹ್ಯಕೈರುಹ್ಯಮಾನಾ ಸಾ ಖೇ ವಿಷಕ್ತೇವ ದೃಶ್ಯತೇ ।
ದಿವ್ಯೈರ್ಹೇಮಮಯೈರಗ್ರ್ಯೈಃ ಪಾದಪೈರುಪಶೋಭಿತಾ ॥೩॥

ಅರ್ಚಿಷ್ಮತೀ ಭಾಸ್ವರಾ ಚ ದಿವ್ಯಗಂಧಾ ಮನೋರಮಾ ।
ಸಿತಾಭ್ರನಿಚಯಾಕಾರಾ ಪ್ಲವಮಾನೇವ ದೃಶ್ಯತೇ ॥೪॥

ದಿವ್ಯವಾದ ಸುವರ್ಣಮಯವಾದ ಶ್ರೇಷ್ಠವಾದ ವೃಕ್ಷಗಳಿಂದ ಶೋಭಿತವಾದ ಆ ಸಭೆಯನ್ನು ಗುಹ್ಯಕರು ಹೊತ್ತುಕೊಂಡು ಹೋಗುವಾಗ ಅದು ಆಕಾಶದಲ್ಲಿ ಅಂಟಿಕೊಂಡಂತೆ ಕಾಣುತ್ತದೆ. ಪ್ರಕಾಶಮಾನವಾಗಿ ಕಾಂತಿಯನ್ನು ಹೊರಸೂಸುತ್ತಾ, ದಿವ್ಯಗಂಧವನ್ನುಹೊಂದಿ ಮನೋಹರವಾಗಿರುವ ಆ ಸಭೆಯು ಬಿಳಿಯ ಮೋಡಗಳ ಸಮೂಹದಂತೆ ಆಕಾಶದಲ್ಲಿ ತೇಲುವಂತೆ ಕಾಣುತ್ತದೆ.

ತಸ್ಯಾಂ ವೈಶ್ರವಣೋ ರಾಜಾ ವಿಚಿತ್ರಾಭರಣಾಂಬರಃ ।
ಸಹಿತಃ ತ್ರಿದಶೈಃ ಸಾರ್ಧಮಾಸ್ತೇ ರುಚಿರಕುಂಡಲಃ ॥೫॥

ಆ ಸಭೆಯಲ್ಲಿ ರಾಜನಾದ ಕುಬೇರನು ವಿಚಿತ್ರವಾದ ಆಭರಣಗಳನ್ನು ಮತ್ತು ಅಂಬರಗಳನ್ನು ಧರಿಸಿ, ಮನೋಹರವಾದ ಕುಂಡಲಗಳನ್ನು ಧರಿಸಿ, ದೇವತೆಗಳ ಜೊತೆಯಲ್ಲಿ ವಾಸಿಸುತ್ತಾನೆ.

ಸ ಹಿ ಪತ್ನ್ಯಾ ಮಹಾರಾಜ ಋದ್ಧ್ಯಾ ಸಹ ವಿರಾಜತೇ ।
ಸರ್ವಾಭರಣಭೂಷಿತ್ಯಾ ವಪುಷ್ಮತ್ಯಾ ಧನೇಶ್ವರಃ ॥೬॥

ಮಹಾರಾಜನೇ! ಧನೇಶ್ವರನಾದ ಅವನು ಅಲ್ಲಿ ಸರ್ವಾಭರಣಭೂಷಿತಳಾದ ಸುಂದರಿಯಾದ ಋದ್ಧಿ ಎಂಬ ಪತ್ನಿಯ ಜೊತೆಯಲ್ಲಿ ವಿರಾಜಿಸುತ್ತಾನೆ.

ದಿವಾಕರನಿಭೇ ದಿವ್ಯೇದಿವ್ಯಾಸ್ತರಣಸಂವೃತೇ ।
ದಿವ್ಯಪಾದೋಪಧಾನೇ ಚ ನಿಷಣ್ಣಃ ಪರಮಾಸನೇ ॥೭॥

ಅವನು ಸೂರ್ಯನಂತೆ ಹೊಳೆಯುವ ದಿವ್ಯವಾದ ಶ್ರೇಷ್ಠವಾದ ಆಸನದಲ್ಲಿ ದಿವ್ಯವಾದ ಆಸ್ತರಣದ ಮೇಲೆ ಪಾದಗಳಿಗೂ ಒಂದು ದಿವ್ಯವಾದ ದಿಂಬನ್ನು ಇಟ್ಟುಕೊಂಡು ಕುಳಿತಿರುತ್ತಾನೆ.

ಮಂದಾರಾಣಾಮುದಾರಾಣಾಂ ವನಾನಿ ಸುರಭೀಣ್ಯಥ ।
ಸೌಗಂಧಿಕಾನಾಂ ಚಾದಾಯ ಗಂಧಂ ಗಂಧವಹಃ ಶುಚಿಃ ॥೮॥

ನಲಿನ್ಯಾಶ್ಚಾರುಮುಖ್ಯಾಯಾಃ ಚಂದನಾನಾಂ ವನಸ್ಯ ಚ ।
ಮನೋಹೃದಯಸಂಹ್ಲಾದೀ ವಾಯುಸ್ತಮುಪಸೇವತೇ ॥೯॥

ಶುದ್ಧವಾದ ವಾಯುವು ಶ್ರೇಷ್ಠವಾದ ಮಂದಾರವನಗಳ ಸುಗಂಧವನ್ನೂ ಸೌಗಂಧಿಕವನಗಳ ಸುಗಂಧವನ್ನೂ ಶ್ರೇಷ್ಠವಾದ ಕಮಲಸರೋವರಗಳ ಸುಗುಂಧವನ್ನೂ ಚಂದನವನದ ಸುಗಂಧವನ್ನೂ ತೆಗೆದುಕೊಂಡು ಬೀಸಿ ಅಲ್ಲಿ ಮನಸ್ಸಿಗೂ ಮತ್ತು ಹೃದಯಕ್ಕೂ ಸಂತೋಷವನ್ನು ಉಂಟುಮಾಡುತ್ತಾನೆ.

ಯತ್ರ ತೇ ದೇವಗಂಧರ್ವಾ ಗಣೈರಪ್ಸರಸಾಂ ವೃತಾಃ ।
ದಿವ್ಯತಾನೇಷು ಗೀತಾನಿ ಗಾಯಂತಿ ಭರತರ್ಷಭ ॥೧೦॥

ಭರತರ್ಷಭನೇ! ಅಲ್ಲಿ ದೇವಗಂಧರ್ವರು, ಅಪ್ಸರೆಯರ ಸಮೂಹದಿಂದ ಕೂಡಿದವರಾಗಿ, ದಿವ್ಯತಾನಗಳಲ್ಲಿ ಗಾನವನ್ನು ಮಾಡುತ್ತಾರೆ.

ಮಿಶ್ರಕೇಶೀ ಚ ರಂಭಾ ಚ ಚಿತ್ರಸೇನಾ ಶುಚಿಸ್ಮಿತಾ।
ಚಾರುದೇಷ್ಣಾ ಘೃತಾಚೀ ಚ ಮೇನಕಾ ಪುಂಜಿಕಸ್ಥಲಾ ॥೧೧॥

ವಿಶ್ವಾಚೀ ಸಹಜನ್ಯಾ ಚ ಪ್ರಂಲೋಚಂತ್ಯುರ್ವಶೀ ತಥಾ ।
ದಿವ್ಯಾ ಚ ಸೌರಭೇಯೀ ಚ ದೇವೀ ರಂಭಾ ಮನೋರಮಾ ॥೧೨॥

ಗೋಪಾಲೀ ಪಂಚಚೂಳಾ ಚ ವಿದ್ಯುದ್ವರ್ಣಾ ಸುಲೋಚನಾ ।
ಚಿತ್ರದೇವೀ ಚ ನೀಲಾ ಚ ಕಾಮ್ಯಾ ಚ ಲಲಿತಾ ತಥಾ ॥೧೩॥

ಏತಾಃ ಸಹಸ್ರಶಶ್ಚಾನ್ಯಾ ನೃತ್ತಗೀತವಿಶಾರದಾಃ ।
ಉಪತಿಷ್ಠಂತಿ ರಾಜಾನಂ ಪಾಂಡವಾಪ್ಸರಸಾಂ ಗಣಾಃ ॥೧೪॥

ಮಿಶ್ರಕೇಶೀ, ರಂಭಾ, ಚಿತ್ರಸೇನಾ, ಶುಚಿಸ್ಮಿತಾ, ಚಾರುದೇಷ್ಣಾ, ಘೃತಾಚೀ, ಮೇನಕಾ, ಪುಂಜಿಕಸ್ಥಲಾ, ವಿಶ್ವಾಚೀ, ಸಹಜನ್ಯಾ , ಪ್ರಂಲೋಚಂತೀ, ಊರ್ವಶೀ, ದಿವ್ಯಾ , ಸೌರಭೇಯೀ, ಮನೋಹರಳಾದ ರಂಭಾ, ಗೋಪಾಲೀ, ಪಂಚಚೂಡಾ, ವಿದ್ಯುದ್ವರ್ಣಾ, ಸುಲೋಚನಾ, ಚಿತ್ರದೇವೀ, ನೀಲಾ, ಕಾಮ್ಯಾ , ಲಲಿತಾ ಇವರೇ ಮೊದಲಾದ ನೃತ್ಯಗಾನವಿಶಾರದರಾದ ಅಪ್ಸರೆಯರ ಸಮೂಹಗಳು ಸಹಸ್ರಸಂಖ್ಯೆಯಲ್ಲಿ ಅಲ್ಲಿ ರಾಜನಾದ ಕುಬೇರನನ್ನು ಸ್ತೋತ್ರಮಾಡುತ್ತವೆ.

ಅನಿಶಂ ಗೀತವಾದಿತ್ರೈರ್ನೃತ್ತಗೀತೈಶ್ಚ ಸಾ ಸಭಾ ।
ಅಶೂನ್ಯಾ ರುಚಿರಾ ಭಾತಿ ಗಂಧರ್ವಾಪ್ಸರಸಾಂ ಗಣೈಃ ॥೧೫॥

ಆ ಸಭೆಯು ಯಾವಾಗಲೂ ನೃತ್ಯಗಾನಗಳಿಂದಲೂ ಗೀತವಾದಿತ್ರಗಳಿಂದಲೂ ಗಂಧರ್ವ ಅಪ್ಸರ ಗಣಗಳಿಂದಲೂ ಕೂಡಿದುದಾಗಿ ಮನೋಹರವಾಗಿ ಕಾಣುತ್ತದೆ.

ಗಂಧರ್ವಾಣಾಂ ಚ ಪತಯೋ ವಿಶ್ವಾವಸುಹಹಾಹುಹೂಃ ।
ತುಂಬುರುಃ ಪರ್ವತಶ್ಚೈವ ಶೈಲೂಷಸ್ತ್ವಥ ನಾರದಃ ॥೧೬॥

ಚಿತ್ರಸೇನಶ್ಚ ಗೀತಜ್ಞಃ ತಥಾ ಚಿತ್ರರಥೋಽಪಿ ಚ ।
ಏತೇ ಚಾನ್ಯೇ ಚ ಗಂಧರ್ವಾ ಧನೇಶ್ವರಮುಪಾಸತೇ ॥೧೭॥

ಗಂಧರ್ವರ ಪತಿಗಳಾದ ವಿಶ್ವಾವಸು, ಹಹಾ, ಹುಹೂ, ತುಂಬುರು, ಪರ್ವತ, ಶೈಲೂಷ, ಮತ್ತು ನಾರದ. ಸಂಗೀತಜ್ಞನಾದ ಚಿತ್ರಸೇನ ಚಿತ್ರರಥ ಇವರೇ ಮೊದಲಾದ ಗಂಧರ್ವರು ಕುಬೇರನನ್ನು ಉಪಾಸನೆಮಾಡುತ್ತಾರೆ.

ವಿದ್ಯಾಧರಾಧಿಪಾಶ್ಚೈವ ಚಂದ್ರಾಪೀಡಸ್ತಥಾನುಜೈಃ ।
ಉಪಾಸತೇ ಮಹಾತ್ಮಾನಂ ಧನಾನಾಮೀಶ್ವರಂ ಪ್ರಭುಮ್ ॥೧೮॥

ವಿದ್ಯಾಧರರ ಅಧಿಪತಿಯಾದ ಚಂದ್ರಾಪೀಡನು ತನ್ನ ಸಹೋದರರ ಜೊತೆಯಲ್ಲಿ ಮಹಾತ್ಮನಾದ ಕುಬೇರನನ್ನು ಉಪಾಸನೆಮಾಡುತ್ತಾನೆ.

ಕಿನ್ನರಾಃ ಶತಶಸ್ತತ್ರ ಭಗದತ್ತಪುರೋಗಮಾಃ ।
ದ್ರುಮಃ ಕಿಂಪುರುಷೇಶಶ್ಚ ಉಪಾಸ್ತೇ ಧನದೇಶ್ವರಮ್ ॥೧೯॥

ಅಲ್ಲಿ ಭಗದತ್ತ ಮೊದಲಾದ ಕಿನ್ನರರು ನೂರಾರು ಸಂಖ್ಯೆಯಲ್ಲಿಯೂ ಮತ್ತು ಕಿಂಪುರುಷರ ಅಧಿಪತಿಯಾದ ದ್ರುಮನೂ ಸಹ ಕುಬೇರನನ್ನು ಉಪಾಸನೇಮಾಡುತ್ತಾರೆ.

ರಾಕ್ಷಸಾನಾಂ ಪತಿಶ್ಚೈವ ಸಹ ಸರ್ವೈರ್ನಿಶಾಚರೈಃ ।
ವಿಭೀಷಣಃ ಸುಧರ್ಮಿಷ್ಠ ಉಪಾಸ್ತೇ ಭ್ರಾತರಂ ಪ್ರಭುಮ್ ॥೨೦॥

ರಾಕ್ಷಸರ ಅಧಿಪತಿಯಾದ ಒಳ್ಳೆಯ ಧರ್ಮಿಷ್ಠನಾದ ವಿಭೀಷಣನು ಎಲ್ಲ ರಾಕ್ಷಸನ ಜೊತೆಯಲ್ಲಿ ತನ್ನ ಸಹೋರರನಾದ ಕುಬೇರನನ್ನು ಉಪಾಸನೆಮಾಡುತ್ತಾನೆ.

ನಿಧೀನಾಂ ಪ್ರವರೌ ಮುಖ್ಯೌ ಶಂಖಪದ್ಮೌ ಧನೇಶ್ವರಮ್ ।
ಸರ್ವಾನ್ ನಿಧೀನ್ ಪ್ರಗೃಹ್ಯೈತಾವುಪಾಸಾತೇ ಮಹೇಶ್ವರಮ್ ॥೨೧॥

ನಿಧಿಗಳಲ್ಲಿ ಶ್ರೇಷ್ಠವಾದ ಶಂಖ ಮತ್ತು ಪದ್ಮನಿಧಿಗಳು ಉಳಿದ ಎಲ್ಲಾ ನಿಧಿಗಳ ಜೊತೆಯಲ್ಲಿ ಮಹೇಶ್ವರನಾದ ಕುಬೇರನನ್ನು ಉಪಾಸನೆಮಾಡುತ್ತಾರೆ.

ಕಿನ್ನರಾ ನಾಮ ಗಂಧರ್ವಾ ನರಾ ನಾಮ ತಥಾऽಪರೇ ।
ಮಾಣಿಭದ್ರಶ್ಚ ಧನದಂ ಶ್ವೇತಭದ್ರಶ್ಚ ಗುಹ್ಯಕಃ ॥೨೨॥

ಸ್ಥೂಣಶ್ಚ ಸೂರ್ಯಭಾನುಶ್ಚ ತಥಾ ಶೋಣಿಕತಿಂದುಕೌ ।
ಕುಶೇರಲೋ ಗಂಧಪಣೋ ವೃಷೋದಶ್ಚ ಮಹಾಬಲಃ ॥೨೩॥

ದ್ರುಮಃ ಕಿಂಪುರುಷಶ್ಚೈವ ಗಜಕರ್ಣೋ ವಿಶಾಲಕಃ ।
ವರಾಹಕರ್ಣಃ ಸಂಕೃಷ್ಟಃ ಫಲಭಕ್ಷಃ ಫಲೋದಕಃ ॥೨೪॥

ಅಂಗಚೂಡಃ ಶಿಲಾಪುಷ್ಪೋ ಹೇಮನೇತ್ರೋ ವಿಭೂಷಣಃ ।
ಪುಷ್ಪಾನನಃ ಪಿಂಗಲಕಃ ಶೋಣಿತೋದಃ ಪ್ರಪಾಲಿತಃ ॥೨೫॥

ವೃಕ್ಷಪಾರ್ಶ್ವೋ ನಿಕೇತಶ್ಚ ಚೀರವಾಸಾಸ್ತಥೈವ ಚ ।
ಏತೇ ಚಾನ್ಯೇ ಚ ಬಹವೋ ಯಕ್ಷಾಃ ಶತಸಹಸ್ರಶಃ ।
ಉಪಾಸತೇ ಸದಾ ಶ್ರೀಶ್ಚ ತಥೈವ ನಲಕೂಬರಃ ॥೨೬॥

ಕಿನ್ನರನಾಮಕ ಗಂಧರ್ವರು, ನರನಾಮಕ ಬೇರೆ ಗಂಧರ್ವರು, ಮಾಣಿಭದ್ರ ಮತ್ತು ಗುಹ್ಯಕನಾದ ಶ್ವೇತಭದ್ರ ಸ್ಥೂಣ, ಸೂರ್ಯಭಾನು, ಶೋಣಿಕ, ತಿಂದುಕ, ಕುಶೇರಲ, ಗಂಧಪಣ, ವೃಷೋದ, ಕಿಂಪುರುಷನಾದ ದ್ರುಮ, ಗಜಕರ್ಣ, ವಿಶಾಲಕ, ವರಾಹಕರ್ಣ, ಸಂಕೃಷ್ಟ, ಫಲಭಕ್ಷ, ಫಲೋದಕ, ಅಂಗಚೂಡ, ಶಿಲಾಪುಷ್ಪ, ಹೇಮನೇತ್ರ ,ವಿಭೂಷಣ, ಪುಷ್ಪಾನನ, ಪಿಂಗಲಕ, ಶೋಣಿತೋದ, ಪ್ರಪಾಲಿತ, ವೃಕ್ಷಪಾರ್ಶ್ವ, ನಿಕೇತ, ಮತ್ತು ಚೀರವಾಸ ಇವರೇ ಮೊದಲಾದ ಇನ್ನೂ ಅನೇಕ ಯಕ್ಷರು ಶತಸಹಸ್ರಸಂಖ್ಯೆಯಲ್ಲಿ ಕುಬೇರನನ್ನು ಉಪಾಸನೆಮಾಡುತ್ತಾರೆ. ಆ ಸಭೆಯ ಅಭಿಮಾನಿಯಾದ ಲಕ್ಷ್ಮೀ ಮತ್ತು ನಲಕೂಬರರು ಕುಬೇರನನ್ನು ಉಪಾಸನೆಮಾಡುತ್ತಾರೆ.

ಹಿಮವಾನ್ ಪಾರಿಯಾತ್ರಶ್ಚ ವಿಂಧ್ಯಕೈಲಾಸಮಂದರಾಃ ।
ಮಲಯೋ ದರ್ದುರಶ್ಚೈವ ಮಹೇಂದ್ರೋ ಗಂಧಮಾದನಃ ।
ಇಂದ್ರನೀಲಃ ಸುನಾಭಶ್ಚ ಉದಯಾಸ್ತೌ ಚ ಪರ್ವತೌ ॥೨೭॥

ಏತೇ ಚಾನ್ಯೇ ಚ ಬಹವಃ ಸರ್ವೇ ಮೇರುಪುರೋಗಮಾಃ ।
ಉಪಾಸತೇ ಮಹಾತ್ಮಾನಂ ಧನಾನಾಮೀಶ್ವರಂ ಪ್ರಭುಮ್ ॥೨೮॥

ಹಿಮಾಲಯ, ಪಾರಿಯಾತ್ರ, ವಿಂಧ್ಯಾ, ಕೈಲಾಸ, ಮಂದರ, ಮಲಯ, ದರ್ದುರ, ಮಹೇಂದ್ರ, ಗಂಧಮಾದನ, ಇಂದ್ರನೀಲ ಸುನಾಭ, ಉದಯಾಸ್ತಪರ್ವತಗಳು ಇವೇ ಮೊದಲಾದ ಇನ್ನೂ ಅನೇಕ ಮೇರು ಮೊದಲಾದ

ಪರ್ವತಗಳು ಪ್ರಭುವಾದ ಧನಪತಿಯಾದ ಮಹಾತ್ಮನಾದ ಕುಬೇರನನ್ನು ಉಪಾಸನೆಮಾಡುತ್ತಾರೆ.

ಅಹಂ ಚ ಬಹುಶತ್ತತ್ರ ತಥಾ ದೇವರ್ಷಯೋಽಪರೇ ।
ಭಗವಾನ್ ಭೂತಸಂಘೈಶ್ಚ ವೃತಃ ಸತತಮೀಶ್ವರಃ ॥೨೯॥

ಉಮಾಪತಿಃ ಪಶುಪತಿಃ ಶೂಲಧೃಗ್ ಭಗನೇತ್ರಹಾ ।
ತ್ರ್ಯಂಬಕೋ ವಿಶ್ವರೂಪಶ್ಚ ದೇವೀ ಚ ವಿಗತಕ್ಲಮಾ ॥೩೦॥

ನಾನು ಮತ್ತು ಇನ್ನೂ ಅನೇಕ ದೇವರ್ಷಿಗಳು ಆ ಸಭೆಯಲ್ಲಿ ಹೆಚ್ಚಾಗಿ ಇರುತ್ತೇವೆ. ಉಮಾಪತಿಯೂ, ಪಶುಪತಿಯೂ, ಶೂಲಧಾರಿಯೂ. ಭಗನ ನೇತ್ರವನ್ನು ನಾಶಮಾಡಿದವನೂ ತ್ರ್ಯಂಬಕನೂ ವಿಶ್ವರೂಪನೂ ಆದ ಮಹೇಶ್ವರನು ತನ್ನ ಭೂತಸಂಘಗಳಿಂದಲೂ ಮತ್ತು ಮನೋಹರಳಾದ ಪತ್ನಿಯಾದ ಪಾರ್ವತಿಯಿಂದಲೂ ಕೂಡಿಕೊಂಡು ಅಲ್ಲಿ ಇರುತ್ತಾನೆ.

ನಂದೀಶ್ವರಶ್ಚ ಭಗವಾನ್ ಮಹಾಕಾಲಸ್ತಥೈವ ಚ ।
ಶಂಕುಕರ್ಣಮುಖಾಃ ಸರ್ವೇ ದಿವ್ಯಾಃ ಪಾರಿಷದಾಸ್ತಥಾ ।
ಕಾಷ್ಮಕೂಟಃ ಸೋಮನಂದೀ ವಿಜಯಶ್ಚ ತಪೋಧಿಕಃ ॥೩೧॥

ಪೂಜ್ಯನಾದ ನಂದೀಶ್ವರನು ಮಹಾಕಾಲನು ಶಂಕುಕರ್ಣ ಮೊದಲಾದ ದಿವ್ಯ ಪಾರಿಷದರು ಕಾಷ್ಮಕೂಟ ಸೋಮನಂದಿ ಮತ್ತು ತಪಸ್ವಿಯಾದ ವಿಜಯ ಮೊದಲಾದ (ರುದ್ರದೇವರ) ಪರಿಷದರು ಅಲ್ಲಿರುತ್ತಾರೆ.

ಶ್ವೇತಶ್ಚ ವೃಷಭಸ್ತತ್ರ ನರ್ದನ್ನಾಸ್ತೇ ಮಹಾರವಃ ।
ನೈಋತಾ ರಾಕ್ಷಸಾಶ್ಚಾನ್ಯೇ ಗಂಧರ್ವಾಶ್ಚ ಸಮಾಸತೇ ॥೩೨॥

ಈಶ್ವರನ ವಾಹನವಾದ ಶ್ವೇತವೃಷಭವು ಅಲ್ಲಿ ಮಹಾನಾದದಿಂದ ಗರ್ಜಸುತ್ತಿರುತ್ತದೆ. ಅಲ್ಲಿ ಬೇರೆ ಗಂಧರ್ವರು ರಾಕ್ಷಸರು ಮತ್ತು ನೈಋತರು ಇರುತ್ತಾರೆ.

ವಾಮನೈರ್ವಿಕಟೈಃ ಕುಬ್ಜೈಃ ಕ್ಷತಜಾಕ್ಷೈರ್ಮಹಾರವೈಃ ।
ಮಾಂಸಮೇದೋವಸಾಹಾರೈರುಗ್ರಶ್ರವಣದರ್ಶನೈಃ ॥೩೩॥

ನಾನಾಪ್ರಹರಣೈಘೋರೈರ್ವಾತೈರಿವ ಮಹಾಜವೈಃ ।
ಪರಿಷದ್ಗಣೈಃ ಪರಿವೃತಮುಪಾಯಾಂತಂ ಮಹೇಶ್ವರಮ್ ॥೩೪॥

ತಂ ದೃಷ್ಟ್ವಾ ದೇವದೇವೇಶಂ ಶಿವಂ ತ್ರೈಲೋಕ್ಯಭಾವನಮ್ ।
ಪ್ರಣಮ್ಯ ಮೂರ್ಧ್ನಾ ಪೌಲಸ್ತ್ಯೋ ಬಹುರೂಪಮುಮಾಪತಿಮ್ ॥೩೫॥

ವಾಮನರು ವಿರೂಪಿಗಳು, ಕುಬ್ಜರು, ರಕ್ತಾಕ್ಷರು, ಭೈರವನಾದವುಳ್ಳವರು ಮೊದಲಾದ ಮಾಂಸ ಮೇದಸ್ಸು ಮತ್ತು ಕೊಬ್ಬನ್ನೇ ಆಹಾರವಾಗಿವುಳ್ಳ, ನೋಡಲು ಮತ್ತು ಕೇಳಲು ಉಗ್ರವಾದ ನಾನಾ ಆಯುಧಗಳನ್ನು ಹೊಂದಿದ ಬಿರುಗಾಳಿಯಂತೆ ಶೀಘ್ರವಾಗಿ ಬರುವ ತನ್ನ ಪರಿಷದ್‌ಗಣದಿಂದ ಪರಿವೃತನಾಗಿ ಅಲ್ಲಿಗೆ ಬರುವ ತ್ರೈಲೋಕ್ಯನಾಥನಾದ ಉಮಾಪತಿಯಾದ ದೇವಿದೇವೇಶನಾದ ಬಹುರೂಪವುಳ್ಳ ಮಹೇಶ್ವರನನ್ನು ನೋಡಿ ಪೌಲಸ್ತ್ಯ ವಂಶದ ಕುಬೇರನು ಎದ್ದು ಶಿರಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಾನೆ.

ತತೋಽಭ್ಯನುಜ್ಞಾಂ ಸಂಪ್ರಾಪ್ಯ ಮಹಾದೇವಾದ್ ಧನೇಶ್ವರಃ ।
ಆಸ್ತೇ ಕದಾಚಿದ್ ಭಗವಾನ್ ಭವೋ ಧನಪತೇಃ ಸಖಾ ॥೩೬॥

ಕುಬೇರನು ಅನಂತರ ರುದ್ರದೇವರಿಂದ ಅನುಮತಿಯನ್ನು ಪಡೆದು. ತನ್ನ ಆಸನದಲ್ಲಿ ಕುಳಿತುಕೊಂಡು ಪೂಜ್ಯನಾದ ರುದ್ರನಿಗೆ ಮಿತ್ರನಾಗಿರುತ್ತಾನೆ.

ಸಾ ಸಭಾ ತಾದೃಶೀ ರಾಜನ್ ಮಯಾ ದೃಷ್ಟಾಽಂತರಿಕ್ಷಗಾ ।
ಪಿತಾಮಹಸಭಾಂ ತಾತ ಕಥಯಿಷ್ಯೇ ಗತಕ್ಲಮಾಮ್ ॥೩೭॥

ರಾಜನೇ! ನಾನು ಅಂತರಿಕ್ಷದಲ್ಲಿ ಹಿಂದೆ ನೋಡಿದ ಆ ಸಭೆಯು ಇಂತಹ ಗುಣಗಳಿಂದ ಕೂಡಿದುದು. ಇನ್ನು ಆಯಾಸಾದಿ ದೋಷವಿಲ್ಲದಿರುವ ಬ್ರಹ್ಮದೇವರ ಸಭೆಯನ್ನು ವರ್ಣಿಸುತ್ತೇವೆ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ನವಮೋಽಧ್ಯಾಯಃ ॥
॥ ಮಂತ್ರಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹತ್ತನೆಯ ಅಧ್ಯಾಯವು ಮುಗಿಯಿತು.

★★★★★

ಹನ್ನೊಂದನೆಯ ಅಧ್ಯಾಯ

(ಬ್ರಹ್ಮಸಭೆಯ ವರ್ಣನೆ)

ನಾರದಃ

ಪಿತಾಮಹಸಭಾಂ ತಾತ ಕಥಯಿಷ್ಯಾಮಿ ತಾಂ ಶೃಣು ।
ನ ಶಕ್ಯತೇ ಯಾ ನಿರ್ದೇಷ್ಟುಮ್ ಏವಂರೂಪೇತಿ ಭಾರತ ॥೧॥

ಪ್ರೀತಿಪಾತ್ರನೇ! ಬ್ರಹ್ಮದೇವರ ಸಭೆಯನ್ನು ವರ್ಣಿಸುತ್ತೇನೆ ಕೇಳು. ಭಾರತನೇ! ಅದನ್ನು ಈ ರೀತಿ ಇದೆಯೆಂದು ವರ್ಣಿಸಲು ಸಾಧ್ಯವಿಲ್ಲ.

ಪುರಾ ದೇವಯುಗೇ ತಾತ ವಿವಸ್ವಾನ್ ಭಗವಾನ್ ದಿವಃ ।
ಆಗಚ್ಛನ್ಮಾನುಷಂ ಲೋಕಂ ದಿದೃಕ್ಷುರ್ವಿಗತಕ್ಲಮಃ ॥೨॥

ಪ್ರೀತಿಪಾತ್ರನೇ! ಹಿಂದೆ ದೇವಯುಗದಲ್ಲಿ ಪೂಜ್ಯನಾದ ವಿವಸ್ವಾನ್‌ನಾಮಕನಾದ ಸೂರ್ಯನು, ಮನುಷ್ಯಲೋಕವನ್ನು ನೋಡುವ ಇಚ್ಛೆಯಿಂದ ಅನಾಯಾಸವಾಗಿ ಸ್ವರ್ಗದಿಂದ ಭೂಮಿಗೆ ಇಳಿದು ಬಂದನು.

ಚರನ್ ಮಾನುಷರೂಪೇಣ ಸಭಾಂ ದೃಷ್ಟ್ವಾ ಸ್ವಯಂಭುವಃ ।
ಸಭಾಮಕಥಯನ್ಮಹ್ಯಂ ಬ್ರಾಹ್ಮೀಂ ತತ್ತ್ವೇನ ಭಾರತ ॥೩॥

ಭಾರತನೇ! ಅವನು ಮನುಷ್ಯರೂಪವನ್ನು ಧರಿಸಿ ಸಂಚರಿಸುತ್ತಾ, ಬ್ರಹ್ಮದೇವರ ಸಭೆಯನ್ನು ನೋಡಿ ಅದನ್ನು ನನಗೆ ಯಥಾವತ್ತಾಗಿ ತಿಳಿಸಿದನು.

ಅಪ್ರಮೇಯಪ್ರಭಾಂ ದಿವ್ಯಾಂ ಮಾನಸೀಂ ಭರತರ್ಷಭ ।
ಅನಿರ್ದೇಶ್ಯಾಂ ಪ್ರಭಾವೇಣ ಸರ್ವಭೂತಮನೋರಮಾಮ್ ॥೪॥

ಭರತರ್ಷಭನೇ! ಅದು ಊಹಿಸಲು ಅಸಾಧ್ಯವಾದ ದಿವ್ಯವಾದ ಕಾಂತಿಯುಳ್ಳದ್ದು. ಮನಸ್ಸಿನ ಅಭಿಲಾಷೆಯೆಲ್ಲವನ್ನು ಪೂರೈಸುವಂತಹುದು. ಅದರ ಸಾಮರ್ಥ್ಯವು ಇಷ್ಟು ಎಂದು ಹೇಳಲು ಬರುವುದಿಲ್ಲ. ಅದು ಎಲ್ಲರ ದೃಷ್ಟಿಯಿಂದಲೂ ಮನೋಹರವಾದುದು. (ಎಂದು ಹೇಳಿದನು.)

ಶ್ರುತ್ವಾ ಗುಣಾನಹಂ ತಸ್ಯಾಃ ಸಭಾಯಾಃ ಪಾಂಡವರ್ಷಭ ।
ದರ್ಶನೇಪ್ಸುಸ್ತದಾ ರಾಜನ್ ಆದಿತ್ಯಮಹಮಬ್ರುವಮ್ ॥೫॥

ಪಾಂಡವರ್ಷಭನೇ! ಆ ಸಭೆಯ ಗುಣಗಳನ್ನು ಕೇಳಿದ ನಾನು ಆ ಸಭೆಯನ್ನು ನೋಡಲು ಬಯಸಿ ಸೂರ್ಯನನ್ನು ಕುರಿತು ಹೀಗೆ ಹೇಳಿದೆನು.

ಭಗವನ್ ದ್ರಷ್ಟುಮಿಚ್ಛಾಮಿ ಪಿತಾಮಹಸಭಾಮಹಮ್ ।
ಕೇನ ವಾ ತಪಸಾ ಶಕ್ಯಂ ಕರ್ಮಣಾ ವಾऽಪಿ ಗೋಪತೇ ॥೬॥

ಔಷಧೈರ್ವಾ ತಥಾ ಯುಕ್ತೈರುತ ವಾ ಮಾಯಯಾ ಕಯಾ ।
ತನ್ಮಮಾಚಕ್ಷ್ವ ಭಗವನ್ ದ್ರಷ್ಟುಮಿಚ್ಛಾಮಿ ತಾಂ ಸಭಾಮ್ ॥೭॥

ಪೂಜ್ಯನೇ! ನಾನು ಬ್ರಹ್ಮದೇವರ ಆ ಸಭೆಯನ್ನು ನೋಡಲು ಬಯಸುತ್ತೇನೆ. ಗೋಪತಿಯೇ! ಅದನ್ನು ಯಾವ ತಪಸ್ಸಿನಿಂದ, ಅಥವಾ ಕರ್ಮದಿಂದ ಅಥವಾ ಔಷಧಿಗಳ ಬಲದಿಂದ ಅಥವಾ ಯೋಗದಿಂದ ಅಥವಾ ಮಯಾಶಕ್ತಿಯಿಂದ ನೋಡಲು ಸಾಧ್ಯವೆಂಬುದನ್ನು ನನಗೆ ತಿಳಿಸು.

ಸ ಮಹ್ಯಂ ವಚನಂ ಶ್ರುತ್ವಾ ಸಹಸ್ರಾಂಶುರ್ದಿವಾಕರಃ ।
ಪ್ರೋವಾಚ ಭರತಶ್ರೇಷ್ಠ ವ್ರತಂ ವರ್ಷಸಹಸ್ರಕಮ್ ॥೮॥

ಭರತಶ್ರೇಷ್ಠನೇ! ನನ್ನ ಮಾತನ್ನು ಕೇಳಿದ ಸಹಸ್ರಕಿರಣನಾದ ಸೂರ್ಯನು ನನಗೆ ಆಗ ಒಂದು ಸಹಸ್ರವರ್ಷದ ವ್ರತವನ್ನು ಆದೇಶಿಸಿದನು.

ಬ್ರಹ್ಮವ್ರತಮುಪಾಸ್ಸ್ವ ತ್ವಂ ಪ್ರಯತೇನಾಂತರಾತ್ಮನಾ ।
ತತೋऽಹಂ ಹಿಮವತ್ಪೃಷ್ಠೇ ವ್ರತಚರ್ಯಾಮುಪಾಗತಃ ॥೯॥

ಜಿತವಾದ ಮನಸ್ಸಿನಿಂದ ನೀನು ನಿಯಮಬದ್ಧನಾಗಿ ಈ ಬ್ರಹ್ಮವ್ರತವನ್ನು ಅನುಷ್ಠಾನಮಾಡು ಎಂದು ಹೇಳಿದ ಅವನ ಮಾತಿನಂತೆ ನಾನು ಹಿಮಾಲಯದ ತಪ್ಪಲಿನಲ್ಲಿ ವ್ರತಚರ್ಯೆಯನ್ನು ಕೈಗೊಂಡೆನು.

ತತಃ ಸ ಭಗವಾನ್ ಸೂರ್ಯೋ ಮಾಮುಪಾದಾಯ ವೀರ್ಯವಾನ್ ।
ಆಗಚ್ಛತ್ ತಾಂ ಸಭಾಂ ತಾತ ವಿಪಾಪಾಂ ವಿಗತಕ್ಲಮಾಮ್ ॥೧೦॥

ಅನಂತರ ಆ ಭಗವಂತನಾದ ಪರಾಕ್ರಮಿಯಾದ ಸೂರ್ಯನು ನನ್ನನ್ನು ಕರೆದುಕೊಂಡು ಪಾಪರಹಿತವಾದ ಶ್ರಮಾದಿದೋಷರಹಿತವಾದ ಆ ಬ್ರಹ್ಮದೇವರ ಸಭೆಗೆ ಹೋದನು.

ಏವಂರೂಪೇತಿ ಸಾ ಶಕ್ಯಾ ನ ನಿರ್ದೇಷ್ಟುಂ ಜನಾಧಿಪ ।
ಕ್ಷಣೇನ ಹಿ ಬಿಭರ್ತ್ಯನ್ಯದನಿರ್ದೇಶ್ಯಂ ವಪುಸ್ತಥಾ ॥೧೧॥

ಜನಾಧಿಪನೇ! ಆ ಸಭೆಯನ್ನು ಹೀಗೆಯೇ ಇದೆಯೆಂದು ಹೇಳಲು ಬರುವುದಿಲ್ಲ. ಒಂದು ಕ್ಷಣದಲ್ಲಿ ಅದು ವರ್ಣಿಸಲು ಅಸಾಧ್ಯವಾದ ಇನ್ನೊಂದು ರೂಪವನ್ನು ತಾಳುತ್ತದೆ.

ನ ಜಾನೇ ಪರಿಮಾಣಂ ವಾ ಸಂಸ್ಥಾನಂ ವಾಽಪಿ ಭಾರತ ।
ನಚ ರೂಪಂ ಮಯಾ ತಾದೃಕ್ ದೃಷ್ಟಪೂರ್ವಂ ಕದಾಚನ ॥೧೨॥

ನನಗೆ ಅದರ ಉದ್ದ ಅಗಲಗಳಾಗಲೀ ಅಥವಾ ಆಕಾರವಾಗಲೀ ಅಥವಾ ರೂಪವಾಗಲೀ ಯಾವುದೂ ತಿಳಿಯಲಿಲ್ಲ. ಭರತರ್ಷಭನೇ! ನಾನು ಅಂತಹ ವಸ್ತುವನ್ನು ಹಿಂದೆಂದೂ ನೋಡಲಿಲ್ಲ.

ಸುಸುಖಾ ಸಾ ಸಭಾ ರಾಜನ್ ನಶೀತಾ ನಚ ಘರ್ಮದಾ।
ನ ಕ್ಷುತ್‌ಪಿಪಾಸೇ ನಚ ಗ್ಲಾನಿಂ ಪ್ರಾಪ್ಯ ತಾಂ ಪ್ರಾಪ್ನುವಂತ್ಯುತ ॥೧೩॥

ರಾಜನೇ! ಆ ಸಭೆಯು ಅತ್ಯಂತಸುಖಪೂರ್ಣವಾಗಿರುತ್ತದೆ. ಅಲ್ಲಿ ಶೈತ್ಯಬಾಧೆಯಾಗಲೀ ಉಷ್ಣತೆಯಬಾಧೆಯಾಗಲೀ ಇಲ್ಲ. ಆ ಸಭೆಗೆ ಹೋದವರು ಹಸಿವೆಯನ್ನಾಗಲೀ ಬಾಯಾರಿಕೆಯನ್ನಾಗಲೀ ಅಥವಾ ಶ್ರಮವನ್ನಾಗಲೀ ಹೊಂದುವುದಿಲ್ಲ.

ನಾನಾರೂಪೈರಿವ ಕೃತಾ ವಿಚಿತ್ರೈರಿವ ಭಾಸ್ವರೈಃ ।
ದಿವ್ಯೈರ್ನಾನಾವಿಧೈರ್ಭಾವೈರ್ಭಾವದ್ಭಿರಮಿತಪ್ರಭೈಃ ।
ಸ್ತಂಭೈರ್ನಚ ಧೃತಾ ಸಾ ತು ಶಾಶ್ವತೀ ನಚ ಸಾ ಕ್ಷರಾ ॥೧೪॥

ಆ ಸಭೆಯು ಪ್ರಕಾಶಮಾನವಾದ ಅಮಿತ ಕಾಂತಿಯುಳ್ಳ ನಾನಾವಿಧವಾದ ವಿಚಿತ್ರವಾದ ಅನೇಕರೂಪಗಳುಳ್ಳ ದಿವ್ಯವಸ್ತುಗಳಿಂದ ಮಾಡಲ್ಪಟ್ಟಿದೆ. ಆ ಸಭೆಯು

ನಿತ್ಯವಾದುದು. ಅದು ಸ್ಥಂಭಗಳ ಮೇಲೆ ನಿಂತಿಲ್ಲ. ಮತ್ತು ನಾಶವನ್ನು ಹೊಂದುವುದಿಲ್ಲ.

ಅತಿ ಸೂರ್ಯಂ ಚ ಚಂದ್ರಂ ಚ ಶಿಖಿನಂ ಚ ಸ್ವಯಂಪ್ರಭಾ ।
ದೀಪ್ಯತೇ ನಾಕಪೃಷ್ಠಸ್ಥಾ ಭಾಸಯಂತೀವ ಭಾಸ್ಕರಮ್ ॥೧೫॥

ಸ್ವರ್ಗದ ಬೆನ್ನಿನಲ್ಲಿರುವ ಆ ಸಭೆಯು ತನ್ನ ಸ್ವಯಂಪ್ರಭೆಯಿಂದ ಸೂರ್ಯನನ್ನೂ ಚಂದ್ರನನ್ನೂ ಅಗ್ನಿಯನ್ನೂ ಮೀರಿಸಿ ಸೂರ್ಯನನ್ನೇ ಪ್ರಕಾಶಿಸುವಂತೆ ಬೆಳಗುತ್ತದೆ.

ತಸ್ಯಾಂ ಸ ಭಗವಾನಾಸ್ತೇ ವಿದಧದ್ ದೇವಮಾಯಯಾ ।
ಸ್ವಯಮೇಕೋಽನಿಶಂ ರಾಜನ್ ಲೋಕಾನ್ ಲೋಕಪಿತಾಮಹಃ ॥

ರಾಜನೇ! ಆ ಸಭೆಯಲ್ಲಿ ಪೂಜ್ಯನಾದ ಲೋಕಪಿತಾಮಹನಾದ ಬ್ರಹ್ಮನು ತಾನೊಬ್ಬನೇ ತನ್ನ ದಿವ್ಯವಾದ ಶಕ್ತಿಯಿಂದ ಯಾವಾಗಲೂ ಜೀವರನ್ನು ಸೃಷ್ಟಿಸುತ್ತಾ ಇರುತ್ತಾನೆ.

ಉಪಾತಿಷ್ಠಂತ ತತ್ರೈನಂ ಪ್ರಜಾನಾಂ ಪತಯಃ ಪ್ರಭುಮ್ ।
ದಕ್ಷಃ ಪ್ರಚೇತಾಃ ಪುಲಹೋ ಮರೀಚಿಃ ಕಶ್ಯಪಸ್ತಥಾ ।
ಆದಿತ್ಯಾಶ್ಚ ತಥಾ ರಾಜನ್ ರುದ್ರಾಶ್ಚ ವಸವೋಽಶ್ವಿನೌ ॥೧೭॥

ಭೃಗುರತ್ರಿರ್ವಸಿಷ್ಠಶ್ಚ ಗೌತಮೋಽಥ ತಥಾಽಂಗಿರಾಃ ।
ಪುಲಸ್ತ್ಯಶ್ಚ ಕ್ರತುಶ್ಚೈವ ಪ್ರಹ್ಲಾದಃ ಕರ್ದಮಸ್ತಥಾ ॥೧೮॥

ಅಥರ್ವಾಂಗಿರಸಶ್ಚೈವ ವಾಲಖಿಲ್ಯಾ ಮರೀಚಿಪಾಃ ।
ಮನೋ ವಿದ್ಯಾಽಂತರಿಕ್ಷಂ ಚ ವಾಯುಸ್ತೇಜೋ ಜಲಂ ಮಹೀ ॥೧೯॥

ಶಬ್ದಃ ಸ್ಪರ್ಶೋ ತಥಾ ರೂಪಂ ರಸೋ ಗಂಧಶ್ಚ ಭಾರತ ।
ಪ್ರಕೃತಿಶ್ಚ ವಿಕಾರಶ್ಚ ಯಚ್ಚಾನ್ಯತ್ ಕಾರಣಂ ಭುವಃ ॥೨೦॥

ಪ್ರಭುವಾದ ಬ್ರಹ್ಮದೇವರನ್ನು ಅಲ್ಲಿ ದಕ್ಷ ಪ್ರಚೇತ ಪುಲಹ ಮರೀಚಿ ಕಶ್ಯಪ ಮೊದಲಾದ ಪ್ರಜಾಪತಿಗಳೂ ಆದಿತ್ಯರು ರುದ್ರರು ವಸುಗಳು ಮತ್ತು ಅಶ್ವಿನಿಗಳು ಮೊದಲಾದ ದೇವತೆಗಳೂ ಉಪಾಸನೆಯನ್ನು ಮಾಡುತ್ತಾರೆ. ಭೃಗು ಅತ್ರಿ ವಸಿಷ್ಠ

ಗೌತಮ ಅಂಗೀರ ಪುಲಸ್ತ್ಯ ಕ್ರತು ಪ್ರಹ್ಲಾದ ಕರ್ದಮ ಅಥರ್ವಾ ಅಂಗಿರಸರು ವಾಲಖಿಲ್ಯರು ಮರೀಚಿ ಮನಸ್ಸು ವಿದ್ಯಾ ಅಂತರಿಕ್ಷ ವಾಯು ಅಗ್ನಿ ಜಲ ಭೂಮಿ ಶಬ್ದ ಸ್ಪರ್ಶ ರೂಪ ರಸ ಗಂಧ ಪ್ರಕೃತಿ ಮತ್ತು ಅದರ ವಿಕಾರಗಳು ಮತ್ತು ಜಗತ್ತಿಗೆ ಕಾರಣವಾದ ಎಲ್ಲ ವಸ್ತುಗಳೂ (ಅಲ್ಲಿ ದೇಹವನ್ನು ಧರಿಸಿ) ಬ್ರಹ್ಮದೇವರನ್ನು ಉಪಾಸನೆಮಾಡುತ್ತಾರೆ.

ಅಗಸ್ತ್ಯಶ್ಚ ಮಹಾತೇಜಾ ಮಾರ್ಕಂಡೇಯಶ್ಚ ದೀಪ್ತಿಮಾನ್ ।
ಜಮದಗ್ನಿರ್ಭರದ್ವಾಜಃ ಸಂವರ್ತಶ್ಚ್ಯವನಸ್ತಥಾ ॥೨೧॥

ದುರ್ವಾಸಾಶ್ಚ ಮಹಾಭಾಗ ಋಶ್ಯಶೃಂಗಶ್ಚ ಧಾರ್ಮಿಕಃ ।
ಸನತ್ಕುಮಾರೋ ಭಗವಾನ್ ಯೋಗಾಚಾರ್ಯೋ ಮಹಾಯಶಾಃ॥೨೨॥

ಅಸಿತೋ ದೇವಲಶ್ಚೈವ ಜೈಗೀಷವ್ಯಶ್ಚ ತತ್ತ್ವವಿತ್ ।
ಋಷಭೋ ಜಿತಶತ್ರುಶ್ಚ ಮಹಾವೀರ್ಯಸ್ತಥಾऽऽರುಣಿಃ ॥೨೩॥

ಆಯುರ್ವೇದಸ್ತಥಾऽಷ್ಟಾಂಗೋ ದೇಹವಾಂಸ್ತತ್ರ ಭಾರತ ।
ಚಂದ್ರಮಾಃ ಸಹ ನಕ್ಷತ್ರೈರಾದಿತ್ಯಶ್ಚ ಗಭಸ್ತಿಮಾನ್ ॥೨೪॥

ವಾಯವಃ ಕ್ರತವಶ್ಚೈವ ಸಂಕಲ್ಪಃ ಪ್ರಾಣ ಏವ ಚ ।
ಮೂರ್ತಿಮಂತೋ ಮಹಾತ್ಮಾನೋ ಮಹಾವ್ರತಪರಾಯಣಾಃ ।
ಏತೇ ಚಾನ್ಯೇ ಚ ಬಹವಃ ಸ್ವಯಂಭುವಮುಪಸ್ಥಿತಾಃ ॥೨೫॥

ಮಹಾತೇಜಸ್ವಿಗಳಾದ ಅಗಸ್ತ್ಯರು ಕಾಂತಿಯುಕ್ತರಾದ ಮಾರ್ಕಂಡೇಯರು ಜಮದಗ್ನಿ ಭರದ್ವಾಜ ಸಂವರ್ತ ಚ್ಯವನ ಮಹಾನುಭಾವರಾದ ದೂರ್ವಾಸರು ಧಾರ್ಮಿಕರಾದ ಋಷ್ಯಶೃಂಗ್ಯರು ಪೂಜ್ಯರಾದ ಯೋಗಾಚಾರ್ಯರು ಮಹಾಕೀರ್ತಿಶಾಲಿಗಳಾದ ಸನತ್ಕುಮಾರರು ಅಸಿತ ದೇವಲ ತತ್ವಜ್ಞಾನಿಯಾದ ಜೈಗೀಷವ್ಯ ಜಿತಶತ್ರುವಾದ ಮಹಾಸಾಮರ್ಥ್ಯಹೊಂದಿದ ಋಷಭ ಮತ್ತು ಆರುಣಿ ಆಯುರ್ವೇದ ಅಷ್ಟಾಂಗವಿದ್ಯೆಗಳು ಎಲ್ಲವೂ ದೇಹವನ್ನು ಧರಿಸಿರುತ್ತವೆ. ಅಲ್ಲದೆ ಭಾರತ ಶ್ರೇಷ್ಠನೇ! ನಕ್ಷತ್ರಗಳಿಂದ ಕೂಡಿದ ಚಂದ್ರನೂ ತನ್ನ ಕಿರಣ ಸಮೂಹಗಳಿಂದ ಕೂಡಿದ ಸೂರ್ಯನೂ ವಾಯುಗಳು ಕ್ರತುಗಳು ಸಂಕಲ್ಪ ಪ್ರಾಣ ಮೊದಲಾದ

ಮಹಾನುಭಾವರೆಲ್ಲರೂ ಮಹಾವ್ರತನಿಷ್ಠರಾಗಿ ದೇಹವನ್ನು ಧರಿಸಿ ಇವರೂ ಇನ ಅನೇಕರೂ ಬ್ರಹ್ಮದೇವರ ಉಪಾಸನೆಯನ್ನು ಮಾಡುತ್ತಾರೆ.

ಅರ್ಥೋ ಧರ್ಮಶ್ಚ ಕಾಮಶ್ಚ ಹರ್ಷೋ ದ್ವೇಷಸ್ತಪೋ ದಮಃ ।
ಆಯಾಂತಿ ತತ್ರ ಸತತಂ ಗಂಧರ್ವಾಪ್ಸರಸಸ್ತಥಾ ।
ವಿಂಶತಿಃ ಸಪ್ತ ಚೈವಾನ್ಯೇ ಲೋಕಪಾಲಾಶ್ಚ ಸರ್ವಶಃ ॥೨೬॥

ಅರ್ಥ ಧರ್ಮ ಕಾಮ ಹರ್ಷ ದ್ವೇಷ ತಪಸ್ಸು ದಮ ಇಪ್ಪತ್ತೇಳು ಮಂದಿ ಗಂಧರ್ವಾಪ್ಸರೆಯರು ಮತ್ತು ಎಲ್ಲಾ ಲೋಕಪಾಲಕರು ಅಲ್ಲಿಗೆ ಸತತವಾಗಿ ಬರುತ್ತಾರೆ.

ಶುಕ್ರೋ ಬೃಹಸ್ಪತಿಶ್ಚೈವ ಬುಧೋऽಂಗಾರಕ ಏವ ಚ ।
ಶನೈಶ್ಚರಶ್ಚ ರಾಹುಶ್ಚ ಗ್ರಹಾಃ ಸರ್ವೇ ತಥೈವ ಚ ॥೨೭॥

ಶುಕ್ರ, ಬೃಹಸ್ಪತಿ, ಬುಧ, ಅಂಗಾರಕ, ಶನಿ, ರಾಹು ಈ ಎಲ್ಲ ಗ್ರಹಗಳೂ ಅಲ್ಲಿ ಇರುತ್ತವೆ.

ಮಂತ್ರಾ ರಥಂತರಂ ಚೈವಂ ಹರಿಮಾನ್ ವಸುಮಾನಪಿ ।
ಆದಿತ್ಯಶ್ಚಾದ್ರಿರಾಜಾನೋ ನಾಮದ್ವಂದ್ವೈರುದಾಹೃತಾಃ ।
ಮರುತೋ ವಿಶ್ವಕರ್ಮಾ ಚ ವಿಜ್ಞಾನಾನಿಚ ಭಾರತ ॥೨೮॥

ಮಂತ್ರಗಳು, ರಥಂತರಾದಿ ಸಾಮಗಳು ಆದಿತ್ಯರು ದ್ವಂದ್ವನಾಮಗಳಿಂದ ಕೂಡಿದವರು ಎಲ್ಲಾ ವರ್ಷಗಳು ಮರುದ್ಗಣಗಳು ವಿಶ್ವಕರ್ಮನು ಮತ್ತು ಎಲ್ಲಾ ವಿಜ್ಞಾನಕರ್ಮಗಳು ಅಲ್ಲಿರುತ್ತಾರೆ.

ಸರ್ವೇ ಚ ಕಾಮಪ್ರಚುರಾಃ ಸಭಾಯಾಂ ತತ್ರ ನಿತ್ಯಶಃ ।
ತಥಾ ಪಿತೃಗಣಾಃ ಸರ್ವೇ ದೈವತಾನಿ ಚ ಮೂರ್ತಿಮಾನ್ ॥೨೯॥

ಆ ಸಭೆಯಲ್ಲಿ ಇದ್ದ ಎಲ್ಲರೂ ಪೂರ್ಣಕಾಮರಾಗಿರುತ್ತಾರೆ. ಹಾಗೆಯೇ ಪಿತೃಗಣಗಳು ಮತ್ತು ದೇವತಾಗಣಗಳು ಶರೀರಸಹಿತವಾಗಿ ಅಲ್ಲಿರುತ್ತಾರೆ.

ಋಗ್ವೇದಃ ಸಾಮವೇದಶ್ಚ ಯಜುರ್ವೇದಶ್ಚ ಪಾಂಡವ ।
ಅಥರ್ವವೇದಶ್ಚ ತಥಾ ಶಾಸ್ತ್ರಾಣಿ ವಿವಿಧಾನಿ ಚ ॥೩೦॥

ಪಾಂಡವನೇ! ಋಗ್ವೇದ ಸಾಮವೇದ ಯಜುರ್ವೇದ ಅಥರ್ವವೇದ ಮತ್ತು ವಿವಿಧವಾದ ಶಾಸ್ತ್ರಗಳು ಅಲ್ಲಿರುತ್ತವೆ.

ಇತಿ ಹಾಸೋಪವೇದಾಶ್ಚ ವೇದಾಂಗಾನಿ ಚ ಸರ್ವಶಃ ।
ಗ್ರಹಾ ಯಜ್ಞಾಶ್ಚ ಸೋಮಾಶ್ಚ ದೈವತಾನಿ ಚ ಸರ್ವಶಃ ॥೩೧॥

ಇತಿಹಾಸ ಉಪವೇದಗಳು ಎಲ್ಲಾ ವೇದಾಂಗಗಳು ಗ್ರಹಗಳು ಯಜ್ಞಗಳು ಸೋಮರಸಗಳು ಮತ್ತು ಎಲ್ಲಾ ದೇವತೆಗಳು ಅಲ್ಲಿರುತ್ತಾರೆ.

ಸಾವಿತ್ರೀ ದುರ್ಗತರಣೀ ವಾಣೀ ಸಪ್ತವಿಧಾ ತಥಾ ।
ಮೇಧಾ ಧೃತಿಃ ಶ್ರುತಿಶ್ಚೈವ ಪ್ರಜ್ಞಾ ಕ್ಷಾಂತಿಃ ಸ್ಮೃತಿರ್ಯಶಃ ॥೩೨॥

ಸಾವಿತ್ರೀ ದುರ್ಗಾ ವಾಣಿ ಮತ್ತು ಮೇಧಾ ಧೃತಿ ಶ್ರುತಿ ಪ್ರಜ್ಞಾ ಕ್ಷಾಂತಿ ಸ್ಮೃತಿ ಯಶಸ್ಸು ಎಂಬ ಏಳು ಮಾತೆಯರು ಅಲ್ಲಿರುತ್ತಾರೆ.

ಸಾಮಾನಿ ಸ್ತುತಿಗೀತಾನಿ ಗಾಥಾಶ್ಚ ವಿವಿಧಾ ಅಪಿ ।
ಭಾಷ್ಯಾಣಿ ತರ್ಕಯುಕ್ತಾನಿ ದೇಹವಂತಿ ವಿಶಾಂಪತೇ ॥೩೩॥

ರಾಜನೇ! ಅಲ್ಲಿ ಸಾಮಗಳು ಸ್ತೋತ್ರಗಳು ಗೀತೆಗಳು ವಿವಿಧವಾದ ಗಾಥೆಗಳು ತರ್ಕಸಹಿತವಾದ ಅನೇಕ ಭಾಷ್ಯಗಳು ದೇಹವನ್ನು ಧರಿಸಿ ಇರುತ್ತವೆ.

ಕ್ಷಣೋ ಲವೋ ಮುಹೂರ್ತಾಶ್ಚ ದಿವಾ ರಾತ್ರಿಶ್ಚ ಭಾರತ ।
ಅರ್ಧಮಾಸಾಶ್ಚ ಮಾಸಾಶ್ಚ ಋತವಃ ಷಟ್ ಚ ಭಾರತ ॥೩೪॥

ಸಂವತ್ಸರಾಶ್ಚತುರ್ಯುಗಂ ಸಮಾ ರಾತ್ರಿಶ್ಚತುರ್ವಿಧಾ ।
ಕಾಲಚಕ್ರಂ ಚ ಯದ್ ದಿವ್ಯಂ ನಿತ್ಯಗಂ ಧ್ರುವಮವ್ಯಯಮ್ ॥೩೫॥

ಭಾರತನೇ! ಅಲ್ಲಿ ಕ್ಷಣ ಲವ ಮುಹೂರ್ತ ಹಗಲು ರಾತ್ರಿ ಪಕ್ಷಗಳು ಮಾಸಗಳು ಆರು ಋತುಗಳು ಸಂವತ್ಸರ ಚತುರ್ಯುಗಗಳು ನಾಲ್ಕುವಿಧವಾದ ರಾತ್ರಿಗಳು ನಿತ್ಯವೂ ಚಲಿಸುವ ನಾಶರಹಿತವಾದ ಶಾಶ್ವತವಾದ ದಿವ್ಯವಾದ ಕಾಲಚಕ್ರ ಎಲ್ಲವೂ ಇರುತ್ತವೆ.

ಅದಿತಿರ್ದಿತಿರ್ದನುಶ್ಚೈವ ವಿನತಾ ಸುರಸಾ ತಥಾ ।
ಕಾಲಿಕಾ ಸುರಭೀ ದೇವೀ ಸರಮಾ ಚಾಥ ಗೌತಮೀ ।
ಪೃಥಾ ಕದ್ರೂಶ್ಚ ತಾ ದೇವ್ಯಸ್ತತ್ರಾಸನ್ ದೇವಮಾತರಃ ॥೩೬॥

ಅದಿತಿ ದಿತಿ ದನು ವಿನತಾ ಸುರಸಾ ಕಾಳಿಕಾ ಸುರಭೀ ಸರಮಾ ಗೌತಮೀ ಪೃಥಾ ಕದ್ರೂ ಮೊದಲಾದ ದೇವಮಾತೆಯರು ಅಲ್ಲಿರುತ್ತಾರೆ.

ರುದ್ರಾಣೀ ಶ್ರೀಶ್ಚ ಲಕ್ಷ್ಮೀಶ್ಚ ಭದ್ರಾ ಷಷ್ಠೀ ತಥಾ ಜರಾ ।
ಪೃಥ್ವೀ ಚ ಗಂಗಾ ದೇವೀ ಚ ಹ್ರೀಃ ಸ್ವಾಹಾ ಕೀರ್ತಿರೇವ ಚ ॥೩೭॥

ಸುರಾ ದೇವೀ ಶಚೀ ಚೈವ ತಥಾ ಪುಷ್ಟಿರರುಂಧತೀ ।
ಸಂಪತ್ತಿರಾಶಾ ನಿಯತಿರ್ವ್ಯಷ್ಟಿರ್ದೇವೀ ರತಿಸ್ತಥಾ ।
ಏತಾಶ್ಚಾನ್ಯಾಶ್ಚ ತಾ ದಿವ್ಯಾ ಉಪತಸ್ಥುಃ ಪ್ರಜಾಪತಿಮ್ ॥೩೮॥

ಪಾರ್ವತಿ ಶ್ರೀದೇವಿ ಲಕ್ಷ್ಮೀದೇವಿ ಭದ್ರಾ ಷಷ್ಠೀ ಜರಾ ಭೂಮಿ ಗಂಗಾ ಹ್ರೀ ದೇವಿ ಸ್ವಾಹಾ ಕೀರ್ತಿ ಸುರಾ ಶಚೀ ಪುಷ್ಟಿ ಅರುಂಧತೀ ಸಂಪತ್ತಿ ಆಶಾ ನಿಯತಿ ವ್ಯಷ್ಟಿ ರತಿ ಇವರೂ ಮತ್ತು ಇನ್ನೂ ಅನೇಕ ದೇವಿಯರೂ ಅಲ್ಲಿ ಬ್ರಹ್ಮದೇವರನ್ನು ಉಪಾಸನೆಮಾಡುತ್ತಾರೆ.

ಆದಿತ್ಯಾ ವಸವೋ ರುದ್ರಾ ಮರುತಃ ಸರ್ವ ಏವ ಚ ।
ವಿಶ್ವೇದೇವಾಶ್ಚ ಸಾಧ್ಯಾಶ್ಚ ಪಿತರಶ್ಚ ಮನೋಜವಾಃ ॥೩೯॥

ವಸುರುದ್ರಾದಿತ್ಯರು ಎಲ್ಲಾ ಮರುತ್‌ಗಳು ವಿಶ್ವೇದೇವತೆಗಳು ಸಾಧ್ಯರು ಮತ್ತು ಮನೋಜವವುಳ್ಳ ಪಿತೃಗಳು ಬ್ರಹ್ಮದೇವರನ್ನು ಉಪಾಸನೆಮಾಡುತ್ತಾರೆ.

ಪಿತೄಣಾಂ ಚ ಗಣಾನ್ ವಿದ್ಧಿ ಸಪ್ತೈವ ಪುರುಷರ್ಷಭ।
ಚತ್ವಾರೋ ಮೂರ್ತಿಮಂತೋ ವೈ ತ್ರಯಶ್ಚಾಪ್ಯರೀರಿಣಃ ॥೪೦॥

ಪುರುಷರ್ಷಭನೇ! ಪಿತೃಗಳ ಗಣವನ್ನು ಏಳು ಎಂದು ತಿಳಿ. ಅವರಲ್ಲಿ ನಾಲ್ವರು ಮೂರ್ತಿವುಳ್ಳವರು ಇನ್ನು ಮೂರುಗಣಗಳು ಅಮೂರ್ತ ಎಂದರೆ ಶರೀರ ಇಲ್ಲದವರು.

ವೈರಾಜಾಶ್ಚ ಮಹಾಭಾಗಾ ಅಗ್ನಿಷ್ವಾತ್ತಾಶ್ಚ ಭಾರತ ।
ಗಾರ್ಹಪತ್ಯಾ ನಾಮ ಪರೇ ಪಿತರೋ ಲೋಕವಿಶ್ರುತಾಃ ॥೪೧॥

ಭಾರತನೇ! ಮಹಾನುಭಾವರಾದ ವೈರಾಜರು ಅಗ್ನಿಷ್ವಾತ್ತರು ಗಾರ್ಹಪತ್ಯರು ಎಂಬ ಲೋಕವಿಶ್ರುತವಾದ ಬೇರೆ ಪಿತೃಗಳು ಅಲ್ಲಿದ್ದಾರೆ.

ಸೋಮಪಾ ಏಕಶೃಂಗಾಶ್ಚ ಅನ್ವಾಹಾರ್ಯಾಃ ಕಲಾಸ್ತಥಾ ।
ಏತೇ ಚತುರ್ಷು ವರ್ಣೇಷು ಪೂಜ್ಯಂತೇ ಪಿತರೋ ನೃಪ ॥೪೨॥

ಸೋಮಪರು ಏಕಶೃಂಗರು ಅನ್ವಾಹಾರ್ಯರು ಕಲರು ಈ ನಾಲ್ಕು ವಿಧದ ಪಿತೃಗಳು ಎಲ್ಲಾ ವರ್ಣಗಳಲ್ಲಿಯೂ ಪೂಜಿಸಲ್ಪಡುತ್ತಾರೆ.

ಏತೈರಾಪ್ಯಾಯಿತಃ ಪೂರ್ವಂ ಸೋಮ ಆಪ್ಯಾಯತೇ ಜಗತ್ ।
ತ ಏತೇ ಪಿತರಃ ಸರ್ವೇ ಪ್ರಜಾಪತಿಮುಪಸ್ಥಿತಾಃ ॥೪೩॥

ಈ ಎಲ್ಲ ಪಿತೃಗಳಿಂದ ಸಂವೃದ್ಧಿಗೊಳಿಸಲ್ಪಟ್ಟ ಸೋಮವು ಪುನಃ ಜಗತ್ತನ್ನು ಸಂವೃದ್ಧಿಗೊಳಿಸುತ್ತದೆ. ಈ ಎಲ್ಲ ಪಿತೃಗಳು ಬ್ರಹ್ಮದೇವರನ್ನು ಉಪಾಸನೆಮಾಡುತ್ತಾರೆ.

ಉಪಾಸತೇ ಚ ಸಂಹೃಷ್ಟಾ ಬ್ರಹ್ಮಾಣಮಮಿತೌಜಸಮ್ ।
ರಾಕ್ಷಸಾಶ್ಚ ಪಿಶಾಚಾಶ್ಚ ದಾನವಾ ಗುಹ್ಯಕಾಸ್ತಥಾ ॥೪೪॥

ಅಮಿತ ಸಾಮರ್ಥ್ಯವುಳ್ಳ ಬ್ರಹ್ಮದೇವರನ್ನು ರಾಕ್ಷಸರು, ಪಿಶಾಚಿಗಳು, ದಾನವರು, ಮತ್ತು ಗುಹ್ಯಕರು, ಸಂತೋಷದಿಂದ ಉಪಾಸನೆಮಾಡುತ್ತಾರೆ.

ಸುಪರ್ಣಾ ನಾಗಪತಯಃ ಪಿತಾಮಹಮುಪಾಸತೇ ।
ಸ್ಥಾವರಾ ಜಂಗಮಾಶ್ಚೈವ ಮಹಾಭೂತಾಸ್ತಥಾऽಪರೇ ॥೪೫॥

ನಾಗಪತಿಗಳು ಪಕ್ಷಿಶ್ರೇಷ್ಠರು ಸ್ಥಾವರ ಮತ್ತು ಜಂಗಮಗಳಾದ ಎಲ್ಲಾ ಭೂತಗಳು ಬ್ರಹ್ಮದೇವರನ್ನು ಉಪಾಸನೆಮಾಡುತ್ತಾರೆ.

ಪುರಂದರಶ್ಚ ದೇವೇಂದ್ರೋ ವರುಣೋ ಧನದೋ ಯಮಃ ।
ಮಹಾದೇವಶ್ಚ ಭಗವಾನ್ ಸದಾ ಗಚ್ಛತಿ ಪರ್ವಸು ।
ಮಹಾಸೇನಶ್ಚ ಭಗವಾನ್ ನಿತ್ಯಮಾಸ್ತೇ ಪಿತಾಮಹಮ್ ॥೪೬॥

ದೇವೇಂದ್ರನಾದ ಪುರಂದರ ವರುಣ ಕುಬೇರ ಯಮ ಭಗವಂತನಾದ ರುದ್ರ ಇವರೆಲ್ಲರೂ ಎಲ್ಲ ಕಾಲಗಳಲ್ಲಿಯೂ ಉಪಾಸನೆಮಾಡುತ್ತಾರೆ. ಪೂಜ್ಯನಾದ ಷಣ್ಮುಖನು ಯಾವಾಗಲೂ ಅಲ್ಲಿಯೇ ಇದ್ದು ಬ್ರಹ್ಮದೇವರ ಉಪಾಸನೆಯನ್ನು ಮಾಡುತ್ತಾನೆ.

ದೇವೋ ನಾರಾಯಣಸ್ತಸ್ಯಾಂ ತಥಾ ದೇವರ್ಷಯಶ್ಚ ಯೇ ।
ಋಷಯೋ ವಾಲಖಿಲ್ಯಾಶ್ಚ ಯೋನಿಜಾಯೋನಿಜಾಸ್ತಥಾ ॥೪೭॥

ದೇವದೇವನಾದ ನಾರಾಯಣನು ಅಲ್ಲಿ ನಿತ್ಯವೂ ಸನ್ನಿಹಿತನಾಗಿರುತ್ತಾನೆ. ಹಾಗೆಯೇ ದೇವರ್ಷಿಗಳು, ವಾಲಿಖಿಲ್ಯ ಋಷಿಗಳು, ಯೋನಿಜರು, ಮತ್ತು ಅಯೋನಿಜರಾದ ಋಷಿಗಳು ಅಲ್ಲಿರುತ್ತಾರೆ.

ಯತ್ಕಿಂಚಿತ್ ತ್ರಿಷು ಲೋಕೇಷು ದೃಶ್ಯಂ ಸ್ಥಾವರಜಂಗಮಮ್ ।
ಸರ್ವಂ ತಸ್ಯಾಂ ಮಯಾ ದೃಷ್ಟಮಿತಿ ವಿದ್ಧಿ ನರಾಧಿಪ ॥೪೮॥

ನರಾಧಿಪನೇ! ಮೂರುಲೋಕಗಳಲ್ಲಿ ಸ್ಥಾವರಜಂಗಮಗಳಲ್ಲಿ ಏನೇನು ಸುಂದರವಾದ ವಸ್ತುಗಳು ನನ್ನಿಂದ ನೋಡಲ್ಪಟ್ಟಿವೆಯೋ, ಆ ಎಲ್ಲ ಸುಂದರವಸ್ತುಗಳನ್ನೂ ನಾನು ಆ ಸಭೆಯಲ್ಲಿ ನೋಡಿದ್ದೇನೆ ಎಂದು ತಿಳಿ.

ಅಷ್ಟಾಶೀತಿಸಹಸ್ರಾಣಿ ಯತೀನಾಮೂರ್ಧ್ವರೇತಸಾಮ್ ।
ಪ್ರಜ್ಞಾವತಾಂ ಚ ಪಂಚಾಶದ್ ಋಷೀಣಾಮಪಿ ಪಾಂಡವ ॥೪೯॥

ತೇ ಸ್ಮ ತತ್ರ ಯಥಾಕಾಮಂ ಸರ್ವೇ ದೃಷ್ಟ್ವಾ ದಿವೌಕಸಃ ।
ಪ್ರಣಮ್ಯ ಶಿರಸಾ ತಸ್ಮೈ ಪುನರ್ಯಾಂತಿ ಯಥಾಸುಖಮ್ ॥೫೦॥

ಪಾಂಡವನೇ! ಅಲ್ಲಿ ಎಂಬತ್ತೆಂಟುಸಾವಿರ ಊರ್ಧ್ವರೇತಸ್ಕರಾದ ಯತಿಗಳೂ ಪ್ರಜ್ಞಾಶಾಲಿಗಳಾದ ಐವತ್ತು ಜನ ಋಷಿಗಳೂ ಅಲ್ಲಿಗೆ ಅವರಿಗೆ ಇಷ್ಟವಾದಾಗ ಬಂದು ಬ್ರಹ್ಮದೇವರನ್ನು ಮತ್ತು ಉಳಿದ ದೇವತೆಗಳನ್ನು ಶಿರಸಾ ನಮಸ್ಕರಿಸಿ ಪುನಃ ಸುಖವಾಗಿ ಹೊರಟುಹೋಗುತ್ತಾರೆ.

ಅತಿಥೀನಾಗತಾನ್ ನಾಗಾನ್ ದೇವಾನ್ ದೈತ್ಯಾನ್ ತಥಾ ಮುನೀನ್ ।

ಮಹಾಭಾಗಾನಮಿತಧೀರ್ಬ್ರಹ್ಮಾ ಲೋಕಪಿತಾಮಹಃ ।
ದಯಾವಾನ್ ಸರ್ವಭೂತೇಷು ಯಥಾರ್ಹಂ ಪ್ರತಿಪದ್ಯತೇ ॥೫೨॥

ಅತಿಥಿಗಳಾಗಿ ಆಗಮಿಸಿದ ನಾಗರು ದೇವತೆಗಳು ದೈತ್ಯರು ಋಷಿಗಳು ಯಕ್ಷರು ಸುಪರ್ಣರು ಕಾಳೀಯರು ಗಂಧರ್ವರು ಅಪ್ಸರಸರು ಈ ಮಹಾನುಭಾವರನ್ನು ಅಗಾಧ ಪ್ರಜ್ಞೆಯುಳ್ಳ ಎಲ್ಲಾ ಪ್ರಾಣಿಗಳಲ್ಲಿ ದಯೆವುಳ್ಳ ಲೋಕಪಿತಾಮಹರಾದ ಬ್ರಹ್ಮದೇವರು ಅವರವರಿಗೆ ಯೋಗ್ಯವಾದ ರೀತಿಯಲ್ಲಿ ಸತ್ಕರಿಸಿ ಅವರ ಜೊತೆಯಲ್ಲಿ ವ್ಯವಹರಿಸುತ್ತಾರೆ.

ಪ್ರತಿಗೃಹ್ಯ ತು ವಿಶ್ವಾತ್ಮಾ ಸ್ವಯಂಭೂರಮಿತಪ್ರಭಃ ।
ಸಾಂತ್ವಮಾನಾರ್ಘಸಂಭೋಗೈರ್ಯುನಕ್ತಿ ಮನುಜಾಧಿಪ ॥೫೩॥

ಮನುಜಾಧಿಪನೇ! ಅಮಿತಕಾಂತಿಯುಳ್ಳ ಜಗತ್‌ಸ್ವಾಮಿಯಾದ ಬ್ರಹ್ಮದೇವರು ಅವರ ಪೂಜೆಯನ್ನು ಸ್ವೀಕರಿಸಿ ಅವರಿಗೆ ಸಮಾಧಾನದ ಮಾತುಗಳು ಗೌರವ ಅಪೇಕ್ಷಿಸಿದ ಅರ್ಘ ಮತ್ತು ಶ್ರೇಷ್ಠವಾದ ಗೋವುಗಳನ್ನು ಕೊಟ್ಟು ಅವರನ್ನು ಸತ್ಕರಿಸುತ್ತಾರೆ.

ಅಪರೈರುಪಯಾತೈಸ್ತು ಪ್ರತಿಯಾತೈಸ್ತಥಾऽಪರೈಃ ।
ಆಕುಲಾ ಸಾ ಸಭಾ ನಿತ್ಯಂ ಭವತಿ ಸ್ಮ ಸುಖಪ್ರದಾ ॥೫೪॥

ಆ ಸಭೆಯು ಬರುವ ಮತ್ತು ಹೋಗುವ ವ್ಯಕ್ತಿಗಳಿಂದ ನಿರಂತರವಾಗಿ ನಿಬಿಡವಾಗಿದ್ದು ಸುಖಪ್ರದವಾಗಿರುತ್ತದೆ.

ಸರ್ವತೇಜೋಮಯೀ ದಿವ್ಯಾ ಮಹರ್ಷಿಗಣಸೇವಿತಾ ।
ಬ್ರಾಹ್ಮ್ಯಾ ಶ್ರಿಯಾ ದೀಪ್ಯಮಾನಾ ಕಾಂತ್ಯಾ ಚೈವ ಗತಕ್ಲಮಾ ॥೫೫॥

ಸರ್ವತೇಜೋಮಯವಾದ ದಿವ್ಯವಾದ ಆ ಸಭೆಯು, ಮಹರ್ಷಿಗಳ ಗಣದಿಂದ ಸೇವಿಸಲ್ಪಡುತ್ತದೆ. ಬ್ರಾಹ್ಮಕಾಂತಿಯಿಂದ ಮತ್ತು ಸೌಂದರ್ಯದಿಂದ ಬೆಳಗಿದ ಆ ಸಭೆಯು ಆಯಾಸಾದಿ- ದುಃಖರಹಿತವಾಗಿರುತ್ತದೆ.

ಸಾ ಮಯಾ ತಾದೃಶೀ ದೃಷ್ಟಾ ಸರ್ವಲೋಕೇಷು ದುರ್ಲಭಾ ।
ಸಭೇಯಂ ರಾಜಶಾರ್ದೂಲ ಮನುಷ್ಯೇಷು ಯಥಾ ತವ ॥೫೬॥

ರಾಜಶಾರ್ದೂಲನೇ! ಎಲ್ಲ ಲೋಕಗಳನ್ನು ಸಂಚರಿಸುವ ನಾನು ಹಿಂದೆ ಆ ಸಭೆಯನ್ನು ನೋಡಿದೆನು. ಮನುಷ್ಯಲೋಕದಲ್ಲಿ ಹೇಗೆ ನಿನ್ನ ಸಭೆಯು ದುರ್ಲಭವೋ ಹಾಗೆ ಆ ಸಭೆಯು ದೇವಲೋಕದಲ್ಲಿ ದುರ್ಲಭವಾದದು.

ಏತಾ ಮಯಾ ದೃಷ್ಟಪೂರ್ವಾಃ ಸಭಾ ದೇವೇಷು ಪಾಂಡವ ।
ತವೇಯಂ ಮಾನುಷೇ ಲೋಕೇ ಸರ್ವಶ್ರೇಷ್ಠತಮಾ ಶುಭಾ ॥೫೭॥

ಪಾಂಡವನೇ! ಇವೆಲ್ಲವೂ ಹಿಂದೆ ನಾನು ದೇವಲೋಕದಲ್ಲಿ ನೋಡಿದ ಸಭೆಗಳು. ನಿನ್ನ ಈ ಸಭೆಯು ಮಾತ್ರ ಮನುಷ್ಯಲೋಕದಲ್ಲಿ ಅತ್ಯಂತಶ್ರೇಷ್ಠವೂ ಮತ್ತು ಶುಭಪ್ರದವೂ ಆಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ಏಕಾದಶೋऽಧ್ಯಾಯಃ ॥
॥ ಮಂತ್ರಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹನ್ನೊಂದನೆಯ ಅಧ್ಯಾಯವು ಮುಗಿಯಿತು.

★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಅಂತರಿಕ್ಷಂ ತ್ವಯಾ ಪ್ರೋಕ್ತಂ ಲಕ್ಷಯೋಜನಮುಚ್ಛ್ರಿತಂ ।
ಅರ್ಧಕೋಟ್ಯುಚ್ಛ್ರಿತಃ ಸ್ವರ್ಗೋ ವಿಮಾನಾವಲಿಸಂಕುಲಃ ॥೫೬॥

'ಭೂಮಿಯಿಂದ ಅಂತರಿಕ್ಷಲೋಕ ಒಂದು ಲಕ್ಷ ಯೋಜನೆ ಎತ್ತರದಲ್ಲಿ ಇದೆ ಎಂದು ನೀವು ಹೇಳಿರುವಿರಿ. ವಿಮಾನ ಸಮೂಹಗಳಿಂದ ತುಂಬಿದ ಸ್ವರ್ಗಲೋಕ ಅರ್ಧಕೋಟಿ ಯೋಜನ ಎತ್ತರವೆಂದೂ ಹೇಳಿರುವಿರಿ.

ಭುವಃ ಸ್ವರ್ಗಶ್ಚ ಕೋಟ್ಯೈವಯೋಜನಾನಾಂ ಪ್ರವಿಸ್ತೃತೌ ।
ಮಹರ್ಜನಸ್ತಪಶ್ಚೈವ ಕ್ರಮಾದಧ್ಯರ್ಧಯೋಜನಾಃ ॥೫೭॥

ಭುವರ್ಲೋಕವೂ ಸ್ವರ್ಗಲೋಕವೂ ಒಂದು ಕೋಟಿ ಯೋಜನ ವಿಸ್ತಾರವಾಗಿವೆ. ಮಹ, ಜನ, ತಪ ಲೋಕಗಳು ಕ್ರಮವಾಗಿ ಒಂದಕ್ಕಿಂತ ಇನ್ನೊಂದು ಒಂದೂವರೆಪಟ್ಟು ಎತ್ತರವಾಗಿದೆ.

ಪಂಚಾಶತ್ಕೋಟಿವಿಸ್ತಾರೋ ಯೋಜನಾನಾಂ ಸಮಸ್ತಶಃ ।
ಯಾವಂತ ಏತೇ ಮಿಲಿತಾಸ್ತತ್ಪ್ರಮಾಣ ಉದೀರಿತಃ ॥೫೮॥

ಸತ್ಯಾಖ್ಯೋ ಬ್ರಹ್ಮಲೋಕಸ್ತು ಯತ್ರ ಬ್ರಹ್ಮಾ ವಿರಾಜತೇ ।
ತತಶ್ಚ ದ್ವಿಗುಣಃ ಪ್ರೋಕ್ತೋ ವಿಷ್ಣುಲೋಕಃ ಸನಾತನಃ ॥೫೯॥

ಮಹ ಜನ ತಪ ಈ ಮೂರು ಲೋಕಗಳು ಒಟ್ಟು ಐವತ್ತು ಕೋಟಿ ಯೋಜನ ವಿಸ್ತಾರವಾಗಿವೆ. ಸತ್ಯಲೋಕ ತಪೋಲೋಕದಿಂದ ಸ್ವರ್ಗ ಮಹ ಜನ ತಪ ಈ ಎಲ್ಲ ಲೋಕಗಳ ಒಟ್ಟು ಎತ್ತರದಷ್ಟು ಎತ್ತರವಾಗಿದೆ. ಅದು ಬ್ರಹ್ಮಲೋಕ. ಅಲ್ಲಿ ಬ್ರಹ್ಮ ವಿಶೇಷವಾಗಿ ವಿರಾಜಿಸುತ್ತಾನೆ. ಅದಕ್ಕಿಂತ ಇಮ್ಮಡಿ ಎತ್ತರದಲ್ಲಿ ಸನಾತನವಾದ ವಿಷ್ಣುಲೋಕ ವೈಕುಂಠವಿದೆ.

ಉತ್ತರೋತ್ತರತಃ ಸರ್ವೇ ಸುಖೇ ಶತಗುಣೋತ್ತರಾಃ ।
ಅನಂತಜನಸಂಪೂರ್ಣಾ ಅಪಿ ತೇ ಹೀಚ್ಛಯಾ ಹರೇಃ ॥೬೦॥

ಅವಕಾಶವಂತೋ ದಿವ್ಯತ್ವಾತ್ ಪೂರ್ಯಂತೇ ನ ಕದಾಚನ ।
ಸರ್ವಕಾಮಸಖೈಃ ಪೂರ್ಣಾ ದಿವ್ಯಸ್ತ್ರೀಪುರುಷೋಜ್ವಲಾಃ ॥೬೧॥

ಅಂತರಿಕ್ಷದಿಂದ ತೊಡಗಿ ಮೇಲೆ ಮೇಲೆ ಹೋದಂತೆ ಎಲ್ಲ ಲೋಕಗಳೂ ಸುಖದ ವಿಷಯದಲ್ಲಿ ಒಂದಕ್ಕಿಂತ ಒಂದು ನೂರು ಪಟ್ಟು ಶ್ರೇಷ್ಠ. ಅಸಂಖ್ಯ ಜನರಿಂದ ತುಂಬಿದ್ದರೂ ಹರೀಚ್ಛೆಯಿಂದ ದಿವ್ಯವಾಗಿರುವುದರಿಂದ ಸಾಕಷ್ಟು ಅವಕಾಶ ಉಳ್ಳವುಗಳಾಗಿವೆ. ಅವು ಎಂದೂ ಪೂರ್ತಿಯಾಗುವುದಿಲ್ಲ. ಅಭೀಷ್ಟವಾದ ಎಲ್ಲ ಸುಖಭೋಗಗಳಿಂದ ತುಂಬಿರುತ್ತವೆ. ದಿವ್ಯ ಸ್ತ್ರೀ ಪುರುಷರಿಂದ ಶೋಭಿಸುತ್ತವೆ.

ದಿವ್ಯರತ್ನಸಮಾಕೀರ್ಣಂ ತಥಾ ಪಾತಾಲಸಪ್ತಕಂ ।
ಅಧಸ್ತಾಚ್ಛೇಷದೇವೇನ ಬಲಿನಾ ಸಮಧಿಷ್ಠಿತಂ ॥೬೨॥

ದಿವ್ಯರತ್ನಗಳಿಂದ ತುಂಬಿದ ಏಳು ಪಾತಾಳಗಳೂ ಅಂತರಿಕ್ಷಾದಿ ಲೋಕಗಳಂತೆಯೇ ಒಂದಕ್ಕಿಂತ ಒಂದು ನೂರುಪಟ್ಟು ಶ್ರೇಷ್ಠ. ಅವುಗಳನ್ನು ಕೆಳಗೆ ಬಲಿಷ್ಠನಾದ ಶೇಷದೇವ ಹೊತ್ತಿದ್ದಾನೆ.

ಕಾಮಭೋಗಸಮಾಯುಕ್ತಾ ಬಹುವರ್ಷಸಹಸ್ರಿಣಃ ।
ಸಪ್ತದ್ವೀಪೇಷು ಪುರುಷಾ ನಾರ್ಯಶ್ಚೋಕ್ತಾಃ ಸುರೂಪಿಣಃ ॥೬೩॥

ಏಳು ಪಾತಾಳ ಲೋಕಗಳಲ್ಲಿಯೂ ಇರುವ ಸ್ತ್ರೀಪುರುಷರು ಸುರೂಪಿಗಳು. ಯಥೇಚ್ಛಸುಖಭೋಗಶಾಲಿಗಳು. ಮತ್ತು ಅನೇಕ ಸಾವಿರ ವರ್ಷಕಾಲ ಬಾಳುತ್ತಾರೆ.

ಏಷಾಂ ಚ ಸರ್ವಲೋಕಾನಾಂ ಧಾತಾ ನಾರಾಯಣಃ ಪರಃ ।
ವಿಷ್ಣುಲೋಕಸ್ಥಿತೋ ಮುಕ್ತೈಃ ಸದಾ ಸರ್ವೈರುಪಾಸ್ಯತೇ ॥೬೪॥

ಈ ಎಲ್ಲ ಲೋಕಗಳಿಗೆ ಸರ್ವೋತ್ತಮನಾದ ಶ್ರೀಹರಿಯೇ ರಕ್ಷಕ. ವಿಷ್ಣುಲೋಕಗಳಲ್ಲಿದ್ದು ಅವನು ಎಲ್ಲ ಮುಕ್ತರುಗಳಿಂದಲೂ ಆರಾಧಿಸಲ್ಪಡುತ್ತಾನೆ.

ಸೇವಕಾ ಬ್ರಹ್ಮಣಃ ಸರ್ವೇ ದೇದಾ ವೇವಾಶ್ಚ ಸರ್ವಶಃ ।
ಶಕ್ರಸ್ಯ ಮುನಯಃ ಸರ್ವೇ ಹರಿಶ್ಚಂದ್ರಶ್ಚ ಭೂಮಿಪಃ ॥೬೫॥

ಎಲ್ಲ ವೇದಾಭಿಮಾನಿಗಳೂ ಬ್ರಹ್ಮನಿಗೆ ಪರಿವಾರದವರು. ಎಲ್ಲ ದೇವತೆಗಳೂ ಮುನಿಗಳೂ ಹರಿಶ್ಚಂದ್ರನೂ ದೇವೇಂದ್ರನಿಗೆ ಪರಿವಾರದವರು.

ಅಖಿಲಾ ಅಪಿ ರಾಜಾನಃ ಪಾಂಡುಶ್ಚಾಸ್ಯತ್ವಿತಾ ಮುನೇ ।
ಯಮಸ್ಯೈವಾನುಗಾಃ ಪ್ರೋಕ್ತಾ ರಾಜಭಿಸ್ತೈರ್ಯಮೇನ ಚ ॥೬೬॥
ಉಪಾಸ್ಯಮಾನೋ ಭಗವಾನ್ ರಾಮೋ ಯಮಸಭಾತಳೇ ॥೬೭॥

ಎಲ್ಲ ರಾಜರೂ ತಮ್ಮ ತಂದೆಯಾದ ಪಾಂಡುವೂ ಯಮನಿಗೇ ಪರಿವಾರವೆಂದು ಹೇಳಿದಿರಿ. ಮುನಿಯೆ, ಆ ರಾಜರೂ ಯಮನೂ ಯಮಸಭೆಯಲ್ಲಿ ಭಗವಾನ್ ಶ್ರೀರಾಮಚಂದ್ರನನ್ನು ಆರಾಧಿಸುವರೆಂದೂ ಹೇಳಿದಿರಿ.

ಉಕ್ತ ಇಂದ್ರೇಣ ಚೋಪಾಸ್ಯೋ ವಾಮನಾತ್ಮಾ ಜನಾರ್ದನಃ ।
ಪ್ರಾದುರ್ಭಾವಾಶ್ಚ ನಿಖಿಲಾ ಬ್ರಹ್ಮಣೋಪಾಸಿತಾಃ ಸದಾ ।
ವರುಣಸ್ಯಾನುಗಾ ನಾಗಾಸ್ತತ್ರ ಮತ್ಸ್ಯಕೃತಿರ್ಹರಿಃ ॥೬೮॥

ಇಂದ್ರ ವಾಮನರೂಪಿ ಹರಿಯನ್ನೂ ಬ್ರಹ್ಮ ಹರಿಯ ಎಲ್ಲ ಅವತಾರಗಳನ್ನೂ ಸದಾ ಆರಾಧಿಸುವರೆಂದೂ ಹೇಳಿದಿರಿ. ನಾಗಗಳು ವರುಣನ ಪರಿವಾರದವರು. ಅಲ್ಲಿ ಮತ್ಸ್ಯರೂಪಿ ಹರಿ ಆರಾಧ್ಯನೆನಿಸಿದ್ದಾನೆ.

ಗಂಧರ್ವಾ ಧನದಸ್ಯಾಪಿ ತತ್ರ ಕಲ್ಕೀ ಹರಿಃ ಪ್ರಭುಃ ।
ರುದ್ರಸ್ಯೋಗ್ರಾಣಿ ಭೂತಾನಿ ನೃಸಿಂಹಾತ್ಮಾ ಶಿವೇನ ಚ ॥೬೯॥

ಉಪಾಸ್ಯತೇ ಸದಾ ವಿಷ್ಣುರಿತ್ಯಾದ್ಯುಕ್ತಂ ತ್ವಯಾನಘ ।
ಸರ್ವರತ್ನಸ್ಥಲಾನ್ ದಿವ್ಯಾನ್ ದೇವಲೋಕಾನ್ ಪ್ರಭಾಷತಾ ॥೭೦॥

ಗಂಧರ್ವರು ಕುಬೇರನ ಪರಿವಾರ. ಅಲ್ಲಿ ಕಲ್ಕಿರೂಪನಾದ ಪ್ರಭು ಶ್ರೀಹರಿ ಉಪಾಸ್ಯನಾಗಿದ್ದಾನೆ. ಭಯಂಕರ ಭೂತಗಳು ರುದ್ರನ ಪರಿವಾರ. ನರಸಿಂಹ ರೂಪನಾದ ವಿಷ್ಣು ರುದ್ರನಿಂದ ಸದಾ ಉಪಾಸ್ಯನಾಗಿದ್ದಾನೆ ಎಂದು ಮುಂತಾಗಿ ದಿವ್ಯ ಸಕಲ ರತ್ನಸ್ಥಳಗಳುಳ್ಳ ದೇವಲೋಕಗಳನ್ನು ವರ್ಣಿಸುತ್ತ ಹೇಳಿದ್ದೀರಿ.

ತತ್ರ ಮೇ ಸಂಶಯೋ ಭೂಯಾನ್ ಹರಿಶ್ಚಂದ್ರಃ ಕಥಂ ನೃಪಃ ।
ಐಂದ್ರಂ ಸಭಾತಳಂ ಪ್ರಾಪ್ತಃ ಪಾಂಡುರ್ನಾಸ್ಮತ್ಪಿತಾ ಮುನೇ ॥೭೧॥

ಅದರಲ್ಲಿ ನನಗೆ ಒಂದು ದೊಡ್ಡ ಸಂಶಯ. ಮುನಿಯೆ, ರಾಜಾ ಹರಿಶ್ಚಂದ್ರನಿಗೆ ಇಂದ್ರನ ಸಭೆ ಲಭ್ಯವಾಗಿದೆ, ನಮ್ಮ ತಂದೆಯಾದ ಪಾಂಡುವಿಗೆ ಇಲ್ಲ, ಇದು ಹೇಗೆ?

ಇತ್ಯುಕ್ತೋ ನಾರದಃ ಪ್ರಾಹ ರಾಜಸೂಯಕೃತೋನ್ನತಿಂ ।
ಹರಿಶ್ಚಂದ್ರಸ್ಯ ತಾಂ ದೃಷ್ಟ್ವಾ ಪಿತಾ ಯಮ ಸಭಾತಳೇ ।
ಸ್ಥಿತಸ್ತಾಮವದತ್ ಪಾಂಡೂ ರಾಮದ್ವಯಸುದೈವತೇ ॥೭೨॥

ಧರ್ಮರಾಜ ಹೀಗೆ ಕೇಳಿದಾಗ ನಾರದರು ಹೇಳಿದರು, 'ಧರ್ಮರಾಜ, ಹರಿಶ್ಚಂದ್ರನಿಗೆ ರಾಜಸೂಯಯಾಗದಿಂದ ಉನ್ನತಿ ಲಭಿಸಿದೆ. ಅದನ್ನು ನೋಡಿ ನಿಮ್ಮ ತಂದೆ, ಪರಶುರಾಮ ಶ್ರೀರಾಮ ಇಬ್ಬರಿಂದ ಶೋಭಿಸುವ ಯಮನ ಸಭೆಯಲ್ಲಿ, ನಿನಗೆ ಈ ಮಾತನ್ನು ಹೇಳಿದ್ದಾನೆ'.

ಕರೋತು ರಾಜಸೂಯಂ ಮೇ ಪುತ್ರೋ ಜ್ಯೇಷ್ಠೋಽನುಜಾರ್ಚ್ಚಿತಃ ।
ಪಾಲಿತೋ ವಾಸುದೇವೇನ ಕಿಂ ತಸ್ಯಾಸಾಧ್ಯಮತ್ರ ಹಿ ॥೭೩॥

'ನನ್ನ ಜ್ಯೇಷ್ಠ ಪುತ್ರ ರಾಜಸೂಯಯಾಗ ಮಾಡಲಿ. ಅಜೇಯರಾದ ತಮ್ಮಂದಿರಿಂದ ಅವನು ಸೇವಿತನಾಗಿದ್ದಾನೆ ಮತ್ತು ಶ್ರೀಕೃಷ್ಣನಿಂದ ರಕ್ಷಿತನೂ ಆಗಿದ್ದಾನೆ. ಅವನಿಗೆ ಇದರಲ್ಲಿ ಅಸಾಧ್ಯವೇನಿದೆ?'

★ ★ ★ ★

ಹನ್ನೆರಡನೆಯ ಅಧ್ಯಾಯ

(ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ನಾರದರಿಂದ ಇಂದ್ರಸಭೆಯ ಪ್ರಾಪ್ತಿಗೆ ರಾಜಸೂಯಯಾಗವು ಕಾರಣವೆಂದು ತಿಳಿಸಿ, ಪಾಂಡುವಿನ ಆದೇಶವನ್ನು ಧರ್ಮರಾಜನಿಗೆ ತಿಳಿಸುವುದು.)

ಯುಧಿಷ್ಠಿರಃ

ಪ್ರಾಯಶೋ ರಾಜಲೋಕಾಸ್ತೇ ಕಥಿತಾ ವದತಾಂ ವರ ।
ವೈವಸ್ವತಸಭಾಯಾಂ ವೈ ಯಥಾವದನುಪೂರ್ವಶಃ ॥೧॥

ವಾಗ್ಮಿಗಳಲ್ಲಿ ಶ್ರೇಷ್ಠರಾದ ನಾರದರೇ! ನೀವು ರಾಜರುಗಳೆಲ್ಲರೂ ಹೆಚ್ಚಾಗಿ ಯಮದೇವರಸಭೆಯಲ್ಲಿಯೇ ಇರುತ್ತಾರೆ, ಎಂದು ಕ್ರಮಬದ್ಧವಾಗಿ ತಿಳಿಸಿದ್ದೀರಿ.

ವರುಣಸ್ಯ ಸಭಾಯಾಂ ಚ ನಾಗಾಸ್ತೇ ಕಥಿತಾ ವಿಭೋ ।
ದೈತ್ಯೇಂದ್ರಾಶ್ಚೈವ ಭೂಯಿಷ್ಠಾಃ ಸರಿತಃ ಸಾಗರಾಸ್ತಥಾ ॥೨॥

ಪ್ರಭುಗಳೇ! ವರುಣಸ ಸಭೆಯಲ್ಲಿ ನಾಗಗಳು, ನದಿಗಳು ಮತ್ತು ಸಾಗರಗಳು ಮತ್ತು ಹೆಚ್ಚಾಗಿ ದೈತ್ಯೇಂದ್ರರು ಇರುತ್ತಾರೆ ಎಂದು ತಿಳಿಸಿದ್ದೀರಿ.

ತಥಾ ಧನಪತೇರ್ಯಕ್ಷಾ ರಾಕ್ಷಸಾ ಗುಹ್ಯಕಾಶ್ಚ ಯೇ ।
ಗಂಧರ್ವಾಪ್ಸರಸಶ್ಚೈವ ಭಗವಾಂಶ್ಚ ವೃಷಧ್ವಜಃ ॥೩॥

ಹಾಗೆಯೇ ಕುಬೇರನ ಸಭೆಯಲ್ಲಿ ಯಕ್ಷರು ರಾಕ್ಷಸರು ಗುಹ್ಯಕರು ಗಂಧರ್ವರು ಅಪ್ಸರೆಯರು ಮತ್ತು ಭಗವಂತನಾದ ವೃಷಧ್ವಜನಾದ ರುದ್ರನು ಇರುವನೆಂದು ತಿಳಿಸಿದ್ದೀರಿ.

ಪಿತಾಮಹಸಭಾಯಾಂ ತು ಕಥಿತಾಸ್ತೇ ಮಹರ್ಷಯಃ ।
ಸರ್ವೇ ದೇವನಿಕಾಯಾಶ್ಚ ಸರ್ವಶಾಸ್ತ್ರಾಣಿ ಚೈವ ಹ ॥೪॥

ಬ್ರಹ್ಮದೇವರ ಸಭೆಯಲ್ಲಿ ಎಲ್ಲ ಮಹರ್ಷಿಗಳೂ ಎಲ್ಲ ದೇವತೆಗಳ ಸಮೂಹವೂ ಎಲ್ಲ ಶಾಸ್ತ್ರಗಳೂ ಇರುತ್ತವೆ ಎಂದು ತಿಳಿಸಿದ್ದೀರಿ.

ಶಕ್ರಸ್ಯ ತು ಸಭಾಯಾಂ ತು ದೇವಾಃ ಸಂಕೀರ್ತಿತಾ ಮುನೇ ।
ಉದ್ದೇಶತಶ್ಚ ಗಂಧರ್ವಾ ವಿವಿಧಾಶ್ಚ ಮಹರ್ಷಯಃ ॥೫॥

ಋಷಿಗಳೇ! ಇಂದ್ರನ ಸಭೆಯಲ್ಲಿ ನಾಮನಿರ್ದೇಶವನ್ನು ಮಾಡಿ ಗಂಧರ್ವರನ್ನು ಅನೇಕ ಮಹರ್ಷಿಗಳನ್ನು ತಿಳಿಸಿದ್ದೀರಿ.

ಏಕ ಏವ ತು ರಾಜರ್ಷಿರ್ಹರಿಶ್ಚಂದ್ರೋ ಮಹಾಮುನೇ ।
ಕಥಿತಸ್ತೇ ಸಭಾನಿತ್ಯೋ ದೇವೇಂದ್ರಸ್ಯ ಮಹಾತ್ಮನಃ ॥೬॥

ಮಹರ್ಷಿಗಳೇ! ಮಹಾತ್ಮನಾದ ದೇವೇಂದ್ರನ ಸಭೆಯಲ್ಲಿ ರಾಜರ್ಷಿಗಳಲ್ಲಿ ಹರಿಶ್ಚಂದ್ರನೊಬ್ಬನೇ ಸದಾ ಇರುತ್ತಾನೆಂದು ತಿಳಿಸಿದ್ದೀರಿ. (ಬೇರೆ ರಾಜರುಗಳ ಹೆಸರನ್ನು ಹೇಳಲಿಲ್ಲ.)

ಕೇನ ಕರ್ಮವಿಪಾಕೇನ ಹರಿಶ್ಚಂದ್ರೋ ದ್ವಿಜರ್ಷಭ ।
ತೇಷು ರಾಜಸಹಸ್ರೇಷು ಪ್ರಭಯಾऽಪ್ಯತಿರೋಚತೇ ॥೭॥

ಬ್ರಾಹ್ಮಣಶ್ರೇಷ್ಠರೇ! ಸಹಸ್ರಾರು ರಾಜರ ಮಧ್ಯದಲ್ಲಿ ಹರಿಶ್ಚಂದ್ರನೊಬ್ಬನೇ ಯಾವ ಕರ್ಮವಿಪಾಕದಿಂದ ಉಳಿದೆಲ್ಲರನ್ನೂ ಮೀರಿ, ದೇವೇಂದ್ರನ ಸಭೆಯಲ್ಲಿ ಕಾಂತಿಯಿಂದ ಕಂಗೊಳಿಸುತ್ತಿದ್ದಾನೆ.

ಕಿಂ ಕರ್ಮ ತೇನಾಚರಿತಂ ತಪೋ ವಾಪಿ ವ್ರತೋऽಪಿ ವಾ ।
ಯೇನಾಸೌ ಸಹ ಶಕ್ರೇಣ ಮೋದತೇ ಸುಮಹಾಯಶಾಃ ॥೮॥

ಮಹಾಕೀರ್ತಿವಂತನಾದ ಅವನು ಯಾವುದರ ಬಲದಿಂದ ಇಂದ್ರಸಭೆಯಲ್ಲಿ ಸಂತೋಷಪಡುತ್ತಿದ್ದಾನೆಯೋ, ಅಂತಹ ಯಾವ ಕರ್ಮವನ್ನು ಅಥವಾ ತಪಸ್ಸನ್ನು ಅಥವಾ ವ್ರತವನ್ನು ಅವನು ಆಚರಿಸಿದ್ದಾನೆ.

ಪಿತೃಲೋಕಗತಶ್ಚಾಪಿ ತ್ವಯಾ ವಿಪ್ರ ಪಿತಾ ಮಮ ।
ದೃಷ್ಟಃ ಪಾಂಡುರ್ಮಹಾಭಾಗಃ ಕಥಂ ತ್ವಾಸೀತ್ ಸಮಾಗಮಃ ॥೯॥

ನೀವು ಯಮಲೋಕಕ್ಕೆ ಹೋದಾಗ ನನ್ನ ತಂದೆಯಾದ ಮಹಾನುಭಾವನಾದ ಪಾಂಡುವನ್ನು ನೋಡಿದಿರಷ್ಟೇ? ನಿಮ್ಮಿಬ್ಬರ ಸಮಾಗಮವು ಹೇಗಾಯಿತು?

ಕಿಮುಕ್ತವಾನ್ ಮಾ ಭಗವನ್ನೇತದಿಚ್ಛಾಮಿ ವೇದಿತುಮ್ ।
ಅನಾಗತಮತಿಕ್ರಾಂತಂ ಸರ್ವಂ ತತ್ ತ್ವಯಿ ನಿಷ್ಠಿತಮ್ ।
ತತ್ತಃ ಸರ್ವಮಿದಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ॥೧೦॥

ಪಾಂಡುವು ನನಗೆ ಏನು ಸಂದೇಶವನ್ನು ನೀಡಿದ್ದಾನೆ ಎಂದು ತಿಳಿಯಲು ಇಷ್ಟಪಡುತ್ತೇನೆ. ನೀವು ಭೂತ, ಭವಿಷ್ಯದ್, ವರ್ತಮಾನಗಳೆಲ್ಲವನ್ನೂ ತಿಳಿದವರು. ಆದ್ದರಿಂದ ನಿಮ್ಮಿಂದ ಈ ಪ್ರಶ್ನೆಗೆ ಉತ್ತರವನ್ನು ಕೇಳಲು ನನಗೆ ಬಹಳ ಕೂತೂಹಲವಿದೆ.

ನಾರದಃ

ಯನ್ಮಾಂ ಪೃಚ್ಛಸಿ ರಾಜೇಂದ್ರ ಹರಿಶ್ಚಂದ್ರಂ ಪ್ರತಿ ಪ್ರಭೋ ।
ತತ್ ತೇಽಹಂ ಸಂಪ್ರವಕ್ಷ್ಯಾಮಿ ಮಾಹಾತ್ಮ್ಯಂ ತಸ್ಯ ಧೀಮತಃ ॥೧೧॥

ರಾಜೇಂದ್ರನೇ! ನೀನು ಮೇಧಾವಿಯಾದ ಹರಿಶ್ಚಂದ್ರನ ಮಾಹಾತ್ಮ್ಯವನ್ನು ಕುರಿತು ಕಾರಣವನ್ನು ಕೇಳಿದೆಯಷ್ಟೇ. ಅದನ್ನು ನಾನು ನಿನಗೆ ಹೇಳುತ್ತೇನೆ.

ಇಕ್ಷ್ವಾಕೂಣಾಂ ಕುಲೇ ಜಾತಸ್ತ್ರಿಶಂಕುರ್ನಾಮ ಪಾರ್ಥಿವಃ ।
ಅಯೋಧ್ಯಾಧಿಪತಿರ್ವೀರೋ ವಿಶ್ವಾಮಿತ್ರೇಣ ಸಂಸ್ಥಿತಃ ॥೧೨॥

ಇಕ್ಷ್ವಾಕುಗಳ ವಂಶದಲ್ಲಿ ತ್ರಿಶಂಕು ಎಂಬ ವೀರನಾದ ರಾಜನು ಅಯೋಧ್ಯಾಧಿಪತಿಯಾಗಿ ಜನಿಸಿ, ವಿಶ್ವಾಮಿತ್ರರ ಬೆಂಬಲವನ್ನು ಪಡೆದನು.

ತಸ್ಯ ಸತ್ಯವತೀ ನಾಮ ಪತ್ನೀ ಕೇಕಯವಂಶಜಾ ।
ತಸ್ಯಾಂ ಗರ್ಭಃ ಸಮಭವದ್ ಧರ್ಮೇಣ ಕುರುನಂದನ ॥೧೩॥

ಕುರುನಂದನನೇ! ಕೇಕಯವಂಶದವಳಾದ ಸತ್ಯವತೀ ಎಂಬ ಅವಳ ಪತ್ನಿಯಲ್ಲಿ ಕಾಲಕ್ರಮದಲ್ಲಿ ಧರ್ಮದಿಂದ ಒಂದು ಗರ್ಭವು ಉಂಟಾಯಿತು.

ಸಾ ಚ ಕಾಲೇ ಮಹಾಭಾಗಾ ಜನ್ಮಮಾಸಂ ಪ್ರವಿಶ್ಯ ವೈ ।
ಕುಮಾರಂ ಜನಯಾಮಾಸ ಹರಿಶ್ಚಂದ್ರಮಕಲ್ಮಷಮ್ ।
ಸ ವೈ ರಾಜಾ ಹರಿಶ್ಚಂದ್ರಃ ತ್ರೈಶಂಕವ ಇತಿ ಸ್ಮೃತಃ ॥೧೪॥

ಆ ಮಹಾನುಭಾವಳಾದ ಸತ್ಯವತಿಯು ಪ್ರಸವಮಾಸವು ಸಮೀಪಿಸಿದಾಗ ಹರಿಶ್ಚಂದ್ರನೆಂಬ ನಿರ್ದುಷ್ಟನಾದ ಮಗುವನ್ನು ಪ್ರಸವಿಸಿದಳು. ತ್ರಿಶಂಕುವಂಶದಲ್ಲಿ ಜನಿಸಿದುದರಿಂದ ಹರಿಶ್ಚಂದ್ರನನ್ನು ತ್ರೈಶಂಕವ ಎಂದು ಕರೆಯುತ್ತಾರೆ.

ಸ ರಾಜಾ ಬಲವಾನಾಸೀತ್ ಸಮ್ರಾಟ್ ಸರ್ವಮಹೀಭೃತಾಮ್।
ತಸ್ಯ ಸರ್ವೇ ಮಹೀಪಾಲಾಃ ಶಾಸನಾವನತಾಃ ಸ್ಥಿತಾಃ ॥೧೫॥

ಅವನು ಬಲಿಷ್ಠನಾದ ರಾಜನಾಗಿ ಉಳಿದೆಲ್ಲಾ ರಾಜರುಗಳಿಗೂ ಚಕ್ರವರ್ತಿಯಾದನು. ಉಳಿದೆಲ್ಲಾ ರಾಜರೂ ಅವನ ಶಾಸನಕ್ಕೆ ತಲೆಬಾಗಿ ನಡೆಯುತ್ತಿದ್ದರು.

ತೇನೈಕಂ ರಥಮಾಸ್ಥಾಯ ಜೈತ್ರಂ ಹೇಮವಿಭೂಷಿತಮ್ ।
ಶಸ್ತ್ರಪ್ರತಾಪೇನ ಜಿತಾ ದ್ವೀಪಾಃ ಸಪ್ತ ಜನೇಶ್ವರ ॥೧೬॥

ಜನೇಶ್ವರನೇ! ಸುವರ್ಣಭೂಷಿತವಾದ ಒಂದು ರಥದಲ್ಲಿ ಕುಳಿತು ಜೈತ್ರಯಾತ್ರೆಯನ್ನು ಮಾಡಿ ತನ್ನ ಶಸ್ತ್ರಪ್ರತಾಪದಿಂದ ಅವನು ಸಪ್ತದ್ವೀಪಗಳನ್ನು ಗೆದ್ದನು.

ಸ ವಿಜಿತ್ಯ ಮಹೀಂ ಸರ್ವಾಂ ಸಶೈಲವನಕಾನನಾಮ್ ।
ಆಜಹಾರ ಮಹಾರಾಜ ರಾಜಸೂಯಂ ಮಹಾಕ್ರತುಮ್ ॥೧೭॥

ಮಹಾರಾಜನೇ! ಅವನು ಶೈಲವನಕಾನನಸಹಿತವಾದ ಸಮಗ್ರವಾದ ಭೂಮಿಯನ್ನು ಜಯಿಸಿ ಅತ್ಯಂತಶ್ರೇಷ್ಠವಾದ ರಾಜಸೂಯಯಾಗವನ್ನು ಮಾಡಿದನು.

ತಸ್ಯ ಸರ್ವೇ ಮಹೀಪಾಲಾ ಧನಾನ್ಯಾಜಹ್ರುರಾಜ್ಞಯಾ ।
ದ್ವಿಜಾನಾಂ ಪರಿವೇಷ್ಟಾರಸ್ತಸ್ಮಿನ್ ಯಜ್ಞೇ ಚ ತೇಽಭವನ್ ॥೧೮॥

ಎಲ್ಲ ರಾಜರುಗಳೂ ಅವನ ಆಜ್ಞೆಯಂತೆ ಅವನಿಗೆ ಕಪ್ಪಕಾಣಿಕೆಗಳನ್ನು ತಂದು ಒಪ್ಪಿಸಿ, ಅವನ ಯಜ್ಞದಲ್ಲಿ ಬ್ರಾಹ್ಮಣರಿಗೆ ಭೋಜನವನ್ನು ಬಡಿಸುವವರಾದರು.

ಸಮಾಪ್ತಯಜ್ಞೋ ವಿಧಿವದ್ಧರಿಶ್ಚಂದ್ರಃ ಪ್ರತಾಪವಾನ್ ।
ಅಭಿಷಿಕ್ತಶ್ಚ ಶುಶುಭೇ ಸಾಮ್ರಾಜ್ಯೇ ಸ ನರಾಧಿಪಃ ॥೧೯॥

ಪ್ರತಾಪಶಾಲಿಯಾದ ಹರಿಶ್ಚಂದ್ರನು ಯಜ್ಞವನ್ನು ವಿಧಿವತ್ತಾಗಿ ಪೂರ್ಣಗೊಳಿಸಿ, ಅವಭೃತಸ್ನಾನವನ್ನು ಮಾಡಿ ಅಭಿಷಿಕ್ತನಾಗಿ ಸಾಮ್ರಾಜ್ಯದ ಅಧಿಪತಿಯಾಗಿ ಶೋಭಿಸಿದನು.

ರಾಜಸೂಯೇಽಭಿಷಿಕ್ತಸ್ತು ಸಮಾಪ್ತವರದಕ್ಷಿಣಃ ।
ಅದದಾದ್ ದ್ರವಿಣಂ ಪ್ರೀತ್ಯಾ ಯಾಚಕಾನಾಂ ಯುಧಿಷ್ಠಿರ ।
ಯಥೋಕ್ತಂ ಚ ಕ್ರತೌ ತಸ್ಮಿಂಸ್ತತಃ ಪಂಚಗುಣಾಧಿಕಮ್ ॥೨೦॥

ಎಲೈ ಯುಧಿಷ್ಠಿರನೇ! ರಾಜಸೂಯಯಾಗದಲ್ಲಿ ಶ್ರೇಷ್ಠವಾದ ದಕ್ಷಿಣೆಯನ್ನು ಕೊಟ್ಟು ಯಜ್ಞವನ್ನು ಮುಗಿಸಿ ಅಭಿಷಿಕ್ತನಾದ ಅವನು ಯಾಚಕರಿಗೆ ಸಂತೋಷದಿಂದ ಆ ಯಜ್ಞದಲ್ಲಿ ಕೊಡಬೇಕಾದ ದಕ್ಷಿಣೆಗಿಂತ ಐದು ಪಟ್ಟು ಅಧಿಕವಾದ ದಕ್ಷಿಣೆಯನ್ನು ಕೊಟ್ಟನು.

ಅತರ್ಪಯಚ್ಚ ವಸುಭಿರ್ಬ್ರಾಹ್ಮಣಾನ್ ಭರತರ್ಷಭ ।
ಯಜ್ಞಕಾಲೇಽಥ ಸಂಪ್ರಾಪ್ತಾನ್ ನಾನಾದಿಗ್ಭ್ಯಃ ಸಮಾಗತಾನ್ ॥೨೧॥

ಭರತರ್ಷಭನೇ! ಅವನು ಯಜ್ಞಕಾಲದಲ್ಲಿ ನಾನಾದೇಶಗಳಿಂದ ಸಂಪ್ರಾಪ್ತರಾದ ಬ್ರಾಹ್ಮಣರನ್ನು ಭೂರಿದಕ್ಷಿಣೆಯನ್ನು ಕೊಟ್ಟು ಸಂತೋಷಗೊಳಿಸಿದನು.

ಭಕ್ಷ್ಯೈರ್ಭೋಜ್ಯೈಶ್ಚ ಪಾನೈಶ್ಚ ಯಥಾಕಾಮಮುದಾಹೃತೈಃ ।
ರತ್ನೌಘತರ್ಪಿತೈಸ್ತುಷ್ಟೈರ್ದ್ವಿಜೈಶ್ಚ ಸಮುದಾಹೃತಃ ।
ತೇಜಸ್ವೀ ಚ ಯಶಸ್ವೀ ಚ ಸರ್ವೇಭ್ಯೋಽಭ್ಯಧಿಕೋಽಭವತ್ ॥೨೨॥

ಮೇಲೆ ಹೇಳಿದಂತೆ ಶ್ರೇಷ್ಠವಾದ ಭಕ್ಷ್ಯಭೋಜ್ಯಗಳಿಂದಲೂ ಪಾನಗಳಿಂದಲೂ ರತ್ನೌಘಗಳಿಂದಲೂ ಸಂತೃಪ್ತರಾದ ಬ್ರಾಹ್ಮಣರಿಂದ ಅವನು ಆಶೀರ್ವಾದವನ್ನು ಸ್ವೀಕರಿಸಿ ತೇಜಸ್ವಿಯೂ ಪರಾಕ್ರಮಶಾಲಿಯೂ ಎಲ್ಲರಿಗಿಂತ ಮಿಗಿಲಾದವನೂ ಆದನು.

ಏತಸ್ಮಾತ್ ಕಾರಣಾತ್ ಪಾರ್ಥ ಹರಿಶ್ಚಂದ್ರೋ ಯುಧಿಷ್ಠಿರ ।
ತೇಷು ರಾಜಸಹಸ್ರೇಷು ಪ್ರಭಯಾऽಪ್ಯತಿರಿಚ್ಯತೇ ॥೨೩॥

ಎಲೈ ಯುಧಿಷ್ಠಿರನೇ! ಈ ಕಾರಣದಿಂದ ಹರಿಶ್ಚಂದ್ರರಾಜನು ಸಹಸ್ರಾರು ರಾಜರ ಮಧ್ಯದಲ್ಲಿ ತನ್ನ ಕಾಂತಿಯಿಂದ ಎಲ್ಲರನ್ನು ಮೀರಿ ಕಂಗೊಳಿಸುತ್ತಿದ್ದಾನೆ.

ಯೇ ಯಜಂತೇ ಮಹೀಪಾಲಾ ರಾಜಸೂಯಂ ಮಹಾಕ್ರತುಮ್।
ಸಂಪ್ರಾಪ್ತಾಸ್ತೇ ಮಹೇಂದ್ರೇಣ ಮೋದಂತೇ ದಿವಿ ಭಾರತ ॥೨೪॥

ಎಲೈ ಭಾರತನೇ! ಯಾವ ರಾಜರು ರಾಜಸೂಯಮಹಾಯಾಗವನ್ನು ಮಾಡುತ್ತಾರೆಯೋ ಅವರು ಇಂದ್ರಸಭೆಯನ್ನು ಸೇರಿ ದೇವೇಂದ್ರನ ಜೊತೆಯಲ್ಲಿ ಆನಂದಪಡುತ್ತಾರೆ.

ಯೇ ಚಾಪಿ ನಿಧನಂ ಪ್ರಾಪ್ತಾಃ ಸಂಗ್ರಾಮೇಷ್ವಪಲಾಯಿನಃ ।
ತೇ ಪ್ರಾಪ್ತಾಸ್ತಾಂ ಸಭಾಂ ರಾಜನ್ ಮೋದಂತೇ ದಿವಿ ಭಾರತ ॥೨೫॥

ಭಾರತನೇ! ರಾಜನೇ! ಯಾರು ಯುದ್ಧಗಳಲ್ಲಿ ಪಲಾಯನವನ್ನು ಮಾಡದೆ ನಿಧನವನ್ನು ಹೊಂದುತ್ತಾರೆಯೋ, ಅವರೂ ಸಹ ಸ್ವರ್ಗದಲ್ಲಿ ಇಂದ್ರಸಭೆಯನ್ನು ಸೇರಿ ಆನಂದಪಡುತ್ತಾರೆ.

ತಪಸಾ ಯೇ ಚ ಘೋರೇಣ ತ್ಯಕ್ತ್ವಾ ಜೀರ್ಣಂ ಕಲೇವರಮ್ ।
ತೇ ತತ್ ಸ್ಥಾನಂ ಸಮಾಸಾದ್ಯ ಶ್ರೇಮಂತೋ ಭಾಂತಿ ನಿತ್ಯಶಃ ॥೨೫॥

ಮತ್ತು ಯಾರು ಘೋರವಾದ ತಪಸ್ಸನ್ನು ಮಾಡಿ ಜೀರ್ಣವಾದ ದೇಹವನ್ನು ತ್ಯೆಜಿಸುತ್ತಾರೆಯೋ, ಅವರೂ ಸಹ ಆ ಸಭೆಯ ಸ್ಥಾನವನ್ನು ಸೇರಿ ಕಾಂತಿಯಿಂದ ಯಾವಾಗಲೂ ಬೆಳಗುತ್ತಾರೆ.

ಪಿತಾऽऽಹ ತ್ವಾಂ ಚ ಕೌಂತೇಯ ಪಾಂಡುಃ ಕೌರವವರ್ಧನಃ।
ಹರಿಶ್ಚಂದ್ರೇ ಶ್ರಿಯಂ ದೃಷ್ಟ್ವಾ ನೃಪತೌ ಜಾತವಿಸ್ಮಯಃ ॥೨೬॥

ಸಮರ್ಥೋऽಸಿ ಮಹೀಂ ಜೇತುಂ ಭ್ರಾತರಸ್ತೇ ವಶೇ ಸ್ಥಿತಾಃ ।
ರಾಜಸೂಯಂ ಕ್ರತುಶ್ರೇಷ್ಠಮಾಹರಸ್ವೇತಿ ಭಾರತ ॥೨೭॥

ತ್ವಯೀಷ್ಟವತಿ ಪುತ್ರೇऽಹಂ ಹರಿಶ್ಚಂದ್ರವದಾಶು ವೈ ।
ಮೋದಿಷ್ಯೇ ಬಹುಳಾಃ ಶಶ್ವತ್ ಸಮಾಃ ಶಕ್ರಸ್ಯ ಸಂಸದಿ ॥೨೮॥

ಕೌಂತೇಯನೇ! ಹರಿಶ್ಚಂದ್ರನ ಸಂಪತ್ತನ್ನು ನೋಡಿ ಆಶ್ಚರ್ಯಚಕಿತನಾದ ಕೌರವವರ್ಧನನಾದ ನಿನ್ನ ತಂದೆಯಾದ ಪಾಂಡುವು ನನ್ನನ್ನು ಕುರಿತು ಹೀಗೆ ಹೇಳಿದನು. ನೀನು ಭೂಮಿಯನ್ನು ಜಯಿಸಲು ಸಮರ್ಥನಾಗಿದ್ದೀಯೆ, ನಿನ್ನ ತಮ್ಮಂದಿರೆಲ್ಲಾ ನಿನ್ನ ವಶವಾಗಿದ್ದಾರೆ. ಭರತಕುಲೋತ್ಪನ್ನನೇ! ರಾಜಸೂಯಮಹಾಯಾಗವನ್ನು ಅನುಷ್ಠಾನಮಾಡು.ನನ್ನ ಪುತ್ರನಾಗಿ ನೀನು ಆ ಯಾಗವನ್ನು ಮಾಡಿದರೆ ನಾನೂ ಸಹ ತಕ್ಷಣದಲ್ಲಿಯೇ ಹರಿಶ್ಚಂದ್ರನಂತೆ ಇಂದ್ರಸಭೆಯನ್ನು ಸೇರಿ ಅಲ್ಲಿ ಬಹುಕಾಲದವರೆಗೆ ಆನಂದದಿಂದ ಇರುತ್ತೇನೆ.(ಎಂದು ನಿನಗೆ ತಿಳಿಸುವಂತೆ ಹೇಳಿದನು)

ಏವಂ ಭವತು ವಕ್ಷ್ಯೇऽಹಂ ಪುತ್ರಂ ತವ ನರಾಧಿಪ ।
ಭೂಲೋಕಂ ಯದಿ ಗಚ್ಛೇಯಮಿತಿ ಪಾಂಡುಮಥಾಬ್ರುವಮ್ ॥೨೯॥

ನರಾಧಿಪನೇ! ಈ ಮಾತನ್ನು ಕೇಳಿದ ನಾನು ಭೂಲೋಕಕ್ಕೆ ಹೋದರೆ ಈ ವಿಷಯವನ್ನು ಧರ್ಮರಾಜನಿಗೆ ತಿಳಿಸುವೆನು ಎಂದು ಹೇಳಿದೆನು.

ತಸ್ಯ ತ್ವಂ ಪುರುಷವ್ಯಾಘ್ರ ಸಂಕಲ್ಪಂ ಕುರು ಪಾಂಡವ ।
ಗಂತಾರಸ್ತೇ ಮಹೇಂದ್ರಸ್ಯ ಪೂರ್ವೇ ಸರ್ವೇ ಪಿತಾಮಹಾಃ ।
ಸಲೋಕತಾಂ ಸುರೇಂದ್ರಸ್ಯ ತ್ರೈಲೋಕ್ಯಾಧಿಪತೇರ್ನೃಪ ॥೩೦॥

ಪಾಂಡವನಾದ ಧರ್ಮರಾಜನೇ! ಪುರುಷವ್ಯಾಘ್ರನೇ! ನೀನು ನಿನ್ನ ತಂದೆಯ ಸಂಕಲ್ಪವನ್ನು ನೆರವೇರಿಸು. ಹಾಗೆ ಮಾಡಿದರೆ ನಿನ್ನ ಪೂರ್ವಪಿತಾಮಹರೆಲ್ಲರೂ ತ್ರೈಲೋಕ್ಯಾಧಿಪತಿಯಾದ ಇಂದ್ರನ ಸಾಲೋಕ್ಯವನ್ನು ಪಡೆದು ಆ ಸಭೆಗೆ ಹೋಗುತ್ತಾರೆ.

ಬಹುವಿಘ್ನಶ್ಚ ನೃಪತೇ ಕ್ರತುರೇಷ ಸ್ಮೃತೋ ಮಹಾನ್ ।
ಛಿದ್ರಾನ್ ಯಸ್ಯ ತು ವಾಂಛಂತಿ ಯಜ್ಞಘ್ನಾ ಬ್ರಹ್ಮರಾಕ್ಷಸಾಃ ॥೩೧॥

ರಾಜನೇ! ಈ ಮಹಾಯಾಗಕ್ಕೆ ಅನೇಕ ವಿಘ್ನಗಳು ಬರುತ್ತವೆ ಎಂದು ಹೇಳುತ್ತಾರೆ. ಯಜ್ಞವನ್ನು ನಾಶಮಾಡುವ ಬ್ರಹ್ಮರಾಕ್ಷಸರು ಈ ಯಜ್ಞಕ್ಕೆ ಪ್ರತಿಬಂಧಕವನ್ನು ಮತ್ತು ದೋಷವನ್ನು ಉಂಟುಮಾಡಲು ಬಯಸುತ್ತಾರೆ.

ಯುದ್ಧಂ ಚ ಕ್ಷತ್ರಗಮನಂ ಪೃಥಿವೀಕ್ಷಯಕಾರಕಮ್ ।
ಕಿಂಚಿದೇವ ನಿಮಿತ್ತಂತು ಭವತ್ಯತ್ರ ಕ್ಷಯಾವಹಮ್ ।
ಏತತ್ ಸಂಚಿಂತ್ಯ ರಾಜೇಂದ್ರ ಯಜ್ಞಮೇತಂ ಸಮಾಚರ ॥೩೨॥

ಯುದ್ಧವಾಗಲೀ ಕ್ಷತ್ರಿಯ ಸಂಚಲನವಾಗಲೀ ಲೋಕಕ್ಷಯಕ್ಕೆ ಕಾರಣವಾಗುತ್ತದೆ. ರಾಜೇಂದ್ರನೇ! ಒಂದು ಸಣ್ಣ ನಿಮಿತ್ತವೂ ಕೂಡ ಇಲ್ಲಿ ಮಹಾ ಹಾನಿಗೆ ಕಾರಣವಾಗುತ್ತದೆ. ಇದನ್ನು ಚೆನ್ನಾಗಿ ಯೋಚಿಸಿ ಈ ಯಜ್ಞವನ್ನು ಆಚರಣೆಮಾಡು.

ಅಪ್ರಮತ್ತೋತ್ಥಿತೋ ನಿತ್ಯಂ ಚಾತುರ್ವರ್ಣ್ಯಸ್ಯ ರಕ್ಷಣೇ ।
ಭವ ಏಧಸ್ವ ಮೋದಸ್ವ ದಾನೈಸ್ತರ್ಪಯ ಚ ದ್ವಿಜಾನ್ ॥೩೩॥

ಬಹಳ ಎಚ್ಚರಿಕೆಯಿಂದ ಕೂಡಿದವನಾಗಿದ್ದು ಯಾವಾಗಲೂ ಚಾತುರ್ವರ್ಣ್ಯವನ್ನು ರಕ್ಷಿಸು. ಸಂಪತ್ತನ್ನು ಹೊಂದು. ಅಭಿವೃದ್ಧಿಯನ್ನು ಹೊಂದು, ಆನಂದವನ್ನು ಅನುಭವಿಸು. ಬ್ರಾಹ್ಮಣರನ್ನು ದಾನಗಳಿಂದ ಸಂತೋಷಗೊಳಿಸು.

ಏತತ್ ತೇ ವಿಸ್ತರೇಣೋಕ್ತಂ ಯನ್ಮಾಂ ತ್ವ ಪರಿಪೃಚ್ಛಸಿ ।
ಆಪೃಚ್ಛೇ ತ್ವಾಂ ಗಮಿಷ್ಯಾಮಿ ದಾಶಾರ್ಹನಗರಂ ಪ್ರತಿ ॥೩೪॥

ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ಇವೆಲ್ಲವನ್ನೂ ವಿಸ್ತಾರವಾಗಿ ಹೇಳಿದ್ದೇನೆ. ನಾನು ಇನ್ನು ನಿನ್ನ ಅನುಮತಿಯನ್ನು ಪಡೆದು ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡುವೆನು.

ವೈಶಂಪಾಯನಃ

ಏವಮಾಖ್ಯಾಯ ಪಾರ್ಥೇಭ್ಯೋ ನಾರದೋ ಜನಮೇಜಯ ।
ಜಗಾಮ ತೈರ್ವೃತೋ ರಾಜನ್ ಋಷಿಭಿರ್ಯೈಃ ಸಮಾಗತಃ ॥೩೫॥

ಜನಮೇಜಯನೇ! ನಾರದರು ಪಾಂಡವನನ್ನು ಕುರಿತು ಹೀಗೆ ಎಲ್ಲವನ್ನೂ ನಿರೂಪಿಸಿ ತಮ್ಮ ಜೊತೆಯಲ್ಲಿ ಬಂದ ಋಷಿಗಳ ಜೊತೆಯಲ್ಲಿ ಅಲ್ಲಿಂದ ಪ್ರಯಾಣಮಾಡಿದರು.

ಗತೇऽಥ ನಾರದೇ ಪಾರ್ಥೋ ಭ್ರಾತೃಭಿಃ ಸಹ ಕೌರವ ।
ರಾಜಸೂಯಂ ಕ್ರತುಶ್ರೇಷ್ಠಂ ಚಿಂತಯಾಮಾಸ ಭಾರತ ॥೩೬॥

ಎಲೈ! ಕುರುವಂಶದಲ್ಲಿ ಜನಿಸಿದ ಭರತರ್ಷಭನೇ! ನಾರದರು ಪ್ರಯಾಣಮಾಡಿದ ಮೇಲೆ ಯುಧಿಷ್ಠಿರನು ತನ್ನ ತಮ್ಮಂದಿರ ಜೊತೆಯಲ್ಲಿ ಕುಳಿತು ರಾಜಸೂಯಮಹಾಯಾಗವನ್ನು ಆಚರಿಸುವ ವಿಷಯದಲ್ಲಿ ಸಮಾಲೋಚನೆಯನ್ನು ನಡೆಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ದ್ವಾದಶೋऽಧ್ಯಾಯಃ ॥
॥ ಮಂತ್ರಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಏತಚ್ಛ್ರುತ್ವಾ ಧರ್ಮಸುತೋ ಭ್ರಾತೃಭಿಃ ಸಹಿತೋ ವಶೀ ।
ಅವಾಪ್ತಿಂ ರಾಜಸೂಯಸ್ಯ ಮಂತ್ರಯಾಮಾಸ ಧರ್ಮವಿತ್ ॥೭೪॥

ಇದನ್ನು ಕೇಳಿ ಜಿತೇಂದ್ರಿಯನಾದ ಧರ್ಮರಾಜ ಸೋದರರಿಂದೊಡಗೂಡಿ ರಾಜಸೂಯಯಾಗ ಮಾಡುವ ಬಗ್ಗೆ ಮಂತ್ರಾಲೋಚನೆ ಮಾಡಿದ.

★ ★ ★ ★

ಹದಿಮೂರನೆಯ ಅಧ್ಯಾಯ

(ರಾಜಸೂಯಯಜ್ಞಾಚರಣೆಯಬಗ್ಗೆ ಮಂತ್ರಿಗಳ ಜೊತೆಯಲ್ಲಿ ಯುಧಿಷ್ಠಿರನ ಸಮಾಲೋಚನೆ. ಮತ್ತು ರಾಜಸೂಯ ಯಾಗವನ್ನು ಮಾಡಲು ಸಂಕಲ್ಪ.)

ವೈಶಂಪಾಯನಃ

ಋಷೇಸ್ತದ್ವಚನಂ ಶ್ರುತ್ವಾ ನಿಶಶ್ವಾಸ ಯುಧಿಷ್ಠಿರಃ ।
ಚಿಂತಯನ್ ರಾಜಸೂಯಾಪ್ತಿಂ ನ ಲೇಭೇ ಶರ್ಮ ಭಾರತ ॥೧॥

ಭಾರತನೇ! ನಾರದರ ಆ ಮಾತುಗಳನ್ನು ಕೇಳಿದ ಯುಧಿಷ್ಠಿರನು ರಾಜಸೂಯವನ್ನು ಅನುಷ್ಠಾನಮಾಡುವ ವಿಷಯದಲ್ಲಿ ಚಿಂತಿಸುತ್ತಾ ದೀರ್ಘವಾದ ನಿಟ್ಟುಸಿರನ್ನು ಬಿಟ್ಟನು. ಅವನ ಮನಸ್ಸಿಗೆ ಸಮಾಧಾನವೇ ಆಗಲಿಲ್ಲ.

ರಾಜರ್ಷೀಣಾಂ ಚ ತಂ ಶ್ರುತ್ವಾ ಮಹಿಮಾನಂ ಮಹಾತ್ಮನಾಮ್
ಯಜ್ವನಾಂ ಕರ್ಮಭಿಃ ಪುಣ್ಯೈರ್ಲೋಕಪ್ರಾಪ್ತಿಂ ಸಮೀಕ್ಷ್ಯ ಚ ॥೨॥

ಹರಿಶ್ಚಂದ್ರಂ ಚ ರಾಜರ್ಷಿಂ ರೋಚಮಾನಂ ವಿಶೇಷತಃ ।
ಪಾರ್ಥಸ್ತಂ ಯಜ್ಞಮಾಹರ್ತುಂ ರಾಜಸೂಯಮಿಯೇಷ ಸಃ ॥೩॥

ಮಹಾತ್ಮರಾದ ರಾಜರ್ಷಿಗಳ ಮಹಿಮೆಯನ್ನು ಕೇಳಿ, ಮಹಾಯಾಗಗಳನ್ನು ಮಾಡಿದವರು ತಮ್ಮ ಕರ್ಮಗಳಿಂದ ದಿವ್ಯಲೋಕವನ್ನು ಹೊಂದಿರುವುದನ್ನು ಗಮನಿಸಿ, ಅದರಲ್ಲಿಯೂ ರಾಜರ್ಷಿಯಾದ ಹರಿಶ್ಚಂದ್ರನು ಇಂದ್ರನ ಸಬೆಯಲ್ಲಿ ವಿಶೇಷವಾಗಿ ಶೋಭಿಸುತ್ತಿರುವುದನ್ನು ತಿಳಿದು, ಯುಧಿಷ್ಠಿರನು ಹೇಗಾದರೂ ಮಾಡಿ ರಾಜಸೂಯಯಾಗವನ್ನು ಮಾಡಲೇಬೇಕೆಂದು ಬಯಸಿದನು.

ಯುಧಿಷ್ಠಿರಶ್ಚ ತಾನ್ ಸರ್ವಾನರ್ಚಯಿತ್ವಾ ಸಭಾಸದಃ ।
ಪ್ರತ್ಯರ್ಚಿತಶ್ಚ ತೈಃ ಸರ್ವೈರ್ಯಜ್ಞಾಯೈವ ಮನೋ ದಧೇ ॥೪॥

ಯುಧಿಷ್ಠಿರನು ಆಗಮಿಸಿದ ಸಭಾಸದರನ್ನೆಲ್ಲಾ ಸತ್ಕರಿಸಿ ತಾನೂ ಅವರಿಂದ ಸತ್ಕರಿಸಲ್ಪಟ್ಟು ಯಜ್ಞವನ್ನೇ ಕುರಿತು ನಿರ್ಧರಿಸಿ ಚಿಂತಿಸಲು ಆರಂಭಿಸಿದನು.

ಸ ರಾಜಸೂಯಂ ರಾಜೇಂದ್ರಃ ಕುರೂಣಾಮೃಷಭಃ ಕ್ರತುಮ್ ।
ಆಹರ್ತುಂ ಪ್ರವಣಂ ಚಕ್ರೇ ಮನಃ ಸಂತತ್ಯ ಸೋಽಸಕೃತ್ ॥೫॥

ಕುರುಶ್ರೇಷ್ಠನಾದ ರಾಜೇಂದ್ರನಾದ ಯುಧಿಷ್ಠಿರನು ಮತ್ತೆ ಮತ್ತೆ ಮನಸ್ಸಿನಲ್ಲಿ ಆಲೋಚಿಸಿ ರಾಜಸೂಯಯಾಗವನ್ನುಮಾಡುವ ವಿಷಯದಲ್ಲೇ ಬದ್ಧಾಧರನಾದನು.

ಭೂಯಶ್ಚಾದ್ಭುತವೀರ್ಯೌಜಾ ಧರ್ಮಮೇವಾನುಪಾಲಯನ್ ।
ಕಿಂ ಹಿತಂ ಸರ್ವಲೋಕಾನಾಂ ಭವೇದಿತಿ ಮನೋ ದಧೇ ॥೬॥

ಅದ್ಭುತಪರಾಕ್ರಮವನ್ನು ಮತ್ತು ತೇಜಸ್ಸನ್ನು ಹೊಂದಿದ್ದ ಧರ್ಮರಾಜನು ಧರ್ಮವನ್ನೇ ಅನುಸರಿಸುತ್ತಾ ಎಲ್ಲಾ ಪ್ರಜೆಗಳಿಗೂ ಹೇಗೆ ಹಿತವಾದೀತು ಎಂದು ಮನಸ್ಸಿನಲ್ಲಿ ಚಿಂತಿಸಿದನು.

ಅನುಗೃಹ್ಣನ್ ಪ್ರಜಾಃ ಸರ್ವಾಃ ಸರ್ವಧರ್ಮವಿದಾಂ ವರಃ ।
ಅವಿಶೇಷೇಣ ಸರ್ವೇಷಾಂ ಹಿತಂ ಚಕ್ರೇ ಯುಧಿಷ್ಠಿರಃ ॥೭॥

ಸರ್ವಧರ್ಮಗಳನ್ನು ತಿಳಿದವರಲ್ಲಿ ಶ್ರೇಷ್ಠನಾದ ಧರ್ಮರಾಜನು ಎಲ್ಲ ಪ್ರಜೆಗಳಿಗೂ ಅನುಗ್ರಹವನ್ನು ಮಾಡಲು ಬಯಸಿ ಎಲ್ಲರಿಗೂ ಒಂದೇರೀತಿಯಾಗಿ ಹಿತವನ್ನು ಉಂಟುಮಾಡಿದನು.

ಕ್ರಿಯತಾಂ ದೀಯತಾಂ ದೇಯಂ ಮುಕ್ತಕೋಪೋ ಬಲಾನ್ವಿತಃ ।
ಸಾಧುಧರ್ಮೇತಿ ಪಾರ್ಥಸ್ಯ ನಾನ್ಯಚ್ಛ್ರೂಯೇತ ಭಾಷಿತಮ್ ॥೮॥

ಪಾರ್ಥನರಾಜ್ಯದಲ್ಲಿ, ಸತ್ಕರ್ಮವನ್ನುಮಾಡಿ, ದಾನವನ್ನುಮಾಡಿ, ಕೋಪವನ್ನು ಬಿಡಿ, ಬಲಿಷ್ಠರಾಗಿರಿ, ಸದ್ಧರ್ಮಗಳನ್ನು ಆಚರಿಸಿರಿ, ಎಂಬ ಮಾತನ್ನು ಬಿಟ್ಟುಬೇರೆ ಮಾತುಗಳು ಕೇಳಿ ಬರುತ್ತಿರಲಿಲ್ಲ.

ಏವಂವೃತ್ತೇ ಜಗತ್ ತಸ್ಮಿನ್ ಪಿತರೀವಾನ್ವರ್ತತ ।
ನ ತಸ್ಯ ವಿದ್ಯತೇ ದ್ವೇಷ್ಟಾ ತತೋಽಸ್ಯಾಜಾತಶತ್ರುತಾ ॥೯॥

ಇಂತಹ ನಡತೆಯನ್ನು ಹೊಂದಿದ್ದ ರಾಜನಲ್ಲಿ ಎಲ್ಲಾ ಪ್ರಜೆಗಳೂ ತಂದೆಯಲ್ಲಿ ಹೊಂದುವಂತೆ ಅನುರಾಗವನ್ನು ಹೊಂದಿದ್ದರು. ಅವನನ್ನು ದ್ವೇಷಿಸುವವರು ಯಾರೂ ಇರಲಿಲ್ಲ. ಆದ್ದರಿಂದ ಅವನಿಗೆ ಅಜಾತಶತ್ರು ಎಂದು ಹೆಸರು.

ಪರಿಗ್ರಹಾನ್ನರೇಂದ್ರಸ್ಯ ಭೀಮಸ್ಯ ಪರಿಪಾಲನಾತ್ ।
ಶತ್ರೂಣಾಂ ಕ್ಷಪಣಾಚ್ಚೈವ ಬೀಭತ್ಸೋಃ ಸವ್ಯಸಾಚಿನಃ ॥೧೦॥

ಬಲೀನಾಂ ಸಮ್ಯಗಾದಾನಾನ್ನಕುಲಸ್ಯ ಯಶಸ್ವಿನಃ ।
ಧೀಮತಃ ಸಹದೇವಸ್ಯ ಧರ್ಮಾಣಾಮನುಶಾಸನಾತ್ ॥೧೧॥

ಅವಿಗ್ರಹಾ ವೀತಭಯಾಃ ಸ್ವಧರ್ಮನಿರತಾಃ ಪ್ರಜಾಃ ।
ನಿಕಾಮವರ್ಷೀ ಪರ್ಜನ್ಯಶ್ಚಾಸೀಜ್ಜನಪದೇ ತದಾ ॥೧೨॥

ಧರ್ಮರಾಜನ ಎಲ್ಲಾ ಪ್ರಜೆಗಳ ಪ್ರೀತಿಪೂರ್ವಕಸ್ವೀಕಾರದಿಂದಲೂ, ಭೀಮನ ಧರ್ಮಪರಿಪಾಲನೆಯಿಂದಲೂ, ಸವ್ಯಸಾಚಿಯಾದ ಅರ್ಜುನನ ಶತ್ರುನಾಶದಿಂದಲೂ, ಕೀರ್ತಿವಂತನಾದ ನಕುಲನ ಕಪ್ಪಕಾಣಿಕೆಗಳ ಸ್ವೀಕಾರದಿಂದಲೂ, ಮೇಧಾವಿಯಾದ ಸಹದೇವನ ಧರ್ಮಪರಿಪಾಲನೆಯಿಂದಲೂ, ಎಲ್ಲಾ ಪ್ರಜೆಗಳೂ ಪರಸ್ಪರ ಕಲಹಗಳಿಲ್ಲದೆ, ಯಾವ ಭಯವೂ ಇಲ್ಲದೆ, ತಮ್ಮ ತಮ್ಮ ಧರ್ಮದಲ್ಲಿ ನಿರತರಾದರು. ಧರ್ಮರಾಜನ ರಾಜ್ಯದಲ್ಲೆಲ್ಲಾ ಪರ್ಜನ್ಯನು ಬೇಕಾದಷ್ಟು ಮಳೆಯನ್ನು ಸುರಿಸುತ್ತಿದ್ದನು.

ವಾರ್ಧುಷೀರ್ಯಜ್ಞಸಂತಾನೋ ಗೋರಕ್ಷಂ ಕರ್ಷಣಂ ವಣಿಕ್ ।
ವಿಶೇಷಾತ್ ಸರ್ವವರ್ಣಾನಾಂ ಸಂಜಜ್ಞೇ ರಾಜಕರ್ಮಣಿ ॥೧೩॥

ರಾಜನ ಕರ್ಮಗಳಲ್ಲಿ ಎಲ್ಲಾ ವರ್ಣಗಳಿಗಿಂತಲೂ ವಿಶೇಷವಾಗಿ ಉಪಕಾರವನ್ನುಮಾಡಿ ಘೃತ ಕ್ಷೀರ ಧನ ಮೊದಲಾದ ದ್ರವ್ಯಗಳಿಂದ ಯಜ್ಞಗಳನ್ನು ವಿಸ್ತಾರವಾಗಿ ಆಚರಿಸಲು ಅನುಕೂಲ ಮಾಡಿಕೊಡುವ ವೃದ್ಧಿಜೀವಿಗಳಾದ ವರ್ತಕರ (ವೈಶ್ಯರ) ಸಮೂಹವು ವಿಶೇಷವಾಗಿ ಕೃಷಿಯನ್ನು ಮತ್ತು ಗೋ ರಕ್ಷಣೆಯನ್ನುಮಾಡಿತು.

ಅವರ್ಷಂ ಚಾತಿವರ್ಷಂ ಚ ವ್ಯಾಧಿಪಾವಕಮೂರ್ಛನಮ್ ।
ಸರ್ವಮೇತತ್ ತದಾ ನಾಸೀದ್ ಧರ್ಮನಿತ್ಯೇ ಯುಧಿಷ್ಠಿರೇ ॥೧೪॥

ಯುಧಿಷ್ಠಿರನು ಯಾವಾಗಲೂ ಧರ್ಮದಿಂದಲೇ ರಾಜ್ಯವನ್ನು ಪಾಲಿಸುತ್ತಿರಲು ಅತಿವೃಷ್ಟಿಯಾಗಲೀ ಅವೃಷ್ಟಿಯಾಗಲೀ ವ್ಯಾಧಿಭಯವಾಗಲೀ ಅಗ್ನಿಭಯವಾಗಲೀ ಯಾವುದೂ ಇರಲಿಲ್ಲ.

ದಸ್ಯುತೋ ರಾಜತೋ ವಾऽಪಿ ಪರಚಕ್ರಾತ್ ಪರಸ್ಪರಮ್ ।
ರಾಜವಲ್ಲಭತಶ್ಚೈವ ನಾಶ್ರೂಯತ ಕ್ಲಮಃ ಕ್ವಚಿತ್ ॥೧೫॥

ಕಳ್ಳರಿಂದಾಗಲೀ ರಾಜರಿಂದಾಗಲೀ ಅಥವಾ ಶತ್ರುಸೈನ್ಯದಿಂದಾಗಲೀ ಅಥವಾ ಪರಸ್ಪರರಿಂದಲೇ ಆಗಲೀ ಅಥವಾ ರಾಜನ ಸಮೀಪಬಂಧುಗಳಿಂದಾಗಲೀ ಯಾವ ತೊಂದರೆಯೂ ಕೇಳಿ ಬರುತ್ತಿರಲಿಲ್ಲ.

ಪ್ರಿಯಂ ಕರ್ತುಮುಪಸ್ಥಾತುಂ ಬಲಿಕರ್ಮ ಸ್ವಕರ್ಮಜಮ್ ।
ಅಭಿಹರ್ತುಂ ನೃಪಂ ಜಗ್ಮುರ್ನಾನ್ಯೈಃ ಕಾರ್ಯೈಃ ಪೃಥಗ್ಜನಾಃ ॥೧೬॥

ರಾಜನಿಗೆ ಪ್ರಿಯವನ್ನು ಮಾಡಲು ಅಥವಾ ಅವನನ್ನು ಪ್ರಶಂಸೆಮಾಡಲು ಅಥವಾ ತಮಗೆ ಯೋಗ್ಯವಾದ ಕಪ್ಪಕಾಣಿಕೆಗಳನ್ನು ಒಪ್ಪಿಸಲು ಸಾಮಾನ್ಯಜನರು ರಾಜನ ಬಳಿಗೆ ಹೋಗುತ್ತಿದ್ದರು. ಬೇರೆ ಯಾವ ಉದ್ದೇಶದಿಂದಲೂ ಹೋಗುತ್ತಿರಲಿಲ್ಲ.

ಧರ್ಮೈರ್ಧನಾಗಮೈಸ್ತಸ್ಯ ವವೃಧೇ ನಿಚಯೋ ಮಹಾನ್ ।
ಕಾಮತೋऽಪ್ಯುಪಯುಂಜಂತ ನ ಕ್ಷಯೈರ್ನಾಮಯೈರ್ಜನಾಃ ॥೧೭॥

ಧರ್ಮದಿಂದ ಉಂಟಾದ ಧನಾಗಮನಗಳಿಂದ ಅವನ ಬೊಕ್ಕಸವು ಬಹಳವಾಗಿ ಅಭಿವೃದ್ಧಿಯನ್ನು ಹೊಂದಿತು. ಪ್ರಜೆಗಳು ತಮ್ಮ ಧನವನ್ನು ತಮ್ಮ ಮನಸ್ಸಿಗೆ ಬಂದಂತೆ ಉಪಯೋಗಿಸುತ್ತಿದ್ದರು. ಅವರಿಗೆ ಧನದ ಕ್ಷಯವಾಗಲೀ ರೋಗದ ಉಪದ್ರವವಾಗಲೀ ಇರಲಿಲ್ಲ.(ವ್ಯಾಧಿ ನಿವಾರಣೆಗಾಗಿ ಧನವನ್ನು ವ್ಯಯಮಾಡುತ್ತಿರಲಿಲ್ಲ.)

ಸ ಮಂತ್ರಿಣಃ ಸಮಾನಾಯ್ಯ ಭ್ರಾತೄಂಶ್ಚ ವದತಾಂ ವರಃ ।
ರಾಜಸೂಯಂ ಪ್ರತಿ ತದಾ ಪುನಃ ಪುನರಪೃಚ್ಛತ ॥೧೮॥

ಮಾತನಾಡುವವರಲ್ಲಿ ಶ್ರೇಷ್ಠನಾದ ಆ ಧರ್ಮರಾಜನು ತನ್ನ ಮಂತ್ರಿಗಳನ್ನು ಮತ್ತು ತಮ್ಮಂದಿರನ್ನು ಪುನಃ ಪುನಃ ಕರೆಸಿ ರಾಜಸೂಯಯಾಗದ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದನು.

ತೇ ಪೃಚ್ಛ್ಯಮಾನಾಃ ಸಹಿತಾ ಪಟೋಽರ್ಥ್ಯಂ ಮಂತ್ರಿಣಸ್ತದಾ ।
ಯುಧಿಷ್ಠಿರಂ ಮಹಾಪ್ರಾಜ್ಞಂ ಯಿಯಕ್ಷುಮಿದಮಬ್ರುವನ್ ॥೧೯॥

ಆ ಮಂತ್ರಿಗಳೆಲ್ಲರೂ ಹೀಗೆ ರಾಜನಿಂದ ಕೇಳಲ್ಪಟ್ಟವರಾಗಿ ಮಹಾಪ್ರಾಜ್ಞನೂ ಯಾಗವನ್ನು ಮಾಡುವ ಇಚ್ಛೆಯುಳ್ಳವನೂ ಆದ ಯುಧಿಷ್ಠಿರನನ್ನು ಕುರಿತು ಅರ್ಥವತ್ತಾದ ಈ ಮಾತುಗಳನ್ನು ಹೇಳಿದರು.

ಮಂತ್ರಿಣಃ

ಸರ್ವವ್ಯಾಪೀ ಸರ್ವಗುಣಃ ಸರ್ವಸಾಹಶ್ಚ ಸರ್ವರಾಟ್ ।
ಯಸ್ಮಿನ್ನಧಿಕೃತಃ ಸಮ್ರಾಟ್ ಯಜಮಾನೋ ಮಹಾಯಶಾಃ ॥೨೦॥

ಯಾವ ಮಹಾಯಶಸ್ವಿಯಾದ ರಾಜನು ರಾಜಸೂಯಯಾಗದಲ್ಲಿ ಅರ್ಹತೆಯನ್ನು ಪಡೆದು ಅದನ್ನು ಅನುಷ್ಠಾನಮಾಡುತ್ತಾನೆಯೋ, ಅವನ ಕೀರ್ತಿಯು ಎಲ್ಲೆಡೆಯೂ ಹರಡುತ್ತದೆ. ಅವನು ಎಲ್ಲಾ ಗುಣಗಳನ್ನೂ ಹೊಂದುತ್ತಾನೆ. ಅವನು ಯಾವ ಶತ್ರುವನ್ನೂ ತಡೆಯಬಲ್ಲ. ಎಲ್ಲರಿಗೂ ರಾಜನಾಗಿ ಸಮ್ರಾಟ್ ಎನಿಸಿಕೊಳ್ಳುತ್ತಾನೆ.

ಅನೂಚಾನಾ ದಶ ದಶ ಪಿತೃತೋ ಮಾತೃತಸ್ತಥಾ ।
ಅನುಕ್ತಾ ಯಂ ಪ್ರತಿಷ್ಠಂತೇ ಸೋಮಹಸ್ತಾ ದ್ವಿಜಾತಯಃ ॥೨೧॥

ಪಿತೃಪಕ್ಷದಿಂದಲೂ, ಮತ್ತು ಮಾತೃಪಕ್ಷದಿಂದಲೂ, ಹತ್ತು ಹತ್ತು ಅನೂಚಾನರಾದ ವ್ಯಕ್ತಿಗಳು ಮತ್ತು ಬ್ರಾಹ್ಮಣರು ಕೈಯಲ್ಲಿ ಸೋಮವನ್ನು ಹಿಡಿದು ಅವನ ಬಳಿಗೆ ಬರುತ್ತಾರೆ. ಇನ್ನು ಕೆಲವರು ಅನುಕ್ತರಾದವರು ಅವನ ಬಳಿಗೆ ಬಂದು (ರಾಜಸೂಯಯಾಗದ ಕೊನೆಯಲ್ಲಿ) ಅಭಿಷೇಕವನ್ನು ಮಾಡುತ್ತಾರೆ.

ಯೇನಾಭಿಷಿಕ್ತೋ ನೃಪತಿರ್ವಾರುಣಂ ಗುಣಮೃಚ್ಛತಿ ।
ತೇನ ರಾಜಾ ಚ ಸನ್ ಕೃತ್ಸ್ನಂ ಸಮ್ರಾಟ್ ಗುಣಮಭೀಪ್ಸತೇ ॥೨೨॥

ಅಂತಹ ಅಭಿಷೇಕವನ್ನು ಪಡೆದ ರಾಜನು, ವರುಣನ ಗುಣವನ್ನು ಹೊಂದುತ್ತಾನೆ. ಅಲ್ಲಿಯವರೆಗೆ ರಾಜನೆನಿಸಿಕೊಂಡವನು ಅನಂತರ ಎಲ್ಲಾ ಸಮ್ರಾಟ್‌ಗುಣಗಳನ್ನು ಹೊಂದಿ ಸಮ್ರಾಜನೆನಿಸುತ್ತಾನೆ.

ತಸ್ಯ ಸಮ್ರಾಡ್‌ಗುಣಾರ್ಹಸ್ಯ ಭವತಃ ಕುರುನಂದನ ।
ರಾಜಸೂಯಸ್ಯ ಸಮಯಂ ಮನ್ಯಂತೇ ಸುಹೃದಸ್ತವ ।
ತಸ್ಯ ಯಜ್ಞಸ್ಯ ಸಮಯಃ ಸ್ವಾಧೀನಃ ಕ್ಷತ್ರಸಂಪದಾ ॥೨೩॥

ಕುರುನಂದನನೇ! ಅಂತಹ ಸಮ್ರಾಟ್‌ಗುಣಗಳಿಗೆ ಅರ್ಹನಾದ ನೀನು ರಾಜಸೂಯಯಾಗವನ್ನು ಆಚರಿಸಲು ಇದು ಸೂಕ್ತವಾದ ಸಮಯ ಎಂದು ನಿನ್ನ ಹಿತೈಷಿಗಳೆಲ್ಲಾ ತಿಳಿಯುತ್ತಾರೆ. ಕ್ಷತ್ರಿಯ ಕುಲವು ಮತ್ತು ಸಂಪತ್ತು ನಿನ್ನ ಅಧೀನವಾಗಿರುವುದರಿಂದ ನಿನಗೆ ಇದು ಯಜ್ಞದ ಸಮಯ.

ನಾಮ್ನಾ ಷಡಗ್ನಯೋ ಯಸ್ಮಿನ್ ಚೀಯಂತೇ ಸಂಶಿತವ್ರತೈಃ ।
ದರ್ವಿಹೋಮಾನುಪಾದಾಯ ಸರ್ವಾನಾಪ್ನೋತಿ ಯಃ ಕ್ರತೂನ್।
ಮಹಾಭಿಷೇಕೋ ಯಜ್ಞಾಂತೇ ಸರ್ವವಿತ್ ತೇನ ಚೋಚ್ಯತೇ ॥೨೪॥

ಆ ಯಜ್ಞದಲ್ಲಿ ಶ್ರೇಷ್ಠವ್ರತವನ್ನು ಆಚರಿಸಿದ ಬ್ರಾಹ್ಮಣರು ಆರು ಅಗ್ನಿಗಳನ್ನು ಚಯನಮಾಡುತ್ತಾರೆ. ಸ್ರುಕ್‌ನಲ್ಲಿ ಚರುವನ್ನಿಟ್ಟು ಮಾಡುವ ಹೋಮ ಮೊದಲಾದವುಗಳಿಂದ ಆ ಯಜ್ಞವನ್ನು ಸಮಗ್ರವಾಗಿ ಪೂರ್ಣಗೊಳಿಸಿ ಯಜ್ಞದ ಕೊನೆಯಲ್ಲಿ ಯಾರು ಮಹಾ ಅಭಿಷೇಕವನ್ನು ಹೊಂದುತ್ತಾರೆಯೋ ಅವರು ಎಲ್ಲವನ್ನೂ ಪಡೆದವರು ಎಂದು ಹೇಳಲ್ಪಡುತ್ತಾರೆ.

ಸಮರ್ಥೋಽಸಿ ಮಹಾಭಾಗ ಸರ್ವೇ ತೇ ವಶಗಾ ವಯಮ್ ।
ಅವಿಚಾರ್ಯ ಮಹಾರಾಜ ರಾಜಸೂಯೇ ಮನಃ ಕುರು ॥೨೫॥

ವೈಶಂಪಾಯನಃ

ಇತ್ಯೇವಂ ಸುಹೃದಃ ಸರ್ವೇ ಪೃಥಕ್ ಚ ಸಹ ಚಾಬ್ರುವನ್ ॥೨೬॥

ಮಹಾಭಾಗನೇ! ನೀನು ಯಜ್ಞವನ್ನು ಆಚರಿಸಲು ಸಮರ್ಥನಾಗಿದ್ದೀಯೆ. ನಾವೆಲ್ಲರೂ ನಿನ್ನ ವಶರಾಗಿದ್ದೇವೆ. ಮಹಾರಾಜನೇ! ಬೇರೆ ಏನನ್ನೂ ವಿಚಾರಮಾಡದೆ ರಾಜಸೂಯಯಾಗವನ್ನು ಮಾಡಲು ಉದ್ಯುಕ್ತನಾಗು. ಹೀಗೆ ಹಿತೈಷಿಗಳು ಮತ್ತು ಉಳಿದವರು ಒಟ್ಟಿಗೆ ರಾಜನನ್ನು ಕುರಿತು ಹೇಳಿದರು.

ಸ ಧರ್ಮ್ಯಂ ಪಾಂಡವಸ್ತೇಷಾಂ ವಚಃ ಶ್ರುತ್ವಾ ವಿಶಾಂಪತೇ ।
ಧೃಷ್ಟಮಿಷ್ಟಂ ವರಿಷ್ಠಂ ಚ ಜಗ್ರಾಹ ಮನಸಾऽರಿಹಾ ॥೨೭॥

ಜನಮೇಜಯ ರಾಜನೇ! ಪಾಂಡುಪುತ್ರನಾದ ಶತ್ರುಸೂದನನಾದ ಆ ಧರ್ಮರಾಜನು ಧರ್ಮಯುಕ್ತವಾದ ಧೈರ್ಯದಿಂದಕೂಡಿದ ತನಗೆ ಪ್ರಿಯವಾದ ಆ ಶ್ರೇಷ್ಠವಾದ ಮಾತುಗಳನ್ನು ಕೇಳಿ ಮನಸ್ಸಿನಿಂದ ಸ್ವೀಕರಿಸಿದನು.

ಶ್ರುತ್ವಾ ಸುಹೃದ್ವಚಃ ಕಲ್ಯಂ ಜಾನಂಶ್ಚೈವಾತ್ಮನಃ ಕ್ಷಮಮ್ ।
ಸಂಪ್ರಶಸ್ತಕ್ರಿಯಾರಂಭೇ ಪರೀಕ್ಷಾಮುಪಚಕ್ರಮೇ ॥೨೮॥

ಮಂಗಳಪ್ರದವಾದ ಹಿತೈಷಿಗಳ ಮಾತನ್ನು ಕೇಳಿ, ರಾಜಸೂಯಯಾಗವನ್ನು ಅನುಷ್ಠಾನಮಾಡುವುದಕ್ಕಾಗಿ ಅತ್ಯಂತ ಶ್ರೇಷ್ಠನಾದ ಧರ್ಮರಾಜನು ಕ್ರಿಯಾರಂಭವನ್ನು ಮಾಡುವ ಸಲುವಾಗಿ ಯಾಗವನ್ನು ಮಾಡುವ ಭೂಮಿಯ ಶೋಧನೆಯಲ್ಲಿ ತೊಡಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ತ್ರಯೋದಶೋऽಧ್ಯಾಯಃ ॥
॥ ಮಂತ್ರಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ
ಹದಿಮೂರನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಸುಕಾರ್ಯಮೇತದಿತ್ಯಲಂ ನಿಶಮ್ಯ ಸೋದರೋದಿತಂ ।
ಅಯಾತಯತ್ ಸ್ವಸಾರಥಿಂ ಸ ಕೇಶವಾಯ ಭೂಪತಿಃ ॥೭೫॥

ಇದು ಬಹಳ ಒಳ್ಳೆಯ ಕಾರ್ಯ ಎಂದು ಸೋದರರು ಹೇಳಿದ್ದನ್ನು ಕೇಳಿ ರಾಜಾ ಯುಧಿಷ್ಠಿರ ಶ್ರೀಕೃಷ್ಣನ ಬಳಿಗೆ ತನ್ನ ಸಾರಥಿಯನ್ನು ಕಳಿಸಿದ.

ತದೈವ ಕೇಶವಸ್ಯ ಯಾಃ ಸ್ತ್ರಿಯಸ್ತದೀಯತಾತಕೈಃ ।
ಸಹೋದರೈಶ್ಚ ಯಾಪಿತಃ ಸುದೂತ ಆಪ ಮಾಧವಂ ॥೭೬॥

ಅದೇ ಸಮಯದಲ್ಲಿ ಕೃಷ್ಣನ ಹದಿನಾರು ಸಾವಿರ ಪತ್ನಿಯರ ತಂದೆಗಳೂ ಸೋದರರೂ ಕೃಷ್ಣನಿಗೆ ಒಬ್ಬ ದೂತನನ್ನು ಕಳಿಸಿದ್ದರು. ಅವನೂ ಬಂದ.

ಪ್ರಣಮ್ಯ ಕೇಶವಂ ವಚಃ ಸ ಆಹ ಮಾಗಧೇನ ತೇ ।
ವಿವಾಹಬಾಂಧವಾ ರಣೇ ವಿಜಿತ್ಯ ರೋಧಿತಾ ಗಿರೌ ॥೭೭॥

ದೂತ ಕೃಷ್ಣನನ್ನು ನಮಿಸಿ ಈ ಮಾತನ್ನು ನುಡಿದ. ನಿಮಗೆ ವಿವಾಹ ಸಂಬಂಧ ಬಂಧುಗಳಾಗಿರುವವರನ್ನು ಜರಾಸಂಧ ಯುದ್ಧದಲ್ಲಿ ಗೆದ್ದು ಬೆಟ್ಟದ ಕಣಿವೆಗಳಲ್ಲಿ ಬಂಧಿಸಿದ್ದಾನೆ.

ನೃಪಾಯುತದ್ವಯೇನ ಸೋಽಷ್ಟವಿಂಶಕೈಃ ಶತೈರಪಿ ।
ಯಿಯಕ್ಷುರುಗ್ರರೂಪಿಣಂ ತ್ರಿಲೋಚನಂ ತ್ವಯಿ ಸ್ಥಿತೇ ॥೭೮॥

ಜರಾಸಂಧ ಉಗ್ರರೂಪಿಯಾದ ಮುಕ್ಕಣ್ಣನಿಗೆ ಆ ಇಪ್ಪತ್ತೆರಡು ಸಾವಿರದ ಎಂಟು ನೂರು ಮಂದಿ ರಾಜರುಗಳನ್ನು ಬಲಿಕೊಡಲು ಸಂಕಲ್ಪಿಸಿದ್ದಾನೆ. ಇಷ್ಟೆಲ್ಲ ನೀವು ಇಲ್ಲಿ ಇರಲಾಗಿ ನಡೆದಿದೆ.

ವಿಮೋಚಯಸ್ವ ತಾನ್ ಪ್ರಭೋ ನಿಹತ್ಯ ಮಾಗಧೇಶ್ವರಂ ।
ಅವೈದಿಕಂ ಮಖಂ ಚ ತಂ ವಿಲುಂಪ ಧರ್ಮಗುಪ್ತಯೇ ॥೭೯॥

ಪ್ರಭು, ನೀನು ಆ ಜರಾಸಂಧನನ್ನು ಕೊಂದು ರಾಜರನ್ನು ಬಂಧನದಿಂದ ಬಿಡಿಸು. ವೈದಿಕ ಧರ್ಮರಕ್ಷಣೆಗಾಗಿ ಅವೈದಿಕವಾದ ಆ ಯಜ್ಞವನ್ನು ನಿಲ್ಲಿಸು.

ಇತೇರಿತೋಽಥ ಸಾರಥಿಂ ನಿಶಾಮ್ಯ ಧರ್ಮಜಸ್ಯ ಚ ।
ನಿಶಮ್ಯ ತದ್ವಚಸ್ತದಾ ಜಗಾಮ ಪಾಂಡವಾಲಯಂ ॥೮೦॥

ದೂತ ಹೀಗೆ ಹೇಳಿದಾಗ ಶ್ರೀಕೃಷ್ಣ ಧರ್ಮರಾಜನ ಸಾರಥಿಯನ್ನೂ ಕಂಡ ಅವನ ಮಾತನ್ನು ಕೇಳಿ ಪಾಂಡವರ ಅರಮನೆಗೆ ತೆರಳಿದ.

ಸ ಪಾಂಡವೈಃ ಸಮರ್ಚಿತೋ ಮಖಾಯ ಧರ್ಮಜೇನ ಚ ।
ಪ್ರಪೃಷ್ಟ ಆಹ ಮಾಧವೋ ವಚೋ ಜಗತ್ಸುಖಾವಹಂ ॥೮೧॥

ಶ್ರೀಕೃಷ್ಣ ಪಾಂಡವರಿಂದ ಸತ್ಕೃತನಾದ. ಬಳಿಕ ಯಾಗದ ವಿಷಯದಲ್ಲಿ ಧರ್ಮರಾಜ ಸಲಹೆ ಕೇಳಿದಾಗ ಲೋಕಕ್ಕೆ ಸುಖದಾಯಕವಾಗುವ ಮಾತನ್ನು ನುಡಿದ.

★ ★ ★ ★

ಹದಿನಾಲ್ಕನೆಯ ಅಧ್ಯಾಯ

(ಇಂದ್ರಪ್ರಸ್ಥಕ್ಕೆ ಶ್ರೀಕೃಷ್ಣನ ಆಗಮನ)

ವೈಶಂಪಾಯನಃ

ಚತುರ್ಭಿರ್ಭೀಮಸೇನಾದ್ಯೈರ್ಭ್ರಾತೃಭಿಃ ಸಹಿತೈರ್ಹಿತಮ್ ।
ಏವಮುಕ್ತಸ್ತದಾ ಪಾರ್ಥೋ ಧರ್ಮ ಏವ ಮನೋ ದಧೇ ॥೧॥

ತನ್ನ ನಾಲ್ವರು ತಮ್ಮಂದಿರಿಂದ ಒಟ್ಟಿಗೆ ಈ ರೀತಿ ಹೇಳಲ್ಪಟ್ಟ ಧರ್ಮರಾಜನು ರಾಜಸೂಯ ಯಾಗರೂಪವಾದ ಧರ್ಮವನ್ನು ಆಚರಿವುದೆಂದೇ ನಿರ್ಧರಿಸಿದನು.

ಸ ರಾಜಸೂಯಂ ರಾಜೇಂದ್ರಃ ಕುರೂಣಾಮೃಷಭಃ ಕ್ರತುಮ್ ।
ಜಗಾಮ ಮನಸಾ ಸಮ್ಯಗಾಹರಿಷ್ಯನ್ ಯುಧಿಷ್ಠಿರಃ ॥೨॥

ಕುರುಶ್ರೇಷ್ಠನಾದ ರಾಜೇಂದ್ರನಾದ ಯುಧಿಷ್ಠಿರನು ರಾಜಸೂಯ- ಯಾಗವನ್ನು ಮಾಡಲು ಬಯಸಿದವನಾಗಿ ಮನಸ್ಸಿನಲ್ಲಿ ಅದನ್ನೇ ಧ್ಯಾನಿಸಿದನು.

ಭೂಯಸ್ತ್ವದ್ಭುತವೀರ್ಯೌಜಾ ಧರ್ಮಮೇವಾನುಪಾಲಯನ್ ।
ಕಿಂ ಹಿತಂ ಸರ್ವಲೋಕಸ್ಯ ಧರ್ಮರಾಜೋ ಮನೋ ದಧೇ ॥೩॥

ಅದ್ಭುತವಾದ ಶೌರ್ಯಮತ್ತು ತೇಜಸ್ಸನ್ನು ಹೊಂದಿದ್ದ ಧರ್ಮರಾಜನು, ಧರ್ಮರಕ್ಷಣೆಯನ್ನೇ ಚಿಂತಿಸುತ್ತಾ ಎಲ್ಲಾ ಪ್ರಜೆಗಳಿಗೂ ಯಾವುದು ಹಿತವೆಂದು ಆಲೋಚಿಸಿದನು.

ಸ ಸರ್ವಶಃ ಮಹಾಪ್ರಾಜ್ಞೈಃ ಋತ್ವಿಗ್ಭಿಶ್ಚ ಮಹಾತ್ಮಭಿಃ ।
ಧೌಮ್ಯದ್ವೈಪಾಯನಮುಖೈರ್ಮಂತ್ರಯಾಮಾಸ ಮಂತ್ರಿಭಿಃ ॥೪॥

ಅವನು ಮಹಾತ್ಮರೂ ಮಹಾಪ್ರಾಜ್ಞರೂ ಆದ ಋತ್ವಿಕ್‌ಗಳ ಜೊತೆಯಲ್ಲಿಯೂ ಧೌಮ್ಯ ವ್ಯಾಸ ಮೊದಲಾದವರ ಜೊತೆಯಲ್ಲಿಯೂ ಮತ್ತು ಮಂತ್ರಿಗಳ ಜೊತೆಯಲ್ಲಿಯೂ ಕೂಡಿ ಎಲ್ಲಾವಿಧವಾದ ಮಂತ್ರಾಲೋಚನೆಯನ್ನೂ ನಡೆಸಿದನು.

ವಿರಾಟದ್ರುಪದಾಭ್ಯಾಂ ಚ ಸಾತ್ಯಕೇನ ಚ ಧೀಮತಾ ।
ಯುಧಾಮನ್ಯೂತ್ತಮೌಜಾಭ್ಯಾಂ ಸೌಭದ್ರೇಣ ಚ ಧೀಮತಾ ।
ದ್ರೌಪದೇಯೈಃ ಪರಂ ಶೂರೈರ್ಮಂತ್ರಯಾಮಾಸ ಸಂವೃತಃ ॥೫॥

ಅವನು ವಿರಾಟ ದ್ರುಪದರಿಂದಲೂ ಮೇಧಾವಿಯಾದ ಸಾತ್ಯಕಿಯಿಂದಲೂ ಯುಧಾಮನ್ಯು ಮತ್ತು ಉತ್ತಮೌಜಸರಿಂದಲೂ ಮೇಧಾವಿಯಾದ ಅಭಿಮನ್ಯುವಿನಿಂದಲೂ ಶೂರರಾದ ದ್ರೌಪದಿಯ ಪುತ್ರರಿಂದಲೂ ಕೂಡಿ ಮಂತ್ರಾಲೋಚನೆಯನ್ನು ಮಾಡಿದನು.

ಯುಧಿಷ್ಠಿರಃ

ಭವಂತೋ ರಾಜಸೂಯಸ್ಯ ಸಮ್ರಾಡರ್ಹಸ್ಯ ಸುಕ್ರತೋಃ ।
ಶ್ರದ್ದಧಾನಸ್ಯ ತತ್ತ್ವೇನ ಮಮಾವಾಪ್ತಿಃ ಕಥಂ ಭವೇತ್ ॥೬॥

ಸಮ್ರಾಟ್‌ನಾದವನಿಗೆ ಮಾತ್ರ ಮಾಡಲು ಸಾಧ್ಯವಾದಂತಹ ಶ್ರೇಷ್ಠವಾದ ರಾಜಸೂಯಯಾಗವನ್ನು ಆಚರಿಸುವ ಶ್ರದ್ಧೆಯುಳ್ಳನನಗೆ ಆ ಯಾಗದ ಪ್ರಾಪ್ತಿಯು ಹೇಗೆ ಉಂಟಾಗುವುದೆಂದು ನೀವೆಲ್ಲರೂ ಯಥಾರ್ಥವಾಗಿ ತಿಳಿಸಿ.

ವೈಶಂಪಾಯನಃ

ಏವಮುಕ್ತಾಸ್ತು ತೇ ತೇನ ರಾಜ್ಞಾ ರಾಜೀವಲೋಚನಾಃ ।
ಋಷಯೋ ಭ್ರಾತರಶ್ಚೈವ ತದಾವ್ಯಕ್ಯಂ ಪ್ರತ್ಯಪೂಜಯನ್ ॥೭॥

ಇದಮೂಚುರ್ವಚಃ ಕಾಲೇ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಅರ್ಹಸ್ತ್ವಮಸಿ ರಾಜೇಂದ್ರ ರಾಜಸೂಯಂ ಮಹಾಕ್ರತುಮ್ ॥೮॥

ಆ ರಾಜನಿಂದ ಹೀಗೆ ಹೇಳಲ್ಪಟ್ಟ, ರಾಜೀವಲೋಚನರಾದ ಋಷಿಗಳು ಮತ್ತು ಸಹೋದರರು, ಅವನ ಈ ಮಾತನ್ನು ಪೂಜಿಸಿ ಧರ್ಮಾತ್ಮನಾದ ಯುಧಿಷ್ಠಿರನನ್ನು ಕುರಿತು ಯೋಗ್ಯವಾದ ಕಾಲದಲ್ಲಿ ರಾಜೇಂದ್ರನೇ! ರಾಜಸೂಯಮಹಾಯಾಗವನ್ನು ಮಾಡಲು ನೀನು ಅರ್ಹನಾಗಿದ್ದೀಯೆ ಎಂಬ ಈ ಮಾತನ್ನು ಹೇಳಿದರು.

ಸಾಮರ್ಥ್ಯಯೋಗೌ ಸಂಪ್ರೇಕ್ಷ್ಯ ದೇಶಕಾಲೌ ವ್ಯಯಾಗಮೌ ।
ವಿಮೃಶ್ಯ ಸಮ್ಯಕ್ ಚ ಧಿಯಾ ಕುರ್ವನ್ ರಾಜಾ ನ ಸೀದತಿ ॥೯॥

ತನ್ನ ಸಾಮರ್ಥ್ಯವನ್ನು ಮತ್ತು ಮುಂದೆ ಒದಗಲಿರುವ ದ್ರವ್ಯಗಳನ್ನೂ, ದೇಶಕಾಲಗಳನ್ನೂ, ಧನದ ಆಯವ್ಯಯಗಳನ್ನೂ, ತಿಳಿದು ಬುದ್ಧಿಯಿಂದ ಚೆನ್ನಾಗಿ ಯೋಚಿಸಿ ಪ್ರವೃತ್ತನಾಗುವ ರಾಜನು ಎಂದೂ ಕಷ್ಟದಲ್ಲಿ ಸಿಲುಕಿಕೊಳ್ಳುವುದಿಲ್ಲ.

ಏವಮುಕ್ತಸ್ತು ಧರ್ಮಾತ್ಮಾ ಪುನರಾತ್ಮಾನಮಾತ್ಮನಿ ।
ಅವೇಕ್ಷ್ಯ ಚ ವಿಮೃಶ್ಯೈವ ಸಂಶಯೇಷು ಪುನಃಪುನಃ ॥೧೦॥

ಸರ್ವೈಸ್ತೈರ್ನಿಶ್ಚಿತಮತಿಃ ಕಾಲ ಇತ್ಯೇವ ಭಾರತ ।
ಭೂಯೋ ವಿಮಮೃಶೇ ಪಾರ್ಥೋ ಲೋಕಾತ್ಮಹಿತಕಾರಣಾತ್ ॥೧೧॥

ಹೀಗೆ ಹೇಳಲ್ಪಟ್ಟ ಧರ್ಮಿಷ್ಠನಾದ ಪಾರ್ಥನು ಪುನಃ ಪುನಃ ತನ್ನ ಮನಸ್ಸಿನಲ್ಲಿ ಆ ವಿಷಯವನ್ನು ಯೋಚಿಸಿ, ಪುನಃ ಪುನಃ ಸಂಶಯಗಳನ್ನು ಕಳೆದುಕೊಂಡು, ಅವರೆಲ್ಲರ ಬಲದಿಂದ ಇದು ಯೋಗ್ಯವಾದ ಕಾಲವೆಂದೇ ನಿರ್ಧರಿಸಿ, ಪುನಃ ಎಲ್ಲಾ ಪ್ರಜೆಗಳಿಗೂ ಮತ್ತು ತನಗೂ ಹಿತವಾದುದನ್ನು ವಿಮರ್ಶೆಮಾಡಿದನು.

ನ ಹಿ ಯಜ್ಞಸಮಾರಂಭಃ ಕೇವಲಾತ್ಮವಿವೃದ್ಧಯೇ ।
ಭವತೀತಿ ಸಮಾಜ್ಞಾಯ ಯತ್ನತಃ ಕಾರ್ಯಮುದ್ವಹನ್ ॥೧೨॥

ಯಜ್ಞದಂತಹ ದೊಡ್ಡಕಾರ್ಯವು ಕೇವಲ ತನ್ನೊಬ್ಬನ ಏಳಿಗೆಗೆ ಸೀಮಿತವಾಗಿರುವುದಿಲ್ಲ ಎಂದು ಚೆನ್ನಾಗಿ ತಿಳಿದ ರಾಜನು ಪ್ರಯತ್ನಪೂರ್ವಕವಾಗಿ ಕಾರ್ಯಭಾರವನ್ನು ವಹಿಸಿದನು.

ಸ ನಿಶ್ಚಯಾರ್ಥಂ ಕಾರ್ಯಸ್ಯ ಕೃಷ್ಣಮೇವ ಜನಾರ್ದನಮ್ ।
ಸರ್ವಲೋಕಾತ್ ಪರಂ ಮತ್ವಾ ಜಗಾಮ ಮನಸಾ ಹರಿಮ್ ॥೧೩॥

ಅವನು ಅಂತಿಮವಾದ ನಿರ್ಣಯವನ್ನು ತೆಗೆದುಕೊಳ್ಳಲು ಜನಾರ್ದನನಾದ ಕೃಷ್ಣನ ಅನುಮತಿಯೇ, ಬೇಕೆಂದು ತಿಳಿದು ಸರ್ವೋತ್ತಮನಾದ ಆ ಹರಿಯನ್ನು ಮನಸ್ಸಿನಲ್ಲಿ ಧ್ಯಾನಿಸಿದನು.

ಅಪ್ರಮೇಯಮನಾದ್ಯಂತಂ ಕಾಮಾಜ್ಞಾತಮಜಂ ನೃಪು ।
ಪಾಂಡವಸ್ತರ್ಕಯಾಮಾಸ ಕರ್ಮಭಿರ್ದೇವನಿರ್ಮಿತೈಃ ॥೧೪॥

ಪಾಂಡವನಾದ ಧರ್ಮರಾಜನು ಶ್ರೀಕೃಷ್ಣನು ಮಾಡಿದ ದೇವತೆಗಳಿಗೆ ಉಚಿತವಾದ ಕರ್ಮಗಳಿಂದ, ಅವನು ಅಪ್ರಮೆಯನು ಆದ್ಯಂತರಹಿತನು ಜನನರಹಿತನಾದರೂ, ತನ್ನ ಇಚ್ಛೆಯಿಂದ ಮನುಷ್ಯ ಕುಲದಲ್ಲಿ ಅವತಾರ ಮಾಡಿದವನು ಎಂದು ಊಹಿಸಿದನು.

ನಾಸ್ಯ ಕಿಂಚಿದವಿಜ್ಞೇಯಂ ನಾಸ್ಯ ಕಿಂಚಿದಕರ್ಮಜಮ್ ।
ನಾಸ್ಯ ಕಿಂಚಿದ್ ಭವೇನ್ಮೋಘಂ ಇತಿ ಕೃಷ್ಣಮಮನ್ಯತ ॥೧೫॥

ಅವನಿಗೆ ತಿಳಿಯದುದು ಯಾವುದೂ ಇಲ್ಲ. ಅವನ ಕರ್ಮದಿಂದ ಸಾಧ್ಯವಾಗದುದು ಯಾವುದೂ ಇಲ್ಲ. ಅವನ ಯಾವ ಕರ್ಮವೂ ವ್ಯರ್ಥವಾಗುವುದಿಲ್ಲ ಎಂದು ಕೃಷ್ಣನ ವಿಷಯದಲ್ಲಿ ತಿಳಿದನು.

ಸ ತು ತಾಂ ನೈಷ್ಠಿಕೀಂ ಬುದ್ಧಿಂ ಕೃತ್ವಾ ಪಾರ್ಥೋ ಯುಧಿಷ್ಠಿರಃ ।
ಗುರುವದ್ ಭೂತಗುರವೇ ಪ್ರಾಹಿಣೋದ್ ದೂತಮಂಜಸಾ ॥೧೬॥

ಪಾರ್ಥನಾದ ಯುಧಿಷ್ಠಿರನು ಹೀಗೆ ಏಕಾಗ್ರಬುದ್ಧಿಯನ್ನು ಹೊಂದಿ, ಸರ್ವಲೋಕಗುರುವಾದ ಕೃಷ್ಣನನ್ನು ತನ್ನ ಗುರುವೆಂದು ಭಾವಿಸಿ ಅವನನ್ನು ಕರೆತರಲು ಅವನ ಬಳಿ ಒಬ್ಬದೂತನನ್ನು ಕಳುಹಿಸಿದನು.

ಶೀಘ್ರಗೇನ ರಥೇನಾಶು ದೂತಃ ಸಂಪ್ರಾಪ್ಯ ಯಾದವಾನ್ ।
ದ್ವಾರಕಾವಾಸಿನಂ ಕೃಷ್ಣಂ ದ್ವಾರವತ್ಯಾಂ ಸಮಾಸದತ್ ॥೧೭॥

ಆ ದೂತನಾದರೂ ಶೀಘ್ರವಾಗಿ ಚಲಿಸುವ ರಥವನ್ನು ಏರಿ ದ್ವಾರಕಾಪಟ್ಟಣವನ್ನು ಸೇರಿ ಯಾದವರನ್ನು ಸಮೀಪಿಸಿ ಕೃಷ್ಣನ ಸಮೀಪಕ್ಕೆ ಬಂದನು.

ಸ ಪ್ರಹ್ವಃ ಪ್ರಾಂಜಲಿರ್ಭೂತ್ವಾ ವ್ಯಜ್ಞಾಪಯತ ಮಾಧವಮ್ ।
ಧರ್ಮರಾಜೋ ಹೃಷೀಕೇಶಂ ಧೌಮ್ಯವ್ಯಾಸಾದಿಭಿಃ ಸಹ ॥೧೮॥

ಪಾಂಚಾಲಮಾತ್ಸ್ಯಸಹಿತೈರ್ಭ್ರಾತೃಭಿಃ ಸ್ವೈಶ್ಚ ಸರ್ವಶಃ ।
ತ್ವದ್ದರ್ಶನಂ ಮಹಾಬಾಹೋ ಕಾಂಕ್ಷತೇ ಸ ಯುಧಿಷ್ಠಿರಃ ॥೧೯॥

ಅವನು ವಿನಯದಿಂದ ಬಾಗಿ ಕೈಗಳನ್ನು ಜೋಡಿಸಿ ಕೃಷ್ಣನಿಗೆ ಹೀಗೆ ವಿಜ್ಞಾಪನೆಯನ್ನುಮಾಡಿದನು. ಮಹಾಬಾಹುವಾದ ಹೃಷೀಕೇಶನೇ! ಧರ್ಮರಾಜನು ವ್ಯಾಸ ಧೌಮ್ಯಾದಿಗಳಿಂದಲೂ ವಿರಾಟ ದ್ರುಪದರಿಂದಲೂ ತನ್ನ ತಮ್ಮಂದಿರಿಂದಲೂ ಕೂಡಿದವನಾಗಿ ನಿನ್ನ ದರ್ಶನವನ್ನು ಬಯಸುತ್ತಾನೆ.

ವೈಶಂಪಾಯನಃ

ಇಂದ್ರಸೇನವಚಃ ಶ್ರುತ್ವಾ ಯಾದವಪ್ರವರೋ ಬಲೀ ।
ದರ್ಶನಾಕಾಂಕ್ಷಿಣಂ ಪಾರ್ಥಂ ದರ್ಶನಾಕಾಂಕ್ಷಣೋಽಚ್ಯುತಃ ॥೨೦॥

ಆಮಂತ್ರ್ಯ ವಸುದೇವಂ ಚ ಬಲದೇವಂ ಚ ಮಾಧವಃ ।
ಇಂದ್ರಸೇನೇನ ಸಹಿತ ಇಂದ್ರಪ್ರಸ್ಥಂ ಯಯೌ ತದಾ ॥೨೧॥

ಆ ದೂತನಾದ ಇಂದ್ರಸೇನನ ಮಾತುಗಳನ್ನು ಕೇಳಿ ಯಾದವಶ್ರೇಷ್ಠನಾದ ಮತ್ತು ಬಲಿಷ್ಠನಾದ ಕೃಷ್ಣನು ಧರ್ಮರಾಜನು ತನ್ನನ್ನು ನೋಡಲು ಬಯಸುತ್ತಾನೆ ಎಂದೂ ಇತರರೂ ತನ್ನನ್ನು ನೋಡುವ ಇಚ್ಛೆಯುಳ್ಳವನಾಗಿದ್ದಾರೆಂದೂ ತಿಳಿದು ವಸುದೇವ ಮತ್ತು ಬಲರಾಮರ ಅನುಮತಿಯನ್ನು ಪಡೆದು ಇಂದ್ರಸೇನನ ಜೊತೆಯಲ್ಲಿ ಇಂದ್ರಪ್ರಸ್ಥಕ್ಕೆ ಹೊರಟನು.

ವ್ಯತೀತ್ಯ ದೇಶಾನ್ ವಿವಿಧಾನ್ ತ್ವರಾವಾನ್ ಕ್ಷಿಪ್ರವಾಹನಃ ।
ಇಂದ್ರಪ್ರಸ್ಥಗತಂ ಪಾರ್ಥಮಭ್ಯಗಚ್ಛಜ್ಜನಾರ್ದನಃ ॥೨೨॥

ಜನಾರ್ದನನು ಶೀಘ್ರಗಾಮಿಯಾದ ರಥವನ್ನು ಏರಿ, ತ್ವರೆಯಿಂದ ಕೂಡಿದವನಾಗಿ ಅನೇಕ ದೇಶಗಳನ್ನು ದಾಟಿ ಇಂದ್ರಪ್ರಸ್ಥದಲ್ಲಿ ಧರ್ಮರಾಜನನ್ನು ಸಂಧಿಸಿದನು.

ಸ್ವಗೃಹೇ ಪಿತೃವದ್ ಭ್ರಾತ್ರಾ ಧರ್ಮರಾಜೇನ ಪೂಜಿತಃ ।
ಭೀಮೇನ ಚ ತತೋಽಪಶ್ಯತ್ ಸ್ವಸಾರಂ ಪ್ರೀತಿಮಾನ್ ಪ್ರಭುಃ ॥೨೩॥

ತನ್ನ ಮನೆಯಲ್ಲಿ ತಂದೆಯಂತೆ ಧರ್ಮರಾಜನಿಂದಲೂ ಮತ್ತು ಭೀಮಸೇನನಿಂದಲೂ ಪೂಜಿಸಲ್ಪಟ್ಟ ಪ್ರಭುವಾದ ಕೃಷ್ಣನು, ಅನಂತರ ಸಂತೋಷದಿಂದ ಕೂಡಿದವನಾಗಿ ತನ್ನ ತಂಗಿಯಾದ ಸುಭದ್ರೆಯನ್ನು ನೋಡಿದನು.

ಪ್ರೀತಃ ಪ್ರಿಯೇಣ ವೈ ಸಖ್ಯಾ ರೇಮೇ ಸ ಸಹಿತಸ್ತದಾ ।
ಅರ್ಜುನೇನ ಯಮಾಭ್ಯಾಂ ಚ ಶಿಷ್ಯವತ್ ಸಮುಪಸ್ಥಿತಃ ॥೨೪॥

ಸಂತೋಷಗೊಂಡ ಕೃಷ್ಣನು ಅರ್ಜುನ ನಕುಲ ಸಹದೇವರಿಂದ ಶಿಷ್ಯರಂತೆ ಸಮೀಪಿಸಲ್ಪಟ್ಟವನಾಗಿ ತನ್ನ ಪ್ರಿಯ ಸ್ನೇಹಿತನಾದ ಅರ್ಜುನನ ಜೊತೆಯಲ್ಲಿ ಸಂತೋಷಗೊಂಡನು.

ತಂ ವಿಶ್ರಾಂತಂ ಸಮೇ ದೇಶೇ ಕ್ಷಣೇನಂ ಕಲ್ಯಮಚ್ಯುತಮ್ ।
ಧರ್ಮರಾಜಃ ಸಮಾಗಮ್ಯ ಜ್ಞಾಪಯತ್ ಸ್ವಂ ಪ್ರಯೋಜನಮ್ ॥೨೫॥

ಪ್ರಾತಃಕಾಲದಲ್ಲಿ ವಿಶ್ರಾಂತಿಯನ್ನು ಪಡೆದು ಸಮವಾದ ಪ್ರದೇಶದಲ್ಲಿ ವಿರಾಮದಿಂದ ಕುಳಿತಿದ್ದ ಮಂಗಳಕರನಾದ ಕೃಷ್ಣನನ್ನು ಸಮೀಪಿಸಿ ಧರ್ಮರಾಜನು ತನ್ನ ಉದ್ದೇಶವನ್ನು ತಿಳಿಸಿದನು.

ಪ್ರಾರ್ಥಿತೋ ರಾಜಸೂಯೋ ಮೇ ನಚಾಸೌ ಕೇವಲೇಪ್ಸಯಾ ।
ಪ್ರಾಪ್ಯತೇ ಯೇನ ಕೇನೇಹ ವಿದಿತಂ ತವ ಚಾಚ್ಯುತ ॥೨೬॥

ನಾನು ರಾಜಸೂಯಯಾಗವನ್ನು ಮಾಡಲು ಬಯಸಿದ್ದೇನೆ. ಅಚ್ಯುತನೇ ಅದನ್ನು ಕೇವಲ ತನ್ನ ಇಚ್ಛೆಯಿಂದ ಯಾವನೂ ಸಾಧಿಸಲಾಗುವುದಿಲ್ಲ ಎಂದು ನೀನು ತಿಳಿದಿದ್ದೀಯೆ.

ಯಸ್ಮಿನ್ ಸರ್ವಂ ಸಂಭವತಿ ಯದಾ ಸರ್ವೇಶ ಉಚ್ಯತೇ ।
ರಾಜಸೂಯಾಭಿಷೇಕೋಽಯಂ ತದಾ ಸಾಮ್ರಾಜ್ಯಮಿಷ್ಯತೇ ॥೨೭॥

ಯಾವನು ಎಲ್ಲಾ ಕರ್ಮವನ್ನೂ ಆಚರಿಸಿ ರಾಜಸೂಯಾಭಿಷೇಕವನ್ನು ಹೊಂದುವನೋ ಅವನು ಸರ್ವೇಶನೆನಿಸುತ್ತಾನೆ. ಅವನಿಗೆ ಸಾಮ್ರಾಜ್ಯ ಪದವಿಯೂ ದೊರೆಯುತ್ತದೆ.

ತಂ ರಾಜಸೂಯಂ ಸುಹೃದಃ ಪ್ರಾಪ್ಯಮಾಹುಃ ಸಮೇತ್ಯ ಮಾಮ್ ।
ತತ್ರ ಮೇ ನಿಶ್ಚಿತಾ ಬುದ್ಧಿಸ್ತವ ಕೃಷ್ಣ ಗಿರಾ ಭವೇತ್ ॥೨೮॥

ನನ್ನ ಬಂಧುಗಳು ನನ್ನ ಬಳಿಗೆ ಬಂದು ನೀನು ರಾಜಸೂಯವನ್ನು ಮಾಡಲು ಅರ್ಹನಾಗಿದ್ದೀಯೆ ಎಂದು ಹೇಳುತ್ತಿದ್ದಾರೆ. ಕೃಷ್ಣನೇ! ನಿನ್ನ ಮಾತಿನಿಂದ ಮಾತ್ರ ನನಗೆ ನಿಶ್ಚಯವುಂಟಾಗುತ್ತದೆ.

ಕೇಚಿದ್ಧಿ ಸೌಹೃದಾದೇವ ದೋಷಂ ನ ಪರಿಚಕ್ಷತೇ ।
ಅರ್ಥಹೇತೋಸ್ತಥಾ ಚಾನ್ಯೇ ಪ್ರಿಯಮೇವ ವದಂತ್ಯುತ ॥೨೯॥

ಕೆಲವರು ಸ್ನೇಹವಿರುವ ಕಾರಣದಿಂದಲೇ ದೋಷವನ್ನು ಹೇಳುವುದಿಲ್ಲ. ಇನ್ನು ಕೆಲವರು ಧನಲಾಭದ ಕಾರಣದಿಂದಾಗಿ ಪ್ರಿಯವಾಗಿಯೇ ಮಾತನಾಡುತ್ತಾರೆ.

ಪ್ರಿಯಮೇವ ಪ್ರತೀಕ್ಷಂತೇ ಕೇಚಿನ್ನಾತ್ಮನಿ ಯದ್ಧಿತಮ್ ।
ಏವಂ ಪ್ರಾಯಃ ಪ್ರದೃಶ್ಯಂತೇ ಜನವಾದಾಃ ಪ್ರಯೋಜನೇ ॥೩೦॥

ಕೆಲವರು ತಮಗೆ ಪ್ರಿಯವಾದುದನ್ನು ನಿರೀಕ್ಷಿಸುತ್ತಾರೆ.ತಮಗೆ ಹಿತವಾದುದನ್ನು ನಿರೀಕ್ಷಿಸುವುದಿಲ್ಲ. ಹೀಗೆ ಜನರ ಮಾತುಗಳು ಹೆಚ್ಚಾಗಿ ತಮ್ಮ ಪ್ರಯೋಜನದ ಉದ್ದೇಶದಿಂದ ಕೂಡಿರುತ್ತವೆ.

ತ್ವಂ ತು ಸರ್ವಾನತೀತ್ಯೈತಾನ್ ಕಾಮಂ ಕ್ರೋಧಮತೀತ್ಯ ಚ ।
ಪರಮಂ ನಃ ಕ್ಷಮಂ ಕಾಲೇ ಯಥಾವದ್ ವಕ್ತುಮರ್ಹಸಿ ॥೩೧॥

ನೀನಾದರೋ ಇವೆಲ್ಲವನ್ನೂ ಮತ್ತು ಕಾಮಕ್ರೋಧಗಳನ್ನೂ ಮೀರಿ ನಮಗೆ ಈ ಕಾಲದಲ್ಲಿ ಯಾವುದು ಯೋಗ್ಯವಾದುದೆಂದು ಯಥಾರ್ಥವಾಗಿ ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಚತುರ್ದಶೋಽಧ್ಯಾಯಃ ॥
॥ ಮಂತ್ರಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಕ್ರತುರ್ಯಥಾವಿಧಾನತಃ ಕೃತೋ ಹಿ ಪಾರಮೇಷ್ಯಕಂ ।
ಪದಂ ನಯೇತ ತತ್ಪದೇ ಸುಯೋಗ್ಯಮೇಷ ನಾನ್ಯಥಾ ॥೮೨॥

ವಿಧ್ಯುಕ್ತವಾಗಿ ಈ ಯಾಗವನ್ನು ಮಾಡಿದರೆ ಮಾತ್ರ ಅದು ಬ್ರಹ್ಮಪದವಿಯನ್ನೂ ಕೊಡಬಲ್ಲದು. ಇಲ್ಲದಿದ್ದರೆ ಇಲ್ಲ. ಅದೂ ಆ ಪದವಿಗೆ ಯೋಗ್ಯನಾದವನಿಗೆ ಮಾತ್ರ. ಅಯೋಗ್ಯನಿಗೆ ಅಲ್ಲ.

ಅಯೋಗ್ಯಕಾಮ್ಮಹಾಪದೇ ವಿಧಾತುರೇಷ ಹಿ ಕ್ರತುಃ ।
ಸಮಾನಯೋಗ್ಯತಾಗಣಾತ್ ಕರೋತಿ ಮುಕ್ತಿಗಂ ವರಂ ॥೮೩॥

ಬ್ರಹ್ಮನ ಆ ಮಹಾಪದವಿಗೆ ಅನರ್ಹನು ಮಾಡುವ ಈ ಯಾಗ ಅವನನ್ನು ಮುಕ್ತಿಯಲ್ಲಿ ತಮ್ಮ ಸಮಾನ ಯೋಗ್ಯತೆ ಉಳ್ಳ ಇತರರಿಗಿಂತ ಶ್ರೇಷ್ಠವನ್ನಾಗಿ ಮಾಡಬಲ್ಲದು.

ಪುರಾ ತು ಮುಕ್ತಿತೋಽಧಿಕಂ ಸ್ವಜಾತಿತಃ ಕರೋತಿ ಚ ।
ಅತಸ್ತ್ರಿಶಂಕುಪುತ್ರಕೋ ನೃಪಾನತೀತ್ಯ ವರ್ತತೇ ॥೮೪॥

ಮುಕ್ತಿಗಿಂತ ಮೊದಲು ಈ ಯಾಗ ಯಜಮಾನನನ್ನು ತನ್ನ ಸಮಾನ ಜಾತಿಯವರಿಗಿಂತ ಶ್ರೇಷ್ಠನನ್ನಾಗಿ ಮಾಡುತ್ತದೆ. ಅದರಿಂದಲೆ ಹರಿಶ್ಚಂದ್ರ ಎಲ್ಲ ರಾಜರಿಗಿಂತ ಮಿಗಿಲಾಗಿದ್ದಾನೆ.

ಸುರಾಂಶಕೋಽಪಿ ತೇ ಪಿತಾ ವಿನಾ ಹಿ ರಾಜಸೂಯತಃ ।
ನ ಶಕ್ಷ್ಯತಿ ತ್ರಿಶಂಕುಜಾದ್ ವರತ್ವಮಾಪ್ತುಮದ್ಯ ತು ॥೮೫॥

ನಿನ್ನ ತಂದೆಯಾದ ಪಾಂಡು ದೇವಾಂಶ ಸಂಭೂತನಾದರೂ ರಾಜಸೂಯ ಯಾಗವಿಲ್ಲದೆ ಹರಿಶ್ಚಂದ್ರನಿಗಿಂತ ಹೆಚ್ಚಿನ ಸ್ಥಾನ ಪಡೆಯಲು ಶಕ್ತನಾಗುವುದಿಲ್ಲ.

ತಪಶ್ಚರನ್ ಸಮಾಗತೇ ಶಚೀಪತೌ ಪಿತಾ ತವ ।
ಮರುದ್ಗಣೋತ್ತಮಃ ಪುರಾ ನ ತೂತ್ಥಿತಃ ಶಶಾಪ ಸಃ ॥೮೬॥

ಏಕೆಂದರೆ ನಿನ್ನ ತಂದೆ ಹಿಂದೆ ಮೂಲರೂಪದಲ್ಲಿ ಮರುತ್ತುಗಳಲ್ಲಿ ಉತ್ತಮನಾದ ಪರಾವಹ. ಅವನು ತಪಸ್ಸು ಮಾಡುತ್ತಿದ್ದಾಗ ದೇವೇಂದ್ರ ಬಂದರೂ ಎದ್ದು ನಿಲ್ಲಲಿಲ್ಲ. ಅದರಿಂದ ದೇವೇಂದ್ರ ಶಪಿಸಿದ.

ವ್ರಜಸ್ವ ಮಾನುಷೀಂ ತನುಂ ತತೋ ಮೃತಃ ಪುನರ್ದಿವಂ ।
ಗತೋಽಪಿ ನ ಸ್ವಕಾಂ ತನುಂ ಪ್ರವೇಷ್ಟುಮತ್ರ ನೇಶಸೇ ।
ತದಾಧಿಕಸ್ತ್ರಿಶಂಕುಜೋ ಭವಿಷ್ಯತಿ ತ್ವದಿತ್ಯಥ ॥೮೭॥

'ಮನುಷ್ಯ ಜನ್ಮ ಹೊಂದು, ಬಳಿಕ ಸತ್ತು ಸ್ವರ್ಗಕ್ಕೆ ಹೋದರೂ ನಿನ್ನ ಮೂಲ ರೂಪವನ್ನು ಪ್ರವೇಶಿಸಲು ಶಕ್ತನಾಗಲಾರೆ. ಆಗ ನಿನಗಿಂತಲೂ ಹರಿಶ್ಚಂದ್ರ ಶ್ರೇಷ್ಠನೆನಿಸುತ್ತಾನೆ' ಎಂದು.

ಕ್ಷಮಾಪಿತಶ್ಚ ವಾಸವೋ ಜಗಾದ ರಾಜಸೂಯತಃ ।
ತ್ರಿಶಂಕುಜಾಧಿಕೋ ಭವಾನವಾಪ್ಸ್ಯತಿ ಸ್ವಕಾಂ ತನುಂ ॥೮೮॥

ಪರಾವಹ ಕ್ಷಮೆ ಕೇಳಿದಾಗ ದೇವೇಂದ್ರ ನುಡಿದ, 'ರಾಜಸೂಯಯಾಗದಿಂದ ನೀನು ಹರಿಶ್ಚಂದ್ರನಿಗಿಂತ ಮಿಗಿಲೆನಿಸುವೆ ಮತ್ತು ನಿನ್ನ ಮೂಲರೂಪವನ್ನು ಹೊಂದುವಿ'.

ಅತಃ ಸುಕಾರ್ಯ ಏವ ತೇ ಯುಧಿಷ್ಠಿರ ಕ್ರತೂತ್ತಮಃ ।
ಭವದ್ಭಿರಪ್ಯವಾಪ್ಯತೇ ಸ್ವಯೋಗ್ಯತಾಮುನಾಖಿಲಾ ॥೮೯॥

ಅದರಿಂದ ಧರ್ಮರಾಜ, ಈ ಶ್ರೇಷ್ಠವಾದ ರಾಜಸೂಯಯಾಗ ನಿನಗೆ ಉತ್ತಮ ಕಾರ್ಯವೆನಿಸುತ್ತದೆ. ನೀವೂ ಕೂಡ ಈ ಯಾಗದಿಂದ ನಿಮ್ಮ ಯೋಗ್ಯತಾನುಗುಣ ಫಲವನ್ನು ಪೂರ್ಣವಾಗಿ ಹೊಂದುವಿರಿ.

ಉದೀರ್ಯ ಚೈವಮೀಶ್ವರಃ ಕ್ರತೋರಮುಷ್ಯ ಯೋಗ್ಯತಾ ।
ವೃಕೋದರೇ ಯತೋಽಖಿಲಾ ಚತುರ್ಮುಖತ್ವಯೋಗ್ಯತಾ ॥೯೦॥

ತತಃ ಸುಪೂರ್ಣಮಸ್ಯ ತತ್ ಫಲಂ ವಿಧಾತುಮಂಜಸಾ ।
ಜಗಾದ ವಾಯುವಾಹನೋ ವಚೋ ಯುಧಿಷ್ಠಿರಂ ತ್ವಿದಂ ॥೯೧॥

ರಾಜಸೂಯಯಾಗಕ್ಕೆ ಪೂರ್ಣ ಅರ್ಹತೆ ಇರುವುದು ಭೀಮಸೇನನಲ್ಲಿಯೆ. ಏಕೆಂದರೆ ಅವನಲ್ಲಿಯೆ ಬ್ರಹ್ಮಪದವಿಯ ಯೋಗ್ಯತೆ ಇದೆ. ಅದರಿಂದ ರಾಜಸೂಯದ ಪೂರ್ಣಫಲವಾದ ಬ್ರಹ್ಮಪದವಿಯನ್ನು ಭೀಮನಿಗೆ ಚೆನ್ನಾಗಿ ಕೊಡಿಸುವ ಉದ್ದೇಶದಿಂದ ವಾಯುವಾಹನನಾದ ಶ್ರೀಕೃಷ್ಣ ಧರ್ಮರಾಜನಿಗೆ ಈ ಮಾತನ್ನು ಹೇಳಿದ.

ಕ್ಷತ್ರಾಜಸೂಯಮದ್ಯ ತೇ ಜರಾಸುತೇ ತು ಜೀವತಿ ।
ಜಯೇತ್ಕ ಏವಂ ತಂ ಯುಧಾ ಮೃತೋ ನ ಯೋಽಪಿ ಸೀರಿಣಾ ॥

ಜರಾಸಂಧ ಬದುಕಿರುವಷ್ಟು ಕಾಲ ನಿನಗೆ ಈ ರಾಜಸೂಯಯಾಗ ಎಲ್ಲಿ ಕೈಗೂಡೀತು? ಯಾರು ತಾನೆ ಅವನನ್ನು ಗೆಲ್ಲಬಲ್ಲ? ಬಲರಾಮನಿಂದಲೂ ಯುದ್ಧದಲ್ಲಿ ಅವನು ಹತನಾಗಲಿಲ್ಲ.

ವಿರಿಂಚಶರ್ವವಾಕ್ಯತಃ ಸಮಸ್ತ ಲೋಕಜಾಯಿನಿ ।
ಸ್ಥಿತೇ ತು ತೇ ಜರಾಸುತೇ ನ ಸೇತ್ಸ್ಯತಿ ಕ್ರತೂತ್ತಮಃ ॥೯॥

ಬ್ರಹ್ಮರುದ್ರರ ವರದಿಂದ ಸಮಸ್ತ ಲೋಕವನ್ನು ಗೆದ್ದಿರುವ ಈ ಜರಾಸಂಧನಿರುವಷ್ಟು ಕಾಲ ನಿನಗೆ ಈ ಶ್ರೇಷ್ಠವಾದ ಯಾಗ ಕೈಗೂಡುವುದಿಲ್ಲ.

★ ★ ★ ★

ಹದಿನೈದನೆಯ ಅಧ್ಯಾಯ

(ಯುಧಿಷ್ಠಿರನ ಸನ್ನಿಧಿಯಲ್ಲಿ ಕೃಷ್ಣನಿಂದ ಜರಾಸಂಧನ ಶೌರ್ಯದ ವರ್ಣನೆ)

ಶ್ರೀಭಗವಾನ್

ಸರ್ವೈರ್ಗುಣೈರ್ಮಹಾರಾಜ ಸಮ್ರಾಡಸಿ ನ ಸಂಶಯಃ ।
ಜಾನಂಸ್ತ್ವೇವ ಚ ತೇ ಸರ್ವಂ ವ್ಯಕ್ತಂ ವಕ್ಷ್ಯಾಮ್ಯಶೇಷತಃ ॥೧॥

ಮಹಾರಾಜನೇ! ನೀನು ಎಲ್ಲಾ ಗುಣಗಳಿಂದಲೂ ಸಮ್ರಾಟ್ ಎನಿಸಿಕೊಳ್ಳಲು ಅರ್ಹನಾಗಿದ್ದೀಯೆ ಎಂಬುದರಲ್ಲಿ ಸಂಶಯವಿಲ್ಲ. ಆದರೂ ಎಲ್ಲಾ ವಿಷಯಗಳನ್ನು ತಿಳಿದು ನಿನಗೆ ಎಲ್ಲವನ್ನು ಸ್ಪಷ್ಟವಾಗಿ ಹೇಳುವೆನು.

ಜಾಮದಗ್ನ್ಯೇನ ರಾಮೇಣ ಕ್ಷತ್ರಂ ಯದವಶೇಷಿತಮ್ ।
ತಸ್ಮಾದರಾಜಕೇ ಲೋಕೇ ಯದಿದಂ ಕ್ಷತ್ರಸಂಜ್ಞಿತಮ್ ॥೨॥

ಕೃತೋಽಯಂ ಕುಲಸಂಕಲ್ಪಃ ಕ್ಷತ್ರಿಯೈರ್ವಸುಧಾಧಿಪೈಃ ।
ನಿದೇಶವಾಗ್ಭಿಸ್ತತ್ ತೇ ಹ ವಿದಿತಂ ಭರತರ್ಷಭ ॥೩॥

ಜಮದಗ್ನಿಯ ಮಗನಾದ ಪರಶುರಾಮದೇವರು ಕ್ಷತ್ರಿಯರನ್ನು ಕೊಂದಮೇಲೆ, ಅಲ್ಪ ಕ್ಷತ್ರಿಯರು ಉಳಿದರು. ಬೇರೆ ಬೇರೆ ಕ್ಷತ್ರಿಯಕುಲದ ಅವರೆಲ್ಲರೂ ಸೇರಿ ಅರಾಜಕತೆಯನ್ನು ನಿವಾರಿಸಲು ಒಂದು ಕುಲಸಂಕಲ್ಪವನ್ನು ಮಾಡಿದರು. ಭರತರ್ಷಭನೇ! ಈ ವಿಷಯವು ಋಷಿಗಳ ಪುರಾಣರೂಪವಾದ ಮಾತುಗಳಿಂದ ನಿನಗೂ ತಿಳಿದಿದೆ.

ಉಳಿದ ಕ್ಷತ್ರಿಯರಲ್ಲಿ ಯಾವನು ಬಲಿಷ್ಠನಾಗಿ, ಉಳಿದೆಲ್ಲರನ್ನು ವಶಪಡಿಸಿಕೊಳ್ಳುತ್ತಾನೆಯೋ ಅವನೇ ರಾಜನಾಗುವನು ಎಂಬುದು ಆ ಕುಲದ ಸಂಕಲ್ಪ.

ಐಲಸ್ಯೇಕ್ಷ್ವಾಕುವಂಶಸ್ಯ ಚ ಪ್ರಕೃತಿಂ ಪರಿಚಕ್ಷತೇ ।
ರಾಜಾನಃ ಶ್ರೇಣಿಬದ್ಧಾಶ್ಚ ತತೋಽನ್ಯೇ ಕ್ಷತ್ರಿಯಾ ಭುವಿ ॥೪॥

ಇಕ್ಷ್ವಾಕುವಿನ ಕನ್ಯಾವಂಶದಲ್ಲಿ ಜನಿಸಿದ ಐಲನಾದ ಪುರೂರವನನ್ನು, ಸೋಮವಂಶದ ಮೂಲಪುರುಷನೆಂದು ಹೇಳುತ್ತಾರೆ. ಭೂಮಿಯಲ್ಲಿ ಇರುವ ಎಲ್ಲರಾಜರೂ ಕ್ಷತ್ರಿಯರೂ ಸೇನಾನಿಗಳೂ ಆ ಮೂಲವಂಶದವರೇ ಆಗಿದ್ದಾರೆ.

ಐಲವಂಶ್ಯಾಸ್ತು ತೇ ರಾಜನ್ ತಥೈವೇಕ್ಷ್ವಾಕವೋ ನೃಪಾಃ ।
ತಾನಿ ಚೈಕಶತಂ ವಿದ್ಧಿ ಕುಲಾನಿ ಭರತರ್ಷಭ ॥೫॥

ರಾಜನೇ! ಆದ್ದರಿಂದ ಆ ಕ್ಷತ್ರಿಯರು ಐಲವಶಂಕ್ಕೂ ಸೇರಿದವರು. ಮತ್ತು ಇಕ್ಷ್ವಾಕುವಂಶಕ್ಕೂ ಸೇರಿದವರು. ಭರತರ್ಷಭನೇ! ಅಂತಹ ರಾಜಕುಲಗಳು ನೂರೊಂದು ಇವೆ.

ಯಯಾತೇಸ್ತ್ವೇವ ವಂಶ್ಯಾನಾಂ ವಿಸ್ತರೋ ದ್ವಿಗುಣೋ ಮಹಾನ್ ।
ಭ್ರಾಜತೇ ವೈ ಮಹಾರಾಜ ಚತುರ್ಧಾ ತು ಯಥಾದಿಶಮ್ ।
ತೇಷಾಂ ತಥೈವ ತಾಂ ಲಕ್ಷ್ಮೀಂ ಸರ್ವತ್ರ ಸಮುಪಾಸತೇ ॥೬॥

ಯಯಾತಿಯೊಬ್ಬನ ವಂಶವೇ ಇದರ ಎರಡರಷ್ಟು ದೊಡ್ಡ ವಿಸ್ತಾರವನ್ನು ಹೊಂದಿದೆ. ಮಹಾರಾಜನೇ! ಆ ವಂಶವು ನಾಲ್ಕು ಕವಲುಗಳಾಗಿ ಒಡೆದು ನಾಲ್ಕು ದಿಕ್ಕುಗಳಲ್ಲಿಯೂ ಹಬ್ಬಿದೆ. ರಾಜಕುಲಗಳು ಈ ಯಯಾತಿಕುಲಗಳ ಸಂಪತ್ತನ್ನೇ ಆಶ್ರಯಿಸಿಕೊಂಡಿವೆ.

ಇದಾನೀಮೇವ ವೈ ರಾಜನ್ ಜರಾಸಂಧೋ ಮಹೀಪತಿಃ ।
ಅಭಿಭೂಯ ಪ್ರಿಯಂ ತೇಷಾಂ ಕುಲಾನಾಮಭಿಷೇಚಿತಃ ॥೭॥

ರಾಜನೇ! ಈಗಷ್ಟೇ ಮಹೀಪತಿಯಾದ ಜರಾಸಂಧನು ಆ ಎಲ್ಲಾ ಕುಲಗಳನ್ನೂ ಮೆಟ್ಟಿ ಅವರಿಗೆ ಅಪ್ರಿಯವಾದರೂ ಸಹ ಎಲ್ಲ ಕುಲಗಳ ಒಡೆಯನಾಗಿ ಅಭಿಷೇಕಮಾಡಲ್ಪಟ್ಟಿದ್ದಾನೆ.

ಸ್ಥಿತೋ ಮೂರ್ಧ್ನಿ ನರೇಂದ್ರಾಣಾಮೋಜಸಾऽऽಕ್ರಮ್ಯ ಸರ್ವಶಃ ।
ಸೋऽವನೀಂ ಮಧ್ಯಮಾಂ ಭುಕ್ತ್ವಾ ಮಿಥೋ ಭೇದೇಷ್ವಮನ್ಯತ ॥೮॥

ಅವನು ತನ್ನ ಪರಾಕ್ರಮದಿಂದ ಎಲ್ಲರನ್ನೂ ತುಳಿದು ಎಲ್ಲ ರಾಜರ ತಲೆಯನ್ನು ಮೆಟ್ಟಿ ಮಧ್ಯಪ್ರದೇಶವನ್ನು ಆಶ್ರಯಿಸಿ ಉಳಿದ ರಾಜರಿಗೆ ಪರಸ್ಪರ ಭೇದವನ್ನು ಉಂಟುಮಾಡುತ್ತಾ ಬಲಿಷ್ಠನಾಗಿದ್ದಾನೆ.

ಚತುರಂಗಬಲೋ ರಾಜಾ ಯಸ್ಮಿನ್ನೇಕಶತಂ ಭವೇತ್ ।
ತತ್ಸಾಮ್ರಾಜ್ಯಂ ಜರಾಸಂಧಃ ಪ್ರಾಪ್ತೋ ಭವತಿ ಯೋನಿತಃ ॥೯॥

ಆ ರಾಜನಿಗೆ ಚತುರಂಗಬಲವಿದೆ. ನೂರೊಂದು ಜನ ಯಯಾತಿವಂಶದಲ್ಲಿ ಬಂದ ರಾಜರು ಅನುಭವಿಸಬೇಕಾಗಿದ್ದ ಸಾಮ್ರಾಜ್ಯವನ್ನು ಜರಾಸಂಧನು ತನ್ನ ಪರಾಕ್ರಮದಿಂದ ತಾನು ಹುಟ್ಟಿದಾಗಿನಿಂದಲೂ ಅನುಭವಿಸುತ್ತಿದ್ದಾನೆ.

ತಂ ತು ರಾಜಾ ಮಹಾರಾಜ ಸಂಶ್ರಿತಃ ಕಿಲ ಸರ್ವಶಃ ।
ರಾಜನ್ ಸೇನಾಪತಿರ್ಭಾತಃ ಶಿಶುಪಾಲಃ ಪ್ರತಾಪವಾನ್ ॥೧೦॥

ಮಹಾರಾಜನೇ! ಪ್ರತಾಪಶಾಲಿಯಾದ ಶಿಶುಪಾಲನೆಂಬುವನು ಜರಾಸಂಧನನ್ನು ಸರ್ವಪ್ರಕಾರಗಳಿಂದಲೂ ಆಶ್ರಯಿಸಿ ಅವನ ಸೇನಾಪತಿಯಾಗಿದ್ದಾನೆ.

ತಮೇವ ಚ ಮಹಾರಾಜ ಶಿಷ್ಯವತ್ ಸಮುಪಸ್ಥಿತಃ ।
ವಕ್ರಃ ಕರೂಶಾಧಿಪತಿರ್ಮಾಯಾಯೋಧೀ ಮಹಾಬಲಃ ॥೧೧॥

ಮಹಾರಾಜನೇ! ಮಾಯಾಯೋಧಿಯೂ ಮಹಾಬಲವುಳ್ಳವನೂ ಕುಟಿಲಸ್ವಭಾವದವನೂ ಆದ ಕರೂಶಾಧಿಪತಿಯಾದ ದಂತವಕ್ರನೂ ಶಿಷ್ಯನಂತೆ ಅವನನ್ನೇ ಆಶ್ರಯಿಸಿದ್ದಾನೆ.

ಅಪರೌ ಚ ಮಹಾತ್ಮಾನೌ ಬಲವೀರ್ಯಪರಿಶ್ರುತೌ ।
ಜರಾಸಂಧಂ ಸಮಾಶ್ರಿತ್ಯ ತಂ ಹಂಸಡಿಭಕಾವುಭೌ ॥೧೨॥

ತಮ್ಮ ಬಲವೀರ್ಯಗಳಿಂದ ಪ್ರಸಿದ್ಧರಾದ ಮಹಾಪರಾಕ್ರಮಿಗಳಾದ ಹಂಸ ಡಿಬಕ ಎಂಬ ಇನ್ನಿಬ್ಬರು ಜರಾಸಂಧನನ್ನು ಆಶ್ರಯಿಸಿದ್ದಾರೆ.

ದಂತವಕ್ರಃ ಕರೂಶಶ್ಚ ಕಲಭೋ ಮೇಘವಾಹನಃ ।
ಮೂರ್ಧ್ನಿ ದಿವ್ಯಂ ಮಣಿಂ ಬಿಭ್ರದ್ ಯಂ ತಂ ಭೂತಮಣಿಂ ವಿದುಃ ॥

ದಂತವಕ್ರ, ಕರೂಶ, ಕಲಭ, ತಲೆಯಮೇಲೆ ಮಣಿಯನ್ನು ಧರಿಸಿ ಭೂತಮಣಿಯೆಂದು ಕರೆಯಲ್ಪಡುವ ಮೇಘವಾಹನ ಇವರೆಲ್ಲರೂ ಜರಾಸಂಧನನ್ನು ಆಶ್ರಯಿಸಿದ್ದಾರೆ.

ಮುರಂ ಚ ಯವನಂ ಚೈವ ಶಾಸ್ತಿ ಯೋ ಯವನಾವುಭೌ ।
ಅಪರ್ಯಂತಬಲೋ ರಾಜಾ ಪ್ರತೀಚ್ಯಾಂ ವರುಣೋ ಯಥಾ ॥೧೪॥

ಆ ಮೇಘವಾಹನನು ಅಪರ್ಯಂತಬಲವುಳ್ಳವನಾಗಿ ಮುರ ಮತ್ತು ಯವನ ಎಂಬ ಇಬ್ಬರು ಯವನರನ್ನು ಸೋಲಿಸಿ ಪಶ್ಚಿಮದಿಕ್ಕಿನಲ್ಲಿ ವರುಣನಂತೆ ಮೆರೆಯುತ್ತಿದ್ದಾನೆ.

ಭಗದತ್ತೋ ಮಹಾರಾಜಃ ವೃದ್ಧಸ್ತವ ಪಿತುಃ ಸಖಾ।
ಸ ಚಾಪಿ ಪ್ರಣತಸ್ತಸ್ಯ ಕರ್ಮಣಾ ಚೈವ ಭಾರತ ।
ಸ್ನೇಹಬದ್ಧಸ್ತು ಪಿತೃವನ್ಮನಸಾ ಭಕ್ತಿಮಾಂಸ್ತ್ವಯಿ ॥೧೫॥

ಮಹಾರಾಜನೇ! ಭಾರತನೇ! ವೃದ್ಧನಾದ ಭಗದತ್ತಮಹಾರಾಜನು ನಿನ್ನ ತಂದೆಯಸ್ನೇಹಿತ. ಅವನೂ ಸಹ ಜರಾಸಂಧನಿಗೆ ವಶನಾಗಿ ಅವನ ಕೈಂಕರ್ಯವನ್ನು ಮಾಡುತ್ತಾನೆ. ಆದರೆ ಅವನು ಮನಸ್ಸಿನಲ್ಲಿ ಮಾತ್ರ ನಿನ್ನ ತಂದೆಯಲ್ಲಿ ಸ್ನೇಹವನ್ನು ಇಟ್ಟಿದ್ದಂತೆ ನಿನ್ನಲ್ಲಿಯೂ ಸ್ನೇಹವನ್ನು ಹೊಂದಿದ್ದಾನೆ.

ಪ್ರತೀಚ್ಯಾಂ ದಕ್ಷಿಣಸ್ಯಾಂ ಚ ಪೃಥಿವೀಂ ಪಾಂತಿ ಯೇ ನೃಪಾಃ ।
ತೇ ಚಾಪಿ ಪ್ರಣತಾಸ್ತಸ್ಯ ಮಹಾತ್ಮಾನೋ ಭಯಾರ್ದಿತಾಃ ॥೧೬॥

ದಕ್ಷಿಣದಿಕ್ಕಿನಲ್ಲಿಯೂ ಮತ್ತು ಪಶ್ಚಿಮದಿಕ್ಕಿನಲ್ಲಿಯೂ ಇರುವ ಭೂಮಿಯನ್ನುಪಾಲಿಸುವ ಮಹಾತ್ಮರಾದ ರಾಜರುಗಳೂ ಕೂಡ, ಜರಾಸಂಧನ ಭಯದಿಂದ ನಡುಗಿ ಅವನಿಗೆ ಪ್ರಣತರಾಗಿದ್ದಾರೆ.

ಮಾತುಲೋ ಭವತಃ ಶೂರಃ ಪುರುಜಿತ್ ಕುಂತಿವರ್ಧನಃ ।
ಸ ತೇ ಸನ್ನತಿಮಾನೇಕಃ ಸ್ನೇಹತಃ ಶತ್ರುತಾಪನಃ ॥೧೭॥

ಆದರೆ ನಿನ್ನ ಸೊದರಮಾವನಾದ ಶೂರನೂ ಕುಂತಿವರ್ಧನನೂ ಶತ್ರುಸಂಹಾರಕನೂ ಆದ ಪುರುಜಿತ್ ರಾಜನು ಮಾತ್ರ ನಿನ್ನಲ್ಲಿಸ್ನೇಹವನ್ನುಹೊಂದಿ ನಿನ್ನಲ್ಲಿನಿಷ್ಠೆಯನ್ನು ಹೊಂದಿದ್ದಾನೆ.

ಜರಾಸಂಧಂ ಗತಸ್ತ್ವೇವ ಪುರಾ ಯೋ ನ ಹತೋ ಮಯಾ ।
ಪುರುಷೋತ್ತಮವಿಜ್ಞಾತೋ ಯೋಽಸೌ ಚೇದಿಷು ದುರ್ಮತಿಃ ॥೧೮॥

ಆತ್ಮಾನಂ ಪ್ರತಿಜಾನೀತೇ ಲೋಕೇಽಸ್ಮಿನ್ ಪುರುಷೋತ್ತಮಮ್ ।
ಆದತ್ತೇ ಸತತಂ ಮೋಹಾದ್ ಯಃ ಸ ಚಿಹ್ನಂ ಚ ಮಾಮಕಮ್ ॥೧೯॥

ವಂಗಪುಂಡ್ರಕಿರಾತೇಷು ರಾಜಾ ಸಬಲವಾಹನಃ ।
ಪೌಂಡ್ರಕೋ ವಾಸುದೇವೇತಿ ಯೋಽಸೌ ಲೋಕೇಷು ವಿಶ್ರುತಃ ॥೨೦॥

ಹಿಂದೆ ನಾನು ಸಂಹರಿಸದೆ ಬಿಟ್ಟ ಚೇದಿರಾಜನಾದ ದುಷ್ಟನಾದ ಪೌಂಡ್ರಕನು ತಾನೇ ಪುರುಷೋತ್ತಮನೆಂದು ತಿಳಿದು ಜರಾಸಂಧನನ್ನು ಆಶ್ರಯಿಸಿದ್ದಾನೆ. ಅವನು ತಾನೇ ಪುರುಷೋತ್ತಮನೆಂದು ಯಾವಾಗಲೂ ಘೋಷಣೆಯನ್ನು ಮಾಡುತ್ತಾ

ಮೋಹದಿಂದ ನನ್ನ ಚಿಹ್ನೆಗಳಾದ ಶಂಖ ಚಕ್ರಗಳನ್ನು ಧರಿಸಿದ್ದಾನೆ. ಅವನು ಸೈನ್ಯದಿಂದಲೂ ರಥಗಳಿಂದಲೂ ಕೂಡಿದವನಾಗಿ ವಂಗ ಪುಂಡ್ರ ಕಿರಾತ ದೇಶಗಳನ್ನು ಆಳುತ್ತಾ ಪೌಂಡ್ರಕವಾಸುದೇವನೆಂದು ಲೋಕದಲ್ಲಿ ಖ್ಯಾತಿಯನ್ನು ಪಡೆದಿದ್ದಾನೆ.

ಚತುರ್ಬಾಹುರ್ಮಹಾರಾಜ ಭೋಗ ಇಂದ್ರಸಮೋ ಬಲೇ ।
ವಿದ್ಯಾಭುಜಬಲೋದ್ಯೋಗೈರಜಯತ್ ಪಾಂಡ್ಯಕೇಕಯಾನ್ ॥೨೧॥

ಮಹಾರಾಜನೇ! ಅವನು ನಾಲ್ಕು ಬಾಹುಗಳನ್ನು ಉಳ್ಳವನು. ಬಲದಲ್ಲಿ ಇಂದ್ರನಿಗೆ ಸಮಾನನಾಗಿದ್ದಾನೆ. ತನ್ನ ವಿದ್ಯೆ ಭುಜಬಲ ಮತ್ತು ಪ್ರಯತ್ನಗಳಿಂದ ಪಾಂಡ್ಯ ಕೇಕಯ ರಾಜರುಗಳನ್ನು ಗೆದ್ದಿದ್ದಾನೆ.

ಭ್ರಾತಾ ಯಸ್ಯಾಕೃತಿಃ ಶೂರೋ ಜಾಮದಗ್ನ್ಯಸಮೋ ಯುಧಿ ।
ಸ ಭಕ್ತೋ ಮಾಗಧಂ ರಾಜಾ ಭೀಷ್ಮಕಃ ಪರವೀರಹಾ ॥೨೨॥

ಪರಾಕ್ರಮದಲ್ಲಿ ಪರಶುರಾಮನಿಗೆ ಸಮನಾದ ಪರಸೈನ್ಯವನ್ನು ನಾಶಮಾಡುವ ಭೀಷ್ಮಕರಾಜನೂ ಸಹ ತನ್ನ ತಮ್ಮನಾದ ಆಕೃತಿಯೊಡನೆ ಜರಾಸಂಧನಿಗೆ ಶರಣಾಗತನಾಗಿದ್ದಾನೆ.

ಪ್ರಿಯಾಣ್ಯಾಚರತಃ ಪ್ರಹ್ವಾನ್ ಅಸ್ಮಾನ್ ಸಂಬಂಧಿನಸ್ತಥಾ ।
ಭಜತೋ ನ ಭಜತ್ಯಸ್ಮಾನ್ ಮಾ ಪ್ರಿಯೇಷು ವ್ಯವಸ್ಥಿತಃ ॥೨೩॥

ಭೀಷ್ಮಕನು ನಮ್ಮ ಕುಲದ ಹಿರಿಯನಾದ್ದರಿಂದ ನಾವು ಅವನಿಗೆ ಸಂಬಂಧಿಕರಾಗಿ ವಿನಯದಿಂದ ಅವನಿಗೆ ಪ್ರಿಯವನ್ನೇ ಆಚರಿಸುತ್ತಿದ್ದರೂ ಅವನು ಜರಾಸಂಧನಿಗೆ ಹೆದರಿ ನಮ್ಮಲ್ಲಿ ಅನುರಾಗವನ್ನು ಹೊಂದದೆ ನಮಗೆ ಪ್ರಿಯವಾದ ಯಾವುದೇ ಕಾರ್ಯವನ್ನು ಮಾಡುತ್ತಿಲ್ಲ.

ನ ಕುಲಂ ನ ಬಲಂ ರಾಜನ್ನಭಿಜ್ಞಾನಂ ತಥಾऽऽತ್ಮನಃ ।
ಪಶ್ಯಮಾನೋ ಯಶೋ ದೀಪ್ತಂ ಜರಾಸಂಧಮುಪಾಶ್ರಿತಃ ॥೨೪॥

ಭೀಷ್ಮಕನು ತನ್ನ ಕುಲವನ್ನಾಗಲೀ ತನ್ನ ಬಲವನ್ನಾಗಲೀ ಅಥವಾ ತನ್ನ ದೀಪ್ತವಾದ ಕೀರ್ತಿಯನ್ನಾಗಲೀ ಗಮನಿಸದೆ ಜರಾಸಂಧನಿಗೆ ಶರಣಾಗತನಾಗಿದ್ದಾನೆ.

ಉದೀಚ್ಯಾಶ್ಚೈವ ಭೋಜಾಶ್ಚ ಕುಲಾನ್ಯಷ್ಟಾದಶಾಭಿಭೋ ।
ಜರಾಸಂಧಭಯಾದೇವ ಪ್ರತೀಚೀಂ ದಿಶಮಾಶ್ರಿತಃ ॥೨೫॥

ಶತ್ರುಗಳನ್ನು ಸೋಲಿಸುವ ಸ್ವಭಾವವುಳ್ಳ ಧರ್ಮರಾಜನೇ ಉತ್ತರದಿಕ್ಕಿನಲ್ಲಿ ಇರುವ ಭೋಜವಂಶಕ್ಕೆ ಸೇರಿದ ಹದಿನೆಂಟು ಕುಲಗಳು ಜರಾಸಂಧನ ಭಯದಿಂದ ಉತ್ತರದಿಕ್ಕನ್ನು ಬಿಟ್ಟು ಪಶ್ಚಿಮದಿಕ್ಕಿನಲ್ಲಿ ನೆಲೆಸಿವೆ.

ಶೂರಸೇನಾ ಭದ್ರಕರಾ ಯೌಧಾಃ ಸಾಲ್ವಾ ಪಟಚ್ಚರಾಃ ।
ಸುಸ್ಥಿರಾಶ್ಮವಿಘಟ್ಟಾಶ್ಚ ಕುಣಿಂದಾಃ ಕುಂತಿಭಿಃ ಸಹ ॥೨೬॥

ಸಾಲ್ವೇಯಾನಾಂ ಚ ರಾಜಾऽऽಸೀತ್ ಸಾಮಾತ್ಯೋऽನುಚರೈಃ ಸಹ ।
ದಕ್ಷಿಣಾ ಯೇ ಚ ಪಂಚಾಲಾಃ ಪೂರ್ವಾಃ ಕುಂತಿಷು ಮಾಲವಾಃ ॥

ತ ಉತ್ತರಾಂ ದಿಶಂ ಚಾಪಿ ಪರಿತ್ಯಜ್ಯ ಭಯಾರ್ದಿತಾಃ ।
ಮತ್ಸ್ಯಾಃ ಸನ್ನ್ಯಸ್ತಪಾದಾಶ್ಚ ಪಶ್ಚಿಮಾಂ ದಿಶಮಾಸ್ಥಿತಾಃ ॥೨೭॥

ಶೂರಸೇನರೂ ಭದ್ರಕರರೂ ಯೌಧರೂ ಸಾಲ್ವರೂ ಪಟಚ್ಚಕರೂ ಸುಸ್ಥಿರರೂ. ಅಶ್ಮವಿಘಟ್ಟಕರರೂ ಕುಣಿಂಧರೂ ಕುಂತಿಗಳೂ ಸಾಲ್ವೆಯರಾಜ ಅವನ ಮಂತ್ರಿಗಳೂ ಮತ್ತು ಅನುಚರರೂ ದಕ್ಷಿಣಪಾಂಚಾಲರೂ ಪೂರ್ವಕುಂತಿಗಳೂ ಮಾಳವರೂ ಮತ್ಸ್ಯರೂ ಸನ್ಯಸ್ತಪಾದರೂ ಇವರೆಲ್ಲರೂ ಜರಾಸಂಧನ ಭಯದಿಂದ ನಡುಗಿ ಉತ್ತರದಿಕ್ಕನ್ನು ಬಿಟ್ಟು ಪಶ್ಚಿಮ ದಿಕ್ಕಿನಲ್ಲಿ ಬಂದು ನೆಲೆಸಿದ್ದಾರೆ.

ತಥೈವ ಸರ್ವಪಾಂಚಾಲಾ ಜರಾಸಂಧಭಯಾರ್ದಿತಾಃ ।
ಸ್ವರಾಷ್ಟ್ರಂ ಸಂಪರಿತ್ಯಜ್ಯ ವಿದ್ರುತಾಃ ಸರ್ವತೋದಿಶಮ್ ॥೨೮॥

ಹಾಗೆಯೇ ಎಲ್ಲ ಪಾಂಚಾಲರೂ ಜರಾಸಂಭ ಭಯದಿಂದ ಪೀಡಿತರಾಗಿ ತಮ್ಮ ರಾಷ್ಟ್ರವನ್ನು ಪರಿತ್ಯಜಿಸಿ ದಿಕ್ಕು ದಿಕ್ಕುಗಳಿಗೆ ಓಡಿಹೊಗಿದ್ದಾರೆ.

ಅಗ್ರತೋ ಹ್ಯಸ್ಯ ಪಾಂಚಾಲಾ ತತ್ಸೈನೀಕೇ ಮಹಾತ್ಮನಃ ।
ಅನಿರ್ಗತೇ ಸಾರಬಲೇ ಮಾಗಧೇಭ್ಯೋ ಗಿರಿವ್ರಜಾತ್ ॥೨೯॥

ಮಹಾಪ್ರಯತ್ನಶಾಲಿಯಾದ ಜರಾಸಂಧನ ಶ್ರೇಷ್ಠವಾದ ಸೈನ್ಯವು ಮಗಧದೇಶದಲ್ಲಿ ರಾಜದಾನಿಯಾದ ಗಿರಿವ್ರಜದಿಂದ ಹೊರಡುವುದಕ್ಕೆ ಮೊದಲೇ ಪಾಂಚಾಲರು ಓಡಿಹೋಗಿದ್ದಾರೆ.

ಉಗ್ರಸೇನಸುತಃ ಕಂಸಃ ಪುರಾ ನಿರ್ಮಥ್ಯ ಬಾಂಧವಾನ್ ।
ಬಾರ್ಹದ್ರಥಸುತೇ ದಿವ್ಯೇ ಉಪಾಗಚ್ಛದ್ ವೃಥಾಮತಿಃ ।
ಅಸ್ತಿಪ್ರಾಸ್ತೀ ಚ ತೇ ನಾಮ್ನೀ ಸಹದೇವಾನುಜೇऽಬಲೇ ॥೩೦॥

ಉಗ್ರಸೇನನ ಮಗನಾದ ಕಂಸನು ತನ್ನ ಎಲ್ಲಾ ಬಂಧುಗಳನ್ನೂ ಹಿಂಸಿಸಿ ದುಷ್ಟಬುದ್ಧಿಯುಳ್ಳವನಾಗಿ ಜರಾಸಂಧನ ಇಬ್ಬರು ಹೆಣ್ಣುಮಕ್ಕಳಾದ ಅಸ್ತಿ ಪ್ರಾಸ್ತಿ ಎಂಬ ಸುಂದರಿಯರನ್ನು ವಿವಾಹವಾದನು. ಅವರಿಬ್ಬರೂ ಜರಾಸಂಧನ ಮಗನಾದ ಸಹದೇವನ ಸಹೋದರಿಯರು.

ಬಲೇನ ತೇನ ಸ್ವಜ್ಞಾತೀನ್ ಅಭಿಭೂಯ ವೃಥಾಮತಿಃ ।
ಶ್ರೈಷ್ಠ್ಯಂ ಪ್ರಾಪ್ತಃ ಸ ತಸ್ಯಾಸೀದ್ ಇತಿ ಚಾಪನಯೋ ಮಹಾನ್ ॥೩೧॥

ದುಷ್ಟಬುದ್ಧಿಯುಳ್ಳವನಾದ ಕಂಸನು ಜರಾಸಂಧನ ಬಲದಿಂದ ತನ್ನ ಬಂಧುಗಳೆಲ್ಲರನ್ನೂ ಮೆಟ್ಟಿನಿಂತು ಶ್ರೇಷ್ಠತ್ವವನ್ನು ಪಡೆದು, ಜರಾಸಂಧನ ಪಕ್ಷವನ್ನು ಅಲಂಬಿಸಿದ್ದಾನೆ ಎಂಬುದು ಇನ್ನೊಂದು ದೊಡ್ಡ ಅನರ್ಥವಾಗಿದೆ.

ಭೋಜರಾಜನ್ಯವೃದ್ಧ್ಯರ್ಥಂ ಪೀಡ್ಯಮಾನೈರ್ದುರಾತ್ಮನಾ ।
ಜ್ಞಾತಿತ್ರಾಣಮಭೀಪ್ಸದ್ಭಿರಸ್ಮತ್ಸಂಭಾವನಾ ಕೃತಾ ।
ಸಂಕರ್ಷಣದ್ವಿತೀಯೇನ ಜ್ಞಾತಿತ್ರಾಣಂ ಮಯಾ ಕೃತಮ್ ॥೩೨॥

ಆ ದುರಾತ್ಮನಿಂದ ಪೀಡಿತರಾದ ಭೋಜವಂಶದ ಕಿರಿಯರು ಬಾಂಧವರ ರಕ್ಷಣೆಯನ್ನು ಬಯಸಿ ನನ್ನನ್ನು ಉಪಸತ್ತಿಮಾಡಿದಾಗ, ನಾನು ಬಲರಾಮನ ಜೊತೆಯಲ್ಲಿ ಹೋಗಿ ಕಂಸನನ್ನು ಕೊಂದು ಬಂಧುಗಳ ರಕ್ಷಣೆಯನ್ನು ಮಾಡಿದೆನು.

ದತ್ತ್ವಾऽಕ್ರೂರಾಯ ಸುತನುಮಾಹುಕಸ್ಯ ಸುತಾಂ ತದಾ ।
ಹತೌ ಕಂಸಸುನಾಮಾನೌ ಮಯಾ ರಾಮೇಣ ಚಾಪ್ಯುತ ॥೩೩॥

ಆಹುಕನ ಮಗಳಾದ ಸುತನು ಎಂಬ ಕನ್ಯೆಯನ್ನು ಅಕ್ರೂರನಿಗೆ ಕೊಟ್ಟು ವಿವಾಹವನ್ನು ಮಾಡಿ ನಾನು ಮತ್ತು ಬಲರಾಮನು ಹೊಗಿ ಕಂಸನನ್ನು (ಮತ್ತು ಸುನಾಮನನ್ನು) ಕೊಂದೆವು.

ಹತ್ವಾ ಕಂಸಂ ತಥೈವಾಜೌ ಜರಾಸಂಧಸ್ಯ ಬಿಭ್ಯತಃ ।
ಮಯಾ ರಾಮೇಣ ಚಾನ್ಯತ್ರ ಜ್ಞಾತಯಃ ಪರಿಪಾಲಿತಾಃ ॥೩೪॥

ಹಾಗೆ ಕಂಸನನ್ನು ಕೊಂದು ಯುದ್ಧದಲ್ಲಿ ಜರಾಸಂಧನಿಗೆ ಹೆದರಿದ ನನ್ನ ಬಂಧುಗಳನ್ನು ನಾನು ಮತ್ತು ಬಲರಾಮನು ಬೇರೆಯ ಸ್ಥಳದಲ್ಲಿ ರಕ್ಷಣೆಯನ್ನು ಮಾಡಿದೆವು.

ಭಯೇ ತು ಸಮುಪಕ್ರಾಂತೇ ಜರಾಸಂಧೇ ಸಮುದ್ಯತೇ ।
ಮಂತ್ರೋಽಯಂ ಮಂತ್ರಿತೋ ರಾಜನ್ ಕುಲೈರಷ್ಟಾದಶಾವರೈಃ ॥೩೫॥

ರಾಜನೇ! ಜರಾಸಂಧನು ಹೀಗೆ ಬಲದಿಂದ ವಿಜೃಂಭಿಸಿ, ಉಳಿದೆಲ್ಲರಿಗೂ ಭಯವನ್ನು ಉಂಟುಮಾಡಿದಾಗ, ಹದಿನೆಂಟಕ್ಕಿಂತಲೂ ಹೆಚ್ಚಾದ ಕುಲಗಳ ರಾಜರುಗಳು ಹೀಗೆ ಮಂತ್ರಾಲೋಚನೆಯನ್ನು ಮಾಡಿದರು.

ಅನಾರಮಂತೋ ನಿಘ್ನಂತೋ ಮಹಾಸ್ತ್ರೈಃ ಶತ್ರುಘಾತಿಭಿಃ ।
ನ ಹನ್ಯಾಮ ಬಲಂ ತಸ್ಯ ತ್ರಿಭಿರ್ವರ್ಷಶತೈರ್ವಯಮ್ ॥೩೬॥

ನಾವೆಲ್ಲರೂ ಸೇರಿ ತನ್ನ ಶಕ್ತಿಯಿಂದ ನೂರು ಜನರನ್ನು ಒಂದೇ ಬಾರಿಗೆ ಸಂಹರಿಸುವ ಮಹಾಸ್ತ್ರಗಳಿಂದ ಸತತವಾಗಿ ಯುದ್ಧದಲ್ಲಿ ಸಂಹಾರಮಾಡಿದರೂ ಮುನ್ನೂರುವರ್ಷಗಳು ಯುದ್ಧಮಾಡಿದರೂ ನಾವು ಜರಾಸಂಧನ ಸೈನ್ಯವನ್ನು ನಾಶಮಾಡಲಾರೆವು. (ಎಂದು ಆಲೋಚನೆಮಾಡಿದರು.)

ತಸ್ಯಾಪ್ಯಮರಸಂಕಾಶೌ ಬಲೇನ ಬಲಿನಾಂ ವರೌ ।
ನಾಮಭ್ಯಾಂ ಹಂಸಡಿಭಕಾವಿತ್ಯಾಸ್ತಾಂ ಯೋಧಸತ್ತಮೌ ॥೩೭॥

ಆ ಜರಾಸಂಧನ ಬಳಿಯಲ್ಲಿ ಬಲಿಷ್ಠರಾದ ಬಲದಲ್ಲಿ ದೇವತೆಗಳಿಗೆ ಸರಿಸಮಾನರಾದ ಹಂಸ ಡಿಬಕರೆಂಬ ಇನ್ನಿಬ್ಬರು ಶ್ರೇಷ್ಠಯೋಧರಿದ್ದಾರೆ.

ತಾವುಭೌ ಸಹಿತೌ ವೀರೌ ಜರಾಸಂಧಶ್ಚ ವೀರ್ಯವಾನ್ ।
ತ್ರಯಸ್ತ್ರಯಾಣಾಂ ಲೋಕಾನಾಂ ಪರ್ಯಾಪ್ತಾ ಇತಿ ಮೇ ಮತಿಃ ॥೩೮॥

ಅವರಿಬ್ಬರೂ ಮತ್ತು ಪರಾಕ್ರಮಶಾಲಿಯಾದ ಜರಾಸಂಧ ಈ ಮೂವರು ಸೇರಿ ಮೂರುಲೋಕಗಳನ್ನೂ ಗೆಲ್ಲಲು ಸಮರ್ಥರಾಗುತ್ತಾರೆ ಎಂದು ನನ್ನ ಅಭಿಪ್ರಾಯ.

ನಹಿ ಕೇವಲಮಸ್ಮಾಕಂ ಯಾವಂತೋಽನ್ಯೇಽಪಿ ಪಾರ್ಥಿವಾಃ ।
ತಥೈವ ತೇಷಾಮಾಸೀಚ್ಚ ಬುದ್ಧಿರ್ಬುದ್ಧಿಮತಾಂ ವರ ॥೩೯॥

ಮೇಧಾವಿಗಳಲ್ಲಿ ಶ್ರೇಷ್ಠನೇ! ಇದು ಕೇವಲ ನಮ್ಮ ಅಭಿಪ್ರಾಯವಲ್ಲ. ಉಳಿದ ಎಷ್ಟು ಜನ ರಾಜರಿದ್ದಾರೋ ಅವರೆಲ್ಲರಿಗೂ ಇದೇ ಅಭಿಪ್ರಾಯವಿದೆ.

ಅಷ್ಟಾದಶ ಮಯಾ ತಸ್ಯ ಸಂಗ್ರಾಮಾ ರೋಮಹರ್ಷಣಾಃ ।
ದತ್ತಾ ನಚ ಹತೋ ರಾಜನ್ ಜರಾಸಂಧೋ ಮಹಾಬಲಃ ॥೪೦॥

ರಾಜನೇ! ನಾನು ಹದಿನೆಂಟುಬಾರಿ ಅವನ ಜೊತೆಯಲ್ಲಿ ರೋಮಾಂಚಕಾರಿಯಾದ ಯುದ್ಧವನ್ನು ಮಾಡಿದೆನು. ಆದರೆ ಮಹಾಬಲನಾದ ಜರಾಸಂಧನು ನನ್ನಿಂದ ಕೊಲ್ಲಲ್ಪಡಲಿಲ್ಲ.

ಅಥ ಹಂಸ ಇತಿ ಖ್ಯಾತ ಆಸೀತ್ ಕಶ್ಚಿನ್ನರಾಧಿಪಃ ।
ನರೋಽನ್ಯಃ ಸ ಹತಸ್ತಸ್ಯ ಸಂಗ್ರಾಮೇಽಷ್ಟಾದಶಾವೃತಃ ॥೪೧॥

ಜರಾಸಂಧನ ಬಳಿಯಲ್ಲಿ ಡಿಬಕನ ಅಣ್ಣನಲ್ಲದೆ ಹಂಸ ಎಂಬ ಹೆಸರಿನ ಇನ್ನೊಬ್ಬ ರಾಜನಿದ್ದನು. (ತಾತ್ಪರ್ಯನಿರ್ಣಯದಲ್ಲಿ ಇವನ ಉಲ್ಲೇಖವಿಲ್ಲ. ಆದರೆ ಹರಿಕಥಾಮೃತಸಾರದಲ್ಲಿ ಇಬ್ಬರು ಹಂಸರ ಉಲ್ಲೇಖವಿದೆ. ೨೦ನೇ ಸಂಧಿ ೧೩-೧೭ನೇ ಶ್ಲೋಕಗಳು) ಹದಿನೆಂಟು ಅಕ್ಷೋಹಿಣಿ ಸೈನ್ಯದಿಂದ ಯುದ್ಧಕ್ಕೆ ಬಂದ ಅವನನ್ನು ನಾನು ಸಂಹರಿಸಿದೆನು.

ಹಂಸೋ ಹತ ಇತಿ ಪ್ರೋಕ್ತಮಥ ಕೇನಾಪಿ ಭಾರತ ।
ತಚ್ಛ್ರುತ್ವಾ ಡಿಭಕೋ ರಾಜನ್ ಯಮುನಾಂಭಸ್ಯಮಜ್ಜತ ॥೪೨॥

ಭಾರತನೇ! ಹಂಸನು ಹತನಾದನು ಎಂಬ ಮಾತನ್ನು ಯಾರೋ ಹೇಳಿದುದನ್ನು ಕೇಳಿ, ತನ್ನ ಅಣ್ಣನಾದ ಹಂಸನು ಮೃತನಾದನು ಎಂದು ತಿಳಿದು ಡಿಬಕನು ಯಮುನೆಯ ನೀರಿನಲ್ಲಿ ಮುಳುಗಿದನು.

ವಿನಾ ಹಂಸೇನ ಲೋಕೇಽಸ್ಮಿನ್ ನಾಹಂ ಜೀವಿತುಮುತ್ಸಹೇ ।
ಇತ್ಯೇತಾಂ ಮತಿಮಾಸ್ಥಾಯ ಡಿಭಕೋ ನಿಧನಂ ಗತಃ ॥೪೩॥

ಅಣ್ಣನಾದ ಹಂಸನನ್ನು ಬಿಟ್ಟು ನಾನು ಈ ಲೋಕದಲ್ಲಿ ಬದುಕಿರಲಾರೆ ಎಂಬ ಈ ಅಭಿಪ್ರಾಯವನ್ನು ತಳೆದು ಡಿಬಕನು ಯಮುನಾನದಿಯ ನೀರಿನಲ್ಲಿ ಮರಣಹೊಂದಿದನು.

ತಥಾ ತು ನಿಹತಂ ಶ್ರುತ್ವಾ ಹಂಸಃ ಪರಪುರಂಜಯಃ ।
ಪ್ರಪೇದೇ ಯಮುನಾಮೇವ ಸೋಽಪಿ ತಸ್ಯಾಂ ನ್ಯಮಜ್ಜತ ॥೪೪॥

ಶತ್ರುಗಳನ್ನು ಜಯಿಸುವ ಸಾಮರ್ಥ್ಯವುಳ್ಳ ಹಂಸನು ತನ್ನ ತಮ್ಮನಾದ ಡಿಬಕನು ಹಾಗೆ ಮೃತನಾದನೆಂಬ ವಾರ್ತೆಯನ್ನು ಕೇಳಿ ತಾನೂ ಸಹ ಯಮುನಾ ನದಿಗೆ ಬಂದು ಅಲ್ಲಿ ಮುಳುಗಿದನು.

ತತೋ ರಾಜಾ ಜರಾಸಂಧಃ ಶ್ರುತ್ವಾ ತೌ ನಿಧನಂ ಗತೌ ।
ಸ್ವಪುರಂ ಶೂರಸೇನೇಭ್ಯಃ ಪ್ರಯಯೌ ಭರತರ್ಷಭ ॥೪೫॥

ಅನಂತರ ಜರಾಸಂಧನು ತನ್ನ ಇಬ್ಬರು ಬೆಂಬಲಿಗರು ನಿಧನರಾದ ವಾರ್ತೆಯನ್ನು ತಿಳಿದು ಶೂರಸೇನ ದೇಶವನ್ನು ಬಿಟ್ಟು ತನ್ನ ಮಗಧದೇಶಕ್ಕೆ ಹಿಂದಿರುಗಿದನು.

ತತೋ ವಯಮಮಿತ್ರಘ್ನೇ ತಸ್ಮಿನ್ ಪ್ರತಿಗತೇ ನೃಪೇ ।
ಪುನರಾನಂದಿನಃ ಸರ್ವೇ ಮಧುರಾಯಾಂ ವಸಾಮಹೇ ॥೪೬॥

ಭರತರ್ಷಭನೇ! ಶತ್ರುಸಂಹಾರಕನಾದ ಜರಾಸಂಧನು ಹಿಂದಿರುಗಿದ ವಾರ್ತೆಯನ್ನು ಕೇಳಿದ ನಂತರ ನಾವು ಮಧುರಾಪಟ್ಟಣದಲ್ಲಿ ನಿಟ್ಟುಸಿರುಬಿಟ್ಟು ಸುಖವಾಗಿ ವಾಸಮಾಡುತ್ತಿದ್ದೇವೆ.

ಯದಾ ತು ಪುನರೇವೈನಂ ರಾಜನ್ ರಾಜೀವಲೋಚನಾ ।
ಕಂಸಭಾರ್ಯಾ ಜರಾಸಂಧಂ ದುಹಿತಾ ಮಾಗಧಂ ನೃಪಮ್ ॥೪೭॥

ಚೋದಯತ್ಯೇವ ರಾಜೇಂದ್ರ ಪತಿವ್ಯಸನದುಃಖಿತಾ ।
ಪತಿಘ್ನಂ ಮೇ ಜಹೀತ್ಯೇವಂ ಪುನಃ ಪುನರರಿಂದಮ ॥೪೮॥

ಅರಿಂದಮನೇ! ಆದರೆ ಕಂಸಭಾರ್ಯೆಯರಾದ ಅಸ್ತಿಪ್ರಾಪ್ತಿಯರು ಮತ್ತೆ ಮತ್ತೆ ಮಗಧರಾಜನಾದ ಜರಾಸಂಧನನ್ನು ಸಮೀಪಿಸಿ ಪತಿಯಮರಣದಿಂದ ದುಃಖಿತರಾಗಿ ನಮ್ಮ ಪತಿಯನ್ನು ಕೊಂದವನನ್ನು ಸಂಹಾರಮಾಡು ಎಂದು ಪುನಃ ಪುನಃ ಒತ್ತಾಯಮಾಡುತ್ತಿದ್ದಾರೆ.

ತತೋ ವಯಂ ಕುರುಶ್ರೇಷ್ಠ ತಂ ಮಂತ್ರಂ ಪೂರ್ವಮಂತ್ರಿತಮ್ ।
ಸಂಸ್ಮರಂತೋ ವಿಮನಸೋ ವ್ಯಪಯಾತಾಶ್ಚ ಸರ್ವಶಃ ।
ಪೃಥಕ್ತ್ವೇನ ದ್ರುತಾ ರಾಜನ್ ಸಂಕ್ಷಿಪ್ಯ ವಿಪುಲಾಂ ಶ್ರಿಯಮ್ ॥೪೯॥

ಕುರುಶ್ರೇಷ್ಠನೇ! ಆ ಕಾರಣದಿಂದ ನಾನು ಮೊದಲು ಮಾಡಿದ ಮಂತ್ರಾಲೋಚನೆಯನ್ನು ಸ್ಮರಿಸಿ ಮನಸ್ಸಿಲ್ಲದೆಯೇ ಮಧುರಾಪಟ್ಟಣದಿಂದ ಸಂಪತ್ತಿನ ಅಲ್ಪಭಾಗವನ್ನು ತೆಗೆದುಕೊಂಡು ಓಡಿ ಹೋದೆವು.

ಅಪಯಾತಾ ಭಯಾತ್ ತಸ್ಯ ಸಧನಜ್ಞಾತಿಬಾಂಧವಾಃ ।
ಇತಿ ಸಂಚಿಂತ್ಯ ಸರ್ವೇ ಸ್ಮ ಪ್ರತೀಚೀಂ ದಿಶಮಾಶ್ರಿತಾಃ ॥೫೦॥

ಅವನ ಭಯದಿಂದ ನಾವು ಅಲ್ಪ ಧನ ಮತ್ತು ದಾಯಾದಿಗಳೊಡನೆ ಅಲ್ಲಿಂದ ಓಡಿಹೋಗಿ ಎಲ್ಲರೂ ಪಶ್ಚಿಮ ದಿಕ್ಕನ್ನು ಆಶ್ರಯಿಸಿದ್ದೇವೆ.

ಕುಶಸ್ಥಲೀಂ ಪುರೀಂ ಶೂನ್ಯಾಂ ರೈವತೇನ ನಿವೇಶಿತಾಮ್ ।
ಪುರಂ ನಿವೇಶ್ಯ ನಂದಾಮೋ ಜರಾಸಂಧಭಯಾರ್ದಿತಾಃ ॥೫೧॥

ಜರಾಸಂಧನ ಭಯದಿಂದ ಪೀಡಿತರಾದ ನಾವು ಹಿಂದೆ ರೈವತರಾಜನು ನಿರ್ಮಿಸಿ ಅನಂತರ ಶೂನ್ಯವಾಗಿದ್ದ ಕುಶಸ್ಥಲಿ ಪಟ್ಟಣವನ್ನು ಪುನರುಜ್ಜೀವನಗೊಳಿಸಿ ಪ್ರವೇಶಿಸಿ ಸುಖವಾಗಿದ್ದೇವೆ.

ತಥೈವ ದುರ್ಗಸಂಸ್ಕಾರಾನ್ ದೇವೈರಪಿ ದುರಾಸದಾನ್ ।
ಸ್ತ್ರಿಯೋಽಪಿ ಯಸ್ಯಾಂ ಯುಧ್ಯೇಯುಃ ಕಿಂಪುನರ್ವೃಷ್ಣಿಪುಂಗವಾಃ ॥೫೨॥

ಆ ದ್ವಾರಕಾಪಟ್ಟಣಕ್ಕೆ ದೇವತೆಗಳೂ ಪ್ರವೇಶಿಸಲಾರದಂತಹ ದುರ್ಗಸಂಸ್ಕಾರಗಳನ್ನು ಮಾಡಿದ್ದೇವೆ. ಅಲ್ಲಿ ವಾಸಿಸುವ ಸ್ತ್ರೀಯರೂ ಸಹ ಯುದ್ಧವನ್ನು ಮಾಡುವುದರಲ್ಲಿ ಕುಶಲರು. ಇನ್ನು ವೃಷ್ಣಿಪುಂಗವರ ಬಗ್ಗೆ ಹೇಳತಕ್ಕದೇನಿದೆ?

ತೇ ವಯಂ ಸಜನಾ ರಾಜನ್ ನಿವಸಾಮೋಽಕುತೋಭಯಾಃ ।
ಆಲೋಕ್ಯ ಗಿರಿಮುಖ್ಯಂ ತಮ್ ಅಲಭಾಮ ಸುಖಂ ನೃಪ ॥೫೩॥

ರಾಜನೇ! ಅಂತಹ ನಾವು ದ್ವಾರಕಾಪಟ್ಟಣದ ಮಧ್ಯದಲ್ಲಿರುವ ಇರುವ ಶ್ರೇಷ್ಠವಾದ ಪರ್ವತವನ್ನು ನೋಡುತ್ತಾ ಜರಾಸಂಧನ ಭಯವಿಲ್ಲದೆ ಸುಖವನ್ನು ಹೊಂದಿ ಬಾಳುತ್ತಿದ್ದೇವೆ.

ಮಾಧವಾ ಮಾಧವೀತೀರ್ಥಮಾಸಾದ್ಯ ಸುಖಿನೋಽಭವನ್ ।
ಏವಂ ವಯಂ ಜರಾಸಂಧಾದಾದಿತಃ ಕೃತಕಿಲ್ಬಿಷಾಃ ॥೫೪॥

ಸಾಮರ್ಥ್ಯವಂತಃ ಸಂಬಂಧಾದ್ ಭವಂತಂ ಸಮುಪಾಶ್ರಿತಾಃ ।
ತ್ರಿಯೋಜನಾಯತಂ ಸದ್ಮ ವಿಸ್ತೀರ್ಣಂ ಯೋಜನಾಯುತಮ್ ॥೫೫॥

ಯೋಜನಾಂತೇ ಶತದ್ವಾರಂ ವ್ಯತ್ಯಮಕ್ರಮತೋರಣಮ್ ।
ಅಷ್ಟಾದಶಾಕುಲೈರ್ನದ್ಧಂ ಕ್ಷತ್ರಿಯೈರ್ಯುದ್ಧದುರ್ಮದೈಃ ॥೫೬॥

ಮಧು ಕುಲಕ್ಕೆ ಸೇರಿದವರೆಲ್ಲರೂ ಅಲ್ಲಿಯೇ ಮಾಧವೀತೀರ್ಥದ ಬಳಿ ವಾಸಿಸುತ್ತಾ ಸುಖವಾಗಿದ್ದಾರೆ. ಹೀಗೆ ಮೊದಲಿಂದಲೂ ಜರಾಸಂಧನಿಗೆ ವಿರೋಧವನ್ನು ಮಾಡಿದ ನಾವು ಸಂಬಂಧ ಮತ್ತು ಸಾಮರ್ಥ್ಯ ಇವೆರಡನ್ನು ಗಮನಿಸಿ ನಿನ್ನನ್ನು ಆಶ್ರಯಿಸಿದ್ದೇವೆ. ನಾವಿರುವ ಮನೆಯು ಮೂರು ಯೋಜನ ಉದ್ದವೂ ಮತ್ತು ಒಂದು ಯೋಜನ ಅಗಲವೂ ಆಗಿದೆ. ಮೂರುಯೋಜದ ಉದ್ದದಲ್ಲಿ ಒಂದೊಂದು ಯೋಜನದ ನಂತರ ಮೂರು ದ್ವಾರಗಳು, ಆ ದ್ವಾರಗಳಿಗೆ ಕ್ರಮ ಮತ್ತು ವ್ಯತ್ಕ್ರಮಗಳಿಂದ ತೋರಣಗಳು ಇವೆ. ಹದಿನೆಂಟುಕುಲಗಳಿಗೆ ಸೇರಿದ ಯುದ್ಧದುರ್ಮದರಾದ ಕ್ಷತ್ರಿಯರಿಂದ ಆ ನಿವಾಸಗಳೆಲ್ಲವೂ ತುಂಬಲ್ಪಟ್ಟಿವೆ.

ಅಷ್ಟಾದಶ ಸಹಸ್ರಾಣಿ ಭ್ರಾತರಃ ಸಂತಿ ನಃ ಕುಲೇ ।
ಆಹುಕಸ್ಯ ಶತಂ ಪುತ್ರಾ ಏಕೈಕಂ ತ್ರಿದಶೋಪಮಾಃ ॥೫೭॥

ನಮ್ಮ ಕುಲದಲ್ಲಿ ಹದಿನೆಂಟುಸಾವಿರ ಅಣ್ಣ ತಮ್ಮಂದಿರಿದ್ದಾರೆ. ಆಹುಕನಿಗೆ ಒಬ್ಬೊಬ್ಬನೂ ದೇವತೆಯನ್ನು ಹೋಲುವ ನೂರು ಪುತ್ರರಿದ್ದಾರೆ.

ಚಾರುದೇಷ್ಣಃ ಸಹ ಭ್ರಾತ್ರಾ ವಜ್ರದೇವೋಽಥ ಸಾತ್ಯಕಿಃ ।
ಅಹಂ ಚ ರೌಹಿಣೇಯಶ್ಚ ಸಾಂಬಃ ಶೌರ್ಯಸಮಾ ಯುಧಿ ।
ಏವಮೇತೇ ರಥಾಃ ಸಪ್ತ ರಾಜನ್ನನ್ಯಾನ್ ನಿಬೋಧ ಮೇ ॥೫೮॥

ರಾಜನೇ! ಚಾರುದೇಷ್ಣ ಅವನ ತಮ್ಮ ವಜ್ರದೇವ ಸಾತ್ಯಕಿ ನಾನು (ಕೃಷ್ಣ), ಬಲರಾಮ ಮತ್ತು ಸಾಂಬ ಈ ಏಳುಜನರು ಯುದ್ಧದಲ್ಲಿ ಸಮಾನವಾದ ಪರಾಕ್ರಮವುಳ್ಳವರಾಗಿದ್ದೇವೆ. ಹಾಗೆಯೇ ರಥವಿದ್ಯೆಯಲ್ಲಿಯೂ ಸಮರ್ಥರಾಗಿದ್ದೇವೆ. ಉಳಿದವರನ್ನು ಹೇಳುತ್ತೇನೆ ಕೇಳು.

ಕೃತವರ್ಮಾಪ್ಯನಾಧೃಷ್ಟಿಃ ಶಮೀಕಃ ಸಮಿತಿಂಜಯಃ ।
ಕಂಸಃ ಶಂಕುರ್ನಿರಾದಶ್ಚ ಸಪ್ತ ಚೈತೇ ಮಹಾರಥಾಃ ॥೫೯॥

ಕೃತವರ್ಮ ಅನಾಧೃಷ್ಟಿ ಶಮೀಕ ಸಮಿತಿಂಜಯ ಕಂಸ ಶಂಕು. ನಿರಾದ ಈ ಏಳು ಮಹಾರಥರಿದ್ದಾರೆ.

ಪ್ರದ್ಯುಮ್ನಶ್ಚಾನಿರುದ್ಧಶ್ಚ ಭಾನುರಕ್ರೂರಸಾರಣೌ ।
ನಿಶಠಶ್ಚ ಗದಶ್ಚೈವ ಸಪ್ತ ಚೈತೇ ಮಹಾರಥಾಃ ॥೬೦॥

ಪ್ರದ್ಯುಮ್ನ ಅನಿರುದ್ಧ ಭಾನು ಅಕ್ರೂರ ಸಾರಣ ನಿಶಠ ಮತ್ತು ಗದ ಈ ಏಳು ಜನರು ಮಹಾರಥರಿದ್ದಾರೆ.

ವಿತದ್ರುರ್ಧುಲ್ಲಿಬಭ್ರೂ ಚ ಉದ್ಧವೋಽಥ ವಿಡೂರಥಃ ।
ವಸುದೇವೋಗ್ರಸೇನೌ ಚ ಸಪ್ತೈತೇ ಮಂತ್ರಿಪುಂಗವಾಃ ॥೬೧॥

ವಿತದ್ರು ಧುಲ್ಲಿ ಬಭ್ರು ಉದ್ಧವ ವಿಡೂರಥ ವಸುದೇವ ಮತ್ತು ಉಗ್ರಸೇನ ಈ ಏಳು ಮಂದಿ ಮಂತ್ರಿ ಶ್ರೇಷ್ಠರಿದ್ದಾರೆ.

ಪ್ರಸೇನಜಿಚ್ಚ ಯಮೌ ರಾಜರಾಜಗುಣಾನ್ವಿತಃ ।
ಸ್ಯಮಂತಕೋ ಮಣಿರ್ಯಸ್ಯ ರುಗ್ಮಂ ನಿಸ್ರವತೇ ಬಹು ॥೬೨॥

ಪ್ರಸೇನ ಮತ್ತು ಸತ್ಯಜಿತ್ ಎಂಬ ಯಮಳರಿದ್ದಾರೆ. ಸತ್ಯಜಿತನು ರಾಜರಾಜಗುಣಗಳಿಂದ ಕೂಡಿದವನಾಗಿದ್ದಾನೆ. ಅವನ ಬಳಿ ಇರುವ ಸ್ಯಮಂತಕಮಣಿಯು ನಿತ್ಯವೂ ಸುವರ್ಣವನ್ನು ಸುರಿಸುತ್ತದೆ.

ಪುತ್ರಾಶ್ಚಾಂಧಕಭೋಜಸ್ಯ ವೃದ್ಧೋ ರಾಜಾ ಚ ತೇ ದಶ ।
ಲೋಕಸಂಹನನಾ ವೀರಾ ವೀರ್ಯವಂತೋ ಮಹಾಬಲಾಃ ।
ಸಂಸ್ಮರಂತೋ ಮಧ್ಯದೇಶಂ ವೃಷ್ಣಿವೀರಾ ಗತಜ್ವರಾಃ ॥೬೩॥

ಅಂಧಕವಂಶದ ಅವಾಂತರವಂಶವಾದ, ಭೋಜವಂಶದ ವೃದ್ಧನಾದ ರಾಜ ಉಗ್ರಸೇನ ಮತ್ತು ಅವನ ಮಕ್ಕಳು ಸೇರಿ ಹತ್ತು ಜನರು ಇದ್ದಾರೆ. ಅವರೆಲ್ಲರೂ ಪರಾಕ್ರಮಶಾಲಿಗಳು ಮಹಾಬಲಿಷ್ಠರು ಮತ್ತು ಕಾಂತಿಯುಳ್ಳವರು ವೃಷ್ಣಿವೀರರಾದ ಇವರು ಮಗಧದೇಶದ ಮಧ್ಯದೇಶವನ್ನು ಸ್ಮರಿಸಿಕೊಂಡು ದೂರದಲ್ಲಿರುವುದರಿಂದ ಯಾವ ಮಾನಸ ಜ್ವರವೂ ಇಲ್ಲದೆ ವಾಸಿಸುತ್ತಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಪಂಚದಶೋऽಧ್ಯಾಯಃ ॥
॥ ಮಂತ್ರಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹದಿನೈದನೆಯ ಅಧ್ಯಾಯವು ಮುಗಿಯಿತು.

★★★★★

ಹದಿನಾರನೆಯ ಅಧ್ಯಾಯ

(ಕೃಷ್ಣನಿಂದ ರಾಜಸೂಯಯಾಗಕ್ಕೆ ಸಂಭವಿಸಬಹುದಾದ ವಿಘ್ನಗಳ ನಿರೂಪಣೆ)

ವಾಸುದೇವಃ

ಪಾಂಡವೈಶ್ಚಾಪಿ ಸತತಂ ನಾಥವಂತೋ ವಯಂ ನೃಪ ।
ಸರ್ವಸಂಪದ್ಭಿರ್ನೈಃ ಸಿದ್ಧೇ ತಸ್ಮಿನ್ನೇವ ವ್ಯವಸ್ಥಿತೇ ॥
ಕ್ಷತ್ರೇ ಸಮ್ರಾಜಮಾತ್ಮಾನಂ ಕರ್ತುಮರ್ಹಸಿ ಭಾರತ ॥೧॥

ಭಾರತರಾಜನೇ! ಪಾಂಡವರೆಂಬ ನಾಥರನ್ನು ಪಡೆದು ನಾವು ಯಾವಾಗಲೂ ಸನಾಥರಾಗಿದ್ದೇವೆ. ಕ್ಷತ್ರಿಯ ಸಮಾಜವೆಲ್ಲವೂ ಸಂಪದ್ಭರಿತವಾಗಿರುವಾಗ ನೀನು ನಿನ್ನನ್ನು ಸಮ್ರಾಜನನ್ನಾಗಿ ಮಾಡಿಕೊಳ್ಳಲು ಅರ್ಹನಾಗಿರುತ್ತೀಯೆ.

ದುರ್ಯೋಧನಂ ಶಾಂತನವಂ ದ್ರೋಣಂ ದ್ರೌಣಾಯನಿಂ ಕೃಪಮ್ ।
ಕರ್ಣಂ ಚ ಶಿಶುಪಾಲಂ ಚ ರುಗ್ಮಿಣಂ ಚ ಧನುರ್ಧರಮ್ ॥೨॥

ಏಕಲವ್ಯಂ ದ್ರುಮಂ ಶ್ವೇತಂ ಶಲ್ಯಂ ಶಕುನಿಮೇವ ಚ ।
ಏತಾನಜಿತ್ವಾ ಸಂಗ್ರಾಮೇ ಕಥಂ ಶಕ್ಯೋಽಸಿ ತಂ ಕ್ರತುಮ್ ॥೩॥

ದುರ್ಯೋಧನನನ್ನು ಭೀಷ್ಮನನ್ನು ದ್ರೋಣರನ್ನು ಅಶ್ವತ್ಥಾಮರನ್ನು ಕೃಪರನ್ನು ಕರ್ಣನನ್ನು ಶಿಶುಪಾಲನನ್ನು ಧನುರ್ಧಾರಿಯಾದ ರುಗ್ಮಿಯನ್ನು ಏಕಲವ್ಯನನ್ನು ದ್ರುಮನನ್ನು ಶ್ವೇತನನ್ನು ಶಕುನಿಯನ್ನು ಯುದ್ಧದಲ್ಲಿ ಗೆಲ್ಲದೆ ನೀನು ಹೇಗೆ ರಾಜಸೂಯವನ್ನು ಮಾಡಲು ಸಾಧ್ಯ.

ಅಥ ತೇ ಗೌರವೇಣೈವ ನ ಯೋತ್ಸ್ಯಂತಿ ನರಾಧಿಪಾಃ ।
ಏಕಸ್ತತ್ರ ಬಲೋನ್ಮತ್ತಃ ಕರ್ಣೋ ವೈಕರ್ತನೋ ವೃಷಾ ।
ಯೋತ್ಸ್ಯತೇ ಸ ಬಲೋನ್ಮತ್ತೋ ದಿವ್ಯಾಸ್ತ್ರಬಲಗರ್ವಿತಃ ॥೪॥

ಒಂದು ಪಕ್ಷ ನಿನ್ನವೇಲಿನ ಗೌರವದಿಂದ ಉಳಿದ ಯಾವ ರಾಜರೂ ಯುದ್ಧಮಾಡದಿದ್ದರೂ ಬಲೋನ್ಮತ್ತನಾದ ಸೂತನಾದ ವೈಕರ್ತನನಾದ ಕರ್ಣನು ಮಾತ್ರ

ನಿನ್ನ ಜೊತೆಯಲ್ಲಿ ಯುದ್ಧವನ್ನುಮಾಡುವನು. ಅವನು ಬಲೋನ್ಮತ್ತನೂ ಹೌದು. ದಿವ್ಯಾಸ್ತ್ರಗಳ ಬಲದಿಂದ ಗರ್ವವುಳ್ಳವನೂ ಹೌದು.

ನತು ಶಕ್ಯಂ ಮಹಾರಾಜ ಜರಾಸಂಧೇ ಮಹಾಬಲೇ ।
ರಾಜಸೂಯಂ ತ್ವಯಾ ಪ್ರಾಪ್ತುಂ ತಸ್ಮಿನ್ ಜೀವತಿ ಪಾರ್ಥಿವೇ ॥೫॥

ಮಹಾರಾಜನೇ! ಮಹಾಬಲಿಷ್ಠನಾದ ಜರಾಸಂಧರಾಜನು ಜೀವಿಸಿರುವಾಗ ನೀನು ರಾಜಸೂಯಯಾಗವನ್ನು ಮಾಡಲು ಸಾಧ್ಯವಿಲ್ಲ.

ತೇನ ರುದ್ಧಾ ಹಿ ರಾಜಾನೋ ಜಿತ್ವಾ ಸರ್ವೇ ಗಿರಿವ್ರಜೇ ।
ಕಂದರಾಯಾಂ ನಗೇಂದ್ರಸ್ಯ ಸಿಂಹೇನೇವ ಮಹಾದ್ವಿಪಾಃ ॥೬॥

ಅವನು ಯುದ್ಧದಲ್ಲಿ ರಾಜರನ್ನು ಗೆದ್ದು ಅವರೆಲ್ಲರನ್ನೂ ಗಿರಿವ್ರಜದ ಒಂದು ಗುಹೆಯಲ್ಲಿ ಸಿಂಹವು ಆನೆಗಳನ್ನು ಬಂಧಿಸಿ ಇಟ್ಟಂತೆ ಬಂಧಿಸಿದ್ದಾನೆ.

ಸೋಽಪಿ ರಾಜಾ ಜರಾಸಂಧ ಇಯಕ್ಷುರ್ವಸುಧಾಧಿಪೈಃ ।
ಅಭಿಷಿಕ್ತೈಸ್ತು ರಾಜನ್ಯೈಃ ಸಹಸ್ರೈರುತ ಚಾಷ್ಟಭಿಃ ॥೭॥

ಆ ರಾಜನಾದ ಜರಾಸಂಧನಾದರೂ ಮೂರ್ಧಾಭಿಷಿಕ್ತರಾದ ಒಂದುಸಾವಿರದ ಎಂಟುರಾಜರುಗಳನ್ನು ಪಶುಗಳನ್ನಾಗಿ ಮಾಡಿ ಯಾಗವನ್ನು ಮಾಡುವ ಅಭಿಪ್ರಾಯವನ್ನು ಹೊಂದಿದ್ದಾನೆ.

ಸ ಹಿ ನಿರ್ಜಿತ್ಯ ನಿರ್ಜಿತ್ಯ ಸರ್ವಾನ್ ವೈ ಪೃಥಿವೀಶ್ವರಾನ್ ।
ಪುರಮಾನೀಯ ಬದ್ಧ್ವಾ ಚ ಚಕಾರ ಪುರುಷವ್ರಜಮ್ ।
ಆರಾಧ್ಯ ಹಿ ಮಹಾದೇವಂ ನಿರ್ಜಿತಾಸ್ತೇನ ಪಾರ್ಥಿವಾಃ ॥೮॥

ಅವನು ಭೂಮಿಪಾಲರನ್ನು ಒಬ್ಬೊಬ್ಬರನ್ನಾಗಿ ಗೆದ್ದು ತನ್ನ ಪಟ್ಟಣಕ್ಕೆ ಕರೆದುಕೊಂಡು ಬಂದು, ಒಂದು ಪುರುಷವ್ರಜವನ್ನು ಮಾಡಿದ್ದಾನೆ. ರುದ್ರದೇವರನ್ನು ಅರ್ಚಿಸಿ ಅವರ ಅನುಗ್ರಹದಿಂದ ಎಲ್ಲರಾಜರನ್ನೂ ಗೆದ್ದಿದ್ದಾನೆ.

ವಯಂ ಚೈವ ಮಹಾರಾಜ ಜರಾಸಂಧಭಯಾತ್ ತದಾ ।
ಮಧುರಾಂ ಸಂಪರಿತ್ಯಜ್ಯ ಗತ್ವಾ ದ್ವಾರವತೀಂ ಪುರೀಮ್ ।
ನಿವಸಾಮ ತಥಾಽದ್ಯಾಪಿ ಸಧನಜ್ಞಾತಿಬಾಂಧವಾಃ ॥೯॥

ಮಹಾರಾಜನೇ ! ನಾವಾದರೂ ಜರಾಸಂಧನ ಭಯದಿಂದ (ಭಯದ ನಟನೆಯಿಂದ) ಆಗಲೇ ಮಥುರೆಯನ್ನು ಬಿಟ್ಟು ದ್ವಾರಾವತಿ ಪಟ್ಟಣಕ್ಕೆ ಹೋಗಿ ಇನ್ನೂ ಅಲ್ಲಿಯೇ ನಮ್ಮ ಧನ ದಾಯಾದಿಗಳ ಮತ್ತು ಬಂಧುಗಳ ಜೊತೆಯಲ್ಲಿ ಈಗಲೂ ವಾಸಿಸುತ್ತಿದ್ದೇವೆ.

ಕಂಸಹೇತೋರ್ಹಿ ಯದ್ ವೈರಂ ಮಾಗಧಸ್ಯ ಮಯಾ ಸಹ ।
ಪಾರಂ ಗತ್ವಾ ಸ ತಸ್ಯಾಪಿ ಇಯಕ್ಷುರ್ದೇವಮುತ್ತಮಮ್ ॥೧೦॥

ಕಂಸನ ಸಲುವಾಗಿ ನನಗೂ ಮತ್ತು ಜರಾಸಂಧನಿಗೂ ಏನು ವೈರ ಉಂಟಾಗಿದೆಯೋ ಅದರ ಪ್ರತೀಕಾರವನ್ನುಮಾಡಿ ಆನಂತರ ದೇವಶ್ರೇಷ್ಠನಾದ ರುದ್ರನನ್ನು ಕುರಿತು ಅವನು ಯಾಗವನ್ನು ಮಾಡುವವನಿದ್ದಾನೆ.

ಕಾಂಕ್ಷನ್ತಿ ತೇಷಾಂ ಮೋಕ್ಷಾಯ ಜರಾಸಂಧವಧಾಯ ಚ ।
ಯದೀಮಂ ನೃಪತೇ ಯಜ್ಞಂ ಪ್ರಾಪ್ತುಮಿಚ್ಛಸಿ ಭಾರತ ॥೧೧॥

ಭಾರತರಾಜನೇ! ನೀನು ಈ ಯಾಗವನ್ನು ಮಾಡಲು ಅಪೇಕ್ಷಿಸುವುದಾದರೆ ಜರಾಸಂಧನ ವಧೆಯನ್ನು ಮತ್ತು ಸೆರೆಯಲ್ಲಿರುವ ಆ ರಾಜರುಗಳ ಮೋಕ್ಷವನ್ನು ಕುರಿತು ವಿಚಾರಮಾಡು.

ನಹ್ಯೇಷ ಹ್ಯನ್ಯಥಾ ಶಕ್ಯ ಆರಂಭೋ ಭರತರ್ಷಭ ।
ರಾಜಸೂಯಸ್ಯ ಕಾರ್ತ್ಸ್ನ್ಯೇನ ಕರ್ತುಂ ಮತಿಮತಾಂ ವರ ॥೧೨॥

ಮೇಧಾವಿಗಳಲ್ಲಿ ಶ್ರೇಷ್ಠನಾದವನೇ! ಭರತರ್ಷಭನೇ! ಅವೆರಡನ್ನು ಮಾಡದೆ ಬೇರೆರೀತಿಯಲ್ಲಿ ರಾಜಸೂಯವನ್ನು ಆರಂಭಿಸುವುದು ಶಕ್ಯವಾಗುವುದಿಲ್ಲ.

ಜರಾಸಂಧವಧೋಪಾಯಶ್ಚಿನ್ತ್ಯತಾಂ ಭರತರ್ಷಭ ।
ತಸ್ಮಿನ್ ಜಿತೇ ಜಿತಂ ಸರ್ವಂ ಸಕಲಂ ಪಾರ್ಥಿವಂ ಬಲಮ್ ॥೧೩॥

ಭರತರ್ಷಭನೇ! ಜರಾಸಂಧನ ವಧೆಯಮಾರ್ಗವನ್ನು ಚಿಂತಿಸು, ಅವನನ್ನು ಗೆದ್ದರೆ ಎಲ್ಲಾ ರಾಜರ ಸೈನ್ಯವನ್ನೂ ಗೆದ್ದಂತೆಯೇ ಸರಿ.

ಇತ್ಯೇಷಾ ಮೇ ಮತೀ ರಾಜನ್ ಯದ್ವಾ ತ್ವಂ ಮನ್ಯಸೇ ನೃಪ ।
ಏವಂ ಗತೇ ಮಮಾಚಕ್ಷ್ವ ಸ್ವಯಂ ನಿಶ್ಚಿತ್ಯ ಹೇತುಭಿಃ ॥೧೪॥

ರಾಜನೇ! ಇದು ನನ್ನ ಅಭಿಪ್ರಾಯ. ನೀನೇ ಹೇತುಗಳಿಂದ ವಿಮರ್ಶೆಮಾಡಿ ನಿನ್ನ ಅಭಿಪ್ರಾಯವು ಏನೆಂದು ನನಗೆ ತಿಳಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಷೋಡಶೋಽಧ್ಯಾಯಃ ॥
॥ ಮಂತ್ರಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹದಿನಾರನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಇತೀರಿತೇ ರಥಾಂಗಿನಾ ಜಗಾದ ಧರ್ಮನಂದನಃ ।
ನಿವರ್ತಿತಂ ಮನಃ ಕ್ರತೋರಲಂ ಮಮಾಮುನಾ ಪ್ರಭೋ ॥೯॥

ಶ್ರೀಕೃಷ್ಣನು ಹೀಗೆ ಹೇಳಿದಾಗ ಧರ್ಮರಾಜ ಹೇಳಿದ, 'ಪ್ರಭು, ಈ ನಿನ್ನ ಮಾತಿನಿಂದ ಜರಾಸಂಧ ನಿಮಿತ್ತವಾಗಿ ನನ್ನ ಮನಸ್ಸು ಯಾಗದ ಆಲೋಚನೆಯನ್ನು ಬಿಟ್ಟಿದೆ. ನನಗೆ ಈ ಯಾಗವೂ ಬೇಡ, ಅದರ ಫಲವೂ ಬೇಡ.

ಬಭೂವುರೇವ ಭೂಭೃತೋ ನ ಚಾಧಿರಾಜ್ಯಮಾಪಿರೇ ।
ಯದಾ ಚ ಚಕ್ರವರ್ತಿನಸ್ತದೇದೃಶಾ ನ ಶತ್ರವಃ ॥೯॥

'ಏಕೆಂದರೆ ಹಿಂದೆಯೂ ಅನೇಕ ರಾಜರಿದ್ದರು. ಅವರು ರಾಜಸೂಯಯಾಗ ಮಾಡಿ ಚಕ್ರವರ್ತಿಗಳೆನಿಸಲಿಲ್ಲ. ಕೆಲವರು ಹರಿಶ್ಚಂದ್ರನಂತೆ ಚಕ್ರವರ್ತಿಗಳಾದರು. ಆ ಕಾಲದಲ್ಲಿ ಅವರಿಗೆ ಜರಾಸಂಧನಂಥ ಶತ್ರುಗಳಿರಲಿಲ್ಲ'.

ಇತೀರಿತೇಽಮುನಾವದತ್ ಪ್ರಧಾನಮಾರುತಾತ್ಮಜಃ ।
ಪದಂ ಚತುರ್ಮುಖಸ್ಯ ವಾ ಸುಸಾಧ್ಯಮೇವ ಯತ್ನತಃ ॥೯॥

ಧರ್ಮರಾಜ ಹೀಗೆ ಹೇಳಿದಾಗ ಭೀಮನೆಂದ, 'ಚತುರ್ಮುಖನ ಪದವಿಯನ್ನೂ ಕೂಡ ಪ್ರಯತ್ನದಿಂದ ಚೆನ್ನಾಗಿ ಸಂಪಾದಿಸಲು ಸಾಧ್ಯವೆ ಇದೆ'.

ನಿಜಾನುಭಾವವರ್ಜಿತಾ ಹರೇರನುಗ್ರಹೋಜ್ಝಿತಾಃ ।
ಮಹಾಪ್ರಯತ್ನವರ್ಜಿತಾ ಜನಾ ನ ಜಗ್ಮುರುನ್ನತಿಂ ॥೯೭॥

ತಮ್ಮಲ್ಲಿ ಸ್ವಾಭಾವಿಕ ಬಲವಿಲ್ಲ, ಹರಿಯ ಅನುಗ್ರಹವನ್ನು ಸಂಪಾದಿಸಲಿಲ್ಲ, ಮಹಾ ಪ್ರಯತ್ನವನ್ನು ಮಾಡುವುದಿಲ್ಲ ಎಂದರೆ ಇಂಥ ಜನರು ಎಂದೂ ಉನ್ನತಿಯನ್ನು ಪಡೆಯುವುದಿಲ್ಲ.

ಸ್ಥಿರೋಽನುಭಾವ ಏವ ಮೇ ಮಹಾನನುಗ್ರಹೋ ಹರೇಃ ।
ಪ್ರಯತ್ನಮೇಕಮಗ್ರತೋ ನಿಧಾಯ ಭೂತಿಮಾಪ್ನುಮಃ ॥೯೮॥

ನನ್ನಲ್ಲಿ ಸ್ಥಿರವಾದ ಬಲವಿದೆ. ಹರಿಯ ಪರಮಾನುಗ್ರಹವಿದೆ. ಪ್ರಯತ್ನ ಒಂದನ್ನು ಮುಂದಿಟ್ಟುಕೊಂಡು ಸಂಪತ್ತನ್ನು ಗಳಿಸೋಣ.

ಇತೀರಿತೇಽಮುನಾ ಹರಿಃ ಸಮುದ್ಯಮಾತ್ ಪ್ರಧಾನತಃ ।
ಸ್ಥಿತೇ ಹಿ ಯಜ್ಞಕಾರಣೇ ವೃಕೋದರೇ ಜಗಾದ ಹ ॥೯೯॥

ಹೀಗೆ ಭೀಮ ಹೇಳಿದಾಗ ಮಹಾಪ್ರಯತ್ನ ಮಾಡಿ ಯಜ್ಞಕ್ಕೆ ಮುಖ್ಯವಾಗಿ ಭೀಮನೆ ಕಾರಣನಾಗುವುದರಿಂದ ಶ್ರೀಕೃಷ್ಣನುಡಿದ.

ಸ ಏಕ ಏವ ಪೂರುಷೋ ಜರಾಸುತೋಽದ್ಯ ವರ್ತತೇ ।
ಸಮಸ್ತ ಸದ್ವಿರೋಧಿನಾಂ ಬಲಂ ಕಲೇರನಂತರಃ ॥೧೦೦॥

ಈಗ ಕಲಿಯ ಅನಂತರದಲ್ಲಿ ಸಮಸ್ತ ಸಜ್ಜನ ವಿರೋಧಿಗಳಿಗೆ ಬಲದಾಯಕನಾಗಿರುವವನು ಆ ಜರಾಸಂಧನೊಬ್ಬನೆ ಇದ್ದಾನೆ.

ತಥಾ ಸತಾಂ ಸಮಾಶ್ರಯೋ ಯದುದ್ಭವಾಃ ಸತಾಂ ಗುಣಾಃ ।
ಸ ಏಕ ಏವ ತಾದೃಶಸ್ತ್ವಯಾ ವಿಚಿಂತ್ಯ ಯಾತ್ಯತಾಂ ॥೧೦೧॥

ಅದೇ ರೀತಿಯಲ್ಲಿ ಸಜ್ಜನರ ಸದ್ಗುಣಗಳ ಅಭಿವ್ಯಕ್ತಿಗೆ ಕಾರಣನಾಗಿ ಅವರಿಗೆ ಆಸರೆಯಾಗಿ ನಿಲ್ಲಬಲ್ಲ ಒಬ್ಬ ವ್ಯಕ್ತಿ ಬೇಕು. ಅಂಥವನನ್ನು ಆಲೋಚಿಸಿ ಕಳಿಸು.

ಯದಿ ಸ್ಮ ತೇನ ಮಾಗಧೋ ನಿಹನ್ಯತೇ ಸತಾಂ ಜಯಃ ।
ವಿಪರ್ಯಯೇಣ ಚಾಸತಾಮಿತಿ ಸ್ಮ ವಿದ್ಧಿ ನಾನ್ಯಥಾ ॥೧೦೨॥

ಅವನಿಂದ ಜರಾಸಂಧ ಹತನಾದರೆ ಸಜ್ಜನರಿಗೆ ಜಯ. ಇಲ್ಲದಿದ್ದರೆ ದುರ್ಜನರಿಗೆ ಜಯ. ಇದು ಅನ್ಯಥಾ ಆಗದೆಂದು ತಿಳಿ.

ಸ ಪಾರಮೇಷ್ಯ್ಯಸತ್ಪದಂ ಪ್ರಯಾತ್ಯಸಂಶಯಂ ಯುಧಿ ।
ಯ ಏವ ಹಂತಿ ಮಾಗಧಂ ಸ ವೇದಧರ್ಮಪಾಲಕಃ ॥೧೦೩॥

ನಿಹಂತಿ ಮಾಗಧೇಶ್ವರಂ ಯ ಏವ ವೈಷ್ಣವಂ ಜಗತ್ ।
ಕರೋತಿ ಶರ್ವಪಾಲಿತೋ ಯತಃ ಸ ಬಾರ್ಹಹದ್ರಥಃ ॥೧೦೪॥

(ಬಾರಹದ್ರಥಃ ಎಂದು ಬಿಡಿಸಿ ಹೇಳಬೇಕು)

ಯಾರು ಯುದ್ಧದಲ್ಲಿ ಜರಾಸಂಧನನ್ನು ಕೊಲ್ಲುವನೋ ಅವನು ಉತ್ತಮವಾದ ಬ್ರಹ್ಮಪದವಿಯನ್ನು ಗಳಿಸುತ್ತಾನೆ. ಸಂಶಯವಿಲ್ಲ. ಯಾರು ಜರಾಸಂಧನನ್ನು ಕೊಂದು ಜಗತ್ತನ್ನು ವಿಷ್ಣುಭಕ್ತಿಭರಿತವನ್ನಾಗಿ ಮಾಡುತ್ತಾನೋ ಅವನೇ ವೇದ ಧರ್ಮಪಾಲಕ ನೆನಿಸುತ್ತಾನೆ. ಏಕೆಂದರೆ ಜರಾಸಂಧ ಶಿವಭಕ್ತ.

ನಿಹಂತಿ ಶೈವನಾಯಕಂ ಯ ಏವ ವೈಷ್ಣವಾಗ್ರಣೀಃ ।
ಇತಿ ಸ್ಮ ಭಾವಸಂಯುತೇ ವದತ್ಯಜೇಽಬಿಭೇನ್ನೃಪಃ ॥೧೦೫॥

ಯಾರು ಶೈವನಾಯಕನನ್ನು ಕೊಲ್ಲುವನೋ ಅವನೇ ವೈಷ್ಣವಾಗ್ರಣಿಯಾಗಿರುತ್ತಾನೆ. ಹೀಗೆ ಶ್ರೀಕೃಷ್ಣ ಅಭಿಪ್ರಾಯಗರ್ಭಿತವಾಗಿ ಹೇಳಲು ಧರ್ಮರಾಜ ಭೀತನಾದ.

ಯುಧಿಷ್ಠಿರೇ ಬ್ರುವತ್ಯಜಂ ಮಖೇನ ಮೇ ತ್ವಲಂ ತ್ವಿತಿ ।
ತಮಾಹ ಮಾರುತಾತ್ಮಜೋ ನಿಹನ್ಮಿ ಮಾಗಧಂ ರಣೇ ॥೧೦೬॥

ನನಗೆ ಈ ಯಾಗವೆ ಬೇಡ ಎಂದು ಧರ್ಮರಾಜ ಭಯದಿಂದ ಶ್ರೀಕೃಷ್ಣನಿಗೆ ಹೇಳಿದಾಗ 'ಜರಾಸಂಧನನ್ನು ನಾನು ಕೊಲ್ಲುತ್ತೇನೆ' ಎಂದ ಭೀಮ.

ಇತೀರಿತೇऽವದದ್ಧರಿರ್ವ್ರಜಾಮಹೇ ವಯಂ ತ್ರಯಃ ।
ಅಹಂ ಚ ಭೀಮ ಫಲ್ಗುನೌ ನಿಹಂತುಮೇವ ಮಾಗಧಂ ।
ವೃಕೋದರೇಣ ಹನ್ಯತೇ ಯದಿ ಸ್ಮ ಮಾಗಧಾಧಿಪಃ ॥೧೦೭॥

ಮುಖಿಶ್ಚ ಸೇತ್ಸ್ಯತೇ ಧ್ರುವಂ ಜಗಚ್ಚ ತೇ ವಶೇ ಭವೇತ್ ॥೧೦೮॥

ಭೀಮ ಹೀಗೆ ಹೇಳಿದಾಗ ಶ್ರೀಕೃಷ್ಣನೆಂದ 'ನಾನು ಮತ್ತು ಭೀಮಾರ್ಜುನರು. ಹೀಗೆ ನಾವು ಮೂವರು ಕೂಡಿ ಜರಾಸಂಧನನ್ನು ಕೊಲ್ಲಲು ಹೋಗುತ್ತೇವೆ. ಭೀಮ ಜರಾಸಂಧನನ್ನು ಕೊಂದರೆ ನಿನ್ನ ಯಾಗ ನಿಶ್ಚಯವಾಗಿ ಕೈಗೂಡುವುದು. ಜಗತ್ತೂ ನಿನ್ನ ವಶಕ್ಕೆ ಬರುವುದು'.

ಇತೀರಿತೇ ತು ಶೌರಿಣಾ ಜಗಾದ ಧರ್ಮನಂದನಃ ।
ಸ ಶೂರಸೇನಮಂಡಲಪ್ರಹಾಣತೋ ಹರೇಸ್ತ್ರಸನ್ ॥೧೦೯॥

ಶ್ರೀಕೃಷ್ಣಸ್ವಯಂ ಜರಾಸಂಧ ನಿಮಿತ್ತವಾಗಿ ಮಥುರೆಯನ್ನು ಬಿಟ್ಟುಹೋದುದರಿಂದ ಭೀತನಾದ ಧರ್ಮರಾಜ ಶ್ರೀಕೃಷ್ಣನ ಮಾತನ್ನು ಕೇಳಿ ನುಡಿದ.

ಭಯಾದ್ಧಿ ಯಸ್ಯ ಮಾಧುರಂ ವಿಹಾಯ ಮಂಡಲಂ ಗತಾಃ ।
ಭವಂತ ಏವ ಸಾಗರಂ ತತೋ ಬಿಭೇಮ್ಯಹಂ ರಿಪೋಃ ॥೧೧೦॥

'ಜರಾಸಂಧನ ಭಯದಿಂದ ನೀವೆ ಮಥುರೆಯನ್ನು ಬಿಟ್ಟು ಸಮುದ್ರ ಮಧ್ಯಕ್ಕೆ ಹೋಗಿರುವಿರಿ. ಅದರಿಂದ ಅವನಿಗೆ ನಾನು ಹೆದರುತ್ತೇನೆ.

ಇಮೌ ಹಿ ಭೀಮಫಲ್ಗುನೌ ಮಮಾಕ್ಷಿಣೇ ಸದಾ ಪ್ರಭೋ ।
ಮನೋನಿಭೋ ಭವಾನ್‌ಸದಾ ನ ವೋ ವಿನಾಸ್ಮ್ಯತಃ ಪುಮಾನ್ ॥

ಪ್ರಭು, ಈ ಭೀಮಾರ್ಜುನರು ನನಗೆ ಸದಾ ಎರಡು ಕಣ್ಣುಗಳು, ನೀನು ನನಗೆ ಮನಸ್ಸು ಅಥವಾ ಜೀವ. ನೀವಿಲ್ಲದಿದ್ದರೆ ನಾನು ಪುರುಷನಾಗಲಾರೆ.

ಅತೋ ನ ಜೀವಿತಾತ್ ಪ್ರಿಯಾನಹಂ ರಿಪೋರ್ಬಲೀಯಸಃ ।
ಸಕಾಶಮಾತ್ಮ ಹೇತುತಃ ಪ್ರಯಾತಯಾಮಿವೋ ವಿಭೋ ॥೧೧೨॥

ಅದರಿಂದ ನನಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯರಾಗಿರುವ ನಿಮ್ಮನ್ನು ನನ್ನ ಸ್ವಾರ್ಥಕ್ಕಾಗಿ ಬಲಿಷ್ಠನಾದ ಶತ್ರುವಿನ ಬಳಿಗೆ ಕಳಿಸಲಾರೆ.

ಇತೀರಿತೇಽವದತ್ ಪುನರ್ವಕೋದರೋಽರಿಕಕ್ಷಭುಕ್ ।
ಯದೀಯನೇತೃಕಾ ರಮಾವಿರಿಂಚಶರ್ವಪೂರ್ವಕಾಃ ॥೧೧೩॥

ವಶೇ ಚ ಯಸ್ಯ ತದ್‌ಬಲಂ ಸುರಾಸುರೋರಗಾದಿನಾಂ ।
ಸ ಏಷ ಕೇಶವಃ ಪ್ರಭುಃ ಕ್ವ ಚಾಸ್ಯ ಬಾರ್ಹದ್ರಥಃ ॥೧೧೪॥

(ಬಾರಹದ್ರಥಃ ಎಂದು ಬಿಡಿಸಿ ಹೇಳಬೇಕು)

ಧರ್ಮರಾಜನಿಗೆ ಹೀಗೆ ಹೇಳಿದಾಗ ಶತ್ರುಗಳೆಂಬ ಕಾಡಿಗೆ ಕಾಡ್ಗಿಚ್ಚಿನಂತಿರುವ ಭೀಮ ಪುನಃ ಹೇಳಿದ, 'ರಮಾ ಬ್ರಹ್ಮ ರುದ್ರಾದಿಗಳು ಕೂಡ ಯಾರ ಸಂಕಲ್ಪದ ಪ್ರೇರಣೆಯಿಂದ ಜಗತ್ತನ್ನು ಆಳುವರೋ, ಸುರ ಅಸುರ ಉರಗಾದಿಗಳ ಬಲ ಯಾರ ವಶದಲ್ಲಿರುವುದೋ ಆ ವಿಷ್ಣುವೇ ಈ ಪ್ರಭು ಶ್ರೀಕೃಷ್ಣ. ಅವನ ಮುಂದೆ ಜರಾಸಂಧನೆಲ್ಲಿ?

ಅಧೃಷ್ಯಮಸ್ತಿ ಮೇ ಬಲಂ ಹರಿಃ ಪ್ರಣಾಯಕೋಕಸ್ಯ ಚ ।
ಸಮಸ್ತಲೋಕನೇತರಿ ಪ್ರಭೌ ಹಿ ಸರ್ವಶಕ್ತಿತಾ ॥೧೧೫॥

ಅಜೇಯತಾ ತಥಾರ್ಜುನೇ ಹರೇರ್ವರೋದ್ಭವಾಸ್ತಿ ಹಿ ।
ಅತೋ ವಯಂ ತ್ರಯೋದ್ಯ ತಂ ಪ್ರಯಾಮ ಮಾಗಧಂ ರಿಪುಂ॥೧೧೬॥

ಹರಿಯ ಪ್ರೇರಣೆಯಂತೆ ನಡೆಯುವ ನನ್ನಲ್ಲಿ ಶತ್ರುಗಳಿಗೆ ಇದಿರಿಸಲಾಗದಂಥ ಬಲವಿದೆ. ಸಕಲ ಲೋಕನಾಯಕನಾದ ಪ್ರಭು ಶ್ರೀಕೃಷ್ಣನಲ್ಲಿ ಸರ್ವಶಕ್ತಿ ಇದೆ. ಅರ್ಜುನನಲ್ಲಿ ಹರಿಯ ವರದಿಂದ ಬಂದ ಅಜೇಯತ್ವವಿದೆ. ಆದರಿಂದ ನಾವು ಮೂವರು ಈಗಲೇ ಶತ್ರುವಾದ ಜರಾಸಂಧನ ಬಳಿಗೆ ಹೋಗುವೆವು.

ಹನಿಷ್ಯ ಏವ ಮಾಗಧಂ ಹರೇಃ ಪುರೋ ನ ಸಂಶಯಃ ।
ಇತೀರಿತೇಽಮುನಾ ಹರಿರ್ಜಗಾದ ಧರ್ಮನಂದನಂ ॥೧೧೭॥

ನಾನು ಶ್ರೀಕೃಷ್ಣ ಸಮ್ಮುಖದಲ್ಲಿ ಜರಾಸಂಧನನ್ನು ಕೊಂದೇ ತೀರುತ್ತೇನೆ. ಇದಕ್ಕೆ ಸಂಶಯವಿಲ್ಲ. ಹೀಗೆ ಭೀಮ ಹೇಳಿದಾಗ ಶ್ರೀಕೃಷ್ಣ ಧರ್ಮರಾಜನಿಗೆ ನುಡಿದ.

ವಯಂ ತ್ರಯಃ ಸಮೇತ್ಯ ತಂ ಪ್ರಯಾತಯಾಮ ಮೃತ್ಯವೇ ।
ಹವಿಷ್ಯತಿ ಸ್ಫುಟಂ ರಣೇ ವೃಕೋದರೋ ಜರಾಸುತಂ ॥೧೧೮॥

ನಾವು ಮೂವರು ಕೂಡಿ ಜರಾಸಂಧನನ್ನು ಮೃತ್ಯುವಿಗೆ ಕಳಿಸಿಕೊಡುತ್ತೇವೆ. ನಿಶ್ಚಯವಾಗಿ ಭೀಮ ಜರಾಸಂಧನನ್ನು ಯುದ್ಧದಲ್ಲಿ ಕೊಲ್ಲುತ್ತಾನೆ.

ಭಯಂ ನ ಕಾರ್ಯಮೇವ ತೇ ಮಯಾ ಹತಃ ಸ ನೇತಿ ಹ ।
ಮಯಾ ಹಿ ನೀತಿಹೇತುತಃ ಸ್ವಯಂ ನ ಹನ್ಯತೇ ರಿಪುಃ ॥೧೧೯॥

ನಾನು ಇಂದಿನವರೆಗೂ ಅವನನ್ನು ಕೊಲ್ಲಲಿಲ್ಲವೆಂದು ನೀನು ಭಯಪಡಬೇಕಾಗಿಲ್ಲ. ನೀತಿಯನ್ನು ತೋರುವ ಸಲುವಾಗಿ ನಾನು ಸ್ವಯಂ ಅವನನ್ನು ಕೊಲ್ಲುತ್ತಿಲ್ಲ. ಅಷ್ಟೆ.

ಸ ಶರ್ವಸಂಶ್ರಯಾಗ್ರಣೀರ್ಮದಾಶ್ರಯೋತ್ತಮೇನ ತು ।
ನಿಹನ್ಯತೇ ಯದಾ ತದಾ ಪ್ರಕಾಶಿತಂ ಹಿ ಮೇ ಬಲಂ ॥೧೨೦॥

ಶಿವನನ್ನು ಆಶ್ರಯಿಸಿರುವವರಲ್ಲಿ ಅಗ್ರಗಣ್ಯ ಜರಾಸಂಧ. ನನ್ನನ್ನು ಆಶ್ರಯಿಸಿದವರಲ್ಲಿ ಅಗ್ರಗಣ್ಯನಾಗಿರುವವನೊಬ್ಬ ಅವನನ್ನು ಕೊಂದಾಗಲೆ ನನ್ನ ಶಕ್ತಿ ಎಷ್ಟೆಂಬುದು ಬೆಳಕಿಗೆ ಬರುತ್ತದೆ.

ಅತೋ ನ ಶಂಕಿತಂ ಮನಃ ಕುರುಷ್ವ ಭೂಪತೇ ಕ್ವಚಿತ್ ।
ಪ್ರದರ್ಶಯಾಮಿ ತೇಽನುಜೌ ನಿಹತ್ಯ ಮಾಗಧೇಶ್ವರಂ ॥೧೨೧॥

ಅದರಿಂದ, ಧರ್ಮರಾಜ ನೀನು ಯಾರ ವಿಷಯದಲ್ಲಿಯೂ ಸಂದೇಹ ಪಡಬೇಡ. ಜರಾಸಂಧನನ್ನು ಕೊಂದು ನಿನ್ನ ತಮ್ಮಂದಿರನ್ನು ನಾನು ನಿನ್ನ ಮುಂದೇ ತಂದು ತೋರುತ್ತೇನೆ.

ಇತೀರಿತಃ ಸ ವಿಷ್ಣುನಾ ವಿಚಾರ್ಯ ತದ್ಗುಣಾನ್ ಪರಾನ್ ।
ತಥೇತಿ ಚಾಹ ತೇ ತ್ರಯಃ ಪ್ರತಸ್ಥುರಾಶು ಮಾಗಧಾನ್ ॥೧೨೨॥

ಹೀಗೆ ಶ್ರೀಕೃಷ್ಣ ಹೇಳಿದಾಗ ಧರ್ಮರಾಜ ಅವರ ಉತ್ತಮ ಗುಣಗಳನ್ನು ಪರ್ಯಾಲೋಚಿಸಿ 'ಹಾಗೇ ಆಗಲಿ' ಎಂದ. ಅವರು ಮೂವರೂ ಬೇಗನೆ ಮಗಧ ದೇಶಕ್ಕೆ ಹೊರಟರು.

★ ★ ★ ★

ಹದಿನೇಳನೆಯ ಅಧ್ಯಾಯ

(ರಾಜಸೂಯ ವಿಷಯದಲ್ಲಿ ಕೃಷ್ಣ ಯುಧಿಷ್ಠಿರ ಭೀಮರ ಸಮಾಲೋಚನೆ)

ಯುಧಿಷ್ಠಿರಃ

ಉಕ್ತಂ ತ್ವಯಾ ಬುದ್ಧಿಮತಾ ಯನ್ನಾನ್ಯೋ ವಕ್ತುಮರ್ಹತಿ ।
ಸಂಶಯಾನಾಂ ಏನಿರ್ಮೋಕ್ತಾ ಕೋಽನ್ಯಸ್ತ್ವತ್ತೋ ಹಿ ನಃ ಪುಮಾನ್ ॥೧॥

ಕೃಷ್ಣನೇ ಬುದ್ಧಿವಂತನಾದ ನೀನು ನಮಗೆ ಇನ್ನು ಯಾರೂ ಹೇಳಲಾಗದ ವಿಷಯಗಳನ್ನು ಹೇಳಿದ್ದೀಯೆ ನಮಗೆ ನಮ್ಮ ಸಂಶಯವನ್ನು ನಿವಾರಿಸಲು ನಿನಗಿಂತ ಶ್ರೇಷ್ಠರಾದ ಪುರುಷರು ಯಾರಿದ್ದಾರೆ?

ಗೃಹೇ ಗೃಹೇ ಹಿ ರಾಜಾನಃ ಸ್ವಸ್ಯ ಸ್ವಸ್ಯ ಪ್ರಿಯಂಕರಾಃ ।
ನಚ ಸಾಮ್ರಾಜ್ಯಮಾಪ್ತಾಸ್ತೇ ಸಮ್ರಾಟ್‌ಶಬ್ದೋ ಹಿ ಕೃತ್ಸ್ನಭಾಕ್ ॥೨॥

ಮನೆಮನೆಗಳಲ್ಲಿ ರಾಜರು ಇದ್ದಾರೆ. ಅವರು ತಮತಮಗೆ ಹಿತವನ್ನು ಮಾಡಿಕೊಳ್ಳುತ್ತಿದ್ದಾರೆ. ಆದರೆ ಅವರಾರಿಗೂ ಸಮ್ರಾಜರಾರಲ್ಲ ಸಂಮ್ರಾಟ್ ಎಂಬ ಶಬ್ದವು ಎಲ್ಲರ ಜಯವನ್ನು ಒಳಗೊಂಡು ಸಂಪಾದಿಸಲು ಕಷ್ಟವಾದುದು.

ಕಥಂ ಪರಾನುಭಾವಜ್ಞಃ ಸ್ವಯಂ ಶಂಸಿತುಮರ್ಹತಿ ।
ಪರೇಣ ಸಮವೇತಸ್ತು ಯಃ ಪ್ರಶಸ್ತಃ ಸ ಪೂಜ್ಯತೇ ॥೩॥

ಶತ್ರುವಿನ ಬಲವನ್ನು ತಿಳಿದು ಯಾವನು ತಾನೆ ತನ್ನನ್ನು ತಾನು ಹೊಗಳಿಕೊಳ್ಳಲುಸಾಧ್ಯ ? ಶತ್ರುವನ್ನು ಎದುರಿಸಿದಾಗಲೂ ಯಾರು ಪ್ರಶಸ್ತನಾಗಿ ಇರುತ್ತಾನೆಯೋ ಅವನು ಪೂಜ್ಯನಾಗುತ್ತಾನೆ.

ವಿಸ್ತೀರ್ಣಾ ಬಹುಳಾ ಭೂಮಿರ್ಬಹುರತ್ನಸಮಾಚಿತಾ ।
ದೂರಂ ಗತ್ವಾ ವಿಜಾನಾತಿ ಶ್ರೇಯೋ ವೃಷ್ಣಿಕುಲೋದ್ವಹ ॥೪॥

ವೃಷ್ಣಿಕುಲೋದ್ಭವನೇ! ಭೂಮಿಯು ಬಹಳ ವಿಸ್ತಾರವಾದುದು. ಅಲ್ಲಲ್ಲಿ ಅನೇಕ ರತ್ನಪ್ರಾಯರಾದ ಪುರುಷರು ಇದ್ದಾರೆ. ದೂರ ಪ್ರಯಾಣಮಾಡಿದರೆ ಮಾತ್ರ ಯಾರು ಶ್ರೇಷ್ಠರೆಂದು ತಿಳಿಯುತ್ತದೆ.

ಹಿತ್ವಾ ಕರಾನ್ ಯೌವನಾಶ್ವಃ ಪಾಲನಾಚ್ಚ ಭಗೀರಥಃ ।
ಕಾರ್ತವೀರ್ಯಸ್ತಪೋಯೋಗಾದ್ ಬಲಾತ್ತು ಭರತೋ ವಿಭುಃ ।
ಋದ್ಧ್ಯಾ ಮರುತ್ತಸ್ತಾನ್ ಪಂಚ ಸಾಮ್ರಾಜ್ಯೇನೇತಿ ಶುಶ್ರುಮಃ ॥೫॥

ಯೌವನಾಶ್ವನು ತೆರಿಗೆಯನ್ನು ಪರಿತ್ಯಾಗಮಾಡುವುದರಿಂದ, ಭಗೀರಥನು ಚೆನ್ನಾಗಿ ಪಾಲನೆಮಾಡುವುದರಿಂದ, ಕಾರ್ತವೀರ್ಯನು ತಪಸ್ಸಿನ ಬಲದಿಂದ, ಭರತನು ತನ್ನ ಭುಜಬಲದಿಂದ, ಮರುತ್ತನು ತನ್ನ ಸಂಪತ್ತಿನ ಬಲದಿಂದ ಸಮ್ರಾಟ್ ಎಂಬ ಪಟ್ಟವನ್ನು ಪಡೆದರೆಂದು ನಾವು ಕೇಳಿದ್ದೇವೆ.

ಸರ್ವಾನ್ ವಂಶಾನನುಭೃಶಂ ನೈತೇ ಸಂತಿ ಯುಗೇಯುಗೇ ।
ಶಮಮೇವ ಪರಂ ಮನ್ಯೇ ನತು ವಾಚಾ ಭವೇಚ್ಛಮಃ ॥೬॥

ಇಂತಹ ಮಹಾಪುರುಷರು ಪ್ರತಿಯುಗದಲ್ಲಿಯೂ ಪ್ರತಿವಂಶದಲ್ಲಿಯೂ ಉಂಟಾಗುವುದಿಲ್ಲ. ಯುದ್ಧವನ್ನು ಬಿಟ್ಟು ಶಾಂತಿಯಿಂದ ಇರುವುದೇ ಲೇಸು ಎನಿಸುತ್ತದೆ. ಅದೇ ನನಗೆ ಮೋಕ್ಷವನ್ನು ಸಾಧಿಸಿಕೊಡುತ್ತದೆ. ಕೇವಲ ಮಾತಿನಿಂದ ಶಾಂತಿಯುಂಟಾಗುವುದಿಲ್ಲ.

ಭೀಮಃ

ಆರಂಭೇ ಪಾರಮೇಷ್ಯಂ ತು ನಾಪ್ರಾಪ್ಯಮಿತಿ ಮೇ ಮತಿಃ ।
ಏವಮೇವಾಭಿಜಾನಂತಿ ಕುಲೇ ಜಾತಾ ಮನಸ್ವಿನಃ ।
ಕಶ್ಚಿತ್ ಕದಾಚಿದೇತೇಷಾಂ ಭವೇಜ್ಜ್ಯೇಷ್ಠೋ ಜನಾರ್ದನ ॥೭॥

ಜನಾರ್ದನನೇ! ಪ್ರಯತ್ನದಿಂದ ಸಾಧಿಸಲ್ಪಡಬಹುದಾದರೆ ಬ್ರಹ್ಮಪದವಿಯನ್ನೇ ಸಾಧಿಸಬೇಕೆಂದು ನನ್ನ ಅಭಿಪ್ರಾಯ. ಸತ್‌ಕುಲದಲ್ಲಿ ಹುಟ್ಟಿದ ಧೈರ್ಯಶಾಲಿಗಳು

ಹೀಗೆಯೇ ಆಲೋಚಿಸುತ್ತಾರೆ. ಜನಾರ್ದನನೇ! ಅವರಲ್ಲಿ ಒಮ್ಮೊಮ್ಮೆ ಒಬ್ಬನು ಶ್ರೇಷ್ಠನಾಗುತ್ತಾನೆ.

ಅನಾರಂಭಪರೋ ರಾಜಾ ವಲ್ಮೀಕ ಇವ ಸೀದತಿ ।
ದುರ್ಬಲಶ್ಚಾಪ್ಯುಪಾಯೇನ ಬಲಿನಂ ಯೋಧಯಿಷ್ಯತಿ ॥೮೪॥

ಉದ್ಯೋಗಪರನಾಗದ ರಾಜನು ಹುತ್ತದಂತೆ ನಶಿಸಿಹೋಗುತ್ತಾನೆ. ದುರ್ಬಲನಾದ ರಾಜನು ಉಪಾಯದಿಂದ ಬಲಿಷ್ಠನಾದ ರಾಜನ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಅತಂದ್ರಿತಸ್ತು ಪ್ರಾಯೇಣ ದುರ್ಬಲೋ ಬಲಿನಂ ರಿಪುಮ್ ।
ಜಯೇತ್ ಸಮ್ಯಙ್ ನಯೋ ರಾಜನ್ ನೀತ್ಯರ್ಥೇ ಹಿ ಪ್ರವರ್ತತೇ ॥

ಆಲಸ್ಯವಿಲ್ಲದೆ ಸತತವಾಗಿ ಪ್ರಯತ್ನವನ್ನುಪಡುವ ದುರ್ಬಲರಾಜನೂ ಸಹ ಬಲಿಷ್ಠನಾದ ಶತ್ರುವನ್ನು ಗೆಲ್ಲುತ್ತಾನೆ. ರಾಜನೇ! ಸರಿಯಾದ ನೀತಿಯು ಎಲ್ಲದಕ್ಕೂ ಕಾರಣವಾಗುತ್ತದೆ. ಸರಿಯಾದ ನೀತಿಗಾಗಿಯೇ ಎಲ್ಲರೂ ಪ್ರಯತ್ನಪಡುತ್ತಾರೆ.

ಕೃಷ್ಣೇ ನಯೋ ಮಯಿ ಬಲಂ ಜಯಃ ಪಾರ್ಥೇ ಧನಂಜಯೇ ।
ಮಾಗಧಂ ಸಾಧಯಿಷ್ಯಾಮೋ ವಯಂ ತ್ರಯ ಇವಾಗ್ನಯಃ ॥೧೦॥

ಕೃಷ್ಣನಲ್ಲಿ ನೀತಿಯಿದೆ. ನನ್ನಲ್ಲಿ ಬಲವಿದೆ. ಅರ್ಜುನನಲ್ಲಿ ಶಕ್ತಿಯಿದೆ. ಮೂರು ಅಗ್ನಿಗಳಂತಿರುವ ನಾವು ಜರಾಸಂಧನನ್ನು ಗೆಲ್ಲುವೆವು.

ತ್ವದ್ಬುದ್ಧಿಬಲಮಾಶ್ರಿತ್ಯ ಸರ್ವಂ ಪ್ರಾಪ್ಸ್ಯತಿ ಧರ್ಮರಾಟ್ ।
ಜಯೋಽಸ್ಮಾಕಂ ಹಿ ಗೋವಿಂದ ಯೇಷಾಂ ನಾಥೋ ಭವಾನ್ ಸದಾ॥೧೧॥

ಗೋವಿಂದನೇ! ನಿನ್ನ ಬುದ್ಧಿಬಲವನ್ನು ಅವಲಂಬಿಸಿ ಧರ್ಮರಾಜನು ಗೆಲ್ಲುವನು. ನಿನ್ನನ್ನು ನಾಥನಾಗಿ ಹೊಂದಿದ ನಮಗೆ ಯಾವಾಗಲೂ ಜಯವೇ ಉಂಟಾಗುತ್ತದೆ.

ಶ್ರೀಭಗವಾನ್

ಆತ್ಮನೋಽರ್ಥಪರೋ ಬಾಲೋ ನಾನುಬಂಧಮವೇಕ್ಷತೇ ।
ತಂ ವಿಪಕ್ತಮಥೋ ಘ್ನಂತಿ ಬಾಲಮರ್ಥಪರಾಯಣಮ್ ॥೧೨॥

ಸ್ವಾರ್ಥಪರನಾದ ಬಾಲಕನು ಮುಂದೆ ಉಂಟಾಗುವ ತೊಂದರೆಗಳನ್ನು ಗಮನಿಸುವುದಿಲ್ಲ. ಅಂತಹ ಸ್ವಾರ್ಥಿಯಾದ ಬಾಲಕನಂತೆ ತನ್ನ ಸ್ವಾರ್ಥದಲ್ಲಿ ಪ್ರಯತ್ನಶೀಲನಾದ ರಾಜನನ್ನು ಶತ್ರುಗಳು ಸಂಹರಿಸುತ್ತಾರೆ.

ತಸ್ಮಾದ್ ವಂಶ್ಯಾನನುಮೃಶನ್ನೇವಂ ನೈವ ಸತಾಂ ಯುಗೇ ।
ಸಾಧಯೇದೇವ ತತ್ ಕಾರ್ಯಂ ವಿಚಾರ್ಯಾರಭತೇ ಹಿ ಯಃ ॥೧೩॥

ಆದ್ದರಿಂದ ಯುಗಯುಗಗಳಲ್ಲಿ ಸಜ್ಜನೆರವಂಶಗಳಲ್ಲಿ ಬಂದ ಮಹಾಪುರುಷರನ್ನು ವಿಮರ್ಶೆಮಾಡಿ ಹೀಗೆ ಬಾಲಕನಂತೆ ನಡೆದುಕೊಳ್ಳಬಾರದು. ಯಾವನು ಚೆನ್ನಾಗಿ ವಿಚಾರಮಾಡಿ ಕಾರ್ಯವನ್ನು ಆರಂಭಿಸುತ್ತಾನೆಯೋ ಅವನು ಅದನ್ನು ಸಾಧಿಸುತ್ತಾನೆ.

ಸಂಗ್ರಾಹ್ಯಲಕ್ಷಣಂ ಪ್ರಾಪ್ತೋ ಧರ್ಮಾರ್ಥನಯಲಕ್ಷಣೈಃ ।
ಬಾರ್ಹದ್ರಥಂ ಜರಾಸಂಧಂ ತಂ ವಿದ್ಧಿ ಭರತರ್ಷಭ ॥೧೪॥

ಭರತರ್ಷಭನೇ! ಧರ್ಮ ಅರ್ಥ ಮತ್ತು ರಾಜನೀತಿಗಳನ್ನು ತಿಳಿದು ಮೇಧಾವಿಗಳ ಮಾರ್ಗದರ್ಶನದಲ್ಲಿ ಜರಾಸಂಧನು ಅಪೇಕ್ಷಣೀಯವಾದ ಧರ್ಮ ಅರ್ಥ ಮತ್ತು ರಾಜನೀತಿಗಳನ್ನು ಸಂಪಾದಿಸಿದ್ದಾನೆಂದು ತಿಳಿ.

ನಚೈನಂ ಪ್ರತಿಯುದ್ಧ್ಯಂತಿ ಕುಲಾನ್ಯೇಕಶತಂ ನೃಪಾಃ ।
ತಸ್ಮಾದೇತದ್ಬಲಾದೇವ ಸಾಮ್ರಾಜ್ಯಂ ಕುರುತೇऽದ್ಯ ಸಃ ॥೧೫॥

ನೂರೊಂದು ಕುಲಗಳಿಗೆ ಸೇರಿದ ರಾಜರು ಅವನ ಜೊತೆಯಲ್ಲಿ ಯುದ್ಧಮಾಡುವುದಿಲ್ಲ. ಆ ಬಲದಿಂದಲೇ ಅವನು ಈ ದಿನ ಸಾಮ್ರಾಜ್ಯವನ್ನು ಆಳುತ್ತಿದ್ದಾನೆ.

ರತ್ನಭಾಜೋ ಹಿ ರಾಜನ್ಯಾ ಜರಾಸಂಧಮುಪಾಸತೇ ।
ನಚ ತುಷ್ಯತಿ ತೇನಾಪಿ ಬಲೇನಾನಯಮಾಸ್ಥಿತಃ ॥೧೬॥

ಕೈಯಲ್ಲಿ ರತ್ನವನ್ನುಹಿಡಿದ ರಾಜರು ಜರಾಸಂಧನ ಸೇವೆಯನ್ನು ಮಾಡುತ್ತಿದ್ದಾರೆ. ಆದರೆ ಬಲದರ್ಪದಿಂದ ಅನೀತಿಯ ಮಾರ್ಗವನ್ನು ಹಿಡಿದ ಅವನು ಅದರಿಂದ ಸಂತೋಷಪಡುತ್ತಿಲ್ಲ.

ಮೂರ್ಧಾಭಿಷಿಕ್ತಂ ನೃಪತಿಂ ಪ್ರಧಾನಂ ಪುರುಷಂ ಚ ನ ।
ನಾದತ್ತೇ ಯೋ ಪುಮಾನ್ ದ್ರಷ್ಟಾ ಭಾಗಂ ಪುರುಷತಃ ಕ್ವಚಿತ್ ॥೧೭॥

ಯಾವನು ಸಜ್ಜನರನ್ನು ನೋಡಿ, ಅವರಿಂದ ಒಂದೊಂದು ಗುಣದ ಭಾಗವನ್ನು ಪುರಸ್ಕರಿಸುವುದಿಲ್ಲವೋ, ಅಂತಹವನು ಮೂರ್ಧಾಭಿಷಿಕ್ತನಾದ ರಾಜನಾದ ಶ್ರೇಷ್ಠ ಪುರುಷನನ್ನು ಕಣ್ಣಿನಿಂದಲೂ ನೋಡುವುದಿಲ್ಲ.

ಏವಂ ಸರ್ವಾನತೀತ್ಯೈಕೋ ಜರಾಸಂಧಃ ಶತಾವರಾನ್ ।
ತಂ ದುರ್ಬಲತರೋ ರಾಜಾ ಕಥಂ ಪಾರ್ಥ ಉಪೇಷ್ಯತಿ ॥೧೮॥

ಹೀಗೆ ಪ್ರತಾಪಶಾಲಿಯಾದ ಜರಾಸಂಧನು ನೂರಕ್ಕೆ ಸ್ವಲ್ಪ ಕಡಮೆಯಾದಷ್ಟು ರಾಜರುಗಳನ್ನು ತಾನೊಬ್ಬನೇ ಅತಿಕ್ರಮಿಸಿ ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ. ಬಹಳ ದುರ್ಬಲನಾದ ರಾಜನಾದ ನೀನು ಅವನ ಜೊತೆಯಲ್ಲಿ ಹೇಗೆ ಸೆಣಸುತ್ತೀಯೆ?

ತಂಡುಲಪ್ರಸ್ಥಕೋ ರಾಜಾ ಕಪರ್ದಿನಮುಪಾಸತೇ ।
ಪ್ರೋಕ್ಷಿತಾನಾಂ ಪ್ರಮೃಷ್ಟಾನಾಂ ರಾಜ್ಞಾಂ ಪಶುಪತೇರ್ಗೃಹೇ ।
ಪಶೂನಾಮಿವ ಕಾ ಪ್ರೀತಿರ್ಜೀವಿತೇ ಭರತರ್ಷಭ ॥೧೯॥

ಶಿವಪೂಜೆಗಾಗಿ ಪ್ರತಿದಿವಸವೂ ಒಂದು ಮುಷ್ಟಿ ಅಕ್ಕಿಯನ್ನು ತೆಗೆದಿಡುವ ರಾಜನು, ಶಿವನನ್ನು ಉಪಾಸನೆಮಾಡುತ್ತಾನೆ. ಭರತಶ್ರೇಷ್ಠನೇ! ಶಿವಾಲಯದಲ್ಲಿ ಬಲಿಗೆ ಸಿದ್ಧವಾದ ಪ್ರೋಕ್ಷಿಸಿತೊಳೆಯಲ್ಪಟ್ಟ ಪಶುಗಳಂತೆ ನಮಗೆ ಜೀವನದಲ್ಲಿ ಏನು ಸುಖವಿದೆ?

ಕ್ಷತ್ರಿಯಃ ಶಸ್ತ್ರಮರಣೋ ಯದಾ ಭವತಿ ಸತ್ಕೃತಃ ।
ನನು ಸ್ಮ ಮಾಗಧಂ ಸರ್ವಂ ಪ್ರತಿಬಾಧೇಮ ತಂ ವಯಮ್ ॥೨೦॥

ಕ್ಷತ್ರಿಯನು ಯಾವಾಗ ಶಸ್ತ್ರಮರಣಕ್ಕೆ ಭಯಪಡುವುದಿಲ್ಲವೋ ಆಗ ಅವನು ಪೂಜ್ಯನಾಗುತ್ತಾನೆ. ನಾವೆಲ್ಲರೂ ಸೇರಿ ಜರಾಸಂಧನ ಜೊತೆಯಲ್ಲಿ ಯುದ್ಧಮಾಡುತ್ತೇವಷ್ಟೇ.

ಷಡಶೀತಿಃ ಸಮಾನೀತಾಃ ಶೇಷಾಶ್ಚಾನ್ಯೇ ಚತುರ್ದಶ ।
ಜರಾಸಂಧೇನ ರಾಜಾನಸ್ತತಃ ಕ್ರೂರಂ ಪ್ರಪತ್ಸ್ಯತೇ ॥೨೧॥

ಜರಾಸಂಧನಿಂದ ಎಂಭತ್ತಾರು ಕುಲದ ರಾಜರುಗಳು ಸಂಗ್ರಹಿಸಲ್ಪಟ್ಟಿದ್ದಾರೆ. ಅವನು ಇನ್ನೂ ಹದಿನಾಲ್ಕು ಕುಲದ ರಾಜರುಗಳನ್ನು ಸಂಗ್ರಹಿಸಬೇಕಾಗಿದೆ ಅನಂತರ ಅವನು ಆ ಕ್ರೂರಕರ್ಮವನ್ನು ಮಾಡುವನು.

ಪ್ರಾಪ್ನುಯಾತ್ ಸ ಯಶೋ ದೀಪ್ತಂ ತತ್ರ ಯೋ ವಿಘ್ನಮಾಚರೇತ್ ।
ಜಯೇದ್ ಯಶ್ಚ ಜರಾಸಂಧಂ ಸ ಸಮ್ರಾಣ್ನೈತಂ ಭವೇತ್ ॥೨೨॥

ಆ ಕ್ರೂರಕರ್ಮಕ್ಕೆ ಯಾವನು ವಿಘ್ನವನ್ನು ಮಾಡುತ್ತಾನೆಯೋ, ಅವನು ದೀಪ್ತವಾದ ಯಶಸ್ಸನ್ನು ಪಡೆಯುವನು. ಯಾವನು ಜರಾಸಂಧನನ್ನು ಜಯಿಸುತ್ತಾನೆಯೋ ಅವನು ನಿಶ್ಚಿತವಾಗಿ ಸಮ್ರಾಟ್ ಪದವಿಗೆ ಅರ್ಹನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತದಶೋಽಧ್ಯಾಯಃ ॥
॥ ಮಂತ್ರಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿಯಿತು.

★★★★★

ಹದಿನೆಂಟನೆಯ ಅಧ್ಯಾಯ

(ಯುಧಿಷ್ಠಿರ ಅರ್ಜುನರ ಸಂವಾದ)

ಯುಧಿಷ್ಠಿರಃ

ಸಮ್ರಾಡ್‌ಗುಣಮಭೀಪ್ಸನ್ ವೈ ಯುಷ್ಮಾನ್ ಸ್ವಾರ್ಥಪರಾಯಣಃ।
ಕಥಂ ಪ್ರಹಿಣುಯಾಂ ಭೀಮಂ ಬಲಾತ್ ಕೇವಲಸಾಹಸಾತ್ ॥೧॥

ನಾನು ಸಮ್ರಾಟನಾಗಬೇಕೆಂದು ಆಶಿಸಿ ಸ್ವಾರ್ಥಪರನಾಗಿ ಏನೂ ವಿಮರ್ಶೆಮಾಡದೆ ಕೇವಲ ಸಾಹಸದಿಂದ ಬಲಾತ್ಕಾರದಿಂದ ಹೇಗೆ ಭೀಮನನ್ನು ಕಳುಹಿಸಲಿ?

ಭೀಮಾರ್ಜುನಾವುಭೌ ನೇತ್ರೇ ಮನೋ ಮನ್ಯೇ ಜನಾರ್ದನಮ್ ।
ಮನಶ್ಚಕ್ಷುರ್ವಿಹೀನಸ್ಯ ಕೀದೃಶಂ ಜೀವಿತಂ ಭವೇತ್ ॥೨॥

ಮೂರ್ಧಾಭಿಷಿಕ್ತಂ ನೃಪತಿಂ ಪ್ರಧಾನಂ ಪುರುಷಂ ಚ ನ ।
ನಾದತ್ತೇ ಯೋ ಪುಮಾನ್ ದೃಷ್ಟ್ವಾ ಭಾಗಂ ಪುರುಷತಃ ಕ್ವಚಿತ್ ॥೧೭॥

ಯಾವನು ಸಜ್ಜನರನ್ನು ನೋಡಿ, ಅವರಿಂದ ಒಂದೊಂದು ಗುಣದ ಭಾಗವನ್ನು ಪುರಸ್ಕರಿಸುವುದಿಲ್ಲವೋ, ಅಂತಹವನು ಮೂರ್ಧಾಭಿಷಿಕ್ತನಾದ ರಾಜನಾದ ಶ್ರೇಷ್ಠ ಪುರುಷನನ್ನು ಕಣ್ಣಿನಿಂದಲೂ ನೋಡುವುದಿಲ್ಲ.

ಏವಂ ಸರ್ವಾನತೀತ್ಯೈಕೋ ಜರಾಸಂಧಃ ಶತಾವರಾನ್ ।
ತಂ ದುರ್ಬಲತರೋ ರಾಜಾ ಕಥಂ ಪಾರ್ಥ ಉಪೇಷ್ಯತಿ ॥೧೮॥

ಹೀಗೆ ಪ್ರತಾಪಶಾಲಿಯಾದ ಜರಾಸಂಧನು ನೂರಕ್ಕೆ ಸ್ವಲ್ಪ ಕಡಮೆಯಾದಷ್ಟು ರಾಜರುಗಳನ್ನು ತಾನೊಬ್ಬನೇ ಅತಿಕ್ರಮಿಸಿ ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ. ಬಹಳ ದುರ್ಬಲನಾದ ರಾಜನಾದ ನೀನು ಅವನ ಜೊತೆಯಲ್ಲಿ ಹೇಗೆ ಸೆಣಸುತ್ತೀಯೆ?

ತಂಡುಲಪ್ರಸ್ಥಕೋ ರಾಜಾ ಕಪರ್ದಿನಮುಪಾಸತೇ ।
ಪ್ರೋಕ್ಷಿತಾನಾಂ ಪ್ರಮೃಷ್ಟಾನಾಂ ರಾಜ್ಞಾಂ ಪಶುಪತೇರ್ಗೃಹೇ ।
ಪಶೂನಾಮಿವ ಕಾ ಪ್ರೀತಿರ್ಜೀವಿತೇ ಭರತರ್ಷಭ ॥೧೯॥

ಶಿವಪೂಜೆಗಾಗಿ ಪ್ರತಿದಿವಸವೂ ಒಂದು ಮುಷ್ಟಿ ಅಕ್ಕಿಯನ್ನು ತೆಗೆದಿಡುವ ರಾಜನು, ಶಿವನನ್ನು ಉಪಾಸನೆಮಾಡುತ್ತಾನೆ. ಭರತಶ್ರೇಷ್ಠನೇ! ಶಿವಾಲಯದಲ್ಲಿ ಬಲಿಗೆ ಸಿದ್ಧವಾದ ಪ್ರೋಕ್ಷಿಸಿತೊಳೆಯಲ್ಪಟ್ಟ ಪಶುಗಳಂತೆ ನಮಗೆ ಜೀವನದಲ್ಲಿ ಏನು ಸುಖವಿದೆ?

ಕ್ಷತ್ರಿಯಃ ಶಸ್ತ್ರಮರಣೋ ಯದಾ ಭವತಿ ಸತ್ಕೃತಃ ।
ನನು ಸ್ಮ ಮಾಗಧಂ ಸರ್ವಂ ಪ್ರತಿಬಾಧೇಮ ತಂ ವಯಮ್ ॥೨೦॥

ಕ್ಷತ್ರಿಯನು ಯಾವಾಗ ಶಸ್ತ್ರಮರಣಕ್ಕೆ ಭಯಪಡುವುದಿಲ್ಲವೋ ಆಗ ಅವನು ಪೂಜ್ಯನಾಗುತ್ತಾನೆ. ನಾವೆಲ್ಲರೂ ಸೇರಿ ಜರಾಸಂಧನ ಜೊತೆಯಲ್ಲಿ ಯುದ್ಧಮಾಡುತ್ತೇವಷ್ಟೇ.

ಷಡಶೀತಿಃ ಸಮಾನೀತಾಃ ಶೇಷಾಶ್ಚಾನ್ಯೇ ಚತುರ್ದಶ ।
ಜರಾಸಂಧೇನ ರಾಜಾನಸ್ತತಃ ಕ್ರೂರಂ ಪ್ರಪತ್ಸ್ಯತೇ ॥೨೧॥

ಜರಾಸಂಧನಿಂದ ಎಂಭತ್ತಾರು ಕುಲದ ರಾಜರುಗಳು ಸಂಗ್ರಹಿಸಲ್ಪಟ್ಟಿದ್ದಾರೆ. ಅವನು ಇನ್ನೂ ಹದಿನಾಲ್ಕು ಕುಲದ ರಾಜರುಗಳನ್ನು ಸಂಗ್ರಹಿಸಬೇಕಾಗಿದೆ ಅನಂತರ ಅವನು ಆ ಕ್ರೂರಕರ್ಮವನ್ನು ಮಾಡುವನು.

ಪ್ರಾಪ್ನುಯಾತ್ ಸ ಯಶೋ ದೀಪ್ತಂ ತತ್ರ ಯೋ ವಿಘ್ನಮಾಚರೇತ್ ।
ಜಯೇದ್ ಯಶ್ಚ ಜರಾಸಂಧಂ ಸ ಸಮ್ರಾಣ್ನಿಯತಂ ಭವೇತ್ ॥೨೨॥

ಆ ಕ್ರೂರಕರ್ಮಕ್ಕೆ ಯಾವನು ವಿಘ್ನವನ್ನು ಮಾಡುತ್ತಾನೆಯೋ, ಅವನು ದೀಪ್ತವಾದ ಯಶಸ್ಸನ್ನು ಪಡೆಯುವನು. ಯಾವನು ಜರಾಸಂಧನನ್ನು ಜಯಿಸುತ್ತಾನೆಯೋ ಅವನು ನಿಶ್ಚಿತವಾಗಿ ಸಮ್ರಾಟ್ ಪದವಿಗೆ ಅರ್ಹನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಸಪ್ತದಶೋऽಧ್ಯಾಯಃ ॥
॥ ಮಂತ್ರಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿಯಿತು.

★★★★★

ಹದಿನೆಂಟನೆಯ ಅಧ್ಯಾಯ

(ಯುಧಿಷ್ಠಿರ ಅರ್ಜುನರ ಸಂವಾದ)

ಯುಧಿಷ್ಠಿರಃ

ಸಮ್ರಾಡ್‌ಗುಣಮಭೀಪ್ಸನ್ ವೈ ಯುಷ್ಮಾನ್ ಸ್ವಾರ್ಥಪರಾಯಣಃ।
ಕಥಂ ಪ್ರಹಿಣುಯಾಂ ಭೀಮಂ ಬಲಾತ್ ಕೇವಲಸಾಹಸಾತ್ ॥೧॥

ನಾನು ಸಮ್ರಾಟನಾಗಬೇಕೆಂದು ಆಶಿಸಿ ಸ್ವಾರ್ಥಪರನಾಗಿ ಏನೂ ವಿಮರ್ಶೆಮಾಡದೆ ಕೇವಲ ಸಾಹಸದಿಂದ ಬಲಾತ್ಕಾರದಿಂದ ಹೇಗೆ ಭೀಮನನ್ನು ಕಳುಹಿಸಲಿ?

ಭೀಮಾರ್ಜುನಾವುಭೌ ನೇತ್ರೇ ಮನೋ ಮನ್ಯೇ ಜನಾರ್ದನಮ್ ।
ಮನಶ್ಚಕ್ಷುರ್ವಿಹೀನಸ್ಯ ಕೀದೃಶಂ ಜೀವಿತಂ ಭವೇತ್ ॥೨॥

ಭೀಮ ಮತ್ತು ಅರ್ಜುನರು ನನ್ನ ಎರಡು ಕಣ್ಣುಗಳು. ಕೃಷ್ಣನು ನನ್ನ ಮನಸ್ಸು ಎಂದು ತಿಳಿದಿದ್ದೇನೆ. ಮನಸ್ಸು ಮತ್ತು ಕಣ್ಣುಗಳಿಲ್ಲದ ಪುರುಷನು ಹೇಗೆ ಜೀವಿಸಲು ಸಾಧ್ಯವಾಗುತ್ತದೆ?

ಜರಾಸಂಧಬಲಂ ಪ್ರಾಪ್ಯ ದುಷ್ಪಾರಂ ಭೀಮವಿಕ್ರಮಮ್ ।
ಸಮಾ ಹಿ ಯಃ ಪರೋಕ್ಷಃ ಸ್ಯಾತ್ ಕಿಮು ತತ್ರ ವಿಚೇಷ್ಟಿತಮ್ ।
ಅಸ್ಮಿನ್ನರ್ಥಾಂತರೇ ಯುಕ್ತಮನರ್ಥಂ ಪ್ರತಿಪದ್ಯತೇ ॥೩॥

ಜರಾಸಂಧನು ಯುದ್ಧಮಾಡುವಾಗಲೆಲ್ಲಾ ನಾನು ಬಹಳವರ್ಷಗಳವರೆಗೆ ಅಂತಃಪುರದಲ್ಲಿಯೇ ಇದ್ದು ಅವನ ಪರಾಕ್ರಮವನ್ನು ನೋಡಲೇ ಇಲ್ಲ. ಇನ್ನು ಅವನನ್ನು ಎದುರಿಸುವುದು ಹೇಗೆ? ಜರಾಸಂಧನ ವಧೆಯರೂಪವಾದ ಪ್ರಯೋಜನವನ್ನು ಪಡೆಯಲು ಹೋಗಿ ಮಧ್ಯದಲ್ಲಿ ಭೀಮಾರ್ಜುನರ ನಾಶವೆಂಬ ಅನರ್ಥವನ್ನು ಪಡೆಯುವುದು ನಿಂದ್ಯವಾದುದು.

ಯಥಾವದ್ ವಿಮೃಶಾಮ್ಯೇಕಃ ತತ್ ತಾವಚ್ಛ್ರೂಯತಾಂ ಮಮ ।
ಸನ್ನ್ಯಾಸಂ ರೋಚಯೇ ಸಾಧು ಕಾರ್ಯಸ್ಯಾಸ್ಯ ಜನಾರ್ದನ ।
ಪ್ರತಿಹಂತಿ ಮನೋ ಮೇಽದ್ಯ ರಾಜಸೂಯೋ ದುರಾಹರಃ ॥೪॥

ಜನಾರ್ದನನೇ! ನಾನು ಸರಿಯಾಗಿ ವಿಮರ್ಶೆಮಾಡಿದ್ದೇನೆ. ನನ್ನ ನಿರ್ಧಾರವನ್ನು ಕೇಳು ಈ ರಾಜಸೂಯಯಾಗದಿಂದ ಹಿಮ್ಮೆಟ್ಟುವುದೇ ಲೇಸು ಎಂದು ನನಗೆ ತೋರುತ್ತಿದೆ. ಈ ವಿಷಯವು ನನ್ನ ಮನಸ್ಸನ್ನು ಘಾತಿಸುತ್ತಿದೆ. ನಾನು ರಾಜಸೂಯಯಾಗವನ್ನು ಮಾಡಲಾರೆ ಎಂದು ನನ್ನ ಅಭಿಪ್ರಾಯ.

ವೈಶಂಪಾಯನಃ

ಪಾರ್ಥಃ ಪ್ರಾಪ್ಯ ಧನುಃಶ್ರೇಷ್ಠಮಕ್ಷಯ್ಯೌ ಚ ಮಹೇಷುಧೀ ।
ರಥಂ ಧ್ವಜಂ ಹಯಾಂಶ್ಚೈವ ಯುಧಿಷ್ಠಿರಮಭಾಷತ ॥೫॥

ಶ್ರೇಷ್ಠವಾದ ಧನುಸ್ಸನ್ನೂ ಅಕ್ಷಯಬತ್ತಳಿಕಗಳನ್ನೂ ರಥಧ್ವಜ ಮತ್ತು ಅಶ್ವಗಳನ್ನೂ ಸಂಪಾದಿಸಿದ್ದ ಅರ್ಜುನನು. ಯುಧಿಷ್ಠಿರನನ್ನು ಕುರಿತು ಮಾತನಾಡಿದನು.

ಧನುರಸ್ತ್ರಂ ಶರಾ ವೀರ್ಯಂ ಪಕ್ಷೋ ಭೂಮಿರ್ಯಶೋ ಬಲಮ್ ।
ಪ್ರಾಪ್ತಮೇತನ್ಮಯಾ ರಾಜನ್ ದುಷ್ಪ್ರಾಪಂ ಯದಭೀಪ್ಸಿತಮ್ ॥೬॥

ರಾಜನೇ! ಲೋಕದಲ್ಲಿ ಎಲ್ಲ ರಾಜರಿಗೂ ಇಷ್ಟವಾದ ಅದರ ಸಂಪಾದಿಸಲು ಅಸಾಧ್ಯವಾದ ಧನುಸ್ಸು, ಅಸ್ತ್ರ, ಬಾಣಗಳು, ಪರಾಕ್ರಮ, ಪಕ್ಷ, ಭೂಮಿ, ಯಶಸ್ಸು, ಮತ್ತು ಬಲಗಳನ್ನು ನಾನು ಸಂಪಾದಿಸಿದ್ದೇನೆ.

ಕುಲೇ ಜನ್ಮ ಪ್ರಶಂಸಂತಿ ವೈದ್ಯಾಃ ಸಾಧು ಸುನಿಷ್ಠಿತಾಃ ।
ಬಲೇನ ಸದೃಶಂ ನಾಸ್ತಿ ವೀರ್ಯಂ ತು ಮಮ ರೋಚತೇ ॥೭॥

ವಿದ್ಯಾವಂತರಾದವರು ಮತ್ತು ಸತ್ಕರ್ಮಗಳಲ್ಲಿ ನಿರತರಾದವರು ಶ್ರೇಷ್ಠವಾದ ಕುಲದಲ್ಲಿ ಜನ್ಮವನ್ನು ಪ್ರಶಂಸಿಸುತ್ತಾರೆ. ಬಲಕ್ಕೆ ಸದೃಶವಾದ ಉಪಾಯವು ಇನ್ನೊಂದಿಲ್ಲ. ಆದ್ದರಿಂದ ಪರಾಕ್ರಮವೇ ಶ್ರೇಷ್ಠವೆಂದು ನನಗೆ ತೋರುತ್ತದೆ.

ಕೃತವಿದ್ಯಃ ಕುಲೇ ಜಾತೋ ನಿರ್ವೀರ್ಯಃ ಕಿಂ ಕರಿಷ್ಯತಿ ।
ಕ್ಷತ್ರಿಯಃ ಸರ್ವಶೋ ರಾಜನ್ ಯಸ್ಯ ವೃತ್ತಿಃ ಪರಾಜಯೇ ॥೮॥

ಸತ್‌ಕುಲದಲ್ಲಿ ಜನಿಸಿ ಶಸ್ತ್ರಾರ್ಥವಿದ್ಯೆಯನ್ನು ಸಂಪಾದಿಸಿದವನು ಪರಾಕ್ರಮಶಾಲಿಯಾಗಿರಬೇಕು. ನಿರ್ವೀರ್ಯನಾದ ವ್ಯಕ್ತಿಯು ಏನುಮಾಡುವನು? ಯಾವನು ಶತ್ರುಗಳನ್ನು ಪರಾಭವಗೊಳಿಸುವ ಸ್ವಭಾವವನ್ನು ಹೊಂದಿರುತ್ತಾನೆಯೋ ಅವನೇ ಸರ್ವಪ್ರಕಾರದಿಂದಲೂ ಕ್ಷತ್ರಿಯನೆನಿಸುತ್ತಾನೆ.

ದ್ರವ್ಯಭೂತಾ ಗುಣಾಃ ಸರ್ವೇ ತಿಷ್ಠಂತಿ ಹಿ ಪರಾಕ್ರಮೇ ।
ಜಯಸ್ಯ ಹೇತುಃ ಸಿದ್ಧಿರ್ಹಿ ಕರ್ಮ ದೈವಂ ಚ ಸಂಶ್ರಿತಮ್ ॥೯॥

ಧನವನ್ನು ಆಶ್ರಯಿಸಿದ ಪರಪರಾಭವ ಮೊದಲಾದ ಎಲ್ಲಾಗುಣಗಳೂ ಪರಾಕ್ರಮವನ್ನು ಅವಲಂಬಿಸಿವೆ ಜಯಕ್ಕೆ ಕಾರಣವಾದುದು ಮಂತ್ರಸಿದ್ಧಿ ಮತ್ತು ದೈವವನ್ನು ಆಶ್ರಯಿಸಿದ ಪುಣ್ಯಕರ್ಮಗಳು.

ಸಂಯುಕ್ತೋ ಹಿ ಬಲೈಃ ಕೈಶ್ಚಿತ್ ಪ್ರಮಾದಾನ್ನೇಹ ಯುಜ್ಯತೇ ।
ತೇನ ದ್ವಾರೇಣ ಶತ್ರುಭ್ಯಃ ಕ್ಷೀಯತೇ ಸಬಲೋ ರಿಪುಃ ॥೧೦॥

ಕೆಲವರು ಶತ್ರುಗಳ ಸೈನ್ಯವನ್ನು ಹೊಂದಿ ಅದನ್ನು ಎದುರಿಸುತ್ತಾರೆ. ಇನ್ನು ಕೆಲವರು ಪ್ರಮಾದದಿಂದ ಶತ್ರುಸೈನ್ಯವನ್ನು ಎದುರಿಸುವುದೇ ಇಲ್ಲ. ಆ ಕಾರಣದಿಂದ ಬಲಿಷ್ಠನಾಗಿದ್ದರೂ ಸಹ ತನ್ನ ಶತ್ರುಗಳಿಗೆ ವಶನಾಗಿ ನಾಶವನ್ನು ಹೊಂದುತ್ತಾನೆ.

ಅಬಲೇ ವಿಕ್ರಿಯಾ ಯಾದೃಕ್ ತಥಾ ಮೋಹೋ ಬಲಾನ್ವಿತೇ ।
ಏತಾವುಭೌ ಮಹಾದೋಷೌ ನಿತ್ಯಂ ತ್ಯಾಜ್ಯೌ ಜಯಾರ್ಥಿನಾ ॥೧೧॥

ದುರ್ಬಲನಾದವನಲ್ಲಿ ಯಾಚನಾದಿ ವಿಕಾರವಿರುವಂತೆ ಬಲಿಷ್ಠನಾದವನಲ್ಲಿ ಪ್ರಮಾದ ಎಂಬ ದೋಷವಿರುತ್ತದೆ. ಇದೆರಡೂ ದೊಡ್ಡ ದೋಷಗಳು. ಜಯವನ್ನು ಅಪೇಕ್ಷಿಸುವವರು ಯಾವಾಗಲೂ ಇವೆರಡನ್ನೂ ತ್ಯಜಿಸಬೇಕು.

ಜರಾಸಂಧವಿನಾಶಂ ಚ ರಾಜ್ಞಾಂ ಚ ಪರಿಮೋಕ್ಷಣಮ್ ।
ಯದಿ ಕುರ್ಯಾಮ ಯಜ್ಞಾರ್ಥೇ ತದಾರಂಭೋ ಮಹಾನ್ ಭವೇತ್॥

ನಾವು ರಾಜಸೂಯಯಾಗದ ಸಲುವಾಗಿ ಜರಾಸಂಧನವಧೆಯನ್ನು ಮತ್ತು ಅವನು ಸೆರೆಯಲ್ಲಿ ಇಟ್ಟಿರುವ ರಾಜರ ಬಿಡುಗಡೆಯನ್ನು ಸಾಧಿಸುವುದಾದರೆ ಅದು ದೊಡ್ಡ ಉಪಕ್ರಮವಾಗುತ್ತದೆ.

ಅನಾರಂಭೇ ತು ನಿರ್ಯುಕ್ತೋ ಭವೇದಗುಣನಿಶ್ಚಯಃ ।
ಗುಣಾನ್ನಿಸ್ಸಂಶಯಾದ್ ರಾಜನ್ ನೈರ್ಗುಣ್ಯಂ ಮನ್ಯಸೇ ಕಥಮ್ ॥೧೩॥

ಉಪಕ್ರಮವನ್ನೇ ಮಾಡದಿದ್ದರೆ ಯಾವ ಕಾರ್ಯವನ್ನೂ ಮಾಡದವನು ದ್ರವ್ಯಪ್ರಾಪ್ತಿ ರಾಜ್ಯಪ್ರಾಪ್ತಿ ಮೊದಲಾದ ಯಾವ ಗುಣವನ್ನೂ ಹೊಂದುವುದಿಲ್ಲ ಎಂಬುದು ನಿಶ್ಚಯ. ರಾಜನೇ! ನಿಶ್ಚಯವಾಗಿ ಗುಣವನ್ನು ಸಂಪಾದಿಸದೆ ಇರುವ ಸ್ಥಿತಿಯನ್ನು ನೀನು ಹೇಗೆ ಶ್ರೇಷ್ಠವೆಂದು ಭಾವಿಸುತ್ತೀಯೆ?

ಕಾಲೋಽಯಂ ಸುಲಭಃ ಪಶ್ಚಾನ್ಮುನೀನಾಂ ಶಮಮಿಚ್ಛತಾಮ್ ।
ಸಾಮ್ರಾಜ್ಯಂ ತು ತವೇಚ್ಛಂತೋ ವಯಂ ಯೋತ್ಸ್ಯಾಮಹೇ ಪರೈಃ ॥

ಈ ವರ್ತಮಾನಕಾಲವು ಜಯವನ್ನು ಬಯಸುವ ಕ್ಷತ್ರಿಯರಾದ ನಮಗೆ ಶ್ರೇಷ್ಠವಾದುದು. ಶಮವನ್ನೇ ಬಯಸುವ ಮುನಿಗಳಿಗೆ ಭವಿಷ್ಯತ್ಕಾಲವು

ಶ್ರೇಷ್ಠವಾದುದು. (ರಾಜರಿಗೆ ನಾಳೆ ಮಾಡಬೇಕಾದುದನ್ನು ಈ ದಿನವೇ ಮಾಡು ಎಂದು ಸೂಚನೆಯಿರುವುದರಿಂದ ವರ್ತಮಾನಕಾಲವೇ ಶ್ರೇಷ್ಠ) ಆದ್ದರಿಂದ ನಿನಗೆ ಸಮ್ರಾಟ್‌ಪದವಿಯನ್ನು ಸಂಪಾದಿಸಿಕೊಡುವ ಸಲುವಾಗಿ ಶತ್ರುಗಳ ಜೊತೆಯಲ್ಲಿ ನಾವು ಯುದ್ಧವನ್ನು ಮಾಡುವೆವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಅಷ್ಟಾದಶೋऽಧ್ಯಾಯಃ ॥

॥ ಮಂತ್ರಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹದಿನೆಂಟನೆಯ ಅಧ್ಯಾಯವು ಮುಗಿಯಿತು.

★★★★★

ಹತ್ತೊಂಭತ್ತನೆಯ ಅಧ್ಯಾಯ

(ಕೃಷ್ಣನಿಂದ ಯುಧಿಷ್ಠಿರನನ್ನು ಕುರಿತು, ಜರಾಸಂಧನ ಜನ್ಮವೃತಾಂತ ವರ್ಣನೆ)

ವಾಸುದೇವಃ

ಜಾತಸ್ಯ ಭಾರತೇ ವಂಶೇ ತಥಾ ಕುಂತ್ಯಾಃ ಸುತಸ್ಯ ಚ ।
ಯಾ ವೈ ಯುಕ್ತಾ ಮತಿಃ ಸೇಯಮರ್ಜುನೇನ ಪ್ರದರ್ಶಿತಾ ॥೧॥

ಭರತಕುಲದಲ್ಲಿ ಕುಂತಿಯಮಗನಾಗಿ ಜನಿಸಿದ ಪುರುಷನಿಗೆ ಯೋಗ್ಯವಾದ ಈ ಬುದ್ಧಿಯನ್ನೇ ಅರ್ಜುನನು ತೋರಿಸಿದ್ದಾನೆ.

ನ ಮೃತ್ಯೋಃ ಸಮಯಂ ವಿದ್ಮ ರಾತ್ರೌ ವಾ ಯದಿ ವಾ ದಿವಾ ।
ನಚಾಪಿ ಕಂಚಿದಮರಮಯುದ್ಧೇನಾಪಿ ಶುಶ್ರುಮಃ ॥೨॥

ಮೃತ್ಯುವಿನ ಸಮಯವನ್ನು ಯಾರೂ ತಿಳಿದಿಲ್ಲ. ರಾತ್ರಿಬರುವುದೋ ಹಗಲು ಬರುವುದೋ ತಿಳಿಯುವುದಿಲ್ಲ. ಯುದ್ಧಮಾಡದಿದ್ದರೂ ಸಹ ಮರಣರಹಿತನಾಗಿರುವ ಯಾವ ವ್ಯಕ್ತಿಯನ್ನೂ ಸಹ ನಾವು ಕೇಳಿಲ್ಲ.

ಏತಾವದೇವ ಪುರುಷೈಃ ಕಾರ್ಯಂ ಹೃದಯತೋಷಣಮ್ ।
ನಯೇನಾಬಾಧದೃಷ್ಟೇನ ಯದುಪಕ್ರಮತೇ ಪರಾನ್ ॥೩॥

ಪುರುಷರು ತಮ್ಮ ಮನಸ್ಸಿಗೆ ಸಂತೋಷದಾಯಕವಾದ ಕಾರ್ಯಮಾಡಬೇಕಷ್ಟೇ, ತನಗೆ ಪೀಡೆಯುಂಟಾಗುವವರೆಗೆ ವಿನಯವನ್ನು ಹೊಂದಿರುವುದು ಪೀಡೆಯುಂಟಾದಾಗ ಶತ್ರುಗಳಮೇಲೆ ಎರಗುವುದು ರಾಜನೀತಿ.

ವಿನಯಸ್ಯಾನಪಾಯಸ್ಯ ಸಂಯೋಗೇ ನ ಪರಾಕ್ರಮಃ ।
ಸಂಶಯೋ ಜಾಯತೇ ಸಾಮ್ಯೇ ಸಾಮ್ಯಂ ತು ನ ಭವೇದ್ ದ್ವಯೋಃ ॥೪॥

ತನಗೆ ಅಪಾಯ ಬರುವವರೆಗೂ ವಿನಯವನ್ನು ಹೊಂದಿರುವುದನ್ನು ಯಾರೂ (ಅಪರಾಕ್ರಮ) ಹೇಡಿತನವೆಂದು ಹೇಳುವುದಿಲ್ಲ. ಸಮರ್ಥನಾದವನು ವಿನಯವನ್ನು ತೋರಿಸಿದರೆ ಶತ್ರುವಿಗೂ ಮತ್ತು ಇವನಿಗೂ ಬಲದಲ್ಲಿ ಸಾಮ್ಯ ಇದೆಯೋ ಎಂದು ಸಂಶಯ ಉಂಟಾಗುತ್ತದೆ. ಆದರೆ ಶಕ್ತ ಮತ್ತು ಅಶಕ್ತ ಈ ಇಬ್ಬರಿಗೆ ಎಂದೂ ಬಲ ಸಾಮ್ಯವು ಇರುವುದಿಲ್ಲ.

ತೇ ವಯಂ ನಯಮಾಸ್ಥಾಯ ಶತ್ರುದೇಶಸಮೀಪಗಾಃ ।
ಕಥಮಂತಂ ನ ಗಚ್ಛೇಮ ವೃಕ್ಷಸ್ಯೇವ ನದೀರಯಾಃ ॥೫॥

ಅಂತಹ ನಾವು ಒಳ್ಳೆಯ ನೀತಿಯನ್ನು ಹೊಂದಿ ಶತ್ರುದೇಶವನ್ನು (ಶತ್ರುದೇಹವನ್ನು) ಸಮೀಪಿಸಿ ನದಿಯ ಪ್ರವಾಹವು ತೀರದ ವೃಕ್ಷವನ್ನು ಕಿತ್ತು ಒಗೆಯುವಂತೆ ಹೇಗೆ ನಮ್ಮ ಉದ್ದೇಶವನ್ನು ಸಾಧಿಸದೆ ಇರಲು ಸಾಧ್ಯ ?

ಪರರಂಧ್ರೇ ಪರಾಕ್ರಾಂತಃ ಸ್ವರಂಧ್ರಾವರಣೇ ಸ್ಥಿತಃ ।
ವ್ಯೂಢಾನೀಕಸ್ತು ಬಲವಾನುಪೇಯಾದ್ ಬಲಮುತ್ತಮಮ್ ॥೬॥

ತನ್ನದೋಷವನ್ನು ಆಚ್ಛಾದನೆಮಾಡಿಕೊಂಡು ಪರರ ದೋಷವನ್ನು ತಿಳಿದು ಸೈನ್ಯವನ್ನು ಸೇರಿಸಿ ಪರಾಕ್ರಮವನ್ನು ಮಾಡುವ ಬಲಿಷ್ಠನಾದ ರಾಜನು ಉತ್ತಮವಾದ ಬಲವನ್ನು ಹೊಂದುತ್ತಾನೆ.

ಅನಭಿವ್ಯಕ್ತಸಂಬಂಧಾಃ ಪ್ರವಿಷ್ಟಾಃ ಶತ್ರುಸಂಸದಿ ।
ಅನವದ್ಯಾನಸಂಬದ್ಧಾನ್ ದೃಷ್ಟ್ವಾ ಶತ್ರೂನ್ ಸಮೀಪತಃ ।
ಶತ್ರುದೇಶಮಪಾಕ್ರಮ್ಯ ತಂ ಕಾಮಂ ಪ್ರಾಪ್ನುಯಾಮಹೇ ॥೭॥

ನಾವು ಕ್ಷತ್ರಿಯರು ಎಂಬ ನಮ್ಮ ಸಂಬಂಧವನ್ನು ತಿಳಿಸದೆ ಶತ್ರುವಿನ ಸಭೆಯನ್ನು ಪ್ರವೇಶಿಸಿ, ಬ್ರಾಹ್ಮಣವೇಶವನ್ನು ಧರಿಸಿರುವುದರಿಂದ ನಮ್ಮಿಂದ ವಧೆಯರೂಪವಾದ ಅಪಾಯವಿಲ್ಲವೆಂದು ತಿಳಿಯುವ ಶತ್ರುವನ್ನು ಸಮೀಪಿಸಿ, ಅವನನ್ನು ಆ ದೇಶದಿಂದ ಹೊರಗೆ ಎಳೆದುತಂದು, ನಮ್ಮ ಇಚ್ಛೆಯನ್ನು ಪೂರ್ಣಮಾಡಿಕೊಳ್ಳುತ್ತೇವೆ.

ಏಕೋ ಹ್ಯೇವ ಶ್ರಿಯಂ ನಿತ್ಯಂ ಬಿಭರ್ತಿ ಭರತರ್ಷಭ ।
ಅಂತರಾತ್ಮೇವ ಭೂತಾನಾಂ ತತ್‌ಕ್ಷಯೇ ಚ ಬಲಕ್ಷಯಃ ॥೮॥

ಭರತರ್ಷಭನೇ! ಸರ್ವಜೀವಾಂತರ್ಯಾಮಿಯಾದ ಹರಿಯೊಬ್ಬನೇ ಲಕ್ಷ್ಮಿಯನ್ನು ಧರಿಸಿರುವಂತೆ, ಜರಾಸಂಧನೊಬ್ಬನೇ ಎಲ್ಲಾ ಸೈನ್ಯಸಂಪತ್ತನ್ನೂ ಧರಿಸಿ ಎಲ್ಲರಿಗೂ ಆಧಾರನಾಗಿದ್ದಾನೆ. ಜರಾಸಂಧನ ನಾಶವಾದರೆ ಎಲ್ಲಾ ಸೈನ್ಯದ ನಾಶವಾದಂತೆಯೇ ಆಗುತ್ತದೆ.

ಅಥ ಚೇತ್ ತಂ ನಿಹತ್ಯಾಜೌ ಶೇಷೇಣಾಪಿ ಸಮಾಹತಾಃ ।
ಪ್ರಾಪ್ನುಯಾಮ ತತಃ ಸ್ವರ್ಗಂ ಜ್ಞಾತಿತ್ರಾಣಪರಾಯಣಾಃ ॥೯॥

ಅಥವಾ ನಾವು ಅವನನ್ನು ಕೊಂದನಂತರ ಅವನ ಉಳಿದ ಸೈನ್ಯವು ನಮ್ಮ ಮೇಲೆ ಎರಗಿ ನಮ್ಮನ್ನು ಕೊಲ್ಲುವುದಾದರೆ, ನಾವು ಬಂಧುಗಳನ್ನು ರಕ್ಷಿಸುವುದರಲ್ಲೇ ಪರಾಯಣರಾಗಿ ಸ್ವರ್ಗವನ್ನು ಹೊಂದುವೆವು.

ಯುಧಿಷ್ಠಿರಃ

ಕೃಷ್ಣ ಕೋಽಯಂ ಜರಾಸಂಧಃ ಕಿಂವೀರ್ಯಃ ಕಿಂಪರಾಕ್ರಮಃ ।
ಯತ್ ತ್ವಾಂ ಸ್ಪೃಷ್ಟ್ವಾಽಗ್ನಿಸದೃಶಂ ನ ದಗ್ಧಃ ಶಲಭೋ ಯಥಾ ॥೧೦॥

ಕೃಷ್ಣ! ಈ ಜರಾಸಂಧನು ಯಾರು? ಅವನ ಬಲಪರಾಕ್ರಮಗಳು ಎಂತಹವು? ಅಗ್ನಿಸದೃಶನಾದ ನಿನ್ನನ್ನು ಮುಟ್ಟಿದರೂ ಪತಂಗದಂತೆ ಅವನು ಸುಟ್ಟುಹೋಗದಿರುವುದು ಆಶ್ಚರ್ಯವಷ್ಟೆ?

ಕೃಷ್ಣಃ

ಶೃಣು ರಾಜನ್ ಜರಾಸಂಧೋ ಯದ್ವೀರ್ಯೋ ಯತ್ಪರಾಕ್ರಮಃ ।
ಯಥಾ ಹ್ಯುಪೇಕ್ಷಿತೋಽಸ್ಮಾಭಿರ್ಬಹುಶಃ ಕೃತಕಿಲ್ಬಿಷಃ ॥೧೧॥

ರಾಜನೇ! ಜರಾಸಂಧನ ಬಲ ಎಂತಹದು ಅವನ ಪರಾಕ್ರಮ ಎಂತಹದು ಅವನು ಅನೇಕಬಾರಿ ಅಪಚಾರವನ್ನು ಮಾಡಿದರೂ ಹೇಗೆ ನಾನು ಅವನನ್ನು ಉಪೇಕ್ಷಿಸಿದೆ ಎಲ್ಲವನ್ನು ಹೇಳುತ್ತೇನೆ ಕೇಳು.

ಅಕ್ಷೋಹಿಣೀನಾಂ ತಿಸೃಣಾಮಾಸೀತ್ ಪರಮದರ್ಪಿತಃ ।
ರಾಜಾ ಬೃಹದ್ರಥೋ ನಾಮ ಮಗಧಾಧಿಪತಿರ್ನೃಪ ॥೧೨॥

ಮಗಧಾಧಿಪತಿಯಾದ ಬೃಹದ್ರಥನೆಂಬ ರಾಜನು ಮೂರು ಅಕ್ಷೋಹಿಣಿಸೈನ್ಯಕ್ಕೆ ಒಡೆಯನಾಗಿ ಪರಮದರ್ಪದಿಂದ ಕೂಡಿದ್ದನು.

ರೂಪವಾನ್ ವೀರ್ಯಸಂಪನ್ನಃ ಶ್ರೀಮಾನತುಲವಿಕ್ರಮಃ ।
ಸ ರಾಜ್ಯಂ ಕಾರಯಾಮಾಸ ಮಗಧೇಷು ಗಿರಿವ್ರಜೇ ॥೧೩॥

ಅವನು ರೂಪಸಂಪನ್ನನೂ ವೀರ್ಯಸಂಪನ್ನನೂ ಅಸದೃಶವಾದ ವಿಕ್ರಮ ಉಳ್ಳವನೂ ಕಾಂತಿಯುಕ್ತನೂ ಆಗಿ ಮಗಧದೇಶದಲ್ಲಿ ಗಿರಿವ್ರಜವನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯವನ್ನು ಆಳುತ್ತಿದ್ದನು.

ನಿತ್ಯಂ ದೀಕ್ಷಾಕೃಶತನುಃ ಶತಕ್ರತುರಿವಾಪರಃ ।
ತೇಜಸಾ ಸೂರ್ಯಸದೃಶಃ ಕ್ಷಮಯಾ ಪೃಥಿವೀಸಮಃ ।
ಯಶ್ಚಾಂತಕಸಮಃ ಕೋಪೇ ಶ್ರಿಯಾ ವೈಶ್ರವಣೋಪಮಃ ॥೧೪॥

ಅವನು ನೂರುಯಾಗಮಾಡಿದ ಇಂದ್ರನಂತೆ ಸತತವಾದ ಯಜ್ಞದೀಕ್ಷೆಯಿಂದ ಕೃಶವಾದ ಶರೀರಹೊಂದಿದವನಾಗಿ ತೇಜಸ್ಸಿನಿಂದ ಸೂರ್ಯಸದೃಶನೂ ಸಹನೆಯಿಂದ ಭೂಮಿಗೆ ಸದೃಶನೂ ಕೋಪದಿಂದ ಯಮನಿಗೆ ಸದೃಶನೂ ಸಂಪತ್ತಿನಿಂದ ಕುಬೇರನಿಗೆ ಸದೃಶನೂ ಆಗಿದ್ದನು.

ತಸ್ಯಾಭಿಜನಸಂಯುಕ್ತೈರ್ಗಣೈಶ್ಚ ಭರತರ್ಷಭ ।
ವ್ಯಾಪ್ತೇಯಂ ಪೃಥಿವೀ ಸರ್ವಾ ಸೂರ್ಯಸ್ಯೇವ ಗಭಸ್ತಿಭಿಃ ॥೧೫॥

ಭರತರ್ಷಭನೇ! ಶ್ರೇಷ್ಠಕುಲದಲ್ಲಿ ಪ್ರಸೂತರಾದ ಪುರುಷರಿಂದಕೂಡಿದ ಅವನ ಸೈನ್ಯವು ಸೂರ್ಯಕಿರಣಗಳು ಭೂಮಿಯನ್ನು ವ್ಯಾಪಿಸಿದಂತೆ ಸಮಗ್ರವಾದ ಭೂಮಿಯನ್ನೂ ವ್ಯಾಪಿಸಿದ್ದವು.

ಸ ಕಾಶಿರಾಜಸ್ಯ ಸುತೇ ಯಮಜೇ(ಸಮಾಜೇ) ಭರತರ್ಷಭ ।
ಉಪಯೇಮೇ ಮಹಾವೀರ್ಯೋ ರೂಪದ್ರವಿಣಸಮ್ಮತೇ ॥೧೬॥

ಭರತರ್ಷಭನೇ! ಮಹಾಪರಾಕ್ರಮಿಯಾದ ಅವನು ಸ್ವಯಂವರಸಮಾಜದಲ್ಲಿ ರೂಪದ್ರವಿಣಸಂಪತ್ತಿನಿಂದ ಕೂಡಿದ ಕಾಶಿರಾಜನ ಅವಳಿಮಕ್ಕಳನ್ನು ವಿವಾಹವಾದನು.

ತಯೋಶ್ಚಕಾರ ಸಮಯಂ ಮಿಥಃ ಸ ಪುರುಷರ್ಷಭ ।
ನಾತಿವರ್ತಿಷ್ಯ ಇತ್ಯೇವಂ ಪತ್ನೀಭ್ಯಾಂ ಸನ್ನಿಧೌ ತದಾ ॥೧೭॥

ಪುರುಷರ್ಷಭನೇ! ಅವನು ಆ ಇಬ್ಬರು ಪತ್ನಿಯರ ಸನ್ನಿಧಿಯಲ್ಲಿ ನಿಮ್ಮಿಬ್ಬರನ್ನು ಎಂದೂ ಮೀರಿ ನಡೆಯುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿದನು.

ಸ ತಾಭ್ಯಾಂ ಶುಶುಭೇ ರಾಜಾ ಪತ್ನೀಭ್ಯಾಂ ಮನುಜಾಧಿಪ ।
ಪ್ರಿಯಾಭ್ಯಾಮನುರೂಪಾಭ್ಯಾಂ ಕರೇಣುಭ್ಯಾಮಿವ ದ್ವಿಪಃ ॥೧೮॥

ಮನುಜಾಧಿಪನೇ! ಆ ರಾಜನು ಪ್ರಿಯರೂ ಅನುರೂಪರೂ ಆದ ಆ ಇಬ್ಬರು ಪತ್ನಿಯರ ಜೊತೆಯಲ್ಲಿ ಎರಡು ಚಿಕ್ಕ ಹೆಣ್ಣಾನೆಗಳಿಂದ ಕೂಡಿದ ಗಂಡಾನೆಯಂತೆ ಶೋಭಿಸಿದನು.

ತಯೋರ್ಮಧ್ಯಗತಶ್ಚಾಪಿ ರರಾಜ ವಸುಧಾಧಿಪಃ ।
ಗಂಗಾಯಮುನಯೋರ್ಮಧ್ಯೇ ಮೂರ್ತಿಮಾನಿವ ಸಾಗರಃ ॥೧೯॥

ಅವರಿಬ್ಬರ ಮಧ್ಯದಲ್ಲಿ ಆ ರಾಜನು ಗಂಗಾಯಮುನೆಯರ ಮಧ್ಯೆ ಶರೀರವನ್ನು ಧರಿಸಿ ನಿಂತ ಸಾಗರದಂತೆ ಶೋಭಿಸಿದನು.

ವಿಷಯೇಷು ನಿಮಗ್ನಸ್ಯ ತಸ್ಯ ಯೌವನಮತ್ಯಗಾತ್ ।
ನಚ ವಂಶಕರಂ ಪುತ್ರಮಾಸಾದಯತಿ ಪಾರ್ಥಿವಃ ॥೨೦॥

ವಿಷಯಭೋಗಗಳಲ್ಲಿ ನಿರತನಾದ ಅವನಿಗೆ ಯೌವನವು ಕಳೆದುಹೊಯಿತು. ಆದರೆ ರಾಜನು ವಂಶಕರನಾದ ಪುತ್ರನನ್ನು ಪಡೆಯಲಿಲ್ಲ.

ಮಂಗಲೈರ್ಬಹುಭಿರ್ಹೋಮೈಃ ಪುತ್ರಕಾಮಾಭಿರಿಷ್ಟಿಭಿಃ ।
ನಾಸಸಾದ ನೃಪಶ್ರೇಷ್ಠಃ ಪುತ್ರಂ ಕುಲವಿವರ್ಧನಮ್ ।
ಸ ಭಾರ್ಯಾಭ್ಯಾಂ ಚ ಸಹಿತೋ ನಿರ್ವೇದಮಗಮದ್ ಭೃಶಮ್ ॥

ಅನೇಕ ಮಂಗಳಕರವಾದ ಹೋಮಗಳನ್ನು ಮಾಡಿದರೂ ಪುತ್ರಕಾಮಾದಿ ಇಷ್ಟಿಗಳನ್ನು ಮಾಡಿದರೂ ಆ ಶ್ರೇಷ್ಠನಾದ ರಾಜನು ವಂಶವರ್ಧನನಾದ ಪುತ್ರನನ್ನು ಪಡೆಯಲಿಲ್ಲ. ಭಾರ್ಯೆಯರಿಂದ ಕೂಡಿದ ಅವನು ತೀವ್ರವಾದ ವೈರಾಗ್ಯವನ್ನು ಹೊಂದಿದನು.

ರಾಜ್ಯಂ ಚಾಪಿ ಪರಿತ್ಯಜ್ಯ ತಪೋವನಮಥಾಶ್ರಯತ್ ।
ಸಹ ಪೌರೈಃ ಪ್ರಕೃತಿಭಿರ್ನೃಪಭಕ್ತ್ಯಾ ವಿಶಾಂಪತೇ ॥೨೨॥

ರಾಜನೇ! ಅವನು ರಾಜ್ಯವನ್ನು ಪರಿತ್ಯಾಗಮಾಡಿ ತನ್ನ ಇಬ್ಬರು ಪತ್ನಿಯರಿಂದಲೂ ಕೆಲವು ಪೌರರಿಂದಲೂ ಮತ್ತು ರಾಜಭಕ್ತಿಯುಳ್ಳ ಕೆಲವು ಪ್ರಜೆಗಳಿಂದಲೂ ಸಹಿತನಾಗಿ ತಪೋವನಕ್ಕೆ ನಡೆದನು.

ಅಥ ಕಕ್ಷೀವತಃ ಪುತ್ರಂ ಗೌತಮಸ್ಯ ಮಹಾತ್ಮನಃ ।
ಶುಶ್ರಾವ ತಪಸಿ ಶ್ರೇಷ್ಠಮುದಾರಂ ಚಂಡಕೌಶಿಕಮ್ ॥೨೩॥

ಆನಂತರ ಮಹಾತ್ಮರಾದ ಗೌತಮರವಂಶದವರಾದ ಕಕ್ಷಿವಂತರ ಪುತ್ರರಾದ ಚಂಡಕೌಶಿಕ ಎಂಬ ಮುನಿಗಳು ತಪಸ್ಸಿನಲ್ಲಿ ಶ್ರೇಷ್ಠರಾದವರು ಮತ್ತು ಉದಾರವಾದ ಮನಸ್ಸುಳ್ಳವರು ಎಂಬ ವಾರ್ತೆಯನ್ನು ಕೇಳಿದನು.

ಯದೃಚ್ಛಯಾऽऽಗತಂ ತಂ ತು ವೃಕ್ಷಮೂಲಮುಪಾಶ್ರಿತಮ್ ।
ಪತ್ನೀಭ್ಯಾಂ ಸಹಿತೋ ರಾಜಾ ಸರ್ವಯತ್ನೈರತೋಷಯತ್ ॥೨೪॥

ಅನಂತರ ಅನಿರೀಕ್ಷಿತವಾಗಿ ಆ ಆಶ್ರಮಕ್ಕೆ ಆಗಮಿಸಿ ಒಂದು ವೃಕ್ಷಮೂಲದಲ್ಲಿ ಕುಳಿತಿದ್ದ ಚಂಡಕೌಶಿಕರನ್ನು ತನ್ನ ಪತ್ನಿಯ ಸಹಿತನಾದ ರಾಜನು ಎಲ್ಲ ರೀತಿಗಳಲ್ಲಿಯೂ ಸಂತೋಷಪಡಿಸಿದನು.

ಬೃಹದ್ರಥಂ ಚ ಸ ಋಷಿರ್ಯಥಾವತ್ ಪ್ರತ್ಯನಂದತ ।
ಉಪವಿಷ್ಟಶ್ಚ ತೇನಾಥ ಅನುಜ್ಞಾತೋ ಮಹಾತ್ಮನಾ ॥೨೫॥

ಆ ಋಷಿಯಾದರೂ ಬೃಹದ್ರಥನನ್ನು ಯಥಾಯೋಗ್ಯವಾಗಿ ಅಭಿನಂದಿಸಿದನು. ಮಹಾತ್ಮನಾದ ಆ ಋಷಿಯ ಅನುಜ್ಞೆಯನ್ನು ಪಡೆದು ಬೃಹದ್ರಥನು ಸಮೀಪದಲ್ಲಿ ಕುಳಿತುಕೊಂಡನು.

ತಮಪೃಚ್ಛತ್ ತದಾ ವಿಪ್ರಃ ಕಿಮಾಗಮನಮಿತ್ಯಥ ।
ಪೌರೈರನುಗತಸ್ಯೇಹ ಪತ್ನೀಭ್ಯಾಂ ಸಹಿತಸ್ಯ ಚ ॥೨೬॥

ಆಗ ಚಂಡಕೌಶಿಕನು ಪತ್ನಿ ಮತ್ತು ಪೌರರಿಂದ ಹಿಂಬಾಲಿಸಲ್ಪಟ್ಟು ತಪೋವನವನ್ನು ಪ್ರವೇಶಿಸಲು ಕಾರಣವೇನೆಂದು ರಾಜನನ್ನು ಕೇಳಿದನು.

ತಮುವಾಚ ಮುನಿಂ ರಾಜಾ ಭಗವನ್ ನಾಸ್ತಿ ಮೇ ಸುತಃ ।
ತಾದೃಶಸ್ಯ ಚ ರಾಜ್ಯೇನ ವೃದ್ಧತ್ವೇ ಕಿಂ ಪ್ರಯೋಜನಮ್ ॥೨೭॥

ಆ ಋಷಿಯನ್ನುದ್ದೇಶಿಸಿ ರಾಜನು ಪೂಜ್ಯರೇ ನನಗೆ ಮಕ್ಕಳಿಲ್ಲ. ಅಂತಹ ವೃದ್ಧನಾದ ನನಗೆ ರಾಜ್ಯದಿಂದ ಏನು ಪ್ರಯೋಜನ?

ಸೋಽಹಂ ತಪಶ್ಚರಿಷ್ಯಾಮಿ ಪತ್ನೀಭ್ಯಾಂ ಸಹಿತೋ ವನೇ ।
ನಾಪ್ರಜಸ್ಯ ಮುನೇ ಕೀರ್ತಿಃ ಸ್ವರ್ಗಶ್ಚ ನ ಕ್ಷಯೋ ಭವೇತ್ ।
ಏವಮುಕ್ತಸ್ಯ ರಾಜ್ಞಾ ತು ಮುನೇಃ ಕಾರುಣ್ಯಮಾಗತಮ್ ॥೨೮॥

ಆದ್ದರಿಂದ ನಾನು ಪತ್ನಿಯರ ಜೊತೆಯಲ್ಲಿ ಕಾಡಿನಲ್ಲಿ ತಪಸ್ಸನ್ನು ಆಚರಿಸುತ್ತಿದ್ದೇನೆ. ಸಂತತಿ ಇಲ್ಲದ ರಾಜನಿಗೆ ಈ ಲೋಕದಲ್ಲಿ ಕೀರ್ತಿಯಾಗಲೀ ಸ್ವರ್ಗಲೋಕದ ವಾಸವಾಗಲೀ ದೊರಕುವುದಿಲ್ಲವಷ್ಟೇ? ಹೀಗೆ ರಾಜನು ಹೇಳಿದಾಗ ಆ ಋಷಿಗೆ ಅವನ ಮೇಲೆ ಬಹಳ ಕರುಣೆ ಉಂಟಾಯಿತು.

ಚಂಡಕೌಶಿಕಃ

ಪರಿತುಷ್ಟೋಽಸ್ಮಿ ತೇ ರಾಜನ್ ವರಂ ವರಯ ಸುವ್ರತ ॥೨೯॥

ರಾಜನೇ! ನಿನ್ನ ವಿಷಯದಲ್ಲಿ ನಾನು ಸಂತೋಷವನ್ನು ಹೊಂದಿದ್ದೇನೆ. ಸುವ್ರತನೇ! ನಿನಗೆ ಬೇಕಾದ ವರವನ್ನು ಕೇಳು.

ಕೃಷ್ಣಃ

ತತಃ ಸಭಾರ್ಯಃ ಪ್ರಣತಸ್ತಮುವಾಚ ಬೃಹದ್ರಥಃ ।
ಪುತ್ರದರ್ಶನನೈರಾಶ್ಯಾದ್ ಬಾಷ್ಪಗದ್ಗದಯಾ ಗಿರಾ ॥೩೦॥

ಆಗ ಬೃಹದ್ರಥನು ತನ್ನ ಪತ್ನಿಯರೊಡನೆ ಆ ಋಷಿಗೆ ನಮಸ್ಕರಿಸಿ ಪುತ್ರದರ್ಶನವನ್ನು ಹೊಂದದ ನಿರಾಸೆಯಿಂದ ಬಾಷ್ಪಗದ್ಗದವಾದ ಮಾತುಗಳಿಂದ ಮಾತನಾಡಿದನು.

ಭಗವನ್ ರಾಜ್ಯಮುತ್ಸೃಜ್ಯ ಪ್ರಸ್ಥಿತಸ್ಯ ತಪೋವನಮ್ ।
ಕಿಂ ವರೇಣಾಲ್ಪಭಾಗ್ಯಸ್ಯ ಕಿಂ ರಾಜ್ಯೇನಾಪ್ರಜಸ್ಯ ಮೇ ॥೩೧॥

ಪೂಜ್ಯರೇ! ರಾಜ್ಯವನ್ನು ಪರಿತ್ಯಜಿಸಿ ತಪೋವನಕ್ಕೆ ಬಂದ ಅಲ್ಪಭಾಗ್ಯನಾದ ನನಗೆ ವರದಿಂದ ಏನು ಪ್ರಯೋಜನ? ಸಂತತಿ ಇಲ್ಲದ ನನಗೆ ರಾಜ್ಯದಿಂದಲಾದರೂ ಏನು ಪ್ರಯೋಜನ?

ಏತಚ್ಛ್ರುತ್ವಾ ಮುನಿರ್ಧ್ಯಾನಮಗಮತ್ ಕ್ಷುಭಿತೇಂದ್ರಿಯಃ ।
ತಸ್ಯೈವ ಚಾಮ್ರವೃಕ್ಷಸ್ಯ ಛಾಯಾಯಾಂ ಸಮುಪಾವಿಶತ್ ॥೩೨॥

ಇದನ್ನು ಕೇಳಿ ಮನಃಕ್ಷೋಭೆಗೆ ಒಳಗಾದ ಆ ಮುನಿಯು ಧ್ಯಾನಸಕ್ತನಾಗಿ ಅದೇ ಆಮ್ರವೃಕ್ಷದ ಛಾಯೆಯಲ್ಲಿ ಕುಳಿತುಕೊಂಡನು.

ತಸ್ಯೋಪವಿಷ್ಟಸ್ಯ ಮುನೇರುತ್ಸಂಗೇ ನಿಪಪಾತ ಹ ।
ಅಮಾರುತಮನಾವಿದ್ಧಮೇಕಮಾಮ್ರಫಲಂ ಕಿಲ ॥೩೩॥

ಹಾಗೆ ಕುಳಿತುಕೊಂಡ ಋಷಿಯ ತೊಡಯಮೇಲೆ ಗಾಳಿಯಿಲ್ಲದೆ ಯಾರಿಂದಲೂ ಹೊಡೆಯಲ್ಪಡದೆ ಒಂದು ಮಾವಿನ ಹಣ್ಣು ತಾನಾಗಿಯೇ ಬಿದ್ದಿತಷ್ಟೇ!

ತತ್ ಪ್ರಗೃಹ್ಯ ಮುನಿಶ್ರೇಷ್ಠೋ ಹೃದಯೇನಾಭಿಮಂತ್ರ್ಯ ಚ ।
ರಾಜ್ಞೇ ದದಾವಪ್ರತಿಮಂ ಪುತ್ರಸಂಪ್ರಾಪ್ತಿಕಾರಕಮ್ ॥೩೪॥

ಆ ಮುನಿಶ್ರೇಷ್ಠನು ಆ ಹಣ್ಣನ್ನು ತೆಗೆದುಕೊಂಡು ರಾಜನ ಮೇಲಿನ ಪ್ರೀತಿಯಿಂದ ಅದನ್ನು ಅಭಿಮಂತ್ರಿಸಿ ಪುತ್ರಪ್ರಾಪ್ತಿಗೆ ಕಾರಣವಾದ ಆ ಅಸದೃಶವಾದ ಫಲವನ್ನು ರಾಜನಿಗೆ ಕೊಟ್ಟನು.

ಉವಾಚ ಚ ಮಹಾಪ್ರಾಜ್ಞಸ್ತಂ ರಾಜಾನಂ ಮಹಾಮುನಿಃ ।
ಗಚ್ಛ ರಾಜನ್ ಕೃತಾರ್ಥೋಽಸಿ ನಿವರ್ತಸ್ವ ಜನಾಧಿಪ ॥೩೫॥

ಮಹಾಪ್ರಾಜ್ಞನಾದ ಆ ಋಷಿಶ್ರೇಷ್ಠನು ರಾಜನನ್ನು ಕುರಿತು ರಾಜನೇ! ನೀನು ಕೃತಾರ್ಥನಾಗಿದ್ದೀಯೆ ರಾಜ್ಯಕ್ಕೆ ಹಿಂದಿರುಗಿ ಹೋಗು ಎಂದು ಹೇಳಿದನು.

ಏಷ ತೇ ತನಯೋ ರಾಜನ್ ಮಾ ತಪ್ತೀಸ್ತ್ವಂ ತಪೋ ವನೇ ।
ಪ್ರಜಾಃ ಪಾಲಯ ಧರ್ಮೇಣ ಏಷ ಧರ್ಮೋ ಮಹೀಕ್ಷಿತಾಮ್ ॥೩೬॥

ರಾಜನೇ! ಇದೋ ನೋಡು ಈ ನಿನ್ನ ಮಗನಿದ್ದಾನೆ. ನೀನು ಕಾಡಿನಲ್ಲಿ ತಪಸ್ಸನ್ನುಮಾಡಬೇಡ. ಧರ್ಮದಿಂದ ಪ್ರಜೆಗಳ ರಕ್ಷಣೆಯನ್ನು ಮಾಡು. ರಾಜರಿಗೆ ಅದೇ ಶ್ರೇಷ್ಠವಾದ ಧರ್ಮ.

ಯಜಸ್ವ ವಿವಿಧೈರ್ಯಜ್ಞೈರಿಂದ್ರಂ ತರ್ಪಯ ಚೇಂದುನಾ ।
ಪುತ್ರಂ ರಾಜ್ಯೇ ಪ್ರತಿಷ್ಠಾಪ್ಯ ತತ ಆಶ್ರಮಮಾವ್ರಜ ।
ಅಷ್ಟೌ ವರಾನ್ ಪ್ರಯಚ್ಛಾಮಿ ತವ ಪುತ್ರಸ್ಯ ಪಾರ್ಥಿವ ॥೩೭॥

ಅನೇಕ ಯಾಗಗಳನ್ನುಮಾಡು. ಸೋಮರಸದಿಂದ ಇಂದ್ರನನ್ನು ಸಂತೋಷಪಡಿಸು. ಮಗನನ್ನು ರಾಜ್ಯದಲ್ಲಿ ಪ್ರತಿಷ್ಠಾಪಿಸಿ ಅನಂತರ ಆಶ್ರಮಕ್ಕೆ ಬಾ. ರಾಜನೇ! ನಿನ್ನ ಪುತ್ರನಿಗೆ ನಾನು ಎಂಟು ವರಗಳನ್ನು ಕೊಡುತ್ತೇನೆ.

ಬ್ರಹ್ಮಣ್ಯತಾಮಜೇಯತ್ವಂ ಯುದ್ಧೇಷು ಚ ತಥಾ ರತಿಮ್ ।
ಪ್ರಿಯಾತಿಥೇಯತಾಂ ಚೈವ ದೀನಾನಾಮನ್ವವೇಕ್ಷಣಮ್ ॥೩೮॥

ತಥಾ ಬಲಂ ಚ ಸುಮಹಲ್ಲೋಕೇ ಕೀರ್ತಿಂ ಚ ಶಾಶ್ವತೀಮ್ ।
ಅನುರಾಗಂ ಪ್ರಜಾನಾಂ ಚ ದದೌ ತಸ್ಮೈ ಸ ಕೌಶಿಕಃ ॥೩೯॥

ಬ್ರಾಹ್ಮಣರಲ್ಲಿ ಭಕ್ತಿ ಯುದ್ಧದಲ್ಲಿ ಅಜೇಯತ್ವ ಯುದ್ಧರತಿ ಅತಿಥಿಪ್ರಿಯತ್ವ ದೀನರಕ್ಷಣೆ ಮಹಾಬಲ ಶಾಶ್ವತವಾದ ಕೀರ್ತಿ ಪ್ರಜೆಗಳ ಅನುರಾಗ ಈ ಎಂಟುವರಗಳನ್ನು ಕೌಶಿಕನು ಅವನಿಗೆ ಕೊಟ್ಟನು.

ಅನುಜ್ಞಾತಃ ಸ ಋಷಿಣಾ ಪತ್ನೀಭ್ಯಾಂ ಸಹಿತೋ ನೃಪಃ ।
ಪೌರೈರನುಗತಶ್ಚಾಪಿ ವಿವೇಶ ಸ್ವಪುರಂ ಪುನಃ ॥೪೦॥

ಆ ರಾಜನು ಋಷಿಯ ಅನುಮತಿಯನ್ನು ಪಡೆದು ಪತ್ನಿಯರ ಸಹಿತನಾಗಿ ಪೌರರಿಂದ ಹಿಂಬಾಲಿಸಲ್ಪಟ್ಟು ಪುನಃ ತನ್ನ ಪಟ್ಟಣವನ್ನು ಪ್ರವೇಶಿಸಿದನು.

ಯಥಾಸಮಯಮಾಜ್ಞಾಯ ತದಾ ಸ ನೃಪಸತ್ತಮಃ ।
ದ್ವಾಭ್ಯಾಮೇಕಂ ಫಲಂ ಪ್ರಾದಾತ್ ಪತ್ನೀಭ್ಯಾಂ ಭರತರ್ಷಭ ॥೪೧॥

ಭರತರ್ಷಭನೇ! ಆ ನೃಪಶ್ರೇಷ್ಠನು ಯೋಗ್ಯವಾದ ಸಮಯವನ್ನು ತಿಳಿದು. ತನ್ನ ಇಬ್ಬರು ಪತ್ನಿಯರಿಗೆ ಆ ಒಂದು ಫಲವನ್ನು ಕೊಟ್ಟನು.

ಮುನೇಶ್ಚ ಬಹುಮಾನೇನ ಕಾಲಸ್ಯ ಚ ವಿಪರ್ಯಯಾತ್ ।
ತತಶ್ಚಾಮ್ರಂ ದ್ವಿಧಾ ಕೃತ್ವಾ ಭಕ್ಷಯಾಮಾಸತುಃ ಶುಭೇ ॥೪೨॥

ಋಷಿಗಳ ಮಾತಿನ ಮೇಲಿನ ಗೌರವದಿಂದಲೂ ಕಾಲವಿಪರ್ಯಾಸದಿಂದಲೂ ಆ ಶುಭಾಂಗಿಯರು ಆ ಹಣ್ಣನ್ನು ಎರಡು ಭಾಗವನ್ನಾಗಿ ಮಾಡಿ ಸ್ವೀಕರಿಸಿದರು.

ಭಾವಿತ್ವಾದಪಿ ಚಾರ್ಥಸ್ಯ ಸತ್ಯವಾಕ್ಯಾತ್ ತಥಾ ಮುನೇಃ ।
ತಯೋಃ ಸಮಭವದ್ ಗರ್ಭಃ ಫಲಪ್ರಾಶನಸಂಭವಃ ॥೪೩॥

ದೈವಸಂಕಲ್ಪದಂತೆ ಮುಂದಿನಕಾರ್ಯವು ನಡೆಯಬೇಕಾದ ಕಾರಣದಿಂದ ಮತ್ತು ಋಷಿಯ ಸತ್ಯವಾಕ್ಯದ ಬಲದಿಂದ ಆ ಹಣ್ಣನ್ನು ಸ್ವೀಕರಿಸಿದ ಕಾರಣದಿಂದ ಆ ಇಬ್ಬರೂ ಗರ್ಭವನ್ನು ಧರಿಸಿದರು.

ದೃಷ್ಟ್ವಾ ನರಪತಿಃ ಶ್ರೀಮಾನ್ ಪರಾಂ ಮುದಮವಾಪ ಹ ।
ಕಾಲೇ ತು ಸಮನುಪ್ರಾಪ್ತೇ ಯಥಾಸಮಯಮಾಗತೇ ।
ಪ್ರಜಾಯೇತಾಮುಭೇ ರಾಜನ್ ಶರೀರಶಕಲಾವುಭೌ ॥೪೪॥

ಅವರನ್ನು ನೋಡಿದ ಕಾಂತಿಯುಕ್ತನಾದ ರಾಜನು ಬಹಳ ಸಂತೋಷವನ್ನು ಹೊಂದಿದನು. ರಾಜನೇ! ಪ್ರಸವದ ಸಮಯವು ಪ್ರಾಪ್ತವಾದಗ ಅವರಿಬ್ಬರೂ ಶರೀರದ ಅರ್ಧ ಅರ್ಧಭಾಗಗಳನ್ನು ಪ್ರಸವಿಸಿದರು.

ಏಕಾಕ್ಷಿಬಾಹುಚರಣಾರ್ಧೋದರಮುಖಿಸ್ಪೃಜೌ ।
ದೃಷ್ಟ್ವಾ ಶರೀರಶಕಲೌ ದುಃಖೇನಾಪತತಾಂ ಸ್ತ್ರಿಯೌ ॥೪೫॥

ಒಂದು ಕಣ್ಣು ಒಂದು ಬಾಹು ಒಂದು ಪಾದ ಅರ್ಧ ಉದರ ಅರ್ಧ ಮುಖ ಅರ್ಧ ಪೃಷ್ಠ ಇರುವ ಎರಡು ಭಾಗಗಳನ್ನು ನೋಡಿ ಅವರಿಬ್ಬರೂ ದುಃಖದಿಂದ ನೆಲಕ್ಕೆ ಉರುಳಿದರು.

ಉತ್ಪನ್ನೇ ಸಹಸಾ ತತ್ರ ತೇ ಭಗಿನ್ಯೌ ತದಾऽಬಲೇ ।
ಸಜೀವೇ ಪ್ರಾಣಿಶಕಲೇ ತತ್ ಪ್ರಜಾತೇ ಸುದುಃಖಿತೇ ॥೪೬॥

ಆ ಇಬ್ಬರು ಅಕ್ಕತಂಗಿಯರು ಹಾಗೆ ಹುಟ್ಟಿದ ಶರೀರಭಾಗಗಳು ಜೀವಸಹಿತವಾಗಿ ಇರುವುದನ್ನು ನೋಡಿ ಬಹಳ ದುಃಖಿತರಾದರು.

ತಯೋರ್ಧಾತ್ರ್ಯೌ ಸುಸಂವೀತೇ ಕೃತ್ವಾ ತೇ ಗರ್ಭಸಂಪ್ಲವೇ ।
ನಿಷ್ಕಮ್ಯಾಂತಃಪುರದ್ವಾರಾತ್ ಸಮುತ್ಸೃಜ್ಯಾಶು ಜಗ್ಮತುಃ ॥೪೭॥

ಅವರಿಬ್ಬರ ದಾದಿಯರು ಆ ಗರ್ಭದ ಭಾಗಗಳನ್ನು ಚನ್ನಾಗಿ ಬಟ್ಟೆಯಲ್ಲಿ ಸುತ್ತಿಕೊಂಡು ಅಂತಃಪುರದಿಂದ ಹೊರಗೆ ಬಂದು ಊರಿನ ಹೊರಗೆ ಅವುಗಳನ್ನು ಪರಿತ್ಯಾಗಮಾಡಿ ಹಿಂದಿರುಗಿದರು.

ದುಕೂಲಾಭ್ಯಾಂ ಸುಸಂಛನ್ನೇ ಪಾಂಡರಾಭ್ಯಾಮುಭೇ ತತಾ ।
ಅಜ್ಞಾತೇ ಕಸ್ಯಚಿತ್ತ್ವೇವ ಜಹತುಸ್ತೇ ಚತುಷ್ಪಥೇ ॥೪೮॥

ಅವರು ಅವೆರಡು ಗರ್ಭಭಾಗಗಳನ್ನು ಬಿಳಿಯ ವಸ್ತ್ರದಿಂದ ಚೆನ್ನಾಗಿ ಸುತ್ತಿ ಯಾರಿಗೂ ತಿಳಿಯದಂತೆ ನಾಲ್ಕು ಬೀದಿಗಳು ಸೇರುವ ಸ್ಥಳದಲ್ಲಿ ಇಟ್ಟು ಹಿಂದಿರುಗಿದರು.

ತತೋ ವಿವಿಶತುಸ್ತೇ ಚ ಪುನರಂತಃಪುರಂ ತದಾ ।
ಕಥಯಾಮಾಸತುರುಭೇ ಪತ್ನೀಭ್ಯಾಂ ತೇ ಪೃಥಕ್ ಪೃಥಕ್ ॥೪೯॥

ಅನಂತರ ಅವರಿಬ್ಬರೂ ಪುನಃ ಅಂತಃಪುರವನ್ನು ಪ್ರವೇಶಿಸಿ ರಾಜನ ಇಬ್ಬರು ಪತ್ನಿಯರಿಗೂ ತಾವು ಮಾಡಿದ ಕೆಲಸವನ್ನು ಬೇರೆ ಬೇರೆಯಾಗಿ ನಿರೂಪಿಸಿದರು.

ತೇ ಚತುಷ್ಪಥನಿಕ್ಷಿಪ್ತೇ ಜರಾ ನಾಮಾಥ ರಾಕ್ಷಸೀ ।
ಜಗ್ರಾಹ ಮನುಜವ್ಯಾಘ್ರ ಮಾಂಸಶೋಣಿತಭೋಜನಾ ॥೫೦॥

ಮನುಷ್ಯವ್ಯಾಘ್ರನೇ! ನಾಲ್ಕುಬೀದಿಗಳು ಸೇರುವ ಸ್ಥಳದಲ್ಲಿ ಇಟ್ಟ ಆ ಗರ್ಭಭಾಗಗಳನ್ನು ಮಾಂಸಶ್ರೋಣಿತ ಭಕ್ಷಳಾದ ಜರಾ ಎಂಬ ರಾಕ್ಷಸಿಯು ನೋಡಿ ಕೈಗೆ ತೆಗೆದುಕೊಂಡಳು.

ಕರ್ತುಕಾಮಾ ಸುಖಿವಹೇ ಶಕಲೇ ಪಾರ್ಥ ರಾಕ್ಷಸೀ ।
ಸಂಯೋಜಯಾಮಾಸ ತದಾ ವಿಧಾನಬಲಚೋದಿತಾ ॥೫೧॥

ಪಾರ್ಥನೇ! ಆ ರಾಕ್ಷಸಿಯು ಆ ಭಾಗಗಳಿಗೆ ಸುಖವನ್ನು ಉಂಟುಮಾಡಲು ಬಯಸಿ ವಿಧಿಬರಹದಿಂದ ಪ್ರೇರಿತಳಾಗಿ ಅವುಗಳನ್ನು ಪರಸ್ಪರವಾಗಿ ಸೇರಿಸಿದಳು.

ತೇ ಸಮಾನೀತಮಾತ್ರೇಣ ಶಕಲೇ ಭರತರ್ಷಭ ।
ಏಕಮೂರ್ತಿಗತೇ ವೀರ ಕುಮಾರಃ ಸಮಪದ್ಯತ ॥೫೨॥

ಭರತರ್ಷಭನೇ! ಆ ಭಾಗಗಳು ಜೋಡಿಸಿದ ತಕ್ಷಣವೇ ಒಂದೇ ಶರೀರವನ್ನು ಹೊಂದಿ ಕುಮಾರನ ರೂಪವನ್ನು ತಾಳಿದವು.

ತತಃ ಸಾ ರಾಕ್ಷಸೀ ರಾಜನ್ ವಿಸ್ಮಯೋತ್ಫುಲ್ಲಲೋಚನಾ ।
ನ ಶಶಾಕ ಸಮುದ್ಧರ್ತುಂ ವಜ್ರಸಾರಮಯಂ ಶಿಶುಮ್ ॥೫೩॥

ರಾಜನೇ! ಆಗ ಆಶ್ಚರ್ಯದಿಂದ ಅರಳಿದ ಕಣ್ಣುಗಳುಳ್ಳ ಆ ರಾಕ್ಷಸಿಯು ವಜ್ರಸಾರದಂತಿದ್ದ ಆ ಶಿಶುವನ್ನು ಎತ್ತಲು ಸಮರ್ಥಳಾಗಲಿಲ್ಲ.

ಬಾಲಸ್ತಾಮ್ರತಲಾಂ ಮುಷ್ಟಿಂ ಕೃತ್ವಾऽऽಸ್ಯೇ ತು ನಿಧಾಯ ಸಃ ।
ಪ್ರಾಕ್ರೋಶದತಿಸಂರಂಭಾತ್ ಸತೋಯ ಇವ ತೋಯದಃ ॥೫೪॥

ಆ ಕುಮಾರನಾದರೋ ತನ್ನ ಕೆಂಪಾದ ಮುಷ್ಟಿಯನ್ನು ಬಾಯೊಳಗೆ ಇಟ್ಟುಕೊಂಡು ಬಹಳ ಸಿಟ್ಟಿನಿಂದ ನೀರನ್ನು ಹೊಂದಿದ ಮೇಘದ ಗರ್ಜನೆಯಂತೆ ಕಿರುಚಿದನು.

ತೇನ ಶಬ್ದೇನ ವಿತ್ರಸ್ತಃ ಸಹಸಾऽಂತಃಪುರೇ ಜನಃ ।
ನಿರ್ಜಗಾಮ ಮಹಾರಾಜನ್ ರಾಜ್ಞಾ ಸಹ ಪರಂತಪ ॥೫೫॥

ಮಹಾರಾಜನೇ! ಪರಂತಪನೇ! ಆ ಶಬ್ದದಿಂದ ನಡುಗಿದ ಅಂತಃಪುರದ ಜನರು ಇದ್ದಕ್ಕಿದಂತೆಯೇ ರಾಜನ ಜೊತೆಯಲ್ಲಿ ಹೊರಗೆ ಬಂದರು.

ತೇಽಬಲೇ ಚ ಪರಿಮ್ಲಾತೇ ಪಯಃಪೂರ್ಣಪಯೋಧರೇ ।
ನಿಷ್ಫಲೇ ಪುತ್ರಲಾಭಾಯ ಸಹಸೈವಾಭ್ಯಗಚ್ಛತಾಮ್ ॥೫೬॥

ಸ್ತನಗಳಲ್ಲಿ ಪೂರ್ಣವಾಗಿ ಕ್ಷೀರವನ್ನು ತುಂಬಿಕೊಂಡು ಬಾಡಿದ ಮುಖವನ್ನು ಹೊಂದಿ ನಿಷ್ಫಲವಾದ ಪುತ್ರಲಾಭವನ್ನು ಪಡೆದ ಆ ಇಬ್ಬರು ಪತ್ನಿಯರೂ ಆ ಕ್ಷಣವೇ ಹೊರಬಂದರು.

ತೇ ಚ ದೃಷ್ಟ್ವಾ ತಥಾಭೂತೇ ರಾಜ್ಞಸ್ತಸ್ಯೇಷ್ಟಸಂತತಿಮ್ ।
ತಂ ಚ ಬಾಲಂ ಸುಬಲಿನಂ ಚಿಂತಯಾಮಾಸ ರಾಕ್ಷಸೀ ॥೫೭॥

ಆ ರಾಕ್ಷಸಿಯು ಅಂತಹ ಪರಿಸ್ಥಿತಿಯಲ್ಲಿ ಇದ್ದ ಆ ಇಬ್ಬರು ಪತ್ನಿಯರನ್ನು ನೋಡಿ ರಾಜನಿಗೆ ಇಷ್ಟವಾದ ಸಂತತಿಯನ್ನು ಮತ್ತು ಆ ಬಾಲಕನ ಪರಮಬಲವನ್ನು ಗಮನಿಸಿ ಆಲೋಚಿಸಿದಳು.

ನಾಹಾರ್ಹಾಮಿ ವಿಷಯೇ ರಾಜ್ಞೋ ವಸಂತೀ ಪುತ್ರಗೃದ್ಧಿನಃ ।
ಬಾಲಂ ಪುತ್ರಮುಪಾದಾತುಂ ಧಾರ್ಮಿಕಸ್ಯ ಮಹಾತ್ಮನಃ ॥೫೮॥

ಮಗವನ್ನು ಬಯಸುವ ಮಹಾತ್ಮನೂ ಧಾರ್ಮಿಕನೂ ಆದ ರಾಜನ ರಾಜ್ಯದಲ್ಲಿ ವಾಸಿಸುವ ನಾನು ಈ ಮಗುವನ್ನು ತೆಗೆದುಕೊಂಡು ಹೋಗುವುದು ಯೋಗ್ಯವಲ್ಲ.

ಸಾ ತಂ ಬಾಲಮುಪಾದಾಯ ಮೇಘಲೇಖೇವ ಭಾಸ್ಕರಮ್ ।
ಸಾ ಕೃತ್ವಾ ಮಾನುಷಂ ರೂಪಮುವಾಚ ಮನುಜಾಧಿಪಮ್ ॥೫೯॥

ಅವಳು ಮೇಘ ಸಮೂಹವು ಭಾಸ್ಕರನನ್ನು ಧರಿಸಿದಂತೆ ಆ ಬಾಲಕನನ್ನು ಎತ್ತಿಕೊಂಡು ಸುಂದರವಾದ ಮನುಷ್ಯರೂಪವನ್ನು ಧರಿಸಿ ರಾಜನ ಎದುರಿಗೆ ಬಂದು ಮಾತನಾಡಿದಳು.

ಬೃಹದ್ರಥ ಸುತಸ್ತೇಽಯಂ ಮದ್ದತ್ತಃ ಪ್ರತಿಗೃಹ್ಯತಾಮ್ ।
ತವ ಪತ್ನೀದ್ವಯೇ ಜಾತೋ ದ್ವಿಜಾತಿವರದಾನತಃ ।
ಧಾತ್ರೀಜನಪರಿತ್ಯಕ್ತೋ ಮಯಾಽಯಂ ಪರಿರಕ್ಷಿತಃ ॥೬೦॥

ಬೃಹದ್ರಥನೇ! ನಾನು ಕೊಡುತ್ತಿರುವ ಈ ಮಗುವನ್ನು ನಿನ್ನ ಮಗನೆಂದು ಸ್ವೀಕರಿಸು. ಇವನು ಋಷಿಯ ವರದಾನದ ಮಹಿಮೆಯಿಂದ ನಿನ್ನ ಇಬ್ಬರು ಪತ್ನಿಯರಲ್ಲಿ ಹುಟ್ಟಿದವನು. ದಾದಿಯರಿಂದ ಪರಿತ್ಯಾಗಮಾಡಲ್ಪಟ್ಟ ಇವನನ್ನು ನಾನು ರಕ್ಷಿಸಿದ್ದೇನೆ.

ಕೃಷ್ಣಃ

ತತಸ್ತೇ ಭರತಶ್ರೇಷ್ಠ ಕಾಶಿರಾಜಸುತೇ ಉಭೇ ।
ತಂ ಬಾಲಮಭಿಲಭ್ಯಾಶು ಪ್ರಸ್ರವೈರಭ್ಯಷಿಂಚತಾಮ್ ॥೬೧॥

ಭರತಶ್ರೇಷ್ಠನೇ ! ಅನಂತರ ಕಾಶಿರಾಜನ ಆ ಇಬ್ಬರು ಹೆಣ್ಣು ಮಕ್ಕಳು ಆ ಕುಮಾರನನ್ನು ಪಡೆದು ತಮ್ಮ ಕಣ್ಣೀರುಗಳಿಂದ ಅವನಿಗೆ ಅಭಿಷೇಕವನ್ನು ಮಾಡಿದರು.

ತತಃ ಸ ರಾಜಾ ಸಂಹೃಷ್ಟಃ ಸರ್ವಂ ತದುಪಲಭ್ಯ ವೈ ।
ಅಪೃಚ್ಛನ್ನವಹೇಮಾಭಾಂ ರಾಕ್ಷಸೀಂ ತಾಮರಾಕ್ಷಸೀಮ್ ॥೬೨॥

ಅನಂತರ ಇವೆಲ್ಲವನ್ನೂ ನೋಡಿ ಸಂತೋಷಗೊಂಡ ರಾಜನು ಸುವರ್ಣದ ಕಾಂತಿಯನ್ನು ಹೊಂದಿದ್ದ ರಾಕ್ಷಸಿಯಂತೆ ತೋರದಿರುವ ಆ ರಾಕ್ಷಸಿಯನ್ನು ಕುರಿತು ಹೇಳಿದನು.

ಕಾ ತ್ವಂ ಕಮಲಗರ್ಭಾಭೇ ಮಮ ಪುತ್ರಪ್ರದಾಯಿನೀ ।
ಕಾಮಂ ಪ್ರಬ್ರೂಹಿ ಕಲ್ಯಾಣಿ ದೇವತಾ ಪ್ರತಿಭಾಸಿ ಮೇ ॥೬೩॥

ಕಮಲೋದರರ ಕಾಂತಿಯುಳ್ಳವಳೇ! ನನಗೆ ಪುತ್ರಪ್ರದಾನಮಾಡಿದ ನೀನು ಯಾರು? ಕಲ್ಯಾಣಿಯೇ! ನೀನು ನನಗೆ ದೇವತೆಯಂತೆ ಕಾಣುತ್ತಿಯೆ. ನೀನು ಯಾರು ಎಂದು ನಿಸ್ಸಂಕೋಚವಾಗಿ ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ
ಏಕೋನವಿಂಶತಿತಮೋಽಧ್ಯಾಯಃ ॥
ಮಂತ್ರಪರ್ವಣಿ ಏಕೋನವಿಂಶತಿತಮೋಽಧ್ಯಾಯಃ॥೧೯॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.

★★★★★

ಇಪ್ಪತ್ತನೆಯ ಅಧ್ಯಾಯ

(ತನ್ನ ಸ್ವರೂಪವನ್ನು ತಿಳಿಸಿ ಜರೆಯ ಅಂತರ್ಧಾನ; ಜರಾಸಂಧನ ಅಭಿವೃದ್ಧಿ ಕಥನ.)

ರಾಕ್ಷಸೀಃ

ಜರಾ ನಾಮಾಸ್ಮಿ ಭದ್ರಂ ತೇ ರಾಕ್ಷಸೀ ಕಾಮರೂಪಿಣೀ ।
ತವ ವೇಶ್ಮನಿ ರಾಜೇಂದ್ರ ಭಕ್ಷ್ಯೈರ್ಭೋಜ್ಯೈಃ ಸುಪೂಜಿತಾ ॥೧॥

ರಾಜೇಂದ್ರನೇ! ನಿನಗೆ ಮಂಗಳವಾಗಲಿ; ನಾನು ಕಾಮರೂಪವುಳ್ಳ ಜರೆಯೆಂಬ ರಾಕ್ಷಸಿ. ನಿನ್ನಮನೆಯಲ್ಲಿ ನಾನು ಭಕ್ಷಭೋಜ್ಯಗಳಿಂದ ಚೆನ್ನಾಗಿ ಪೂಜಿಸಲ್ಪಟ್ಟಿದ್ದೇನೆ.

ಸಾऽಹಂ ಪ್ರತ್ಯುಪಕಾರಾರ್ಥಂ ಚಿಂತಯಂತ್ಯನಿಶಂ ನೃಪ ।
ತವೇಮೇ ಪುತ್ರಶಕಲೇ ದೃಷ್ಟವತ್ಯಸ್ಮಿ ಧಾರ್ಮಿಕೀ ॥೨॥

ರಾಜನೇ! ನಿನಗೆ ಪ್ರತ್ಯುಪಕಾರವನ್ನು ಮಾಡಬೇಕೆಂದು ಯಾವಾಗಲೂ ಚಿಂತಿಸುತ್ತಿದ್ದ ಧಾರ್ಮಿಕಳಾದ ನಾನು ನಿನ್ನ ಈ ಎರಡು ಪುತ್ರ ಭಾಗಗಳನ್ನು ನೋಡಿದೆನು.

ಸಂಶ್ಲೇಷಿತೇ ಮಯಾ ದೈವಾತ್ ಕುಮಾರಃ ಸಮಪದ್ಯತ ।
ತವ ಭಾಗ್ಯೈರ್ಮಹಾಭಾಗ ಹೇತುಮಾತ್ರಂ ತ್ವಹಂ ತ್ವಿಹ ॥೩॥

ನಾನು ಅವರೆಡು ಭಾಗಳನ್ನು ಜೋಡಿಸಿದಾಗ ದೈವೇಚ್ಛೆಯಂತೆ ಕುಮಾರನು ಉಂಟಾದನು. ಮಹಾನುಭಾವನೆ! ನಿನ್ನ ಭಾಗ್ಯದಿಂದಲೇ ಕುಮಾರನು ಜನಿಸಿದ್ದಾನೆ. ಈ ವಿಷಯದಲ್ಲಿ ನಾನು ನೆಪಮಾತ್ರ.

ಮೇರುಂ ವಾ ಖಾದಿತುಂ ಶಕ್ತಾ ಕಿಂ ಪುನಸ್ತವ ಬಾಲಕಮ್ ।
ಗೃಹಸಂಪೂಜನಾತ್ ತುಷ್ಟ್ಯಾ ಮಯಾ ಪ್ರತ್ಯರ್ಪಿತಸ್ತವ ॥೪॥

ನಾನು ಮೇರುವನ್ನು ಬೇಕಾದರೂ ತಿನ್ನಲು ಸಮರ್ಥಳಾಗಿದ್ದೇನೆ. ಇನ್ನು ನಿನ್ನ ಪುತ್ರನನ್ನು ತಿನ್ನುವುದು ಯಾವ ದೊಡ್ಡ ವಿಷಯ? ಆದರೆ ನಿನ್ನ ಮನೆಯಲ್ಲಿ ಪೂಜಿಸಲ್ಪಟ್ಟ ನಾನು ಆ ಕಾರಣದಿಂದ ಸಂತೋಷಗೊಂಡು ನಿನ್ನ ಮಗನನ್ನು ನಿನಗೆ ಒಪ್ಪಿಸುತ್ತಿದ್ದೇನೆ.

ತಸ್ಯ ಬಾಲಸ್ಯ ಯತ್ ಕೃತ್ಯಂ ತತ್ ಕುರುಷ್ವ ನರಾಧಿಪ ।
ಮಮ ನಾಮ್ನಾ ಚ ಲೋಕೇಽಸ್ಮಿನ್ ಖ್ಯಾತ ಏಷ ಭವಿಷ್ಯತಿ ॥೫॥

ನರಾಧಿಪನೇ! ಈ ಕುಮಾರನಿಗೆ ಮಾಡಬೇಕಾದ ಸಂಸ್ಕಾರಗಳನ್ನು ಮಾಡು ಇವನು ನನ್ನ ಹೆಸರಿಂದಲೇ ಲೋಕದಲ್ಲಿ ಖ್ಯಾತಿಯನ್ನು ಹೊಂದುವನು.

ವಾಸುದೇವಃ

ಏವಮುಕ್ತ್ವಾ ಜರಾ ರಾಜನ್ ತತ್ರೈವಾಂತರಧೀಯತ ।
ಸೋಽಪಿ ಗೃಹ್ಯ ಕುಮಾರಂ ತಂ ಪ್ರಾವಿಶತ್ ಸ್ವಪುರಂ ನೃಪಃ ॥೬॥

ರಾಜನೇ! ಜರೆಯು ಹೀಗೆ ಮಾತನಾಡಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದಳು. ರಾಜನಾದರೂ ಸಹ ಆ ಕುಮಾರನನ್ನು ತೆಗೆದುಕೊಂಡು ತನ್ನ ಪಟ್ಟಣವನ್ನು ಪ್ರವೇಶಿಸಿದನು.

ತಸ್ಯ ಬಾಲಸ್ಯ ಯತ್ ಕೃತ್ಯಂ ತಚ್ಚಕಾರ ನೃಪಸ್ತದಾ ।
ಆಜ್ಞಾಪಯಚ್ಚ ರಾಕ್ಷಸ್ಯಾ ಮಗಧೇಷು ಮಹೋತ್ಸವಮ್ ॥೭॥

ಆಗ ಆ ರಾಜನು ಆ ಬಾಲಕನಿಗೆ ಮಾಡಬೇಕಾದ ಎಲ್ಲಾ ಕಾರ್ಯಗಳನ್ನು ಮಾಡಿಸಿ, ಆ ರಾಕ್ಷಸಿಯ ಸಲುವಾಗಿ ಮಗಧದೇಶದಲ್ಲಿ ದೊಡ್ಡ ಉತ್ಸವವನ್ನು ಆಜ್ಞೆಮಾಡಿದನು.

ತಸ್ಯ ನಾಮಾಕರೋತ್ ತತ್ರ ಪ್ರಜಾಪತಿಸಮಃ ಪಿತಾ ।
ಜರಯಾ ಸಂಧಿತೋ ಯಸ್ಮಾಜ್ಜರಾಸಂಧಸ್ತತೋಽಭವತ್ ॥೮॥

ಪ್ರಜಾಪತಿಗೆ ಸಮನಾದ ತಂದೆಯಾದ ಬೃಹದ್ರಥನು ಕುಮಾರನಿಗೆ ನಾಮಕರಣವನ್ನು ಮಾಡಿದನು. ಜರೆಯಿಂದ ಸಂಧಿಸಲ್ಪಟ್ಟ ಕಾರಣದಿಂದ ಆ ಕುಮಾರನಿಗೆ ಜರಾಸಂಧನೆಂಬ ನಾಮವೇ ಆಯಿತು.

ಸೋಽವರ್ಧತ ಮಹಾತೇಜಾ ಮಗಧಾಧಿಪತೇಃ ಸುತಃ ।
ಪ್ರಮಾಣಬಲಸಂಪನ್ನೋ ಹುತಾಹುತಿರಿವಾನಲಃ ॥೯॥

ಮಗಧರಾಜನ ಆ ಕುಮಾರನು ಮಹಾಪರಾಕ್ರಮದಿಂದ ಕೂಡಿದವನಾಗಿ, ಔನ್ನತ್ಯ ಮತ್ತು ಬಲಗಳಿಂದ ಸಂಪನ್ನನಾಗಿ ಆಹುತಿಯನ್ನು ಸ್ವೀಕರಿಸಿದ ಅಗ್ನಿಯಂತೆ ಬೆಳೆದನು.

ಏವಂ ಸ ವವೃಧೇ ರಾಜನ್ ಕುಮಾರಃ ಪುಷ್ಕರೇಕ್ಷಣಃ ।
ಕಾಲೇನ ಮಹತಾ ಚಾಪಿ ಯೌವನಸ್ಥೋ ಬಭೂವ ಹ ॥೧೦॥

ರಾಜನೇ! ಕಮಲನಯನನಾದ ಆ ಕುಮಾರನು ಹೀಗೆ ಬೆಳೆದು ಎಷ್ಟೋ ಸಮಯದ ನಂತರ ಯೌವನಸ್ಥನಾದನು.

ಕಸ್ಯಚಿತ್ತ್ವಥ ಕಾಲಸ್ಯ ಪುನರೇವ ಮಹಾತಪಾಃ ।
ಮಗಧಾನುಪಚಕ್ರಾಮ ಭಗವಾಂಶ್ಚಂಡಕೌಶಿಕಃ ॥೧೧॥

ಎಷ್ಟೋ ಸಮಯದ ನಂತರ ಮಹಾತಪಸ್ವಿಯಾದ ಪೂಜ್ಯನಾದ ಚಂಡಕೌಶಿಕನು ಪುನಃ ಮಗಧದೇಶಕ್ಕೆ ಬಂದನು.

ತಸ್ಯಾಗಮನಸಂಹೃಷ್ಟಃ ಸಾಮಾತ್ಯಃ ಸಪುರೋಹಿತಃ ।
ಸಭಾರ್ಯಃ ಸಹ ಪುತ್ರೇಣ ನಿರ್ಜಗಾಮ ಬೃಹದ್ರಥಃ ॥೧೨॥

ಅವನ ಆಗಮನದಿಂದ ಸಂತೋಷಗೊಂಡ ಬೃಹದ್ರಥನು ಅಮಾತ್ಯರು ಪುರೋಹಿತರು ಭಾರ್ಯೆಯರು ಮತ್ತು ಪುತ್ರನ ಜೊತೆಯಲ್ಲಿ ಅವನನ್ನು ಸ್ವೀಕರಿಸಲು ಪಟ್ಟಣದ ಹೊರಗೆ ಬಂದನು.

ಪಾದ್ಯಾರ್ಘ್ಯಾಚಮನೀಯೈಸ್ತಮರ್ಚಯಾಮಾಸ ಭಾರತ ।
ಸ ನೃಪೋ ರಾಜ್ಯಸಹಿತಂ ಪುತ್ರಂ ಚಾಸ್ಮೈ ನ್ಯವೇದಯತ್ ॥೧೩॥

ಭಾರತನೇ! ಆ ರಾಜನು ಪಾದ್ಯ ಅರ್ಘ್ಯ ಆಚಮನಗಳಿಂದ ಆ ಋಷಿಯನ್ನು ಸತ್ಕರಿಸಿ ತನ್ನ ರಾಜ್ಯವನ್ನೂ ಮತ್ತು ಪುತ್ರನನ್ನೂ ಅವನಿಗೆ ನಿವೇದಿಸಿದನು.

ಪ್ರತಿಗೃಹ್ಯ ಚ ತಾಂ ಪೂಜಾಂ ಪಾರ್ಥಿವಾದ್ ಭಗವಾನೃಷಿಃ ।
ಉವಾಚ ಮಾಗಧಂ ತತ್ರ ಪ್ರಹೃಷ್ಟೇನಾಂತರಾತ್ಮನಾ ॥೧೪॥

ಪೂಜ್ಯನಾದ ಆ ಋಷಿಯು ರಾಜನಿಂದ ಆ ಪೂಜೆಯನ್ನು ಸ್ವೀಕರಿಸಿ ಮನಸ್ಸಿನಲ್ಲಿ ಸಂತೋಷಗೊಂಡು ಆ ಮಗಧರಾಜನನ್ನು ಕುರಿತು ಮಾತನಾಡಿದನು.

ಚಂಡಕೌಶಿಕಃ

ಸರ್ವಮೇತನ್ಮಯಾ ರಾಜನ್ ವಿಜ್ಞಾತಂ ಜ್ಞಾನಚಕ್ಷುಷಾ ।
ಪುತ್ರಸ್ತು ಶೃಣು ರಾಜೇಂದ್ರ ಯಾದೃಶೋ ವೈ ಭವಿಷ್ಯತಿ ।
ಅಸ್ಯ ಪ್ರಭಾವಂ ಚ ಸತ್ತ್ವಂ ಚ ಬಲಮೂರ್ಜಿತಮೇವ ಚ ॥೧೫॥

ರಾಜನೇ! ಇವೆಲ್ಲವನ್ನೂ ನಾನು ಜ್ಞಾನದೃಷ್ಟಿಯಿಂದಲೇ ತಿಳಿದಿದ್ದೇನೆ. ರಾಜೇಂದ್ರನೇ! ನಿನ್ನ ಮಗನು ಎಂತಹ ಪ್ರಭಾವ ಸತ್ವ ಮತ್ತು ಊರ್ಜಿತವಾದ ಬಲಗಳನ್ನು ಹೊಂದಿ ಯಾವ ರೀತಿ ಆಗುವನು ಎಂಬುದನ್ನು ಹೇಳುತ್ತೇನೆ ಕೇಳು.

ಏಷ ಶ್ರಿಯಾ ಸಮುದಿತಃ ಪುತ್ರಸ್ತವ ನ ಸಂಶಯಃ ।
ಪ್ರಾಪಯಿಷ್ಯತಿ ತತ್ಸರ್ವಂ ವಿಕ್ರಮೇಣ ಸಮನ್ವಿತಃ ॥೧೬॥

ನಿನ್ನ ಈ ಮಗನು ಸಂಪತ್ತಿನಿಂದ ಕೂಡಿದವನಾಗಿ ತನ್ನ ವಿಕ್ರಮದಿಂದಲೂ ಕೂಡಿದವನಾಗಿ ನಿಸ್ಸಂಶಯವಾಗಿ ಎಲ್ಲವನ್ನೂ ಸಾಧಿಸುತ್ತಾನೆ.

ಅಸ್ಯ ವೀರ್ಯವತೋ ವೀರ್ಯಂ ನಾನುಯಾಸ್ಯಂತಿ ಪಾರ್ಥಿವಾಃ ।
ಪತತೋ ವೈನತೇಯಸ್ಯ ಗತಿಮನ್ಯೇ ಯಥಾ ಖಗಾಃ ।
ವಿನಾಶಮುಪಯಾಸ್ಯಂತಿ ಯೇ ಚಾಸ್ಯ ಪರಿಪಂಥಿನಃ ॥೧೭॥

ಹೇಗೆ ಆಕಾಶದಲ್ಲಿ ಹಾರುವ ಪಕ್ಷಿಗಳು ಗರುಡನನ್ನು ಅನುಸರಿಸಲಾರವೋ ಹಾಗೆ ಉಳಿದ ರಾಜರು ವೀರ್ಯವಂತನಾದ ಇವನ ಪರಾಕ್ರಮವನ್ನು ಅನುಕರಿಸಲಾರರು. ಯಾರು ಇವನಿಗೆ ವಿರೋಧವನ್ನು ಮಾಡವರೋ ಅವರೆಲ್ಲರೂ ವಿನಾಶವನ್ನು ಹೊಂದುವರು.

ದೇವೈರಪಿ ವಿಸೃಷ್ಟಾನಿ ಶಸ್ತ್ರಾಣ್ಯಸ್ಯ ಮಹೀಪತೇ ।
ನ ರುಜಂ ಜನಯಿಷ್ಯಂತಿ ಗಿರೇರಿವ ನದೀರಯಾಃ ॥೧೮॥

ನದಿಯ ನೀರಿನ ವೇಗವು ಹೇಗೆ ಪರ್ವತವನ್ನು ಅಲುಗಾಡಿಸಲು ಸಾಧ್ಯವಿಲ್ಲವೋ ಹಾಗೆ ದೇವತೆಗಳು ಪ್ರಯೋಗಿಸಿದ ಶಸ್ತ್ರಗಳೂ ಸಹ ಇವನಿಗೆ ಪೀಡೆಯನ್ನು ಉಂಟುಮಾಡಲು ಅಸಮರ್ಥವಾಗುತ್ತವೆ.

ಸರ್ವಮೂರ್ಧಾವಸಿಕ್ತಾನಾಮೇಷ ಮೂರ್ಧ್ನಿ ಜ್ವಲಿಷ್ಯತಿ ।
ಸರ್ವೇಷಾಂ ನಿಷ್ಪ್ರಭಕರೋ ಜ್ಯೋತಿಷಾಮಿವ ಭಾಸ್ಕರಃ ॥೧೯॥

ಎಲ್ಲ ತೇಜಸ್ಸುಗಳನ್ನೂ ತನ್ನ ತೇಜಸ್ಸಿನಿಂದ ಮಂಕುಗೊಳಿಸುವ ಸೂರ್ಯನಂತೆ ಇವನು, ಮೂರ್ಧಾಭಿಷಿಕ್ತರಾದ ಎಲ್ಲಾ ರಾಜರ ತಲೆಯ ಮೇಲೆ ಕಾಲಿಟ್ಟು ಬೆಳಗುತ್ತಾನೆ.

ಏನಮಾಸಾದ್ಯ ರಾಜಾನಃ ಸಮೃದ್ಧಬಲವಾಹನಾಃ ।
ವಿನಾಶಮುಪಯಾಸ್ಯಂತಿ ಶಲಭಾ ಇವ ಪಾವಕಾತ್ ॥೨೦॥

ಸಮೃದ್ಧ ಸೈನ್ಯ ಮತ್ತು ವಾಹನಗಳುಳ್ಳ ರಾಜರು ಇವನನ್ನು ಎದುರಿಸಿ ಬೆಂಕಿಯನ್ನು ಎದುರಿಸುವ ಶಲಭದಂತೆ ನಾಶವನ್ನು ಹೊಂದುವರು.

ಏಷ ಶ್ರಿಯಂ ಸುಮುದಿತಾಂ ಸರ್ವರಾಜ್ಞಾಂ ಗ್ರಹೀಷ್ಯತಿ ।
ವರ್ಷಾಸ್ವಿವೋದ್ಧತಜಲಾ ನದೀರಿವ ನದೀಪತಿಃ ॥೨೧॥

ವರ್ಷಾಕಾಲದಲ್ಲಿ ಮೇರೆ ಮೀರಿ ಹರಿಯುವ ನದಿಗಳ ಜಲವನ್ನು ನದೀಪತಿಯಾದ ಸಮುದ್ರನು ಸ್ವೀಕರಿಸಿದಂತೆ, ಇವನು ಎಲ್ಲಾ ರಾಜರ ಸಂವೃದ್ಧವಾದ ಸಂಪತ್ತನ್ನು ಸ್ವೀಕರಿಸುವನು.

ಏಷ ಧಾರಯಿತಾ ಸಮ್ಯಕ್ ಚಾತುರ್ವರ್ಣ್ಯಂ ಮಹಾಬಲಃ ।
ಶುಭಾಂ ಶುಭವತೀಂ ಸ್ಫೀತಾಂ ಸರ್ವಸಸ್ಯಧರಾಂ ಧರಾಮ್ ॥೨೨॥

ಮಹಾಬಲನಾದ ಇವನು ಚಾತುರ್ವರ್ಣ್ಯವನ್ನು ಚೆನ್ನಾಗಿ ಪೋಷಿಸುತ್ತಾನೆ. ಶುಭವೂ ಪರಿಶುದ್ಧವೂ ಸರ್ವಸಸ್ಯಾಶ್ರಯವೂ ಆದ ಭೂಮಿಯನ್ನು ಧರಿಸುತ್ತಾನೆ.

ಅಸ್ಯಾಜ್ಞಾವಶಗಾಃ ಸರ್ವೇ ಭವಿಷ್ಯಂತಿ ನರಾಧಿಪಾಃ ।
ಸರ್ವಭೂತಾತ್ಮಭೂತಸ್ಯ ವಾಯೋರಿವ ಶರೀರಿಣಃ ॥೨೩॥

ಎಲ್ಲಾ ಜೀವರ ಅಂತರ್ಯಾಮಿಯಾದ ವಾಯುಜೀವರಿಗೆ ಎಲ್ಲಾ ಜೀವರೂ ವಶರಾದಂತೆ ಎಲ್ಲಾ ರಾಜರೂ ಇವನ ಆಜ್ಞೆಗೆ ವಶರಾಗುವರು.

ಏಷ ರುದ್ರಂ ಮಹಾದೇವಂ ತ್ರಿಪುರಾಂತಕರಂ ಹರಮ್ ।
ಸರ್ವಲೋಕೇಷ್ವತಿಬಲಃ ಸ್ವಯಂ ದ್ರಕ್ಷ್ಯತಿ ಮಾಗಧಃ ॥೨೪॥

ಸರ್ವಲೋಕಗಳಲ್ಲಿಯೂ ಅತ್ಯಂತ ಬಲಿಷ್ಠನಾದ ಈ ಮಗಧರಾಜನು ತ್ರಿಪುರಾಂತಕನಾದ ಮಹಾದೇವನಾದ ಪಾಪಹಾರಕನಾದ ರುದ್ರದೇವರನ್ನು ಸ್ವತಃ ನೋಡುವನು.

ಏವಂ ಬ್ರುವನ್ನೇವ ಮುನಿಃ ಸ್ವಕಾರ್ಯಾರ್ಥಂ ವಿಚಿಂತಯನ್ ।
ವಿಸರ್ಜಯಾಮಾಸ ನೃಪಂ ಬೃಹದ್ರಥಮಥಾರಿಹನ್ ॥೨೫॥

ಶತ್ರುಸಂಹಾರಕನಾದ ರಾಜನೇ! ಚಂಡಕೌಶಿಕಮುನಿಯು ಹೀಗೆ ಮಾತನಾಡುಕತ್ತಲೇ ತನ್ನ ಮುಂದಿನ ಕಾರ್ಯವನ್ನು ಚಿಂತಿಸುತ್ತಾ ರಾಜನನ್ನು ಬೀಳ್ಕೊಟ್ಟನು.

ಪ್ರವಿಶ್ಯ ನಗರೀಂ ಚೈವ ಜ್ಞಾತಿಸಂಬಂಧಿಭಿರ್ವೃತಃ ।
ಅಭಿಷಿಚ್ಯ ಜರಾಸಂಧಂ ಮಗಧಾಧಿಪತಿಂ ತದಾ ।
ಬೃಹದ್ರಥೋ ನರಪತಿಃ ಪರಾಂ ನಿರ್ವೃತಿಮಾಯಯೌ ॥೨೬॥

ಮಗಧಾಧಿಪತಿಯಾದ ಬೃಹದ್ರಥನು ಪಟ್ಟಣವನ್ನು ಪ್ರವೇಶಿಸಿ ದಾಯಾದಿಗಳು ಮತ್ತು ಬಂಧುಗಳೊಂದಿಗೆ ಕೂಡಿಕೊಂಡು ಜರಾಸಂಧನಿಗೆ ಮಗಧ ರಾಜನನ್ನಾಗಿ ಪಟ್ಟಾಭಿಷೇಕವನ್ನು ಮಾಡಿ ಬಹಳ ಸಂತೋಷವನ್ನು ಹೊಂದಿದನು.

ಅಭಿಷಿಕ್ತೇ ಜರಾಸಂಧೇ ತದಾ ರಾಜಾ ಬೃಹದ್ರಥಃ ।
ಪತ್ನೀದ್ವಯೇನಾನುಗತಸ್ತಪೋವನಮುಪಾಗಮತ್ ॥೨೭॥

ಜರಾಸಂಧನು ಪಟ್ಟಾಭಿಷಿಕ್ತನಾಗುತ್ತಿರಲು ಬೃಹದ್ರಥರಾಜನು ತನ್ನ ಇಬ್ಬರು ಪತ್ನಿಯರ ಜೊತೆಯಲ್ಲಿ ತಪೋವನಕ್ಕೆ ಪ್ರಯಾಣ ಮಾಡಿದನು.

ತಪೋವನಸ್ಥೇ ಪಿತರಿ ಮಾತೃಭ್ಯಾಂ ಸಹ ಭಾರತ ।
ಜರಾಸಂಧಸ್ತು ವೀರ್ಯೇಣ ಪಾರ್ಥಿವಾನಕರೋದ್ ವಶೇ ॥೨೮॥

ಭಾರತನೇ! ತಂದೆಯಾದ ಬೃಹದ್ರಥನು ತಾಯಿಯರ ಜೊತೆಯಲ್ಲಿ ತಪೋವನದಲ್ಲಿರಲು ಜರಾಸಂಧನು ತನ್ನ ಪರಾಕ್ರಮದಿಂದ ಎಲ್ಲಾ ರಾಜರನೂ ವಶಪಡಿಸಿಕೊಂಡನು.

ಅಥ ದೀರ್ಘಸ್ಯ ಕಾಲಸ್ಯ ತಪೋವನಗತೋ ನೃಪಃ ।
ಸಭಾರ್ಯಃ ಸ್ವರ್ಗಮಗಮತ್ ತಪಸ್ತಪ್ತ್ವಾ ಬೃಹದ್ರಥಃ ॥೨೯॥

ತಪೋವನಕ್ಕೆ ಹೋದ ಬೃಹದ್ರಥರಾಜನು ಬಹುಕಾಲತಪಸ್ಸನ್ನು ಆಚರಿಸಿ ತನ್ನ ಪತ್ನಿಯರ ಜೊತೆಯಲ್ಲಿ ಸ್ವರ್ಗವನ್ನು ಸೇರಿದನು.

ಜರಾಸಂಧೋಽಪಿ ನೃಪತಿರ್ಯಥೋಕ್ತಂ ಕೌಶಿಕೇನ ತತ್ ।
ವರಪ್ರದಾನಮಖಿಲಂ ಪ್ರಾಪ್ಯ ರಾಜ್ಯಮಕಾರಯತ್ ॥೩೦॥

ಜರಾಸಂಧರಾಜನಾದರೋ ಚಂಡಕೌಶಿಕನು ಕೊಟ್ಟ ಎಲ್ಲಾ ವರಗಳನ್ನು ಪಡೆದು ರಾಜ್ಯಭಾರವನ್ನು ಮಾಡಿದನು.

ತಸ್ಯಾಸ್ತಾಂ ಹಂಸಡಿಭಕಾವಶಸ್ತ್ರನಿಧನಾವುಭೌ ।
ಮಂತ್ರೇ ಮತಿಮತಾಂ ಶ್ರೇಷ್ಠೌ ಯುದ್ಧನೀತಿವಿಶಾರದೌ ॥೩೧॥

ಅವನಿಗೆ ಯುದ್ಧನೀತಿವಿಶಾರದರಾದ ಶಸ್ತ್ರಗಳಿಂದ ಮರಣಹೊಂದದ ಮೇಧಾವಿಗಳಲ್ಲಿ ಶ್ರೇಷ್ಠರಾದ ಮಂತ್ರಾಲೋಚನೆಯಲ್ಲಿಯೂ ಶ್ರೇಷ್ಠರಾದ ಹಂಸ ಡಿಬಕರೆಂಬ ಇಬ್ಬರು ಮಂತ್ರಿಗಳದ್ದರು.

ಹತೇ ಚೈವ ಮಯಾ ಕಂಸೇ ಸಹಂಸಡಿಭಕೇ ತದಾ ।
ಜರಾಸಂಧಸ್ಯ ದುಹಿತಾ ರೋದತೇ ಪಾರ್ಶ್ವತಃ ಪಿತುಃ ॥೩೨॥

ನಾನು ಕಂಸನನ್ನು ಮತ್ತು ಹಂಸಡಿಬಕರನ್ನು ಸಂಹಾರ ಮಾಡಿದ ಮೇಲೆ ಜರಾಸಂಧನ ಮಗಳು ನಿತ್ಯವೂ ತಂದೆಯ ಸನಿಹದಲ್ಲಿ ರೋದಿಸಿದಳು.

ತತೋ ವೈರಂ ವಿನಿರ್ಬದ್ಧಂ ಮಮ ತಸ್ಯ ಚ ಭಾರತ ॥೩೩॥

ಭಾರತನೇ! ಆ ಕಾರಣದಿಂದ ನನಗೂ ಮತ್ತು ಜರಾಸಂಧನಿಗೂ ವೈರ ಉಂಟಾಯಿತು.

ಭ್ರಾಮಯಿತ್ವಾ ಶತಗುಣಮೇಕಪಾತೇನ ಭಾರತ ।
ಗದಾ ಕ್ಷಿಪ್ತಾ ಬಲವತಾ ಮಾಗಧೇನ ಗಿರಿವ್ರಜಾತ್ ॥೩೪॥

ಭಾರತನೇ! ಬಲಿಷ್ಠನಾದ ಜರಾಸಂಧನು ತನ್ನ ರಾಜಧಾನಿಯಾದ ಗಿರಿವ್ರಜದಲ್ಲಿ ನಿಂತು ತನ್ನ ಗದೆಯನ್ನು ನೂರು ಬಾರಿ ತಿರುಗಿಸಿ ಒಂದೇ ಎಸೆತಕ್ಕೆ ನಮ್ಮ ಮೇಲೆ ಎಸೆದನು..

ತಿಷ್ಠತೋ ಮಧುರಾಯಾಂ ವೈ ಮಮ ಚಾದ್ಭುತಕರ್ಮಣಃ ।
ಏಕೋನಯೋಜನಶತೇ ಸಾ ಪಪಾತ ಗದಾ ಶುಭಾ ।
ನಹಿ ಯೋದ್ಧೈಸ್ತದಾ ತಸ್ಯ ಸಮ್ಯಗಧ್ವಾ ನಿವೇದಿತಃ ॥೩೫॥

ಅದ್ಭುತ ಕರ್ಮನಾದ ನಾನು ಮಧುರೆಯಲ್ಲಿ ವಾಸಮಾಡುತ್ತಿರಲು ಆ ಶುಭವಾದ ಗದೆಯು ತೊಬ್ಬತ್ತೋಂಬತ್ತು ಯೋಜನಗಳು ಹಾರಿ ಬಂದು ಮಧುರೆಗೆ ಒಂದು ಯೋಜನ ದೂರದಲ್ಲಿ ಬಿದ್ದಿತು. ಯೋಧರು ಅವನಿಗೆ ಗಿರಿವ್ರಜದಿಂದ ಮಧುರೆಗೆ ಇರುವ ದೂರವನ್ನು ಸರಿಯಾಗಿ ತಿಳಿಸಿರಲಿಲ್ಲ. (ನಾರದರು ತಿಳಿಸಿರಲಿಲ್ಲ ಎಂಬುದು ಪ್ರಚಲಿತ ಕಥೆ).

ದೃಷ್ಟ್ವಾ ಪೌರೈಸ್ತದಾ ಸಮ್ಯಗ್ ಗದಾ ಚೈವ ನಿವೇದಿತಾ ।
ಗದಾವಸಾನಂ ತತ್ ಖ್ಯಾತಂ ಮಧುರಾಯಾಃ ಸಮೀಪತಃ ॥೩೬॥

ಆಗ ಪೌರರು ಸಮೀಪದಲ್ಲಿ ಬಿದ್ದ ಆ ಗದೆಯನ್ನು ನೋಡಿ ನನಗೆ ವಿಷಯವನ್ನು ತಿಳಿಸಿದರು. ಮಧುರೆಯ ಸಮೀಪದಲ್ಲಿ ಗದಾವಸಾನವೆಂಬ ಆ ಗದೆಯು ಬಿದ್ದ ಸ್ಥಳವು ಈಗಲೂ ಪ್ರಸಿದ್ಧವಾಗಿದೆ.

ಮಯಾ ತೌ ಕಥಿತೌ ರಾಜನ್ ಪೂರ್ವಮೇವ ಮಹಾಬಲೌ ।
ತ್ರಯಸ್ತ್ರಯಾಣಾಂ ಲೋಕಾನಾಂ ಪರ್ಯಾಪ್ತಾ ಇತಿ ಮೇ ಮತಿಃ ॥೩೭॥

ಮಹಾರಾಜನೇ! ಮಹಾಬಲಿಷ್ಠರಾದ ಹಂಸ ಡಿಬಕ ವೃತ್ತಾಂತವನ್ನು ನಿನಗೆ ಮೊದಲೇ ತಿಳಿಸಿದ್ದೇನೆ. ಈ ಮೂವರು ಸೇರಿ ಮೂರು ಲೋಕಗಳನ್ನು ಗೆಲ್ಲಬಲ್ಲರು ಎಂದು ನನ್ನ ಅಭಿಪ್ರಾಯ.

ಏವಮೇಷ ತದಾ ವೀರ ಬಲಿಭಿಃ ಕುಕುರಾಂಧಕೈಃ ।
ವೃಷ್ಣಿಭಿಶ್ಚ ಮಹಾರಾಜ ನೀತಿಹೇತೋರುಪೇಕ್ಷಿತಃ ॥೩೮॥

ಮಹಾರಾಜನೇ! ಮತ್ತು ವೀರನೇ! ಹೀಗೆ ತಮಗೆ ವಿರೋಧವನ್ನು ಮಾಡಿದರೂ ಕುಕುರರು, ಅಂಧಕರು, ಮತ್ತು ವೃಷ್ಣಿಗಳು ಪ್ರಬಲರು ವಿರೋಧಮಾಡಿದಾಗ ಆ ಸ್ಥಾನವನ್ನು ಬಿಟ್ಟು ಬೇರೆ ಸ್ಥಾನಕ್ಕೆ ಹೋಗಬೇಕು ಎಂಬ ನೀತಿಯ ಕಾರಣದಿಂದ ಜರಾಸಂಧನನ್ನು ಉಪೇಕ್ಷೆಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ವಿಂಶೋऽಧ್ಯಾಯಃ ॥

॥ ಮಂತ್ರಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ಮಂತ್ರಪರ್ವವು ಮುಗಿಯಿತು.

★★★★★

೨. ಜರಾಸಂಧಪರ್ವ

ಇಪ್ಪತ್ತೊಂದನೆಯ ಅಧ್ಯಾಯ

(ಜರಾಸಂಧನ ವಧೆಯನ್ನು ಉದ್ದೇಶಿಸಿ, ಕೃಷ್ಣ- ಭೀಮಾರ್ಜುನರಿಂದ ಮಗಧದೇಶಕ್ಕೆ ಗಮನ.)

ಶ್ರೀಭಗವಾನಃ

ಪತಿತೌ ಹಂಸಡಿಭಕೌ ಕಂಸಾಮಾತ್ಯೌ ನಿಪಾತಿತೌ ।
ಜರಾಸಂಧಸ್ಯ ನಿಧನೇ ಕಾಲೋಽಯಂ ಸಮುಪಾಗತಃ ॥೧॥

ದುರ್ಮಾರ್ಗಗಾಮಿಗಳಾದ ಕಂಸನ ಮಂತ್ರಿಗಳಾದ ಹಂಸ ಡಿಬಕರು ವಿನಾಶವನ್ನು ಹೊಂದಿದ್ದಾರೆ. ಜರಾಸಂಧನ ವಧೆಗೆ ಇದು ಯೋಗ್ಯವಾದ ಕಾಲವಾಗಿದೆ.

ನ ಸ ಶಕ್ಯೋ ರಣೇ ಜೇತುಂ ಸರ್ವೈರಪಿ ಸುರಾಸುರೈಃ ।
ಬಾಹುಯುದ್ಧೇನ ಜೇತವ್ಯಃ ಸ ಇತ್ಯುಪಲಭಾಮಹೇ ॥೨॥

ದೇವಾಸುರರೆಲ್ಲರೂ ಸೇರಿ ಯುದ್ಧದಲ್ಲಿ ಅವನನ್ನು ಗೆಲ್ಲಲಾರರು. ಆದ್ದರಿಂದ ಅವನನ್ನು ಬಾಹುಯುದ್ಧದಿಂದಲೇ ಗೆಲ್ಲಬೇಕೆಂದು ನನ್ನ ಅಭಿಪ್ರಾಯ.

ಮಯಿ ನೀತಿರ್ಬಲಂ ಭೀಮೇ ರಕ್ಷಿತಾ ಚಾವಯೋರ್ಜಯಃ ।
ಸಾಧಯಿಷ್ಯಾಮ ತಂ ರಾಜನ್ ವಯಂ ತ್ರಯ ಇವಾಗ್ನಯಃ ॥೩॥

ರಾಜನೇ! ನನ್ನಲ್ಲಿ ನೀತಿ ಇದೆ. ಭೀಮನಲ್ಲಿ ಬಲವಿದೆ. ನಮ್ಮಿಬ್ಬರನ್ನು ಅರ್ಜುನನು ರಕ್ಷಿಸುತ್ತಾನೆ. ನಾವು ಮೂರು ಜನರೂ ಸೇರಿ ಮೂರು ಅಗ್ನಿಗಳಂತೆ ಕಾರ್ಯವನ್ನು ಸಾಧಿಸುವೆವು.

ತ್ರಿಭಿರಾಸಾದಿತೋಽಸ್ಮಾಭಿಃ ವಿಜನೇ ಸ ನರಾಧಿಪಃ ।
ನ ಸಂದೇಹೋ ಯಥಾ ಯುದ್ಧಮೇಕೇನಾಭ್ಯುಪಗಚ್ಛತಿ ॥೪॥

ಏಕಾಂತದಲ್ಲಿ ನಾವು ಮೂವರು ಅವನನ್ನು ಸಂಧಿಸಿದರೆ ನಿಃಸಂದೇಹವಾಗಿ ಅವನು ನಮ್ಮಲ್ಲಿ ಒಬ್ಬರ ಜೊತೆಯಲ್ಲಿ ಯುದ್ಧವನ್ನು ಅಂಗೀಕರಿಸುತ್ತಾನೆ.

ಅವಮಾನಾಚ್ಚ ಲೋಕಸ್ಯ ವ್ಯಾಯಾಮಾಚ್ಚೈವ ಹರ್ಷಿತಃ ।
ಭೀಮೇನ ಸಹ ಯುದ್ಧಾಯ ಧ್ರುವಮಭ್ಯುಪಯಾಸ್ಯತಿ ॥೫॥

ಅರ್ಜುನನ್ನು ಆರಿಸಿದರೆ ಉಂಟಾಗಬಹುದಾದ ಅವಮಾನವನ್ನು ಗಮನಿಸಿ, ಭೀಮನನ್ನು ಆರಿಸಿದರೆ ಉಂಟಾಗಬಹುದಾದ ಔನ್ನತ್ಯವನ್ನು ಗಮನಿಸಿ ಸಂತುಷ್ಟನಾಗಿ ನಿಶ್ಚಯವಾಗಿಯೇ ಭೀಮನ ಜೊತೆಯಲ್ಲಿಯೇ ಯುದ್ಧವನ್ನು ವರಿಸುತ್ತಾನೆ.

ಅಯಂ ತಸ್ಯ ಮಹಾಬಾಹುಃ ಭೀಮಸೇನೋ ಮಹಾಬಲಃ ।
ಲೋಕಸ್ಯ ಸಮುದೀರ್ಣಸ್ಯ ನಿಧನಾಯಾಂತಕೋ ಯಥಾ ॥೬॥

ಕೊಬ್ಬಿದ ಲೋಕಕ್ಕೆ ಮರಣವನ್ನು ಉಂಟುಮಾಡಲು ಯಮನಂತೆ. ಮಹಾಬಾಹುವೂ ಮಹಾಬಲನೂ ಆದ ಭೀಮಸೇನನು ಅವನಿಗೆ ಸಾಟಿಯಾಗುತ್ತಾನೆ.

ಯದಿ ತೇ ಹೃದಯಂ ವೇತ್ತಿ ಯದಿ ತೇ ಪ್ರತ್ಯಯೋ ಮಯಿ ।
ಭೀಮಸೇನಾರ್ಜುನೌ ಶೀಘ್ರಂ ನ್ಯಾಸಭೂತೌ ಪ್ರಯಚ್ಛ ಮೇ ॥೭॥

ನಿನ್ನ ಮನಸ್ಸು ಒಪ್ಪಿದರೆ ನನ್ನ ಮೇಲೆ ನಿನಗೆ ನಂಬಿಕೆಯಿದ್ದರೆ ಭೀಮಸೇನ ಅರ್ಜುನರನ್ನು ಶೀಘ್ರವಾಗಿ ನನ್ನಲ್ಲಿ ನ್ಯಾಸರೂಪರಾಗಿ ನನ್ನ ಜೊತೆಯಲ್ಲಿ ಕಳುಹಿಸಿಕೊಡು.

ವೈಶಂಪಾಯನಃ

ಏವಮುಕ್ತೋ ಭಗವತಾ ಪ್ರತ್ಯುವಾಚ ಯುಧಿಷ್ಠಿರಃ ।
ಭೀಮಪಾರ್ಥೌ ಸಮಾಲೋಕ್ಯ ಸಂಪ್ರಹೃಷ್ಟಮುಖೌ ಸ್ಥಿತೌ ॥೮॥

ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ಧರ್ಮರಾಜನು ಸಂತೋಷದಿಂದ ಇರುವ ಭೀಮಾರ್ಜುನರ ಮುಖವನ್ನುನೋಡಿ ಉತ್ತರವನ್ನು ನೀಡಿದನು.

ಅಚ್ಯುತಾಚ್ಯುತ ಮಾ ಮೈವಂ ವ್ಯಾಹರಾಮಿತ್ರಕರ್ಶನ ।
ಪಾಂಡವಾನಾಂ ಭವಾನ್ ನಾಥೋ ಭವಂತಂ ಚಾಶ್ರಿತಾ ವಯಮ್ ॥೯॥

ಶತ್ರುಸಂಹಾರಕನಾದ ಕೃಷ್ಣನೇ! ಹೀಗೆ ಮಾತನಾಡಬೇಡ. ಪಾಂಡವರಿಗೆ ನೀನೇ ಒಡೆಯ. ನಾವು ನಿನ್ನನ್ನು ಆಶ್ರಯಿಸಿದ್ದೇವೆ.

ಯಥಾ ವದಸಿ ಗೋವಿಂದ ತಥಾ ತದುಪಪದ್ಯತೇ ।
ನಹಿ ತ್ವದಗ್ರತಸ್ತೇಷಾಂ ಯೇಷಾಂ ಲಕ್ಷ್ಮೀಃ ಪರಾಙ್ಮುಖೀ ॥೧೦॥

ಗೋವಿಂದನೇ! ನೀನು ಹೇಗೆ ಹೇಳುತ್ತಿಯೋ ಹಾಗೆಯೇ ಎಲ್ಲವೂ ನಡೆಯುತ್ತದೆ. ಯಾರಿಗೆ ಲಕ್ಷ್ಮಿಯು ವಿಮುಖಳಾಗುತ್ತಾಳೆಯೋ ಅವರು ನಿನ್ನ ಎದುರಿಗೆ ನಿಲ್ಲಲಾರರು.(ಯಾರು ನಿನ್ನೆದುರಿಗೆ ನಿಲ್ಲುತ್ತಾರೆಯೋ ಅವರಿಗೆ ಲಕ್ಷ್ಮಿಯು ವಿಮುಖಳಾಗುವಳು)

ನಿಹತಶ್ಚ ಜರಾಸಂಧೋ ಮೋಕ್ಷಿತಾಶ್ಚ ಮಹೀಕ್ಷಿತಃ ।
ರಾಜಸೂಯಶ್ಚ ಮೇ ಲಬ್ಧೋ ನಿದೇಶೇ ತವ ತಿಷ್ಠತಃ ॥೧೧॥

ನಿನ್ನ ಅಪ್ಪಣೆಯಲ್ಲಿ ನಾನು ಇರುವಾಗ ಜರಾಸಂಧನು ಹತನಾಗಿದ್ದಾನೆ. ರಾಜರು ಬಂಧನದಿಂದ ಬಿಡಿಸಲ್ಪಟ್ಟಿದ್ದಾರೆ. ರಾಜಸೂಯವು ನನ್ನಿಂದ ಪ್ರಾಪ್ತವಾಗಿದೆ ಎಂದೇ ಭಾವಿಸುತ್ತೇನೆ.

ಕ್ಷಿಪ್ರಕಾರಿನ್ ಯಥಾ ತ್ವೇತತ್ ಕಾರ್ಯಂ ಸಮುಪಪದ್ಯತೇ ।
ಮಮ ಕಾರ್ಯಂ ಜಗತ್ಕಾರ್ಯಂ ತಥಾ ಕುರು ನರೋತ್ತಮ ॥೧೨॥

ಶೀಘ್ರವಾಗಿ ಕಾರ್ಯವನ್ನು ಮಾಡುವ ಪುರುಷೋತ್ತಮನೇ! ಈ ಎಲ್ಲ ಕಾರ್ಯಗಳೂ ಹೇಗೆ ಕೈಗೂಡುತ್ತವೆಯೋ, ಹಾಗೆ ನನಗೆ ಕ್ಷೇಮವಾದ ಕಾರ್ಯವನ್ನು ಮತ್ತು ಜಗತ್ತಿಗೆ ಕ್ಷೇಮವಾದ ಕಾರ್ಯವನ್ನು ಮಾಡು.

ತ್ರಿಭಿರ್ಭವದ್ಭಿರ್ಹಿ ವಿನಾ ನಾಹಂ ಜೀವಿತುಮುತ್ಸಹೇ ।
ಧರ್ಮಕಾಮಾರ್ಥರಹಿತೋ ರೋಗಾರ್ತ ಇವ ದುರ್ಗತಃ ॥೧೩॥

ರೋಗಕ್ಕೆ ತುತ್ತಾಗಿ ಧರ್ಮಾರ್ಥಕಾಮಗಳಿಲ್ಲದೆ ದುಃಖದಿಂದ ಜೀವಿಸುವವನಂತೆ, ನೀವು ಮೂವರು ಇಲ್ಲದೆ ನಾನು ಬದುಕಿರಲಾರೆ.

ನ ಶೌರಿಣಾ ವಿನಾ ಪಾರ್ಥೋ ನ ಶೌರಿಃ ಪಾಂಡವಂ ವಿನಾ ।
ನಾಜೇಯೋಽಸ್ಯನಯೋರ್ಲೋಕೇ ಕೃಷ್ಣಯೋರಿತಿ ಮೇ ಮತಿಃ ॥೧೪॥

ಕೃಷ್ಣನನ್ನು ಬಿಟ್ಟು ಅರ್ಜುನನಿಲ್ಲ. ಅರ್ಜುನನ್ನು ಬಿಟ್ಟು ಕೃಷ್ಣನೂ ಇಲ್ಲ. ಈ ಇಬ್ಬರು ಕೃಷ್ಣರು ಜೊತೆಯಲ್ಲಿ ಸೇರಿದರೆ ಲೋಕದಲ್ಲಿ ಜಯಿಸಲಾಗದುದು ಯಾವುದೂ ಇಲ್ಲವೆಂದು ನನ್ನ ಅಭಿಪ್ರಾಯ.

ಅಯಂ ಚ ಬಲಿನಾಂ ಶ್ರೇಷ್ಠಃ ಶ್ರೀಮಾನಪಿ ವೃಕೋದರಃ ।
ಯುವಾಭ್ಯಾಂ ಸಹಿತೋ ವೀರಃ ಕಿಂ ನ ಕುರ್ಯಾತ್ ಮಹಾಯಶಾಃ ॥೧೫॥

ಈ ಕಾಂತಿಯುಕ್ತನಾದ ವೃಕೋದರನೂ ಸಹ ಬಲವುಳ್ಳವರಲ್ಲಿ ಬಹಳ ಶ್ರೇಷ್ಠನಾದವನು. ನಿಮ್ಮಿಬ್ಬರ ಜೊತೆಯಲ್ಲಿ ಸೇರಿದಾಗ ಮಹಾಕೀರ್ತಿವಂತನಾದ ಈ ವೀರನು ಏನನ್ನು ಸಾಧಿಸಲಾರ?

ಸುಪ್ರಣೀತಬಲೋ ಯೋ ಹಿ ಕುರುತೇ ಕಾರ್ಯಮುತ್ತಮಮ್ ।
ಅಂಧಂ ಜಡಂ ಬಲಂ ಪ್ರಾಹುಃ ಪ್ರಣೀತಮವಿಚಕ್ಷಣೈಃ ॥೧೬॥

ಯಾರು ತನ್ನ ಬಲವನ್ನು ಸರಿಯಾದ ರೀತಿಯಲ್ಲಿ ನಿಯೋಜಿಸುತ್ತಾನೆಯೋ ಅವನು ಶ್ರೇಷ್ಠವಾದ ಕಾರ್ಯವನ್ನು ಸಾಧಿಸುತ್ತಾನೆ. ಅವಿವೇಕಿಯು ಪ್ರಯೋಗಿಸಿದ ಬಲವನ್ನು ಕುರುಡು ಮತ್ತು ಕುಂಟು ಎನ್ನುತ್ತಾರೆ.

ಯತೋ ಹಿ ನಿಮ್ನಂ ಭವತಿ ನಯತೀಹ ತತೋ ಜಲಮ್ ।
ಯತಶ್ಛಿದ್ರಂ ತತಶ್ಚಾಪಿ ನಯಂತಿ ವಿದುಷೋ ಬಲಮ್ ॥೧೭॥

ಎಲ್ಲಿ ಹಳ್ಳವಿದೆಯೋ ಅಲ್ಲಿಗೆ ನೀರು ಕೊಚ್ಚಿಕೊಂಡು ಹೋಗುತ್ತದೆ. ಎಲ್ಲಿ ಶತ್ರುಗಳ ದೌರ್ಬಲ್ಯವಿದೆಯೋ ಅಲ್ಲಿಯೇ ವಿದ್ವಾಂಸರಾದವರು ಬಲವನ್ನು ಪ್ರಯೋಗಿಸುತ್ತಾರೆ.

ವಯಮಾಶ್ರಿತ್ಯ ಗೋವಿಂದಂ ಯತಾಮಃ ಕಾರ್ಯಸಿದ್ಧಯೇ ।
ತಸ್ಮಾತ್ ನಯವಿಧಾನಜ್ಞಂ ಪುರುಷಂ ಲೋಕವಿಶ್ರುತಮ್ ॥೧೮॥

ಏವಂ ಪ್ರಜ್ಞಾನಯಬಲಂ ಕ್ರಿಯೋಪಾಯವಿಶಾರದಮ್ ।
ಪುರಸ್ಕುರ್ವಂತಿ ಕಾರ್ಯೇಷು ಕೃಷ್ಣ ಕಾರ್ಯಾರ್ಥಸಿದ್ಧಯೇ ॥೧೯॥

ನಾವು ಗೋವಿಂದನನ್ನು ಆಶ್ರಯಿಸಿ ನಮ್ಮ ಕಾರ್ಯಸಿದ್ಧಿಗಾಗಿ ಪ್ರಯತ್ನಪಡುತ್ತೇವೆ. ಕೃಷ್ಣನೇ! ಆದ್ದರಿಂದ ನೀತಿವಿಧಾನವನ್ನು ತಿಳಿದವನೂ, ಲೋಕ ವಿಶ್ರುತವಾದವನೂ, ಪ್ರಜ್ಞೆ ಮತ್ತು ನೀತಿಗಳ ಬಲವನ್ನು ಹೊಂದಿದವನೂ, ಕ್ರಿಯೋಪಾಯಗಳಲ್ಲಿ ನಿಷ್ಣಾತನೂ ಆದ ಪುರುಷನನ್ನು ಮುಂದೆಮಾಡಿಕೊಂಡು ಕಾರ್ಯಗಳ ಸಿದ್ಧಿಗಾಗಿ ಪ್ರಯತ್ನಪಡುತ್ತಾರೆ.

ಏವಮೇವ ಯದುಶ್ರೇಷ್ಠ ಪಾರ್ಥಕಾರ್ಯಾರ್ಥಸಿದ್ಧಯೇ ।
ಅರ್ಜುನಃ ಕೃಷ್ಣಮನ್ವೇತು ಭೀಮೋಽನ್ವೇತು ಧನಂಜಯಮ್ ।
ನಯೋ ಜಯೋ ಬಲಂ ಚೈವ ವಿಕ್ರಮಾದ್ ವೃದ್ಧಿಮೇಷ್ಯತಿ ॥೨೦॥

ಯದುಶ್ರೇಷ್ಠನೇ! ಆ ರೀತಿಯಲ್ಲಿ ಪಾಂಡವರಾದ ನಮ್ಮ ಕಾರ್ಯಸಿದ್ಧಿಗಾಗಿ ಅರ್ಜುನನು ಕೃಷ್ಣನನ್ನು ಹಿಂಬಾಲಿಸಲಿ ಭೀಮಸೇನನು ಅರ್ಜುನನ್ನು ಹಿಂಬಾಲಿಸಲಿ. ನೀತಿ ಜಯ ಮತ್ತು ಬಲಗಳನ್ನು ವಿಶಿಷ್ಟವಾದ ಕ್ರಮದಲ್ಲಿ ಪ್ರಯೋಗಿಸಿದರೆ ಬಲವು ಅಭಿವೃದ್ಧಿಯಾಗುವುದು.

ವೈಶಂಪಾಯನಃ

ಏವಮುಕ್ತಾಸ್ತತಃ ಸರ್ವೇ ಭ್ರಾತರೌ ವಿಪುಲೌಜಸೌ ।
ವಾರ್ಷ್ಣೇಯಃ ಪಾಂಡವೇಯೌ ಚ ಪ್ರತಸ್ಥುರ್ಮಾಗಧಾನ್ ಪ್ರತಿ ॥

ಎಲ್ಲಾ ಸಹೋದರರು ಈ ಮಾತುಗಳನ್ನು ಕೇಳಿದ ಮೇಲೆ ವಿಪುಲ ಪರಾಕ್ರಮಿಗಳಾದ ಅಣ್ಣತಮ್ಮಂದಿರಾದ ಭೀಮಾರ್ಜುನರೂ ಮತ್ತು ವೃಷ್ಣಿಕುಲ ಪ್ರಸೂತನಾದ ಕೃಷ್ಣನೂ ಮಗಧ ದೇಶವನ್ನು ಕುರಿತು ಪ್ರಯಾಣ ಮಾಡಿದರು.

ವರ್ಚಸ್ವಿನಾಂ ಬ್ರಾಹ್ಮಣಾನಾಂ ಸ್ನಾತಕಾನಾಂ ಪರಿಚ್ಛದೈಃ ।
ಆಚ್ಛಾದ್ಯ ಸುಹೃದಾಂ ವಾಕ್ಯೈರ್ಮನೋಜ್ಞೈರಭಿನಂದಿತಾಃ ।
ಮಾಧವಃ ಪಾಂಡವೇಯೌ ಚ ಪ್ರತಸ್ಥುರ್ವ್ರತಧಾರಿಣಃ ॥೨೨॥

ವಯಸ್ಸಾದ ಸ್ನಾತಕ ಬ್ರಾಹ್ಮಣರ ವೇಶದಿಂದ ತಮ್ಮ ನಿಜರೂಪವನ್ನು ಆಚ್ಛಾದನೆಮಾಡಿಕೊಂಡು, ಪುರಜನರ ಪ್ರೇಮಾಶೀರ್ವಚನಗಳಿಂದ ಅಭಿನಂದಿತರಾಗಿ ಕೃಷ್ಣನೂ ಮತ್ತು ಭೀಮಾರ್ಜುನರೂ ಸ್ನಾತಕ ವ್ರತಧಾರಿಗಳ ವೇಷವನ್ನು ಧರಿಸಿ ಹೊರಟರು.

ಅಮರ್ಷಾದಭಿತಪ್ತಾನಾಂ ಜ್ಞಾತ್ಯರ್ಥಂ ಮುಖ್ಯತೇಜಸಾಮ್ ।
ರವಿಸೋಮಾಗ್ನಿವಪುಷಾಂ ಭೀಮಮಾಸೀತ್ ತದಾ ವಪುಃ ॥೨೩॥

ತಮ್ಮ ಬಂಧುಗಳಾದ ಕ್ಷತ್ರಿಯರಿಗೆ ಮಾಡಿದ ಅವಮಾನದ ಕಾರಣದಿಂದ ಸಿಟ್ಟಿನಿಂದ ಉರಿಯುತ್ತಿರುವ ಶ್ರೇಷ್ಠವಾದ ತೇಜಸ್ಸಳ್ಳ ಸೂರ್ಯ, ಚಂದ್ರ ಮತ್ತು ಅಗ್ನಿಗಳಂತೆ ಇರುವ ಆ ಮೂವರ ಶರೀರವು, ಆಗ ಭಯಂಕರವಾಗಿ ಕಾಣುತಿತ್ತು.

ಹತಂ ಮೇನೇ ಜರಾಸಂಧಂ ರಾಜಾ ಭೀಮಪುರೋಗಮೌ ।
ಏಕಕಾರ್ಯೇ ಸಮುದ್ಯುಕ್ತೌ ದೃಷ್ಟ್ವಾ ಕೃಷ್ಣಧನಂಜಯೌ ॥೨೪॥

ಭೀಮಸೇನನ್ನು ಮುಂದೆ ಮಾಡಿಕೊಂಡು ನಡೆಯುತ್ತಿರುವ ಮುಖ್ಯವಾದ ಕಾರ್ಯದಲ್ಲಿ ಸಮುದ್ಯುಕ್ತರಾದ ಕೃಷ್ಣಾರ್ಜುನರನ್ನು ನೋಡಿ ಧರ್ಮರಾಜನು ಜರಾಸಂಧನು ಹತನಾದನೆಂದೇ ತಿಳಿದನು.

ಈಶೌ ಹಿ ತೌ ಮಹಾತ್ಮಾನೌ ಸರ್ವಕಾರ್ಯಪ್ರವರ್ತಿನೌ ।
ಧರ್ಮಾರ್ಥಕಾಮಮೋಕ್ಷಾಣಾಂ ಕಾರ್ಯಾಣಾಮಿವ ನಿಗ್ರಹೇ ॥೨೫॥

ಸ್ತ್ರೀಭೋಗಾದಿ ಕಾರ್ಯಗಳನ್ನು ನಿಗ್ರಹಿಸಿ, ಕಾಮದಿಂದ ಬಿಡುಗಡೆಯನ್ನು ಪಡೆದ ಧರ್ಮ ಮತ್ತು ಅರ್ಥಗಳಂತೆ ಮಹಾತ್ಮರಾದ ಸರ್ವಕಾರ್ಯಗಳಲ್ಲಿಯೂ ಪ್ರವೃತ್ತರಾಗುವ ಅವರಿಬ್ಬರೂ ಸಮರ್ಥರಾದವರು.

ಕುರುಭ್ಯಃ ಪ್ರಸ್ಥಿತಾಸ್ತೇ ತು ಮಧ್ಯೇನ ಕುರುಜಾಂಗಲಮ್ ।
ರಮ್ಯಂ ಪದ್ಮಸರೋ ಗತ್ವಾ ಕಾಲಕೂಟಮತೀತ್ಯ ಚ ॥೨೬॥

ಸಂತೀರ್ಯ ಸರಯೂಂ ರಮ್ಯಾಂ ದೃಷ್ಟ್ವಾ ಪೂರ್ವಾಂಶ್ಚ ಕೋಸಲಾನ್ ।
ಗಂಡಕೀಮನುರಾಗಾಂ ಚ ಸದಾನೀರಾಂ ತಥೈವ ಚ ॥೨೭॥

ಏಕಪರ್ವತಕೇ ನದ್ಯಃ ಕ್ರಮೇಣಾತಿವ್ರಜಂತಿ ತೇ ।
ಅತೀತ್ಯ ಮಿಥಿಲಾಂ ಜಗ್ಮುಃ ಪಶ್ಯಂತೋ ವಿಪುಲಾ ನದೀಃ ॥೨೮॥

ಕುರುದೇಶದಿಂದ ಹೊರಟ ಅವರು ಕುರುಜಾಂಗಲವನ್ನು ಮಧ್ಯದಲ್ಲಿ ಮಾಡಿಕೊಂಡು ಮನೋಹರವಾದ ಪದ್ಮ ಸರೋವರವನ್ನು ತಲುಪಿ ಕಾಲಕೂಟಪರ್ವತವನ್ನು ದಾಟಿ ಮನೋಹರವಾದ ಸರಯೂ ನದಿಯನ್ನು ದಾಟಿ ಪೂರ್ವಕೋಸಲದೇಶವನ್ನು ದಾಟಿ ಏಕ ಪರ್ವತದಲ್ಲಿ ಕ್ರಮವಾಗಿ ಹರಿಯುವ ಗಂಡಕೀ ಅನುರಾಗ ಮತ್ತು ಸದಾನೀರಾ ನದಿಗಳನ್ನು ದಾಟಿ ಇನ್ನೂ ಅನೇಕ ನದಿಗಳನ್ನು ನೋಡುತ್ತಾ ಮಿಥಿಲಾಪಟ್ಟಣವನ್ನು ದಾಟಿದರು.

ಉತ್ತೀರ್ಯ ಗಂಗಾಂ ಶೋಣಾಂ ಚ ಸರ್ವೇ ತೇ ಪ್ರಾಙ್ಮುಖಾಸ್ತ್ರಯಃ।
ರಮ್ಯಂ ಜನಪದಂ ಸ್ಫೀತಂ ಮಾಗಧಂ ಜಗ್ಮುರಚ್ಯುತಾಃ ॥೨೯॥

ಆ ಮೂವರೂ ಗಂಗೆಯನ್ನೂ ಶೋಣಾನದಿಯನ್ನೂ ದಾಟಿ ಪೂರ್ವಾಭಿಮುಖವಾಗಿ ಹೊರಟು ಉತ್ಸಹಾದಿಗುಣಗಳಿಂದ ತುಂಬಿದವರಾಗಿ ಮನೋಹರವಾದ ಮತ್ತು ಸಮೃದ್ಧವಾದ ಮಗಧದೇಶವನ್ನು ತಲುಪಿದರು.

ದೇಶಂ ಚ ಗೋಧನಾಕೀರ್ಣಂ ಮಧುಮಂತಂ ಶುಭದ್ರುಮಮ್ ।
ಗೋರಥಂ ಗಿರಿಮಾರುಹ್ಯ ದದೃಶುರ್ಮಾಗಧಂ ಪುರಮ್ ॥೩೦॥

ಗೋವುಗಳಿಂದ ತುಂಬಿದ ಐಶ್ವರ್ಯಯುಕ್ತವಾದ ಆ ದೇಶವನ್ನು ತಲುಪಿ, ಅವರು ಗೋರಥ ಎಂಬ ಪರ್ವತವನ್ನು ಹತ್ತಿ ಅನೇಕ ಪುಣ್ಯವೃಕ್ಷಗಳನ್ನೂ ಸುಖ ಸಮೃದ್ಧಿಗಳನ್ನೂ ಹೊಂದಿದ್ದ ಮಗಧದೇಶದರಾಜಧಾನಿಯಾದ ಗಿರಿವ್ರಜವನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ಸಭಾಪರ್ವಣಿ ಏಕವಿಂಶೋऽನಧ್ಯಾಯಃ ॥
॥ ಜರಾಸಂಧಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಸಮೇತ್ಯ ಮಾಗಧಾಂಸ್ತು ತೇ ಶಿವೋರುಲಿಂಗಮಿತ್ಯಲಂ ।
ಸುಮಾಲ್ಯವಸ್ತ್ರಭೂಷಣೈಃ ಸಮರ್ಚಿತಂ ಗಿರಿಂ ಯಯುಃ ॥೧೨೩॥

ಶ್ರೀಕೃಷ್ಣ ಭೀಮಾರ್ಜುನರು ಮಗಧ ದೇಶಕ್ಕೆ ಹೋಗಿ ಅಲ್ಲಿ ಶಿವನ ದೊಡ್ಡ ಲಿಂಗವೆಂದು ಒಳ್ಳೆಯ ಮಾಲೆ ವಸ್ತ್ರ ಅಲಂಕಾರಗಳಿಂದ ಬಹಳವಾಗಿ ಪೂಜೆಗೊಳ್ಳುತ್ತಿದ್ದ ಒಂದು ಬೆಟ್ಟದ ಶಿಖರದ ಬಳಿಗೆ ಹೋದರು.

ಸ್ವಶೀರ್ಷತೋಽಪಿ ಚಾದೃತಂ ಜರಾಸುತೇನ ತೇ ಗಿರಿಂ ।
ನ್ಯಪಾತಯಂತ ಬಾಹುಭಿಸ್ತಮಸ್ಯ ಚೋತ್ತಮಾಂಗವತ್ ॥೧೨೪॥

ಜರಾಸಂಧ ಯಾವ ಬೆಟ್ಟವನ್ನು ತನ್ನ ತಲೆಗಿಂತಲೂ ಹೆಚ್ಚಾಗಿ ಆದರಿಸುತ್ತಿದ್ದನೋ ಆ ಬೆಟ್ಟವನ್ನು ಮೂವರೂ ತಮ್ಮ ಬಾಹುಗಳಿಂದ ಹೊಡೆದು ಕೆಡವಿದರು. ಜರಾಸಂಧನ ತಲೆಯೇ ಉರುಳಿದಂತಾಯಿತು.

ಅದ್ವಾರತಸ್ತೇ ನಗರಂ ಪ್ರವಿಶ್ಯ
ಮಾಪಸ್ಯ ನಾಳೇನ ಕೃತಾಸ್ತ್ರಭೇರೀಃ ।
ಪುಷ್ಟಿಪ್ರದಾ ಬಿಭಿದುಸ್ತಸ್ಯ ಕೀರ್ತಿ-
ಶಾಸ್ತ್ರೋಪಮಾ ನ್ಯಕೃತಮಾಗಧೇಶಾಃ ॥೧೨೫॥

ಅವರು ಅದ್ವಾರದಿಂದ ನಗರವನ್ನು ಪ್ರವೇಶಿಸಿದರು. ಮಾಷಾಸುರನ ಕಂಠನಾಳದಿಂದ ಮಾಡಿದ ಭೇರಿಗಳು ಅಲ್ಲಿ ಜರಾಸಂಧನ ಕೀರ್ತಿಯನ್ನು ಹೊಗಳುವ ಶಾಸ್ತ್ರಗಳಂತಿದ್ದವು. ಧ್ವನಿಯಿಂದ ಜನರಿಗೆ ಪುಷ್ಟಿ ನೀಡುತ್ತಿದ್ದುವು. ಕೃಷ್ಣಭೀಮಾರ್ಜುನರು ಜರಾಸಂಧನನ್ನು ತೃಣೀಕರಿಸುತ್ತ ಆ ಭೇರಿಗಳನ್ನೂ ಒಡೆದರು.

ತಥಾಪಣೇಭ್ಯೋ ಬಹುಮಾಲ್ಯಗಂಧಾನ್
ಪ್ರಸಹ್ಯ ಸಂಗೃಹ್ಯ ಶುಭಾಂಶ್ಚ ದಧ್ರುಃ ।
ಅದ್ವಾರತಸ್ತಸ್ಯ ಗೃಹಂ ಚ ಸಸ್ರು-
ರ್ಭೋಶಬ್ದತಸ್ತಂ ಚ ನೃಪಂ ಪ್ರಸಸ್ರುಃ ॥೧೨೬॥

ಶ್ರೀಕೃಷ್ಣ ಭೀಮ ಅರ್ಜುನರು ಅಂಗಡಿಗಳಿಂದ ಒಳ್ಳೆಯ ಅನೇಕ ಹೂಮಾಲೆ ಮತ್ತು ಗಂಧಗಳನ್ನು ಬಲಾತ್ಕಾರವಾಗಿ ತೆಗೆದು ಧಾರಣ ಮಾಡಿದರು. ಅದ್ವಾರದಿಂದಲೆ ಜರಾಸಂಧನ ಅರಮನೆಯನ್ನು ಪ್ರವೇಶಿಸಿದರು. 'ಎಲೋ ಜರಾಸಂಧ!' ಎಂದು ಕೂಗುತ್ತ ಅವನ ಬಳಿಗೆ ನಡೆದರು.

ತಾನ್ ವಿಪ್ರವೇಷಾನ್ ನಿ ನಿಶಾಮ್ಯ ರಾಜಾ
ಮಹಾಭುಜಾನ್ ಸ್ನಾತಕವೇಷಯುಕ್ತಾನ್ ।
ದ್ವಿತೀಯವರ್ಣಾನ್ ಪ್ರವಿಚಿಂತ್ಯ ಬಾಹೂನ್
ಜ್ಯಾಕರ್ಕಶಾನ್ ವೀಕ್ಷ್ಯ ಬಭಾಷ ಏತಾನ್ ॥೧೨೭॥

ಅವರು ಬ್ರಾಹ್ಮಣ ವೇಷದಲ್ಲಿದ್ದರು. ಅದರಲ್ಲಿಯೂ ಸ್ನಾತಕ ವೇಷಯುಕ್ತರಾಗಿದ್ದರು. ಆದರೆ ಮಹಾಬಾಹುಗಳು. ಬಾಹುಗಳು ಬಿಲ್ಲಿನ ಹೆದೆಯ ಚಿಹ್ನೆಯಿಂದ ಕೂಡಿದ್ದು ಕಠಿನವಾಗಿದ್ದುವು. ಅದನ್ನು ನೋಡಿ ಜರಾಸಂಧ ಅವರು ಕ್ಷತ್ರಿಯರೇ ಇರಬಹುದೆಂದು ಆಲೋಚಿಸಿ ಕೇಳಿದ.

ಕೇ ಷ್ಠಾಥ ಕಿಂಹೇತುತ ಆಗತಾಶ್ಚ
ಕುತಶ್ಚ ಮೇ ಪರ್ವತಲಿಂಗಭೇದನಂ ।
ಕೃತಂ ಭವದ್ಭಿಃ ಕುತ ಏವ ದುರ್ನಯಾಃ
ಕೃತಾಸ್ತಥಾನ್ಯೇ ದ್ವಿಜವರ್ಯವೇಷೈಃ ॥೧೨೮॥

'ಯಾರು ನೀವು? ಏಕೆ ಬಂದಿರಿ? ನನ್ನ ಪರ್ವತಾಕಾರದ ಶಿವಲಿಂಗವನ್ನು ಏಕೆ ಕೆಡವಿದಿರಿ? ಬ್ರಾಹ್ಮಣೋತ್ತಮರ ವೇಷ ಧರಿಸಿದ್ದೂ ಬೇರೆ ಅನ್ಯಾಯಾಚರಣೆಗಳನ್ನು ಏಕೆ ಮಾಡಿದಿರಿ?

ಇತಿ ಬ್ರುವಾಣಂ ಭಗವಾನುವಾಚ
ಕಾರ್ಯಂ ಹಿ ಶತ್ರೋರಖಿಲಂ ಪ್ರತೀಪಂ ।
ಇತ್ಯುಕ್ತ ಊಚೇ ನ ಹಿ ವಿಪ್ರಶತ್ರು-
ರಹಂ ಕುತೋ ವೋ ಮಮ ಶತ್ರುತಾ ಭವೇತ್ ॥೧೨೯॥

ಜರಾಸಂಧ ಹೀಗೆ ಕೇಳಿದಾಗ ಭಗವಾನ್ ಶ್ರೀಕೃಷ್ಣ ನುಡಿದ. 'ಶತ್ರುವಿಗೆ ಎಲ್ಲ ರೀತಿಯಿಂದ ವಿರುದ್ಧಾಚರಣೆ ಮಾಡುವುದು ಯುಕ್ತವೆ'. ಅದನ್ನು ಕೇಳಿ ಜರಾಸಂಧ ನುಡಿದ. 'ನಾನು ಬ್ರಾಹ್ಮಣರಿಗೆ ಶತ್ರುವಲ್ಲ. ನಿಮಗೆ ನನ್ನಲ್ಲಿ ಏಕೆ ಶತ್ರುತ್ವ?

ಇತ್ಯುಕ್ತವಾಕ್ಯಂ ನೃಪತಿಂ ಜಗಾದ
ಜನಾರ್ದನೋ ನೈವ ಹಿ ತಾದೃಶಾ ದ್ವಿಜಾಃ ।
ವಯಂ ರಿಪುಸ್ತೇಽಸ್ಮಿ ಹಿ ವಾಸುದೇವ
ಇಮೌ ಚ ಭೀಮಾರ್ಜುನನಾಮಧೇಯೌ ॥೧೩೦॥

ಜರಾಸಂಧ ಹೀಗೆ ಹೇಳಿದಾಗ ಶ್ರೀಕೃಷ್ಣ ಹೇಳಿದ 'ನಾವೇನೂ ಅಂಥ ಬ್ರಾಹ್ಮಣರು ಸರ್ವಥಾ ಅಲ್ಲ. ನಾನು ನಿನ್ನ ಶತ್ರು ವಾಸುದೇವ. ಇವರೂ ಭೀಮ ಅರ್ಜುನ ಎಂದು ಹೆಸರುಳ್ಳವರು.

ಯದ್ ಬಾಂಧವಾನ್ನಃ ಪಿಶಿತಾಶಿಧರ್ಮತೋ
ರೌದ್ರೇ ಮಖೇ ಕಲ್ಪಯಿತುಂ ಪಶುತ್ವೇ ।
ಇಚ್ಛಸ್ಯರೇ ವೇದಪಥಂ ವಿಹಾಯ
ತಂ ತ್ವಾಂ ಬಲಾಚ್ಛಾಸ್ತುಮಿಹಾಗತಾ ವಯಂ ॥೧೩೧॥

ಎಲೋ ದುಷ್ಟ, ನೀನು ವೇದಮಾರ್ಗವನ್ನು ತೊರೆದು ರಾಕ್ಷಸ ವೃತ್ತಿಯಿಂದ ನಮ್ಮ ಬಾಂಧವರನ್ನು ಭೈರವಯಾಗದಲ್ಲಿ ಬಲಿಪಶುವಾಗಿ ಮಾಡಲು ಬಯಸಿರುವಿ. ಅಂಥ ನಿನಗೆ ಬಲಾತ್ಕಾರವಾಗಿ ಶಾಸನ ಮಾಡಲು ನಾವು ಇಲ್ಲಿಗೆ ಬಂದಿದ್ದೇವೆ.

ವಿಮೋಕ್ಷಯಾಮಃ ಸ್ವಜನಾನ್ ಯದಿ ತ್ವಂ
ನ ಮೋಚಯಸ್ಯದ್ಯ ನಿಗೃಹ್ಯ ಚ ತ್ವಾಂ ।
ಮುಂಚಾಥ ವಾ ತಾನಭಿಯಾಹಿ ವಾಽಸ್ಮಾನ್
ರಣಾಯ ಮರ್ತುಂ ಕೃತನಿಶ್ಚಯೋಽತ್ರ ॥೧೩೨॥

ನೀನು ನಮ್ಮ ಬಾಂಧವರನ್ನು ಬಿಡುಗಡೆ ಮಾಡದಿದ್ದರೆ ನಿನ್ನನ್ನು ನಿಗ್ರಹಿಸಿ ಅವರನ್ನು ನಾವೆ ಬಿಡಿಸಿಕೊಳ್ಳುತ್ತೇವೆ. ಅದರಿಂದ ಅವರನ್ನು ಬಿಟ್ಟುಕೊಡು ಇಲ್ಲವೆ, ಸಾಯಲು ನಿಶ್ಚಯಮಾಡಿದ್ದರೆ ನಮ್ಮೊಡನೆ ಯುದ್ಧಕ್ಕೆ ಬಾ.

ಇತೀರಿತೋಽಸೌ ಮಗಧಾಧಿಪೋ ರುಷಾ
ಜಗಾದ ನಾಹಂ ಶಿವಯಾಗಯುಕ್ತಾನ್ ।
ಮೋಕ್ಷ್ಯೇ ಪಶೂನ್ ಯುಗಪದ್ಭಾಕ್ರಮೇಣ
ಯೋತ್ಸ್ಯೇ ಚ ವೋಽಥಾಪಿ ಚಮೂಸಹಾಯಾನ್ ॥೧೩೩॥

ಶ್ರೀಕೃಷ್ಣ ಹೀಗೆ ಹೇಳಿದಾಗ ಜರಾಸಂಧ ಕೋಪದಿಂದ ನುಡಿದ. 'ನಾನು ಭೈರವಯಾಗಕ್ಕೆ ಮೀಸಲಾಗಿಟ್ಟಿರುವ ಈ ಪಶುಗಳನ್ನು ಬಿಡಲಾರೆ. ನಿಮ್ಮ ಮೂವರೊಡನೆ ಏಕಕಾಲದಲ್ಲಾಗಲಿ, ಕ್ರಮವಾಗಿ ಒಬ್ಬೊಬ್ಬರೊಡನೆಯಾಗಲಿ, ಸೈನ್ಯ ಸಮೇತವಾಗಿಯಾಗಲಿ ಅಥವಾ ಏಕಾಂಗಿಯಾಗಲಿ ನಾನು ನಿಮ್ಮೊಡನೆ ಯುದ್ಧವನ್ನೇ ಮಾಡುವೆನು'.

ನಿರಾಯುಧಃ ಸಾಯುಧೋ ವಾ ಯುಷ್ಮದಿಷ್ಟಾಯುಧೇನ ವಾ ।
ಏಕೋಽಪಿ ಸಕಲೈರ್ಯೋತ್ಸ್ಯೇ ಸಸೈನ್ಯೋ ವಾ ಸಸೈನಿಕಾನ್ ॥೧೩೪॥

ನಿರಾಯುಧನಾಗಿಯೋ ಆಯುಧ ಸಹಿತನಾಗಿಯೋ ಅಥವಾ ನಿಮಗೆ ಇಷ್ಟವಾದ ಆಯುಧದಿಂದಲೋ ಒಬ್ಬನೇ ನಿಮ್ಮೆಲ್ಲರೊಡನೆ ಹೋರಾಡುವೆನು. ಅಥವಾ ಸೈನ್ಯ ಸಹಿತನಾಗಿ ಸೈನ್ಯ ಸಮೇತರಾದ ನಿಮ್ಮೊಡನೆ ಯುದ್ಧವನ್ನೂ ಮಾಡಲು ಸಿದ್ಧನಿದ್ದೇನೆ.

★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

(ಜರಾಸಂಧನ ಪುರದವರ್ಣನೆ, ಕೃಷ್ಣಮೊದಲಾದವರ ಪ್ರವೇಶಪ್ರಕಾರ. ಜರಾಸಂಧನ ಜೊತೆಯಲ್ಲಿ ಅವರ ವಿವಾದ, ಮತ್ತು ಭೀಮಸೇನನ ಯುದ್ಧೋದ್ಯಮ.)

ವಾಸುದೇವಃ

ಏಷ ಪಾರ್ಥ ಮಹಾಬಾಹೋ ಪಶುಮಾನ್ ನಿತ್ಯಮಂಬುಮಾನ್ ।
ಅನಾಮಯಃ ಸುವೇಶ್ಮಾಢ್ಯೋ ನಿವೇಶೋ ಮಾಗಧಃ ಶುಭಃ ॥೧॥

ಮಹಾಬಾಹುವಾದ ಪಾರ್ಥನೇ! ಇದು ಮಗಧದೇಶದ ಪಶುಗಳಿಂದಲೂ ಯಾವಗಲೂ ಉದಕದಿಂದಲೂ ಒಳ್ಳೆಯ ಮನೆಗಳಿಂದಲೂ ಕೂಡಿದ್ದು ಯಾವ ಆತಂಕವೂ ಇಲ್ಲದಿರುವ ಮಗಧರಾಜ್ಯದ ಶುಭವಾದ ಪಟ್ಟಣ.

ವೈಹಾರೋ ವಿಪುಲಃ ಶೈಲಃ ವಾರಾಹೋ ವಿಪುಳಸ್ತಥಾ ।
ತಥಾ ವರ್ಷಗಿರಿಸ್ತಾತ ಶುಭಾಶ್ಚೈತ್ಯಕಪಂಚಮಾಃ ॥೨॥

ವಿಸ್ತಾರವಾದ ವೈಹಾರ ವರ್ಪತ ವರಾಹಪರ್ವತ ವಿಪುಳಪರ್ವತ ವರ್ಷಗಿರಿ ಮತ್ತು ಚೈತ್ಯಕವೆಂಬ ಐದು ಶುಭಪರ್ವತಗಳಿವೆ.

ಏತೇ ಪಂಚ ಮಹಾಶೃಂಗಾಃ ಪರ್ವತಾಃ ಶೀತಲದ್ರುಮಾಃ ।
ರಕ್ಷಂತಿ ಚಾಭಿಸಂಹತ್ಯ ಸಂಹತಾಶ್ಚ ಗಿರಿವ್ರಜಮ್ ॥೩॥

ಈ ಪರ್ವತಗಳೆಲ್ಲವೂ ಮಹಾಶೃಂಗಗಳನ್ನು ಹೊಂದಿ ಶೀತಲವಾದ ವೃಕ್ಷಗಳ ಕಾಡಿನಿಂದ ಕೂಡಿವೆ. ಇವು ಒಂದಕ್ಕೊಂದು ಸೇರಿಕೊಂಡು ಈ ಗಿರಿವ್ರಜವನ್ನು ರಕ್ಷಿಸುತ್ತವೆ.

ಪುಷ್ಪವೇಷ್ಟಿತಶಾಖಾಗ್ರೈರ್ಗಂಧವದ್ಭಿರ್ಮನೋರಮೈಃ ।
ನಿಗೂಢಾ ಇವ ಲೋಧ್ರಾಣಾಂ ವನೈಃ ಕಾಮಿಜನಪ್ರಿಯೈಃ ॥೪॥

ಈ ಪರ್ವತಗಳ ಸುತ್ತಲೂ ಕಾಮಿಜನರಿಗೆ ಪ್ರಿಯವಾದ ಲೋಧ್ರವನಗಳಿವೆ. ಅವುಗಳು ಮನೋಹರವಾದ ಗಂಧವನ್ನು ಬೀರುವ ತಮ್ಮ ಕೊಂಬೆಗಳಲ್ಲಿ ಮನೋಹರವಾದ ಗಂಧವನ್ನು ಬೀರುವ ಬಹಳ ಪುಷ್ಪಗಳನ್ನು ಹೊಂದಿವೆ.

ಯತ್ರ ದೀರ್ಘತಮಾ ನಾಮ ಋಷಿಃ ಪರಮಯಂತ್ರಿತಃ ।
ಸಮುತ್ಪನ್ನಶ್ಚ ಶೂದ್ರಾಯಾಂ ಗೌತಮಃ ಸಂಶಿತವ್ರತಃ ॥೫॥

ಇಲ್ಲಿ ಪರಮ ನಿಗ್ರಹೋಪೇತನಾದ ದೀರ್ಘತಮ ಎಂಬ ಗೌತಮವಂಶದ ಮಹಾವ್ರತಧರನಾದ ಋಷಿಯು ಒಬ್ಬ ಶೂದ್ರ ಸ್ತ್ರೀಯಲ್ಲಿ ಜನಿಸಿದನು (ಎಂದರೆ ಪುತ್ರರನ್ನು ಪಡೆದನು)

ಔಶೀನರ್ಯಾಮಜನಯತ್ ಪುತ್ರಾನ್ ಕಾಕ್ಷೀವದಾದಿಕಾನ್ ।
ಗೌತಮಸ್ಯ ಕ್ಷಯಾದಸ್ಮಾದಥಾಸೀದತ್ರ ಸದ್ಮನಿ ॥೬॥

ಅವನು ಉಶೀನರೀ ಎಂಬ ಆ ರಾಣಿಯಲ್ಲಿ ಕಾಕ್ಷೀವಾನ್ ಮೊದಲಾದ ಮಕ್ಕಳನ್ನು ಪಡೆದನು. ಈ ಗೌತಮಸ್ಥಾನದಿಂದ ಸ್ವಲ್ಪ ದೂರದಲ್ಲಿರುವ ಈ ಮನೆಯಲ್ಲಿ ವಾಸಿಸುತ್ತಿದ್ದನು.

ಭಜತೇ ಮಾಗಧಂ ವಂಶಂ ಸ ನೃಪಾಣಾಮನುಗ್ರಹಾತ್ ।
ಅಂಗವಂಗಾದಯಶ್ಚೈವ ಭೂಮಿಪಾಃ ಸುಮಹಾಬಲಾಃ ॥೭॥

ಗೌತಮಕ್ಷಯಮೇತ್ಯಾತ್ರ ರಮಂತೇ ಸ್ಮ ಸಹಾರ್ಜುನ ।
ವನರಾಜೀಸ್ತು ಪಶ್ಯೇಮಾಃ ಪ್ರಿಯಾಲಾನಾಂ ಮನೋರಮಾಃ ॥೮॥

ಮಗಧವಂಶದ ರಾಜರುಗಳಿಗೆ ಅನುಗ್ರಹಮಾಡುವ ದೃಷ್ಟಿಯಿಂದ ದೀರ್ಘತಮನು ಇಲ್ಲಿಯೇ ವಾಸವಾಗಿದ್ದನು. ಅರ್ಜುನನೇ! ಅಂಗ ವಂಗ ಮೊದಲಾದ ದೇಶದ ಮಹಾಬಲಶಾಲಿಗಳಾದ ರಾಜರು ಈ ಗೌತಮಕ್ಷತ್ರಕ್ಕೆ ಬಂದು ವಿಹರಿಸುತ್ತಾರೆ. ಪ್ರಿಯಾಲವೃಕ್ಷಗಳ ಮನೋಹರವಾದ ಈ ಕಾನನದ ಪಂಕ್ತಿಗಳನ್ನು ನೋಡು.

ಲೋಧ್ರಾಣಾಂ ಚ ಶುಭಾಃ ಪಾರ್ಥ ರಾಜೀ ರಾಜೀವಲೋಚನ ।
ಪುನ್ನಾಗಾನಾಂ ಶುಭಾಸ್ತತ್ರ ಗೌತಮೌಕಸ್ಸಮೀಪತಃ ॥೯॥

ರಾಜೀವಲೋಚನನಾದ ಪಾರ್ಥನೇ! ಆ ಗೌತಮರ ನಿವಾಸದ ಸಮೀಪದಲ್ಲಿ ಲೋಧ್ರವೃಕ್ಷಗಳ ಶುಭವಾದ ಪಂಕ್ತಿಯು ಮತ್ತು ಪುನ್ನಾಗವೃಕ್ಷಗಳ ಶುಭವಾದ ಪಂಕ್ತಿಯು ಇದೆ.

ಅರ್ಬುದಃ ಶಕ್ರವಾಪೀ ಚ ಪನ್ನಗೌ ಶತ್ರುತಾಪನೌ ।
ಸ್ವಸ್ತಿಕಸ್ಯಾಲಯಶ್ಚಾತ್ರ ಮಣಿನಾಗಸ್ಯ ಚೋತ್ತಮಃ ॥೧೦॥

ಇಲ್ಲಿ ಶತ್ರುಪೀಡಕರಾದ ಅರ್ಬುದ ಮತ್ತು ಶಕ್ರವಾಪಿ ಎಂಬ ಎರಡು ಸರ್ಪಗಳ ಹಾಗೆಯೇ ಮಣಿನಾಗ ಮತ್ತು ಸ್ವಸ್ತಿಕ ಎಂಬ ಇನ್ನೆರಡು ಸರ್ಪಗಳ ಉತ್ತಮವಾದ ವಾಸಸ್ಥಾನವಿದೆ.

ಸ ಪಾರಿಹಾರ್ಯೋ ಮೇಧ್ಯಾನಾಂ ಮಾಗಧೋಽಯಂ ಮಣೇಃ ಕೃತೇ ।
ಶೇಷಜಶ್ಚ ಮಣಿಶ್ಚೈವ ಕೃತವಂತಾವನುಗ್ರಹಮ್ ॥೧೧॥

ಇಲ್ಲಿ ಚಿಂತಾಮಣಿಯು ಇರುವುದರಿಂದ ಮಗಧದೇಶವು ಪೂಜ್ಯರಾದ ಋಷಿಗಳಿಗೆ ವಿಹಾರಸ್ಥಾನವಾಗಿದೆ. ಶೇಷನ ಪುತ್ರನು ಮತ್ತು ಚಿಂತಾಮಣಿಯು ಈ ದೇಶಕ್ಕೆ ಅನುಗ್ರಹವನ್ನು ಮಾಡಿದ್ದಾರೆ.

ಪಾಂಡರೇ ವಿಪುಲೇ ಚೈವ ತಥಾ ವಾರಾಹಕೇಽಪಿ ಚ ।
ಚೈತ್ಯಕೇ ಚ ಗಿರಿಶ್ರೇಷ್ಠೇ ಮಾತಂಗೇ ಚ ಶಿಲೋಚ್ಚಯೇ ॥೧೨॥

ಏತೇಷು ಪರ್ವತೇಂದ್ರೇಷು ಕ್ರೀಡಂತ್ಯಪ್ಸರಸಸ್ತಥಾ ।
ಯತೀನಾಮಾಶ್ರಮಾಶ್ಚೈವ ಮುನೀನಾಂ ಚ ಮಹಾತ್ಮನಾಮ್ ॥೧೩॥

ವೃಷಭಸ್ಯ ತಮಾಲಸ್ಯ ಮಹಾವೀರ್ಯಸ್ಯ ವೈ ತಥಾ ।
ಗಂಧರ್ವರಕ್ಷಸಾಂ ಚೈವ ನಾಗಾನಾಂ ಚ ತಥಾऽऽಲಯಾಃ ॥೧೪॥

ಪಾಂಡರಪರ್ವತ ವಿಪುಲಪರ್ವತ ವರಾಹಪರ್ವತ ಚೈತ್ಯಕಪರ್ವತ ಮತ್ತು ಮಾಂತಗಪರ್ವತ ಈ ಶ್ರೇಷ್ಠಪರ್ವತಗಳಲ್ಲಿ ಅಪ್ಸರೆಯರು ಬಂದು ವಿಹರಿಸುತ್ತಾರೆ. ಇಲ್ಲಿಯೇ ಯತಿಗಳ ಆಶ್ರಮಗಳು ಮತ್ತು ಮಹಾತ್ಮರಾದ ಋಷಿಗಳ ಆಶ್ರಮಗಳೂ ಇವೆ. ಇಲ್ಲಿ ಮಹಾಪರಾಕ್ರಮಿಯಾದ ತಮಾಲವರ್ಣದ ವೃಷಭಾಸುರನ ಆಲಯವೂ ಗಂಧರ್ವರ ರಾಕ್ಷಸರ ಮತ್ತು ನಾಗಗಳ ಆಲಯಗಳೂ ಇವೆ.

ಕಕ್ಷೀವತಸ್ತಪೋವೀರ್ಯಾತ್ ತಪೋದಾ ಇತಿ ವಿಶ್ರುತಾಃ ।
ಪುಣ್ಯತೀರ್ಥಾಶ್ಚ ತೇ ಸರ್ವೇ ನರಾಣಾಂ ಪುಣ್ಯದಾಯಿನಃ ॥೧೫॥

ಕಕ್ಷೀವತರ ತಪಸ್ಸಿನ ಬಲದಿಂದ ತಪೋದ ಎಂದು ಪ್ರಖ್ಯಾತವಾದ ಅನೇಕ ಪುಣ್ಯತೀರ್ಥಗಳು ಇಲ್ಲಿವೆ. ಅವುಗಳನ್ನು ಸೇವಿಸುವ ಮನುಷ್ಯರಿಗೆ ಪುಣ್ಯವನ್ನು ಉಂಟುಮಾಡಿಕೊಡುತ್ತವೆ.

ಅರ್ಥಸಿದ್ಧಿಂ ತ್ವನವಗಾಂ ಜರಾಸಂಧೋ ಹಿ ಮನ್ಯತೇ ।
ವಯಮಾಸಾದನೇ ತಸ್ಯ ದರ್ಪಮಸ್ಯಾಪಹನ್ಮಹಿ ॥೧೬॥

ಜರಾಸಂಧನು ತನಗಿರುವ ಸಂಪತ್ತು ಎಂದೂ ತನ್ನನ್ನು ಬಿಟ್ಟುಹೋಗುವುದಿಲ್ಲವೆಂದು ತಿಳಿದಿದ್ದಾನೆ. ನಾವು ಅವನ ಮನೆಯಲ್ಲಿಯೇ ಅವನ ಈ ದರ್ಪವನ್ನು ನಾಶಮಾಡೋಣ.

ವೈಶಂಪಾಯನಃ

ಏವಮುಕ್ತ್ವಾ ತತಃ ಸರ್ವೇ ಭ್ರಾತರೌ ವಿಪುಲೌಜಸೌ ।
ಕೃಷ್ಣಶ್ಚ ಪಾಂಡವೇಯೌ ಚ ಪ್ರತಸ್ಥುರ್ಮಾಗಧಂ ಪುರಮ್ ॥೧೭॥

ಹೀಗೆ ಹೇಳಿ ವಿಪುಲಪರಾಕ್ರಮಿಗಳಾದ ಪಾಂಡುಪುತ್ರರಾದ ಅಣ್ಣತಮ್ಮಂದಿರಾದ ಭೀಮಾರ್ಜುನರು ಮತ್ತು ಕೃಷ್ಣನು ಮಾಗಧಪುರವಾದ ಗಿರವ್ರಜವನ್ನು ಪ್ರವೇಶಿಸಲು ಉಪಕ್ರಮಿಸಿದರು.

ಹೃಷ್ಟಪುಷ್ಟಜನೋಪೇತಂ ಚಾತುರ್ವರ್ಣ್ಯಜನಾಕುಲಮ್ ।
ಸ್ಫೀತೋತ್ಸವಮನಾಧೃಷ್ಯಮಾಸೇದುಸ್ತೇ ಗಿರಿವ್ರಜಮ್ ॥೧೮॥

ಅವರು ಸಂತೋಷಗೊಂಡ ಪುಷ್ಟರಾದ ಜನರಿಂದ ಕೂಡಿದ ಚಾತುರ್ವರ್ಣ್ಯವನ್ನು ಅನುಸರಿಸುವ ಜನರಿಂದ ನಿಬಿಡವಾದ ಪರಿಶುದ್ಧವಾದ ಉತ್ಸವಗಳನ್ನು ಹೊಂದಿದ ಯಾರಿಂದಲೂ ಭೇದಿಸಲೂ ಅಸಾಧ್ಯವಾದ ಗಿರಿವ್ರಜವನ್ನು ತಲುಪಿದರು.

ಬಾರ್ಹದ್ರಥೈಃ ಪೂಜ್ಯಮಾನಂ ತಥಾ ನಗರವಾಸಿಭಿಃ ।
ಯತ್ರ ಮಾಷಾದಮೃಷಮಾಸಸಾದ ಬೃಹದ್ರಥಃ ।
ತೇ ಚ ದ್ವಾರಮನಾಸಾದ್ಯ ಪುರಸ್ಯ ಗಿರಿಮುಚ್ಛ್ರಿತಮ್ ॥೧೯॥

ಅವರು ಪುರದ್ವಾರವನ್ನು ಸಮೀಪಿಸದೆ ಬೃಹದ್ರಥನ ವಂಶದವರಿಂದಲೂ ಮತ್ತು ನಗರವಾಸಿಗಳಿಂದಲೂ ಶಿವಲಿಂಗವೆಂದು ಪೂಜಿಸಲ್ಪಡುವ ಎತ್ತರವಾದ ಪರ್ವತವನ್ನು ತಲುಪಿದರು. ಅಲ್ಲಿ ಹಿಂದೆ ಬೃಹದ್ರಥನು ವೃಷಭರೂಪವನ್ನು ಧರಿಸಿದ ಮಾಷಾದನೆಂಬ ರಾಕ್ಷಸನನ್ನು ಸಂಧಿಸಿದ್ದನು.

ತಂ ಹತ್ವಾ ಮಾಷನಾಳಾಂಶ್ಚ ತಿಸ್ರೋ ಭೇರೀಶ್ಚಕಾರ ಹ ।
ಆನಹ್ಯ ಚರ್ಮಣಾ ತೇನ ಸ್ಥಾಪಯಾಮಾಸ ವೈ ಪುರೇ ।
ಯತ್ರ ತಾಃ ಪ್ರಾಣದನ್ ಭೇಯೋ೯ ದಿವ್ಯಪುಷ್ಪಾಭಿಪೂಜಿತಾಃ ॥೨೦॥

ಅವನನ್ನು ಸಂಹರಿಸಿ ಅವನ ಕಂಠ ಮತ್ತು ಶೃಂಗಗಳ ನಾಳಗಳನ್ನು ಚರ್ಮದಿಂದ ಚನ್ನಾಗಿ ಕಟ್ಟಿ ಮೂರು ಭೇರಿಗಳನ್ನು ಮಾಡಿ ಆ ಪಟ್ಟಣದಲ್ಲಿ ಸ್ಥಾಪಿಸಿದ್ದನು. ದಿವ್ಯಪುಷ್ಪಗಳಿಂದ ಪೂಜಿತವಾದ ಆ ಭೇರಿಗಳು ದೊಡ್ಡದಾದ ಶಬ್ದವನ್ನು ಮಾಡುತ್ತಿದ್ದವು. (ಕೃಷ್ಣ ಭೀಮಾರ್ಜುನರು ಆ ಭೇರಿಗಳನ್ನು ಒಡೆದರು.)

ಮಾಗಧಾನಾಂ ಸುರುಚಿರಂ ಚೈತ್ಯಂ ಕಾಂತಂ ಮಹಾದ್ರುಮಮ್ ।
ಶಿರಸೀವ ಜಿಘಾಂಸಂತೋ ಜರಾಸಂಧಂ ಜಿಘಾಂಸವಃ ॥೨೧॥

ಮಗಧವಂಶದವರು ಬಹುಕಾಲದಿಂದ ಪೂಜಿಸಿಕೊಂಡು ಬಂದಿದ್ದ, ಒಂದು ಮನೋಹರವಾದ ಮಹಾದ್ರುಮವನ್ನು ಜರಾಸಂಧನನ್ನು ಸಂಹರಿಸುವ ಇಚ್ಛೆಯುಳ್ಳ ಅವರು ಅವನ ತಲೆಯ ಮೇಲೆ ಹೊಡೆದಂತೆ (ತಮ್ಮ ಬಾಹುಗಳಿಂದ) ಆ ವೃಕ್ಷಗಳನ್ನು ಕೆಡವಿದರು.

ಗಿರಿಂ ಸುವಿಪುಲಂ ಶೃಂಗಂ ಸುಮಹಾಂತಂ ಪುರಾತನಮ್ ।
ಅರ್ಚಿತಂ ಮಾಲ್ಯದಾಮೈಶ್ಚ ಸತತಂ ಸುಪ್ರತಿಷ್ಠಿತಮ್ ॥೨೨॥

ವಿಪುಲೈರ್ಬಾಹುಭಿರ್ವೀರಾಸ್ತೇऽಭಿಹತ್ಯಾಭ್ಯಪಾತಯನ್ ।
ತತಸ್ತೇ ಮಾಗಧಂ ದ್ರಷ್ಟುಂ ಹೃಷ್ಟಾಃ ಪ್ರವಿವಿಶುಸ್ತದಾ ॥೨೩॥

ಅವರು ಪುರಾತನವಾದ ವಿಪುಲಶೃಂಗವುಳ್ಳ ಸತತವಾಗಿ ಮಾಲ್ಯದಾಮಗಳಿಂದ ಪೂಜಿಸಲ್ಪಡುವ ಸುಪ್ರತಿಷ್ಠವಾದ ಪರ್ವತವನ್ನು ತಮ್ಮ ಭುಜಬಲದಿಂದ ಹೊಡೆದು

ಕೆಡವಿದರು. ಅನಂತರ ಆ ವೀರರು ಸಂತೋಷಗೊಂಡವರಾಗಿ ಜರಾಸಂಧನನ್ನು ನೋಡಲು ಪ್ರವೇಶಿಸಿದರು.

ದೃಷ್ಟ್ವಾ ತು ದುರ್ನಿಮಿತ್ತಂ ತಂ ಬ್ರಾಹ್ಮಣಾ ವೇದಪಾರಗಾಃ ।
ಏತಸ್ಮಿನ್ನೇವ ಕಾಲೇ ತು ಜರಾಸಂಧಂ ಸಮರ್ಚಯನ್ ।
ಪರ್ಯಗ್ನಿ ಕುರ್ವನ್ ನೃಪತಿಂ ದ್ವಿರದಸ್ಥಂ ಪುರೋಹಿತಾಃ ॥೨೪॥

ಗಿರಿಪಾತ ಮತ್ತು ವೃಕ್ಷಪಾತ ಮೊದಲಾದ ಅಪಶಕುನಗಳನ್ನು ನೋಡಿದ ವೇದ ಪಾರಂಗತರಾದ ಬ್ರಾಹ್ಮಣರು ಮತ್ತು ಪುರೋಹಿತರು ಜರಾಸಂಧನಿಗೆ ಮಂಗಳಾರತಿಗಳನ್ನು ಮಾಡಿ ಆನೆಯಮೇಲೆ ಅವನನ್ನು ಕೂಡಿಸಿ ಸತ್ಕರಿಸಿ ಶಾಂತಿಯನ್ನು ಮಾಡಿದರು.

ಸ್ನಾತಕವ್ರತಿನಸ್ತೇ ತು ಬಾಹುಶಸ್ತ್ರಾ ನಿರಾಯುಧಾಃ ।
ಯುಯುತ್ಸವಃ ಪ್ರವಿವಿಶುರ್ಜರಾಸಂಧೇನ ಭಾರತ ॥೨೫॥

ಭಾರತನೇ! ಸ್ನಾತಕವ್ರತವನ್ನು ಧರಿಸಿದ ಅವರು ನಿರಾಯುಧರಾಗಿ ತಮ್ಮ ಬಾಹುಗಳನ್ನೇ ಶಸ್ತ್ರಗಳಾನ್ನಾಗಿ ಹೊಂದಿ ಜರಾಸಂಧನ ಜೊತೆಯಲ್ಲಿ ಯುದ್ಧಮಾಡುವ ಉದ್ದೇಶದಿಂದ ಅವನ ನಿವಾಸವನ್ನು ಪ್ರವೇಶಿಸಿದರು.

ಭಕ್ಷ್ಯಮಾಲ್ಯಾಪಣಾನಾಂ ಚ ದದೃಶುಃ ಶ್ರಿಯಮುತ್ತಮಾಮ್ ।
ಸ್ಫೀತಾಂ ಸರ್ವಗುಣೋಪೇತಾಂ ಸರ್ವಕಾಮಸಮೃದ್ಧಿನೀಮ್ ॥೨೬॥

ಅಲ್ಲಗೆ ಹೋಗುತ್ತಾ ದಾರಿಯಲ್ಲಿ ಸರ್ವಗುಣಯುಕ್ತವಾದ ಶುದ್ಧವಾದ ಭಕ್ಷ್ಯಗಳಿಂದಲೂ ಮಾಲೆಗಳಿಂದಲೂ ಕೂಡಿದ ಅಂಗಡಿಗಳ ಸಾಲಿನಿಂದ ಸೂಚಿಸಲ್ಪಟ್ಟ ಸರ್ವವಿಧವಾದ ಸಂಪತ್ತನ್ನು ನೋಡುತ್ತಾ ಮುಂದೆ ನಡೆದರು.

ತಾಂ ತು ದೃಷ್ಟ್ವಾ ಸಮೃದ್ಧಿಂ ತೇ ವೀಥ್ಯಾಂ ತಸ್ಯಾಂ ನರೋತ್ತಮಾಃ ।
ರಾಜಮಾರ್ಗೇಣ ಗಚ್ಛಂತಃ ಕೃಷ್ಣಭೀಮಧನಂಜಯಾಃ ॥೨೭॥

ಗೃಹ್ಯ ಮಾಲ್ಯಾಪಣಾನ್ಮಾಲ್ಯಂ ಬಲಾದ್ ಬಲವತಾಂ ವರಾಃ ।
ಕರ್ಪೂರಶೃಂಗಂ ಕೋಷ್ಠಂ ಚ ಸಫಲಂ ಚಾಂತರಾಪಣೇ ॥೨೮॥

ವೈಶ್ಯಾದ್ ಬಲಾದ್ ಗೃಹೀತ್ವಾ ತೇ ವಿಹೃತ್ಯ ಚ ಮಹಾಬಲಾಃ ।
ವಿರಾಗವಸನಾಃ ಸರ್ವೇ ಸ್ರಗ್ವಿಣೋ ಮೃಷ್ಟಕುಂಡಲಾಃ ॥೨೯॥

ನಿವೇಶನಮಥಾಜಗ್ಮುರ್ಜರಾಸಂಧಸ್ಯ ಧೀಮತಃ ।
ಗೋವಾಟಮಿವ ವೀಕ್ಷಂತಃ ಸಿಂಹಾ ಹೈಮವತಾ ಯಥಾ ॥೩೦॥

ಬೀದಿಗಳಲ್ಲಿ ಆ ಸಮೃದ್ಧಿಯನ್ನು ನೋಡಿದ ಪುರುಷಶ್ರೇಷ್ಠರಾದ ಕೃಷ್ಣಭೀಮಾರ್ಜುನರು ರಾಜಮಾರ್ಗದಲ್ಲಿ ನಡೆಯುತ್ತಾ ಪುಷ್ಪಗಳ ಅಂಗಡಿಗಳಿಂದ ಬಲಿಷ್ಠರಲ್ಲಿ ಶ್ರೇಷ್ಠರಾದ ಅವರು ಬಲತ್ಕಾರದಿಂದ ಪುಷ್ಪಗಳನ್ನು ತೆಗೆದುಕೊಂಡು ಮತ್ತು ಇನ್ನೊಬ್ಬ ವೈಶ್ಯನ ಅಂಗಡಿಯ ಒಳಭಾಗದಿಂದ ಗೋರೊಚನ ಕೋಷ್ಠ ಮೊದಲಾದ ಸುಗಂಧದ್ರವ್ಯಗಳನ್ನು ಮತ್ತು ಫಲಗಳನ್ನು ಬಲಾತ್ಕಾರದಿಂದ ತೆಗೆದುಕೊಂಡು ವಿಹರಿಸುತ್ತಾ ಶುಭ್ರ ಶ್ವೇತ ವಸನವನ್ನು ಧರಿಸಿದವಾರಾಗಿ, ಪುಷ್ಪಮಾಲೆಗಳನ್ನೂ ಕರ್ಣಕುಂಡಲಗಳನ್ನೂ ಧರಿಸಿದವರಾಗಿ ಅವರೆಲ್ಲರೂ ಧೀಮಂತನಾದ ಜರಾಸಂಧನ ನಿವೇಶನವನ್ನು ಹಿಮಾಲಯದ ಸಿಂಹಗಳು ಗೋಶಾಲೆಯನ್ನು ನೋಡುವಂತೆ ಸುತ್ತಲೂ ನೋಡುತ್ತಾ ಪ್ರವೇಶಿಸಿದರು.

ಶೈಲಸ್ತಂಭನಿಭಾಸ್ತೇಷಾಂ ಚಂದನಾಗುರುರೂಷಿತಾಃ ।
ಅಶೋಭಂತ ಮಹಾರಾಜ ಬಾಹವಃ ಪರಿಘೋಪಮಾಃ ॥೩೧॥

ಮಹಾರಾಜನೇ! ಅವರ ಬಾಹುಗಳು ಪರ್ವತಸ್ತಂಭದ ಕಾಂತಿಯನ್ನು ಹೊಂದಿದ್ದ ಚಂದನ, ಅಗರು ಮೊದಲಾದ ಸುಗಂಧ ದ್ರವ್ಯಗಳಿಂದ ಲೇಪಿಸಲ್ಪಟ್ಟ ಕಬ್ಬಿಣದ ಒನಕೆಗಳಂತೆ ಶೋಭಿಸುತ್ತಿದ್ದವು.

ತಾನ್ ದೃಷ್ಟ್ವಾ ದ್ವಿರದಪ್ರಖ್ಯಾನ್ ಸಾಲಸ್ಕಂಧಾನಿವೋದ್ಗತಾನ್ ।
ವ್ಯೂಢೋರಸ್ಕಾನ್ ಮಾಗಧಾನಾಂ ವಿಸ್ಮಯಃ ಸಮಪದ್ಯತ ॥೩೨॥

ಸಾಲಸ್ಕಂಧದಂತೆ ಎತ್ತರವಾಗಿದ್ದವ ವಿಸ್ತಾರವಾದ ವಕ್ಷಸ್ಥಲವನ್ನು ಹೊಂದಿದ್ದ ಗಜಕಾಂತಿಯನ್ನು ಹೊಂದಿದ್ದ ಅವರನ್ನು ನೋಡಿ ಮಗಧದೇಶದ ಜನರಿಗೆ ವಿಸ್ಮಯವು ಉಂಟಾಯಿತು.

ಅದ್ವಾರೇಣಾಭ್ಯವಸ್ಕಂದ್ಯ ವಿವಿಶುರ್ಮಾಗಧಾಲಯಮ್ ।
ತೇ ತ್ವತೀತ್ಯ ಜನಾಕೀರ್ಣಾಃ ಕಕ್ಷ್ಯಾಸ್ತಿಸ್ರೋ ನರರ್ಷಭಾಃ ॥೩೩॥

ಅವರು ಅದ್ವಾರದಿಂದ ಜರಾಸಂಧನ ಅರಮನೆಯೊಳಗೆ ಜಾರಿ ಬಂದು ಜನ ನಿಬಿಡವಾದ ಮೂರು ಪ್ರಾಕಾರಗಳನ್ನು ದಾಟಿ ಜರಾಸಂಧನ ನಿವಾಸಸ್ಥಾನವನ್ನು ಪ್ರವೇಶಿಸಿದರು.

ಅದ್ವಾರೇಣೈವ ರಾಜಾನಮುಪತಸ್ಥುರ್ಮಹಾಬಲಾಃ ।
ಭೋಶಬ್ದೇನೈವ ರಾಜಾನಮೂಚುಸ್ತೇ ತು ಮಹಾರಥಾಃ ॥೩೪॥

ಮಹಾಬಲಿಷ್ಠರೂ ಮಹಾರಥರೂ ಆದ ಅವರು ಅಲ್ಲಿಯೂ ಸಹ ಅದ್ವಾರದಿಂದಲೇ ರಾಜನನ್ನು ಸಮೀಪಿಸಿ ಭೋ ಶಬ್ದದಿಂದ ರಾಜನನ್ನು ಸಂಬೋಧಿಸಿದರು.

ತಾನ್ ಪಾದ್ಯಮಧುಪರ್ಕಾರ್ಹಾನ್ ದೃಷ್ಟ್ವಾರ್ಹಾನ್ ಗೃಹಮಾಗತಾನ್ ।
ಪ್ರತ್ಯುತ್ಥಾಯ ಜರಾಸಂಧ ಉಪತಸ್ಥೇ ಯಥಾವಿಧಿ ॥೩೫॥

ಪಾದ್ಯ ಮಧುಪರ್ಕಗಳಿಗೆ ಯೋಗ್ಯರಾದ ಪೂಜಾರ್ಹರಾದ ಮನೆಗೆ ಬಂದ ಆ ಅತಿಥಿಗಳನ್ನು ನೋಡಿ ಜರಾಸಂಧನು ಮೇಲೆದ್ದು ವಿಧಿಪೂರ್ವಕವಾಗಿ ಅವರನ್ನು ಸಮೀಪಿಸಿದನು.

ಉವಾಚ ಚೈತಾನ್ ರಾಜಾऽಸೌ ಸ್ವಾಗತಂ ವೋऽಸ್ತಿ ತ್ವಿ ಪ್ರಭುಃ ।
ತಸ್ಯ ಹ್ಯೇತದ್ ವ್ರತಂ ರಾಜನ್ ಬಭೂವ ಕಿಲ ವಿಶ್ರುತಮ್ ॥೩೬॥

ಸ್ನಾತಕಾನ್ ಬ್ರಾಹ್ಮಣಾನ್ ರಾಜಾ ಶ್ರುತ್ವಾ ಸ ಸಮಿತಿಂಜಯಃ ।
ಅಪ್ಯರ್ಧರಾತ್ರೇ ನೃಪತಿಃ ಪ್ರತ್ಯುದ್ಗಚ್ಛತಿ ಭಾರತ ॥೩೭॥

ರಾಜನೂ ಪ್ರಭುವೂ ಆದ ಜರಾಸಂಧನು ಅವರನ್ನು ಕುರಿತು ನಿಮಗೆ ಸ್ವಾಗತ ಎಂದು ಹೇಳಿದನು. ರಾಜನೇ! ಅವನಿಗೆ ಪ್ರಖ್ಯಾತವಾದ ಈ ವ್ರತವಿದ್ದಿತು. ಭಾರತನೇ! ಯುದ್ಧದಲ್ಲಿ ಜಯಶೀಲನಾದ ಅವನು ಅರ್ಧರಾತ್ರಿಯಲ್ಲಿ ಸ್ನಾತಕಬ್ರಾಹ್ಮಣರು ತನ್ನ ಮನೆಗೆ ಬಂದರೂ ಆ ವಾರ್ತೆಯನ್ನು ಕೇಳಿ ಎದ್ದುಹೋಗಿ ಅವರನ್ನು ಸ್ವೀಕರಿಸುತ್ತಿದ್ದನು.

ತಾಂಸ್ತ ವಪೂರ್ವೇಣ ವೇಷೇಣ ದೃಷ್ಟಾ ನೃಪತಿಸತ್ತಮಃ ।
ಉಪತಸ್ಥೇ ಜರಾಸಂಧೋ ವಿಸ್ಮಿತಶ್ಚಾಭವತ್ ತದಾ ॥೩೮॥

ನೃಪಶ್ರೇಷ್ಠನಾದ ಜರಾಸಂಧನು ವಿಚಿತ್ರವೇಷದಲ್ಲಿರುವ ಆ ಮೂವರನ್ನು ನೋಡಿ ಆಶ್ಚರ್ಯಚಕಿತನಾಗಿ ಅವರನ್ನು ಸಮೀಪಿಸಿದನು.

ತೇ ತು ದೃಷ್ಟ್ವೈವ ರಾಜಾನಂ ಜರಾಸಂಧಂ ನರರ್ಷಭಾಃ ।
ಇದಮೂಚುರಮಿತ್ರಘ್ನಾಃ ಸರ್ವೇ ಭರತಸತ್ತಮ ॥೩೯॥

ಸ್ವಸ್ತಿಸ್ತು ಕುಶಲಂ ರಾಜನ್ನಿತ್ಯುಕ್ತ್ವಾ ತೇ ವ್ಯವಸ್ಥಿತಾಃ ।
ತಂ ನೃಪಂ ಪುರುಷವ್ಯಾಘ್ರಾ ವಿಪ್ರೈಕ್ಷಂತ ಪರಸ್ಪರಮ್ ॥೪೦॥

ಭರತ ಶ್ರೇಷ್ಠನೇ! ಶತ್ರುಸಂಹಾರಕರಾದ ಆ ನರಶ್ರೇಷ್ಠರಾದ ಅವರೆಲ್ಲರೂ ಜರಾಸಂಧನನ್ನು ನೋಡಿದ ತಕ್ಷಣವೇ ಹೀಗೆ ಹೇಳಿದರು. ರಾಜನೇ! ನಿನಗೆ ಮಂಗಳವಾಗಲಿ ಕುಶಲವಷ್ಟೇ ಎಂದು ಹೇಳಿ ನಿಂತರು. ರಾಜನೂ ಮತ್ತು ಆ ಪುರುಷವ್ಯಾಘ್ರರೂ ಒಬ್ಬರನ್ನೊಬ್ಬರು ನೋಡಿದರು.

ತಾನಬ್ರವೀಜ್ಜರಾಸಂಧಃ ತದಾ ಯಾದವಪಾಂಡವಾನ್ ।
ಆಸ್ಯತಾಮಿತಿ ರಾಜೇಂದ್ರೋ ಬ್ರಾಹ್ಮಣಚ್ಛದ್ಮಸಂವೃತಾನ್ ॥೪೧॥

ಆಗ ರಾಜೇಂದ್ರನಾದ ಜರಾಸಂಧನು ಬ್ರಾಹ್ಮಣವೇಷದಿಂದ ಛನ್ನರಾದ ಕೃಷ್ಣಪಾಂಡವರನ್ನು ಕುರಿತು ಆಸನವನ್ನು ಸ್ವೀಕರಿಸಿ ಎಂದು ಹೇಳಿದನು.

ಅಥೋಪವಿವಿಶುಃ ಸರ್ವೇ ತ್ರಯಸ್ತೇ ಪುರುಷರ್ಷಭಾಃ ।
ಸಂಪ್ರದೀಪ್ತಾಸ್ತ್ರಯೋ ಲಕ್ಷ್ಮ್ಯಾ ಮಹಾಧ್ವರ ಇವಾಗ್ನಯಃ ॥೪೨॥

ಅನಂತರ ದೊಡ್ಡಯಾಗದಲ್ಲಿ ತಮ್ಮ ಕಾಂತಿಯಿಂದ ಜ್ವಲಿಸುವ ಮೂರು ಅಗ್ನಿಗಳಂತೆ ಆ ಮೂವರು ಪುರುಷಶ್ರೇಷ್ಠರು ಆಸನಗಳಲ್ಲಿ ಕುಳಿತುಕೊಂಡರು.

ತಾನುವಾಚ ಜರಾಸಂಧಃ ಸತ್ಯಸಂಧೋ ನರಾಧಿಪಃ ।
ವಿಗರ್ಹಮಾಣಃ ಕೌರವ್ಯ ವೇಷಗ್ರಹಣಕಾರಿಣಃ ॥೪೩॥

ಕುರುಕುಲೋತ್ತನ್ನನೇ! ಜರಾಸಂಧರಾಜನು ವೇಷವನ್ನು ಬದಲಾಯಿಸಿರುವ ಅವರನ್ನು ಮೂದಲಿಸುತ್ತಾ ಅವರನ್ನು ಕುರಿತು ಮಾತನಾಡಿದನು.

ನ ಸ್ನಾತಕವ್ರತಾ ವಿಪ್ರಾ ಬಹಿರ್ಮಾಲ್ಯಾನುಲೇಪನಾಃ ।
ಭವಂತೀತಿ ನೃಲೋಕೇಽಸ್ಮಿನ್ ವಿದಿತಂ ಮಮ ಸರ್ವಶಃ ॥೪೪॥

ಸ್ನಾತಕ ವ್ರತವನ್ನು ಧರಿಸಿದ ಬ್ರಾಹ್ಮಣರು ಪುಷ್ಪಮಾಲೆಗಳನ್ನು ಮತ್ತು ಸುಗಂಧದ್ರವ್ಯಗಳನ್ನು ಹೊಂದಿರುವುದಿಲ್ಲವೆಂದು ಮನುಷ್ಯಲೋಕದಲ್ಲಿ ಪ್ರಖ್ಯಾತವಾಗಿದೆ ಎಂದು ನಾನು ತಿಳಿದಿದ್ದೇನೆ.

ತೇ ಯೂಯಂ ಪುಷ್ಪವಂತಶ್ಚ ಭುಜೈರ್ಜ್ಯಾಘಾತಲಕ್ಷಣೈಃ ।
ಬಿಭ್ರತಃ ಕ್ಷಾತ್ರಮೋಜಶ್ಚ ಬ್ರಾಹ್ಮಣ್ಯಂ ಪ್ರತಿಜಾನಥ ॥೪೫॥

ನೀವು ಮಾತ್ರ ಪುಷ್ಪಮಾಲೆಗಳನ್ನು ಧರಿಸಿ ಬಿಲ್ಲಿನ ಹೆದೆಯಿಂದ ಜಡ್ಡುಕಟ್ಟಿದ ಭುಜಗಳಿಂದ ಶೋಭಿತರಾಗಿ ಕ್ಷತ್ರಿಯ ಪರಾಕ್ರಮವನ್ನು ಮೆರೆಸುತ್ತಾ ನಾವು ಬ್ರಾಹ್ಮಣರೆಂದು ಪ್ರತಿಜ್ಞೆಮಾಡುತ್ತಿದ್ದೀರಿ.

ಏವಂ ವಿರಾಗವಸನಾ ಬಾಹುಮಾಲ್ಯಾನುಲೇಪನಾಃ ।
ಕ್ಷತ್ರಿಯಾ ಏವ ಲೋಕೇಽಸ್ಮಿನ್ ವಿದಿತಾ ಮಮ ಸರ್ವಶಃ ।
ಸತ್ಯಂ ವದತ ಕೇ ಯೂಯಂ ಸತ್ಯಂ ರಾಜಸು ಶೋಭತೇ ॥೪೬॥

ಹೀಗೆ ಶ್ವೇತವಸ್ತ್ರವನ್ನು ಧರಿಸಿ ಕರ್ಕಶವಾದ ಬಾಹುಗಳನ್ನು ಹೊಂದಿ ಪುಷ್ಪಮಾಲೆ ಮತ್ತು ಸುಗಂಧ ದ್ರವ್ಯಗಳನ್ನು ಧರಿಸಿದರು ಈ ಲೋಕದಲ್ಲಿ ಕ್ಷತ್ರಿಯರು ಮಾತ್ರ ಎಂದು ನಾನು ಚೆನ್ನಾಗಿ ತಿಳಿದಿದ್ದೇನೆ. ನೀವು ಯಾರು ಎಂದು ಸತ್ಯವಾಗಿ ಹೇಳಿ. ರಾಜರಿಗೆ ಸತ್ಯವಚನವು ಶೋಭಿಸುತ್ತದೆ.

ಚೈತ್ಯಕಂ ಚ ಗಿರೇಃ ಶೃಂಗಂ ಭಿತ್ತ್ವಾ ಕಿಂ ಮಮ ಸದ್ಮನಿ ।
ಅದ್ವಾರೇಣ ಪ್ರವಿಷ್ಟಾಃ ಸ್ಥ ನಿರ್ಭಯಾ ರಾಜಕಿಲ್ಬಿಷಾತ್ ॥೪೭॥

ನನ್ನ ಪೂಜಾವೃಕ್ಷವನ್ನೂ ಗಿರಿಶೃಂಗವನ್ನೂ ಕೆಡವಿ ಆದ್ವಾರದಿಂದ ನನ್ನ ಗೃಹವನ್ನು ಪ್ರವೇಶಿಸಿ ರಾಜನಿಗೆ ಅಪಚಾರವನ್ನು ಮಾಡಿದರೂ ನೀವು ನಿರ್ಭಯರಾಗಿದ್ದೀರಿ.

ಕರ್ಮ ಚೈತದ್ ದ್ವಿಜಲಿಂಗಸ್ಯ ಕಿಂ ವಾಽನ್ಯತ್ ಪ್ರಸಮೀಕ್ಷಿತಮ್ ।
ವರಧ್ವಂ ವಾಚಿ ವೀರ್ಯಂ ಹಿ ಬ್ರಾಹ್ಮಣಸ್ಯ ವಿಶೇಷತಃ ॥೪೮॥

ಕ್ಷತ್ರಿಯ ಮತ್ತು ಬ್ರಾಹ್ಮಣ ಚಿಹ್ನೆಗಳನ್ನು ಧರಿಸಿರುವ ನೀವು ಅಂಗಡಿಗಳಿಂದ ಮಾಲೆ ಮತ್ತು ಸುಗಂಧಗಳನ್ನು ತೆಗೆದುಕೊಂಡಿದ್ದೀರಿ. ಇನ್ನೇನು ಮಾಡಲು ನಿಮಗೆ ಅಭಿಪ್ರಾಯವಿದೆ? ಆದರೂ ಬ್ರಾಹ್ಮಣರ ಚಲನವಲನಗಳನ್ನು ವಿಶೇಷವಾಗಿ ವಿಚಾರಮಾಡಬಾರದು. ನಿಮಗೆ ಬೇಕಾದ ವರವನ್ನು ಕೇಳಿ.

ಏವಂ ಮಾಂ ಸಮುಪಸ್ಥಾಯ ಕಸ್ಮಾದ್ವಾ ವಿಧಿನಾಽರ್ಹಣಾಮ್ ।
ಪ್ರಣೀತಾಂ ನೋ ನ ಗೃಹ್ಣೀತ ಕಾರ್ಯಂ ಕಿಂ ಚಾಸ್ಮದಾಗಮೇ ॥೪೯॥

ಈ ರೀತಿಯಲ್ಲಿ ನನ್ನನ್ನು ಸಮೀಪಿಸಿ ನಾನು ವಿಧಿಪೂರ್ವಕವಾಗಿ ಮಾಡಿದ ಸತ್ಕಾರ್ಯವನ್ನು ನೀವು ಏಕೆ ಸ್ವೀಕರಿಸುತ್ತಿಲ್ಲ? ನೀವು ನನ್ನ ಬಳಿಗೆ ಬರುವ ಉದ್ದೇಶನೇನು?

ಏವಮುಕ್ತಸ್ತತಃ ಕೃಷ್ಣಃ ಪ್ರತ್ಯುವಾಚ ಮಹಾಯಶಾಃ ।
ಸ್ನಿಗ್ಧಗಂಭೀರಯಾ ವಾಚಾ ವಾಕ್ಯಂ ವಾಕ್ಯವಿಶಾರದಃ ॥೫೦॥

ಜರಾಸಂಧನು ಹೀಗೆ ಮಾತನಾಡಿದಾಗ ಮಹಾಕೀರ್ತಿವಂತನೂ ವಾಕ್ಯವಿಶಾರದನೂ ಆದ ಕೃಷ್ಣನು ತನ್ನ ಮೇಘಗಂಭೀರವಾದ ವಾಣಿಯಿಂದ ಮಾತನಾಡಿದನು.

ಸ್ನಾತಕವ್ರತಿನಃ ಸಂತಿ ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ।
ವಿಶೇಷನಿಯಮಾಶ್ಚೈಷಾಮವಿಶೇಷಾಶ್ಚ ಸಂತ್ಯುತ ॥೫೧॥

ಬ್ರಾಹ್ಮಣರೂ ಕ್ಷತ್ರಿಯರೂ ಮತ್ತು ವೈಶ್ಯರೂ ಸ್ನಾತಕವ್ರತವನ್ನು ಧರಿಸುತ್ತಾರೆ. ಅವರುಗಳಿಗೆ ಕೆಲವು ಸಾಮಾನ್ಯನಿಯಮಗಳೂ ಕೆಲವು ವಿಶೇಷ ನಿಯಮಗಳೂ ಇರುತ್ತವೆ.

ವಿಶೇಷವಾಂಶ್ಚ ಸತತಂ ಕ್ಷತ್ರಿಯಃ ಶ್ರಿಯಮಿಚ್ಛತಿ ।
ಪುಷ್ಣವತ್ಸು ಧ್ರುವಾ ಲಕ್ಷ್ಮೀಃ ಪುಷ್ಣವಂತಸ್ತತೋ ವಯಮ್ ॥೫೨॥

ಕುರುಕುಲೋತ್ತನ್ನನೇ! ಜರಾಸಂಧರಾಜನು ವೇಷವನ್ನು ಬದಲಾಯಿಸಿರುವ ಅವರನ್ನು ಮೂದಲಿಸುತ್ತಾ ಅವರನ್ನು ಕುರಿತು ಮಾತನಾಡಿದನು.

ನ ಸ್ನಾತಕವ್ರತಾ ವಿಪ್ರಾ ಬಹಿರ್ಮಾಲ್ಯಾನುಲೇಪನಾಃ ।
ಭವಂತೀತಿ ನೃಲೋಕೇಽಸ್ಮಿನ್ ವಿದಿತಂ ಮಮ ಸರ್ವಶಃ ॥೪೪॥

ಸ್ನಾತಕ ವ್ರತವನ್ನು ಧರಿಸಿದ ಬ್ರಾಹ್ಮಣರು ಪುಷ್ಪಮಾಲೆಗಳನ್ನು ಮತ್ತು ಸುಗಂಧದ್ರವ್ಯಗಳನ್ನು ಹೊಂದಿರುವುದಿಲ್ಲವೆಂದು ಮನುಷ್ಯಲೋಕದಲ್ಲಿ ಪ್ರಖ್ಯಾತವಾಗಿದೆ ಎಂದು ನಾನು ತಿಳಿದಿದ್ದೇನೆ.

ತೇ ಯೂಯಂ ಪುಷ್ಪವಂತಶ್ಚ ಭುಜೈರ್ಜ್ಯಾಘಾತಲಕ್ಷಣೈಃ ।
ಬಿಭ್ರತಃ ಕ್ಷಾತ್ರಮೋಜಶ್ಚ ಬ್ರಾಹ್ಮಣ್ಯಂ ಪ್ರತಿಜಾನಥ ॥೪೫॥

ನೀವು ಮಾತ್ರ ಪುಷ್ಪಮಾಲೆಗಳನ್ನು ಧರಿಸಿ ಬಿಲ್ಲಿನ ಹೆದೆಯಿಂದ ಜಡ್ಡುಕಟ್ಟಿದ ಭುಜಗಳಿಂದ ಶೋಭಿತರಾಗಿ ಕ್ಷತ್ರಿಯ ಪರಾಕ್ರಮವನ್ನು ಮೆರೆಸುತ್ತಾ ನಾವು ಬ್ರಾಹ್ಮಣರೆಂದು ಪ್ರತಿಜ್ಞೆಮಾಡುತ್ತಿದ್ದೀರಿ.

ಏವಂ ವಿರಾಗವಸನಾ ಬಾಹುಮಾಲ್ಯಾನುಲೇಪನಾಃ ।
ಕ್ಷತ್ರಿಯಾ ಏವ ಲೋಕೇಽಸ್ಮಿನ್ ವಿದಿತಾ ಮಮ ಸರ್ವಶಃ ।
ಸತ್ಯಂ ವದತ ಕೇ ಯೂಯಂ ಸತ್ಯಂ ರಾಜಸು ಶೋಭತೇ ॥೪೬॥

ಹೀಗೆ ಶ್ವೇತವಸ್ತ್ರವನ್ನು ಧರಿಸಿ ಕರ್ಕಶವಾದ ಬಾಹುಗಳನ್ನು ಹೊಂದಿ ಪುಷ್ಪಮಾಲೆ ಮತ್ತು ಸುಗಂಧ ದ್ರವ್ಯಗಳನ್ನು ಧರಿಸಿದರು ಈ ಲೋಕದಲ್ಲಿ ಕ್ಷತ್ರಿಯರು ಮಾತ್ರ ಎಂದು ನಾನು ಚೆನ್ನಾಗಿ ತಿಳಿದಿದ್ದೇನೆ. ನೀವು ಯಾರು ಎಂದು ಸತ್ಯವಾಗಿ ಹೇಳಿ. ರಾಜರಿಗೆ ಸತ್ಯವಚನವು ಶೋಭಿಸುತ್ತದೆ.

ಚೈತ್ಯಕಂ ಚ ಗಿರೇಃ ಶೃಂಗಂ ಭಿತ್ತ್ವಾ ಕಿಂ ಮಮ ಸದ್ಮನಿ ।
ಅದ್ವಾರೇಣ ಪ್ರವಿಷ್ಟಾಃ ಸ್ಥ ನಿರ್ಭರ್ಯಾ ರಾಜಕಿಲ್ಬಿಷಾತ್ ॥೪೭॥

ನನ್ನ ಪೂಜಾವೃಕ್ಷವನ್ನೂ ಗಿರಿಶೃಂಗವನ್ನೂ ಕೆಡವಿ ಅದ್ವಾರದಿಂದ ನನ್ನ ಗೃಹವನ್ನು ಪ್ರವೇಶಿಸಿ ರಾಜನಿಗೆ ಅಪಚಾರವನ್ನು ಮಾಡಿದರೂ ನೀವು ನಿರ್ಭಯರಾಗಿದ್ದೀರಿ.

ಕರ್ಮ ಚೈತದ್ ದ್ವಿಜಲಿಂಗಸ್ಯ ಕಿಂ ವಾऽನ್ಯತ್ ಪ್ರಸಮೀಕ್ಷಿತಮ್ ।
ವರಧ್ವಂ ವಾಚಿ ವೀರ್ಯಂ ಹಿ ಬ್ರಾಹ್ಮಣಸ್ಯ ವಿಶೇಷತಃ ॥೪೮॥

ಕ್ಷತ್ರಿಯ ಮತ್ತು ಬ್ರಾಹ್ಮಣ ಚಿಹ್ನೆಗಳನ್ನು ಧರಿಸಿರುವ ನೀವು ಅಂಗಡಿಗಳಿಂದ ಮಾಲೆ ಮತ್ತು ಸುಗಂಧಗಳನ್ನು ತೆಗೆದುಕೊಂಡಿದ್ದೀರಿ. ಇನ್ನೇನು ಮಾಡಲು ನಿಮಗೆ ಅಭಿಪ್ರಾಯವಿದೆ? ಆದರೂ ಬ್ರಾಹ್ಮಣರ ಚಲನವಲನಗಳನ್ನು ವಿಶೇಷವಾಗಿ ವಿಚಾರಮಾಡಬಾರದು. ನಿಮಗೆ ಬೇಕಾದ ವರವನ್ನು ಕೇಳಿ.

ಏವಂ ಮಾಂ ಸಮುಪಸ್ಥಾಯ ಕಸ್ಮಾದ್ವಾ ವಿಧಿನಾऽರ್ಹಣಾಮ್ ।
ಪ್ರಣೀತಾಂ ನೋ ನ ಗೃಹ್ಣೀತ ಕಾರ್ಯಂ ಕಿಂ ಚಾಸ್ಮದಾಗಮೇ ॥೪೯॥

ಈ ರೀತಿಯಲ್ಲಿ ನನ್ನನ್ನು ಸಮೀಪಿಸಿ ನಾನು ವಿಧಿಪೂರ್ವಕವಾಗಿ ಮಾಡಿದ ಸತ್ಕಾರ್ಯವನ್ನು ನೀವು ಏಕೆ ಸ್ವೀಕರಿಸುತ್ತಿಲ್ಲ? ನೀವು ನನ್ನ ಬಳಿಗೆ ಬರುವ ಉದ್ದೇಶನೇನು?

ಏವಮುಕ್ತಸ್ತತಃ ಕೃಷ್ಣಃ ಪ್ರತ್ಯುವಾಚ ಮಹಾಯಶಾಃ ।
ಸ್ನಿಗ್ಧಗಂಭೀರಯಾ ವಾಚಾ ವಾಕ್ಯಂ ವಾಕ್ಯವಿಶಾರದಃ ॥೫೦॥

ಜರಾಸಂಧನು ಹೀಗೆ ಮಾತನಾಡಿದಾಗ ಮಹಾಕೀರ್ತಿವಂತನೂ ವಾಕ್ಯವಿಶಾರದನೂ ಆದ ಕೃಷ್ಣನು ತನ್ನ ಮೇಘಗಂಭೀರವಾದ ವಾಣಿಯಿಂದ ಮಾತನಾಡಿದನು.

ಸ್ನಾತಕವ್ರತಿನಃ ಸಂತಿ ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ।
ವಿಶೇಷನಿಯಮಾಶ್ಚೈಷಾಮವಿಶೇಷಾಶ್ಚ ಸಂತ್ಯುತ ॥೫೧॥

ಬ್ರಾಹ್ಮಣರೂ ಕ್ಷತ್ರಿಯರೂ ಮತ್ತು ವೈಶ್ಯರೂ ಸ್ನಾತಕವ್ರತವನ್ನು ಧರಿಸುತ್ತಾರೆ. ಅವರುಗಳಿಗೆ ಕೆಲವು ಸಾಮಾನ್ಯನಿಯಮಗಳೂ ಕೆಲವು ವಿಶೇಷ ನಿಯಮಗಳೂ ಇರುತ್ತವೆ.

ವಿಶೇಷವಾಂಶ್ಚ ಸತತಂ ಕ್ಷತ್ರಿಯಃ ಶ್ರಿಯಮಿಚ್ಛತಿ ।
ಪುಷ್ಪವತ್ಸು ಧ್ರುವಾ ಲಕ್ಷ್ಮೀಃ ಪುಷ್ಪವಂತಸ್ತತೋ ವಯಮ್ ॥೫೨॥

ಕ್ಷತ್ರಿಯನಿಗೆ ವಿಶೇಷವೆಂದರೆ ಅವನು ಯಾವಾಗಲೂ ಸಂಪತ್ತನ್ನು ಬಯಸುವುದು. ಪುಷ್ಪವನ್ನು ಧರಿಸಿದ್ದವರಲ್ಲಿ ಸಂಪತ್ತು ಇರುತ್ತದೆ. ಆದ್ದರಿಂದ ನಾವು ಪುಷ್ಪವನ್ನು ಧರಿಸಿದ್ದೇವೆ.

ಕ್ಷತ್ರಿಯೋ ಬಾಹುವೀರ್ಯಸ್ತು ನ ತಥಾ ವಾಕ್ಯವೀರ್ಯವಾನ್ ।
ಅಪ್ರಗಲ್ಭಂ ವಚಸ್ತಸ್ಯ ತಸ್ಮಾದ್ ಬಾರ್ಹದ್ರಥೇರಿತಮ್ ॥೫೩॥

ಕ್ಷತ್ರಿಯನ ಪರಾಕ್ರಮ ಬಾಹುವಿನಲ್ಲಿ ಇರುವಂತೆ ಅವನ ವಾಕ್ಯದಲ್ಲಿ ಇಲ್ಲ. ಆದ್ದರಿಂದ ಜರಾಸಂಧನೇ! ನೀನು ಆಡಿದ ಮಾತುಗಳೆಲ್ಲವೂ ಅಪ್ರಗಲ್ಭವಾದವು.

ಸ್ವವೀರ್ಯಂ ಕ್ಷತ್ರಿಯಾಣಾಂ ಚ ಬಾಹ್ವೋರ್ಧಾತಾ ನ್ಯವೇಶಯತ್ ।
ತನ್ನೋ ದ್ರಕ್ಷ್ಯಸಿ ಚೇದ್ ರಾಜನ್ ದ್ರಷ್ಟಾಸ್ಯದ್ಯ ನ ಸಂಶಯಃ ॥೫೪॥

ಸೃಷ್ಟಿಕರ್ತನು ಕ್ಷತ್ರಿಯನನ್ನು ಸೃಷ್ಟಿಮಾಡಿ ತನ್ನ ತೇಜಸ್ಸನ್ನು ಅವನ ಬಾಹುಗಳಲ್ಲಿ ಇಟ್ಟನು. ರಾಜನೇ! ನೀನು ಅದನ್ನು ನೋಡಲು ಬಯಸುವಿಯಾದರೆ ನಿಸ್ಸಂಶಯವಾಗಿ ಅದನ್ನು ಈ ದಿನ ನೋಡುವಿ.

ಅದ್ವಾರೇಣ ರಿಪೋರ್ಗೇಹಂ ದ್ವಾರೇಣ ಸುಹೃದೋ ಗೃಹಮ್ ।
ಪ್ರವಿಶಂತಿ ಸದಾ ಸಂತೋ ದ್ವಾರಂ ತೇ ವರ್ಜಿತಂ ತತಃ ॥೫೫॥

ಸಜ್ಜನರಾದವರು ಪ್ರೀತಿಪಾತ್ರರ ಗೃಹವನ್ನು ದ್ವಾರದಿಂದಲೂ ಶತ್ರುವಿನ ಗೃಹವನ್ನು ಅದ್ವಾರದಿಂದಲೂ ಪ್ರವೇಶಿಸುತ್ತಾರೆ. ಆದ್ದರಿಂದ ನಾವು ನಿನ್ನ ದ್ವಾರವನ್ನು ಪರಿತ್ಯಜಿಸಿದ್ದೇವೆ.

ಕಾರ್ಯವಂತೋ ಗೃಹಾನೇತ್ಯ ಶತ್ರುತೋ ನಾರ್ಹಣಾಂ ವಯಮ್।
ಪ್ರತಿಗೃಹ್ಣೀಮ ತದ್ ವಿದ್ಧಿ ಏತನ್ನಃ ಶಾಶ್ವತಂ ವ್ರತಮ್ ॥೫೬॥

ಒಂದು ಕಾರ್ಯದ ಉದ್ದೇಶದಿಂದ ಶತ್ರುಗೃಹಕ್ಕೆ ಬಂದ ನಾವು ಶತ್ರುವಿನ ಸತ್ಕಾರವನ್ನು ಸ್ವೀಕರಿಸಬಾರದು. ಆದ್ದರಿಂದ ನಿನ್ನ ಸತ್ಕಾರವನ್ನು ನಾವು ಸ್ವೀಕರಿಸುತ್ತಿಲ್ಲ. ಇದನ್ನು ನಮ್ಮ ಶಾಶ್ವತವಾದ ವ್ರತವೆಂದು ತಿಳಿ.

ಜರಾಸಂಧಃ

ನ ಸ್ಮರೇಯಂ ಕದಾ ವೈರಂ ಕೃತಂ ಯುಷ್ಮಾಭಿರಿತ್ಯುತ ।
ಚಿಂತಯಂಶ್ಚ ನ ಪಶ್ಯಾಮಿ ಭವತಾಂ ಪ್ರತಿ ವೈಕೃತಮ್ ॥೫೭॥

ನಾನು ನಿಮ್ಮ ಜೊತೆಯಲ್ಲಿ ಯಾವಾಗ ವೈರವನ್ನು ಸಾಧಿಸಿದ್ದೇನೆ ಎಂದು ನನ್ನ ಸ್ಮರಣೆಗೆ ಬರುತ್ತಿಲ್ಲ. ಎಷ್ಟು ಆಲೋಚಿಸಿದರೂ ನಾನು ನಿಮಗೆ ಯಾವ ಅಪಕಾರವನ್ನು ಮಾಡಿರುವುದೂ ಕಂಡುಬರುವುದಿಲ್ಲ.

ವೈಕೃತೇ ಚಾಸತಿ ಕಥಂ ಮನ್ಯಧ್ವೇ ವಾ ಕೃತಾಗಸಮ್ ।
ಅರಿವದ್ ಬ್ರೂತ ಯದ್ ವಿಪ್ರಾಃ ಸತಾಂ ಸಮಯ ಏಷ ಹಿ ॥೫೮॥

ನಾನು ಅಪರಾಧವನ್ನು ಮಾಡದಿದ್ದರೂ ನನ್ನನ್ನು ಅಪರಾಧಿ ಎಂದು ತಿಳಿದು ನೀವು ಶತ್ರುಗಳಂತೆ ಮಾತನಾಡುತ್ತಿದ್ದೀರಿ ಬ್ರಾಹ್ಮಣರೇ ಸಜ್ಜನರ ನಿಯಮವು ಹೀಗಿರುವುದಷ್ಟೇ?

ಅರ್ಥಧರ್ಮೋಪಘಾತಾದ್ಧಿ ಮನಃ ಸಮುಪತಪ್ಯತೇ ।
ಯೋಽನಾಗಸಿ ಪ್ರಸೃಜತಿ ಕ್ಷತ್ರಿಯೋ ವೀರ್ಯಮುತ್ಥಿತಃ ॥೫೯॥

ಕ್ಷತ್ರಿಯನೇ ಆಗಲಿ ಇನ್ನೊಬ್ಬನೇ ಆಗಲಿ ಯಾರು ಅಪರಾಧಮಾಡಿದವನ ಮೇಲೆ ತನ್ನ ಪರಾಕ್ರಮವನ್ನು ತೋರಿಸುವುದಿಲ್ಲವೋ ನಿರಪರಾಧಿಯ ಮೇಲೆ ತನ್ನ ಪರಾಕ್ರಮವನ್ನು ತೋರುತ್ತಾನೆಯೋ ಅಂತಹ ಅರ್ಥ ಧರ್ಮಗಳನ್ನು ನಾಶಮಾಡುವ ಪುರುಷನಿಂದ ಮನಸ್ಸು ಸಂತಾಪಕ್ಕೆ ಒಳಗಾಗುತ್ತದೆ. (ಇದೇ ಸಜ್ಜನರ ನಿಯಮವಷ್ಟೇ.)

ಅತೋಽನ್ಯಥಾ ಚರನ್ ಲೋಕೇ ಧರ್ಮಜ್ಞಃ ಸ ಮಹಾರಥಃ ।
ವೃಜಿನಾಂ ಗತಿಮಾಪ್ನೋತಿ ಶ್ರೇಯಸೋಽಭ್ಯುಪಹರಂತಿ ಚ ॥೬೦॥

ಧರ್ಮಿಷ್ಠನೂ ಮಹಾವ್ರತವನ್ನು ಧರಿಸಿದನೂ ಆದ ಪುರುಷನು ತನಗೆ ವಿಹಿತವಾದ ರೀತಿಯನ್ನು ಬಿಟ್ಟು ಬೇರೆ ರೀತಿಯಲ್ಲಿ ಆಚರಣೆಯನ್ನು ಮಾಡಿದರೆ ಅವನು ತನ್ನ ಶ್ರೇಯಸ್ಸನ್ನು ಹಾಳುಮಾಡಿಕೊಳ್ಳುತ್ತಾನೆ. ಮತ್ತು ಪಾಪದ ಗತಿಯನ್ನು ಹೊಂದುತ್ತಾನೆ.

ತ್ರೈಲೋಕ್ಯೇ ಕ್ಷತ್ರಧರ್ಮಾದ್ಧಿ ಶ್ರೇಯಾಂಸಂ ಧರ್ಮಚಾರಿಣಮ್ ।
ಅನಾಗಸಂ ಪ್ರಜಾನಂತಃ ಪ್ರಮಾದಾದಿವ ಜಲ್ಪಥ ॥೬೧॥

ಮೂರು ಲೋಕಗಳಲ್ಲಿಯೂ ನಾನು ಧರ್ಮಶೀಲನೆಂದೂ ಕ್ಷತ್ರಿಯಧರ್ಮಾಚರಣೆಯಲ್ಲಿ ಬಹಳ ಶ್ರೇಷ್ಠನೆಂದೂ ಪ್ರಖ್ಯಾತವಾಗಿದೆ. ಅಂತಹ ನಾನು ನಿರಪರಾಧಿ ಎಂದು ತಿಳಿದಿದ್ದರೂ ನೀವು ಪ್ರಮಾದದಿಂದ ಬಾಯಿಗೆ ಬಂದಂತೆ ಮಾತನಾಡುತ್ತಿದ್ದೀರಿ.

ವಾಸುದೇವಃ

ಕುಲಕಾರ್ಯಂ ಮಹಾರಾಜ ಕಶ್ಚಿದೇಕಃ ಕುಲೋದ್ವಹಃ ।
ವಹತೇ ತನ್ನಿಯೋಗಾದ್ವೈ ವಯಮಭ್ಯುತ್ಥಿತಾಸ್ತ್ರಯಃ ॥೬೨॥

ಮಹಾರಾಜನೇ! ಒಂದು ಕುಲದ ಕಾರ್ಯವನ್ನು ಆ ಕುಲದ ಭಾರವನ್ನು ಧರಿಸಿದ ಒಬ್ಬನು ನೆರವೇರಿಸುತ್ತಾನೆ. ಆ ಕುಲದ ಆಜ್ಞೆಯಂತೆ ನಾವು ಮೂವರು ನಿನ್ನ ಬಳಿಗೆ ಬಂದಿದ್ದೇವೆ.

ತ್ವಯಾ ಚೋಪಹೃತಾ ರಾಜನ್ ಕ್ಷತ್ರಿಯಾ ಲೋಕವಾಸಿನಃ ।
ತದಾಗಃ ಕ್ರೂರಮುತ್ಪಾದ್ಯ ಮನ್ಯಸೇ ಕಿನ್ನ್ವನಾಗಸಮ್ ॥೬೩॥

ರಾಜನೇ! ನೀನು ಲೋಕದಲ್ಲಿರುವ ಎಲ್ಲ ಕ್ಷತ್ರಿಯರಿಗೂ ಉಪದ್ರವವನ್ನು ಕೊಟ್ಟು ಅವರನ್ನು ಅಪಹರಿಸಿದ್ದೀಯೆ ಇಂತಹ ಕ್ರೂರವಾದ ಅಪರಾಧವನ್ನು ಮಾಡಿದ ನೀನು ನಿನ್ನನ್ನು ಹೇಗೆ ನಿರಪರಾಧಿಯೆಂದು ತಿಳಿಯುತ್ತೀಯೆ?

ರಾಜಾ ರಾಜ್ಞಃ ಕಥಂ ಸಾಧೂನ್ ಹಿಂಸ್ಯಾನ್ನೃಪತಿಸತ್ತಮಃ ।
ತಾನ್ ರಾಜ್ಞಃ ಸನ್ನಿಗೃಹ್ಯ ತ್ವಂ ರುದ್ರಾಯೋಪಜಿಹೀರ್ಷಸಿ ॥೬೪॥

ಶ್ರೇಷ್ಠನಾದ ಒಬ್ಬ ರಾಜನು ಸಾಧುವಾದ ಇನ್ನೊಬ್ಬರಾಜನನ್ನು ಹೇಗೆ ಹಿಂಸಿಸಲು ಸಾಧ್ಯ? ನೀನು ಆ ರಾಜರನ್ನೆಲ್ಲಾ ಬಂಧನದಲ್ಲಿ ಇಟ್ಟು ಅವರನ್ನು ರುದ್ರನಿಗಾಗಿ ಬಲಿಕೊಡಲು ಬಯಸಿದ್ದೀಯೆ.

ಅಸ್ಮಾಂಸ್ತದೇನೋ ಗಚ್ಛೇತ ತ್ವಯಾ ಬಾರ್ಹದ್ರಥೇ ಕೃತಮ್ ।
ವಯಂ ಹಿ ಶಕ್ತಾ ಧರ್ಮಸ್ಯ ರಕ್ಷಣೇ ದಂಡಧಾರಿಣಃ ॥೬೫॥

ಜರಾಸಂಧನೇ! ನೀನು ಹಾಗೆ ಮಾಡುವುದೇ ಆದರೆ ಆ ಪಾಪಕ್ಕೆ ನಾವು ಬಾಗಿಗಳಾಗುತ್ತೇವೆ. ನಾವು ಅಪರಾಧವನ್ನು ಮಾಡಿದವರಿಗೆ ಶಿಕ್ಷೆಯನ್ನು ಕೊಟ್ಟು ಧರ್ಮವನ್ನು ರಕ್ಷಣೆಮಾಡಲು ಸಮರ್ಥರಾಗಿದ್ದೇವೆ.

ತಸ್ಮಾದದ್ಯೋಪಗಚ್ಛಾಮಸ್ತವ ಬಾರ್ಹದ್ರಥೇಽಂತಿಕಮ್ ।
ಮನುಷ್ಯಾಣಾಂ ಸಮಾಲಂಭೋ ನಹಿ ದೃಷ್ಟಃ ಕದಾಚನ ॥೬೬॥

ಆದ್ದರಿಂದ ಜರಾಸಂಧನೇ! ನಾವು ಈ ದಿನ ನಿನ್ನ ಸಮೀಪಕ್ಕೆ ಬಂದಿದ್ದೇವೆ. ಮನುಷ್ಯರನ್ನು ಹಿಂಸಿಸಿ ಯಾಗವನ್ನು ಮಾಡುವುದು ಯಾವ ಶಾಸ್ತ್ರದಲ್ಲಿಯೂ ಕಂಡು ಬಂದಿಲ್ಲ.

ಸ ಕಥಂ ಮಾನುಷೈರ್ದೇವಂ ಯಷ್ಟುಮಿಚ್ಛಸಿ ಶಂಕರಮ್ ।
ಸವರ್ಣೋಽಪಿ ವಿವರ್ಣಾನಾಂ ಕಥಂ ಕುರ್ಯಾದ್ ವಿಹಿಂಸನಮ್ ।
ಯೋ ನ ಸ್ಯಾತ್ ತ್ವಮಿವಾನಾರ್ಯೋ ಜರಾಸಂಧ ವೃಷಾಮತಿಃ ॥೬೭॥

ಜರಾಸಂಧನೇ! ಯಾವನು ನಿನ್ನಂತೆ ದುರ್ಬುದ್ಧಿಯುಳ್ಳವನಾಗಿ ಅನಾರ್ಯನಾಗಿರುವನೋ, ಅವನನ್ನು ಬಿಟ್ಟು ಬ್ರಾಹ್ಮಣಾದಿ ವರ್ಣವುಳ್ಳವನು ವರ್ಣರಹಿತನಾದವನ ಹಿಂಸೆಯನ್ನು ಸಹ ಮಾಡಲು ಸಾಧ್ಯವಿಲ್ಲ.

ಯಸ್ಯಾಂ ಯಸ್ಯಾಮವಸ್ಥಾಯಾಂ ಯದ್ಯತ್ಕರ್ಮ ಕರೋತಿ ಯಃ ।
ತಸ್ಯಾಂ ತಸ್ಯಾಮವಸ್ಥಾಯಾಂ ತತ್ತತ್ಫಲಮವಾಪ್ನುಯಾತ್ ॥೬೮॥

ಯಾವ ಯಾವ ಅವಸ್ಥೆಯಲ್ಲಿ ಪುರುಷನು ಯಾವ ಯಾವ ಕರ್ಮವನ್ನು ಮಾಡುತ್ತಾನೆಯೋ ಆಯಾ ಅವಸ್ಥೆಗಳಲ್ಲಿ ಅದರ ಫಲವನ್ನು ಹೊಂದುತ್ತಾನೆ.

ತೇ ತ್ವಾಂ ಜ್ಞಾತಿಕ್ಷಯಕರಂ ವಯಂ ಮಾರ್ಗಾನುಸಾರಿಣಃ ।
ಜ್ಞಾತಿಕ್ಷಯನಿವೃತ್ತ್ಯರ್ಥಂ ಪರೀಪ್ಸಾಮೋ ವಿಶೇಷತಃ ॥೬೯॥

ಅಂತಹ ಸನ್ಮಾರ್ಗವರ್ತಿಗಳಾದ ನಾವು ನಮ್ಮ ಬಂಧುಗಳ ನಾಶವನ್ನು ಮಾಡಲು ಹೊರಟ ನಿನ್ನನ್ನು ಬಂಧುಗಳನಾಶದ ಪರಿಹಾರಕ್ಕಾಗಿ ವಿಶೇಷವಾಗಿ ಗಮನಿಸುತ್ತಿದ್ದೇವೆ.

ನಾಸ್ತಿ ಲೋಕೇ ಪುಮಾನನ್ಯಃ ಕ್ಷತ್ರಿಯೋಽಸ್ಮಾನತೀತ್ಯ ಚ ।
ಮನ್ಯಸೇ ಸ ಚ ತೇ ರಾಜನ್ ಸುಮಹಾನ್ ಬುದ್ಧಿವಿಪ್ಲವಃ ॥೭೦॥

ರಾಜನೇ! ಲೋಕದಲ್ಲಿ ನನಗಿಂತ ಉತ್ತಮನಾದ ಇನ್ನೊಬ್ಬ ಕ್ಷತ್ರಿಯನಿಲ್ಲವೆಂದು ತಿಳಿದಿದ್ದೀಯೆ. ಅದು ನಿನ್ನ ಮಹಾಭ್ರಾಂತಿ.

ಕೋ ಹಿ ಜಾನನ್ನಭಿಜನಮಾತ್ಮನಃ ಕ್ಷತ್ರಿಯೋ ನೃಪಃ ।
ನಾವಿಶೇತ್ ಸ್ವರ್ಗಮತುಲಂ ರಣಾನಂತರಮವ್ಯಯಮ್ ॥೭೧॥

ಯಾವ ಕ್ಷತ್ರಿಯ ರಾಜನು ತನ್ನ ಶ್ರೇಷ್ಠವಾದ ಕುಲವನ್ನು ತಿಳಿದವನಾಗಿ ಯುದ್ಧವನ್ನುಮಾಡಿ ಶಾಶ್ವತವಾದ ಸ್ವರ್ಗವನ್ನು ಪಡೆಯಲು ಹಿಂಜರಿಯುತ್ತಾನೆ.

ಸ್ವರ್ಗಂ ಹ್ಯೇವ ಸಮುದ್ದಿಶ್ಯ ರಣಯಜ್ಞೇಷು ದೀಕ್ಷಿತಾಃ ।
ಜಯಂತೇ ಕ್ಷತ್ರಿಯಾ ಲೋಕಾಂಸ್ತಾನ್ ವಿದ್ಧಿ ಮಗಧೇಶ್ವರ ॥೭೨॥

ಮಗಧರಾಜನೇ! ರಣಯಜ್ಞದಲ್ಲಿ ದೀಕ್ಷಿತರಾದ ಕ್ಷತ್ರಿಯರು ಸ್ವರ್ಗವನ್ನು ಉದ್ದೇಶಿಸಿ ಲೋಕಗಳನ್ನು ಜಯಿಸುತ್ತಾರೆ. ಅವರನ್ನೇ ನಿಜವಾದ ಕ್ಷತ್ರಿಯರೆಂದು ತಿಳಿ.

ಸ್ವರ್ಗಯೋನಿರ್ಜಯೋ ರಾಜನ್ ಸ್ವರ್ಗಯೋನಿರ್ಮಹದ್ಯಶಃ ।
ಸ್ವರ್ಗಯೋನಿಸ್ತಪೋ ಯುದ್ಧೇ ಮಾರ್ಗಸ್ತ್ವವ್ಯಭಿಚಾರವಾನ್ ॥೭೩॥

ರಾಜನೇ! ಜಯವು ಸ್ವರ್ಗಕ್ಕೆ ಕಾರಣ. ಮಹಾಕೀರ್ತಿಯು ಸ್ವರ್ಗಕ್ಕೆ ಕಾರಣ. ಯುದ್ಧದಲ್ಲಿ ಶತ್ರುಗಳಿಗೆ ಸಂತಾಪವನ್ನು ಕೊಡುವುದು ಸ್ವರ್ಗಕ್ಕೆ ಕಾರಣ. ಇದು ಎಂದೂ ವ್ಯತ್ಯಾಸವಾಗದಿರುವ ಮಾರ್ಗ.

ಏಷ ಹ್ಯೈಂದ್ರೋ ವೈಜಯಿಕೋ ಗುಣೋ ನಿತ್ಯಂ ಸಮಾಹಿತಃ ।
ಯೇನಾಸುರಾನ್ ಪರಾಜಿತ್ಯ ಜಗತ್ ಪಾತಿ ಶತಕ್ರತುಃ ।
ಯಸ್ಯ ಸ್ಯಾತ್ ಸ್ವರ್ಗಮಾಸ್ಥಾಯ ನಿಗ್ರಹೀತುಂ ಯಥಾ ತವ ॥೭೪॥

ಇದು ಇಂದ್ರನಲ್ಲಿ ನಿತ್ಯವಾಗಿರುವ ವಿಜಯಸಂಬಂಧಿಯಾದ ಗುಣ. ಆ ಗುಣದಿಂದ ಶತಕ್ರತುವು ಅಸುರರನ್ನು ಸೋಲಿಸಿ ಜಗತ್ತನ್ನು ಪಾಲಿಸುತ್ತಾನೆ. ನಿನಗೆ ಹೇಗೆ ಗಿರಿವ್ರಜದಲ್ಲಿ ಕುಳಿತು ಎಲ್ಲಾ ರಾಜರನ್ನೂ ನಿಗ್ರಹಮಾಡಬೇಕೆಂಬ ಮನಸ್ಸಿದೆಯೋ ಹಾಗೆಯೇ ಇಂದ್ರನಿಗೂ ಸಹ ಸ್ವರ್ಗದಲ್ಲಿ ಕುಳಿತು ನಿನ್ನಂತಹ ಅಸುರರನ್ನೆಲ್ಲಾ ನಿಗ್ರಹಮಾಡಬೇಕೆಂಬ ಮನಸ್ಸಿದೆ.

ಮಾಗಧೈರ್ವಿಪುಲೈಃ ಸೈನ್ಯೈರ್ಬಾಹುಲ್ಯಾದ್ ಬಲದರ್ಪಿತಃ ।
ಮಾಽವಮಂಸ್ಥಾಃ ಪರಾನ್ ರಾಜನ್ ನಾಸ್ತಿ ವೀರ್ಯಂ ನರೇಶ್ವರ ॥೭೫॥

ರಾಜನೇ! ವಿಪುಲವಾದ ಮಾಗಧಸೈನ್ಯದ ಬಲದಿಂದದರ್ಪಿತನಾಗಿ ಇನ್ನೊಬ್ಬರನ್ನು ಅವಮಾನಗೊಳಿಸಬೇಡ. ನರೇಶ್ವರನೇ! ಇನ್ನೊಬ್ಬರನ್ನು ಅವಮಾನಮಾಡುವಂತಹ ಪರಾಕ್ರಮವು ನಿನ್ನಲ್ಲಿ ಇಲ್ಲ.

ಸಮಂ ತೇಜಃ ಶ್ರಿಯಾ ಲೋಕೇ ಬಲಂ ಚ ಮನುಜರ್ಷಭ ।
ಯಾವದೇವ ನ ಸಂಬುದ್ಧಂ ತಾವದ್ ದರ್ಪೋ ಭವೇತ್ತವ ॥೭೬॥

ಮನುಜರ್ಷಭನೇ! ಎಲ್ಲಿಯವರೆಗೆ ನಿನ್ನ ಸಂಪತ್ತಿಗೂ ಪರಾಕ್ರಮಕ್ಕೂ ಸಮವಾದ ಬಲಪರಾಕ್ರಮಗಳನ್ನು ನೀನು ಲೋಕದಲ್ಲಿ ತಿಳಿಯುವುದಿಲ್ಲವೋ ಅಲ್ಲಿಯವರೆಗೆ ನಿನಗೆ ದರ್ಪವಿರುತ್ತದೆ.

ವಿಷಹ್ಯಮೇತದಸ್ಮಾಕಮತೋ ರಾಜನ್ ಬ್ರವೀಮಿ ತೇ ।
ಜಹಿ ತ್ವಂ ಸದೃಶೇಷ್ವೇವ ಮಾನಂ ದರ್ಪಂ ಚ ಮಾಗಧ ।
ಮಾ ಗಮಃ ಸಸುತಾಮಾತ್ಯಃ ಸಬಲಶ್ಚ ಯಮಕ್ಷಯಮ್ ॥೭೭॥

ಈ ದರ್ಪವು ನಮಗೆ ಸಹಿಸಲು ಅಸಾಧ್ಯವಾದುದು. ರಾಜನೇ ಆದ್ದರಿಂದ ಹೇಳುತ್ತಿದ್ದೆನೆ. ಮಗಧರಾಜನೇ! ನೀನು ಸಮಾನರಲ್ಲಿಯೇ ದರ್ಪವನ್ನೂ ಅಹಂಕಾರವನ್ನೂ ಮಾಡುವುದನ್ನು ತ್ಯಜಿಸು. ನಿನ್ನ ಪುತ್ರರು ಅಮಾತ್ಯರು ಮತ್ತು ಸೈನ್ಯದೊಂದಿಗೆ ಯಮಸದನಕ್ಕೆ ಹೋಗಬೇಡ.

ದಂಭೋದ್ಭವಃ ಕಾರ್ತವೀರ್ಯ ಉತ್ತರಶ್ಚ ಬೃಹದ್ರಥಃ ।
ಶ್ರೇಯಸೋ ಹ್ಯವಮತ್ಯೇಹ ವಿನೇಶುಃ ಸಬಲಾ ನೃಪಾಃ ॥೭೮॥

ದಂಭೋದ್ಭವ ಕಾರ್ತವೀರ್ಯ ಉತ್ತರ ಬೃಹದ್ರಥ ಮೊದಲಾದ ಪ್ರಬಲರಾದ ರಾಜರೆಲ್ಲರೂ ಶ್ರೇಷ್ಠರಾದವರನ್ನು ಅವಮಾನಮಾಡಿಯೇ ಈ ಲೋಕದಲ್ಲಿ ವಿನಾಶವನ್ನು ಹೊಂದಿದರು.

ಮುಮುಕ್ಷಮಾಣಾಸ್ತ್ವತ್ತಶ್ಚ ನ ವಯಂ ಬ್ರಾಹ್ಮಣಬ್ರುವಾಃ ।
ಶೌರಿರಸ್ಮಿ ಹೃಷೀಕೇಶ ಇಮೌ ಭೀಮಧನಂಜಯೌ ॥೭೯॥

ನೀನು ಸೆರೆಹಿಡಿದ ರಾಜರನ್ನು ನಿನ್ನಿಂದ ಬಿಡುಗಡೆಗೊಳಿಸಲು ಬಂದ ನಾವು ಬ್ರಾಹ್ಮಣರಲ್ಲ. ನಾನು ವಾಸುದೇವ ಹೃಷಿಕೇಶ ಇವರಿಬ್ಬರು ಭೀಮ ಮತ್ತು ಅರ್ಜುನರು.

ತ್ವಾಮಾಹ್ವಯಾಮಹೇ ರಾಜನ್ ಸ್ಥಿರೋ ಯುಧ್ಯಸ್ವ ಮಾಗಧ ।
ಮುಂಚೇಮಾನ್ ನೃಪತೀನ್ ಸರ್ವಾನ್ ಮಾ ಗಮಸ್ತ್ವಂ ಯಮಕ್ಷಯಮ್॥

ಮಗಧರಾಜನೇ! ನಿನ್ನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೇವೆ. ಗಟ್ಟಿಯಾಗಿ ನಿಂತು ಯುದ್ಧಮಾಡು. ಇಲ್ಲದಿದ್ದರೆ ಈ ಎಲ್ಲಾ ರಾಜರನ್ನೂ ಬಿಡುಗಡೆಮಾಡು. ಯಮಪಟ್ಟಣಕ್ಕೆ ಹೋಗಬೇಡ.

ಏತಚ್ಛ್ರುತ್ವಾ ಜರಾಸಂಧಃ ಕ್ರುದ್ಧೋ ವಚನಮಬ್ರವೀತ್ ।
ನಾಹಂ ಕಂಸಃ ಪ್ರಲಂಬೋ ವಾ ನ ಬಾಣೋ ನಚ ಮುಷ್ಟಿಕಃ ।
ನರಕೋ ನೇಂದ್ರತಪನೋ ನ ಮುರೋ ನಾಪಿ ವಾನರಃ ॥೮೧॥

ನ ಕಾಲಯವನೋ ವಾऽಪಿ ಯೇ ತ್ವಯಾ ನಿಹತಾ ಯುಧಿ ।
ತ್ವಂ ತು ಗೋಪಕುಲೋತ್ಪನ್ನೋ ಜಾತಿಂ ವೈ ಪೂರ್ವಿಕಾಂ ಸ್ಮರ ॥೮೨॥

ಇದನ್ನು ಕೇಳಿದ ಜರಾಸಂಧನು ಕ್ರುದ್ಧನಾಗಿ ಹೀಗೆ ಮಾತನಾಡಿದನು. ನಾನು ನಿನ್ನಿಂದ ಕೊಲ್ಲಲ್ಪಟ್ಟ ಕಂಸನಲ್ಲ ಪ್ರಲಂಬನಲ್ಲ ಬಾಣನಲ್ಲ ಮುಷ್ಟಿಕನಲ್ಲ ಇಂದ್ರನನ್ನೂ ಪೀಡಿಸಿದ ನರಕನಲ್ಲ. ಮುರನಲ್ಲ ವಾನರನಲ್ಲ ಕಾಲಯವನನೂ ಅಲ್ಲ. ನೀನು ಗೋಪಕುಲದಲ್ಲಿ ಹುಟ್ಟಿದವನು ನಿನ್ನ ಮೊದಲಿನ ಜಾತಿಯನ್ನು ಸ್ಮರಿಸಿಕೋ.

ಯೋऽಸ್ಮದ್ಭಯಾದಪಕ್ರಮ್ಯ ಸಾಗರಾನೂಪಮಾಶ್ರಿತಃ ।
ಜನ್ಮಭೂಮಿಂ ಪರಿತ್ಯಜ್ಯ ಮಧುರಾಂ ಪ್ರಾಕೃತೋ ಯಥಾ ॥೮೩॥

ನೀನು ಸಾಧಾರಣಮನುಷ್ಯನಂತೆ ನನ್ನ ಭಯದಿಂದ ಜನ್ಮಭೂಮಿಯಾದ ಮಧುರೆಯನ್ನು ಬಿಟ್ಟುಹೋಗಿ ಸಮುದ್ರದ ಮಧ್ಯವನ್ನು ಸೇರಿಕೊಂಡಿದ್ದೀಯೆ.

ಸೋಽಧುನಾ ಕತ್ಥಸೇ ಶೌರೇ ಶರದೀವ ಯಥಾ ಘನಃ ।
ಅದ್ಯಾನೃಣ್ಯಂ ಕರಿಷ್ಯಾಮಿ ಭೋಜರಾಜಸ್ಯ ಧೀಮತಃ ।
ಜಾಮಾತುರೌಗ್ರಸೇನಸ್ಯ ತ್ವಾಂ ನಿಹತ್ಯ ಚ ಮಾಧವ ॥೮೪॥

ಶೌರಿಯೇ! ಈಗ ನೀನು ಶರತ್‌ಕಾಲದ ಮೋಡದಂತೆ ವ್ಯರ್ಥವಾಗಿ ಬಡಬಡಿಸುತ್ತಿದ್ದೀಯೆ/ ಮಾಧವನೇ! ಈಗ ಮೇಧಾವಿಯಾದ ಉಗ್ರಸೇನನ ಮಗನಾದ ನನ್ನ ಅಳಿಯನಾದ ಕಂಸನ ಋಣವನ್ನು ನಿನ್ನನ್ನು ಕೊಂದು ತೀರಿಸುವೆನು.

ಆಕಾಂಕ್ಷಿತೋ ಮೇ ಸಂಗ್ರಾಮಃ ತ್ವಾಂ ಹಂತುಂ ಸಸುಹೃದ್ಗಣಮ್ ।
ದಿಷ್ಟ್ಯಾ ಮೇ ಸಫಲೋ ಯತ್ನಃ ಕೃತೋ ದೇವೈಃ ಸವಾಸವೈಃ ॥೮೫॥

ನಿನ್ನನ್ನು ನಿನ್ನ ವಿಶ್ವಾಸಿಗಳ ಜೊತೆಯಲ್ಲಿ ಕೊಲ್ಲುವುದಕ್ಕೆ ಈ ಯುದ್ಧವು ನನಗೆ ಬಹಳ ದಿನಗಳಿಂದ ಆಕಾಂಕ್ಷಿತವಾಗಿದ್ದಿತು. ಅದೃಷ್ಟವಶದಿಂದ ನನ್ನ ಪ್ರಯತ್ನವನ್ನು ಇಂದ್ರಾದಿ ದೇವತೆಗಳು ಸಫಲಗೊಳಿಸಿದ್ದಾರೆ.

ಕ್ಲೀಬಾವಿಮೌ ಚ ಗೋವಿಂದ ಭೀಮಸೇನಾರ್ಜುನಾವುಭೌ ।
ಹಿಂಸ್ಯಾಮಿ ಯುಧಿ ವಿಕ್ರಮ್ಯ ಸಿಂಹಃ ಕ್ಷುದ್ರಮೃಗಾನಿವ ॥೮೬॥

ಗೋವಿಂದನೇ! ಈ ಭೀಮಾರ್ಜುನರಿಬ್ಬರೂ ನಪುಂಸಕರು. ಸಿಂಹವು ಕ್ಷುದ್ರಮೃಗಗಳನ್ನು ಕೊಂದಂತೆನನ್ನ ಪರಾಕ್ರಮದಿಂದ ಯುದ್ಧದಲ್ಲಿ ಅವರನ್ನು ಕೊಲ್ಲುತ್ತೇನೆ.

ವೈಶಂಪಾಯನಃ

ತಸ್ಯ ರೋಷಾಭಿಭೂತಸ್ಯ ಜರಾಸಂಧಸ್ಯ ಗರ್ಜತಃ ।
ಸರ್ವಭೂತಾನಿ ವಿತ್ರೇಸುರ್ಯೇ ತತ್ರಾಸನ್ ಸಮಾಗತಾಃ ॥೮೭॥

ಹೀಗೆ ರೋಷಕ್ಕೆ ವಶನಾಗಿ ಗರ್ಜಿಸುವ ಜರಾಸಂಧನ ಮಾತುಗಳನ್ನು ಕೇಳಿ ಅಲ್ಲಿ ಸೇರಿದ್ದ ಎಲ್ಲರೂ ನಡುಗಿಹೋದರು.

ಶ್ರೀವಾಸುದೇವಃ

ಕಿಂ ಗರ್ಜಸಿ ಜರಾಸಂಧ ಕರ್ಮಣಾ ತಾನ್ ಸಮಾಚರ ।
ಮಮ ನಿರ್ದೇಶಕರ್ತೃಭ್ಯಾಂ ಪಾಂಡವಾಭ್ಯಾಂ ನೃಪಾಧಮ ॥೮೮॥

ನೃಪಾಧಮನೇ! ಜರಾಸಂಧನೇ! ಏಕೆ ಗರ್ಜಿಸುತ್ತಿದ್ದೀಯೆ? ನನ್ನ ಆದೇಶವನ್ನು ಪಾಲಿಸುವ ಈ ಇಬ್ಬರು ಪಾಂಡವರ ಜೊತೆಯಲ್ಲಿ ಯುದ್ಧಮಾಡಿ ನಿನ್ನ ಕರ್ಮದಿಂದ ಅದನ್ನು ಮಾಡಿ ತೋರಿಸು.

ಸಾಮಾತ್ಯಂ ಸಸುತಂ ತ್ವದ್ಯ ಘಾತಯಿಷ್ಯಾಮ್ಯಹಂ ರಣೇ ।
ನ ಕಥಂಚನ ಜೀವನ್ ವೈ ಪ್ರವೇಕ್ಷ್ಯಸಿ ಪುರೋತ್ತಮಮ್ ॥೮೯॥

ಈ ದಿನ ನಿನ್ನ ಮಕ್ಕಳ ಮತ್ತು ಅಮಾತ್ಯರ ಜೊತೆಯಲ್ಲಿ ನಿನ್ನನ್ನು ನಾನು ಯುದ್ಧದಲ್ಲಿ ಕೊಲ್ಲಿಸುವೆನು. ನೀನು ಇನ್ನೊಮ್ಮೆ ಜೀವಸಹಿತನಾಗಿ ನಿನ್ನ ಪಟ್ಟಣವನ್ನು ಪ್ರವೇಶಿಸುವುದಿಲ್ಲ.

ಜರಾಸಂಧಃ

ನಾಜಿತಂ ವೈ ನರಪತಿಮಹಮಾದದ್ಮಿ ಕಂಚನ ।
ಜಿತಃ ಕಃ ಪ್ರತ್ಯವಸ್ಥಾತಾ ಕೋ ಮಯಾ ನ ಪರಾಜಿತಃ ॥೯೦॥

ನಾನು ಎಂದೂ ಜಯಶೀಲನಲ್ಲದ ರಾಜನನ್ನು ನನ್ನ ಎದುರಾಳಿಯಾಗಿ ಸ್ವೀಕರಿಸುವುದಿಲ್ಲ. ಜಯಶೀಲನಾದ ನನ್ನ ಎದುರಿನಲ್ಲಿ ಪರಾಜಿತನಾಗದ ಯಾವನು ನಿಲ್ಲಲು ಸಾಧ್ಯ?

ಕ್ಷತ್ರಿಯಸ್ಯೈತದೇವಾಹುರ್ಧರ್ಮ್ಯಂ ಕೃಷ್ಣೋಪಜೀವನಮ್ ।
[illegible]ಮ್ಯ ವಶಮಾನೀಯ ಕಾಮತೋ ಯತ್ ಸಮಾಚರೇತ್ ॥೯೧॥

[illegible] ತನ್ನ ಪರಾಕ್ರಮದಿಂದ ಬೇರೆಯವರನ್ನು ವಶಪಡಿಸಿಕೊಂಡು
[illegible] ಇಚ್ಛೆಯಂತೆ ವ್ಯವಹರಿಸುವುದು ಶ್ರೇಷ್ಠವಾದ
[illegible]ದವರು ಹೇಳುತ್ತಾರೆ.

ದೇವತಾರ್ಥಮುಪಾಹೃತ್ಯ ರಾಜ್ಞಃ ಕೃಷ್ಣ ಕಥಂ ಭಯಾತ್ ।
ಅಹಮದ್ಯ ಏಮುಂಚೇಯಂ ಕ್ಷತ್ರಧರ್ಮಮನುಸ್ಮರನ್ ॥೯೨॥

ಕೃಷ್ಣನೇ! ನಾನು ದೇವಪೂಜೆಯ ಸಲುವಾಗಿ ಈ ರಾಜರನ್ನು ತೆಗೆದುಕೊಂಡು ಬಂದು ಕ್ಷತ್ರಿಯ ಧರ್ಮವನ್ನು ಅನುಸರಿಸುವ ನಾನು ನಿನ್ನ ಭಯದಿಂದ ಈದಿನ ಹೇಗೆ ಬಿಡುಗಡೆಗೊಳಿಸುತ್ತೇನೆ?

ಸೈನ್ಯಂ ಸೈನ್ಯೇನ ವ್ಯೂಢೇನ ಏಕ ಏಕೇನ ವಾ ಪುನಃ ।
ದ್ವಾಭ್ಯಾಂ ತ್ರಿಭಿರ್ವಾ ಯೋತ್ಸ್ಯೇಽಹಂ ಯುಗಪತ್ ಪೃಥಗೇವ ವಾ ॥

ಸೈನ್ಯದ ಒಡಗೂಡಿ ಸೈನ್ಯದ ಜೊತೆಯಲ್ಲಿಯಾಗಲೀ ಅಥವಾ ನಾನೊಬ್ಬನೇ ನಿಮ್ಮಲ್ಲಿ ಒಬ್ಬರ ಜೊತೆಯಲ್ಲಾಗಲೀ ಇಬ್ಬರ ಜೊತೆಯಲ್ಲಾಗಲೀ ಅಥವಾ ಮೂವರ ಜೊತೆಯಲ್ಲಾಗಲೀ ಸಮಾನ ಕಾಲದಲ್ಲಿ ಅಥವಾ ಬೇರೆ ಬೇರೆಯಾಗಿ ಯುದ್ಧವನ್ನು ಮಾಡುವೆನು.

ವೈಶಂಪಾಯನಃ

ಏವಮುಕ್ತ್ವಾ ಜರಾಸಂಧಃ ಸಹದೇವಾಭಿಷೇಚನಮ್ ।
ಆಜ್ಞಾಪಯತ್ ತದಾ ರಾಜಾ ಯುಯುತ್ಸುರ್ಭೀಮಕರ್ಮಭಿಃ ॥೯೪॥

ಜರಾಸಂಧರಾಜನು ಹೀಗೆ ಮಾತನಾಡಿ ತನ್ನ ಭಯಂಕರವಾದ ಕರ್ಮಗಳಿಂದ ಯುದ್ಧವನ್ನು ಮಾಡಲು ಬಯಸಿ, ಆಗ ಮಂತ್ರಿಗಳನ್ನು ಕರೆದು ಸಹದೇವನ ಪಟ್ಟಾಭಿಷೇಕವನ್ನು ಆದೇಶಿಸಿದನು.

ತೌ ತು ಸೇನಾಪತೀ ಕಾಲೇ ಸಸ್ಮಾರ ಭರತರ್ಷಭ ।
ಕೌಶಿಕಂ ಚಿತ್ರಸೇನಂ ಚ ತಸ್ಮಿನ್ ಯುದ್ಧ ಉಪಸ್ಥಿತೇ ॥೯೫॥

ಯಯೋಸ್ತು ನಾಮನೀ ಲೋಕೇ ಹಂಸೇತಿ ಡಿಭಕೇತಿ ಚ ।
ಪೂರ್ವಂ ಸ್ತಃ ಕಥಿತೌ ಪುಂಭಿರ್ಯಲೋಕೇ ಲೋಕಸತ್ಕೃತೌ ॥೯೬॥

ಆ ಸಮಯದಲ್ಲಿ ಹಿಂದೆ ಲೋಕದಲ್ಲಿ ಹಂಸ ಮತ್ತು ಡಿಬಕನಾಮಗಳಿಂದ ವಿಖ್ಯಾತರಾಗಿದ್ದ ಆ ಇಬ್ಬರು ಸೇನಾಪತಿಗಳನ್ನು ನೆನೆದು ಯುದ್ಧವು ಉಪಸ್ಥಿತವಾಗಿರಲು ಇಂದಿನ ಸೇನಾಪತಿಗಳಾದ ಕೌಶಿಕ ಮತ್ತು ಚಿತ್ರಸೇನರನ್ನು ಸ್ಮರಿಸಿದನು.

ತಂ ತು ರಾಜನ್ ವಿಭುಃ ಶೌರೀ ರಾಜಾನಂ ಬಲಿನಾಂ ವರಮ್ ।
ಕೃತ್ವಾ ಪುರುಷಶಾರ್ದೂಲಂ ಶಾರ್ದೂಲಸಮವಿಕ್ರಮಮ್ ॥೯೭॥

ಸತ್ಯಸಂಧೋ ಜರಾಸಂಧಂ ಭುವಿ ಭೀಮಪರಾಕ್ರಮಮ್ ।
ಭಾಗಮನ್ಯಸ್ಯ ನಿರ್ದಿಷ್ಟಂ ವಧ್ಯಂ ಮತ್ವಾ ತದಾಽಚ್ಯುತಃ ॥೯೮॥

ನಾತ್ಮನಾಽತ್ಮವತಾಂ ಮುಖ್ಯ ಇಯೇಷ ಮಧುಸೂದನಃ ।
ಬ್ರಾಹ್ಮಣಾಜ್ಞಾಂ ಪುರಸ್ಕೃತ್ಯ ಹಂತುಂ ಹಲಧರಾನುಜಃ ॥೯೯॥

ರಾಜನೇ! ಶೌರಿಯಾದ ಕೃಷ್ಣನು ಬಲಿಷ್ಠರಲ್ಲಿ ಶ್ರೇಷ್ಠನೂ ಶಾರ್ದೂಲಸಮ ಪರಾಕ್ರಮ ಉಳ್ಳವನೂ ಸತ್ಯಸಂಧನೂ ಭಯಂಕರ ಪರಾಕ್ರಮ ಉಳ್ಳವನೂ ಆದ ಜರಾಸಂಧನನ್ನು ತನ್ನನ್ನು ಬಿಟ್ಟು ಇನ್ನೊಬ್ಬನ ಭಾಗವೆಂದು ತೀರ್ಮಾನಿಸಿ ಪ್ರಯತ್ನಶೀಲರಲ್ಲಿ ಅಗ್ರಗಣ್ಯನಾದ ಮಧುಸೂದನನು ಅವನನ್ನು ಕೊಲ್ಲಲು ಬಯಸಲಿಲ್ಲ. ಭೀಮನಿಂದಲೇ ಜರಾಸಂಧನ ವಧವಾಗಬೇಕೆಂಬ ಬ್ರಹ್ಮದೇವರ ಆಜ್ಞೆಗೆ ಬಹುಮಾನವನ್ನು ನೀಡಿದ ಬಲರಾಮನ ತಮ್ಮನಾದ ಕೃಷ್ಣನು (ಹಿಂದಿನ ಯಾವ ಯುದ್ಧಗಳಲ್ಲಿಯೂ ಸಹ) ಅವನನ್ನು ಕೊಲ್ಲಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ದ್ವಾವಿಂಶೋಽಧ್ಯಾಯಃ ॥
॥ ಜರಾಸಂಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಇತ್ಯುಕ್ತವಂತಮವದದಜಿತೋರುಬಲೋ ಹರಿಃ
ಏಹ್ಯೇಕಮೇಕೋ ವಾಸ್ಮಾಸು ಸಸೈನ್ಯೋ ವಾ ರಣೇ ನೃಪ ॥೧೩೫॥

ಜರಾಸಂಧ ಹೀಗೆ ಹೇಳಿದಾಗ ಸರ್ವಶಕ್ತನಾದ ಅಜಿತನಾದ ಶ್ರೀಹರಿ ನುಡಿದ. 'ನಮ್ಮಲ್ಲಿ ಯಾರಾದರೊಬ್ಬರೊಡನೆ ಹೋರಾಡಲು ನೀನು ಏಕಾಕಿಯಾಗಿ ಬಾ, ಇಲ್ಲವೆ, ಸೈನ್ಯ ಸಮೇತರಾದ ನಮ್ಮೊಡನೆ ಯುದ್ಧಕ್ಕೆ ಸೈನ್ಯ ಸಹಿತನಾಗಿಯಾದರೂ ಬಾ'.

ಯೇನ ಕಾಮಯಸೇ ಯೋದ್ಧುಂ ತಂ ನ ಆಸಾದಯ ದ್ರುತಂ ।
ನಿರಾಯುಧಃ ಸಾಯುಧೋ ವಾ ತ್ವದಭೀಷ್ಟಾಯುಧೇನ ವಾ ॥೧೩೬॥

ನೀನು ಯಾರೊಡನೆ ಹೋರಾಡಲು ಬಯಸುವಿಯೊ ಅವನನ್ನೇ ಆರಿಸಿಕೊಳ್ಳು. ನಿರಾಯುಧನಾಗಿಯೋ ಸಾಯುಧನಾಗಿಯೋ ನಿನಗಿಷ್ಟವಾದ ಆಯುಧ ಧರಿಸಿಯೋ ನೀನು ಬರಬಹುದು.

ಇತ್ಯಾಹ ಭಗವಾನ್ ಶತ್ರುಂ ಯಶೋ ಭೀಮೇ ವಿವರ್ಧಯನ್ ।
ಘಾತಯಿತ್ವಾ ಸ್ವಶತ್ರುಂ ಚ ಭೀಮೇನಾನುಗ್ರಹಂ ಪರಂ ॥೧೩೭॥

ಭೀಮಸ್ಯ ಕರ್ತುಮಿಚ್ಛಂಶ್ಚ ಭಕ್ತಿ ಜ್ಞಾನಾದಿವರ್ಧನಂ ।
ತೃಣೀಕರ್ತುಂ ರಿಪುಂ ಚೈವ ನಿರಾಯುಧತಯಾಗಮತ್ ॥೧೩೮॥

ಶ್ರೀಕೃಷ್ಣ ತನ್ನ ಶತ್ರುವನ್ನೂ ಭೀಮನಿಂದ ಕೊಲ್ಲಿಸಿ ಅವನಿಗೆ ಪರಮಾನುಗ್ರಹ ಮಾಡಲು ಮತ್ತು ಅವನ ಯಶಸ್ಸನ್ನೂ ಭಕ್ತಿಜ್ಞಾನಾದಿಗಳನ್ನೂ ಹೆಚ್ಚಿಸಲು ಬಯಸಿದ್ದರಿಂದ ಜರಾಸಂಧನಿಗೆ ಹೀಗೆ ಹೇಳಿದ. ಶತ್ರುವನ್ನು ತೃಣೀಕರಿಸಲೆಂದೇ ನಿರಾಯುಧನಾಗಿ ಅಲ್ಲಿಗೆ ಹೋಗಿದ್ದ.

ಕೃಷ್ಣಭೀಮಾರ್ಜುನಾಸ್ತೇನ ವಿಪ್ರವೇಷಾಶ್ಚ ತೇಽಭವನ್ ।
ನಿರಾಯುಧಃ ಕ್ಷತ್ರವೇಷೋ ನೈವ ಯೋಗ್ಯಃ ಕಥಂಚನ ॥೧೩೯॥

ಕ್ಷತ್ರಿಯ ವೇಷದಲ್ಲಿದ್ದು ನಿರಾಯುಧರಾಗಿರುವುದು ಯಾವರೀತಿಯಿಂದಲೂ ಯೋಗ್ಯವೆನಿಸುವುದಿಲ್ಲ. ಅದರಿಂದ ಕೃಷ್ಣಭೀಮ ಅರ್ಜುನರು ಬ್ರಾಹ್ಮಣವೇಷ ಧರಿಸಿ ಬಂದಿದ್ದರು.

ತತೋ ಜಗ್ಮುರ್ವಿಪ್ರವೇಷಾಸ್ತೃಣೀಕರ್ತುಂ ಹಿ ಮಾಗಧಂ ।
ಮಾಗಧಸ್ಯ ಸಸೈನ್ಯಸ್ಯ ಸ್ವಗೃಹೇ ಸಂಸ್ಥಿತಸ್ಯ ಚ ॥೧೪೦॥

ನಿರಾಯುಧೇನ ಭೀಮೇನ ಸಮಾಹ್ವಾನೇ ಕೃತೇಽಮಿತಂ ।
ಧರ್ಮಂ ಯಶಶ್ಚ ಭೀಮಸ್ಯ ವರ್ಧಯಾಮಾಸ ಕೇಶವಃ ॥೧೪೧॥

ಅದರಿಂದ ಅವರು ಬ್ರಾಹ್ಮಣ ವೇಷದಿಂದ, ಜರಾಸಂಧನನ್ನು ತೃಣೀಕರಿಸುವ ಉದ್ದೇಶದಿಂದಲೆ, ಹೋಗಿದ್ದರು. ಜರಾಸಂಧ ಸೈನ್ಯ ಸಮೇತನಾಗಿರುವಾಗ, ಮತ್ತು ತನ್ನ ಮನೆಯಲ್ಲಿಯೆ ಇರುವಾಗ ನಿರಾಯುಧನಾದ ಭೀಮ ಹೊರಗಿಂದ ಬಂದು ಯುದ್ಧಕ್ಕೆ ಆಹ್ವಾನ ಮಾಡಿದರೆ ಭೀಮನಿಗೆ ಅಮಿತವಾಗಿ ಪುಣ್ಯ ಮತ್ತು ಕೀರ್ತಿ ಹೆಚ್ಚುವುದು. ಹಾಗೆ ಹೆಚ್ಚುವಂತೆ ಮಾಡಿದ ಶ್ರೀಕೃಷ್ಣ.

ತೃತೀಯಮರ್ಜುನಂ ಚೈವ ಸಮಾದಾಯ ಯಯೌ ರಿಪುಂ ।
ಹರಿಸ್ತಸ್ಮಾಚ್ಚ ಭೀಮಸ್ಯ ಮಹಾಧಿಕ್ಯಂ ಪ್ರಕಾಶಯನ್ ॥೧೪೨॥

ಮುಖೇನ ಮಾಗಧಸ್ಯೈವ ವೃಣ್ವೇಕಂ ನ ಇತಿ ಬ್ರುವನ್ ।
ವೃಣ್ವೇಕಮಸ್ಮಾಸ್ವಿತಿ ಸ ಪ್ರೋಕ್ತ ಆಹ ಜರಾಸುತಃ ॥೧೪೩॥

ನಮ್ಮಲ್ಲಿ ಒಬ್ಬನನ್ನು ಆರಿಸಿಕೊಳ್ಳು ಎಂದು ಹೇಳಿ ಜರಾಸಂಧನ ಮುಖದಿಂದಲೇ ಅರ್ಜುನನಿಗಿಂತ ಭೀಮನಿಗೆ ಹೆಚ್ಚು ಶ್ರೇಷ್ಠತ್ವವನ್ನು ಹೇಳಿಸಿ ಬೆಳಕಿಗೆ ತರುವುದಕ್ಕಾಗಿ ಶ್ರೀಕೃಷ್ಣ ಮೂರನೆಯವನಾಗಿ ಅರ್ಜುನನನ್ನೂ ಕರೆದುಕೊಂಡು ಶತ್ರುವಿನ ಬಳಿಗೆ ಬಂದಿದ್ದ. ಅದರಿಂದ ನಮ್ಮಲ್ಲಿ ಒಬ್ಬನನ್ನು ಆರಿಸಿಕೊಳ್ಳೆಂದು ಕೃಷ್ಣಹೇಳಿದಾಗ ಜರಾಸಂಧ ನುಡಿದ.

ಕುರ್ಯಾಂ ನೈವಾರ್ಜುನೇನಾಹಮಬಲೇನೈವ ಸಂಗರಂ ।
ಪಂಚಪಂಚಾಶದಬ್ದೋಽದ್ಯ ಹ್ಯಯಮೇವ ಚ ಬಾಲವತ್
ಅಬಲತ್ವಾದ್ ಯುವಾಪ್ಯೇಷ ಬಾಲ ಏವ ಮತೋ ಮಮ ॥೧೪೪॥

'ನಾನು ಈ ದುರ್ಬಲನಾದ ಅರ್ಜುನನೊಡನೆ ಯುದ್ಧಮಾಡಲಾರೆ. ವಯಸ್ಸಿನಲ್ಲಿ ಐವತ್ತೈದರವನಾದರೂ ಬಲದಲ್ಲಿ ಇನ್ನೂ ಬಾಲಕನಂತಿದ್ದಾನೆ. ಏಕೆಂದರೆ ಯುವಕನಾಗಿದ್ದರೂ ದುರ್ಬಲನಾದ್ದರಿಂದ ದೃಷ್ಟಿಯಲ್ಲಿ ಈತ ಬಾಲಕನೆ'.

ಇತ್ಯುಕ್ತೋಽಸ್ಯರ್ಜುನೋ ನಾಹ ಕುರು ತರ್ಹಿ ಪರೀಕ್ಷಣಂ ।
ಬಾಹುಭ್ಯಾಂ ಧನುಷಾ ವೇತಿ ಶಂಕಮಾನಃ ಪರಾಜಯಂ ॥೧೪೫॥

ಜರಾಸಂಧ ಹೀಗೆ ಹೇಳುತ್ತಿದ್ದರೂ 'ಹಾಗಾದರೆ ಬಾಹುಗಳಿಂದಾಗಲಿ ಬಿಲ್ಲಿನಿಂದಾಗಲಿ ಪರೀಕ್ಷೆಮಾಡಿ ನೋಡು' ಎನ್ನಲಿಲ್ಲ ಅರ್ಜುನ. ಏಕೆಂದರೆ ಅವನು ತನಗೆ ಪರಾಜಯವಾದೀತೆಂದು ಶಂಕಿಸಿದ್ದ.

ಅತೋ ಭೀಮೋ ಬಲಾಧಿಕ್ಯಂ ಸುಪ್ರಸಿದ್ಧಮಭೂನ್ಮಹತ್ ।
ಏತದರ್ಥಂ ಹಿ ಕೃಷ್ಣೇನ ಸಹಾನೀತಃ ಸ ಫಲ್ಗುನಃ ॥೧೪೬॥

ಅದರಿಂದ ಭೀಮನಲ್ಲಿಯೆ ಬಲ ಬಹಳ ಹೆಚ್ಚೆಂಬುದು ಸುಪ್ರಸಿದ್ಧವಾಯಿತು. ಇದಕ್ಕಾಗಿಯೆ ಕೃಷ್ಣ ಅರ್ಜುನನನ್ನು ಜೊತೆಗೆ ಕರೆತಂದಿದ್ದ.

ಜಾನಾನ್ ಕೃಷ್ಣೇ ಬಲಂ ಘೋರಮವಿಷಹ್ಯಂ ಸ ಮಾಗಧಃ ।
ಕುತ್ಸಯನ್ ಗೋಪ ಇತಿ ತಂ ಭಯಾನ್ನೈವಾಹ್ವಯತ್‌ಪ್ರಭುಂ ॥೧೪೭॥

ಕೃಷ್ಣನಲ್ಲಿರುವ ಶಕ್ತಿ ಭಯಂಕರ, ಯಾರಿಗೂ ಇದಿರಿಸಲಾಗದಂಥದ್ದು ಎಂದು ತಿಳಿದಿದ್ದ ಜರಾಸಂಧ ತೋರಿಕೆಗೆ ಅವನನ್ನು ಗೋವಳನೆಂದು ತಿರಸ್ಕರಿಸಿದರೂ ವಸ್ತುತಃ ಭಯದಿಂದಲೆ ಯುದ್ಧಕ್ಕೆ ಕರೆದಿರಲಿಲ್ಲ.

ಆಹ್ವಯಾಮಾಸ ಭೀಮಂ ತು ಸ್ಯಾದ್ವಾ ಮೇ ಜೀವನಂ ತ್ವಿತಿ ॥೧೪೮॥

ಭೀಮನೊಡನೆ ಯುದ್ಧ ಮಾಡಿದರೆ ಒಂದು ವೇಳೆ ತಾನು ಬದುಕಿ ಉಳಿಯಲೂ ಬಹುದೆಂಬ ಆಸೆಯಿಂದ ಭೀಮನನ್ನೇ ಯುದ್ಧಕ್ಕೆ ಕರೆದ, ಜರಾಸಂಧ.

ಹನಿಷ್ಯತ್ಯೇವ ಮಾಂ ಕೃಷ್ಣ ಇತ್ಯಾಸೀನ್ನೃಪತೇರ್ಭಯಂ ।
ತಸ್ಮಾತ್‌ತಂ ನಾಹ್ವಯಾಮಾಸ ವಾಸುದೇವಂ ಸ ಮಾಗಧಃ ॥೧೪೯॥

ಕೃಷ್ಣನೊಡನೆ ಯುದ್ಧ ಮಾಡಿದರೆ ಅವನು ತನ್ನನ್ನು ಕೊಲ್ಲುವುದು ನಿಶ್ಚಿತವೆಂದು ಜರಾಸಂಧನಿಗೆ ಭಯವಿದ್ದಿತು. ಅದರಿಂದ ಅವನು ಶ್ರೀಕೃಷ್ಣನನ್ನು ಯುದ್ಧಕ್ಕೆ ಕರೆಯಲಿಲ್ಲ.

ಅರ್ಜುನೇ ತು ಜಿತೇ ಕೃಷ್ಣಭೀಮೌ ಮಾಂ ನಿಹನಿಷ್ಯತಃ ।
ತ್ರಯಾಣಾಂ ದುರ್ಬಲಾಹ್ವಾನಾನ್ನಶ್ಯೇತ್‌ಕೀರ್ತಿಶ್ಚ ಮೇ ಧ್ರುವಾ ॥೧೫೦॥

ತಾನು ಅರ್ಜುನನನ್ನು ಗೆದ್ದರೂ ಅನಂತರ ಕೃಷ್ಣ ಭೀಮರು ತನ್ನನ್ನು ಕೊಲ್ಲುವರು ಮತ್ತು ಮೂವರೊಳಗೆ ದುರ್ಬಲನಾದ ಈತನನ್ನು ಯುದ್ಧಕ್ಕೆ ಕರೆದರೆ ನನ್ನ ಕೀರ್ತಿಯೂ ನಿಶ್ಚಿತವಾಗಿ ನಶಿಸುವುದು.

ಇತಿ ಮತ್ವಾಽಹ್ವಯಾಮಾಸ ಭೀಮಸೇನಂ ಸ ಮಾಗಧಃ ।
ಕಥಂಚಿಜ್ಜೀವಿತಂ ವಾ ಸ್ಯಾನ್ನ ತು ನಶ್ಯತಿ ಮೇ ಯಶಃ ॥೧೫೧॥

ಹೀಗೆ ಆಲೋಚಿಸಿ ಜರಾಸಂಧ ಭೀಮಸೇನನನ್ನೇ ಯುದ್ಧಕ್ಕೆ ಕರೆದ. 'ನಾನು ಬದುಕಿ ಉಳಿಯಲಿ ಅಥವಾ ಅಳಿಯಲಿ, ಹೇಗಾದರೂ ನನ್ನ ಕೀರ್ತಿಗೆ ಕುಂದಿಲ್ಲ' ಎಂದು.

ಇತೀ.ಸ್ಮಭೀಮಂ ಪ್ರತಿಯೋಧನಾಯ
ಸಂಗೃಹ್ಯ ರಾಜಾ ಸ ಜರಾಸುತೋ ಬಲೀ ।
ರಾಜ್ಯೇ ನಿಜಂ ಚಾಽತ್ಮಜಮಭ್ಯಷಿಂಚತ್
ಪುರಾ ಖ್ಯಾತಂ ಪತ್ರತಾಪಖ್ಯರುದ್ರಂ ॥೧೫೨॥

ಹೀಗೆ ಆಲೋಚಿಸಿ ಬಲಿಷ್ಠನಾದ ಜರಾಸಂಧ ತನ್ನೊಡನೆ ಯುದ್ಧ ಮಾಡಲು ಭೀಮನನ್ನು ಆರಿಸಿಕೊಂಡು ರಾಜ್ಯದಲ್ಲಿ ತನ್ನ ಮಗನನ್ನು ಕೂಡಿಸಿ ಅಭಿಷೇಕ ಮಾಡಿದ. ಅವನು ಹಿಂದೆ ಪತ್ರತಾಪನೆಂಬ ಪ್ರಸಿದ್ಧ ರುದ್ರ.

ಬಲಂ ಭೀಮೇ ಮನ್ಯಮಾನೋಽಧಿಕಂ ತು
ಗದಾಶಿಕ್ಷಾಮಾತ್ಮನಿ ಚಾಧಿಕಾಂ ನೃಪಃ ।
ಭೀತೋ ನಿಯುದ್ಧೇಽಸ್ಯ ದದೌ ಗದಾಂ ಸ
ಭೀಮಾಯ ಚಾನ್ಯಾಂ ಸ್ವಯಮಗ್ರಹೀದ್ ಬಲೀ ॥೧೫೩॥

ದೈಹಿಕ ಬಲ ಭೀಮನಲ್ಲಿ ಹೆಚ್ಚಿದ್ದರೂ ಗದಾಭ್ಯಾಸ ಕೌಶಲ ತನ್ನಲ್ಲಿಯೆ ಹೆಚ್ಚೆಂದು ಭಾವಿಸಿದ್ದ ಜರಾಸಂಧ ಮುಷ್ಟಿಯುದ್ಧಕ್ಕೆ ಹೆದರಿ ಭೀಮನಿಗೆ ಒಂದು ಗದೆಯನ್ನು ಕೊಟ್ಟು ತಾನೂ ಇನ್ನೊಂದು ಗದೆಯನ್ನೆತ್ತಿಕೊಂಡ.

ತದರ್ಥಮೇವಾಶು ಗದಾಂ ಪ್ರಗೃಹ್ಯ
ಭೀಮೋ ಯಯೌ ಮಾಗಧಸಂಯುತೋ ಬಹಿಃ ।
ಪುರಾತ್ ಸಕೃಷ್ಣಾರ್ಜುನ ಏವ ತತ್ರ
ತ್ವಯಧ್ಯತಾಂ ಕೇಶವಪಾರ್ಥಯೋಃ ಪುರಃ ॥೧೫೪॥

ಅದಕ್ಕೇ ಬಲಿಷ್ಠನಾದ ಭೀಮನೂ ಗದೆಯನ್ನು ಹಿಡಿದು ಬೇಗನೆ ಜರಾಸಂಧನೊಂದಿಗೆ ಕೃಷ್ಣಾರ್ಜುನ ಸಮೇತನಾಗಿ ನಗರದಿಂದ ಹೊರಗೆ ಹೋದ. ಅಲ್ಲಿ ಇಬ್ಬರೂ ಕೃಷ್ಣಾರ್ಜುನರ ಮುಂದೆ ಯುದ್ಧ ಮಾಡಿದರು.

ವಾಚಾऽಜಯತ್ ತಂ ಪ್ರಥಮಂ ವೃಕೋದರಃ
ಶಿವಾಶ್ರಯಂ ವಿಷ್ಣುಗುಣಪ್ರಕಾಶಯಾ ।
ತತೋ ಗದಾಭ್ಯಾಮಭಿಷೇತತುಸ್ತೌ
ವಿಚಿತ್ರಮಾರ್ಗಾನಪಿ ದರ್ಶಯಂತೌ ॥೧೫೫॥

ಮೊದಲಿಗೆ ಭೀಮ ವಿಷ್ಣುಗುಣ ಪ್ರತಿಪಾದಕ ಶಾಸ್ತ್ರದಿಂದ ಶಿವಭಕ್ತನಾದ ಜರಾಸಂಧನನ್ನು ವಾದ ಯುದ್ಧದಲ್ಲಿ ಗೆದ್ದ. ಬಳಿಕ ಇಬ್ಬರೂ ಗದೆಗಳಿಂದ ನಾನಾ ವರಸೆಗಳನ್ನು ಪ್ರದರ್ಶಿಸುತ್ತ ಹೋರಾಡಿದರು.

ತಯೋರ್ಗದೇ ತೇऽಶನಿಸನ್ನಿಕಾಶೇ
ಚೂರ್ಣೀಕೃತೇ ದೇಹಮಹಾದೃಢಿಮ್ನಾ ।
ಅನ್ಯೋನ್ಯಯೋರ್ವಕ್ಷಸಿ ಪಾತಿತೇ ರುಷಾ
ಯಥಾऽಶ್ಮನೋಃ ಪಾಂಸುಪಿಂಡೌ ಸುಮುಕ್ತೌ ॥೧೫೬॥

ವಜ್ರಾಯುಧದಂತೆ ಕಠಿಣವಾದ ಗದೆಗಳನ್ನು ಅವರು ಕೋಪದಿಂದ ಪರಸ್ಪರ ಎದೆಗಳ ಮೇಲೆ ಎಸೆದಾಗ ಮೈಯ ಮಹಾ ಕಾಠಿನ್ಯದಿಂದ ಆ ಗದೆಗಳೇ ಕಲ್ಲು ಬಂಡೆಗಳ ಮೇಲೆ ಎಸೆದ ಮಣ್ಣಹೆಂಟೆಗಳಂತೆ ಪುಡಿಯಾದುವುದು.

ಸಂಚೂರ್ಣಿತಗದೌ ವೀರೌ ಮುಷ್ಟಿಭಿರ್ಜಘ್ನತುರ್ಮಿಥಃ ।
ಬ್ರಹ್ಮಾಂಡಸ್ಫೋಟಸಂಕಾಶೈರ್ಯಥಾ ಕೇಶವಕೈಟಭೌ ॥೧೫೭॥

ಗದೆಗಳು ಪುಡಿಯಾದಾಗ ಆ ವೀರರು ವಿಷ್ಣು ಕೈತಭರಂತೆ ಬ್ರಹ್ಮಾಂಡ ಸ್ಫೋಟಕಾರಿಗಳಂತಿರುವ ಮುಷ್ಟಿಗಳಿಂದ ಪರಸ್ಪರ ಹೊಡೆದರು.

ಚಚಾಲ ಪೃಥ್ವೀ ಗಿರಯಶ್ಚ ಚೂರ್ಣಿತಾಃ
ಕುಲಾಚಲಾಶ್ಚೇಲುರಲಂ ವಿಚುಕ್ಷುಭುಃ ।
ಸಮಸ್ತವಾರಾಂಪತಯಃ ಸುರಾಸುರಾ
ವಿರಿಂಚಶರ್ವಾದಯ ಆಸದನ್ನಭಃ ॥೧೫೮॥

ಆ ಮುಷ್ಟಿಯುದ್ಧದ ರಭಸಕ್ಕೆ ಭೂಮಿ ನಡುಗಿತು. ಬೆಟ್ಟಗಳು ಪುಡಿಯಾದುವು. ಕುಲಪರ್ವತಗಳೂ ಚಲಿಸಿದುವು. ಸಕಲ ಸಮುದ್ರಗಳೂ ಕ್ಷೋಭೆಗೊಂಡುವು. ಬ್ರಹ್ಮರುದ್ರಾದಿಗಳೂ ಸಕಲ ದೇವಾಸುರರೂ ಆಕಾಶದಲ್ಲಿ ನೆರೆದರು.

ಸುರಾಸ್ತು ಭೀಮಸ್ಯ ಜಯಾಭಿಕಾಂಕ್ಷಿಣ-
ಸ್ತಥಾಸುರದ್ಯಾ ಮಗಧಾಧಿಪಸ್ಯ ।
ಪಶ್ಯಂತಿ ಸರ್ವೇ ಕ್ರಮಶೋ ಬಲಂ ಸ್ವಂ
ಸಮಾದದೇ ಮಾರುತನಂದನೋಽಪಿ ॥೧೫೯॥

ದೇವತೆಗಳು ಭೀಮನ ಜಯಾಕಾಂಕ್ಷಿಗಳು ಅಸುರರು ಮುಂತಾದವರು ಜರಾಸಂಧನ ಜಯಾಕಾಂಕ್ಷಿಗಳು. ಎಲ್ಲರೂ ಯುದ್ಧವನ್ನು ವೀಕ್ಷಿಸಿದರು. ಭೀಮ ತನ್ನ ಬಲವನ್ನು ಕ್ರಮವಾಗಿ ಆದಾನದಿಂದ ವ್ಯಕ್ತಮಾಡಿಕೊಳ್ಳತೊಡಗಿದ.

ಮಾನಯಿತ್ವಾ ವರಂ ಧಾತುರ್ದಿವಸಾನ್ ದಶ ಪಂಚ ಚ ।
ವಾಸುದೇವಾಜ್ಞಯಾ ಭೀಮಃ ಶತ್ರುಂ ಹಂತುಂ ಮನೋ ದಧೇ॥೧೬೦॥

ಭೀಮ ಹದಿನೈದು ದಿನಗಳ ಕಾಲ ಯುದ್ಧಮಾಡಿ ಬ್ರಹ್ಮನ ವರಕ್ಕೆ ಮಾನ್ಯತೆ ನೀಡಿ ಕೃಷ್ಣನ ಆಜ್ಞೆಯಂತೆ ಶತ್ರುವನ್ನು ಕೊಲ್ಲಲು ಸಂಕಲ್ಪ ಮಾಡಿದ.

★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

(ಕೃಷ್ಣಜರಾಸಂಧರ ವೈರಕ್ಕೆ ನಿಮಿತ್ತ ಕಥನ ಮತ್ತು ಭೀಮಜರಾಸಂಧರ ಯುದ್ಧವರ್ಣನೆ.)

ಜನಮೇಜಯಃ

ಕಿಮರ್ಥಂ ವೈರಿಣಾವಾಸ್ತಾಮುಭೌ ತೌ ಕೃಷ್ಣಮಾಗಧೌ ।
ಕಥಂ ಚ ನಿರ್ಜಿತಃ ಸಂಖ್ಯೇ ಜರಾಸಂಧೇನ ಮಾಧವಃ ॥೧॥

ಕೃಷ್ಣ ಜರಾಸಂಧರು ಯಾವ ನಿಮಿತ್ತದಿಂದ ವೈರಿಗಳಾದರು? ಜರಾಸಂಧನು ಕೃಷ್ಣನನ್ನು ಹೇಗೆ ಯುದ್ಧದಲ್ಲಿ ಸೋಲಿಸಿದನು?

ಕಶ್ಚ ಕಂಸೋ ಮಾಗಧಸ್ಯ ಯಸ್ಯ ಹೇತೋಃ ಸ ವೈರವಾನ್ ।
ಏತದಾಚಕ್ಷ್ವ ಮೇ ಸರ್ವಂ ವೈಶಂಪಾಯನ ತತ್ತ್ವತಃ ॥೨॥

ಯಾರ ಸಲುವಾಗಿ ಕೃಷ್ಣನಿಗೂ ಜರಾಸಂಧನಿಗೂ ವೈರವುಂಟಾಯಿತೋ ಅಂತಹ ಕಂಸನಿಗೂ ಜರಾಸಂಧನಿಗೂ ಏನು ಸಂಬಂಧ? ವೈಶಂಪಾಯನರೇ! ಇದೆಲ್ಲವನ್ನೂ ನನಗೆ ಯಥಾರ್ಥವಾಗಿ ತಿಳಿಸು.

ವೈಶಂಪಾಯನಃ

ಯಾದವಾನಾಮನ್ವವಾಯೇ ವಸುದೇವೋ ಮಹಾಮತಿಃ ।
ಉದಪದ್ಯತ ವಾಷ್ಣೇಯೋ ಹ್ಯುಗ್ರಸೇನಶ್ಚ ಮಂತ್ರವಿತ್ ॥೩॥

ಯಾದವರ ಕುಲದ ಅವಾಂತರಕುಲವಾದ ವೃಷ್ಣಿಗಳ ಕುಲದಲ್ಲಿ ಮೇಧಾವಿಯಾದ ವಸುದೇವನೂ ಮಂತ್ರಜ್ಞನಾದ ಉಗ್ರಸೇನನೂ ಜನಿಸಿದರು.

ಉಗ್ರಸೇನಸ್ಯ ಕಂಸಸ್ತು ಬಭೂವ ಬಲವಾನ್ ಸುತಃ ।
ಜ್ಯೇಷ್ಠೋ ಬಹೂನಾಂ ಕೌರವ್ಯ ಸರ್ವಶಸ್ತ್ರವಿಶಾರದಃ ॥೪॥

ಉಗ್ರಸೇನನಿಗೆ ಕಂಸನೆಂಬ ಬಲಿಷ್ಠ ಮಗನು ಜನಿಸಿದನು. ಜನಮೇಜಯನೇ! ಅವನು ಉಳಿದ ಎಲ್ಲರಿಗಿಂತ ಉಗ್ರನಾದವನು ಮತ್ತು ಶಸ್ತ್ರಗಳಲ್ಲಿ ವಿಶಾರದನಾದವನು.

ಜರಾಸಂಧಸ್ಯ ದುಹಿತಾ ತಸ್ಯ ಭಾರ್ಯಾऽತಿವಿಶ್ರುತಾ ।
ರಾಜ್ಯಶುಲ್ಕೇತಿ ದತ್ತಾ ಸಾ ಜರಾಸಂಧೇನ ಧೀಮತಾ ॥೫॥

ಮೇಧಾವಿಯಾದ ಜರಾಸಂಧನು ತನ್ನ ಪ್ರಖ್ಯಾತಳಾದ ಮಗಳನ್ನು ಇವಳ ಪತಿಗೆ ರಾಜ್ಯವು ದೊರೆಯಬೇಕೆಂಬ ಶರತ್ತಿನೊಂದಿಗೆ ಕಂಸನಿಗೆ ಕೊಟ್ಟಿದ್ದನು.

ತದರ್ಥಮುಗ್ರಸೇನಸ್ಯ ಮಥುರಾಯಾಂ ಸುತಸ್ತದಾ ।
ಅಭಿಷಿಕ್ತಸ್ತದಾऽಮಾತ್ಯೈಃ ಸರ್ವೈಸ್ತೀವ್ರಪರಾಕ್ರಮಃ ॥೬॥

ಜರಾಸಂಧನಿಗೆ ಸಂತೋಷವನ್ನು ಉಂಟುಮಾಡುವ ಸಲುವಾಗಿ ಮಂತ್ರಿಗಳೆಲ್ಲರೂ ಸೇರಿ ಉಗ್ರಸೇನನ ಮಗನಾದ ಮಹಾಪರಾಕ್ರಶಾಲಿಯಾದ ಕಂಸನಿಗೆ ಮಥುರಾಪಟ್ಟಣದಲ್ಲಿ ಅಭಿಷೇಕವನ್ನು ಮಾಡಿದರು.

ಐಶ್ವರ್ಯಬಲಮತ್ತಸ್ತು ಸ ತದಾ ಬಲಮೋಹಿತಃ ।
ನಿಗೃಹ್ಯ ಪಿತರಂ ಭುಂಕ್ತೇ ತದ್ರಾಜ್ಯಂ ಮಂತ್ರಿಭಿಃ ಸಹ ॥೭॥

ಐಶ್ವರ್ಯಬಲದಿಂದ ಮತ್ತನೂ ಮೋಹಿತನೂ ಆದ ಕಂಸನು ತನ್ನ ತಂದೆಯಾದ ಉಗ್ರಸೇನನನ್ನು ಕಾರಾಗೃಹದಲ್ಲಿ ಇಟ್ಟು ಮಂತ್ರಿಗಳ ಜೊತೆಯಲ್ಲಿ ಆ ರಾಜ್ಯವನ್ನು ಭೋಗಿಸಿದನು.

ವಸುದೇವಸ್ಯ ತದ್ವಾಕ್ಯಂ ನ ಶೃಣೋತಿ ಸ ಮಂದಧೀಃ ।
ಸ ತೇನ ಸಹ ತದ್ರಾಜ್ಯಂ ಧರ್ಮತಃ ಪರ್ಯಪಾಲಯತ್ ॥೮॥

ಮಂದಮತಿಯಾದ ಕಂಸನು ತಂದೆಯಾದ ಉಗ್ರಸೇನನನ್ನು ಬಿಡುಗಡೆಮಾಡಬೇಕೆಂಬ ವಸುದೇವನ ಮಾತನ್ನು ಎಂದೂ ಕೇಳಲಿಲ್ಲ. ವಸುದೇವನ ಜೊತೆಯಲ್ಲಿ ಕಂಸನು ಮಥುರಾಪಟ್ಟಣವನ್ನು ಧರ್ಮದಿಂದ ಪಾಲಿಸಿದನು.

ಪ್ರೀತಿಮಾನ್ ಸ ತು ದೈತ್ಯೇಂದ್ರೋ ವಸುದೇವಸ್ಯ ದೇವಕೀಮ್ ।
ಉವಾಹ ಭಾರ್ಯಾಂ ಸ ತದಾ ದುಹಿತಾ ದೇವಕಸ್ಯ ಯಾ ॥೯॥

ವಸುದೇವನಲ್ಲಿ ಪ್ರೀತಿಯನ್ನು ಹೊಂದಿದ್ದ ದೈತ್ಯೇಂದ್ರನಾದ ಕಂಸನು ದೇವಕನ ಮಗಳಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ವಿವಾಹಮಾಡಿದನು.

ತಸ್ಯಾಮುದ್ವಾಹ್ಯಮಾನಾಯಾಂ ರಥೇನ ಜನಮೇಜಯ ।
ಉಪಾರುರೋಹ ವಾಷ್ಣೇಯಂ ಕಂಸೋ ಭೂಮಿಪತಿಸ್ತದಾ ॥೧೦॥

ಜನಮೇಯನೇ! ಆ ವಿವಾಹಸಂದರ್ಭದಲ್ಲಿ ರಥದಲ್ಲಿ ದೇವಕಿಯನ್ನು ಕರೆದುಕೊಂಡು ಹೋಗುವಾಗ ವಸುದೇವನ ಅನಂತರ ರಾಜನಾದ ಕಂಸನು ಆ ರಥವನ್ನು ಏರಿದನು.

ತತೋಽಂತರಿಕ್ಷೇ ವಾಗಾಸೀದ್ ದೇವದೂತಸ್ಯ ಕಸ್ಯಚಿತ್ ।
ವಸುದೇವಶ್ಚ ಶುಶ್ರಾವ ತಾಂ ವಾಚಂ ಪಾರ್ಥಿವಶ್ಚ ಸಃ ॥೧೧॥

ಆಗ ಅಂತರಿಕ್ಷದಲ್ಲಿ ಯಾವನೋ ಒಬ್ಬ ದೇವದೂತನ ಮಾತು ಕೇಳಿಬಂದಿತು. ಆ ಮಾತನ್ನು ವಸುದೇವನೂ ಮತ್ತು ಕಂಸನೂ ಕೇಳಿದರು.

ಯಾಮೇತಾಂ ಹರ್ಷಮಾಣೋಽದ್ಯ ಕಂಸೋದ್ವಹಸಿ ದೇವಕೀಮ್ ।
ಅಸ್ಯಾ ಯಶ್ಚಾಷ್ಟಮೋ ಗರ್ಭಃ ಸ ತೇ ಮೃತ್ಯುರ್ಭವಿಷ್ಯತಿ ॥೧೨॥

ಕಂಸನೇ! ಯಾವ ದೇವಕಿಯನ್ನು ನೀನು ಈದಿನ ಸಂತೋಷದಿಂದ ರಥದಲ್ಲಿ ಕರೆದುಕೊಂಡು ಹೋಗುತ್ತಿದ್ದೀಯೊ ಅವಳ ಎಂಟನೆಯ ಗರ್ಭವು ನಿನಗೆ ಮೃತ್ಯುವಾಗುವುದು.

ಸೋಽವತೀರ್ಯ ತತೋ ರಾಜಾ ಖಡ್ಗಮುದ್ಧೃತ್ಯ ನಿರ್ಮಲಮ್ ।
ಇಯೇಷ ತಸ್ಯಾ ಮೂರ್ಧಾನಂ ಛೇತ್ತುಂ ಪರಮದುರ್ಮತಿಃ ॥೧೩॥

ಆಗ ರಾಜನಾದ ಪರಮದುರ್ಮತಿಯಾದ ಕಂಸನು ರಥದಿಂದ ಇಳಿದು ಒರೆಯಿಂದ ನಿರ್ಮಲವಾದ ಖಡ್ಗವನ್ನು ಹಿರಿದು ಅವಳ ಶಿರಸ್ಸನ್ನು ಕತ್ತರಿಸಲು ಬಯಸಿದನು.

ಸ ಸಾಂತ್ವಯನ್ ತದಾ ಕಂಸಂ ಹಸನ್ ಕ್ರೋಧವಶಾನುಗಮ್ ।
ರಾಜನ್ನನುನಯಾಮಾಸ ವಸುದೇವೋ ಮಹಾಮತಿಃ ॥೧೪॥

ರಾಜನೇ! ಮೇಧಾವಿಯಾದ ವಸುದೇವನು ನಗುತ್ತಾ ಕ್ರೋಧವಶನಾದ ಕಂಸನನ್ನು ಸಮಾದಾನಪಡಿಸುತ್ತಾ ಅವನಿಗೆ ಈ ಸಮಾಧಾನದ ಮಾತುಗಳನ್ನು ಆಡಿದನು.

ಅಹಿಂಸ್ಯಾಂ ಪ್ರಮದಾಮಾಹುಃ ಸರ್ವಧರ್ಮೇಷು ಪಾರ್ಥಿವ ।
ಸ ಕಸ್ಮಾದಬಲಾಂ ನಾರೀಂ ಹಂತಾಸೀಮಾಮನಾಗಸೀಮ್ ॥೧೫॥

ರಾಜನೇ! ಎಲ್ಲಾ ಧರ್ಮಶಾಸ್ತ್ರಗಳಲ್ಲಿಯೂ ಸ್ತ್ರೀಯನ್ನು ಕೊಲ್ಲಬಾರದು ಎಂದು ಹೇಳುತ್ತಾರೆ. ನೀನು ಏಕೆ ನಿರಪರಾಧಿಯಾದ ದುರ್ಬಲಳಾದ ಈ ನಾರಿಯನ್ನು ಕೊಲ್ಲಲು ಉದ್ಯುಕ್ತನಾಗಿರುವೆ?

ಯಚ್ಚ ತೇಽತ್ರ ಭಯಂ ರಾಜನ್ ಶಕ್ಯತೇ ಬಾಧಿತುಂ ಮಯಾ ।
ಇಯಂ ಚ ಶಕ್ಯಾ ಪಾಲಯಿತುಮಯಶಸ್ಯಂ ಚ ರಕ್ಷಿತುಮ್ ॥೧೬॥

ರಾಜನೇ! ಈ ವಿಷಯದಲ್ಲಿ ನಿನಗೆ ಏನು ಭಯವುಂಟಾಗಿದೆಯೋ ಅದನ್ನು ನಾನು ನಿವಾರಿಸಲು ಸಾಧ್ಯ. ಇವಳನ್ನು ರಕ್ಷಿಸಿ ನಿನಗೆ ಅಪಕೀರ್ತಿಯಾಗದಂತೆ ಮಾಡುವುದು ನನ್ನಿಂದಸಾಧ್ಯ.

ಅಸ್ಯಾಸ್ತ್ವಮಷ್ಟಮಂ ಗರ್ಭಂ ಜಾತಮಾತ್ರಂ ಮಹೀಪತೇ ।
ವಿಧ್ವಂಸಯ ತದಾ ಪ್ರಾಪ್ತಮೇವಂ ಪರಿಹೃತಂ ಭವೇತ್ ॥೧೭॥

ರಾಜನೇ! ಇವಳ ಎಂಟನೇ ಗರ್ಭವು ಜನಿಸಿದ ತಕ್ಷಣವೇ ನೀನು ನಾಶಮಾಡು. ಆಗ ನಿನಗೆ ಉಂಟಾಗಿರುವ ಭಯವು ಪರಿಹಾರವನ್ನು ಹೊಂದುತ್ತದೆ.

ಏವಂ ಸ ರಾಜಾ ಕಥಿತೋ ವಸುದೇವೇನ ಭಾರತ ।
ತಸ್ಯ ತದ್ವಚನಂ ಚಕ್ರೇ ಶೂರಸೇನಪತಿಸ್ತದಾ ॥೧೮॥

ಜನಮೇಜಯನೇ! ಹೀಗೆ ವಸುದೇವನಿಂದ ಹೇಳಲ್ಪಟ್ಟ ಶೂರಸೇನಪತಿಯಾದ ಕಂಸನು ವಸುದೇವನ ಮಾತಿನಂತೆ ನಡೆದುಕೊಂಡನು.

ತತಸ್ತಸ್ಯಾಂ ಸಂಬಭೂವುಃ ಕುಮಾರಾಃ ಸೂರ್ಯವರ್ಚಸಃ ।
ಜಾತಾನ್ಜಾತಾಂಸ್ತು ತಾನ್ ಸರ್ವಾನ್ ಜಘಾನ ಮಧುರೇಶ್ವರಃ।
ಅಥ ತಸ್ಯಾಂ ಸಮಭವದ್ ಬಲದೇವಸ್ತು ಸಪ್ತಮಃ ॥೧೯॥

ಅನಂತರ ಅವಳಲ್ಲಿ ಸೂರ್ಯನ ಕಾಂತಿಯುಳ್ಳ ಕುಮಾರರು ಜನಿಸಿದರು. ಆ ಮಕ್ಕಳು ಹುಟ್ಟಿದಂತೆ ಮಧುರಾಪತಿಯಾದ ಕಂಸನು ಅವುಗಳನ್ನು ಸಂಹರಿಸಿದನು. ಅನಂತರ ಏಳನೆಯಬಾರಿಗೆ ದೇವಕಿಗೆ ಬಲರಾಮನ ಗರ್ಭವು ಉಂಟಾಯಿತು.

ಯಾಮ್ಯೇನ ಮಾಯಯಾ ತಂ ತು ಯಮೋ ರಾಜಾ ವಿಶಾಂಪತೇ ।
ದೇವಕ್ಯಾ ಗರ್ಭಮತುಲಂ ರೋಹಿಣ್ಯಾ ಜಠರೇऽಕ್ಷಿಪತ್ ॥೨೦॥

ರಾಜನೇ! ಸರ್ವನಿಯಾಮಕನಾದ ನಾರಾಯಣನು ಯಮದೂತರಿಗೂ ಪ್ರಭುವಾದ ದುರ್ಗಾದೇವಿಯ ಸಹಾಯದಿಂದ ದೇವಕಿಯ ಅಸದೃಶವಾದ ಗರ್ಭವನ್ನು ಅವಳ ಉದರದಿಂದ ಎಳೆದು ರೋಹಿಣಿಯ ಉದರದಲ್ಲಿ ಸ್ಥಾಪಿಸಿದನು.

ಆಕೃಷ್ಯ ಕರ್ಷಣಾತ್ ಸಮ್ಯಕ್ ಸಂಕರ್ಷಣ ಇತಿ ಸ್ಮೃತಃ ।
ಬಲಶ್ರೇಷ್ಠತಯಾ ತಸ್ಯ ಬಲದೇವ ಇತಿ ಸ್ಮೃತಃ ॥೨೧॥

ದೇವಕಿಯ ಉದರದಿಂದ ಬಲವಾಗಿ ಎಳೆಯಲ್ಪಟ್ಟುದದರಿಂದ ಅವನಿಗೆ ಸಂಕರ್ಷಣ ಎಂದು ಹೆಸರು. ಬಲಾಧಿಕನಾದುದರಿಂದ ಅವನಿಗೆ ಬಲರಾಮನೆಂದೂ ಹೆಸರು.

ಪುನಸ್ತಸ್ಯಾಂ ಸಮಭವದಪ್ಪಮೋ ಮಧುಸೂದನಃ ।
ತಸ್ಯ ಗರ್ಭಸ್ಯ ರಕ್ಷಾಂ ತು ಚಕ್ರೇ ಸೋಽಭ್ಯಧಿಕಂ ನೃಪಃ ॥೨೨॥

ಪುನಃ ದೇವಕಿಯ ಎಂಟನೆಯ ಗರ್ಭದಲ್ಲಿ ಮಧುಸೂದನನು ಸನ್ನಿಹಿತನಾದನು. ರಾಜನು ಆ ಗರ್ಭವನ್ನು (ತನಗೆ ಏನೂ ಅಪಾಯವಾಗಬಾರದು ಎಂಬ ಉದ್ದೇಶದಿಂದ) ಬಹಳ ಎಚ್ಚರಿಕೆಯಿಂದ ರಕ್ಷಿಸಿದನು.

ತತಃ ಕಾಲೇ ರಕ್ಷಣಾರ್ಥಂ ವಸುದೇವಸ್ಯ ಸಾತ್ವತಃ ।
ಉಗ್ರಃ ಪ್ರಯುಕ್ತಃ ಕಂಸೇನ ಸಚಿವಃ ಕ್ರೂರಕರ್ಮಕೃತ್ ॥೨೩॥

ಅನಂತರ ಪ್ರಸವಕಾಲವು ಸನ್ನಿಹಿಸುತ್ತಿದ್ದಂತೆ, ತನ್ನ ರಕ್ಷಣೆಗೊಸ್ಕರ ಕಂಸನು ವಸುದೇವ ಮತ್ತು ದೇವಕಿಯರನ್ನು ಗಮನಿಸುವುದಕ್ಕೆ ಕ್ರೂರಕರ್ಮಿಯಾದ ಉಗ್ರಸ್ವಭಾವದವನಾದ ಸಾತ್ವತಕುಲಕ್ಕೆ ಸೇರಿದ ಒಬ್ಬ ಮಂತ್ರಿಯನ್ನು ನೇಮಿಸಿದನು.

ಜಾತಮಾತ್ರಂ ವಾಸುದೇವಮಪಕೃಷ್ಯ ಪಿತಾ ತತಃ ।
ಉಪಜಹ್ರೇ ಪರಿಕ್ರೀತಾಂ ಸುತಾಂ ಗೋಪಸ್ಯ ಕಸ್ಯಚಿತ್ ॥೨೪॥

ಎಂಟನೆಯ ಗರ್ಭವು ಜನಿಸಿದ ಕೂಡಲೇ ತಂದೆಯಾದ ವಸುದೇವನು ಅವನನ್ನು ಅಲ್ಲಿಂದ ಕರೆದುಕೊಂಡು ಹೋಗಿ ಯಮುನೆಯ ಆಚೆಯದಡದಲ್ಲಿ ಇದ್ದ ಒಬ್ಬ ಗೋಪನ ಮಗಳನ್ನು ಕೊಂಡು ಕೊಂಡವನಂತೆ ಬದಲಾಯಿಸಿ ತಂದು ದೇವಕಿಯ ಶಯನದಲ್ಲಿ ಇಟ್ಟನು.

ಮುಮುಕ್ಷಮಾಣಸ್ತಂ ಶಬ್ದಂ ದೇವದೂತಸ್ಯ ಪಾರ್ಥಿವಃ ।
ಜಘಾನ ಕಂಸಸ್ತಾಂ ಕನ್ಯಾಂ ಪ್ರಹಸಂತೀ ಜಗಾಮ ಸಾ ।
ಆರ್ಯೇತಿ ವಾಶತೀ ಶಬ್ದಂ ತಸ್ಮಾದಾರ್ಯೇತಿ ಕೀರ್ತಿತಾ ॥೨೫॥

ದೇವದೂತನು ಇವಳ ಎಂಟನೆಯ ಗರ್ಭವು ನಿನ್ನನ್ನು ಕೊಲ್ಲುತ್ತದೆ ಎಂಬ ಮಾತಿನಿಂದ ಬಂದ ಭಯವನ್ನು ಪರಿಹಾರಮಾಡಿಕೊಳ್ಳುವುದಕ್ಕಾಗಿ ಕಂಸನು ಆ ಕನ್ಯೆಯನ್ನು ಕೊಲ್ಲುವ ಪ್ರಯತ್ನಮಾಡಿದನು. ಆ ಕನ್ಯೆಯು ನಗುತ್ತಾ ಆಕಾಶಮಾರ್ಗದಲ್ಲಿ ಹೊರಟುಹೋದಳು. ತನ್ನ ಕೈಯಿಂದ ಕಳಚಿಹೋದ ಆ ಕನ್ಯೆಯನ್ನು ನೋಡಿ ಕಂಸನು

ಇವಳು ಶಿಶುವಲ್ಲ ಆರ್ಯೆ (ದೊಡ್ಡವಳು) ಎಂದು ಹೇಳಿದನು. ಆದ್ದರಿಂದ ಅವಳಿಗೆ ಆರ್ಯೆ ಎಂದೇ ಹೆಸರಾಯಿತು.

ಏವಂ ತಂ ವಂಚಯಿತ್ವಾ ಚ ರಾಜಾನಂ ಸ ಮಹಾಮತಿಃ ।
ವಾಸುದೇವಂ ಮಹಾತ್ಮಾನಂ ವರ್ಧಯಾಮಾಸ ಗೋಕುಲೇ ॥೨೬॥

ಹೀಗೆ ಮೇಧಾವಿಯಾದ ವಸುದೇವನು ಆ ಕಂಸನನ್ನು ವಂಚಿಸಿ ತನ್ನ ಮಗನಾದ ಮಹಾನುಭಾವನಾದ ವಾಸುದೇವನನ್ನು ಗೋಕುಲದಲ್ಲಿ ಬೆಳೆಸಿದನು.

ವಾಸುದೇವೋಽಪಿ ಗೋಷ್ಠೇಷು ವವೃಧೇಽಬ್ಜಮಿವಾಂಭಸಿ ।
ಅಜ್ಞಾಯಮಾನಃ ಕಂಸೇನ ಗೂಢೋಽಗ್ನಿರಿವ ದಾರುಷು ॥೨೭॥

ವಾಸುದೇವನಾದರೂ ನೀರಿನಲ್ಲಿ ಕಮಲವು ಬೆಳೆದಂತೆ ಕಂಸನಿಗೆ ಗೊತ್ತಾಗದಂತೆ ಕಟ್ಟಿಗೆಯಲ್ಲಿ ಇರುವ ಅಗ್ನಿಯಂತೆ ಗೂಢನಾಗಿ ಗೋಶಾಲೆಗಳಲ್ಲಿ ಬೆಳೆದನು.

ವಿಪ್ರಚಕ್ರೇ ತಥಾ ಸರ್ವಾನ್ ಪ್ರಬಲಾನ್ ಮಧುಸೂದನಃ ।
ವರ್ಧಮಾನೋ ಮಹಾಬಾಹುಃ ತೇಜೋಬಲಸಮನ್ವಿತಃ ॥೨೮॥

ಮಹಾಬಾಹುವೂ ತೇಜೋಬಲಸಮನ್ವಿತನೂ ಆದ ಮಧುಸೂದನನು ಬೆಳೆಯುತ್ತಾ ಎಲ್ಲಾ ಪ್ರಬಲ ವಿರೋಧಿಗಳನ್ನೂ ವಿನಾಶಗೊಳಿಸಿದನು.

ತತಸ್ತೇ ಕ್ಲಿಶ್ಯಮಾನಾಸ್ತು ಪುಂಡರೀಕಾಕ್ಷಮಚ್ಯುತಮ್ ।
ಭಯೇನ ಕಾಮಾದಪರೇ ಗಣಶಃ ಪರ್ಯುಪಾರಯನ್ ॥೨೯॥

ಆಗ ಗೋಕುಲವಾಸಿಗಳೆಲ್ಲರೂ ಕಂಸನ ದೂತರ ಕ್ಲೇಶಕ್ಕೆ ಒಳಗಾಗಿ ಭಯದಿಂದ ಕೆಲವರು ಕಾಮಕ್ಕೆ ಒಳಗಾಗಿ ಇನ್ನೂ ಕೆಲವರು ಗುಂಪುಗುಂಪುಗಳಾಗಿ ಪುಂಡರೀಕಾಕ್ಷನಾದ ಅಚ್ಯುತನನ್ನು ಆಶ್ರಯಿಸಿದರು.

ಸ ತು ಲಬ್ಧ್ವಾ ಬಲಂ ರಾಜನುಗ್ರಸೇನಸ್ಯ ಸಮ್ಮತಃ ।
ವಸುದೇವಾತ್ಮಜಃ ಸರ್ವೈರ್ಭ್ರಾತೃಭಿಃ ಸಹಿತಂ ಪುನಃ ॥೩೦॥

ನಿರ್ಜಿತ್ಯ ಯುಧಿ ಭೋಜೇಂದ್ರಂ ಹತ್ವಾ ಕಂಸಂ ಮಹಾಬಲಃ ।
ಅಭಿಷಿಂಚತ್ತತೋ ರಾಜ್ಯ ಉಗ್ರಸೇನಂ ವಿಶಾಂಪತೇ ॥೩೧॥

ಹೀಗೆ ಬಲಿಷ್ಠನಾಗಿ ಬೆಳೆದ ಉಗ್ರಸೇನನಿಗೆ ಸಂಮ್ಮತನಾದ ವಸುದೇವನ ಸುತನಾದ ಕೃಷ್ಣನು ತನ್ನ ಅಣ್ಣನ ಜೊತೆಯಲ್ಲಿ ಹೋಗಿ ಭೋಜಪತಿಯಾದ ಕಂಸನನ್ನು ಯುದ್ಧದಲ್ಲಿ ಕೊಂದನು. ರಾಜನೇ! ಮಹಾಬಲನಾದ ಕೃಷ್ಣನು ಅನಂತರ ಉಗ್ರಸೇನನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿದನು.

ತಚ್ಛ್ರುತ್ವಾ ಸ ಜರಾಸಂಧೋ ಮಾಧವೇನ ಹತಂ ಯುಧಿ ।
ಶೂರಸೇನಾಧಿಪಂ ಚಕ್ರೇ ಕಂಸಪುತ್ರಂ ತದಾ ನೃಪ ॥೩೨॥

ಜರಾಸಂಧನು ಮಾಧವನಿಂದ ತನ್ನ ಅಳಿಯನಾದ ಕಂಸನು ಯುದ್ಧದಲ್ಲಿ ಹತನಾದನೆಂಬ ವಾರ್ತೆಯನ್ನು ಕೇಳಿ ಕಂಸನ ಪುತ್ರನನ್ನು ಶೂರಸೇನರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡಿದನು.

ಸ ಸೈನ್ಯಂ ಮಹದುತ್ಥಾಪ್ಯ ವಸುದೇವಂ ಪ್ರಗೃಹ್ಯ ಚ ।
ಅಭ್ಯಷಿಂಚತ್ ಸುತಂ ತತ್ರ ಸುತಾಯಾ ಜನಮೇಜಯ ॥೩೩॥

ಜನಮೇಜಯನೇ! ಜರಾಸಂಧನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಂದು ವಸುದೇವನನ್ನು ನಿಗ್ರಹಿಸಿ, ತನ್ನ ಮಗಳ ಮಗನನ್ನು ರಾಜ್ಯದಲ್ಲಿ ಕೂಡಿಸಿ ಅಭಿಷೇಕಮಾಡಿದನು.

ಉಗ್ರಸೇನಂ ಚ ವೃಷ್ಣೀಂಶ್ಚ ಮಹಾಬಲಸಮನ್ವಿತಃ ।
ಸ ತತ್ರ ವಿಪ್ರಕುರುತೇ ಜರಾಸಂಧಃ ಪ್ರತಾಪವಾನ್ ॥೩೪॥

ಅನಂತರ ಮಹಾಬಲಸಮನ್ವಿತನೂ ಪ್ರತಾಪಶಾಲಿಯೂ ಆದ ಜರಾಸಂಧನು ಉಗ್ರಸೇನನಿಗೂ ಉಳಿದ ವೃಷ್ಣಿಗಳಿಗೂ ಅಪಕಾರವನ್ನು ಮಾಡಿಕೊಂಡಿದ್ದಾನೆ.

ಏತದ್ವೈರಂ ಕೌರವೇಯ ಜರಾಸಂಧಸ್ಯ ಮಾಧವೇ ।
ಆಶಾಸಿತಾರ್ಥೇ ರಾಜೇಂದ್ರ ಸಂರುರೋಧ ವಿನಿರ್ಜಿತಾನ್ ॥೩೫॥

ಜನಮೇಜಯನೇ! ಇದು ಜರಾಸಂಧನಿಗೆ ಕೃಷ್ಣನಲ್ಲಿ ವೈರ ಉಂಟಾಗಲು ಕಾರಣ; ರಾಜೇಂದ್ರನೇ! ಜರಾಸಂಧನಾದರೋ ತನ್ನ ಅಭೀಷ್ಟವಾದ ಅರ್ಥವನ್ನು ಗಮನಿಸಿ ಯುದ್ಧದಲ್ಲಿ ಸೋತ ರಾಜರುಗಳನ್ನೆಲ್ಲಾ ಸೆರೆಯಲ್ಲಿಟ್ಟನು.

ಪಾರ್ಥಿವೈಸ್ತೈರ್ನೃಪತಿಭಿರ್ಯಕ್ಷ್ಯಮಾಣಃ ಸಮೃದ್ಧಿಮಾನ್ ।
ದೇವಶ್ರೇಷ್ಠಂ ಮಹಾದೇವಂ ಕೃತ್ತಿವಾಸಂ ತ್ರಿಯಂಬಕಮ್ ॥೩೬॥

ಸಮೃದ್ಧಿಯುಳ್ಳ ಅವನು ಸೆರೆಸಿಕ್ಕಿದ ಆ ರಾಜರುಗಳನ್ನು ಪಶುಗಳನ್ನಾಗಿ ಮಾಡಿ ದೇವೋತ್ತಮನೂ ಕೃತ್ತಿವಾಸನೂ ತ್ರಿನೇತ್ರನೂ ಆದ ಮಹಾದೇವನ್ನು ಕುರಿತು ಯಾಗವನ್ನು ಮಾಡಲು ಆಶಿಸಿದ್ದನು.

ಏತತ್ ಸರ್ವಂ ಯಥಾವೃತ್ತಂ ಕಥಿತಂ ಭರತರ್ಷಭ ।
ಯಥಾ ತು ಸ ಹತೋ ರಾಜಾ ಭೀಮಸೇನೇನ ತಚ್ಛೃಣು ॥೩೭॥

ಭರತರ್ಷಭನೇ! ಇದೆಲ್ಲವನ್ನೂ ಯಥಾವತ್ತಾಗಿ ತಿಳಿಸಿದ್ದೇನೆ. ಇನ್ನು ಭೀಮಸೇನನಿಂದ ಜರಾಸಂಧನು ಹೇಗೆ ಹತನಾದನು ಎಂದು ಹೇಳುತ್ತೇನೆ ಕೇಳು.

ತತಸ್ತಂ ನಿಶ್ಚಿತಾತ್ಮಾನಂ ಯುದ್ಧಾಯ ಯದುನಂದನಃ ।
ಉವಾಚ ವಾಗ್ಮೀ ರಾಜಾನಂ ಜರಾಸಂಧಮಧೋಕ್ಷಜಃ ॥೩೮॥

ಅನಂತರ ಯುದ್ಧವನ್ನೇ ಮಾಡುವುದಾಗಿ ನಿಶ್ಚಯಿಸಿದ ಜರಾಸಂಧರಾಜನನ್ನು ಕುರಿತು, ವಾಗ್ಮಿಯಾದ ಯದುನಂದನನಾದ ಅಧೋಕ್ಷಜನು ಹೀಗೆ ಮಾತನಾಡಿದನು.

ತ್ರಯಾಣಾಂ ಕೇನ ತೇ ರಾಜನ್ ಯೋದ್ಧುಂ ಹಿ ತ್ವರತೇ ಮನಃ ।
ಅಸ್ಮದನ್ಯತಮೋಽದ್ಯೇಹ ಸಜ್ಜೀಭವತು ಕೋ ಯುಧಿ ॥೩೯॥

ರಾಜನೇ! ನಮ್ಮ ಮೂವರಲ್ಲಿ ಯಾರ ಜೊತೆಯಲ್ಲಿ ಯುದ್ಧಮಾಡಲು ನಿನ್ನ ಮನಸ್ಸು ಹಾತೊರೆಯುತ್ತಿದೆ? ನಮ್ಮ ಮೂವರಲ್ಲಿ ನಿನ್ನ ಜೊತೆಯಲ್ಲಿ ಯುದ್ಧ ಮಾಡಲು ಈ ದಿನ ಯಾರು ಸನ್ನದ್ಧರಾಗಬೇಕು?

ವೈಶಂಪಾಯನಃ

ಏವಮುಕ್ತಸ್ತು ಕೃಷ್ಣೇನ ಯುದ್ಧಂ ವವ್ರೇ ಮಹಾದ್ಯುತಿಃ ।
ಜರಾಸಂಧಸ್ತತೋ ರಾಜಾ ಭೀಮಸೇನೇನ ಮಾಗಧಃ ॥೪೦॥

ಹೀಗೆ ಕೃಷ್ಣನಿಂದ ಹೇಳಲ್ಪಟ್ಟ ಮಹಾಪರಾಕ್ರಮಿಯಾದ ಮಗಧರಾಜನಾದ ಜರಾಸಂಧನು ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ವರಿಸಿದನು .

ನ ತ್ವಯಾ ಭೀರುಣಾ ಯೋತ್ಸ್ಯೇ ಯುಧಿ ವಿಕ್ಲವಚೇತಸಾ ।
ಮಧುರಾಂ ಸ್ವಪುರೀಂ ತ್ಯಕ್ತ್ವಾ ಸಮುದ್ರಂ ಶರಣಂ ಗತಃ ॥೫೧॥

ಕೃಷ್ಣ ನೀನು ಭಯದಿಂದ ಕೂಡಿದ ಮನಸ್ಸುಳ್ಳವನಾಗಿ ಜನ್ಮಭೂಮಿಯಾದ ಮಧುರೆಯನ್ನು ಬಿಟ್ಟು ಸಮುದ್ರವನ್ನು ಆಶ್ರಯಿಸಿದ್ದೀಯೆ ಆದ್ದರಿಂದ ಭೀರುವಾದ ನಿನ್ನ ಜೊತೆಯಲ್ಲಿ ಯುದ್ಧವನ್ನುಮಾಡುವುದಿಲ್ಲ.

ಅಯಂ ತು ವಯಸಾऽತುಲ್ಯೋ ನಾತಿಸತ್ತ್ವೋ ನ ಮೇ ಸಮಃ ।
ಅರ್ಜುನೋ ನೋ ಭವೇದ್ ಯೋದ್ಧಾ ಭೀಮಸ್ತುಲ್ಯಬಲೋ ಮಮ ॥

ಅರ್ಜುನನಾದರೋ ವಯಸ್ಸಿನಲ್ಲಿ ಚಿಕ್ಕವನು ಮತ್ತು ದುರ್ಬಲನಾದವನು. ಆದುದರಿಂದ ಅವನು ನನಗೆ ಸಮಾನನಾದ ಎದುರಾಳಿಯಾಗುವುದಿಲ್ಲ. ಭೀಮಸೇನನು ಮಾತ್ರ ನನಗೆ ಸಮಾನವಾದ ಬಲವುಳ್ಳವನು.

ಇತ್ಯುಕ್ತ್ವಾ ಭೀಮಸೇನಾಯ ಪ್ರದಾಯ ಮಹತೀಂ ಗದಾಮ್ ।
ದ್ವಿತೀಯಾಂ ಸ್ವಯಮಾದಾಯ ನಿರ್ಯಗಾಮ ಪುರಾದ್ ಬಹಿಃ ॥೪೩॥

ಹೀಗೆ ಮಾತನಾಡಿ ಜರಾಸಂಧನು ಭೀಮಸೇನನಿಗೆ ಒಂದು ದೊಡ್ಡ ಗದೆಯನ್ನು ಕೊಟ್ಟು ತಾನೂ ಇನ್ನೊಂದು ಗದೆಯನ್ನು ತೆದುಕೊಂಡು ಪಟ್ಟಣದಿಂದ ಹೊರಗೆ ಬಂದನು.

ಅರ್ಜುನಂ ವಾಸುದೇವಂ ಚ ವರ್ಜಯಾಮಾಸ ಮಾಗಧಃ ।
ಮತ್ವಾ ದೇವಂ ಗೋಪ ಇತಿ ಬಾಲೋऽರ್ಜುನ ಇತಿ ಸ್ಮ ಹ ॥೪೪॥

ಕೃಷ್ಣನನ್ನು ಗೋಪಾಲಕ ಎಂಬ ಕಾರಣದಿಂದಲೂ ಅರ್ಜುನನನ್ನು ಬಾಲಕ ಎಂಬ ಕಾರಣದಿಂದಲೂ ಜರಾಸಂಧನು ವರ್ಜಿಸಿದನೆಂಬುದು ಪ್ರಸಿದ್ಧವಾದುದು.

ಧಾರಯಂತಂ ಗದಾಂ ದೃಷ್ಟ್ವಾ ಬಲಂ ಶ್ರುತ್ವಾ ಚ ನಿರ್ವೃತಃ ।
ಉಪತಸ್ಥೇ ಜರಾಸಂಧಂ ಯುಯುತ್ಸುಂ ವೈ ಪುರೋಹಿತಃ ॥೪೫॥

ಗದೆಯನ್ನು ಧರಿಸಿದ ಜರಾಸಂಧನನ್ನು ಕಂಡು ಅವನ ಯುದ್ಧದ ಅಭಿಲಾಷೆಯನ್ನು ತಿಳಿದ ಅವನ ಪುರೋಹಿತನು ಅವನ ಬಲವನ್ನು ಕೇಳಿ ತೃಪ್ತಿಗೊಂಡು ಅವನ ಸಮೀಪಕ್ಕೆ ಬಂದನು.

ಕೃತಸ್ವಸ್ತ್ಯಯನೋ ರಾಜನ್ ಬ್ರಾಹ್ಮಣೇನ ಯಶಸ್ವಿನಾ ।
ಸನ್ನಹ್ಯತ ಜರಾಸಂಧಃ ಕ್ಷತ್ರಧರ್ಮಮನುವ್ರತಃ ॥೪೬॥

ರಾಜನೇ! ಯಶಸ್ವಿಯಾದ ಬ್ರಾಹ್ಮಣನಾದ ಪುರೋಹಿತನಿಂದ ಮಂಗಳಾಶೀರ್ವಾದವನ್ನು ಪಡೆದ ಜರಾಸಂಧನು ಕ್ಷತ್ರಿಯಧರ್ಮಕ್ಕೆ ಅನುಗುಣವಾಗಿ ಯುದ್ಧದ ಸಲಕರಣೆಗಳನ್ನು ಧರಿಸಿದನು.

ಅವಮುಚ್ಯ ಕಿರೀಟಂ ಸ ಕೇಶಾನ್ ಸಮನುಮೃಜ್ಯ ಚ ।
ಉಪಾತಿಷ್ಠಜ್ಜರಾಸಂಧೋ ವೇಲಾತಿಗ ಇವಾರ್ಣವಃ ॥೪೭॥

ಉವಾಚ ಚ ಮಹಾಬಾಹುರ್ಭೀಮಂ ಭೀಮಪರಾಕ್ರಮಮ್ ।
ಭೀಮ ಯೋತ್ಸ್ಯೇ ತ್ವಯಾ ಸಾರ್ಧಂ ಶ್ರೇಯಸಾ ನಿರ್ಜಿತಂ ಪರಮ್ ॥

ಜರಾಸಂಧನು ಕಿರೀಟವನ್ನು ತೆಗೆದು ತಲೆಯಕೂದಲುಗಳನ್ನು ನೇವರಿಸಿ ದಡವನ್ನುಮೀರಿದ ಸಮುದ್ರದಂತೆ ಭೀಮಸೇನನ ಬಳಿಗೆ ಬಂದು ಮಹಾಬಾಹುವಾದ ಅವನು ಭೀಮಪರಾಕ್ರವುಳ್ಳ ಭೀಮನನ್ನು ಕುರಿತು ಹೀಗೆ ಮಾತನಾಡಿದನು. ಭೀಮಸೇನನೇ! ನಿನ್ನ ಜೊತೆಯಲ್ಲಿ ಯುದ್ಧಮಾಡುತ್ತೇನೆ. ಶ್ರೇಷ್ಠನಾದವನಿಂದ ಪರಾಜಯವನ್ನು ಹೊಂದುವುದು ಶ್ಲಾಘ್ಯವಾದುದು.

ಏವಮುಕ್ತ್ವಾ ಜರಾಸಂಧೋ ಭೀಮಸೇನಮರಿಂದಮಃ ।
ಪ್ರತ್ಯುದ್ಯಯೌ ಮಹಾತೇಜಾಃ ಶಕ್ರಂ ಬಲಿರಿವಾಸುರಃ ॥೪೯॥

ಅರಿಂದಮನಾದ ಮಹಾತೇಜಸ್ವಿಯಾದ ಜರಾಸಂಧನು ಭೀಮಸೇನನನ್ನು ಕುರಿತು ಹೀಗೆ ಹೇಳಿ ಬಲಿಯು ಇಂದ್ರನ ಮೇಲೆ ಎರಗುವಂತೆ ಸನ್ನದ್ಧನಾದನು.

ತತಃ ಸಮ್ಮಂತ್ರ್ಯ ಕೃಷ್ಣೇನ ಕೃತಸ್ವಸ್ತ್ಯಯನೋ ಬಲೀ ।
ಭೀಮಸೇನೋ ಜರಾಸಂಧಮಾಸಸಾದ ಯುಯುತ್ಸಯಾ ॥೫೦॥

ಆಗ ಬಲಿಷ್ಠನಾದ ಭೀಮಸೇನನು ಕೃಷ್ಣನ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಕೃಷ್ಣನ ಅನುಗ್ರಹವನ್ನು ಪಡೆದು ಯುದ್ಧವನ್ನು ಮಾಡುವ ಇಚ್ಛೆಯಿಂದ ಜರಾಸಂಧನನ್ನು ಸಮೀಪಿಸಿದನು.

ತತಸ್ತೌ ನರಶಾರ್ದೂಲೌ ಬಾಹುಶಸ್ತ್ರೌ ಸಮೀಯತುಃ ।
ವೀರೌ ಪರಮಸಂಹೃಷ್ಟಾವನ್ಯೋನ್ಯಜಯಕಾಂಕ್ಷಿಣೌ ॥೫೧॥

ಅನಂತರ ವೀರರೂ ಪರಮಸಂತುಷ್ಟರೂ ಪರಸ್ಪರ ಜಯವನ್ನು ಅಪೇಕ್ಷಿಸುವವರೂ ಬಾಹುಶಸ್ತ್ರರೂ ಆದ ಆ ಇಬ್ಬರು ನರಶ್ರೇಷ್ಠರು ಪರಸ್ಪರವಾಗಿ ಸೆಣಸಾಡಿದರು.

ಕರಗ್ರಹಣಪೂರ್ವಂ ತು ಕೃತ್ವಾ ಪಾದಾಭಿವಂದನಮ್ ।
ಕಕ್ಷ್ಯೌ ಕಕ್ಷಾನ್ ವಿಧೂನ್ವಾನಾವಾಸ್ಫೋಟಂ ತತ್ರ ಚಕ್ರತುಃ ॥೫೨॥

ಮೊದಲು ಕರಗ್ರಹಣವನ್ನು ಮಾಡಿ ಪಾದಾಭಿವಂದನೆಯನ್ನುಮಾಡಿ ತಮ್ಮ ಪಕ್ಕೆಗಳನ್ನು ಕೊಡವಿ ಅಲ್ಲಾಡಿಸಿ ಕೈಗಳಿಂದ ಚಪ್ಪಾಳೆಯನ್ನು ಹೊಡೆದರು.

ಸ್ಕಂಧೌ ದೋರ್ಭ್ಯಾಂ ಸಮಾಹತ್ಯ ಬಲಿನೌ ಚ ಮುಹುರ್ಮುಹುಃ ।
ಅಂಗೈರಂಗಂ ಸಮಾಶ್ಲಿಷ್ಯ ಪುನರಾಸ್ಫೋಟನಂ ವಿಭೋ ॥೫೩॥

ಬಲಿಷ್ಠರಾದ ಅವರಿಬ್ಬರು ತಮ್ಮ ತಮ್ಮ ಭುಜಗಳನ್ನು ತಮ್ಮ ತೋಳುಗಳಿಂದ ಮತ್ತೆ ಮತ್ತೆ ಹೊಡೆದು ತಮ್ಮ ಅಂಗಗಳಿಂದಲೇ ತಮ್ಮ ಅಂಗಗಳನ್ನು ಆಲಿಂಗಿಸಿ ಪುನಃ ತೊಡೆತಟ್ಟುವುದು ಮುಂತಾದ ಶಬ್ದಗಳನ್ನುಮಾಡಿದರು.

ಚಿತ್ರಹಸ್ತಾದಿಕಂ ಕೃತ್ವಾ ಕಕ್ಷಾಬಂಧಂ ಚ ಚಕ್ರತುಃ ।
ಗಳಗಂಡಾಭಿಘಾತೇನ ಸಸ್ಫುಲಿಂಗೇನ ಚಾಶನಿಮ್ ॥೫೪॥

ಬಾಹುಪಾಶಾದಿಕಂ ಕೃತ್ವಾ ಪಾದಾರೋಹಶಿರಾವುಭೌ ।
ಉರೋಹಸ್ತಂ ತತಶ್ಚೈವ ಕರ್ಣಕುಂಭೌ ಪ್ರಯುಜ್ಯ ತೌ ॥೫೫॥

ಕರಸಂಪೀಡನಂ ಕೃತ್ವಾ ಗರ್ಜಂತೌ ವಾರಣಾವಿವ ।
ನರ್ದಂತೌ ಮೇಘಸಂಕಾಶೌ ಬಾಹುಪ್ರಹರಣಾವುಭೌ ॥೫೬॥

ಅವರಿಬ್ಬರೂ ಹಸ್ತಗಳಲ್ಲಿ ಬೇರೆ ಬೇರೆ ಮುದ್ರೆಗಳನ್ನು ಮಾಡಿ ಕಕ್ಷಾಬಂಧಗಳನ್ನು ಮಾಡಿ ಗಳಪ್ರದೇಶವನ್ನು ಹೊಡೆಯುವದರಿಂದ ಬೆಂಕಿಯ ಕಿಡಿಗಳುಳ್ಳ ಸಿಡಿಲಿನ ಶಬ್ದವನ್ನು ಮಾಡಿ ಬಾಹುಪಾಶ ಪಾದರೋಹ ಪುರೋಹಸ್ತ ಕರ್ಣಕುಂಭ ಮೊದಲಾದ ಸಿದ್ಧತೆಗಳನ್ನು ಮಾಡಿದರು. ಮುಷ್ಟಿಯನ್ನು ಬಿಗಿಯಾಗಿ ಹಿಡಿದು ಆನೆಗಳಂತೆ ಗರ್ಜಿಸುತ್ತಾ ಬಾಹುಗಳನ್ನು ಚಾಚಿ ಅವರಿಬ್ಬರೂ ಮೇಘದಂತೆ ಗರ್ಜಿಸಿದರು.

ತಳೇನಾಹನ್ಯಮಾನೌ ತು ಅನ್ಯೋನ್ಯಂ ಸ್ತಬ್ಧವೀಕ್ಷಣೌ ।
ಸಿಂಹಾವಿವ ಸುಸಂಕ್ರುದ್ಧಾವಾಕೃಷ್ಯಾಕೃಷ್ಯ ಯುಧ್ಯತಾಮ್ ॥೫೭॥

ಅನಂತರ ಅವರಿಬ್ಬರೂ ರೆಪ್ಪೆಯನ್ನು ಮಿಟುಕಿಸದೆ ಒಬ್ಬರನ್ನೊಬ್ಬರು ನೋಡುತ್ತಾ ತಮ್ಮ ಹಸ್ತತಳದಿಂದ ಒಬ್ಬರನ್ನೊಬ್ಬರು ಹೊಡೆಯುತ್ತಾ ಕೋಪಗೊಂಡ ಸಿಂಹಗಳಂತೆ ಒಬ್ಬರನೊಬ್ಬರು ಎಳೆದಾಡುತ್ತಾ ಯುದ್ಧಮಾಡಿದರು.

ಅಂಗೇನಾಂಗಂ ಸಮಾಪೀಡ್ಯ ಬಾಹುಭ್ಯಾಂ ಭುಜಯೋರಪಿ ।
ಆವೃತ್ಯ ಬಾಹುಭಿಶ್ಚಾಪಿ ಉದರಂ ಚ ಪ್ರಚಕ್ರತುಃ ॥೫೮॥

ಉಭೌ ಕಟ್ಯಾಂ ಸುಪಾರ್ಶ್ವೇ ತು ಭಂಜಂತೌ ತು ಸುಶಿಕ್ಷಿತೌ ।
ಅಧೋಹಸ್ತಂ ಸ್ವಕಂಠೇ ತೂರಸ್ಯೋಪರಿ ಚಾಕ್ಷಿಪನ್ ॥೫೯॥

ಸರ್ವಾತಿಕ್ರಾಂತಮರ್ಯಾದಂ ಪೃಷ್ಠಭಂಗಂ ಚ ಚಕ್ರತುಃ ।
ಸಂಪೂರ್ಣಮುಖ್ಯಾಂ ಬಾಹುಭ್ಯಾಂ ಕರ್ಣಕುಂಭಂ ಚ ಚಕ್ರತುಃ ॥೬೦॥

ಅಂಗದಿಂದ ಅಂಗವನ್ನು ಪೀಡಿಸುತ್ತಾ ಬಾಹುಗಳಿಂದ ಭುಜಗಳಿಗೆ ಪಟ್ಟು ಹಾಕುತ್ತಾ ಪುನಃ ಬಾಹುಗಳಿಂದ ಉದರಬಂಧವನ್ನು ಮಾಡುತ್ತಾ ಈ ಯುದ್ಧವನ್ನು ಮಾಡಿದರು. ಸುಶಿಕ್ಷಿತರಾದ ಅವರಿಬ್ಬರೂ ಪರಸ್ಪರವಾಗಿ ಕಟಿಪ್ರದೇಶವನ್ನೂ ಪಾರ್ಶ್ವಪ್ರದೇಶಗಳನ್ನೂ ಮುರಿಯುವ ಪ್ರಯತ್ನಮಾಡುತ್ತಾ ಕಂಠದ ಕೆಳಗೂ ಮತ್ತು ವಕ್ಷಸ್ಥಳದ ಮೇಲೆಯೂ ಹಸ್ತವನ್ನಿಟ್ಟು ಯುದ್ಧವನ್ನು ಮಾಡಿದರು. ಎಲ್ಲಾ ಕುಸ್ತಿಗಳ ನಿಯಮಕ್ಕೆ ವಿರುದ್ಧವಾಗಿ ಪೃಷ್ಠಭಂಗವನ್ನು ಮಾಡಿ ತಮ್ಮ ಬಾಹುಗಳಿಂದ ಸಂಪೂರ್ಣವಾದ ಕರ್ಣಕುಂಭಗಳನ್ನು ಮಾಡಿದರು.

ತೃಣಪೀಡಾಂ ಯಥಾಕಾಮಂ ಪೂರ್ಣಯೋಗಂ ಸಮುಷ್ಟಿಕಮ್ ।
ಏವಮಾದೀನಿ ಯುದ್ಧಾನಿ ಪ್ರಕುರ್ವಂತೌ ಪರಸ್ಪರಮ್ ॥೬೧॥

ತಮ್ಮ ಮನಸ್ಸಿಗೆ ಬಂದಂತೆ ತೃಣಪೀಡಾ ಮುಷ್ಟಿಸಹಿತವಾದ ಪೂರ್ಣಯೋಗ ಮೊದಲಾದ ಕುಸ್ತಿಯ ಪಟ್ಟುಗಳನ್ನು ಹಾಕುತ್ತಾ ಪರಸ್ಪರವಾಗಿ ಸೆಣಸಾಡಿದರು.

ತಯೋರ್ಯುದ್ಧಂ ತತೋ ದ್ರಷ್ಟುಂ ಸಮೇತಾಃ ಪುರವಾಸಿನಃ ।
ಬ್ರಾಹ್ಮಣಾ ವಣಿಜಶ್ಚೈವ ಕ್ಷತ್ರಿಯಾಶ್ಚ ಸಹಸ್ರಶಃ ॥೬೨॥

ಅವರಿಬ್ಬರ ಯುದ್ಧವನ್ನು ನೋಡಲು ಪುರವಾಸಿಗಳು ಬ್ರಾಹ್ಮಣರು ಕ್ಷತ್ರಿಯರು ಮತ್ತು ವೈಶ್ಯರು ಅಲ್ಲಿಗೆ ಸಹಸ್ರಸಂಖ್ಯೆಯಲ್ಲಿ ಬಂದರು.

ಶೂದ್ರಾಶ್ಚ ನರಶಾರ್ದೂಲ ಸ್ತ್ರೀಯೋ ವೃದ್ಧಶ್ಚ ಸರ್ವಶ।
ನಿರಂತರ ಮಭೂತ್ ತತ್ರ ಜನೌಘೈರಭಿಸಂವೃತಂ ॥೬೪॥

ಎಲೈನರಶಾರ್ದೂಲನೇ! ಶೂದ್ರರೂ ಸ್ತ್ರೀಯರು ಮತ್ತು ವೃದ್ಧರು ಎಲ್ಲ ಕಡೆಗಳಲ್ಲಿಯೂ ನೆರೆದರು. ಜನಸಮ್ಮರ್ದದಿಂದ ಕೂಡಿದ ಆ ಪ್ರದೇಶವು ಬಹಳ ನಿಬಿಡವಾಯಿತು.

ತಯೋರಥ ಭುಜಾಘಾತಾನ್ನಿಗ್ರಹಾವಗ್ರಹಾತ್ ತಥಾ ।
ಆಸೀತ್ ಸುಭೀಮಸನ್ನಾದೋ ವಜ್ರಪರ್ವತಯೋರಿವ ॥೬೫॥

ಅನಂತರ ಅವರಿಬ್ಬರ ಭುಜಾಘಾತಗಳಿಂದ ಮತ್ತು ಹಿಡಿಯುವುದು ಮತ್ತು ಬಿಡಿಸಿಕೊಳ್ಳುವುದರಿಂದ ಉಂಟಾದ ಸನ್ನಾದವು ವಜ್ರಾಯುಧ ಮತ್ತು ಪರ್ವತಗಳಿಗೆ ಸಂಘರ್ಷ ಉಂಟಾದಾಗ ಉಂಟಾಗುವ ಸಂನಾದದಂತೆ ಭಯಂಕರವಾಗಿ ಇದ್ದಿತು. ಬಾಹು ಯುದ್ಧದಲ್ಲಿ ಹೆದರಿ ಗದಾಯುದ್ಧ ಮಾಡಿದ ಎಂದು ತಾತ್ಪರ್ಯ ನಿರ್ಣಯದಲ್ಲಿದೆ.

ಉಭೌ ಪರಮಸಂಹೃಷ್ಟೌ ಬಲೇನ ಬಲಿನಾಂ ವರೌ ।
ಅನ್ಯೋನ್ಯಂ ವೈ ಕರತಳೈರ್ಯೋಧಯಾಮಾಸತುರ್ಭೃಶಮ್ ॥೬೬॥

ಬಲಿಷ್ಠರಲ್ಲಿ ಅಗ್ರಗಣ್ಯರಾದ ಅವರಿಬ್ಬರೂ ಪರಮ ಸಂತೋಷದಿಂದ ಕೂಡಿದವರಾಗಿ ತಮ್ಮ ಹಸ್ತ ತಳಗಳಿಂದ ಒಬ್ಬರನೊಬ್ಬರು ಚೆನ್ನಾಗಿ ಹೊಡೆದರು.

ಅನ್ಯೋನ್ಯಸ್ಯಾಂತರಂ ಪ್ರೇಪ್ಸೂ ಪರಸ್ಪರಜಯೈಷಿಣೌ ।
ಶಿರೋಭಿರಿವ ತೌ ಮೇಷೌ ವೃಕ್ಷೈರಿವ ನಿಶಾಚರೌ ।
ಪದೈರಿವ ಶುಭಾವಶ್ವೌ ತುಂಡಾಭ್ಯಾಂ ತಿತ್ತಿರಾವಿವ ॥೬೭॥

ತಲೆಯಿಂದ ಹೊಡೆದಾಡುವ ಟಗರುಗಳಂತೆ ಮರಗಳಿಂದ ಹೊಡೆದಾಡುವ ರಾಕ್ಷಸರಂತೆ ಪಾದಗಳಿಂದ ಹೊರಾಡುವ ಒಳ್ಳೆಯ ಕುದುರೆಗಳಂತೆ, ಕೊಕ್ಕುಗಳಿಂದ

ಹೊಡೆದಾಡುವ ತಿತ್ತಿರಿಪಕ್ಷಿಗಳಂತೆ ಅವರಿಬ್ಬರೂ ಪರಸ್ಪರ ಜಯಾಕಾಂಕ್ಷಿಗಳಾಗಿ ಪರಸ್ಪರರಂದ್ರವನ್ನು (ದುರ್ಬಲಾಂಶವನ್ನು) ಹಿಡಿಯುವ ಅಭಿಪ್ರಾಯ ಉಳ್ಳವರಾಗಿ ಯುದ್ಧವನ್ನು ಮಾಡಿದರು.

ತದ್ ಯುದ್ಧಮುತ್ಸಾರ್ಯ ಜನಂ ಭೀಮಮಾಸೀದುಪಹ್ವಯೇ॥
ಬಲಿನೋಃ ಸಂಯುಗೇ ರಾಜನ್ ವೃತ್ರವಾಸವಯೋರಿವ ॥೬೮॥

ರಾಜನೇ! ಅಲ್ಲಿ ನೆರೆದ ಜನರು ವೃತ್ರವಾಸವರಿಗೆ ಯುದ್ಧವು ನಡೆಯುವಾಗ ದೂರಸರಿದಂತೆ ಬಲಿಷ್ಠರಾದ ಅವರಿಬ್ಬರಿಗೆ ಭಯಂಕರವಾದ ಯುದ್ಧವು ನಡೆಯುತ್ತಿರುವಾಗ ದೂರಸರಿದು ನಿಂತರು.

ಆಕರ್ಷಣಂ ಪ್ರಕರ್ಷಣಮುತ್ಕರ್ಷಣನಿಕರ್ಷಣೇ ।
ವಿಕರ್ಷತಾಂ ತಥಾಽನ್ಯೋನ್ಯಂ ಜಾನುಭಿಶ್ಚ ನಿಜಘ್ನತುಃ ॥೬೯॥

ಆಕರ್ಷಣ ಪ್ರಕರ್ಷಣ ಉತ್ಕರ್ಷಣ ನಿಕರ್ಷಣ ವಿಕರ್ಷಣ ಮೊದಲಾದ ಕುಸ್ತಿಯ ಪಟ್ಟುಗಳನ್ನು ಹಾಕಿ ಅವರು ಮಂಡಿಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ತತಃ ಶಬ್ದೇನ ಮಹತಾ ಭರ್ತ್ಸಯಂತೌ ಪರಸ್ಪರಮ್ ।
ಪಾಷಾಣಸಂಘಾತನಿಭೈಃ ಪ್ರಹಾರೈರಭಿಜಘ್ನತುಃ ॥೭೦॥

ಅನಂತರ ದೊಡ್ಡ ಶಬ್ದದಿಂದ ಪರಸ್ಪರವಾಗಿ ಮೂದಲಿಸುತ್ತಾ ಪಾಷಾಣಗಳ ಸಂಘರ್ಷದಂತಿರುವ ಪ್ರಹಾರಗಳಿಂದ ಒಬ್ಬರನ್ನೊಬ್ಬರು ಹೊಡೆದರು.

ತತೋ ಭೀಮಂ ಜರಾಸಂಧಃ ಜಘಾನೋರಸಿ ಮುಷ್ಟಿನಾ ।
ಭೀಮೋಽಪಿ ತಂ ಜರಾಸಂಧಂ ವಕ್ಷಸ್ಯಭಿಜಘಾನ ಹ ॥೭೧॥

ಆಗ ಜರಾಸಂಧನು ಭೀಮನಿಗೆ ಮುಷ್ಟಿಯಿಂದ ಎದೆಯಲ್ಲಿ ಹೊಡೆದನು. ಭೀಮನು ಸಹ ತಿರುಗಿಸಿ ತನ್ನ ಮುಷ್ಟಿಯಿಂದ ಜರಾಸಂಧನಿಗೆ ಎದೆಯಲ್ಲಿ ಹೊಡೆದನು.

ವ್ಯೂಢೋರಸ್ಕೌ ದೀರ್ಘಭುಜೌ ನಿಯುದ್ಧಕುಶಲಾವುಭೌ ।
ಬಾಹುಭಿಃ ಸಮಸಜ್ಜೇತಾಮ್ ಆಯಸೈಃ ಪರಿಘೈರಿವ ॥೭೨॥

ವಿಸ್ತಾರವಾದ ವಕ್ಷಸ್ಥಳವುಳ್ಳ ಧೀರ್ಘವಾದ ಭುಜವುಳ್ಳ ಕುಸ್ತಿಯಲ್ಲಿ ಕುಶಲರಾದ ಅವರಿಬ್ಬರು ಕಬ್ಬಿಣದ ಒನಕೆಯಂತಿರುವ ತಮ್ಮ ಬಾಹುಗಳಿಂದ ಒಬ್ಬರನ್ನೊಬ್ಬರು ಹಿಡಿದು ಎಳೆದಾಡಿದರು.

ಕಾರ್ತಿಕಸ್ಯ ತು ಮಾಸಸ್ಯ ಪ್ರವೃತ್ತಂ ಪ್ರಥಮೇಽಹನಿ ।
ತದಾ ತದ್ಯುದ್ಧಮಭವದ್ ದಿನಾನಿ ದಶ ಪಂಚ ಚ ॥೭೩॥

ಕಾರ್ತಿಕಮಾಸದ ಮೊದಲನೆಯ ದಿವಸ ಪ್ರಾರಂಭವಾದ ಅವರ ಯುದ್ಧವು ಹೀಗೆ ಹದಿನೈದು ದಿನಗಳಕಾಲ ಮುಂದುವರೆಯಿತು.

ಅನಾರತಂ ದಿವಾರಾತ್ರಮವಿಶ್ರಾಂತಮವರ್ತತ ।
ಘೋರಂ ವಿಸ್ಮಾಪನತರಮಭೂತ್ ಪಂಚದಶೇಽಹನಿ ॥೭೪॥

ಹದಿನೈದು ದಿನಗಳಕಾಲ ಹಗಲೂ ರಾತ್ರಿಯು ಒಂದುಕ್ಷಣವೂ ನಿಲ್ಲಿಸದೆ ಅವಿಶ್ರಾಂತವಾಗಿ ಯುದ್ಧವು ಜರುಗಿತು. ಹದಿನೈದನೆಯ ದಿವಸ ಒಂದು ಘೋರವಾದ ಮತ್ತು ಆಶ್ಚರ್ಯಕರವಾದ ಘಟನೆಯು ನಡೆಯಿತು.

ತದ್ ಯುದ್ಧಮಾಸೀಚ್ಚ ತಯೋಃ ಸಮವೇತಂ ಮಹಾತ್ಮನೋಃ ।
ಚತುರ್ದಶ್ಯಾಂ ನಿಶಾಯಾಂ ತು ಸಂಸೃಷ್ಟೋ ಮಾಗಧಃ ಕ್ಲಮೈಃ ॥೭೫॥

ಮಹಾತ್ಮರಾದ ಅವರಿಬ್ಬರು ಹೀಗೆ ಸೆಣೆಸಿ ಯುದ್ಧಮಾಡುತ್ತಿರುವಾಗ ಹದಿನಾಲ್ಕನೆಯ ದಿನ ರಾತ್ರಿ ಜರಾಸಂಧನಿಗೆ ಶ್ರಮ ಉಂಟಾಯಿತು.

ಜರಾಸಂಧಂ ತದಾ ಕ್ಲಾಂತಂ ದೃಷ್ಟ್ವಾ ವಿದ್ವಾನ್ ಜನಾರ್ದನಃ ।
ಉವಾಚ ಭೀಮಕರ್ಮಾಣಂ ಭೀಮಂ ಸಂಬೋಧಯನ್ನಿವ ॥೭೬॥

ಜರಾಸಂಧನು ದಣಿಯುತ್ತಿರುವುದನ್ನು ನೋಡಿದ ಮೇಧಾವಿಯಾದ ಜನಾರ್ದನನು ಭಯಂಕರ ಕರ್ಮವನ್ನು ಮಾಡುವುದರಲ್ಲಿ ಸಮರ್ಥನಾದ ಭೀಮನನ್ನು ಎಚ್ಚರಿಸುವಂತೆ ಮಾತನಾಡಿದನು.

ಕ್ಲಾಂತಃ ಶತ್ರುರ್ಹಿ ಕೌಂತೇಯ ಶಕ್ಯಃ ಪೀಡಯಿತುಂ ಭೃಶಮ್ ।
ಪೀಡ್ಯಮಾನೋ ಹಿ ಕಾರ್ತ್ಸ್ನ್ಯೇನ ಜಹ್ಯಾಜ್ಜೀವಿತಮಾತ್ಮನಃ ॥೭೭॥

ಕೌಂತೇಯನೇ! ದಣಿದ ಶತ್ರುವನ್ನು ಚೆನ್ನಾಗಿ ಪೀಡಿಸುವುದು ಸುಲಭವಾಗುತ್ತದೆ. ಶತ್ರುವು ಹೀಗೆ ಚೆನ್ನಾಗಿ ಪೀಡಿಸಲ್ಪಟ್ಟರೆ ತನ್ನ ಜೀವಿತವನ್ನು ತೊರೆಯುತ್ತಾನೆ.

ತಸ್ಮಾತ್ ತ್ವಯೈವ ಕೌಂತೇಯ ಪೀಡನೀಯೋ ಜನಾಧಿಪಃ ।
ಸಮವೇತೇನ ಯುಧ್ಯಸ್ವ ಬಾಹುಭ್ಯಾಂ ಭರತರ್ಷಭ ॥೭೮॥

ಆದ್ದರಿಂದ ಭರತರ್ಷನೇ! ಕೌಂತೇಯನೇ! ಜರಾಸಂಧನನ್ನು ನೀನು ಈಗ ಚೆನ್ನಾಗಿ ಪೀಡಿಸಲೇ ಬೇಕು. ನೀನು ಅವನ ಜೊತೆಯಲ್ಲಿ ಬಾಹುಯುದ್ಧವನ್ನು ಮಾಡು.

ಏವಮುಕ್ತಃ ಸ ಕೃಷ್ಣೇನ ಪಾಂಡವಃ ಪರವೀರಹಾ ।
ಜರಾಸಂಧಸ್ಯ ತದ್ರಂಧ್ರಂ ಜ್ಞಾತ್ವಾ ಚಕ್ರೇ ವಧೇ ಮತಿಮ್ ॥೭೯॥

ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ಶತ್ರುವೀರಸಂಹಾರಕನಾದ ಪಾಂಡುಪುತ್ರನಾದ ಭೀಮಸೇನನು ಜರಾಸಂಧನ ಶ್ರಮರೂಪವಾದ ರಂಧ್ರವನ್ನು ಗಮನಿಸಿ ಅವನನ್ನು ಕೊಲ್ಲಲು ನಿರ್ಧರಿಸಿದನು.

ತತಸ್ತಮಜಿತಂ ಜೇತುಂ ಜರಾಸಂಧಂ ವೃಕೋದರಃ ।
ಸಂರಂಭಾದ್ ಬಲಿನಾಂ ಮುಖ್ಯೋ ಜಗ್ರಾಹ ಕುರುನಂದನ ॥೮೦॥

ಕುರುನಂದನನೇ! ಅನಂತರ ವೃಕೋದರನು ಇದುವರೆಗೆ ಅಜಿತನಾದ ಜರಾಸಂಧನನ್ನು ಜಯಿಸಲು ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮಸೇನನು ಸಿಟ್ಟಿನಿಂದ ಅವನನ್ನು ಬಲವಾಗಿ ಹಿಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

॥ ಜರಾಸಂಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯವು ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೨೧

ಸ ಪ್ರಣಮ್ಯ ಹೃಷೀಕೇಶಂ ಹರ್ಷಾದಾಶ್ಲಿಷ್ಯ ಫಲ್ಗುನಂ ।
ರಿಪುಂ ಜಗ್ರಾಹ ಮಕುಟೇ ವಾರಣಂ ಮೃಗರಾಡಿವ ॥೧೬೧॥

ಭೀಮ ಸಂತೋಷದಿಂದ ಕೃಷ್ಣನನ್ನು ನಮಿಸಿ ಅರ್ಜುನನನ್ನು ಆಲಿಂಗಿಸಿ ಸಿಂಹ ಆನೆಯನ್ನು ಹೇಗೋ ಹಾಗೆ ಶತ್ರುವನ್ನು ತಲೆಯಲ್ಲಿ ಹಿಡಿದ.

ಪೃಷ್ಠೇಽಸ್ಯ ಜಾನುಮಾಧಾಯ ಕೂರ್ಮದೇಶಂ ಬಭಂಜ ಹ ।
ಮೃತಿಕಾಲೇ ಪುನರ್ದೇಹಂ ವಿದದಾರ ಯಥಾ ಪುರಾ ॥೧೬೨॥

ಭೀಮ ಜರಾಸಂಧನ ಬೆನ್ನಮೇಲೆ ಮೊಣಕಾಲಿಟ್ಟು ಸೊಂಟವನ್ನು ಮುರಿದ. ಹಿಂದೆ ಹುಟ್ಟಿದಾಗ ಹೇಗಿತ್ತೋ ಹಾಗೇ ಸಾಯುವಾಗ ಇರುವಂತೆ ಶರೀರವನ್ನು ಎರಡು ಭಾಗವಾಗಿ ಸೀಳಿದ.

ಮರ್ಮಣ್ಯೇವ ನ ಹಂತವ್ಯೋ ಮಯಾಯಮಿತಿ ಮಾರುತಿಃ ।
ಸ್ವಪೌರುಷಪ್ರಕಾಶಾಯ ಬಭಂಜೈನಮಮರ್ಮಣಿ ॥೧೬೩॥

ನಾನು ಈತನನ್ನು ಮರ್ಮಸ್ಥಳದಲ್ಲಿ ಹೊಡೆಯಬಾರದೆಂದು ಭೀಮ ತನ್ನ ಪೌರುಷವನ್ನು ಮೆರೆಸುವುದಕ್ಕಾಗಿ ಮರ್ಮವಲ್ಲದ ಸ್ಥಾನದಲ್ಲಿಯೆ ಅವನನ್ನು ಮುರಿದ.

ಭಜ್ಯಮಾನೇ ಶರೀರೇಽಸ್ಯ ಬ್ರಹ್ಮಾಂಡಸ್ಫೋಟಸನ್ನಿಭಃ ।
ಬಭೂವ ರಾವೋ ಯೇನೈವ ತ್ರಸ್ತಮೇತಜ್ಜಗತ್ತ್ರಯಂ ॥೧೬೪॥

ಜರಾಸಂಧನ ಶರೀರ ಮುರಿದಾಗ ಬ್ರಹ್ಮಾಂಡ ಸ್ಫೋಟಕದಂಥ ಶಬ್ದ ಉಂಟಾಯಿತು. ಅದರಿಂದ ಮೂರ್ಲೋಕ ನಡುಗಿತು.

ನಿಹತ್ಯ ಕೃಷ್ಣಸ್ಯ ರಿಪುಂ ಸ ಭೀಮಃ
ಸಮರ್ಪಯಾಮಾಸ ತದರ್ಚನಂ ಹರೇಃ ।
ಕೃತ್ವಾಂ ಹಿ ಭೀಮೇನ ಸಮರ್ಚನಾಂ ತಾಂ
ಸಮಕ್ಷಮಾದಾತು ಮಿಹಾಗತೋ ಹ್ಯಜಃ ॥೧೬೫॥

ಕೃಷ್ಣನ ಶತ್ರುವನ್ನು ಭೀಮ ಕೊಂದು ಆ ಆರಾಧನೆಯನ್ನು ಕೃಷ್ಣನಿಗೆ ಅರ್ಪಿಸಿದ. ಭೀಮ ಮಾಡುವ ಆ ಆರಾಧನೆಯನ್ನು ಪ್ರತ್ಯಕ್ಷ ಸ್ವೀಕರಿಸುವುದಕ್ಕಾಗಿಯೇ ಅಲ್ಲಿಗೆ ಕೃಷ್ಣ ಬಂದಿದ್ದ.

ಸ್ವೀಕೃತ್ಯ ಪೂಜಾಂ ಚ ವೃಕೋದರಸ್ಯ
ದೃಢಂ ಸಮಾಶ್ಲಿಷ್ಯ ಚ ತಂ ಜನಾರ್ದನಃ ।
ಪ್ರೀತೋ ನಿಶಾಂತಂ ಪುನರೇವ ಕೃಷ್ಣಂ
ನನಾಮ ಭೀಮಃ ಪ್ರಣತೋಽರ್ಜುನೇನ ॥೧೬೬॥

ಭೀಮ ಮಾಡಿದ ಆ ಆರಾಧನೆಯನ್ನು ಶ್ರೀಕೃಷ್ಣ ಸ್ವೀಕರಿಸಿ ಅವನನ್ನು ಗಾಢವಾಗಿ ಆಲಿಂಗಿಸಿ ಬಲು ಸಂತುಷ್ಟನಾದ. ಅರ್ಜುನನೂ ಸಂತುಷ್ಟನಾಗಿ ಭೀಮನನ್ನು ನಮಿಸಿದ.. ಭೀಮ ಶ್ರೀಕೃಷ್ಣನನ್ನು ನಮಿಸಿದ.

ಜಗ್ಮುಃ ಸುರಾಶ್ಚಾತಿತರಾಂ ಪ್ರಹೃಷ್ಟಾ
ಬ್ರಹ್ಮಾದಯೋ ದೀನತರಾಶ್ಚ ದೈತ್ಯಾಃ ।
ಬಲಾದುಮೇಶಸ್ಯ ವರೇ ಪ್ರಭಗ್ನೇ
ವೃಕೋದರೇಣಾಚ್ಯುತಸಂಶ್ರಯೇಣ ॥೧೬೭॥

ಶ್ರೀಕೃಷ್ಣನನ್ನಾಶ್ರಯಿಸಿದ್ದ ಭೀಮ ಹೀಗೆ ತನ್ನ ಬಲದಿಂದ ಶಿವನ ವರವನ್ನು ಭಂಗಗೊಳಿಸಿದಾಗ ಬ್ರಹ್ಮಾದಿ ದೇವತೆಗಳು ಬಹಳ ಸಂತುಷ್ಟರಾಗಿ ಹೋದರು. ದೈತ್ಯರು ಬಹಳ ದುಃಖಿತರಾದರು.

ಸುತೋ ಯಯೌ ಶರಣಂ ತಾನ್ ರಮೇಶ-
ಭೀಮಾರ್ಜುನಾನ್ ಸಹದೇವೋಽಸ್ಯ ಧೀಮಾನ್ ।
ರಥಂ ಸ್ವಸಾರಂ ಚ ದದೌ ಸ ಮಾರುತೇ-
ರ್ನನಾಮ ಕೃಷ್ಣಂ ಪರಯೈವ ಭಕ್ತ್ಯಾ ॥೧೬೮॥

ಜರಾಸಂಧನ ಮಗನಾದ ಸಹದೇವ ಬುದ್ಧಿಯುಳ್ಳವ. ಅವನು ಶ್ರೀಕೃಷ್ಣ ಭೀಮ ಅರ್ಜುನರನ್ನು ಮೊರೆಹೊಕ್ಕ. ಭೀಮನಿಗೆ ತನ್ನ ತಂಗಿಯನ್ನೂ ರಥವನ್ನೂ ಒಟ್ಟ. ಪರಮಭಕ್ತಿಯಿಂದ ಶ್ರೀಕೃಷ್ಣನನ್ನು ನಮಿಸಿದ.

ರಥೋ ಹ್ಯಸೌ ವಸುನಾ ವಾಸುದೇವಾತ್
ಶಕ್ರಾಂತರಾಪ್ತೋ ವಸುವಂಶಜತ್ವಾತ್ ।
ಜರಾಸುತಸ್ಯಾಸ ವೃಕೋದರಸ್ತಂ
ಹರೇ ರಥಂ ಪ್ರಾರ್ಪಯಾಮಾಸ ತಸ್ಮೈ ॥೧೬೯॥

ಈ ರಥ ಹಿಂದೆ ಶ್ರೀಹರಿ ದೇವೇಂದ್ರನ ಮೂಲಕ ವಸುಚಕ್ರವರ್ತಿಗೆ ನೀಡಿದ್ದ ರಥವಾಗಿತ್ತು. ಜರಾಸಂಧ ವಸುಚಕ್ರವರ್ತಿಯ ವಂಶದವನಾದ್ದರಿಂದ ಅವನ ವಶಕ್ಕೆ ಈ ರಥ ಬಂದಿತ್ತು. ಹರಿಯ ಈ ರಥವನ್ನು ಭೀಮ ಕೃಷ್ಣನಿಗೇ ಅರ್ಪಿಸಿದ.

ಕೃಷ್ಣೋಽಸ್ಮರದ್ ಗರುಡಂ ಸ ಧ್ವಜೇಽಭೂತ್
ರಥಂ ಕೃಷ್ಣೋಽಥಾರುಹತ್ ಪಾಂಡವಾಭ್ಯಾಂ ।
ಭೀಮಃ ಕನ್ಯಾಂ ಸಹದೇವಸ್ಯ ಹೇತೋಃ
ಸಮಗ್ರಹೀದನುಜಸ್ಯಾತ್ಮನಃ ಸಃ ॥೧೭೦॥

ಶ್ರೀಕೃಷ್ಣ ಗರುಡನನ್ನು ಸ್ಮರಿಸಿದ. ಒಡನೆ ಗರುಡ ಧ್ವಜದಲ್ಲಿ ಬಂದು ಕುಳಿತ. ಬಳಿಕ ಭೀಮಾರ್ಜುನರೊಡನೆ ಶ್ರೀಕೃಷ್ಣ ರಥವೇರಿದ. ಭೀಮ ಕನ್ಯೆಯನ್ನು ತಮ್ಮನಾದ ಸಹದೇವನಿಗಾಗಿ ಸ್ವೀಕರಿಸಿದ.

ನಕುಲಸ್ಯಾಽದಾನ್ಮದ್ರರಾಜೋ ಹಿ ಪೂರ್ವಂ
ಸ್ವೀಯಾಂ ಕನ್ಯಾಂ ಸಾ ತಥೈಷಾಪ್ಯುಷಾ ಹಿ ।
ಏಕಾ ಪೂರ್ವಂ ತೇ ಅಶ್ವಿನೋಶ್ಚೈವ ಭಾರ್ಯಾ
ಯಯೌ ರೇಮಾತೇ ಯದುಷಾ ಅಶ್ವಿಭಾರ್ಯಾ ॥೧೭೧॥

ನಕುಲನಿಗೆ ಪೂರ್ವದಲ್ಲಿಯೆ ಮದ್ರರಾಜ ತನ್ನ ಮಗಳನ್ನು ಮದುವೆ ಮಾಡಿಕೊಟ್ಟಿದ್ದ. ಅವಳೂ ಈ ಜರಾಸಂಧನ ಮಗಳೂ ಒಬ್ಬಳೇ, ಹಿಂದೆಯೂ ಅಶ್ವಿನೀ ದೇವತೆಗಳ ಹೆಂಡತಿಯಾಗಿದ್ದ ಉಷೆಯೆ. ಅವರಿಬ್ಬರೊಡನೆ ನಕುಲ ಸಹದೇವರು ರಮಿಸಿದರು. ಅನಿರುದ್ಧ ಪತ್ನಿ ಉಷೆ ಬೇರೆ. ಅಶ್ವಿನೀದೇವತೆಗಳ ಪತ್ನಿ ಉಷಃಕಾಲದ ಅಭಿಮಾನಿನಿ ಉಷಸ್.

ತತಃ ಕೃಷ್ಣಾಯಾಮಗ್ರಜಭ್ರಾತೃಭಾರ್ಯಾ
ವೃತ್ತಿಂ ಹಿ ತೌ ಚಕ್ರತುರ್ಮಾದ್ರಿಪುತ್ರೌ ।
ಜರಾಸುತಸ್ಯಾತ್ಮಜಃ ಕೇಶವಾದೀನ್
ರತ್ನೈಃ ಸಮಭ್ಯರ್ಚ್ಯ ಯಯಾವನುಜ್ಞಯಾ ॥೧೭೨॥

ಎರಡನೆ ವಿವಾಹವಾದ ಬಳಿಕ ನಕುಲ ಸಹದೇವರು ದ್ರೌಪದಿಯನ್ನು ಅತ್ತಿಗೆ ಎಂದು ಪೂಜ್ಯ ಭಾವನೆಯಿಂದಲೆ ಕಾಣಲು ತೊಡಗಿದರು. ಜರಾಸಂಧ ಪುತ್ರ ಸಹದೇವ ಶ್ರೀಕೃಷ್ಣ ಭೀಮಾರ್ಜುನರನ್ನು ರತ್ನಗಳಿಂದ ಸತ್ಕರಿಸಿ ಅನುಜ್ಞೆ ಪಡೆದು ತನ್ನ ಅರಮನೆಗೆ ತೆರಳಿದ.

ತದಾಜ್ಞಯಾ ಪಿತೃಕಾರ್ಯಾಣಿಕೃತ್ವಾ
ತದಾಜ್ಞಯೈವಾಮುಚತ್ ತಾನ್ ನೃಪಾಂಶ್ಚ ।
ತೈಃ ಸಂಸ್ತುತಃ ಕೇಶವೋ ಭೀಮ ಪಾರ್ಥ-
ಯುಕ್ತೋ ಯಯೌ ಭಕ್ತಿನಮ್ರೈರ್ಯಥಾವತ್ ॥೧೭೩॥

ಸಹದೇವ ಶ್ರೀಕೃಷ್ಣ ಭೀಮಾರ್ಜುನರ ಆಜ್ಞೆಯಿಂದ ಪಿತೃಕಾರ್ಯವನ್ನು ನಡೆಸಿ ಅವರ ಆಜ್ಞೆಯಿಂದಲೆ ರಾಜರುಗಳನ್ನು ಬಂಧಮುಕ್ತರನ್ನಾಗಿ ಮಾಡಿದ. ಭಕ್ತಿ ನಮ್ರರಾದ ಆ ರಾಜರುಗಳಿಂದ ಶ್ರೀಕೃಷ್ಣ ಅವರ ಯೋಗ್ಯತಾನುಸಾರ ಸ್ತುತಿಸಲ್ಪಟ್ಟ ಭೀಮಾರ್ಜುನರಿಂದೊಡಗೂಡಿ ಹೊರಟ.

ಸಂಭಾವಿತಾಸ್ತೇ ಸಹದೇವೇನ ಸಮ್ಯಕ್
ಪ್ರಶಸ್ಯ ಕೃಷ್ಣಂ ಭೀಮಸೇನಂ ಚ ಸರ್ವೇ ।
ಯಯುರ್ಗೃಹಾನ್ ಸ್ವಾನಪತತ್‌ಕೇಶವದ್ವಿಟ್
ಜರಾಸುತೋಽಂಧೇ ತಮಸಿ ಕ್ರಮೇಣ ॥೧೭೪॥

ಸಹದೇವನಿಂದ ಸತ್ಕೃತರಾದ ಆ ರಾಜರೆಲ್ಲರೂ ಕೃಷ್ಣನನ್ನೂ ಭೀಮನನ್ನೂ ಚೆನ್ನಾಗಿ ಸ್ತುತಿಸಿ ತಮ್ಮ ಮನೆಗಳಿಗೆ ಹೊರಟು ಹೋದರು. ಕೃಷ್ಣದ್ವೇಷಿಯಾದ ಜರಾಸಂಧ ಅಸಿಪತ್ರಾದಿ ಅನೇಕ ನರಕಗಳನ್ನು ಅನುಭವಿಸಿ ಕ್ರಮವಾಗಿ ಅಂಧಂತಮಸ್ಸಿನಲ್ಲಿ ಬಿದ್ದ.

ಕೃಷ್ಣಶ್ಚ ಪಾರ್ಥೌ ಚ ತಥೈಕಯಾನಂ
ಸಮಾಸ್ಥಿತಾ ಧರ್ಮಜಮಭ್ಯಗಚ್ಛನ್ ।
ತೇಷಾಂ ಶಂಖಧ್ವನಿಸಂಬೋಧಿತಾತ್ಮಾ
ರಾಜಾ ಪ್ರೀತಶ್ಚಾತಿತರಾಂ ಬಭೂವ ॥೧೭೫॥

ಶ್ರೀಕೃಷ್ಣನೂ ಭೀಮಾರ್ಜುನರೂ ಒಂದೇ ರಥವನ್ನೇರಿ ಧರ್ಮರಾಜನ ಬಳಿಗೆ ಹೋದರು. ಅವರ ಶಂಖಧ್ವನಿಯಿಂದಲೆ ಅವರು ಗೆದ್ದು ಬಂದರೆಂದು ತಿಳಿದು ಧರ್ಮರಾಜ ಬಹಳ ಸಂತುಷ್ಟನಾದ.

★ ★ ★ ★

ಇಪ್ಪತ್ನಾಲ್ಕನೆಯ ಅಧ್ಯಾಯ

(ಜರಾಸಂಧವಧೆ)

ವೈಶಂಪಾಯನಃ

ಭೀಮಸೇನಸ್ತದಾ ಕೃಷ್ಣಮುವಾಚ ಯದುನಂದನಮ್ ।
ಬುದ್ಧಿಮಾಸ್ಥಾಯ ವಿಪುಲಾಂ ಜರಾಸಂಧಜಿಘಾಂಸಯಾ ॥೧॥

ಆಗ ಭೀಮಸೇನನು ವಿಪುಲವಾದ ಬುದ್ಧಿಯನ್ನು ಹೊಂದಿದವನಾಗಿ ಜರಾಸಂಧನನ್ನು ಕೊಲ್ಲುವ ಅಭಿಪ್ರಾಯದಿಂದ ಯದುನಂದನನಾದ ಕೃಷ್ಣನನ್ನು ಕುರಿತು ಮಾತನಾಡಿದನು.

ಅಯಂ ಪಾಪೋ ಮಯಾ ಕೃಷ್ಣ ಯುಕ್ತಃ ಸ್ಯಾನ್ನಾನುರೋಧಿತುಮ್ ।
ಪ್ರಾಯೇಣ ಯದುಶಾರ್ದೂಲ ಬಾಂಧವಕ್ಷಯಕೃತ್ ತವ ॥೨॥

ಕೃಷ್ಣನೇ! ಇವನು ಹೆಚ್ಚಾಗಿ ನಿನ್ನ ಬಾಂಧವರನ್ನು ಸಂಹಾರಮಾಡಿದವನು. ಯದುಶಾರ್ದೂಲನೇ! ನಾನು ಈ ಪಾಪಿಯನ್ನು ಅನುಸರಿಸಿ ಯುದ್ಧವನ್ನು ಮಾಡುವುದು ಸರಿಯಲ್ಲ.

ಏವಮುಕ್ತಸ್ತದಾ ಕೃಷ್ಣಃ ಪ್ರತ್ಯುವಾಚ ವೃಕೋದರಮ್ ।
ತ್ವರಯಾ ಪುರುಷವ್ಯಾಘ್ರೋ ಜರಾಸಂಧವಧೇಪ್ಸಯಾ ॥೩॥

ಈ ಮಾತುಗಳನ್ನು ಕೇಳಿದ ಪುರುಷವ್ಯಾಘ್ರನಾದ ಕೃಷ್ಣನು ಶೀಘ್ರವಾಗಿ ಜರಾಸಂಧನವಧೆಯನ್ನು ಸಾಧಿಸಬೇಕೆಂಬ ಇಚ್ಛೆಯಿಂದ ವೃಕೋದರನನ್ನು ಕುರಿತು ಮಾತನಾಡಿದನು.

ಯತ್ತೇ ದೈವಂ ಪರಂ ಸತ್ತ್ವಂ ಪಿತುಸ್ತೇ ಮಾತರಿಶ್ವನಃ ।
ಬಲಂ ಭೀಮ ಜರಾಸಂಧೇ ದರ್ಶಯಸ್ವ ತದದ್ಯ ನಃ ॥೪॥

ಭೀಮಸೇನನೇ! ನಿನ್ನ ತಂದೆಯಾದ ವಾಯುದೇವನ ದೈವಬಲವೇನಿದೆಯೋ ಅದನ್ನು ಈ ದಿನ ಜರಾಸಂಧನಲ್ಲಿ ತೋರಿಸು.

ತವೈಷ ವಧ್ಯೋ ದುರ್ಬುದ್ಧಿರ್ಜರಾಸಂಧೋ ಮಹಾಬಲಃ ।
ಇತ್ಯಂತರಿಕ್ಷೇ ತ್ವಶ್ರೌಷಂ ಯದಾ ವಾಯುರಪೋಹ್ಯತೇ ॥೫॥

ಗೋಮಂತೇ ಪರ್ವತಶ್ರೇಷ್ಠೇ ಯೇನೈವ ಪರಿಮೋಕ್ಷಿತಃ ।
ಬಲದೇವಬಲಂ ಪ್ರಾಪ್ಯ ಕೋऽನ್ಯೋ ಜೀವೇತ ಮಾಗಧಾತ್ ॥೬॥

ಮಹಾಬಲನಾದ ದುರ್ಬುದ್ಧಿಯಾದ ಜರಾಸಂಧನು ನಿನ್ನಿಂದಲೇ ಕೊಲ್ಲಲ್ಪಡಬೇಕು ಎಂಬ ಅಶರೀರವಾಣಿಯನ್ನು ವಾಯುವೇಗವು ಕಡಿಮೆಯಾದಾಗ ನಾನು ಅಂತರಿಕ್ಷದಲ್ಲಿ ಕೇಳುತ್ತಿದ್ದೇನೆ. ಆ ಅಶರೀರವಾಣಿಯಿಂದಲೇ ಗೋಮಂತಪರ್ವತದಲ್ಲಿ ಬಲರಾಮನಿಂದ ಜರಾಸಂಧನು ಬಿಡುಗಡೆಯನ್ನು ಹೊಂದಿದನು. ಇಲ್ಲದಿದ್ದರೆ ಜರಾಸಂಧನನ್ನು ಬಿಟ್ಟು ಬೇರೆ ಯಾರು ತಾನೆ ಬಲರಾಮನ ಬಲಕ್ಕೆ ವಶರಾಗಿ ಜೀವಿಸಲು ಸಾಧ್ಯ ?

ತದಸ್ಯ ಮೃತ್ಯುರ್ವಿಹಿತಃ ತ್ವದೃತೇ ನ ಮಹಾಬಲ ।
ವಾಯುಂ ಚಿಂತ್ಯ ಮಹಾಬಾಹೋ ಜಹೀಮಂ ಮಗಧಾಧಿಪಮ್ ॥೭॥

ಮಹಾಬಲನೇ! ಇವನಿಗೆ ನಿನ್ನನ್ನು ಬಿಟ್ಟು ಬೇರೆಯಾರಿಂದಲೂ ಮರಣವು ವಿಹಿತವಾಗಿಲ್ಲ. ಮಹಾಬಾಹುವೇ ವಾಯುವನ್ನು ಚಿಂತಿಸಿ ಈ ಮಗಧಾಧಿಪನನ್ನು ಸಂಹರಿಸು.

ಏವಮುಕ್ತಸ್ತದಾ ಭೀಮೋ ಮನಸಾ ಚಿಂತ್ಯ ಮಾರುತಮ್ ।
ಜನಾರ್ದನಂ ನಮಸ್ಕೃತ್ಯ ಪರಿಷ್ವಜ್ಯ ಚ ಫಲ್ಗುನಮ್ ॥೮॥

ಕೃಷ್ಣನಿಂದ ಈ ಮಾತುಗಳನ್ನು ಕೇಳಿದ ಭೀಮನು ಮನಸ್ಸಿನಲ್ಲಿ ವಾಯುದೇವನನ್ನು ಸ್ಮರಿಸಿ ಕೃಷ್ಣನನ್ನು ನಮಸ್ಕರಿಸಿ ಅರ್ಜುನನನ್ನು ಆಲಿಂಗಿಸಿದನು.

ಪ್ರಭಂಜನಬಲಾವಿಷ್ಟೋ ಜರಾಸಂಧಮರಿಂದಮಃ ।
ಉತ್ಕ್ಷಿಪ್ಯಾಭ್ರಾಮಯದ್ ರಾಜನ್ ಬಲವಂತಂ ಮಹಾಬಲಃ ॥೯॥

ರಾಜನೇ! ಅರಿಂದಮನಾದ ಮಹಾಬಲವುಳ್ಳ ಭೀಮಸೇನನು ವಾಯುದೇವನ ಬಲದಿಂದ ಕೂಡಿದವನಾಗಿ ಬಲಿಷ್ಠನಾದ ಜರಾಸಂಧನನ್ನು ಮೇಲಕ್ಕೆತ್ತಿ ತಿರುಗಿಸಿದನು.

ಭ್ರಾಮಯಿತ್ವಾ ಶತಗುಣಂ ಜಾನುಭ್ಯಾಂ ಭರತರ್ಷಭ ।
ಬಭಂಜ ಪೃಷ್ಠೇ ಸಂಕ್ಷಿಪ್ಯ ನಿಷ್ಪಿಷ್ಯ ವಿನನಾದ ಚ ॥೧೦॥

ಭರತರ್ಷಭನೇ! ನೂರುಸಲ ತಿರುಗಿಸಿ ಜರಾಸಂಧನನ್ನು ನೆಲಕ್ಕೆ ಅಪ್ಪಳಿಸಿ ಅವನ ಬೆನ್ನಿನ ಕೆಳಭಾಗದಲ್ಲಿ ಮಂಡಿಗಳನ್ನು ಇಟ್ಟು ಅವನನ್ನು ಹಿಮ್ಮುಖವಾಗಿ ಮುರಿದು ನಿಷ್ಪೇಷವನ್ನು ಮಾಡಿ (ಒರೆಸಿ) ಗರ್ಜಿಸಿದನು.

ಪ್ರಸ್ಫಾಲ್ಯ ಪಾದೌ ಭೂಮೌ ಚ ಜಾನುನಾऽऽಕ್ರಮ್ಯ ಸತ್ವರಃ ।
ಸಂಧಿಂ ವಿಶ್ಲೇಷಯಾಮಾಸ ಸತಟಿದ್ಧ್ವನಿಸ್ವನಮ್ ।
ಮಧ್ಯೇ ವಿದಾರಯಾಮಾಸ ಕರ್ತವ್ಯಮುಪಶಸ್ಯ ಚ ॥೧೧॥

ಭೂಮಿಯಮೇಲಿದ್ದ ಅವನ ಎರಡುಪಾದಗಳನ್ನು ಅಗಲಿಸಿ ಶೀಘ್ರವಾಗಿ ಮಂಡಿಯನ್ನು ಊರಿ ಅವನ ಸಂಧಿಗಳನ್ನು ಬಿಡಿಸಿ ಸಮೀಪದಲ್ಲಿ ಇದ್ದ ಕೃಷ್ಣಾರ್ಜುನರನ್ನು ಪ್ರಶಂಸೆಮಾಡಿ ಇದು ತನಗೆ ಯೋಗ್ಯವಾದ ಕರ್ಮವೆಂದು ತಿಳಿದು ಸಿಡಿಲಿನಿಂದ ಕೂಡಿದ ಮೋಡದ ಧ್ವನಿಯು ಬರುತ್ತಿರುವಂತೆ ಅವನನ್ನು ಮಧ್ಯದಲ್ಲಿ ಸೀಳಿಹಾಕಿದನು.

ತಸ್ಯ ನಿಷ್ಪಿಷ್ಯಮಾಣಸ್ಯ ಪಾಂಡವಸ್ಯ ಚ ಗರ್ಜತಃ ।
ಅಭವತ್ ತುಮುಲೋ ನಾದಃ ಸರ್ವಪ್ರಾಣಿಭಯಂಕರಃ ॥೧೨॥

ಗರ್ಜಿಸುವ ಪಾಂಡುಪುತ್ರನಾದ ಭೀಮಸೇನನಿಂದ ಒರೆಸಲ್ಪಡುವಾಗ ಉಂಟಾದ ಭೀಮ ಮತ್ತು ಜರಾಸಂಧರ ತುಮುಲವಾದ ನಾದವು ಎಲ್ಲಾ ಪ್ರಾಣಿಗಳಿಗೂ ಭಯವನ್ನು ಉಂಟುಮಾಡುವಂತಹದಾಗಿದ್ದಿತು.

ವಿತ್ರೇಸುರ್ಮಾಗಧಾಃ ಸರ್ವೇ ಸ್ತ್ರೀಣಾಂ ಗರ್ಭಾಶ್ಚ ಸುಸ್ರುವುಃ ।

ಭೀಮಸೇನ ಜರಾಸಂಧರ ಮಹಾನಾದದಿಂದ ಮಗಧದೇಶದ ಪ್ರಜೆಗಳೆಲ್ಲರೂ ಹೆದರಿ ನಡುಗಿದರು. ಸ್ತ್ರೀಯರಿಗೆ ಗರ್ಭಸ್ರಾವವಾಯಿತು.

ಭೀಮಸೇನಸ್ಯ ನಾದೇನ ಜರಾಸಂಧಸ್ಯ ಚೈವ ಹ ।
ಕಿನ್ನುಸ್ವಿದ್ದಿಮವಾನ್ ಭಿನ್ನಃ ಕಿನ್ನುಸ್ವಿದ್ ದೀರ್ಯತೇ ಮಹೀ ।
ಇತಿ ಸ್ಮ ಮಾಗಧಾ ಜಲ್ಪನ್ ಭೀಮಸೇನಸ್ಯ ಗರ್ಜನಾತ್ ॥೧೩॥

ಭೀಮಸೇನನ ಗರ್ಜನೆಗಳನ್ನು ಕೇಳಿದ ಮಗಧದೇಶದ ಜನರು ಇದೇನು ಹಿಮಾಲಯದ ಪರ್ವತವು ಒಡೆಯುತ್ತಿದೆಯೋ ಅಥವಾ ಭೂಮಿಯು ಬಿರಿಯುತ್ತಿದೆಯೋ ಎಂದು ಮಾತನಾಡಿಕೊಂಡರು.

ತತೋ ರಾಜ್ಞಃ ಕುಲದ್ವಾರಿ ಪ್ರಸುಪ್ತಮಿವ ತಂ ನೃಪಮ್ ।
ರಾತ್ರೌ ಪರಾಸುಮುತ್ಸೃಜ್ಯ ನಿಶ್ಚಕ್ರಮುರರಿಂದಮಾಃ ॥೧೪॥

ಅನಂತರ ಜರಾಸಂಧನ ಸೀಳಿದ ಬಾಗಗಳನ್ನು ಜೋಡಿಸಿ ರಾತ್ರಿಯ ವೇಳೆಯಲ್ಲಿಯೇ ಮಲಗಿ ನಿದ್ರಿಸುತ್ತಿರುವವನ ರೀತಿಯಲ್ಲಿ ಮೃತನಾದ ಅವನ ದೇಹವನ್ನು ಅರಮನೆಯದ್ವಾರದಲ್ಲಿಸ್ಥಾಪಿಸಿ ಅರಿಂದಮರಾದ ಕೃಷ್ಣಭೀಮಾರ್ಜುನರು ಅಲ್ಲಿಂದ ಹೊರಟುಬಂದರು.

ಜರಾಸಂಧರಥಂ ಕೃಷ್ಣೋ ಯೋಜಯಿತ್ವಾ ಪತಾಕಿನಮ್ ।
ಆರೋಪ್ಯ ಭ್ರಾತರೌ ರಾಜ್ಞೋ ಮೋಕ್ಷಯಾಮಾಸ ಬಾಂಧವಾನ್ ॥೧೫॥

ಕೃಷ್ಣನು ಪತಾಕೆಯುಳ್ಳ ಜರಾಸಂಧನ ರಥವನ್ನು ಹೂಡಿ ಭೀಮಾರ್ಜುನರನ್ನು ಏರಿಸಿಕೊಂಡು ರಾಜರನ್ನು ಸೆರೆಯಿಟ್ಟಸ್ಥಾನಕ್ಕೆ ಬಂದು ತನ್ನ ಬಂಧುಗಳಾದ ಅವರನ್ನು ಸೆರೆಯಿಂದ ಬಿಡಿಸಿದನು.

ತೇ ವೈ ರತ್ನಭುಜಂ ಕೃಷ್ಣಂ ರತ್ನಾರ್ಹಂ ಚೈವ ಪಾರ್ಥಿವಮ್ ।
ರಾಜಾನಶ್ಚಕ್ರುರಾಸಾದ್ಯ ಮೋಕ್ಷಿತಾ ಮಹತೋ ಭಯಾತ್ ॥೧೬॥

ಮಹಾಭಯದಿಂದ ತಮ್ಮನ್ನು ರಕ್ಷಿಸಿದ ಮತ್ತು ರತ್ನದಂತಹ ತಮ್ಮ ಪ್ರಾಣವನ್ನು ರಕ್ಷಿಸಿದ ಕೃಷ್ಣನನ್ನು ಸಮೀಪಿಸಿ ಆ ರಾಜರು ಅವನನ್ನು ಮತ್ತು ಅರ್ಜುನನನ್ನು ತಮ್ಮ ರತ್ನಖಚಿತವಾದ ಕೀರೀಟಗಳಿಂದ ಘಟ್ಟಿತವಾದ ಪಾದಪೀಠವುಳ್ಳವನನ್ನಾಗಿ ಮಾಡಿದರು.

ಅಕ್ಷತಃ ಕ್ಷತ್ರಸಂಪನ್ನೋ ಜಿತಾರಿಃ ಸಹ ರಾಜಭಿಃ ।
ರಥಮಾಸ್ಥಾಯ ತಂ ದಿವ್ಯಂ ನಿರ್ಜಗಾಮ ಗಿರಿವ್ರಜಾತ್ ॥೧೭॥

ಕೃಷ್ಣನು ಶತ್ರುವನ್ನು ಗೆದ್ದು ತಾನು ಯಾವ ಗಾಯಕ್ಕೂ ಒಳಗಾಗದೆ ಕ್ಷತ್ರಿಯರಾಜರುಗಳ ಜೊತೆಯಲ್ಲಿ ಕೂಡಿಕೊಂಡು ಆ ದಿವ್ಯರಥವನ್ನು ಏರಿ ರಾಜಧಾನಿಯಾದ ಗಿರಿವ್ರಜದಿಂದ ಹೊರಗೆ ಬಂದನು.

ತಯೋಃ ಸೌಂದರ್ಯವಾನ್ ನಾಮ ವಿಧೇಯಃ ಕೃಷ್ಣಸಾರಥಿಃ ।
ಅಭ್ಯಾಯಯಾವಭಿಮುಖೋ ದುರ್ಜಯಃ ಸರ್ವಧನ್ವಿಭಿಃ ॥೧೮॥

ಭೀಮಾರ್ಜುನರಿಗೆ ವಿಧೇಯನಾದ ಯಾವ ಧನುರ್ಧಾರಿಗಳಿಂದಲೂ ಜಯಿಸಲು ಅಸಾಧ್ಯನಾದ ಸೌಂದರ್ಯವಾನ್ ಎಂಬ ಕೃಷ್ಣಸಾರಥಿಯು ಆಗ ಅವರಿಗೆ ಅಭಿಮುಖವಾಗಿ ಬಂದನು.

ಭೀಮಾರ್ಜುನಾಭ್ಯಾಂ ಯೋಧಾಭ್ಯಾಮಾಸ್ಥಿತಃ ಕೃಷ್ಣಸಾರಥಿಃ ।
ಶುಶುಭೇ ರಥವರ್ಯೋ ಽಸೌ ದುರ್ಜಯಃ ಸರ್ವಧನ್ವಿಭಿಃ ॥೧೯॥

ಭೀಮಾರ್ಜುನರಿಂದ ಅಧಿಷ್ಠಿಸಲ್ಪಟ್ಟ ಕೃಷ್ಣನನ್ನು ಸಾರಥಿಯಾಗಿ ಹೊಂದಿದ ಆ ಶ್ರೇಷ್ಠವಾದ ರಥವು ಎಲ್ಲಾ ಧರ್ನುಧಾರಿಗಳಿಗೂ ಅಜೇಯವಾಗಿ ಶೋಭಿಸಿತು.

ಶಕ್ರವಿಷ್ಣೂ ಹಿ ಸಂಗ್ರಾಮೇ ಚೇರತುಸ್ತಾರಕಾಮಯೇ ।
ರಥೇನ ತೇನ ತಂ ಕೃಷ್ಣ ಉಪಾರುಹ್ಯೋಪಯಾತ್ ತದಾ ॥೨೦॥

ಹಿಂದೆ ಶತ್ರುಗಳ ಕಣ್ಣಿಗೆ ನೋವನ್ನು ಉಂಟುಮಾಡುವ ದೇವಾಸುರ ಯುದ್ಧದಲ್ಲಿ ಇಂದ್ರ ಉಪೇಂದ್ರರು ಯಾವ ರಥವನ್ನು ಏರಿ ಯುದ್ಧಮಾಡಿದ್ದರೋ ಕೃಷ್ಣನು ಆ ರಥವನ್ನು ಏರಿ ಹೊರಗೆ ಬಂದನು.

ಏವಮೇತೌ ಮಹಾಬಾಹೂ ತದಾ ದುಷ್ಕರಕಾರಿಣೌ ।
ಕೃಷ್ಣಪ್ರಣೇತಾವೇಕಸ್ಮಿನ್ ರಥೇ ಕೋ ದ್ರಷ್ಟುಮರ್ಹತಿ ॥೨೧॥

ಇನ್ನೊಬ್ಬರಿಗೆ ದುಷ್ಕರವಾದ ಕರ್ಮವನ್ನು ಮಾಡುವ ಈ ಇಬ್ಬರು ಮಹಾಬಾಹುಗಳು ಕೃಷ್ಣನ ಜೊತೆಯಲ್ಲಿ ಒಂದು ರಥದಲ್ಲಿ ಹೀಗೆ ಕುಳಿರುವುದನ್ನು ಯಾರು ನೋಡಲು ಸಾಧ್ಯ ?

ಇತ್ಯವೋಚನ್ ವ್ರಜಂತಂ ತಂ ಜರಾಸಂಧಪುರಾಲಯಾಃ ।
ವಾಸುದೇವಂ ನರಶ್ರೇಷ್ಠಂ ಯುಕ್ತಂ ವಾಯುಜವೈರ್ಹಯೈಃ ॥೨೨॥

ಪುರುಷೋತ್ತಮನಾದ ವಾಸುದೇವನು ವಾಯುವೇಗವುಳ್ಳ ಅಶ್ವಗಳನ್ನು ಹೂಡಿದ ರಥದಲ್ಲಿ ಕುಳಿತು ಹೋಗುತ್ತಿರುವಾಗ ಜರಾಸಂಧನ ಪಟ್ಟಣದ ಪ್ರಜೆಗಳು ಈ ರೀತಿ ಮಾತನಾಡಿಕೊಂಡರು.

ತಪ್ತಚಾಮೀಕರಾಭೇಣ ಕಿಂಕಿಣೀಜಾಲಮಾಲಿನಾ ।
ಮೇಘನಿರ್ಘೋಷನಾದೇನ ಜೈತ್ರೇಣಾಮಿತ್ರಘಾತಿನಾ ॥೨೩॥

ಯೇನ ಶಕ್ರೋ ದಾನವಾನಾಂ ಜಘಾನ ನವತೀರ್ನವ ।
ತಂ ಪ್ರಾಪ್ಯ ಸಮಹೃಷ್ಯಂತ ರಥಂ ತೇ ಪುರುಷರ್ಷಭಾಃ ॥೨೪॥

ಇಂದ್ರನು ತೊಂಬತೊಂಬತ್ತು ಜನ ದಾನವರನ್ನು ಯಾವ ರಥದಲ್ಲಿ ಕುಳಿತು ಸಂಹಾರಮಾಡಿದನೋ ಅಂತಹ ಸುವರ್ಣದಂತೆ ಶೋಭಿಸುವ ಸಣ್ಣಗಂಟೆಗಳ ಮಾಲೆಯನ್ನು ಹೊಂದಿರುವ ಮೇಘಗರ್ಜನೆಯ ನಾದವನ್ನು ಹೊಂದಿರುವ ಶತ್ರು ಸಂಹಾರಕವಾದ ಜಯಶೀಲವಾದ ರಥವನ್ನು ಹೊಂದಿ ಆ ಮೂವರು ಪುರುಷಶ್ರೇಷ್ಠರು ಸಂತೋಷವನ್ನು ಹೊಂದಿದರು.

ತತಃ ಕೃಷ್ಣಂ ಮಹಾಬಾಹುಂ ಭ್ರಾತೃಭ್ಯಾಂ ಸಹಿತಂ ತದಾ ।
ರಥಸ್ಥಂ ಮಾಗಧಾ ದೃಷ್ಟ್ವಾ ಸಮಪದ್ಯಂತ ವಿಸ್ಮಿತಾಃ ॥೨೫॥

ಆಗ ಮಹಾಬಾಹುವಾದ ಕೃಷ್ಣನು ಭೀಮಾರ್ಜುನರ ಜೊತೆಯಲ್ಲಿ ರಥದಲ್ಲಿ ಕುಳಿತಿರುವುದನ್ನು ನೋಡಿದ ಮಗಧದೇಶದ ಪ್ರಜೆಗಳು ವಿಸ್ಮಿತರಾದರು.

ಹಯೈರ್ದಿವ್ಯೈಃ ಸಮಾಯುಕ್ತೋ ರಥೋ ವಾಯುಸಮೋ ಜವೇ।
ಅಧಿಷ್ಠಿತಃ ಸ ಶುಶುಭೇ ಕೃಷ್ಣೇನಾತೀವ ಭಾರತ ॥೨೬॥

ಭಾರತನೇ! ದಿವ್ಯವಾದ ಹಯಗಳಿಂದ ಯುಕ್ತವಾಗಿ ವೇಗದಲ್ಲಿ ವಾಯುಸಮವಾದ ಆ ರಥವು ಕೃಷ್ಣನಿಂದ ಅಧಿಷ್ಠಿತವಾಗಿ ಬಹಳ ಕಾಂತಿಯನ್ನು ಹೊಂದಿತು.

ಅಸಂಗೀ ದೇವವಿಹಿತಸ್ತಸ್ಮಿನ್ ರಥವರೇ ಧ್ವಜಃ ।
ಸ ಯೋಜನದ್ವಯೇ ದೃಶ್ಯಃ ಶ್ರೀಮಾನಿಂದ್ರಾಯುಧಪ್ರಭಃ ॥೨೭॥

ಆ ಶ್ರೇಷ್ಠರಥದಲ್ಲಿ ಇದ್ದ ದೇವವಿಹಿತವಾದ ಧ್ವಜವು ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಕಾಂತಿಯುಳ್ಳದ್ದಾಗಿ ಎಲ್ಲಿಯೂ ಸಿಕ್ಕಿಹಾಕಿಕೊಳ್ಳದೆ ಎರಡು ಯೋಜನದೂರದಿಂದ ಕಂಡು ಬರುತ್ತಿದ್ದಿತು.

ಚಿಂತಯಾಮಾಸ ಕೃಷ್ಣೋಽಥ ಗರುತ್ಮಂತಂ ಸ ಚಾಭ್ಯಯಾತ್ ।
ಕ್ಷಣೇ ತಸ್ಮಿನ್ ಸ ತತ್ರಾಸೀಚ್ಚೈತ್ಯಯೂಪ ಇವೋಚ್ಛ್ರಿತಃ ॥೨೮॥

ಆಗ ಕೃಷ್ಣನು ಗರುಡನನ್ನು ಸ್ಮರಿಸಿದನು. ಆ ಕ್ಷಣದಲ್ಲಿ ಗರುಡನು ಅಲ್ಲಿಗೆ ಬಂದು ಭೂಮಿಯಲ್ಲಿ ನೆಟ್ಟ ಯೂಪಸ್ಥಂಭದಂತೆ ಉನ್ನತವಾಗಿ ನಿಂತನು.

ವ್ಯಾದಿತಾಸ್ಯೋ ಮಹಾನಾದೈಃ ಸಹ ಭೂತೈರ್ಧ್ವಜಾಲಯೈಃ ।
ತಸ್ಮಿನ್ ರಥವರೇ ತಸ್ಥೌ ಗರುತ್ಮಾನ್ ಪನ್ನಗಾಶನಃ ॥೨೯॥

ಸರ್ಪಭಕ್ಷನಾದ ಗರುಡನು ತನ್ನ ಬಾಯಿಯನ್ನು ದೊಡ್ಡದಾಗಿ ತೆರೆದು ದೊಡ್ಡನಾದವನ್ನು ಮಾಡುವ ಆ ಧ್ವಜನಿವಾಸಿಗಳಾದ ಭೂತಗಳ ಜೊತೆಯಲ್ಲಿ ಆ ಶ್ರೇಷ್ಠವಾದ ರಥದಲ್ಲಿ ನಿಂತನು.

ದುರ್ನಿರೀಕ್ಷ್ಯೋ ಹಿ ಭೂತಾನಾಂ ತೇಜಸಾಽಭ್ಯಧಿಕಂ ಬಭೌ ।
ಆದಿತ್ಯ ಇವ ಮಧ್ಯಾಹ್ನೇ ಸಹಸ್ರಕಿರಣಾವೃತಃ ॥೩೦॥

ಅವನು ಜನರು ನೋಡಲು ಅಸಾಧ್ಯವಾದ ಪ್ರಕಾಶದಿಂದ ಕೂಡಿದವನಾಗಿ ಮಧ್ಯಾಹ್ನದ ಸಮಯದಲ್ಲಿ ಸಹಸ್ರಕಿರಣಗಳಿಂದ ಕೂಡಿದ ಸೂರ್ಯನಂತೆ ಅಧಿಕಕಾಂತಿಯಿಂದ ಕಂಗೊಳಿಸಿದನು.

ನ ಸ ಸಜ್ಜತಿ ವೃಕ್ಷೇಷು ಶಸ್ತ್ರೈಶ್ಚಾಪಿ ನ ರಿಷ್ಯತಿ ।
ದಿವ್ಯೋ ರಥವರೋ ರಾಜನ್ ದೃಶ್ಯತೇ ಚೈವ ಮಾನುಷೈಃ ॥೩೧॥

ಈ ರಥವು ಮರಗಳಲ್ಲಿ ಸಿಲುಕಿಕೊಳ್ಳವುದಿಲ್ಲ ಶಸ್ತ್ರಗಳಿಂದ ನಾಶಹೊಂದುವುದಿಲ್ಲ. ರಾಜನೇ ಈ ದಿವ್ಯವಾದ ರಥವು ಮನುಷ್ಯದೃಷ್ಟಿಗೂ ಗೋಚರವಾಗುತ್ತದೆ.

ತಮಾಸ್ಥಾಯ ರಥಂ ದಿವ್ಯಂ ಪರ್ಜನ್ಯಸಮನಿಃಸ್ವನಮ್ ।
ನಿರ್ಯಯೌ ಪುಂಡರೀಕಾಕ್ಷಃ ಪಾಂಡವಾಭ್ಯಾಂ ಸಹಾಚ್ಯುತಃ ॥೩೨॥

ಅಂತಹ ದಿವ್ಯವಾದ ಪರ್ಜನ್ಯನಿನಾದವುಳ್ಳ ರಥವನ್ನು ಏರಿ ಪುಂಡರೀಕಾಕ್ಷನಾದ ಕೃಷ್ಣನು ಭೀಮಾರ್ಜುನರ ಜೊತೆಯಲ್ಲಿ ಹೊರಟನು.

ಯಂ ಲೇಭೇ ವಾಸವಾದ್ ರಾಜಾ ವಸುಸ್ತಸ್ಮಾದ್ ಬೃಹದ್ರಥಃ ।
ಬೃಹದ್ರಥಾತ್ ಕ್ರಮೇಣೈವ ಪ್ರಾಪ್ತೋ ಬಾರ್ಹದ್ರಥೋ ರಥಮ್ ॥೩೩॥

ಆ ರಥವು ಇಂದ್ರನಿಂದ ವಸುವಿಗೂ ವಸುವಿನಿಂದ ಬೃಹದ್ರಥನಿಗೂ ಬೃಹದ್ರಥನಿಂದ ಕ್ರಮವಾಗಿ ಜರಾಸಂಧನಿಗೂ ಬಂದಿದ್ದಿತು.

ಸ ನಿರ್ಯಾಯ ಮಹಾಬಾಹುಃ ಪುಂಡರೀಕೇಕ್ಷಣಸ್ತತಃ ।
ಗಿರಿವ್ರಜಾದ್ ಬಹಿಸ್ತಸ್ಥೌ ಸಮದೇಶೇ ಮಹಾಯಶಾಃ ॥೩೪॥

ಮಹಾಬಾಹುವೂ ಮಹಾಕೀರ್ತಿವಂತನೂ ಪುಂಡರೀಕಾಕ್ಷನೂ ಆದ ಕೃಷ್ಣನು ಗಿರಿವ್ರಜದಿಂದ ಹೊರಗೆ ಬಂದು ಒಂದು ಸಮತಳವಾದ ಪ್ರದೇಶದಲ್ಲಿ ನಿಂತನು.

ತತ್ರೈನಂ ನಾಗರಾಃ ಸರ್ವೇ ಸತ್ಕಾರೇಣಾಭ್ಯಯುಸ್ತದಾ ।
ಬ್ರಾಹ್ಮಣಪ್ರಮುಖಾ ರಾಜನ್ ವಿಧಿದೃಷ್ಟೇನ ಕರ್ಮಣಾ ॥೩೫॥

ರಾಜನೇ! ಅಲ್ಲಿ ನಗರವಾಸಿಗಳೆಲ್ಲರೂ ಪೂಜಾಸಾಮಗ್ರಿಗಳನ್ನು ಹಿಡಿದು ಬ್ರಾಹ್ಮಣರನ್ನು ಮುಂದೆಮಾಡಿಕೊಂಡು ವಿಧಿವತ್ತಾಗಿ ಕೃಷ್ಣನನ್ನು ಸತ್ಕರಿಸಲು ಬಂದರು.

ಬಂಧನಾದ್ ವಿಪ್ರಮುಕ್ತಾಶ್ಚ ರಾಜಾನೋ ಮಧುಸೂದನಮ್ ।
ಪೂಜಯಾಮಾಸುರೂಚುಶ್ಚ ಸಾಂತ್ವಪೂರ್ವಮಿದಂ ವಚಃ ॥೩೬॥

ಬಂಧನದಿಂದ ಬಿಡುಗಡೆಯಾದ ರಾಜರೆಲ್ಲರೂ ಮಧುಸೂದನನನ್ನು ಸತ್ಕರಿಸಿ ಸಮಾಧಾನದಿಂದ ಈ ಮಾತುಗಳನ್ನು ಆಡಿದರು.

ನೈತಚ್ಚಿತ್ರಂ ಮಹಾಬಾಹೋ ತ್ವಯಿ ದೇವಕಿನಂದನ ।
ಭೀಮಾರ್ಜುನಬಲೋಪೇತೇ ಧರ್ಮಸ್ಯ ಪರಿಪಾಲನಮ್ ॥೩೭॥

ದೇವಕಿನಂದನನಾದ ಮಹಾಬಾಹುವೇ! ಭೀಮಾರ್ಜುನರ ಬಲದಿಂದ ಕೂಡಿದ ನಿನಗೆ ಈ ಧರ್ಮದ ಪರಿಪಾಲನೆಯು ಆಶ್ಚರ್ಯವಲ್ಲ.

ಜರಾಸಂಧಹ್ರದೇ ಘೋರೇ ದುಃಖಪಂಕೇ ನಿಮಜ್ಜತಾಮ್ ।
ರಾಜ್ಞಾಂ ಸಮಭ್ಯುದ್ಧರಣಂ ಯದಿದಂ ಕೃತಮದ್ಯ ವೈ ॥೩೮॥

ಘೋರವಾದ ಜರಾಸಂಧನೆಂಬ ಮಡುವಿನಲ್ಲಿ, ದುಃಖವೆಂಬ ಕೆಸರಿನಲ್ಲಿ ಮುಳುಗುತ್ತಿದ್ದ ನಮ್ಮನ್ನು ಮೇಲೆಕ್ಕೆತ್ತಿ, ಈ ದಿನ ನೀನು ಮಾಡಿದ ಕರ್ಮವು ಆಶ್ಚರ್ಯವಲ್ಲ.

ರಾಜ್ಞಾಂ ಸಮವಸನ್ನಾನಾಂ ಗಿರಿದುರ್ಗೇ ಸುದಾರುಣೇ ।
ದಿಷ್ಟ್ಯಾ ಮೋಕ್ಷಾದ್ ಯಶೋ ದೀಪ್ತಮಾಹೃತಂ ತೇ ನರೋತ್ತಮ॥೩೯॥

ಪುರುಷೋತ್ತಮನೇ! ಘೋರವಾದ ಗಿರಿದುರ್ಗದಲ್ಲಿ ಅವಸಾನ ಹೊಂದುತ್ತಿದ್ದ ರಾಜರುಗಳನ್ನು ದೈವಶವದಿಂದ ವಿಮೋಚನೆಗೊಳಿಸಿ ನೀನು ದೀಪ್ತವಾದ ಕೀರ್ತಿಯನ್ನು ಸಂಪಾದಿಸಿರುವೆ.

ಕಿಂ ಕುರ್ಮಃ ಪುರುಷವ್ಯಾಘ್ರ ಸಮಾಜ್ಞಾಪಯ ನಃ ಪ್ರಭೋ ।
ಕೃತಮಿತ್ಯೇವ ತಜ್ಜ್ಞೇಯಂ ಯದ್ಯಪಿ ಸ್ಯಾತ್ ಸುದುಷ್ಕರಮ್ ॥೪೦॥

ಪುರುಷವ್ಯಾಘ್ರನಾದ ಪ್ರಭುವೇ! ನಾವು ನಿನಗೆ ಏನು ಮಾಡೋಣವೆಂದು ಆಪ್ಪಣೆಯನ್ನು ಮಾಡು. ಅದು ಎಷ್ಟೇ ಕಷ್ಟವಾಗಿದ್ದರೂ ಅದನ್ನು ಮಾಡಿದೆವೆಂದೇ ತಿಳಿ.

ತಾನುವಾಚ ಹೃಷೀಕೇಶಃ ಸಮಾಶ್ವಾಸ್ಯ ಮಹಾಮನಾಃ ।
ಯುಧಿಷ್ಠಿರೋ ರಾಜಸೂಯಂ ಕ್ರತುಮಾಹರ್ತುಮಿಚ್ಛತಿ ॥೪೧॥

ತಸ್ಯ ಧರ್ಮಪ್ರವೃತ್ತಸ್ಯ ಪಾರ್ಥಿವತ್ವಂ ಚಿಕೀರ್ಷತಃ ।
ಸರ್ವೈರ್ಭವದ್ಭಿರ್ಯಜ್ಞಾರ್ಥೇ ಸಾಹಾಯ್ಯಂ ದೀಯತಾಮಿತಿ ॥೪೨॥

ಮಹಾಮನನಾದ ಹೃಷೀಕೇಶನು ಅವರನ್ನು ಸಮಾಧಾನಪಡಿಸುತ್ತಾ ಯುಧಿಷ್ಠಿರನು ರಾಜಸೂಯಯಾಗವನ್ನು ಮಾಡಲು ಇಚ್ಛಿಸುತ್ತಾನೆ. ಧರ್ಮಕಾರ್ಯದಲ್ಲಿ ಪ್ರವೃತ್ತನಾಗಿ ಸಾಮ್ರಾಟ್ ಪದವಿಯನ್ನು ಸಂಪಾದಿಸಲು ಬಯಸುವ ಅವನಿಗೆ ನೀವೆಲ್ಲರೂ ಅವನ ಯಜ್ಞದ ಸಲುವಾಗಿ ಸಹಾಯವನ್ನು ಮಾಡಿ ಎಂದು ಹೇಳಿದನು.

ತತಃ ಸುಪ್ರೀತಮನಸಸ್ತೇ ನೃಪಾ ಭರತರ್ಷಭ ।
ತಂ ತಥೇತ್ಯಬ್ರುವನ್ ಸರ್ವೇ ಪ್ರತಿಜಜ್ಞುಶ್ಚ ತಾಂ ಗಿರಮ್ ॥೪೩॥

ಭರತರ್ಷಭನೇ! ಆಗ ಸಂತೋಷಗೊಂಡ ಮನಸ್ಸುಳ್ಳ ಆ ರಾಜರೆಲ್ಲರೂ ಹಾಗೆಯೇ ಆಗಲಿ ಎಂದು ಸಹಾಯಮಾಡುವುದಾಗಿ ಪ್ರತಿಜ್ಞೆಯನ್ನು ಮಾಡಿದರು.

ರತ್ನಭಾಜಂ ಚ ದಾಶಾರ್ಹಂ ಚಕ್ರುಸ್ತೇ ಪೃಥಿವೀಶ್ವರಾಃ ।
ಕೃಚ್ಛ್ರಾಜ್ಜಗ್ರಾಹ ಗೋವಿಂದಸ್ತೇಷಾಂ ತದನುಕಂಪಯಾ ॥೪೪॥

ಆ ರಾಜರೆಲ್ಲರೂ ದಾಶಾರ್ಹನಾದ ಕೃಷ್ಣನಿಗೆ ರತ್ನಗಳನ್ನು ತಂದು ಒಪ್ಪಿಸಿದರು. ಗೋವಿಂದನಾದರೋ ಅವರ ಮೇಲಿನ ಕರುಣೆಯಿಂದ ಬಹಳ ಕಷ್ಟದಿಂದ ಅವುಗಳನ್ನು ಸ್ವೀಕರಿಸಿದನು.

ಜರಾಸಂಧಾತ್ಮಜಶ್ಚೈವ ಸಹದೇವೋ ಮಹಾರಥಃ ।
ನಿರ್ಯಯೌ ಸಜನಾಮಾತ್ಯಃ ಪುರಸ್ಕೃತ್ಯ ಪುರೋಹಿತಮ್ ॥೪೫॥

ಜರಾಸಂಧನ ಪುತ್ರನಾದ ಮಹಾರಥನಾದ ಸಹದೇವನು ಪುರೋಹಿತರನ್ನು ಮುಂದೆಮಾಡಿ ಕೊಂಡು ತನ್ನ ಸ್ವಜನರನ್ನು ಅಮಾತ್ಯರನ್ನು ಕರೆದುಕೊಂಡು ಕೃಷ್ಣನಿದ್ದ ಸ್ಥಳಕ್ಕೆ ಬಂದನು.

ಸಚಿವೈಃ ಪ್ರಶ್ರಿತೋ ಭೂತ್ವಾ ಬಹುರತ್ನಪುರಸ್ಕೃತಃ ।
ಸಹದೇವೋ ನೃಣಾಂ ದೇವಂ ವಾಸುದೇವಮುಪಾಶ್ರಿತಃ ॥೪೬॥

ಸಚಿವರ ಜೊತೆಯಲ್ಲಿ ವಿನಯದಿಂದ ಬಂದು ಬಹುರತ್ನಗಳನ್ನು ಕೊಟ್ಟು ಸಹದೇವನು ಎಲ್ಲರಿಗೂ ದೇವನಾದ ವಾಸುದೇವನಿಗೆ ಶರಣಾಗತನಾದನು.

ಸಹದೇವಃ

ಯತ್ ಕೃತಂ ಪುರುಷವ್ಯಾಘ್ರ ಮಮ ಪಿತ್ರಾ ಜನಾರ್ದನ ।
ತತ್ ತೇ ಹೃದಿ ಮಹಾಬಾಹೋ ನ ಕಾರ್ಯಂ ಪುರುಷೋತ್ತಮ ॥೪೭॥

ಪುರುಷೋತ್ತಮನೇ! ಪುರುಷವ್ಯಾಘ್ರನೇ! ಮಹಾಬಾಹುವೇ! ಜನಾರ್ದನನೇ! ನನ್ನ ತಂದೆಯು ಮಾಡಿದ ಅಪಚಾರವನ್ನು ನೀನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡ.

ತ್ವಾಂ ಪ್ರಪನ್ನೋಽಸ್ಮಿ ಗೋವಿಂದ ಪ್ರಸಾದಂ ಕುರು ಮೇ ಪ್ರಭೋ।
ಪಿತುರಿಚ್ಛಾಮಿ ಸಂಸ್ಕಾರಂ ಕರ್ತುಂ ದೇವಕಿನಂದನ ॥೪೮॥

ಗೋವಿಂದನೇ ! ಪ್ರಭುವೇ! ನಾನು ನಿನಗೆ ಶರಣಾಗತನಾಗಿದ್ದೇನೆ. ನನ್ನನ್ನು ಅನುಗ್ರಹಿಸು. ದೇವಕಿ ನಂದನನೇ! ನಾನು ನನ್ನ ತಂದೆಗೆ ಅಂತ್ಯಸಂಸ್ಕಾರವನ್ನುಮಾಡಲು ಬಯಸುತ್ತೇನೆ.

ತತ್ತೋಽಭ್ಯನುಜ್ಞಾಂ ಸಂಪ್ರಾಪ್ಯ ಭೀಮಸೇನಾತ್ ತಥಾರ್ಜುನಾತ್ ।
ನಿರ್ಭಯೋ ವಿಚರಿಷ್ಯಾಮಿ ಯಥಾಕಾಮಂ ಯಥಾಸುಖಮ್ ॥೪೯॥

ನಿನ್ನ ಅನುಮತಿಯನ್ನು ಪಡೆದು ಭೀಮಸೇನನ ಮತ್ತು ಅರ್ಜುನನ ಭಯವಿಲ್ಲದೆ ನಾನು ಸುಖವಾಗಿ ನನ್ನ ಮನಸ್ಸಿಗೆ ಬಂದಂತೆ ಜೀವಿಸುವೆನು.

ಏವಂ ವಿಜ್ಞಾಪ್ಯಮಾನಸ್ಯ ಸಹದೇವಸ್ಯ ಮಾರಿಷ ।
ಪ್ರಹೃಷ್ಟೋ ದೇವಕೀಪುತ್ರಃ ಪಾಂಡವೌ ಚ ಮಹಾರಥೌ ॥೫೦॥
ಕ್ರಿಯತಾಂ ಸಂಸ್ಥಿಯಾ ರಾಜನ್ ಪಿತುಸ್ತ ಇತಿ ಚಾಬ್ರುವನ್ ।

ತಚ್ಛ್ರುತ್ವಾ ವಾಸುದೇವಸ್ಯ ಪಾರ್ಥಯೋಶ್ಚ ಸ ಮಾಗಧಃ ॥೫೧॥
ಪ್ರವಿಶ್ಯ ನಗರಂ ತೂರ್ಣಂ ಸಹ ಮಂತ್ರಿಭಿರಪ್ಯುತ ।

ಚಿತಾಂ ಚಂದನಕಾಷ್ಠೈಶ್ಚ ಕಾಳೈಶ್ಚ ಸರಳೈಸ್ತಥಾ ॥೫೨॥

ಕಾಳಾಗುರುಸುಗಂಧೈಶ್ಚ ತೈಲೈಶ್ಚ ವಿವಿಧೈರಪಿ ।
ಘೃತಧಾರಾಕ್ಷತೈಶ್ಚೈವ ಸುಮನೋಭಿಶ್ಚ ಮಾಗಧಮ್ ॥೫೩॥

ಸಮಂತಾದವಕೀರ್ಯೈತದದಹನ್ ಮಗಧಾಧಿಪಮ್ ।
ಉದಕಂ ತಸ್ಯ ಚಕ್ರೇऽಥ ಸಹದೇವಃ ಸಹಾನುಜಃ ॥೫೪॥

ರಾಜನೇ! ಸಹದೇವನು ಹೀಗೆ ನಿವೇದನೆ ಮಾಡಿಕೊಳ್ಳುತ್ತಿರಲು ಸಂತುಷ್ಟನಾದ ಶ್ರೀಕೃಷ್ಣನು ಮತ್ತು ಮಹಾರಥರಾದ ಪಾಂಡವರು ಸಹ ರಾಜನೇ! ನಿನ್ನ ತಂದೆಗೆ ಉತ್ತರಕ್ರಿಯೆಗಳನ್ನುಮಾಡು ಎಂದು ಹೇಳಿದರು. ಅದನ್ನು ಕೇಳಿದ ಮಗಧಾಧಿಪತಿಯಾದ ಸಹದೇವನು ಮಂತ್ರಿಗಳ ಜೊತೆಯಲ್ಲಿ ಶೀಘ್ರವಾಗಿ ನಗರವನ್ನು ಪ್ರವೇಶಿಸಿ ಚಂದನ ಕಾಷ್ಠಗಳಿಂದಲೂ, ಕಾಳಸರಳ ಕಾಷ್ಠಗಳಿಂದಲೂ, ಸುಗಂಧಯುಕ್ತವಾದ ಕಾಳಾಗರುಕಾಷ್ಠದಿಂದಲೂ ವಿವಿಧವಾದ ಸುಗುಂಧತೈಲಗಳಿಂದಲೂ ಘೃತಧಾರೆ ಮತ್ತು ಅಕ್ಷತೆ ಮತ್ತು ಪುಷ್ಪಗಳಿಂದಲೂ ಜರಾಸಂಧನದೇಹವನ್ನು ಮುಚ್ಚಿ ಅದನ್ನು ದಹನಮಾಡಿದನು. ಅನಂತರ ಆ ಸಹದೇವನು ತನ್ನ ಕರ್ಮನ ಜೊತೆಯಲ್ಲಿ ಉದಕಕ್ರಿಯೆಯನ್ನು ಮಾಡಿದನು.

ಕೃತ್ವಾ ಪಿತುಃ ಸ್ವರ್ಗಗತಿಂ ನಿರ್ಯಯೌ ಯತ್ರ ಕೇಶವಃ ।
ಪಾಂಡವೌ ಚ ಮಹಾಭಾಗೌ ಭೀಮಸೇನಾರ್ಜುನಾವುಭೌ ।
ಸ ಪ್ರಹ್ವಃ ಪ್ರಾಂಜಲಿರ್ಭೂತ್ವಾ ವ್ಯಜ್ಞಾಪಯತ ಮಾಧವಮ್ ॥೫೫॥

ಸಹದೇವನು ತಂದೆಯ ಸ್ವರ್ಗಗತಿಗೆ ಬೇಕಾದ ಉತ್ತರಕ್ರಿಯೆಯನ್ನು ಮಾಡಿ ಎಲ್ಲಿ ಕೇಶವನೂ ಮತ್ತು ಮಹಾನುಭಾವರಾದ ಪಾಂಡುಪುತ್ರರಾದ ಭೀಮಾರ್ಜುನರೂ ಇದ್ದರೋ ಅಂತಹ ಸ್ಥಳಕ್ಕೆ ಬಂದು ವಿನಯದಿಂದ ಮಾಧವನಿಗೆ ಕೈಗಳನ್ನು ಮುಗಿದು ವಿಜ್ಞಾಪನೆಯನ್ನು ಮಾಡಿದನು.

ಇಮೇ ರತ್ನಾನಿ ಭೂರೀಣಿ ಗೋಜಾವಿಮಹಿಷಾದಯಃ ।
ಹಸ್ತಿನೋऽಶ್ವಾಶ್ಚ ಗೋವಿಂದ ವಾಸಾಂಸಿ ವಿವಿಧಾನಿ ಚ ॥೫೬॥

ನೀಯತಾಂ ಧರ್ಮರಾಜಾಯ ಯಥಾ ವಾ ಮನ್ಯತೇ ಭವಾನ್ ॥೫೭॥

ಇವು ಶ್ರೇಷ್ಠವಾದ ರತ್ನಗಳು ಮತ್ತು ಗೋವು ಅಜ ಆವಿ ಮಹಿಷ ಗಜ ಮತ್ತು ಅಶ್ವಗಳು ಮತ್ತು ವಿವಿಧವಾದ ವಸ್ತ್ರಗಳು. ಗೋವಿಂದನೇ! ಇದನ್ನು ಧರ್ಮರಾಜನ ಸಲುವಾಗಿ ತೆಗೆದುಕೊಂಡುಹೋಗು ಅಥವಾ ನಿನಗೆ ಇಷ್ಟ ಬಂದಂತೆಮಾಡು .

ವೈಶಂಪಾಯನಃ

ಭಯಾರ್ತಾಯ ತದಾ ತಸ್ಮೈ ದತ್ತ್ವಾ ಕೃಷ್ಣೋಽಭಯಂ ತಥಾ ।
ಅಭ್ಯಷಿಂಚತ ರಾಜಾನಂ ಸಹದೇವಂ ಜನಾರ್ದನಃ ॥೫೮॥

ಕೃಷ್ಣನು ಆಗ ಭಯಾರ್ಥನಾದ ಅವನಿಗೆ ಅಭಯದಾನವನ್ನು ಮಾಡಿ ಅವನನ್ನು ಮಗಧಾಧಿಪತಿಯನ್ನಾಗಿ ಅಭಿಷೇಕವನ್ನು ಮಾಡಿದನು.

ಮಾಗಧಾನಾಂ ಮಹೀಪಾಲಂ ಜರಾಸಂಧಾತ್ಮಜಂ ತದಾ ।
ಆದದೇಽಸ್ಯ ಮಹಾರ್ಹಾಣಿ ರತ್ನಾನಿ ಪುರುಷೋತ್ತಮಃ ॥೫೯॥

ಪುರುಷೋತ್ತಮನು ಜರಾಸಂಧನ ಮಗನಾದ ಸಹದೇವನಿಗೆ ಮಗಧಾಧಿಪತಿಯನ್ನಾಗಿ ಅಭಿಷೇಕಮಾಡಿ; ಅವನು ಕೊಟ್ಟ ಬೆಲೆಬಾಳುವ ಪದಾರ್ಥಗಳನ್ನು ಸ್ವೀಕರಿಸಿದನು.

ಗತ್ವೈಕತ್ವಂ ಸ ಕೃಷ್ಣೇನ ಪಾರ್ಥಾಭ್ಯಾಂ ಚಾಪಿ ಸತ್ಕೃತಃ ।
ವಿವೇಶ ಮತಿಮಾನ್ ರಾಜಾ ಪುನರ್ಬಾರ್ಹದ್ರಥಂ ಪುರಮ್ ॥೬೦॥

ಸಹದೇವನಾದರೂ ಕೃಷ್ಣನ ಜೊತೆಯಲ್ಲಿ ಐಕಮತ್ಯವನ್ನು ಹೊಂದಿ ಭೀಮಾರ್ಜುನರಿಂದ ಸತ್ಕೃತನಾಗಿ ಮೇಧಾವಿಯಾದ ಅವನು ಪುನಃ ರಾಜಧಾನಿಯಾದ ಗಿರಿವ್ರಜವನ್ನು ಪ್ರವೇಶಿಸಿದನು.

ಪಾರ್ಥಾಭ್ಯಾಂ ಸಹಿತಃ ಕೃಷ್ಣಃ ಸರ್ವೈಶ್ಚ ವಸುಧಾಧಿಪೈಃ ।
ಯಥಾವಯಃ ಸಮಾಗಮ್ಯ ವಿಸಸರ್ಜ ನರಾಧಿಪಾನ್ ॥೬೧॥

ಪಾರ್ಥನಿಂದ ಒಡಗೂಡಿದ ಕೃಷ್ಣನು ಎಲ್ಲಾ ರಾಜರುಗಳ ಜೊತೆಯಲ್ಲಿಯೂ ಅವರವರಿಗೆ ಯೋಗ್ಯವಾದ ರೀತಿಯಲ್ಲಿ ಸಮಾಗಮವನ್ನು ಹೊಂದಿ ಅವರನ್ನು ಕಳುಹಿಸಿಕೊಟ್ಟನು.

ವಿಸೃಜ್ಯ ಸರ್ವಾನ್ ನೃಪತೀನ್ ರಾಜಸೂಯೇ ಮಹಾತ್ಮಭಿಃ ।
ಆಗಂತವ್ಯಂ ಭವದ್ಭಿಸ್ತು ಧರ್ಮರಾಜಪ್ರಿಯೇಪ್ಸುಭಿಃ ॥೬೨॥

ಮಹಾತ್ಮರಾದ ನೀವೆಲ್ಲರೂ ಧರ್ಮರಾಜನಿಗೆ ಹಿತವನ್ನು ಬಯಸಿ ಅವನು ಮಾಡುವ ರಾಜಸೂಯಯಾಗಕ್ಕೆ ಬರಬೇಕು ಎಂದು ಹೇಳಿ ಕಳುಹಿಸಿಕೊಟ್ಟನು.

ಏವಮುಕ್ತಾ ಮಾಧವೇನ ಸರ್ವೇ ತೇ ವಸುಧಾಧಿಪಾಃ ।
ಏವಮಸ್ತ್ವಿತಿ ಚಾಪ್ಯುಕ್ತ್ವಾ ಸಮೇತಾಃ ಪರಯಾ ಮುದಾ ॥೬೩॥

ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ಆ ರಾಜರುಗಳೆಲ್ಲರೂ ಪರಮ ಸಂತೋಷದಿಂದ ಹಾಗೆಯೇ ಆಗಲಿ ಎಂದು ಒಟ್ಟಿಗೆ ಹೇಳಿದರು.

ಭೀಮಾರ್ಜುನಹೃಷೀಕೇಶಾಃ ಪ್ರಹೃಷ್ಟಾಃ ಪ್ರಯಯುಃ ಸಹ ।
ರತ್ನಾನ್ಯಾದಾಯ ಭೂರೀಣಿ ಜ್ವಲಂತೋ ರಿಪುಸೂದನಾಃ ॥೬೪॥

ಶತ್ರುಸೂದನರಾದ ಕೃಷ್ಣಭೀಮಾರ್ಜುನರು ಸಂತುಷ್ಟರಾಗಿ ಬಹಳ ರತ್ನಗಳನ್ನು ತೆಗೆದುಕೊಂಡು ಕಾಂತಿಯಿಂದ ಬೆಳಗುತ್ತಾ ಅಲ್ಲಿಂದ ಜೊತೆಯಲ್ಲಿ ಹೊರಟರು.

ಇಂದ್ರಪ್ರಸ್ಥಮಥಾಗಮ್ಯ ಭ್ರಾತೃಭ್ಯಾಂ ಸಹಿತೋಽಚ್ಯುತಃ ।
ಸಮೇತ್ಯ ಧರ್ಮರಾಜಾನಂ ಪ್ರೀಯಮಾಣಮುಪಸ್ಥಿತಃ ॥೬೫॥

ಭೀಮಾರ್ಜುನರಿಂದ ಸಹಿತನಾದ ಕೃಷ್ಣನು ಇಂದ್ರಪ್ರಸ್ಥವನ್ನು ತಲುಪಿ ಧರ್ಮರಾಜನನ್ನು ಸಂಧಿಸಿ ಸಂತೋಷದಿಂದ ಅವನ ಬಳಿ ನಿಂತನು.

ದಿಷ್ಟ್ಯಾ ಭೀಮೇನ ಬಲವಾನ್ ಜರಾಸಂಧೋ ನಿಪಾತಿತಃ ।
ರಾಜಾನೋ ಮೋಕ್ಷಿತಾಶ್ಚೇಮೇ ಬಂಧನಾನ್ನೃಪಸತ್ತಮಾಃ ॥೬೬॥

ದಿಷ್ಟ್ಯಾ ಕುಶಲಿನೌ ಚೇಮೌ ಭೀಮಸೇನಧನಂಜಯೌ ।
ಪುನಃ ಸ್ವನಗರಂ ಪ್ರಾಪ್ತಾವಕ್ಷತಾವಿತಿ ಭಾರತ ॥೬೭॥

ದೇವರದಯೆಯಿಂದ ಪ್ರಭಲನಾದ ಭೀಮಸೇನನು ಜರಾಸಂಧನನ್ನು ಸಂಹರಿಸಿದನು. ಈ ಎಲ್ಲಾ ರಾಜಶ್ರೇಷ್ಠರೂ ಬಂಧನದಿಂದ ಬಿಡುಗಡೆಯನ್ನು

ಹೊಂದಿದರು. ದೇವರದಯೆಯಿಂದಲೇ ಭೀಮಾರ್ಜುನರು ಕುಶಲಿಗಳಾಗಿ ಯಾವ ಗಾಯವೂ ಇಲ್ಲದೆ ತಮ್ಮ ನಗರಕ್ಕೆ ಹಿಂದಿರುಗಿದ್ದಾರೆ.

ತತೋ ಯುಧಿಷ್ಠಿರಃ ಕೃಷ್ಣಂ ಪೂಜಯಿತ್ವಾ ಯಥಾರ್ಹತಃ ।
ಭೀಮಸೇನಾರ್ಜುನೌ ಚೈವ ಪ್ರಹೃಷ್ಟಃ ಪರಿಷಸ್ವಜೇ ॥೬೮॥

ಆಗ ಯುಧಿಷ್ಠಿರನು ಕೃಷ್ಣನನ್ನು ಯಥಾಯೋಗ್ಯವಾಗಿ ಪೂಜಿಸಿ ಸಂತೋಷದಿಂದ ಭೀಮಾರ್ಜುನರನ್ನು ಆಲಿಂಗಿಸಿಕೊಂಡನು.

ತತಃ ಕ್ಷೀಣೇ ಜರಾಸಂಧೇ ಭ್ರಾತೃಭಿರ್ವಿಹಿತಂ ಜಯಮ್ ।
ಅಜಾತಶತ್ರುರಾಸಾದ್ಯ ಮುಮುದೇ ಭ್ರಾತೃಭಿಃ ಸಹ ॥೬೯॥

ಜರಾಸಂಧನು ನಾಶವನ್ನು ಹೊಂದುತ್ತಿರಲು ಅಜಾತಶತ್ರುವಾದ ಯುಧಿಷ್ಠಿರನು ತನ್ನ ತಮ್ಮಂದಿರು ಸಂಪಾದಿಸಿಕೊಟ್ಟ ಜಯವನ್ನು ಹೊಂದಿದವನಾಗಿ ತಮ್ಮಂದಿರ ಜೊತೆಯಲ್ಲಿ ಸಂತೋಷದಿಂದ ಇದ್ದನು.

ಹೃಷ್ಟಶ್ಚ ಧರ್ಮರಾಡ್ವಾಕ್ಯಂ ಜನಾರ್ದನಮಭಾಷತ ।
ತ್ವಾಂ ಪ್ರಾಪ್ಯ ಪುರುಷವ್ಯಾಘ್ರ ಭೀಮಸೇನೇನ ಪಾತಿತಃ ।
ಮಾಗಧೋಽಸೌ ಬಲೋನ್ಮತ್ತೋ ಜರಾಸಂಧಃ ಪ್ರತಾಪವಾನ್ ॥೭೦॥

ಸಂತೋಷಗೊಂಡ ಧರ್ಮರಾಜನು ಜನಾರ್ದನನನ್ನು ಕುರಿತು ಹೀಗೆ ಹೇಳಿದನು. ಪುರುಷವ್ಯಾಘ್ರನೇ! ನಿನ್ನ ಅನುಗ್ರಹದಿಂದ ಬಲೋನ್ಮತ್ತನೂ ಪ್ರತಾಪಶಾಲಿಯೂ ಆದ ಮಗಧರಾಜನಾದ ಜರಾಸಂಧನು ಭೀಮಸೇನನಿಂದ ಹತನಾಗಿದ್ದಾನೆ.

ರಾಜಸೂಯಂ ಕ್ರತುಶ್ರೇಷ್ಠಂ ಪ್ರಾಪ್ಸ್ಯಾಮಿ ವಿಗತಜ್ವರಃ ।
ತ್ವದ್ಬುದ್ಧಿಬಲಮಾಶ್ರಿತ್ಯ ಭಾಗಾರ್ಹೋಽಸಿ ಜನಾರ್ದನ ॥೭೧॥

ಜನಾರ್ದನನೇ! ನಿನ್ನ ಬುದ್ಧಿಬಲವನ್ನು ಅವಲಂಬಿಸಿ ನಾನು ಶ್ರೇಷ್ಠವಾದ ರಾಜಸೂಯಯಾಗವನ್ನು ನಿರಾತಂಕವಾಗಿಮಾಡುತ್ತೇನೆ. ನೀನು ಸಹ ಅದರ ಫಲಕ್ಕೆ ಭಾಗಿಯಾಗಿದ್ದೀಯೆ.

ಪೀತಂ ಪೃಥಿವ್ಯಾಂ ಕುಂಡೇನ ಯಶಸ್ತೇ ಪುರುಷೋತ್ತಮ ।
ಜರಾಸಂಧವಧೇನೈವ ಪ್ರಾಪ್ತಾಸ್ತೇ ವಿಪುಲಾಃ ಶ್ರಿಯಃ ।
ಏವಂ ಸಂಭಾಷ್ಯ ಕೌಂತೇಯಃ ಪ್ರಾದಾದ್ ರಥವರಂ ಪ್ರಭೋಃ ॥೭೨॥

ಪುರುಷೋತ್ತಮನೇ! ನೀನು ಭೂಮಿ ಎಂಬ ಹೆಂಡದಿಂದಲೇ ಕೀರ್ತಿಯನ್ನು ಪಾನಮಾಡಿದ್ದೀಯೆ(ನಿನ್ನ ಕೀರ್ತಿಯು ಭೂಮಿಯಲ್ಲೆಲ್ಲಾ ಹರಡಿದೆ.) ಜರಾಸಂಧನವಧೆಯಿಂದ ವಿಪುಲವಾದ ಸಂಪತ್ತನ್ನು ಗಳಿಸಿದ್ದೀಯೆ. ಹೀಗೆ ಮಾತನಾಡಿ ಕೌಂತೇಯನಾದ ಧರ್ಮರಾಜನು ಆ ಶ್ರೇಷ್ಠವಾದ ರಥವನ್ನು ಪ್ರಭುವಾದ ಕೃಷ್ಣನಿಗೆ ಕೊಟ್ಟನು.

ಪ್ರತಿಗೃಹ್ಯ ತು ಗೋವಿಂದೋ ಜರಾಸಂಧಸ್ಯ ತಂ ರಥಮ್ ।
ಪ್ರಹೃಷ್ಟಸ್ಯ ಮುಮುದೇ ಫಲ್ಗುನೇನ ಜನಾರ್ದನಃ ।
ಪ್ರೀತಿಮಾನಭವದ್ ರಾಜನ್ ಧರ್ಮರಾಜಪುರಸ್ಕೃತಃ ॥೭೩॥

ಗೋವಿಂದನು ಆ ಜರಾಸಂಧನ ರಥವನ್ನು ಸ್ವೀಕರಿಸಿ ಸಂತೋಷಗೊಂಡವನಾಗಿ ಅರ್ಜುನನ ಜೊತೆಯಲ್ಲಿ ಆನಂದಿಸಿದನು. ರಾಜನೇ! ಧರ್ಮರಾಜನಿಂದ ಪೂಜಿಸಲ್ಪಟ್ಟವನಾಗಿ ಜನಾರ್ದನನು ಸಂತೋಷಗೊಂಡನು.

ಯಯಾವಥ ಸಮಾಭಾಷ್ಯ ಪ್ರೇಮ್ಣಾ ರಾಜನ್ ನೃಪೈಃ ಸಹ ।
ಸತೃತ್ಯ ಪೂಜಯಿತ್ವಾ ಚ ವಿಸಸರ್ಜ ನರಾಧಿಪಾನ್ ॥೭೪॥

ರಾಜನೇ! ಅನಂತರ ಎಲ್ಲ ರಾಜರುಗಳ ಜೊತೆಯಲ್ಲಿ ಪ್ರೇಮದಿಂದ ಸಂಭಾಷಣೆಯನ್ನು ಮಾಡಿ ಅವರನ್ನು ಸತ್ಕಾರಗಳಿಂದ ಪೂಜಿಸಿ ಬೀಳ್ಕೊಟ್ಟನು.

ಯುಧಿಷ್ಠಿರಾಭ್ಯನುಜ್ಞಾತಾಸ್ತೇ ನೃಪಾ ಹೃಷ್ಟಮಾನಸಾಃ ।
ಜಗ್ಮುಃ ಸ್ವದೇಶಾಂಸ್ತ್ವರಿತಾ ಯಾನೈರುಚ್ಚಾವಚೈಸ್ತದಾ ॥೭೫॥

ಯುಧಿಷ್ಠಿರನ ಅಪ್ಪಣೆಯನ್ನು ಪಡೆದ ಆ ರಾಜರೆಲ್ಲರೂ ಸಂತೋಷಗೊಂಡ ಮನಸ್ಸಿನಿಂದ ಉಚ್ಚಾವಚ ವಾಹನಗಳನ್ನು ಏರಿ ತಮ್ಮ ತಮ್ಮ ದೇಶಕ್ಕೆ ಹಿಂದಿರುಗಿದರು.

ಏವಂ ಸ ಪುರುಷವ್ಯಾಘ್ರೋ ಮಹಾಬುದ್ಧಿರ್ಜನಾರ್ದನಃ ।
ಪಾಂಡವೈರ್ಘಾತಯಾಮಾಸ ಜರಾಸಂಧಮರಿಂ ತದಾ ॥೭೬॥

ಪುರುಷವ್ಯಾಘ್ರನೂ ಮಹಾಮೇಧಾವಿಯೂ ಆದ ಜನಾರ್ದನನು ಈ ರೀತಿ ಪಾಂಡವರಿಂದ ತನ್ನ ಶತ್ರುವಾದ ಜರಾಸಂಧನನ್ನು ವಿನಾಶಗೊಳಿಸಿದನು.

ಘಾತಯಿತ್ವಾ ಜರಾಸಂಧಂ ಬುದ್ಧಿಪೂರ್ವಮರಿಂದಮಃ ।
ಧರ್ಮರಾಜಮನುಜ್ಞಾಪ್ಯ ಪೃಥಾಂ ಕೃಷ್ಣಾಂ ಚ ಭಾರತ ॥೭೭॥

ಸುಭದ್ರಾಂ ಭೀಮಸೇನಂ ಚ ಫಲ್ಗುನಂ ಚ ಯಮೌ ತಥಾ ।
ಧೌಮ್ಯಂ ಭೀಮಮನುಜ್ಞಾಪ್ಯ ಪ್ರಯಯೌ ದ್ವಾರಕಾಂ ಪ್ರತಿ ॥೭೮॥

ಭಾರತನೇ! ಅರಿಂದಮನಾದ ಕೃಷ್ಣನು ತನ್ನ ಬುದ್ಧಿಯ ಬಲದಿಂದ ಹೀಗೆ ಜರಾಸಂಧನನ್ನು ಸಂಹರಿಸಿ ಧರ್ಮರಾಜನ ಕುಂತಿಯ ದ್ರೌಪದಿಯ ಸುಭದ್ರೆಯ ಭೀಮಸೇನನ ಅರ್ಜುನನ ನಕುಲಸಹದೇವರ ಮತ್ತು ಧೌಮ್ಯರ ಅನುಮತಿಯನ್ನು ಪಡೆದು ಇನ್ನೊಮ್ಮೆ ಭೀಮನ ಅನುಮತಿಯನ್ನು ಪಡೆದು ದ್ವಾರಕಾಪಟ್ಟಣಕ್ಕೆ ಹೊರಟನು.

ಪಾಂಡವೈರನುಯಾಯದ್ಭಿರ್ಯುಧಿಷ್ಠಿರಪುರೋಗಮೈಃ ।
ಹರ್ಷೇಣ ಮಹತಾ ಯುಕ್ತಃ ಪ್ರಾಪ್ಯ ಚಾನುತ್ತಮಂ ಯಶಃ ।
ಜಗಾಮ ಹೃಷ್ಟಃ ಕೃಷ್ಣಸ್ತು ಪುನರ್ದ್ವಾರವತೀಂ ಪುರೀಮ್ ॥೭೯॥

ಯುಧಿಷ್ಠಿರ ಮೊದಲಾದ ಪಾಂಡವರು ಅವನನ್ನು ಹಿಂಬಾಲಿಸುತ್ತಿರಲು ಶ್ರೇಷ್ಠವಾದ ಕೀರ್ತಿಯನ್ನು ಪಡೆದ ಕೃಷ್ಣನು ಮಹಾಸಂತೋಷದಿಂದ ಕೂಡಿದವನಾಗಿ ಪುನಃ ದ್ವಾರವತೀಪಟ್ಟಣವನ್ನು ಕುರಿತು ಪ್ರಯಾಣಮಾಡಿದನು.

ತೇನೈವ ರಥಮುಖ್ಯೇನ ತರುಣಾದಿತ್ಯವರ್ಚಸಾ ।
ಧರ್ಮರಾಜನಿಸೃಷ್ಟೇನ ದಿವ್ಯೇನಾನಾದಯನ್ ದಿಶಃ ॥೮೦॥

ಧರ್ಮರಾಜನು ಕೊಟ್ಟ ಬಾಲಸೂರ್ಯನಕಾಂತಿಯುಳ್ಳ, ಆ ದಿವ್ಯವಾದ ಶ್ರೇಷ್ಠರಥವನ್ನೇ ಏರಿ ದಿಕ್ಕುಗಳನ್ನು ಪ್ರತಿಧ್ವನಿಗೊಳಿಸುತ್ತಾ ಹೊರಟನು.

ತತೋ ಯುಧಿಷ್ಠಿರಮುಖಾಃ ಪಾಂಡವಾ ಭರತರ್ಷಭ ।
ಪ್ರದಕ್ಷಿಣಂ ತದಾऽಕುರ್ವನ್ ಕೃಷ್ಣಮಕ್ಲಿಷ್ಟಕಾರಿಣಮ್ ॥೮೧॥

ಭರತರ್ಷಭನೇ! ಆಗ ಯುಧಿಷ್ಠಿರನೇ ಮೊದಲಾದ ಪಾಂಡವರು ಅನಾಯಾಸವಾಗಿ ಎಲ್ಲವನ್ನೂಮಾಡುವ ಕೃಷ್ಣನಿಗೆ ಪ್ರದಕ್ಷಿಣೆಯನ್ನು ಮಾಡಿದರು.

ತತೋ ಗತೇ ಭಗವತಿ ಕೃಷ್ಣೇ ದೇವಕಿನಂದನೇ ।
ಜಯಂ ಲಬ್ಧ್ವಾ ಸುವಿಪುಲಂ ರಾಜ್ಞಾಮಭಯದಾಸ್ತತಃ ॥೮೨॥

ಸಂವರ್ಧಿತೌಜಸೋ ಭೂಯಃ ಕರ್ಮಣಾ ತೇನ ಭಾರತ ।
ದ್ರೌಪದ್ಯಾಃ ಪಾಂಡವಾ ರಾಜನ್ ಪರಾಂ ಪ್ರೀತಿಮವರ್ಧಯನ್ ॥೮೩॥

ಎಲೈ! ಭರತವಂಶದಲ್ಲಿ ಹುಟ್ಟಿದ ಜನಮೇಜಯರಾಜನೇ! ಭಗವಂತನಾದ ದೇವಕಿನಂದನನಾದ ಕೃಷ್ಣನು ಹೊರಟುಹೋಗುತ್ತಿರಲು, ವಿಪುಲವಾದ ಜಯವನ್ನು ಪಡೆದು ರಾಜರುಗಳಿಗೆ ಅಭಯವನ್ನುಕೊಟ್ಟು ಆ ಕರ್ಮದಿಂದ ತಮ್ಮ ಪರಾಕ್ರಮವನ್ನು ಇನ್ನೂ ಹೆಚ್ಚಿಸಿಕೊಂಡ ಪಾಂಡವರು ದ್ರೌಪದಿಯ ಜೊತೆಯಲ್ಲಿ ಸಂತೋಷದಿಂದ ಕಾಲವನ್ನು ಕಳೆದರು. ದ್ರೌಪದಿಗೂ ಅಧಿಕವಾದ ಸಂತೋಷವನ್ನು ನೀಡಿದರು.

ತಸ್ಮಿನ್ ಕಾಲೇ ತು ಸಂಪ್ರಾಪ್ತಂ ಧರ್ಮಕಾಮಾರ್ಥಸಂಯುತಮ್ ।
ತದ್ರಾಜಾ ಧರ್ಮತಶ್ಚಕ್ರೇ ರಾಜ್ಯಂ ಪ್ರಾಪ್ಯ ಯುಧಿಷ್ಠಿರಃ ॥೮೪॥

ಯುಧಿಷ್ಠಿರನು ರಾಜ್ಯವನ್ನು ಪಡೆದು ಆ ಕಾಲದಲ್ಲಿ ಮಾಡಲು ಯೋಗ್ಯವಾದ ಧರ್ಮ ಕಾಮಾರ್ಥಸಂಯುಕ್ತವಾದ ಕಾರ್ಯಗಳನ್ನು ಧರ್ಮದಿಂದ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ಸಭಾಪರ್ವಣಿ ಚತುರ್ವಿಂಶೋऽಧ್ಯಾಯಃ ॥

॥ ಜರಾಸಂಧಪರ್ವಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಸಭಾಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

ಇಲ್ಲಿಗೆ ಜರಾಸಂಧಪರ್ವವು ಮುಗಿಯಿತು.

★★★★

ಆತ್ಮೇವ ವೇದಿತವ್ಯೇಷು
ಪ್ರಿಯೇಷ್ವಿವ ಹಿ ಜೀವಿತಮ್ ।
ಇತಿಹಾಸಃ ಪ್ರಧಾನಾರ್ಥಃ
ಶ್ರೇಷ್ಠಃ ಸರ್ವಾಗಮೇಷ್ವಪಿ ॥

ತಿಳಿಯಬೇಕಾದ ವಸ್ತುಗಳಲ್ಲಿ
ಶ್ರೀಹರಿಯೇ ಹೇಗೆ ಶ್ರೇಷ್ಠನೋ
ಬಯಸುವ ವಸ್ತುಗಳಲ್ಲಿ ಜೀವನವು
ಹೇಗೆ ಶ್ರೇಷ್ಠವೋ ಅಂತೆಯೇ,
ಸರ್ವಾಗಮಗಳಲ್ಲಿ
ಭಾರತವು ಶ್ರೇಷ್ಠವಾಗಿದೆ.

ISBN 978-93-81807-46-0